ಮಹಾತ್ಮರ ಮಾರ್ಗ

ವಿ. ಎಸ್. ನಾರಾಯಣ ರಾವ್

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

"My life is my message" — GANDHI

(This message was given to U Thant, Secretary General of The United Nations)

"ನನ್ನ ಜೀವನವೇ ನನ್ನ ಸಂದೇಶ" — ಗಾಂಧೀ

(ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಊಥಾಂಟ್ ಅವರಿಗೆ ಕೊಟ್ಟ ಸಂದೇಶ)

*   *   *   *

ನೀತಿ ತತ್ವಗಳಿಲ್ಲದ ರಾಜಕಾರಣ ;
ದುಡಿಮೆ ಇಲ್ಲದ ಸಂಪತ್ತು ;
ವಿವೇಚನೆ ಇಲ್ಲದ ಸುಖೋಪಭೋಗ ;
ಚಾರಿತ್ರ್ಯ ವಿಹೀನ ವಿದ್ಯೆ ;
ಧರ್ಮ ನೀತಿಗಳಿಲ್ಲದ ವ್ಯಾಪಾರ ;
ಮಾನವ ಕಾರುಣ್ಯರಹಿತ ವಿಜ್ಞಾನ ;
ತ್ಯಾಗ ಸಮರ್ಪಣ ಭಾವಗಳಿಲ್ಲದ ಪೂಜೆ ; — ಇವು ಅನರ್ಥಕಾರಿ

— ಗಾಂಧೀ

ಮಹಾತ್ಮರ ಮಾರ್ಗ

ವಿ. ಎಸ್. ನಾರಾಯಣ ರಾವ್

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

MAHATHMARA MARGA by V. S. Narayana Rao, Published by Bangalore University, Bangalore, Pp. viii + 428, 1979.

ಪ್ರಕಾಶಕರು :

ಹೆಚ್. ಆರ್. ದಾಸೇಗೌಡ
ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056

ಸಹಾಯಕರು :

ಬಿ. ಕೆ. ಕರೀಗೌಡ

ಬೆಲೆ : ರೂ. 15-00

ಮುದ್ರಣ :

ಜಯಕರ್ನಾಟಕ ನ್ಯೂಸ್ ಪ್ರಿಂಟರ್ಸ್ ಲಿಮಿಟೆಡ್
ನಂ. 105, 1ನೇ ಮೆಯಿನ್ ರೋಡ್, ಪ್ಯಾಲೆಸ್ ಗುಟ್ಟಹಳ್ಳಿ, ಬೆಂಗಳೂರು–560020

ಮೊದಲ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಈಗಾಗಲೇ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಸಾರ್ವಜನಿಕರಿಗಾಗಿ ವರ್ಷಾದ್ಯಂತ ಏರ್ಪಡಿಸುವ ಪ್ರಚಾರೋಪನ್ಯಾಸಗಳನ್ನು ವಿಶೇಷೋಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಕೈಗೊಳ್ಳುವ ವೈಯಕ್ತಿಕ ಹಾಗೂ ಸಾಮೂಹಿಕ ಸಂಶೋಧನಾತ್ಮಕ ವ್ಯವಸಾಯಕ್ಕೆ ಗ್ರಂಥ ರೂಪದ ಅಭಿವ್ಯಕ್ತಿಯನ್ನು ಕೊಡುವ ಕಾರ್ಯವೂ ನಡೆದಿದೆ. ಇದರಿಂದಾಗಿ ವಿವಿಧ ವಿಭಾಗಗಳ ಅಧ್ಯಾಪಕರ ಸಂಶೋಧನಾತ್ಮಕ ಪ್ರವೃತ್ತಿಗೆ ಸಾಕಷ್ಟು ಪ್ರೇರಣೆ ದೊರೆತಿದೆ. ಇದಲ್ಲದೆ ವಿಶ್ವವಿದ್ಯಾಲಯೇತರ ಕ್ಷೇತ್ರಗಳಲ್ಲಿರುವ ವಿವಿಧ ಪರಿಣತರ ಕೃತಿಗಳನ್ನು ಸಂಶೋಧನೆ, ಸಂಪಾದನೆ, ಪರಿಷ್ಕರಣ, ಜಾನಪದ, ಅನುವಾದ ಇತ್ಯಾದಿ ನಾನಾ ಬಗೆಯ ಗ್ರಂಥಗಳನ್ನು ಪ್ರಸಾರಾಂಗ ಪ್ರಕಟಿಸುತ್ತಿದೆ. ಶ್ರೀ ವಿ. ಎಸ್. ನಾರಾಯಣ ರಾವ್ ಅವರ 'ಮಹಾತ್ಮರ ಮಾರ್ಗ' ಎಂಬ ಕೃತಿಯು ಈ ದಿಕ್ಕಿನ ಒಂದು ಮುಖ್ಯ ಪ್ರಕಟಣೆಯಾಗಿದೆ.

ಮಹಾತ್ಮ ಗಾಂಧೀಜಿಯವರ ಜೀವನ ಚರಿತ್ರೆಯನ್ನು ಕನ್ನಡದಲ್ಲಿ ಒಟ್ಟಾಗಿ ಒಂದು ಕಡೆ ಪರಿಚಯ ಮಾಡಿಕೊಡುವ ಕೃತಿ ಇದಾಗಿದೆ. ಗಾಂಧೀಜಿಯವರು ಬಾಲ್ಯದಿಂದ ಅಕಾಲ ಮೃತ್ಯುವಿಗೆ ತುತ್ತಾಗುವವರೆಗೂ ಅವರು ನಾನಾ ಕ್ಷೇತ್ರಗಳಲ್ಲಿ ಕೈಗೊಂಡ ಪ್ರಯೋಗಗಳನ್ನು, ಅನುಭವಿಸಿದ ಕಷ್ಟಗಳನ್ನು ಈ ಕೃತಿಯಲ್ಲಿ ಸಮಗ್ರವಾಗಿ ನಿರೂಪಿಸಲಾಗಿದೆ. ಇಂಥ ಉತ್ತಮ ಕೃತಿಯನ್ನು ನಮ್ಮ ವಿಶ್ವವಿದ್ಯಾಲಯದಿಂದ ಪ್ರಕಟಿಸಲು ತುಂಬು ಮನಸ್ಸಿನಿಂದ ಅನುವುಮಾಡಿಕೊಟ್ಟುದುದಕ್ಕಾಗಿ ಲೇಖಕರಾದ ಶ್ರೀ ವಿ. ಎಸ್. ನಾರಾಯಣ ರಾವ್ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ತ. ರಾ. ಜಯರಾಮನ್
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ನಾಲ್ಕು ಮಾತು

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಪ್ರಕಟಿಸುವುದರ ಜೊತೆಗೆ ಇತರೆ ವಿಷಯದಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನವನ್ನು ನೀಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಾಮಾಜಿಕ ಹಾಗೂ ಮಾನವಿಕ ಶಾಸ್ತ್ರ ಮುಂತಾದ ವಿಷಯಗಳ ಮೇಲೆ ಸ್ವತಂತ್ರವಾಗಿಯೋ, ಭಾಷಾಂತರದ ಮೂಲಕವೋ ಅಥವಾ ಸಂಕಲನದ ಮೂಲಕವೋ ಸರಳ ಹಾಗೂ ಖಚಿತವಾದ ಹೊಗನ್ನಡ ಶೈಲಿಯ ಮೂಲಕ ಪ್ರಸಾರಾಂಗವು ಈಗಾಗಲೇ ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿದೆ. ಮುಂದೆಯೂ ಇಂಥ ಹಲವಾರು ವಿಷಯಗಳ ಮೇಲೆ ಮಹತ್ತರವಾದ ಹೊತ್ತಿಗೆಗಳನ್ನು ಪ್ರಕಟಿಸಬೇಕೆಂಬ ಮಹೋದ್ದೇಶವನ್ನು ಪ್ರಸಾರಾಂಗ ಹೊಂದಿದೆ.

ಪ್ರಸ್ತುತ ಗ್ರಂಥ "ಮಹಾತ್ಮರ ಮಾರ್ಗ" ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟ ಕೊಡುಗೆ. ಮಹಾತ್ಮ ಗಾಂಧೀಜಿಯವರ ಜೀವನ ಹಾಗೂ ಅವರ ನಿರಂತರವಾದ ಸಾಮಾಜಿಕ, ರಾಜಕೀಯ, ಧಾರ್ಮಿಕ ಹೋರಾಟವನ್ನು ಸಮಗ್ರವಾಗಿ ನಿರೂಪಿಸುವ ಗ್ರಂಥ ಇದಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಭಾರತದ ಸಂವಿಧಾನದ ನೇತಾರರಲ್ಲೊಬ್ಬರಾದ ಬಿ|| ಡಾ. ಅಂಬೇಡ್ಕರ್ ಅವರ ವ್ಯಕ್ತಿತ್ವ ಹಾಗೂ ಜೀವನವನ್ನು ಪರಿಚಯಿಸುವ "ಕ್ರಾಂತಿಕಾರಿ ಡಾ|| ಅಂಬೇಡ್ಕರ್" ಎಂಬ ಮಹತ್ವದ ಗ್ರಂಥವೊಂದನ್ನು ಪ್ರಕಟಿಸಿದ ನಂತರ ಸ್ವತಂತ್ರ ಭಾರತದ ಪಿತಾಮಹರಾದ ಪೂಜ್ಯ ಬಾಪೂಜಿಯವರ ವ್ಯಕ್ತಿತ್ವ ಹಾಗೂ ಜೀವನದ ಸಮಗ್ರ ಪರಿಚಯವನ್ನು ನೀಡುವ ಮತ್ತೊಂದು ಮಹತ್ವದ ಗ್ರಂಥ 'ಮಹಾತ್ಮರ ಮಾರ್ಗ'ವನ್ನು ಪ್ರಕಟಿಸುತ್ತಿರುವುದು ವಿಶ್ವವಿದ್ಯಾಲಯಕ್ಕೆ ಸಂತೋಷದ ಸಂಗತಿಯಾಗಿದೆ. ಈ ಗ್ರಂಥವು ಪ್ರತಿಯೊಬ್ಬ ವಿದ್ಯಾವಂತ ಕನ್ನಡಿಗನಿಗೂ ತುಂಬಾ ಉಪಯುಕ್ತವಾಗಬಲ್ಲ ಗ್ರಂಥವಾಗಬಲ್ಲದು ಎಂಬುದು ನನ್ನ ಭಾವನೆ. ಇಲ್ಲಿಯ ಲೇಖಕರ ಸ್ಫುಟವಾದ ಹಾಗೂ ಆತ್ಮೀಯವಾದ ಶೈಲಿಯಿಂದಾಗಿ ಗಾಂಧೀಜಿಯವರ ಪೂರ್ಣ ಜೀವನ ಚರಿತ್ರೆಯು ಪ್ರತಿಯೊಬ್ಬ ಓದುಗರನ್ನೂ ಸೆರೆ ಹಿಡಿದರೆ ಆಶ್ಚರ್ಯವಿಲ್ಲ. ಈ ಕೃತಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಶ್ರೀ ವಿ.ಎಸ್. ನಾರಾಯಣ ರಾವ್ ಅವರಿಗೆ ವಿಶ್ವವಿದ್ಯಾಲಯವು ತುಂಬಾ ಚಿರಋಣಿ. ಮತ್ತು ಇದಕ್ಕಾಗಿ ಶ್ರೀಯುತರಿಗೆ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಈ ಕೃತಿಯನ್ನು ಅಂದವಾಗಿ ಮುದ್ರಿಸಿಕೊಟ್ಟ "ಜಯ ಕರ್ನಾಟಕ ನ್ಯೂಸ್ ಪ್ರಿಂಟರ್ಸ್ ಲಿಮಿಟೆಡ್" ಅವರಿಗೂ ನನ್ನ ಅಭಿನಂದನೆಗಳು. ಹೀಗೆಯೇ ಕನ್ನಡಿಗರ ಸೌಹಾರ್ದ ಸಹಕಾರಗಳಿಂದ ವಿಶ್ವವಿದ್ಯಾಲಯದ ಪ್ರಸಾರಾಂಗದ ಗ್ರಂಥಮಾಲೆಯು ಬೆಳೆಯಲೆಂದು ಆಶಿಸುತ್ತೇನೆ.

ಹೆಚ್. ಆರ್. ದಾಸೇಗೌಡ
ನಿರ್ದೇಶಕ
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ

ಲೇಖಕನ ನಮನ

ಮಹಾತ್ಮ ಗಾಂಧಿಯವರ ಬಾಳು ವೈವಿಧ್ಯಮಯ. ಜೀವನದ ಅನೇಕ ರಂಗಗಳು ಅವರ ಕಾರ್ಯಕ್ಷೇತ್ರವಾಗಿದ್ದುವು. ಸತ್ಯ ಅಹಿಂಸೆಯ ಆರಾಧಕರಾಗಿ ತಮ್ಮ ಇಡೀ ಜೀವಮಾನವನ್ನೇ ಸತ್ಯಾನ್ವೇಷಣೆಯ ಪ್ರಯೋಗಗಳಲ್ಲಿ ಧಾರೆ ಎರೆದಿರುತ್ತಾರೆ. ಅವರು ಕೈಗೊಂಡ ಪ್ರಯೋಗಗಳು, ಅನುಭವಿಸಿದ ಕಷ್ಟ ಸಂಕಟ, ಗಳಿಸಿದ ಅನುಭವ, ಅವರ ಹೃದಯ ವೈಶಾಲ್ಯತೆ, ಅನುಕಂಪ, ಭಗವಂತನಲ್ಲಿ ನಿಚ್ಚಳ ಭಕ್ತಿ, ಧ್ಯೇಯ ಮತ್ತು ಸತ್ಯಪಥ ಕೈಬಿಡದ ಮನೋದಾರ್ಢ್ಯ, ಎಂಥ ಸಂಕಟ ಸನ್ನಿವೇಶದಲ್ಲೂ ತೊರೆಯದ ಹಾಸ್ಯ ಪ್ರವೃತ್ತಿ, ಇವೆಲ್ಲವನ್ನೂ ಪ್ರತ್ಯೇಕ ಶೀರ್ಷಿಕೆಗಳಲ್ಲಿ ಸಾಧಾರಣವಾಗಿ ಅಳವಡಿಸಿಕೊಡಲಾಗಿದೆ. ಸ್ವಾತಂತ್ರ್ಯದ ಹೋರಾಟದಲ್ಲಿ ಮಾರ್ಗದರ್ಶಕರಾಗಿ, ನುಡಿಗಿಂತ ನಡೆಗೆ, ಕೃತಿಗೆ ಹೆಚ್ಚು ಪ್ರಾಮುಖ್ಯತೆ ಅವರು ಕೊಡುತ್ತಿದ್ದರು. ಇಲ್ಲಿ ಉದಹರಿಸಿರುವ ಘಟನೆಗಳು ಮಹಾತ್ಮರು ಸ್ಥಿತಪ್ರಜ್ಞರಾಗಲು ನಡೆದು ಬಂದ ದಾರಿಯ ಹಾಸುಗಲ್ಲುಗಳು. ಗಾಂಧೀವಾದದ ನನ್ನ ಪುಸ್ತಕದಲ್ಲಿ ನೀತಿಯುಬಲ, ಬ್ರಹ್ಮಚರ್ಯ, ಶಿಕ್ಷಣ, ಖಾದಿ, ಸರ್ವ ಧರ್ಮ ಸಮಭಾವ, ಸತ್ಯಾಗ್ರಹ ಇವೇ ಮೊದಲಾದ ಅವರ ಧ್ಯೇಯಗಳು ಹಾಸುಹೊಕ್ಕುಗಳಂತೆ ಒಂದೊಕ್ಕೊಂದು ಪೋಷಕವಾಗಿರುವುದನ್ನು ಸಮರ್ಥಿಸಲಾಗಿದೆ. ಈ ಪುಸ್ತಕದಲ್ಲಿ ಅಂಥ ಹೊಂದಾಣಿಕೆ ಕಾಣಸಿಗದು. ಪ್ರತಿಯೊಂದು ಪರಿಚ್ಛೇದವೂ ಪ್ರತ್ಯೇಕ ಮತ್ತು ಸ್ವತಂತ್ರ. ಸಾಮಾನ್ಯ ವ್ಯಕ್ತಿಯಾಗಿ ಜನಸಿದ ಮೋಹನದಾಸ ಸತ್ಯ ಪಥದಲ್ಲಿ ನಡೆಯುತ್ತ, ಎಡವುತ್ತ, ತಪ್ಪು ತಿದ್ದಿಕೊಳ್ಳುತ್ತ, ಪಾಠ ಕಲಿಯುತ್ತ, ನೂತನ ಪ್ರಯೋಗಗಳನ್ನು ನಡೆಸುತ್ತ, ದೀನದಲಿತರ ಸಂಕಟ ನಿವಾರಣೆಯಲ್ಲಿ ತೊಡಗಿ, ಸ್ವಾತಂತ್ರ್ಯದ ಹೋರಾಟದಲ್ಲಿ ಸತ್ಯ ಅಹಿಂಸೆಯ ಸತ್ಯಾಗ್ರಹದ ಮಾರ್ಗದರ್ಶಕರಾಗಿ, ಹೇಗೆ ಮಹಾತ್ಮರಾದರು ಎಂಬುದನ್ನು ಗ್ರಹಿಸಬಹುದು. ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಊಥಾಂಟ್ ಭಾರತಕ್ಕೆ ದಯಮಾಡಿಸಿದ್ದಾಗ ಮಹಾತ್ಮರನ್ನು ಸಂದರ್ಶಿಸಿ ವಿಶ್ವಕ್ಕೆ ಅವರಿಂದ ಸಂದೇಶ ಕೋರಿದರು. 'ನನ್ನ ಜೀವನವೇ ನನ್ನ ಸಂದೇಶ' ಎಂದರು ಗಾಂಧೀಜಿ. ಅವರ ಈ ಸಂದೇಶವನ್ನು ಪುಷ್ಟೀಕರಿಸಲು ಇಲ್ಲಿ ಪ್ರಯತ್ನಿರುಸಿವೆ. ಮಹಾತ್ಮಗಾಂಧಿಯವರನು ಕುರಿತು ಇನ್ನೂ ಹೆಚ್ಚು ತಿಳಿಯಬೇಕೆಂಬ ಕುತೂಹಲ ಇದು ಪ್ರಚೋದಿಸಿದರೆ ನಾನು ಕೃತಾರ್ಥ.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಈ ಪುಸ್ತಕ ಸ್ವೀಕರಿಸಿ ಪ್ರಕಟಿಸಿರುವುದಕ್ಕೆ ನಾನು ಧನ್ಯ. ಗಾಂಧಿ ಸ್ಮಾರಕ ನಿಧಿ ಮತ್ತು ಗಾಂಧಿ ಸಾಹಿತ್ಯ ಸಂಘದವರು ಅಗತ್ಯ ಪುಸ್ತಕಗಳನ್ನು ಒದಗಿಸಿ ನೆರವು ನೀಡಿರುತ್ತಾರೆ. ಇವರೆಲ್ಲರಿಗೂ ನಾನು ಕೃತಜ್ಞ.

ವಿ. ಎಸ್. ನಾರಾಯಣ ರಾವ್

ವಿಷಯ ಸೂಚಿ

So long as my faith burns bright,
as I hope it will, even if I stand alone,
I would be alive in the grave and,
What is more, speaking from it.

Gandhiji in Harijan, December, 1947

ಎಲ್ಲಿಯವರೆಗೆ ನನ್ನ ಆತ್ಮವಿಶ್ವಾಸವು ಜ್ವಲಂತವಾಗಿ ಪ್ರಜ್ವಲಿಸುತ್ತಿರುತ್ತದೆಯೋ — ಅದು ಚಿರಕಾಲ ಬೆಳಗುತ್ತಾ ಉಳಿದೀತೆಂದು ನನ್ನ ನಂಬಿಕೆ — ನಾನು ಏಕಾಂಗಿಯಾಗಿ ಉಳಿದರೂ, ನಾನು ನನ್ನ ಸಮಾಧಿಯಲ್ಲಿ ಜೀವಂತನಾಗಿರುವುದು ಮಾತ್ರವಲ್ಲದೆ, ಅಲ್ಲಿಂದ ಮಾತನಾಡುತ್ತಲೂ ಇರುತ್ತೇನೆ.

— ಗಾಂಧೀಜಿ, 'ಹರಿಜನ ಪತ್ರಿಕೆ, ಡಿಸೆಂಬರ್, 1947

ಪೂರ್ವಜರು

ಉತ್ತಮಚಂದ್ ಮಹಾತ್ಮ ಗಾಂಧಿಯವರ ತಾತ. ಇವರನ್ನು ಒಟ ಗಾಂಧಿ ಎಂದು ಕರೆಯುವ ವಾಡಿಕೆ. ತಮ್ಮ ಹದಿನೇಳನೆಯ ವಯಸ್ಸಿನಲ್ಲೇ ಇವರಿಗೆ ಸೀಮಾಕರ 'ಕಸ್ಟಂಸ್' ಆಮದು – ರಫ್ತು ಸರಕಿನ ಸುಂಕ ವಸೂಲ್ಮಾಡುವ ಅಧಿಕಾರ ಲಭಿಸಿತ್ತು, ಪೋರ ಬಂದರಿನಲ್ಲಿ. ಇವರ ತಂದೆ ದಾರ್ಮುಗಾಂಧಿ. ಪೋರಬಂದರು ಸಂಸ್ಥಾನದ ರಾಣ ಖಿಮೋಜಿ ಅವರನ್ನು ಒಂದು ಪ್ರಮುಖ ಕೆಲಸಮಾಡಲು ಹೇಳಿ ಕಳುಹಿಸಿದ.

ದಾರ್ಮುಗಾಂಧಿ ಊರಿನಲ್ಲಿ ಇರಲಿಲ್ಲ. ತಂದೆಯ ಬದಲಾಗಿ ಉತ್ತಮಚಂದ್ ರಾಣನ ಬಳಿಗೆ ಹೋದ. ಮಾಧವಪುರದ ಸುಂಕದ ಕಟ್ಟೆ ಅಧಿಕಾರಿ ಹಲವು ವರ್ಷಗಳಿಂದ ವಸೂಲ್ಮಾಡಿದ ಸೀಮಾಕರ ಸರ್ಕಾರಕ್ಕೆ ಸಲ್ಲಿಸದೆ ದರ್ಪದಿಂದ ನಡೆದುಕೊಳ್ಳುತ್ತಿದ್ದಾನೆ. ಈ ಜವಾಬ್ದಾರಿಯ ಕೆಲಸ ನಿನ್ನಿಂದ ನಿರ್ವಹಿಸಲು ಸಾಧ್ಯವೆ ಎಂದು ತರುಣ ಉತ್ತಮಚಂದನನ್ನು ರಾಣ ಕೇಳಿದ. "ತಮ್ಮ ಅನುಗ್ರಹವಿದ್ದರೆ ಯಾವ ಕೆಲಸ ಸಾಧಿಸಲು ಸಾಧ್ಯವಿಲ್ಲ" ಎಂದು ಆತ್ಮವಿಶ್ವಾಸದ ಧೈರ್ಯದಿಂದ ಉತ್ತಮಚಂದ್ ಉತ್ತರಿಸಿದ.

ರಾಣ–"ಹೇಗೆ ಬಗೆಹರಿಸುವೆ. ಏನು ಉಪಾಯ ನಿನ್ನ ಮನಸ್ಸಿಗೆ ಹೊಳೆದಿದೆ?".

ಉತ್ತಮಚಂದ್–"ಇಲ್ಲಿಯೇ ಹೇಗೆ ಹೇಳಲಿ. ಮಾಧವಪುರಕ್ಕೆ ಹೋಗುವೆ. ಅಲ್ಲಿನ ಪರಿಸ್ಥಿತಿ ನೋಡಿ, ಸಮಯೋಚಿತವಾಗಿ ಹೇಗೆ ವರ್ತಿಸಬೇಕೋ ಹಾಗೆ ನಡೆದುಕೊಳ್ಳುವೆ: ನಿಮ್ಮ ಹೆಸರಿನಲ್ಲಿ ಕೆಲಸಮಾಡಲು ಅವಕಾಶ ಮತ್ತು ಅಧಿಕಾರ ಕೊಡಿ. ನನ್ನ ಕೆಲಸ ನಿಮಗೆ ತೃಪ್ತಿಕರವಾಗಿ ಕಾಣದಿದ್ದರೆ, ನೀವು ಕೊಡುವ ಶಿಕ್ಷೆ ಸಂತೋಷದಿಂದ ಅನುಭವಿಸುವೆ".

ಈ ಉತ್ತರದಿಂದ ತೃಪ್ತನಾದ ರಾಣ, ಉತ್ತಮಚಂದನು ಮಾಧವಪುರಕ್ಕೆ ಹೋಗಲು ಅವಕಾಶ ಮಾಡಿಕೊಟ್ಟ.

ಅಲ್ಲಿನ ಪರಿಸ್ಥಿತಿ ಗ್ರಹಿಸಲು ಹೆಚ್ಚುಕಾಲ ಬೇಕಾಗಲಿಲ್ಲ. ನೆರೆಯ ರಾಜ್ಯ ಜುನಾಘಡದ ರಾಣನ ಬೆಂಬಲ ಈ ಅಧಿಕಾರಿಯ ಧೂರ್ತವರ್ತನೆಗೆ ಕಾರಣವೆಂದು ಗ್ರಹಿಸಿದ. ಜುನಾಘಡದ ದ್ವೇಷ ಕಟ್ಟಿಕೊಂಡು, ಅದರೊಡನೆ ಹೋರಾಡುವುದು ಅಸಾಧ್ಯವೆಂದು ಗ್ರಹಿಸಿದ. ಶಕ್ತಿಯಿಂದಾಗದ ಕೆಲಸವನ್ನು ಯುಕ್ತಿಯಿಂದ ಸಾಧಿಸಲು ತೀರ್ಮಾನಿ

ಸಿದ. ಹರಿದು ಹಂಚಿಹೋಗಿದ್ದ ಕೆಲವು ಸಣ್ಣ ಪುಟ್ಟ ಪ್ರದೇಶಗಳನ್ನು ಜುನಾಘಡಕ್ಕೆ ಒಪ್ಪಿಸಿ, ಮಾಧವಪುರದಿಂದ ಪೋರಬಂದರು ತೀರದವರೆಗಿನ ಪ್ರದೇಶ ಪೋರಬಂದರ ಸಂಸ್ಥಾನಕ್ಕೆ ಸೇರಿಸಿಕೊಳ್ಳುವುದು ಯುಕ್ತವೆಂದು ತೀರ್ಮಾನಿಸಿದ. ಇದು ಬಂಜರು ಭೂಮಿ. ಕೆಲಸಕ್ಕೆ ಬಾರದ್ದು ಎಂದು ಜುನಾಘಡ ಸಂಸ್ಥಾನ ಸಲಹೆಯನ್ನು ಒಪ್ಪಿ ಕೊಂಡಿತು. ರಾಣ ಖಿಮೋಜಿಯ ಅನುಮತಿ ಮತ್ತು ಒಪ್ಪಿಗೆ ಪಡೆದು ಕಾರ್ಯ ನಿರ್ವಹಿಸಿದ.

ದೂರದೃಷ್ಟಿಯ ಉತ್ತಮಚಂದ್ ಪೋರ ಬಂದರನ್ನು ಉತ್ತಮ ನೌಕಾ ನಿಲ್ದಾಣ ವಾಗಿ ಪರಿವರ್ತಿಸಬಹುದೆಂದು ಗ್ರಹಿಸಿದ. ಇವನ ಕೆಲಸವನ್ನು ಮೆಚ್ಚಿದ ರಾಣ ಖಿಮೋಜಿ ಸ್ವಲ್ಪಕಾಲದ ನಂತರ ಉತ್ತಮಚಂದನನ್ನು ತನ್ನ ಪ್ರಧಾನಿಯಾಗಿ ಮಾಡಿ ಕೊಂಡ. ಭದ್ರಾನದಿಗೆ ಅಣೆಕಟ್ಟು ಕಟ್ಟಿಸಿ, ಈ ಭಾಗವನ್ನು ಫಲವತ್ತಾದ ಪ್ರದೇಶ ವಾಗಿ ಮಾಡಿದ. ಪೋರ ಬಂದರಿನ ವ್ಯಾಪಾರವೂ ವೃದ್ಧಿಸಿತು.

ಉತ್ತಮಚಂದನಿಗೆ ಇಬ್ಬರು ಪುತ್ರರು. ಈ ಇಬ್ಬರ ವಿವಾಹವನ್ನೂ ಏಕಕಾಲ ದಲ್ಲಿ ಅತಿ ಸಂಭ್ರಮದಿಂದ ನೆರವೇರಿಸಿದ. ಊರಿನ ಎಲ್ಲರಿಗೂ ಮದುವೆಯ ಮೃಷ್ಟಾನ್ನ ಭೋಜನ. ಒಂದು ವಾರ ಕಾಲ ಊರಿನಲ್ಲಿ ಒಲೆ ಯಾರೂ ಹೊತ್ತಿಸಲಿಲ್ಲ. ಮದು ವೆಯ ಉಡುಗೊರೆಯಾಗಿ ಬೆಲೆ ಬಾಳುವ ಆಭರಣ ಮತ್ತು ವಸ್ತ್ರಗಳು ಬಂದವು. ಇವೆಲ್ಲವೂ ತಮ್ಮ ಪ್ರಜೆಗಳಿಂದ ತಮ್ಮ ಪ್ರಧಾನಿಗೆ ಕೊಡಲ್ಪಟ್ಟವು. ಆದ್ದರಿಂದ ಇವೆ ಲ್ಲವೂ ತಮಗೆ ಸೇರಿದ್ದು ತಾವು ಸ್ವೀಕರಿಸಬೇಕು ಎಂದು ರಾಣನಿಗೆ ಒತ್ತಾಯ ಪಡಿ ಸಿದ. ಎಷ್ಟು ಹೇಳಿದರೂ ತನ್ನ ಸ್ವಂತಕ್ಕೆ ತೆಗೆದುಕೊಳ್ಳಲು ಉತ್ತಮಚಂದ ಒಪ್ಪಲಿಲ್ಲ. ಕಡೆಗೆ ಎಲ್ಲವನ್ನೂ ಖಜಾನೆಗೆ ಸೇರಿಸಿಕೊಳ್ಳಲಾಯಿತು. ರಾಣನು ಇದಕ್ಕೆ ಪ್ರತಿಯಾಗಿ "ನಿಮ್ಮ ಮಕ್ಕಳೂ, ನನ್ನ ಮಕ್ಕಳೇ. ಆದ್ದರಿಂದ ಮದುವೆಯ ವೆಚ್ಚವೆಲ್ಲ ನನ್ನ ದಾಗಿರಲಿ," ಎಂದು ರಾಜ್ಯದ ಬೊಕ್ಕಸದಿಂದ ವೆಚ್ಚ ಕೊಡಿಸಿದ. ಈ ರೀತಿಯ ಮಧುರ ಬಾಂಧವ್ಯದ ಪೈಪೋಟಿ ನಡೆದಿತ್ತು.

ಆದರೆ ಅಸೂಯೆ ಇದನ್ನು ಸಹಿಸಲಾರದೆ ಹೋಯಿತು. ರಾಣ ಖಿಮೋಜಿ 1831 ರಲ್ಲಿ ದೈವಾಧೀನನಾದ. ಆಗ ರಾಣನ ಹಿರಿಯಮಗ ವಿಕ್ರಮನಿಗೆ ಕೇವಲ ಎಂಟು ವಯಸ್ಸು. ಆದಕಾರಣ ತಾಯಿ ರೂಪಲಿಬಾಯ್ ಪೋಷಕಳಾಗಿ ರಾಜ್ಯಸೂತ್ರ ವಹಿಸಿಕೊಂಡಳು. ಅವಳಲ್ಲಿ ದಕ್ಷತೆ, ಸಾಮರ್ಥ್ಯ ಇತ್ತು. ಆದರೆ ಚಂಚಲ ಚಿತ್ತ. ಚಾಡಿ ಮಾತಿಗೆ ಕಿವಿಗೊಡುವಳು. ಹಟವಾದಿ. ಉತ್ತಮಚಂದ ಪ್ರಧಾನಿಯಾಗಿ ಮುಂದು ವರೆದರೂ ಆತನ ಮಾತು ನಡೆಯುತ್ತಿರಲಿಲ್ಲ.

ಈ ಕಾಲಕ್ಕೆ ಖಂಜಿ ಕೊಠಾರಿ ರಾಜ್ಯದ ಕೋಶಾಧಿಕಾರಿ ಆಗಿದ್ದ. ನಿಯಮ

ದಂತೆ ನಡೆದು ಕೊಳ್ಳುವ ನಿಷ್ಠಾವಂತ. ರಾಣಿ ರಾಜ್ಯಬೊಕ್ಕಸದ ಹಣವೆಲ್ಲ ಸ್ವಂತದ್ದಂತೆ ಭಾವಿಸಿದ್ದಳು. ಅವಳ ಸಖಿಯರು ಕೊಠಾರಿಯಲ್ಲಿಗೆ ಹೋಗಿ ಹಣ ಕೇಳುತ್ತಿದ್ದರು. ಲಿಖಿತ ಆಜ್ಞೆ ಇಲ್ಲದೆ ಹಣಕೊಡಲು ಇವನು ನಿರಾಕರಿಸುತ್ತಿದ್ದ. ಈ ಕಾರಣದಿಂದ ರಾಣಿಯ ಕೋಪಕ್ಕೆ ಪಾತ್ರನಾದ. ಕುಪಿತಳಾದ ರಾಣಿ ಇವನನ್ನು ಶೂಲಕ್ಕೆ ಏರಿಸಲು ತೀರ್ಮಾನಿಸಿದಳು.

ಕೊಠಾರಿ ಭೀತನಾಗಿ ಪ್ರಧಾನಿಯ ಮನೆಗೆ ಹೋದ, ಅವರ ಸಲಹೆ ಮತ್ತು ಆಶ್ರಯ ಪಡೆಯಲು. ಉತ್ತಮ ಚಂದ ಮನೆಯಲ್ಲಿ ಇರಲಿಲ್ಲ. ಅವರ ಪತ್ನಿ ಲಕ್ಷ್ಮೀಬಾಳ ಮರೆಹೊಕ್ಕ ಕೊಠಾರಿ. ಏನೂ ಅರಿಯದ ಆಕೆ ಕೊಠಾರಿಗೆ ಅಭಯ ದಾನ ಮಾಡಿದಳು. ಪತಿ ಉತ್ತಮಚಂದ ಮನೆಗೆ ಬಂದಮೇಲೆ ನಡೆದ ವಿಷಯ ತಿಳಿಸಿದಳು.

"ಎಂಥಾ ಕೆಲಸ ಮಾಡಿದೆ. ಖಿಂಜಿ ಕೊಠಾರಿಗೆ ಮರಣದಂಡನೆ ವಿಧಿಸಲು ರಾಣಿ ರೂಪಲಿ ಬಾ ನಿಶ್ಚಯಿಸಿದ್ದಾಳೆ. ಇದು ನಿನಗೆ ತಿಳಿಯದೇ ? ಈಗ ಏನು ಮಾಡೋಣ" ಎಂದು ಉತ್ತಮಚಂದ ವಿಹ್ವಲನಾದ.

ಲಕ್ಷ್ಮೀಬಾ ಹೇಳಿದಳು. "ನಾನು ವಚನ ಕೊಟ್ಟಿರುವೆ. ಏನೇ ಆಗಲಿ ಕೊಠಾರಿಗೆ ನ್ಯಾಯ ದೊರೆಯ ಬೇಡವೆ ?"

ಉತ್ತಮಚಂದ ಚಿಂತಾಕ್ರಾಂತನಾದ. ಹೆಂಡತಿಯ ಮಾತು ಉಳಿಸಬೇಕು. ರಾಣಿಯ ಆಗ್ರಹಕ್ಕೆ ಪಾತ್ರನಾಗಕೂಡದು. ನಿಯಮ ಪಾಲಕ ಖಜಾನ್ಚಿಯ ಪ್ರಾಣ ಉಳಿಸಬೇಕು. ಈ ಸಂದಿಗ್ಧ ಪರಿಸ್ಥಿತಿ ಹೇಗೆ ಬಗೆಹರಿಸುವುದು.

ಇಷ್ಟರಲ್ಲಿ ರಾಣಿ ಪ್ರಧಾನಿ ಉತ್ತಮ ಚಂದನನ್ನು ಬರಮಾಡಿಕೊಂಡು, ಕೊಠಾರಿಯನ್ನು ತನ್ನ ವಶಕ್ಕೆ ಒಪ್ಪಿಸುವಂತೆ ಆಗ್ರಹ ಪಡಿಸಿದಳು.

ಉತ್ತಮಚಂದ—"ತಮ್ಮ ಆಜ್ಞೆ ಪಾಲಿಸಬೇಕಾದುದು ನನ್ನ ಕರ್ತವ್ಯ. ಆದರೆ ಕೊಠಾರಿಯ ವಿಚಾರಣೆ ನಡೆದು ತದನಂತರ ಅವನಿಗೆ ಸೂಕ್ತ ಶಿಕ್ಷೆ ವಿಧಿಸಬೇಕಲ್ಲವೆ?"

ರೂಪಲಿಬಾ—"ನಾನು ಸರ್ವಾಧಿಕಾರಿ ರಾಣಿ. ನನ್ನ ಆಜ್ಞೆ ನೀವೂ ಪಾಲಿಸಬೇಕು. ವಿಚಾರಣೆ ಅನಗತ್ಯ. "

ಉತ್ತಮಚಂದ ದುಃಖಿತನಾದ. ರಾಣಿಯ ಮನಸ್ಸು ಬದಲಾಯಿಸಲು ಸತತ ಪ್ರಯತ್ನ ನಡೆಸಿದ. ಆದರೆ ಫಲಪ್ರದವಾಗಲಿಲ್ಲ.

ಉತ್ತಮಚಂದನ ಹಿತವಚನ ಕಡೆಗಣಿಸಿ ಕೊಠಾರಿಯನ್ನು ಬಂಧಿಸಿ ತರುವಂತೆ ಸೇನಾಧಿಕಾರಿಗೆ ರಾಣಿ ಆಜ್ಞೆ ನೀಡಿದಳು.

ತನ್ನ ಪ್ರಾಣಕ್ಕೇ ಒದಗಿದ್ದ ಅಪಾಯ ತಿಳಿದು ಕೊಥಾರಿ ತಲೆಮರಸಿಕೊಂಡ. ಸಿಪಾಯಿಗಳು ಅವನನ್ನು ಅರಸತೊಡಗಿದರು.

ಪೋರಬಂದರು ನಗರ ಕೋಟೆಯಿಂದ ಆವೃತ್ತವಾಗಿತ್ತು. ರಾತ್ರಿ ಹತ್ತು ಘಂಟೆಗೆ ಕೋಟೆ ಬಾಗಿಲಿಗೆ ಬೀಗ ಬೀಳುತ್ತಿತ್ತು. ಯಾರೂ ಒಳಕ್ಕೆ ಬರುವಂತಿಲ್ಲ. ಹೊರಕ್ಕೂ ಹೋಗುವಂತಿಲ್ಲ. ಕೋಟೆ ಬಾಗಿಲಿನ ಬೀಗಕ್ಕೆ ಎರಡು ಬೀಗದ ಕೈಗಳು. ಒಂದು ರಾಣಿಯ ಬಳಿ. ಮತ್ತೊಂದು ಪ್ರಧಾನಿಯ ವಶದಲ್ಲಿ.

ಉತ್ತಮಚಂದ್ ತನ್ನ ನಂಬಿಕೆಗೆ ಪಾತ್ರನಾದ ಆಳಿನೊಂದಿಗೆ ಕೋಟೆಯ ಬೀಗದ ಕೈ ಕೊಟ್ಟು, ರಾತ್ರಿಯಾದ ಮೇಲೆ ನಗರ ಬಿಟ್ಟು ಕೊಥಾರಿ ಪರಾರಿಯಾಗುವಂತೆ ನೆರವಾದ. ಖಿಂಜಿ ಕೊಥಾರಿ ತನ್ನ ಪ್ರಾಣ ಉಳಿಸಿಕೊಂಡು ಊರುಬಿಟ್ಟು ಎಲ್ಲಿಗೋ ಓಡಿ ಹೋದ. ಆದರೆ ಪಲಾಯನ ಮಾಡಲು ನೆರವು ನೀಡಿದ ಪ್ರಧಾನಿ ಊರು ಬಿಟ್ಟು ಹೋಗುವಂತಿರಲಿಲ್ಲ. ಕೋಶಾಧಿಕಾರಿಗೆ ಸಹಾಯವೆಸಗಿದ ಕಾರಣ ಪ್ರಾಣಾಪತ್ತು ಉತ್ತಮಚಂದನ ಕಡೆ ತಿರುಗಿಕೊಂಡಿತು. ಇದನ್ನು ಒಟ ಬಾಪ ಕೂಡಲೆ ಗ್ರಹಿಸಿದ. ಹೆಂಡತಿ ಮತ್ತು ಐವರು ಮಕ್ಕಳನ್ನು ಕರೆದು ತಮ್ಮೆಲ್ಲರಿಗೂ ಸನ್ನಿಹಿತವಾಗಿದ್ದ ಅಪಾಯ ತಿಳಿಸಿದ. ಸತ್ವಪರೀಕ್ಷೆಯ ಕಾಲ ಈಗ ಒದಗಿದೆ. ಸತ್ಯ ಮತ್ತು ನ್ಯಾಯಕ್ಕಾಗಿ ಎಲ್ಲರೂ ಪ್ರಾಣಾರ್ಪಣೆಮಾಡಲು ಸಿದ್ಧರಾಗಬೇಕೆಂದು ತಿಳಿಸಿದ.

ಉತ್ತಮಚಂದನ ಮನೆ ಕಲ್ಲುಗಳಿಂದ ನಿರ್ಮಿತವಾದ ಬಲವಾದ ಕಟ್ಟಡ. ಕೋಟೆಯಂತೆ ಬಲವಾದ ಹೊರ ಆವರಣ. ಭದ್ರಬಾಗಿಲುಗಳು. ಬಾಗಿಲನ್ನು ಒಳಗಿನಿಂದ ಚಿಲಕ ಹಾಕಿ ದೇವರ ಧ್ಯಾನ ಮಾಡುತ್ತ ಎಲ್ಲರೂ ಮನೆಯಲ್ಲಿ ಕುಳಿತರು.

ಒಟ ಗಾಂಧಿಯನ್ನು ಬಂಧಿಸಿ ಒಯ್ಯಲು ರಾಣಿಯ ದೂತರು ಬಂದು ಬಾಗಿಲು ಒಡೆಯಲಾಗದೆ ಹಿಂತಿರುಗಿದರು. ಕೋಪೋದ್ರಿಕ್ತಳಾದ ರಾಣಿ ಕೂಡಲೇ ಫಿರಂಗಿ ಸಜ್ಜಿತ ಸೇನಾ ತುಕಡಿಯನ್ನು ಕಳುಹಿಸಿದಳು. ಮನೆಯನ್ನು ಮುತ್ತಿಗೆ ಹಾಕಿ ಜೀವ ಸಹಿತ ಪ್ರಧಾನಿಯನ್ನು ಬಂಧಿಸಿ ತರುವಂತೆ ಆಜ್ಞಾಪಿಸಿದಳು.

ಪ್ರಧಾನಿಯ ಅಧಿಕಾರ ವಹಿಸಿಕೊಳ್ಳುವುದು ಕಾಥಿವಾರದಲ್ಲಿ ಆ ಕಾಲಕ್ಕೆ ಅಪಾಯಕರವಾಗಿತ್ತು. ಅಧಿಕಾರ ಮದದಿಂದ ತಮಗೆ ರಕ್ಷಣೆ ಕೊಡಲು ಗಣ್ಯರನ್ನು ಗೊತ್ತುಮಾಡಿಕೊಳ್ಳುತ್ತಿದ್ದುದು ವಾಡಿಕೆಯಾಗಿತ್ತು. ಮಕ್ರಾಣಿಯ ಅರಬ್ಬರು ಆಗ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಈ ತುಕಡಿಯ ಸೇನಾಧಿಪತಿ ಗುಲಾಂಮಹಮ್ಮದ್ ಮಕ್ರಾನಿಯನ್ನು ರಾಣಿ ರೂಪಲಿಬಾ ಪ್ರಧಾನಿಯ ಅಂಗರಕ್ಷಕನಾಗಿ ನೇಮಿಸಿದ್ದಳು. ಐದಾರು ಯೋಧರೊಡನೆ ಮನೆಗೆ ಕಾವಲಿದ್ದು ರಕ್ಷಿಸುವುದು ಇವರ ಕರ್ತವ್ಯ. ಕರ್ತವ್ಯ ನಿಷ್ಠರಾದ ಈ ವಿದೇಶೀ ಅರಬ್ಬರು, ಪ್ರಾಣದ ಹಂಗು ತೊರೆದು, ರಾಣಿ

ಕಳುಹಿಸಿಕೊಟ್ಟಿದ್ದ ಸೇನೆಯೊಡನೆ ಹೋರಾಡಿದರು. ಹೋರಾಟದಲ್ಲಿ ಗುಲಾಂ ಮಹಮ್ಮದ್ ಪ್ರಾಣ ಅರ್ಪಿಸಿದ. ಇತರರು ಗಾಯಗೊಂಡರು.

ಫಿರಂಗಿ ಉಡಾಯಿಸಿ ಹೊರ ಆವರಣವನ್ನು ಕೆಡವಿಹಾಕುವಂತೆ ರಾಣಿ ಆಜ್ಞಾಪಿಸಿದಳು. ಫಿರಂಗಿ ಗುಂಡುಗಳು ಹಾರಿದುವು. ಬೆಂಕಿ ಹೊಗೆ ಕಾರಿದುವು. ರಭಸದ ಹೊಡೆತ ತಾಳಿಕೊಳ್ಳಲಾರದೆ ಗೋಡೆ ಎರಡು ಕಡೆ ಬಿರಿಯಿತು. ತಮ್ಮನ್ನು ಕಾಪಾಡುವಂತೆ ಭಗವಂತನ ಧ್ಯಾನ ಮಾಡುತ್ತ ಕುಳಿತರು ಉತ್ತಮಚಂದ ಮತ್ತು ಅವನ ಕುಟುಂಬ. ದಯಾಮಯನಾದ ಭಗವಂತನಿಗೆ ಇವರ ಮೊರೆ ಕೇಳದೆ ಹೋಗಲಿಲ್ಲ. ಅವನ ವಿಧಾನ ಯಾರಿಗೂ ಅರಿವಾಗದು.

ರಾಜಕೋಟೆಯಲ್ಲಿದ್ದ ಬ್ರಿಟಿಷ್ ಪ್ರತಿನಿಧಿಗೆ ತೋಪು ಉಡಾಯಿಸುತ್ತಿದ್ದ ಸುದ್ದಿ ತಿಳಿಯಿತು. ಇದನ್ನು ನಿಲ್ಲಿಸಬೇಕೆಂದು ಆಜ್ಞೆ ಹೊರಡಿಸಿದ. ಮನೆಯ ಹೊರ ಆವರಣ ಅಥವಾ ಸಣ್ಣಕೋಟೆ ಮುರಿದು ಬೀಳುವುದರೊಳಗಾಗಿ ರಾಣಿಯ ಸೇನಾಧಿಕಾರಿಗಳ ಕೈಮುಟ್ಟಿತು ನಿರೂಪ. ಕೂಡಲೇ ಫಿರಂಗಿ ಸ್ತಬ್ಧವಾಯಿತು. ಸತ್ಯವಂತ ಉತ್ತಮಚಂದ ಮತ್ತು ಅವರ ಕುಟುಂಬದ ಪ್ರಾಣ ಉಳಿಯಿತು.

ಪ್ರಾಣಾಪಾಯದಿಂದ ಪಾರಾದ ಉತ್ತಮಚಂದ, ಲಕ್ಷ್ಮೀಬಾ ಮತ್ತು ಮಕ್ಕಳು ಪೋರ ಬಂದರನ್ನು ತ್ಯಜಿಸಿ, ತಮ್ಮ ಪೂರ್ವಿಕರ ಕುಟಿಯಾನ ಗ್ರಾಮಕ್ಕೆ ತೆರಳಿದರು.

ಕುಟಿಯಾನ ಜುನಾಘಡ ನವಾಬರ ಸಂಸ್ಥಾನಕ್ಕೆ ಸೇರಿದ್ದು. ಉತ್ತಮಚಂದ ಇಲ್ಲಿಗೆ ಬಂದ ಸುದ್ದಿ ತಿಳಿದ ನವಾಬರು ಒಟಗಾಂಧಿಯನ್ನು ತಮ್ಮ ದರಬಾರಿಗೆ ಬರಮಾಡಿಕೊಂಡರು. ದರಬಾರಿಗೆ ಬಂದ ಉತ್ತಮಚಂದ ತನ್ನ ಎಡದ ಕೈಯಿಂದ ನವಾಬರಿಗೆ ಸಲಾಂ ಮಾಡಿದ. ಬಲಗೈಯಿಂದ ಸಲಾಂ ಮಾಡದೆ ಎಡಗೈಯಿಂದ ಮಾಡಿದ್ದಕ್ಕೆ ಕುಪಿತರಾದ ನವಾಬರು ಕಾರಣ ಕೇಳಿದರು.

ಪೋರಬಂದರಿನ ರಾಣಿ ತನ್ನನ್ನು ಸಂಸ್ಥಾನದಿಂದ ಹೊರಕ್ಕೆ ದೂಡಿದ್ದರೂ, ರಾಣಖಿಮೋಜಿಗೆ ತನ್ನ ಬಲಗೈ ಸಮರ್ಪಿತವಾಗಿತ್ತು. ಬಲಗೈ ಪೋರಬಂದರು ಸಂಸ್ಥಾನದ ಸೇವೆಗೆ ಮೀಸಲು. ಉಳಿದಿರುವುದು ಎಡಗೈ ಮಾತ್ರವೇ. ಇದರ ಸೇವೆಯನ್ನು ನವಾಬರಿಗೆ ಅರ್ಪಿಸಬಹುದು. ಈ ದಿಟ್ಟ ಉತ್ತರವಿತ್ತ ಉತ್ತಮಚಂದ.

ಎಡಗೈ ಸಲಾಂ ಮಾಡಿಸಿಕೊಂಡ ನವಾಬನಿಗೆ ಒಂದು ಕಡೆ ಕೋಪ, ಮತ್ತೊಂದು ಕಡೆ ವಿಸ್ಮಯದ ಮೆಚ್ಚುಗೆ.

"ನಿನ್ನಂಥಾ ಧೀರ ನನ್ನ ಪ್ರಧಾನಿಯಾಗಿರಲು, ನನ್ನ ರಾಜ್ಯದ ಅರ್ಧಭಾಗ ಕೊಟ್ಟೇನು" ಎಂದ, ಯೋಗ್ಯತೆ ಮೆಚ್ಚಿ ಹರ್ಷಿತನಾದ ನವಾಬ.

ಆದರೆ ಮಾಡಿದ ಅಪರಾಧಕ್ಕೆ ಶಿಕ್ಷೆಯಾಗಬೇಕಷ್ಟೆ. ಪಾದರಕ್ಷೆ ಕಳಚಿ ರಿಕ್ತ ಪಾದದಲ್ಲಿ ಕೆಲವು ನಿಮಿಷಕಾಲ ಬಿಸಿಲಿನಲ್ಲಿ ನಿಲ್ಲುವಂತೆ ಉತ್ತಮಚಂದನಿಗೆ ಶಿಕ್ಷೆ ವಿಧಿಸಿದ. ಯೋಗ್ಯತೆ ಅಳೆಯಬಲ್ಲವನಾಗಿದ್ದ ನವಾಬ.

ಜುನಾಘಡದ ಪ್ರಧಾನಿಯಾಗಲು ಅವನು ನಿರಾಕರಿಸಿದ. ಆಳರಸರ ಸೇವೆ ಸಲ್ಲಿಸುವುದನ್ನು ಕೊನೆಗಾಣಿಸಿ, ಸಮಸ್ತ ಲೋಕಗಳ ಒಡೆಯನಾದ ಭಗವಂತನ ಸೇವೆಯಲ್ಲಿ ಉಳಿದ ಅವಧಿ ಅರ್ಪಿಸಲು ಸಂಕಲ್ಪಿಸಿರುವುದಾಗಿ ಉತ್ತಮಚಂದ ತಿಳಿಸಿದ. ನವಾಬ ಇವರನ್ನು ಕುಟಿಯಾನದ ತನ್ನ ಮಹಲಿನ ಕಾರಭಾರಿಯಾಗಿ ನೇಮಿಸಿದ. ಕುಟಿಯಾನದಲ್ಲಿ ವ್ಯಾಪಾರದಲ್ಲಿ ತೊಡಗುವುದಾದರೆ ಉತ್ತಮಚಂದ ಮತ್ತು ಅವನ ಸಂತತಿ ಸೀಮಾಕರ ತೆರಬೇಕಾಗಿಲ್ಲ ಎಂದು ನಿರೂಪ ಹೊರಡಿಸಿದ. ಉತ್ತಮಚಂದ ವ್ಯಾಪಾರದಲ್ಲಿ ತೊಡಗಲಿಲ್ಲ. ತುಳಸಿದಾಸರ ರಾಮಾಯಣದ ಪಾರಾಯಣೆಯಲ್ಲಿ ತೊಡಗಿದ. ಈ ರಾಮಾಮೃತವೇ ಮುಂದೆ ಕಬಾಗಾಂಧಿ ಮತ್ತು ಮಹಾತ್ಮಾಗಾಂಧಿ ಅವರಿಗೆ ಅಮೃತ ಸದೃಶವಾಯಿತು.

ಉತ್ತಮಚಂದನ ಮನೆಯನ್ನು ಛೇದಿಸಲು ಹಾರಿಸಿದ ತೋಪು ಎರಡು ಕಡೆ ಮನೆಯನ್ನು ಬಿರುಕು ಮಾಡಿತು. ಸ್ವಾಮಿನಿಷ್ಠ ಗುಲಾಂ ಮುಹಮ್ಮದ್ ಮಕ್ರಾನಿ ಯಜಮಾನನ ರಕ್ಷಣೆಯಲ್ಲಿ ಪ್ರಾಣ ಅರ್ಪಿಸಿದ. ಇವುಗಳ ಸ್ಮಾರಕವಾಗಿ ಶಿಥಿಲಗೊಂಡ ಬಂಗಲೆಯನ್ನು ದುರಸ್ತು ಮಾಡದೆ ಬಹುಕಾಲ ಹಾಗೆಯೇ ಉಳಿಸಲಾಗಿತ್ತು. ಅನಂತರ ಮಹಾತ್ಮಾ ಗಾಂಧಿಯವರ ಕೀರ್ತಿ ಮಂದಿರವಾಗಿ ಪರಿವರ್ತನೆಗೊಂಡಾಗ ಹಳೆಯ ಸ್ಮಾರಕ ಹೊಸ ರೂಪು ತಾಳಿತು.

ಈ ಘಟನೆಗಳು ಕಪೋಲಕಲ್ಪಿತ ಕಟ್ಟುಕಥೆಗಳಲ್ಲ. ನಿಜವಾಗಿ ನಡೆದ ಐತಿಹಾಸಿಕ ದೃಷ್ಟಾಂತಗಳು. ಸಾಕ್ಷಿ ಆಧಾರಭೂತವಾದ ಸಂಶೋಧನೆಗಳು. ಮಹಾತ್ಮಾ ಗಾಂಧೀಜಿ ತಮ್ಮ ಆತ್ಮ ಕಥನದಲ್ಲಿ ಉತ್ತಮಚಂದ ಎಡಗೈಯಿಂದ ಸಲಾಂ ಮಾಡಿದುದನ್ನು ನಿರೂಪಿಸಿರುತ್ತಾರೆ.

ತನ್ನ ತಂದೆ ಕಬಾ ಗಾಂಧಿಯ ವಿಷಯವಾಗಿ ಮಹಾತ್ಮ ಗಾಂಧಿ ಅಷ್ಟಾಗಿ ವಿವರಗಳನ್ನು ಕೊಟ್ಟಿಲ್ಲ. ತಂದೆ ತುಂಬ ವಿದ್ಯಾವಂತನಲ್ಲ. ವ್ಯವಹಾರಿ. ಎಂಥ ಜಟಿಲ ಸಮಸ್ಯೆಗಳನ್ನೂ ಎಲ್ಲರಿಗೂ ಸಮಾಧಾನವಾಗುವಂತೆ ಬಗೆಹರಿಸಬಲ್ಲ ಸಮರ್ಥ. ಪ್ರಾಮಾಣಿಕ, ನಿಷ್ಠುರವಾದಿ. ಆಸ್ತಿ ಮಾಡಿಕೊಳ್ಳಬೇಕೆಂಬ ಆಸೆ ಇರಲಿಲ್ಲ ಅವರಿಗೆ.

ಅವರು ನಾಲ್ಕು ಬಾರಿ ವಿವಾಹವಾದರು. ಒಡೆಯನ ನಿಷ್ಠಾವಂತ ಸೇವಕ. ಆದರೆ ಅದೇ ಒಡೆಯ ತಪ್ಪು ದಾರಿ ಹಿಡಿದರೆ ಅದನ್ನು ಖಂಡಿಸಲು ಹಿಂಜರಿಯುತ್ತಿರಲಿಲ್ಲ.

ಕಬಾಗಾಂಧಿ ರಾಜಕೋಟೆಯ ದಿವಾನರಾಗಿದ್ದರು. ನೆರೆಯ ವಂಕನೇರಿನ ರಾಣ ಇವರ ಸೇವೆ ಅಪೇಕ್ಷಿಸಿದ. ರಾಜಕೋಟೆಯ ಅರಸನಿಗೆ ಕಬಾಗಾಂಧಿಯನ್ನು ಬಿಟ್ಟುಕೊಡಲು ಇಷ್ಟವಿಲ್ಲ. ಆದರೂ ನೆರೆಯ ರಾಜ್ಯದ ರಾಣನ ಸ್ನೇಹಬಾಂಧವ್ಯ ಉಳಿಸಿಕೊಳ್ಳಲು ಅವರನ್ನು ಕಳುಹಿಸಿಕೊಟ್ಟ. ಒಂದು ವರ್ಷ ಪ್ರಾಯೋಗಿಕವಾಗಿ ಕೆಲಸಮಾಡಿ. ಸರಿಹೋಗದಿದ್ದರೆ ಮತ್ತೆ ರಾಜಕೋಟೆಗೆ ಮರಳುವ ಆಶ್ವಾಸನ ಪಡೆದು ಕಬಾಗಾಂಧಿಯವರನ್ನು ವಂಕನೇರಿಗೆ ಕಳುಹಿಸಿಕೊಡಲು ಸಮ್ಮತಿಸಿದ.

ಕಬಾಗಾಂಧಿ ವಂಕನೇರ ಸಂಸ್ಥಾನದ ಕಾರಭಾರಿ ಆದರು. ಆಡಳಿತದಲ್ಲಿ ತನಗೆ ಪೂರ್ಣ ಸ್ವಾತಂತ್ರ್ಯವಿರಬೇಕು. ರಾಣ ಮಧ್ಯೆ ಪ್ರವೇಶಿಸಲಾಗದು. ಈ ರೀತಿಯ ಐದು ವರ್ಷಗಳ ಅವಧಿಯ ಒಪ್ಪಂದವಾಯಿತು. ಷರತ್ತಿನಂತೆ ರಾಣ ನಡೆದುಕೊಳ್ಳ ದಿದ್ದರೆ ಕಾರಭಾರಿ ಕಬಾಗಾಂಧಿ ರಾಜಿನಾಮೆ ಸಲ್ಲಿಸಬಹುದು. ಈ ಸಂದರ್ಭದಲ್ಲಿ ಕಾರಭಾರಿಗೆ ಐದು ವರ್ಷಗಳ ಪೂರ್ಣಾವಧಿಯ ವೇತನ ಸಲ್ಲತಕ್ಕದ್ದು. ಇವು ಕರಾ ರಿನ ಮುಖ್ಯ ಅಂಶಗಳು.

ಕರಾರನ್ನು ಒಪ್ಪಿಕೊಂಡ ರಾಣ ಅದರಂತೆ ನಡೆಯದೆ ಆಡಳಿತದಲ್ಲಿ ಕೈ ಹಾಕ ತೊಡಗಿದ. ಕಬಾಗಾಂಧಿಗೆ ಇದು ಹಿಡಿಸಲಿಲ್ಲ. ಒಮ್ಮೆ ಕಬಾಗಾಂಧಿ ಜಪ್ತಿ ಆದ ಮಾಲನ್ನು ಲೀಲಾವು ಮಾಡಿಸಿದ. ತನ್ನ ಅನುಮತಿ ಪಡೆಯದೆ ಮಾಲು ಹರಾಜು ಮಾಡಿಸಿದ್ದು ತಪ್ಪು ಹೀಗೆಂದು ಮತ್ತೆ ಮಾಲು ಹರಾಜು ಮಾಡಿಸುವಂತೆ ರಾಣ ಆಜ್ಞೆ ಮಾಡಿದ. ನೆರೆಯ ಸಂಸ್ಥಾನಗಳಲ್ಲಿ ಜಾರಿಯಲ್ಲಿದ್ದ ಧಾರಣೆಗಿಂತ ಹೆಚ್ಚಿನ ಬೆಲೆಗೆ ಮಾಲು ವಿಕ್ರೀತವಾಗಿದೆ. ತಾನು ಮಾಡಿದ್ದು ಸರಿ ಎಂದರು ಕಬಾಗಾಂಧಿ. ಆದರೆ ಇವರ ಮಾತಿಗೆ ಸೂಕ್ತ ಮನ್ನಣೆ ಕೊಡಲು ಒಪ್ಪಲಿಲ್ಲ ರಾಣ. ಮರು ಹರಾಜು ನಡೆಯಲೆಂದ. ಇಬ್ಬರ ನಡುವಿನ ಒಪ್ಪಂದ ಭಂಗವಾಗಿದೆ. ಆದ್ದರಿಂದ ಕಾರಭಾರಿಯ ಕೆಲಸದಿಂದ ತನ್ನನ್ನು ಬಿಡುಗಡೆ ಮಾಡಿಕೊಡುವಂತೆ ಕಬಾಗಾಂಧಿ ಕೇಳಿ ಕೊಂಡರು. ಆದರೆ ರಾಣ ಮತ್ತು ಅಧಿಕಾರಿಗಳು ಈ ಪ್ರಾರ್ಥನೆಗೆ ಕಿವಿಗೊಡದೆ ಏನೇನೋ ನೆಪ ಹೂಡತೊಡಗಿದರು. ತನ್ನನ್ನು ಕೆಲಸದಿಂದ ನಿವೃತ್ತಿ ಗೊಳಿಸುವವರೆಗೆ ತಾನು ಅನ್ನ ನೀರು ಆಹಾರ ಮುಟ್ಟುವುದಿಲ್ಲವೆಂದು ಕಬಾಗಾಂಧಿ ರಾಣನಿಗೆ ತಿಳಿಸಿ ದರು. ರಾಣನ ಅನುಮತಿ ಪಡೆದು ಅವರು ರಾಜಕೋಟೆಗೆ ಮರಳಿದರು.

ಆದರೆ ವ್ಯವಹಾರ ಚತುರ ಕಬಾಗಾಂಧಿಯನ್ನು ಬಿಟ್ಟು ಆಡಳಿತ ನಡೆಸಲಾ ಗದೆ ಎರಡು ವಾರಗಳಲ್ಲೇ ಕ್ಷಮಾಪಣೆ ಕೋರಿ ಹಿಂತಿರುಗಿ ಬರುವಂತೆ ರಾಣ ಕಬಾ

ಗಾಂಧಿಯವರಿಗೆ ಪ್ರಾರ್ಥಿಸಿದ. ಅವರು ವಂಕನೇರಿಗೆ ಮತ್ತೆ ಬಂದರು. ಆದರೆ ರಾಣ ಆಡಳಿತದಲ್ಲಿ ಕೈ ಹಾಕುವುದನ್ನು ಬಿಡಲಿಲ್ಲ. ಕಾರಭಾರಿಯ ಕೆಲಸ ವಹಿಸಿಕೊಳ್ಳಲು ಕಬಾಗಾಂಧಿ ನಿರಾಕರಿಸಿದರು. ಹಾಗಾದರೆ ರಾಜೀನಾಮೆ ಕೊಡಿ ಎಂದ ರಾಣ. ಅವರು ರಾಜೀನಾಮೆ ಸಲ್ಲಿಸಲಾರರು ಎಂದು ರಾಣ ಭಾವಿಸಿದ್ದ. ಕೇಳಿದ್ದೆ ತಡ ಕೂಡಲೇ ರಾಜೀನಾಮೆ ಸಲ್ಲಿಸಿದರು ಕಬಾಗಾಂಧಿ. ರಾಣ ಒಪ್ಪಂದದಂತೆ ನಡೆದುಕೊಳ್ಳದೆ ಇದ್ದುದರಿಂದ ತಾವು ರಾಜೀನಾಮೆ ನೀಡುತ್ತಿರುವುದಾಗಿ ಕಬಾಗಾಂಧಿ ಪತ್ರದಲ್ಲಿ ಬರೆದರು. ಕರಾರಿನಂತೆ ಐದು ವರ್ಷಗಳ ಅವಧಿಯ ವೇತನ ಸಲ್ಲಿಸುವಂತೆ ಕೋರಿದರು.

ಒಪ್ಪಂದದಂತೆ ರಾಣ ನಡೆದುಕೊಳ್ಳುತ್ತಿಲ್ಲ. ಆದ್ದರಿಂದ ರಾಜೀನಾಮೆ ಸಲ್ಲಿಸುತ್ತಿರುವುದಾಗಿ ಬರೆದಿದ್ದ ವಾಕ್ಯಗಳನ್ನು ವಿಸರ್ಜಿಸುವಂತೆ ರಾಣ ಅವರನ್ನು ಕೋರಿ ಹಾಗೆ ಮಾಡುವುದಾದರೆ ರೂ.10,000 ಕೊಡುವುದಾಗಿ ತಿಳಿಸಿದ. ರಾಜೀನಾಮೆಗೆ ಇದೇ ಕಾರಣವಾದ್ದರಿಂದ ವಾಕ್ಯಗಳನ್ನು ತೊಡೆಯಲು ಕಬಾಗಾಂಧಿ ಒಪ್ಪಿಕೊಳ್ಳಲಿಲ್ಲ. ಕರಾರಿನಂತೆ ಸಲ್ಲಬೇಕಾದ ಹಣ ಕೊಡಿ. ಒಂದು ಪೈಸೆ ಸಹ ನನಗೆ ಅಧಿಕಬೇಡ. ಕೊಡಲು ಇಷ್ಟವಿಲ್ಲದಿದ್ದರೆ ಏನೂ ಕೊಡಬೇಡಿ. ಚಿಂತೆ ಇಲ್ಲ. ನನ್ನನ್ನು ಬಿಟ್ಟು ಕೊಡಿ. ಕಬಾಗಾಂಧಿ ಈ ರೀತಿ ತಿಳಿಸಿದರು.

ರಾಣ ಹೇಳಿದ–"ನನ್ನಂತೆ ಉದಾರಿ ಇನ್ನೊಬ್ಬ ನಿಮಗೆ ಸಿಗಲಾರ. ಸುಮ್ಮನೆ ಹಟ ಮಾಡದೆ ಹಣ ತೆಗೆದುಕೊಳ್ಳಿ. ನಿಮ್ಮ ಮಗ ಕರಮಚಂದನನ್ನು ಇಂಗ್ಲೆಂಡಿಗೆ ಕಳುಹಿಸಲು ಉದ್ದೇಶಿಸಿರುವಿರಂತೆ. ಅವನಿಗಾದರೂ ಇದು ಒದಗಿ ಬಂದೀತು".

ಕಬಾಗಾಂಧಿ ಉತ್ತರಿಸಿದರು–''ನಿಮ್ಮಂಥಾ ಉದಾರಿ ಅರಸರು ಅನೇಕರು ಇರಬಹುದು. ಆದರೆ ಕಷ್ಟದಲ್ಲಿದ್ದರೂ, ಸತ್ಯವನ್ನು ಮರೆಮಾಚಿ, ಇಷ್ಟು ದೊಡ್ಡ ಹಣದ ಗಂಟನ್ನು ನಿರಾಕರಿಸುವ ಇನ್ನೊಬ್ಬ ಪ್ರಾಮಾಣಿಕ ಸೇವಕ ನಿಮಗೆ ದೊರೆಯುವುದು ದುರ್ಲಭ".

ಈ ಸನ್ನಿವೇಶದಲ್ಲಿ ಕಬಾಗಾಂಧಿಯವರನ್ನು ವಂಕನೇರಿಗೆ ಕರೆ ತರಲು ಕಾರಣನಾದ ನವಲರಾಂ ಮಧ್ಯೆ ಪ್ರವೇಶಿಸಿ ರಾಣ ಕೊಡುತ್ತಿರುವ ಉದಾರ ಸಹಾಯ ನಿರಾಕರಿಸಿದರೆ ತುಂಬ ತೊಂದರೆ ಆದೀತು ಎಂದು ಎಚ್ಚರಿಸಿದ.

ಕಬಾಗಾಂಧಿ ಉತ್ತರಿಸದೆ ಮೌನವಾಗಿದ್ದರು. ಇನ್ನು ಪ್ರಯೋಜನವಿಲ್ಲವೆಂದು ಅವರ ಸತ್ಯಸಂಧತೆ ತಿಳಿದಿದ್ದ ನವಲರಾಂ ಪ್ರಯಾಣಕ್ಕೆ ಗಾಡಿ ಸಿದ್ಧಪಡಿಸಿದ. ತಮ್ಮ ಹಾಸಿಗೆ ಮತ್ತು ಬಟ್ಟೆ ತರಲು ಮನೆಯೊಳಕ್ಕೆ ಹೋದರು. ಇದೇ ಸಮಯದಲ್ಲಿ ಹಣದ ಗಂಟುಗಳನ್ನು ಒಂದು ಮೂಲೆಗೂ ಮತ್ತೊಂದು ಚೀಲವನ್ನು ಕಬಾಗಾಂಧಿಯ

ಆಸನದ ಕೆಳಗೂ ಇರಿಸಿದ. ಕಬಾಗಾಂಧಿ ಬಂದು ತಮ್ಮ ಸ್ಥಾನದಲ್ಲಿ ಕುಳಿತರು. ಆಸನ ಸಮನಾಗಿಲ್ಲದೆ ಏನೋ ಚುಚ್ಚುವಂತಾಯಿತು. ಕೈ ಆಡಿಸಿ ನೋಡಿದರು. ಹಣದ ಚೀಲ.

ಆಳು ಪುರುಷೋತ್ತಮ ಎಲ್ಲವನ್ನು ಗಮನಿಸುತ್ತ ಅಲ್ಲಿಯೇ ನಿಂತಿದ್ದ. "ಇದೇನು ಪಾಸಿಯಾ" ಎಂದು ಅವನನ್ನು ಪ್ರಶ್ನಿಸಿದರು. ನನಗೆ ತಿಳಿಯದು ಎಂದ.

"ಇದೇನು ನವಲರಾಂ" ಎಂದು ಅವನನ್ನು ಕೇಳಿದರು.

"ನನಗೆ ತಿಳಿಯದು. ಇದು ರಾಣರ ಹುಕುಂ."

ಕಬಾಗಾಂಧಿ ಕುದುರೆ ಗಾಡಿಯಿಂದ ಕೆಳಗೆ ಇಳಿದು ಹಣದ ಚೀಲಗಳನ್ನು ತಮ್ಮ ಕೈಯಿಂದ ತೆಗೆದು ಮನೆಯ ಜಗುಲಿಯ ಮೇಲಿರಿಸಿ, 25 ಮೈಲಿ ದೂರದ ರಾಜಕೋಟೆಗೆ ತೆರಳಿದರು.

ಇದೇ ಪುರುಷೋತ್ತಮ ಮಹಾತ್ಮ ಗಾಂಧಿಯವರ ಕುಟುಂಬದಲ್ಲಿ ಬಹುಕಾಲ ಉಳಿದಿದ್ದ. ಅವನ ಪ್ರಾರ್ಥನೆಯಂತೆ ಅವನನ್ನು ಕೆಲಸದಿಂದ ನಿವೃತ್ತಿಗೊಳಿಸಿ ಕೈ ತುಂಬ ಹಣ ಕೊಟ್ಟರು. ಇದರಿಂದ ಸೌರಾಷ್ಟ್ರದ ಗೋಸ ಹಳ್ಳಿಯಲ್ಲಿ ಚಿಲ್ಲರೆ ಅಂಗಡಿ ತೆಗೆದು ವ್ಯಾಪಾರ ನಡೆಸುತ್ತ ಸುಖವಾಗಿ ಬಾಳಿದ.

ಕಬಾಗಾಂಧಿ ರಾಜಕೋಟೆಗೆ ಹಿಂದಿರುಗಿದ ವೃತ್ತಾಂತ ಥಾಕೂರ ಭಾವಿರಾಜನಿಗೆ ತಿಳಿಯಿತು. ಕಬಾಗಾಂಧಿ ರಾಜ್ಯಬಿಟ್ಟು ಹೋಗಿದ್ದ ಮೇಲೆ ಆಡಳಿತ ಅಧೋಗತಿಗೆ ಇಳಿದಿತ್ತು. ಥಾಕೂರರೇ ಕಬಾಗಾಂಧಿಯವರ ಮನೆಗೆ ತೆರಳಿ ಮತ್ತೆ ದಿವಾನರಾಗುವಂತೆ ಪ್ರಾರ್ಥಿಸಿದರು. ಕಬಾಗಾಂಧಿಯವರ ಆರೋಗ್ಯ ನೆಟ್ಟಗಿರಲಿಲ್ಲ. ಆರೋಗ್ಯ ಸುಧಾರಿಸಿಕೊಂಡು ತದನಂತರ ಅಧಿಕಾರ ಸ್ವೀಕರಿಸಿದರು.

ಥಾಕೂರ ಭಾವಿರಾಜನಿಗೆ ಕುಡಿಯುವ ಚಟ ಹಿಡಿದಿತ್ತು. ಎಲ್ಲರೂ ಇವನನ್ನು ಕಂಡರೆ ಹೆದರುತ್ತಿದ್ದರು. ಆದರೆ ದಿವಾನರನ್ನು ಕಂಡರೆ ಥಾಕೂರ ಅಂಜುತ್ತಿದ್ದ. ಇವರನ್ನು ಕಂಡ ಒಡನೆಯೇ ಪಾನದ ಪ್ಯಾಲ ಶೀಷೆ ಮುಚ್ಚಿಟ್ಟು ಎದ್ದು ನಮಸ್ಕರಿಸುತ್ತಿದ್ದ. ಇನ್ನೂ ಕೆಲವು ದುರ್ಗುಣಗಳು ಇವನಲ್ಲಿದ್ದುವು. ಎಂದಿನಂತೆ ಒಂದು ದಿನ ಆಜಿ ತೀರದಲ್ಲಿ ನೌಕರರೊಡನೆ ವಿಹರಿಸಲು ಹೊರಟಿದ್ದ. ಅಲ್ಲೊಬ್ಬ ಸುಂದರ ತರುಣಿ ಇವನ ದೃಷ್ಟಿಗೆ ಬಿದ್ದಳು. ಆ ಸುಂದರಿ ಒಬ್ಬ ನೌಕರನ ಹೆಂಡತಿ. "ಕಾಮಾತುರಾಣಾಂ, ನಭಯಂ ನಲಜ್ಜಾ" ಎಂಬಂತೆ ಇವನು ಲಜ್ಜೆ ಭೀತಿ ಎಲ್ಲಾ ತೊರೆದಿದ್ದ. ಒಂದು ರಾತ್ರಿ ಅವಳ ಮನೆ ಬಲವಂತವಾಗಿ ಪ್ರವೇಶಿಸಲು ತೀರ್ಮಾನಿಸಿದ.

ಪೊಲೀಸರಿಗೆ ಈ ಸುದ್ದಿ ತಿಳಿಯಿತು. ಪೊಲೀಸ್ ವಿಭಾಗದ ಅಧಿಕಾರಿ ಕಬಾ ಗಾಂಧಿಯ ಸಮೀಪ ಬಂಧು. ಈತ ಕಬಾಗಾಂಧಿಯವರಲ್ಲಿಗೆ ಬಂದು ಅವರ ಸಲಹೆ ಕೇಳಿದ. ಹೆದರ ಬೇಡ. ನಿನ್ನ ಕರ್ತವ್ಯ ಪಾಲಿಸು. ವಿಮುಖನಾಗುವುದು ರಾಜ್ಯದ ಪ್ರಜೆಗೂ, ರಾಜ್ಯಕ್ಕೂ, ಥಾಕೂರನಿಗೂ ದ್ರೋಹ ಬಗೆದಂತೆ ಆದೀತು ಎಂದು ಅವನನ್ನು ಎಚ್ಚರಿಸಿದರು.

ಅಧಿಕಾರಿ ಸುಂದರಿಯ ಮನೆಯ ಸುತ್ತ ಪೊಲೀಸರನ್ನು ಕಾವಲು ಕಾಯಲು ನೇಮಿಸಿದ. ರಾತ್ರಿ ಆಯಿತು. ಥಾಕೂರನ ನೀಚ ನೌಕರರು ಏಣಿ ತೆಗೆದುಕೊಂಡು ಬಂದರು. ಮಾಳಿಗೆ ಹತ್ತಿ ಒಳಕ್ಕೆ ಇಳಿಯಲು ಪೊಲೀಸರು ಅವರೆಲ್ಲರನ್ನೂ ಬಂಧಿಸಿದರು. ಮಾರನೆಯದಿನ ಕಬಾ ಗಾಂಧಿ ಅರಮನೆಗೆ ತೆರಳಿ ತನ್ನ ಆಜ್ಞೆಯಂತೆ ಬಂಧನ ನಡೆದಿರುವುದಾಗಿ ಥಾಕೂರನಿಗೆ ತಿಳಿಸಿದರು. ಅಷ್ಟು ಮಾತ್ರವಲ್ಲ. ಕೆಟ್ಟವರ ಸಹವಾಸದಿಂದ ಅನೀತಿ ಮಾರ್ಗ ಅನುಸರಿಸಿದರೆ ಸಾರ್ವಭೌಮ ಬ್ರಿಟಿಷ್ ಪ್ರಭುತ್ವಕ್ಕೆ ತಿಳಿಸಬೇಕಾದೀತು. ನೀನು ಪದಚ್ಯುತನಾಗಬಹುದು. ಜೋಕೆ ಎಂದು ಎಚ್ಚರಿಕೆ ಕೊಟ್ಟರು.

ಈ ರೀತಿಯಲ್ಲಿ ಥಾಕೂರನನ್ನು ದುರ್ಮಾರ್ಗದಿಂದ ತಪ್ಪಿಸಲು ಕಠೋರವಾಗಿ ವರ್ತಿಸುತ್ತಿದ್ದರೂ, ಅವರ ರಾಜ ಭಕ್ತಿಗೆ ಕುಂದು ಇರಲಿಲ್ಲ. ಕಠೋರವಾಗಿ ವರ್ತಿಸಲು ರಾಜಭಕ್ತಿಯೇ ನಿಜವಾದ ಕಾರಣ. ಒಮ್ಮೆ ಬ್ರಿಟಿಷ್ ಪ್ರಭುತ್ವದ ಏಜೆಂಟ್ ಥಾಕೂರರ ಬಗ್ಗೆ ಅಗೌರವವಾಗಿ ಮಾತನಾಡಿದ. ಆಗ ರಾಜಭಕ್ತ ದಿವಾನ್ ಕಬಾ ಗಾಂಧಿ ಇದನ್ನು ತೀವ್ರವಾಗಿ ಪ್ರತಿಭಟಿಸಿದರು. ಬ್ರಿಟಿಷ್ ಅಧಿಕಾರಿ ಇವರನ್ನು ಬಂಧಿಸಿ ಕೆಲವು ಘಂಟೆಗಳ ಕಾಲ ಮರದಡಿ ನಿಲ್ಲಿಸಿದ. ಆದರೆ ಕಬಾ ಗಾಂಧಿ ಇದಕ್ಕೆ ಜಗ್ಗಲಿಲ್ಲ. ಇವರ ರಾಜ ನಿಷ್ಠೆ, ಧೈರ್ಯ ಸ್ಥೈರ್ಯ ಬ್ರಿಟಿಷ್ ಅಧಿಕಾರಿಯ ಮನ್ನಣೆಗೆ ಪಾತ್ರವಾಯಿತು. ಇದರಿಂದ ಇಬ್ಬರಲ್ಲೂ ಸ್ನೇಹ ಅನುರಾಗ ಬೆಳೆಯಿತು. ಇದೇ ಪ್ರಭುತ್ವದ ಪ್ರತಿನಿಧಿ ಫಿಜ್‌ಗೆರಾಲ್ಡ್ ಮುಂದೆ ಕಾಥೀವಾಡದ ಗವರ್ನರಿನ ಏಜೆಂಟ್ ಆದ. ಇವನು ಬಹಳ ಮುಂಗೋಪಿ. ಇವನದೊಂದು ವಿಚಿತ್ರ ಶಿಕ್ಷೆಯ ಕ್ರಮ. ತಪ್ಪು ಮಾಡಿದವರನ್ನು ಉರಿಬಿಸಿಲಿನಲ್ಲಿ ಕೆಲಕಾಲ ನಿಲ್ಲಿಸುವುದೇ ಈ ಶಿಕ್ಷೆ. ಈ ಶಿಕ್ಷೆಗೆ 'ಲಾಲ್‌ತಂಬೂ' ಎಂದು ಹೆಸರು.

ಒಂದು ದಿನ ತನ್ನನ್ನು ಭೇಟಿಯಾಗುವಂತೆ ಕಬಾ ಗಾಂಧಿ ಅವರಿಗೆ ಹೇಳಿಕಳುಹಿಸಿದ. ಗೊತ್ತಾದ ಕಾಲಕ್ಕೆ ಗಾಂಧಿ ಅಲ್ಲಿಗೆ ಹೋದರು. ಆಳು ಒಳಕ್ಕೆ ಹೋಗಿ ಕಬಾ ಗಾಂಧಿ ಬಂದಿರುವುದಾಗಿ ತಿಳಿಸಿದ. 'ಲಾಲ್‌ತಂಬು'ವಿನಲ್ಲಿ ಕಾದಿರುವಂತೆ ಫಿಜ್‌ಗೆರಾಲ್ಡ್ ಆಜ್ಞೆ ಮಾಡಿರುವುದಾಗಿ ಆಳು ಕಬಾಗಾಂಧಿಯವರಿಗೆ ತಿಳಿಸಿದ. ಅವರ ಅಂತಸ್ತು ತಿಳಿದಿದ್ದ ಆಳು ಕೂಡಲು ಕುರ್ಚಿ ತಂದು ಹಾಕಿದ, ಬಿಸಲಲ್ಲಿ. ದಿವಾನ್

ಗಾಂಧಿ ಕುಪಿತರಾದರು. ನಿಮ್ಮ ಸಾಹೇಬರ ಅಣತಿಯಂತೆ ನಾನು ಬಂದಿರುವೆ. ಬಹುಶಃ, ಸಾಹೇಬರಿಗೆ ಬಿಡುವಿಲ್ಲ. ಚಿಂತೆಯಿಲ್ಲ. ನಾನು ಬಂದಿದ್ದೆ. ಸ್ವಲ್ಪ ಕಾದಿದ್ದೆ. ಸಾಹೇಬರು ಭೇಟಿ ಕೊಡಲಿಲ್ಲ. ತಪ್ಪು ನನ್ನದಲ್ಲ. ಅಗತ್ಯವಿದ್ದರೆ ಪುನಃ ಪತ್ರ ಬರೆಯುವಂತೆ ತಿಳಿಸು." ಹೀಗೆ ಹೇಳಿ ಅಲ್ಲಿಂದ ಅವರು ಕಾಲ್ತೆಗೆದರು.

ಎಷ್ಟು ಅಹಂಭಾವ ಈ ಸಣ್ಣ ಸಂಸ್ಥಾನದ ದಿವಾನನಿಗೆ ಎಂದು ಕೋಪಗೊಂಡ ಗವರ್ನರಿನ ಪ್ರತಿನಿಧಿ. ಥಾಕೂರರಿಗೆ ಈ ವಿಷಯ ತಿಳಿಸಿದ. ಥಾಕೂರ ಎಷ್ಟೇ ದುರ್ವ್ಯಸನಿಯಾದರೂ ತನ್ನ ದಿವಾನ್ ಮಾಡಿದ್ದು ಸರಿ ಎನಿಸಿತು ಅವನಿಗೆ. ಕಬಾ ಗಾಂಧಿಯ ವರ್ತನೆಯನ್ನು ಎತ್ತಿಹಿಡಿದ. ಬ್ರಿಟಿಷ್ ಏಜಂಟಿನ ಬೆದರಿಕೆಗೆ ಜಗ್ಗಲಿಲ್ಲ.

ಹತ್ತು ಸಾವಿರ ರೂಪಾಯಿ ತಿರಸ್ಕರಿಸಿದ ಕಬಾಗಾಂಧಿಗೆ ಮತ್ತೊಂದು ಮೋಹಪಾಶ ಕಾದಿತ್ತು. ಮನೆ ಕಟ್ಟಿಕೊಳ್ಳಲು ನಿಮಗೆ ಎಷ್ಟು ಬೇಕೋ ಅಷ್ಟು ನಿವೇಶನ ತೆಗೆದುಕೊಳ್ಳಿ ಎಂದ ರಾಜಕೋಟೆಯ ಥಾಕೂರ್. ದಾಕ್ಷಿಣ್ಯಕ್ಕೆ ಒಳಗಾಗಲು ಬಯಸದ ಕಬಾ ತನಗೆ ನಿವೇಶನವೇ ಬೇಡವೆಂದರು. ಥಾಕೂರರು ಮತ್ತು ಬಂಧು ಬಳಗ ತೆಗೆದುಕೊಳ್ಳುವಂತೆ ಒತ್ತಾಯಪಡಿಸಿದರು. ಒತ್ತಾಯಕ್ಕೆ ಮಣಿದು ಕೇವಲ 400 ಚದರಗಜ ತೆಗೆದುಕೊಳ್ಳಲು ಒಪ್ಪಿದರು. ದಿವಾನರಿಗೆ ಇಷ್ಟು ಸಣ್ಣ ನಿವೇಶನೆ ಸಾಕೆ, ದೊಡ್ಡದು ತೆಗೆದುಕೊಳ್ಳುವಂತೆ ಥಾಕೂರರು ಬಹಳ ಒತ್ತಾಯ ಮಾಡಿದರು. ತಾವು ಕೊಡುವ ವೇತನ ನನ್ನ ಸಂಸಾರ ನಿರ್ವಹಣೆಗೆ ಸಾಕು ಎಂದು ನಿವೇಶನ ಉಚಿತವಾಗಿ ದೊರೆಯುತ್ತಿದ್ದರೂ ದೊಡ್ಡ ನಿವೇಶನ ತೆಗೆದುಕೊಳ್ಳಲಿಲ್ಲ. ಅವರು ಆಸ್ತಿ ಮಾಡದೆ ಹೋದುದರಲ್ಲಿ ಆಶ್ಚರ್ಯವೇನು?

ತಂದೆಯಂತೆ, ಮಹಾತ್ಮಾಗಾಂಧೀಜಿ ದರಿದ್ರನಾರಾಯಣನ ಪ್ರತಿನಿಧಿ ಆಗಿದ್ದುದರಲ್ಲಿ ಸಂದೇಹವೇನು.

ಮಾತಾ–ಪಿತೃಗಳಲ್ಲಿ ಭಕ್ತಿ

"ಮಾತೃದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ" ಎಂದು ತಾಯಿ ತಂದೆ ಗುರು ಮೂವರನ್ನೂ ದೇವದೇವತೆಗಳ ಮಟ್ಟಕ್ಕೆ ನಮ್ಮ ಶಾಸ್ತ್ರಗಳು ಒಯ್ಯುತ್ತವೆ. ಮೊದಲ ಸ್ಥಾನ ತಾಯಿಗೆ.

ತಾಯಿ ಮಕ್ಕಳನ್ನು ಪ್ರೀತಿಸುವುದು ಸಹಜ. ತಂದೆ ಮಕ್ಕಳ ಮೇಲೆ ಕೋಪ ಮಾಡಿಕೊಂಡಾಗ, ಮಕ್ಕಳನ್ನು ರಕ್ಷಿಸಲು ತಾಯಿ ಓಡಿ ಬರುತ್ತಾಳೆ. ಅಪರಾಧ ಗಳನ್ನು ಮನ್ನಿಸುತ್ತಾಳೆ. ಮಕ್ಕಳೂ ಅಂತೆಯೇ. ತಂದೆ ಕೋಪ ಮಾಡಿಕೊಂಡರೆ ತಾಯಿಯ ಮರೆಹೋಗುತ್ತಾರೆ. ತಾಯಿ ಕರುಣೆಯ ಪ್ರೀತಿಯ ಆಗರ. ಆದ್ದ ರಿಂದಲೇ ಮಕ್ಕಳಿಗೂ ತಾಯಿಯ ಮೇಲೆ ಅತಿ ಪ್ರೇಮ ಮತ್ತು ಮಮತೆ.

ತಾಯಿ ಪುತಲೀಬಾಯ್ ನಿಷ್ಠಾವಂತ ವೈಷ್ಣವ ಸಂಪ್ರದಾಯವಾದಿ. ಹಳೆಯ ಪದ್ಧತಿಯಂತೆ ನಡೆದುಕೊಳ್ಳುವಳು. ಪ್ರತಿ ದಿನ ದೇವರ ಪ್ರಾರ್ಥನೆ ಸಲ್ಲಿಸದೆ ಊಟ ಮಾಡಳು. ಪ್ರತಿ ದಿನ ತಪ್ಪದೆ ದೇವಸ್ಥಾನಕ್ಕೆ ಹೋಗುವಳು. ದೈವ ಭಕ್ತಳು. ಚಾತುರ್ಮಾಸ, ಚಂದ್ರಾಯಣ ಮೊದಲಾದ ಕಠಿಣ ವ್ರತಗಳನ್ನು ದೇಹಾರೋಗ್ಯ ವನ್ನೂ ಲಕ್ಷಿಸದೆ ಆಚರಿಸುವಳು.

ಚಾತುರ್ಮಾಸ, ಚಾಂದ್ರಾಯಣ ಇವುಗಳ ಆಚರಣೆಯಲ್ಲಿ ಉತ್ತರ ಮತ್ತು ದಕ್ಷಿಣ ಭಾರತದ ಪದ್ಧತಿಗಳಲ್ಲಿ ಭಿನ್ನತೆಗಳು ಕಂಡು ಬರುತ್ತವೆ. ಇವೆಲ್ಲವೂ ಅವರವರ ಮನೆಯ ಸಂಪ್ರದಾಯವನ್ನು ಅವಲಂಬಿಸಿರುತ್ತವೆ. ಚಾತುರ್ಮಾಸದಲ್ಲಿ ಒಂದು ತಿಂಗಳು ಶಾಕಾಹಾರ ಕಾಯಿಪಲ್ಯ ವರ್ಜ್ಯ. ಇನ್ನೊಂದು ತಿಂಗಳಲ್ಲಿ ಹಾಲು ತೆಗೆದು ಕೊಳ್ಳುವಂತಿಲ್ಲ. ಮತ್ತೊಂದು ತಿಂಗಳು ಮೊಸರು ಬಳಸುವುದಿಲ್ಲ. ಮಗದೊಂದು ತಿಂಗಳು ಬೇಳೆಗಳನ್ನು ತೆಗೆದುಕೊಳ್ಳುವುದಿಲ್ಲ. ವೈಷ್ಣವರಲ್ಲೂ, ಜೈನರಲ್ಲೂ ಇವುಗಳ ಆಚರಣೆಗೆ ಹೆಚ್ಚು ಮಹತ್ವ. ಒಪ್ಪತ್ತೇ ಊಟ.

ಚಾಂದ್ರಾಯಣದಲ್ಲಿ ಪೂರ್ಣಿಮೆ ಮತ್ತು ಅಮಾವಾಸ್ಯೆಯ ಚಂದ್ರನಂತೆ 15 ದಿನ ಆಹಾರ ಸೇವನೆ ಹೆಚ್ಚಿಸಿಕೊಳ್ಳುತ್ತಾ ಬರುವರು, 15 ದಿನ ಸೇವನೆ ಕಡಿಮೆ ಮಾಡಿಕೊಳ್ಳುತ್ತಾ ಬರುವರು. ಸೂರ್ಯನನ್ನು ನೋಡದೆ ಊಟ ಮಾಡರು. ಒಳ್ಳೆಯ ಮಳೆಗಾಲದಲ್ಲಿ ಈ ವ್ರತ ಆಚರಿಸಲ್ಪಡುವುದು. ಭೀಷ್ಮ ಪಂಚಕ ಇದಕ್ಕೂ ಕಠಿಣವಾದ ವ್ರತ. ಒಟ್ಟಿಗೆ ಪ್ರತಿ ತಿಂಗಳಲ್ಲೂ ಐದು ದಿನಗಳ ಉಪವಾಸ. ಮಿಕ್ಕ

ದಿನಗಳಲ್ಲಿ ಒಪ್ಪತ್ತು ಊಟ. ಊಟದ ನಂತರ ಉಪಾಹಾರ, ಹಣ್ಣುಹಂಪಲು, ಕಡೆಗೆ ನೀರನ್ನೂ ಸೇವಿಸುವಂತಿಲ್ಲ. ಹೀಗೆ ಒಂದು ವರ್ಷಕಾಲ ನಡೆಯುವುದು. ಒಂದು ತಿಂಗಳು ಅಥವಾ ಒಂದು ವರ್ಷ ಕಾಲ ಉಪ್ಪಿಲ್ಲದೆ ಆಹಾರ ಸೇವಿಸುವುದು ಅಲವಣ ವ್ರತ. ಜಿಹ್ವಾಚಾಪಲ್ಯ, ಇಂದ್ರಿಯ ನಿಗ್ರಹ, ಸಂಯಮ ಇವುಗಳ ಉದ್ದೇಶ. ಪುಣ್ಯ ಪ್ರಾಪ್ತವಾಗುತ್ತದೆ ಎಂಬ ದೃಢ ವಿಶ್ವಾಸ.

ತಮ್ಮ ತಾಯಿ ಚಾತುರ್ಮಾಸ ಮತ್ತು ಚಾಂದ್ರಾಯಣವನ್ನು ಆಚರಿಸುತ್ತಿದ್ದು ದನ್ನು ವಿಶದವಾಗಿ ತಮ್ಮ ಆತ್ಮ ಕಥೆಯಲ್ಲಿ ಗಾಂಧೀಜಿ ಚಿತ್ರಿಸಿರುತ್ತಾರೆ. ಯಾವ ವರ್ಷದಲ್ಲೂ ಚಾತುರ್ಮಾಸ ವ್ರತ ಆಚರಿಸುವುದನ್ನು ಅವರು ತಪ್ಪಿದ್ದೇ ಇಲ್ಲ. ಕಠೋರ ವ್ರತಗಳನ್ನು ಆಚರಿಸಲು ನಿರ್ಧರಿಸಿ, ದೇಹಾಲಸ್ಯ ಅಥವಾ ಏನೇ ತೊಂದರೆ ಬರಲಿ ಹಿಡಿದ ವ್ರತವನ್ನು ತಪ್ಪದೇ ಪೂರ್ಣಗೊಳಿಸುತ್ತಿದ್ದರು. ಎರಡು ಅಥವಾ ಮೂರು ದಿನಗಳ ಉಪವಾಸ ಅವಳಿಗೆ ಸಹಜವಾಗಿ ಹೋಗಿತ್ತು. ಚಾತುರ್ಮಾಸದಲ್ಲಿ ದಿನಕ್ಕೆ ಒಪ್ಪತ್ತೇ ಊಟ. ಇಷ್ಟರಿಂದಲೇ ತೃಪ್ತಳಾಗದೆ ಒಂದು ವರ್ಷದ ಚಾತು ರ್ಮಾಸದಲ್ಲಿ ದಿನ ಬಿಟ್ಟು ದಿನ ಊಟಮಾಡುತ್ತಿದ್ದಳು. ಸೂರ್ಯದರ್ಶನವಿಲ್ಲದೆ ಊಟ ಮಾಡುವುದಿಲ್ಲವೆಂದು ಮತ್ತೊಂದು ವರ್ಷದ ಚಾತುರ್ಮಾಸ. ಗಾಂಧೀ ಮತ್ತು ಇತರ ಮಕ್ಕಳು ಸೂರ್ಯದರ್ಶನವಾದೀತೇ ಎಂದು ಆಕಾಶದತ್ತ ಎವೆಯಿಕ್ಕಿ ನೋಡುತ್ತಿರುವರು. ವರ್ಷಋತು, ಮಳೆಗಾಲ, ಮೋಡಕವಿದ ಗಗನ. ಸೂರ್ಯ ಮೋಡಗಳ ನಡುವೆ ಇಣಿಕಿ ನೋಡುವನು. ಅರೆಕ್ಷಣದಲ್ಲಿಯೇ ಮಾಯವಾಗುವನು. ಅಮ್ಮಾ, ಸೂರ್ಯ ಗೋಚರಿಸುತ್ತಿದ್ದಾನೆಂದು, ಅವನ ದರ್ಶನವಾಗುತ್ತಲೇ, ಮೋಹನ ಓಡಿ ಹೋಗಿ ತಾಯಿಗೆ ತಿಳಿಸುವನು. ತಾಯಿ ಓಡಿ ಬರುವಳು. ಇಷ್ಟ ರಲ್ಲಿ ಮೋಡ ಸೂರ್ಯನನ್ನು ಮರೆಮಾಡುವದು. ಎರಡು ಮೂರಾವರ್ತಿ ಹೀಗೆ ನಡೆದ ಮೇಲೆ ಸೂರ್ಯದರ್ಶನವಾಗದಿದ್ದರೆ, ನಾನು ಇಂದು ಉಣಬಾರದೆಂದು ದೈವೇಚ್ಛೆ. ಆತನ ಸಂಕಲ್ಪದಂತೆ ನಡೆಯಲಿ ಎಂದು ಸಮಾಧಾನ ತಂದುಕೊಂಡು, ತನ್ನ ದಿನಚರಿಯ ಕೆಲಸದಲ್ಲಿ ತೊಡಗುವಳು. ಅಂದು ಉಪವಾಸ.

ಮಾವಜಿ ದವೆ ಅಥವಾ ಜೋಷಿಜಿ ಗಾಂಧೀ ಕುಟುಂಬದ ಹಳೆಯ ಸ್ನೇಹಿತ. ಪೋರಬಂದರಿನ ದಿವಾನನಾಗಬೇಕು ಮೋಹನದಾಸಗಾಂಧೀ. ಇದಕ್ಕಾಗಿ ಅವನು ಬ್ಯಾರಿಸ್ಟರ್ ಅಥವಾ ವಕೀಲಿ ಪರೀಕ್ಷೆಮಾಡಬೇಕು. ಭಾರತದಲ್ಲಿ ವಕೀಲನಾಗಲು ವ್ಯಾಸಂಗ ಮಾಡಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಕಾಲ ಅಧಿಕಬೇಕು. ಪರೀ ಕ್ಷೆಯೂ ಕಠಿಣ. ಇಂಗ್ಲೆಂಡಿಗೆ ಹೋಗಿ ಓದಿ ಬ್ಯಾರಿಸ್ಟರ್ ಪದವೀಧರನಾಗಿ ಮೋಹನ ಹಿಂತಿರುಗಿ ಬರಲಿ. ದಿವಾನ ಪದವಿ ಅವನಿಗೆ ಕಟ್ಟಿಟ್ಟ ಬುಟ್ಟಿ. ಈ ರೀತಿಯಲ್ಲಿ ಮೋಹನ ಮತ್ತು ಅವನ ದೊಡ್ಡಪ್ಪನ ಮನವೊಲಿಸಿದ, ಜೋಷಿಜ.

ಆದರೆ ತಾಯಿ ಪುತಲೀಬಾಯ್‌ಗೆ ಮೋಹನನಿಂದ ಅಗಲಿರಲು ಇಷ್ಟವಿರಲಿಲ್ಲ. ಅಲ್ಲದೆ ಪಾಶ್ಚಾತ್ಯದೇಶಗಳಿಗೆ ಹೋದವರು ಕುಡಿಯುವುದು, ಮಾಂಸ ಸೇವಿಸುವುದು, ಪರಸ್ತ್ರೀ ಸಹವಾಸ ಮಾಡುವುದು ಕಲಿಯುತ್ತಾರೆಂದು ಪುತಲೀಬಾಯಿಗೆ ಯಾರೋ ತಿಳಿಸಿದರು. ಇದರಿಂದ ಅವಳ ಮನಸ್ಸು ಕೆಟ್ಟಿತು. ಮೋಹನನಿಗೆ ತನ್ನ ಮನಸ್ಸಿನ ಕಳವಳ ತಿಳಿಸಿದಳು. ಕುಡಿಯುವುದು, ಮಾಂಸಸೇವನೆ, ಪರಸ್ತ್ರೀಸಹವಾಸ ಮಾಡುವುದಿಲ್ಲವೆಂದು ನಿನಗೆ ವಚನ ಕೊಡುತ್ತೇನೆ ಎಂದು ತಾಯಿಯನ್ನು ಸಮಾಧಾನಪಡಿಸಿದ. ಬೇಚರಿಜಿ ಸ್ವಾಮಿಗಳ ಸಮ್ಮುಖದಲ್ಲಿ ಈ ದುರ್ವ್ಯಸನಗಳಿಂದ ದೂರವಾಗಿರುವುದಾಗಿ ಅವನು ಪ್ರತಿಜ್ಞೆ ಮಾಡಿದ. ಇದರಿಂದ ಸಮಾಧಾನಪಟ್ಟುಕೊಂಡ ತಾಯಿ ಮಗನನ್ನು ವಿದೇಶಕ್ಕೆ ಕಳುಹಿಸಲು ಒಪ್ಪಿಗೆ ಕೊಟ್ಟಳು.

ಮೋದ ಬನಿಯಾ ಕುಲಗುರುಗಳಾದ ಸೇಠರು ಗಾಂಧೀ ಸಮುದ್ರಯಾನ ಮಾಡುವುದನ್ನು ಒಪ್ಪಲಿಲ್ಲ. ನಮ್ಮ ಜನಕ್ಕೆ ಸಮುದ್ರಯಾನ ಬಹಿಷ್ಕೃತವಾಗಿದೆ. ನೀನು ಸಮುದ್ರಯಾನ ಮಾಡುವುದಾದರೆ ನಿನ್ನನ್ನು ಜಾತಿಯಿಂದ ಹೊರ ಹಾಕಬೇಕಾಗುತ್ತದೆ ಎಂದು ಕುಲಗುರುಗಳು ಬೆದರಿಕೆ ಹಾಕಿದರು. ಬಂದರಿಗೆ ಹೋಗಿ ಗಾಂಧಿಯನ್ನು ಬೀಳ್ಕೊಡುವ ಜನ ಒಂದೂಕಾಲು ರೂಪಾಯಿ ದಂಡ ಕೊಡಬೇಕೆಂದು ವಿಧಿಸಿದರು. ಸುರಾಪಾನ, ಮಾಂಸಾಹಾರ, ಪರಸ್ತ್ರೀ ಸಹವಾಸ ಮಾಡುವುದಿಲ್ಲವೆಂದು ತಾಯಿಗೆ ನಾನು ವಚನ ಕೊಟ್ಟಿರುವೆ. ನಮ್ಮ ಅಣ್ಣನೂ ಅನುಮತಿ ಕೊಟ್ಟಿರುತ್ತಾನೆ. ಆದ್ದರಿಂದ ನಾನು ಹೋಗುವೆ, ಎಂದು ತಿಳಿಸಿ ವಿದೇಶಕ್ಕೆ ಮೋಹನದಾಸ ಕರಮಚಂದ ತೆರಳಿದ.

ಜಹಜಿನಲ್ಲಿ ಪ್ರಯಾಣ ಮಾಡುತ್ತಿದ್ದಾಗಲೇ ಇಂಗ್ಲೆಂಡ್ ಛಳಿ ದೇಶ. ಮಾಂಸ ತೆಗೆದುಕೊಳ್ಳದೆ ಅಲ್ಲಿ ಬದುಕಲು ಸಾಧ್ಯವಿಲ್ಲ ಎಂದು ಜೊತೆಯ ಪ್ರಯಾಣೀಕರು ಹೇಳಿದರು. ಲಂಡನ್ನಿಗೆ ಹೋದಮೇಲೂ ಇದೇ ಕಥೆ. ಇವನ ಸಂಗಡ ಕೋಣೆಯಲ್ಲಿದ್ದ ಜೊತೆಗಾರನೂ ಇದೇ ಬುದ್ಧಿವಾದ ಹೇಳಿದ. ಒಂದು ಆಂಗ್ಲ ಕುಟುಂಬದೊಡನೆ ಕೆಲಕಾಲವಿದ್ದ. ಅಲ್ಲಿಯೂ ಇದೇ ಮಾತು. ಇವನ ಕೋಣೆಯ ಜೊತೆಗಾರ ಹೇಳಿದ, ನೀನು ನನ್ನ ಸಹೋದರನಾಗಿದ್ದರೆ ನಿನ್ನನ್ನು ಭಾರತಕ್ಕೆ ಹಿಂತಿರುಗಿಕಳುಹಿಸಿಬಿಡುತ್ತಿದ್ದೆ. ಇಲ್ಲಿನ ಪರಿಸ್ಥಿತಿಯ ಅರಿವಿಲ್ಲದ ಅಜ್ಞಾನಿ ತಾಯಿಗೆ ಕೊಟ್ಟ ವಚನಕ್ಕೆ ಮಹತ್ವವಿಲ್ಲ. ಕಾನೂನಿನಲ್ಲಿ ಇದಕ್ಕೆ ಬೆಲೆ ಇಲ್ಲ. ಮೊಂಡುತನದಿಂದ ಪ್ರಯೋಜನವಿಲ್ಲ. ಬಾಲ್ಯದಲ್ಲಿ ಮಾಂಸದ ಸವಿ ಉಂಡಿರುವೆ. ರುಚಿಯಾಗಿತ್ತು ಎಂದು ನೀನೇ ಒಪ್ಪಿಕೊಳ್ಳುವೆ. ಇಂಡಿಯಾ ಬಿಸಿಲಿನ ದೇಶ. ಮಾಂಸ ಸೇವಿಸುವ ಅಗತ್ಯ ಅಲ್ಲಿ ಇಲ್ಲ. ಅಗತ್ಯವಿಲ್ಲದಲ್ಲಿ ನೀನು ಮಾಂಸ ತಿಂದಿರುವೆ. ಇಲ್ಲಿ ಸೇವಿಸುವುದು ತುಂಬ ಅಗತ್ಯ. ಆದರೆ ತಾಯಿಗೆ ವಚನ ಕೊಟ್ಟಿರುವೆ. ಮಾಂಸ ಸೇವಿಸಲಾರೆ ಎಂದು ಹೇಳುವ

ಎಂಥಾ ಮೂರ್ಖ ನೀನು. ಈ ರೀತಿಯಲ್ಲಿ ಗೆಳೆಯ ಎಷ್ಟೋ ಒತ್ತಾಯ ಪಡಿಸಿದ. ತಪ್ಪೋ, ಬೆಪ್ಪೋ, ತಾಯಿಗೆ ಮಾತು ಕೊಟ್ಟಿರುವೆ, ಅದರಂತೆ ನಡೆದುಕೊಳ್ಳುವುದು ನನ್ನ ಕರ್ತವ್ಯ. ವಚನ ಭ್ರಷ್ಟನಾಗಲಾರೆ, ಇದೇ ಸುಪ್ಪಿರಾಗ ಮೋಹನದು. ಕೋಣೆಯ ಗೆಳೆಯ ಸಿಗರೇಟು ಸೇದುತ್ತಿದ್ದ, ಮಾಂಸ ತಿನ್ನುತ್ತಿದ್ದ, ಕುಡಿಯುತ್ತಿದ್ದ. ಆದರೆ ಮೋಹನನ ಮೇಲೆ ಇದರಿಂದ ಯಾವ ಕೆಟ್ಟ ಪರಿಣಾಮವೂ ಆಗಲಿಲ್ಲ. ಕೊಟ್ಟ ಮಾತಿಗೆ ಕಟ್ಟುಬಿದ್ದುದರಿಂದ ಈ ದುಶ್ಚಟಗಳಿಂದ ಪಾರಾಗಲು ಇವನಿಗೆ ಸಾಧ್ಯವಾಯಿತು.

ಇಂಗ್ಲೆಂಡಿಗೆ ಹೋಗುವುದಕ್ಕೆ ಮೊದಲೇ ಇವನ ಅಣ್ಣನ ಸಂಗಾತಿಗಳು ಇವನನ್ನು ಸೂಳೆಯ ಮನೆಗೆ ಕರೆದುಕೊಂಡು ಹೋಗಿದ್ದರು. ಹಣವನ್ನೂ ಅವರೇ ತೆತ್ತಿದ್ದರು. ಹಾಸಿಗೆಯ ಮೇಲೆ ಸೂಳೆಯ ಬಳಿ ಕುಳಿತ. ಮುಂದೇನು ಮಾಡಬೇಕೆಂದು ತಿಳಿಯ ಲಿಲ್ಲ. ಮೂಕನಾದ. ಬಾಯಿಂದ ಮಾತು ಹೊರಡಲಿಲ್ಲ. ಪಕ್ಕದಲ್ಲಿ ಕುಳಿತಿದ್ದ ಗರತಿ ಇವನನ್ನು ನೋಡಿ, ನೀನು ಷಂಡ, ಗಂಡಸಲ್ಲ, ಹೊರಡು ಇಲ್ಲಿಂದ ಎಂದು ಬೈದು ಹೊರಗೆ ದೂಡಿದಳು. ದೇವರೇ ನನ್ನನ್ನು ಕಾಪಾಡಿದ ಎಂದಿರುತ್ತಾರೆ ಗಾಂಧೀಜಿ.

ಮುಂದೆ ಇಂಥ ಇನ್ನೂ ಎರಡು ಘಟನೆಗಳು ನಡೆದುವು. ವಿದ್ಯಾರ್ಥಿಯಾಗಿ ದ್ದಾಗ ಪೋರ್ಟ್‌ಸ್ಮತ್ ಬಂದರು ಪ್ರದೇಶದಲ್ಲಿ ಸಸ್ಯಾಹಾರಿಗಳ ಸಮ್ಮೇಳನವೊಂದು ನಡೆಯಿತು. ಗಾಂಧೀಜಿ ಮತ್ತು ಇನ್ನೊಬ್ಬ ಭಾರತೀಯ ಗೆಳೆಯ ಇಬ್ಬರೂ ಆಹ್ವಾನಿತ ರಾಗಿ ಸಮ್ಮೇಳನಕ್ಕೆ ಪೋರ್ಟ್‌ಸ್ಮತ್‌ಗೆ ಹೋದರು. ಇದು ನಾವಿಕರ ನಗರ. ದೀರ್ಘ ಕಾಲದ ಸಮುದ್ರಯಾನ ಮಾಡಿದ ನಾವಿಕರು ವಿಶ್ರಾಂತಿಗಾಗಿ ಇಲ್ಲಿ ಸ್ವಲ್ಪಕಾಲ ತಂಗು ತ್ತಾರೆ. ಅನೇಕ ವೇಶ್ಯಾವಾಟಿಕೆಗಳಲ್ಲಿ ಕಾಲಕಳೆಯುವುದು ಸಾಮಾನ್ಯ. ಸಂಸಾರಿಗಳ ಮನೆಯ ಸ್ತ್ರೀಯರ ನಡತೆಯೂ ಅಷ್ಟಷ್ಟೇ. ಇದಕ್ಕೆ ಅವರು ಹೆಚ್ಚು ಗಮನ ಕೊಡರು, ಅಧಿಕ ಬೆಲೆ ಕಟ್ಟರು. ಸಮ್ಮೇಳನಕ್ಕೆ ಬಂದಿದ್ದ ಅತಿಥಿಗಳನ್ನು ಗೃಹಸ್ಥರ ಮನೆಗಳ ಲ್ಲಿಯೇ ಇಳಿಸಲಾಗಿತ್ತು. ಅಂತೆಯೇ ಗಾಂಧೀ ಮತ್ತು ಅವರ ಗೆಳೆಯರನ್ನು. ಈ ನಗರ ದಲ್ಲಿ ವೇಶ್ಯೆಯರ ಮನೆ ಯಾವುದು ಸಂಸಾರಿಗಳ ಮನೆ ಯಾವುದು, ಅಪರೂಪವಾಗಿ ಬರುವ ಆಗುಂತಕರು ಎಲ್ಲಿ ಉಳಿಯಬೇಕು. ಯಾವುದು ಸದ್ಗೃಹಸ್ಥರ ಮನೆ, ಯಾವುದು ವೇಶ್ಯೆಯರ ವಾಟಿಕೆ ಎಂದು ಗೊತ್ತು ಮಾಡುವುದೇ ಕಠಿಣ ಎನ್ನುತ್ತಾರೆ ಗಾಂಧೀಜಿ. ಅಂತೂ ಸ್ವಾಗತ ಸಮಿತಿಯವರು ಗೊತ್ತುಮಾಡಿದ ಮನೆಯಲ್ಲಿ ಇಬ್ಬರು ಭಾರತೀಯರೂ ಬಿಡಾರ ಹೂಡಿದರು.

ಸಂಜೆ ಸಮ್ಮೇಳನ ಮುಗಿಸಿಕೊಂಡು ಇಬ್ಬರೂ ತಮ್ಮ ಬಿಡಾರಕ್ಕೆ ಬಂದರು. ಊಟ ಮುಗಿಸಿ ಇಸ್ಪೀಟು ಆಡಲು ಕುಳಿತರು. ಬ್ರಿಟಿಷರ ಮಾನ್ಯ ಕುಟುಂಬಗಳಲ್ಲಿ ರೂಢಿಯಲ್ಲಿರುವಂತೆ ಮನೆಯ ಯಜಮಾನಿಯೂ ಆಟವಾಡಲು ಜೊತೆಗೂಡಿದಳು.

ಆಟದೊಡನೆ ಹಾಸ್ಯ ಚಟಾಕಿಗಳೂ ಹಾರತೊಡಗಿದುವು. ಸರಳ ಸೌಜನ್ಯದಿಂದ ಪ್ರಾರಂಭವಾದ ಹಾಸ್ಯ ಮರ್ಯಾದೆಯ ಮೇರೆ ಮೀರಿ ಅಶ್ಲೀಲಕ್ಕೆ ಇಳಿಯಿತು. ಮನೆಯ ಒಡತಿ ಮತ್ತು ಗಾಂಧೀಯ ಗೆಳೆಯ ಇಬ್ಬರೂ ಅಸಭ್ಯ ಹಾಸ್ಯದಲ್ಲಿ ತಲ್ಲೀನ ರಾದರು. ಗೆಳೆಯ ಈ ಕಲೆಯಲ್ಲಿ ಸಿಸ್ಸೀಮನೆಂದು ಗಾಂಧಿಗೆ ಗೊತ್ತಿರಲಿಲ್ಲ. ಇವರೂ ಇದರಲ್ಲಿ ಜೊತೆಗೂಡಿದರು. ಮರ್ಯಾದೆಯ ಮಜಲು ಮೀರಿ ಅಶ್ಲೀಲ ವರ್ತನೆಯ ಘಟ್ಟಕ್ಕೆ ಗಾಂಧೀ ಏರಿದ. ಆಟವನ್ನು ಅವರಿಗೆ ಬಿಟ್ಟು ಏಕಾಂತದ ಸುಖ ಅನುಭವಿ ಸುವ ಮಟ್ಟಕ್ಕೆ ಮೋಹನ ಬಂದುಬಿಟ್ಟ. ಮೇರೆ ಮೀರುವ ಅಂಚಿನ ತುದಿಯಲ್ಲಿದ್ದಾಗ ಭಗವಂತ ಅಂತರ್ವಾಣಿಯನ್ನು ಎಚ್ಚರಿಸುವ ಮೂಲಕ "ಎತ್ತ ಸಾಗುತ್ತಿರುವ ಹುಡುಗ, ಜೋಕೆ. ಈ ಅಶ್ಲೀಲ ಭೂತಕ್ಕೆ ಬಲಿಯಾಗಬೇಡ. ಏಳು, ಬೇಗನೆ ಹೊರಡು ಇಲ್ಲಿಂದ" ಎಂದು ಎಚ್ಚರಿಸಿತು.

ಗಾಂಧಿ ಎಚ್ಚೆತ್ತ. ಅಪಮಾನದಿಂದ ತಲೆತಗ್ಗಿಸಿದ. ಅಂತರದ ಗೆಳೆಯನಿಗೆ ಸಕಾಲದಲ್ಲಿ ಎಚ್ಚರಿಕೆ ಕೊಟ್ಟುದಕ್ಕಾಗಿ ಅಭಾರ ಮನ್ನಿಸಿದ. ಮಾತೆಗೆ ಕೊಟ್ಟ ಮಾತು ಸ್ಮರಿಸಿಕೊಂಡು, ಅಲ್ಲಿಂದ ಕಾಲ್ತೆಗೆದ. ಕೋಣೆ ಸೇರಿಕೊಂಡ. ಬೇಟೆಗಾರನಿಂದ ತಪ್ಪಿಸಿಕೊಂಡು ಬಂದ ಬಡ ಪ್ರಾಣಿಯಂತೆ. ಎದೆ ಡವಡವ ಹೊಡೆದುಕೊಳ್ಳತೊಡಗಿತು. ಮೈ ನಡುಗತೊಡಗಿತು. ಬದುಕೋ ಬಡಪ್ರಾಣಿ ಎಂದಿತು ಹುಳಿ ಮನಸ್ಸು

ತನ್ನ ಹೆಂಡತಿಯಲ್ಲದೆ ಪರಸ್ತ್ರೀಯೊಬ್ಬಳಿಂದ ಸಂಭೋಗಕ್ಕೆ ಇಳಿಯಬೇಕೆಂಬ ಕಾಮತೃಷೆಯಿಂದ ಬಾಧಿತನಾದುದು ಇದೇ ಮೊದಲ ಸಲ ಎಂದು ಗಾಂಧೀಜಿ ಹೇಳಿ ಕೊಂಡಿರುತ್ತಾರೆ. ಅಂದು ನಿದ್ದೆಯಿಲ್ಲದೆ ರಾತ್ರಿಯನ್ನೆಲ್ಲ ಕಳೆದ. ಏನೇನೋ ಯೋಚನೆ. ಮನೆಬಿಟ್ಟು ಈಗಲೇ ಹೊರಡಲೇ? ಈ ಸ್ಥಳದಿಂದ ಓಡಿಹೋಗಬೇಕೇ? ಎಲ್ಲಿರುವೆ ನಾನು? ಎನು ಮಾಡುತ್ತಿರುವೆ? ಬುದ್ಧಿ ಸ್ಥಿಮಿತವಿಲ್ಲದಿದ್ದರೆ ಏನಾಗುತ್ತಿತ್ತೋ ಎನಗೆ? ಕೂಡಲೆ ಕಾರ್ಯಾಚರಣೆಗೆ ಮೋಹನ ಸಿದ್ಧನಾದ. ಮನೆ ಬಿಡುವುದು ಬೇಡ. ಹೇಗಾದರೂ ಮಾಡಿ ಪೋರ್ಟ್ಸ್‌ಮತ್‌ನಿಂದಲೆ ಕಾಲ್ತೆಗೆಯೋಣ. ಮುಂದೆ ಜಾಗರೂ ಕತೆಯಿಂದ ನಡೆದುಕೊಳ್ಳೋಣ ಎಂದು ಮೋಹನ ಸಂಕಲ್ಪಿಸಿದ. ಸಮ್ಮೇಳನ ಇನ್ನೂ ಎರಡು ದಿನ ನಡೆಯಬೇಕಾಗಿತ್ತು. ಆದರೂ ಮಾರನೆಯ ಸಂಜೆಯೇ ಗಾಂಧಿ ರೇವು ಪಟ್ಟಣದಿಂದ ನಿರ್ಗಮಿಸಿದ. ಇವನ ಗೆಳೆಯ ಕೆಲದಿನ ಅಲ್ಲಿಯೇ ಉಳಿದ.

ಇಂಗ್ಲೆಂಡಿನಲ್ಲಿ ಗಾಂಧೀಜಿ ಇದ್ದ ಮೊದಲ ವರ್ಷ. ಬ್ರೈಟನ್ ಎಂಬ ಸಣ್ಣ ವಿಹಾರ ಕ್ಷೇತ್ರಕ್ಕೆ ಹೋದರು. ಅಲ್ಲಿ ಒಂದು ಹೊಟೇಲಿನಲ್ಲಿ ಭೋಜನಕ್ಕೆ ಕುಳಿತರು. ತಿಂಡಿಯ ಪಟ್ಟಿ ಮೇಜಿನ ಮೇಲಿತ್ತು. ಅದು ಇದ್ದುದು ಫ್ರೆಂಚ್ ಭಾಷೆಯಲ್ಲಿ. ಭಾಷೆ ತಿಳಿಯದು. ಪಕ್ಕದಲ್ಲಿ ಕುಳಿತಿದ್ದ ಒಬ್ಬ ವೃದ್ಧ ವಿಧವೆ ಇವರ ಪೇಚನ್ನು ಗಮನಿಸಿ ಇವರ ನೆರವಿಗೆ ಬಂದಳು. ಪಟ್ಟಿಯನ್ನು ಓದಿ ಯಾವುದು ಸಸ್ಯಾಹಾರ ಯಾವುದು

ಮಾಂಸಾಹಾರ ಎಂದು ತಿಳಿಸಿದಳು. ಗಾಂಧೀಜಿ ತಮಗೆ ಬೇಕಾದ್ದನ್ನು ತರಿಸಿ ಉಂಡರು. ಈ ವಿಧವೆ ತನ್ನ ಲಂಡನ್ ವಾಸದ ವಿಳಾಸ ಕೊಟ್ಟು ಪ್ರತಿ ಭಾನುವಾರ ಊಟಕ್ಕೆ ಬರುವಂತೆ ಆಹ್ವಾನಿಸಿದಳು. ಹಬ್ಬದ ದಿನಗಳಿಗೂ ಆಹ್ವಾನ ಬರುತ್ತಿತ್ತು. ಗಾಂಧಿಯ ಸಂಕೋಚ ಪ್ರವೃತಿಯನ್ನು ಬಿಡಿಸಲು ಕೆಲವು ಹುಡುಗಿಯರ ಪರಿಚಯ ಅಲ್ಲಿ ಮಾಡಿಕೊಟ್ಟಳು. ಒಬ್ಬ ತರುಣಿಯ ಗೆಳೆತನ ಹೀಗೆಯೇ ಬೆಳೆಯಿತು. ಬಾಯಿ ಬಿಡದ ಗಾಂಧಿಯನ್ನು ಮಾತನಾಡಿಸುತ್ತಾ ಅವರ ಸಂಕೋಚ ಪ್ರವೃತ್ತಿ ಕ್ರಮೇಣ ಹೋಗುವಂತೆ ಮಾಡಹತ್ತಿದಳು. ಕೆಲವೊಮ್ಮೆ ಮುದುಕಿ ಇವರಿಬ್ಬರನ್ನೇ ಬಿಟ್ಟು, ಮಿಕ್ಕವರೆಲ್ಲರೂ ಮರೆಯಾಗುವಂತೆ ಮಾಡುತ್ತಿದ್ದಳು. ನನ್ನನು ತರುಣಿಯ ಬಲೆಯಲ್ಲಿ ಸಿಲುಕಿಸಿಕೊಳ್ಳುವ ಉಪಾಯ ಇದು ಇದ್ದೀತು ಎನಿಸಿತು ಗಾಂಧಿಯವರಿಗೆ. ತರು ಣಿಯ ಮಾತುಕಥೆ ಆಕರ್ಷಕವಾಗಿದ್ದರೂ ಈ ಸಂಚಿಗೆ ಬೀಳಬಾರದೆಂದು ಗಾಂಧೀಜಿ ನಿಶ್ಚಯಿಸಿದರು.

ತನ್ನ ಕೋಣೆಗೆ ಹಿಂತಿರುಗಿ ಬಂದರು. ತಾನು ವಿವಾಹಿತನೆಂದೂ ಒಂದು ಮಗುವಿನ ತಂದೆ ಎಂದೂ, ಇಂಥ ವಿಷಯವನ್ನು ಅನೇಕ ಭಾರತೀಯ ವಿದ್ಯಾರ್ಥಿಗಳು ಮರೆಮಾಚುವುದಾದರೂ ತನಗೆ ಹಾಗೆ ಮಾಡಲು ಇಷ್ಟವಿಲ್ಲವೆಂದೂ ಸ್ಪಷ್ಟಪಡಿಸಿ ಸುದೀರ್ಘ ಪತ್ರ ಬರೆದರು. ಆ ತರುಣಿಯೊಡನೆ ಸಂಬಂಧ ಬೆಳಸಬೇಕೆಂದು ನಿಮ್ಮ ಅಭಿಲಾಷೆ ಇದ್ದಂತೆ ತೋರುತ್ತದೆ. ನಾನು ಲಗ್ನವಾಗಿರುವ ವಿಷಯ ನಿಮಗೆ ಮೊದಲೇ ತಿಳಿಸಬೇಕಾಗಿತ್ತು. ಕ್ಷಮಿಸಿ. ನಿಜ ಹೇಳುವಂತೆ ಭಗವಂತ ಈಗ ಕರುಣಿಸಿದ್ದಾನೆ. ನಾನು ಆ ಹುಡುಗಿಯೊಡನೆ ಮೇರೆ ಮೀರಿ ನಡೆದುಕೊಂಡಿಲ್ಲವೆಂದು ಭರವಸೆ ಕೊಡು ತ್ತೇನೆ. ಈ ಒಕ್ಕಣೆಯಲ್ಲಿ ಪತ್ರ ಬರೆದು ಅಂಚೆಯಲ್ಲಿ ಕಳುಹಿಸಿದರು. ನಿಮ್ಮ ಆತಿಥ್ಯವನ್ನು ನಾನು ದುರುಪಯೋಗಪಡಿಸಿಕೊಂಡಿರುವಂತೆ ನಿಮಗೆ ತೋರಿದರೆ ನನ್ನನ್ನು ಮನ್ನಿಸಿ. ಆದರೆ ನಿಮ್ಮ ಆತಿಥ್ಯಕ್ಕೆ ಯೋಗ್ಯನೆಂದು ತೋರಿದರೆ ನನ್ನನ್ನು ಬರಮಾಡಿಕೊಳ್ಳಿ. ಹೀಗೆ ಬರೆದರು. ಮಾರನೆಯ ದಿನವೇ ಆಹ್ವಾನದ ಉತ್ತರ ಬಂತು. ಇವರ ಮುಗ್ಧತೆಯನ್ನು ನೋಡಿ ಹುಡುಗಿಯರು ಹಾಸ್ಯಮಾಡಿ ನಗೆಯಾಡಿದರು. ತಾಯಿಗೆ ಕೊಟ್ಟ ವಚನ, ಮದುವೆಯಾಗಿ ಹೆಂಡತಿಯನ್ನು ಪಡೆದಿರುವ ವಿಷಯ ನೆನ ಪಿಗೆ ಬಂದು, ತಪ್ಪುದಾರಿ ಹಿಡಿಯುವುದನ್ನು ತಪ್ಪಿಸಿತು. ಅಂದಿನಿಂದ ತಾನು ವಿವಾ ಹಿತನಾಗಿರುವ ವಿಷಯವನ್ನು ಮೊದಲೇ ಎಲ್ಲರಿಗೂ ತಿಳಿಸಿಬಿಡುತ್ತಿದ್ದರು.

1893ರಲ್ಲಿ ಮೊದಲಬಾರಿಗೆ ಗಾಂಧೀಜಿ ದಕ್ಷಿಣ ಆಫ್ರಿಕಾಗೆ ತೆರಳಿದರು. ಇವರು ಪ್ರಯಾಣ ಬೆಳಸಿದ ಹಡಗಿನ ಕಪ್ತಾನನಿಗೂ ಇವರಿಗೂ ಸ್ನೇಹ ಬೆಳೆಯಿತು. ಕಪ್ತಾ ನನ ಕೋಣೆಯಲ್ಲಿಯೇ ಇವರ ಸ್ಥಾನ. ಅವನಿಗೆ ಚದರಂಗ ಆಡುವ ಹುಚ್ಚು. ಗಾಂಧಿಗೆ ಆಟ ಬಾರದು. ಅವನೆ ಕಾಯಿ ನಡೆಸುವುದನ್ನು ಕಲಿಸಿಕೊಟ್ಟ. ಚದರಂಗದಿಂದ ಇವರ ಸ್ನೇಹ ಮತ್ತಷ್ಟು ಗಾಢವಾಯಿತು. ಅನೇಕ ದಿನಗಳ ಪ್ರಯಾಣದ ನಂತರ

ಜಾಂಜಿಬಾರ್ ತಲಪಿದರು. ಇಲ್ಲಿ ಏಳೆಂಟು ದಿನ ಜಹಜು ಲಂಗರು ಹಾಕುವುದಿತ್ತು. ಕಪ್ತಾನನು ಗಾಂಧೀ ಮತ್ತು ಮತ್ತೊಬ್ಬ ಆಂಗ್ಲನನ್ನು ಕರೆದುಕೊಂಡು ಊರು ಪ್ರವೇಶಿಸಿದ. ಅಲ್ಲಿ ಒಂದು ನೀಗ್ರೋ ವೇಶ್ಯಾಗೃಹಕ್ಕೆ ಇಬ್ಬರನ್ನು ಕರೆದೊಯ್ದ. ಗಾಂಧಿಯವರನ್ನು ಒಂದು ಕೋಣೆಯೊಳಕ್ಕೆ ಬಿಟ್ಟು, ಮಿಕ್ಕ ಇಬ್ಬರೂ ಬೇರೆ ಬೇರೆ ಕೋಣೆಗಳಿಗೆ ಹೋಗಿ ಕದ ಮುಚ್ಚಿಕೊಂಡರು. ಇವರ ಕೋಣೆಗೆ ಒಬ್ಬ ನೀಗ್ರೋ ವೇಶ್ಯೆ ಬಂದಳು. ಗಾಂಧೀ ಮೂಕನಂತೆ ಸುಮ್ಮನೆ ನಿಂತು ಬಿಟ್ಟರು. ಏನೂ ಅರಿಯದ ಮೂರ್ಖ ಇವನೆಂದು ತರುಣಿ ಹೊರಟು ಹೋದಳು. ಗಾಂಧೀ ಹೊರಕ್ಕೆ ಬಂದರು. ತರುಣಿಯ ದರ್ಶನದಿಂದ ಇವರು ಯಾವ ರೀತಿಯಲ್ಲೂ ಪುಲುಕಿತರಾಗಲಿಲ್ಲ. ಮನಸ್ಸು ವಿಕಾರವಾಗಲಿಲ್ಲ. ವೇಶ್ಯಾಗೃಹಕ್ಕೆ ಕಾಲಿಟ್ಟುದುದಕ್ಕಾಗಿ ಮನಸ್ಸು ತತ್ತರಿಸಿ ಹೋಯಿತು. ಕೋಣೆ ಪ್ರವೇಶಿಸುವುದಿಲ್ಲ ಎಂದು ಹೇಳುವ ಧೈರ್ಯ ಬರಲಿಲ್ಲವಲ್ಲ ಎಂದು ಪರಿತಪಿಸಿದರು, ದುಃಖಿಸಿದರು. ಭಗವಂತನೇ ತನ್ನ ನೆರವಿಗೆ ಬಂದು ಕಾಪಾಡಿದ ಹೀಗೆ ಹೇಳಿಕೊಂಡಿರುತ್ತಾರೆ. ಭಗವಂತನಲ್ಲಿ ವಿಶ್ವಾಸ ಬೆಳೆಯಿತು. ಮೂರನೆಯ ಬಾರಿ ಹೀನಪಾಪಕೃತ್ಯ ಎಸಗುವುದರಿಂದ ಗಾಂಧೀಜಿ ಪಾರಾದರು. ಪರಮಾತ್ಮನ ಮತ್ತು ಮಾತೃಶ್ರೀಯ ಕೃಪೆಯಿಂದ.

ದೂರದ ಹೊಸ ಊರಿಗೆ ಹೋದವರು ಹೊಸಮುಖ, ಹೊಸ ಭಾಷೆ, ಅಭ್ಯಾಸವಿಲ್ಲದ ಊಟ, ಸ್ನೇಹಿತರು ಪರಿಚಿತರು ಇಲ್ಲದಿರುವುದರಿಂದ ಬೇಗನೆ ಬೇಸರಗೊಳ್ಳುವುದು ಸಹಜ. ಗಾಂಧೀ ಲಂಡನ್ನಿಗೆ ಕಾಲಿಟ್ಟ ಮೊದಲು ಇದೇ ಪರಿಸ್ಥಿತಿ ಎದುರಿಸಬೇಕಾಯಿತು. ಏಕಾಂಗಿಯಾಗಿ ಕೋಣೆಯಲ್ಲಿದ್ದಾಗ ದೂರದ ಮನೆಯ ನೆನಪು ಬರುವುದು. ಮಾತೆಯ ಮಮತೆ ಸದಾ ಕಾಡುವುದು. ಅವುಗಳನ್ನು ನೆನೆದಾಗ ಕಣ್ಣೀರು ಸುರಿಯುವುದು. ನಿದ್ದೆ ಬಾರದು. ಇದು ಅವನ ಅವಸ್ಥೆ.

ತನ್ನ ಸ್ವಶಕ್ತಿಗಿಂತ ಮದ್ಯ, ಮಾಂಸ, ಮದಿರೆ ಇವುಗಳಿಂದ ದೂರವಿರಲು ಅವಿದ್ಯಾವಂತಳಾದ ತಾಯಿಗೆ ಕೊಟ್ಟ ವಚನ ಪಾಲನೆ ಅವಳ ಧಾರ್ಮಿಕ ನಡತೆ ತನಗೆ ಮಾರ್ಗದರ್ಶನವಾಯಿತೆಂದೂ, ತನ್ನ ಬೆಳವಣಿಗೆ ಸಹಾಯವಾಯಿತೆಂದೂ ಗಾಂಧೀಜಿ ಹೇಳಿಕೊಂಡಿರುತ್ತಾರೆ.

ಮಹಾತ್ಮ ಗಾಂಧೀ ಎಂದು ಜಗತ್ಪ್ರಸಿದ್ಧರಾದ ಗಾಂಧಿಯವರ ಪೂರ್ಣ ಹೆಸರು ಮೋಹನದಾಸ ಕರಮಚಂದ ಗಾಂಧೀ. ತಂದೆ ಕಬಾ ಗಾಂಧೀ ರಾಜಕೋಟೆ ಮತ್ತು ವಂಕನೀರ ಎಂಬ ರಾಜಸ್ಥಾನದ ಸಣ್ಣ ರಾಜ್ಯಗಳ ಪ್ರಧಾನ ಮಂತ್ರಿಗಳಾಗಿದ್ದರು. ತಾಯಿ ಪುತಳೀಬಾಯ್. ತನ್ನ ಜಾತಿ ಬಾಂಧವರಲ್ಲಿ ಅವರಿಗೆ ಪ್ರೇಮ. ಧೈರ್ಯಶಾಲಿ, ಉದಾರಿ, ಮುಂಗೋಪಿ. ಕಬಾಗಾಂಧೀ ರಾಜಕೋಟೆಯ ಠಾಕೂರರಲ್ಲಿ ಪ್ರಧಾನಿಯಾಗಿದ್ದಾಗ, ಸಂಸ್ಥಾನ ಬ್ರಿಟಿಷ್ ಪ್ರಭುತ್ವದ ಏಜೆಂಟ್, ಠಾಕೂರರನ್ನು

ಕುರಿತು ಅಗೌರವವಾಗಿ ಮಾತನಾಡಿದ. ತನ್ನ ಅರಸಾದ ಠಾಕೂರರ ಬಗ್ಗೆ ಅಗೌರವದಿಂದ ಮಾತನಾಡಿದ್ದನ್ನು ಕಬಾಗಾಂಧಿಯವರದಿಂದ ಸಹಿಸಲು ಸಾಧ್ಯವಾಗಲಿಲ್ಲ. ಅವರು ಪ್ರತಿಭಟಿಸಿದರು. ಇದಕ್ಕಾಗಿ ಅವರನ್ನು ಬೆದರಿಸಲು ಕೆಲವು ಘಂಟೆಗಳ ಕಾಲ ಬಂಧನದಲ್ಲಿ ಇರಿಸಲಾಯಿತು. ಆದರೆ ಈ ಬೆದರಿಕೆಗೆ ಅವರು ಜಗ್ಗಲಿಲ್ಲ. ಕ್ಷಮಾಪಣೆ ಯಾಚಿಸಲಿಲ್ಲ. ಕಡೆಗೆ ಅವರನ್ನು ಬ್ರಿಟಿಷ್ ಏಜೆಂಟ್ ಬಿಡುಗಡೆ ಮಾಡಿದ. ಸತ್ಯಕ್ಕಾಗಿ ಏನು ಕಷ್ಟಬಂದರೂ ಸಹಿಸಲು ಅವರು ಹಿಂತೆಗೆಯುತ್ತಿರಲಿಲ್ಲ. ಜೀವನದಲ್ಲಿ ಇದು ಮೋಹನದಾಸನಿಗೆ ಮೇಲ್ಪಂಕ್ತಿಯಾಯಿತು.

ಕಬಾಗಾಂಧಿ ಮಂತ್ರಿಯಾಗಿದ್ದರೂ ಅಷ್ಟೇನೂ ವಿದ್ಯಾವಂತರಾಗಿರಲಿಲ್ಲ. ಹೈಸ್ಕೂಲು, ಕಾಲೇಜು ಶಿಕ್ಷಣ ಪಡೆದಿರಲಿಲ್ಲ. ಆದರೆ ಅನುಭವದಿಂದ ಲೋಕ ವ್ಯವಹಾರ ಕುಶಲರಾಗಿದ್ದರು. ಆಸ್ತಿ ಮಾಡುವ ಆಸೆ ಅವರಿಗೆ ಇರಲಿಲ್ಲ. ತನ್ನ ಮಕ್ಕಳಿಗೆ ಅವರು ಹೆಚ್ಚಿನ ಆಸ್ತಿ ಏನೂ ಬಿಡಲಿಲ್ಲ. ತಂದೆಯ ಉದಾತ್ತ ಗುಣಗಳು ಬಾಲಕ ಮೋಹನದಾಸನಿಗೆ ಆದರ್ಶವಾದುವು. ಅವರ ಸತ್ಯ ಪ್ರಿಯತೆ. ದೋಷಗಳನ್ನು ದೊಡ್ಡದು ಮಾಡದೆ, ಒಳ್ಳೆಯ ಗುಣಕ್ಕೆ ಹೆಚ್ಚು ಮಹತ್ವ ಕೊಡುವ ಅವರ ಸಭ್ಭಾವ. ಹಿಡಿದ ಕೆಲಸ ಎಷ್ಟೇ ಅಲ್ಪವಿರಲಿ ಅದನ್ನು ತೃಪ್ತಿಕರವಾಗಿ ಮಾಡುವುದು. ಹಿರಿಯರನ್ನೂ ಅವರ ನುಡಿಗಳನ್ನೂ ಗೌರವದಿಂದ ಕಾಣುವುದು. ಅಕ್ರಮ, ಅಸತ್ಯಗಳನ್ನು ಪ್ರತಿಭಟಿಸುವುದು. ಈ ಧ್ಯೇಯ ಸಾಧನೆಯಲ್ಲಿ ಬಂದ ಕಷ್ಟಗಳೆಲ್ಲವನ್ನೂ ಸಂತೋಷದಿಂದ ಅನುಭವಿಸುವುದು ಈ ಮೊದಲಾದ ಉದಾತ್ತ ಗುಣಗಳು ಮೋಹನದಾಸನಿಗೆ ಅವರ ಬದುಕಿನಲ್ಲಿ ದಾರಿ ದೀಪಗಳಾದುವು.

ಕಬಾ ಗಾಂಧೀ ಶ್ರವಣಕನ ಪಿತೃಭಕ್ತಿಯ ನಾಟಕದ ಪುಸ್ತಕ ಮಗ ಮೋಹನನಿಗಾಗಿ ತಂದುಕೊಟ್ಟರು. ಮೋಹನ ಪುಸ್ತಕವನ್ನು ಅತ್ಯಂತ ಆಸಕ್ತಿಯಿಂದ ಓದಿದ. ಇದೇ ಸಮಯಕ್ಕೆ ಡಬ್ಬಿಗಳನ್ನು ಹೊತ್ತು, 'ದಿಲ್ಲೀ ನೋಡು, ಕಾಶೀ ನೋಡು' ಮೊದಲಾದ ಚಿತ್ರಗಳನ್ನು ತೋರಿಸುತ್ತಿದ್ದವರು ಪೋರಬಂದರಿಗೆ ಬಂದರು. ಮೋಹನನು ತಾಯಿಯಿಂದ ಮೂರು ಕಾಸು ಪಡೆದು ಚಿತ್ರ ನೋಡಿದ. ಅದರಲ್ಲಿ ಶ್ರವಣಕನು ಹಣ್ಣು ಹಣ್ಣಾದ ತನ್ನ ಮಾತಾಪಿತೃಗಳನ್ನು ಎರಡು ಬುಟ್ಟಿಯಲ್ಲಿ ಕೂರಿಸಿಕೊಂಡು, ಬುಟ್ಟಿಗಳನ್ನು ಗಳುವಿಗೆ ತೂಗಿಹಾಕಿಕೊಂಡು ಅಡ್ಡೆಯಂತೆ ಹೊತ್ತು ಹೋಗುತ್ತಿದ್ದ ಚಿತ್ರ ಮೋಹನನ ಮನಸ್ಸಿನ ಮೇಲೆ ಗಾಢ ಪರಿಣಾಮ ಮಾಡಿತು. ನಮ್ಮ ತಂದೆ ತಾಯಿ ಅವರನ್ನು ಇದೇ ರೀತಿ ಭಕ್ತಿಯಿಂದ ಸೇವಿಸಬೇಕಲ್ಲವೇ? ಎನಿಸಿತು ಮೋಹನನಿಗೆ.

ಶ್ರವಣ ತಂದೆ ತಾಯಿಗೆ ಒಬ್ಬನೇ ಮಗ. ಕಾಶಿ ಮೊದಲಾದ ಪವಿತ್ರ ಯಾತ್ರಾಸ್ಥಳಗಳಿಗೆ ಹೋಗಬೇಕೆಂಬ ಆಸೆ ಅವರಲ್ಲಿ ತೀವ್ರವಾಗಿತ್ತು. ನಡೆಯಲು ತ್ರಾಣವಿಲ್ಲ.

ಆದ್ದರಿಂದ ಅಡ್ಡೆಮಾಡಿಕೊಂಡು, ತಂದೆಯನ್ನು ಒಂದು ಬುಟ್ಟಿಯಲ್ಲಿ ತಾಯಿಯನ್ನು ಮತ್ತೊಂದು ಬುಟ್ಟಿಯಲ್ಲಿ ಕೂಡಿಸಿಕೊಂಡು, ಅಡ್ಡೆಯನ್ನು ಹೆಗಲಿಗೆ ಏರಿಸಿಕೊಂಡು, ಪುಣ್ಯಕ್ಷೇತ್ರಕ್ಕೆ ಹೋಗಲು ದಿನವಹೀ ಸ್ವಲ್ಪ ದೂರ ನಡೆಯುತ್ತಿದ್ದ. ಹೀಗೆಯೇ ಕಾಡಿನಲ್ಲಿ ನಡೆಯುತ್ತಿದ್ದಾಗ ಬಾಯಾರಿದ ಮಾತಾಪಿತೃಗಳು ನೀರು ಬೇಡಿದರು. ಅಡ್ಡೆಯನ್ನು ಕೆಳಗಿರಿಸಿ, ಪಾತ್ರೆ ತೆಗೆದುಕೊಂಡು ನೀರು ತರಲು ಸಮೀಪದಲ್ಲಿ ಹರಿಯುತ್ತಿದ್ದ ನದಿಗೆ ಹೋದ. ಪಾತ್ರೆಯನ್ನು ತುಂಬುತ್ತಿದ್ದಾಗ ಅದು 'ಗುಳು ಗುಳು' ಶಬ್ದಮಾಡಿತು.

ಈ ವೇಳೆಗೆ ಶ್ರೀರಾಮನ ತಂದೆ ದಶರಥರಾಜ ಬೇಟೆಯಾಡಲು ಅಲ್ಲಿಗೆ ಬಂದಿದ್ದ. ಯಾವುದೋ ಕ್ರೂರ ಕಾಡು ಪ್ರಾಣಿ ನೀರು ಕುಡಿಯುತ್ತಿದೆ ಎಂದು ಭಾವಿಸಿ, ಧ್ವನಿಯತ್ತ ಬಿಲ್ಲಿಗೆ ಬಾಣ ಏರಿಸಿ ಪ್ರಯೋಗಿಸಿದ. ಬಾಣ ಶ್ರವಣನ ಎದೆಗೆ ಹೊಡೆದು ನಾಟಿಕೊಂಡಿತು. ನೋವು ತಡೆಯದೆ ಅವನು ಕೂಗಿಕೊಂಡ. ಏನೋ ಅಚಾತುರ್ಯ ನಡೆಯಿತೆಂದು ದಶರಥ ಶ್ರವಣನ ಬಳಿಗೆ ಧಾವಿಸಿ ಬಂದ. ನನ್ನ ತಂದೆ ತಾಯಿಗೆ ನೀರು ತೆಗೆದುಕೊಂಡು ಹೋಗಿ ಕೊಡು, ಅವರನ್ನು ನೋಡಿಕೋ ಎಂದು ಹೇಳುತ್ತಾ ಶ್ರವಣ ಅಸುನೀಗಿದ.

ಶ್ರವಣ ಹೇಳಿದಂತೆ ಅವನ ವೃದ್ಧಮಾತಾಪಿತೃಗಳ ಬಳಿಗೆ ಹೋಗಿ ಅವರಿಗೆ ನೀರು ಕೊಟ್ಟ. ನನ್ನ ಮಗನೆಲ್ಲಿ ಎಂದು ಅವರು ಕೇಳಿದರು. ದಶರಥ ನಡೆದುದೆಲ್ಲವನ್ನೂ ತಿಳಿಸಿದ. ದುಃಖದಿಂದ ತುಂಬಿದ ಅವರು ಮರಣ ಕಾಲದಲ್ಲಿ ಪುತ್ರ ವಿಯೋಗದಿಂದ ನೀನೂ ಸಾಯುವಂತಾಗಲಿ ಎಂದು ಶಪಿಸಿ ಪ್ರಾಣ ಬಿಟ್ಟರು. ರಾಮ ವನವಾಸಿಯಾಗಿದ್ದಾಗ 'ರಾಮ, ರಾಮ' ಎಂದು ಹಂಬಲಿಸುತ್ತಾ ದಶರಥ ಪ್ರಾಣ ನೀಗಿದ. ಇದು ರಾಮಾಯಣದಲ್ಲಿ ಹೇಳಿರುವ ಕಥೆ.

ಮಗ ಶ್ರವಣನ ಮರಣದ ದುಃಖ ವಾರ್ತೆ ಕೇಳಿದ ವೃದ್ಧಮಾತಾಪಿತೃಗಳು ಶೋಕತಪ್ತರಾಗಿ ರೋದಿಸುವುದನ್ನು ಹಾಡಿನ ರೂಪದಲ್ಲಿ ಗುಜರಾಥಿಯಲ್ಲಿ ಬರೆದಿರುತ್ತಾರೆ. ಶ್ರವಣನ ಪಿತೃ ಭಕ್ತಿಯ ಪುಸ್ತಕದಲ್ಲಿದ್ದ ದುಃಖಮಯವಾದ ಹಾಡು ಮೋಹನನಮೇಲೆ ತುಂಬ ಪರಿಣಾಮ ಬೀರಿತು. ಅದನ್ನು ಬಾಯಿಪಾಠ ಮಾಡಿದ. ತಂದೆ ತೆಗೆಸಿಕೊಟ್ಟಿದ್ದ ರಾಗ ಮಾಲಿಕೆಯಲ್ಲಿ ಇದನ್ನು ನುಡಿಸುತ್ತಿದ್ದ.

ತಂದೆ ಕಾಯಿಲೆಯಾಗಿದ್ದಾಗ ಅವರ ಸೇವೆ ಸಲ್ಲಿಸುತ್ತಿದ್ದ. ಶಾಲೆ ಬಿಟ್ಟ ಒಡನೆಯೇ, ಜೊತೆಗಾರರೊಡನೆ ಮಾತನಾಡುವುದರಲ್ಲಿ ಕಾಲ ಕಳೆಯದೆ, ಒಂದೇ ಉಸಿರಿನಲ್ಲಿ ಮನೆಗೆ ಓಡಿ ಬರುವನು. ಮೂಲ ಮತ್ತು ಬಗಂದರ ವ್ಯಾಧಿಗಳಿಂದ ನರಳುತ್ತಿದ್ದ ತಂದೆಯ ಬಳಿ ಕುಳಿತು, ತಂದೆಯ ಕಾಲುಗಳನ್ನು ಒತ್ತುವನು. ತಂದೆಯಲ್ಲಿ ಪಿತೃ

ಭಕ್ತಿಯ ಭಯ ತುಂಬಿತ್ತು ಮೋಹನನಲ್ಲಿ. ಅವರ ಮಾತನ್ನು ಗೌರವಿಸಿ ತಲೆಬಾಗಿ ನಡೆಯುವನು.

ಮಾತಾಪಿತೃಗಳಲ್ಲಿ ಭಕ್ತಿ ಇಡುವುದನ್ನು ಶ್ರವಣನಿಂದ ಗಾಂಧೀಜಿ ಕಲಿತರು.

ಉತ್ಥಾನ

"ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆಲ್ಲ." ಈ ನಾಣ್ಣುಡಿ ಜೀವನದಲ್ಲಿ ಅನುಭವ ದಿಂದ ಅರಿವಾಗುತ್ತದೆ. ಕಣ್ಣು, ಕಿವಿ, ಮೂಗು, ಆಕಾರ, ವಿಕಾರ, ಕೂದಲಿನ ಮತ್ತು ದೇಹದ ಬಣ್ಣ ಇಂಥ ದೈಹಿಕ ಬಾಹ್ಯ ಸ್ವರೂಪ ಮಾತ್ರವಲ್ಲದೆ, ಗುಣಾವ ಗುಣಗಳಲ್ಲೂ ಆನುವಂಶಿಕವಾಗಿ ನಡೆದು ಬರುವುದಾಗಿ ವಿಜ್ಞಾನ ಒಪ್ಪಿಕೊಂಡಿದೆ. ಪ್ರತಿ ನಿಯಮಕ್ಕೂ ಅಪವಾದವುಂಟು. ಮೋಹನದಾಸ ಕರಮಚಂದ ಗಾಂಧಿ ಅಕ್ಟೋಬರ್2, 1869ರಲ್ಲಿ ಪೋರಬಂದರಿನಲ್ಲಿ ಜನ್ಮತಾಳಿದ. ಹುಟ್ಟಿನಲ್ಲಿ ವೈಶ್ಯ. ತಾತ ಉತ್ತಮ ಚಂದ ಗಾಂಧಿ ಮತ್ತು ತಂದೆ ಕರಮಚಂದ ಗಾಂಧಿ ರಾಜಪುಟಾಣದ ಸಣ್ಣ ಸಂಸ್ಥಾನಗಳ ಮಂತ್ರಿ ಗಳಾಗಿದ್ದರು. ತಂದೆ ಕರಮಚಂದ ನಾಲ್ಕು ಸಾರಿ ವಿವಾಹ ಮಾಡಿಕೊಂಡರು· ನಾಲ್ಕನೆಯ ಹೆಂಡತಿ ಪುತಲಿಬಾಯಿ. ಇವಳಲ್ಲಿ ಮೂರು ಗಂಡು ಮತ್ತು ಒಂದು ಹೆಣ್ಣು ಜನಿಸಿದುವು. ಕಡೆಯ ಮಗನೇ ಮೋಹನದಾಸ.

ಗಾಂಧಿಯವರಿಗೆ ಹದಿಮೂರನೆಯ ವಯಸ್ಸಿನಲ್ಲೇ ಮನೆತನದ ಸಂಪ್ರದಾಯ ದಂತೆ ಮದುವೆ ಮಾಡಿದರು, ಅವನ ಮಾತಾಪಿತೃಗಳು. ಹೆಂಡತಿ ಕಸ್ತೂರಿಬಾ. ಅವ ಳಲ್ಲಿ ಅತಿಶಯ ಪ್ರೇಮ, ಅನುರಾಗ. ಸಣ್ಣ ವಯಸ್ಸಿನಲ್ಲೇ ಕಾಮಲಾಲಸೆ ಬೆಳೆಯಿತು. ತಂದೆ ಮರಣ ಶಯ್ಯೆಯಲ್ಲಿದ್ದಾಗ, ಗಾಂಧಿ ಹೆಂಡತಿಯ ಪಕ್ಕದಲ್ಲಿ ಹಾಸಿಗೆಯಲ್ಲಿ ಮಲಗಿದ್ದ. ತರುಣ ಗಾಂಧಿ ಕಾಮಿ, ವಿಷಯಾಸಕ್ತ, ಅತೀವ ಅಸೂಯಾಪರನಾಗಿದ್ದು ದಾಗಿ ಅವರೇ ಹೇಳಿಕೊಂಡಿರುತ್ತಾರೆ. ಸಣ್ಣ ವಯಸ್ಸಿನ ಈ ಅವಗುಣಗಳಿಗಾಗಿ, ಗಾಂಧಿ ಹಿರಿಯ ವಯಸ್ಸಿನಲ್ಲಿ ವಿಷಾದ ವ್ಯಕ್ತಪಡಿಸುತ್ತಿದ್ದರು. ಬಾಲ್ಯವಿವಾಹಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಲು ಇದೂ ಒಂದು ಕಾರಣವಿದ್ದೀತು. ವಿಷಯಾಸಕ್ತತೆ ಆನುವಂಶಿಕವಾಗಿ ಬಂದಂತೆ, ಸತ್ಯ ಸಂಧತೆ, ದಯಾಪರತೆ ಈ ಸದ್ಗುಣಗಳೂ ಅವರಲ್ಲಿ ಹುಟ್ಟಿ ಬೆಳೆದು ಬಂದುವು.

ಹೈಸ್ಕೂಲ್ ಶಿಕ್ಷಣ ಭಾರತದಲ್ಲಿ ಮುಗಿಸಿ, ಸೆಪ್ಟೆಂಬರ್ 4, 1888 ರಲ್ಲಿ ಗಾಂಧೀಜಿ ಲಂಡನ್ನಿಗೆ ಪ್ರಯಾಣ ಬೆಳೆಸಿದರು. ಆಗಿನ ಕಾಲಕ್ಕೆ ಸಮುದ್ರಯಾನ ಅತಿ ವಿರಳ. ಹಾಗೆ ಮಾಡುವುದು ಬಹಿಷ್ಕಾರಕ್ಕೆ ದಾರಿ. ಮದ್ಯಪಾನ, ಸ್ತ್ರೀಸಂಗ, ಮಾಂಸ ಭಕ್ಷಣ ಮಾಡುವುದಿಲ್ಲವೆಂದು ತಾಯಿ ಮತ್ತು ಹಿರಿಯರಿಗೆ ವಚನವಿತ್ತು ಬಹಿ ಷ್ಕಾರಕ್ಕೆ ಭೀತರಾಗದೆ ಹೊರಟರು. ಮೂರು ವರ್ಷಕಾಲ ಬ್ಯಾರಿಸ್ಟರ್ ಆಗಲು ಅವರು ಇಂಗ್ಲೆಂಡಿನಲ್ಲಿ ಉಳಿದರು. ಈ ಅವಧಿಯಲ್ಲಿ ತಾಯಿಗೆ ಕೊಟ್ಟ ವಚನ ಮೆಲುಕು ಹಾಕು

ತ್ತಲೆ ಇದ್ದರು. ಸ್ವಭಾವದಲ್ಲಿ ಅಂತರ್ಮುಖಿ. ಈ ಗುಣ ಅವರನ್ನು ಅನೇಕ ದುರಂತ ಘಟನೆಗಳಿಂದ ಪಾರುಮಾಡಿತು. ಸಸ್ಯಾಹಾರದಲ್ಲಿ ಅಭಿರುಚಿ ಬೆಳೆಯಿತು. ವಾಸ್ಯಂಗ ವಲ್ಲದೆ, ಸಸ್ಯಾಹಾರಿಗಳ ಸಂಘ, ಅಂಜುಮಾನ್ ಇಸ್ಲಾಮಿಯ ವಿದ್ಯಾರ್ಥಿಗಳ ಸಂಘ ಇವರನ್ನು ಆಕರ್ಷಿಸಿದುವು. ಗೀತೆ, ಬೈಬಲ್, ಕೂರಾನ್ ಈ ಧಾರ್ಮಿಕ ಗ್ರಂಥಗಳ ಮೊದಲ ಪರಿಚಯ ಆದುದು ಇದೇ ಕಾಲದಲ್ಲಿ. ರಾಜಕೀಯದ ವಾಸನೆಯೇ ಇರಲಿಲ್ಲ.

ಬ್ಯಾರಿಸ್ಟರ್ ಗಾಂಧಿ ಭಾರತಕ್ಕೆ ಮರಳಿ ಬೊಂಬಾಯಲ್ಲಿ ವಕೀಲಿ ಪ್ರಾರಂಭಿಸಿದ. ಪುಸ್ತಕ ಪ್ರಪಂಚಕ್ಕೂ, ವ್ಯಾವಹಾರಿಕ ಲೋಕಕ್ಕೂ ಇದ್ದ ಭಿನ್ನತೆ ಹಣಗಳಿಸಲು ಅವ ಕಾಶ ಕೊಡಲಿಲ್ಲ. ಎಪ್ಪತ್ತು ರೂಪಾಯಿ ಮಾಸಿಕ ವೇತನ ಉಪಾಧ್ಯಾಯ ವೃತ್ತಿ ದೊರಕಿದರೆ ಸಾಕು ಎಂದು ಮಾಡಿದ ಪ್ರಯತ್ನವೂ ಫಲಿಸಲಿಲ್ಲ. ಇದರಿಂದ ಅವರ ಗತಿ ಏನಾಗಿತ್ತು ಎಂದು ಮನಗಾಣಬಹುದು. ಅದೃಷ್ಟವಶಾತ್ ದಕ್ಷಿಣ ಆಫ್ರಿಕಾಗೆ ಹೋಗುವ ಅವಕಾಶ ಲಭಿಸಿತು.

ಮೇ 1893ರಲ್ಲಿ ಗಾಂಧೀಜಿ ಆಫ್ರಿಕದ ಡರ್ಬಾನಲ್ಲಿ ಇಳಿದರು. ಕರಿಯ, ಬಿಳಿಯ, ಜಾತೀಯತೆ, ದಾಸ್ಯ ಈ ಅನುಭವಗಳು ಅವರ ಮೇಲೆ ಮಹತ್ವದ ಪರಿ ಣಾಮ ಬೀರಿ ಅವರ ಜೀವನ ಪಥವನ್ನೇ ಬದಲಾಯಿಸಿದುವು. ರಸ್ಕಿನ್, ಟಾಲಸ್ಟಾಯಿ ಗ್ರಂಥಗಳನ್ನು ಎಷ್ಟೋ ಮಂದಿ ಓದಿರುತ್ತಾರೆ. ಭಾಷಣ ಬಿಗಿಯಲು, ಲೇಖನ ಬರೆ ಯಲು, ವಾದ–ವಿವಾದಕ್ಕೆ ಇವೆಲ್ಲವೂ ನೆರವಾಗುತ್ತವೆ. ಅಷ್ಟೇ. ಆದರೆ ಇತರರಂತೆ ವಿಷಯ ತಲೆಯಲ್ಲಿ ತುಂಬಿಕೊಳ್ಳುವುದರಲ್ಲಿ ಮಾತ್ರ ತೃಪ್ತರಾಗದೆ, ಅಡಕವಾಗಿದ್ದ ತತ್ತ್ವ ಗಳನ್ನು ಆಚರಣೆಗೆ ತರುವ ಪ್ರಯೋಗದಲ್ಲಿ ನಿರತರಾದರು. ಇಂಡಿಯನ್ ಒಪಿನಿಯನ್ ಪತ್ರಿಕೆ ಹೊರಡಿಸಿದರು. ಆಶ್ರಮ ಸ್ಥಾಪಿಸಿದರು. ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಸಸ್ಯಾಹಾರದ ಪ್ರಯೋಗ, ಇಲ್ಲಿ ಹಲವು ರೂಪಾಂತರ ಹೊಂದಿ ಆಜೀವ ಪರ್ಯಂತ ಸಾಗುತ್ತಲೇ ಇತ್ತು. ವಿವಾಹಿತ ಗಾಂಧಿ ಬ್ರಹ್ಮಚರ್ಯೆಯ ದೀಕ್ಷೆ ವಹಿಸಿದ. ಕೂಲಿ ಭಾರತೀಯರ ಗೋಳು, ಸ್ವಂತ ಅನುಭವ ರಾಜಕೀಯಕ್ಕೆ ಎಳೆಯಿತು. ಮೊದಲ ದೊಡ್ಡ ಪ್ರಮಾಣದ ಸತ್ಯ–ಅಹಿಂಸೆಯ ಹೋರಾಟ ಇಲ್ಲಿ ಅಂಕುರಿಸಿತು. 1914 ರಲ್ಲಿ ತಮ್ಮ ನಾಲ್ವತ್ತೈದನೆಯ ವಯಸ್ಸಿನಲ್ಲಿ ಅಪಾರ ಅನುಭವ ಗಳಿಸಿದ್ದ ಗಾಂಧೀಜಿ ಭಾರತಕ್ಕೆ ಮರಳಿದರು. ಮುಂದೆ ಮಹಾಭಾರತದಂತೆ ಬೆಳೆಯಿತು ಜೀವನ ಕಥೆ.

ಬೀಡಿ ಸಿಗರೇಟು ಸೇದುವ ಪದ್ಧತಿ ಎಲ್ಲೆಲ್ಲೂ ವಿಪುಲವಾಗಿ ಬೆಳೆದಿದೆ. ಹೊಗೆ ಬತ್ತಿಯನ್ನು ತೆಗೆದುಕೊಳ್ಳುವುದು ಹಾನಿಕರ ಎಂದು ತಿಳಿದಿದ್ದರೂ ಈ ಹವ್ಯಾಸ ಬೆಳೆಯುತ್ತಲೇ ಇದೆ. ನೀವು ಸಿಗರೇಟ್ ಸೇದಿರುವಿರಾ ಎಂದು ಸರ್. ಎಂ. ವಿಶ್ವೇಶ್ವರಯ್ಯನವರನ್ನು ಕೇಳಿದಾಗ, "ನಾನು ಅಷ್ಟು ನಾಗರೀಕನಾಗಿಲ್ಲ" ಎಂದು

ಅರ್ಥಗರ್ಭಿತವಾಗಿ ಅವರು ಉತ್ತರಿಸಿರುತ್ತಾರೆ. ಅರ್ಥಾತ್ ಹೊಗೆಬತ್ತಿ ಸೇದದವನು ಅನಾಗರೀಕ.

ಮೋಹನನ ದೊಡ್ಡಪ್ಪ ಸಿಗರೇಟ್ ಸೇದುತ್ತಿದ್ದ. ಹೊಗೆ ಸೆಳೆದುಕೊಂಡು ಅದನ್ನು ದುಂಡು ದುಂಡಾಗಿ ಉಂಗುರದಂತೆ ಬಿಡುವುದು ತಮಾಷೆಯಾಗಿ ಕಾಣುತ್ತಿತ್ತು. ಅದರಂತೆ ತಾನೂ ಮಾಡಬೇಕೆಂಬ ಆಸೆ ಮೋಹನನಿಗೆ. ಆದರೆ ಸಿಗರೇಟು ಕೊಳ್ಳಲು ಹಣ ಬೇಕಲ್ಲ. ದೊಡ್ಡಪ್ಪ ಸಿಗರೇಟು ಸೇದಿ ಬಿಸಾಡುತ್ತಿದ್ದ ತುಣುಕಗಳನ್ನು ಆರಿಸಿಕೊಂಡು ಸೇದುವುದು ಕೆಲಕಾಲ ನಡೆಯಿತು. ಆದರೆ ಇದರಿಂದ ತೃಪ್ತಿಯಾಗುತ್ತಿರಲಿಲ್ಲ. ಮೋಹನನ ಗೆಳೆಯನೂ ಜೊತೆಗೂಡಿದ. ಇಬ್ಬರೂ ಕೂಡಿಕೊಂಡು ತಮ್ಮ ಆಳಿನ ಕಿಸೆಯಲ್ಲಿರುತ್ತಿದ್ದ ಪುಡಿಕಾಸು ಲಪಟಾಯಿಸಿ ಬೀಡಿ ಕೊಂಡು ಸೇದತೊಡಗಿದರು. ಆದರೆ ಕೊಂಡ ಬೀಡಿಯನ್ನು ಎಲ್ಲಿ ಇಡುವುದು. ಇದೊಂದು ಸಮಸ್ಯೆಯಾಯಿತು. ಅಲ್ಲದೆ ದೊಡ್ಡವರ ಎದುರಿನಲ್ಲಿ ಬೀಡಿ ಎಳೆಯುವಂತಿಲ್ಲ. ಇದು ಮತ್ತೊಂದು ತಲೆನೋವು. ಯಾರೋ ಹೇಳಿದರು ಜೋಳದ ಕಡ್ಡಿಗೆ ಬೆಂಕಿ ಹಚ್ಚಿ ಸೇದಬಹುದೆಂದು. ಈ ಪ್ರಯೋಗವೂ ಕೆಲವು ದಿನ ನಡೆಯಿತು. ಆದರೆ ಈ ಬಗೆಯ ಉಪಾಯಗಳಿಂದ ತೃಪ್ತಿ ಆಗಲಿಲ್ಲ.

ಮೋನ ಮಾಂಸ ಸೇವಿಸುವುದನ್ನು ಬಿಟ್ಟಿದ್ದರೂ, ಅಣ್ಣ ಬಿಟ್ಟಿರಲಿಲ್ಲ. ಮಾಂಸ ಕೊಳ್ಳಲು ಅವನು ಸಾಲ ಮಾಡಿದ್ದ. ಋಣ ತೀರಿಸಬೇಕಲ್ಲ? ಇದಕ್ಕೊಂದು ಉಪಾಯ ಹೊಳೆಯಿತು. ಮೋನನ ಅಣ್ಣ ಬಂಗಾರದ ಕಡಗ ಹಾಕಿಕೊಂಡಿದ್ದ. ಗಟ್ಟಿ ಬಂಗಾರದ್ದು. ಇದರಿಂದ ಒಂದು ತುಣುಕು ಕತ್ತರಿಸಿ ಸಾಲ ತೀರಿಸಿದ್ದಾಯಿತು.

ಆಳಿನ ಜೇಬಿನಿಂದ ಕಾಸು ಕದಿಯುತ್ತಿದ್ದಾಗ ಮೋಹನನ ವಯಸ್ಸು ಹತ್ತು–ಹನ್ನೆರಡು. ಬಂಗಾರವನ್ನು ಕಡಗದಿಂದ ಕಸಿದಾಗ ವಯಸ್ಸು ಹದಿನೈದು. ವಯಸ್ಸಿನೊಡನೆ ವಿವೇಕವೂ ಸ್ವಲ್ಪ ಬೆಳೆದಿತ್ತು. ತಾನು ಮಾಡುತ್ತಿದ್ದುದೆಲ್ಲಾ ತಪ್ಪು ಎಂಬ ಅರಿವು ಉಂಟಾಯಿತು. ಮನಸ್ಸು ಕೊರೆಯಹತ್ತಿತು.

ಏನು ಮಾಡೋಣ ಎಂದು ತುಂಬ ಯೋಚಿಸಿದ. ಕಡೆಗೆ ತಪ್ಪು ಒಪ್ಪಿಕೊಳ್ಳುವುದೇ ಸರಿ ಎನಿಸಿತು. ತಂದೆಯ ಎದುರು ನಿಂತು ಮಾಡಿದ ಅಪರಾಧಗಳೆಲ್ಲವನ್ನೂ ತೋಡಿಕೊಳ್ಳಲು ನಿಶ್ಚಯಿಸಿದ. ಆದರೆ ಧೈರ್ಯ ಬರಲಿಲ್ಲ. ತಂದೆ ಹೊಡೆಯಬಹುದು ಎಂಬ ಭಯವಲ್ಲ. ಮಕ್ಕಳನ್ನು ತಂದೆ ಒಂದು ದಿನವೂ ಬೆದರಿಸಿದವರಲ್ಲ. ಹೊಡೆದವರಲ್ಲ. ಆದರೆ ತನ್ನ ಹೇಳಿಕೆಯಿಂದ ತಂದೆಗೆ ಅತೀವ ದುಃಖವಾದೀತಲ್ಲ, ನೋವಾದೀತಲ್ಲ ಎಂಬ ಭಯಭಕ್ತಿಯ ಅಂಜಿಕೆ. ಕಡೆಗೊಂದು ಉಪಾಯ ಹೊಳೆಯಿತು. ಬಾಯಲ್ಲಿ ಹೇಳಲು ಅಂಜಿಕೆ. ಕಾಗದದ ಮೇಲೆ ಬರೆದು ಕೊಡಬಹುದಲ್ಲ ಎನಿಸಿತು.

ಅಣ್ಣನ ಕಡಗದಿಂದ ಬಂಗಾರ ಕದ್ದುದನ್ನು ತುಣುಕು ಕಾಗದದ ಮೇಲೆ ಬರೆದ. ತಂದೆ ಕಾಯಿಲೆಯಾಗಿ ಹಾಸಿಗೆ ಹಿಡಿದು ಮಂಚದ ಮೇಲೆ ಮಲಗಿದ್ದರು. ಮೋನ ಧೈರ್ಯ ಮಾಡಿ ತಂದೆಯ ಬಳಿ ಸರಿದ. ಇಂಥ ಅಪರಾಧ ನಾನು ಮಾಡಿರುವೆ. ಇದಕ್ಕೆ ತಕ್ಕ ಶಿಕ್ಷೆ ವಿಧಿಸೋಣವಾಗಲಿ. ಆದರೆ ನೀವು ನನಗಾಗಿ ಪ್ರಾಯಶ್ಚಿತ್ತಮಾಡಿಕೊಳ್ಳಬೇಡಿ. ಇನ್ನುಮುಂದೆ ಇಂಥಾ ಪಾಪ ಕೃತ್ಯವೆಸಗಾವುದಿಲ್ಲವೆಂಬ ಭರವಸೆ ಕೊಡುತ್ತೇನೆ. ಹೀಗೆಂದು ಕಾಗದದ ಒಕ್ಕಣೆ.

ತಂದೆಯ ಕೈಗೆ ಕಾಗದವಿಟ್ಟ. ಭಯ ನಮ್ರತೆಗಳಿಂದ ಕಾಲ ಬಳಿ ಹೋಗಿ ಕುಳಿತ. ತಂದೆ ರೇಗಿಕೊಂಡು ತನ್ನನ್ನು ಬಯ್ಯುಬಹುದು. ಕೋಪದಿಂದ ತಮ್ಮ ತಲೆ ಚಚ್ಚಿಕೊಳ್ಳಬಹುದೆಂದು ಮೋನ ನಿರೀಕ್ಷಿಸಿದ್ದ. ಆದರೆ ಹೀಗೆ ನಡೆಯಲಿಲ್ಲ.

ತಂದೆ ಮಂಚದ ಮೇಲೆ ಒರಗಿ ಕುಳಿತು ಕಾಗದ ಓದಿದರು. ಕ್ಷಣ ಕಾಲ ಚಿಂತಾಗ್ರಸ್ತರಾದರು. ಕಣ್ಣಿನಿಂದ ಮುತ್ತಿನ ಮಣಿಯಂತೆ ಅಶ್ರುಧಾರೆ ಹರಿಯತೊಡಗಿತು. ಮೋನನ ಕಾಗದವನ್ನು ತುಂಡರಿಸಿ ಎಸೆದು ಬಿಟ್ಟರು. ಅವರ ಮೋರೆಯ ಮೇಲೆ ದುಃಖ ಎದ್ದು ಕಾಣುತ್ತಿತ್ತು. ಮೋನನಿಗೂ ದುಃಖ ತಡೆಯಲಾಗಲಿಲ್ಲ. ಅವನು ರೋದಿಸತೊಡಗಿದ. ಇಬ್ಬರೂ ಸ್ವಲ್ಪ ಹೊತ್ತು ದುಃಖಾಶ್ರು ಸುರಿಸಿದರು. ನಂತರ ಎಲ್ಲವೂ ಶಾಂತವಾಯಿತು. ಎದೆಯಲ್ಲಿ ಶಾಂತಿ ಮೂಡಿತು. ಮಗನನ್ನು ಸಮೀಪಕ್ಕೆ ಕರೆದು ತಲೆನೇವರಿಸಿ, 'ವತ್ಸಾ, ಇನ್ನು ಮುಂದೆ ಹೀಗೆ ಮಾಡಬೇಡ' ಎಂದರು. ದಂಡಿಸಲಿಲ್ಲ ಶಿಕ್ಷಿಸಲಿಲ್ಲ. ಮಗ ಇನ್ನು ಮೇಲೆ ಇಂಥ ಅಪರಾಧಗಳನ್ನೆಸಗುವುದಿಲ್ಲ ಎಂಬ ಭರವಸೆಯಿಂದ ತಂದೆ ತೃಪ್ತರಾದರು. ಅವರಿಗೆ ಮಗನಲ್ಲಿ ಮತ್ತಷ್ಟು ವಿಶ್ವಾಸ ಬೆಳೆಯಿತು.

ತಂದೆಯ ಅಶ್ರುಧಾರೆ ಗಂಗೆಯಂತೆ ಮೋಹನನ ಪಾಪಗಳನ್ನು ತೊಡೆದು ಹಾಕಿತು. ಅಂದಿನಿಂದ ಮೋಹನನ ಜೀವನದಲ್ಲಿ ದೊಡ್ಡ ಪರಿವರ್ತನೆಯಾಯಿತು. ಆತ್ಮಸಾಕ್ಷಿಯ ಪಶ್ಚಾತ್ತಾಪ ತಂದೆ ಮಕ್ಕಳ ಹೃದಯಗಳನ್ನು ಪಾವನಗೊಳಿಸಿತು.

ಮಕ್ಕಳ ವಿಕಾಸಕ್ಕೆ ಮುಖ್ಯ ಕಾರಣ, ಕುತೂಹಲ. ಇದೇನು? ಹೀಗೇಕೆ? ಇದೇಕೆ? ಈ ಪ್ರಶ್ನೆಗಳನ್ನು ಮಕ್ಕಳು ಕೇಳುತ್ತಲೇ ಇರುತ್ತವೆ. ಹಲವು ವೇಳೆ ಈ ಪ್ರಶ್ನೆಗಳಿಗೆ ಅದಕ್ಕೆ ಅರಿವಾಗುವ ರೀತಿಯಲ್ಲಿ ಉತ್ತರ ಕೊಡುವುದು ದುಸ್ತರ. ಚಂದ್ರ ಹಗಲು ಏಕೆ ಕಾಣುವುದಿಲ್ಲ. ಅವನು ಎಲ್ಲಿಗೆ ಹೋಗುತ್ತಾನೆ? ನಕ್ಷತ್ರಗಳು ಏಕೆ ಮಿನುಗುತ್ತವೆ? ಅವೇನು. ಕುದುರೆಗೆ ಕೊಂಬು ಏಕೆ ಇಲ್ಲ? ನಾಯಿ ಏಕೆ ಮಾತನಾಡದು ?

ಈ ಕುತೂಹಲ ಬತ್ತಿದರೆ ಅವನ ಬೆಳವಣಿಗೆ ಅಲ್ಲಿಗೇ ಮುಗಿಯಿತೆಂದು ತಿಳಿಯಬಹುದು. ತುಂಟತನ, ಮಕ್ಕಳ ಸ್ವಭಾವ. 'ಇದೇನು ತುಂಟನಮ್ಮ ನನ್ನ ಮಗ' ಎಂದು ತಾಯಂದಿರುಗೆ ಪ್ರೀತಿ, ಹೆಮ್ಮೆ ಮಿಶ್ರಿತ ಬೇಸರಿಕೆಯಿಂದ ಹೇಳಿಕೊಳ್ಳುವುದುಂಟು. ಕೃಷ್ಣನ ಬಾಲಲೀಲೆ ವರ್ಣಿಸಲಸದಳ. ಎಲ್ಲ ತಾಯಂದಿರಿಗೂ ತನ್ನ ಮಗ ಕೃಷ್ಣನೇ? ಪುತಲೀಬಾಯಿ ಮತ್ತು ಮೋನಿಯ ಇವುಗಳಿಂದ ಭಿನ್ನರಲ್ಲ. ತಂದೆ ಕಬಾಗಾಂಧಿಗೆ ಮಕ್ಕಳಮೇಲೆ ತುಂಬ ಪ್ರೀತಿ. ಸದಾ ಅವರ ಪುರೋಭಿವೃದ್ಧಿಯ ಚಿಂತೆಯೇ. ನಮ್ಮ ವಂಶಕ್ಕೆ ಕೀರ್ತಿತರುವವನು ಮೋನಿಯ ಎಂದು ಬಾಲ್ಯದಲ್ಲೇ ಅವರು ಹೇಳುತ್ತಿದ್ದರು.

ಮಗು ಮೋನಿಯ ಮನೆ ತುಂಬ ಅಡ್ಡಾಡುವನು. ಸಿಕ್ಕಿದ್ದನ್ನು ಬಾಯಿಗೆ ಸೇರಿಸುವನು. ನಾಯಿಯ ಕಿವಿ ಹಿಡಿದು ಹಿಂಡುವನು. ನೆಲದಮೇಲೆ ಗೋಡೆಯ ಮೇಲೆ ಗೀಚುವನು. ಹೀಗೆ ಮಾಡಬೇಡ ಎಂದರೆ ಅಪ್ಪ ಬರೆಯುವುದಿಲ್ಲವೇ, ನಾನೂ ಬರೆಯುತ್ತೇನೆಂದು ಉತ್ತರಿಸುವನು. ಪೂಜಾ ಗೃಹದ ಬಾಗಿಲು ತೆರದಿದ್ದರೆ ಒಳಕ್ಕೆ ನುಗ್ಗಿ ಪೂಜಾ ಸಾಮಗ್ರಿ ಚಲ್ಲಾಪಿಲ್ಲಿ ಚೆಲ್ಲುವನು. ಗಂಟೆ ಆಡಿಸುವನು. ದೇವರ ವಿಗ್ರಹ ಪೀಠದಿಂದ ತೆಗೆದು ತಾನೇ ಪೀಠದಮೇಲೆ ಕುಳಿತುಕೊಳ್ಳುವನು.

ಶ್ರಾವಣ ಹಬ್ಬಗಳ ತಿಂಗಳು. ಸಂಭ್ರಮದ ಹಬ್ಬ ಗೋಕುಲಾಷ್ಟಮಿ. ಕೃಷ್ಣ ಜನ್ಮ ತಾಳಿದ ದಿನ. ಎಲ್ಲರ ಮನೆಯಲ್ಲೂ ತಿಂಡಿ ತಿನಸು. ಕೃಷ್ಣ ಗೋಪಿಯರಂತೆ ಮಕ್ಕಳನ್ನು ಸಿಂಗರಿಸಿ ಹಿರಿಯರು ಸಂತೋಷಪಡುವರು. ಎಲ್ಲೆಲ್ಲೂ ಆಟ ಕುಣಿತ. ಒಮ್ಮೆ ಹಬ್ಬದ ದಿನ ಉತ್ಸವ ನೋಡಲು ಹೊರಕ್ಕೆ ನಡೆದ ಮೋನಿಯ. ಅಕ್ಕ ಗೋಕಿ ಬೆನ್ ಕಣ್ಣು ತಪ್ಪಿಸಿ ಎಲ್ಲಿಯೋ ಮರೆಯಾದ. ಯಾರೋ ಹುಡುಗಿಯರು ಇವನನ್ನು ಮನೆಗೆ ಹಿಡಿದು ತಂದರು. "ಎಲ್ಲಿಗೆ ಹೋಗಿದ್ದೆಯೋ?" "ಅಲ್ಲಿ ದೂರ ಹೋಗಿದ್ದೆ." ಸ್ವಲ್ಪ ಹೊತ್ತಿಗೆ ಗಂಟಲು ಉರಿ ಎಂದ. ಕೈಗೆ ಸಿಕ್ಕಿದ ಯಾವುದೋ ಹೂವು ತಿಂದಿದ್ದ. ಕೂಡಲೇ ವೈದ್ಯನನ್ನು ಬರಮಾಡಿಕೊಂಡು ಚಿಕಿತ್ಸೆ ನಡೆಸಲಾಯಿತು. ಇವನನ್ನು ನೋಡಿಕೊಳ್ಳಲು ರಂಭೆ ನೇಮಿತಳಾದಳು. ರಂಭೆಯ ಕಣ್ಣು ತಪ್ಪಿಸುವುದೇ ಇವನಿಗೊಂದು ಆಟ. ನೆರೆಯ ದೇವಾಲಯದಲ್ಲಿದ್ದ ಬಾವಿಗೆ ಎಲ್ಲಿ ಬಿದ್ದುಬಿಡುವನೋ ಭಯ. ಮೋನ ತಂದೆಯ ಬಳಿಗೆ ಹೋಗಿ, ರಂಭೆ ನನ್ನನ್ನು ಎಲ್ಲಿಗೂ ಹೋಗಗೊಡುವುದಿಲ್ಲವೆಂದು ಚಾಡಿ ಹೇಳುವನು.

ತಾಯಿ ಹಳೆಯ ಸಂಪ್ರದಾಯವಾದಿ. ಹಬ್ಬ, ಹರಿದಿನ, ವ್ರತ ಎಲ್ಲ ಆಚರಿಸುವಳು. ಅಸ್ಪೃಶ್ಯರನ್ನು ಮುಟ್ಟಲಾಗದು ಎಂದು ಹೇಳುತ್ತಿದ್ದಳು. ಸ್ನಾನ ಮಾಡಬೇಕಾದೀತು ಮುಟ್ಟಿದರೆ ಎಂದು ಎಚ್ಚರಿಕೆ ಕೊಡುವಳು. ತಾಯನ್ನು ಚುಡಾಯಿಸಲು, "ಅಮ್ಮ, ಅಸ್ಪೃಶ್ಯರನ್ನು ನಾನು ಮುಟ್ಟಿದೆ" ಎಂದು ತಿಳಿಸುವನು. "ಏಕೆ, ಅವ

ರನ್ನು ಮುಟ್ಟಬಾರದು. ಅವರು ಮಾಡಿದ ಪಾಪವೇನು. ಅವರೂ ಮನುಷ್ಯರಲ್ಲವೇ" ಎಂದು ಪ್ರಶ್ನಿಸುವನು. "ನಿಜವಾಗಿಯೂ ಮುಟ್ಟಿದೆಯಾ" ಎಂದು ಕೇಳಿದರೆ, "ಇಲ್ಲ, ಇಲ್ಲ," ತಮಾಷಿಗೆ ಹೇಳುತ್ತಿರುವೆನೆಂದು ಉತ್ತರಿಸುವನು.

ಅಸ್ಪೃಶ್ಯ ಯೂಕ ಪಾಯಿಖಾನೆ ಶುದ್ಧಿ ಮಾಡಲು, ಗುಡಿಸಲು ಬರುತ್ತಿದ್ದ. ಆವ ನನ್ನು ಮುಟ್ಟಿದರೆ ಸ್ನಾನಮಾಡಬೇಕು. ಶಾಲೆಯಲ್ಲಿ ಅಸ್ಪೃಶ್ಯನನ್ನು ಮುಟ್ಟಿದರೆ, ಮುಸಲ್ಮಾನನ್ನು ಮುಟ್ಟು ಎಂದು ತಾಯಿ ಹೇಳುವಳು. ಒಂದು ದೋಷ ಮತ್ತೊಂದು ದೋಷದಿಂದ ನಿವಾರಿತವಾಗುವುದು. ಮೋಹನನಗೆ ಇದರಲ್ಲಿ ವಿಶ್ವಾಸವಿಲ್ಲ. ತಾಯಿ ಯನ್ನು ತೃಪ್ತಿಗೊಳಿಸಲು ಹೇಳಿದಂತೆ ನಡೆದುಕೊಳ್ಳುತ್ತಿದ್ದ. ಅಷ್ಟೆ. ಸರ್ವಾಂತ ರ್ಯಾಮಿಸ್ವಾಮಿ ಯೂಕನಲ್ಲೂ ಇಲ್ಲವೇ ಎಂದು ಪ್ರಶ್ನಿಸುತ್ತಿದ್ದ.

ಸೀಬೆಗಿಡ ಹತ್ತಿ ರೆಂಬೆಗಳ ತುದಿಯಿಂದ ಇಳಿಬೀಳುವುದರಲ್ಲಿ ಖುಷಿ. "ಯಾಕೋ ಮರ ಹತ್ತಿದೆ" ಎಂದರೆ "ಹಣ್ಣನ್ನು ಹಕ್ಕಿ ಮತ್ತು ಅಳಿಲು ತಿನ್ನದಂತೆ ಸೊಪ್ಪಿನಿಂದ ಮರೆ ಮಾಡಲು ಹತ್ತಿದ್ದೆ" ಎನ್ನುವನು. ಮರ ಹತ್ತಿದ್ದಾಗ ಅಣ್ಣ, ಒಮ್ಮೊಮ್ಮೆ ಕಾಲು ಹಿಡಿದು ಎಳೆಯುವನು. ಅಣ್ಣ ಕಾಲು ಹಿಡಿದು ಎಳೆದ ಎಂದು ಅಮ್ಮನಲ್ಲಿ ದುಃಖ ತೋಡಿ ಕೊಳ್ಳುವನು.

"ಕಪಾಳಕ್ಕೆ ಬಿಡಬೇಕಾಗಿತ್ತು."

"ಅಣ್ಣನನ್ನು ಹೊಡೆಯುವಂತೆ ಹೇಳುವೆಯಾ. ನಾನೇಕೆ ಹೊಡೆಯಲಿ."

"ಅಣ್ಣ ನಿನ್ನನ್ನು ಹೊಡೆದರೆ, ತಿರುಗಿಸಿ ನೀನು ಕೊಡುವುದರಲ್ಲಿ ತಪ್ಪೇನು.?"

"ಅಮ್ಮ, ಒಳ್ಳೆಯ ಪಾಠ ಹೇಳಿಕೊಡುತ್ತಿ. ಅವನು ನನ್ನನ್ನು ಹೊಡೆದರೂ, ನಾನು ತಿರುಗಿಸಿಕೊಡಲಾರೆ. ಅದು ಸರಿಯಲ್ಲ. ತಿರುಗಿಸಿ ಕೊಡು ಎಂದು ಹೇಳುವುದಕ್ಕಿಂತ, ತಮ್ಮನನ್ನು ಹೊಡೆಯ ಬೇಡ ಎಂದು ಅಣ್ಣನಿಗೆ ಬುದ್ಧಿ ಹೇಳುವುದು ಇದಕ್ಕಿಂತ ಉಚಿತವಲ್ಲವೇ ?"

"ನನ್ನ ಕಂದ, ಇಷ್ಟು ಬುದ್ಧಿ ನಿನಗೆ ಎಲ್ಲಿಂದ ಬಂತು. ಯಾರು ಹೇಳಿಕೊಟ್ಟರು" ಎಂದು ತಾಯಿ ಮಗನನ್ನು ಎತ್ತಿಕೊಂಡು ಮುದ್ದಾಡುವಳು.

ಶಾಲೆಗೆ ಹೋಗಲೆಂದರೆ ಕೆಲವು ಮಕ್ಕಳಿಗೆ ತಲೆನೋವು, ಹೊಟ್ಟೆ ನೋವು. ಪುಸ್ತಕ ತೆಗೆದುಕೊಂಡು ಶಾಲೆಗೆ ಹೋಗುವೆನೆಂದು ಚಕ್ಕರ್ ಕೊಡುವರು. ಆದರೆ ಮೋನಿಯ ಈ ವರ್ಗಕ್ಕೆ ಸೇರಿದವನಲ್ಲ. ವೇಳೆಗೆ ಸರಿಯಾಗಿ ಶಾಲೆಗೆ ಹೋಗಬೇಕು.

'ಅಡುಗೆ ಆಯಿತೆ' ಎಂದು ಹೊತ್ತಿಗೆ ಮುಂಚೆ ಬಂದು ಅಮ್ಮನನ್ನು ಕೇಳುವನು. "ಚಪಾತಿ ಆಗಿದೆ. ತರಕಾರಿ ಬೇಯುತ್ತಿದೆ. ಸ್ವಲ್ಪ ತಡಿ" ಎನ್ನುವಳು ತಾಯಿ. "ಇಲ್ಲ, ಹೊತ್ತಾಯಿತು. ಹೊತ್ತು ಮೀರಿ ಹೋದರೆ, ಶಾಲೆಯಲ್ಲಿ ಕಡೆಯಲ್ಲಿ ಕೂಡಬೇಕಾಗುವುದು." ಹೀಗೆ ಹೇಳಿ ಒಣ ಚಪಾತಿ ಮೊಸರು ತಿಂದು ಶಾಲೆಗೆ ಓಡುವನು.

ತಂದೆ ಇದನ್ನು ನೋಡಿ, "ತಂಗಳು ಮೈಗೆ ಆಗದು. ಬಿಸಿ ಬಿಸಿ ಊಟ ಮಾಡಿ ಹೋಗು. ನನ್ನ ಕುದುರೆ ಗಾಡಿಯಲ್ಲಿ ಶಾಲೆಗೆ ಹೋಗಬಹುದು" ಎಂದು ಹೇಳುವರು. ತನ್ನ ಕಾಲುಗಳನ್ನು ತೋರಿಸಿ, "ಇಗೋ ಇಲ್ಲಿವೆ ನನ್ನ ಕುದುರೆ ಸಾರೋಟು" ಎಂದು ಹೇಳಿ ಶಾಲೆಗೆ ನಡದೇ ಹೋಗುವನು. ಮಂತ್ರಿಯ ಮಗ ಕುದುರೆ ಗಾಡಿಯಲ್ಲಿ ಹೋಗಬೇಕು ಎಂಬ ಜಂಭವಿಲ್ಲ.

ತೋಟಗಾರಿಕೆಯಲ್ಲಿ ಮೋಹನನಿಗೆ ತುಂಬ ಆಸಕ್ತಿ. ಪೋರಬಂದರಿನ ತಮ್ಮ ಮನೆಯ ಮಾಳಿಗೆಯ ಮೇಲೆ ಕುಂಡಗಳಲ್ಲಿ ಹೂ ಗಿಡಗಳನ್ನು ಬೆಳೆಸಿದ್ದ. ಮೆಟ್ಟಲು ಹತ್ತಿ ಪ್ರತಿದಿನ ಗಿಡಗಳಿಗೆ ನೀರುಣಿಸುವನು. ರಾಜಕೋಟೆಯಲ್ಲಿ ಸಣ್ಣ ತೋಟವನ್ನೇ ಮಾಡಿದ್ದ. ಇಲ್ಲಿ ತರಕಾರಿ ಮತ್ತು ಹೂವಿನ ಗಿಡಗಳಿದ್ದವು. ಅಲ್ಲದೆ ದಾಳಿಂಬೆ, ಪಪ್ಪಾಯಿ, ಸೀಬೆ ಗಿಡಗಳಿದ್ದವು. ಗೆಳೆಯರನ್ನು ತೋಟಕ್ಕೆ ಬರಮಾಡಿಕೊಂಡು, ತಾನು ಬೆಳಸಿದ್ದ ಗಿಡಗಳನ್ನು ತೋರಿಸಿ ಹೆಮ್ಮೆ ಪಡುತ್ತಿದ್ದ. ತಮ್ಮೆಲ್ಲರಿಗಿಂತ ಗಿಡಗಳನ್ನು ಬೆಳೆಸುವುದರಲ್ಲಿ ಮೋಹನ ತುಂಬ ಬುದ್ಧಿವಂತ ಎಂದು ಅವರು ಹೇಳುತ್ತಿದ್ದರು.

ಷರಟು, ಕೋಟು, ಪಂಚೆ, ಟೋಪಿ ಮೋಹನನ ಸಾಮಾನ್ಯ ಉಡುಪು. ಸೂರ್ಯೋದಯಕ್ಕೆ ಮೊದಲೇ ಏಳುವನು. ನೆರೆಯ ತೋಟದ ಬಾವಿಗೆ ಹೋಗಿ, ಏತದಿಂದ ನೀರೆತ್ತಿ, ಮೋಹನ ಮತ್ತು ಕುಟುಂಬದ ಹುಡುಗರೆಲ್ಲರೂ ತಣ್ಣೀರಿನಲ್ಲಿ ಸ್ನಾನ ಮಾಡುವರು. ತಮ್ಮ ಬಟ್ಟೆ ತಾವೇ ಒಗೆದುಕೊಳ್ಳುವರು. ಎಲ್ಲರಿಗಿಂತ ಮೋಹನನ ವಸ್ತ್ರ ಅತಿ ಶುಭ್ರವಾಗಿರುತ್ತಿತ್ತು.

ಗೊಂಬೆಯಾಟ ಹೆಣ್ಣು ಮಕ್ಕಳಿಗೆ ತುಂಬ ಸಹಜ. ಗೊಂಬೆಯನ್ನು ನಿಜವಾದ ಮಗುವಿನಂತೆ ಪಾಲಿಸುವರು. ಹಾಲುಣಿಸುವರು, ಸ್ನಾನ ಮಾಡಿಸುವರು, ಬಟ್ಟೆ ತೊಡಿಸುವರು, ನಿದ್ದೆ ಬಂದಿತೆಂದು ತೊಟ್ಟಿಲಲ್ಲಿ ಮಲಗಿಸಿ, ಜೋಗುಳ ಹಾಡಿ, ತೂಗಿ ಮಲಗಿಸುವರು. ಹಿರಿಯರು ದೇವರನ್ನು ಷೋಡಶೋಪಚಾರಗಳಿಂದ ಸತ್ಕರಿಸುವಂತೆ.

ದೇವನಿಗೆ ನಾವು ಬೊಂಬೆಯಾಟ, ಪ್ರಪಂಚದ ಈ ರಂಗ ಮಂಟಪದ ಮೇಲೆ. ದೇವನನ್ನು ತನ್ನಂತೆಯೇ ಭಾವಿಸಿ ಉಪಚರಿಸುವನು ಮಾನವ. ಜಗದೋದ್ಧಾರಕ ಶ್ರೀ ಕೃಷ್ಣನನ್ನು ತನ್ನ ಮಗನಂತೆಯೇ ಭಾವಿಸಿ ತೊಟ್ಟಿಲಲ್ಲಿ ತೂಗಿ ಆಡಿಸಲಿಲ್ಲವೇ ?

ಯಶೋಧೆ. ಡೋಲೋತ್ಸವ, ಶಯನೋತ್ಸವ ಇವನ್ನು ವಿಗ್ರಹಾರಾಧಕ ಹಿಂದೂಗಳು ನಡೆಸುವರು. ಮೋನನ ಮನೆಯಲ್ಲಿ ಈ ಉತ್ಸವಗಳು ಪ್ರತಿವರ್ಷವೂ ನಡೆಯುವುವು. ಲೋಹದ ದೇವರ ವಿಗ್ರಹಗಳನ್ನು ಅಲಂಕೃತ ತೊಟ್ಟಿಲಲ್ಲಿ ಮಲಗಿಸಿ ಜೋಗುಳ ಹಾಡಿ ತೂಗುವರು. ಸುಮಂಗಲಿಯರು ಮತ್ತು ಹೆಣ್ಣು ಮಕ್ಕಳನ್ನು ಬರಮಾಡಿ ಕೊಂಡು ಹೂವು ಹಣ್ಣುಕಾಯಿ ತಿಂಡಿ ಕೊಡುವರು.

ಇವೆಲ್ಲವನ್ನೂ ಮೋನಿಯ ಮತ್ತು ಮನೆಯ ಹುಡುಗರು ನೋಡಿದ್ದರು. ಹಿರಿಯರನ್ನು ಅನುಕರಿಸುವುದು ಕಿರಿಯರ ಸ್ವಭಾವ. ಮೋನ ಮತ್ತು ಮನೆಯ ಮಕ್ಕಳು ಮಣ್ಣಿನ ಗೊಂಬೆಗಳನ್ನು ತೊಟ್ಟಿಲಲ್ಲಿ ಇಟ್ಟು ತೂಗಿ ಆಡಿಸುವರು. ನಾವೂ ನಿಜವಾದ ವಿಗ್ರಹಳನ್ನಿಟ್ಟು ತೊಟ್ಟಿಲು ತೂಗುವ ಉತ್ಸವ ನಡೆಸೋಣ ಎಂದ ಒಬ್ಬ. ಲಕ್ಷ್ಮೀನಾರಾಯಣ ದೇವಾಲಯದಲ್ಲಿ ದೇವರ ಕಂಚಿನ ವಿಗ್ರಹಗಳನ್ನು ಇವರು ನೋಡಿದ್ದರು. ಒಂದು ಜೊತೆ ತೆಗೆದುಕೊಂಡು ತೊಟ್ಟಿಲು ಸೇವೆ ಉತ್ಸವ ನಡೆಸೋಣ ಎಂದು ಎಲ್ಲರೂ ಕಲೆತು ಮಾತನಾಡಿಕೊಂಡರು. ಯೋಜನೆ ಸಿದ್ಧವಾಗುತ್ತಲೇ ಕೃತಿಗೆ ಇಳಿಸಲು ತಡಮಾಡಲಿಲ್ಲ. ತುಂಟರ ತಂಡ ಹೊರಟಿತು ದೇವಾಲಯಕ್ಕೆ. ಮೋನನೂ ಜೊತೆಗೂಡಿದ. ಮಧ್ಯಾಹ್ನದ ಹೊತ್ತು. ಪೂಜಾರಿ ಮಲಗಿ ನಿದ್ರಿಸುತ್ತಿದ್ದ. ಇದೇ ಸಮಯವೆಂದು ಸದ್ದಿಲ್ಲದೆ ದೇವಸ್ಥಾನ ಹೊಕ್ಕರು. ಎರಡು ವಿಗ್ರಹಗಳನ್ನು ಒಬ್ಬ ತೆಗೆದುಕೊಂಡ. ಹೊರಕ್ಕೆ ಬರುತ್ತಿದ್ದಾಗ ವಿಗ್ರಹಗಳು ಒಂದಕ್ಕೊಂದು ಘರ್ಷಿಸಿ, ಠಣ್ ಎಂದು ಶಬ್ದ ಮಾಡಿದುವು. ಪೂಜಾರಿ ಎಚ್ಚರಗೊಂಡ. ವಿಗ್ರಹಗಳನ್ನು ತೆಗೆದು ಕೊಂಡು ಹೋಗುತ್ತಿದುದನ್ನು ನೋಡಿದ. ತುಂಟರ ತಂಡ ಓಟಕಿತ್ತಿತು. ವಿಗ್ರಹಗಳನ್ನು ಹಿಡಿದು ಕೊಂಡಿದ್ದ ತಂಡದ ನಾಯಕ ವಿಗ್ರಹಗಳನ್ನು ಪಕ್ಕದ ದೇಗುಲದ ಆವರಣದೊಳಕ್ಕೆ ಎಸೆದು ಬಿಟ್ಟ. ಪೂಜಾರಿಯ ಕೈಗೆ ಸಿಗದೆ ಎಲ್ಲರೂ ಸಮೀಪದ ಒಟ್ಟ ಬಾಪ ಮನೆ ಹೊಕ್ಕು ಅವಿತು ಕೊಂಡರು. ಪೂಜಾರಿ ಹಿಂಬಾಲಿಸಿ ಬಂದು, ಮೋನಿಯನ ದೊಡ್ಡಪ್ಪನಿಗೆ ನಡೆದ ವೃತ್ತಾಂತ ತಿಳಿಸಿದ. ಒಟ್ಟ ಬಾಪ ಹಳೆಯ ಸಂಪ್ರದಾಯವಾದಿ ವೈಷ್ಣವ. ಹುಡುಗರನ್ನು ಕರೆಸಿಕೊಂಡು ಏನು ಸಮಾಚಾರ, ನಡೆದುದೇನು ಎಂದು ವಿಚಾರಿಸಿದ. ನಾವೆಲ್ಲ ಆಟ ಆಡಲು ದೇಗುಲದೊಳಕ್ಕೆ ಹೋಗಿದ್ದೆವು. ಮಲಗಿದ್ದ ಪೂಜಾರಿ ಎದ್ದು, ವಿನಾಕಾರಣ ಹಿಡಿಹಿಡಿ ಎನ್ನುತ್ತಾ ಅಟ್ಟಿಸಿ ಕೊಂಡು ಬಂದ. ವಿಗ್ರಹ, ಗಿಗ್ರಹ ಅದರ ವಿಷಯವೇ ನಮಗೆ ತಿಳಿಯದು. ನಾವೇಕೆ ಅದನ್ನು ಮುಟ್ಟೋಣ. ಎಲ್ಲರದೂ ಇದೇ ಕಥೆ.

ಒಟ್ಟ ಗಾಂಧಿ ಒಬ್ಬೊಬ್ಬರನ್ನು ಕರೆದು ವಿಚಾರಿಸಿದರು. ಮೋನಿಯನ ಸರದಿ ಬಂತು. ನಡೆದ ಸಂಗತಿ ನಡೆದಂತೆ ನುಡಿದು ಬಿಟ್ಟ. ವಿಗ್ರಹ ತೆಗೆದು ಕೊಂಡವನ ಹೆಸರನ್ನೂ ತಿಳಿಸಿದ. ಎಲ್ಲಿ ಬಿಸುಟನೋ ಅವನಿಗೇ ಗೊತ್ತು ಎಂದ. ಮೋನಿಯ ನಿಜ

ಹೇಳುತ್ತಿರುವನೆಂದು ಮನವರಿಕೆ ಆಯಿತು ಒಟ್ಟ ಗಾಂಧಿಗೆ. ಮೋನಿಯನನ್ನು ಮೆಚ್ಚಿ ಕೊಂಡ. ತುಂಟತನ ಹುಡುಗರ ಸ್ವಭಾವ. ತಪ್ಪುಮಾಡದವರು ಯಾರು. ಎಲ್ಲರೂ ಮಾಡುತ್ತಾರೆ. ಮಾಡಿದ ತಪ್ಪು ಒಪ್ಪಿಕೊಳ್ಳುವುದು ದೊಡ್ಡ ಗುಣ. ಮೋನ ಸತ್ಯ ನುಡಿದದ್ದರಿಂದ ಹುಡುಗರಿಗೆ ಶಿಕ್ಷೆ ಆಗಲಿಲ್ಲ. ಇನ್ನು ಹೀಗೆ ಮಾಡಬೇಡಿ ಎಂದು ಎಚ್ಚರಿಕೆ ಕೊಟ್ಟು ಗದರಿಸಿ ಕಳುಹಿಸಿದರು ಎಲ್ಲರನ್ನೂ ಒಟ್ಟ ಗಾಂಧಿ.

ಮೋನನ ಮನೆಯಿಂದ ಒಂದು ಫರ್ಲಾಂಗ್ ಸಮೀಪದಲ್ಲಿ ಶೀತಲ ಚೌಕ. ಬೆಳ ದಿಂಗಳ ದಿನಗಳಲ್ಲಿ ರಾತ್ರಿ ಊಟ ಕಳೆದು ಹಿಂದೂ ಮತ್ತು ಮುಸ್ಲಿಂ ಹುಡುಗರು ಅಲ್ಲಿ ನೆರೆಯುವರು. ಗುಡುಗುಡಿ, ಕೊಕ್ಕೋ ಮೊದಲಾದ ಆಟ ಆಡುವರು. ಆಟಕ್ಕಿಂತ ಕೂಗಾಟ ಹೆಚ್ಚು. ಮೋನನಿಗೆ ಗಲಭೆ ಗೊಂದಲ ಸೇರದು. ಈ ಆಟಗಳಲ್ಲಿ ಅವನು ಭಾಗವಹಿಸುತ್ತಿರಲಿಲ್ಲ. ಎರಡು ಗುಂಪುಗಳ ನಡುವೆ ಅಂಪೈರ್ ಅಥವಾ ತೀರ್ಪುಗಾರ ನಾಗಿ ಇರುತ್ತಿದ್ದ. ತಪ್ಪು ಮಾಡಿದವರನ್ನು ಹೊರ ಹಾಕುತ್ತಿದ್ದ. ಹಿಂದೂ, ಮುಸ್ಲಿಂ, ಪಾರ್ಸಿ ಎಲ್ಲರನ್ನು ಸಮದೃಷ್ಟಿಯಿಂದ ಕಾಣುತ್ತಿದ್ದ. ತಾರತಮ್ಯ ಮಾಡುತ್ತಿರಲಿಲ್ಲ. ಎಲ್ಲರೂ ಇವನ ತೀರ್ಪನ್ನು ಮನ್ನಿಸುತ್ತಿದ್ದರು.

ಒಬ್ಬನ ಸ್ನೇಹಿತರು ಯಾರೆಂದು ಗೊತ್ತಾದರೆ ಅವನ ಗುಣಾವಗುಣಗಳನ್ನು ಗೊತ್ತುಮಾಡಬಹುದು.

ಮೋಹನದಾಸ ಸ್ನೇಹಪ್ರಿಯನಲ್ಲ. ಅವನದು ಸಂಕೋಚ ಪ್ರವೃತ್ತಿ. ಆದರೂ ಇಬ್ಬರೂ ಆಪ್ತರಾದರು. ಒಬ್ಬನದು ಸ್ನೇಹವಾಗಿ ದೀರ್ಘಕಾಲ ಉಳಿಯಿತು. ಇವನು ಕೆಟ್ಟ ಹುಡುಗ ಇವನ ಸ್ನೇಹ ಬೆಳಸಬೇಡ ಎಂದು ತಂದೆ ತಾಯಿ ಹೆಂಡತಿ ಹೇಳಿದರೂ ಮೋನ ಅದಕ್ಕೆ ಕಿವಿಗೊಡಲಿಲ್ಲ. ನನ್ನ ಸಹವಾಸದಿಂದ ಅವನು ಗುಣಶೀಲನಾದಾನು ಎಂದು ವಾದಿಸಿದ ಮೋನ. ಅಂತೂ ಸ್ನೇಹ ಉಳಿಯಿತು, ಬೆಳೆಯಿತು. ಆದರೆ ಮೋಹನನಿಂದ ಅವನು ಯೋಗ್ಯನಾಗುವುದಕ್ಕೆ ಪ್ರತಿಯಾಗಿ, ಮೋನನನ್ನೇ ಅವನು ತಪ್ಪು ದಾರಿಗೆ ಎಳೆಯುವುದರಲ್ಲಿ ಯಶಸ್ವಿಯಾದ.

ನಾವು ಆಂಗ್ಲರ ದಾಸರಾಗಿದ್ದೇವೆ. ಇದಕ್ಕೆ ಮುಖ್ಯ ಕಾರಣ ಅವರ ದೇಹ ದಾರ್ಢ್ಯ. ಮಾಂಸ ಸೇವಿಸುವುದರಿಂದ ಅವರು ಗಟ್ಟಿಮುಟ್ಟಯಾಗಿರುತ್ತಾರೆ. ದೈಹಿಕ ಕಷ್ಟ ಸಹಿಸಿಕೊಳ್ಳಬಲ್ಲರು ಅವರು. ಕಜ್ಜಿ, ಹುಣ್ಣು ಅವರನ್ನು ಬಾಧಿಸದು. ಆದ್ದ ರಿಂದ ನಾವೂ ಮಾಂಸತಿನ್ನಬೇಕು. ಹೀಗೆ ಹಗಲಿರುಳು ಕಿವಿ ಊದುತ್ತಿದ್ದ ಮೆಹ ತಾಬ್.

ಮೋಹನ ಸ್ವಾಭಾವಿಕವಾಗಿ ಪುಕ್ಕ. ಕತ್ತಲೆಂದರೆ ಭಯ. ಈ ಗೆಳೆಯನೋ ತನ್ನ ಧೈರ್ಯ ಶೌರ್ಯದ ಬಡಾಯಿ ಕೊಚ್ಚಿಕೊಳ್ಳುವನು. ಹಾರಿ, ಓಡಿ, ಜಿಗಿದು,

ನೆಗೆದು ತನ್ನ ಬಲಪ್ರದರ್ಶನದಿಂದ ಮೋಹನನನ್ನು ಮಂಕು ಹಿಡಿಸಿಬಿಟ್ಟ. ಮೋನನ ಅಣ್ಣ ಇದಕ್ಕೆ ಮೊದಲೇ ಮಾಂಸಾಹಾರಕ್ಕೆ ಶರಣು ಹೊಡೆದಿದ್ದ. ಮೋನನು ಮಿತ್ರನು ಒಡ್ಡಿದ ಬಲೆಗೆ ಬಿದ್ದ. ಈಗ ರಾಜಕೋಟೆಯ ಅನೇಕರು ಮದ್ಯ ಮತ್ತು ಮಾಂಸ ಸೇವಿಸುತ್ತಾರೆ. ಹೀಗೆ ಹೇಳಿ ತಾನೇ ಮಾಂಸ ಬೇಯಿಸಿ ಅಣ್ಣ ತಮ್ಮಂದಿರಿಗೆ ಕೊಟ್ಟು ತಾನೂ ಸೇವಿಸತೊಡಗಿದ.

ಪ್ರಾರಂಭದಲ್ಲಿ ಮಾಂಸ ಏನೋ ಚಕ್ಕಳದಂತೆ ಇತ್ತು. ಆದರೆ ಗೆಳೆಯ ಬಿಟ್ಟರೆ ತಾನೆ. ಮಾಂಸವನ್ನು ಬೇರೊಬ್ಬರಿಂದ ರುಚಿಯಾಗಿ ಮಾಡಿಸಿ ತಂದು ಕೊಡಲು ಪ್ರಾರಂಭಿಸಿದ. ಗುಟ್ಟಾಗಿ ಒಂದು ವರ್ಷ ಈ ಪ್ರಯೋಗ ನಡೆಯಿತು. ಆಗ ಮೋನನ ವಯಸ್ಸು ಸುಮಾರು 12. ಇಡೀ ವರ್ಷದಲ್ಲಿ ಆರು ಸಾರಿ ಮಾಂಸ ಭಕ್ಷ್ಯ ಸೇವನೆ ನಡೆದಿರಬಹುದು.

ಆದರೆ ಪ್ರಜ್ಞಾವಂತ ಮೋನನಿಗೆ ತಾನು ಮಾಡುತ್ತಿರುವುದು ಸರಿಯೇ ಎಂಬ ಸಂದೇಹ ಕಿತ್ತು ತಿನ್ನುತ್ತಿತ್ತು. ವೈಷ್ಣವ ಸಂಪ್ರದಾಯವಾದಿಗಳು ಮೋಹನ ಮನೆತನದವರು. ಗುಜರಾತಿಗಳು, ಜೈನರು ಯಾರೂ ಮಾಂಸ ಮದ್ಯ ಸೇವಿಸುತ್ತಿರಲಿಲ್ಲ. ತಾನು ಸೇವಿಸುವುದು ಸರಿಯೇ ಎಂಬ ಸಂಶಯ ಕಾಡುತ್ತಿತ್ತು. ಬಲಶಾಲಿಯೂ ಧೀಮಂತನೂ ಆಗಲು ಮಾಂಸ ತಿನ್ನುವುದೇ ಸರಿ ಎನಿಸುವುದು. ಮೊದಲ ಸಾರಿ ನದೀ ತೀರದಲ್ಲಿ ಗುಟ್ಟಾಗಿ ತಿಂದು ಮನೆಗೆ ಬಂದು ರಾತ್ರಿ ಮಲಗಿದಾಗ, ಏನೇನೋ ಕೆಟ್ಟ ಕನಸು ಕಾಣುವನು. ಜೀವಂತ ಕುರಿಮರಿ ಹೊಟ್ಟೆಯಲ್ಲಿ 'ಬ್ಯಾ ಬ್ಯಾ' ಎಂದು ಅರಚುತ್ತಿರುವಂತೆ ಭಾಸವಾಗುವುದು. ಸ್ವಪ್ನಾವಸ್ಥೆಯಿಂದ ಜಗ್ಗನೇ ಎದ್ದು ಹೊಟ್ಟೆ ಮುಟ್ಟಿ ನೋಡಿಕೊಳ್ಳುವನು. ಆದರೆ ಕ್ರಮೇಣ ಮಾಂಸ ಭಕ್ಷ್ಯ ನಾಲಿಗೆಗೆ ರುಚಿಯಾಗತೊಡಗಿತು. ಮೋಹನನ ಮನಸ್ಸಿನಮೇಲೆ ಮೋಹಪಾಶ ಬಿಗಿದಿದ್ದ ಮಿತ್ರ ಮಾಂಸವನ್ನು ರುಚಿಯಾಗಿ ಮಾಡಿಕೊಡತೊಡಗಿದ. ಚಕ್ಕಳದಂತೆ ತೋರಿದ ಮಾಂಸ ಸ್ವಾದಿಷ್ಟವಾಯಿತು.

ಮಾಂಸ ಸೇವನೆಗಿಂತ ಮಾತಾಪಿತೃಗಳನ್ನು ವಂಚಿಸುವುದು ದೊಡ್ಡ ಅಪರಾಧವೆನಿಸುತ್ತಿತ್ತು ಮೋನನಿಗೆ. ಮಾಂಸ ತಿಂದು ಬಂದ ದಿನ ಊಟ ಸೇರುತ್ತಿರಲಿಲ್ಲ. ತಾಯಿ ಊಟಕ್ಕೆ ಎಬ್ಬಿಸಿದಾಗ ನನಗೆ ಹಸಿವಿಲ್ಲವೆಂದು ಸುಳ್ಳು ಹೇಳಬೇಕಾಗುತ್ತಿತ್ತು. ವೈಷ್ಣವ ಸಂಪ್ರದಾಯದಲ್ಲಿ ಬೆಳೆದು ಬಂದ ಮಾತಾಪಿತೃಗಳಿಗೆ ಅಣ್ಣ ತಮ್ಮಂದಿರು ಮಾಂಸ ತಿಂದ ವಿಷಯ ತಿಳಿದರೆ ಅವರಿಗೆ ಹೃದಯಾಘಾತವೇ ಆಗಬಹುದು. ಬ್ರಿಟಿಷರೊಡನೆ ಕಾದಾಡಿ ಜಯಶೀಲರಾಗಬೇಕಾದರೆ ಎಲ್ಲ ಭಾರತೀಯರೂ ಮಾಂಸ ತಿನ್ನಬೇಕು. ಇದೇ ಸರಿ. ಆದರೆ ತನ್ನ ಪೋಷಕರಿಗೆ ಸುಳ್ಳು ಹೇಳುವುದು ಸರಿಯಲ್ಲ. ಈ ಹಿರಿಯರ ಕಾಟ ತಾನು ಹಿರಿಯನಾಗುವವರೆಗೂ ಸಹಿಸಿಕೊಳ್ಳಲೇಬೇಕು.

ವಯಸ್ಸಾಗಿ ಸ್ವತಂತ್ರನಾಗುವವರೆಗೆ ಮಾಂಸ ತಿನ್ನಲಾಗದು. ಆದರಿಂದ ಸುಳ್ಳು ಹೇಳಬೇಕಾದ ಪ್ರಮೇಯವೂ ತಪ್ಪುತ್ತದೆ. ವಯಸ್ಸಾದ ಮೇಲೆ ಗೋಪ್ಯಬಿಟ್ಟು ಬಹಿರಂಗವಾಗಿಯೇ ತಾನು ಮಾಂಸ ಸೇವಿಸುವುದಾಗಿ ತನ್ನ ಮಿತ್ರನಿಗೆ ತಿಳಿಸಿ ಅಂದಿನಿಂದ ಮಾಂಸ ಸೇವನೆ ಮೋಹನದಾಸ ಬಿಟ್ಟ.

ಇದೇ ಮೋಹನದಾಸ ಮಹಾತ್ಮನಾದ ಮೇಲೆ, ಮಾಂಸ ಸೇವನೆ ಅಂತಿರಲಿ ಗೋವು ಕರೆಯುವ ಅಮೃತವೆನಿಸಿಕೊಳ್ಳುವ ಹಾಲು ಪಶುಜನ್ಯವಾದುದರಿಂದ ಅದು ಶಾಕಾಹಾರವಾದೀತೆ ಎಂದು ಪ್ರಶ್ನಿಸತೊಡಗಿದ.

ಸತ್ಯವಂತ ಮೋಹನ

ಮೋಹನದಾಸ ಸುಮಾರು ತನ್ನ ಏಳನೆಯ ವಯಸ್ಸಿನಲ್ಲಿ ರಾಜಕೋಟೆಯಲ್ಲಿ ಪ್ರಾಥಮಿಕ ಶಾಲೆಗೆ ಸೇರಿದ. ತದನಂತರ ಪ್ರೌಢಶಾಲೆಯ ವಿದ್ಯಾರ್ಥಿಯಾದ. ಮೊದಲಿನಿಂದಲೂ ಸಂಕೋಚ ಪ್ರವೃತಿ. ಶಾಲೆಯಾಯ್ತು ಮನೆಯಾಯ್ತು. ಇತರ ವಿದ್ಯಾರ್ಥಿಗಳೊಂದಿಗೆ ಬೆರೆಯದೆ ಶಾಲೆ ಬಿಡುತ್ತಲೇ ನೇರವಾಗಿ ಮನೆಗೆ ಓಡಿಬರುವನು.

ಹೈಸ್ಕೂಲಿನ ಪ್ರಥಮ ವರ್ಷದ ಶಾಲೆಯಲ್ಲಿದ್ದಾಗ ಗಿಲ್ಸ್ ಎಂಬ ಶಾಲಾ ಇನ್‌ಸ್ಪೆಕ್ಟರ್ ಶಾಲೆಗೆ ಬಂದ. ಐದು ಪದಗಳನ್ನು ಹೇಳಿ ಅವನ್ನು ಸ್ಲೇಟಿನ ಮೇಲೆ ಬರೆಯುವಂತೆ ಹೇಳಿದ. 'ಕೆಟಲ್' ಎಂದು ಒಂದು ಪದ. ಇದರ ಕಾಗುಣಿತ ಮೋಹನನಿಗೆ ಸರಿಯಾಗಿ ಗೊತ್ತಿರಲಿಲ್ಲ. ತಪ್ಪು ಬರೆದ. ಪಕ್ಕದಲ್ಲಿಯೇ ತರಗತಿಯ ಉಪಾಧ್ಯಾಯರು ನಿಂತಿದ್ದರು. ತನ್ನ ಬೂಟಿನ ಕಾಲಿನಿಂದ ಮೋಹನನ ಕಾಲನ್ನು ತಾಗಿಸಿ, ತಪ್ಪು ಬರೆಯುತ್ತಿರುವೆ. ಪಕ್ಕದ ವಿದ್ಯಾರ್ಥಿ ಸರಿಯಾಗಿ ಬರೆದಿರುವನು. ಅವನ ಸ್ಲೇಟು ನೋಡಿ ನಿನ್ನ ತಪ್ಪು ಸರಿಪಡಿಸಿಕೋ ಎಂದು ಸೂಚಿಸಿದರು.

ಆದರೆ ಮೋಹನನಿಗೆ ಇದು ಸರಿತೋರಲಿಲ್ಲ. ಕಾಪಿ ಮಾಡುವುದು ತಪ್ಪು ಎಂದು ಅರಿತಿದ್ದ. ಆದ್ದರಿಂದ ಉಪಾಧ್ಯಾಯರ ಗೂಢ ಸೂಚನೆಯಂತೆ ನಡೆದುಕೊಳ್ಳಲಿಲ್ಲ. ಐವತ್ತು ವಿದ್ಯಾರ್ಥಿಗಳಲ್ಲಿ ತಪ್ಪು ಕಾಗುಣಿತ ಬರೆದವನು ಇವನೊಬ್ಬನೆ. ಗಿಲ್ಸ್ ಹೊರಟು ಹೋದ ಮೇಲೆ ತರಗತಿಯ ಉಪಾಧ್ಯಾಯ ಮೋಹನನನ್ನು ಮುಠ್ಠಾಳ, ನಾನು ಸನ್ನೆ ಮಾಡಿದರೂ ಪಕ್ಕದ ಹುಡುಗನ ಸ್ಲೇಟು ನೋಡಿಕೊಂಡು ತಪ್ಪು ತಿದ್ದಿಕೊಳ್ಳಲಿಲ್ಲವಲ್ಲ. ನೀನೆಂಥಾ ಮಡಯ ಎಂದು ಕೋಪಿಸಿದ. ಉಪಾಧ್ಯಾಯನ ಮಾತಿನಿಂದ ಮೋಹನ ದುಃಖಿತನಾದ. ತಾನು ಮಾಡಿದ್ದೇ ಸರಿ. ಉಪಾಧ್ಯಾಯ ತೋರುತ್ತಿರುವುದು ತಪ್ಪುದಾರಿ. ಫಲಪ್ರಾಪ್ತವಾಗದಿದ್ದರೂ ಚಿಂತೆಯಿಲ್ಲ. ಅಡ್ಡ ದಾರಿ ಹಿಡಿಯ ಬಾರದು. ನೇರವಾದ ದಾರಿಯನ್ನೇ ಹಿಡಿಯಬೇಕು ಎಂದು ಅವನು ನಿರ್ಧರಿಸಿದ್ದ. ಇಡೀ ಜೀವಮಾನದಲ್ಲಿ ಆದರಂತೆಯೇ ನಡೆದುಕೊಂಡ.

ಹಿಂದೂಗಳಲ್ಲಿ ಧೃವ, ಪ್ರಹ್ಲಾದ, ಹರಿಶ್ಚಂದ್ರ, ರಾಮ, ಕೃಷ್ಣ ಧರ್ಮರಾಯ ಇವರ ಕಥೆಗಳನ್ನು ಅರಿಯದವರು ಅಪರೂಪ. ತಲೆತಲಾಂತರಗಳಿಂದ ಅನೇಕ ಪೌರಾಣಿಕ ಕಥೆಗಳು ನಮ್ಮ ದೇಶದಲ್ಲಿ ಜನಜನಿತವಾಗಿವೆ. ಶಾಲೆಗೆ ಕಾಲಿಡದವರಿಗೂ ಅನಕ್ಷರಸ್ಥರಿಗೂ ಈ ಕಥೆಗಳು ತಿಳಿದಿರುತ್ತವೆ. ಇವೆಲ್ಲವೂ ಸತ್ಯಕ್ಕೆ, ಪರಮಾತ್ಮನ ಕರುಣೆಗೆ, ಧರ್ಮಕ್ಕೆ ಉನ್ನತ ಸ್ಥಾನ ಕೊಡುತ್ತವೆ. ಶ್ರವಣ ಮತ್ತು ಹರಿಶ್ಚಂದ್ರನ ಕಥೆಗಳು ಬಾಲ್ಯದಲ್ಲೇ ಮೋಹನನ ಮನಸ್ಸಿನ ಮೇಲೆ ಅಚ್ಚಳಿಯದ ಗಾಢ ಮುದ್ರೆ ಒತ್ತಿದುವು.

ಮೋಹನ ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಒಂದು ನಾಟಕ ಮಂಡಲಿ ಹರಿಶ್ಚಂದ್ರ ನಾಟಕ ಆಡಿದರು. ತಂದೆಯ ಅನುಮತಿ ಪಡೆದು ಅದೆಷ್ಟೋ ಸಾರಿ ನಾಟಕ ನೋಡಲು ಮೋಹನ ಹೋಗಿದ್ದ. ಇವನ ಮನಸ್ಸಿನ ಮೇಲೆ ತುಂಬ ಪರಿಣಾಮ ಬೀರಿತು. ನಾಟಕ ನೋಡುತ್ತಿದ್ದಾಗ ಸತ್ಯಕ್ಕಾಗಿ ಚಕ್ರವರ್ತಿ ಹರಿಶ್ಚಂದ್ರ ಪಡುತ್ತಿದ್ದ ಪಾಡನ್ನು ನೋಡಿ ಮೋಹನನ ಕಣ್ಣುಗಳಿಂದ ಕಣ್ಣೀರು ಕಾಲುವೆ ಹರಿದು ಹೋಗುವುದು. ತಾನೇ ಹರಿಶ್ಚಂದ್ರನಂತೆ ಕಲ್ಪಿಸಿಕೊಂಡು ಮನದಲ್ಲಿಯೇ ನಾಟಕ ಅಭಿನಯಿಸುವನು.

ಹರಿಶ್ಚಂದ್ರ ಅಯೋಧ್ಯೆಯ ರಾಜ. ಒಮ್ಮೆ ವಿಶ್ವಾಮಿತ್ರರಿಗೂ, ವಸಿಷ್ಠರಿಗೂ ಭೂಲೋಕದಲ್ಲಿ ಸತ್ಯವಂತರಿದ್ದಾರೆಯೇ ಎಂಬ ವಾದ–ವಿವಾದ ಬೆಳೆಯಿತು. ಹರಿಶ್ಚಂದ್ರ ತುಂಬ ಸತ್ಯವಂತ ಎಂದರು ವಸಿಷ್ಠರು. ಅವನ ಸತ್ಯ ಪರೀಕ್ಷೆ ಮಾಡಲು ಅವನಿಂದ ಅಪಾರ ಹಣ ಪಡೆಯುವ ವಾಗ್ದಾನ ಪಡೆದುಕೊಂಡ. ರಾಜ್ಯ ಕೋಶ ಎಲ್ಲ ಕೊಟ್ಟರೂ ಕೊಟ್ಟ ಮಾತಿನಂತೆ ಸಾಲ ತೀರಿಸಲು ಸಾಧ್ಯವಾಗಲಿಲ್ಲ. ಬಡ್ಡಿ ಕೊಡು ಎಂದು ನಕ್ಷತ್ರಿಕನೆಂಬ ಶಿಷ್ಯನನ್ನು ಇವರ ಹಿಂದೆ ಬೆನ್ನಟ್ಟಿ ಬಡ್ಡಿ ವಸೂಲಿಗೆ ನೇಮಿಸಿದ. ಹರಿಶ್ಚಂದ್ರ ತನ್ನ ಹೆಂಡತಿ ಚಂದ್ರಮತಿಯನ್ನೂ, ಮಗ ಲೋಹಿತಾಶ್ವನನ್ನು ಒಬ್ಬ ಬ್ರಾಹ್ಮಣನ ಮನೆಯಲ್ಲಿ ಊಳಿಗಕ್ಕೆ ನೇಮಿಸಿದ. ತಾನು ಸ್ಮಶಾನದ ಚಂಡಾಲನ ನೌಕರನಾದ. ಲೋಹಿತಾಶ್ವ ವಿಷಸರ್ಪ ಕಚ್ಚಿ ಸತ್ತ. ಕಾಶಿರಾಜನ ಮಗನನ್ನು ಕೊಲೆ ಮಾಡಿದ ಆಪಾದನೆ ಹೊರಿಸಿ, ಚಂದ್ರಮತಿಗೆ ಮರಣ ದಂಡನೆ ವಿಧಿಸಲಾಯಿತು. ಹರಿಶ್ಚಂದ್ರನೇ ಹೆಂಡತಿಯ ಶಿರಚ್ಛೇದ ಮಾಡಬೇಕಾಯಿತು. ಸತ್ಯವಂತನೂ ಕರ್ತವ್ಯ ಪಾಲಕನೂ ಆದ ಹರಿಶ್ಚಂದ್ರ ಹೆಂಡತಿಯ ಕತ್ತು ಕಡಿಯಲು ಕೊಡಲಿ ಎತ್ತಿದ. ವಿಶ್ವಾಮಿತ್ರ ಮತ್ತು ದೇವಾದಿದೇವತೆಗಳು ಇವನ ಸತ್ಯತೆಗೆ ಮೆಚ್ಚಿ ಮತ್ತೆ ಕಳೆದು ಕೊಂಡಿದ್ದ ರಾಜ್ಯ ಕೋಶ ಮತ್ತು ಮಗನಿಗೆ ಜೀವದಾನ ಮಾಡಿ ಎಲ್ಲವನ್ನೂ ಹಿಂದಿನಂತೆಯೇ ಉಳಿಸಿಕೊಟ್ಟರು.

ಅಕ್ಷರಶಃ ಹರಿಶ್ಚಂದ್ರನ ಕಥೆ ನಿಜವೆಂದೇ ಮೋಹನ ತಿಳಿದಿದ್ದ. ಎಲ್ಲರೂ ಹರಿ

ಶ್ಚಂದ್ರನಂತೆ ಸತ್ಯವಂತರಾಗಿ ಬಾಳಬಾರದೇಕೆ ಎಂಬ ಪ್ರಶ್ನೆ ರಾತ್ರಿ ಹಗಲು ಮೋಹನನ್ನು ಕಾಡತೊಡಗಿತು. ಹರಿಶ್ಚಂದ್ರನಿಗೆ ಪ್ರಾಪ್ತವಾದಂತೆ ಏನೇ ಕಷ್ಟ ಬರಲಿ, ಸತ್ಯವಂತನಾಗಿ ಬಾಳಬೇಕೆಂದು ಮೋಹನ ನಿಶ್ಚಯಿಸಿದ. ಹರಿಶ್ಚಂದ್ರ ಪಟ್ಟ ಕಷ್ಟಗಳನ್ನು ನೆನೆಸಿಕೊಂಡು ಅದೆಷ್ಟೋ ಕಣ್ಣೀರು ಸುರಿಸಿದ ಮೋಹನ.

ವಯಸ್ಸಾದ ಮೇಲೆ ಈ ಕಥೆ ಕೇವಲ ಕಾಲ್ಪನಿಕ ಎನಿಸಿತು ಗಾಂಧಿಯವರಿಗೆ. ಆದರೂ ಹರಿಶ್ಚಂದ್ರ ಮತ್ತು ಶ್ರವಣ ಜೀವಂತ ವ್ಯಕ್ತಿಗಳಂತೆ ಭಾಸವಾಗುತ್ತಾರೆ, ಎನ್ನುತ್ತಾರೆ ಗಾಂಧೀಜಿ. ಇಂದಿಗೂ ಇವರ ಕಥೆಗಳನ್ನು ಓದಿದರೆ ಅಂದಿನಂತೆಯೇ ಇಂದಿಗೂ ದುಃಖದಿಂದ ಮನಸ್ಸು ಕದಡಿಹೋಗುವುದರಲ್ಲಿ ಸಂದೇಹವಿಲ್ಲ ಎಂದಿರುತ್ತಾರೆ.

1925ರಲ್ಲಿ ಗಾಂಧೀಜಿ ಬಂಗಾಳದಲ್ಲಿ ಪ್ರವಾಸ ಮಾಡುತ್ತಿದ್ದರು. ನವಾಬ್ ಗಂಜಿನ ಹರಿಪಾದ ಬಾಬು ಶಾಲೆಗೆ ಬಂದರು. ಕೆಲವೇ ನಿಮಿಷ ಅಲ್ಲಿ ಇರಬಹುದಾಗಿತ್ತು. ಅಷ್ಟರಲ್ಲೇ ಶಾಲೆಯ ವಿದ್ಯಾರ್ಥಿಗಳಿಗೆ ಹಿತೋಕ್ತಿ ಹೇಳುವಂತೆ ಉಪಾಧ್ಯಾಯರು ಕೇಳಿಕೊಂಡರು. "ಎಲ್ಲರೂ ಖಾದಿ ಧರಿಸಿ. ಸುಳ್ಳು ಹೇಳಬೇಡಿ" ಎಂದರು. "ನಿಮ್ಮಲ್ಲಿ ಸದಾ ಸತ್ಯ ನುಡಿಯುವವರು ಮತ್ತು ಸುಳ್ಳು ಹೇಳದವರು ಕೈ ಎತ್ತಿ" ಎಂದರು. ಎರಡು ಮೂರು ಕೈಗಳು ಮಾತ್ರ ಮೇಲಕ್ಕೆ ಎದ್ದುವು. ತರುವಾಯ "ಸಮಯೋಚಿತವಾಗಿ ಸುಳ್ಳು ಹೇಳುವವರು ಈಗ ಕೈ ಎತ್ತಿ" ಎಂದರು. ಮೊದಲು ಐದಾರು ವಿದ್ಯಾರ್ಥಿಗಳು ಮಾತ್ರ ಕೈ ಎತ್ತಿದರು. ಗಾಂಧೀಜಿ ಹಾಗೆಯೇ ನೋಡುತ್ತಿದ್ದರು. ವಿದ್ಯಾರ್ಥಿಗಳು ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡರು. ಯಾರು ಕೈ ಎತ್ತುವರೋ ನೋಡೋಣವೆಂದು. ಆಮೇಲೆ ಧೈರ್ಯ ತಂದುಕೊಂಡು ಎಲ್ಲರೂ ಕೈ ಎತ್ತಿದರು.

ಗಾಂಧೀಜಿ ಹೇಳಿದರು, ತಾನು ಸುಳ್ಳಾಡುತ್ತಿರುವೆ ಎಂಬ ಅರಿವು ಸತ್ಯದ ಮೊದಲ ಹೆಜ್ಜೆ. ಇನ್ನು ಮುಂದು ಏನೇ ಬರಲಿ ಸುಳ್ಳು ಹೇಳಬಾರದು ಎಂದು ಮನಸ್ಸು ಮಾಡಿದವನು, ತನ್ನ ತಪ್ಪನ್ನು ಸರಿಪಡಿಸಿಕೊಳ್ಳಬಲ್ಲ. ಸುಳ್ಳಾಡುತ್ತಿದ್ದರೂ, ಸುಳ್ಳು ಹೇಳುತ್ತಿಲ್ಲ ಎಂದು ಆತ್ಮವಂಚನೆ ಮಾಡಿಕೊಳ್ಳುವವನು ತನ್ನ ತಪ್ಪನ್ನು ಎಂದಿಗೂ ತಿದ್ದಿಕೊಳ್ಳಲಾರ. ಅವನಿಗೆ ಭವಿಷ್ಯವಿರದು. ಅವನು ಸುಖವಾಗಿ ಬಾಳಲಾರ. ಕಡೆಗೆ ಎಲ್ಲರೂ ಸುಖವಾಗಿ ಬಾಳಲಿ ಎಂದು ಹರಸಿ ಹೊರಟರು ಅಲ್ಲಿಂದ.

ಗಾಂಧೀಜಿ ಆಶ್ರಮದಲ್ಲಿ ಎಲ್ಲರೂ ಆಶ್ರಮದ ನಿಯಮದಂತೆ ನಡೆದುಕೊಳ್ಳಬೇಕು. ಅಡುಗೆಯಲ್ಲಿ ಉಪ್ಪು ಖಾರ ಹುಣಿಸೆಹಣ್ಣು ಸಾಂಬಾರ ಪದಾರ್ಥಗಳನ್ನು ಬಳಸುವುದಿಲ್ಲ. ಬೇಕಾದವರು ಉಪ್ಪು ಸೇರಿಸಿಕೊಳ್ಳಬಹುದು. ಆಹಾರ ತೆಗೆದುಕೊಳ್ಳುವುದು ದೇಹದ ಬೆಳವಣಿಗೆಗೆ, ದೇಹಾರೋಗ್ಯಕ್ಕೆ. ನಾಲಿಗೆಯ ರುಚಿಗಾಗಿ ಅಲ್ಲ

ಆಹಾರ ತಯಾರಿಸುವುದಿಲ್ಲ. ಪ್ರತಿಯೊಬ್ಬರೂ ಏನಾದರೂ ಶ್ರಮದ ಕೆಲಸ ಮಾಡಲೇ ಬೇಕು. ಈ ರೀತಿಯ ಕಟ್ಟುಪಾಡುಗಳು ಹಲವು.

ಒಮ್ಮೆ ಆಶ್ರಮದ ಇಬ್ಬರೂ ಹುಡುಗಿಯರು ಸಮೀಪದ ಗೆಳೆಯರ ಮನೆಗೆ ಹೋಗಿ ಅಲ್ಲಿ ಮಾಡಿಕೊಟ್ಟ ಭಜಿ ಅಥವಾ ಜೊಂಡಾ ತಿಂದುಬಂದರು. ನೀವು ಅವರ ಮನೆಯಲ್ಲಿ ಏನಾದರೂ ತಿಂಡಿ ತೆಗೆದುಕೊಂಡಿರಾ ಎಂದು ಕೇಳಿದರು ಬಾಪೂ, ಹುಡುಗಿಯರು ಆಶ್ರಮಕ್ಕೆ ಮರಳಿದ ಮೇಲೆ. ಇಲ್ಲ ನಾವೂ ಏನನ್ನು ಸೇವಿಸಲಿಲ್ಲ ಎಂದರು ಅವರು. ಆಶ್ರಮವಾಸಿಗಳು ಅನುಮತಿಯಿಲ್ಲದೆ ಬೇರೆ ಏನೂ ತೆಗೆದುಕೊಳ್ಳುವಂತಿಲ್ಲ. ಈ ಬಾಲಕಿಯರು ಎರಡು ಅಪರಾಧ ಮಾಡಿದ್ದರು. ಮೊದಲನೆಯದು ಆಶ್ರಮ ನಿಯಮದ ವಿರುದ್ಧ ಉಪಹಾರ ಸ್ವೀಕರಿಸಿದ್ದು. ಎರಡನೆಯದು ತೆಗೆದುಕೊಂಡರೂ ಇಲ್ಲ ಎಂದು ಸುಳ್ಳು ಹೇಳಿದ್ದು. ಮೊದಲನೆಯದಕ್ಕಿಂತ ಎರಡನೆಯ ಅಪರಾಧ ಗಾಂಧಿಯವರ ದೃಷ್ಟಿಯಲ್ಲಿ ದೊಡ್ಡದು. ತಪ್ಪುಮಾಡುವುದು ಮಾನವನ ದೋಷ. ಆದರೆ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು ದೊಡ್ಡ ಗುಣ. ಹುಡುಗಿಯರು ಸುಳ್ಳಾಡಿದ್ದು ಗಾಂಧಿಯವರನ್ನು ನೋಯಿಸಿತು. ಇವರು ಮಾಡಿದ ಅಪರಾಧಕ್ಕಾಗಿ ಗಾಂಧೀಜಿ ಪ್ರಾಯಶ್ಚಿತ್ತವಾಗಿ ತಾವು ಎರಡು ದಿನ ಉಪವಾಸ ಮಾಡಿದರು. ಹುಡುಗಿಯರನ್ನು ದಂಡಿಸಲಿಲ್ಲ. ಅವರ ತಪ್ಪಿಗಾಗಿ ಇವರು ಶಿಕ್ಷೆ ಅನುಭವಿಸಿದರು.

'ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್, ನಬ್ರೂಯಾತ್ ಸತ್ಯಮಪ್ರಿಯಂ'. ಸತ್ಯವನ್ನು ನುಡಿ, ಪ್ರಿಯವಾದುದನ್ನು ನುಡಿ, ಅಪ್ರಿಯ ಸತ್ಯ ನುಡಿಯ್ರು ಬೇಡ. ಇದೊಂದು ಸಂಸ್ಕೃತದ ಹಿತವಚನ. ಅಪ್ರಿಯವಾದ ಸತ್ಯ ನುಡಿಯಬೇಡ ಎಂಬ ಮಾತನ್ನು ಗಾಂಧೀಜಿ ಒಪ್ಪರು. ಸತ್ಯ ಸದಾ ಪ್ರಿಯವಾಗಿಯೂ ಹಿತವಾಗಿಯೂ ಇರದು. ಮಾನವ ಗಾಂಧಿಯೂ ತಪ್ಪುಗಳನ್ನು ಮಾಡುತ್ತಿದ್ದ. ಆದರೆ ಮಾಡಿದ ತಪ್ಪನ್ನು ಒಪ್ಪಿಕೊಳ್ಳುವ ಧೈರ್ಯದ ಗುಣ ಬಾಲ್ಯದಿಂದಲೇ ಕಲಿತುಕೊಂಡ. ಒಮ್ಮೆ ರಾಜಕೀಯದಲ್ಲಿ ಮಾಡಿದ ಅಪರಾಧವನ್ನು ಹಿಮಾಲಯಾದಂಥಾ ಅಪರಾಧ ಮಾಡಿದೆ ಎಂದು ಒಪ್ಪಿಕೊಳ್ಳುವ ಎದೆಗಾರಿಕೆ ಅವರಿಗಿತ್ತು. ನುಡಿಯಲ್ಲೂ ನಡೆಯಲ್ಲೂ ಸತ್ಯವಿರಬೇಕು. ನುಡಿದಂತೆ ಗಾಂಧೀಜಿ ನಡೆದುಕೊಳ್ಳುವುದು ಖಂಡಿತ. ಕೊಟ್ಟ ವಚನದಂತೆ ಗಾಂಧೀಜಿ ನಡೆದುಕೊಳ್ಳುತ್ತಾರೆ ಎಂದು ಅವರ ವಿರೋಧಿಗಳಲ್ಲೂ ಭರವಸೆ ಮೂಡಿತ್ತು.

ಭಾರತ ಬಿಟ್ಟು ಹೊರಡಿ ಎಂದು ಬ್ರಿಟಿಷರನ್ನು ಗಾಂಧೀಜಿ ಆಗ್ರಹ ಪಡಿಸಿದರು. ಆಗ ಸರ್ಕಾರ ಇವರನ್ನು ಬಂಧಿಸಿ ಸೆರೆಮನೆಗೆ ಸೇರಿಸಿತು. ಮಾಡಿ ಇಲ್ಲವೇ ಮಡಿ ಕರೆ ಕೊಟ್ಟರು ಗಾಂಧೀಜಿ ದೇಶಕ್ಕೆ. ಸರ್ಕಾರದ ಆಸ್ತಿಪಾಸ್ತಿ ನಾಶಮಾಡುವ ವಿಧ್ವಂಸಕ ಕೃತ್ಯ ದೇಶದ ಅನೇಕ ಭಾಗಗಳಲ್ಲಿ ನಡೆದುವು. ಗಾಂಧೀಜಿ ವಿಧ್ವಂಸಕ ಕೃತ್ಯಗಳ ವಿರೋಧಿ

ಯಾಗಿದ್ದರು. ಆದರೆ ಆಗ ಇಂಡಿಯಾ ಸರ್ಕಾರದ ಗೃಹ ಮಂತ್ರಿಗಳಾಗಿದ್ದ ಸರ್ ರೆಜಿನಾಲ್ಡ್ ಮ್ಯಾಕ್ಸವೆಲ್ ಅವರು ಗಾಂಧೀ ಮತ್ತು ಅವರ ಸಹೋದ್ಯೋಗಿಗಳೂ ಹಿಂಸಾ ಕೃತ್ಯ ನಡೆಸುವ ಕಾರ್ಯಕ್ರಮ ಮೊದಲೇ ಹಾಕಿಕೊಟ್ಟು ತನಗೇನೂ ತಿಳಿಯದಂತೆ ನಟಿಸುತ್ತಿದ್ದಾರೆ ಎಂಬ ಇಲ್ಲದ ಸಲ್ಲದ ಆರೋಪ ಅವರ ಮೇಲೆ ಹೊರಿಸಿದರು. ಗಾಂಧೀ ಮನನೊಂದು ಉಪವಾಸ ಮಾಡಿದರು. ಈ ಸುದ್ದಿ ಜನರಲ್ ಸ್ಮಟ್ಸ್ ಅವರಿಗೆ ತಿಳಿಯಿತು. ಸ್ಮಟ್ಸ್ ಸರ್ಕಾರದ ವಿರೋಧವಾಗಿಯೇ ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ಸತ್ಯಾಗ್ರಹ ನಡೆಸಿದ್ದರು. ಗಾಂಧೀಜಿ ಎಷ್ಟು ಸತ್ಯವಂತರೆಂಬುದನ್ನು ಸ್ಮಟ್ಸ್ ಸ್ವಾನುಭವದಿಂದ ಚೆನ್ನಾಗಿ ತಿಳಿದಿದ್ದರು. ಜೈಲಿನಲ್ಲಿದ್ದಾಗ ಸ್ಮಟ್ಸ್ ಅವರಿಗೆ ಒಂದು ಜೊತೆ ಜೋಡು ಗಾಂಧೀ ಹೊಲೆದು ಕೊಟ್ಟಿದ್ದರು.

ಗಾಂಧೀಜಿ ವಂಚಕ, ಕಪಟಿ, ವಿದ್ರೋಹಿ ಎಂಬ ಆಪಾದನೆಯ ಮಾತುಗಳು ಸ್ಮಟ್ಸ್ ಅವರ ಗಮನಕ್ಕೆ ಬಂತು. ಗಾಂಧೀಯವರನ್ನು ನಾನು ಚೆನ್ನಾಗಿ ಬಲ್ಲೆ. ಗಾಂಧಿ ಬಗ್ಗೆ ಘಟಿಂಗ ಮೊದಲಾದ ಪದಗಳನ್ನು ಬಳಸುವುದು ಹೇಯ. ಆತ ತುಂಬ ದೊಡ್ಡ ವ್ಯಕ್ತಿ. ಸತ್ಯವಂತ, ನೀತಿವಂತ. ಪ್ರಪಂಚದ ಮಹಾ ಪುರುಷರ ಶ್ರೇಣಿಗೆ ಅವರು ಸೇರುತ್ತಾರೆ ಹೀಗೆಂದು ಸರ್ಕಾರದ ಬಾಯಿ ಮುಚ್ಚಿಸಿದರು.

ಸುಳ್ಳು ಹೇಳುವುದು ರಾಜಕೀಯದಲ್ಲಿ ಚಾಣಾಕ್ಷತೆ ಎನಿಸಿಕೊಳ್ಳುತ್ತದೆ. ಆದರೆ ಈ ಕ್ಷೇತ್ರದಲ್ಲೂ ಸತ್ಯ, ಧರ್ಮ, ನ್ಯಾಯಗಳಂತೆ ನಡೆದು ಕೊಳ್ಳುತ್ತಿದ್ದರು ಗಾಂಧೀಜಿ. ಸತ್ಯವಂತನಾಗಿ ಬಾಳಲು ತುಂಬ ಕಷ್ಟ ಅನುಭವಿಸಬೇಕಾಯಿತು. ಆದರೂ ಅವರ ಎದೆ ಗುಂದಲಿಲ್ಲ. ಸತ್ಯವನ್ನು ಅವರು ಅತ್ಯಂತ ಉನ್ನತ ಮಜಲಿಗೆ ಏರಿಸಿದರು. ಅವರಿಗೆ ಸತ್ಯವೇ ದೇವರು, ದೇವರೇ ಸತ್ಯ. ಸತ್ಯೋಪಾಸಕರಾಗಿ ಬಾಳಿದರು. ಸತ್ಯೋಪಾಸನೆ ಎಂದು ಅವರ ಅಪೂರ್ವ ಆತ್ಮಕಥೆ ಜಗದ್ವಿಖ್ಯಾತವಾಗಿದೆ. ತಾವು ಮಾಡಿದ ಅಪರಾಧ, ಎಸಗಿದ ಅಪಚಾರ, ಪಾಪಕಾರ್ಯಗಳನ್ನು ಮುಚ್ಚುಮರೆಯಿಲ್ಲದೆ ಪ್ರಕಟಿಸಲ್ಪಟ್ಟಿರುವ ಆತ್ಮಕಥನ ಜಗತ್ತಿನಲ್ಲಿ ಇದಕ್ಕೆ ಸಾಟಿಯಾದುದು ಬೇರೊಂದಿಲ್ಲ.

ಸರಳ ಜೀವನ

ಈಗಿನ ಕಾಲದ ತರುಣರ ಕಿಸೆಯಲ್ಲಿ ಏನಿಲ್ಲದಿದ್ದರೂ ಒಂದು ಬಾಚಣಿಗೆ ಇದ್ದೇ ಇರುತ್ತದೆ. ಎಲ್ಲಿ ಕನ್ನಡಿಕಂಡರೂ, ಬಾಚಣಿಗೆ ಹೊರ ತಗೆದು ಬಾಚಿಕೊಳ್ಳುವುದು ರೂಢಿಯಾಗಿದೆ.

ಮೋಹನದಾಸ ಗಾಂಧೀ ವ್ಯಾಸಂಗಕ್ಕಾಗಿ ಲಂಡನ್ನಿಗೆ ಹೋದ. ಅಲ್ಲಿನ ಜನರ ವೇಷ ಭೂಷಣ, ಆಹಾರ ವಿಹಾರ, ನಡೆನುಡಿ ಎಲ್ಲವನ್ನೂ ಗಮನಿಸುತ್ತಿದ್ದ. ಅವರಂತೆಯೇ ತಾನೂ ಆಗಬೇಕೆಂಬ ಆಸೆ ಅಂಕುರಿಸಿತು.

ಭಾರತದಿಂದ ತೆಗೆದುಕೊಂಡು ಬಂದಿದ್ದ ಉಡುಗೆ ತೊಡುಗೆ ಇಂಗ್ಲೆಂಡಿನ ನಾಗರೀಕ ಜೀವನ ಮಟ್ಟಕ್ಕೆ ಯೋಗ್ಯವೆನಿಸಲಿಲ್ಲ. ಹತ್ತು ಪೌಂಡು ವೆಚ್ಚ ಮಾಡಿ ಉನ್ನತ 'ಫ್ಯಾಷನ್' ಎನಿಸಿಕೊಳ್ಳುವ 'ಸೂಟ್' ಹೊಲಿಸಿಕೊಂಡ, ತಲೆಗೆ ಹ್ಯಾಟ್ ಕೊಂಡ, ಕತ್ತಿಗೆ 'ಟೈ' ಬಂತು. ಅದನ್ನು ಸರಿಯಾಗಿ ಕಟ್ಟುವುದೇ ಒಂದು ಕಲೆ. ಭಂಗಾರದ ಗಡಿಯಾರದ ಸರಪಳಿ ಕೋಟಿನ ಹೊರಗೆ ಕಾಣಿಸಿ ಕೊಳ್ಳುವುದು. ಕನ್ನಡಿಯ ಮುಂದೆ ನಿಂತು ತಲೆ ಬಾಚಿಕೊಳ್ಳಲು, ಟೈ ಕಟ್ಟಿಕೊಳ್ಳಲು ಸಾಕಷ್ಟು ಸಮಯ ಹಿಡಿಯುತ್ತಿತ್ತು. ಹ್ಯಾಟ್ ಏರಿಸಿ, ಇಳಿಸಿ ಕೊಂಡಾಗಲೆಲ್ಲ, 'ಕ್ರಾಪ್' ಕಡೆ ಕೈ ತಾನಾಗಿಯೇ ಸರಿಯುವುದು. ಭಾರತದಲ್ಲಿದ್ದಾಗ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವುದು ನಾಪಿತ ಕ್ಷೌರ ಮಾಡುತ್ತಿದ್ದ ಹೊತ್ತಿಗೆ ಮಾತ್ರ. ಆದೊಂದು ಅಪೂರ್ವ ಅವಕಾಶ.

ಕೇವಲ ಉಡುಪು ಮಾತ್ರವೇ ತನ್ನನ್ನು ನಾಗರೀಕನಾಗಿ ಮಾಡಲು ಸಾಲದು ಎಂದು ಉಪನ್ಯಾಸ ಮಾಡುವುದನ್ನು, ನೃತ್ಯ, ಸಂಗೀತ, ಪಿಟೀಲು ನುಡಿಸುವುದು, ಫ್ರೆಂಚ್ ಭಾಷೆಯಲ್ಲಿ ಮಾತನಾಡುವುದು ಕಲಿಯಲು ಗಾಂಧೀ ಹಣ ವ್ಯಯಿಸಲು ತೊಡಗಿದ. ಫ್ರೆಂಚ್ ಭಾಷೆ ಕಲಿಸಲು, ಭಾಷಣ ಕಲೆಯಲ್ಲಿ ಪಾರಂಗತನಾಗಲು ಪ್ರತ್ಯೇಕ ಉಪಾಧ್ಯಾಯರು. ನೃತ್ಯ, ಪಿಟೀಲು ಕಲಿಸಲು ಪ್ರತ್ಯೇಕ ಉಪಾಧ್ಯಾಯಿನಿ. ಹೀಗೆ ನಡೆಯಿತು ಮೂರು ತಿಂಗಳ ಕಾಲ. ಆದರೆ ಯಾವ ವಿದ್ಯೆಯನ್ನೂ ಕರಗತ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ.

ನೂತನ ವಿದ್ಯೆಗಳನ್ನು ಕಲಿಯಲು ಪ್ರಯತ್ನ ನಡೆಸುತ್ತಿದ್ದಾಗ, ಹಣ ವೆಚ್ಚ ಮಾಡುತ್ತಿದ್ದಾಗ ಕಿವಿಯಲ್ಲಿ 'ಹುಷಾರ್, ಜೋಕೆ', ಎಂಬ ಎಚ್ಚರಿಕೆ, ಗಂಟೆ ಬಾರಿಸಿತು. ಗಾಂಧೀ ಎಚ್ಚೆತ್ತು ಕೊಂಡ. ಎತ್ತ ಸಾಗುತ್ತಿರುವೆ ಎಂದು ಕಣ್ತೆಗೆದು ನೋಡಲು

ಪ್ರಾರಂಭಿಸಿದ. ದೊಡ್ಡವನ ಗುಣ ವ್ಯಕ್ತವಾಗುವುದು ಅವನ ನಡವಳಿಕೆ ಚಾರಿತ್ರ್ಯ ಗಳಿಂದ, ಬಾಹ್ಯದ ಪೋಷಾಕಗಳಿಂದ ಅಲ್ಲ ಎಂದು ಗ್ರಹಿಸಿದ.

ಕೂಡಲೆ ಭಾಷಣ ಮಾಡಲು ಕಲಿಸಿಕೊಡುತ್ತಿದ್ದ ಉಪಾಧ್ಯಾಯನಿಗೆ, ಇನ್ನು ಪಾಠ ಕಲಿಯಲು ಬರುವುದಿಲ್ಲ ಕ್ಷಮಿಸಿ ಎಂದು ಪತ್ರ ಬರೆದ. ಇದೇ ರೀತಿಯಲ್ಲಿ ನೃತ್ಯ ಕಲಿಸುತ್ತಿದ್ದ ಉಪಾಧ್ಯಾಯನಿಗೂ ಪತ್ರ ಹೋಯಿತು. ಪಿಟೀಲು ಕಲಿಸು ತ್ತಿದ್ದವಳಲ್ಲಿಗೆ ಸ್ವತಃ ತಾನೇ ಹೋಗಿ ವಾದ್ಯ ನುಡಿಸಲು ತಾನು ಬರುವುದಿಲ್ಲವೆಂದ. ಪಿಟೀಲನ್ನು ಮಾರಿಬಿಡುವಂತೆ ತಿಳಿಸಿದ. ಈ ತೀರ್ಮಾನಕ್ಕೆ ಬರಲು ಕಾರಣವೇನೆಂದು ಆಕೆಗೆ ತಿಳಿಸಿದ. ಈ ಪರಿವರ್ತನೆ ಒಳ್ಳೆಯದೆಂದು ಆಕೆಯೂ ಪ್ರೋತ್ಸಾಹಿಸಿದಳು.

ಬದಲಾವಣೆಯ ಪ್ರಯೋಗ ಎಲ್ಲ ಕ್ಷೇತ್ರಗಳನ್ನೂ ಆವರಿಸಿಕೊಂಡಿತು. ವೆಚ್ಚ ಮಾಡುತ್ತಿದ್ದ ಪ್ರತಿಯೊಂದು ಬಿಡಿ ಕಾಸಿಗೂ ಗಾಂಧಿ ಲೆಕ್ಕ ಇಡುತ್ತಿದ್ದ. ಟ್ಯಾಕ್ಸಿ, ಬಸ್ಸು ಇವಕ್ಕೆ ಹೆಚ್ಚು ವೆಚ್ಚ ಮಾಡುತ್ತಿದ್ದುದು ಗಮನಕ್ಕೆ ಬಂತು. ಇದುವರೆಗೂ ಆಂಗ್ಲ ಸಂಸಾರಿಗಳ ಮನೆಯಲ್ಲಿ ಅತಿಥಿಯಾಗಿ ಉಳಿಯುತ್ತಿದ್ದುದರಿಂದ ವೆಚ್ಚ ಅಧಿಕ ವಾಗುತಿತ್ತು. ಕುಟುಂಬದ ಕನ್ಯೆಯರನ್ನು ಭೋಜನಕೂಟಗಳಿಗೆ ಕರೆದುಕೊಂಡು ಹೋಗಬೇಕಾಗುತ್ತಿತ್ತು. ಅವರ ವೆಚ್ಚವನ್ನೂ ಇವನೇ ಭರಿಸಬೇಕು. ಈ ವೆಚ್ಚ ಕಡಿಮೆ ಮಾಡಲು ಪ್ರತ್ಯೇಕವಾಗಿ ಎರಡು ಕೊಠಡಿ ಬಾಡಿಗೆಗೆ ತೆಗೆದುಕೊಳ್ಳಲು ನಿರ್ಧರಿಸಿದ. ಅನಂತರ ಎರಡೇಕೆ ಎಂದು ಒಂದಕ್ಕೆ ಇಳಿಸಿದ. ಕಾಲೇಜಿಗೆ ಸಮೀಪ ದಲ್ಲಿ ಕೋಣೆ ಬಾಡಿಗೆಗೆ ಹಿಡಿದ. ಇದರಿಂದ ವಾಹನಕ್ಕೆ ಮಾಡುತ್ತಿದ್ದ ವೆಚ್ಚ ಇಳಿ ಯಿತು. ಎಲ್ಲಿಗಾದರೂ ಕಾಲು ನಡಿಗೆಯಲ್ಲೇ ಹೋಗಲು ಉಪಕ್ರಮಿಸಿದ. ದಿನಕ್ಕೆ ಅನಾಯಾಸವಾಗಿ ಎಂಟ-ಹತ್ತು ಮೈಲಿ ನಡೆಯುವ ಅಭ್ಯಾಸವಾಯಿತು. ಭಾರತ ದಿಂದ ತನ್ನಂತೆಯೇ ಕಲಿಯಲು ಬಂದಿದ್ದ ಬಡ ವಿದ್ಯಾರ್ಥಿಗಳ ಜೀವನಕ್ರಮ ಗಮನಿ ಸಿದ. ಹೋಟೆಲಿಗೆ ಊಟಕ್ಕೆ ಹೋಗುವುದಕ್ಕೆ ಬದಲಾಗಿ ತಾನೇ ಅಡುಗೆ ಮಾಡಿ ಕೊಳ್ಳಲು ನಿಶ್ಚಯಿಸಿದ. ಒಂದು ಸ್ಟೌವ್ ಮತ್ತು ಕೆಲವು ಪಾತ್ರೆ ಕೊಂಡ. ಕೆಲವು ಪುಸ್ತಕಗಳನ್ನು ಕೊಂಡು ತಿಂಡಿ ಮತ್ತು ಕೋಕೋ ಮಾಡಿಕೊಳ್ಳುವುದನ್ನು ಅಭ್ಯಸಿ ಸಿದ. ಕಾಫಿ, ಟೀ, ಸ್ಥಾನವನ್ನು ಕೋಕೋ ಆಕ್ರಮಿಸಿಕೊಂಡಿತು. ಊಟಕ್ಕೆ ಬ್ರೆಡ್ ಮತ್ತು ಬೆಣ್ಣೆ. ಸಾಂಬಾರ ಪದಾರ್ಥಗಳ ಬಳಕೆ ಬಿಟ್ಟ. ಒಂದೆರಡು ದಿನ ಮೊಟ್ಟೆ ಸೇವಿಸಿದ. ಆದರೆ ಮೊಟ್ಟೆಯೂ ಮಾಂಸಾಹಾರದ ವರ್ಗಕ್ಕೆ ಸೇರಿದ್ದು, ಮಾತೆಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳಲು, ಮೊಟ್ಟೆಯ ಸೇವನೆಯನ್ನು ತ್ಯಜಿ ಸಿದ. ಎಲ್ಲ ಪ್ರಯೋಗಗಳೂ ದೇಹಾರೋಗ್ಯ ಮತ್ತು ವೆಚ್ಚ ಕಡಿಮೆ ಮಾಡುವ ದೃಷ್ಟಿಯಿಂದ ನಡೆಯುತ್ತಿದ್ದುವು. ವೆಚ್ಚ ಅರ್ಧಕ್ಕರ್ಧ ಇಳಿಯಿತು. ಆರೋಗ್ಯ ಉತ್ತಮಗೊಂಡಿತು. ಬದುಕು ಬರಡಾಗಲಿಲ್ಲ. ಪ್ರಯೋಗಗಳಲ್ಲಿ ಉತ್ಸಾಹ ಮೂಡು

ತ್ತಿತ್ತು. ದೇಹಾತ್ಮಗಳ ನಡುವಿನ ಬದುಕು ತೃಪ್ತಿಕರವಾಗಿ ಅರ್ಥಗರ್ಭಿತವಾಯಿತು. ನಿತ್ಯದ ಬದುಕು ಸತ್ಯದ ಬದುಕಾಯಿತು. ದೇಹಾತ್ಮಗಳಿಗೆ ಶಾಂತಿ ಮತ್ತು ತೃಪ್ತಿ ಲಭಿಸಿತು. ಜೀವನ ಸರಳವಾಯಿತು.

ಗಾಂಧೀ ಅವರ ಪ್ರಯೋಗಗಳು ಕಡೆಯ ಉಸಿರು ಎಳೆಯುವವರೆಗೂ ನಡೆಯುತ್ತಲೇ ಇತ್ತು. ಆಹಾರ, ವಸ್ತ್ರ, ಉಡುಪು, ಪಕೃತಿಚಿಕಿತ್ಸೆ, ಸತ್ಯಾನ್ವೇಷಣ, ಗೋರಕ್ಷಣೆ, ಹರಿಜನೋದ್ಧಾರ. ಅವರು ಪ್ರಯೋಗ ನಡೆಸದ ಕ್ಷೇತ್ರವಿಲ್ಲ. ಆದಷ್ಟು ನಿಸರ್ಗ ನಿಯಮಗಳಿಗೆ ಅನುಗುಣವಾಗಿ ನೈಜ ಸರಳಜೀವನ ನಡೆಸುವುದು ಅವರ ಉದ್ದೇಶ. ಭೋಗಿಗಳು ಜೀವನದ ಸುಖ ಅನುಭವಿಸುವ ಚಿಂತೆಯಲ್ಲಿದ್ದರೆ, ಜೀವಾತ್ಮನನ್ನು ಈ ದೇಹಾತ್ಮನಲ್ಲಿ ಇರಿಸಿ ದೇಹ ಜೀವಗಳೆರಡನ್ನೂ ಉಳಿಸಿಕೊಂಡು ಬರಲು ಏನೇನು ತ್ಯಜಿಸಬಹುದು. ಈ ಚಿಂತೆ ಮತ್ತು ಪ್ರಯೋಗದಲ್ಲೇ ನಿರತರಾಗಿರುತ್ತಿದ್ದರು ಗಾಂಧೀಜಿ.

ಸರಳ ಜೀವನದ ಪ್ರಯೋಗ ಇಂಗ್ಲೆಂಡಿಗೇ ಮುಗಿಯಲಿಲ್ಲ. ದಕ್ಷಿಣ ಆಫ್ರಿಕಾಗೆ ಹೋದಾಗ ಅಲ್ಲಿಯೂ ಪ್ರಯೋಗ ಮುಂದುವರೆಯಿತು. ಇಂಗ್ಲೆಂಡಿನಲ್ಲಿ ಡಿಗ್ರಿ ಪಡೆದ ದೊಡ್ಡ ಬ್ಯಾರಿಸ್ಟರಿನ ಅಂತಸ್ತಿಗೆ ತಕ್ಕಂತೆ ಪಾಶ್ಚಾತ್ಯರ ಉಡುಪು, ಕೋಟು, ಷರಾಯಿ, ಷರಟು, ಕಾಲರ್, ಟೈ, ಟೋಪಿ, ಬೂಟ್ಸು ಎಲ್ಲವೂ ಧರಿಸುತ್ತಿದ್ದರು. ದಿನವಹಿ ಷರಟು, ಕಾಲರ್ ಬದಲಾಯಿಸಬೇಕು. ಎರಡು ಮೂರು ಡರ್ಜ ಷರಟು ಕಾಲರ್ ಅಗತ್ಯವಾಗುತ್ತಿತ್ತು. ಬಟ್ಟೆಯನ್ನು ಅಗಸನಿಗೆ ಮಡಿಮಾಡಲು ಕೊಡುತ್ತಿದ್ದರು. ಕಾಲಕ್ಕೆ ಸರಿಯಾಗಿ ಮಡಿಮಾಡಿದ ಬಟ್ಟೆ ಸಿಗುತ್ತಿರಲಿಲ್ಲ. ಅವನಿಗೆ ಕೊಡಬೇಕಾದ ಹಣವೂ ಕಡಿಮೆ ಏನೂ ಇರಲಿಲ್ಲ. ವೆಚ್ಚ ಇಳಿಸಲು ತಾವೇ ಬಟ್ಟೆ ಒಗೆದು ಇಸ್ತ್ರಿ ಮಾಡಿಕೊಳ್ಳುವುದು ಸರಿ ಎಂದು ತೀರ್ಮಾನಿಸಿದರು. ಬಟ್ಟೆ ಮಡಿಮಾಡುವ ಯಂತ್ರ, ಇಸ್ತ್ರಿ ಪೆಟ್ಟಿಗೆ, ಜೊತೆಗೆ ಮಡಿಮಾಡುವ ವಿಧಾನ ತಿಳಿಸುವ ಪುಸ್ತಕ ಕೊಂಡರು. ಹೆಂಡತಿ ಕಸ್ತೂರಿಬಾಗೂ ಗಂಜಿ ಹಾಕಿ ಇಸ್ತ್ರಿ ಮಾಡುವ ಕ್ರಮ ಕಲಿಸಿದರು.

ಕಾಲರ್ ಒಗೆದು ಗಂಜಿ ಹಾಕಿ ಇಸ್ತ್ರಿ ಮಾಡಿದರು. ಇಸ್ತ್ರಿ ಪೆಟ್ಟಿಗೆ ಹೆಚ್ಚಾಗಿ ಕಾದರೆ ಬಟ್ಟೆ ಸುಟ್ಟೀತೆಂಬ ಭಯದಿಂದ ಹೆಚ್ಚಾಗಿ ಕಾಯಿಸದೆ ಇಸ್ತ್ರಿ ಮಾಡಿ, ಕಾಲರ್ ಧರಿಸಿ ಕೋರ್ಟಿಗೆ ಹೋದರು. ಪರಿಣಾಮ ಗಂಜಿ ಹುಡಿ ಹುಡಿಯಾಗಿ ಬಟ್ಟೆಯ ಮೇಲೆ ಉದುರತೊಡಗಿತು. ವಕೀಲರು ಗೇಲಿ ಮಾಡಿ ನಗಲು ತೊಡಗಿದರು. ಸಾಕಷ್ಟು ಮಡಿವಾಳರ ಅಂಗಡಿಗಳಿವೆಯಲ್ಲ ಎಂದು ಕೆಲವರು. ವೆಚ್ಚ ಕಡಿಮೆ ಮಾಡುವ ಉಪಾಯ ಎಂದರು ಗಾಂಧೀಜಿ. ಹೋಗಲಿ ಹಾಸ್ಯ ಮಾಡಿ ನಕ್ಕು ನಲಿ

ಯಲು ಅವಕಾಶ ದೊರೆಯಿತಲ್ಲ ಎಂದು ವಿನೋದವಾಗಿ ಅವರ ಟೀಕೆಗಳನ್ನು ತೇಲಿಸಿ ಬಿಟ್ಟರು.

ಕುತ್ಸಿತ ಟೀಕೆಗೆ ಮಣಿಯಲಿಲ್ಲ. ಅಭ್ಯಾಸ ಮುಂದುವರೆಯಿತು. ಮಡಿವಾಳ ನಷ್ಟೇ ಪ್ರಾವೀಣ್ಯತೆ ಸ್ವಲ್ಪ ಕಾಲದಲ್ಲೇ ಪಡೆದರು. ಗೋಪಾಲಕೃಷ್ಣ ಗೋಖಲೆಯವರು ಜೋಹನ್ಸ್‌ಬರ್ಗಿಗೆ ದಯಮಾಡಿಸಿದ್ದರು. ರಾನಡೆ ಅವರು ಗೋಖಲೆಯವರಿಗೆ ಒಂದು ಶಲ್ಯ ಕೊಟ್ಟಿದ್ದರು. ಗುರುಗಳು ಕೊಟ್ಟ ಅಂಗ ವಸ್ತ್ರವೆಂದು ಅದನ್ನು ಜೋಪಾನವಾಗಿಟ್ಟುಕೊಂಡು ವಿಶೇಷ ಸಂದರ್ಭಗಳಲ್ಲಿ ಮಾತ್ರ ಅದನ್ನು ಗೋಖಲೆ ಬಳಸುತ್ತಿದ್ದರು. ಒಂದು ಔತಣ ಕೂಟಕ್ಕೆ ಹೋಗಲು ಅದನ್ನು ಬಳಸಬೇಕೆನಿಸಿತು. ಅದನ್ನು ಇಸ್ತ್ರಿಮಾಡಬೇಕಾಗಿತ್ತು. ನಾನು ಮಾಡಿಕೊಡುತ್ತೇನೆ ಎಂದರು ಗಾಂಧೀಜಿ. ನೀನು ಸಮರ್ಥ ವಕೀಲನೆಂದು ಒಪ್ಪಿಕೊಳ್ಳಬಲ್ಲೆ. ಆದರೆ ನೀನು ದಕ್ಷ ಮಡಿವಾಳ ನೆಂದು ಹೇಗೆ ಒಪ್ಪಿಕೊಳ್ಳುವುದು. ಗುರುಗಳು ಕೊಟ್ಟಿರುವ ಪವಿತ್ರ ವಸ್ತ್ರವನ್ನು ನೀನು ಹಾಳುಮಾಡಿಬಿಡಬಹುದು ಎಂದು ಸಂದೇಹಿಸಿದರು, ಗೋಖಲೆ. ಸಂಶಯ ಪಡಬೇಡಿ ನಿಮಗೆ ತೃಪ್ತಿಯಾಗುವಂತೆ ಮಾಡಿಕೊಡುತ್ತೇನೆಂದು ಅವರನ್ನು ಒಪ್ಪಿಸಿ, ಅಂತೆಯೇ ಕೆಲಸವನ್ನು ಸಮರ್ಪಕವಾಗಿ ಮಾಡಿಕೊಟ್ಟು ಗೋಖಲೆಯವರಿಂದ ಶಹ ಭಾಸ್ ಎನಿಸಿಕೊಂಡರು.

ಮುಖಕ್ಷೌರ ಮಾಡಿಕೊಳ್ಳುವುದನ್ನು ಗಾಂಧೀಜಿ ಕಲಿತಿದ್ದರು. ಆದರೆ ಯಾರೂ ಸ್ವತಃ 'ಕ್ರಾಪ್' ಮಾಡಿಕೊಳ್ಳುವುದಿಲ್ಲವಷ್ಟೆ. ವರ್ಣ ಸಾಂಕರ್ಯದ ದಕ್ಷಿಣ ಆಫ್ರಿಕ ದಲ್ಲಿ ಬಿಳಿಯ ಹಜಾಮರು ಕರಿಯರ ಕೂದಲನ್ನು ತೊಡರು. ತಾವೇ ಕತ್ತರಿ ತೆಗೆದು ಕತ್ತರಿಸಿಕೊಂಡರು. ಸಮನಾಗಿ ಕತ್ತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಹಾಗೆಯೇ ಕೋರ್ಟಿಗೆ ಹೋದರು.

ಕೇಳಬೇಕೆ ? ನಗುಪಾಟಲಿಗೆ. "ಏನು ಗಾಂಧೀ, ಇಲಿಗಳ ನಿಮ್ಮ ತಲೆ ಕೂದ ಲನ್ನು ತಿಂದಂತೆ ಕಾಣುತ್ತಿದೆಯಲ್ಲ" ಎಂದು ಹಾಸ್ಯ ಮಾಡಿದರು. ಬಳಿಯ ನಾಪಿತ ನನ್ನ ಕರಿಯ ಕೂದಲು ಮುಟ್ಟಲೊಲ್ಲ. ಹಾಗೂ ಕ್ರಾಪ್ ಮಾಡಿದರೆ ತನ್ನ ಗಿರಾಕಿ ಅವನು ಕಳೆದುಕೊಳ್ಳಬಹುದು. ಆದ್ದರಿಂದ ಸ್ವಯಂನಾಪಿತನಾಗಿ ನಾನೇ ಕೂದಲು ಕತ್ತರಿಸಿಕೊಂಡೆ ಎಂದರು. ಈ ಗಂಭೀರ ಉತ್ತರ ಅವರ ಬಾಯಿ ಮುಚ್ಚಿಸಿತು.

ದಕ್ಷಿಣ ಆಫ್ರಿಕದಲ್ಲಿ ಫೋನಿಕ್ಸ್ ಆಶ್ರಮ ಸ್ಥಾಪಿಸಿದನಂತರ ನೂತನ ಪ್ರಯೋಗ ಗಳು ಪ್ರಾರಂಭಿಸಿದುವು. ಬಡವರನ್ನು ಆದರ್ಶವಾಗಿ ಮಾಡಿಕೊಂಡು ಆ ಮಟ್ಟದಲ್ಲಿ ಜೀವನ ಸಾಗಿಸಬೇಕೆಂದು ಎಲ್ಲ ಆಶ್ರಮವಾಸಿಗಳೂ ತಿಳಿಸುತ್ತಿದ್ದರು. ಆಗಾಗ

ಗೌತಮಬುದ್ಧನನ್ನು ಸ್ಮರಿಸಿಕೊಳ್ಳುವರು. ಯುವರಾಜನಾಗಿ ಅತುಲೈಶ್ವರ್ಯವಂತನ ರಾಜಭೋಗ ನಡೆಸಬಹುದಾದ ಗೌತಮ ಭಿಕ್ಷುಕನಾದ. ತಾನೇ ಭಿಕ್ಷೆ ಬೇಡಿ ತಂದು ಉಣಬೇಕು. ಶಿಷ್ಯಮಂಡಲಿ ಭಿಕ್ಷೆ ತಂದರೂ ಸ್ವೀಕರಿಸ. ನಾಳೆಗಾಗಿ ಇಂದು ಶೇಖರಿಸಿ ಇಡುವುದು ಬೇಡ. ಅಹನ್ಯಹನಿ ಕಾಲಕ್ಷೇಪ. ಇದು ಅವನು ನಡೆಸುತ್ತಿದ್ದ ಜೀವನ. ಅಂತೆಯೇ ತಾನು ಜೀವನ ರಥ ಸಾಗಿಸಬೇಕೆಂಬ ಆಕಾಂಕ್ಷೆ ಗಾಂಧಿಯವರಿಗೆ. ಸಿಹಿ ಪದಾರ್ಥ, ಕಾಫಿ, ಟೀ ಬಿಟ್ಟರು. ಆಶ್ರಮಕ್ಕೆ ಸೇರಿದ ಜರ್ಮನಿಯ ಶ್ರೀಮಂತನ ಮನೋದೃಷ್ಟಿ ಇವರಂತೆಯೇ ಇತ್ತು. ಒಬ್ಬಂಟಿಗನಾದ ಆತ ಒಬ್ಬನಿಗಾಗಿ 1,200 ಪೌಂಡು ವ್ಯಯ ಮಾಡಿಕೊಳ್ಳುತ್ತಿದ್ದ. ಗಾಂಧಿಯವರೊಡನೆ ಜೊತೆಗೂಡಿದಮೇಲೆ ಇದು 120ಕ್ಕೆ ಇಳಿಯಿತು. ಇನ್ನೂ ಕಡಮೆ ಮಾಡಿಕೊಳ್ಳಲು ಪ್ರಯತ್ನಿಸತೊಡಗಿದ. ಹಾಲು ಅಗತ್ಯವೇ ಎಂಬ ಪ್ರಶ್ನೆ ತಲೆ ಹಾಕಿತು. ಗಾಂಧೀ ಮತ್ತು ಕಾಲೆನ್‌ಬೆಕ್ ಇಬ್ಬರ ಮತವೂ ಒಂದೇ, ಹಾಲು ಅನವಶ್ಯಕವೆಂದು. ಹಾಲು ಬಿಟ್ಟು ಹಣ್ಣು ಹಂಪಲು ನೆಲೆಗಡಲೆ ಮಾತ್ರ ತಮ್ಮ ಆಹಾರ ಮಾಡಿಕೊಂಡರು. ಅದೂ ಅತಿ ಕಡಮೆ ಬೆಲೆಯ ಫಲ. ಅತಿ ಬೆಲೆಯ ಸೇಬು, ಕಿತ್ತಲೆ, ದ್ರಾಕ್ಷಿ ಇವು ವರ್ಜ್ಯ.

ತಮ್ಮ ಬಟ್ಟೆಯನ್ನು ಅಗಸನಿಗೆ ಕಳುಹಿಸುವುದನ್ನು ನಿಲ್ಲಿಸಿದರು. ಆಶ್ರಮದಲ್ಲಿ ತಯಾರಾದ ಸಾಬೂನಿನಿಂದ ಆಶ್ರಮದಲ್ಲಿಯೇ ಬಟ್ಟೆ ಶುಚಿಯಾಗುವುದು. ಕಾಗದ, ಮಸಿ, ಗುಂಡುಸೂಜಿ ಯಾವುದನ್ನೂ ಪೋಲು ಮಾಡರು. ಇದು ಅಲ್ಪವೆಂದು ತೃಣೀಕರಿಸರು. ಫೌಂಟನ್‌ಪೆನ್ ಭಾರತದಲ್ಲಿ ತಯಾರಾಗುತ್ತಿರಲಿಲ್ಲ. ಆದ್ದರಿಂದ ಮಸೀಕುಡಿಕೆ, ಗರಿಯ ಲೇಖಣಿ ಬಳಸುವರು. ಸಹಿ ಮಾಡಲು ಫೌಂಟನ್‌ಪೆನ್ ಕೊಟ್ಟರೆ ಅದನ್ನು ಬಳಸರು. ಮಸೀ ಕುಡಿಕೆಯ ಕೆಲಸ ಮುಗಿಯುತ್ತಲೇ ಮಸಿಯನ್ನು ಸಣ್ಣ ಸೀಸೆಗೆ ಹಾಕಿ ಜೊತೆಯಲ್ಲಿ ಒಯ್ಯಲಾಗುವುದು. ಒಂದು ಬೊಂಬಿನ ಕೊಳವೆಯಲ್ಲಿ ಇವರ ಲೇಖನ ಸಾಮಗ್ರಿ, ಪೆನ್ಸಿಲ್, ಚಾಕು, ಕತ್ತರಿ ಹಾಕಿ ಜೊತೆಯಲ್ಲೇ ಸಾಗುವುದು. ಒಂದು ಸಣ್ಣ ಕೈಚೀಲ ಇವರ ಕಚೇರಿ.

ಬುದ್ಧಿ ಜೀವಿಗಳು ದೈಹಿಕ ಕೆಲಸ ಸಾಮಾನ್ಯವಾಗಿ ಮಾಡುವುದಿಲ್ಲ. ಮಾಡುವುದು ಅನಗತ್ಯ ಎಂಬ ಭಾವನೆ ಬೆಳೆದು ಬಂದಿದೆ. ಆದರೆ ಗಾಂಧೀಜೀ ಇದನ್ನು ಒಪ್ಪರು. ಪ್ರತಿಯೊಬ್ಬರೂ ಪ್ರತಿದಿನವೂ ದೈಹಿಕ ಕೆಲಸ ಮಾಡಲೇಬೇಕು. ಇದು ಅವರ ಆಶ್ರಮಗಳ ನಿಯಮ. ಫೋನಿಕ್ಸ್ ಮತ್ತು ಟಾಲ್‌ಸ್ಟಾಯಿ ಆಶ್ರಮದಲ್ಲಿದ್ದಾಗ ನೆಲ ಅಗೆದು ತರಕಾರಿ ಗಿಡಗಳನ್ನು ಅವರು ನೆಡುವರು. ಮುದ್ರಣಾಲಯದಲ್ಲಿ ಯಂತ್ರ ತಿರುಗಿಸುವರು, ಕಾಗದ ಜೋಡಿಸುವರು. ಎಲ್ಲ ಕೆಲಸಗಳಲ್ಲೂ ಸಹಪಾಠಿಗಳೊಂದಿಗೆ ಕೈಗೂಡಿಸುವರು. ಚರಖ ಬಳಕೆಗೆ ಬಂದ ಮೇಲೆ ತಾವು ಪ್ರತಿದಿನ ಒಂದು ಘಂಟೆ ಕಾಲವಾದರೂ ನೂಲುವರು. ಆಶ್ರಮದಲ್ಲಿ ಪ್ರತಿಯೊಬ್ಬರೂ ನೂಲುವುದು ಹಂಜಿ

ಮಾಡುವುದು, ಎಕ್ಕುವುದು ಯಾವುದಾದರೂ ಕೆಲಸ ಮಾಡುವರು. ಗಾಂಧೀಜಿ ದೀರ್ಘ ಕಾಲದ ನಿರಶನ ವ್ರತ ಕೈಗೊಳ್ಳುತ್ತಿದ್ದಾಗಲೂ, ವೈದ್ಯರ ಮಾತಿಗೂ ಕಿವಿಗೊಡದೆ ನೂಲುವರು. ಅತಿಥಿಗಳೂ ದೈಹಿಕದ ಕೆಲಸ ಮಾಡಬೇಕು. ಕಡೆಗೆ ಅಕ್ಕಿ, ಗೋಧಿಯಲ್ಲಿ ಬೆರೆತ ಸಣ್ಣ ಕಲ್ಲುಗಳನ್ನಾದರೂ ಆರಿಸಿ ತೆಗೆಯಬೇಕು. ಆಶ್ರಮದಲ್ಲಿ ಪ್ರತಿಯೊಬ್ಬರೂ ತಮ್ಮ ವಸ್ತ್ರ ತಾವೇ ಒಗೆದು ಮಡಿ ಮಾಡಿಕೊಳ್ಳಬೇಕು. ತಮ್ಮ ತಮ್ಮ ತಟ್ಟೆ ಬಟ್ಟಲು ತಾವೇ ತೊಳೆದುಕೊಳ್ಳಬೇಕು.

ಆಶ್ರಮದಲ್ಲಿ ಗೋಧಿ ನುಚ್ಚಿನ ಅನ್ನ ಒದಗಿಸಿಕೊಡುವ ಹೊಣೆ ಬಲವಂತ ಸಿನ್ಹನಿಗೆ ಒಪ್ಪಿಸಲಾಗಿತ್ತು. ಒಂದು ದಿನ ಗೋಧಿ ನುಚ್ಚು ಇಲ್ಲದೆ ಬೆಳಗಿನ ಉಪಾಹಾರಕ್ಕೆ ಅನ್ನ ತಯಾರಿಸಲಿಲ್ಲ. ಈ ವಿಷಯ ಗಾಂಧಿಯವರಿಗೆ ಮಧ್ಯಾಹ್ನದ ಮೇಲೆ ತಿಳಿದು ಬಂತು. ಬಲವಂತಸಿನ್ಹನನ್ನು ತಾರಾಟಗೆ ತೆಗೆದುಕೊಂಡರು. ಕೆಲವರು ಗೋಧಿಯ ಅನ್ನವಲ್ಲದೆ ಬೇರೆ ಏನೂ ತೆಗೆದುಕೊಳ್ಳುವುದಿಲ್ಲ, ಅವರ ಪಾಡೇನಾಗಬೇಕು ಎಂದು ಕೇಳಿದರು. ಗೋಧಿ ಇತ್ತು ಆದರೆ ನುಚ್ಚು ಇರಲಿಲ್ಲ. ಬೀಸಲು ಯಾರೂ ಇರಲಿಲ್ಲ. ಆಶ್ರಮದಲ್ಲಿ ಯಂತ್ರದಲ್ಲಿ ಅರೆದು ಹಿಟ್ಟು, ನುಚ್ಚು ಬಳಸರು. ಬೀಸುಕಲ್ಲಿನಲ್ಲಿ ಒಡೆದ ಗೋಧಿಯೇ ಆಗಬೇಕು. ಇದು ಸಿನ್ಹ ನೆಪ. ನಾಳೆಗೂ ನುಚ್ಚು ಇಲ್ಲ ಎಂದ ಪ್ರಭುದಾಸ. ನಾನಿರಲಿಲ್ಲವೇ, ನಡಿ ಹೋಗೋಣ ಎನ್ನುತ್ತ ಬರೆವಣಿಗೆಯ ಕೆಲಸ ನಿಲ್ಲಿಸಿ ಬೀಸಲು ಹೊರಟರು. ಬಲವಂತಸಿನ್ಹ ಮತ್ತು ಗಾಂಧೀ ಇಬ್ಬರೂ ಕೂಡಿ ಸ್ವಲ್ಪ ಹೊತ್ತು ಬೀಸಿದರು. ತಲೆತಗ್ಗಿಸುವಂತಾಯಿತು ಸಿನ್ಹನಿಗೆ.

ಜೈಲಿನಲ್ಲಿ ಚಮ್ಮಾರನ ಕೆಲಸ ಕಲಿತು ಒಂದು ಜೊತೆ ಮೆಟ್ಟು ಹೊಲೆದು ಜನರಲ್ ಸ್ಮಟ್ಸ್‌ಗೆ ಕಾಣಿಕೆಯಾಗಿ ಕಳುಹಿಸಿಕೊಟ್ಟರು. ಈ ಮಹಾಪುರುಷನ ಮೆಟ್ಟು ಮೆಟ್ಟುವ ಯೋಗ್ಯತೆ ತನಗಿಲ್ಲವೆಂದ ಸ್ಮಟ್ಸ್. ಅಂತೆಯೇ ಹೊಲಿಗೆ ಕಲಿತು ಇಂಗ್ಲೆಂಡಿನ ರಾಜಕುಮಾರಿಯ ಮದುವೆಗೆ ತಾನು ಕಸೂತಿ ಮಾಡಿದ ವಸ್ತ್ರವನ್ನು ತನ್ನ ಉಡುಗೊರೆಯಾಗಿ ಗಾಂಧೀಜಿ ಕಳುಹಿಸಿಕೊಟ್ಟರು. ತಾನು ಮಾಡದ ಕೆಲಸವನ್ನು ಇತರರಿಗೆ ಅವರು ಒಪ್ಪಿಸುತ್ತಿರಲಿಲ್ಲ. ತಾನು ಮಾಡಿ ಮಾರ್ಗದರ್ಶನ ನೀಡುವರು. ಮೊದಲು ಕೃತಿ, ಅನಂತರ ಮಾತು. ರಾಟೆಯಿಂದ ನೂಲುವುದನ್ನು ರೂಢಿಸಿಕೊಂಡ ಮೇಲೆ ತಮಗೆ ಮತ್ತು ತಮ್ಮ ಪತ್ನಿ ಕಸ್ತೂರಿಬಾಗೆ ಅಗತ್ಯವಾದ ಬಟ್ಟೆಗೆ ಬೇಕಾಗುವಷ್ಟು ನೂಲನ್ನು ತಾವೇ ನೂಲುತ್ತಿದ್ದರು. ಮಗನ್ ರಾಟೆಯಲ್ಲಿ ನೇಯಿಸಿ ತೊಡುತ್ತಿದ್ದರು. ಕಸ್ತೂರಿಬಾ ಕೊನೆಯ ಉಸಿರೆಳೆವಾಗ ಪತಿ ಗಾಂಧೀಜಿ ನೇದ ಸೀರೆಯುಡಿಸಿ ತಮ್ಮ ದಹನವಾಗುವಂತೆ ತಿಳಿಸಿದ್ದರಂತೆ. ಅಂತೆಯೇ ನಡೆಸಿಕೊಡಲಾಯಿತು.

1937 ರಲ್ಲಿ ಗಾಂಧೀಜಿ ವರ್ಧಾ ಆಶ್ರಮದಲ್ಲಿದ್ದಾಗ ಬೆಳಿಗ್ಗೆ ಮತ್ತು ಸಂಜೆ ಬರಿಗಾಲಿನಲ್ಲೇ ನಡೆಯುತ್ತಿದ್ದರು. ರಸ್ತೆ ಕಲ್ಲುಗಳಿಂದ ತುಂಬಿರುತ್ತಿತ್ತು. ಆದರೂ

ಪಾದರಕ್ಷೆಯಿಲ್ಲದೆ ನಡೆಯುವರು. ಬಂಗಾಳದ ನವಾಖಾಲಿಯಲ್ಲಿ ಹಿಂದು–ಮುಸ್ಲಿಂ ಗಲಭೆ ನಡೆದಾಗ, ಏಕಾಂಗಿಯಾಗಿ ಸಂಚರಿಸುತ್ತಿದ್ದಾಗ, ಜೋಡು, ಮರದ ಖಡಾವೆ ಕೆಲಕಾಲ ಬಳಸಿದರು. ಹಿಂದೂಗಳ ರಕ್ತದಿಂದ ತೊಯ್ದುಹೋದ ಈ ರುದ್ರ ಭೂಮಿಯ ಮೇಲೆ ಚಪ್ಪಲಿ ಧರಿಸಿಕೊಂಡು ನಡೆಯಬಾರದೆಂದು ಬರಿಯ ಕಾಲಿನಲ್ಲೇ ನಡೆಯುತ್ತಿದ್ದರು. ಕಲ್ಲುಮುಳ್ಳಿನ ಮೇಲೆ ನಡೆದು ಕಾಲಿನಿಂದ ನೆತ್ತರು ಸುರಿಯುವುದು. ಬಿಡಾರಕ್ಕೆ ಬರುತ್ತಲೇ ಬಿಸಿನೀರಿನಿಂದ ಕಾಲನ್ನು ತೊಳೆಯುವುದು ಮನೂ ಗಾಂಧಿಗೆ ಪ್ರತಿದಿನದ ಕೆಲಸ. ಇದನ್ನು ನೋಡಿ ಕೆಲವೊಮ್ಮೆ ಕಣ್ಣೀರು ಸುರಿಸುವಳು. ತಮ್ಮ ರಾಜಕೀಯ ಗುರು ಗೋಖಲೆ ನಿಧನರಾದ ವಾರ್ತೆ ಕೇಳಿ ಒಂದು ವರ್ಷ ಕಾಲ ಬರಿಗಾಲಿನಲ್ಲಿ ಭಾರತದಲ್ಲೆಲ್ಲ ಸಂಚರಿಸಿದರು.

ಅವರ ಅನುಯಾಯಿಗಳಲ್ಲಿ ಅನೇಕರು ಇವರ ಸರಳ ಜೀವನ ಮಾರ್ಗವನ್ನೇ ಅನುಸರಿಸುತ್ತಿದ್ದರು. ಕಾಂಗ್ರೆಸ್ಸಿನ ಇತಿಹಾಸ ಬರೆದಿರುವ ಪಟ್ಟಾಭಿ ಸೀತಾರಾಮಯ್ಯನವರು ಒಮ್ಮೆ ಬೆಂಗಳೂರಿಗೆ ದಯಮಾಡಿಸಿದ್ದರು. ವಿ. ಎಸ್. ನಾರಾಯಣ ರಾಯರು ಅವರಿಗೂ ಅಖಿಲ ಭಾರತ ದೇಶೀಯ ಸಂಸ್ಥಾನಗಳ ಪರಿಷತ್ತಿನ ಕಾರ್ಯದರ್ಶಿಗಳಾದ ಬಲವಂತರಾಯ್ ಮೆಹಥ ಅವರಿಗೂ ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರ ಮನೆಯಲ್ಲಿ ಔತಣ ಏರ್ಪಡಿಸಿದರು. ಸುಮಾರು ನೂರು ಅತಿಥಿಗಳಿಗೆ ದಿವ್ಯಭೋಜನ ಏರ್ಪಾಡಾಯಿತು. ಪಟ್ಟಾಭಿಯವರು ಕೊಟ್ಲದ ಅಕ್ಕಿ, ತಾಟಿ ಬೆಲ್ಲ, ಚಪಾತಿ, ಅನ್ನ, ಸಾರು, ಮಜ್ಜಿಗೆ, ಪಲ್ಯ, ಇಷ್ಟು ಮಾತ್ರ ಸೇವಿಸುತ್ತಿದ್ದರು. ಎಲ್ಲರಿಗೂ ಕೊಟ್ಟಣದ ಅಕ್ಕಿಯ ಅನ್ನ ಸಿದ್ಧಪಡಿಸಲಾಗಿತ್ತು. ಪಟ್ಟಾಭಿಯವರು ತಮ್ಮ ನಿಯಮದಂತೆ ಮಾತ್ರ ಆಹಾರ ಸ್ವೀಕರಿಸಿದರು. ಅಷ್ಟು ಅತಿಥಿಗಳಿಗೂ ಬೆಳ್ಳಿಯ ತಟ್ಟೆ, ಚಂಬು, ಲೋಟ ಇರಿಸಲಾಗಿತ್ತು. ಔತಣ ಮುಗಿದ ಮೇಲೆ ಐಶ್ವರ್ಯ ಪ್ರದರ್ಶನದ ಈ ಔತಣ ಏರ್ಪಡಿಸಿದ್ದಕ್ಕಾಗಿ ನಾರಾಯಣರಾಯರನ್ನು ಪಟ್ಟಾಭಿಯವರು ತರಾಟೆಗೆ ತೆಗೆದುಕೊಂಡರು. ಮೊದಲೇ ತಿಳಿದಿದ್ದರೆ ಆಹ್ವಾನ ಸ್ವೀಕರಿಸುತ್ತಲೇ ಇರಲಿಲ್ಲವೆಂದರು. ಪಾಪ, ನಾರಾಯಣರಾಯರಿಗೂ ಅದ್ದೂರಿಯ ವ್ಯವಸ್ಥೆಯಾಗುವುದೆಂದು ತಿಳಿದಿರಲಿಲ್ಲ.

ಜೈಲಿನಲ್ಲಿ ಥಾಲಿ, ಪಾಟು ಎಂದು ಎರಡು ತವರದ ಪಾತ್ರೆಗಳನ್ನು ಪ್ರತಿಯೊಬ್ಬರಿಗೂ ಕೊಡುತ್ತಾರೆ. ಒಂದರಲ್ಲಿ ಅನ್ನ ಮತ್ತೊಂದರಲ್ಲಿ ಹುಳಿ. ಬೇರೆ ಯಾವ ವ್ಯಂಜನವೂ ಇಲ್ಲ, ಪಾತ್ರೆಯೂ ಇಲ್ಲ. ಇಷ್ಟರಲ್ಲೇ ತೃಪ್ತರಾಗಬೇಕು. ಜೇಲಿನಲ್ಲಿ ಜೀವನ ಇಷ್ಟು ಸರಳ. ಒಂದು ಜೊತೆ ಚಡ್ಡಿ, ಜೊತೆ ಬಂಡಿ (ಅಥವಾ ಅರ್ಧ ತೋಳಿನ ಷರಟು) ಲಂಗೋಟ, ಟೋಪಿ, ಟವಲ್ ಎನ್ನಿಸಿಕೊಳ್ಳುವ ವಸ್ತ್ರ, ಜೀವನ ಎಷ್ಟು ಸರಳ ಜೈಲಿನಲ್ಲಿ. ಬೇಕು ಎಂದರೂ ಬೇರೆ ಏನೂ ಸಿಗದು. ತವರದ ಪಾತ್ರೆ

ಯಲ್ಲಿ ಹುಳಿ ಹಾಕಿ ಇಟ್ಟರೆ ಎಲ್ಲವೂ ಕಪ್ಪಾಗಿ ಹೋಗುವುದು. ಯರವಾಡ ಜೈಲಿ
ನಿಂದ ಬಿಡುಗಡೆಯಾಗಿ ಹೊರ ಬಂದಾಗ ಗಾಂಧಿಯವರಿಗೆ ಕಾಣಿಕೆಯಾಗಿ ಥಾಲಿ
ಪಾಟು ಕೊಡಲಾಯಿತು. ಇವೆರಡೂ ಗಾಂಧಿಯವರ ಸಂಗಾತಿಗಳಾದುವು. ಎಲ್ಲಿಗೆ
ಹೋದರೂ ಇವರ ಸಂಗಡ ಇವೆರಡು ಪಾತ್ರೆಗಳು ಅಲ್ಲದೆ, ಒಂದು ಹಿತ್ತಾಳೆಯ
ಥೂಕುದಾಣಿ. ಒಂದು ಹಿತ್ತಾಳೆಯ ಭಾರವಾದ ಲೋಟ, ಎರಡು ಮರದ ಚಮಚ
ಹೋಗುವುವು.

ಭಾರತದ ವೈಸರಾಯ್ ಲಾರ್ಡ್ ಮೌಂಟ್‌ಬೇಟ್ನ್ ಅವರ ಭವ್ಯ ಭವನದಲ್ಲಿ
ಗಾಂಧೀಜಿ–ವೈಸರಾಯರ ಮಾತುಕಥೆ ನಡೆಯುತ್ತಿತ್ತು. ಭವಿಷ್ಯ ಸ್ವತಂತ್ರ ಭಾರತದ
ರೂಪ–ರೇಷೆ ನಿರ್ಧರಿಸಲು. ಸಂಜೆ ಸೂರ್ಯಾಸ್ತಮಕ್ಕೆ ಮೊದಲು ಗಾಂಧೀಜಿ ತಮ್ಮ
ಸಂಜೆಯ ಊಟ ತೆಗೆದುಕೊಳ್ಳುವ ವಾಡಿಕೆ. ಹೊತ್ತು ಮೀರಿ ಹೋದರೆ ಅಂದು ಸಂಜೆ
ಊಟವಿಲ್ಲ. ಒಂದು ದಿನ ಸಂಜೆಯವರೆಗೂ ವಿಚಾರ–ವಿನಿಮಯ ಮುಂದುವರೆಯು
ತ್ತಲೇ ಇತ್ತು. ಗಾಂಧಿಯವರ ಬಿಡಾರಕ್ಕೆ ಊಟ ತರುವಂತೆ ಟೆಲಿಫೋನ್ ಕರೆ
ಹೋಯಿತು. ಭಾರತದ ಚಕ್ರವರ್ತಿಯ ಹಾಗೂ ಮೌಂಟ್‌ಬೇಟ್ನ್ ಅವರ ಸಂಬಂ
ಧಿಯೂ, ಮಹಾತ್ಮರ ಶಿಷ್ಯಳೂ ಆದ ಮೀರಾ ಬೆರ್ನ ಸ್ಲೇಡ್ ಗಾಂಧಿಯರ ಊಟ
ವನ್ನು ಕೈ ಚೀಲದಲ್ಲಿ ತೆಗೆದುಕೊಂಡು ಸಂಭಾಷಣೆ ನಡೆಯುತ್ತಿದ್ದ ಕೊಠಡಿಗೆ ಬಂದಳು.
ತಲೆಮುಂಡನ ಮಾಡಿಸಿಕೊಂಡು ಒರಟು ಖಾದಿ ಸೀರೆ ಧರಿಸಿದ್ದ ಮೀರಾಗೆ ತನ್ನ
ಮೋರೆಯನ್ನು ಬಂಧುವಾದ ವೈಸರಾಯರಿಗೆ ತೋರಿಸಲು ಸಂಕೋಚ. ತಂದಪರಿಕರ
ವೆಲ್ಲವನ್ನೂ ಮೇಜಿನ ಮೇಲೆ ಇರಿಸಿದಳು. ಮೌಂಟ್‌ಬೇಟ್ನ್ ಸಮೀಪಕ್ಕೆ ಬಂದು
ಎಲ್ಲವನ್ನೂ ಕುತೂಹಲದಿಂದ ವೀಕ್ಷಿಸತೊಡಗಿದರು. ಖಾರ ಹುಳಿ ಇಲ್ಲದ ಸಪ್ಪೆ ಪಲ್ಯ.
ಒಂದಿಷ್ಟು ರುಚಿ ನೋಡುವಿರಾ ಎಂದು ಹಾಸ್ಯ ಚಟಾಕಿ ಹಾರಿಸುತ್ತಾ ಗಾಂಧೀಜಿ
ಗಹನವಾದ ವಿಚಾರ ಮುಂದುವರಿಸುತ್ತ ಊಟ ಮುಗಿಸಿದರು. ಈ ಕಾಲಕ್ಕೆ ಖರ್ಜೂರ
ಮತ್ತು ಹಾಲು ಸೇವಿಸುತ್ತಿದ್ದರು. ಇವರ ಸರಳತೆ ನೋಡಿ ವೈಸರಾಯರು ವಿಸ್ಮಯ
ರಾದರು.

ಗಾಂಧೀಜಿ ಸಾಬೂನು ಬಳಸುತ್ತಿರಲಿಲ್ಲ. ಕಾಲಿಗೆ ತುಪ್ಪ, ಮೈಗೆ ಬಾದಾಮಿ
ತೈಲ ಹಾಕಿ ತಿಕ್ಕಿಸಿಕೊಳ್ಳುವರು. ತಲೆಗೆ ಎಣ್ಣೆ, ಅಂಗಾಲಿಗೂ ತುಪ್ಪ ಸವರಿ ಸ್ನಾನಕ್ಕೆ
ಮೊದಲು ಮೀರಾ ಬೆರ್ನ ಪಾದಗಳನ್ನು ಸೀಯುವಳು. ಅವರ ಮೈ ತಾಮ್ರದ ತಗಡಿ
ನಂತೆ ಕೆಂಪಾಗಿ ಹೊಳೆಯುವುದು. ದೇಹವನ್ನು ದಪ್ಪನೆಯ ಖಾದಿ ವಸ್ತ್ರದಿಂದ ಸ್ನಾನಾ
ನಂತರ ಒರಸಿಕೊಳ್ಳುವರು. ಕಟಿ ಸ್ನಾನ ತೆಗೆದುಕೊಳ್ಳುವಾಗ ಸಾಬೂನು, ಬ್ರಷ್
ಮತ್ತು ಕನ್ನಡಿಯಿಲ್ಲದೆ ದೇಶೀಯ ಕತ್ತಿಯಿಂದ ಮುಖ ಕ್ಷೌರ ಮಾಡಿಕೊಳ್ಳುವರು.
ಸ್ವದೇಶೀ ಸೇಫ್ಟಿರೇಜರ್ ಮತ್ತು ಬ್ಲೇಡ್ ತಯಾರಾಗುವವರೆಗೂ ಕತ್ತಿಯನ್ನೇ ಬಳಸು

ತ್ತಿದ್ದರು. ತುಣುಕು ಸಾಬೂನು, ಕಾಗದ, ತುಂಡು ಪೆನ್ಸಿಲ್, ಕರವಸ್ತ್ರ ಒಂದನ್ನೂ ಬಿಸಾಡರು. ಒಬ್ಬ ಆಶ್ರಮವಾಸಿ ತುಣುಕು ಸಾಬೂನು ಅಜಾಗರೂಕತೆಯಿಂದ ಕೆಳಗೆ ಹಾಕಿದುದಕ್ಕಾಗಿ ಅಂದು ಅರ್ಧ ಘಂಟೆ ಹಿತೋಪದೇಶ. ಜೊತೆಯಲ್ಲಿ ಆಶ್ರಮ ಭಜನಾವಲಿ, ಗೀತೆ, ಸಣ್ಣ ಆಂಗ್ಲ ಅರ್ಥಕೋಶ ಇರುವುದು. ಜೇವು ಅಥವಾ ಜಾಲಿ ಕಡ್ಡಿಯಿಂದ ಹಲ್ಲು ಮತ್ತು ವಸಡು ಶುಭ್ರಮಾಡಿಕೊಳ್ಳುವರು. ಬಾದಾಮಿಯ ಹೊರಸಿಪ್ಪೆ ಸುಟ್ಟು ಮಾಡಿದ ಇದ್ದಲಿನ ಪುಡಿಗೆ ಉಪ್ಪು ಸೇರಿಸಿ ತಯಾರಿಸಿದ ದಂತ ಧಾವನ ಬಳಸುವರು. ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲರು, ಗಾಂಧಿಯವರಿಗೆ ಒಂದು ಸಣ್ಣ ಗಂಧದ ಪೆಟ್ಟಿಗೆ ಮತ್ತು ಜಪಸರ ಕೊಟ್ಟಿದ್ದರು. ಈ ಗಂಧದ ಡಬ್ಬಿಯಲ್ಲಿ ಗುಂಡುಸೂಜಿ, ಕತ್ತರಿ, ಪೆನ್ಸಿಲ್ ಇವುಗಳನ್ನು ಇಡುತ್ತಿದ್ದರು. ಪ್ರತಿಯೊಂದು ಪದಾರ್ಥವನ್ನೂ ಅವುಗಳ ನಿರ್ದಿಷ್ಟ ಸ್ಥಾನದಲ್ಲಿಯೇ ಇರಿಸಬೇಕು. ಹಾಸಿಗೆಯ ಬಳಿ ಮಲಗುವ ಮುನ್ನ ಒಂದು ಶೀಷೆ ನೀರು, ಕೈ ತೊಳೆಯಲು ಜೇರ್ಸಿ, ಮಲವಿಸರ್ಜನೆಗೆ ಒಂದು ಮಡಕೆ ಇರಿಸಲಾಗುತ್ತಿತ್ತು. ಬಲಗಡೆ ಇರಿಸಬೇಕಾದ ಪದಾರ್ಥವನ್ನು ಎಡಗಡೆ ಇಟ್ಟರೂ ಕೋಪ ಮಾಡಿ ಕೊಳ್ಳುವರು.

ಆಶ್ರಮದಲ್ಲಿ ಕುರ್ಚಿ, ಮೇಜು, ಬೆಂಚು ಯಾವುದೂ ಇರಲಿಲ್ಲ. ಮುಕ್ಕಾಲಿಯ 'ಸ್ಟೂಲ್' ಒಂದು ಇರುವುದು. ಕೆಳಗೆ ಕೂಡಲು ಸಾಧ್ಯವಾಗದ ಪಾಶ್ಚಾತ್ಯರು ಬಂದಾಗ ಅವರಿಗಾಗಿ ಇದು ಮೀಸಲು. ಕುಳಿತು ಬರೆಯುವ ಶ್ಯಾನುಭಾಗರ ಇಳಿ ಜಾರು ಮೇಜು ಬಾಪೂ ಬಳಸುವರು. ಬೆನ್ನು ಸ್ವಲ್ಪವೂ ಬಾಗಿಸದೆ ನೆಟ್ಟಗೆ ಕುಳಿತು ಕೊಳ್ಳುವರು. ನೆಟ್ಟಗೆ ಕುಳಿಯಲು ಬೆನ್ನಿನ ಹಿಂದ ಹಲಗೆ ಮತ್ತು ದಿಂಬು ಇರಿಸಿ ಕೊಳ್ಳುವರು.

ಒಂದು ಕ್ಷಣವನ್ನೂ ಅವರು ವ್ಯರ್ಥ ಮಾಡುತ್ತಿರಲಿಲ್ಲ. ರಾತ್ರಿ 9ಕ್ಕೆ ಮಲಗು ವರು, ಉಷಃಕಾಲ 4ಕ್ಕೆ ಏಳುವರು. ಸ್ನಾನ ಮಾಡುವಾಗ, ಊಟ ಮಾಡುತ್ತಿರುವಾಗ, ನಡೆಯುವಾಗ ಬಂದವರೊಡನೆ ನಿರಂತರ ಮಾತು ನಡೆಯುತ್ತಿರುವುದು. ದೇಹಬಾಧೆ ತೀರಿಸಿಕೊಳ್ಳಲು ಕುಳಿತಾಗ ಮಾತ್ರ ಅವರು ಏಕಾಂಗಿ. ಆಗಲೂ ಕೈಯಲ್ಲಿ ಪತ್ರಿಕೆ ತೆಗೆದುಕೊಂಡು ಹೋಗುವರು.

1934ರಲ್ಲಿ ದಿಲ್ಲಿಯ ಕಿಂಗ್ಸ್‌ವೇ ಬಳಿಯಲ್ಲಿ ಗಾಂಧೀಜೀ ಬಿಡಾರ ಹೂಡಲು ಒಂದು ಮನೆಯನ್ನು ಬಾಡಿಗೆಗೆ ತೆಗೆದು ಕೊಳ್ಳಲಾಯಿತು. ಪ್ರೊಫೆಸರ್ ಮಲ್ಕಾನಿ ಮತ್ತು ಬಿಜುಕೃಷ್ಣ ಚಾಂದಿವಾಲ ವ್ಯವಸ್ಥೆಯ ಹೊಣೆ ಹೊತ್ತಿದ್ದರು. ಈ ಬಡಾವಣೆ ಯಲ್ಲಿ ಇದ್ದುದು ಒಂದೇ ಒಂದು ಮನೆ. ಇದನ್ನೇ ಬಾಪೂಜಿಯವರಿಗೆ ಮೀಸಲು. ಮಿಕ್ಕಾ ಪರಿವಾರಕ್ಕಾಗಿ ಡೇರೆಗಳನು ಹಾಕಲಾಯಿತು. ಗಾಂಧೀಜಿ ತಮ್ಮ ಬಿಡಾರ

ನೋಡಿ, ಇದೇನು ಅದ್ದೂರಿಯ ವ್ಯವಸ್ಥೆ. ಹುಲ್ಲು ಹೊದಿಸಿದ ಗುಡಿಸಲು ತನಗೆ ಸಾಕಾಗುತ್ತಿತ್ತು; ತಾನು ಹರಿಜನರ, ದರಿದ್ರನಾರಾಯಣನ ಪ್ರತಿನಿಧಿ ಎಂಬುದನ್ನು ಮಲ್ಕಾನಿ ಮರೆತಂತೆ ಇದೆ ಎಂದು ಕೋಪ ಮಾಡಿಕೊಂಡರು. ಅವರಿಗಾಗಿ ಟೇಪು ಕಟ್ಟಿದ್ದ ಮಂಚ ಕೊಳ್ಳಲಾಗಿತ್ತು. ಒಂದು ಚಾಪೆ ಅದರ ಮೇಲೆ ಒಂದು ಹಾಸಿಗೆ ಇದಕ್ಕಿಂತ ಹೆಚ್ಚು ಅನಗತ್ಯವಾಗಿತ್ತು. ಆರೋಗ್ಯಕ್ಕೆ ಅಗತ್ಯವೆನಿಸಿದರೆ ಮಂಚ ಬಳಸಲು ಅಭ್ಯಂತರವಿಲ್ಲ. ಆದರೆ ಮಂಚವಿಲ್ಲದೆ ಬಾಳಲು, ಸಾಧ್ಯವಾದಷ್ಟು ಕಾಲ, ಹಾಗೆ ಮಾಡಲು ತಾನು ಬಯಸುವುದಾಗಿ ತಿಳಿಸಿದರು. ಸಾಮಾನ್ಯರೂ ಚಾರ್‌ಪಾಯಿ, ಕಟ್ಟಲು ಅಥವಾ ಹುರಿಯ ಮಂಚ ಬಳಸುವುದಿಲ್ಲವೇ ಎಂದು ಮಲ್ಕಾನಿ ಪ್ರಶ್ನಿಸಿದಾಗ, ಅದಕ್ಕೆ ಉತ್ತರವಾಗಿ ಅವರಂತೆ ಆಹಾರ ಸೇವಿಸಲು, ವಸ್ತ್ರ ತೊಡಲು ಬಯಸದಿದ್ದರೂ ಮಂಚವನ್ನಾದರೂ ಬಳಸದೆ ತಮ್ಮ ಸಹೃದಯತೆ ಪ್ರದರ್ಶಿಸಬಹುದಲ್ಲ ಎಂದರು.

ದಕ್ಷಿಣ ಆಫ್ರಿಕದ ಭಾರತೀಯರ ಕುಂದು ಕೊರತೆ ಬ್ರಿಟಿಷ್ ಪ್ರಭುತ್ವ ಮತ್ತು ಪ್ರಜೆಯ ಮುಂದಿಡಲು 1909ರಲ್ಲಿ ಗಾಂಧೀಜಿ ಹಾಜಿ ಹಬೀಬರೊಡನೆ ಇಂಗ್ಲೆಂಡಿಗೆ ದಯಮಾಡಿಸಿದ್ದರು. ಆಗ ಲಂಡನ್ನಿನಲ್ಲಿದ್ದ ಭಾರತೀಯ ವಿದ್ಯಾರ್ಥಿಗಳು ಇವರನ್ನು ಬರಮಾಡಿಕೊಂಡು ಹಿತ ನುಡಿಯುವಂತೆ ಕೇಳಿಕೊಂಡಿದ್ದರು. ಸುಪ್ರಸಿದ್ಧ ಕ್ರಾಂತಿಕಾರರಾದ ವಿ.ಡಿ. ಸವಾರ್‌ಕರ್ ಮತ್ತು ವಿ.ವಿ.ಎಸ್. ಅಯ್ಯರ್ ಅವರ ಸಲಹೆಯಂತೆ ಭಾರತೀಯ ಪ್ರಮುಖರನ್ನು ಬರಮಾಡಿಕೊಂಡು ಭೋಜನ ಕೂಟ ಭಾರತೀಯ ವಿದ್ಯಾರ್ಥಿಗಳು ನಡೆಸುವ ವಾಡಿಕೆ ಇತ್ತು. ಆ ವರುಷ ಎಲ್ಲ ನಾಯಕರೂ ವಿದ್ಯಾರ್ಥಿಗಳ ಕೂಟಕ್ಕೆ ಬರಲು ನಿರಾಕರಿಸಿದ್ದರು. ಆದರೆ ಗಾಂಧೀಜಿ ಹೆಚ್ಚು ಒತ್ತಾಯಕ್ಕೆ ಅವಕಾಶ ಕೊಡದೆ ಬರಲು ಒಪ್ಪಿದರು. ಯಾವುದಾದರೂ ಹೊಟೇಲಿನಲ್ಲಿ ಔತಣ ಏರ್ಪಡಿಸುವ ಯೋಜನೆ ಇತ್ತು. ಆದರೆ ಇದು ಬೇಡ. ವಿದ್ಯಾರ್ಥಿಗಳು ಸ್ವತಃ ತಾವೇ ಭಾರತೀಯ ರೀತಿಯ ಶಾಖಾರದ ಭೋಜನ ಏರ್ಪಡಿಸುವಂತೆ ತಿಳಿಸಿದರು. ಈ ಕಾಲಕ್ಕೆ ಮುಂದೆ ಮದರಾಸು ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಗಳಾದ ಟಿ.ಎಸ್.ಎಸ್. ರಾಜನ್ ವೈದ್ಯಕೀಯ ವಿದ್ಯಾರ್ಥಿ ಆಗಿದ್ದರು. ಒಂದು ಹೊಟೇಲಿನ ಅಡುಗೆ ಮನೆ ಬಾಡಿಗೆಗೆ ಪಡೆದು ಅಡುಗೆ ಮಾಡುವುದರಲ್ಲಿ ವಿದ್ಯಾರ್ಥಿಗಳು ನಿರತರಾಗಿದ್ದರು. ಮಧ್ಯಾಹ್ನ ಎರಡು ಘಂಟೆಯ ಹೊತ್ತಿಗೆ ಒಬ್ಬ ಕೃಶಾಂಗಿ ಅಡುಗೆ ಮನೆಗೆ ಬಂದು, ತರಕಾರಿ ಹೆಚ್ಚುವುದು, ಪಾತ್ರೆ ತೊಳೆಯುವುದು ಮೊದಲಾದ ಕೆಲಸಗಳಲ್ಲಿ ಉತ್ಸಾಹದಿಂದ ತೊಡಗಿದ. ರಾತ್ರಿ ಏಳು ಘಂಟೆಯವರೆಗೆ ಎಲ್ಲರೊಡನೆ ದುಡಿದ. ಅಂದು ಸುಮಾರು 125 ವಿದ್ಯಾರ್ಥಿಗಳಿಗೆ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ವಿದ್ಯಾರ್ಥಿಗಳಿಗೆ ಪರಸ್ಪರ ಪರಿಚಯವಿರಲಿಲ್ಲ. ಇಷ್ಟು ಉತ್ಸಾಹದಿಂದ ಸಹಕರಿಸುತ್ತಿದ್ದವನು ಯಾರೆಂದು ಯಾರಿಗೂ ತಿಳಿಯಲಿಲ್ಲ. ವಿ.ವಿ.ಎಸ್. ಅಯ್ಯರ್ ಏಳು ಘಂಟೆಗೆ ಬಂದಾಗಲೇ ಗೊತ್ತಾದುದು, ಕೆಲಸ ಮಾಡುತ್ತಿದ್ದವರೇ ತಮ್ಮ ಸನ್ಮಾನ್ಯ ಅತಿಥಿ ಗಾಂಧೀಜಿ ಎಂದು.

ಚಾಂದೀವಾಲ ಒಂದೂವರೆ ರೂಪಾಯಿಗೆ ಮುರಾದಬಾದಿ ಥೂಕುದಾಣಿ ಕೊಂಡಿದ್ದ. ಇದು ಬಾಪೂಜಿ ಟೀಕೆಗೆ ಗುರಿಯಾಯಿತು. ಮೂರು ಕಾಸಿಗೆ ಸಿಗುವ ಮಡಕೆ ಕೊಳ್ಳಬಾರದಾಗಿತ್ತೆ ಎಂದು ರೇಗಿದರು. ದಿಲ್ಲಿಯ ಹರಿಜನ ನಿವಾಸದಲ್ಲಿದ್ದಾಗ ಪ್ರತಿ ಬೆಳಿಗ್ಗೆ, ಸಂಜೆ ಚಪ್ಪಲಿಯಿಲ್ಲದೆ ಕಲ್ಲುಗಳಿಂದ ತುಂಬಿದ್ದ ರಸ್ತೆಯಲ್ಲಿ ನಡೆಯುತ್ತಿದ್ದರು. ಆಶ್ರಮದಲ್ಲಿ ಕುಡಿಕೆ, ಮಡಿಕೆ ಮತ್ತು ದೊನ್ನೆ ಬಳಸುವ ಪ್ರಯೋಗವನ್ನೂ ನಡೆಸಿದರು.

1927 ರಲ್ಲಿ ತಮಿಳುನಾಡಿನ ಕಾರೈಕುಡಿಗೆ ಗಾಂಧೀಜಿ ಪ್ರವಾಸ ಮಾಡುತ್ತ ಬಂದರು. ದೊಡ್ಡ ಮಂಟಪ ಕಟ್ಟಲಾಗಿತ್ತು ಸ್ವಾಗತಕ್ಕೆ. ಆದರೆ ಅವ್ಯವಸ್ಥೆಯಿಂದ ವೇದಿಕೆಯ ಸಮೀಪಕ್ಕೆ ಬರಲು ಗಾಂಧಿಯವರಿಗೆ ಸಾಧ್ಯವಾಗಲಿಲ್ಲ. ಮೋಟಾರಿನಲ್ಲೇ ನಿಂತು ಆಭರಣ, ಮಾನಪತ್ರ ಮತ್ತು ಬೆಳ್ಳಿ ಬಂಗಾರದ ಕರಂಡಗಳನ್ನು ಸ್ವೀಕರಿಸಿ, ಉಪನ್ಯಾಸ ಮಾಡಿದರು. ಸಭೆ ಮುಗಿದ ಮೇಲೆ ನೋಡಿದಾಗ ಬೆಲೆಬಾಳುವ ಬಂಗಾರದ ಕರಂಡ ಮಾಯವಾಗಿತ್ತು. ಬೆಳ್ಳಿ, ಬಂಗಾರ, ಒಡವೆ ವಸ್ತುಗಳನ್ನು ನಾನೆಲ್ಲಿ ಜೋಪಾನ ಮಾಡಲಿ. ಈ ಜವಾಬ್ದಾರಿ ತಪ್ಪಿಸುವುದಕ್ಕಾಗಿಯೇ ಯಾರೋ ಪುಣ್ಯಾತ್ಮ ಅದನ್ನು ಒಯ್ದಿರಬೇಕು ಎಂದರು. ಸ್ವಲ್ಪವೂ ದುಃಖಿಸಲಿಲ್ಲ.

1931 ರಲ್ಲಿ ಕಾಂಗ್ರೆಸ್ ಮತ್ತು ಪ್ರಭುತ್ವದೊಡನೆ ಒಪ್ಪಂದ ಏರ್ಪಟ್ಟಾಗ ಒಪ್ಪಂದಕ್ಕೆ ಸಹಿ ಮಾಡಲು ವೈಸರಾಯಿ ಲಾರ್ಡ್ ಇರ್ವಿನ್ ತಮ್ಮ ಫೌಂಟನ್ ಪೆನ್ನು ತೆಗೆದುಕೊಟ್ಟರು. ಗಾಂಧೀಜಿ ಸ್ವೀಕರಿಸಲಿಲ್ಲ. ಹಕ್ಕಿಯ ಗರಿಯ ಲೇಖಣಿ ಕೇಳಿದರು. ಸಿಗಲಿಲ್ಲ. ಆಗ ಸಾಮಾನ್ಯ ಲೇಖಣಿ ತರಿಸಿ, ಶಾಯಿಯಲ್ಲಿ ಅದ್ದಿ ಸಹಿ ಮಾಡಿದರು. ವಿದೇಶೀ ಲೇಖಣಿ ಬಳಸಲು ನಿರಾಕರಿಸಿದರು.

ಮಕ್ಕಳಲ್ಲಿ ಮಮತೆ

ಮಕ್ಕಳೆಂದರೆ ಮಹಾತ್ಮರಿಗೆ ಪಂಚಪ್ರಾಣ. ದೇಶಕ್ಕೆ ಪಿತೃ ಸಮಾನರಾದ ಗಾಂಧೀಜಿ ಎಲ್ಲ ಮಕ್ಕಳಿಗೆ ತಂದೆ. ಬಾಪು, ತಂದೆ ಎಂದೇ ಅವರ ಪ್ರೀತಿಯ ಹೆಸರು. ಕಪಟವರಿಯದ ಹಸು ಮಕ್ಕಳೊಡನೆ ಮಾತನಾಡುವುದರಲ್ಲಿ, ಆಟವಾಡುವುದರಲ್ಲಿ ತಮ್ಮ ಸಂಕಟಗಳನ್ನೂ, ಜವಾಬ್ದಾರಿಯನ್ನು ಮರೆತುಬಿಡುವರು. ಪ್ರಧಾನಿ ಜವಾಹರಲಾಲರೂ ಹೀಗೆಯೇ.

ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾದ ಮಹಾತ್ಮಗಾಂಧೀಜಿ ಮತ್ತು ಅವರ ಕಾರ್ಯದರ್ಶಿ ಮಹದೇವ ದೇಸಾಯಿ 'ರಾಜಪುಟಾಣ' ಜಹಜಿನಲ್ಲಿ ದುಂಡುಮೇಜಿನ ಪರಿಷತ್ತಿಗೆ ಹೊರಟಿದ್ದರು. ಪ್ರಯಾಣ ಎರಡನೇ ದರ್ಜೆ. ಇದೇ ಕಡೆಯ ಶ್ರೇಣಿ ಆ ಜಹಜಿನಲ್ಲಿ. ಜಹಜಿನಲ್ಲೂ ಆಶ್ರಮದ ಕಾರ್ಯಕ್ರಮವನ್ನೇ ಅನುಸರಿಸುತ್ತಿದ್ದರು. ಬೆಳಿಗ್ಗೆ ಸಂಜೆ ಪ್ರಾರ್ಥನೆ, ನೂಲುವುದು, ಕಾಗದ ಪತ್ರಗಳ ವಿಲೇವಾರಿ ನಡೆಯುತ್ತಿತ್ತು. ಇಂಗ್ಲೆಂಡಿಗೆ ಹೋಗುತ್ತಿದ ಆಂಗ್ಲ ಸಂಸಾರಿಗಳ ಮಕ್ಕಳು ಗಾಂಧಿಯವರ ಸ್ನೇಹಿತರಾದರು. ಪ್ರಯಾಣಿಕರೆಲ್ಲರೂ ಪಾಶ್ಚಾತ್ಯ ಉಡುಗೆ ತೊಟ್ಟಿದ್ದರು. ತುಂಡು ಪಂಚೆ, ಮೇಲು ಹೊದ್ದಿಕೆಯ ಈ ವಿಚಿತ್ರ ಪ್ರಾಣಿ ಎಲ್ಲರನ್ನೂ ಆಕರ್ಷಿಸುತ್ತಿದ್ದರು. ಗಿರಗಿರನೆ ತಿರುಗುವ ರಾಟೆ ಮತ್ತೊಂದು ವಿಚಿತ್ರ ಮಕ್ಕಳಿಗೆ. ತಿರುಗುತ್ತಿರುವ ರಾಟೆಯ ಮುಂದು ಕುಳಿತು ಇದೇನು ತಾತ, ಇದೇಕೆ ನೂಲುತ್ತಿರುವೆ ಎಂದು ಪ್ರಶ್ನಿಸುವರು. ಮಕ್ಕಳಿಗೆ ಅರಿವಾಗುವಂತೆ ಖಾದಿಯ ಮಹತ್ವ ಬಾಪು ತಿಳಿಸುವರು. ಇವರ ಸಣ್ಣ ಕೋಣೆಯೊಳಕ್ಕೆ ಮಕ್ಕಳು ಇಣಿಕಿ ನೋಡುವರು. ಕೆಲವರು ಧೈರ್ಯ ಮಾಡಿ ಒಳಕ್ಕೆ ನುಗ್ಗುವರು. ಒಳ ಹೊಕ್ಕವರಿಗೆ ಖರ್ಜೂರ, ದ್ರಾಕ್ಷಿ ಗಾಂಧೀಜಿ ಕೊಡುವರು.

ಹೀಗೆ ಪ್ರಯಾಣ ಮಾಡುತ್ತ ಸೆಪ್ಟಂಬರ್ 12,1931ರಂದು ಗಾಂಧೀಜಿ ಲಂಡನ್ ತಲುಪಿದರು. ಬಡವರ ಬಡಾವಣೆ 'ಈಸ್ಟ್‌ಎಂಡಿ'ನಲ್ಲಿ ತನ್ನ ಕಿಂಗ್ಸ್‌ಲೆ ಮನೆಯಲ್ಲಿ ಉಳಿಯುವಂತೆ ಮುರಿಯಲ್ ಲೆಸ್ಟರ್ ಆಹ್ವಾನವಿತ್ತಿದ್ದರು. ಅಂತೆಯೇ ಮುರಿಯಲ್ ಲೆಸ್ಟರ್ ಆಹ್ವಾನ ಸ್ವೀಕರಿಸಿ ಅಲ್ಲಿಯೇ ಉಳಿದರು. ಇದು ಇತರ ಪ್ರತಿನಿಧಿಗಳ ಬಿಡಾರದಿಂದ ಬಹಳ ದೂರ. ಅವರ ಕೋರಿಕೆಯಂತೆ 'ನೈಟ್ಸ್ ಬ್ರಿಡ್ಜ್' ಸಮೀಪದಲ್ಲಿ ಕಚೇರಿ ಮಾಡಿಕೊಂಡರು. ಪ್ರತಿನಿಧಿಗಳೊಡನೆ ಮಾತು ಕಥೆ ಮುಗಿಸಿ, ರಾತ್ರಿ ಎಷ್ಟು ಹೊತ್ತಾದರೂ 'ಕಿಂಗ್ಸ್‌ಲೆ ಹಾಲಿ'ಗೆ ಮರಳಿ ಬರುವರು. ಇಲ್ಲಿಯೂ ಆಶ್ರಮದ ಕಾರ್ಯಕ್ರಮವೇ. ಲಂಡನ್ನಿನ ನಡುಗುವ ಚಳಿಯಲ್ಲಿ ಬೆಳಿಗ್ಗೆ ನಾಲ್ಕಕ್ಕೆ

ಪ್ರಾರ್ಥನೆ. ಮತ್ತೆ ಸಂಜೆ ಆರಕ್ಕೆ ಮಂಜು ಮುಸುಕುತ್ತಿರುವಾಗ ಸಾಯಂ ಪ್ರಾರ್ಥನೆ. ಈ ಚಳಿಯಲ್ಲೂ ಅದೇ ಉಡುಪು. ತುಂಡುಪಂಚೆ, ಖಾದಿ ಶಾಲು, ಕಾಲಿಗೆ ಚಪ್ಪಲಿ. ಬೆಳಿಗ್ಗೆ ಸಂಜೆ ಉದ್ದನೆಯ ಕೋಲು ಹಿಡಿದು, ಚಳಿಗಾಳಿ ಲೆಕ್ಕಿಸದೆ ಗಾಳಿ ಸಂಚಾರಕ್ಕೆ ಹೋಗುವರು. ಒಂದು ದಿನ ಒಬ್ಬ ತುಂಟ ಪೋರ,'ಲೇ, ಗಾಂಧೀ, ನಿನಗೆ ಷರಾಯಿ ಇಲ್ಲವೇ ? ನನ್ನ ಅಮ್ಮನನ್ನು ಕೇಳಿ ಒಂದು ಷರಾಯಿ ತಂದುಕೊಡಲೇ' ಎಂದು ಕೇಳಿದ. "ಆಗಬಹುದು. ಆದರೆ ನನಗೆ 40 ಕೋಟಿ ಮಕ್ಕಳಿದ್ದಾರೆ. ಅವರಲ್ಲಿ ಬಹು ಜನರಿಗೆ ಷರಾಯಿ ಇಲ್ಲ. ಅವರೆಲ್ಲರಿಗೂ ನಿಮ್ಮ ತಾಯಿ ಷರಾಯಿ ಕೊಟ್ಟರೆ ಆಗಬಹುದು" ಎಂದರು.

ಮತ್ತೊಂದು ದಿನ ಒಬ್ಬ ಹುಡುಗಿ ಪಕ್ಕದ ಪಾದಚಾರಿ ರಸ್ತೆಯ ಮೇಲೆ 'ಸ್ಕಿಪ್ಪಿಂಗ್' ಆಡುತ್ತಿದ್ದಳು. ಗಾಂಧೀಜಿ ಪಕ್ಕದಲ್ಲಿ ಹೋಗುತ್ತಿದ್ದರು. "ತುಂಬ ಚೆನ್ನಾಗಿ ಕುಪ್ಪಳಿಸುತ್ತಿರುವೆ. ನಿನ್ನಂತೆ ಆಡಲು ನನಗೆ ಬಾರದು. ಬಿಡುವಾದಾಗ ನನ್ನನ್ನು ನೋಡಲು ಬಾ. ನಾನು ನೆರೆಯಲ್ಲೇ ಇರುವೆ" ಎಂದರು.

ಹುಡುಗಿಗೆ ತುಂಬ ಸಂತೋಷವಾಯಿತು. ಮಾರನೆಯ ದಿನ ಬಾಪೂಜಿ ನೂಲು ತ್ತಿದ್ದಾಗ ಅವರಲ್ಲಿಗೆ ಹೋದಳು. "ಇದೇನು, ಇದೇಕೆ ನೂಲುತ್ತಿರುವಿರಿ" ಎಂದು ಪ್ರಶ್ನಿಸಿದಳು.

"ನಾನು ಬಡವ, ನಾನೇ ದಾರ ನೂತು, ಬಟ್ಟೆ ಮಾಡಿಕೊಳ್ಳುತ್ತೇನೆ."

"ಗಿರಣಿಗಳಿವೆಯಲ್ಲ. ನೀವೇಕೆ ನೂಲಬೇಕು. ನೀವು ಹುಸಿ ಮಾತನಾಡು ತ್ತೀರಿ. ನಾನು ನೋಡಿದ್ದೇನೆ. ನೀವು ದೊಡ್ಡ ದೊಡ್ಡ ಮೋಟಾರಿನಲ್ಲಿ ಸಂಚರಿಸು ತ್ತೀರಿ. ನಿಮ್ಮನ್ನು ನೋಡಲು ಅದೆಷ್ಟೋ ಜನ ಬರುತ್ತಾರೆ."

"ನಾನು ಸುಳ್ಳು ಹೇಳುವುದಿಲ್ಲ. ದೊಡ್ಡ ಮೋಟಾರಿನಲ್ಲಿ ಕುಳಿತು ಹೋಗು ವುದು ನಿಜ. ಅವು ನನ್ನದಲ್ಲ. ಇತರರ ಮೋಟಾರು. ಅದಂತಿರಲಿ ನಿನ್ನ ಹೆಸರೇನು".

"ನನ್ನ ಹೆಸರು ಮೇರಿ."

"ಎಷ್ಟು ಸೊಗಸಾದ ಹೆಸರು. ನಿನಗೆ ಗೊತ್ತಿಲ್ಲವೆ ? ನಿಮ್ಮ ರಾಣಿಯ ಹೆಸರೂ ಮೇರಿ."

ಗಾಂಧೀಜಿ ನುಡಿಯುತ್ತಿದ್ದ ಧಾಟಿಯಲ್ಲಿ ಮೇರಿಗೆ ತಾನೇ ರಾಣಿ ಎನಿಸಿತು.

"ಮೇರಿ, ಏಸುಕ್ರಿಸ್ತನ ತಾಯಿ. ಅವಳಲ್ಲಿ ಒಂದು ಕುರಿಮರಿ ಇತ್ತು. ನಿನ್ನಲ್ಲಿ ಇದೆಯೇ ?"

“ನನ್ನಲ್ಲಿ ಕುರಿಮರಿ ಇಲ್ಲ. ಆದರೆ ಬೆಕ್ಕಿನ ಮರಿ ‘ಟಾಂ’ ಇದೆ.”

“ಹಾಗಾದರೆ, ನಾಳೆ ಅದನ್ನು ನಿನ್ನೊಡನೆ ತೆಗೆದುಕೊಂಡು ಬಾ.”

ಮಾರನೆಯ ದಿನ ಬೆಕ್ಕಿನ ಮರಿಯನ್ನು ಕಂಕುಳಲ್ಲಿ ಇರುಕಿಸಿಕೊಂಡು ಅದೇ ವೇಳೆಗೆ ಮೇರಿ ಬಂದಳು. ಬಾಗಿಲ ಬಳಿ ಇದ್ದವರು ಅವಳನ್ನು ತಡೆದರು. ಗಾಂಧೀಜಿ ಆಗ ನೂಲುತ್ತಿದ್ದರು. ಮೇರಿಯನ್ನು ಒಳಕ್ಕೆ ಬಿಡುವಂತೆ ಸೂಚಿಸಿದರು. ಮಹಾತ್ಮರ ಸಂದರ್ಶನಕ್ಕೆ ಕಾದಿದ್ದವರು ಅದೆಷ್ಟೋ. ಮೇರಿ ನೆಟ್ಟಗೆ ಹೋಗಿ ಅವರ ಮುಂದೆ ಕುಳಿತಳು. ಒಂದರ ಮೇಲೊಂದರಂತೆ ಬಾಲಿಶ ಪ್ರಶ್ನೆಗಳನ್ನು ಕೇಳತೊಡಗಿದಳು. ಗಾಂಧೀಜಿ ನಗುತ್ತಾ ಎಲ್ಲಕ್ಕೂ ಸಾವಧಾನವಾಗಿ ಉತ್ತರ ಕೊಡುತ್ತಿದ್ದರು. ಒಂದು ಡಬ್ಬಿ ಎಳೆದುಕೊಂಡು ಮುಚ್ಚಳ ತೆಗೆದರು. ಅದರಲ್ಲಿ ಪಾಕ ಹಾಕಿದ ನೆಲಗಡಲೇ ಬೆಲ್ಲದ ಮಿಠಾಯಿ. ಒಂದು ತುಂಡು ಮುರಿದು, “ಇದು ನಮ್ಮ ದೇಶದ ಬಡವರ ಬಾದಾಮಿ, ಚಾಕಲೇಟ್, ಸ್ವಲ್ಪ ತಿಂದು ನೋಡು” ಎಂದು ಮೇರಿಯ ಕೈಯಲ್ಲಿಟ್ಟರು.

ಬಾಯಲ್ಲಿ ಹಾಕಿಕೊಂಡು, “ಸೊಗಸಾಗಿದೆ, ಟಾಮಿಗೂ ಸ್ವಲ್ಪ ಕೊಡಲೇ” ಎಂದಳು ಮೇರಿ. “ಓಹೋ ಕೊಟ್ಟು ನೋಡು. ಟಾಮಿಯೂ ತಿಂದಿತು.” ಟಾಮಿ ಬೆಕ್ಕಿನ ಮರಿ, ತುಂಬ ಪರಿಚಯವಿದ್ದಂತೆ, ಮಹಾತ್ಮರ ತೊಡೆ ಏರಿ ಕಣ್ಣು ಮುಚ್ಚಿ ಕುಳಿತುಬಿಟ್ಟಿತು.

ಗಾಂಧಿಯವರಿಗೆ ಭಗವಂತನ ಪ್ರಾರ್ಥನೆಯಲ್ಲಿ ತುಂಬ ವಿಶ್ವಾಸ. ನೀನು ದಿನವಹಿ ಪ್ರಾರ್ಥನೆ ಮಾಡುತ್ತೀಯಾ ಎಂದು ಕೇಳಿದರು ಮೇರಿಯನ್ನು. ತಾನು ಬೆಳಿಗ್ಗೆ ಊಟಕ್ಕೆ ಮೊದಲು ಮತ್ತು ಸಂಜೆ ಮಲಗುವಾಗ ಪ್ರಾರ್ಥನೆ ಮಾಡುವುದಾಗಿ ಮೇರಿ ತಿಳಿಸಿದಳು. ಎಲ್ಲಿ ಪ್ರಾರ್ಥನೆ ಹೇಳು ಎಂದರು ಬಾಪೂಜಿ. ಆಗ ಮೇರಿ ಬೈಬಲಿನಿಂದ ಪ್ರಾರ್ಥನೆ ಹಾಡಲು ಪ್ರಾರಂಭಿಸಿದಳು. ಗಾಂಧಿಯವರೂ ಅವಳ ಜತೆ ದನಿಗೂಡಿಸಿದರು. ಅಚ್ಚರಿಯಿಂದ ನೀವು ಕಿರಿಸ್ತಾನರೋ ಎಂದು ಮೇರಿ ಕೇಳಿದಳು. ತಾನು ಹಿಂದೂ ಎಂದರು ಗಾಂಧೀಜಿ.

ಮೇರಿ ಕೇಳಿದಳು – ನಿಮ್ಮ ದೇವರ ಹೆಸರೇನು.

ಗಾಂಧೀಜಿ – ನನ್ನ ದೇವರ ಹೆಸರು ಶ್ರೀರಾಮ. ನನ್ನ ದೇವರು, ನಿನ್ನ ದೇವರು ಎಲ್ಲ ಒಂದೇ. ದೇವರೊಬ್ಬನೇ. ನಾಮ ಬೇರೆ. ಏಸು, ರಾಮ, ರಹೀಮ, ಅಲ್ಲ ಎಲ್ಲವೂ ಒಂದೇ ದೇವರ ಹೆಸರು. ವಾಟರ್, ಪಾನಿ, ನೀರು ಎಲ್ಲ ಹೆಸರುಗಳೂ ಒಂದೇ ಪದಾರ್ಥವನ್ನು ಸೂಚಿಸುತ್ತವೆ. ಅಂತೆಯೇ ಭಗವಂತನ ಹೆಸರು. ಅಂದಿನ

ಮಾತು ಮುಗಿಯಿತು. ಹೊತ್ತಾಯಿತು. ಮೇರಿ ಬೆಕ್ಕಿನ ಮರಿಯನ್ನು ತೆಗೆದುಕೊಂಡು ಮನೆಗೆ ಹೋದಳು.

ಮಾರನೆಯ ದಿನದ ಪತ್ರಿಕೆಗಳಲ್ಲಿ ದಪ್ಪ ಅಕ್ಷರಗಳಲ್ಲಿ ದೊಡ್ಡ ಸುದ್ದಿ. ಅರ ಬೆತ್ತಲೆ ಫಕೀರ ಎಂ. ಕೆ. ಗಾಂಧಿ, ಭೋಜನ ಕೂಟದಲ್ಲಿ ಚಕ್ರವರ್ತಿಯೊಡನೆ ಒಂದೇ ಮೇಜಿನ ಮುಂದೆ ಕೂತು ಊಟ ಮಾಡಿದರು. ಬ್ರಿಟಿಷ್ ಚಕ್ರಾಧಿಪತ್ಯದ ಮಹಾ ಚಕ್ರವರ್ತಿಗೆ ಇದರಿಂದ ಅಪಮಾನ ಮಾಡಿದಂತೆ. ಆಹ್ವಾನಿತ ಎಲ್ಲ ಅತಿಥಿಗಳೂ ನಿಯಮದಂತೆ ಪೂರ್ಣ ಉಡುಪು ಧರಿಸಿ ಬಂದಿದ್ದರು. ಆದರೆ ಅರಬೆತ್ತಲೆ ಫಕೀರ ನಂತೆ ಗಾಂಧೀಜಿ ಒಬ್ಬರೇ ಸಾಮ್ರಾಟ್ ಚಕ್ರವರ್ತಿಯೊಡನೆ ಭೋಜನಕ್ಕೆ ಕೂಡು ವುದೇ? ರಾಜಭಕ್ತಿಯುತ ಬ್ರಿಟಿಷ್ ಪ್ರಜೆ ಈ ಅಪಮಾನ ಸಹಿಸರು. ಈ ರೀತಿ ಪ್ರಭುತ್ವವಾದಿ ಪತ್ರಿಕೆಗಳು ಉಲ್ಲೇಖಿಸಿದ್ದುವು.

ಮೇರಿಯ ತಂದೆ ಬ್ರಿಟಿಷ್ ಸೇನೆಯ ನಿವೃತ್ತ ಅಧಿಕಾರಿ. ಹಳೆಯ ಸಂಪ್ರ ದಾಯಕ್ಕೆ ಸೇರಿದವರು. ಚಕ್ರವರ್ತಿಯಲ್ಲಿ ಅಪಾರ ರಾಜಭಕ್ತಿ. ಈ ಸುದ್ದಿ ಓದಿ ಅವರಿಗೆ ತುಂಬ ಕೋಪ ಬಂತು. ಈ ತುಂಡುಮುಂಡು ಖಾದಿಧಾರಿ ಗಾಂಧಿಯನ್ನು ನೋಡಲು ನೀನು ಹೋಗಲಾಗದು, ಜೋಕೆ ಎಂದು ಮೇರಿಯನ್ನು ಗದರಿಸಿದರು. ತಂದೆಯ ಕೋಪ ನೋಡಿ ಮೇರಿ ಹೆದರಿ ಮೂಲೆ ಹಿಡಿದು ಅವಿತುಕೊಂಡಳು. ತಂದೆ ಅವಳನ್ನು ಹೊರಕ್ಕೆ ಎಳೆದು ಗಾಂಧಿಯವರನ್ನು ನೋಡಹೋಗುವುದಿಲ್ಲ ಎಂದು ವಚನ ತೆಗೆದುಕೊಂಡರು. ವಾಸ್ತವವಾಗಿ ಗಾಂಧಿಯವರನ್ನು ಕಾಣಲು ಮೇರಿ ಎಂದಿನಂತೆ ಅಂದೂ ಹೋಗಿದ್ದಳು. ಆದರೆ ಅವರನ್ನು ಕಾಣಲು ಸಾಧ್ಯವಾಗದೆ ಹಿಂತಿರುಗಿ ಬಂದಿದ್ದಳು. ಹಿಂದಿನ ದಿನದ ದರುಶನವೇ ಕಡೆಯ ಭೇಟಿಯಾಯಿತು.

ದ್ವಿತೀಯ ವಿಶ್ವ ಸಮರದಲ್ಲಿ ಮೇರಿಯ ಮನೆ ಜರ್ಮನ್ನರ ಬಾಂಬ್ ಧಾಳಿಗೆ ತುತ್ತಾಯಿತು. ತಂದೆ ತಾಯಿ ಇಬ್ಬರೂ ತೀರಿಕೊಂಡರು. ಜನತೆಯ ಸೇವೆಯಲ್ಲಿ ತನ್ನ ದುಃಖ ಮರೆಯಲು ಮೇರಿ ದಾದಿಯ ವೃತ್ತಿ ಹಿಡಿದಳು. ಬಾಂಬ್ ಧಾಳಿ ಯಿಂದ ಮನೆ ನಾಶವಾಯಿತೆಂದು ಬ್ರಿಟಿಷ್ ಸರ್ಕಾರ ಅವಳಿಗೆ ಸ್ವಲ್ಪ ಹಣ ಕೊಟ್ಟಿತು. ಈ ಹಣದಿಂದ ಒಂದು ಪುಸ್ತಕ ವ್ಯಾಪಾರದ ಅಂಗಡಿ ಪ್ರಾರಂಭಿಸಿದಳು. ಇಂಡಿಯನ್ ಬುಕ್ ಷಾಪ್ ಎಂದು ಹೆಸರಿಟ್ಟಳು. ಗಾಂಧಿಯವರ ಪುಸ್ತಕಗಳನ್ನು ಓದಿದಳು. ಓದಿದಷ್ಟೂ ಗಾಂಧಿಯವರಲ್ಲಿ ಭಕ್ತಿಗೌರವ ಅಧಿಕವಾಗುತ್ತಾ ಬಂತು. ತನ್ನ ಹದಿ ನೆಂಟನೆಯ ವಯಸ್ಸಿನಲ್ಲಿ ಮಾಂಸಾಹಾರ ತ್ಯಜಿಸಿದಳು. ಬ್ರಿಟನ್ನಿಗೆ ಕಲಿಯಲು ಬಂದ ವಿದ್ಯಾರ್ಥಿಗಳಲ್ಲಿ ಹಲವರು ಮಾಂಸಾಹಾರ, ಸುರಾಪಾನದ ಚಟಕ್ಕೆ ಗುರಿ ಯಾಗುತ್ತಿದ್ದುದು ಅವಳಿಗೆ ತುಂಬ ದುಃಖ ಕೊಡುತ್ತಿತ್ತು. ಈ ದುಷ್ಟ ಚಟಗಳನ್ನು ತೊರೆಯುವಂತೆ ಪ್ರಚಾರ ಮಾಡುತ್ತಿದ್ದಳು. ದಾದಿಯಾಗಿ ಬಡವರ ಸೇವೆ ಸಲ್ಲಿಸಲು

ಸಂಸಾರ ಅಡ್ಡಿಯಾದೀತೆಂದು ಮದುವೆ ಮಾಡಿಕೊಳ್ಳಲಿಲ್ಲ. ಸೇವೆಯಲ್ಲೇ ಜೀವಮಾನ ಕಳೆದಳು.

ಗಾಂಧಿಯವರ ಕೊಲೆ ಸುದ್ದಿ ಕೇಳಿ ತುಂಬ ಪರಿತಪಿಸಿದಳು. ಅತ್ತಳು. ಭಾರತ ಸರ್ಕಾರದ 'ಇಂಡಿಯಾ ಹೌಸ್'ಗೆ ತೆರಳಿ, ಗಾಂಧಿಯವರ ಭಾವಚಿತ್ರದ ಅಡಿ ಪುಷ್ಪಗಳನ್ನಿತ್ತು ದುಃಖಾಂಜಲಿ ಸಮರ್ಪಿಸಿದಳು. ದಿಲ್ಲಿಯ ಗಾಂಧೀ ಸಮಾಧಿಯ ಮೇಲೆ ಪುಷ್ಪಗಳನ್ನಿರಿಸಲು ಹಣ ಕಳುಹಿಸಿಕೊಟ್ಟಳು. ಕಡೆಯವರೆಗೂ ಗಾಂಧಿಯವರ ಅನುಯಾಯಿ ಆಗಿ ಉಳಿದಳು.

ವರ್ಧಾ ಆಶ್ರಮವಾಸಿಗಳಾದ ಚೌಧುರಿ ಮತ್ತು ಅಂಜನಾದೇವಿಯರ ಮಗಳು ಸುಭದ್ರೆ. ಆರು ವರ್ಷದ ಮಗು. ತಕಲಿಯಿಂದ ನೂಲುವುದನ್ನು ಕಲಿತಿದ್ದಳು. ಬಾಪೂಜಿ ರಾಟೆಯಿಂದ ನೂಲುತ್ತಿದ್ದುದನ್ನು ಒಂದು ದಿನ ನೋಡಿದಳು. ರಾಟೆಯಿಂದ ವೇಗವಾಗಿ ಹೆಚ್ಚು ದಾರ ತೆಗೆಯುವುದನ್ನು ಅವಳು ಗಮನಿಸಿದಳು. ತಾನೂ ಚರಖದಿಂದ ನೂಲಬೇಕೆಂದು ಅನಿಸಿತು. ದೊಡ್ಡವರಂತೆ ಮಾಡಬೇಕೆಂಬ ಬಯಕೆ ಮಕ್ಕಳಿಗೆ ಸಹಜ. ಬಾಪೂ ಗಾಳಿ ಸಂಚಾರಕ್ಕೆ ಹೊರಟ ಸಮಯ ನೋಡಿಕೊಂಡು ಅವರ ಬಳಿಗೆ ಓಡಿದಳು. "ನಾನೂ ರಾಟೆಯಿಂದ ನೂಲಬೇಕು ನಿಮ್ಮ ರಾಟೆ ನನಗೆ ಕೊಡಿ" ಎಂದು ಕೇಳಿದಳು. "ನಿನ್ನ ಪುಟಾಣಿ ಕೈಗಳಿಂದ ದೊಡ್ಡ ರಾಟೆ ತಿರುಗಿಸಲು ಆಗದು" ಹೀಗೆ ಸಮಾಧಾನ ಹೇಳಿದರು ಬಾಪು. "ದೊಡ್ಡ ರಾಟೆ ತಿರುವಲು ಆಗದಿದ್ದರೆ ಸಣ್ಣದು ಕೊಡಿ" ಎಂದಳು ಸುಭದ್ರೆ. "ಆಗಲಿ, ನೋಡೋಣ" ಎಂದು ಹೇಳಿ, ಮುಂದೆ ಹೆಜ್ಜೆ ಹಾಕಿದರು.

ಸುಭದ್ರೆ ಇಷ್ಟರಿಂದ ತೃಪ್ತಳಾಗಲಿಲ್ಲ. ಆಗ ಆಶ್ರಮದಲ್ಲಿದ್ದ ಭಾರತಾನಂದ ಅವರಲ್ಲಿ ಓಡಿದಳು. ಇವರು ಯಾಂತ್ರಿಕ ಕೆಲಸದಲ್ಲಿ ಬಹಳ ಬುದ್ಧಿವಂತರು. ಇವರು ಬಡಗಿಯ ಕೆಲಸ, ಅಥವಾ ಬೇರೆ ಏನಾದರೂ ಮಾಡುತ್ತಲೇ ಇರುತ್ತಿದ್ದರು. ನನಗೊಂದು ಪುಟ್ಟ ರಾಟೆ ಮಾಡಿಕೊಡಿ ಎಂದು ಕೇಳಿದಳು. ಮಕ್ಕಳನ್ನು ಕಂಡರೆ ಅವರಿಗೂ ತುಂಬ ಅಕ್ಕರೆ. "ಆಗಲಮ್ಮ, ಮಾಡಿಕೊಡುತ್ತೇನೆ" ಎಂದರು. ಅಂತೆಯೇ ಕೆಲವೇ ದಿನಗಳಲ್ಲಿ ಒಂದು ಪುಟ್ಟ ಪೆಟ್ಟಿಗೆ ಚರಖ ಮಾಡಿಕೊಟ್ಟರು.

ಭಾರತಾನಂದ ಪೋಲೆಂಡಿನ ಪ್ರಜೆ. ಅವರ ಹಿಂದಿನ ಹೆಸರು ಮಾರಿಸ್ ಫ್ರೀಡ್‌ಮನ್. ಹಿಂದೂ ಸಂಸ್ಕೃತಿಯಿಂದ ಆಕರ್ಷಿತರಾಗಿ ಭಾರತಕ್ಕೆ ಬಂದರು. ಬ್ರಹ್ಮಚಾರಿ. ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ಕೆಲ ಕಾಲ ಇದ್ದರು. ಧನುಷ್ ಚರಖ ನಿರ್ಮಿಸಿದರು. ಹಿಂದೂ ಧರ್ಮ ಸ್ವೀಕರಿಸಿ ಸಂನ್ಯಾಸಿ

ಯಾದರು. ಕಾವಿ ಉಡುಪು ತೊಟ್ಟು ಭಾರತಾನಂದ ಹೆಸರು ಪಡೆದರು. ಸ್ವದೇಶಕ್ಕೆ ಮರಳಿ ಹೋಗಲಿಲ್ಲ. ಇಲ್ಲಿಯೇ ಅಸು ನೀಗಿದರು.

ಭಾರತಾನಂದ ಮಾಡಿಕೊಟ್ಟ ರಾಟೆಯಿಂದ ಸುಭದ್ರೆ ನೂಲುವುದನ್ನು ರೂಢಿ ಮಾಡಿಕೊಂಡಳು. ದಿನ ನಿತ್ಯ ನೂಲುತ್ತ ಸಾಕಷ್ಟು ನೂಲು ನೂತಳು. ತಂದೆಗೆ ಹೇಳಿ ತಾನು ನೂತ ನೂಲಿನಿಂದ ಬಟ್ಟೆ ಮಾಡಿಸಿಕೊಂಡಳು.

ಒಂದು ದಿನ ಸಂಜೆ ಎಂದಿನಂತೆ ಬಾಪು ಕೈತೊಳೆದು ಬಾಯಿ ಮುಕ್ಕಳಿಸು ತ್ತಿದ್ದರು. ಬಾಪು ಸಮೀಪಕ್ಕೆ ಸುಭದ್ರೆ ಓಡಿದಳು.

"ಬಾಪೂಜಿ, ನಿಮಗೊಂದು ಬಹುಮಾನ ತಂದಿದ್ದೇನೆ. ನಾನು ನೂತ ನೂಲಿ ನಿಂದ ಬಟ್ಟೆ ಮಾಡಿಸಿ ತಂದಿದ್ದೇನೆ. ತೆಗೆದುಕೊಳ್ಳಿ" ಎಂದಳು.

ಮಕ್ಕಳೊಡನೆ ಸರಸವಾಡಲು ಸಿಕ್ಕಿತು ಒಂದು ಅವಕಾಶ ಎಂದು ಭಾವಿಸಿದ ಬಾಪು, "ನಾನು ಭಿಕ್ಷೆ ಸ್ವೀಕರಿಸಲು ಭಿಕಾರಿ ಅಲ್ಲ. ದುಡ್ಡು ಕೊಡುತ್ತೇನೆ, ಕೊಡು ತ್ತೀಯಾ" ಎಂದರು.

ಅದೆಷ್ಟು ಸಲಿಗೆ ಮಕ್ಕಳಿಗೆ ಬಾಪೂವಿನಲ್ಲಿ. ಸುಭದ್ರೆ ಉತ್ತರಿಸಿದಳು. "ನಾನು ವ್ಯಾಪಾರಿಯಲ್ಲ. ಬಟ್ಟೆ ಮಾರುವುದಕ್ಕೆ ಬಂದಿಲ್ಲ. ಓಹೋ, ನನಗೆ ಗೊತ್ತು. ಈ ಬಟ್ಟೇ ಒರಟಾಗಿದೆ. ಅಂದಚಂದವಾಗಿಲ್ಲ. ಪೋರಿ ತಯಾರಿಸಿದ್ದು. ಆದ್ದರಿಂದ ನಿಮಗೆ ಬೇಡ ಅಲ್ಲವೇ. ಬೇರೆಯವರು ಕೊಟ್ಟರೆ ತೆಗೆದುಕೊಳ್ಳುವಿರಿ. ನಾನು ಕೊಟ್ಟರೆ ಒಲ್ಲೆ ಎನ್ನುತ್ತೀರಿ."

ಮಾತನಾಡುತ್ತಿದ್ದಂತೆ ಸುಭದ್ರೆಯ ಕಣ್ಣುಗಳಲ್ಲಿ ನೀರು ತುಂಬಿ ಬಂತು. ಬಾಪು ಇದನ್ನು ಗಮನಿಸಿದರು. ಇನ್ನು ಕೋಡಿ ಕಿತ್ತು ಹರಿದರೆ ರಾದ್ಧಾಂತವಾದೀತು ಎಂದು, "ಆಗಲಿ, ಸುಭದ್ರೆ. ನೀನು ಮಾಡಿಸಿರುವ ಬಟ್ಟೆ ತೆಗೆದುಕೊಂಡು ಬಾ" ಎಂದರು. ಅದನ್ನು ಕೈಗೆ ಎತ್ತಿಕೊಂಡರು. ಎಷ್ಟು ಸೊಗಸಾಗಿದೆ. ಮೈ ಒರಸಿಕೊಳ್ಳಬಹುದು, ತಲೆಗೆ ಕಟ್ಟಿಕೊಳ್ಳಬಹುದು. ತುಂಬ ಅಂದವಾಗಿದೆ."

"ನನಗೆ ಬಹುಮಾನವಾಗಿ, ಉಚಿತವಾಗಿ ಬರುವ ಬಟ್ಟೆ ಸಾಮಾನ್ಯವಾಗಿ ನಾನು ಬಳಸುವುದಿಲ್ಲ. ನಾನು ನೂಲುವ ನೂಲೇ ನನಗೆ ಸಾಕು. ಹೆಚ್ಚಾದುದನ್ನು ಸೀರೆ ಮಾಡಿಸಿ ಬಾಗ ಕೊಡುತ್ತೇನೆ. ಹೋಗಲಿ, ಪೂರ್ಣಬೆಲೆ ತೆಗೆದುಕೊಳ್ಳಲು ಇಷ್ಟವಿಲ್ಲ ದಿದ್ದರೆ, ಅರ್ಧ ಬೆಲೆ ತೆಗೆದುಕೋ. ಅದರಿಂದ ಮತ್ತೆ ಅರಳೆ ಕೊಳ್ಳಬಹುದು."

"ನಾನೇನೂ ಭಿಕಾರಿ ಅಲ್ಲ." ಎಂದಳು ದಿಟ್ಟತನದಿಂದ ಸುಭದ್ರೆ.

ಬಾಪೂಜಿ ದಾರಿ ಕಾಣದೆ ಸೋಲೊಪ್ಪಿಕೊಳ್ಳಬೇಕಾಯಿತು. ಕತ್ತರಿ ತರಿಸಿ ತಲೆಗೆ ಸುತ್ತಲು ಬೇಕಾಗುವಷ್ಟು ಉದ್ದನೆ ಬಟ್ಟೆ ಕತ್ತರಿಸಿಕೊಂಡರು. "ನಿನಗೆ ಅರ್ಧ, ನನಗೆ ಅರ್ಧ, ನಾನೂ ನೀನೂ ಜೋಡಿ" ಎಂದು ಅವಳ ಕೈಹಿಡಿದು ಹಾಸ್ಯ ಮಾಡಿದರು.

ಸುಭದ್ರೆಯ ಆನಂದಕ್ಕೆ ಪಾರವೇ ಇಲ್ಲ. ಮನೆಗೆ ಓಡಿದಳು. "ಅಮ್ಮ ನಾನೂ ಬಾಪು ಜೋಡಿ" ಎಂದು ಕುಣಿಯುತ್ತ ನಡೆದ ಕತೆ ಎಲ್ಲವನ್ನು ಅಮ್ಮನಿಗೆ ವಿಸ್ತಾರವಾಗಿ ಒಪ್ಪಿಸಿದಳು.

ಬಾಪೂಜಿ ಪ್ರತಿ ದಿನ ರಾಮಾಯಣ ಪಠಿಸುತ್ತಿದ್ದರು. ರಾತ್ರಿ ವೇಳೆಯಲ್ಲಿ ಓದಲು ಒಂದು ಸಣ್ಣ ಕಂದೀಲು ಬಳಸುತ್ತಿದ್ದರು. ಸುಭದ್ರೆ ಇದನ್ನು ಗಮನಿಸಿದ್ದಳು. ಇವೆರಡನ್ನು ತಾನು ಪಡೆಯಬೇಕೆಂಬ ಆಸೆ ಬಲವಾಯಿತು. ಧೈರ್ಯಮಾಡಿ ಒಂದು ದಿನ ಬಾಪೂ ಹತ್ತಿರ ಹೋಗಿ, "ಬಾಪೂಜಿ, ನಿಮ್ಮಲ್ಲಿರುವ ರಾಮಾಯಣ ಮತ್ತು ಪುಟ್ಟ ಕಂದೀಲು ನನಗೆ ಕೊಡಿ" ಎಂದು ಕೇಳಿಯೇ ಬಿಟ್ಟಳು.

ಅವರು ಓದುತ್ತಿದ್ದುದು ತುಳಸೀದಾಸ ರಾಮಾಯಣ. "ಈ ಪುಸ್ತಕದಿಂದ ಶ್ಲೋಕಗಳನ್ನು ಓದಿ ಹೇಳುವುದನ್ನು ಕಲಿತರೆ, ರಾಮಾಯಣದ ಪುಸ್ತಕ ನಿನಗೆ ಸಿಕ್ಕೀತು" ಎಂದರು ಬಾಪು. ಅವಳಿಗೆ ರಾಮಾಯಣ ಮತ್ತು ಪುಟ್ಟದೀಪ ಕೊಟ್ಟರು. ಸುಭದ್ರೆಗೆ ದೇವನಾಗರಿ ಲಿಪಿ ಬರುತ್ತಿರಲಿಲ್ಲ. "ಎರಡನ್ನೂ ಜೋಪಾನವಾಗಿ ಇಟ್ಟುಕೋ. ಪ್ರಾರ್ಥನೆಗೆ ಬರುವಾಗ ಜತೆಯಲ್ಲಿ ತೆಗೆದುಕೊಂಡು ಬಾ" ಎಂದರು.

ಸುಭದ್ರೆ ಅಕ್ಕನ ನೆರವಿನಿಂದ ಒಂದು ಶ್ಲೋಕ ಕಂಠಪಾಠ ಮಾಡಿದಳು. ಅಕ್ಷರ ಬಾರದಿದ್ದರೂ ಆ ಶ್ಲೋಕ ಯಾವ ಪುಟದಲ್ಲಿದೆ ಎಂದು ಗುರುತು ಮಾಡಿ ಕೊಂಡಳು. ಒಂದು ದಿನ ಬಾಪು ಬಳಿಗೆ ಹೋಗಿ ತಾನು ಬಾಯಿ ಪಾಠ ಮಾಡಿದ್ದ ಶ್ಲೋಕ ಒಪ್ಪಿಸಿದಳು. "ಈ ಪುಸ್ತಕದಲ್ಲಿ ಎಲ್ಲಿದೆ ಈ ಗೀತೆ, ತೋರಿಸು" ಎಂದರು. ಸುಭದ್ರೆ ಪುಸ್ತಕದ ಹಾಳೆ ತೆಗೆದು ಶ್ಲೋಕ ತೋರಿಸಿದಳು. ಇವಳ ಯುಕ್ತಿ ಅರಿಯಲು ಬಹಳ ಹೊತ್ತು ಬೇಕಾಗಲಿಲ್ಲ ಬಾಪೂಗೆ. "ಇಷ್ಟು ದಿನ ಪುಸ್ತಕ ನಿನ್ನಲ್ಲಿ ಇಟ್ಟುಕೊಂಡು ಒಂದೇ ಒಂದು ಶ್ಲೋಕ ಕಂಠಪಾಠ ಮಾಡಿರುವೆ. ಓದಲು ಕಲಿ. ಆಗ ನಿನಗಾಗಿ ರಾಮಾಯಣ ಕೊಡುವೆ" ಎಂದರು.

ಇದುವರೆಗೂ ಓದಿನಲ್ಲಿ ಆಸಕ್ತಿ ವಹಿಸದಿದ್ದ ಸುಭದ್ರೆ ಓದಲು ಕಲಿತಳು. ಸ್ವಲ್ಪ ಕಾಲಾನಂತರ ಸುಭದ್ರೆ ಆಶ್ರಮ ಬಿಡ ಬೇಕಾಗಿ ಬಂತು. ಆಗ ಬಾಪು ಅವಳಿಗೆ ರಾಮಾಯಣದ ಒಂದು ಪ್ರತಿ ಉಚಿತವಾಗಿ ಕೊಟ್ಟರು. ಆಶ್ರಮ ಬಿಟ್ಟು ಹೋದ

ಮೇಲೂ ರಾಮಾಯಣ ಓದುತ್ತಿರುವೆಯಾ ಎಂದು ಆಗಿಂದಾಗ ಪತ್ರ ಬರೆದು ವಿಚಾರಿಸಿಕೊಳ್ಳುತ್ತಿದ್ದರು.

ಮಕ್ಕಳಲ್ಲಿ ಅಮಿತ ಪ್ರೇಮ ತಂದೆ ಬಾಪೂಜೀಗೆ. ಮಕ್ಕಳೊಡನೆ ಆಟವಾಡುವುದರಲ್ಲಿ ಮೈ ಮರೆವರು. ಮಕ್ಕಳೊಂದಿಗೆ ಮಗುವೇ ಆಗುವರು. ಅವರ ಹಾವ ಭಾವ ಅರಿತು ತದನುಗುಣ ವರ್ತಿಸುವರು. ಅವರಲ್ಲಿ ಕಲೆತು ಬೆರತು ತಮ್ಮ ಹೊಣೆಗಾರಿಕೆ ಸ್ವಲ್ಪ ಕಾಲವಾದರೂ ಮರೆತು ಹೋಗುವರು. ಮಕ್ಕಳೂ ಅಂತೆಯೇ, ಬಾಪೂಜಿಯನ್ನು ನೋಡುತ್ತಲೇ, ನೊಣ ಮುತ್ತಿ ಕೊಳ್ಳುವಂತೆ, ಅವರನ್ನು ಮುತ್ತಿಕೊಳ್ಳುವುವು. ಇವರು ಮಹಾತ್ಮರು, ಇವರ ಹತ್ತಿರಕ್ಕೆ ಹೋಗಬಹುದೆ ಎಂಬ ಭಯವೇ ಇಲ್ಲ. "ತಾತ, ತಾತ," ಎನ್ನುತ್ತಾ ಅವರ ವಸ್ತ್ರ ಹಿಡಿದು ಜಗ್ಗುವುವು. ಕೋಲು ಕಿತ್ತುಕೊಂಡು, ಕುದುರೆ ಮಾಡಿಕೊಳ್ಳುವುವು. "ಹೈ,ಹೈ," ಎನ್ನುವರು ಬಾಪು.

ಪ್ರತಿ ದಿನ ಬೆಳಿಗ್ಗೆ, ಸಂಜೆ ಸ್ವಚ್ಛಗಾಳಿಗಾಗಿ ಒಂದು ಮೈಲಿ ದೂರ ನಡೆಯುವ ವಾಡಿಕೆ ಗಾಂಧಿಯವರಿಗೆ. ಆಗಲೂ ದೇಶದ ಹಿರಿಯ ನಾಯಕರು ಅವರೊಡನೆ ವಿಚಾರ ವಿನಿಮಯ ಮಾಡುತ್ತಾ ಹೆಜ್ಜೆ ಹಾಕುವರು.

ಎಂದಿನಂತೆ ಸೇವಾ ಗ್ರಾಮದಲ್ಲಿ ಒಂದು ದಿನ ಗಾಳಿ ಸಂಚಾರಕ್ಕೆ ಹೊರಟರು. ಜತೆಯಲ್ಲಿ ಹಲವರು. ಸಮೀಪದಲ್ಲಿ ತಾಯಿಯೊಬ್ಬಳು ನಡೆದು ಬರುತ್ತಿದ್ದಳು. ಕಂಕುಳಲ್ಲಿ ಒಂದು ಪುಟಾಣಿ, ಕೈಹಿಡಿದು ನಡೆಯುತ್ತಿದೆ ಇನ್ನೊಂದು ಮಗು. ಈ ಮೂವರೂ ಗಾಂಧಿಯವರನ್ನು ಹಿಂಬಾಲಿಸಿ ಬರುತ್ತಿದ್ದರು. ಕಂಕುಳಲ್ಲಿದ್ದ ಕಂದ ಗಟ್ಟಿಯಾಗಿ ಅಳತೊಡಗಿತು. ತಾಯಿ ಎಷ್ಟು ಸಮಾಧಾನ ಪಡಿಸಿದರೂ ಅಳುವುದನ್ನು ನಿಲ್ಲಿಸಲಿಲ್ಲ.

ಬಾಪೂಗೆ ಈ ಅಳು ಸಹಿಸಲು ಸಾಧ್ಯವಾಗಲಿಲ್ಲ. ತಮ್ಮ ಉದ್ದನೆಯ ಊರುಗೋಲು ಪಕ್ಕದಲ್ಲಿ ಇದ್ದವರಿಗೆ ಕೊಟ್ಟು, ಆ ತಾಯಿಯ ಕಂಕುಳಿನಿಂದ ಮಗುವನ್ನು ಎತ್ತಿಕೊಂಡರು. "ಟಾ ಟಾ ಟಾ ಇತ್ತ ನೋಡು" ಎಂದು ಆ ಮಗುವಿನ ಗಲ್ಲಕ್ಕೆ ಮುತ್ತಿಟ್ಟರು. ಓಹೋ ಎಂದು ನಕ್ಕರು.

ಮಗು ಕೂಡಲೇ ಅಳು ನಿಲ್ಲಿಸಿತು. ಅದೂ ನಕ್ಕಿತು. ಇದೆಲ್ಲ ನೋಡುತಿದ್ದ ಸ್ವಲ್ಪ ವಯಸ್ಸಿನ ಮಗು ಓಡಿ ಬಂದು ಗಾಂಧಿಯವರ ಕೈ ಬೆರಳು ಹಿಡಿಯಿತು. ಮತ್ಸರ. ಪುಟ್ಟ ಕಂದನನ್ನು ಮುದ್ದಿಸುತ್ತಾನೆ ಈ ಮುದುಕ. ನನ್ನನ್ನು ಏಕೆ ಮುದ್ದಿಸಬಾರದು? ಬಾಪುವಿನ ಕೈಹಿಡಿದು ಎತ್ತಲೋ ಎಳೆದೊಯ್ಯಿತು. ಅಲ್ಲಿ ರಸ್ತೆಯ ಬದಿಯಲ್ಲಿ ಸಣ್ಣ ಸಸಿಯಲ್ಲಿ ಹೂ ಅರಳಿತ್ತು. "ನೋಡಿ, ಇದು ಎಷ್ಟು ಸುಂದರ" ಎಂದಿತು.

"ಬಲು ಸುಂದರವಾಗಿದೆ. ನಿನ್ನಷ್ಟೇ ಚಂದವಾಗಿದೆ." ಬಾಪು ಹೊಗಳಿಕೆಯಿಂದ ಆ ಮಗು ಉಬ್ಬಿತು. ಸಂತೋಷಪಟ್ಟಿತು. ಕೈಬಿಡದೆ ಸಂಗಡವೇ ನಡೆಯಿತು. ದೊಡ್ಡವರೂ ಅವರೊಡನೆ ಹೆಜ್ಜೆ ಹಾಕಲಾರದಂತೆ ವೇಗವಾಗಿ ನಡೆಯುವ ಬಾಪು ಮಗುವಿನೊಂದಿಗೆ ಪುಟ್ಟ ಹೆಜ್ಜೆ ಹಾಕುತ್ತಾ ನಡೆದರು. ಇಷ್ಟರಲ್ಲೇ ಪಕ್ಕದಲ್ಲೇ ಒಂದು ನಾಯಿ ಬಾಲ ಆಡಿಸುತ್ತಾ ಬಂತು. "ಬಾಪು, ಬಾಪು, ನಾಯಿಬಾಲ ನೋಡಿ." ಕೇಕೆ ಹಾಕಿತು ಮಗು.

"ಕೋತಿಗೆ ಇದೆ ಬಾಲ, ನಾಯಿಗೆ ಇದೆ ಬಾಲ. ನಿನ್ನ ಬಾಲ ಎಲ್ಲಿ" ಎಂದರು ಬಾಪು.

"ಎಂಥಾ ದಡ್ಡರು ನೀವು. ಎಷ್ಟು ದೊಡ್ಡವರು. ಇಷ್ಟಾದರೂ ಮನುಷ್ಯನಿಗೆ ಬಾಲ ಇಲ್ಲ ಎಂದು ನಿಮಗೆ ತಿಳಿಯದೆ. ನನಗೆ ತಿಳಿದಿರುವುದೂ ನಿಮಗೆ ತಿಳಿಯದು. ನೀನೊಬ್ಬ ಹೆಡ್ಡ, ದೊಡ್ಡ ದಡ್ಡ" ಎಂದಿತು.

ಮಗುವಿನ ಮೇಲೆ ಕೋಪ ಮಾಡಿಕೊಳ್ಳಲಿಲ್ಲ. ಇದು ತುಂಬ ಜಾಣ ಮಗು ಎಂದು ಮನಸ್ಸಿನಲ್ಲೇ ಸಂತೋಷಪಟ್ಟರು. ಸಂಗಡ ಬರುತ್ತಿದ್ದವರಿಗೆ, "ನೋಡಿದಿರಾ, ಈ ಮಗು ಎಷ್ಟು ಚೂಟಿಯಾಗಿದೆ" ಎಂದರು. ಮಗುವಿನ ಬೆನ್ನು ಚಪ್ಪರಿಸುತ್ತಾ, "ನೀನು ನನಗಿಂತ ತುಂಬ ಬುದ್ಧಿವಂತಳು. ಶಹಬಾಸ್" ಎಂದರು.

ಗಂಭೀರ ವಿಷಯ ಕುರಿತು ಮಾತನಾಡಲು ಜತೆಯಲ್ಲಿ ಬಂದಿದ್ದವರಿಗೆ ಬಾಪು ತಮ್ಮೊಡನೆ ವಿಚಾರ ವಿನಿಮಯ ಮಾಡದೆ ಮಕ್ಕಳೊಡನೆ ಸರಸವಾಡುತ್ತಿರುವರಲ್ಲ ಎಂದು ಕೋಪಮಿಶ್ರಿತ ಆಶ್ಚರಿ. ವೇಳೆ ವ್ಯರ್ಥವಾಯಿತೆಂದು ಕೋಪ. ಬಾಪುವಿನ ಮುಗ್ಧತೆ ನೋಡಿ ಆಶ್ಚರ್ಯ ಮತ್ತು ಆನಂದ.

ಹೀಗೆ ಬಾಪು ಮಕ್ಕಳೊಡನೆ ಮಗುವಾಗಿ ಸ್ವಲ್ಪಕಾಲವಾದರೂ ತಮ್ಮ ಗುರುತರ ಜವಾಬ್ದಾರಿ ಮರೆಯುತ್ತಿದ್ದರು. ಇದು ಅವರ ಆರೋಗ್ಯದ, ಆಯುಷ್ಯದ ಗುಟ್ಟು.

ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿದ್ದಾಗ ಪ್ರತಿ ಭಾನುವಾರ ಒಬ್ಬ ಕ್ರೈಸ್ತ ಧರ್ಮೀಯರ ಮನೆಗೆ ಹೋಗುವ ವಾಡಿಕೆ. ಮನೆಯ ಒಡತಿ ಭೋಳೆ ಹೆಂಗಸು. ಮುಕ್ತ ಮನಸ್ಸಿನವಳಲ್ಲ. ಊಟಮಾಡುತ್ತ ಬುದ್ಧ, ಏಸು ಮತ್ತು ಧಾರ್ಮಿಕ ವಿಷಯಗಳ ಬಗ್ಗೆ ಹೆಚ್ಚು ಮಾತುಕಥೆ, ನಡೆಯುವುದು. ಬುದ್ಧನ ದಯಾಪರತೆ ಕೇವಲ ಮಾನವರಿಗೆ ಮಾತ್ರ ಸೀಮಿತವಾಗಿರಲಿಲ್ಲ. ಆಡಿನ ಮರಿ ಆತನ ಭುಜದ ಮೇಲೆ ಸವಾರಿ ಮಾಡುವ ದೃಶ್ಯ ಅದೆಷ್ಟು ರಮ್ಯ. ಏಸು ತನ್ನ ತೋಳಿನ ತೆಕ್ಕೆಯಲ್ಲಿ ಕುರಿಮರಿ ಎತ್ತಿಕೊಂಡಿರುವ ಚಿತ್ರ ಪ್ರಾಣಿಗಳಲ್ಲಿ ಅವರಿಗಿದ್ದ ಅಗಾಧ ಅನುಕಂಪವನ್ನು ಎತ್ತಿ

ತೋರಿಸುತ್ತದೆ. ಪ್ರಾಣಿಗಳನ್ನು ಕೊಂದು ತಿನ್ನುವ ವರ್ಗಕ್ಕೆ ತಾನು ಸೇರಿದವನಲ್ಲ. ತಾನು ಶಾಖಾಹಾರಿ. ಪ್ರಾಣಿವಧೆ ಪಾಪಕೃತ್ಯ ಹೀಗೆ ಮಾತನಾಡುತ್ತಿದ್ದರು. ಐದು ವರ್ಷದ ಹಸುಳೆ ಇದೆಲ್ಲವನ್ನು ಕೇಳಿಕೊಳ್ಳುತ್ತಿತ್ತು. ಮಗುವಿನ ತಟ್ಟೆಯಲ್ಲಿ ಮಾಂಸಾಹಾರ. ಗಾಂಧಿಯವರ ತಟ್ಟೆಯಲ್ಲಿ ಸೇಬು. "ಕುರಿಯ ಮಾಂಸ ತಿನ್ನುವುದು ಎಷ್ಟು ಅಸಹ್ಯ. ನನ್ನ ಸೇಬು ಎಷ್ಟು ಸೊಗಸಾಗಿದೆ ನೋಡು." ಮಗುವಿಗೂ ಇದು ಸರಿದೋರಿತು. ಅದೂ ನಿಮ್ಮ ಸೇಬು ಸೊಗಸಾಗಿದೆ. ಅಮ್ಮಾ, ನನಗೂ ಸೇಬಿನ ಹಣ್ಣು ಕೊಡು. ಮಾಂಸ ಒಲ್ಲೆ ಎಂದು ತಟ್ಟೆಯನ್ನು ಆಚೆಗೆ ದೂಡಿತು.

ಮಗುವಿನ ವರ್ತನೆ ತಾಯಿಗೆ ಗಾಬರಿ ಮಾಡಿತು. ಮುಂದಿನ ಭಾನುವಾರ ಎಂದಿನಂತೆ ಅವಳ ಮನೆಗೆ ಗಾಂಧೀಜಿ ಹೋದರು. ಆಗ ತಾಯಿ ನಿಸ್ಸಂಕೋಚವಾಗಿ ಹೇಳಿದಳು. ನಿಮ್ಮ ಮಾತು ಕೇಳಿ ನಮ್ಮ ಮಗು ಮಾಂಸ ತಿನ್ನಲು ನಿರಾಕರಿಸುತ್ತಿದೆ. ಸೇಬು ಬೇಡುತ್ತದೆ. ಮಾಂಸಹಾರ ತೆಗೆದುಕೊಳ್ಳದಿದ್ದರೆ ಮಗು ಬಡವಾದೀತು. ಬಲಹೀನವಾದೀತು. ಕಾಯಿಲೆ ಬೀಳಬಹುದು. ಇದನ್ನು ನಾನು ಹೇಗೆ ಸಹಿಸಲಿ? ಆದ್ದರಿಂದ ಇನ್ನು ಮೇಲೆ ತಾವು ಹಿರಿಯರೊಡನೆ ಮಾತ್ರ ಮಾತನಾಡುವುದು ಉಚಿತ. ನಿಮ್ಮ ವಾದಸರಣಿ ಮಕ್ಕಳ ಮೇಲೆ ಕೆಟ್ಟ ಪ್ರಭಾವ ಬೀರೀತು. ಹೀಗೆ ವಾದಿಸಿದಳು. ಗಾಂಧೀಜಿಯವರ ಮನಸ್ಸು ಇದರಿಂದ ತುಂಬ ನೊಂದಿತು. "ನಿಮ್ಮ ಮನದೊಟ ನನಗೆ ಅರ್ಥವಾಗುತ್ತದೆ. ನನಗೂ ಮಕ್ಕಳಿದ್ದಾರೆ. ಹರ್ಷದಾಯಕವಲ್ಲದ ಈ ಪ್ರಕರಣ ಸುಲಭವಾಗಿ ಕೊನೆಗಾಣಿಸಬಹುದು. ನುಡಿಗಿಂತ ನಡತೆ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲ. ನಾನು ತಿನ್ನುವುದನ್ನು, ಉಣುವುದನ್ನು ಅದು ಗಮನಿಸದೆ ಇರದು. ಇದಕ್ಕೆ ನಾನು ನಿಮ್ಮ ಅತಿಥಿಯಾಗಿ ಇಲ್ಲಿಗೆ ಬಾರದಿರುವುದೇ ಸರಿಯಾದ ಮದ್ದು. ಆದ್ದರಿಂದ ಇನ್ನು ಮೇಲೆ ತಮ್ಮ ಮನೆಗೆ ನಾನು ಬರುವುದಿಲ್ಲ ಎಂದರು. ಇದರಿಂದ ನಮ್ಮ ಪರಸ್ಪರ ಸ್ನೇಹಕ್ಕೆ ಚ್ಯುತಿ ಬಾರದು." ಈ ಮಾತುಗಳು ಮನೆ ಒಡತಿಯನ್ನು ಸಂತೋಷಗೊಳಿಸಿದುವು. ಗಾಂಧೀಜಿ ಮಕ್ಕಳ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಬಲ್ಲವರಾಗಿದ್ದರು ಎಂಬುದನ್ನು ಇದರಿಂದ ಸುಲಭವಾಗಿ ಗ್ರಹಿಸಬಹುದು.

ಗಾಂಧೀಜಿ ದುಂಡು ಮೇಜಿನ ಪರಿಷತ್ತಿಗೆ ಹೋಗಿದ್ದಾಗ ಲಂಡನ್ನಿನ ಪೂರ್ವ ಭಾಗದಲ್ಲಿ ಇದ್ದರಷ್ಟೆ. ಅಲ್ಲಿನ ಮಕ್ಕಳಿಗೆ ಇವರು ಚಾಚಾ ಗಾಂಧಿ ಆಗಿದ್ದರು. ಹೊರಗೆ ಹೊರಟರೆ ಮಕ್ಕಳು ಮುತ್ತಿಕೊಳ್ಳುತ್ತಿದ್ದರು. ಏನೇನೋ ಪ್ರಶ್ನೆ ಕೇಳುವರು. ಮುಗ್ಧ ಮಕ್ಕಳ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡುವುದು ಸುಲಭವಲ್ಲ. ತನ್ನ ಬಾಲ್ಯದ ಕಥೆ ಅವರಿಗೆ ತಿಳಿಸುವರು. ಮಕ್ಕಳಿಗೆ ಕಥೆ ಹೇಳಿ ನಲಿಸುವರು. ಜಟಿಲ ವಿಷಯಗಳನ್ನು ಕಥೆಯ ಮೂಲಕ ಸುಲಭವಾಗಿ ಕಲಿಸಬಹುದೆಂದು ಅನುಭವ

ದಿಂದ ಅವರು ಅರಿತರು. ಕಥೆ ಹೇಳು ಚಾಚಾ ಎಂದು ಮಕ್ಕಳು ಪೀಡಿಸುವುವು. ತಾನು ತೊಟ್ಟ ಉಡುಪಿನ ರಹಸ್ಯ ಕಥಾರೂಪವಾಗಿ ಮಕ್ಕಳಿಗೆ ತಿಳಿಸುವರು. ಮಹಾತ್ಮರ ಹುಟ್ಟು ಹಬ್ಬದ ದಿನ 'ಈಸ್ಟ್ ಎಂಡ್' ವಿಭಾಗದ ಬಡಮಕ್ಕಳು ಆಟಿಕೆಗಳನ್ನು ಬಹುಮಾನವಾಗಿ ಕೊಟ್ಟವು. ನಾಯಿಗಳ ಎರಡು ಬೊಂಬೆ, ಹುಟ್ಟು ಹಬ್ಬದ ಸೂಚಕವಾದ ಕೆಂಪು ಬಣ್ಣದ ಮೂರು ಮೇಣದ ಬತ್ತಿ, ತಗರದ ತಟ್ಟೆ, ನೀಲಿ ಪೆನ್ಸಿಲ್, ಪೆಪ್ಪರ್‌ಮೆಂಟ್ ಕೊಟ್ಟರು. ಭಾರತಕ್ಕೆ ಮರಳಿದಾಗ ಮಕ್ಕಳು ಕೊಟ್ಟ ಕಾಣಿಕೆಗಳನ್ನು ಜೋಪಾನವಾಗಿ ತಂದರು. ಬೊಂಬಾಯಲ್ಲಿ ಇಳಿದಾಗ, ತಾನು ಇಂಗ್ಲೆಂಡಿನಿಂದ ತಂದಿರುವುದು ಇಲ್ಲಿಂದ ಒಯ್ದ ಸಾಮಾನು ಮತ್ತು ಮಕ್ಕಳು ಕೊಟ್ಟ ಆಟಿಕೆಗಳು ಮಾತ್ರ ಎಂದು ಸುಂಕದ ಅಧಿಕಾರಿಗಳಿಗೆ ತಿಳಿಸಿದರು. ಮಹದೇವ ದೇಸಾಯಿ ಅವರ ವರದಿಯಂತೆ ಸಾವಿರಾರು ಆಂಗ್ಲ ಮಕ್ಕಳು ಗಾಂಧಿಯವರ ದರ್ಶನ ಲಾಭ ಪಡೆದರು. ಭವಿಷ್ಯವನ್ನು ರೂಪಿಸುವರು ಇವರಲ್ಲವೇ ಎನ್ನುತ್ತಿದ್ದರು ಗಾಂಧೀಜಿ.

ಒಂದು ದಿನ ಒಬ್ಬ ಗೃಹಸ್ಥ, ಗಾಂಧಿಯವರಲ್ಲಿ ಬಂದು ನಿಮ್ಮ ಮೇಲೆ ನನ್ನದೊಂದು ಫಿರ್ಯಾದು ಇದೆ ಎಂದರು. ಅಲ್ಲಿದ್ದವರೆಲ್ಲರಿಗೂ ಗಾಬರಿ. ಅದೇನು ಎಂದು ವಿಚಾರಿಸಿದರು ಗಾಂಧೀಜಿ. ನನ್ನ ಪುಟ್ಟ ಮಗಳು ಜೇನ್ ಜೆಳಿಗ್ಗೆ ನನ್ನನ್ನು ಹೊಡೆದೆಬ್ಬಿಸುತ್ತಾಳೆ. ಪ್ರತಿಯಾಗಿ ನೀನು ನನ್ನನ್ನು ಹೊಡೆಯಬಾರದು. ಏಟಿಗೆ ಏಟು ಕೊಡುವುದು ತಪ್ಪು ಎಂದು ಗಾಂಧೀ ಹೇಳಿದ್ದಾರೆ. ಆದ್ದರಿಂದ ನೀವು ನನ್ನನ್ನು ಹೊಡೆಯಲಾಗದು ಎನ್ನುತ್ತಾಳೆ. ಇದು ನಿಮ್ಮ ಅಹಿಂಸೆಯ ಪ್ರಭಾವ ಎಂದರು.

ದಕ್ಷಿಣ ಆಫ್ರಿಕದ ಜೈಲಿನಿಂದ ಗಾಂಧೀಜಿ ಬಿಡುಗಡೆಯಾಗಿ ಆಗತಾನೆ ಬಂದಿದ್ದರು. ಹೆನ್ರಿ ಪೋಲಕ್ ಅವರ ಆಂಗ್ಲ ಗೆಳೆಯರ ಅತಿಥಿಯಾಗಿ ಅವರ ಮನೆಗೆ ಹೋಗಿದ್ದರು. ಅವರ ಮಗು ರಾತ್ರಿ ಎಲ್ಲ ಅಳುತ್ತಿದ್ದು ತಂದೆ ತಾಯಿಗೆ ನಿದ್ದೆ ಕೊಡುತ್ತಿರಲಿಲ್ಲ. ಒಂದು ರಾತ್ರಿ ಹೀಗೆ ಕಳೆಯಿತು. ಮಾರನೆಯ ರಾತ್ರಿ ತಂದೆತಾಯಿ ಮಲಗಿದರು. ಮಗು ಅಳಲು ಪ್ರಾರಂಭಿಸಿತು. ಅವರು ನಿದ್ದೆಯಿಲ್ಲದೆ ತೊಂದರೆ ಪಡುತ್ತಿದ್ದುದನ್ನು ಗಾಂಧೀಜಿ ಗಮನಿಸಿದ್ದರು. ಸ್ವತಃ ಗಾಂಧೀಜಿ ಜೈಲಿನಲ್ಲಿ ತುಂಬ ಕಷ್ಟ ಅನುಭವಿಸಿ ಬಂದಿದ್ದರು. ಅದನ್ನು ಲೆಕ್ಕಿಸದೆ, ಮಗು ಮಲಗಿದ್ದ ತೊಟ್ಟಿಲನ್ನು ತನ್ನ ಕೊಠಡಿಗೆ ಸೆಳೆದುಕೊಂಡು, ಮಗುವನ್ನು ಎತ್ತಿಕೊಳ್ಳುತ್ತಾ, ಮುದ್ದಿಸುತ್ತಾ ರಾತ್ರಿ ಕಳೆದರು.

ಆಫ್ರಿಕದ ಕುಟುಂಬ ವರ್ಗದ ಮಕ್ಕಳನ್ನು ಎತ್ತಿಕೊಂಡು ಮುದ್ದಾಡುವರು. ಮಕ್ಕಳೊಡನೆ ಇರುವುದು ಪರಮಾನಂದ ಎಂದು ಹೇಳಿಕೊಂಡಿರುತ್ತಾರೆ. ಕಾಸಿಂ ಮುಸ್ಲಿಂ ಹುಡುಗ ರೋಗ ಪೀಡಿತನಾಗಿದ್ದ. ಅವನನ್ನು ತೊಡೆಯ ಮೇಲೆ ಮಲಗಿಸಿ

ಕೊಳ್ಳುವರು. ಎಲ್ಲಿ ನೋವಾಗುತ್ತೆ ಎಂದು ವಿಚಾರಿಸುವರು. ಸಮಾಧಾನ ಮಾಡುವರು. ಇಸ್ನೊಮ್ಮೆ ಮಿಸಿಯಾನ್ ಊರಿನ ಜೂಲೂ ಜನಾಂಗದ ಮಗು ಕಾಯಿಲೆ ಆಯಿತು. ಅದಕ್ಕೆ ಬಾಪುವೇ ಬೇಕು. ಬೇರೆ ಯಾರ ಹತ್ತಿರವೂ ಹೋಗದು. ಇದು ನೀಗ್ರೋ ಮಗು, ಅದು ಕಿರಿಸ್ತಾನರ ಕೂಸು, ಇದು ಮುಸಲ್ಮಾನರ ಹಸುಳೆ. ಈ ರೀತಿಯ ಯಾವ ಭೇದ ಭಾವವೂ ಅವರಲ್ಲಿ ಇರಲಿಲ್ಲ. ಆಂಡ್ರೂಸರು ಈ ದೃಶ್ಯಗಳನ್ನು ನೋಡಿ, ಆಫ್ರಿಕದಲ್ಲಿ ನನಗೆ ಏಸುಸ್ವಾಮಿಯ ದರ್ಶನವಾಯಿತು ಎಂದು ಬರೆದಿದ್ದಾರೆ. ಒಮ್ಮೆ ದರ್ಬಾನಿನಲ್ಲಿ ಪೌರಸಭಾಧ್ಯಕ್ಷರ ಮೆರವಣಿಗೆ ನಡೆಯಿತು. ಅದರಲ್ಲಿ ಭಾಗವಹಿಸಿದ್ದವರೆಲ್ಲರೂ ಶ್ವೇತವರ್ಣೀಯರ ಮಕ್ಕಳೇ. 'ಇದೇನು ಕಪ್ಪುವರ್ಣದ ಮಕ್ಕಳು ಮಾಡಿದ ಪಾಪವೇನು' ಎಂದು ಪ್ರಶ್ನಿಸಿದರು.

1915 ರಲ್ಲಿ ಟ್ರಾಂಕುಬಾರಿನಲ್ಲಿ ಒಬ್ಬ ಹರಿಜನ ಬಾಲಕ ಇವರ ವಶಕ್ಕೆ ಬಂದ. ಬಾಲಕನನ್ನು ಹೊಸದಾಗಿ ಸ್ಥಾಪಿಸಿದ್ದ ಸಾಬರಮತಿ ಆಶ್ರಮಕ್ಕೆ ಒಯ್ದರು. ತಲೆ ತುಂಬ ಹೇನು. ಮೈ ಅಂಗುಲ ದಪ್ಪದ ಕೊಳೆ. ತಲೆ ಬೋಳಿಸಿದರು. ಸ್ನಾನ ಮಾಡಿಸಿ ಮೈ ಚೆನ್ನಾಗಿ ತೀಡಿ ಕೊಳೆ ಇಳಿಸಿದರು. ಕಣ್ಣು, ಮೂಗು, ಕಿವಿ, ಎಲ್ಲ ತೊಳೆದರು. ಕೊಳೆ ತುಂಬಿ ಜಿಡ್ಡು ಹಿಡಿದಿದ್ದ ಬೆನ್ನು ಕಾಲು ಉಜ್ಜಿ ಉಜ್ಜಿ ತೊಳೆದರು. ಅವನಿಗೆ ಖಾದಿ ಧೋತಿ, ಕುಡುತ, ಟೋಪಿ ತೊಡಿಸಿದರು. ಅಸಹ್ಯದಿಂದ ದೂರ ಇರಿಸುತ್ತಿದ್ದ ಅಸ್ಪೃಶ್ಯ ಈಗ ಒಳ್ಳೆಯ ಸತ್ಕುಲಪ್ರಸೂತನಂತೆ ಕಾಣುತ್ತಿದ್ದ.

ಮಕ್ಕಳಿಗೆ ಕಥೆ ಹೇಳುವುದರಲ್ಲಿ ಗಾಂಧೀಜಿ ನಿಷ್ಣಾತರು. ಶಾಂತಿನಿಕೇತನಕ್ಕೆ ಹೋಗಿದ್ದಾಗ ನಂದಿನಿ ಬಾಲಳಿಗೆ ದಿನವಹಿ ಗೊತ್ತಾದ ವೇಳೆಗೆ ಕಥೆ ಹೇಳುತ್ತಿದ್ದರು. ಇವರಿಗೆ ದೊರೆತ ಹಾರ ಅವಳಿಗೆ ಕೊಡುತ್ತಿದ್ದರು. ಒಂದು ದಿನ ಹಾರ ತೆಗೆದುಕೊಳ್ಳಲು ನಂದಿನಿ ತಿರಸ್ಕರಿಸಿದಳು. ಮುಖ ಗಂಟು ಹಾಕಿಕೊಂಡಳು. ಅವಳಿಗೆ ಕಥೆ ಹೇಳಬೇಕಾದ ವೇಳೆಯಲ್ಲಿ ಅಂದು ಗುರುದೇವ ಠಾಕೂರರೊಡನೆ ಗಾಂಧೀಜಿ ಮಾತಿನಲ್ಲಿ ತಲ್ಲೀನರಾಗಿದ್ದರು. ನಂದಿನಿಯ ಕೋಪಕ್ಕೆ, ಮುನಿಸಿಗೆ ಬಹುಶಃ ಇದೇ ಕಾರಣವಿದ್ದೀತು. "ಮಕ್ಕಳ ಮುನಿಸಿಗೆ, ಅರಸರ ಕೋಪಕ್ಕೆ ಕಾರಣ ಅರಿಯಲೆಂತು ? ಅರಸನಿಗೆ ಕೋಪ ಬಂದರೆ ನನ್ನಂಥಾ ಸತ್ಯಾಗ್ರಹಿಗೆ ಅರಸನ ತಾಪ ಇಳಿಸುವ ಕ್ರಮ ಗೊತ್ತು. ಆದರೆ ಮಗುವಿನ ಮುನಿಸಿನ ಮುಂದೆ ಜ್ವಾಜ್ವಲ್ಯಮಾನವಾದ ಸತ್ಯಾಗ್ರಹದ ಅಸ್ತ್ರವೂ ತನ್ನ ಪ್ರಕಾಶ ಕಳೆದು ಕೊಳ್ಳುತ್ತದೆ. ನಂದಿನಿಯ ಕೋಪಕ್ಕೆ ಕಾರಣ ನನಗೆ ತಿಳಿಯದು. ಅದನ್ನರಿಯಲು ಮೌನ ದಿನಗಳು ಅಡ್ಡಿಯಾದುವು. ನಂದಿನಿಯ ಮನ ಒಲಿಸಿಕೊಳ್ಳಲಾರದೆ ನಾನು ಶಾಂತಿನಿಕೇತನ ಬಿಡಬೇಕಾಯಿತು. ಈ ದುಃಖಮಯ ಅಪಜಯದ ಕಥೆ ತೋಡಿಕೊಳ್ಳಲಿ, ಯಾರಲ್ಲಿ?" ಒಂದು ಪುಟ್ಟ ಕಂದನ ಮುನಿಸಿನ ಕಾರಣ ಅರಿಯಲು, ಅದರ ಮನ ಒಲಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ಅದೆಷ್ಟು ಮನೋವೇದನೆ ಮಹಾತ್ಮರಿಗೆ.

ಗಾಂಧೀಜಿ ದುಂಡು ಮೇಜಿನ ಪರಿಷತ್ತಿಗೆ ಹೋದಾಗ ಕಿಂಗ್ಸ್ಲೆ ಹಾಲಿನಲ್ಲಿ ಇದ್ದರಷ್ಟೆ. ಮಹಾತ್ಮರು ಬಂದಾಗ ಅವರಿಗೆ ಯಾವ ರೀತಿಯ ಸ್ವಾಗತ ನೀಡಬೇಕು? ಯಾರು ಸ್ವಾಗತ ಭಾಷಣ ಮಾಡಬೇಕು? ಈ ಪ್ರಶ್ನೆಗಳು ತಲೆದೋರಿದುವು. ಮಹಾತ್ಮರಿಗೆ ಮಕ್ಕಳಲ್ಲಿದ್ದ ಮಮತೆಯ ಅರಿವು ಮುರಿಯಲ್ ಲಿಸ್ಟರ್ ಬಲ್ಲವಳಾಗಿದ್ದಳು. ಆದ್ದರಿಂದ ಮಕ್ಕಳೇ ಅವರನ್ನು ಸ್ವಾಗತಿಸಬೇಕೆಂಬ ತೀರ್ಮಾನಕ್ಕೆ ಬರಲಾಯಿತು. ಒಬ್ಬ ಹುಡುಗಿ ಹೇಳಿದಳು: "ಫ್ರಾಂಕಿ ತುಂಬ ಮಾತುಗಾರ. ಗಾಂಧಿಯವರನ್ನು ಕುರಿತು ಸದಾ ಮಾತನಾಡುತ್ತಿರುತ್ತಾನೆ. ಕನಸಿನಲ್ಲೂ ಗಾಂಧಿ. ಒಂದು ರಾತ್ರಿ ಕನಸಿನಲ್ಲಿ ಮಹಾತ್ಮರನ್ನು ಕಂಡು, ಎಚ್ಚೆತ್ತು, ಎಲ್ಲಿ ಗಾಂಧಿ, ಗಾಂಧಿ ಎಲ್ಲಿ ಎಂದು ಅರಚಿದ. ಆದ್ದರಿಂದ ಸ್ವಾಗತ ಭಾಷಣ ಫ್ರಾಂಕಿ ಮಾಡಲು ತುಂಬ ಅರ್ಹ." ಮಹಾತ್ಮರು ಬಂದಾಗ ಪುಟ್ಟ ಭಾಷಣದಿಂದ ಫ್ರಾಂಕಿ ಅವರನ್ನು ಸ್ವಾಗತಿಸಿದ. ಮಹಾತ್ಮರನ್ನು ಅವನು ಬೈಬಲ್ ಪವಿತ್ರ ಗ್ರಂಥದಲ್ಲಿರುವ ಅಸಿಸಿಯ ಸನ್ಯಾಸಿ ಫ್ರಾನ್ಸಿಸ್ ಅವರಿಗೆ ಹೋಲಿಸಿದ. ಫ್ರಾನ್ಸಿಸ್ ಶ್ರೀಮಂತ ವರ್ತಕನ ಮಗ. ಒಂದು ದಿನ ರಾತ್ರಿ ಭೋಜನ ಮಾಡುತ್ತಿದ್ದಾಗ ಇಟಲಿಯ ಬಡವರ ಚಿತ್ರ ಅವನ ಕಣ್ಣು ಕಟ್ಟಿತು. ಹೊರಕ್ಕೆ ಓಡಿ ತಾನು ಧರಿಸಿದ್ದ ಬೆಲೆ ಬಾಳುವ ಉಡುಪು ಅವರಿಗೆ ಕೊಟ್ಟ. ತನ್ನಲ್ಲಿದ್ದ ಹಣಕಾಸು ಎಲ್ಲವನ್ನೂ ದರಿದ್ರರಿಗೆ ದಾನ ಮಾಡಿದ. ಕಡುಬಡವರಂತೆ ಗೋಣಿ ನಾರಿನ ಉಡುಪು ಧರಿಸಿದ.

ಗಾಂಧಿಯವರೂ ಶ್ರೀಮಂತರ ಮಕ್ಕಳೇ. ಆದರೆ ಅವರೂ ಬಡವರಂತೆಯೇ ಬದುಕುತ್ತಾರೆ. ನೂಲು ನೂತು ತಮ್ಮ ಬಟ್ಟೆ ತಾವೇ ಮಾಡಿಕೊಳ್ಳುತ್ತಾರೆ. ಮಾಂಸ ಮುಟ್ಟುವುದಿಲ್ಲ, ಶಾಖಾಹಾರಿ. ಆಡಿನ ಹಾಲು ಕುಡಿಯುತ್ತಾರೆ. ಹಣ್ಣು ಹಂಪಲು ತಿನ್ನುತ್ತಾರೆ. ಬೆಳಿಗ್ಗೆ ಸಂಜೆ ಪ್ರಾರ್ಥನೆ ಮಾಡುತ್ತಾರೆ. ಇವು ಫ್ರಾಂಕಿ ಭಾಷಣದಿಂದ ಆಯ್ದ ಕೆಲವು ವಾಕ್ಯಗಳು. ಭಾಷಣ ಇನ್ನೂ ದೊಡ್ಡದೇ ಆಗಿತ್ತು.

ಮಕ್ಕಳು ದೊಡ್ಡವರನ್ನು ಅನುಕರಿಸುತ್ತವೆ. ಹೆಣ್ಣು ಮಕ್ಕಳು, ನಾನೂ ಕಸ ಗುಡಿಸುತ್ತೇನೆ ಎಂದು ಕಸಬರಲು ತೆಗೆದುಕೊಳ್ಳುತ್ತವೆ. ಅಡುಗೆ ಮಾಡಿ, ಬಡಿಸುವ ಆಟ ಆಡುತ್ತವೆ. ಬೊಂಬೆಗಳು ಅವರ ಕಲ್ಪನೆಯ ಜೀವಂತ ಮಕ್ಕಳು. ಅವಕ್ಕೆ ನೀರೆರೆದು, ಹಾಲುಣಿಸಿ, ತೊಟ್ಟಿಲಲ್ಲಿ ತೂಗಿ, ಹಾಡಿ ಪಾಡಿ ಮಲಗಿಸುತ್ತವೆ. ಗಂಡು ಮಕ್ಕಳು ಅಪ್ಪನಂತೆ ಆಫೀಸಿಗೆ ಹೋಗಲು ಸಿದ್ಧವಾಗುತ್ತವೆ. ಮಕ್ಕಳ ಮನಸ್ಸು ಮಹಾತ್ಮರು ಚೆನ್ನಾಗಿ ಅರಿತಿದ್ದರು. ಅವರಿಂದ ಕೆಲಸ ಮಾಡಿಸಿಕೊಳ್ಳುವ ಯುಕ್ತಿ ಅವರು ಬಲ್ಲವರಾಗಿದ್ದರು. ವಾನರ ಸೇನೆ ಆಶ್ರಮಗಳಲ್ಲಿ ರಚಿಸಿದ್ದರು, ಎಲ್ಲ ಕೆಲಸಗಳಲ್ಲೂ ತಾವೂ ಪಾಲ್ಗೊಳ್ಳಬೇಕೆಂದು ಉತ್ಸಾಹದಿಂದ ಮಕ್ಕಳು ಮುನ್ನುಗ್ಗಿ ಬರುತ್ತಿದ್ದುವು. ಅಂಚೆ ಚೀಟಿಗಳನ್ನು ಕೂಡಿ ಹಾಕಿ ಮಕ್ಕಳಿಗೆ ಕೊಡುವರು. ತಮಗೆ

ಬಂದ ಹಣ್ಣು ಹಾರ ಮಕ್ಕಳಿಗೆ ಹಂಚುವರು. ಹೆಣ್ಣು ಮಕ್ಕಳ ಕೊರಳಿಗೆ ಹಾರ ಹಾಕಿ ಇವಳು ನನ್ನ ಸಂಗಾತಿ ಎಂದು ಹಾಸ್ಯಮಾಡುವರು.

ಗಾಂಧೀಜಿ ಇಂಗ್ಲೆಂಡಿನಿಂದ ಭಾರತಕ್ಕೆ ಮರಳುತ್ತಲೇ ಬಂಧಿತರಾದರು. ಅವರನ್ನು ಪುಣೆ ಸಮೀಪದ ಯರವಡಾ ಕಾರಾಗೃಹದಲ್ಲಿ ಇಡಲಾಗಿತ್ತು. ಜೈಲಿನಿಂದಲೂ ಎಲ್ಲರಿಗೂ ಅವರು ಪತ್ರ ಬರೆಯುತ್ತಿದ್ದರು. ಅವರು ಬರೆದಿರುವ ಪತ್ರಗಳೆಲ್ಲವನ್ನೂ ಶೇಖರಿಸಿ ಇಂಡಿಯಾ ಸರ್ಕಾರ ಅಚ್ಚುಹಾಕಿಸುತ್ತಿದೆ. ಒಟ್ಟು 130 ಸಂಪುಟಗಳಾಗುವಷ್ಟು ಪತ್ರಗಳು ದೊರೆತಿವೆ. ಪ್ರತಿಯೊಂದು ಸಂಪುಟವೂ ಸುಮಾರು 600 ಪುಟಗಳ ನಿಘಂಟಿನಷ್ಟು ಗಾತ್ರ. ತಮಗೆ ಬರುತ್ತಿದ್ದ ಪ್ರತಿಯೊಂದು ಪತ್ರಕ್ಕೂ ಉತ್ತರ ಬರೆಯುವರು, ಅಥವಾ ಬರೆಸುವರು. ಬಲಗೈ ಸೋತಾಗ, ಎಡಗೈಯಿಂದ ಬರೆಯುವರು. ತಮಗೆ ಬರುತ್ತಿದ್ದ ಕಾಗದಗಳಲ್ಲಿ ಬಿಳಿಯಭಾಗ ಕತ್ತರಿಸಿ ಇಟ್ಟುಕೊಂಡು ಅದನ್ನು ಉತ್ತರ ಬರೆಯಲು ಬಳಸುವರು. ಗಹನ ವಿಷಯಗಳ ನಡುವೆ ಮಕ್ಕಳನ್ನು ಅವರು ಎಂದೂ ಮರೆಯುತ್ತಿರಲಿಲ್ಲ. ಆಶ್ರಮದಲ್ಲಿ ವನಮಾಲ, ಮೋಹನ, ಪುಷ್ಪ, ಮಂಗಳ, ಶಾರದ, ಆನಂದ ಹೀಗೆ ಎಷ್ಟೋ ಮಕ್ಕಳು. ಒಬ್ಬೊಬ್ಬರಿಗೂ ಪ್ರತ್ಯೇಕ ಬರೆಯಲು ವೇಳೆ ಇರುತ್ತಿರಲಿಲ್ಲ. ಆದ್ದರಿಂದ ಎಲ್ಲರಿಗೂ ಒಂದೇ ಪತ್ರದಲ್ಲಿ ಬರೆಯುವರು. ಜೈಲಿನಿಂದ ಅವರು ಬರೆದ ಮೊದಲ ಪತ್ರ ಲಂಡನ್ನಿನ ಕಿಂಗ್ಸ್‌ಲೀ ಹಾಲ್ ಮಕ್ಕಳಿಗೆ. ನೀವು ಕೊಟ್ಟ ಬಹುಮಾನಕ್ಕಾಗಿ ಲಂಡನ್ನಿನಲ್ಲಿ ಇದ್ದಾಗಲೇ ನಿಮಗೆ ಪತ್ರ ಬರೆದು ವಂದನೆ ಸಲ್ಲಿಸಲು ಸಾಧ್ಯವಾಗದೆ ಹೋಯಿತು. ಈಗ ಜೈಲಿನಿಂದ ಕಾಗದ ಬರೆಯುತ್ತಿರುವೆ. ಜೈಲು ಕಳ್ಳರ ಮನೆ ನಿಜ. ಆದರೆ ನಾನು ಕಳ್ಳನಲ್ಲ. ನಿರಪರಾಧಿ. ನಿಷ್ಕಾರಣವಾಗಿ ಸರ್ಕಾರ ನನ್ನನ್ನು ಕಾರಾಗೃಹದಲ್ಲಿ ಇರಿಸಿದೆ. ನೀವು ಕೊಟ್ಟ ಆಟಿಕೆಗಳನ್ನು ಆಶ್ರಮದ ಮಕ್ಕಳಿಗೆ ಕೊಡಲು ಬಯಸಿದ್ದೆ. ಆಶ್ರಮ ಮತ್ತು ಅಲ್ಲಿರುವ ಮಕ್ಕಳ ವಿಷಯ ನೀವು ಆಂಟಿ ಮುರಿಯಲ್ ಅವಳಿಂದ ತಿಳಿಯಬಹುದು.

"ರೆಕ್ಕೆ ಇಲ್ಲದ ಹಕ್ಕಿ ಹಾರಲಾರದು. ರೆಕ್ಕೆ ಇದ್ದರೆ ಮಾತ್ರ ಅವು ಹಾರಬಲ್ಲವು. ಆದರೆ ನೀವು ರೆಕ್ಕೆ ಪುಕ್ಕ ಇಲ್ಲದೆಯೂ ಇಚ್ಛಾಮಾತ್ರದಿಂದ ಹಾರಬಹುದು. ರೆಕ್ಕೆ ಇಲ್ಲದೆ ಹಾರುವುದು ಹೇಗೆ. ನನ್ನ ಮನಸ್ಸು ನಿಮ್ಮಲ್ಲಿಗೆ ಹಾರಿ ಬರುತ್ತದೆ. ಅಂತೆಯೇ ಮನಸ್ಸಿನಿಂದ ನೀವೂ ನನ್ನಲ್ಲಿಗೆ ಹಾರಿ ಬರಬಹುದು." ಹೀಗೆ ಅವರು ಬರೆಯುತ್ತಿದ್ದರು. ಬಂಧನದಲ್ಲಿ ಇದ್ದಾಗಲೂ ಮಕ್ಕಳ ಚಿಂತೆ ಅವರಿಗೆ. ಒಂದೊಂದು ಮಗುವಿಗೂ ಅದರ ವಯೋಮಿತಿ, ಬುದ್ಧಿವಂತಿಕೆಗೆ ಅನುಗುಣವಾಗಿ ಪತ್ರ ಬರೆಯುವರು. ಒಂದು ಮಗು ತಾನು ಹಕ್ಕಿಗಳ ಗೆಳೆತನ ಬೆಳಸಿಕೊಂಡಿದ್ದುದಾಗಿ ಬರೆಯಿತು. ಅದಕ್ಕೆ ಉತ್ತರವಾಗಿ ಜೈಲಿನಲ್ಲಿ ತಾನು ಬೆಕ್ಕು ಮತ್ತು ಅದರ ಮರಿಗಳ ಸ್ನೇಹ ಬೆಳಸಿಕೊಂಡಿರುವುದಾಗಿ ಬರೆದರು. ತಾಯಿ ಬೆಕ್ಕು, ತಾನು ಮಾಡಿ ತೋರಿಸಿ ಕಲಿಸುತ್ತದೆ. ಮರಿಗಳು

ತುಂಬ ಮುದ್ದಾಗಿವೆ. ಪ್ರಟಾಣಿ ದುರ್ಗಿಗೆ ಬಣ್ಣದ ಕಾಗದಗಳನ್ನು ಕತ್ತರಿಸಿ ತೆಗೆದಿರಿಸಿದ್ದರು. ಇನ್ನೊಂದು ಮಗು ತಾತನಿಗೆ ಚಿತ್ರ ಬರೆದು ಕಳುಹಿಸುವುದು. ಎಲ್ಲರಿಗೂ ಸೇರಿ ಒಂದೇ ಪತ್ರ ಬರೆದಿರುವೆ. ಒಬ್ಬೊಬ್ಬರಾಗಿ ಎಲ್ಲರೂ ಓದಿಕೊಳ್ಳಿ. ಜಗಳವಾಡಿಕೊಳ್ಳದಿದ್ದರೆ ಇದು ಸಾಧ್ಯ. ಅನ್ಯೋನ್ಯವಾಗಿ ನೀವು ನಿಮ್ಮಲ್ಲಿಯೇ ಕಾದಾಡಿಕೊಂಡರೆ, ಮುಂದೆ ದೊಡ್ಡ ಯುದ್ಧ ನಿಲ್ಲಿಸಲು ನಿಮ್ಮಿಂದ ಸಾಧ್ಯವಾಗದು. ಹೀಗೆ ಸಣ್ಣದರಲ್ಲೂ ದೊಡ್ಡ ವಿಷಯ ಅಡಗಿಸುವ ಸಾಮರ್ಥ್ಯ ಬಾಪೂಗೆ.

ಒಂದು ಮಗು ಜಿಂಕೆಗಳ ಚಿತ್ರ ಬರೆದು ಕಳುಹಿಸಿತು. ಅದಕ್ಕೆ ಉತ್ತರವಾಗಿ, 'ಎಂಥ ಕೊಂಬುಗಳಿವೆ ನಿನ್ನ ಜಿಂಕೆಗೆ. ಎಷ್ಟು ಸುಂದರ. ಹಾಲು ಕರೆಯಲು ದಿನವಹಿ ಆಡು ಕರೆದು ತರುತ್ತಾರೆ. ಅದರೊಡನೆ ಆಟ ಆಡಲು ನನಗೆ ವಿರಾಮ ಇಲ್ಲ. ಅವು ಬಂದಾಗಲೆಲ್ಲ ನಾನು ಏನಾದರೂ ಕೆಲಸ ಮಾಡುತ್ತಲೇ ಇರುತ್ತೇನೆ. ಬಿಡುವಿಲ್ಲ.'

ಬಾಪುವಿನ ಮೊಮ್ಮಗ ಗೋಪು ತಾತನೊಡನೆ ಅಣಕವಾಡುವನು. ಕೈ ಎತ್ತಿ, "ಭಾಯಿಯೋ, ಔರ್ ಬಹಿನೋ, ಆಪ್ ಶಾಂತಹೋ ಜಾಯಿಯೇ" ಎಂದು ಅಣಕಿಸುವನು. ತಾತ ಹೊರಟರೆ ಅವರ ಮುಂದೆ ಇವನೂ ಹೊರಡುವನು. ಒಂದು ದಿನ ತಾತ ಕೃತಕ ಹಲ್ಲುಗಳನ್ನು ತೆಗೆಯುತ್ತಿದ್ದುದನ್ನು ನೋಡಿದ. ತನ್ನ ಹಲ್ಲುಗಳನ್ನು ಹೊರತೆಗೆಯಲು ಪ್ರಯತ್ನಿಸಿದ, ಬರವೊಲ್ಲವು. ಅಳತೊಡಗಿದ, ಬರುವುದಿಲ್ಲವೆಂದು. ಆಗ ನೆಹರು ಹತ್ತಿರ ಇದ್ದರು. ತಾತನ ವಯಸ್ಸು ನಿನಗೆ ಆದಾಗ, ದಂತ ಪಂಕ್ತಿ ತೆಗೆಯಲು ನಿನಗೂ ಸಾಧ್ಯವಾಗುತ್ತದೆ ಎಂದು ಸಮಾಧಾನಪಡಿಸಿದರು.

ಬಾಪೂಜಿ, ನೀವು ವೈಸರಾಯರನ್ನು ನೋಡಲು ದಿಲ್ಲಿಗೆ ಹೋಗುತ್ತಿರುತ್ತೀರಿ. ನಿಮ್ಮನ್ನು ಮಹಾತ್ಮ ಎನ್ನುತ್ತಾರೆ. ಆದರೆ ನಿಮ್ಮನ್ನು ಕಾಣಲು ವೈಸರಾಯರು ಒಮ್ಮೆಯಾದರೂ ಸೇವಾಗ್ರಾಮಕ್ಕೆ ಬಂದಿಲ್ಲವಲ್ಲ. ಎಂಥ ಮಹಾತ್ಮರು ನೀವು ಎಂದು ಮತ್ತೊಬ್ಬ ಮೊಮ್ಮಗ ಮೂದಲಿಸಿದ.

ನೊಬೆಲ್ ಬಹುಮಾನ ವಿಜೇತ ಸರ್ ಸಿ. ವಿ. ರಾಮನ್ ಅವರು ಪತ್ನಿ ಲೋಕಸುಂದರಿ ರಾಮನ್ ಮತ್ತು ಮಕ್ಕಳೊಡನೆ ಮಹಾತ್ಮರ ಸಂದರ್ಶನಕ್ಕಾಗಿ ಆಗಿಂದಾಗ ನಂದಿಗೆ ಬರುತ್ತಿದ್ದರು. ಒಂದು ದಿನ ಬೆಟ್ಟದ ಮೇಲೆ ನಡೆಯುತ್ತಿದ್ದಾಗ ಇವರ ಒಂದು ಮಗು ಕೆಳಗೆ ಬಿದ್ದಿತು, ಕಾಲು ಉಳುಕಿತು. ಆದ್ದರಿಂದ ಮಹಾತ್ಮರ ಭೇಟಿಗಾಗಿ ಬರಲು ಅದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಈ ವಿಷಯ ಮಹಾತ್ಮರಿಗೆ ತಿಳಿಯಿತು. ಪಾಪ, ಅವನಿಗೆ ಬರಲಾಗದಿದ್ದರೆ ನಾನೇ ಅವನನ್ನು ಹೋಗಿ ನೋಡಬೇಕಾದುದು ನನ್ನ ಕರ್ತವ್ಯ ಎಂದು ಮಹಾತ್ಮರೇ ಬಾಲಕನಿದ್ದ ಕೊಠಡಿಗೆ ಹೋಗಿ,

"ಏನಾಯ್ತು, ಕಾಲು ಹೇಗೆ ಉಳುಕಿತು. ಅಳಬೇಡ, ಬೇಗ ಗುಣವಾಗಿ ಹೋಗುತ್ತದೆ" ಎಂದು ಉಳುಕಿದ ಮೊಳಕಾಲನ್ನು ತಮ್ಮ ಕೈಯಿಂದ ಮುಟ್ಟಿ ನೀವಿದರು. ಪೂಜ್ಯ ಮಹಾತ್ಮರು ತನ್ನ ಕಾಲನ್ನು ಮುಟ್ಟುತ್ತಿರುವುದನ್ನು ಕಂಡು ದುಃಖಾಶ್ರುಗಳು ಬಾಲಕನ ಕಣ್ಣಿನಿಂದ ಧಾರಾಕಾರವಾಗಿ ಹರಿದುವು. ಕೆಲವೇ ದಿನಗಳಲ್ಲಿ ಬಾಲಕ ಗುಣಹೊಂದಿದ.

ಮದರಾಸಿಗೆ ಬಂದಾಗ ವಾಡಿಕೆಯಂತೆ ಜಿ. ವಿ. ನಟೇಶನ್ ಮನೆಯಲ್ಲಿ ಉಳಿದುಕೊಂಡಿದ್ದರು. ಪುಟಾಣಿಯ ಬಳಿ ಅರ್ಧ ಅಂಗುಲದಷ್ಟು ಕಿರಿದಾದ ಪುಟ್ಟ ಪೆನ್ಸಿಲ್ ಇದ್ದಿತು. ಮಗುವಿನೊಡನೆ ಹಾಸ್ಯವಾಡುತ್ತ, ಪೆನ್ಸಿಲ್ ನನಗೆ ಕೊಡುವಿಯಾ ಎಂದು ಬಾಪೂಜಿ ಕೇಳಿದರು. ಮಗು ಕೊಟ್ಟಿತು. ಅದನ್ನೇ ಬಳಸಲು ತೊಡಗಿದರು. ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಈ ಪುಟ್ಟ ಪೆನ್ಸಿಲ್ ಹಾಸಿಗೆಯಲ್ಲಿ ಬಿದ್ದುಬಿಟ್ಟಿತು. ಊರು ಸಮೀಪಿಸಿದಾಗ ಗಂಟುಮೂಟೆ ಕಟ್ಟಬೇಕಾಯಿತು. ಗಾಂಧೀಜಿ ಏನನ್ನೋ ಹುಡುಕತೊಡಗಿದರು. ಸಣ್ಣ ಪೆನ್ಸಿಲ್‌ಗಾಗಿ ಅರಸುತ್ತಿರವುದು ತಿಳಿಯಿತು. ದೊಡ್ಡ ಪೆನ್ಸಿಲ್ ಅದಕ್ಕೆ ಬದಲು ತೆಗೆದುಕೊಳ್ಳಿ ಎಂದು ಹೇಳಿದರೂ ಅವರಿಗೆ ಸಮಾಧಾನವಾಗಲೇ ಇಲ್ಲ. 'ಒಂದು ಪೆನ್ಸಿಲ್ ಕಳೆದುಹೋದುದಕ್ಕೆ ಇಷ್ಟೊಂದು ಕಳವಳ ಪಡುತ್ತೀರಲ್ಲ ಎಂದು ಕೇಳಿದಳು' ಮೀರಾಬೆಹನ್. 'ಮಗು ತಪ್ಪಿಸಿಕೊಂಡು ಹೋದರೆ ನಿನ್ನ ಮಗುವಿಗೆ ಬದಲಾಗಿ ಮತ್ತೊಂದು ಮಗು ಕೊಟ್ಟರೆ ಆ ತಾಯಿಗೆ ಸಮಾಧಾನ ಆದೀತೆ' ಎಂದು ಪ್ರಶ್ನಿಸಿದರು. ಕಡೆಗೂ ಮೋಟು ಪೆನ್ಸಿಲ್ ಸಿಕ್ಕಿತು. ಅವರ ಆನಂದಕ್ಕೆ ಪಾರವೇ ಇಲ್ಲ. ನಟೇಶನ್ ಅವರ ಪುಟ್ಟ ಮಗು ಪ್ರೀತಿಯಿಂದ ಕೊಟ್ಟ ಪುಟ್ಟ ಪೆನ್ಸಿಲ್ ಹೇಗೆ ಕಳೆದುಕೊಳ್ಳಲಿ ಎಂದರು. ಮಕ್ಕಳು ಹಠ ಮಾಡುವುದಿಲ್ಲವೇ? ನನಗೆ ಅದೇ ಪೆನ್ಸಿಲ್, ಅದೇ ಚೆಂಡು ಬೇಕು ಎಂದು ತಾಯಿಯನ್ನು ಪೀಡಿಸುವುದಿಲ್ಲವೇ? ಬೇರೆ ಇನ್ನೂ ಉತ್ತಮವಾದುದನ್ನು ಕೊಟ್ಟರೂ ಅದು ಒಲ್ಲದು. ಒಮ್ಮೊಮ್ಮೆ ಮುಗ್ಧ ಮಗುವಿನಂತೆಯೇ ರಾಷ್ಟ್ರಪಿತ ಆಡುವನು.

ಪ್ರಾಣಿದಯೆ

ಪ್ರಾಣಿಗಳಲ್ಲಿ ದಯೆ ತೋರುವಂತೆ ಎಲ್ಲ ಧರ್ಮಗಳೂ ತಿಳಿಸುತ್ತವೆ. ಪ್ರಾಣಿಗಳಲ್ಲಿ ಸಾಧು ಮತ್ತು ಕ್ರೂರ ಎಂದು ಎರಡು ಬಗೆ. ಹಸು ಸಾಧು ಪ್ರಾಣಿ, ಹಾವು, ಚೇಳು, ಹುಲಿ, ಕರಡಿ ಮೊದಲಾದ ಪ್ರಾಣಿಗಳು ದುಷ್ಟ ಜಾತಿಗೆ ಸೇರಿದವು. ಇದು ನಮ್ಮ ಸಾಮಾನ್ಯ ಅರಿವು.

ದುಷ್ಟ ಪ್ರಾಣಿಗಳನ್ನು ಕೊಲ್ಲಲು ನಾವು ಹಿಂಜರಿಯುವುದಿಲ್ಲ. ಅವು ವಿಷ ಜಂತುಗಳು, ಹಾನಿಕಾರಕ. ಆದ್ದರಿಂದ ಅವನ್ನು ನಾಶಪಡಿಸುವುದೇ ಸರಿ ಎಂದು ತಿಳಿಯುತ್ತೇವೆ. ಅವನ್ನು ಕಂಡರೆ ನಮಗೆ ಭಯ. ಅಂತೆಯೇ ನಮ್ಮನ್ನು ಕಂಡರೆ ಅವಕ್ಕೆ ಅಂಜಿಕೆ.

ಎಲ್ಲ ಪ್ರಾಣಿಗಳೂ ದೈವ ನಿರ್ಮಿತ. ಸಾಧು ಪ್ರಾಣಿಗಳಲ್ಲಿ ಮಾತ್ರವಲ್ಲ, ಕ್ರೂರ ಪ್ರಾಣಿಗಳಲ್ಲೂ ದಯೆ ತೋರಬೇಕು. ನಾವು ಅವನ್ನು ಪ್ರೀತಿಸಿದರೆ, ಪ್ರತಿಯಾಗಿ ಅವು ನಮ್ಮನ್ನು ಪ್ರೀತಿಸುತ್ತವೆ. ಆಶ್ರಮದಲ್ಲಿ ಹಾವು ಚೇಳುಗಳನ್ನೂ ಕೊಲ್ಲಬಾರದೆಂಬ ನಿಯಮವುಂಟು. ಎಲ್ಲ ಹಾವುಗಳೂ ವಿಷಯುಕ್ತವಾದುವಲ್ಲ. ಹಾವು, ಚೇಳು ಹಿಡಿದು ದೂರಕ್ಕೆ ತೆಗೆದುಕೊಂಡು ಹೋಗಿ ಬಿಡುವುದು ಆಶ್ರಮದ ಪದ್ಧತಿ.

ಒಮ್ಮೆ ಗಾಂಧೀಜಿ ಮೈತುಂಬ ಖಾದಿ ಶಾಲು ಹೊದ್ದು ಆಶ್ರಮದಲ್ಲಿ ಬರೆಯುತ್ತ ಕುಳಿತಿದ್ದರು. ಒಂದು ಹಾವು ಅವರ ಬೆನ್ನಿನ ಮೇಲೆ ಹರಿದಾಡತೊಡಗಿತು. ಕೆಲಸದಲ್ಲಿ ತನ್ಮಯರಾಗಿದ್ದ ಗಾಂಧಿಯವರಿಗೆ ಇದರ ಅರಿವೇ ಆಗಲಿಲ್ಲ. ರಾವುಜಿ ಭಾಯಿ ಹೆಸರಿನ ಆಶ್ರಮವಾಸಿ ಇದನ್ನು ಗಮನಿಸಿದರು. 'ಹಾವು, ಹಾವು' ಎಂದು ಕೂಗಿದ್ದರೆ ಗಾಂಧೀಜಿ ಮತ್ತು ಹಾವು ಇಬ್ಬರೂ ಗಾಬರಿಯಾಗುತ್ತಿದ್ದರು. ಇದನ್ನರಿತ ರಾವುಜಿ ಭಾಯಿ ಬಾಪು ಮುಂದೆ ಬಂದು ನಿಂತು, ಭಯಚಕಿತರಾಗಬೇಡಿ. ನಿಮ್ಮ ಶಾಲಿನ ಮೇಲೆ ಹಾವು ಏರುತ್ತಿದೆ. ಭೀತರಾಗಿ ಕದಲಿದರೆ, ಹಾವು ನಿಮ್ಮನ್ನು ಕಡಿಯಬಹುದು. ಕದಲದೆ ಸುಮ್ಮನೆ ಕೂಡಿ. ಶಾಲಿನ ಅಂಚು ಹಿಡಿದು, ಹಾವಿನ ಸಮೇತ, ಶಾಲನ್ನು ನಿಮ್ಮ ಬೆನ್ನಿನ ಮೇಲಿಂದ ಮೆಲ್ಲಗೆ ತೆಗೆದು, ದೂರ ಒಯ್ದು ಹಾವನ್ನು ಎಸೆದುಬಿಡುವೆ ಎಂದರು. ರಾವುಜಿ ಭಾಯಿ ಶಾಲಿನ ಅಂಚು ಹಿಡಿಯುತ್ತಲೇ, ಹಾವು ಸುರಳಿ ಸುತ್ತಿಕೊಂಡು ಶಾಲಿನ ನಡುವೆ ಕುಳಿತುಬಿಟ್ಟಿತು. ಶಾಲಿನ ನಡುವೆ ಕುಳಿತಿದ್ದ ಹಾವನ್ನು, ಶಾಲಿನ ಸಮೇತ ಹಿಡಿದು, ರಾವುಜಿ ಭಾಯಿ ಅದನ್ನು ದೂರ ಒಯ್ದು ಕೊಡವಿ ಬಿಟ್ಟು ಬಂದರು. ಇದರಿಂದ ಯಾರಿಗೂ ಅಪಾಯ ಸಂಭವಿಸಲಿಲ್ಲ.

ಒಂದು ದಿನ ಒಬ್ಬ ಹಾವಾಡಿಗ ಆಶ್ರಮಕ್ಕೆ ಬಂದು ಹಾವು ಹಿಡಿಯುವುದರಲ್ಲಿ ತನ್ನದು ಪಳಗಿದ ಕೈ ಎಂದು ಹೇಳಿಕೊಂಡ. ತನ್ನ ಕಿಸೆಯಿಂದ ಎರಡು ನಾಗರ ಹಾವಿನ ಮರಿ ತೆಗೆದು ನೆಲದ ಮೇಲೆ ಬಿಟ್ಟ. ಅವು ಹೆಡೆ ಬಿಚ್ಚಿ ಬುಸುಗುಟ್ಟುತ್ತಾ, ಅತ್ತಿಂದಿತ್ತ ಓಡಾಡ ತೊಡಗಿದುವು. ಸುತ್ತ ನಿಂತಿದ್ದ ಜನ ಭಯದಿಂದ ಹಿಂದಕ್ಕೆ ಸರಿದರು. ಗಾಂಧೀಜಿ ಇವೆಲ್ಲ ನೋಡುತ್ತ ನಿಂತಿದ್ದರು. "ನೀನು ಹಾವಿಗೆ ಅಂಜುತ್ತಿಲ್ಲ. ಆದರೆ ಹಾವು ನಿನ್ನನ್ನು ಕಂಡರೆ ಅಂಜುವಂತಿದೆ. ಅವುಗಳಿಗೆ ತೊಂದರೆ ಕೊಡಬೇಡ" ಎಂದು ಬುದ್ಧಿವಾದ ಹೇಳಿದರು. ಬಾಪುವಿನ ಕೊರಳಿಗೆ ಹಾವಿನ ಮಾಲೆ ಹಾಕುವುದಾಗಿಯೂ, ಅವು ಏನೂ ಮಾಡುವುದಿಲ್ಲವೆಂದೂ ಅವನು ಹೇಳಿದ. ಆದರೆ ಆಶ್ರಮವಾಸಿಗಳು ಬೇಡವೆಂದು ತಡೆದರು. ಹಾವಾಡಿಗ ಹೊರಟು ಹೋದ.

ಹಾವಿಗೆ ನೀವು ಭಯಪಡುವುದಿಲ್ಲ. ಆದರೆ ನಮಗೆ ಭಯವಾಗುತ್ತೆ. ಕೊಲ್ಲಲು ಅವಕಾಶ ಕೊಡಿ ಎಂದು ಒಬ್ಬರು ಕೇಳಿದರು. ನಾನು ಕೊಲಲಾರೆ. ಹೀಗೆಂದ ಮಾತ್ರಕ್ಕೆ ಭಯ ಪಡುವವರೂ ಕೊಲ್ಲಲಾಗದು ಎಂದು ಅರ್ಥಮಾಡಿಕೊಳ್ಳ ಬೇಕಾಗಿಲ್ಲ. ಭನ್ಸಾಲಿ ಪಾದರಕ್ಷೆ ಇಲ್ಲದೆಯೇ ಆಶ್ರಮದಲ್ಲಿ, ಅರಣ್ಯದಲ್ಲಿ ಅಡ್ಡಾಡುತ್ತಾರೆ. ಅರಿಯರು ಭಯ ಅವರು. ಎಲ್ಲರೂ ಅವರಂತೆ ಇರಲು ಸಾಧ್ಯವಾಗದು.

ಗಾಂಧೀಜಿ ಆಕಳ ಹಾಲು ಸೇವಿಸುವುದನು ಬಿಟ್ಟಿದ್ದರು. ಹಾಲು ಕರೆಯುವಾಗ ಹಸುವಿಗೆ ಹಿಂಸೆ ಕೊಡುತ್ತಾರೆ. ಕರುವಿಗೆ ಸ್ವಲ್ಪ ಉಣಿಸಿ, ಹೆಚ್ಚು ಭಾಗ ತಾವು ಹಿಂಡಿಕೊಳ್ಳುತ್ತಾರೆ. ಬಿಹಾರಿನ ಕ್ರೂರ 'ಫೂಕನ್' ಪದ್ಧತಿ ಗಾಂಧೀಜಿ ಕಣ್ಣಾರೆ ಕಂಡಿದ್ದರು. ಹಸುವಿನ ಕುಂಡಿಯಲ್ಲಿ ದಪ್ಪನೆಯ ಕೋಲು ತುರುಕುತ್ತಾರೆ. ಇದರಿಂದ ಹಸುವಿನ ಅಡ್ಡೆಯಲ್ಲಿರುವ ಪ್ರತಿಯೊಂದು ತೊಟ್ಟು ಹಾಲೂ ಹೊರ ಬರುತ್ತದೆ. ಕೆಲವೊಮ್ಮೆ ಹಾಲಿನೊಡನೆ, ರಕ್ತವೂ ಬರುವುದುಂಟು. ತಾನು ಪೂರ್ಣ ಸಸ್ಯಾಹಾರಿ ಆಗಿರಬೇಕೆಂಬ ಉದ್ದೇಶದಿಂದ ಆಫ್ರಿಕದಲ್ಲಿದ್ದಾಗಲೇ ಹಾಲು ಮತ್ತು ಅದರ ಉತ್ಪನ್ನಗಳನ್ನು ತೆಗೆದುಕೊಳ್ಳುವುದಿಲ್ಲವೆಂಬ ವ್ರತ ತೊಟ್ಟಿದ್ದರು. ಡಾಕ್ಟರ್ ಜೀವರಾಜ ಮೆಹಥ ಮತ್ತು ಗೋಪಾಲಕೃಷ್ಣ ಗೋಖಲೆ ಇವರು ಒತ್ತಾಯ ಪಡಿಸಿದರೂ ಹಾಲು ತೆಗೆದುಕೊಳ್ಳಲು ಒಪ್ಪಲಿಲ್ಲ. ಆದರೆ ಮತ್ತೊಮ್ಮೆ ತೀವ್ರ ಕಾಯಿಲೆ ಆಗಿದ್ದಾಗ ಹಾಲು ಸೇವಿಸದಿದ್ದರೆ, ಜೀವ ಉಳಿಯದು ಎಂದು ವೈದ್ಯರು ಎಚ್ಚರಿಸಿದಾಗ ಆಗಲೂ ಆಕಳಿನ ಹಾಲು ತೆಗೆದು ಕೊಳ್ಳಲು ಗಾಂಧೀಜಿ ನಿರಾಕರಿಸಿದರು. ಆಗ ಸಮೀಪದಲ್ಲಿದ್ದ ಸತಿ ಕಸ್ತೂರಿಬಾ ಪತಿಯ ಪ್ರಾಣ ಉಳಿಸಲು, 'ನಿಮ್ಮ ವ್ರತ ಹಸುವಿನ ಹಾಲಿಗೆ ಮಾತ್ರ ಸೀಮಿತ. ಆದ್ದರಿಂದ ಆಡಿನ ಹಾಲು ತೆಗೆದುಕೊಳ್ಳಬಹುದಲ್ಲ, ಎಂದು ಕಣ್ಣೀರು ಸುರಿಸುತ್ತ ಸೂಚಿಸಿದರು. ಗಾಂಧೀಜಿ ಒಪ್ಪಿದರು. ನಿಯಮಕ್ಕೆ ಇದೊಂದು ಅಪವಾದ, ಕುಂಟು ನೆಪ, ಪ್ರಾಣ ಉಳಿಸಿಕೊಳ್ಳಲು ಎಂದು ಗಾಂಧಿಯವರೇ ವಿವರಿಸುತ್ತಾರೆ. ಅಂದಿನಿಂದ

ಆಡಿನ ಹಾಲು ಸೇವಿಸುವ ರೂಢಿ ಮಾಡಿಕೊಂಡರು. ಅಧಿಕ ಹಾಲಿನಿಂದ ಖೋವಾ ಮಾಡಿಸಿ ಡಬ್ಬಿಯಲ್ಲಿ ಹಾಕಿ ಇಟ್ಟುಕೊಳ್ಳುತ್ತಿದ್ದರು. ಇದು ಮಿಠಾಯಿ, ಚಾಕಲೇಟ್ ಎಂದು ಮಕ್ಕಳಿಗೆ ಮತ್ತು ಆಪ್ತರಿಗೆ ಚೇಷ್ಟೆಗಾಗಿ ಕೆಲವೊಮ್ಮೆ ಕೊಡುವರು.

ಬಾಲ್ಯದಲ್ಲಿ ತಾನು ಡಾಕ್ಟರ್ ಆಗಬೇಕೆಂಬ ಹಂಬಲ ಗಾಂಧಿಯವರಲ್ಲಿತ್ತು. ಆದರೆ ಪಾಶ್ಚಾತ್ಯ ವೈದ್ಯಕೀಯ ಪದ್ಧತಿಯ ಅಭ್ಯಾಸದಲ್ಲಿ ಪ್ರಾಣಿಗಳನ್ನು ಪ್ರಯೋಗಾರ್ಥ ಕೊಯ್ಯಬೇಕಾಗುತ್ತದೆ. ಹೆಣ ಕತ್ತರಿಸಬೇಕಾಗುತ್ತದೆ. ಇವೆಲ್ಲ ಅವರಿಗೆ ಅಮಾನುಷ. ಆದ್ದರಿಂದ ಅವರು ಡಾಕ್ಟರ್ ಆಗಲಿಲ್ಲ. ಇದಕ್ಕೆ ಪ್ರತಿಯಗಿ ಪ್ರಕೃತಿ ಚಿಕಿತ್ಸೆಯಲ್ಲಿ ಆಸಕ್ತಿ ತಾಳಿದರು.

ಆಡಿನ ಹಾಲಿಗೆ ಸಂಬಂಧಿಸಿದಂತೆ ಕಥೆಗಳು ಅನೇಕ. ಆಂಧ್ರದಲ್ಲಿ ಮೂರನೇ ದರ್ಜೆ ಡಬ್ಬಿಯಲ್ಲಿ ಪ್ರವಾಸ ಮಾಡುತ್ತಿದ್ದಾಗ ಬೇಕಾದಷ್ಟು ತಾಜಾ ಹಾಲು ಕರೆದುಕೊಳ್ಳಿ ಎಂದು ಇವರ ಡಬ್ಬಿಗೆ ಒಂದು ಆಡು ದೂಡಿದರು. ಜೈಲಿನಲ್ಲೂ ಆಡಿನ ಹಾಲು ಒದಗಿಸಲಾಗುತ್ತಿತ್ತು. ಮೈಸೂರು ಸಂಸ್ಥಾನದ ಚಿಕ್ಕಮಗಳೂರಿಗೆ ಬಂದಾಗ ಉತ್ಸಾಹಿಗಳು 300 ಕೊಡ ಆಡಿನ ಹಾಲು ಶೇಖರಿಸಿ ಇಟ್ಟಿದ್ದರು. ತನಗೆ ಬೇಕಾದುದು ಒಂದು ಲೋಟ ಹಾಲು. ಇಷ್ಟೊಂದು ಹಾಲು ವ್ಯರ್ಥವಾಗುತ್ತದೆ ಎಂದು ನೊಂದರು. ಇದು ಹಿಂಸೆ ಎಂದರು.

ಪ್ರಾಣಸಂಕಟ ಪಡುತ್ತಿದ್ದ ಕರುವಿಗೆ ಚುಚ್ಚುಮದ್ದು ಕೊಡಿಸಿ ಕಷ್ಟ ಅಂತ್ಯಗೊಳಿಸುವರು. ಹುಚ್ಚು ನಾಯಿ ಕೊಲ್ಲಿಸಲು ಅವಕಾಶ ಕೊಡುವರು. ಕೋತಿಗಳನ್ನು ಅಟ್ಟಲು ಅನುಮತಿ ನೀಡುವರು. ಇವುಗಳೆಲ್ಲದ ಮೂಲ ಪ್ರಾಣಿದಯೆ.

ಹಸುವಿನ ಪ್ರಾಣ ಉಳಿಸಲು ಮನುಷ್ಯನನ್ನು ನಾನು ಬಲಿಕೊಡಲಾರೆ. ಅಂತೆಯೇ ಮಾನವನನ್ನು ರಕ್ಷಿಸಲು ಹಸುವನ್ನು ಬಲಿಕೊಡಲಾರೆ. ಇದು ಅವರ ಪ್ರವೃತ್ತಿ.

ಗಾಂಧೀಜಿ ತಮ್ಮ ಕೆಲಸ ಸ್ವತಃ ಸಾಧ್ಯವಾದಮಟ್ಟಿಗೆ ತಾವೇ ಮಾಡಿಕೊಳ್ಳುವರು. ಮಾಡಿಕೊಳ್ಳಲು ಹವಣಿಸುವರು. ಹತ್ತಿ ತಂದು, ಕಾಳು ಬಿಡಿಸಿ, ಬಿಲ್ಲಿನಿಂದ ಎಕ್ಕಿ, ಹಂಜಿಮಾಡಿ, ರಾಟೆಯಿಂದ ನೂಲುವರು. ನೂತ ನೂಲು ಲಡಿಗಳಾಗಿ ಸುತ್ತುವರು. ನೂಲು ನೇಕಾರರಿಗೆ ಕೊಟ್ಟು, ವರ್ಷಕ್ಕೆ ಅಗತ್ಯವಾದ ವಸ್ತ್ರ ಮಾಡಿಸಿಕೊಳ್ಳುವರು. ತಮ್ಮ ಪತ್ನಿಗೆ ತಾವು ನೂತ ನೂಲಿನಿಂದ ಸೀರೆ ಮಾಡಿಸಿಕೊಡುವರು. ತಾನು ರೈತ, ನೇಕಾರ ಎಂದು ಹೇಳಿಕೊಳ್ಳುವುದರಲ್ಲಿ ಅವರಿಗೆ ಹೆಮ್ಮೆ. ಜೈಲಿನಲ್ಲಿ ಇರುತ್ತಿದ್ದಾಗಲೂ ನೂಲುವ ಅವಕಾಶ ಪಡೆದಿದ್ದರು. ರಾಟೆಯಿಂದ ನೂಲುವುದು ಅವರ ನಿತ್ಯ ಜೀವನದ ಯಜ್ಞ. ಯರವಡಾ ಮಂದಿರದಲ್ಲಿದ್ದಾಗ–ಜೈಲನ್ನು ಮಂದಿರ ಎನ್ನು

ತ್ತಿದ್ದರವರು-ಇವರ ಜೊತೆಯಿರುತ್ತಿದ್ದ ಕಾಂಗ್ರೆಸ್ ಪ್ರಮುಖರೂ ಚರಖದಿಂದ ನೂಲು ತೆಗೆಯುತ್ತಿದ್ದರು. ಹತ್ತಿ ಬಡಿದು, ಹಂಜಿ ಮಾಡಲು ಎಲ್ಲರಿಗೂ ಬಾರದು. ಆದ್ದರಿಂದ ಗಾಂಧೀಜಿ ತಾವೇ ಹಂಜಿ ಹೊಸೆದು ಅಗತ್ಯವಿದ್ದವರಿಗೆ ಕೊಡುತ್ತಿದ್ದರು. ಪರಾವಲಂಬನೆ ಆದಷ್ಟು ಕಡಮೆಮಾಡಿಕೊಳ್ಳಲು ತಮ್ಮ ಆವಶ್ಯಕತೆಗಳನ್ನು ಕಡಮೆ ಮಾಡಿಕೊಂಡು ಜೀವನ ಸರಳಗೊಳಿಸಿಕೊಳ್ಳುವುದು ಇದರ ಹಿನ್ನೆಲೆ.

ಮೀರಾಬೆನ್ ಗಾಂಧಿಯವರ ಅಚ್ಚುಮೆಚ್ಚಿನ, ಪ್ರೀತಿಪಾತ್ರಳಾದ ಆಂಗ್ಲ ಶಿಷ್ಯೆ. ಈಕೆಯ ಪೂರ್ವಾಶ್ರಮದ ಆಂಗ್ಲ ಹೆಸರು ಮಿಸ್ ಸ್ಲೇಡ್. ರಾಜಮನೆತನಕ್ಕೆ ಸೇರಿದ ಶ್ರೀಮಂತಳ ಪುತ್ರಿ. ಈಕೆಯ ತಂದೆ ಬ್ರಿಟಿಷ್ ನೌಕಾದಳದ ಉನ್ನತ ಅಧಿಕಾರದ ಅಡ್ಮಿರಲ್ ಆಗಿದ್ದರು. ಕ್ಷಣಿಕ ಭೋಗ ವಿಲಾಸಿ ಜೀವನ ಇವಳಿಗೆ ಬೇಡವಾಯಿತು. ತನಗೆ ಸೂಕ್ತ ಮಾರ್ಗದರ್ಶನ ನೀಡಬಲ್ಲವರು ಯಾರೆಂದು ಅರಸುತ್ತಿದ್ದಾಗ, ಚಿಂತಕ ಇಟಲಿಯ ರೋಮನ್‌ರೋಲ ಗಾಂಧಿಯವರಲ್ಲಿ ಹೋಗುವಂತೆ ಸಲಹೆ ಮಾಡಿದರು. ರೋಲಾ ಅವರ ಸಲಹೆಯಂತೆ ಭಾರತಕ್ಕೆ ಬರಲು ನಿಶ್ಚಯಿಸಿದಳು. ಗಾಂಧಿಯವರ ಬದುಕು ಮತ್ತು ತತ್ವಗಳಲ್ಲಿ ಆಸಕ್ತಿ ಬೆಳೆಯಿತು. ಅವರ ಶಿಷ್ಯರಾಗಿ ಅವರಲ್ಲಿಯೇ ಉಳಿಯಬೇಕೆಂಬ ಆಸೆ ಉತ್ಕಟವಾಯಿತು. ಒಂದೇ ಸಮನೆ ಹಟಮಾಡಿ ತಂದೆ ತಾಯಿಯವರನ್ನು ಒಪ್ಪಿಸಿದಳು. ಗಾಂಧಿಯವರ ಸಮೀಪದಲ್ಲಿರಲು ಅವಕಾಶ ಕೊಡಬೇಕೆಂದು ಕೋರಿ ಅವರಿಗೆ ಪತ್ರ ಬರೆದಳು. ಇವಳ ಪರಿವರ್ತನೆ ಮತ್ತು ಆಕಾಂಕ್ಷೆ ನಿಜವೇ ಎಂದು ಸಂದೇಹ ಗಾಂಧಿಯವರಿಗೆ. ಶ್ರೀಮಂತಳಾಗಿ ಹುಟ್ಟಿ ಬೆಳೆದ ಆಂಗ್ಲ ಕನ್ಯೆಗೆ, ಭಾರತದ ಹಾಗೂ ಆಶ್ರಮದ ಕಠಿಣ ಜೀವನ ಒಗ್ಗೀತೆ ಎಂಬ ಸಂಶಯ. ಆಶ್ರಮದ ನಿತ್ಯ ಜೀವನ ಎಷ್ಟು ಕಠಿಣ ಎಂದು ತಿಳಿಸಿ ಪತ್ರ ಬರೆದರು. ಎಲ್ಲಕ್ಕೂ ಸಿದ್ಧಳಾಗಿರುವುದಾಗಿ ಪತ್ರ ಬರೆದು ಉತ್ತರಿಸಿದಳು. ಆದರೂ ಗಾಂಧೀಜಿ ಸುಲಭವಾಗಿ, ಹಗುರವಾಗಿ ಒಪ್ಪಿಕೊಳ್ಳಲಿಲ್ಲ. ಸ್ತ್ರೀಯ ಚಂಚಲ ಚಪಲ ಚಿತ್ತ ಬದಲಾಯಿಸಬಹುದೆಂದು ಒಂದು ವರ್ಷ ಕಳೆದು ಬಾ ಎಂದರು.

ಒಂದು ವರ್ಷ ಕಳೆಯುವುದರೊಳಗಾಗಿಯೇ ಮಿಸ್ ಸ್ಲೇಡ್ ಆಶ್ರಮಕ್ಕೆ ಬಂದಳು. ಈಕೆಗೆ ಭಾರತೀಯ ಪದ್ಧತಿಯ ಖಾದಿ ಸೀರೆ ಉಡಿಸಿದರು. ತನ್ನಮೇಲೆ ಕಾಮುಕನ ಕಣ್ಣು ಬೀರದಿರಲೆಂದು ಆಕೆ ತನ್ನ ತಲೆ ಕೂದಲು ತೆಗೆಸಿ ಮುಂಡನ ಮಾಡಿಸಿಕೊಂಡು ವಿರೂಪಗೊಳಿಸಿಕೊಂಡಳು. ಅವಳಿಗೆ ಮೀರಾ ಬೆಹನ್ ಎಂದು ನಾಮಕರಣ ಮಾಡಿದರು. ಅಂದಿನಿಂದ ಮಿಸ್ ಸ್ಲೇಡ್ ಗಾಂಧೀ ಭಕ್ತ ಮೀರಾ ಆದಳು. ಜೀವನ ನೂತನ ಸ್ವರೂಪ ತಾಳಿತು. ಗಾಂಧಿಯವರ ಸೇವೆಯಲ್ಲೇ ತಲ್ಲೀಣಳಾಗಿ ಅದರಲ್ಲಿಯೇ ಆನಂದ ಅನುಭವಿಸುತ್ತಿದ್ದಳು. ಸ್ನಾನಕ್ಕೆ ಸಿದ್ಧ ಮಾಡುವುದು, ಊಟಕ್ಕೆ ಬಡಿಸುವುದು, ಕಾಗದಪತ್ರ ಬರೆಯುವುದು ಹೀಗೆ ಎಲ್ಲ ಕೆಲಸಗಳಲ್ಲೂ ಬಾಪೂಗೆ

ಸಹಾಯಕಳಾಗಿ ಸೇವೆ ಸಲ್ಲಿಸುತ್ತಿದ್ದಳು. ತನ್ನ ನಿರೀಕ್ಷೆ ಮೀರಿ ಹೆಚ್ಚಿನ ಆನಂದ ಗಾಂಧಿಯವರ ಮಾರ್ಗದರ್ಶನದಲ್ಲಿ ಕಾಣುತ್ತಿರುವುದಾಗಿ ರೋಮನ್‌ರೋಲ ಅವರಿಗೆ ಪತ್ರ ಬರೆದು ತಿಳಿಸಿದಳು.

ಹತ್ತಿ ಎಕ್ಕಲು ಬಳಸುವ ಬಿಲ್ಲಿನ ದಾರ ಹದಮಾಡಲು ಮೇಣ ಬಳಸುವುದುಂಟು. ಆದರೆ ಗಾಂಧೀಜಿ ಮತ್ತು ಕಾಲೇಲ್ಕರ್ ಯಾವುದಾದರೂ ಮರದ ಎಲೆ ಇದಕ್ಕೆ ಪ್ರತಿಯಾಗಿ ಬಳಸತೊಡಗಿದ್ದರು. ಕಾಲೇಲ್ಕರು ಸಾಮಾನ್ಯವಾಗಿ ಬಳಸುತ್ತಿದ್ದುದು ಬೇವಿನ ಎಲೆ. ಒಂದು ದಿನ ಮೀರಾ ಸಮೀಪದಲ್ಲಿ ಇಲ್ಲದಿದ್ದಾಗ ಒಬ್ಬ ಸ್ವಯಂಸೇವಕನನ್ನು ಕರೆದು ಜೊಬ್ಬಳಿ ಮರದ ಕೆಲವು ಎಲೆ ತೆಗೆದುಕೊಂಡು ಬರುವಂತೆ ಹೇಳಿದರು. ಅವನು ಮರದ ಟೊಂಗೆ ಮುರಿದು ಮೀರಾ ಬೆಹನ್ ಕೈಗೆ ಕೊಟ್ಟ. ಆಗ ಸೂರ್ಯಾಸ್ತಮವಾಗಿತ್ತು. ಸಂಜೆಯಾಗುತ್ತಲೇ ಕೆಲವು ಮರದ ಎಲೆಗಳು ಮುದುಡಿಕೊಳ್ಳುವುದನ್ನು ಸೂಕ್ಷ್ಮಗ್ರಾಹಿ ಮೀರಾ ಗಮನಿಸಿದ್ದಳು. "ಬಾಪೂಜಿ, ಈ ಎಲೆಗಳು ಮುದುಡಿಕೊಂಡಿರುವುದನ್ನು ನೋಡಿದಿರಾ. ಅವೂ ನಿದ್ರಿಸುತ್ತಿರುವಂತೆ ಭಾಸವಾಗುವುದಿಲ್ಲವೇ" ಎಂದಳು.

ಈ ಮಾತು ಕೇಳಿ ಗಾಂಧೀಜಿ ಮರಗಳ ವಿಷಯವಾಗಿ ಒಂದು ಉಪನ್ಯಾಸವನ್ನೇ ಕೊಟ್ಟರು. ಮರಗಳಿಗೂ ಜೀವ ಇದೆ. ಅವಕ್ಕೂ ಗಾಳಿ, ನೀರು, ಆಹಾರ ಅಗತ್ಯ. ಗಾಳಿಯಿಂದ ಇಂಗಾಲಾಮ್ಲ ತೆಗೆದುಕೊಂಡು, ವಾಯು ಶುದ್ಧಗೊಳಿಸಿ ನಮಗೆ ಅಗತ್ಯವಾದ ಆಮ್ಲಜನಕ ಕೊಡುತ್ತವೆ. ಬೇರಿನ ಮುಖಾಂತರ ನೀರು ಸೇವಿಸುತ್ತವೆ. ಭೂಮಿ ಮತ್ತು ಗೊಬ್ಬರದಿಂದ ತಮಗೆ ಅಗತ್ಯವಾದ ಆಹಾರ ಪಡೆಯುತ್ತವೆ. ಪಶು ಪಕ್ಷಿಗಳಿಗೆ ಬೇಕಾದ ಹಣ್ಣು, ಹೂವು, ಕಾಯಿ ಉದುರಿಸುತ್ತವೆ. ಇನ್ನೂ ಎಷ್ಟೋ ಬಗೆಯಲ್ಲಿ ಪಶು, ಪಕ್ಷಿ ಮತ್ತು ಮಾನವನಿಗೆ ಉಪಕಾರ ಮಾಡುತ್ತವೆ. ರಾತ್ರಿಯಾಗುತ್ತಲೇ ನಿದ್ರಿಸುತ್ತವೆ. ರಾತ್ರಿ ಅವು ನಿದ್ರಿಸುತ್ತಿರುವಾಗ ಎಲೆ, ಹೂವು, ಹಣ್ಣು, ಕಾಯಿ ಕೊಯ್ಯುವುದು ತಪ್ಪು ಕೆಲಸ. ನಿದ್ರಿಸುತ್ತಿರುವ ಹಸು ಮಕ್ಕಳನ್ನು ಎಬ್ಬಿಸುವಂತೆ.

ಇನ್ನೊಂದು ತಪ್ಪೂ ನೀನು ಮಾಡಿರುವೆ. ನನಗೆ ಬೇಕಾಗಿದ್ದುದು ಮೂರು–ನಾಲ್ಕು ಎಲೆ. ಒಂದು ಸಣ್ಣ ರೆಂಬೆಯನ್ನೇ ಕಿತ್ತು ತಂದಿರುವೆ. ನಾಲ್ಕು ಎಸಳು ತಂದಿದ್ದರೆ ಸಾಕಾಗಿತ್ತು. ಅಗತ್ಯವಾದುದಕ್ಕಿಂತ ಹೆಚ್ಚು ಪಡೆಯುವುದು ಕಳ್ಳತನಕ್ಕೆ ಸಮ. ಇನ್ನೊಬ್ಬನಿಗೆ ಆಗತ್ಯವಾದುದನ್ನು ನಾವು ಅಪಹರಿಸಿದಂತೆ ಆಗುತ್ತೆ. ನಮಗೂ ಸಕಲ ಜೀವಜಂತುಗಳಿಗೂ ಅವ್ಯಕ್ತವಾದ ಸಂಬಂಧ ಭಗವಂತ ಕಲ್ಪಿಸಿದ್ದಾನೆ. ಪಶು ಪಕ್ಷಿಗಳನ್ನೂ, ಗಿಡಮೃಗಗಳನ್ನೂ ಅಕ್ಕರೆಯಿಂದ ಪಾಲಿಸಿ ಪೋಷಿಸಬೇಕು. ಅವು ನಮಗೆ ಪ್ರತ್ಯುಪಕಾರ ಮಾಡುತ್ತವೆ.

ಪೂಮಾಲೆ ಹಾಕಿಕೊಳ್ಳಲು ಗಾಂಧೀಜಿ ಇಚ್ಛಿಸುತ್ತಿರಲಿಲ್ಲ. ಪ್ರೇಮದ ಬಲ ವಂತಿಕೆಗೆ ಮಣಿದು, ಹಾರ ಹಾಕುವವರ ಮನ ನೋಯಿಸದಿರಲು ಹಾರ ಹಾಕಿಸಿ ಕೊಳ್ಳುವರು. ರಾಶಿ ಹೂ ಕುಯ್ದು, ಮಾಲೆಯಾಗಿ ಮಾಡಿ ಅವರ ಕೊರಳಿಗೆ ಹಾಕಿ ಜನ ಸಂತೋಷಪಡುವರು. ಆದರೆ ಮಹಾತ್ಮರಿಗೆ ಇದರಿಂದ ಸಂತೋಷಕ್ಕಿಂತ ಸಂಕಟವೇ ಅಧಿಕ. ಮುಖದಮೇಲೆ ಅವರು ಅನುಭವಿಸುತ್ತಿದ್ದ ವೇದನೆ ಎದ್ದು ಕಾಣುವುದು. ಕ್ರಮೇಣ, ಪುಷ್ಪ ಮಾಲಿಕೆಗೆ ಬದಲಾಗಿ ಖಾದಿ ಲಡಿ ಕೊಡಿ ಎನ್ನು ತ್ತಿದ್ದರು.

ಕವಿವರ್ಯ ರವೀಂದ್ರನಾಥ ಠಾಕೂರರ ಭಾವನೆಯೂ ಇದೆ. ಒಮ್ಮೆ ಅವರು ಬೆಂಗಳೂರಿಗೆ ಬಂದಿದ್ದರು. ಲಾಲ್‌ಬಾಗ್ ಉದ್ಯಾನವನದಲ್ಲಿ ಸಭೆ ಏರ್ಪಡಿಸಲಾ ಗಿತ್ತು. ಪುಷ್ಪ ಅವರಿಗೆ ಬಹುಪ್ರಿಯ. ಒಳ್ಳೆಯ ಹೂಗಳನ್ನು ಕಂಡರೆ ಆನಂದ ಪುಲ ಕಿತರಾಗುತ್ತಿದ್ದರು. ಹೂಗಳನ್ನು ಕುಯ್ದು, ಹೂದಾನಿಯಲ್ಲಿರಿಸಿ, ಅವರ ಮೇಜಿನ ಮೇಲಿರಿಸಿದರು. ಕುರ್ಚಿಯಲ್ಲಿ ಕುಳಿತಿದ್ದ ಕವಿ ತಿಲಕರು ಎದ್ದು ನಿಂತು, ಇದನ್ನು ತೆಗೆತೆಗೆ ಎಂದು ಚಟಪಟಿಸಿದರು. ಹೂದಾನಿ ತೆಗೆಯುವವರೆಗೂ ಕುಳಿತುಕೊಳ್ಳಲಿಲ್ಲ. ಸಭಿಕರಿಗೆ ಇದರ ಅರ್ಥವಾಗಲಿಲ್ಲ. ಅನಂತರ ಅವರ ಕಾರ್ಯದರ್ಶಿ ತಿಳಿಸಿದರು. ಚಿಗುರು ತ್ತಿರುವ ರೆಂಬೆಗಳ ತುದಿ ಮುರಿಯುವುದು ಹಸುಳೆಗಳನ್ನು ಕೊಲೆ ಮಾಡಿದಂತೆ ಎನ್ನು ತ್ತಿದ್ದರು. ಈ ಉದ್ಯಾನವನದ ಅಧಿಕಾರಿ ಮರಿಗೌಡರು.

ಸಸ್ಯ ವಿಜ್ಞಾನಿ ಜಗದೀಶ ಚಂದ್ರಬೋಸರು ಗಿಡಗಳೂ ಮಾನವನಂತೆಯೇ ಸಂವೇದನೆ ಅನುಭವಿಸುತ್ತವೆ, ಎಂದು ವೈಜ್ಞಾನಿಕವಾಗಿ ಸ್ಥಿರಪಡಿಸಿರುತ್ತಾರೆ. ಹೆಸರಿಗೆ ತಕ್ಕಂತೆ 'ಮುಟ್ಟಿದರೆ ಮುನಿ' ಸಸಿ, ಮುಟ್ಟುತ್ತಲೇ ತನ್ನ ಎಲೆಗಳನ್ನು ಮುದುಡಿಸಿ ಕೊಳ್ಳುತ್ತದೆ. ಮರದ ಸಣ್ಣ ಟೊಂಗೆ ಮುರಿದು ಮದ್ಯ ಬೆರಸಿದ ನೀರಿನಲ್ಲಿಟ್ಟರೆ, ಉನ್ಮತ್ತರಾದಂತೆ ತೂಗಾಡುತ್ತವೆ. ಸಂಗೀತ ಆಲಿಸಿ ಸಂತೋಷಿಸಿ ಹೆಚ್ಚು ಫಲ ಕೊಡುತ್ತವೆ. ಇತ್ತೀಚೆಗೆ ಅದಕ್ಕೆ ಅತೀಂದ್ರಿಯ ಪ್ರಜ್ಞೆಯೂ ಉಂಟು ಎಂದು ಹೇಳ ಲಾಗುತ್ತಿದೆ.

ಹೂವು ಮಹಿಳೆಯರುಡುವ ಸೊಬಗಿನ ಸೀರೆಯಂತೆ. ಗಿಡಗಳಿಂದ ಹೂವು ಕುಯ್ಯುವುದು ಅವುಗಳ ಅಂದಚಂದ ಕೆಡಿಸಿದಂತೆ. ಅವುಗಳಿಗೆ ನೋವಾಗದಂತೆ ಭಗವಂತನಿಗೆ ಅರ್ಪಿಸಲು ಅಗತ್ಯವಾದಷ್ಟು ಹೂ ಬಿಡಿಸಿಕೊಳ್ಳಬಹುದು. ನಮ್ಮ ಸನಾತನ ಪದ್ಧತಿಯಲ್ಲಿ ಹೂಗಳನ್ನು ಬಿಡಿಸಿಕೊಳ್ಳುವಾಗ ಕ್ಷಮಾ ಸ್ತೋತ್ರಪಠಿಸುತ್ತಾ ಮರಗಳ ಕ್ಷಮೆಯಾಚಿಸುವುದು ವೇದಕಾಲದಿಂದ ನಡೆದು ಬಂದಿರುವ ಪುರಾತನ ಪದ್ಧತಿ.

ಬಂಗಾಳವನ್ನು ಭೀಕರ ಕ್ಷಾಮ ಆವರಿಸಿತ್ತು. ವೈಸರಾಯರ ಭೇಟಿಗಾಗಿ ಅವರ ವೈಭವಪೂರ್ಣ ಭವ್ಯ ಸೌಧಕ್ಕೆ ಹೊರಟಿದ್ದರು ಗಾಂಧೀಜಿ. ದೊಡ್ಡ ಆವರಣದಲ್ಲಿ ಬಣ್ಣ ಬಣ್ಣದ ಹೂಗಿಡಗಳನ್ನೂ ಸಸಿಗಳನ್ನೂ ನೀರು ಹಾಯಿಸಿ ಬೆಳಸುತ್ತಿದ್ದರು. ಇದರ ಕಡೆ ಗಾಂಧಿಯವರ ದೃಷ್ಟಿ ಹೊರಳಿತು. ಈ ಹೂಗಿಡಗಳಿಗೆ ಬದಲಾಗಿ ಉಪಯುಕ್ತ ತರಕಾರಿ ಬೆಳಸಬಾರದೆ ಎಂದರು. ಬಿರ್ಲ ಅವರ ಅತಿಥಿಯಾಗಿ ಅವರ ಬಂಗಲೆಯಲ್ಲಿದ್ದರು ಗಾಂಧೀಜಿ. ಅಲ್ಲಿಯೂ ಇದೇ ಸಲಹೆ. ಯರವಡಾ ಜೈಲಿನ ಸಣ್ಣ ಪಾತಿಯಲ್ಲಿ ಕಸ್ತೂರಿಬಾ ಹೂಗಿಡಗಳನ್ನು ಬೆಳಸುತ್ತಿದ್ದರು. ಅವುಗಳನ್ನು ತೆಗೆಸಿ ತರಕಾರಿ ಸಸಿಗಳನ್ನು ನೆಡಸಿದರು. ಬಿರ್ಲ ಭವನದಲ್ಲಿ ಗಾಂಧಿಯವರ ಜೊತೆಯಲ್ಲಿದ್ದ ಅಗಾಥ ಹ್ಯಾರಿಸ್ ಕೇಳಿದರು, "ಏನು, ಬಾಪೂಜಿ, ಸುಂದರವೂ ನಯನಮನೋಹರವೂ ಆದ ಬಣ್ಣ ಬಣ್ಣದ ಹೂಗಿಡ ಬೆಳಸಬಾರದೆ ? ದೇಹಕ್ಕೆ ಆಹಾರದಷ್ಟೇ ಅಗತ್ಯವಲ್ಲವೇ, ವರ್ಣನಾತೀತ ಸುಂದರ ಪುಷ್ಪಗಳು."

"ಸುಂದರವಾದುದು ಉಪಯುಕ್ತವಾಗಿರಬೇಕಾದ್ದಿಲ್ಲ; ಉಪಯುಕ್ತವಾದುದು ಸುಂದರವಾಗಿರಬೇಕಾಗಿಲ್ಲ. ಈ ರೀತಿಯ ಶಿಕ್ಷಣ ನಮ್ಮದು. ಉಪಯುಕ್ತವಾದುದು ಸುಂದರವಾಗಿಯೂ ಇರಬಲ್ಲದು. ಇದನ್ನು ಖಚಿತ ಮಾಡಿಕೊಡಬೇಕೆಂದು ನನ್ನ ಆಶಯ. ತರಕಾರಿಯ ಬಣ್ಣಗಳಲ್ಲೂ ಸೌಂದರ್ಯ ಗ್ರಹಿಸುವಂತೆ ಮಾಡಬೇಕೆಂಬುದು ನನ್ನ ಅಭಿಲಾಷೆ" ಎಂದರು. ಅವರ ಅಭೀಷ್ಟದಂತೆ ಬಿರ್ಲ ಭವನದ ಹೂಗಿಡಗಳನ್ನು ತೆಗೆದುಹಾಕಿ, ತರಕಾರಿ ಸಸಿ ನೆಡಲಾಯಿತು.

ಬಡವರ ಬಂಧು

ಗಾಂಧೀಜಿ ಆಫ್ರಿಕಾದಲ್ಲಿದ್ದಾಗ ಅಲ್ಲಿನ ನಾನಾ ಭಾಗಗಳಲ್ಲಿದ್ದ ಭಾರತೀಯರೊಡನೆ ಸಂಪರ್ಕ ಇಟ್ಟುಕೊಂಡಿದ್ದರು. 1885ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಸುಮಾರು 5,000 ಭಾರತೀಯ ವರ್ತಕರು, ಅಡುಗೆ ಮತ್ತು ಇತರ ಹವ್ಯಾಸಗಳಲ್ಲಿ ತೊಡಗಿದ್ದವರು ಇದ್ದರು. ಮೂವರು ಭಾರಿ ವರ್ತಕರು ಇಂಗ್ಲೆಂಡ್, ಪೋರ್ಟ್ ಎಲಿಜಿಬೆತ್, ಡರ್ಬಾನ್ ಮತ್ತು ಭಾರತದಿಂದ ಸರಕು ಸಾಮುಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. 2,000 ಬೀದಿ ಮಾರಾಟಗಾರರು ಇವರಿಂದ ಮಾಲು ಕೊಂಡು ತಲೆಯ ಮೇಲೆ ಹೊತ್ತು ವ್ಯಾಪಾರ ಮಾಡುತ್ತಿದ್ದರು. ಐರೋಪ್ಯರ ಮನೆಗಳಲ್ಲಿ, ಹೋಟೆಲುಗಳಲ್ಲಿ ಸುಮಾರು 1,500 ಅಡುಗೆ ಮತ್ತು ಪರಿಚಾರಕರಿದ್ದರು. ಇವರಲ್ಲಿ 1,000 ಮಂದಿ ಜೋಹಾನ್ಸ್‌ಬರ್ಗಿನಲ್ಲಿರುತ್ತಿದ್ದರು. 1894 ರಲ್ಲಿ ನೆಟಾಲ ಪ್ರಾಂತ ಒಂದರಲ್ಲೇ ನಾಲ್ಕು ಲಕ್ಷ ಜೂಲೂ ಜನಾಂಗದವರು, 40,000 ಐರೋಪ್ಯರು, 60,000 ಭಾರತೀಯ ಜೀತದಾಳು, 10,000 ವಿಮುಕ್ತ ಜೀತರು, 10,000 ಸ್ವತಂತ್ರ ಭಾರತೀಯರಿದ್ದರು. ಅಪಾರ ಸಂಖ್ಯೆಯಲ್ಲಿ ಭಾರತೀಯರು ಬರುವುದರಿಂದ ತಮ್ಮ ವ್ಯಾಪಾರೋದ್ಯಮಕ್ಕೆ ತೊಂದರೆ ಆದೀತೆಂದು ಇದನ್ನು ನಿಯಂತ್ರಿಸಲು ಇದೇ ವರ್ಷದಲ್ಲಿ ಸರ್ಕಾರ ಶಾಸನ ಮಾಡಿತು. ಇದರಿಂದ ಭಾರತೀಯರು ತುಂಬ ತೊಂದರೆಗೆ ಒಳಗಾದರು. ಇವೆಲ್ಲವನ್ನೂ ಪ್ರತಿಭಟಿಸಲು ಮತ್ತೆ ಗಾಂಧೀಜಿಯವರನ್ನು ಆಫ್ರಿಕ ಬರಮಾಡಿಕೊಂಡಿತು.

ಭಾರತೀಯರು ಅನುಭವಿಸುತ್ತಿದ್ದ ಕಷ್ಟಗಳು ನಾನಾ ಬಗೆಯವು. ರಕ್ಷಣೆ ಕೊಡಬೇಕಾದ ಸರ್ಕಾರವೇ ಅವರ ವಿರೋಧಿ. ಇದರ ಹಿತರಕ್ಷಣೆಗೆ ಒಬ್ಬನನ್ನು ನೇಮಿಸುವುದು ಸರ್ಕಾರದ ಹೊಣೆ. ಮೇಸನ್ ಹೆಸರಿನ ಆಂಗ್ಲ ನೇಮಿತನಾದ. ವ್ಯಕ್ತಿ ಗುಣಶಾಲಿ. ಆದರೇನು ಹಿಂದೂಸ್ತಾನಿ, ತಮಿಳು, ಗುಜರಾತಿ ಯಾವ ಭಾರತೀಯ ಭಾಷೆಯ ಗಂಧವೂ ಇಲ್ಲ. ಇನ್ನೂ ಕಠಿಣವಾದ ಶಾಸನ ಜಾರಿಗೆ ತರುವ ಉದ್ದೇಶದಿಂದ ಈತನನ್ನು ಭಾರತಕ್ಕೆ ನೆಟಾಲ್ ಸರ್ಕಾರ ಕಳುಹಿಸಿಕೊಟ್ಟಿತ್ತು. ಈ ಮಹನೀಯನೇ ಭಾರತೀಯರ ಹಿತರಕ್ಷಣೆಗಾಗಿ ನೇಮಿಸಲ್ಪಟ್ಟ ಪ್ರಥಮ ರಕ್ಷಣಾ ಅಧಿಕಾರಿ.

ನ್ಯಾಯ ವಿತರಣೆ ಮಾಡಲು ನೇಮಿತರಾಗಿದ್ದ ಜಿಲ್ಲಾ ನ್ಯಾಯಾಧೀಶರ ನ್ಯಾಯ ವಿವೇಚನೆ ಹೇಳತೀರದು. ಒಂದೆರಡು ಉದಾಹರಣೆ ಸಾಕು. ಉಮುಜಿಂಟೋ

ವಿಭಾಗದ ನ್ಯಾಯಧೀಶ ಡಿಹಾರ್ಟ್‌ಮನ್. ಛಡೀ ಶಿಕ್ಷೆಯಲ್ಲಿ ಇವರಿಗೆ ಪೂರ್ಣ ವಿಶ್ವಾಸ. ಒಬ್ಬ ಭಾರತೀಯ ಮತ್ತೊಬ್ಬನ ಒಂದು ಹಳೆಯ ಷರಟು ಕದ್ದ. ಇವನಿಗೆ ಒಂದು ತಿಂಗಳು ಶಿಕ್ಷೆ ಮತ್ತು ಹತ್ತು ಛಡೀ ಏಟು. ತನ್ನ ಯಜಮಾನನ ತುಣುಕು ಸಾಬೂನು ಕದ್ದುದಕ್ಕಾಗಿ ಇನ್ನೊಬ್ಬನಿಗೂ ಇದೇ ಶಿಕ್ಷೆ. ಒಂದು ಜೊತೆ ಹಳೆಯ ಜೋಡು ಕದ್ದುದಕ್ಕೆ ಒಂದು ತಿಂಗಳ ಕಾರಾಗೃಹ ಮತ್ತು ಹತ್ತು ಛಡೀ ಏಟು. ಎರಡು ಛಡೀ ಏಟು ಸಹಿಸಿಕೊಳ್ಳಲಾಗದೆ ಮೂರ್ಛೆ ಹೋದ ದೃಷ್ಟಾಂತಗಳು ಎಷ್ಟೋ, ಕೂಲಿಗಳಿಗೆ ಇದೇ ಯೋಗ್ಯ ಶಿಕ್ಷೆ ಎನ್ನುತ್ತಿದ್ದ ನ್ಯಾಯಾಧೀಶ.

ದರ್ಬಾನಿನ ಪಾಂಟ್ರಿ ಎಂಬ ರೊಟ್ಟಿ ತಯಾರಕನಲ್ಲಿ ತಂಗವೇಲು ದುಡಿಯುತ್ತಿದ್ದ. ಹಿಟ್ಟು ಕೀಡಿ ಕೀಡಿ ಸುಸ್ತಾಗುತ್ತಿದ್ದ. ನನ್ನನ್ನು ಬೇರೆ ಯಜಮಾನನಲ್ಲಿಗೆ ಕಳುಹಿಸಿಕೊಡಿ ಎಂದು ರಕ್ಷಣಾಧಿಕಾರಿಯಲ್ಲಿ ನಿವೇದಿಸಿಕೊಂಡ. ಅಧಿಕಾರಿ ಒಪ್ಪಲಿಲ್ಲ. ಪಾಂಟ್ರಿ ಅಂಗಡಿಯಲ್ಲೇ ದುಡಿ ಎಂದ. ನಾನು ಅವರಲ್ಲಿ ಕೆಲಸ ಮಾಡಲಾರೆ. ನನ್ನ ಮೇಲೆ ಕಳ್ಳತನದ ಸುಳ್ಳು ಆಪಾದನೆ ಅವರು ಹೊರಿಸಬಹುದು ಎಂದ. ಕಡೆಗೆ ರಕ್ಷಣಾಧಿಕಾರಿ ತಂಗವೇಲುಗೆ ಪೋಲಿಸರ ಉಪಟಳದಿಂದ ತಪ್ಪಿಸಲು ರಹದಾರಿ ಕೊಟ್ಟ.

ಆದರೇನು ? ಪೋಲಿಸರು ಅವನನ್ನು ರಕ್ಷಣಾಧಿಕಾರಿಯ ಆವರಣದಲ್ಲಿಯೇ ಬಂಧಿಸಿದರು. ಯಜಮಾನನಿಂದ ತಲೆ ತಪ್ಪಿಸಿಕೊಂಡು ಓಡಿಹೋದನೆಂದು ಡಿಹಾರ್ಟ್‌ಮನ್ ಅವರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾದ. ಮಾಲಿಕ ಪಾಂಟ್ರಿಯ ಹಿಂಸೆ ತಡೆಯಲಾರದೆ ಓಡಿಹೋದುದು ನಿಜವೆಂದು ತಂಗವೇಲು ಒಪ್ಪಿಕೊಂಡ. ತಾಂತ್ರಿಕ ಅಪರಾಧಕ್ಕಾಗಿ ಪಾಂಟ್ರಿಗೆ ಐದು ಶಿಲಿಂಗ್ ದಂಡ ವಿಧಿಸಲ್ಪಟ್ಟಿತು.

ತಂಗವೇಲುವನ್ನು ಬಂಧಿಸದಂತೆ ರಹದಾರಿ ಕೊಡಲು ರಕ್ಷಕನಿಗೆ ಅಧಿಕಾರವಿಲ್ಲ ಎಂದ ನ್ಯಾಯಾಧೀಶ ಡಿಹಾರ್ಟ್‌ಮನ್. ರಕ್ಷಣಾಧಿಕಾರಿ ಸರ್ವೋಚ್ಚ ನ್ಯಾಯಾಲಯಕ್ಕೆ ತೀರ್ಪಿನ ವಿರುದ್ಧ ಅರ್ಜಿ ಸಲ್ಲಿಸಿದ. ರಹದಾರಿ ಕೊಡುವ ಅಧಿಕಾರವೇ ಇಲ್ಲ ರಕ್ಷಣಾಧಿಕಾರಿಗೆ ಎಂದಿತು ಈ ನ್ಯಾಯಾಲಯ. ಕೆಳ ಕೋರ್ಟು ತಂಗವೇಲುಗೆ ಎಚ್ಚರಿಕೆ ಕೊಟ್ಟು ಬಿಡುಗಡೆ ಮಾಡಿತ್ತು. ಇದು ಶಾಸನಬದ್ಧವಲ್ಲ ಎಂದಿತು ಸುಪ್ರೀಂ ಕೋರ್ಟು.

ತಂಗವೇಲು ಪರ ಅದೇ ಅಂಗಡಿಯ ಮತ್ತೊಬ್ಬ ಕೂಲಿ ಸಾಕ್ಷಿ ನೀಡಿದ್ದ. ಇಬ್ಬರನ್ನೂ ಬಂಧಿಸುವ ಆಜ್ಞೆ ಹೊರಟಿತು. ತಂಗವೇಲು ಮತ್ತೆ ಬಂಧಿತನಾದ. ಹಳೆಯ ಯಜಮಾನ ಪಾಂಟ್ರಿ ಬಳಿಗೇ ಅವನನ್ನು ಎಳೆದೊಯ್ಯಲಾಯಿತು. ತಂಗವೇಲು ರಕ್ಷಣಾಧಿಕಾರಿಯ ಮರೆಹೊಕ್ಕ. ಆತ ಗವರ್ನರ್ ಬಳಿಗೆ ಹೋಗಿ, ಇಬ್ಬರು

ಜೀತದಾಳುಗಳನ್ನೂ ಒಪ್ಪಂದದಿಂದ ಮುಕ್ತಿಗೊಳಿಸಿದ. ತಂಗವೇಲು ಮತ್ತೊಬ್ಬ ಮಾಲೀಕನ ದಾಸನಾದ. ಸಾಕ್ಷಿ ನೀಡಿದವನಿಗೆ ಒಂದು ವಾರದ ಶಿಕ್ಷೆ ವಿಧಿಸಲ್ಪಟ್ಟಿತು.

ಗುಪಿಗೌಂಡರ್, ನಾರಾಯಣಸ್ವಾಮಿ ಮತ್ತು ಭಾರತೀಯರು ಬಿನೀವ ಎಸ್ಟೇಟಿನ ಜೀತದಾಳುಗಳು. ಇವರೆಲ್ಲರೂ ಸಾಮೂಹಿಕವಾಗಿ ನವೆಂಬರ್ 1896 ರಲ್ಲಿ ಉಮಜಿಂಟೀ ನಗರಕ್ಕೆ ಹೋದರು. ಈ ಕಾರಣಕ್ಕಾಗಿ ಅನುಚ್ಛೇದ 101 ರಂತೆ ಎಲ್ಲರೂ ಬಂಧಿತರಾದರು. ನ್ಯಾಯಾಧೀಶರಲ್ಲಿ ವಿಚಾರಣೆಗೆ ಗುರಿಯಾದರು. ಅನುಮತಿ ಪಡೆಯದೆ ತೋಟ ಬಿಟ್ಟು ಹೋದುದೇ ಇವರ ಅಪರಾಧ. ತಮ್ಮ ಸಹೋದ್ಯೋಗಿಯೊಬ್ಬನನ್ನು ಮಣ್ಣು ಮಾಡಲು ಎಲ್ಲರೂ ಸ್ಮಶಾನಕ್ಕೆ ಹೋಗಿದ್ದುದಾಗಿ ಹೇಳಿಕೆ ಕೊಟ್ಟರು.

ಇದೊಂದು ನೆಪ. ಹಿಂದಿನ ದಿನ ತೋಟದ ಸರ್ದಾರನ ಮೇಲೆ ಹಲವರು ಕೈ ಮಾಡಿದ್ದರು. ಈ ಕಾರಣಕ್ಕಾಗಿ ಇಬ್ಬರನ್ನು ಬಂಧಿಸಲಾಗಿತ್ತು. ಇವರೆಲ್ಲರೂ ನ್ಯಾಯಾಧೀಶರಲ್ಲಿ ದೂರು ಕೊಡಲು ನಗರಕ್ಕೆ ಬಂದಿರಬೇಕು. ಹೀಗೆ ತೀರ್ಪಿತ್ತು ಗುಪ್ಪಿಗೌಂಡರ್ ಮತ್ತು ನಾರಾಯಣಸ್ವಾಮಿ ಇಬ್ಬರಿಗೂ ತಲಾ ಎರಡು ತಿಂಗಳ ಶಿಕ್ಷೆ. ಮಿಕ್ಕವರಿಗೆ ತಲಾ 10 ಷಿಲಿಂಗ್ ದಂಡ ನ್ಯಾಯಾಧೀಶರು ವಿಧಿಸಿದರು.

ತೀರ್ಪಿನ ವಿರುದ್ಧ ಶಿಕ್ಷಿತರು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದರು. ಇವರು ಬಂಧಿತರಾದುದು ಭಾನುವಾರ. ಅಂದು ಬಿಡುವು. ಆದರೆ ಒಂದು ಮೈಲಿ ಆಚೆ ಅನುಮತಿ ಪಡೆಯದೆ ಹೋಗುವಂತಿಲ್ಲ. ಅನುಮತಿ ಪಡೆಯದೆ ಹೋದರೆಂದೂ ಮಾಲೀಕನೂ ಸಾಕ್ಷಿ ನುಡಿದಿರುವುದಿಲ್ಲ. ಮೃತನಾದ ಸಹಪಾಟಿಯೊಬ್ಬನನ್ನು ಹೂಳಲು ಹೋಗಿದ್ದರೆಂದು ನ್ಯಾಯಾಧೀಶ ಬರೆದುಕೊಂಡಿರುವುದಿಲ್ಲ. ಎಲ್ಲ ಆಪಾದಿತರೂ ಸ್ವಯಂ ತಪ್ಪು ಒಪ್ಪಿಕೊಂಡಿರುವರೆಂದು ನ್ಯಾಯಾಧೀಶ ದಂಡ ವಿಧಿಸಿರುವುದು ಸೋಜಿಗ. ಸಕಾರಣವಲ್ಲ. ಆಪಾದಿತರನ್ನು ಶಿಕ್ಷೆ ಮಾಡಬೇಕಾದ್ದು 31 ನೆಯ ಅನುಚ್ಛೇದದಂತೆ. 101 ರಂತೆ ಅಲ್ಲ. ಇವು ಅಪೀಲಿನ ಮುಖ್ಯಾಂಶಗಳು.

ಎಲ್ಲರೂ ಒಟ್ಟಾಗಿ ತೋಟದಿಂದ ನ್ಯಾಯಾಧೀಶರಲ್ಲಿಗೆ ಬರುವುದು ಹೇಗೆ ಅಪರಾಧವಾದೀತು. ಆಕಾಶ ಬುಟ್ಟಿಯಲ್ಲಿ ಕುಳಿತು ಹಾರಿ ಹೋದರೆಂದು ಆಪಾದನೆ ಹೊರಿಸಲೂ ಬಹುದಲ್ಲವೇ ? ಎಲ್ಲರೂ ಸ್ವತೇವ ತಪ್ಪು ಒಪ್ಪಿಕೊಂಡರೆಂಬುದು ವಿಚಿತ್ರವೆನಿಸುತ್ತದೆ. ಶಿಕ್ಷೆ ವಿಧಿಸಲು ಮೊದಲೇ ಮನಸ್ಸು ಮಾಡಿಕೊಂಡು ಯಾವ ಅನುಚ್ಛೇದವಾದರೇನು ಎಂದು ಶಿಕ್ಷೆ ವಿಧಿಸಿರುವುದು ನ್ಯಾಯಾಧೀಶನ ವಿಕಲ್ಪ ದೃಷ್ಟಿಯನ್ನು ನಿದರ್ಶಿಸುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಕೆಳಕೋರ್ಟಿನ ತೀರ್ಪನ್ನು ರದ್ದುಗೊಳಿಸಿ ಎಲ್ಲರನ್ನು ಮುಕ್ತಗೊಳಿಸಿತು. ನ್ಯಾಯಶಾಸ್ತ್ರದ ಪುಸ್ತಕವನ್ನು ನೋಡದೆ

ಆಪಾದಿತರನ್ನು ಎರಡುವಾರ ಬಂಧನದಲ್ಲಿರಿಸಿದ್ದುದು ನಿಜವಾಗಿಯೂ ಭಯಂಕರ ಎಂದರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರು.

ಇದೇ ಅಕ್ಟೋಬರ್ ಮತ್ತೊಂದು ಭಯಂಕರ ಘಟನೆ ದರ್ಬಾನಿನಲ್ಲಿ ನಡೆಯಿತು. ಉಮಜಿಂಟೋ ಸಮೀಪದ ರೈನಾಲ್ಡ್ಸ್ ಕಂಪನಿಯ ಕೂಲಿಗಳು ತಮ್ಮ ಒಡೆಯರು ಮತ್ತು ಓವರ್ಸಿಯರುಗಳ ವಿರುದ್ಧ ರಕ್ಷಣಾಧಿಕಾರಿಯಲ್ಲಿ ತಾವು ವಿಪರೀತ ಹಿಂಸೆ ಅನುಭವಿಸುತ್ತಿರುವುದಾಗಿಯೂ, ತಮ್ಮನ್ನು ಬೇರೆಡೆಗೆ ವರ್ಗ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದರು. ಸರ್ಕಾರದ ವಕೀಲರಿಗೆ ವಿಷಯ ತಿಳಿಸಿರುವೆ, ನೀವೆಲ್ಲರೂ ಉಮಜಿಂಟೋ ನ್ಯಾಯಾಲಯಕ್ಕೆ ಹೋಗಿ. ಹೀಗೆ ತಿಳಿಸಿದ ರಕ್ಷಣಾಧಿಕಾರಿ. ಅಲ್ಲಿಗೆ ಹೋದರೆ ತಮ್ಮನ್ನು ಬಂಧಿಸಿ ಮತ್ತೆ ಹಿಂದಿನ ಮಾಲೀಕನಲ್ಲಿಗೇ ಒಯ್ಯಬಹುದು. ಆದ್ದರಿಂದ ಅವರು ಉಮಜಿಂಟೋ ನಗರಕ್ಕೆ ಹೋಗಲು ನಿರಾಕರಿಸಿದರು.

ಆದರೇನು? ರಕ್ಷಣಾಧಿಕಾರಿಯ ಗುಮಾಸ್ತ ಡೆನ್ನಿಂಗ್ ಇವನೊಡನೆ ಪೋಲೀಸರು ತೋಟಕ್ಕೇ ಬಂದು ಎಲ್ಲರನ್ನೂ ಬಂಧಿಸಿದರು, ಉಮಜಿಂಟೋ ನಗರಕ್ಕೆ ಒಯ್ಯಲು. ದಾರಿಯಲ್ಲಿ ರಕ್ಷಣಾಧಿಕಾರಿಯ ಕಚೇರಿ. ಅಲ್ಲಿ ಎಲ್ಲರಿಗೂ ಬೇಡಿ ತೊಡಸಲು ಪೋಲೀಸರು ಉದ್ಯುಕ್ತರಾದರು. ಇಷ್ಟರಲ್ಲಿ ಎಂಟು ಕೂಲಿಗಳು ತಮ್ಮ ಕೌಪೀನ ಬಿಚ್ಚಿ, ಕತ್ತಿಗೆ ಕಟ್ಟಿಕೊಂಡು, ಸಮೀಪದ ಮರದ ರೆಂಬೆಗೆ ತೂಗಿ ಹಾಕಿಕೊಂಡು ನೇಣು ಹಾಕಿಕೊಳ್ಳಲು ಪ್ರಯತ್ನಿಸಿದರು. ಮರದ ಬೆಂಬೆ ಭಾರದಿಂದ ಕೆಳಕ್ಕೆ ಇಳಿಯಿತು. ಎಂಟು ಜನರೂ ತೂಗಾಡಹತ್ತಿದರು. ನಾಲಗೆ ಮತ್ತು ಕಣ್ಣು ಗುಡ್ಡೆಗಳು ಹೊರಬಂದವು. ಸ್ತ್ರೀಯರು ಅವರನ್ನು ಸುತ್ತುವರೆದು ಬಾಯಿ ಬಡಿದುಕೊಳ್ಳಲು ತೊಡಗಿದರು. ಇಷ್ಟರಲ್ಲಿ ಗುಮಾಸ್ತ ಓಡಿಬಂದು ಇತರರ ಸಹಾಯದಿಂದ ಕತ್ತಿಗೆ ಬಿಗಿದುಕೊಂಡಿದ್ದ ಕೌಪೀನ ಕತ್ತರಿಸಿದ. ಪ್ರಾಣ ಉಳಿಸಿದ.

ರೈನಾಲ್ಡ್ಸ್ ಕಂಪನಿಯಲ್ಲಿ ಕೆಲಸ ಮಾಡುವುದಕ್ಕಿಂತ ಪ್ರಾಣ ಬಿಡುವುದೇ ಲೇಸು ಎನಿಸಿತ್ತು ಇವರಿಗೆ. ಅಷ್ಟು ಘೋರ ಹಿಂಸೆ ದಿನವಹಿ ಅವರು ಅನುಭವಿಸುತ್ತಿದ್ದರು.

ಭಾರತದಲ್ಲಿ ವಕೀಲ ವೃತ್ತಿಯ ಜೀವನ ನಿರ್ವಹಿಸುವುದರಲ್ಲಿ ವಿಫಲರಾದ ಗಾಂಧೀಜಿ ಆಫ್ರಿಕಾದ ನೆಟಾಲಿಗೆ ಇಬ್ಬರು ದೊಡ್ಡ ಮುಸ್ಲಿಂ ವರ್ತಕರ ನಡುವಿನ ವ್ಯಾಜ್ಯ ಪರಿಹರಿಸಲು ಹೋದರು. ಸ್ವಲ್ಪ ಕಾಲದಲ್ಲೇ ನೆಟಾಲ್ ಇಂಡಿಯನ್ ಕಾಂಗ್ರೆಸ್ ಸಂಸ್ಥೆ ಸ್ಥಾಪಿಸಿದರು.

ಬಡವರ ಸೇವೆ ಮಾಡಬೇಕು. ಇದು ಅವರ ಆಕಾಂಕ್ಷೆ. ಹಟಾತ್ತನೆ ಅನಿರೀಕ್ಷಿತವಾಗಿ ಈ ಬಲವಾದ ಆಸೆ ಪೂರೈಸುವ ಅವಕಾಶ ತಾನಾಗಿ ಒದಗಿಬಂತು.

ನೆಟಾಲಿನಲ್ಲಿ ವಕೀಲ ವೃತ್ತಿ ಪ್ರಾರಂಭಿಸಿ ಇನ್ನೂ ಮೂರು ನಾಲ್ಕು ತಿಂಗಳು ಆಗಿರಲಿಲ್ಲ. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಒಬ್ಬಾತ ಒಳಕ್ಕೆ ನುಗ್ಗಿ ಬಂದ. ಇವನ ಬಾಯಿಂದ ರಕ್ತ, ಜೊಲ್ಲು ಸುರಿಯುತ್ತಿತ್ತು. ಪೇಟವೆಲ್ಲವೂ ರಕ್ತಮಯ ವಾಗಿತ್ತು. ಮುಂದಿನ ಎರಡು ಹಲ್ಲುಗಳು ಮುರಿದಿದ್ದುವು. ಕಣ್ಣಿನಿಂದ ನೀರು ಸುರಿಯು ತ್ತಿತ್ತು. ಮಾಸಲು ಬಟ್ಟೆ ಹರಿದಿತ್ತು. ಭಯದಿಂದ ದೇಹ ಕಂಪಿಸುತ್ತಿತ್ತು. ಒಳಕ್ಕೆ ಪ್ರವೇಶಿಸಿದೊಡನೆಯೇ ತಲೆಯ ಮೇಲಿದ್ದ ಮುಂಡಾಸು ಕೈಗೆ ತೆಗೆದುಕೊಂಡು, ಎರಡು ಕೈಗಳನ್ನು ಜೋಡಿಸಿ ಭಯ ಭಕ್ತಿಯಿಂದ ನಮಸ್ಕರಿಸಿದ. ತನಗಾದ ಈ ಅವಸ್ಥೆಯನ್ನು ತಮಿಳಿನಲ್ಲಿ ತೋಡಿಕೊಂಡ. ಗಾಂಧಿಯವರ ತಮಿಳು ಗುಮಾಸ್ತ ಅದನ್ನು ತಿಳಿಸಿದ ಆಂಗ್ಲ ಭಾಷೆಯಲ್ಲಿ.

ಬಾಲಸುಂದರಂ, ತನ್ನ ಕಥೆ ವಿವರಿಸಿದ. ಆಂಗ್ಲನಲ್ಲಿ ಕೆಲಸ ಮಾಡುತ್ತಿದ್ದ ಅವನೊಬ್ಬ ಜೀವಾವಧಿ ಕಾಲದ ಜೀತಗಾರ. ಇವನಂತೆ ಸಹಸ್ರಾರು ಭಾರತೀಯ ಬಡವರು ಬಿಳಿಯರ ದಾಸರಾಗಿದ್ದರು. ಇವರ ಸ್ಥಿತಿ ಗುಲಾಮರು ಅಥವಾ ಸೆರೆಯಾಳು ಗಳಿಗಿಂತ ಹೀನ. ಯಾರಲ್ಲಿ ಜೀತಕ್ಕೆ ಸೇರಿಕೊಳ್ಳುತ್ತಾರೋ ಅವನಲ್ಲಿಯೇ ಪಶುಗಳಂತೆ ದುಡಿಯಬೇಕು. ಅವನ ಅನುಮತಿ ಇಲ್ಲದೆ ಬೇರೆಡೆಗೆ ಹೋಗುವಂತಿಲ್ಲ. ಅದೂ ಇನ್ನೊಬ್ಬ ಬಿಳಿಯನಲ್ಲಿಯೇ ಗುಲಾಮನಾಗಿ ಸೇರಿಕೊಂಡು ದುಡಿಯಬೇಕು. ಭಾರ ತೀಯರಲ್ಲಿ ಕೆಲಸಕ್ಕೆ ಸೇರಿಕೊಳ್ಳುವಂತಿಲ್ಲ. ಒಬ್ಬ ಬಿಳಿಯನಿಂದ ಮತ್ತೊಬ್ಬ ಬಿಳಿ ಯನ ಶರಣು ಹೋಗುವುದಕ್ಕೂ ಸರ್ಕಾರದಿಂದ ನೇಮಿತನಾದ ಬಿಳಿಯ ಅಧಿಕಾರಿಯ ಅನುಮತಿ ಅಗತ್ಯ. ಅಂದಿನ ಕಾಲದ ಭಾರತೀಯ ವಲಸೆಗಾರರ ಪರಿಸ್ಥಿತಿ ಇದು. ಎತ್ತುಗಳನ್ನು ಒಬ್ಬ ರೈತನಿಂದ ಇನ್ನೊಬ್ಬ ರೈತನಿಗೆ, ಇಲ್ಲವೇ ಕಟುಕನಿಗೆ ಕೊಡ ಬೇಕು. ಹಾಗೆ ಇವರ ಸ್ಥಿತಿ.

ಆ ಕಾಲದಲ್ಲಿ ಆಫ್ರಿಕದಲ್ಲಿ ಭಾರತೀಯ ವೈದ್ಯರು ಇರಲಿಲ್ಲ. ಬಾಲಸುಂದರಂ ಅವನನ್ನು ಬಿಳಿಯ ವೈದ್ಯನಲ್ಲಿಗೆ ಕಳುಹಿಸಿದರು. ನೀನು ಕರಿಯ ನಿನಗೆ ಚಿಕಿತ್ಸೆ ಮಾಡುವುದಿಲ್ಲ ಎಂದು ಹೇಳಬಹುದಾಗಿತ್ತು ಆ ವೈದ್ಯ. ಏನೋ, ಪಾಪ ಎಂದು ಚಿಕಿತ್ಸೆ ಮಾಡಿದ, ಗಾಂಧಿಯವರ ಕೋರಿಕೆಯಂತೆ. ಆಗಿದ್ದ ಗಾಯಗಳಿಗೆ ಸರ್ಟಿ ಫಿಕೇಟ್ ಕೊಟ್ಟು ಉಪಕರಿಸಿದ. ಬಾಲಸುಂದರನನ್ನು ಜೊತೆಯಲ್ಲಿ ಕರೆದುಕೊಂಡು ಗಾಂಧೀಜಿ ನೇರವಾಗಿ ನ್ಯಾಯಾಧಿಕಾರಿಗಳ ಬಳಿಗೆ ಹೋದರು. ಅವನ ಸ್ಥಿತಿಯನ್ನು ನೋಡಿ ನ್ಯಾಯಾಧೀಶರು ತುಂಬ ಮರುಕಗೊಂಡರು. ಅವನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅವನ ರಕ್ತ ಸಿಂಚಿತ ಪೇಟವನ್ನು ಸಾಕ್ಷಿಯಾಗಿ ಕೋರ್ಟಿನಲ್ಲಿ ಇರಿಸಿಕೊಂಡರು.

ಭಾರತದಿಂದ ಉದರ ಪೋಷಣೆಗಾಗಿ ಹೋಗಿದ್ದವರೆಲ್ಲರೂ ಕೂಲಿಗಳೇ.

ಗಾಂಧಿಯೂ ಕೂಲಿಯೇ. ಕೂಲಿ ಬ್ಯಾರಿಸ್ಟರ್ ಅಷ್ಟೇ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗಲು ರಾತ್ರಿ 9ರ ಮೇಲೆ ಸಂಚರಿಸಲು ಪ್ರತಿಯೊಬ್ಬ ಭಾರತೀಯನು ರಹದಾರಿ ಪಡೆದಿರಬೇಕು. ಅರಬ್ಬರಿಗೆ ಅದು ಅನ್ವಯಿಸುತ್ತಿರಲಿಲ್ಲ. ರಹದಾರಿ ಪಡೆದಿದ್ದವರೂ ಅನೇಕ ವೇಳೆ ಪೋಲಿಸರ ಹಿಂಸೆಗೆ, ದಬ್ಬಾಳಿಕೆಗೆ ಗುರಿಯಾಗಿರುತ್ತಾರೆ.

ಎ. ಎಂ. ಪಿಳ್ಳೆ ಆಡಿಂಗ್‌ಟನ್ ಕೂಲಿ ಡಿಪೋ ಮೇಲಧಿಕಾರಿ. ಜನವರಿ 27, 1896ರ ರಾತ್ರಿ ಮನೆಯತ್ತ ನಡೆದಿದ್ದ. ಒಬ್ಬ ಆಂಗ್ಲ ಪೋಲೀಸಿನವ ಇವರನ್ನು ತಡೆದು ರಹದಾರಿ ತೋರಿಸುವಂತೆ ಕೇಳಿದ. ರಹದಾರಿಯ ನಿಯಮದಿಂದ ಸದಾಕಾಲಕ್ಕೂ ಇವರನ್ನು ಮುಕ್ತರಾಗಿ ಮಾಡಿದ್ದ ಮೇಯರ್ ಅವರ ಅಧಿಕೃತ ಪತ್ರವನ್ನು ಪಿಳ್ಳೆ ತೋರಿಸಿದರು. ಅವನು ಗೊಣಗಿದ. ಏಕೆ ಎಂದು ಕೇಳಿದರು ಪಿಳ್ಳೆ. ಇಷ್ಟಕ್ಕೇ ಅವನು ಸಿಟ್ಟಿಗೆದ್ದ. ಕರಿಯ ಕೂಲಿ ಬಿಳಿಯ ಪೋಲೀಸಿನವನನ್ನು ಪ್ರಶ್ನಿಸುವಷ್ಟು ದೌರ್ಷ್ಟ್ಯವೇ? ಕತ್ತಿನಪಟ್ಟಿ ಹಿಡಿದು ಆ ಕಾನ್‌ಸ್ಟೇಬಲ್ ಪಿಳ್ಳೆಯವರನ್ನು ದೂಡಿದ. "ನಾನು ಮಾಡಿದ ಅಪರಾಧವೇನು. ಏಕೆ ದೂಡುತ್ತಿರುವೆ" ಎಂದು ಕೇಳಿದರು ಪಿಳ್ಳೆ. ಪೋಲೀಸಿನವ ಇಲ್ಲಿಂದ ಕಾಲ್ತೆಗೆಯದಿದ್ದರೆ ಒದೆ ಬಿದ್ದೀತು ಜೋಕೆ ಎಂದು ಗದರಿಸಿದ. ಪೋಲೀಸು ಠಾಣೆಯಲ್ಲಿ ಕೂಡಿಹಾಕಿಬಿಡುವೆ ಹುಷಾರ್ ಎಂದು ಎಚ್ಚರಿಸಿದ.

ಪಿಳ್ಳೆ ಅಲ್ಲಿಂದ ನೇರವಾಗಿ ಪೋಲೀಸ್ ಠಾಣೆಗೆ ಹೋಗಿ ನಡೆದ ಸಂಗತಿಯನ್ನು ತಿಳಿಸಿದರು. ಇವರ ಜೊತೆಯಲ್ಲಿ ಒಬ್ಬ ಉಪಾಧ್ಯಾಯರೂ ಇದ್ದರು. ಮಾರನೆಯ ದಿನ ಇಬ್ಬರೂ ನ್ಯಾಯಾಧೀಶರಲ್ಲಿ ಮನವಿ ಸಲ್ಲಿಸಿದರು. ನ್ಯಾಯಾಧೀಶರು ಪೋಲೀಸಿನವನಿಗೆ ಒಂದು ಪೌಂಡು ದಂಡ ವಿಧಿಸಿದರು. ಬಿಳಿಯ ಅಧಿಕಾರಿಗೆ ಶಿಕ್ಷಿಸಿದ ಇದೊಂದು ಅಪೂರ್ವ ಘಟನೆ.

ಆದರೆ ಪೋಲೀಸರು ಇದರಿಂದ ಪಾಠ ಕಲಿಯಲಿಲ್ಲ. ಸೇಡು ತೀರಿಸಿಕೊಳ್ಳಲು ಸಮಯ ಹೊಂಚುತ್ತಿದ್ದರು. ಒಂದು ದಿನ ಇಬ್ಬರು ವಿದ್ಯಾವಂತ ತರುಣ ಭಾರತೀಯರು ಪಾಶ್ಚಾತ್ಯರ ಉಡುಪು ಧರಿಸಿ ರಾತ್ರಿ ಬೀದಿಯಲ್ಲಿ ಹೋಗುತ್ತಿದ್ದರು. ಇಬ್ಬರೂ ಶುದ್ಧ ಆಂಗ್ಲ ಭಾಷೆ ಬಲ್ಲವರು. ಒಬ್ಬ ಉಪಾಧ್ಯಾಯ, ಇನ್ನೊಬ್ಬ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂಡಲು ಗಾಂಧಿಯವರಲ್ಲಿ ಪಾಠ ಕಲಿಯುತ್ತಿದ್ದ. ರಾತ್ರಿ 9.30 ಆದ ಮೇಲೆ ಇಬ್ಬರೂ ಬೀದಿಯಲ್ಲಿ ನಡೆಯುತ್ತಿದ್ದರೆಂದು ಪೋಲೀಸರು ಇವರನ್ನು ಬಂಧಿಸಿ ಲಾಕಪ್ಪಿನಲ್ಲಿ ರಾತ್ರಿಯಲ್ಲ ಇಟ್ಟು, ಬೆಳಿಗ್ಗೆ ಕೋರ್ಟಿಗೆ ಹಾಜರಾಗುವಂತೆ ಮುಚ್ಚಳಿಕೆ ಬರೆಸಿಕೊಂಡು, ಇಬ್ಬರನ್ನೂ ಹೊರಕ್ಕೆ ಬಿಟ್ಟರು. ಮಾರನೆಯ ದಿನ ನ್ಯಾಯಾಧೀಶ ವ್ಯಾಲರ್ ಅವರ ಸಮ್ಮುಖದಲ್ಲಿ ವಿಚಾರಣೆ ಪ್ರಾರಂಭವಾಯಿತು. ಅಪಾದಿತರ ಪರ ಗಾಂಧೀಜಿ ವಕಾಲತ್ ವಹಿಸಿದ್ದರು.

ಆಪಾದಿತರಲ್ಲಿ ಒಬ್ಬನ ಹೆಸರು ಸಾಮ್ಯುಯಲ್ ರಿಚರ್ಡ್ಸ್, ಇನ್ನೊಬ್ಬ ಜಾನ್ ಲಕ್ಷ್ಮಣ ರಾಬರ್ಟ್ಸ್. ಪೋಲೀಸು ಠಾಣೆಯಲ್ಲಿ ತಮ್ಮ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್ ಅವರ ನಡುವೆ ನಡೆದ ವಾಗ್ವಾದವನ್ನು ನ್ಯಾಯಾಸ್ಥಾನದಲ್ಲಿ ಇಬ್ಬರು ಆಪಾದಿತರೂ ವರ್ಣಿಸಿದರು. ತರುಣರು ತಿಳಿಸಿದ ಹೆಸರು ಕೇಳುತ್ತಲೇ ಪೋಲೀಸ್ ಅಧಿಕಾರಿ ಗಹಗಹಿಸಿ ನಕ್ಕ. ಆತ ಪ್ರಶ್ನಿಸಿದ "ಎಷ್ಟು ಕಾಲದಿಂದ ಈ ಹೆಸರು ಧರಿಸಿರುವಿರಿ? "

ಉತ್ತರ: ಹದಿನೆಂಟು ತಿಂಗಳ ಹಿಂದೆ ನಾವು ಕ್ರೈಸ್ತ ಮತಾವಲಂಬಿಗಳಾದೆವು. ಅಂದಿನಿಂದ ನಾವು ಈ ಹೆಸರು ತಳೆದಿರುವೆವು.

ಪ್ರಶ್ನೆ: ನಿಮ್ಮ ತಂದೆ ಏನಾಗಿದ್ದರು.

ಉತ್ತರ: ಅವರು ಜೀತಗಾರರಾಗಿದ್ದರು. ಅಗಸ.

ಪ್ರಶ್ನೆ : ನಿಮ್ಮ ಪೂರ್ವದ ಭಾರತೀಯ ನಾಮದಿಂದ ಕೂಲಿಗಳಿಗೆ ಅನ್ವಯಿಸುವ ಶಾಸನಗಳಿಂದ ಪಾರಾಗಲು ಆಂಗ್ಲರ ಹೆಸರು ಇಟ್ಟುಕೊಂಡಿರಲ್ಲವೇ ? ಪೋಲೀಸಿಗೆ ಇದನ್ನು ತಿಳಿಸಿದಿರಾ ?

ಉತ್ತರ: ಇಲ್ಲ.

ಪ್ರಶ್ನೆ: ನಿಮ್ಮ ಮಾತಾಪಿತೃಗಳಿಗೆ ಅನ್ವಯಿಸುವ ಕಾನೂನುಗಳಿಂದ ನಿಮ್ಮನ್ನು ಏಕೆ ಮುಕ್ತರಾಗಿ ಮಾಡಬೇಕು. ನೀವು ನಾಗರೀಕರೆಂದು ಪೋಲೀಸಿನವನಿಗೆ ಹೇಗೆ ಅರಿವಾಗಬೇಕು.

ಉತ್ತರ: ನಮ್ಮ ಮುಖಚರ್ಯೆ ನಡೆನುಡಿಯಿಂದ ತಿಳಿಯಬಹುದು.

ಇಬ್ಬರು ತರುಣರನ್ನು ಜಾಮೀನಿನ ಮೇಲೆ ರಾತ್ರಿಯೇ ಬಿಡುಗಡೆ ಮಾಡುವುದಾಗಿ ತಿಳಿಸಿದರೂ, ತಲೆತಿರುಕ ತರುಣರು ಠಾಣೆಯಲ್ಲೇ ಬಂಧನದಲ್ಲಿ ಉಳಿಯಲು ಅಪೇಕ್ಷಿಸಿದರು ಎಂದು ಸಾಕ್ಷಿ ನುಡಿದ ಪೋಲೀಸ್ ಅಧಿಕಾರಿ.

ಇಬ್ಬರು ತರುಣರೂ ಗೌರವಸ್ತರು, ವಿದ್ಯಾವಂತರು. ಇವರು ರಹದಾರಿ ಹೊಂದಿರಬೇಕಾದಿಲ್ಲ. ರಾತ್ರಿ ಸಂಚರಿಸಲು ಅವರಿಗೆ ಪೂರ್ಣ ಅವಕಾಶವುಂಟು. ಯುವಕ ರಿಚರ್ಡ್ಸ್ ಹಿಂದೊಮ್ಮೆ ಪೋಲೀಸರಿಂದ ಬಂಧಿತನಾಗಿದ್ದ. ಮೇಯರ್ ಅವರಿಂದ ರಹದಾರಿ ಪಡೆದುಕೊಳ್ಳುವುದು ಉಚಿತವೆಂದು ನ್ಯಾಯಾಧೀಶರು ಹಿತ ನುಡಿದುಬಿಟ್ಟಿದ್ದರು. ಆತ ಮೇಯರ್ ಅವರ ಕಚೇರಿಗೆ ಹೋಗಿ ರಹದಾರಿ ಪಡೆ

ಯಲು ಪ್ರಯತ್ನಿಸಿದಾಗ, ಶಾಲಾ ಉಪಾಧ್ಯಾಯ ಮತ್ತು ಗುಮಾಸ್ತ ರಹದಾರಿ ಹೊಂದಿರಲಿಲ್ಲವೆಂದು ಎಂದೂ ಶಿಕ್ಷಿತನಾಗಿರುವುದಿಲ್ಲ. ನೀನು ವಿದ್ಯಾವಂತ ನಾಗರೀಕ. ಆದ್ದರಿಂದ ರಹದಾರಿ ಪಡೆಯಬೇಕಾಗಿಲ್ಲವೆಂದು ರಹದಾರಿ ಕೊಡಲು ನಿರಾಕರಿಸಿದ್ದ, ಹೀಗೆಂದು ತಿಳಿಸಿದರು.

ತರುಣರು ಸ್ವಯಿಚ್ಛೆಯಿಂದ ಪೋಲೀಸ್ ಠಾಣೆಯ ಬಂಧಿತರ ಕೋಣೆಯಲ್ಲಿ ಉಳಿದುಕೊಳ್ಳಲು ಅಪೇಕ್ಷಿಸಿದರೆಂಬುದು ಹಸೀಸುಳ್ಳು. ಇದನ್ನು ಸಮರ್ಥಿಸಿ ಪೋಲೀಸ್ ಠಾಣೆಯ ಪುಸ್ತಕವನ್ನು ಗಾಂಧೀಜೀ ಸಾಕ್ಷಿಯಾಗಿ ಕೋರ್ಟಿನಲ್ಲಿ ಹಾಜರು ಪಡಿಸಿದರು. ಇವರನ್ನು ಬಿಡುಗಡೆ ಮಾಡಲಾಗದೆಂದು ಪೋಲೀಸ್ ಪ್ಯಾದೆ ಸ್ವಹಸ್ತ ದಲ್ಲಿ ಬರೆದಿದ್ದುದನ್ನು ತೋರಿಸಿದರು. ತರುಣರನ್ನು ತಲೆತಿರುಕರೆಂದು ಪೋಲೀಸ್ ಅಧಿಕಾರಿ ಸಂಬೋಧಿಸಿರುವುದನ್ನು ಉಗ್ರವಾಗಿ ಪ್ರತಿಭಟಿಸಿದರು.

ಒಬ್ಬ ತನ್ನ ಮತವನ್ನು ಬದಲಾಯಿಸಬಹುದಾದರೆ, ಹೆಸರನ್ನು ಬದಲಾಯಿಸ ಲಾಗದೆ? ಮಿಸ್ಟರ್ ಕ್ವಿಲಿಯಂ, ಹಾಜಿ ಅಬ್ದುಲ್ಲ ಆಗಬಹುದು. ಮಿಸ್ಟರ್ ವೆಬ್ ಮುಹಮ್ಮದ್ ಆಗಬಹುದಾದರೆ, ಈ ಇಬ್ಬರು ತರುಣರು ಹಿಂದು ಧರ್ಮ ತೊರೆದು ಕ್ರಿಸ್ತರಾಗಿ ತಮ್ಮ ಹೆಸರನ್ನು ಬದಲಾಯಿಸಿಕೊಳ್ಳಲಾಗದೆ? ಪೋಲೀಸ್ ಪ್ಯಾದೆ ತರುಣರನ್ನು ಮಾನವೀಯತೆಯಿಂದ ಒಳ್ಳೆಯ ಮಾತನಾಡಿ, ಎಚ್ಚರಿಕೆಕೊಟ್ಟು ಬಿಟ್ಟಿ ದ್ದರೆ, ಈ ಪ್ರಕರಣ ನ್ಯಾಯಸ್ಥಾನದ ಮುಂದೆಯೇ ಬರುತ್ತಿರಲಿಲ್ಲ. ಗಾಂಧಿಯವರ ಪ್ರಾರ್ಥನೆಯಂತೆ ತರುಣರು ನಿರಪರಾಧಿಗಳೆಂದು ನ್ಯಾಯಾಧೀಶ ಅವರಿಗೆ ದಂಡ ವಿಧಿ ಸದೆ ಬಿಡುಗಡೆ ಮಾಡಿದರು.

ಬಾಲಸುಂದರನಿನ ದೆಸೆಯಿಂದ ಗಾಂಧೀಜಿ ಆಫ್ರಿಕದಲ್ಲಿ ಭಾರತೀಯರನ್ನು ನಾಯಿ ನರಿಗಳಿಗಿಂತ ಕೀಳಾಗಿ ನೋಡಲು ಕಾರಣವೇನೆಂಬ ಅಭ್ಯಾಸಕ್ಕೆ ತೊಡಗಿ ಸಿತು. ಟ್ರಾನ್ಸ್‌ವಾಲ್ ಫಲವತ್ತಾದ ಪ್ರದೇಶ. ಒಳ್ಳೆಯ ಹವಾಗುಣ. ಕಾಲ ಕಾಲಕ್ಕೆ ಮಳೆ. ಆದರೆ ಅಲ್ಲಿಯ ಜೂಲೂ ಸೋಮಾರಿಗಳು. ಸೊಂಟ ಬಗ್ಗಿಸಿ ದುಡಿ ಯರು. ಆದ್ದರಿಂದ ಇಲ್ಲಿ ನೆಲಸಿದ್ದ ಆಂಗ್ಲ ಭೂಮಾಲೀಕರು, ಭಾರತ ಸರ್ಕಾರದ ನೆರವಿನಿಂದ ಸಾವಿರಾರು ರೈತರು ಮತ್ತು ಕಾರ್ಮಿಕರನ್ನು ಆಸೆ ಆಮಿಷ ಒಡ್ಡಿ ಬರ ಮಾಡಿಕೊಂಡರು, ಕಬ್ಬು ಬೆಳೆಸಲು. ವಲಸೆ ಬಂದ ಶ್ರಮಜೀವಿಗಳು ಐದು ವರ್ಷ ಉಳಿದು ದುಡಿಯುವುದಾಗಿ ಕರಾರು ಪತ್ರ ಬರೆದುಕೊಡಬೇಕು. ತದನಂತರ ಭಾರ ತಕ್ಕೆ ಮರಳಬಹುದು, ಇಲ್ಲವೇ ಭೂಮಿ ಕೊಂಡು ಆಫ್ರಿಕದಲ್ಲೇ ಉಳಿಯಬಹುದು. ಈ ಅವಕಾಶ ಅಂದಿನ ಮದರಾಸು ಪ್ರಾಂತದಿಂದ ಬಹು ಜನರನ್ನು ಆಕರ್ಷಿಸಿತು.

ಬಂದವರು ಸಾಮಾನ್ಯ ರೈತರಾದರೂ ಉತ್ತಮ ದರ್ಜೆ ಕಬ್ಬು ಬೆಳೆ ಮಾಡು

ವುದನ್ನು ತೋರಿಕೊಟ್ಟರು. ಭಾರತದಿಂದ ನಾನಾ ಬಗೆಯ ತರಕಾರಿ ಬೀಜಗಳನ್ನು ತಂದು ಸೊಗಸಾದ ತರಕಾರಿ ಬೆಳಸಿದರು. ಮಾವಿನ ಸಸಿ ನೆಟ್ಟು ಮಾವಿನಹಣ್ಣು ಕೊಟ್ಟರು. ಕ್ರಮೇಣ ಗುಜರಾತ್, ಸಿಂಧ್ ಪ್ರಾಂತಗಳಿಂದ ಬಂದವರು ವ್ಯಾಪಾರಕ್ಕೆ ಇಳಿದು ದೊಡ್ಡ ದೊಡ್ಡ ಮಳಿಗೆಗಳನ್ನು ಕಟ್ಟಿ ಬೃಹತ್ ಪ್ರಮಾಣದಲ್ಲಿ ವ್ಯಾಪಾರ ಮಾಡತೊಡಗಿದರು. ಭೂ ಮಾಲೀಕರಾದರು. ಒಬ್ಬಿಬ್ಬರು ಹಡಗುಗಳನ್ನು ಕೊಳ್ಳುವಷ್ಟು ಶ್ರೀಮಂತರಾದರು. ಭಾರತೀಯರ ದುಡಿಮೆ, ಸಹನಾ ಶಕ್ತಿ, ಹೆಚ್ಚು ವೆಚ್ಚ ಮಾಡದ ಜಿಪುಣತನ, ಬುದ್ಧಿವಂತಿಕೆ ಇವು ಆಂಗ್ಲ ಉದ್ಯಮಿಗಳ ವಿಕೋಪಕ್ಕೆ ಕಾರಣವಾಯಿತು. ಭಾರತೀಯ ವರ್ತಕರೊಡನೆ ಇವರು ಪೈಪೋಟಿ ನಡೆಸಲಾರದೆ ಹೋದರು.

ಟ್ರಾನ್ಸ್‌ವಾಲ್ ಸರ್ಕಾರ ಇದಕ್ಕೊಂದು ಕುಯುಕ್ತಿ ಹುಡುಕಿತು. ಐದು ವರ್ಷಗಳ ನಂತರ, ಬಂದ ಭಾರತೀಯ ಸ್ವದೇಶಕ್ಕೆ ತೆರಳಬೇಕು ಅಥವಾ ಪ್ರತಿ ಎರಡು ವರ್ಷಕ್ಕೊಮ್ಮೆ ಕೂಲಿ ಕರಾರನ್ನು ನವೀಕರಿಸಬೇಕು. ಇವೆರಡು ಷರತ್ತುಗಳನ್ನೂ ಒಪ್ಪಿಕೊಳ್ಳದಿದ್ದರೆ 25 ಪೌಂಡುಗಳಂತೆ ವಾರ್ಷಿಕ ತಲೆಗಂದಾಯ ಕೊಡಬೇಕು. ಈ ಷರತ್ತುಗಳಿಗೆ ಭಾರತದ ವೈಸರಾಯರ ಸಮ್ಮತಿಯ ಮುದ್ರೆ ದೊರೆತುದು ಆಶ್ಚರ್ಯಕರ. ಆದರೆ ಅವರು ತಲೆಗಂದಾಯವನ್ನು 25 ಪೌಂಡುಗಳಿಂದ 3 ಪೌಂಡಿಗೆ ಇಳಿಸಿದರು. ಆದರೆ ಮೂರು ನಾಲ್ಕು ವರ್ಷಗಳಲ್ಲಿ ಈ ತಲೆಗಂದಾಯ ಕುಟುಂಬದಲ್ಲಿ 16 ಮೀರಿದ ಪುರುಷ, 13 ಮೀರಿದ ಮಹಿಳೆ ಎಲ್ಲರಿಗೂ ಅನ್ವಯಿಸುವಂತಾಯಿತು. ಒಟ್ಟಿನಲ್ಲಿ ಸಂಸಾರ ತೆರಬೇಕಾದ ತಲೆಗಂದಾಯ ಮೊದಲಿಗಿಂತ ಅಧಿಕವಾಯಿತು.

ಇಷ್ಟು ಮಾತ್ರವಲ್ಲ. 1906 ರಲ್ಲಿ ಮತ್ತೊಂದು ಕರಾಳ ಶಾಸನ ಜಾರಿಗೆ ಬಂತು. ಎಂಟು ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಭಾರತೀಯನೂ ನಮೂನೆಯನ್ನು ಸರಿಯಾಗಿ ತುಂಬಿ ರಹದಾರಿ ಪಡೆಯಬೇಕು. ನಮೂನೆಗೆ ಹತ್ತು ಕೈ ಬೆರಳುಗಳ ಮುದ್ರೆ ಕೊಡಬೇಕು. ರಹದಾರಿಗೆ ಭಾವಚಿತ್ರ ಅಂಟಿಸಿರಬೇಕು. ಕೇಳಿದಾಗ ರಹದಾರಿ ತೋರಿಸಬೇಕು. ಇಲ್ಲವೇ ದಂಡ, ಜೈಲು, ಭಾರತಕ್ಕೆ ಗಡೀಪಾರು. ಅಪಾರ ಸಂಖ್ಯೆಯಲ್ಲಿ ಭಾರತದಿಂದ ವಲಸೆ ಬರುತ್ತಿರುವುದನ್ನು ತಡೆಯುವ ಕುಂಟು ನೆಪ ಇದಕ್ಕೆ ಕಾರಣ. ಹನ್ನೊಂದು ಮೀರದ ಅಪ್ರಾಪ್ತ ವಯಸ್ಸಿನ ಹುಡುಗನೊಬ್ಬನಿಗೆ ನ್ಯಾಯಾಧೀಶ 30 ಪೌಂಡು ದಂಡ, ತಪ್ಪಿದಲ್ಲಿ 3 ತಿಂಗಳ ಕಾರಾಗ್ರಹವಾಸ ವಿಧಿಸಿದ ನಿದರ್ಶನವಿದೆ. ಕ್ರಮೇಣ ಭಾರತದಲ್ಲಿ ವಿವಾಹಿತರಾದ ಸತಿಪತಿಯರನ್ನು ವಿವಾಹಿತರು ಎಂದು ಒಪ್ಪಿಕೊಳ್ಳಲೂ ಸರ್ಕಾರ ನಿರಾಕರಿಸಿತು. ಅವರು ವಿವಾಹಿತರೆಂದು ಆಫ್ರಿಕದಲ್ಲಿ ರುಸುಂ ತೆತ್ತು ನೊಂದಾಯಿಸಿಕೊಳ್ಳಬೇಕು.

"ನಮಗೆ ಬೇಕಾದುದು ರಾಜಕೀಯ ಅಧಿಕಾರವಲ್ಲ. ಬ್ರಿಟಿಷ್ ಪ್ರಜೆಗಳೊಡನೆ

ಶಾಂತಿ ಸಮಾಧಾನದಿಂದ ಸಹಬಾಳ್ವೆ ನಡೆಸುವುದು" ಹೀಗೆ ಗಾಂಧೀಜಿ, ಬ್ರಿಟಿಷ್ ಹೈಕಮಿಷನರಲ್ಲಿ ಅರುಹಿದರು. ಇದಕ್ಕೆ ಪ್ರತಿಯಾಗಿ, ಇದೇ ನಮಗೆ ಬೇಡವಾಗಿರುವುದು. ಆಫ್ರಿಕವನ್ನು ಬ್ರಿಟಿಷರ ವಸಾಹತ್ತಾಗಿ ಉಳಿಸಿಕೊಳ್ಳುವುದಕ್ಕೆ ಅಗತ್ಯವಾದ ಕ್ರಮಗಳೆಲ್ಲವನ್ನೂ ತಾನು ತೆಗೆದುಕೊಳ್ಳುವುದಾಗಿಯೂ, ಭಾರತೀಯರನ್ನು ತುಳಿದು ಬಿಡುವುದೇ ತನ್ನ ಉದ್ದೇಶ ಎಂದು ಜನರಲ್ ಸ್ಮಟ್ಸ್ ಸ್ಪಷ್ಟಪಡಿಸಿದರು.

ಭಾರತೀಯರಿಗೆ ಆಗುತ್ತಿದ್ದ ಘೋರ ಅನ್ಯಾಯವನ್ನು ಲಯೋನೆಲ್ ಕರ್ಟಿಸ್ ಅವರಲ್ಲಿ ನಿವೇದಿಸುತ್ತಿದ್ದಾಗ, ಅವರು ಗಾಂಧೀಜಿಯವರಿಗೆ ತಿಳಿಸಿದರು. "ಗಾಂಧೀಜಿ, ನನ್ನನ್ನು ಪರಿವರ್ತಿಸಲು ನೀವು ಪ್ರಯತ್ನಿಸಬೇಕಾದುದು ಅನವಶ್ಯಕ. ಭಾರತೀಯರ ಸದ್ಗುಣಗಳೇ ಅವರಿಗೆ ಕಂಟಕಪ್ರಾಯವಾಗಿವೆ."

ಆಫ್ರಿಕದ ಭಾರತೀಯರ ದುಸ್ಥಿತಿಗೆ ಗಾಂಧಿಯವರ ಕಣ್ಣು ತೆರೆಯಿಸಿದವನು ಬಾಲಸುಂದರಂ ಒಬ್ಬನೇ ಅಲ್ಲ. ಸ್ವಂತ ಮತ್ತು ಶ್ರೀಮಂತ ಮಿತ್ರರ ಅನುಭವಗಳು, ದಿನವಹಿ ನಡೆಯುತ್ತಿದ್ದ ತಲೆ ತಗ್ಗಿಸುವ ಅಪಮಾನಕರ ಪ್ರಸಂಗಗಳು ಇವೆಲ್ಲವೂ ತೆರೆ ತೆರೆಸಿದುವು. ರೈಲಿನಲ್ಲಿ ಉನ್ನತ ದರ್ಜೆಯಲ್ಲಿ ಪ್ರಯಾಣ ಮಾಡುವಂತಿಲ್ಲ. ಕೆಲವು ಬೀದಿಗಳಲ್ಲಿ ಸಂಚರಿಸುವಂತಿಲ್ಲ. ರಾತ್ರಿ 9–30 ಆದಮೇಲೆ ಹೊರಗೆ ಅಡ್ಡಾಡುವಂತಿಲ್ಲ. ಸ್ವಂತ ಮೋಟಾರಿನಲ್ಲಿ ಕೂರುವಂತಿಲ್ಲ. ಸರಕಾರದಲ್ಲಿ ನೌಕರಿ ಪಡೆಯುವಂತಿಲ್ಲ. ಭಾರತೀಯ ಶ್ರೀಮಂತರನ್ನು ಕುರಿತು ನೀವೂ ಶ್ರೀಮಂತರಂತೆ ನಡೆದುಕೊಳ್ಳಿ. ಮೋಟಾರಿನಲ್ಲಿ ಕುಳಿತು ರಾಜಬೀದಿಗಳಲ್ಲಿ ಸಂಚರಿಸಿ ಅಂಗಡಿ ಮತ್ತು ಮನೆ ಪ್ರತ್ಯೇಕವಾಗಿರಲಿ. ದಿನವಹಿ ಸ್ನಾನಮಾಡಿ ಮಡಿ ಮಾಡಿದ ಉಡುಪು ಧರಿಸಿಕೊಳ್ಳಿ. ಶುಚಿತ್ವ ಅನುಸರಿಸಿ. ಅಗೌರವವನ್ನು ಪ್ರತಿಭಟಿಸಿ, ತಲೆ ತಗ್ಗಿಸಬೇಡಿ. ಸಾಂಘಿಕವಾಗಿ ಕೆಲಸ ಮಾಡುವುದನ್ನು ಕಲಿಯಿರಿ; ಆಫ್ರಿಕದ ಮೂಲ ನಿವಾಸಿಗಳೊಡನೆ ಮಧುರ ಬಾಂಧವ್ಯ ಬೆಳೆಸಿಕೊಳ್ಳಿ. ಈ ರೀತಿ ಸಭೆಗಳನ್ನು ನಡೆಸಿ ತಿಳಿಸುತ್ತಿದ್ದರು ಗಾಂಧೀಜಿ. 'ನೆಟಾಲ್ ಮರ್ಕ್ಯೂರಿ', "ನೆಟಾಲ್ ಅಡ್ವರ್ಟೈಜರ್", ಮೊದಲಾದ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಅಕ್ರಮಗಳನ್ನು ಪ್ರತಿಭಟಿಸುತ್ತಿದ್ದರು. ಆಫ್ರಿಕದ ಜೂಲೂ ಜನಾಂಗದವರಿಗೂ, ಬ್ರಿಟಿಷ್ ಆಡಳಿತಗಾರರಿಗೂ ಭಾರತೀಯರನ್ನು ತಮ್ಮಂತೆಯೇ ಗೌರವದಿಂದ ನೋಡುವಂತೆ ಪ್ರಾರ್ಥಿಸುತ್ತಿದ್ದರು.

ಡೇವಿಂಡ್ ವಿಂಡೆ ಮದರಾಸಿನಿಂದ ಆಫ್ರಿಕಾಗೆ ಬಂದು ಲೇಡಿಸ್ಮಿತ್ ಕೋರ್ಟಿನ ಭಾಷಾಂತಕಾರರಾಗಿದ್ದರು. ಇವರ ಪತ್ನಿ ಸ್ಥಳೀಯ ಶಾಲೆಯ ಉಪಾಧ್ಯಾಯಿನಿ. ಡಿಸೆಂಬರ್ 15,1895ರ ರಾತ್ರಿ ಈಕೆ ತನ್ನ ನಾದಿನಿ ಮತ್ತು ಮತ್ತೊಬ್ಬ ಹುಡುಗನೊಡನೆ ಮನೆಗೆ ಹಿಂತಿರುಗುತ್ತಿದ್ದರು. ದಾರಿಯಲ್ಲಿ ಕಾಫಿರ್ ಪೋಲೀಸು ಪ್ಯಾದೆ ಇವರನ್ನು ತಡೆದು ಕತ್ತು ಹಿಡಿದು ರಹದಾರಿ ತೋರಿಸುವಂತೆ ಕೇಳಿದ. ನೆಲಕ್ಕೆ

ಉರುಳುವಂತಾಯಿತು. ಒಂದು ಜೋಡು ಕಳಚಿಕೊಂಡು ಬಿದ್ದಿತು. ಅದನ್ನು ತೆಗೆದು ಕೊಳ್ಳುವ ಪ್ರಯತ್ನದಲ್ಲಿ ಇಬ್ಬರಿಗೂ ಘರ್ಷಣೆಯಾಗಿ ಅವಳ ಉಡುಪು ಹರಿಯಿತು. ಬಲಾತ್ಕಾರವಾಗಿ ಎಲ್ಲರನ್ನೂ ಪೋಲೀಸುಠಾಣೆಗೆ ಎಳೆದುಕೊಂಡು ಹೋದರು. ಒಬ್ಬ ಫ್ರೆಂಚ್‌ಪ್ರಜೆ ಹೊಡೆಯುವುದಾಗಿ ಮುಷ್ಟಿ ತೋರಿಸಿದ. ಪೋಲೀಸು ಠಾಣೆಯಲ್ಲಿ ಬಂಧಿತನಾಗಿದ್ದ ಮತ್ತೊಬ್ಬ ಭಾರತೀಯ ಇವರು ಶಿಕ್ಷಕಿ ಶ್ರೀಮತಿ ಡೇವಿಡ್ ಎಂದು ತಿಳಿಸಿದ. ಆದರೂ ಆಕೆಯನ್ನು ಕತ್ತಲೆ ಕೋಣೆಯೊಳಕ್ಕೆ ದೂಡಿ ಬೀಗ ಹಾಕಿದರು. ಆಕೆ ಕೆಳಕ್ಕೆ ಬಿದ್ದು ಪ್ರಜ್ಞಾಹೀನಳಾದಳು. ಇಪ್ಪತ್ತು ನಿಮಿಷಗಳ ನಂತರ ಹೆಡ್ ಕಾನ್‌ಸ್ಟೇಬಲ್ ವಿಲಿಯಂ ಮ್ಯಾಕ್ಡೊನಾಲ್ಡ್ ಬಂದು ಆಕೆಯನ್ನು ಬಿಡುಗಡೆ ಮಾಡಿದ. ಮನೆಗೆ ಪ್ರಜ್ಞಾಹೀನ ಸ್ಥಿತಿಯಲ್ಲೇ ಕರೆದೊಯ್ಯಲಾಯಿತು. ಸೆಳವು ಬಂದಿತು. ಡಾಕ್ಟರ್ ಮೊಬಲಿನ ಆಕೆಯನ್ನು ಪರೀಕ್ಷಿಸಿ ಒಂದು ವಾರ ವಿಶ್ರಾಂತಿ ಪಡೆಯುವಂತೆ ತಿಳಿಸಿದರು. ಮೊಳಕಾಲಿಗೆ ಪೆಟ್ಟು ಬಿದ್ದು ಊದಿತ್ತು. ಎದೆ, ಬೆನ್ನು, ಸೊಂಟ ನೋವಿ ನಿಂದ ನರಳುತ್ತಿದ್ದಳು.

ಗುಣಮುಖಗೊಂಡ ಶ್ರೀಮತಿ ಡೇವಿಡ್ ವಿಂಡೆಂಸ್ ಮತ್ತು ಆಕೆಯ ನಾದಿನಿ ಇಬ್ಬರೂ ತಮಗಾದ ಯಾತನೆ ಮತ್ತು ಅಪಮಾನಕ್ಕಾಗಿ ತಲಾ 200 ಪೌಂಡು ಪರಿ ಹಾರ ಕೋರಿ ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿದರು. ಅರ್ಜಿ ಸಲ್ಲಿಸಿದ ಸುದ್ದಿ ತಿಳಿದು ಪೋಲೀಸು ಅಧಿಕಾರಿ ವಿಂಡೆಂಸ್ ಅವರ ಮನೆಗೆ ಹೋಗಿ ಮೊಕದ್ದಮೆ ಮುಂದುವರಿ ಸಿದರೆ ನಿನ್ನ ಶ್ರಾದ್ಧ ಮಾಡಿಬಿಡುವೆನು. ನಿನ್ನ ನಡತೆ ಎಲ್ಲವನ್ನೂ ಬಯಲಿಗೆ ಎಳೆಯುವೆ, ಜೋಕೆ ಎಂದು ಬೆದರಿಕೆ ಹಾಕಿದ. ಆದರೂ ವಿಚಾರಣೆ ಮುಂದುವರೆಯಿತು.

ವಿಚಾರಣೆ ಕಾಲದಲ್ಲಿ, "ಅರಬ್ಬರನ್ನು ಏಕೆ ಬಂಧಿಸುವುದಿಲ್ಲ. ಆದರೂ ವರ್ಣೀಯ ರಲ್ಲವೆ" ಎಂದು ಮ್ಯಾಕ್ಡೊನಾಲ್ಡ್ ಅವನನ್ನು ಪ್ರಶ್ನಿಸಲಾಯಿತು. ಅವರನ್ನು ಬಂಧಿ ಸುವ ಪದ್ಧತಿ ಇಲ್ಲ. ರಹದಾರಿಯ ನಿಯಮ ಭಾರತೀಯ ಕೂಲಿಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ತಿಳಿಸಿದ. ಶ್ರೀಮತಿ ಡೇವಿಡ್ ಮತ್ತು ಆಕೆಯ ನಾದಿನಿ ಇಬ್ಬರೂ ಪೋಲೀಸರ ನಡತೆಯಿಂದ ಮಾನಸಿಕ ಹಾಗೂ ಶಾರೀರಿಕ ನೋವು ಮತ್ತು ಅಪಮಾನಕ್ಕೆ ಗುರಿಯಾದರು. ಆದ್ದರಿಂದ ಇಬ್ಬರಿಗೂ ತಲಾ 20 ಪೌಂಡುಗಳ ಪರಿ ಹಾರ ಕೊಡುವಂತೆ ನ್ಯಾಯಾಲಯ ತೀರ್ಪು ಕೊಟ್ಟಿತು.

ಆಸ್ಪತ್ರೆಯಿಂದ ಹೊರಬಂದ ಬಾಲಸುಂದರಂ ನೇರವಾಗಿ ಗಾಂಧಿಯವರ ಮನೆಗೆ ಬಂದ. ತನ್ನ ಯಜಮಾನನ ವಿರುದ್ಧ ಮೊಕದ್ದಮೆ ಹೂಡುವಂತೆ ಪ್ರಾರ್ಥಿಸಿದ. ಆದರೆ ಗಾಂಧೀಜೀಗೆ ಶಿಕ್ಷೆ ವಿಧಿಸಿ ಸೇಡು ತೀರಿಸಿಕೊಳ್ಳುವುದಕ್ಕಿಂತ ಅವನ ಹೃದಯ ಪರಿವರ್ತನೆ ಮಾಡಿಸುವುದು ಸೂಕ್ತ ಎನಿಸಿತ್ತು. ಬಾಲ ಸುಂದರನನ್ನು ಹಳೆಯ ಯಜಮಾನನಿಂದ ಮತ್ತೊಬ್ಬ ಯಜಮಾನನಿಗೆ ವರ್ಗಾಯಿಸಿಕೊಳ್ಳಲು ಒಪ್ಪಿಕೊಳ್ಳು

ವಂತೆ ಮನ ಒಲಿಸಿದರು. ಮಾತನಾಡಲು ಸಾಧ್ಯವಾಗದೆ ಅವನು ತಲೆ ತೂಗಿದ. ಅವನಿಗೆ ಪತ್ರ ಬರೆದುಕೊಟ್ಟು ಭಾರತೀಯರ ರಕ್ಷಕ ಅಥವಾ ಪ್ರೊಟೆಕ್ಟರ್ ಅವರಲ್ಲಿಗೆ ಕಳುಹಿಸಿದರು. ಬಾಲಸುಂದರನ ಒಡೆಯನಲ್ಲಿಗೆ ಗಾಂಧೀಜಿ ಹೋಗಿ ಅವನನ್ನು ಮತ್ತೊಬ್ಬ ಮಾಲೀಕನಿಗೆ ವರ್ಗಮಾಡಿಕೊಡುವಂತೆ ಕೇಳಿದರು. ಆಗಲೆಂದು ಒಪ್ಪಿಗೆ ಕೊಟ್ಟ.

ಇತ್ತ ಬಾಲಸುಂದರಂ ರಕ್ಷಣಾಧಿಕಾರಿಯ ಬಳಿ ಉಳಿದ. ತನ್ನ ಕೈಲಾದ ನೆರವು ನೀಡುವುದಾಗಿ ಅವನು ತಿಳಿಸಿದ. ಬಾಲಸುಂದರನನ್ನು ಹೊಡೆದು ಬಡಿದು ಪೀಡಿಸಿದ ಒಡೆಯ ಕಚೇರಿಗೆ ಬಂದು, ಸುಂದರನನ್ನು ಬಿಟ್ಟುಕೊಡಲು ತನ್ನ ಹೆಂಡತಿ ಒಪ್ಪಿಗೆ ಕೊಡುತ್ತಿಲ್ಲ ಎಂದು ತಿಳಿಸಿದ. ಅಲ್ಲದೆ ತನ್ನ ಮಾಲಿಕನ ವಿರುದ್ಧ ತಾನು ಏನು ದೋಷ ಹೊರಿಸುವುದಿಲ್ಲವೆಂದು ಬಾಲಸುಂದರನಿಂದ ಕಾಗದ ಬರೆಸಿಕೊಂಡು ರುಜು ಮಾಡಿಸಿಕೊಂಡ.

ಈ ವಿಷಯ ಗಾಂಧೀಜೀಗೆ ತಿಳಿಯಿತು. ಅವರು ಅವಾಕ್ಕಾದರು. ಇಷ್ಟರಲ್ಲಿ ಬಾಲಸುಂದರಂ ಅವರಲ್ಲಿಗೆ ಬಂದು ನಡೆದ ವೃತ್ತಾಂತವೆಲ್ಲವನ್ನೂ ತಿಳಿಸಿದ. ಕೂಡಲೇ ಸುಂದರನ ಮಾಲಿಕನಿಗೆ ಅವನನ್ನು ಬಂಧಮುಕ್ತನಾಗಿ ಮಾಡುವಂತೆ ಕೈಜೋಡಿಸಿ ಪ್ರಾರ್ಥಿಸಿಕೊಳ್ಳುವುದಾಗಿ ಪತ್ರ ಬರೆದು ಕಳುಹಿಸಿದರು. ಪ್ರಯೋಜನವಾಗಲಿಲ್ಲ.

ಬಾಲಸುಂದರನನ್ನು ಕರೆದುಕೊಂಡು ಗಾಂಧೀಜಿ ಮ್ಯಾಜಿಸ್ಟ್ರೇಟರ್ ಕೋರ್ಟಿಗೆ ನಡೆದರು. ಅರ್ಜಿ ಸಲ್ಲಿಸಿದರು. ನ್ಯಾಯಾಧೀಶರು ಮಾಲೀಕನನ್ನು ಬರಮಾಡಿಕೊಂಡು ವಿಚಾರಣೆ ನಡೆಸಿದರು. ತನಗೆ ಕೋಪ ಬರುವಂತೆ ಅವನು ವರ್ತಿಸಿದ್ದರಿಂದ ಹೊಡೆದುದು ನಿಜವೆಂದು ಒಪ್ಪಿಕೊಂಡ. ಆದರೆ ಕೋಪ ಬರುವಂತೆ ತಾನು ನಡೆದುಕೊಳ್ಳಲಿಲ್ಲವೆಂದ ಸುಂದರಂ. ಏನೇ ಆಗಲಿ ಅವನು ಮೃಗನಲ್ಲ. ಅವನನ್ನು ಹೊಡೆಯುವ ಅಧಿಕಾರ ನಿನಗಿಲ್ಲ ಎಂದು ಮಾಲೀಕನ ಮೇಲೆ ಸಿಟ್ಟುಮಾಡಿಕೊಂಡರು. ಅವನನ್ನು ಬೇರೆ ಒಡೆಯನಿಗೆ ವರ್ಗ ಮಾಡಿಕೊಡು. ಒಳ್ಳೆಯ ಅವಕಾಶ ನಿನಗೆ ದೊರಕಿದೆ. ಇಲ್ಲವಾದರೆ ನೀನು ತುಂಬ ತೊಂದರೆಗೆ ಒಳಗಾಗಬೇಕಾದೀತು ಎಂದು ಎಚ್ಚರಿಸಿದರು ನ್ಯಾಯಾಧೀಶರು. ಬೇರೆ ಮಾರ್ಗ ಕಾಣದೆ ಒಪ್ಪಿಕೊಂಡ.

ಆದರೆ ಮತ್ತೊಂದು ತೊಂದರೆ ಗಾಂಧೀಜಿ ಪರಿಹರಿಸಬೇಕಾಗಿತ್ತು. ಮತ್ತೊಬ್ಬ ಆಂಗ್ಲ, ಬಾಲಸುಂದರನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಸಮ್ಮತಿಸಬೇಕಾಗಿತ್ತು. ಓ. ಜೆ. ಆಸ್ಕ್ಯೂ ಎಂಬುವರನ್ನು ಗಾಂಧೀಜಿ ಒಪ್ಪಿಸಿದರು. ಬಾಲಸುಂದರನ ಕಷ್ಟ ತಕ್ಕಮಟ್ಟಿಗೆ ಪರಿಹಾರವಾಯಿತು. ಈ ಸುದ್ದಿ ಸಮುದ್ರವನ್ನು ದಾಟಿ ಮದರಾಸಿಗೂ ಮುಟ್ಟಿತು. ನಮ್ಮನ್ನು ರಕ್ಷಿಸುವ 'ಕಾಂದೀ' ಆಫ್ರಿಕದಲ್ಲಿರುವರೆಂದು ತಂಡೋಪ ತಂಡವಾಗಿ ಕೂಲಿಯಾಳುಗಳು ಅವರಲ್ಲಿ ಬರತೊಡಗಿದರು.

ಬಾಲಸುಂದರಂ ರಕ್ತ ಸುರಿಸುತ್ತಾ ಗಾಂಧೀಜಿ ಅವರ ಮನೆ ಪ್ರವೇಶಿಸುತ್ತಲೇ ಪೇಟ ಕೈಗೆ ತೆಗೆದುಕೊಂಡು ಎರಡು ಕೈಗಳಿಂದಲೂ ನಮಸ್ಕರಿಸಿದ. ತಲೆಯ ಮೇಲಿನ ರುಮಾಲು ತೆಗೆದುದು ಗಾಂಧಿಯವರಿಗೆ ಹಿಡಿಸಲಿಲ್ಲ. ಪೇಟ ತಲೆಗೆ ಕಟ್ಟಿಕೊ ಎಂದು ಸನ್ನೆ ಮಾಡಿದರು. ದೊಡ್ಡವರ ಎದುರು ತಾನು ರುಮಾಲ ಧರಿಸಿ ನಿಲ್ಲಬಹುದೇ ಎಂದು ಅವನಿಗೆ ಅಚ್ಚರಿ. ಅವನ ಮುಖ ಸಂತೋಷದಿಂದ ಅರಳಿತು. ಮನುಕುಲದ ಮತ್ತೊಬ್ಬನನ್ನು ಅಪಮಾನಕ್ಕೆ ಗುರಿಮಾಡಿ ಹಿಗ್ಗುವುದು ನನಗೆ ಅರ್ಥವಾಗದು ಎನ್ನುತ್ತಾರೆ ಗಾಂಧೀಜಿ.

ಭಾರತದಿಂದ ಕರಾರು ಕೂಲಿಗಳನ್ನು ದಕ್ಷಿಣ ಆಫ್ರಿಕಾಗೆ ಕಳುಹಿಸಲು ಏಜೆಂಟರು ಇದ್ದರು. ಮೀನಿಗೆ ಗಾಳ ಹಾಕಿ ಹಿಡಿಯುವಂತೆ ಕಷ್ಟ ಸಂಕಟದಲ್ಲಿ ಬಡವರನ್ನು ದೂರದ ದೇಶದಲ್ಲಿ ಸ್ವರ್ಗಸುಖವಿರುವುದಾಗಿ ಆಸೆ ತೋರಿಸಿ ಹಿಡಿದು ಸಾಗಿಸುತ್ತಿದ್ದರು. ಒಬ್ಬ ಗಂಡಸಿಗೆ 45 ಮತ್ತು ಹೆಂಗಸಿಗೆ 55 ರೂಪಾಯಿಗಳಂತೆ ಕೂಲಿಗಳನ್ನು ಒದಗಿಸುತ್ತಿದ್ದ ಏಜೆಂಟರಿಗೆ ಕಮಿಷನ್ ಸಿಗುತ್ತಿತ್ತು. ಇವರನ್ನು ಸರಕು ಸಾಮಾನು ಸಾಗಿಸುವ ಕೂಲಿ ಜಹಜುಗಳಲ್ಲಿ ತುಂಬಿ ಸಾಗಿಸುವರು ಮೂಟೆ ಗಳಂತೆ. ಜಹಜಿನಲ್ಲಿ ಕೂಡಲು ಮಲಗಲು ಸಾಕಷ್ಟು ಸ್ಥಳವಿಲ್ಲ. ಕುಡಿಯಲು ನೀರು ಸಾಲದು. ಆಹಾರ ಸಾಲದು. ಅರೆಹೊಟ್ಟೆ. ಕಜ್ಜಿ, ಪಿಡುಬು, ವಾಂತಿ ಬೇಧಿ, ಹೊಟ್ಟೆ ಉಬ್ಬರ ಮೊದಲಾದ ಕಾಯಿಲೆಗಳಿಗೆ ಗುರಿಯಾಗಿ ದಾರಿಯಲ್ಲೇ ಸಾಯುವವರು ಎಷ್ಟೋ. ಸತ್ತವರ ಶವ ಸಮುದ್ರದ ಮೀನುಗಳಿಗೆ ಆಹಾರ. ಏನು ಕೆಲಸ, ಯಾರಲ್ಲಿ ಕೆಲಸ ಏನೂ ತಿಳಿಯದು. ಭಾರತದ ಬಡತನ ಬೇಡ. ಆಫ್ರಿಕದಲ್ಲಿ ಸುಖವಾಗಿ ಬಾಳೋಣ. ಕಷ್ಟಪಟ್ಟರೆ ಫಲವುಂಟು. ಈ ಆಸೆ ದೂರದ ಆಫ್ರಿಕ ಇವರನ್ನು ಆಕರ್ಷಿಸುತ್ತಿತ್ತು.

ಇಲ್ಲಿಗೆ ಬಂದ ಮೇಲೆ ಬಂಧನದ ಸಿರಿತನಕ್ಕಿಂತ, ಭಾರತದ ಬಡತನವೇ ಮೇಲು ಎನಿಸುತ್ತಿತ್ತು. ಭಾರತೀಯರ ಹಿತ ರಕ್ಷಿಸಲು ಸರ್ಕಾರ 'ಪ್ರೊಟೆಕ್ಟರ್' ಅಥವಾ ರಕ್ಷಕನೊಬ್ಬನನ್ನು ನೇಮಿಸಿತ್ತು. ಅನೇಕ ಸಂದರ್ಭಗಳಲ್ಲಿ ರಕ್ಷಕನೇ ಭಕ್ಷಕನಾಗು ತ್ತಿದ್ದ. ಕೂಲಿಗಳ ಒಡೆಯರನ್ನು ಇವನೇ ಗೊತ್ತುಮಾಡುವನು. ಒಮ್ಮೆ ಒಬ್ಬ ನಲ್ಲಿ ಕೆಲಸಕ್ಕೆ ಸೇರಿಕೊಂಡರೆ ಅಲ್ಲಿಂದ ಬಿಟ್ಟು ಬರುವಂತೆಯೇ ಇಲ್ಲ. ಯಮಪಾಶಕ್ಕೆ ಸಿಲುಕಿಕೊಂಡಂತೆ ಇವನ ಸ್ಥಿತಿ. ಅಲ್ಪ ಸ್ವಲ್ಪ ತಪ್ಪುಗಳಿಗೂ ಶಿಕ್ಷೆ. ಕೆಲಸ ತೃಪ್ತಿ ಕರವಾಗಿ ಮಾಡಿಲ್ಲ, ಅವಿಧೇಯತೆ, ಹೊತ್ತಿಗೆ ಸರಿಯಾಗಿ ಬರಲಿಲ್ಲ. ಎಲ್ಲವೂ ಕ್ರಿಮಿನಲ್ ದಂಡನೀಯ ಅಪರಾಧಗಳು. ಮಾಲೀಕನ ಲಿಖಿತ ಅನುಮತಿ ಪಡೆಯದೆ ಒಡೆಯನ ಮನೆಯಿಂದ ಒಂದು ಮೈಲಿ ಆಚೆ ಹೋಗುವಂತಿಲ್ಲ. ಮಾಲೀಕನ ವಿರುದ್ಧ ನ್ಯಾಯಾಧೀಶ ಅಥವಾ ರಕ್ಷಕನಲ್ಲಿ ಫಿರ್ಯಾದು ಹೂಡಬೇಕಾದರೆ ಮಾತ್ರ

ಹೋಗಬಹುದು. ಯಜಮಾನನ ವಿರುದ್ಧ ದೋಷ ಆರೋಪಿಸಲು ಧೈರ್ಯ ಯಾರಿಗೆ? ಆಪಾದನೆಗಳು ನಿರಾಧಾರವಾದುವೆಂದು ತೀರ್ಮಾನವಾದರೆ ದಂಡ, ಸಂಬಳದಲ್ಲಿ ಖೋತ. ಎರಡು ತಿಂಗಳ ಕಠಿಣ ಶಿಕ್ಷೆ. ಯಾರ ಮೇಲೆ ಆಪಾದನೆ ಹೊರಿಸಬೇಕೋ ಅವನಿಂದಲೇ, ರಕ್ಷಕನಲ್ಲಿಗೆ ಹೋಗಲು ಅನುಮತಿ ಪಡೆಯಬೇಕು. ನಾನು ಹೋಗಬಹುದೇ ಎಂದು ಕುರಿಮರಿ ತೋಳನಿಂದ ಅಪ್ಪಣೆ ಬೇಡುವಂತೆ. ಇದು ಭಾರತೀಯ ಕೂಲಿಗಳನ್ನು ರಕ್ಷಿಸುವ ಕಾನೂನು.

ಬ್ಯಾರಿಸ್ಟರ್ ಗಾಂಧೀ ಇವೆಲ್ಲವನ್ನೂ ತಿಳಿದು ತುಂಬ ದುಃಖಿತರಾದರು. ಸಂಕಟಪಟ್ಟರು. 'ಆತ್ಮನ್ ಆತ್ಮನ್ಯೇವೋಹಿ ಉದ್ಧರೇತ್'. ಸ್ವಶಕ್ತಿಯಿಂದಲೇ ಈ ಸಂಕಟ ಬಗೆಹರಿಸಬೇಕು. ಹೀಗೆ ಚಿಂತಿಸಿ, ಹತ್ತಾರು ಪ್ರಮುಖ ಭಾರತೀಯ ರೊಡನೆ ವಿಚಾರ ವಿನಿಮಯ ಮಾಡಿ 'ನೆಟಾಲ್ ಭಾರತೀಯ ಕಾಂಗ್ರೆಸ್' ಸ್ಥಾಪಿಸಲು ತೀರ್ಮಾನಿಸಿದರು. ಇವರೇ ಪ್ರಥಮ ಸಂಚಾಲಕ ಮತ್ತು ಕಾರ್ಯದರ್ಶಿ.

ಶಂಕುಸ್ಥಾಪನೆ, ಪ್ರಾರಂಭೋತ್ಸವ, ಬಾಜಾಬಜಂತರಿ ಸದ್ದುಗದ್ದಲವಿಲ್ಲದೆ ಕಾಂಗ್ರೆಸ್ ಜನ್ಮ ತಾಳಿತು. ಉತ್ಸಾಹದಿಂದ ಸದಸ್ಯತನ ಬೆಳೆಯಿತು. ಆದರೆ ಸರ್ಕಾರಕ್ಕೆ ಇದು ಬೇಡವಾಗಿತ್ತು. ಸರ್ಕಾರವನ್ನು ವಿರೋಧಿಸಲು ಸ್ಥಾಪಿತವಾಗಿ ರುವ ಗೋಪ್ಯ ಸಂಸ್ಥೆ ಇದು. ಹುಟ್ಟಿನಲ್ಲೇ ಬೇರುಸಹಿತ ಇದನ್ನು ಕಿತ್ತುಹಾಕಿ ಬಿಡಬೇಕೆಂದು ಕ್ಯಾಪ್ಟನ್ ಲುಕ್ಯಾಸ್ ತೀರ್ಮಾನಿಸಿದ.

ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು. ಲುಕ್ಯಾಸಿಗೆ ನೆಪವೊಂದು ಸಿಕ್ಕಿತು ಪೊನ್ನುಸ್ವಾಮಿ ಪಥಾರ್, ಮುರುಗಸ್ವಾಮಿ ಪಿಳ್ಳೆಯನ್ನು ದರ್ಬಾನಿನ ಬೀದಿಯಲ್ಲಿ ಬಹಿರಂಗವಾಗಿ ಬೈದು ಥಳಿಸಿದ. ಎಳೆಂಟು ಮುಸಲ್ಮಾನರು ಈ ಕೃತ್ಯ ಕಣ್ಣಾರೆ ನೋಡಿರುತ್ತಾರೆ. ಇವರಲ್ಲಿ ಮಹಮ್ಮದ್ ಇಬ್ರಾಹಿಂ ಅಸಗಾರ ಒಬ್ಬ. ವೃತ್ತಿಯಲ್ಲಿ ಕಟುಕ. ನೆಟಾಲ್ ಕಾಂಗ್ರೆಸ್ಸಿನ ಮಾಜಿ ಸದಸ್ಯ. ಅಸಗಾರ ಮತ್ತು ಇತರರು ಮುರುಗಸ್ವಾಮಿಯ ಪರ ಸಾಕ್ಷಿ ಕೊಡಲು ಸಿದ್ಧ. ಆದರೆ ಒಂದು ಅಂಗಡಿಯಲ್ಲಿ ಉಗ್ರಾಣಿ ಆಗಿದ್ದ ರಂಗಸ್ವಾಮಿ ಪಾದಯಾಚಿಯು ಪಿಳ್ಳೆಯ ಪರ ಯಾರೂ ಸಾಕ್ಷಿ ನೀಡಬಾರದೆಂದು ಬೆದರಿಕೆ ಹಾಕಿದ. ಹೀಗೆ ಎಲ್ಲರ ಮೇಲೂ ಆಪಾದನೆ ಹೊರಿ ಸಲ್ಪಟ್ಟು ದರ್ಬಾನಿನ ಸ್ಥಳೀಯ ನ್ಯಾಯಾಧೀಶ ಕ್ಯಾಪ್ಟನ್ ಲುಕ್ಯಾಸ್ ಮುಂದೆ ವಿಚಾರಣೆಗೆ ಬಂತು. ಅಸಗಾರ ಎಲ್ಲರ ವಿರುದ್ಧ ಸಾಕ್ಷಿ ನೀಡಿದ. ಮಾಜಿ ಸೈನ್ಯಾಧಿ ಕಾರಿಯಾಗಿದ್ದ ಲುಕ್ಯಾಸ್, ಪೊನ್ನುಸ್ವಾಮಿ, ಮುರುಗಸ್ವಾಮಿ ಪಿಳ್ಳೆ ಮತ್ತು ಕಾಂಗ್ರೆಸ್ ಸದಸ್ಯರಿಗೆ ಶಿಕ್ಷೆ ವಿಧಿಸಿದ. ಅಲ್ಲದೆ ಸಾಕ್ಷಿ ಕೊಡಲು ಅಸಗಾರನನ್ನು ಅಡ್ಡಿಪಡಿಸಿದನೆಂದು ರಂಗಸ್ವಾಮಿಯ ಮೇಲೆ ಮತ್ತೊಂದು ಆಪಾದನೆ ಹೊರಿಸ

ಲ್ಪಟ್ಟಿತು. ಆರು ತಿಂಗಳ ಕಠಿಣ ಶಿಕ್ಷೆಗೆ ಅವನು ಒಳಗಾದ. ಸಾಕ್ಷಿ ನೀಡಿದವನು ಮಹಮ್ಮದ್ ಇಬ್ರಾಹಿಂ ಅಸಗಾರನೊಬ್ಬನೇ.

ಕೂಡಲೇ ತೀರ್ಪಿನ ವಿರುದ್ಧ ರಂಗಸ್ವಾಮಿ ಪಾದಯಾಚಿ ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿದ. ಗಾಂಧಿಯವರಲ್ಲಿ ಬಂದು ತನ್ನ ಪರ ವಕಾಲತ್ ವಹಿಸಬೇಕೆಂದು ಕೇಳಿಕೊಂಡ. ನ್ಯಾಯಾಧೀಶ ಲುಕ್ಯಾಸನಿಗೆ ಗಾಂಧಿಯವರನ್ನು ಕಂಡರೆ ಕೆಂಡದಂಥ ಕೋಪ. ಪೇಟವನ್ನು ತೆಗೆಯುವಂತೆ ಗಾಂಧಿಯವರನ್ನು ಆಗ್ರಹ ಪಡಿಸಿದ್ದವನು ಇದೇ ಲುಕ್ಯಾಸ್. ತಾನು ವಕಾಲತ್ ವಹಿಸಿಕೊಂಡರೆ ತನ್ನ ಕಕ್ಷಿಗಾರನಿಗೆ ನ್ಯಾಯ ದೊರಕದೆಂದು ಮಿಲ್ಲರ್ ಹೆಸರಿನ ವಕೀಲನನ್ನು ಗಾಂಧೀಜಿ ಗೊತ್ತು ಮಾಡಿದರು.

ವಿಚಾರಣೆ ನಡೆಯುತ್ತಿದ್ದಾಗ ಗಾಂಧೀಜಿ ಟಿಪ್ಪಣಿ ಬರೆದುಕೊಳ್ಳುತ್ತಿದ್ದರು. ಕ್ಯಾಪ್ಟನ್ ಲುಕ್ಯಾಸ್ ಪ್ರಶ್ನಿಸಿದ. ನೀವು ವಕೀಲನ ಗುಮಾಸ್ತರೋ ? ಬ್ಯಾರಿಸ್ಟರ್ ಆದ ವಕೀಲರೋ? ಬ್ಯಾರಿಸ್ಟರ್ ಆಗಿ ಗುಮಾಸ್ತನ ಕೆಲಸ ಮಾಡಲು ನಾಚಿಕೆಯಾಗುವುದಿಲ್ಲವೇ ? ಆಪಾದಿತನ ಪರ ವಕೀಲಿ ವಹಿಸಲಿಚ್ಛಿಸಿದರೆ ನಿರ್ದಿಷ್ಟವಾದ ಸರಿಯಾದ ಉಡುಪು ಧರಿಸಿ ಕೋರ್ಟಿಗೆ ಬರಬೇಕು. ಅನ್ಯಕಾರಣಕ್ಕಾಗಿ ನೀವು ಇಲ್ಲಿರುವಂತೆ ತೋರುತ್ತದೆ. ಹೀಗೆ ಹೀಯಾಳಿಸಿ ಮಾತನಾಡಿದ. ವಕೀಲ ಮಿಲ್ಲರಿಗೆ ನೆರವಾಗಲು ಟಿಪ್ಪಣಿ ತೆಗೆದುಕೊಳ್ಳುವುದರಲ್ಲಿ ದೋಷವೇನೂ ಇಲ್ಲವೆಂದರು ನ್ಯಾಯಾಧೀಶ ಬ್ಯೂಮಾಂಟ್. ಕೆಳಕೋರ್ಟಿನಲ್ಲಿ ಸಾಕ್ಷಿ ನೀಡಿದ ಇಬ್ರಾಹಿಂ ಅಸಗಾರನ ಸಾಕ್ಷಿ ನಂಬಲು ಯೋಗ್ಯವಾಗಿಲ್ಲ. ಪಾಟಿ ಸವಾಲಿನಲ್ಲಿ ಅವನು ತತ್ತರಿಸಿಹೋದ. ಕೆಳ ಕೋರ್ಟಿನ ಮ್ಯಾಜಿಸ್ಟ್ರೇಟರಾದ ಲುಕ್ಯಾಸ್ ಅನ್ಯವಿಷಯುಗಳನ್ನು ತಲೆ ತುಂಬ ತುಂಬಿಕೊಂಡು ನಾಲ್ವರಿಗೆ ಶಿಕ್ಷೆ ವಿಧಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲವೆಂದು ಕೆಳಕೋರ್ಟಿನ ತೀರ್ಪನ್ನು ವಜಾ ಮಾಡಿದರು. ನಾಲ್ವರೂ ಆಪಾದನೆಯಿಂದ ಮುಕ್ತರಾದರು. ಈ ತೀರ್ಪಿನ ಪರಿಣಾಮವಾಗಿ ನೆಟಾಲ್ ಕಾಂಗ್ರೆಸ್ಸಿನ ವರ್ಚಸ್ಸು ವೃದ್ಧಿಸಿತು.

ನೆಟಾಲಿನ ಸರ್ಕಾರಿ ರೈಲ್ವೆ ಅಪಾರ ಸಂಖ್ಯೆಯಲ್ಲಿ ಭಾರತೀಯ ಕರಾರು ಕೂಲಿಗಾರರನ್ನು ಬಳಸುತ್ತಿತ್ತು. ಬೆಳಗಿನಿಂದ ಸಂಜೆಯುವರೆಗೆ ಬೆನ್ನು ಮುರಿಯುವಂತೆ ದುಡಿಯುವ ಕೆಲಸ. ತಡೆಯಲಾರದಷ್ಟು ಹಿಂಸೆ. ದುಡಿದರೂ ಬೈಗು ಬೇಗುಗಳ ತಪ್ಪಿದ್ದಲ್ಲ. ಇಲ್ಲಿ ದುಡಿಯುವುದಕ್ಕಿಂತ ಜೈಲು ಸೇರಿ ಕಲ್ಲು ಒಡೆಯುವ ಕೆಲಸ ಲೇಸು. ಈ ಭಾವನೆ ಕಾರ್ಮಿಕರಲ್ಲಿ ಬೆಳೆದಿತ್ತು. ಇದಲ್ಲದೆ ಶ್ವೇತವರ್ಣೀಯರ ಆಂಗ್ಲ ಪತ್ರಿಕೆಗಳು ಕಾರ್ಮಿಕರನ್ನು ಸದಾ ದೂಷಿಸುತ್ತಲೇ ಇತ್ತು.

ಕೆಲಸ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಚಾವಟಿ ಏಟು ತಿನ್ನುತ್ತಿದ್ದವರು ಭಾರತೀಯರಾದರೂ ಏಪ್ರಿಲ್ 1895 ರಲ್ಲಿ 71 ಕೂಲಿಗಳು ಪೋಲೀಸರನ್ನು ಥಳಿಸಿದ

ರೆಂದು ನ್ಯಾಯಾಧೀಶ ಧಿಲ್ಲೋನ್ ಮುಂದೆ ಮೊಕದ್ದಮೆ ವಿಚಾರಣೆಗೆ ಬಂತು. ಕೂಲಿಯಾಳುಗಳಿಗೆ ಅಡುಗೆ ಮಾಡಲು ರೈಲ್ವೆ ಇಲಾಖೆ ಸೌದೆ ಒದಗಿಸಿಕೊಡಬೇಕಾಗಿತ್ತು. ಒದಗಿಸಿ ಕೊಡುತ್ತಿತು. ಆದರೆ ವೆಚ್ಚ ಇಳಿಸಲು ಸೌದೆಗೆ ಬದಲಾಗಿ ಕಲ್ಲಿದ್ದಲನ್ನು ಇಲಾಖೆಯು ಒದಗಿಸತೊಡಗಿತು. ಒಲೆ ಹೊತ್ತಿಸುವುದೇ ಇದರಿಂದ ಸಾಧ್ಯವಾಗುತ್ತಿರಲಿಲ್ಲ. ಸೌದೆ ಪುಳ್ಳಿ ಅರಸುತ್ತಾ ಅಲೆಯಬೇಕಾಯಿತು. ಬೆಳಗ್ಗೆ 3 ಘಂಟೆಗೆ ಎದ್ದು ಅಡುಗೆ ಊಟ ಮುಗಿಸಿ 6 ಘಂಟೆಗೆ ಕೆಲಸಕ್ಕೆ ಹಾಜರಾಗಬೇಕು. ತಾವು ಪಡುತ್ತಿರುವ ಕಷ್ಟ ಮೇಲಧಿಕಾರಿಗಳಲ್ಲಿ ವಿನಂತಿಸಿಕೊಂಡರು. ಆದರೂ ಪರಿಹಾರ ದೊರೆಯಲಿಲ್ಲ.

ಮೇ 17 ರಂದು ಈ ಶ್ರಮಜೀವಿಗಳು ತಲೆಯ ಮೇಲೆ ಸೌದೆ ಹೊರೆ ಹೊತ್ತು ಮನೆಗೆ ಹೋಗುತ್ತಿದ್ದಾಗ ಜೂಲೂ ಪೋಲೀಸ್ ಪ್ಯಾದೆ ಇವರನ್ನು ತಡೆದು ನಿಲ್ಲಿಸಿದ. ಆಗ ಏಳು ಕಾರ್ಮಿಕರು ಕೈಯಲ್ಲಿದ್ದ ಸೌದೆಯಿಂದ ಪೋಲೀಸಿನವನನ್ನು ಹೊಡೆದರು. ಇಷ್ಟರಲ್ಲಿ ಆಂಗ್ಲ ಕಾನ್‌ಸ್ಟೇಬಲ್ ಪಿ. ಸಿ. ಮಾರ್ಡ ಅಲ್ಲಿಗೆ ಬಂದ. ಕಾರ್ಮಿಕರು ಸ್ವಲ್ಪವೂ ಪ್ರತಿಭಟಿಸದೆ ಅವನ ವಶರಾದರು. ಇದು ಕಾರ್ಮಿಕರ ಮೇಲೆ ಹೊರಿಸಲ್ಪಟ್ಟ ಆಪಾದನೆ.

ಕಾರ್ಮಿಕರ ರಕ್ಷಕ ಆಪಾದಿತರ ಪರ ಸಾಕ್ಷಿ ನೀಡಿದ. "ಸ್ವತಃ ನಾನು ಕೂಲಿಗಳ ಮನೆಗೆ ಹೋಗಿ ನೋಡಿದೆ. ಒಲೆಯಲ್ಲಿ ಉರಿ ಏಳಿಸಲು ಸಾಧ್ಯವಾಗುತ್ತಿರಲಿಲ್ಲ. ರೈಲ್ವೆಯ ಜನರಲ್ ಮ್ಯಾನೇಜರಿಗೆ ನಾನು ಕಾಗದ ಬರೆದೆ. ನೋಡುವೆ ಎಂದು ಉತ್ತರಿಸಿದ. ಆದರೆ ಏನೂ ಮಾಡಲಿಲ್ಲ. 17 ದಿನಗಳಿಂದ ಒಲೆ ಹೊತ್ತಿಸಲಾಗದೆ ಈ ಜನ ಬಹಳ ಕಷ್ಟಪಡುತ್ತಿದ್ದಾರೆ". ಉಪವಾಸ.

ಇಲಾಖೆಯ ಪರ ರೈಲ್ವೆಯ ಹಮ್ಮಾಂಡ್ ವಾದಿಸಿದ. ಇಲಾಖೆಯವರು ಉರುವಲು ಒದಗಿಸಬೇಕೆಂಬ ನಿಯಮವಿಲ್ಲ. ಏನೋ ಪಾಪ, ಹೋಗಲಿ ಎಂಬ ಅನುಕಂಪದಿಂದ ಕಲ್ಲಿದ್ದಲು ಮತ್ತು ಅದನ್ನು ಹೊತ್ತಿಸಲು ಅಗತ್ಯವಾದ ಸೌದೆ ಇಲಾಖೆ ಕೊಡುತ್ತಿದೆ. ಇದು ಇಲಾಖೆಯ ಸಮರ್ಥನೆ.

"ತಮಗೆ ಹಕ್ಕಿಲ್ಲದುದನ್ನು ಕಾರ್ಮಿಕರು ಪಡೆದುಕೊಂಡಿರುತ್ತಾರೆ. ತದನಂತರ ಪೋಲೀಸರಲ್ಲಿ ಅಸಭ್ಯವಾಗಿ ವರ್ತಿಸಿರುತ್ತಾರೆ. ಆದರೆ ಅವರು ಅತೀವ ಕಷ್ಟ ಅನುಭವಿಸುತ್ತಿದ್ದರು. ಏಸು ಸ್ವಾಮಿಯ ಕಾಲದ ಯೆಹೂದಿಗಳಿಗೆ ಹುಲ್ಲಿಲ್ಲದೆ ಇಟ್ಟಿಗೆ ತಯಾರಿಸುವಂತೆ ತಿಳಿಸಲಾಗುತ್ತಿತ್ತು. ಅಂತೆ ಇವರ ಪರಿಸ್ಥಿತಿ. ಆದ್ದರಿಂದ ಇವರನ್ನು ನಾನು ಶಿಕ್ಷಿಸುವುದಿಲ್ಲ. ಬಿಡುಗಡೆ ಮಾಡಿರುವೆ". ಹೀಗೆ ನ್ಯಾಯಾಧೀಶರು ತೀರ್ಪು ಇತ್ತರು.

ಈ ವಿಚಾರಣೆ ನಡೆಯುತ್ತಿದ್ದಾಗ ಗಾಂಧೀಜಿ ಕೋರ್ಟಿನಲ್ಲಿ ಹಾಜರಿದ್ದರು.

ಎರಡು ದಿನಗಳ ತರುವಾಯ ನೆಟಾಲ್ ಅಡ್ವರ್ಟೈಜರ್ ಪತ್ರಿಕೆಯಲ್ಲಿ ಈ ಮೊಕದ್ದಮೆಯ ವರದಿ ಪ್ರಕಟಿಸಲ್ಪಟ್ಟಿತು. ರೈಲ್ವೆ ಇಲಾಖೆಯ ಹೆಬ್ಬಾಗಿಲು ಕಾಯಲು ಪೋಲೀಸರು ನಿಂತಿದ್ದರು. ಆಗ ಅನೇಕ ಭಾರತೀಯ ಕೂಲಿಗಳು ತಲೆಯ ಮೇಲೆ ದಿಮ್ಮಿಗಳನ್ನು ಹೊತ್ತು ಬಂದರು. ಪೋಲೀಸರು ಅವರನ್ನು ತಡೆದರು. ಆಗ 71 ಕೂಲಿಗಳು ಕೋಲು, ಕಬ್ಬಿಣದ ಸಲಾಕೆ, ಪಾತ್ರೆ ಇವುಗಳಿಂದ ಪೋಲೀಸರ ಮೇಲೆರಗಿದರು. ಪೋಲೀಸರು ಪ್ರಾಣ ಉಳಿಸಿಕೊಳ್ಳಲು ಓಡಿಹೋಗಬೇಕಾಯಿತು. ಈ ವೇಳೆಗೆ ಕಾನ್‌ಸ್ಟೇಬಲ್ ಮಡನ್ ಇತರ ಪೋಲೀಸರೊಂದಿಗೆ ಧಾವಿಸಿ ಬಂದು 7 ಮುಖಂಡರನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸಿದರು. ಸುಮಾರು ನೂರು ಕೂಲಿಗಳು ಕೋರ್ಟಿನ ಹೊರಗೆ ಕಾದಿದ್ದರು. ತಮ್ಮ ಸಹಪಾಠಿಗಳನ್ನು ಬಿಡುವವರೆಗೂ ತಾವು ಅಲ್ಲಿಂದ ಕದಲುವುದಿಲ್ಲವೆಂದು ಅವರು ಕೂಗುತ್ತಿದ್ದರು. ಮೂರು–ನಾಲ್ಕು ಪೋಲೀಸರು ಕೋರ್ಟಿಗೆ ಬಂದರು. ಅವರ ಅಂಗಿ ಹರಿದಿತ್ತು. ಮುಖ ತರಚಿಕೊಂಡಿತ್ತು. ಇದು ಪತ್ರಿಕೆ ಪ್ರಕಟಿಸಿದ್ದ ವರದಿ.

ಗಾಂಧೀಜಿ ಈ ವರದಿ ಓದಿ ತುಂಬ ಬೇಸರಪಟ್ಟರು. ಈ ವರದಿ ಸುಳ್ಳಿನ ಕಂತೆ. ಕೋರ್ಟಿನಲ್ಲಿ ನೀಡಲ್ಪಟ್ಟ ಸಾಕ್ಷಿಗೂ ವರದಿಗೂ ಭಿನ್ನ ಬಹಳ. ಬಿಳಿಯ ಕಾನ್‌ಸ್ಟೇಬಲ್ ಮಡನ್ ಅವರೇ ಹೇಳಿರುತ್ತಾರೆ. ಸ್ವಲ್ಪವೂ ಪ್ರತಿಭಟಿಸದೆ 71 ಕೂಲಿಗಳು ತಮ್ಮ ವಶರಾದರೆಂದು. ಗಲಭೆ ನಡೆಯಿತೆಂದು ಹೇಳಲಾದಾಗ ಹಾಜರಿದ್ದವರು ಇಬ್ಬರೇ ಪೋಲೀಸರು. ಒಬ್ಬ ಜೂಲೂ ಮತ್ತೊಬ್ಬ ಆಂಗ್ಲೇಯ ಮಡನ್. 71 ಜನ ಅಲ್ಲದೆ ಇತರ ಕಾರ್ಮಿಕರು ಅಲ್ಲಿ ಇದ್ದುದು ರಕ್ಷಕ ಮಿಸ್ಟರ್ ಮೋರ್ಸ್ ಅವರಿಗೆ ತಮ್ಮ ಕಷ್ಟ ತೋಡಿಕೊಳ್ಳಲು ಅಪ್ಪಣೆ ಪಡೆಯದೆ ಯಜಮಾನನ ಮನೆಯಿಂದ ಪರಾರಿಯಾಗಿರುವುದಾಗಿ ಅವರನ್ನು ವಿಚಾರಣೆಗೆ ಗುರಿಪಡಿಸುವುದಾಗಿ ತಿಳಿಸಲಾಗಿತ್ತು. ಆದ್ದರಿಂದ ಸ್ಥಳ ಬಿಟ್ಟು ಅವರು ಕದಲುವಂತಿರಲಿಲ್ಲ. ಪೆಟ್ಟು ಬಿದ್ದಿತೆಂದು ಒಬ್ಬ ಪೋಲೀಸನೂ ಸಾಕ್ಷಿ ನುಡಿಯಲಿಲ್ಲ. ಮರದ ದಿಮ್ಮಿ, ಕಟ್ಟಿಗೆ, ಕಬ್ಬಿಣದ ಸಲಾಕಿ, ಪಾತ್ರೆ ಯಾವುದನ್ನೂ ಕೋರ್ಟಿನಲ್ಲಿ ಹಾಜರ್ಮಾಡಲಿಲ್ಲ. ಈ ರೀತಿಯ ಗಾಂಧಿಯವರ ಹೇಳಿಕೆ ಪತ್ರಿಕೆ ಪ್ರಕಟಿಸಿತು.

ನ್ಯಾಯಕ್ಕಾಗಿ ಹೊಡೆದಾಡುವ ಒಬ್ಬ ಇರುವನೆಂದು ಕಾರ್ಮಿಕರು ಸಂತಸಪಟ್ಟರು.

ಆದರೆ ಇಷ್ಟರಿಂದಲೇ ರೈಲ್ವೆ ಕಾರ್ಮಿಕರ ಕಷ್ಟಗಳು ಕೊನೆಗಾಣಲಿಲ್ಲ. ಜೂನ್ ತಿಂಗಳಲ್ಲಿ 255 ಕಾರ್ಮಿಕರು ಮುಷ್ಕರ ಹೂಡಿದರು. ಕಾರಣ ಸಾಕಷ್ಟು ರೇಷನ್

ಒದಗಿಸುತ್ತಿಲ್ಲವೆಂದು. ಪ್ರತಿಯೊಬ್ಬ ಕಾರ್ಮಿಕನಿಗೂ ಪ್ರತಿದಿನ ತಲಾ ಒಂದೂವರೆ ಪೌಂಡು ಅಕ್ಕಿ, ತಪ್ಪಿದರೆ ಅದಕ್ಕೆ ಬದಲಾಗಿ ಎರಡು ಪೌಂಡು ಜೋಳ ಅಥವಾ ಹಿಟ್ಟು. ತಮಗೆ ರೂಢಿಯಾಗಿರುವುದು ಅಕ್ಕಿಯ ಅನ್ನ. ಜೋಳ ಅಥವಾ ಅದರ ಹಿಟ್ಟು ತಮಗೆ ಆಗುವುದಿಲ್ಲವೆಂದು ಕಾರ್ಮಿಕರು. ಎರಡು ವಾರಗಳಿಂದ ಅವರಿಗೆ 6 ಪೌಂಡು ಅಕ್ಕಿ 6, ಪೌಂಡು ಜೋಳ ಅಥವಾ ಹಿಟ್ಟು ಮತ್ತು ಬೇಳೆ ಕೊಡಲಾಗಿತ್ತು. ತಮಗೆ ಬೇಕು ಅಕ್ಕಿ. ಇದು ಅವರ ಪ್ರಾರ್ಥನೆ.

ತಮ್ಮ ಪ್ರಾರ್ಥನೆ ಸಲ್ಲಿಸಲು ಅವರು ರಕ್ಷಣಾಧಿಕಾರಿಯ ಬಳಿಗೆ ಹೋಗಿದ್ದರು. ಅವರ ಅಹವಾಲು ಕೇಳಲ್ಪಡಲಿಲ್ಲ. ಇದಕ್ಕೆ ಪ್ರತಿಯಾಗಿ 101ನೆಯ ಅನುಚ್ಛೇದದ ಪ್ರಕಾರ ಎಲ್ಲರೂ ಬಂಧಿತರಾದರು. ಮಾಲೀಕರಿಂದ ಒಟ್ಟಾಗಿ ಹೊರಟು ಬಂದುದೇ ಅವರ ಅಪರಾಧ. ಇದಕ್ಕೆ ಶಿಕ್ಷೆ ಎರಡು ಪೌಂಡು ಮೀರದ ದಂಡ ಅಥವಾ ಎರಡು ತಿಂಗಳು ಮೀರದ ಕಾರಾಗೃಹವಾಸ.

ಗಾಂಧೀಜಿ ಅಪಾದಿತರಪರ ವಕೀಲರಾಗಿ ರೈಲ್ವೆ ಅಧಿಕಾರಿಗಳೊಡನೆ ಒಪ್ಪಂದಕ್ಕೆ ಬರಲು ವಿಚಾರಣೆಯನ್ನು ಎಂಟು ದಿನಗಳಕಾಲ ಮುಂದೂಡಬೇಕಾಗಿ ಕೇಳಿಕೊಂಡರು. ಆದರೆ ರೈಲ್ವೆ ಇಲಾಖೆಯ ಹಮ್ಮಾಂಡ್ ಒಪ್ಪಲಿಲ್ಲ. ನ್ಯಾಯಾಧೀಶ ಕ್ಯಾಪ್ಟನ್ ಲುಕ್ಯಾಸ್ ಒಪ್ಪಿಗೆ ಕೊಡುವರೆಂದು ನಿರೀಕ್ಷಿಸುವಂತೆಯೇ ಇರಲಿಲ್ಲ. ಅವಕಾಶ ಸಿಕ್ಕಿದರೆ ಸಾಕು ಭಾರತೀಯರನ್ನು ಶಿಕ್ಷಿಸಲು. ಗಾಂಧಿಯವರ ಪ್ರಯತ್ನದಿಂದ ಇಲಾಖೆಯವರೊಡನೆ ಒಪ್ಪಂದ ಏರ್ಪಟ್ಟಿತು. ಇನ್ನು ಮುಂದೆ ಕಾರ್ಮಿಕರಿಗೆ 6 ಪೌಂಡು ಅಕ್ಕಿ ಮತ್ತು 8 ಪೌಂಡು ಹಿಟ್ಟು ಸಿಗುವಂತಾಯಿತು. ಮ್ಯಾಜಿಸ್ಟ್ರೇಟರೇ ಈ ವಿಷಯವನ್ನು ಕಾರ್ಮಿಕರಿಗೆ ಕೋರ್ಟಿನಲ್ಲಿ ಬಹಿರಂಗಪಡಿಸಿದರು. ಆದರೇನು ಕಾರ್ಮಿಕರು ಶಾಸನವನ್ನು ಉಲ್ಲಂಘಿಸಿದ್ದರಲ್ಲವೇ? ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸುವುದು ತನ್ನ ಕರ್ತವ್ಯ. ಹೀಗೆಂದು ನ್ಯಾಯಾಧೀಶ ಲುಕ್ಯಾಸ್ ಪ್ರತಿಯೊಬ್ಬರಿಗೂ ತಲಾ ಒಂದು ಶಿಲಿಂಗ್ ದಂಡ ತಪ್ಪಿದರೆ ಮೂರು ದಿನಗಳ ಶಿಕ್ಷೆ ವಿಧಿಸಿದರು. ದಂಡ ಕೊಡಲು ನಿರಾಕರಿಸಿ ಎಲ್ಲ ಕಾರ್ಮಿಕರೂ ಜೈಲಿನತ್ತ ಅಡಿಯಿಟ್ಟರು. ಹೆಚ್ಚು ರೇಷನ್ ಪಡೆಯುವುದು ನಿಮ್ಮ ಉದ್ದೇಶ. ಇದು ಬಹುಮಟ್ಟಿಗೆ ಫಲಪ್ರದವಾಗಿದೆ. ಅನುಚ್ಛೇದ 101 ವಿರುದ್ಧ ನೀವು ಮುಷ್ಕರ ಹೂಡಿರುವುದಿಲ್ಲ. ಅದರ ವಿರುದ್ಧ ಹೋರಾಡಬೇಕಾದರೆ ಅದಕ್ಕೇ ಪ್ರತ್ಯೇಕ ಕ್ರಮ ಕೈಗೊಳ್ಳಬೇಕು. ಹೀಗೆ ಅವರನ್ನು ಸಮಾಧಾನ ಪಡಿಸಲಾಯಿತು. ಸಮಾಧಾನವಾಯಿತು ಕಾರ್ಮಿಕರಿಗೆ. ಅವರೆಲ್ಲರೂ ದಂಡ ತೆತ್ತು ತಮ್ಮ ಕೆಲಸಗಳಿಗೆ ಹಿಂತಿರುಗಿದರು.

* * * *

ಬಿಹಾರದ ಚಂಪಾರಣ್ಯದಲ್ಲಿ ನೀಲಿ ಬೆಳೆಗಾರರ ಸಂಕಷ್ಟ ನಿವಾರಿಸಲು ಗಾಂಧೀಜಿ

ತೊಡಗಿದ್ದಾಗ ಕಾರ್ಮಿಕರ ತೊಂದರೆ ಬಗೆಹರಿಸಬೇಕೆಂದು ಅಹಮ್ಮದಾಬಾದಿನಿಂದ ಕರೆ ಬಂತು. ಅಹಮ್ಮದಾಬಾದ್ ಬಟ್ಟೆ ಗಿರಣಿಗಳಿಗೆ ಪ್ರಸಿದ್ಧವಾದದ್ದು. 1917ರಲ್ಲಿ ಮಹಾಮಾರಿ ಪ್ಲೇಗ್ ಪಿಡುಗು ಕಾಣಿಸಿಕೊಂಡು ಜನ ಭಯಭೀತರಾಗಿ ಊರು ಬಿಟ್ಟು ಪಲಾಯನ ಮಾಡುತ್ತಿದ್ದರು. ಊರು ಬಿಟ್ಟು ಹೋಗದಂತೆ ಮಾಡಲು ಗಿರಣಿ ಕಾರ್ಮಿಕರಿಗೆ ಅವರ ವೇತನದ ಶೇಕಡ 80ರಷ್ಟು ಬೋನಸ್ ಕೊಡಲಾಗುತ್ತಿತ್ತು. ಪಿಡುಗು ಶಮನವಾಯಿತು. ಇನ್ನೇಕೆ ಬೋನಸ್ ಕೊಡಬೇಕೆಂದರು ಮಾಲೀಕರು. ವಿಶ್ವ ಯುದ್ಧದನಂತರ ಅಗತ್ಯ ವಸ್ತುಗಳ ಬೆಲೆ ದ್ವಿಗುಣಿತವಾಗಿದೆ. ನಾಣ್ಯದ ಕೊಳ್ಳುವ ಬೆಲೆ ಇಳಿದಿದೆ. ಆದ್ದರಿಂದ ಬೋನಸ್ ಮುಂದುವರಿಸಿಕೊಂಡು ಬರ ಬೇಕೆಂದು ಕಾರ್ಮಿಕರ ವಾದ.

ಶ್ರೀಮಂತ ಅಂಬಾಲ್ ಸಾರಾಭಾಯಿ ಗಿರಣಿ ಮಾಲೀಕರ ಸಂಘದ ಅಧ್ಯಕ್ಷ. ಇವರ ತಂಗಿ ಅನಸೂಯಬಾಯ್ ಕಾರ್ಮಿಕರ ಗೆಳತಿ. ಈ ವಿಚಿತ್ರ ಸನ್ನಿವೇಶ ಗಾಂಧೀಜೀ ಎದುರಿಸಬೇಕಾಗಿತ್ತು. ಅನುಸೂಯ ಬೆಹನ್ ಮತ್ತು ಅಹಮದಾಬಾದಿನ ಕಲೆಕ್ಟರ್ ಗಾಂಧೀಜಿಗೆ ಪತ್ರ ಬರೆದು ಉಭಯತ್ರರ ನಡುವೆ ಶಾಂತಿ ಸಮಾಧಾನ ನೆಲಸುವಂತೆ ಮಾಡಬೇಕಾಗಿ ಕೋರಿದರು. ಬಿಹಾರದಿಂದ ಗಾಂಧೀಜಿ ನೇರವಾಗಿ ಅಹಮದಾಬಾದಿಗೆ ಬಂದರು.

ಸಾಬರಮತಿ ಆಶ್ರಮಕ್ಕೆ ಅಸ್ಪೃಶ್ಯರನ್ನು ಗಾಂಧೀಜಿ ಸೇರಿಸಿಕೊಂಡಾಗ ಇದ ರಿಂದ ಅತೃಪ್ತರಾದ ಶ್ರೀಮಂತರು ಆಶ್ರಮಕ್ಕೆ ನೆರವು ನೀಡುವುದನ್ನು ನಿಲ್ಲಿಸಿಬಿಟ್ಟರು. ಬೆಳಗಾದರೆ ಮಾಡುವುದೇನು ಚಿಂತೆ ಆವರಿಸಿತ್ತು ಆಶ್ರಮದಲ್ಲಿ. ಒಂದು ಬಿಡಿ ಕಾಸೂ ಇರಲಿಲ್ಲ. ಸಾಲದುದಕ್ಕೆ ಸಾಮಾಜಿಕ ಬಹಿಷ್ಕಾರವೂ ಬೆದರಿಕೆ ಹಾಕುತ್ತಿತು. ಈ ಸಂಕಟ ಸಮಯದಲ್ಲಿ ತಮ್ಮ ಹೆಸರನ್ನು ತಿಳಿಸದೆ 13,000 ರೂಪಾಯಿಗಳನ್ನು ಯಾರೋ ಗಾಂಧೀಜಿ ಕೈಯಲ್ಲಿರಿಸಿ ಅದೃಶ್ಯರಾಗಿದ್ದರು. ಸಂಕಟ ಸಮಯದಲ್ಲಿ ಸಹಾಯಕ್ಕೆ ಬಂದವರು ಮತ್ತೆ ಯಾರೂ ಅಲ್ಲ ಅಂಬಾಲಾಲ್ ಸಾರಾಭಾಯಿ. ಇಂಥಾ ದಯಾಸಿಂಧುಗಳ ವಿರುದ್ಧ ಮುಷ್ಕರ ನಡೆಸುವ ಸಂಕಟ ಪರಿಸ್ಥಿತಿಗೆ ಗಾಂಧೀಜೀ ಸಿಲುಕಿಕೊಂಡರು.

ಸಂಧಾನದಿಂದ ವಿವಾದ ಬಗೆಹರಿಸುವುದು ಸತ್ಯಾಗ್ರಹದ ಕ್ರಮ. ಮಿಲ್ ಮಾಲೀಕರು, ಕಾರ್ಮಿಕರ ನಾಯಕರು ಮತ್ತು ಕಲೆಕ್ಟರೊಡನೆ ಮಾತುಕತೆ ಪ್ರಾರಂಭಿ ಸಿದರು. ಮಾಲೀಕ, ಕಾರ್ಮಿಕ ಮತ್ತು ಸರ್ಕಾರ ಇವರ ಪ್ರತಿನಿಧಿಗಳನ್ನೊಳಗೊಂಡ ಪಂಚಾಯಿತಿಗೆ ವಾದ ಒಪ್ಪಿಸೋಣವೆಂದರು ಗಾಂಧೀಜಿ. ಮಾಲೀಕರು ಇಷ್ಟವಿಲ್ಲದೆ ಒಪ್ಪಿಕೊಂಡರು. ಮಾಲೀಕರ ಪರ ಮೂವರು, ಕಾರ್ಮಿಕರ ಪರ ಮೂವರು, ಕಲೆ ಕ್ಟರ್ ಅಧ್ಯಕ್ಷರು ಇವರನ್ನೊಳಗೊಂಡ ಪಂಚಾಯಿತಿ ರೂಪುಗೊಂಡಿತು. ಕಾರ್ಮಿಕ ವರ್ಗದಲ್ಲಿ ಹಲವರು ಹಟಾತ್ತನೆ ಅಲ್ಪ ಕಾರಣಕ್ಕೆ ಮುಷ್ಕರ ಹೂಡಿದರು. ಪಂಚಾ

ಯಿತಿ ಕೆಲಸ ಪ್ರಾರಂಭಿಸಲೇ ಇಲ್ಲ. ಇಷ್ಟರಲ್ಲೇ ಮುಷ್ಕರ. ಸಿಕ್ಕಿತೊಂದು ನೆಪ ಮಾಲೀಕರಿಗೆ. ಮುಷ್ಕರ ಅಕ್ರಮಣವೆಂದರು. ತಾವಾಗಿಯೇ ಶೇಕಡ 20 ರಂತೆ ಬೋನಸ್ ಕೊಡುವುದಾಗಿ ಘೋಷಿಸಿ, ಇದನ್ನು ಅಂಗೀಕರಿಸದವರಿಗೆ ಕೆಲಸದಿಂದ ವಜಾ ಮಾಡುವುದಾಗಿ ತಿಳಿಸಿದರು.

ಅಲಹಾಬಾದು ಮತ್ತು ಬೊಂಬಾಯಿ ಇಲ್ಲಿಯ ಹತ್ತಿ ಬಟ್ಟೆ ಗಿರಣಿಗಳ ಅನೇಕ ವರ್ಷಗಳ ಆಯವ್ಯಯ, ಪೇಟೆ ಧಾರಣೆ, ಜೀವನ ವೆಚ್ಚದ ಮಟ್ಟ ಇವುಗಳ ಕೂಲಂಕಷ ಅಭ್ಯಾಸ ಮಾಡಿದರು ಗಾಂಧೀಜಿ. ಲಾಭಾಂಶದಲ್ಲಿ ಕಾರ್ಮಿಕರು ಶೇಕಡ 35 ಪಡೆಯುವುದು ಸರಿ ಎನಿಸಿತು ಅವರಿಗೆ. ಕಾರ್ಮಿಕರ ಬೇಡಿಕೆ ಶೇಕಡ 50. ಮಾಲೀಕರು 20 ಕ್ಕೂ ಹೆಚ್ಚುಕೊಡಲು ಒಪ್ಪುತ್ತಿರಲಿಲ್ಲ. ಮಾಲೀಕರ ವರ್ತನೆ ಜಿಲ್ಲಾಧಿಕಾರಿಯನ್ನು ಬೇಸರಗೊಳಿಸಿತು. ತಮ್ಮ ಪೂರ್ಣ ಬೆಂಬಲ ಕಾರ್ಮಿಕರಿಗೆ ಕೊಡತೊಡಗಿದರು. ಪಂಚಾಯಿತಿ, ಪರಸ್ಪರ ಒಡಂಬಡಿಕೆ, ಮತ್ತೊಬ್ಬರ ಮಧ್ಯಸ್ತಿಕೆ ಈ ಎಲ್ಲ ಕ್ರಮಗಳೂ ವಿಫಲವಾದುವು. ಇನ್ನು ಉಳಿದಿದ್ದುದು ಮುಷ್ಕರ ಹೂಡುವುದೊಂದೇ ಮಾರ್ಗ.

ಮಾಲೀಕರೆಲ್ಲರೂ ಒಂದಾಗಿ ಕಾರ್ಮಿಕರನ್ನು ಧ್ವಂಸ ಮಾಡಿಬಿಡುವ ಬೆದರಿಕೆ ಹಾಕತೊಡಗಿದರು. ಇದು ಆನೆ ಮತ್ತು ಇರುವೆಯ ಗುಂಪುಗಳ ನಡುವಿನ ಹೋರಾಟವಾದೀತು ಎಂದರು ಗಾಂಧೀಜಿ. ಮುಷ್ಕರಕ್ಕೆ ಬೆಂಬಲಕೊಡಲು ತೀರ್ಮಾನಿಸಿದರು. ಎಂದಿಗೂ ಯಾವ ಕಾರಣಕ್ಕೂ ಹಿಂಸೆಯಲ್ಲಿ ತೊಡಗಲಾಗದು; ಮುಷ್ಕರಕ್ಕೆ ಸೇರದವರನ್ನು ಹೀಯಾಳಿಸಲಾಗದು; ಮುಷ್ಕರಕ್ಕೆ ಸೇರುವಂತೆ ಒತ್ತಾಯ ಪಡಿಸಲಾಗದು; ಮಾಲೀಕರನ್ನು ಜರಿಯಲಾಗದು; ಪರಾವಲಂಬಿಗಳಾಗಿರಲಾಗದು. ಮುಷ್ಕರದ ಕಾಲದಲ್ಲಿ ಬೇರೆ ಉದ್ಯೋಗಗಳಲ್ಲಿ ತೊಡಗಿ ಜೀವನ ಸಾಗಿಸಬೇಕು. ಈ ರೀತಿಯ ಷರತ್ತುಗಳನ್ನು ಅವರು ವಿಧಿಸಿದರು. ಕಾರ್ಮಿಕರು ಎಲ್ಲಕ್ಕೂ ಒಪ್ಪಿಗೆಕೊಟ್ಟರು. ಎಲ್ಲರಿಗೂ ಸಮಾಧಾನವಾಗುವ ಒಪ್ಪಂದ ಆಗುವವರೆಗೆ ಮುಷ್ಕರ ಮುಂದುವರಿಸುವ ಪಣ ತೊಟ್ಟರು.

ಸಾಬರ್‌ಮತಿ ನದಿಯ ದಂಡೆಯ ಬಾಬೂಲ್ ಮರದ ಕೆಳಗೆ ನಿಶ್ಚಿತ ವೇಳೆಗೆ ಪ್ರತಿದಿನ ಕಾರ್ಮಿಕರ ಸಭೆ ನೆರೆಯುತ್ತಿತ್ತು. ವಚನ ಪಾಲಿಸುವಂತೆ ಕಾರ್ಮಿಕರನ್ನು ಗಾಂಧೀಜಿ ಎಚ್ಚರಿಸುತ್ತಿದ್ದರು. ಕಡೆಯವರೆಗೂ ಒಗ್ಗಟ್ಟಿನಿಂದ ಮುಷ್ಕರ ನಡೆಸುವೆವು. ಈ ಭರವಸೆ ಕೊಡುತ್ತಿದ್ದರು ಕಾರ್ಮಿಕರು. ಹೀಗೆಯೇ ಒಂದು ವಾರ ಮುಷ್ಕರ ಮುಂದುವರೆಯಿತು. ಆದರೆ ದಿನ ಕಳೆದಂತೆ ಕಾರ್ಮಿಕರ ಉತ್ಸಾಹ ಕುಗ್ಗುತ್ತಿದ್ದುದು ಗಾಂಧೀಜಿ ಗಮನಕ್ಕೆ ಬಾರದೆ ಹೋಗಲಿಲ್ಲ. ಹಾಜರಾತಿ ಕಡಮೆಯಾಗುತ್ತಾ ಬಂತು. ಗಲಭೆ ನಡೆಯಬಹುದೆಂಬ ಶಂಕೆ ತಲೆದೋರಿತು. ಗಾಂಧೀಜಿ

ಮತ್ತು ಅನುಸೂಯಾ ಬೆರ್ಹ ಹೊಟ್ಟೆತುಂಬ ಉಂಡು, ಮೋಟಾರಿನಲ್ಲಿ ಅಡ್ಡಾಡು ತ್ತಾರೆ. ಅವರಿಗೆ ಆಗುವ ನಷ್ಟವೇನು? ಈ ರೀತಿಯ ಪಿಸುಮಾತು ಗಾಂಧೀಜಿ ಕಿವಿಗೂ ಮುಟ್ಟಿತು. ಅವರು ಕೋಪಗೊಳ್ಳಲಿಲ್ಲ. ನೊಂದುಕೊಳ್ಳಲಿಲ್ಲ. ಹಿಂಜ ರಿತಕ್ಕೆ ಇದು ದಾರಿ ಎಂದು ಗ್ರಹಿಸಿದರು. ಮಾಡಲೇನು ಎಂದು ಚಿಂತಿಸುತ್ತಿದ್ದಾಗ ಹಟಾತ್ತನೆ ಗಂಭೀರವಾಣಿ ನುಡಿಸಿತು. ಮುಷ್ಕರ ಜಯಪ್ರದವಾಗ ಬೇಕು. ಇಲ್ಲವೇ ಅಷ್ಟು ಕಾರ್ಮಿಕರೂ ಕೆಲಸ ಬಿಟ್ಟು ಹೊರಬೀಳಬೇಕು. ಅದುವರೆಗೂ ಅನ್ನ ನೀರು ಸೇವಿಸುವುದಿಲ್ಲ ಎಂದರು ಗಾಂಧೀಜಿ.

ಈ ವಾಕ್ಯಗಳು ಸಭೆಯನ್ನು ಸ್ತಂಭಿತಗೊಳಿಸಿತು. ಎಲ್ಲರೂ ಚಕಿತರಾದರು. ತಂಗಿ ಅನುಸೂಯಳ ಕಣ್ಣಿನಿಂದ ಅಶ್ರುಧಾರೆ ಸುರಿಯಲಾರಂಭಿಸಿತು. ನೀವು ಉಪ ವಾಸ ಮಾಡಬೇಡಿ. ನಾವು ಮಾಡುತ್ತೇವೆ ಎಂದರು ಕಾರ್ಮಿಕರು. ಕಾರ್ಮಿಕರ ನಾಯಕನಾಗಿ ಉಪವಾಸ ಮೊದಲು ಮಾಡಬೇಕಾದ್ದು ತನ್ನ ಕರ್ತವ್ಯ. ನಿಮ್ಮ ವಚನ ಪಾಲಿಸಿದರೆ ಸಾಕು. ಹೀಗೆ ಎಲ್ಲರನ್ನೂ ಸಮಾಧಾನಗೊಳಿಸಿದರು.

ತನ್ನ ಉಪವಾಸದಿಂದ ಮಾಲೀಕರನ್ನು ಪೇಚಿಗೆ ಸಿಲುಕಿಸುವುದು ಅವರ ಉದ್ದೇಶವಿರಲಿಲ್ಲ. ಈ ಬಗೆಯ ಒತ್ತಾಯ ತರಲೂ ಮನ ಒಪ್ಪುತ್ತಿರಲಿಲ್ಲ. ಅಂಬಾ ಲಾಲರೂ ಗಾಂಧಿಯವರ ಹಿತೈಷಿಗಳೇ. ಅವರ ಪತ್ನಿ ಸರಳಾದೇವಿ ತಂಗಿಗೆ ಸಮಾನಳು. ಯಾರನ್ನೂ ಸಂಕಟಕ್ಕೆ ಗುರಿಮಾಡುವ ಇಚ್ಛೆಯಿಲ್ಲ. ಕಾರ್ಮಿಕರಿಗೆ ಇದು ಚೇತೋಹಾರಿ ಆಗಲಿ. ಇದೇ ನಿಜವಾದ ಉದ್ದೇಶ.

ಮೊದಲ ದಿನ ಅವರೊಡನೆ ತಂಗಿ ಅನಸೂಯ, ಸ್ನೇಹಿತರು ಮತ್ತು ಕಾರ್ಮಿ ಕರು ಉಪವಾಸವಿದ್ದರು. ಒಂದು ದಿನಕ್ಕೇ ಉಪವಾಸ ನಿಲ್ಲಿಸುವಂತೆ ಗಾಂಧೀಜಿ ಮನವೊಲಿಸಿದರು. ತನ್ನ ಮುಷ್ಕರವನ್ನು ಮಾಲೀಕರು ತಪ್ಪಾಗಿ ಭಾವಿಸಬಹು ದೆಂದು ಅವರು ಗ್ರಹಿಸಿದ್ದರು. ಆದರೂ ಅನ್ಯಮಾರ್ಗ ಕಾಣದೆ ಈ ವಿನೂತನ ನೈತಿಕ ಒತ್ತಾಯದ ಕ್ರಮ ಅವರು ಕೈಗೊಳ್ಳಬೇಕಾಯಿತು.

ಕಡೆಗೂ ಉಪವಾಸದ ಪರಿಣಾಮ ಒಳಿತೇ ಆಯಿತು. ಗಾಂಧೀಜಿ ಮೂರು ದಿನಗಳ ಉಪವಾಸ ಮಾಡಿದ್ದರು. ಮಾಲೀಕರ ಮನಸ್ಸು ಕರಗಿತು. ಒಪ್ಪಂದಕ್ಕೆ ಬರಲು ಅವರು ಒಗ್ಗಿದರು. ಆನಂದಶಂಕರಧೃವರ ಮಧ್ಯಸ್ತಿಕೆಯಿಂದ ವಿವಾದ ಇಬ್ಬರಿಗೂ ಸಮಾಧಾನವಾಗುವಂತೆ ಬಗೆಹರಿಸಲ್ಪಟ್ಟಿತು. ಇದರಿಂದ ಸಂತೃಪ್ತರಾದ ಮಿಲ್ ಮಾಲೀಕರು ಮಿಠಾಯಿ ಹಂಚಿದರು.

ಮಾಲೀಕ ಮತ್ತು ಕಾರ್ಮಿಕ ಇವರ ನಡುವೆ ತಲೆದೋರುವ ವಿವಾದಗಳನ್ನು ಪರಸ್ಪರ ವಿಚಾರ ವಿನಿಮಯ ಅಥವಾ ಪಂಚಾಯಿತರ ಮಧ್ಯಸ್ತಿಕೆಯಿಂದ ಬಗೆಹರಿಸಿ

ಕೊಳ್ಳುವುದೇ ಉತ್ತಮ ಮಾರ್ಗವೆಂದು ಗಾಂಧಿಯವರ ಅಭಿಪ್ರಾಯ. ಎರಡು ವರ್ಷಗಳ ನಂತರ ಗಾಂಧೀಜಿ ಅಹಮ್ಮದಾಬಾದ್ ಹತ್ತಿ ಗಿರಣಿ ಕಾರ್ಮಿಕರ ಸಂಘದ ಪ್ರಾರಂಭೋತ್ಸವ ನೆರವೇರಿಸಿದರು. ಗಾಂಧಿಯವರ ಆಶಯದಂತೆ ಈ ಸಂಘ ಸೌಹಾರ್ದ ದಿಂದ ವ್ಯಾಜ್ಯ ವಿವಾದ ಬಗೆಹರಿಸುವ ಕ್ರಮ ಅನುಸರಿಸಿಕೊಂಡು ಬರುತ್ತಿದೆ. ಈ ವ್ಯವಸ್ಥಿತ ಸಂಘ ತನ್ನದೇ ಆದ ವಾಚನಾಲಯ, ಪುಸ್ತಕ ಭಂಡಾರ, ಶಾಲೆ, ಆಸ್ಪತ್ರೆ, ಕ್ರೀಡಾಗಾರ, ಬ್ಯಾಂಕು, ವೃತ್ತಪತ್ರಿಕೆ ಇವುಗಳನ್ನು ಹೊಂದಿರುತ್ತದೆ. ಆದರ್ಶ ಕಾರ್ಮಿಕರ ಸಂಘವಾಗಿ ಉಳಿದಿದೆ.

ಕಾರ್ಮಿಕರ ಸಂಘಟನೆ ಮಾಡಿ ಮುಗಿಸುವಷ್ಟರಲ್ಲಿ ರೈತರ ಸಂಕಟ ನಿವಾರಿಸಲು ಬೇರೆ ಬೇರೆ ಕಡೆಗಳಿಂದ ಕರೆ ಬರತೊಡಗಿತು. ಚಂಪಾರಣ್ಯ ರಾಮಾಯಣದ ಜನಕ ಮಹಾರಾಜನಿಗೆ ಸೇರಿದ ವಿಭಾಗ. ಮಾವಿನ ಹಣ್ಣಿಗೆ ಪ್ರಸಿದ್ಧವಾದುದು. ಒಂದು ಕಾಲಕ್ಕೆ ದುರ್ಭಿಕ್ಷವನ್ನು ಕಾಣದ ನಾಡಿನ ಪರಿಸ್ಥಿತಿ 1917 ರಿಂದ ಬದಲಾಯಿಸಿತು. ಭಾರತದ ನೀಲಿ ಸಸ್ಯದ ಬಣ್ಣ ಜಗತ್ಪ್ರಸಿದ್ಧವಾಗಿತ್ತು. ಬ್ರಿಟಿಷರು ಈ ಬಣ್ಣವನ್ನು ಪಾಶ್ಚಾತ್ಯ ರಾಷ್ಟ್ರಗಳಿಗೆ ರಫ್ತು ಮಾಡಿ ಅಪಾರ ಲಾಭ ಗಳಿಸುತ್ತಿದ್ದರು. 1917 ರಿಂದ ಪ್ರತಿಯೊಬ್ಬ ರೈತನೂ ನಿರ್ದಿಷ್ಟ ಹಿಡುವಳಿಯಲ್ಲಿ ನೀಲಿ ಬೆಳೆಯ ಬೇಕೆಂದು ಸರ್ಕಾರ ಶಾಸನ ಮಾಡಿತು. ರೈತರನ್ನು ಮಾಲೀಕರು ಬಹು ವಿಧದಲ್ಲಿ ಪೀಡಿಸುತ್ತಿದ್ದರು.

ರಾಜಕುಮಾರ ಶುಕ್ಲ 1916 ರಲ್ಲಿ ಲಕ್ನೋ ಅಧಿವೇಶನದಲ್ಲಿ ಗಾಂಧಿಯವರನ್ನು ನೋಡಿದ್ದ. ಅವರಲ್ಲಿ ಅಪಾರ ಭಕ್ತಿ ವಿಶ್ವಾಸ ಮೂಡಿತ್ತು. ಚಂಪಾರಣ್ಯದ ರೈತರ ಕಷ್ಟ ಸಂಕಟಗಳನ್ನು ನಿವಾರಿಸಬಲ್ಲವರು ಗಾಂಧಿ, ಈ ವಿಶ್ವಾಸ ಅವನಲ್ಲಿ ಬಲವಾಗಿ ಬೇರೂರಿತ್ತು. ಹೆಸರು ರಾಜಕುಮಾರನಾದರೂ ಅವನು ಕೇವಲ ಬಡರೈತ. ಒಂದು ವರ್ಷಕಾಲ ಗಾಂಧಿಯವರನ್ನು ಹಿಂಬಾಲಿಸುತ್ತ ಕಡೆಗೂ 1917 ರಲ್ಲಿ ಅವರನ್ನು ಚಂಪಾರಣ್ಯಕ್ಕೆ ಒಯ್ಯುವುದರಲ್ಲಿ ಯಶಸ್ವಿಯಾದ. ಇಲ್ಲಿ ಬ್ರಜುಕಿಷೋರ ಪ್ರಸಾದ, ಸ್ವಾತಂತ್ರ್ಯಾನಂತರ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದ್, ಆಚಾರ್ಯ ಕೃಪಲಾನಿ, ಜೋಯಿತರಾಂ ಗಿದ್ವಾನಿ, ಮೌಲಾನ ಮಜರುಲ್ ಹಕ್, ಮಹದೇವ ದೇಸಾಯಿ, ನರಹರಿ ಪರೀಕ್ ಮೊದಲಾದ ಹಲವಾರು ನಿಷ್ಠಾವಂತ ಆಜೀವ ಸಹೋದ್ಯೋಗಿಗಳ ಪರಿಚಯ ಲಭಿಸಿ ಬೆಳೆಯಿತು.

ಚಂಪಾರಣ್ಯ ಬಿಹಾರ ಪ್ರಾಂತದ, ತಿರುಹುತ್ ವಿಭಾಗದ ಜಿಲ್ಲೆ. ಮೋತಿಹಾರಿ ಮುಖ್ಯ ಸ್ಥಳ. ಗಂಗಾ ನದಿಯ ಉತ್ತರಕ್ಕೆ ಹಿಮಾಲಯದ ತಪ್ಪಲಿನ ಗುಡ್ಡಗಾಡುಗಳಿಂದ ನಿಬಿಡವಾದ ಪ್ರದೇಶ. ನೇಪಾಳದ ಸಮೀಪ. ಭಾರತದ ಇತರ ಭಾಗಗಳಿಂದ ಸಂಪರ್ಕವಿಲ್ಲ. ಇಲ್ಲಿಯ ನಿವಾಸಿಗಳಿಗೆ ಕಾಂಗ್ರೆಸ್ ಅಥವಾ ಗಾಂಧಿಯವರ

ಪರಿಚಯವಿಲ್ಲ. ಕಾಂಗ್ರೆಸ್ ರಾಜದ್ರೋಹಿಗಳ, ಬಾಂಬು ತಯಾರಿಕರ, ಶಾಸನ ಭಂಗ ಮಾಡುವವರ ವಿದ್ರೋಹಿ ಸಂಸ್ಥೆ. ಈ ಭಾವನೆ ಅಲ್ಲಿ ಬೆಳೆದಿತ್ತು. ಖಳನಿಂದ ದೂರ ತೊಲಗು. ಕಾಂಗ್ರೆಸ್ಸಿನ ಹೆಸರು ಕೇಳಿದರೆ ಭಯ. ದೂರ ಸರಿಯುವುದೇ ಕ್ಷೇಮ.

ಗಾಂಧಿಯವರಿಗೂ ಇಲ್ಲಿನ ಜನರ ಪರಿಚಯವಿಲ್ಲ. ಭಾಷೆಯ ಅರಿವೂ ಸಾಲದು. ನಿಜ ಪರಿಸ್ಥಿತಿ ಅರಿಯಲು ಸ್ವತಃ ಜಿಲ್ಲೆಯಲ್ಲಿ ಸುತ್ತಾಡಬೇಕು. ರೈತರನ್ನು ಸಂದರ್ಶಿಸಿ ವಿಚಾರ ತಿಳಿಯಬೇಕು. ತದನಂತರ ವಿಚಾರಣಾ ಸಮಿತಿ ಗೊತ್ತುಮಾಡಲು ನಿರ್ಧರಿಸಿದರು. ನಮ್ಮಲ್ಲಿ ಎತ್ತಿನ ಗಾಡಿಯಂತೆ ಅಲ್ಲಿ ಆನೆ. ಆನೆಯಮೇಲೆ ಕುಳಿತು ಕೆಲವು ಗ್ರಾಮಗಳನ್ನು ಸಂದರ್ಶಿಸಿದರು. ಮೋತಿಹಾರಿನಿಂದ ಐದು ಮೈಲಿಗಳ ಆಚೆ ಒಬ್ಬ ರೈತನಿಗೆ ಭೂಮಾಲಿಕ ಚಿತ್ರಹಿಂಸೆ ಕೊಟ್ಟ ಸುದ್ದಿ ಬಂತು. ಆನೆಯ ಮೇಲೆ ಕುಳಿತು ಅಲ್ಲಿಗೆ ಹೊರಟರು.

ಚಂಪಾರಣ್ಯದಲ್ಲಿ ಅಲ್ಲಿನ ಆಂಗ್ಲ ಪ್ಲಾಂಟರುಗಳು ನೀಲಿ ಕಾರ್ಖಾನೆ ಸ್ಥಾಪಿಸಿದ್ದರು. ಇದಕ್ಕೆ ನೀಲಿ ಸಸಿ ಅಪಾರ ಪ್ರಮಾಣದಲ್ಲಿ ಅಗತ್ಯ. ಇದಕ್ಕಾಗಿ ತೀನ ಖಾತಿಯ ಪದ್ಧತಿ ಜಾರಿಗೆ ಬಂತು. ಇದರಂತೆ ಜಮೀನಿನ ಅತಿ ಫಲವತ್ತಾದ ಪ್ರದೇಶದ ಇಪ್ಪತ್ತನೆಯ ಮೂರು ಭಾಗದಲ್ಲಿ ನೀಲಿಯನ್ನು ಕಡ್ಡಾಯವಾಗಿ ಬೆಳೆದು ಗಿರಣಿಗೆ ಒಪ್ಪಿಸಬೇಕು. ಅವರು ಕೇಳಿದ ಬೆಲೆಗೆ ಕೊಡಬೇಕು. ಇನ್ನೂ ಅನೇಕ ಬಗೆಯ ಹಿಂಸೆ ರೈತರು ಅನುಭವಿಸುತ್ತಿದ್ದರು.

ರಾಸಾಯನಿಕ ವಸ್ತುಗಳಿಂದ ಕೃತಕ ನೀಲಿ ಮಾಡುವುದನ್ನು ಜರ್ಮನಿಯ ತಜ್ಞರು ಕಂಡುಹಿಡಿದರು. ಬೆಲೆ ಸುಲಭ. ಇದರಿಂದ ಸಸ್ಯೋತ್ಪನ್ನ ನೀಲಿಗೆ ಗಿರಾಕಿ ಬಿದ್ದುಹೋಯಿತು. ಇದರ ಪರಿಣಾಮವಾಗಿ ಇದರಿಂದ ನೀಲಿ ಬೆಳೆಯುತ್ತಿದ್ದ ಎಕರೆ 91,000ದಿಂದ 8,100ಕ್ಕೆ ಕೆಲವು ವರ್ಷಗಳಲ್ಲೇ ಇಳಿಯಿತು. ಇದರ ಲಾಭ ಪಡೆಯಬೇಕಾದ್ದು ರೈತರು. ವಸ್ತುತಃ ಹೀಗೆ ನಡೆಯಲಿಲ್ಲ.

ರೈತರು ನೀಲಿ ಬೆಳೆಯದಿರುವುದರಿಂದ ತಮಗೆ ನಷ್ಟವಾಗಿದೆ ಎಂಬ ನೆಪ ಹೂಡಿ ರೈತರಿಂದಲೇ ನಷ್ಟ ಭರ್ತಿ ಪರಿಹಾರ ಜಮೀನ್ದಾರ ಪ್ಲಾಂಟರುಗಳು ಕಸಿಯತೊಡಗಿದರು. ಗೇಣಿ ಅರವತ್ತರ ಪ್ರಮಾಣದಲ್ಲಿ ಹೆಚ್ಚಿತು. ಇನ್ನೂ ಅನೇಕ ಅಕ್ರಮ ರೀತಿಗಳಲ್ಲಿ ರೈತರನ್ನು ಪ್ಲಾಂಟರುಗಳು ಸುಲಿಗೆ ಮಾಡತೊಡಗಿದರು. ನಾಲೆಗಳಲ್ಲಿ ನೀರಿಲ್ಲ. ಆದರೂ ನಾಲೆಗಳಿಂದ ನೀರು ಪಡೆದರೆಂದು ತೆರಿಗೆ. ಪ್ಲಾಂಟರು ತನ್ನ ಸ್ವಂತಕ್ಕೆ ಆನೆ, ಮೋಟಾರುವಾಹನ, ಬಂಗಲೆ ಕೊಳ್ಳಲು ಅಥವಾ ಕಟ್ಟಲು ರೈತ ಕೊಡಬೇಕು ಹಣ. ಸತ್ತವರ ವಾರಸುದಾರ ತಾನೆಂದು ಖಚಿತಮಾಡಿಕೊಡಲು ರುಸುಂ ಸಲ್ಲಿಸಬೇಕು. ಬಿಹಾರಿ ಜಮೀನ್ದಾರ ಒಂದುಕಡೆ, ಆಂಗ್ಲ ಪ್ಲಾಂಟರು ಮತ್ತೊಂದು ಕಡೆ. ಇಬ್ಬರ

ನಡುವೆ, ಬೀಸುಕಲ್ಲಿನಲ್ಲಿ ಸಿಕ್ಕಿಕೊಳ್ಳುವ ಕಾಳಿನಂತೆ, ರೈತ ಅರೆದು ಹೋಗಿದ್ದ. ಅಲ್ಲಿನ ಮುಖ್ಯ ಅಧಿಕಾರಿಗಳೆಲ್ಲ ಆಂಗ್ಲರೇ. ಆದಕಾರಣ ಆಂಗ್ಲ ಪ್ಲಾಂಟರುಗಳಿಗೆ ಬಿಹಾರಿ ಜಮೀನ್ದಾರರಿಗಿಂತ ಹೆಚ್ಚು ಸುಲಿಗೆ ಸುರಿಯಲು ಸಾಧ್ಯವಾಗಿತ್ತು. 1867ರಲ್ಲಿ ಈ ಹಿಂಸೆ ತಡೆಯಲಾರದೆ ರೈತರು ದಂಗೆ ಎದ್ದಿದ್ದರು. ಆದರೆ ಈ ಪ್ರಯತ್ನ ವಿಫಲ ಗೊಂಡಿತ್ತು.

ಗಾಂಧೀಜಿ ಮೋತಿಹಾರಿನಿಂದ ಸ್ವಲ್ಪದೂರ ಹೋಗುವಷ್ಟರಲ್ಲೇ ಜಿಲ್ಲೆ ಬಿಟ್ಟು ಕೂಡಲೇ ತೆರಳಬೇಕೆಂದು ಆಜ್ಞೆ ಜಾರಿ ಮಾಡಲ್ಪಟ್ಟಿತು. ಏಪ್ರಿಲ್ 18,1917 ರಂದು ವಿಚಾರಣೆ ಪ್ರಾರಂಭಿಸಿತು. ತನ್ನ ಆಗಮನದಿಂದ ಶಾಂತಿ ಕದಡದು. ದೊಂಬಿ ಆಗದು.ರಕ್ತದ ಕಾಲುವೆ ಹರಿಯದು. ವಕೀಲನಾಗಿ, ಸತ್ಪ್ರಜೆಯಾಗಿ ಆಜ್ಞೆ ಮನ್ನಿಸ ಬೇಕಾದುದು ತನ್ನ ಪ್ರಥಮ ಕರ್ತವ್ಯ. ರೈತರ ಕರೆಗೆ ಓಗೊಟ್ಟು ಮಾನವೀಯ ಮತ್ತು ರಾಷ್ಟ್ರೀಯ ಕರ್ತವ್ಯ ಪಾಲಿಸಲು ತಾನು ಇಲ್ಲಿಗೆ ಬಂದಿರುವುದು. ಸರ್ಕಾರ, ಒಡೆಯ, ರೈತ ಇವರ ಸಹಕಾರದಿಂದ ನಿಜಾಂಶ ತಿಳಿದು ಕೈಲಾದ ಸಹಾಯ ನೀಡಲು ತಾನು ಬಂದಿರುವುದು. ಆದ್ದರಿಂದ ಈ ಜಿಲ್ಲೆ ಬಿಟ್ಟು ಹೋಗುವುದು ಕರ್ತವ್ಯ ವಿಮುಖತೆ ಆದೀತು. ಶಾಸನ ನಿಯಮಕ್ಕೆ ತಲೆಬಾಗಬೇಕಾದರೂ, ಈ ಸನ್ನಿವೇಶದಲ್ಲಿ ಆತ್ಮಸಾಕ್ಷಿಯ ವಿರುದ್ಧ ಕರ್ತವ್ಯ ಪಾಲನೆಯ ದೃಷ್ಟಿಯಿಂದ ಇಲ್ಲಿಂದ ಕಾಲ್ತೆಗೆಯಲು ಸಾಧ್ಯವಾಗದು. ಅದರ ಪರಿಣಾಮವಾಗಿ ಶಿಕ್ಷೆ ಅನುಭವಿಸಲು ಸಿದ್ಧ. ಈ ರೀತಿ ಕೋರ್ಟಿಗೆ ತಿಳಿಸಿದರು. ನ್ಯಾಯಾಧೀಶ ಏನು ಮಾಡಲೂ ಅರಿಯದೆ ತೀರ್ಪು ಕೊಡುವುದನ್ನು ಮುಂದೂಡಿದ.

ಪೋಲೀಸರು ಜಿಲ್ಲೆ ಬಿಟ್ಟು ಹೊರಡುವಂತೆ ಆಜ್ಞೆ ಮಾಡುತ್ತಲೇ ಗಾಂಧೀಜಿ ವೈಸರಾಯಿ ಲಾರ್ಡ್ ಚೆಮ್ಸ್ ಫರ್ಡ್, ಪಾಟ್ನಾದ ಗೆಳೆಯರು ಮತ್ತು ಪಂಡಿತ ಮದನ ಮೋಹನ ಮಾಲವೀಯ ಇವರುಗಳಿಗೆ ತಂತಿ ಮೂಲಕ ವಿವರಗಳನ್ನು ಕಳಿಸಿದ್ದರು. ಗಾಂಧೀಜಿ ಅತ್ಯಂತ ಜಾಗರೂಕತೆಯಿಂದ, ನೆಮ್ಮದಿ ಕೆಡದಂತೆ, ಯಾವ ಪಕ್ಷಕ್ಕೂ ತೊಂದರೆ ಮತ್ತು ಅನ್ಯಾಯವಾಗದಂತೆ ವಿಷಯ ಸಂಗ್ರಹಣೆಯಲ್ಲಿ ತೊಡಗಿದ್ದ ವಿಷಯ ಇಂಡಿಯ ಸರ್ಕಾರಕ್ಕೆ ಅಧಿಕಾರಿಗಳೇ ತಿಳಿಸಿದ್ದರು. ಈ ಪರಿಸ್ಥಿತಿಯಲ್ಲಿ ಅವರನ್ನು ಬಂಧಿಸುವುದು ಕೇವಲ ಮೂರ್ಖತನವಾದೀತು. ಕೇವಲ ಒಂದು ಜಿಲ್ಲೆಗೆ ಸಂಬಂಧಿ ಸಿದ್ದ ವಿಷಯ ಅಖಿಲ ಭಾರತ ಚಳವಳಿಯ ಸ್ವರೂಪ ತಾಳೀತು. ಈ ರೀತಿ ಯೋಚಿಸಿ ಕೂಡಲೇ ಗಾಂಧೀಜಿಯವರನ್ನು ಬಿಡುಗಡೆ ಮಾಡಿ ಅವರಿಗೆ ಎಲ್ಲ ವಿಧದಲ್ಲೂ ಸಹಕಾರ ನೀಡುವಂತೆ ಗವರ್ನರ್ ಸರ್ ಎಡ್ವರ್ಡ್ ಗೈಟ್ ಅವರಿಗೆ ಇಂಡಿಯಾ ಸರ್ಕಾರ ತಂತಿಯ ಮೂಲಕ ಆಜ್ಞಾಪಿಸಿತು. ಗವರ್ನರ್ ಮೊದಲು ಪ್ರತಿಭಟಿಸಿದರೂ, ಮೇಲಧಿಕಾರಿಗಳ ಆಜ್ಞೆಗೆ ತಲೆಬಾಗಿ ಗಾಂಧಿಯವರನ್ನು ಬಿಡುಗಡೆ ಮಾಡಿಸಿದರು.

ಬಿಹಾರ ಸರ್ಕಾರ ಎಲ್ಲ ಸಹಕಾರ ಕೊಡಲು ಸಿದ್ಧವಾಯಿತು. ಗಾಂಧಿಯವರ ಸಲಹೆಯಂತೆ ರೈತರ ಕಷ್ಟಪರಾಂಬರಿಸಲು ಸರ್ಕಾರವೇ ವಿಚಾರಣಾ ಸಮಿತಿಯನ್ನು ನೇಮಿಸಿತು. ಗಾಂಧೀಜಿ ಸಮಿತಿಯ ಒಬ್ಬ ಸದಸ್ಯರಾದರು. 8,000 ರೈತರ ನಿರ್ವಿವಾದ ಹೇಳಿಕೆಗಳು ಇವರ ವಶದಲ್ಲಿದ್ದವು. ರೈತರ ಪರ ಜಯಗಳಿಸಲು ಕಷ್ಟವಾಗಲಿಲ್ಲ. ಶತಮಾನದಿಂದ ಜಾರಿಯಲ್ಲಿದ್ದ 'ತೀನಖಾತ' ಪದ್ಧತಿ ರದ್ದಾಯಿತು. ಪ್ಲಾಂಟರು ರೈತರಿಂದ ಅಕ್ರಮವಾಗಿ ವಸೂಲ್ಮಾಡಿದ್ದ ಅಷ್ಟು ಹಣವನ್ನೂ ರೈತರು ಹಿಂದಕ್ಕೆ ಪಡೆಯಬಹುದಾಗಿತ್ತು. ಆದರೂ ಶೇಕಡ 25 ಭಾಗ ಕೊಟ್ಟರೆ ಸಾಕು ಎಂದರು ಗಾಂಧೀಜಿ. ಪ್ಲಾಂಟರುಗಳ ಮುಖ ಭಂಗವೇ ಸಾಕು. ಇನ್ನು ಅವರ ದೌರ್ಜನ್ಯ ನಡೆಯದು. ರೈತರು ಮುಕ್ತರಾಗಿದ್ದಾರೆ. ನೀಲಿಯ ಶಾಪ ತೊಡೆದು ಹಾಕಿದ್ದಾರೆ. ಇನ್ನು ಮುಂದೆ ನಿರ್ಭೀತರಾಗಿ ತಲೆ ಎತ್ತಿ ನಡೆಯಬಹುದು. ಹೀಗೆ ನುಡಿದರು ಗಾಂಧೀಜಿ. ಗಾಂಧೀಜಿಯವರ ನೈತಿಕ ಬಲ, ಅವರ ಸತ್ಯೋಪಾಸನೆ, ಶಾಂತ ಸಮ್ಮೋಹಕ ನಡತೆ ಅವರಿಗೆ ಜಯ ಗಳಿಸಿಕೊಟ್ಟಿತು.

ಮಹಾತ್ಮರ ಇಡೀ ಜೀವನ ಬಡವರ ಅಭಿವೃದ್ಧಿಗೆ, ಅವರ ಶ್ರೇಯಸ್ಸಿಗೆ ಮೀಸಲು. ಬ್ಯಾರಿಸ್ಟರ್ ವಕೀಲರಾಗಿ ಬಡಕಕ್ಷಿಗಾರರನ್ನು ಸುಲಿದು ಶ್ರೀಮಂತರಾಗುವ ಬಯಕೆ ಅವರಲ್ಲಿ ಇರಲಿಲ್ಲ. ಅವರ ತಂದೆ ಕಬಾ ಗಾಂಧಿ, ತಾತಾ ಉತ್ತಮಚಂದ ಗಾಂಧಿ ಇವರಲ್ಲೂ ಇರಲಿಲ್ಲ. ಅವರ ಜೀವನದ ಕ್ರಮ, ಉಡುಗೆ ತೊಡುಗೆ, ಮೂರನೇ ದರ್ಜೆಯ ಪ್ರವಾಸ, ಖಾದಿ, ಸ್ವದೇಶಿ ಪ್ರತಿಯೊಂದೂ ಬಡತನ ಹೋಗಲಾಡಿಸಬೇಕೆಂಬ ಅವರ ಉತ್ಕಟ ಇಚ್ಛೆಯನ್ನು ನಿದರ್ಶಿಸುತ್ತವೆ. ತಾನು ದರಿದ್ರನಾರಾಯಣನ ಪ್ರತಿನಿಧಿ ಎಂದು ಹೇಳಿಕೊಳ್ಳುತ್ತಿದ್ದರು. ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಲಂಡನ್ನಿಗೆ ಹೋಗಿ ಸಭೆಯಲ್ಲಿ ಮಾತನಾಡುವಾಗ ತಾನು ದರಿದ್ರನಾರಾಯಣನ ಪ್ರತಿನಿಧಿ ಎಂದು ಹೇಳಿಕೊಂಡರು. ಇಂಗ್ಲೆಂಡಿನ ಕೊರೆಯುವ ಚಳಿಯಲ್ಲೂ ಬಡತನದ ಕುರುಹಿನ ಉಡುಪು ಧರಿಸುತ್ತಿದ್ದರು. ಇದೇ ಉಡುಪು ತೊಟ್ಟು ಲಂಡನ್ ಬೀದಿಯಲ್ಲಿ ಮತ್ತೆ ಯಾರಾದರೂ ಹೋಗುತ್ತಿದ್ದರೆ "ಹುಚ್ಚ ಹುಚ್ಚ" ಎಂದು ಗೇಲಿ ಮಾಡುತ್ತ, ಹುಡುಗರು ಕಲ್ಲು ಬೀರುತ್ತಿದ್ದರು ಎಂದು ಒಬ್ಬ ಆಂಗ್ಲ ಲೇಖಕರು ಬರೆದಿರುತ್ತಾರೆ. ನೀವೊಬ್ಬರೇ ಬಡವರ ಹಿತಚಿಂತಕರೋ ನಾವಲ್ಲವೋ. ಹೀಗೆ ರಾಜಾಜಿ ಒಮ್ಮೆ ಕೇಳಿದರು. ನೀವೂ ಅವರ ಹಿತ ಚಿಂತಕರೇ. ಆದರೂ ನಿಮಗೂ ನನಗೂ ಇಷ್ಟೇ ವ್ಯತ್ಯಾಸ. ನೀವು ಒಮ್ಮೊಮ್ಮೆ ಅವರ ಚಿಂತನೆ ಮಾಡುತ್ತೀರಿ. ಸದಾ ನಾನು ಅವರ ಚಿಂತನ ಮಾಡುತ್ತಲೇ ಇರುತ್ತೇನೆ.

ಗಾಂಧಿಯವರ ಬಿಡಾರ ದರಿದ್ರನಾರಾಯಣನ ಮನೆಯಂತೆಯೇ ಒಂದು ಗುಡಿಸಲು. ಪರ್ಣಕುಟಿ. ಬಡತನ ಮತ್ತು ಶ್ರೀಮಂತಿಕೆ ಇವುಗಳಿಗೆ ಇತಿಮಿತಿ ಉಂಟೇ

ಎಂಬ ಪ್ರಶ್ನೆಗೆ ಉತ್ತರ ನೀಡಿರುತ್ತಾರೆ. ದಿನ ನಿತ್ಯದ ಆವಶ್ಯಕತೆಗಳಿಗಿಂತ ಹೆಚ್ಚು ಸಂಗ್ರಹಿಸುವುದು ತಪ್ಪು. ಶ್ರೀಮಂತ ಭೋಗ ಜೀವನ ನಡೆಸದೆ ಸರಳ ಜೀವನ ನಡೆಸಲಿ. ಬಡವ ತನ್ನ ಜೀವನ ಮಟ್ಟ ಏರಿಸಿಕೊಳ್ಳಲು ಶ್ರೀಮಂತ ನೆರವಾಗಲಿ. ನಿನ್ನ ನೆರೆಯುವರು ಪಡೆಯಲಾಗದ ಪದಾರ್ಥ ನೀನು ಪಡೆಯಲಾಗದು. ಇದು ಅವರು ಕೊಟ್ಟಿರುವ ಅಳತೆಗೋಲು. ಅವನಂತೆ ಕೆಳಮಟ್ಟಕ್ಕೆ ಇಳಿಯಬೇಕೆಂಬ ಅರ್ಥವಲ್ಲ. ನಿನ್ನ ಉನ್ನತ ಮಟ್ಟಕ್ಕೆ ಏರುವಂತೆ ಆವನಿಗೆ ನೆರವಾಗಬೇಕು. ಇದು ಈ ವಾಕ್ಯದ ಅರ್ಥ. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರೂ ಇದೇ ಮಾತು ಆಡಿರುತ್ತಾರೆ. ನಿನ್ನ ಸುತ್ತಮುತ್ತಲ ಜನ ಸುಖವಾಗಿದ್ದರೆ, ನೀನೂ ಸುಖಿಯಾಗಿರಬಲ್ಲೆ. ನೆರೆಮನೆಯ ಮಕ್ಕಳು ಊಟವಿಲ್ಲದೆ ಸಂಕಟಪಡುತ್ತಿದ್ದರೆ, ಕದ ಮುಚ್ಚಿಕೊಂಡು ಭಕ್ಷ್ಯಭೋಜ್ಯ ಸೇವಿಸುವುದು ಮಾನವೀಯತೆ ಎನಿಸಿಕೊಳ್ಳಲಾರದು. ತಾನು ಉಣದಿದ್ದರೂ ಅತಿಥಿಯನ್ನು ಸತ್ಕರಿಸುವ ಸಂಪ್ರದಾಯದ ಪುಣ್ಯ ಭೂಮಿ ಭಾರತ. ಹಳ್ಳಿಯಲ್ಲಿ ಯಾರಾದರೂ ತೀರಿಕೊಂಡರೆ ಅವರ ಅಂತ್ಯ ಸಂಸ್ಕಾರ ಮುಗಿಯುವವರೆಗೆ ಯಾರೂ ಊಟ ಮಾಡರು. ಅವರ ಕಷ್ಟದಲ್ಲಿ ದುಃಖದಲ್ಲಿ ಇಡೀ ಗ್ರಾಮ ಭಾಗಿಯಾಗುವುದು.

1920ರಲ್ಲಿ ಬಾಪೂಜಿ ಮೊದಲಬಾರಿಗೆ ವರ್ಧಾಗೆ ಬಂದರು. ಜಮುನಾಲಾಲರು ತಮ್ಮ ಮಕ್ಕಳಿಗೆ ಕಸೂತಿ ಕೆಲಸ ಮಾಡಿದ ರೇಷ್ಮೆ ವಸ್ತ್ರ ಜರತಾರಿ ಟೋಪಿ ತೊಡಿಸಿ ಗಾಂಧಿಯವರಲ್ಲಿ ಕರೆದುಕೊಂಡು ಹೋದರು. ಆಗ ಅವರು ಷರಟು, ಪಂಚೆ ಮತ್ತು ಬಿಳಿಯ ಟೋಪಿ ಧರಿಸಿದ್ದರು. ಜಮುನಾಲಾಲರ ಪುಟ್ಟ ಮಗ ಕಮಲನಯನನ್ನು ಗಾಂಧೀಜಿ ಕೇಳಿದರು. ಯಾರ ಉಡುವು ಚನ್ನ ಎಂದು. ನನ್ನದು ಎಂದು ಕಮಲ ನಯನ. ಆಗ ಗಾಂಧೀಜಿ ತನ್ನ ಮತ್ತು ಬಾಲಕನ ಟೋಪಿ ಎರಡು ಕೈಗಳಲ್ಲೂ ಹಿಡಿದುಕೊಂಡು ಮತ್ತೆ ಅದೇ ಪ್ರಶ್ನೆ ಕೇಳಿದರು. ನಿನ್ನ ಜರತಾರಿ ಟೋಪಿಯನ್ನು ಒಗೆಯಬಹುದೇ ? ಇಲ್ಲ. ನನ್ನ ಟೋಪಿಯನ್ನು ಒಗೆಯಬಹುದು. ನಿನ್ನದು ಕೊಳೆಯಾದರೂ ಅದನ್ನು ಒಗೆಯಲು ಸಾಧ್ಯವಿಲ್ಲ. ನೀನು ಧರಿಸಿರುವ ಟೋಪಿ ಎಲ್ಲ ಮಕ್ಕಳೂ ಕೊಳ್ಳಲಾರರು. ಇತರ ಮಕ್ಕಳು ಪಡೆಯಲಾರದ ಟೋಪಿ, ನೀನು ಪಡೆಯುವುದು ಉಚಿತವಲ್ಲ. ಉಡುಪು ಸರಳವೂ ಶುಭ್ರವೂ ಆಗಿರಬೇಕು.

ದುಂಡು ಮೇಜಿನ ಪರಿಷತ್ತಿಗೆ ಆಹ್ವಾನಿತರಾಗಿದ್ದ ಪ್ರತಿನಿಧಿಗಳಿಗೆ ಪಾರ್ಲಿಮೆಂಟ್ ಸದಸ್ಯರ ಭವನ ಮತ್ತು ಉನ್ನತ ದರ್ಜೆಯ ಹೊಟೇಲ್‌ಗಳಲ್ಲಿ ವಸತಿ ಊಟ ಏರ್ಪಡಿಸಲಾಗಿತ್ತು. ಆದರೆ ಗಾಂಧೀಜಿ ಬಡವರು ವಾಸಿಸುವ ಲಂಡನ್ನಿನ ಈಸ್ಟ್ ಎಂಡ್‌ನಲ್ಲಿ ಮುರಿಯಲ್ ಲೆಸ್ಟರ್ ಅವರ ಅತಿಥಿಯಾಗಿ, 'ಕಿಂಗ್ಲೆಸ್‌ಲೀ' ಕುಟೀರದಲ್ಲಿ ವಾಸ್ತವ್ಯ ಹೂಡಿದರು. ಬಡವರು ಶ್ರೀಮಂತರು ಎಂಬ ಭೇದವಿಲ್ಲದೆ ಎಲ್ಲರೂ ಇವರ ಪ್ರಾರ್ಥನಾ

ಸಭೆಗೆ ಬರುತ್ತಿದ್ದರು. ಷರಾಯಿ ಧರಿಸದೆ ತುಂಡು ಪಂಚೆ ಉಟ್ಟಿದ್ದುದನ್ನು ನೋಡಿ, ನಿಮಗೆ ಷರಾಯಿ ಇಲ್ಲವೇ? ನಿಮಗೊಂದು ಇಜಾರ ಕೊಡಲೇ ಎಂದು ಒಬ್ಬ ತುಂಟ ಹುಡುಗ ಗೇಲಿ ಮಾಡಿದ. ನಮ್ಮ ತಂದೆಯನ್ನು ಕೇಳಿ ನಿಮಗೊಂದು ಷರಟು ತಂದುಕೊಡಲೇ ಎಂದು ಕೇಳಿದಳು ಮೇರಿ. ಇಬ್ಬರಿಗೂ ಒಂದೇ ಉತ್ತರ. ನನಗೊಂದು ಷರಾಯಿ, ಷರಟು ಕೊಟ್ಟರೆ ನನಗೆ ತೃಪ್ತಿಯಾಗದು. ಷರಟು ಷರಾಯಿ ಇಲ್ಲದ ಭಾರತದ ಬಡವರಿಗೆ ಒಂದೊಂದು ಷರಟು ಷರಾಯಿ ಕೊಡುವುದಾದರೆ, ನಿಮ್ಮ ಕೊಡುಗೆ ನಾನು ಸ್ವೀಕರಿಸುವೆ ಎಂದರು.

ಈಸ್ಟ್ ಎಂಡಿನಿಂದ ಶ್ರೀಮಂತರು ವಾಸಿಸುವ 'ವೆಸ್ಟ್ ಎಂಡ್' ವಿಸ್ತರಣೆಗೆ ಬಂದು ಕೆಲವು ದಿನಗಳಾದರೂ ತಮ್ಮ ಅತಿಥಿಯಾಗಿ ಉಳಿಯುವಂತೆ ಅಲ್ಲಿನ ಶ್ರೀಮಂತರು ಮಹಾತ್ಮರನ್ನು ಆಹ್ವಾನಿಸಿದರು. 'ಕಿಂಗ್ಲೆಸ್‌ಲೇ ಹಾಲ್' ಬಿಟ್ಟು ಬೇರೆಲ್ಲಿ ಉಳಿದರೂ ತನಗೆ ನಿದ್ರೆ ಬಾರದು ಎಂದು ಉತ್ತರಿಸಿದರು. ಇಂಗ್ಲೆಂಡಿನ ಶ್ರೀಸಾಮಾನ್ಯನ ಪರಿಚಯ ದಿನವಹಿ ನಾನು ಇಲ್ಲಿ ಮಾಡಿಕೊಳ್ಳುತ್ತಿರುವೆ. ಇಲ್ಲಿ ನಡೆಯುತ್ತಿದೆ ದುಂಡು ಮೇಜಿನ ನಿಜ ಕೆಲಸ ಎಂದು ತಿಳಿಸಿದರು. ಜನಸಾಮಾನ್ಯರ ಪರಿಚಯ ಮಾಡಿಕೊಳ್ಳಲು ಮ್ಯಾಂಚೆಸ್ಟರಿಗೆ ಹೋದರು. ಮ್ಯಾಂಚೆಸ್ಟರ್ ಬಟ್ಟೆ ತಯಾರಿಸುವ ಗಿರಣಿಗಳ ಕೇಂದ್ರ. ವಿದೇಶೀ ವಸ್ತ್ರ ಚಳವಳಿಯ ಪರಿಣಾಮವಾಗಿ ಇಲ್ಲಿಯ ಗಿರಣಿಗಳು ತಟಸ್ಥವಾಗಿದ್ದುವು. ವ್ಯಾಪಾರ ನಿಂತುಹೋಗಿತ್ತು. ಸಹಸ್ರಾರು ಗಿರಣಿ ಕೆಲಸಗಾರರು ನಿರುದ್ಯೋಗಿಗಳಾಗಿದ್ದರು. ಗಾಂಧಿಯವರು ಇಲ್ಲಿಗೆ ಹೋದರೆ, ಇವರ ವಿದೇಶೀ ವಸ್ತ್ರ ಬಹಿಷ್ಕಾರದ ಪರಿಣಾಮವಾಗಿ ನಿರುದ್ಯೋಗಿಗಳಾಗಿ ಕಂಗಾಲಾದ ಜನ ಏನು ಮಾಡಿಯಾರೋ ಎಂಬ ಭಯ ಸರ್ಕಾರಕ್ಕೆ. ಪ್ರಾಣಕ್ಕೇ ಸಂಚಕಾರ ಒದಗಬಹುದು. ಇದಕ್ಕಾಗಿ ಅವರ ರಕ್ಷಣೆಗಾಗಿ ವಿಶೇಷ ಪೋಲೀಸ್ ವ್ಯವಸ್ಥೆ ಮಾಡಿದ್ದರು. ಆದರೆ ಅಲ್ಲಿ ನಡೆದ ಘಟನೆಗಳು ವಿಸ್ಮಯಕರವಾಗಿದ್ದುವು. ಕಾರ್ಮಿಕರು ಅವರನ್ನು ಮುತ್ತಿಕೊಳ್ಳುತ್ತಿದ್ದರು. ಭಾರತದ ಬಡತನದ ಭೀಕರ ಚಿತ್ರ ಗಾಂಧೀಜಿ ಅವರ ಮುಂದೆ ಇಡುತ್ತಿದ್ದರು. ಇಲ್ಲಿಯ ನಿರುದ್ಯೋಗಿಗಳಿಗೆ ಸರ್ಕಾರ ಹೊಟ್ಟೆಗೆ ಅಗತ್ಯವಾದಷ್ಟು ವಂತಿಗೆ ಕೊಡುತ್ತದೆ. ಇಲ್ಲಿ ವಾರದಲ್ಲಿ ದೊರೆಯುವಷ್ಟು ಧನಸಹಾಯ, ಅಲ್ಲಿನ ಬಡವ ಒಂದು ತಿಂಗಳು ಕಷ್ಟಪಟ್ಟು ದುಡಿದರೂ ಸಂಪಾದಿಸಲಾರ. ನಿಮಗೆ ಹೊಟ್ಟೆಬಟ್ಟೆಗೆ ಇಲ್ಲದಂತೆ ಮಾಡುವುದು ನಮ್ಮ ಉದ್ದೇಶವಲ್ಲ. ನಮ್ಮ ನಿರ್ಗತಿಕರಿಗೆ ಕೂಳು ದೊರೆಯುವಷ್ಟು ಉದ್ಯೋಗವನ್ನಾದರೂ ಕಲ್ಪಿಸಿಕೊಡುವುದು ನಮ್ಮ ಉದ್ದೇಶ ಎಂದು ವಿವರಿಸುತ್ತಿದ್ದರು. ತಾವು ಕೈಗೊಂಡಿರುವ ಕ್ರಮ ಸರಿ ಎಂದು ನಿರುದ್ಯೋಗಿ ಕಾರ್ಮಿಕರಿಗೆ ಮನದಟ್ಟು ಮಾಡಿಕೊಡುತ್ತಿದ್ದರು. ಇವರ ವಾದ ಸರಣಿಯಿಂದ ತೃಪ್ತರಾಗುತ್ತಿದ್ದ ಕಾರ್ಮಿಕರು, ಅವರ ಕೈಕುಲುಕಿ, ಬೆನ್ನು ತಟ್ಟಿ, ಜೈಕಾರ ಮಾಡಿ, ಇವನೂ ನಮ್ಮವನೇ ಎಂದು ಸಾಮೂಹಿಕವಾಗಿ ಹಾಡಿ ಬೀಳ್ಕೊಡುತ್ತಿದ್ದರು.

ಲಂಡನ್ನಿನ ಸೇಂಟ್ ಆಂಡ್ರೂಸ್ ಆಸ್ಪತ್ರೆಯ ಒಬ್ಬ ಕುರುಡ ಮಹಾತ್ಮರನ್ನು ನೋಡಬಯಸಿದ. ಅಷ್ಟು ದೂರ ತನ್ನಿಂದ ಬರಲು ಸಾಧ್ಯವಾಗದೆಂದು ಪತ್ರ ಬರೆಸಿ ತಿಳಿಸಿದ್ದ. ತಮ್ಮ ಬಿಡುವಿಲ್ಲದ ಕೆಲಸದ ನಡುವೆ ಹೇಗೋ ಬಿಡುವು ಮಾಡಿಕೊಂಡು ಆಸ್ಪತ್ರೆಗೆ ಹೋಗಿ ಕುರುಡನ ಸಮೀಪ ಕುಳಿತರು. ಕುರುಡ ಇವರ ಮೈತಡವಿ, ಸ್ಪರ್ಶಿಸಿ, ಮಹಾತ್ಮರನ್ನು ತನ್ನ ಒಳಗಣ್ಣಿನಿಂದ ನೋಡಲು ಸಾಧ್ಯವಾದುದಕ್ಕಾಗಿ ಸಂತೃಪ್ತನಾಗಿ ಆನಂದಬಾಷ್ಪ ಸುರಿಸಿದ. ಮಹಾತ್ಮರು ಆಸ್ಪತ್ರೆಗೆ ಬಂದ ಸುದ್ದಿ ಕೇಳಿ, ಆಸ್ಪತ್ರೆಯ ವೈದ್ಯರು, ದಾದಿಗಳು, ರೋಗಿಗಳು ಎಲ್ಲರೂ ಇವರಿದ್ದ ವಾರ್ಡಿಗೆ ಧಾವಿಸತೊಡಗಿದರು. ಆಸ್ಪತ್ರೆಯ ಕೆಲಸವೆಲ್ಲ ತಟಸ್ಥಗೊಳ್ಳುವ ಸ್ಥಿತಿಗೆ ಬಂದಿತು. ಪರಿಸ್ಥಿತಿಯನ್ನು ಮನಗಂಡ ಗಾಂಧೀಜಿ ಪ್ರತಿಯೊಂದು ರುಗ್ಣಾಲಯ ಅಥವಾ ವಾರ್ಡಿಗೆ ತಾವೇ ಬರುವುದಾಗಿ ತಿಳಿಸಿದರು. ಪ್ರತಿಯೊಂದು ರುಗ್ಣಾಲಯವೂ ಶುಚಿಯಾಯಿತು. ಪ್ರತಿಯೊಂದು ರೋಗಿಯ ಹಾಸಿಗೆ ಬಳಿಗೆಹೋಗಿ, ಯೋಗಕ್ಷೇಮ ವಿಚಾರಿಸಿ, ಸಂತೈಸಿ ಮುಂದೆ ನಡೆದರು. ಈತನೇ ನಿಜವಾದ ಏಸು, ಈತನೇ ಮಹಾತ್ಮ ಎಂದು ಎಲ್ಲರೂ ಪ್ರಶಂಸಿಸಿದರು. ಅಂತೆಯೇ ಇನ್ನೊಂದು ದಿನ 'ಬೊಸ್ಟ್ರೀಟ್'ನಲ್ಲಿ ಇದ್ದ ಪಾರ್ಶ್ವ ವಾಯು ಪೀಡಿತ ರೋಗಿಯ ಮನೆಗೆ ಹೋಗಿ, ಅವನ ಬಳಿ ಸ್ವಲ್ಪ ಹೊತ್ತು ಕೂತು ಸಮಾಧಾನಪಡಿಸಿ ಬಂದರು.

ನವಖಾಲಿಯಲ್ಲಿ ಗಾಂಧೀಜಿ ಸಂಚರಿಸುತ್ತ ಶ್ರೀರಾಮಪುರದಲ್ಲಿ ತಂಗಿದ್ದರು. ಊಟ ಮುಗಿಸಿ ಮಧ್ಯಾಹ್ನ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಊಟಕ್ಕೆ ಬೆಂದ ಎರಡು ಬಾಳೆಕಾಯಿ ಮತ್ತು ಕಾಡು ಹುರುಳೀಕಾಯಿ. ನೆತ್ತಿಯ ಮೇಲೆ ಮಣ್ಣಿನ ಲೇಪನ, ಅದರ ಮೇಲೆ ಒದ್ದೆ ಬಟ್ಟೆ. ಅರೆಬೆತ್ತಲೆ. ಈ ವೇಳೆಗೆ ದೂರದ ಫ್ರಾನ್ಸ್ ದೇಶದಿಂದ ಇವರ ಸಂದರ್ಶನಕ್ಕಾಗಿ ರೇಮಾಂಡ್ ಕಾರ್ಟರ್ ಫ್ರೆಂಚ್ ಪತ್ರಿಕೋದ್ಯಮಿ ಬಂದರು. ಈ ಸ್ಥಿತಿಯಲ್ಲೇ ನನ್ನನ್ನು ನೋಡುವುದಾದರೆ ಒಳಕ್ಕೆ ದಯಮಾಡಿಸ ಬಹುದು ಎಂದರು ಗಾಂಧೀಜಿ. ಕಾರ್ಟರ್ ಒಳಕ್ಕೆ ಬಂದರು. ಫ್ರೆಂಚ್ ಭಾಷೆ ಯಲ್ಲಿ 'ಆಲೆಜ್ ಬಾಂಜ್' ನಮಸ್ಕಾರ ಎಂದು ಸ್ವಾಗತಿಸಿದರು. ತಾನು ಕಲಿತ ಫ್ರೆಂಚ್ ಭಾಷೆಯಲ್ಲಿ ಇದೊಂದೇ ಪದ ನೆನಪಿರುವುದಾಗಿ ನಗುತ್ತಾ ತಿಳಿಸಿದರು. ಪ್ಯಾರಿಸ್ಸಿನ ಬಡವರ ಬಡಾವಣೆಯಲ್ಲಿ ಕೆಲವು ದಿನ ಉಳಿಯಲು ಯೋಚಿಸಿದ್ದರೆಂದೂ, ಆದರೆ ಅಲ್ಲಿ ಸ್ಥಳ ದೊರೆಯದೇ ಅವರ ಆಸೆ ಭರಿಸಲಾಗಲಿಲ್ಲ. ವಿಶ್ವದ ನವನಾಗರೀ ಕತೆಗೆ ಆದರ್ಶವೆನಿಸಿದ ಪ್ಯಾರಿಸ್ಸಿನ ಕೊಂಪೆಗಳನ್ನು ನೋಡುವ ಅವಕಾಶ ದೊರೆ ಯಿತು. ಯಾವ ನಾಗರೀಕನಾದರೂ ತಲೆತಗ್ಗಿಸಬೇಕಾದ ಕೊಂಪೆಗಳು ಅವರಿಗೆ ತುಂಬ ದುಃಖಕೊಟ್ಟಿತು.

ಮಲೇರಿಯ ರೋಗ ಹರಡುವುದಕ್ಕೆ ಸೊಳ್ಳೆ ಮುಖ್ಯ ಕಾರಣ. ಸೊಳ್ಳೆ

ಹುಟ್ಟದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳುವುದು. ಹುಟ್ಟಿದ ಸೊಳ್ಳೆಯನ್ನು ನಾಶಪಡಿಸುವುದು ಇವು ಮಲೇರಿಯವನ್ನು ತಡೆಗಟ್ಟುವ ಕ್ರಮಗಳು. ಈ ಜಾಡ್ಯವನ್ನು ಮೂಲೋತ್ಪಾಟನೆ ಮಾಡಲು ವಿಶ್ವಸಂಸ್ಥೆ ವಿಶ್ವದಾದ್ಯಂತ ವಿಶೇಷ ಕಾರ್ಯಕ್ರಮ ಕೈಗೊಂಡಿದೆ. ಸೊಳ್ಳೆ ಸಾಮಾನ್ಯವಾಗಿ ಸಂಜೆಯಾದ ಮೇಲೆ ಹಾರಾಡಲು ಉಪಕ್ರಮಿಸುತ್ತದೆ. ರಾತ್ರಿ ಮಲಗಿದ್ದಾಗ ಇದರ ಕಾಟ ಅತಿಯಾಗುತ್ತದೆ. ನಿದ್ದೆ ಮಾಡಗೊಡುವುದಿಲ್ಲ. ಇದರ ಕಾಟದಿಂದ ತಪ್ಪಿಸಿಕೊಳ್ಳಲು ಸೊಳ್ಳೆಪರದೆ ಬಳಸುತ್ತಾರೆ. ಸೊಳ್ಳೆಯನ್ನು ದೂರವಿಡುವ ಮುಲಾಮು ಲೇಪಿಸಿಕೊಳ್ಳುವುದೂ ಉಂಟು. ವಿಷದ ಹೊಗೆ ಬತ್ತಿ ಹಚ್ಚಿಡುವುದೂ ಉಂಟು.

ಗಾಂಧಿಯವರ ಕಾಲದಲ್ಲಿ ಲೇಪನ ಅಥವಾ ಹೊಗೆ ಕಾರುವ ಬತ್ತಿ ಇರಲಿಲ್ಲ. ಸೊಳ್ಳೆಪರದೆ ಸ್ವಲ್ಪ ಕಾಲ ಬಳಸುತ್ತಿದ್ದರು. ಬಡವರು ಸೊಳ್ಳೆಪರದೆ ಕೊಂಡು ಬಳಸಲಾರರು. ಆದ್ದರಿಂದ ಬಡವರ ಬಂಧುವಾದ ತಾನು ಸೊಳ್ಳೆಪರದೆ ಬಳಸುವುದು ಯೋಗ್ಯವಲ್ಲವೆಂದು ಅವರ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಒಬ್ಬ ವೈದ್ಯನಲ್ಲಿ ತಮ್ಮ ಸಂಕಟ ತೋಡಿಕೊಂಡು ಪರಿಹಾರ ಕೇಳಿದರು. ಮೈತುಂಬ ಹೊದ್ದುಕೊಳ್ಳಿ. ಉಸಿರಾಡಲು ಮುಖ ತೆರದಿರಬೇಕಾಗುತ್ತದೆ. ಮುಖಕ್ಕೆ ಸೀಮೆಎಣ್ಣೆ ಸವರಿಕೊಳ್ಳಿ. ಈ ವಾಸನೆಗೆ ಸೊಳ್ಳೆ ಹತ್ತಿರ ಬರುವುದಿಲ್ಲ ಎಂದು ಸಲಹೆ ಮಾಡಿದರು. ಇದು ಬಡವರೂ ಬಳಸಬಹುದಾದ ಸುಲಭ ಉಪಾಯ ಎನಿಸಿತು ಅವರಿಗೆ. ಸೀಮೆಎಣ್ಣೆಗೆ ಕೆಟ್ಟವಾಸನೆ. ವಿಷ ಪದಾರ್ಥ. ಸೀಮೆಎಣ್ಣೆ ಬಳಸಿದ ಕೈಯಿಂದ ಊಟಮಾಡಲೂ ಆಗದು. ಆದರೆ ಇದು ಯಾವುದನ್ನೂ ಲೆಕ್ಕಿಸದೆ ಮಾರನೆಯ ದಿನದಿಂದಲೇ ಅವರು ಸೀಮೆಎಣ್ಣೆ ಮುಖಕ್ಕೆ ಬಳಿದುಕೊಳ್ಳಲು ತೊಡಗಿದರು. ನವಖಾಲಿಯಲ್ಲಿ ಪ್ರವಾಸ ಮಾಡುತ್ತಿದ್ದಾಗ ಯಾರೋ ಇವರಿಗೆ ಒಂದು ಸೊಳ್ಳೆಪರದೆ ಕೊಟ್ಟರು. ಕೆಲವು ದಿನ ಅದನ್ನು ಬಳಸಿದರು. ಆದರೆ ಒಬ್ಬ ಸ್ವಯಂಸೇವಕ ಇವರಲ್ಲಿ ಬಂದು, ಸೊಳ್ಳೆಯ ಕಾಟದಿಂದ ತಾನು ನಿದ್ರಿಸಲೇ ಇಲ್ಲವೆಂದು ತಿಳಿಸಿದ. ಆಗ ತಮ್ಮಲ್ಲಿದ್ದ ಸೊಳ್ಳೆಪರದೆ ಅವನಿಗೆ ಕೊಟ್ಟುಬಿಟ್ಟರು.

ರಾಜಕೋಟೆಯಲ್ಲಿ ಗಾಂಧಿಯವರ ಶ್ರೀಮಂತ ಮಿತ್ರನೊಬ್ಬನಿದ್ದ. ತನಗೆ ಅರವತ್ತು ತುಂಬಿದ ಷಷ್ಠ್ಯಿಪೂರ್ತಿ ಶಾಂತಿಯ ಭೋಜನಕ್ಕೆ ಇವರನ್ನು ಆಹ್ವಾನಿಸಿದ. ಅವನ ಮನೆಗೆ ಗಾಂಧೀಜಿ ಹೋದರು. ಬಂಗಲೆಯ ಹೊರಗೆ ಇವನ ಗಿರಣಿಯ ಅನೇಕ ನೌಕರರೂ, ಬಡವರೂ, ಭಿಕ್ಷುಕರೂ ನಿಂತಿದ್ದರು. ಆಹ್ವಾನಿತರ ಊಟ ಮುಗಿದ ಮೇಲೆ ಮಿಗುವ ಊಟ, ಭಕ್ಷ್ಯ ಭೋಜ್ಯ ತಮಗೂ ಲಭಿಸೀತೆಂದು ನೌಕರರು ಮತ್ತು ಬಡವರು. ಊಟ ಮಾಡಿ ಎಸೆಯುವ ಎಲೆಯಲ್ಲಿ ಮಿಗುವ ಎಂಜಲು ತಿನ್ನಲು ಕಡು ಭಿಕ್ಷುಕರು. ಈ ದೃಶ್ಯ ನೋಡಿ ಗಾಂಧಿಯವರ ಮನಸ್ಸು ನೀರಾಯಿತು. ಸಿದ್ಧವಾಗಿದ್ದ ಭಕ್ಷ್ಯ ಭೋಜ್ಯ ಮೊದಲು ಹೊರಗೆ ನಿಂತಿದ್ದವರಿಗೆ

ಹಂಚುವಂತೆಯೂ, ಇಲ್ಲವಾದರೆ ಊಟ ಮಾಡುವುದಿಲ್ಲವೆಂದೂ ತಿಳಿಸಿದರು. ಉಪಾಯ ಕಾಣದೆ ಅವನು ಹಾಗೆಯೇ ಮಾಡಬೇಕಾಯಿತು.

ಕಾಮಾಕ್ಷಮ್ಮ ರಾಷ್ಟ್ರಭಕ್ತಿಯಿಂದ ಕೂಡಿದ ದೇಶಸೇವಕಿ. ಬೆಂಗಳೂರಿನವರು. ಭೂದಾನ ಯಾತ್ರೆಯಲ್ಲಿ ಸಂತ ವಿನೋಬಾ ಅವರೊಂದಿಗೆ ಪಾದಯಾತ್ರೆ ನಡೆಸಿದವರು. ಹಿಂದೀ ಭಾಷಾ ಪರಿಣತರು. ಕಸ್ತೂರಿಬಾ ಜೀವನ ಚರಿತ್ರೆ ಬರೆದಿರುತ್ತಾರೆ. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಜತ ಮಹೋತ್ಸವ ಜನವರಿ 1946 ರಲ್ಲಿ ಮದರಾಸಿನಲ್ಲಿ ನಡೆಯಿತು. ಹಿಂದೀ ಪ್ರಚಾರ ಕಾರ್ಯ ಪ್ರಾರಂಭಿಸಲು ತಮ್ಮ ಮಗನನ್ನೇ ಮಹಾತ್ಮಜೀ ಮದರಾಸಿಗೆ ಕಳುಹಿಸಿಕೊಟ್ಟಿದ್ದರು. ರಜತ ಮಹೋತ್ಸವಕ್ಕೆ ವಿಶೇಷ ರೈಲಿನಲ್ಲಿ ಮದರಾಸಿಗೆ ಆಗಮಿಸಿ ಹನ್ನೆರಡು ದಿನಗಳ ಕಾಲ ಹಿಂದೀ ಪ್ರಚಾರ ಸಭೆಯ ಕಟ್ಟಡದಲ್ಲೇ ಉಳಿದಿದ್ದು ಬೆಳಗಿನಿಂದ ಸಂಜೆಯವರೆಗೆ ಬಿಡುವಿಲ್ಲದ ಕಾರ್ಯದಲ್ಲಿ ತೊಡಗಿರುತ್ತಿದ್ದರು. ತಮ್ಮ ಬಿಡಾರದಿಂದ ಸಭೆಯ ಆವರಣಕ್ಕೆ ದಾಪುಗಾಲು ಹಾಕುತ್ತಾ ಸರಸರನೆ ನಡೆದು ಬರುವರು. ಕಿರು ಬೀದಿಯ ಇಕ್ಕೆಲಗಳಲ್ಲಿ ಇವರ ದರ್ಶನಾಕಾಂಕ್ಷಿಗಳಾಗಿ ಜನ ಕಿಕ್ಕಿರಿದು ತುಂಬಿರುತ್ತಿದ್ದರು. ಕೈ ಜೋಡಿಸಿ ನಮಸ್ಕರಿಸುತ್ತಿದ್ದವರಿಗೆ, ಪ್ರತಿವಂದನೆ ಸಲ್ಲಿಸಿ ವೇಳೆಗೆ ಸರಿಯಾಗಿ ಸಭಾ ಮಂಟಪಕ್ಕೆ ಆಗಮಿಸುವರು. ಕಣ್ಣಿಲ್ಲದಿದ್ದರೂ ಮಹಾತ್ಮರನ್ನು ಕಾಣಬೇಕೆಂಬ ಹೆಬ್ಬಯಕೆಯಿಂದ, ಒಬ್ಬರನ್ನು ಜೊತೆ ಮಾಡಿಕೊಂಡು ಒಬ್ಬ ಕುರುಡ ದಿನವಹಿ ರಸ್ತೆಯ ಬದಿಯಲ್ಲಿ ಬಂದು ನಿಲ್ಲುತ್ತಿದ್ದ. ಮಹಾತ್ಮರನ್ನು ನೋಡಬೇಕೆಂಬ ಹುರುಪಿನಿಂದ ಒಬ್ಬರ ಮೇಲೊಬ್ಬರು ಬಿದ್ದು ಕುರುಡನನ್ನು ಹಿಂದಕ್ಕೆ ದೂಡುತ್ತಿದ್ದರು. ಒಂದು ದಿನ ಯಾರೋ ದಯಾವಂತರು ಕುರುಡನನ್ನು ಒಂದೆರಡು ಹೆಜ್ಜೆ ಮುಂದೆ ತಂದು ನಿಲ್ಲಿಸಿದರು. ಕ್ಷಣಮಾತ್ರದಲ್ಲಿ ಇವನು ಕುರುಡನೆಂದು ಮಹಾತ್ಮರು ಗ್ರಹಿಸಿದರು. ಅವನ ಸಮೀಪಕ್ಕೆ ಬರುತ್ತಲೇ ಮಹಾತ್ಮರು ತಟ್ಟನೆ ನಿಂತು ತಮ್ಮ ಎರಡು ಕೈಗಳನ್ನೂ ಅವನ ಭುಜದ ಮೇಲಿಟ್ಟು ಬೆನ್ನು ತಟ್ಟಿ ತಲೆ ಸವರಿದರು. ತನ್ನನ್ನು ಮುಟ್ಟುತ್ತಿದ್ದವರೇ ಮಹಾತ್ಮರೆಂದು ಕುರುಡನಿಗೆ ಯಾರೂ ಹೇಳದಿದ್ದರೂ, ಅವರ ಸ್ಪರ್ಶ ಮಾತ್ರದಿಂದಲೇ ಇವರೇ ಗಾಂಧೀಜಿ ಎಂದು ಅವನ ಒಳಗಣ್ಣು ಗ್ರಹಿಸಿತು. 'ಕುಶಲವೇ, ದೇವರು ನಿನ್ನನ್ನು ಕರುಣಿಸಲಿ' ಎಂದು ಹರಸಿ ಗಾಂಧೀಜಿ ಮುಂದೆ ನಡೆದರು. ಬಹಳ ಹೊತ್ತಿನವರೆಗೆ ಕುರುಡನ ಕಣ್ಣುಗಳಿಂದ ಆನಂದಾಶ್ರುಗಳು ಹರಿಯುತ್ತಿದ್ದುವು. ಈ ಪಾವನ ಪ್ರಸಂಗ ನೋಡಿದ ಜನರಲ್ಲೂ ಕಣ್ಣೀರು ಸುರಿಯುತ್ತಿತ್ತು. ಅಂಗವಿಕಲರ ಮೇಲೆ ಸಾಮಾನ್ಯರಿಗಿಂತ ಅವರ ಮೇಲಿದ್ದ ಪ್ರೇಮವನ್ನು ವ್ಯಕ್ತಪಡಿಸುತ್ತಾ ಯೇಸು ಸ್ವಾಮಿಯನ್ನು ನೆನಪಿಗೆ ತರುತ್ತಿದ್ದರು.

ಇದೇ ರೀತಿಯಲ್ಲಿ ಇನ್ನೊಂದು ಘಟನೆ ನಡೆಯಿತು. ಗಾಂಧೀಜಿ ಉತ್ತರ ದೇಶದಲ್ಲಿ ಮೋಟಾರಿನಲ್ಲಿ ಪ್ರವಾಸ ಕೈಗೊಂಡಿದ್ದರು. ಅವರು ಹೋಗಬೇಕಾಗಿದ್ದ ರಸ್ತೆ

ತಿಳಿದು, ಅವರನ್ನು ಕಾಣಬಯಸಿದ ಒಬ್ಬ ಕುರುಡ ಮರದ ಕೆಳಗೆ ಬೆಳಗಿನಿಂದ ಕೋಲೂರಿಕೊಂಡು ನಿಂತಿದ್ದ. ಅದೇನು ದೈವಚಿತ್ತವೋ ವೇಗವಾಗಿ ಚಲಿಸುತ್ತಿದ್ದ ಮೋಟಾರಿನ ಗಾಲಿಗೆ ಮೊಳೆಯೋ ಏನೋ ಚುಚ್ಚಿಕೊಂಡು 'ಪಂಕ್ಚರ್'ಆಗಿ ಗಾಳಿ ಹೊರಸೂಸಿ, ಮೋಟಾರು ಚಲಿಸಲಾರದೆ ನಿಂತುಬಿಟ್ಟಿತು. ಇದೆಲ್ಲವೂ ನಡೆದುದು ಕುರುಡ ನಿಂತಿದ್ದ ಮರದ ಸಮೀಪದಲ್ಲಿಯೇ. ಚಕ್ರ ಬದಲಾಯಿಸಿ ಬೇರೆ ಚಕ್ರ ಹಾಕ ಬೇಕಾದ ವೇಳೆ ಮರದ ನೆರಳಿನಲ್ಲಿ ಕಳೆಯೋಣವೆಂದು ಗಾಂಧೀಜಿ ಕುರುಡನಿದ್ದಲ್ಲಿಗೆ ಬಂದರು. "ಸ್ವಾಮಿ, ಮಹಾತ್ಮರು ಈ ರಸ್ತೆಯಲ್ಲಿ ಹೋಗುತ್ತಾರಂತೆ, ಅವರನ್ನು ಕಾಣಲು ಬೆಳಗಿನಿಂದ ಮರದಡಿಯಲ್ಲಿ ನಿಂತಿರುವೆ" ಎಂದ ಕುರುಡ. ಕಣ್ಣಿಲ್ಲದೆ ಹೇಗೆ ನೋಡುವೆ ಎಂದರು ಗಾಂಧೀಜಿ. "ಅವರ ಪಾದ ಸ್ಪರ್ಶವಾದರೆ ಸಾಕು, ನನಗೆ ತೃಪ್ತಿ ಆದೀತು. ಅವರ ಆಶೀರ್ವಾದದಿಂದ ದೃಷ್ಟಿಯೂ ಬರಬಹುದು ಎಂದ ಅಂಧ. "ಇಂಥ ಕಟ್ಟು ಕಥೆಗಳನ್ನು ನಂಬಬೇಡ. ಅಹಲ್ಯೆಯ ವಿಮೋಚನೆ ಮಾಡಿದ ರಾಮ ನಾನಲ್ಲ. ನಾನು ಅವನ ಭಕ್ತ. ರಾಮಜಪ ಮಾಡು. ನಾನೇ ಗಾಂಧಿ" ಎಂದರು. ಅಂಥ ಅವರ ಮೈತಡವಿ ಪಾದಸ್ಪರ್ಶ ಮಾಡಿ ತನ್ನ ಜನ್ಮ ಸಾರ್ಥಕವಾಯಿತೆಂದು ಹಿಗ್ಗಿದ.

1936ರಲ್ಲಿ ಕಾಶಿಯಲ್ಲಿ ಶಿವಪ್ರಸಾದಗುಪ್ತ ಕಟ್ಟಿಸಿದ ಭಾರತಮಾತೆಯ ಮಂದಿರದ ಉದ್ಘಾಟನೆ ನೆರವೇರಿಸಿದರು. ದಿಲ್ಲಿ ಸಮೀಪದಲ್ಲಿದೆ, ನನ್ನ ತಾಯಿ ಬಹಳ ಕಾಯಿಲೆಯಾಗಿದ್ದಾಳೆ ತಮ್ಮನ್ನು ಕಾಣಬಯಸುತ್ತಾಳೆಂದು ಶಿಷ್ಯ ಚಾಂದೀವಾಲ ಬಾಪೂಜಿಗೆ ಕಾಗದ ಬರೆದ. ಗಾಂಧೀಜಿ ದಿಲ್ಲಿಯಲ್ಲಿ ಇಳಿದು ನೇರವಾಗಿ ಚಾಂದೀವಾಲರ ಮನೆಗೆ ಹೋಗಿ ಅವರ ತಾಯಿಯೊಡನೆ ಕೆಲ ನಿಮಿಷವಿದ್ದರು. ತದನಂತರ ದಿಲ್ಲಿಯ ಕರೋಲ್ ಬಾಗಿನಲ್ಲಿ ಡಾಕ್ಟರ್ ಜೋಷಿಯವರ ಚಿಕಿತ್ಸಾಲಯದಲ್ಲಿದ್ದ ಡಾಕ್ಟರ್ ಅನ್ಸಾರಿಯವರ ಪತ್ನಿ ಬೇಗಂ ಅನ್ಸಾರಿಯವರನ್ನು ಕಂಡು, ಅದೇ ದಿನ ವರ್ಧಾಗೆ ತೆರಳಿದರು. ಶಿಷ್ಯ ವರ್ಗದಲ್ಲಿ ಅಷ್ಟು ಪ್ರೇಮ ಬಾಪೂಜೀಗೆ.

ಕಾಮಾಕ್ಷಮ್ಮ ತನ್ನ ಗೆಳತಿಯರೊಡನೆ 1946 ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಜತ ಮಹೋತ್ಸವಕ್ಕೆ ಮದರಾಸಿಗೆ ಹೋಗಿದ್ದರು. ಉತ್ಸವದ ಕಾರ್ಯಗಳು ಮುಗಿಯುವವರೆಗೂ ಸಭೆಯ ಆವರಣದಲ್ಲಿಯೇ ಉಳಿದುಕೊಂಡಿದ್ದರು. ಪ್ರತಿದಿನ ಉಷಃಕಾಲದಲ್ಲಿ ಮತ್ತು ಸೂರ್ಯಾಸ್ತಮದ ವೇಳೆಗೆ ಗಾಂಧೀಜಿ ನಡೆಸುತ್ತಿದ್ದ ಪ್ರಾರ್ಥನಾ ಸಭೆಯಲ್ಲಿ ಹಾಜರಿರುತ್ತಿದ್ದರು. ಪ್ರಾರ್ಥನೆ ಮುಗಿಸಿಕೊಂಡು ಒಂದು ದಿನ ಗೆಳತಿಯರೊಡನೆ ರಾತ್ರಿ ಸಭೆಯಿಂದ ದೂರದ ಪರಿಚಿತರ ಮನೆಗೆ ಹೊರಟರು. ಅಲ್ಲಿಯೇ ಊಟ ಮುಗಿಸಿಕೊಂಡು ಹಿಂದಿರುಗುವಾಗ ರಾತ್ರಿ 10 ಘಂಟೆ ಮೀರಿತ್ತು. ಆಗ ಆಟೋರಿಕ್ಷಾಗಳಿರಲಿಲ್ಲ. ನರವಾಹನಗಳಾದ ರಿಕ್ಷಾಗಳಿರುತ್ತಿದ್ದುವು. ಕಾಮಾಕ್ಷಮ್ಮ ಮತ್ತು ಅವರ ಗೆಳತಿ ರಿಕ್ಷಾದಲ್ಲಿ ಕುಳಿತು ಪ್ರಚಾರ ಸಭೆಗೆ ಬಿಡುವಂತೆ

ರಿಕ್ಷಾ ಎಳೆಯುವವನಿಗೆ ತಿಳಿಸಿದರು. ಗಾಡಿಯಲ್ಲಿ ಕುಳಿತಿದ್ದ ಇಬ್ಬರಿಗೂ ಮದರಾಸು ಹೊಸತು. ಬೀದಿಗಳ ಪರಿಚಯವಿಲ್ಲ. ಕಾಮಾಕ್ಷಮ್ಮನವರ ಜೊತೆಗಾತಿ ಬೆಲೆ ಬಾಳುವ ಬಂಗಾರದ ಆಭರಣಗಳನ್ನು ತೊಟ್ಟಿದ್ದರು. ರಾತ್ರಿ 11 ಮೀರಿತ್ತು. ಬೀದಿಗಳಲ್ಲಿ ಜನ ಸಂಚಾರವಿಲ್ಲ. ದಾರಿಯೂ ತಿಳಿಯದು. ರಿಕ್ಷಾದವನು ಸರಿಯಾದ ದಾರಿಯಲ್ಲಿ ಒಯ್ಯುತ್ತಿದ್ದಾನೆಯೋ, ಅಥವಾ ಆಭರಣ ಕಸಿದುಕೊಳ್ಳಲು ದಾರಿತಪ್ಪಿಸಿ ಎಲ್ಲಿಗಾದರೂ ಒಯ್ಯುತ್ತಿರುವನೋ ಎಂಬ ಭೀತಿ ಇಬ್ಬರು ಅಬಲೆಯರನ್ನು ಆವರಿಸಿಕೊಂಡಿತು. ಎದೆ ಡಬ ಡಬ ಎಂದು ಬಡಿದುಕೊಳ್ಳುತ್ತಿತ್ತು. ದಾರಿ ಸರಿಯೇ ಎಂದು ಕೇಳಲು ದಾರಿಯಲ್ಲಿ ಯಾರೂ ಇಲ್ಲ. ನಿರ್ಜನ. ಕಡೆಗೂ ದ. ಭಾ. ಹಿಂದೀ ಪ್ರಚಾರ ಸಭೆಯ ಅಲಂಕಾರದ ದೀಪಗಳು ಗೋಚರಿಸಿದುವು. ಹೆಬ್ಬಾಗಿಲು ಕಂಡಾಗ ಹೋಗಿದ್ದ ಪ್ರಾಣ ಮರಳಿ ಬಂದಂತೆ ಆಗಿ ನಿಟ್ಟುಸುರು ಎಳೆದರು, ಮಹಾತ್ಮನೇ ನಮ್ಮನ್ನು ಕಾಪಾಡಿದನೆಂದು. ರಿಕ್ಷಾದವನಿಗೆ ಹಣ ಕೊಟ್ಟರು. ಅವನು ಕೇಳಿದ, "ಅಮ್ಮಾ, ಮಹಾತ್ಮರು ಬಿಡಾರ ಮಾಡಿರುವ ಕಟ್ಟಡ ಯಾವುದು" ಎಂದು. ಕಟ್ಟಡ ತೋರಿಸಿದರು, ಕೈಬೆರಳುಮಾಡಿ. ಮಹಾತ್ಮರನ್ನು ನೋಡುವ ಭಾಗ್ಯ ಎನಗಿಲ್ಲ ಎನ್ನುತ್ತಾ ಆ ಬಡ ಶ್ರಮಜೀವಿ ಮಹಾತ್ಮರ ಬಿಡಾರದ ಕಡೆ ಮುಖ ಮಾಡಿ ನೆಲದ ಮೇಲೆ ಉದ್ದಕ್ಕೂ ಮಲಗಿ ಸಾಷ್ಟಾಂಗ ಪ್ರಣಾಮ ಸಲ್ಲಿಸಿ, ಮಹಾತ್ಮರ ಪಾದಸ್ಪರ್ಶದ ನೆಲವನ್ನು ಕಣ್ಣಿಗೆ ಮುಟ್ಟಿಕೊಂಡು ಭಕ್ತಿಭಾವದಿಂದ ಅಂಜಲಿಬದ್ಧನಾಗಿ ಕೈಜೋಡಿಸಿ, ರಿಕ್ಷಾ ಎಳೆದುಕೊಂಡು ಹೊರಟುಹೋದ. ಈ ಗಾಂಧೀ ಭಕ್ತನಲ್ಲಿ ಸಂದೇಹ ಪಟ್ಟೆವಲ್ಲಾ ಎಂದು ಇಬ್ಬರೂ ಮರುಗಿದರು. ಮಹಾತ್ಮರ ಮಹಿಮೆ ಅಂಥದು.

ಲಾರ್ಡ್ ಲೋಥಿಯನ್ ಗಾಂಧಿಯವರ ಭೇಟಿಗಾಗಿ ಸೇವಾಗ್ರಾಮಕ್ಕೆ ಬರುವುದಾಗಿ 1940 ರಲ್ಲಿ ಪೂರ್ವಭಾವಿ ಪತ್ರ ಬರೆದು ತಿಳಿಸಿದ್ದರು. ಅವರನ್ನು ವರ್ಧಾ ರೈಲು ನಿಲ್ದಾಣದಲ್ಲಿ ಎದುರ್ಗೊಂಡು ಎತ್ತಿನ ಟಾಂಗ ಗಾಡಿಯಲ್ಲಿ ಆಶ್ರಮಕ್ಕೆ ಕರೆದು ತರುವಂತೆ ಜಮುನಾಲಾಲರಿಗೆ ಗಾಂಧೀಜಿ ಸೂಚನೆ ಕೊಟ್ಟರು. ಅವರನ್ನು ಮೋಟಾರಿನಲ್ಲಿ ಕರೆತರಬಹುದಾಗಿತ್ತು. ಆದರೆ ಉದ್ದೇಶಪೂರ್ವಕ ಗಾಧೀಜಿ ಹೀಗೆ ಮಾಡಲಿಲ್ಲ. ಪಾಶ್ಚಾತ್ಯರು ಸಾಮಾನ್ಯವಾಗಿ ಬೊಂಬಾಯಿಗೆ ಬಂದು ಇಳಿಯುತ್ತಾರೆ. ದೊಡ್ಡ ದೊಡ್ಡ ನಗರಗಳಿಗೆ, ಆಗ್ರ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಡುತ್ತಾರೆ. ಹಳ್ಳಿಗಳನ್ನು ನೋಡುವ ಅವಕಾಶ ಅವರಿಗೆ ದೊರೆಯುವುದಿಲ್ಲ. ನಮ್ಮ ಹಳ್ಳಿಯವರು ಮೋಟಾರು ಕೊಳ್ಳುವಷ್ಟು ಶ್ರೀಮಂತರಲ್ಲ. ಆದ್ದರಿಂದ ಗ್ರಾಮವಾಸಿಗಳ ಕಷ್ಟಸುಖದ ಅನುಭವವಾಗಲೆಂದು ಅವರನ್ನು ಎತ್ತಿನ ಗಾಡಿಯಲ್ಲಿ ಕರೆದುಕೊಂಡು ಬರುವಂತೆ ತಿಳಿಸಿದೆ. ಜಮುನಾಲಾಲರು ಇದರ ಉದ್ದೇಶ ಗ್ರಹಿಸಿ ಎತ್ತಿನ ಗಾಡಿಯಲ್ಲಿ ಕೂಡಿಸಿಕೊಂಡು ಬಂದರು. ಇಬ್ಬರೂ ದಢೂತಿ ವ್ಯಕ್ತಿಗಳು. ಇಬ್ಬರೂ ಒಂದೇ ಆಸನದಲ್ಲಿ ಕುಳಿತು ತೂರಾಡುತ್ತ ಆಶ್ರಮ ಸೇರಿದರು. ಲೋಥಿಯನ್

ಮೂರು ದಿನ ಆಶ್ರಮದಲ್ಲಿ ಇದ್ದರು. ಗಾಂಧಿಯವರ ಪಕ್ಕದಲ್ಲೇ ಕುಳಿತು ಊಟ ಮಾಡುತ್ತಿದ್ದರು. ಬಾಪು ತಮ್ಮ ಕೈಯಿಂದ ಅವರಿಗೆ ಊಟ ಬಡಿಸುತ್ತಿದ್ದರು. ಆಶ್ರಮದ ಸರಳ ಜೀವನ ಅವರ ಮೆಚ್ಚುಗೆ ಪಡೆಯಿತು. ತಮ್ಮ ಜೀವಿತದಲ್ಲಿ ಇಷ್ಟು ಶಾಂತಿಯ ಜೀವನ ಎಂದೂ ಅನುಭವಿಸಿರಲಿಲ್ಲವೆಂದು ಅವರು ತಿಳಿಸಿದರು.

ಗ್ರಾಮಸೇವಕರ ಶಿಕ್ಷಣ ಶಿಬಿರಕ್ಕೆ ಶಿಕ್ಷಣಾರ್ಥಿಗಳು ಬಂದಿದ್ದರು. ಬಿಸಿಲು ಕಾಲ. ಸೇವಾಗ್ರಾಮದಲ್ಲಿ ದಹದಹಿಸುವ ಬಿಸಿಲು. ಬಿಸಿಲಿನ ಝಳದಿಂದ ತಪ್ಪಿಸಿ ಕೊಳ್ಳಲು ಒದ್ದೆ ಮಣ್ಣು ಹಣೆಗೆ ಬಳಿದುಕೊಳ್ಳುತ್ತಿದ್ದರು. ತಲೆಗೆ ಹ್ಯಾಟ್, ಒದ್ದೆ ಬಟ್ಟೆ. ಹತ್ತು ಗಂಟೆಯ ಮೇಲೆ ಬಿಸಿಲು ಬಹಳ ಏರುತ್ತದೆ. ಆದ್ದರಿಂದ ಸಂಜೆಯ ತಂಪು ಹೊತ್ತಿನಲ್ಲಿ ತರಗತಿಗಳನ್ನು ನಡೆಸೋಣ ಗಾಂಧಿಯವರಿಗೆ ಸಲಹೆ ಮಾಡ ಲಾಯಿತು. "ಇವರೆಲ್ಲ ಗ್ರಾಮಗಳಿಗೆ ಹೋಗಿ ಸೇವೆ ಸಲ್ಲಿಸಲು ಬಂದಿರುವ ಶಿಕ್ಷಣಾರ್ಥಿ ಗಳು ಬಿಸಿಲಿನಲ್ಲೇ ಅವರು ಕೆಲಸಮಾಡಬೇಕಾಗುವುದು. ಆದ್ದರಿಂದ ಮಧ್ಯಾಹ್ನ 1 ರಿಂದ 2 ಗಂಟೆವರೆಗೆ ಪಾಠ ನಡೆಯಲಿ" ಎಂದರು.

1931ರಲ್ಲಿ ಗಾಂಧೀಜಿ ಚಕ್ರಗೋಷ್ಠಿಗೆ ಹೋಗಿದ್ದಾಗ ಶ್ರೀಮತಿ ಮುರಿಯಲ್ ಲೆಸ್ಟರ್ ಅವರ ಮನೆಯಲ್ಲಿ ಬಿಡಾರ ಮಾಡಿದ್ದರಷ್ಟೆ. ಇವರ ಸಂದರ್ಶನಕ್ಕಾಗಿ ಶ್ರೀಮಂತರು, ಬಡವರು, ರಾಜಕಾರಣಿಗಳು, ಮಕ್ಕಳು ಎಲ್ಲರೂ ಬರುತ್ತಿದ್ದರು. ಒಂದು ದಿನ ಅವಸರದ ಕಾರ್ಯಕ್ಕಾಗಿ ಇಂಗ್ಲೆಂಡಿನ ಮಹಾಪ್ರಧಾನಿ ರಾಮ್ಸಮೆಕ್ಡೊನಾಲ್ಡ್ ಬಂದರು. ಇವರಿಗೆ ಮೊದಲೇ ಅಂಚೆಯ ನೌಕರ ಗಾಂಧಿಯವರನ್ನು ಕಾಣಲು ಕಾದಿದ್ದ. ಪ್ರಧಾನಿ ಬಂದರೆಂದು ಎಲ್ಲರೂ ಎದ್ದು ನಿಂತು ಅವರಿಗೆ ದಾರಿ ಮಾಡಿ ಕೊಟ್ಟರು. ಕೂಡಲು ಕುರ್ಚಿ ಕೊಟ್ಟರು. ತಮ್ಮೊಡನೆ ವಿಚಾರ ವಿನಿಮಯಕ್ಕಾಗಿ ಪ್ರಧಾನಿ ದಯಮಾಡಿಸಿದ್ದಾರೆ. ಅವರನ್ನು ಒಳಕ್ಕೆ ಕರೆದುತರಲೇ ಎಂದು ಮಹದೇವ ದೇಸಾಯಿ ಕೇಳಿದರು.

ಸ್ವಲ್ಪ ತಡೆಯಿರಿ. ಅಂಚೆಯ ನೌಕರ ಬಹಳ ಹೊತ್ತಿನಿಂದ ಕಾದಿದ್ದಾನೆ. ಬಹಳ ದೂರದಿಂದ ಬಂದಿರುವನಂತೆ. ಕಾಲಕಾಲಕ್ಕೆ ಸರಿಯಾಗಿ ನಿಷ್ಠೆಯಿಂದ ಕೆಲಸ ಮಾಡುವ ನೌಕರ. ಅವನು ಬಹಳ ಹೊತ್ತು ಕಾದಿರಲಾರ. ಪ್ರಧಾನಿ ರಾಜಕಾರಿಣಿ. ಸಮಯ ಅರಿತು ಕೆಲಸ ಮಾಡುವ ಸಾಮರ್ಥ್ಯ ಅವರಿಗುಂಟು. ಅವರು ಸ್ವಲ್ಪಹೊತ್ತು ಕಾದಿ ರಲಿ. ಮೊದಲು ಅಂಚೆಯವನನ್ನು ಒಳಕ್ಕೆ ಬಿಡಿ ಎಂದರು. ಕುಶಲ ವಿಚಾರಿಸಿ, ಹಸ್ತಾ ಕ್ಷರ ಕೊಟ್ಟುಕಳುಹಿಸಿ ಅನಂತರ ಪ್ರಧಾನಿಯನ್ನು ಕಂಡರು. ಶ್ರೀಸಾಮಾನ್ಯನಲ್ಲಿ ಗಾಂಧಿಯವರಿಗಿದ್ದ ಪ್ರೀತಿ ಗೌರವ ನೋಡಿ ಅಲ್ಲಿದ್ದ ಜನ ಆಶ್ಚರ್ಯಪಟ್ಟರು.

ಇಂಗ್ಲೆಂಡಿನಲ್ಲಿ ಇದ್ದಾಗ ಗಾಂಧಿಯವರ ಅಂಗರಕ್ಷಕರಾಗಿ ಇವಾನ್ಸ್ ಮತ್ತು

ಅಗಾಥಹ್ಯಾನ್ಸ್ ಎಂಬ ಇಬ್ಬರು ಪೋಲೀಸ್ ಗುಪ್ತದಳದವರನ್ನು ಸರ್ಕಾರ ನೇಮಿಸಿತ್ತು. ಇವರು ನನ್ನ ಪರಿವಾರದವರೇ ಆಗಿರುತ್ತಾರೆ. ಆದ್ದರಿಂದ ಭಾರತಕ್ಕೆ ಮರುಳುತ್ತಿದ್ದಾಗ ಇವರನ್ನು ಬ್ರಿಂಡ್ಸಿವರೆಗೆ ಕಳುಹಿಸಿಕೊಡುವಂತೆ ಕೋರಿದರು. ಸಾರ್ಜೆಂಟ್ ಇವಾನ್ಸ್ ಅವರ ಮಗಳು ಲಂಡನ್ನಿನಲ್ಲಿದ್ದಾಗ ಇವರ ಟೈಪಿಸ್ಟ್ ಆಗಿ ಸೇವೆ ಸಲ್ಲಿಸಿದಳು. ಬಾಪು ಭಾರತಕ್ಕೆ ಮರಳಿದ ಮೇಲೆ, ತಮ್ಮ ಪ್ರೀತಿಯ ಕೊಡುಗೆಯಾಗಿ ಎರಡು ಗಡಿಯಾರ ತಮ್ಮ ಅಂಗರಕ್ಷಕರಾಗಿದ್ದ ಇವಾನ್ಸ್ ಮತ್ತು ಹ್ಯಾನ್ಸ್ ಅವರಿಗೆ ಕಳುಹಿಸಿ ಕೊಟ್ಟರು.

ಮಹಾತ್ಮ ಗಾಂಧಿಯವರು 1931 ರಲ್ಲಿ ಕಾಂಗ್ರೆಸ್ಸಿನ ಏಕಮಾತ್ರ ಪ್ರತಿನಿಧಿಯಾಗಿ ದುಂಡು ಮೇಜಿನ ರಾಜಕೀಯ ಪರಿಷತ್ತಿಗೆ ಹೋಗಿದ್ದರು. ಆಗ ಜಾರ್ಜ್ ಚಕ್ರವರ್ತಿ ಪ್ರತಿನಿಧಿಗಳ ಗೌರವಾರ್ಥ ಬಕಿಂಗ್ ಹ್ಯಾಂ ಅರಮನೆಯಲ್ಲಿ ಒಂದು ಸತ್ಕಾರ ಕೂಟ ಏರ್ಪಡಿಸಿದ್ದರು. ಬ್ರಿಟಿಷ್ ಚಕ್ರಾಧಿಪತ್ಯದ ಚಕ್ರವರ್ತಿಯವರ ಸತ್ಕಾರ ಕೂಟಕ್ಕೆ ಆಹ್ವಾನ ದೊರೆಯುವುದೇ ಒಂದು ದೊಡ್ಡ ಗೌರವ. ಮಹಾತ್ಮ ಗಾಂಧಿಯವರಿಗೂ ಆಹ್ವಾನ ಬಂದಿತ್ತು. ಇಂಥ ಸತ್ಕಾರ ಕೂಟಗಳಲ್ಲಿ ಭಾಗವಹಿಸಲು ನಿರ್ದಿಷ್ಟ ಉಡುಪು ಧರಿಸಿ ಹೋಗಬೇಕೆಂದು ನಿಯಮ.

ಬಡವರ ಪ್ರತಿನಿಧಿ ಮಹಾತ್ಮರು ಹೊಲೆದ ಉಡುಪು ಧರಿಸುತ್ತಿರಲಿಲ್ಲ. ಮೊಳಕಾಲ ಮೇಲೆ ಒಂದು ತುಂಡು ಪಂಚೆ, ಬಿಳಿಯ ಖಾದಿ ದುಪ್ಪಟ ಹೊದೆಯುತ್ತಿದ್ದರು. ಇಂಗ್ಲೆಂಡಿನ ತಡೆಯಲಾರದ ಚಳಿಯಲ್ಲೂ ಇದೇ ಅವರ ಉಡುಪು. ಇವರ ಮನೋದಾರ್ಢ್ಯ ಇಂದ್ರಿಯಗಳ ಮೇಲಿನ ಹತೋಟಿ ನೋಡಿ ಜನ ತಲೆ ತೂಗುತ್ತಿದ್ದರು.

ಆ ಕಾಲಕ್ಕೆ ಈ ಉಡುಪು ಅಲ್ಲದೆ ಬೇರೆ ಬಟ್ಟೆ ತೊಡುವುದಿಲ್ಲ ಎಂಬ ದೀಕ್ಷೆ ತೊಟ್ಟಿದ್ದರು. ಈ ಕಾರಣದಿಂದ ಸತ್ಕಾರ ಕೂಟಕ್ಕೆ ಅವರು ಹೋಗದಿರುವುದೇ ಲೇಸು ಎಂಬ ಅಭಿಪ್ರಾಯವಿತ್ತು. ಆದರೆ ಸತ್ಕಾರ ಕೂಟಕ್ಕೆ ಹೋಗದಿದ್ದರೆ ತಪ್ಪು ಕಲ್ಪನೆಗಳಿಗೆ ಎಡೆಯಾಗುವ ಸಂಭವವೂ ಇತ್ತು. ಚಕ್ರವರ್ತಿಯ ಆಹ್ವಾನ ಮನ್ನಿಸದಿರುವುದು ಉಚಿತವಲ್ಲ. ಆಮಂತ್ರಣಕ್ಕೆ ಅಪಮಾನ ಮಾಡಿದಂತೆ ಆಗುತ್ತದೆ ಎಂದು ತಿಳಿಯಲಾಗುತ್ತಿತ್ತು. ಆಮಂತ್ರಣ ಸ್ವೀಕರಿಸಲಾಗದಿದ್ದರೆ, ಕಾರಣ ತಿಳಿಸಿ ಪತ್ರ ಬರೆಯಬೇಕಾಗುತ್ತಿತ್ತು. ದುಂಡು ಮೇಜಿನ ಪರಿಷತ್ತಿಗೆ ಬಂದಿದ್ದ ಪ್ರತಿನಿಧಿಗಳು ಈ ಸತ್ಕಾರ ಕೂಟಕ್ಕೆ ಗಾಂಧೀಜಿ ಬರಲೇಬೇಕೆಂದು ಒತ್ತಾಯ ಮಾಡಿದರು. ಆಗಲಿ ಎಂದು ಗಾಂಧೀಜಿ ಒಪ್ಪಿಕೊಂಡರು. ಆದರೆ ತನ್ನ ಉಡುಪು ಬದಲಾಯಿಸುವುದಿಲ್ಲವೆಂದು ತಿಳಿಸಿದರು.

ಈ ಸತ್ಕಾರ ಕೂಟದಲ್ಲಿ ಜಾರ್ಜ್ ಚಕ್ರವರ್ತಿ ಮತ್ತು ಗಾಂಧಿಯವರ ನಡುವೆ

ಏನು ನಡೆಯಿತು ಎಂಬ ಬಗ್ಗೆ ವಿವಿಧ ವರದಿಗಳಿವೆ. ರಾಜ ಮನೆತನದವರು ನೀಡುವ ಸತ್ಕಾರ ಕೂಟದಲ್ಲಿ ಆತಿಥೇಯನಿಗೆ ಆಹ್ವಾನಿತ ಅತಿಥಿಗಳ ವ್ಯಕ್ತಿ ಪರಿಚಯ ಮಾಡಿ ಕೊಡುವ ಸಂಪ್ರದಾಯವಿದೆ. ಲಾರ್ಡ್ ಚೇಂಬರ್ಲಿನ್ ಬಂದ ಅತಿಥಿಗಳನ್ನು ಒಬ್ಬೊಬ್ಬರಾಗಿ ಚಕ್ರವರ್ತಿಗಳಿಗೆ ಪರಿಚಯ ಮಾಡಿಕೊಡುತ್ತಿದ್ದರು. ಗಾಂಧಿಯವರ ಹೆಸರು ಕೂಗಿ ತಿಳಿಸಲಿಲ್ಲ. ಜಗತ್ತಿಗೇ ಪರಿಚಿತರಾದ ಈ ವ್ಯಕ್ತಿಯ ಪರಿಚಯ ಮಾಡಿಕೊಡಬೇಕಾದುದರ ಆಗತ್ಯವಾದರೂ ಏನಿತ್ತು ?

ಒಂದು ವರದಿ ಹೇಳುತ್ತದೆ—ಗಾಂಧಿಯವರನ್ನು ನೋಡಿ, ಇದೇನು ವೇಷ ಎಂದು ಚಕ್ರವರ್ತಿಗಳು ಕೇಳಿದರಂತೆ. ಮಾತು ಮುಂದುವರೆದು ಎಲ್ಲಿ ವಿಕೋಪಕ್ಕೆ ಕಾರಣವಾದೀತೋ ಎಂದು ಚೇಂಬರ್ಲಿನ್ ಮತ್ತು ಅಲ್ಲಿ ನೆರೆದಿದ್ದ ಇತರರು ಗಾಬರಿ ಗೊಂಡರಂತೆ. ಆದರೆ ಸಂದರ್ಭೋಚಿತ ನಡೆದುಕೊಳ್ಳಬಲ್ಲ ಗಾಂಧೀಜಿ ನಸುನಕ್ಕು, "ತಾವು ಪ್ಲಸ್ ಫೋರ್ ಧರಿಸಿರುವಿರಿ. ತಾವು ಪ್ರಭುತ್ವದ ಪ್ರತಿನಿಧಿ, ನಾನು ಬಡ ಭಾರತೀಯರ ಪ್ರತಿನಿಧಿ, ನಾನು 'ಮೈನಸ್ ಫೋರ್' ಧರಿಸಿರುವ ಎಂದು ಚಟಾಕಿ ಹಾರಿಸಿದರಂತೆ.

ಇಲ್ಲಿ 'ಪ್ಲಸ್‌ಫೋರ್' ಎಂದರೆ ಉಡುಪಿನ ಹೆಸರೂ ಆಗಬಹುದು. ಮತ್ತು ತಾವು ನಾಲ್ಕು ಜನ ತೊಡುವ ವಸ್ತ್ರ ತಾವೊಬ್ಬರೇ ಧರಿಸಿರುವಿರ. ನಾನು ಏನೂ ತೊಟ್ಟಿಲ್ಲ ಎಂಬ ವಾಕ್ಯಾರ್ಥವೂ ಆಗುತ್ತದೆ. ಪ್ರಕೋಪಕ್ಕೆ ಎಡೆಯಾಗದಿರಲೆಂದು ಗಾಂಧೀಜಿ ಅಲ್ಲಿ ನಿಲ್ಲದೆ, ತಾವಾಗಿಯೇ ಮುಂದೆ ಸರಿದು ಹೋದರು ಎಂದು ಒಂದು ವರದಿ. ಬಹುಕಾಲದಿಂದ ಈ ಕಥೆ ಪ್ರಚಾರದಲ್ಲಿದೆ.

ಇತ್ತೀಚೆಗೆ ದಿವಾನ್ ಜರ್ಮಾನಿ ದಾಸ್ ಎಂಬುವರು ಮತ್ತೊಂದು ವರದಿ ಪ್ರಕಟಿಸಿರುತ್ತಾರೆ. ಜರ್ಮಾನಿದಾಸರೂ ಈ ಸತ್ಕಾರ ಕೂಟಕ್ಕೆ ಆಹ್ವಾನಿತರಾಗಿ ಹೋಗಿದ್ದರು. ಮಹಾತ್ಮರ ಜೊತೆಯಲ್ಲೇ ಇದ್ದ ಶ್ರೀಮತಿ ಸರೋಜಿನಿನಾಯ್ಡು ತಮಗೆ ತಿಳಿಸಿದ್ದೆಂದು 'ಮಹಾರಾಜ' ಎಂಬ ತಮ್ಮ ಪುಸ್ತಕದಲ್ಲಿ ಈ ಕೆಳಕಂಡಂತೆ ಬರೆದಿರುತ್ತಾರೆ :–

ಲಾರ್ಡ್ ಚೇಂಬರ್ಲಿನ್ ಗಾಂಧಿಯವರ ಹೆಸರು ಕೂಗಿ ಹೇಳಲಿಲ್ಲ. ಆದರೂ ಚಕ್ರವರ್ತಿ, ಗಾಂಧಿಯವರಿಗೆ ಹಸ್ತಲಾಘವ ಕೊಟ್ಟು ಕೈಕುಲಿಕಿದರು. ಸಮೀಪ ದಲ್ಲಿದ್ದ ರಾಣಿ ಹಸ್ತಲಾಘವ ನೀಡಲು ಚಾಚಿದ್ದ ಕೈ ಹಿಂತೆಗೆದುಕೊಂಡಳು. ಸಮೀಪದಲ್ಲಿದ್ದ ಮತ್ತೊಬ್ಬ ದರ್ಬಾರಿ ಗಾಂಧಿಯವರನ್ನು ಇತರ ಅತಿಥಿಗಳಿಂದ ಸ್ವಲ್ಪ ದೂರಕ್ಕೆ ಒಯ್ದರು. ಕೋಪದಿಂದ ಉದ್ರಿಕ್ತರಾದ ಚಕ್ರವರ್ತಿ ಇವರ ಸಮೀಪಕ್ಕೆ ಬಂದು, "ಆಫ್ರಿಕದಲ್ಲಿ ನೀವು ಬ್ರಿಟಿಷರ ಮಿತ್ರರಾಗಿದ್ದಿರಿ. ಈಗ ನನ್ನ ಮತ್ತು

ಬ್ರಿಟಿಷ್ ಪ್ರಭುತ್ವದ ವಿರೋಧಿ ಆಗಿರಲು ಕಾರಣ ನಾನರಿಯೆ. ನೀವೇನಾದರೂ ಗಲಭೆ ಎಬ್ಬಿಸಿ, ನನ್ನ ಸರ್ಕಾರದೊಡನೆ ಸಹಕರಿಸದೆ ತೊಂದರೆ ಕೊಟ್ಟರೆ, ಭಾರತ ದಲ್ಲಿರುವ ನನ್ನ ಸೇನೆ ಗಲಭೆಕಾರರನ್ನೂ, ಚಳವಳಿಕೋರರನ್ನೂ ಗುಂಡಿಟ್ಟು ಸುಟ್ಟು ಬಿಡುತ್ತಾರೆ, ಜೋಕೆ" ಎಂದು ಎಚ್ಚರಿಕೆ ಕೊಟ್ಟರು. ಗಾಂಧೀಜಿ ಮಾತನಾಡದೆ ಅಲ್ಲಿಂದ ನಿರ್ಗಮಿಸಿದರು. ಕೆಲವು ನಿಮಿಷಗಳ ಅನಂತರ ಗಾಂಧೀಜಿ ಪರಿಷತ್ತಿನಲ್ಲಿ ಭಾಷಣ ಮಾಡಿದರು. "ನಾನೊಬ್ಬ ಆಂಗ್ಲ ಸದ್ಗೃಹಸ್ಥರೊಡನೆ ಕೆಲವು ನಿಮಿಷಗಳ ಹಿಂದೆ ಮಾತನಾಡುತ್ತಿದ್ದೆ. ನನ್ನನ್ನೂ, ಸ್ವಾತಂತ್ರ್ಯ ಹೋರಾಟಗಾರರನ್ನೂ ಗುಂಡು ಹಾರಿಸಿ ಕೊಂದುಬಿಡುವುದಾಗಿ ಅವರು ಎಚ್ಚರಿಕೆ ಕೊಟ್ಟರು. ಭಾರತದ ನನ್ನ ಮಕ್ಕಳು ಬ್ರಿಟಿಷ್ ಬಾಂಬುಗಳನ್ನು ಪಟಾಕಿಗಳಂತೆ ತುಚ್ಛವಾಗಿ ಕಾಣುತ್ತಾರೆ ಎಂದು ಅವರು ಅರಿಯುವುದು ಮೇಲು".

ಗಾಂಧಿಯವರ ಸ್ವಭಾವ ಬಲ್ಲವರಿಗೆ ಮೇಲಿನ ವರದಿ ನಿಜವೆನಿಸದು. ತನ್ನ ಪುಸ್ತಕ ಮಾರಾಟವಾಗಲೆಂದು ದಿವಾನ್ ಜರ್ಮನಿ ದಾಸರು ಈ ರೀತಿಯ ಕೋಲಾ ಹಲಕಾರಿ ಸುದ್ದಿ ನಿಜವೆಂದು ಪ್ರಕಟಿಸಿರಲು ಸಾಕು.

ಮಹಾಭಿಕ್ಷುಕ

ಭಿಕ್ಷುಕರ ನಾಡು ಎಂಬ ಕೆಟ್ಟ ಹೆಸರು ಗಳಿಸಿದೆ ನಮ್ಮ ಈ ಪುಣ್ಯಭೂಮಿ ಭಾರತ. ಮಹಾಭಾರಥ ಕಾಲದಿಂದ ಹಿಡಿದ ಭಿಕ್ಷುಕರ ಕಾಟ ನಿವಾರಿಸಲು ಯಾರಿಂದಲೂ ಸಾಧ್ಯವಾಗಿರುವುದಿಲ್ಲ. ಪುರಾಣ ಇತಿಹಾಸಗಳಲ್ಲಿ .ಬೇಡುವವರು ಬಹುತೇಕ ಬ್ರಾಹ್ಮಣರು. ಕ್ಷತ್ರಿಯ, ಶೂದ್ರ, ವೈಶ್ಯ ಎಲ್ಲರೂ ತಮ್ಮ ತಮ್ಮ ವೃತ್ತಿ ಜೀವನ ನಡೆಸುವರು. ಬ್ರಾಹ್ಮಣನದು ಊಂಛ ವೃತ್ತಿ. ವಿದ್ಯೆ ಕಲಿಸುವುದು, ಬ್ರಹ್ಮಜ್ಞನಾಗಿ, ಧರ್ಮ ಬೋಧಕನಾಗಿ, ದೈವೋಪಾಸಕನಾಗಿ, ಎಲ್ಲರೂ ಧರ್ಮ ಭೀರುಗಳಾಗಿ, ಧರ್ಮಮಾರ್ಗದಲ್ಲಿ ನಡೆದುಕೊಳ್ಳುವಂತೆ ಮಾರ್ಗದರ್ಶನ ನೀಡುವುದು ಅವನ ಹೊಣೆ. ಬ್ರಹ್ಮಚಾರಿಯಾಗಿ ವಟುವಾಗಿ ಅವನು ಕಲಿಯುವುದು 'ಭವತಿ ಭಿಕ್ಷಾಂದೇಹಿ'. ಗಳಿಸಿ ಸುಖವಾಗಿ ಬಾಳುವುದು ಅವನ ಜೀವನದ ಗುರಿಯಾಗಿರಲಿಲ್ಲ. ಬ್ರಹ್ಮಜ್ಞಾನಿಗೆ ಭೋಗ ಜೀವನ ಆತಂಕಕಾರಿ. ಉದರ ಪೋಷಣೆಗಾಗಿ ಅವನು ಸಮಾಜವನ್ನವಲಂಬಿಸಿದ್ದ. ಸಮಾಜ ಅವನ ಸಂಸಾರ ನಿರ್ವಹಣೆಯ ಹೊಣೆ ಹೊತ್ತಿತ್ತು. ಮೂರು ಹೆಜ್ಜೆ ನೆಲ ಬೇಡಿ, ಮೂರು ಲೋಕ ಆಳಿದ ವಟು ವೇಷಧಾರಿ ಬ್ರಾಹ್ಮಣ. ಬ್ರಾಹ್ಮಣ ಎಂದರೆ ಪುರಂದರದಾಸ. ಆದರೆ ಈಗ ಕಾಲ ಬದಲಾಯಿಸಿದೆ, ಮತ್ತು ಈ ಜಾಡಿನ ಕಥೆ ಅಪ್ರಕೃತ.

ಬೌದ್ಧ ಸನ್ಯಾಸಿಗಳನ್ನು 'ಭಿಕ್ಷು' ಎನ್ನುತ್ತಾರೆ. ಭಿಕ್ಷೆ ಬೇಡಿ ಬದುಕಿ ಧರ್ಮ ಪಾಲನೆ ಮಾಡಬೇಕು. ಬರ್ಮಾ ದೇಶದಲ್ಲಿ ಭಿಕ್ಷುಗಳ ಸಂಖ್ಯೆ ಬಹಳ. ಟಿಬೆಟ್ಟಿನಲ್ಲೂ ಬಹು ಜನ ಭಿಕ್ಷುಗಳಿದ್ದಾರೆ. 1935 ರಲ್ಲಿ ಮಗನವಾಡಿ ಆಶ್ರಮಕ್ಕೆ ಜಪಾನಿನ ಭಿಕ್ಷು ಒಬ್ಬಾತ ಬಂದ. ಅವನಿಗೆ ಕೇಶವ ಎಂದು ಗಾಂಧೀಜಿ ಹೆಸರಿಟ್ಟರು. ಪ್ರತಿದಿನ ಬೆಳಿಗ್ಗೆ ತನ್ನ ಸಣ್ಣ ತಮಟೆ ಬಾರಿಸುತ್ತ, "ನಮ್ಯೋಹೋ, ರಂಗೋಕ್ಯೋ" ಎಂದು ಕೂಗುತ್ತ, ಆಶ್ರಮದ ಮತ್ತು ಗ್ರಾಮದ ಪ್ರದಕ್ಷಿಣೆ ಮಾಡುತ್ತಿದ್ದ. ಜ್ಞಾನಿ ಬುದ್ಧನಿಗೆ ನಮೋ, ಇಷ್ಟೇ ಅದರ ಅರ್ಥ. 1939 ರ ದ್ವಿತೀಯ ವಿಶ್ವ ಸಂಗ್ರಾಮದಲ್ಲಿ ಬ್ರಿಟಿಷ್ ಸರ್ಕಾರ ಅವನನ್ನು ಬಂಧನದಲ್ಲಿರಿಸಿತು. ಕಾರಣ ಜಪಾನ್ ಬ್ರಿಟಿಷ್ ಮಿತ್ರ ಮಂಡಲಿಯ ವಿರುದ್ಧ ಯುದ್ಧ ಹೂಡಿತ್ತು.

ಭಿಕಾರಿಗಳ ರಾಜ ಬಾಪು. ವಿದೇಶಿ ಪ್ರವಾಸಿಗರು ನಮ್ಮ ದೇಶಕ್ಕೆ ಪ್ರವಾಸಿಗರಾಗಿ ಬಂದಾಗ ಭಿಕ್ಷುಕರು ಕೊಡುವ ಕಾಟದಿಂದ ಬೇಸರಗೊಂಡು ಇನ್ನೊಮ್ಮೆ ಭಾರತಕ್ಕೆ ಬರುವುದು ಬೇಡ ಎನಿಸಿಬಿಡುತ್ತದೆ ಅವರಿಗೆ. ಆದರೆ ಬಾಪು ಈ ವರ್ಗಕ್ಕೆ

ಸೇರಿದ ಭಿಕ್ಷುಕನಲ್ಲ. ಈ ರಾಜಕಾರಣಿ ವಿಚಿತ್ರ ಸನ್ಯಾಸಿಯನ್ನು ಸಂದರ್ಶಿಸುವುದಕ್ಕಾಗಿಯೇ ಅನ್ಯದೇಶಗಳಿಂದ ಭಾರತಕ್ಕೆ ಬರುವುದುಂಟು. ಬೇಡಿಕಾಡುವವನನ್ನು ಕಡೆಗಣ್ಣಿನಿಂದ ನೋಡುತ್ತಾರೆ ಜನ. ಆದರೆ ಗಾಂಧಿಯವರ ವಿಚಾರದಲ್ಲಿ ಹಾಗಲ್ಲ. ಕೇಳಿದರೆ ಸಾಕು, ಕೊಡಲು ಜನ ತವಕಪಡುತ್ತಾರೆ. ಗಾಂಧಿ ಬೇಡುತ್ತಿದ್ದುದು ತನಗಾಗಿ ಅಲ್ಲ. ದೇಶಕ್ಕಾಗಿ, ದೇಶೋದ್ಧಾರದ ಕಾರ್ಯಗಳಿಗಾಗಿ. ಶ್ರೀಮಂತ ಜಮುನಾಲಾಲ್ ಬಜಾಜ್ ಮತ್ತು ಶ್ರೀಮಂತ ಘನಶ್ಯಾಮದಾಸ ಬಿರ್ಲ ಇವರು ಮಹಾತ್ಮರಿಗೆ ಬಯಸಿದಷ್ಟು ಹಣ ಬ್ಯಾಂಕಿನಿಂದ ಪಡೆದುಕೊಳ್ಳಲು ರುಜು ಹಾಕಿದ ಖಾಲಿ ಚೆಕ್ಕುಗಳನ್ನು ಕೊಟ್ಟಿದ್ದರೆಂದು ಪ್ರತೀತಿ. ಅಂಥ ಶ್ರೀಮಂತ ಭಿಕ್ಷುಕ ಗಾಂಧಿ. ಮಹಾತ್ಮರು ಬೇಡುತ್ತಿದ್ದುದು, ಆಶ್ರಮಗಳಿಗಾಗಿ, ದರಿದ್ರನಾರಾಯಣನಿಗಾಗಿ, ಖಾದಿ, ಹರಿಜನ ನಿಧಿ, ಕಾಂಗ್ರೆಸ್ ನಿಧಿ, ಬಿಹಾರದ ಭೂಕಂಪದಿಂದ ಕಂಗಾಲಾದ ಜನಕ್ಕಾಗಿ, ಗುಜರಾತಿನಲ್ಲಿ ಕ್ಷಾಮಪೀಡಿತ ಪ್ರದೇಶಕ್ಕಾಗಿ, ಸಮಾಜ ಸೇವೆಗಾಗಿ, ಗುರುದೇವ ರವೀಂದ್ರರ ಶಾಂತಿ ನಿಕೇತನಕ್ಕಾಗಿ. ಹೀಗೆ ಒಂದೊಂದು ಸಲ ಒಂದೊಂದು ಮಹೋನ್ನತ ಉದ್ದೇಶಕ್ಕಾಗಿ. ತಿಲಕ ಸ್ವರಾಜ್ಯನಿಧಿಗೆ ಒಂದು ವರ್ಷದಲ್ಲಿ ಒಂದು ಕೋಟಿ ಸಂಗ್ರಹಿಸಿದರು. ಶಾಂತಿ ನಿಕೇತನ ನಡೆಸಿಕೊಂಡು ಬರುವುದು ಕಷ್ಟವಾಗುತ್ತಿದೆ ಎಂದು ಮುಪ್ಪಾಗುತ್ತಿದ್ದ ಗುರುದೇವ ಠಾಕೂರರು ಹೇಳಿದಾಗ, ಯಾವ ತೊಂದರೆಯೂ ಆಗದಂತೆ ಶಾಂತಿನಿಕೇತನ ನಡೆಸಿಕೊಂಡು ಬರಲು ಹಣ ಸಂಗ್ರಹ ಮಾಡಿಕೊಟ್ಟರು. ಯಾರು ದೊಡ್ಡ ಭಿಕ್ಷುಕ ಎಂದು ಪೈಪೋಟಿ ಮದನಮೋಹನ ಮಾಲವೀಯ ಮತ್ತು ಮಹಾತ್ಮಾಗಾಂಧಿ ನಡುವೆ. ಕಾಶಿಯ ಹಿಂದೂ ವಿಶ್ವವಿದ್ಯಾಲಯ ಸ್ಥಾಪಿಸಲು ರಾಜ ಮಹಾರಾಜ ಮತ್ತು ಶ್ರೀಮಂತರಿಂದ ಪಂಡಿತ ಮಾಲವೀಯ ಧನ ಸಂಗ್ರಹಿಸಿದರು. ಮಹಾರಾಜ ಕೃಷ್ಣರಾಜ ಒಡೆಯರು 25 ಲಕ್ಷ ಕೊಟ್ಟರು. ಆದರೆ ಗಾಂಧೀಜಿ ಬಡವ ಬಲ್ಲಿದ, ಶ್ರಿಮಂತ ಎಂದು ಭೇದವರಿಯದೆ ಎಲ್ಲರಿಂದಲೂ ಹಣ ಸಂಗ್ರಹಿಸುತ್ತಿದ್ದರು. ಪ್ರಯಾಣ ಮಾಡುತ್ತಿರುವಾಗ ರೈಲು ನಿಂತಲ್ಲಿ, ಕಿಟಕಿಯಿಂದ ಹೊರಕ್ಕೆ ಕೈಚಾಚಿ ಹಣ ಬೇಡುವವರು. ಸಂಗ್ರಹಿಸಿದ ಪ್ರತಿಯೊಂದು ಪುಡಿಕಾಸಿಗೂ ಲೆಖ್ಖ ಇಡುತ್ತಿದ್ದರು. ಸಂಗ್ರಹವಾದ ಹಣದ ವಿವರ ಮತ್ತು ವೆಚ್ಚವನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ಒಂದು ಬಿಡಿಕಾಸನ್ನೂ ಅವರು ಪೋಲು ಮಾಡುವವರಲ್ಲವೆಂಬ ವಿಶ್ವಾಸ ಜನರಿಗೆ ಅವರಲ್ಲಿತ್ತು. ಧನಾರ್ಜನೆ ಅವರ ಮುಖ್ಯ ಗುರಿಯಾಗಿರಲಿಲ್ಲ. ಧನ ಗುರಿಸಾಧನೆಗೆ ಸಹಾಯಕ. ಗುರಿಯೇ ಮುಖ್ಯ. ಒಬ್ಬ ವರ್ತಕ ಭಾರಿ ಮೊತ್ತಕ್ಕೆ ಬಾಪೂಗೆ ಹಣ ಕಳುಹಿಸಿ. ಹರಿಜನೋದ್ಧಾರ ಕಾರ್ಯಕ್ಕಾಗಿ ಹಣ ವಿನಿಯೋಗಿಸಬಾರದೆಂದು ಷರತ್ತು ಹಾಕಿದ್ದ. ಈ ನಿರ್ಬಂಧ ಅವರು ಒಪ್ಪಿಕೊಳ್ಳಲಿಲ್ಲ. ಮೊತ್ತ ಮೋಹಪಡಿಸುವಷ್ಟು ದೊಡ್ಡ ಗಂಟಾದರೂ ಮೋಹನದಾಸ ಅದನ್ನು ಹಿಂದಕ್ಕೆ ಕಳುಹಿಸಿಕೊಟ್ಟ.

ಸ್ತ್ರೀಯರ ಆಭರಣ ಕಸಿಯುವವನು ಕಳ್ಳ. ಈ ದೃಷ್ಟಿಯಲ್ಲಿ ಮಹಾತ್ಮಾ ಗಾಂಧಿ ಚೋರ ಘಟಿಂಗ. ಸ್ತ್ರೀಯರ ಮೈಮೇಲಿನ ಒಡವೆ ಸುಲಿಯುವುದರಲ್ಲಿ ಗಾಂಧೀಜಿ ನಿಸ್ಸೀಮರು. ಅವರ ನಡೆನುಡಿಯಲ್ಲಿ ಅಂಥ ಮಾಟವಿತ್ತು. ಹೆಣ್ಣು ಮಕ್ಕಳಿಗೆ ಒಡವೆ ಎಂದರೆ ತುಂಬ ಆಸೆ. ಮದುವೆ ಕಾಲದಲ್ಲಿ ವಧುವಿಗೆ ಮೈತುಂಬ ಆಭರಣವಿಟ್ಟು ಕನ್ಯಾದಾನ ಮಾಡುತ್ತಾರೆ. ಪತ್ನಿಯನ್ನು ಸುಪ್ರೀತಳಾಗಿ ಮಾಡಲು ಪತಿ ಒಡವೆ ಕೊಡುತ್ತಾನೆ. ಆಭರಣ ತೊಡುವುದು ಪುರಾತನ ಕಾಲದಿಂದ ಭಾರತದಲ್ಲಿ ನಡೆದುಬಂದ ಪದ್ಧತಿ. ಮಹಿಳೆಯರ ಆಪದ್ಧನ. ಮಹಾತ್ಮರ ಉದ್ದೇಶಕ್ಕೋ, ಅವರ ಮನಮುಟ್ಟುವ ಮಾತಿಗೋ ಮರುಳಾಗಿ ಮಹಿಳೆಯರು ಅಮೂಲ್ಯವೆನಿಸಿದ ಒಡವೆ ಕಳಚಿ ಕೊಟ್ಟುಬಿಡುತ್ತಿದ್ದರು.

ಹರಿಜನೋದ್ಧಾರಕ್ಕಾಗಿ ಭಾರತದ ಆದ್ಯಂತ ಅವರು ಪ್ರವಾಸ ಕೈಗೊಂಡಿದ್ದರು. ಚಂದಾ ಎತ್ತುತ್ತಿದ್ದರು. ಈ ದೇಶದಲ್ಲಿ ಒಪ್ಪತ್ತಿಗೂ ಉಣಲು ಇಲ್ಲದೆ ಲಕ್ಷಾಂತರ ಜನ ಸಂಕಟಪಡುತ್ತಿರುತ್ತಾರೆ. ಹತ್ತರಲ್ಲಿ ಎಂಟು ಜನಕ್ಕೆ ಸಾಕಷ್ಟು ಪೌಷ್ಟಿಕ ಆಹಾರವಿಲ್ಲ. ಪರಿಸ್ಥಿತಿ ಹೀಗಿರುವಾಗ ಸ್ತ್ರೀಯರು ಆಭರಣ ತೊಡುವುದು ಪಾಪಕರ. ಅಪರಾಧ. ಹೃದಯಕ್ಕೂ ದೃಷ್ಟಿಗೂ ಕೆಡುಕು. ಆದ್ದರಿಂದ ಒಡವೆ ತೊಡುವುದು ಉಚಿತವಲ್ಲ. ಆಭರಣ ಸ್ತ್ರೀಧನ. ಇದು ಸ್ತ್ರೀಯ ಮಾಲು. ಒಡವೆಗೆ ಒಡತಿ ಅವಳೇ. ಆದರೂ ಪತಿಯ ಪರವಾನಿಗೆ ಪಡೆದು ನನಗೆ ಕಳಚಿಕೊಡಿ. ನಾನು ದರಿದ್ರನಾರಾಯಣನ ಪ್ರತಿನಿಧಿ. ನಾನು ಹಸಿದಿದ್ದೇನೆ. ಇಂಗಲಾರದ ಹಸಿವು. ಈ ತುತ್ತಿನ ಚೀಲ ಇನ್ನೂ ತುಂಬಿಲ್ಲ. ಹಸಿದ ಹೊಟ್ಟೆಗೆ ಹಾಕುತ್ತಲೇ ಇರಬೇಕು. ಗುಡಾಣದಂಥ ಹೊಟ್ಟೆ. ಇದನ್ನು ತುಂಬಲು ಏನಾದರೂ ಕೊಡಿ. ಭಾರತದಲ್ಲಿ ಎಲ್ಲಿ ಹೋದರೂ ಇದೇ ಧಾಟಿಯ ಬೇಡಿಕೆ. ಬೆಂಗಳೂರಿಗೆ ಬಂದರು. ಮಹಿಳಾ ಸಮಾಜದಲ್ಲಿ ಮಹಿಳೆಯರ ಪ್ರತ್ಯೇಕ ಸಭೆ. ಹಾರ ಹಾಕಿದರು. ಅಲ್ಪ ನಿಧಿ ಅರ್ಪಿಸಿದರು. ಆದರೆ ಇದರಿಂದ ಅವರು ತೃಪ್ತರಾಗಲಿಲ್ಲ. ತಮ್ಮ ಕೊರಳಿಗೆ ಹಾಕಿದ ಹಾರ ಹರಾಜು ಮಾಡಿದರು. ಬಾಡಿ ಹೋಗುವ ಪುಷ್ಪಾಹಾರ ಕೊಳ್ಳಲು ನಾನು ತಾನೆಂದು ದೇವರ ಪ್ರಸಾದಕ್ಕೆ ಕೈ ಚಾಚುವಂತೆ ಪೈಪೋಟಿ ನಡೆಸುತ್ತಿದ್ದರು. ಅಷ್ಟು ಭಕ್ತಿ ಜನಕ್ಕೆ ಅವರಲ್ಲಿ. ಇದು ಸಾಲದು ಇನ್ನೂ ಕೊಡಿ. ನಮ್ಮ ಕೈಗೆ ಅದೆಷ್ಟು ಜೋಡಿ ಬಂಗಾರದ ಬಳೆ ತೊಡಿಸಿರುವಿರಿ. ನನಗೊಂದು ಕೊಡಿ. ಉಂಗುರ, ಮೂಗುತಿ, ಸರಪಳಿ ಏನಾದರೂ ಕೊಡಿ. ಇದರಿಂದ ಬಂದ ಹಣವನ್ನು ಸದ್ವಿನಿಯೋಗ ಮಾಡುತ್ತೇನೆ. ಹರಿಜನರಿಗಾಗಿ ವಿನಿಯೋಗಿಸುತ್ತೇನೆ. ಮನ ಕರಗಿಸುವ ಇವರ ಮಾತುಗಳಿಂದ ಮರುಳಾದ ಮಹಿಳೆಯರು ಮರುಗಿ ತಮ್ಮ ಆಭರಣ ಬೆಂಗಳೂರಿನ ಮಹಿಳೆಯರು ಕಳಚಿಕೊಟ್ಟರು. ಇದರಂತೆಯೇ ಇತರ ನಗರಗಳಲ್ಲೂ ನಡೆಯಿತು. ಈ ಆಭರಣಗಳನ್ನು ಲಿಲಾವು ಮಾಡಿ ಬಂದ ಹಣವನ್ನು ಹರಿಜನ ನಿಧಿಗೆ ಸೇರಿಸುತ್ತಿದ್ದರು.

ಹರಿಜನ ನಿಧಿಗಾಗಿ ಪ್ರವಾಸ ಮಾಡುತ್ತ ಫೆಬ್ರವರಿ 1934ರಲ್ಲಿ ಕೇರಳದ ಬಡಗಾರ ಗ್ರಾಮಕ್ಕೆ ಗಾಂಧೀಜಿ ಬಂದರು. ದೊಡ್ಡ ಸಭೆ ನೆರೆದಿತ್ತು. ಮಲಯಾಳ ಮಹಿಳೆಯರ ರಾಜ್ಯ. ಸ್ತ್ರೀಯರಿಗೆ ಇಲ್ಲಿ ಸ್ವಾತಂತ್ರ್ಯ ಅಧಿಕ. ಎಲ್ಲೆಲ್ಲೂ ಮಾಡುತ್ತಿದ್ದ ಭಾಷಣವೇ ಇಲ್ಲೂ. ನಿಮ್ಮ ಆಭರಣ ಕಳಚಿಕೊಡಿ. ಹರಿಯ ಮಕ್ಕಳಾದ ಹರಿಜನರ ಏಳ್ಗೆಗಾಗಿ ಅದನ್ನು ಬಳಸುತ್ತೇನೆ. ಯಾರು ಮುಂದು ಬರುವರೋ ನೋಡೋಣವೆಂದು ಒಬ್ಬರ ಮುಖ ಒಬ್ಬರು ನೋಡುತ್ತಿದ್ದರು. ನೋಡುತ್ತಿದ್ದಂತೆಯೇ ಹದಿನಾರು ಹರೆಯದ ಒಬ್ಬ ತರುಣಿ ವೇದಿಕೆ ಹತ್ತಿ ಬಾಪು ಹತ್ತಿರ ಬಂದಳು. ತನ್ನ ನೋಟು ಪುಸ್ತಕ ಮುಂದಿಟ್ಟು ಹಸ್ತಾಕ್ಷರ ಬೇಡಿದಳು. ತಮ್ಮ ಹಸ್ತಾಕ್ಷರಕ್ಕೆ ರುಸುಂ ಅವರು ಬೇಡುತ್ತಾರೆಂದು ತಿಳಿದಿದ್ದಳು. ಅದನ್ನು ನಿರೀಕ್ಷಿಸಿ ಅವರು ಕೇಳುವ ಮೊದಲೇ ತನ್ನ ತೆಳ್ಳನೆ ಕೈಯಿಂದ ಒಂದು ಭಂಗಾರದ ಬಳೆ ತೆಗೆದು ಅವರ ಮುಂದಿಟ್ಟಳು. ಬಾಪೂಜಿ ಪುಸ್ತಕದಲ್ಲಿ ಸಹಿ ಹಾಕಿದರು. ಬಳೆ ಯಾವಾಗಲೂ ಜೋಡಿ, ಒಂಟಿಯಲ್ಲ. ಒಂಟಿ ಬಳೆ ದಾನ ಕೊಟ್ಟು ಒಂಟಿ ತಾನು ಇಟ್ಟುಕೊಳ್ಳುವುದು ಅವಳಿಗೆ ಸರಿದೋರಲಿಲ್ಲ. ಇನ್ನೊಂದು ಬಳೆಯನ್ನೂ ತೆಗೆದುಕೊಟ್ಟಳು. "ಯಾಕಮ್ಮಾ, ಎರಡು, ಒಂದೇ ಸಾಕಾಗಿತ್ತು. ಒಂದಕ್ಕೇ ನಾನು ಹಸ್ತಾಕ್ಷರ ಕೊಡುತ್ತಿದ್ದೆ. ಒಂದು ನಿನಗೆ, ಇನ್ನೊಂದು ನನಗೆ. ಎರಡೂ ಸೇರಿ ಜೋಡಿ. ನಾವಿಬ್ಬರೂ ಜೋಡಿ" ಎಂದು ಹಾಸ್ಯ ಮಾಡಿದರು. ಆದರೆ ಕೌಮುದಿ ಇದರಿಂದ ತೃಪ್ತಳಾಗಲಿಲ್ಲ. ಕತ್ತಿನಲ್ಲಿದ್ದ ಚಿನ್ನದ ಸರಕ್ಕೆ ಕೈ ಹಾಕಿ ತೆಗೆಯತೊಡಗಿದಳು. ಅವಳ ನೀಳ ಕೇಶದಲ್ಲಿ ಸರ ಸಿಲುಕಿಕೊಂಡಿತ್ತು. ಹೇಗೋ ಸಿಕ್ಕು ಬಿಡಿಸಿ ಸರ ತೆಗೆದು ಬಾಪುಗೆ ಅರ್ಪಿಸಿದಳು. ಈ ದೃಶ್ಯ ನೋಡುತ್ತಿದ್ದ ಜನ ಬೆಕ್ಕಸ ಬೆರಗಾದರು. ನಮ್ಮ ಊರಿನಲ್ಲೂ ಇಂಥ ಒಬ್ಬ ಹುಡುಗಿ ಇರುವಳಲ್ಲಾ ಎಂದು ಸಂತೋಷದಿಂದ ಚಪ್ಪಾಳೆ ತಟ್ಟಿದರು. ಆದರೆ ಕೌಮುದಿನಿಯ ಸ್ವಾರ್ಥತ್ಯಾಗದ ಕೊಡ ಇನ್ನೂ ತುಂಬಿರಲಿಲ್ಲ. ಕಿವಿಯಲ್ಲಿದ್ದ ಓಲೆಗಳಿಗೆ ಕೈ ಹಾಕಿದಳು. ತಿರುಪು ತಿರುವಿ ಒಂದೊಂದಾಗಿ ಎರಡು ಓಲೆಗಳನ್ನೂ ತೆಗೆದಳು. ಬಾಪೂಜಿ ಮುಂದಿಟ್ಟಳು. ಬಾಪೂಜಿ ಸುಲಭವಾಗಿ ಬೆರಗಾಗುವರಲ್ಲ. ಅವರ ಕಣ್ಣುಗಳಿಂದ ಆನಂದ ಬಾಷ್ಪಗಳು ಹನಿದವು. ಇವೆಲ್ಲವನ್ನೂ ನೋಡುತ್ತಿದ್ದ ಜನ ಜಯಕಾರ ಮಾಡಿದರು. ಚಪ್ಪಾಳೆ ತಟ್ಟಿದ್ದೇ ತಟ್ಟಿದ್ದು ತಮ್ಮ ಸಂತೋಷ ವ್ಯಕ್ತಪಡಿಸಲು.

ಇನ್ನೊಂದು ವಿಶೇಷ. ಕೌಮುದಿಯ ತಂದೆ ಬಹುಮಾನವಾಗಿ ಬಂದ ವಸ್ತುಗಳನ್ನು ಅಲ್ಲಿಯೇ ಲಿಲಾವು ಮಾಡುತ್ತಿದ್ದರು. ತನ್ನ ಮಗಳು ತನ್ನ ಅನುಮತಿ ಇಲ್ಲದೆ ಆಭರಣಗಳನ್ನೆಲ್ಲ ಕೊಟ್ಟುಬಿಡುತ್ತಿದ್ದಾಳಲ್ಲ ಎಂದು ಅವರು ಕೋಪಗೊಳ್ಳಲಿಲ್ಲ,ಕಿಡಿಕಿಡಿ ಆಗಲಿಲ್ಲ. ಮಗಳ ತ್ಯಾಗದಿಂದ ಅವರು ಸಂತೋಷಭರಿತರಾದರು. ಬಾಪೂಗೆ ಇದರ ಅರಿವು ಇರಲಿಲ್ಲ. ಕೌಮುದಿಯನ್ನು ಹತ್ತಿರಕ್ಕೆ ಕರೆದು ಒಡನೆ ಕೊಡಲು ನಿಮ್ಮ

ತಂದೆಯ ಅನುಮತಿ ಪಡೆದಿರುವೆಯಾ? ಎಂದು ಕೇಳಿದರು. ಅಲ್ಲಿದ್ದ ಜನ ಲಿಲಾವು ಮಾಡುತ್ತಿರುವವರು ಕೌಮುದಿಯ ತಂದೆ ಎಂದು ತಿಳಿಸಿದರು. ಇಂದಿನ ಸಭೆಯ ವ್ಯವಸ್ಥೆ ಮಾಡಿರುವವರು ಅವರೇ. ಉದಾರ ದಾನಿ ಎಂದು ಈ ಭಾಗದಲ್ಲಿ ಖ್ಯಾತಿ ಗಳಿಸಿದ್ದಾರೆ. ಬಾಪುವಿನ ಅಚ್ಚರಿ ಮತ್ತು ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಎಂಥ ತ್ಯಾಗದ ಸಮಾಗಮ. ತಂದೆ ಮಗಳ ತ್ಯಾಗದ ಸಂಗಮ. ನದೀ ಸಂಗಮ ಪುಣ್ಯ ತೀರ್ಥವೆಂದು ಹಿಂದೂಗಳು ಭಾವಿಸುತ್ತಾರೆ. ಅಂತೆಯೇ ಈ ತ್ಯಾಗದ ಬೆಲೆಯು ಇಮ್ಮಡಿಸಿದೆ. ಇದನ್ನು ಕೊಳ್ಳುವವರು ಪುಣ್ಯವಂತರು, ಎಂದು ಪ್ರಶಂಸಿಸಿದರು ಗಾಂಧೀಜಿ. ಆದ್ದರಿಂದ ಕೌಮುದಿಯ ಆಭರಣಗಳು ಅವುಗಳ ಸಾಚಾ ಬೆಲೆಗಿಂತ ಹೆಚ್ಚು ಬೆಲೆ ತಂದುವು.

ಮಗೂ, ಬಾ ಎಂದು ಕೌಮುದಿಯನ್ನು ಸಮೀಪಕ್ಕೆ ಕರೆದರು. ಅಕ್ಕರೆಯಿಂದ ಅವಳ ತಲೆ ನೇವರಿಸಿದರು. ಇದ್ದ ಎಲ್ಲ ಆಭರಣ ಕೊಟ್ಟುಬಿಟ್ಟೆ. ಇನ್ನುಮೇಲೆ ಒಡವೆ ತೊಡುವುದಿಲ್ಲ ಎಂದು ವಚನ ಕೊಡುವಿಯಾ ಎಂದು ಕೇಳಿದರು. ಅವಳ ಪುಸ್ತಕ ಮತ್ತೆ ತೆಗೆದುಕೊಂಡರು. ನೀನು ಕೊಟ್ಟ ಒಡವೆಯ ಬೆಲೆ ಕಡಮೆ ಏನೂ ಇಲ್ಲ. ಆದರೆ ನಿನ್ನ ತ್ಯಾಗದ ಬೆಲೆ ಅದಕ್ಕಿಂತ ಹಿರಿದು, ಅಮೌಲ್ಯ. ಇಷ್ಟೆಂದು ಬೆಲೆ ಕಟ್ಟಲು ಸಾಧ್ಯವಿಲ್ಲ, ಹೀಗೆಂದು ಮುಕ್ತಕಂಠದಿಂದ ಕೌಮುದಿಯ ತ್ಯಾಗ ಮನಸಾರೆ ಕೊಂಡಾಡಿದರು. ಅಂತೆಯೇ ಪುಸ್ತಕದಲ್ಲಿ ಬರೆದರು.

ಕೌಮುದಿ ಅವಳ ತಂದೆಯ ಕಥೆ ಇಷ್ಟರಿಂದಲೇ ಪೂರ್ಣವಾಗಲಿಲ್ಲ. ಬಾಪೂಜಿ ಪ್ರವಾಸದ ಕೇರಳದ ಕಡೆಯ ಊರು ಕೋಜಿಕೊಡೆಗೆ ತಂದೆ ಮಕ್ಕಳಿಬ್ಬರೂ ಹೋದರು. ಬಾಪುವನ್ನು ಬೀಳ್ಕೊಡಲು ಅವರು ಬಂದಿದ್ದರು. "ಏನಮ್ಮಾ ಮಗು, ಆಭರಣ ಕೊಟ್ಟುಬಿಡಲು ಮೊದಲೇ ತೀರ್ಮಾನಿಸಿದ್ದಿಯಾ ಅಥವಾ ಭಾವನಾಪರ ವಶಳಾಗಿ ಕ್ಷಣಕಾಲ ಮೈಮರೆತುಕೊಟ್ಟುಬಿಟ್ಟೆಯಾ?" ಕುತೂಹಲದಿಂದ ಕೇಳಿದರು. ''ಒಡವೆ ಕೊಡಲು ಅವಳು ಮೊದಲೇ ತೀರ್ಮಾನಿಸಿದ್ದಳು. ನಮ್ಮ ಅನುಮತಿ ತೆಗೆದುಕೊಂಡಿದ್ದಳು," ಹೀಗೆ ತಂದೆ ಉತ್ತರಿಸಿದರು.

ಕೌಮುದಿಯಿಂದ ಅವಳ ತ್ಯಾಗದ ಕಾರಣ ತಿಳಿಯಬೇಕು. ಇದು ಅವರ ಉದ್ದೇಶವಾಗಿತ್ತು. ಆದ್ದರಿಂದ ಮತ್ತೆ ಕೇಳಿದರು, "ಏನಮ್ಮಾ ಕೌಮುದಿ, ಬಳೆ, ಸರ, ಓಲೆ ಎಲ್ಲ ತೆಗೆದುಕೊಟ್ಟುಬಿಟ್ಟೆಯಲ್ಲಾ. ಕೈ, ಕಂಠ, ಕಿವಿ ಎಲ್ಲ ಬೋಳು, ಬೋಳು. ಇದನ್ನು ನೋಡಿ ನಿನ್ನ ತಾಯಿಗೆ ದುಃಖವಾಗುವುದಿಲ್ಲವೇ?"

ಕೌಮುದಿ ಉತ್ತರಿಸಿದಳು. ನಿಜ, ನಮ್ಮ ತಾಯಿಗೆ ದುಃಖವೇ ಆದೀತು. ಆದರೆ, ಆಭರಣ ತೊಡೂಂತ ಮತ್ತೆ ಅವಳು ಖಂಡಿತ ನನ್ನನ್ನು ಒತ್ತಾಯ ಮಾಡಲಾರಳು.

ಇಷ್ಟಕ್ಕೇ ಬಾಪು ಬಿಡಲಿಲ್ಲ. "ನೀನು ಮದುವೆ ಆದಮೇಲೆ ವಯಸ್ಸಿಗೆ ಬರುತ್ತಲೇ ನಿನ್ನ ವಿವಾಹ ಆಗುವುದು ಖಂಡಿತ. ನಿನ್ನ ಪತಿ ಒಡವೆ ಧರಿಸುವಂತೆ ಒತ್ತಾಯ ಪಡಿಸಿದರೆ ಮಾಡುವೆ ಏನು ?"

ಸ್ತ್ರೀಯರಿಗೆ ಸ್ವಾಭಾವಿಕವಾದ ನಾಚಿಕೆಯಿಂದ ಅವಳ ಗಲ್ಲ ಕೆಂಪೇರಿತು, ಮುಖ ವಿವರ್ಣವಾಯಿತು. ತಲೆ ತಗ್ಗಿಸಿ ಮೌನ ತಾಳಿದಳು. ಮಹಾತ್ಮರು ಮಾತು ಮುಂದುವರಿಸಿದರು. "ನೋಡು, ಕೌಮುದಿ, ನಾನೊಂದು ನೈತಿಕ ಸಂಕಟಕ್ಕೆ ಸಿಲುಕಿಕೊಂಡಿರುವೆ. ನಿನ್ನ ಅದ್ಭುತ ತ್ಯಾಗ ಕುರಿತು ಹರಿಜನ ಪತ್ರಿಕೆಯಲ್ಲಿ ಹೊಗಳಿ ಬರೆದಿರುವೆ. ಹೊಗಳಿಕೆಗೆ ಯೋಗ್ಯವಾದುದು ನಿನ್ನ ಅಪೂರ್ವ ತ್ಯಾಗ. ಇನ್ನೊಂದು ವಾಕ್ಯವನ್ನು ಸೇರಿಸಿರುವೆ, ಇನ್ನು ಮುಂದೆ ನೀನು ಆಭರಣ ತೊಡುವುದಿಲ್ಲವೆಂದು. ಇದಕ್ಕೆ ನೀನು ಸಿದ್ಧಳಿಲ್ಲದಿದ್ದರೆ, ಈ ವಾಕ್ಯ ತೊಡೆದು ಹಾಕಿಬಿಡಬೇಕಾದೀತು. ಅಥವಾ ನಿನ್ನ ಭಾವೀ ಪತಿಯ ಒತ್ತಾಯಕ್ಕೆ ಮಣಿಯದ ದೃಢ ಸಂಕಲ್ಪ ಮಾಡಬೇಕಾದೀತು. ನೀನು ಕೇರಳದ ಬಾಲೆ, ಧೈರ್ಯಶಾಲಿ, ಈ ರೀತಿಯಲ್ಲಿ ನಡೆದುಕೊಳ್ಳುವ ಎದೆಗಾರಿಕೆ ನಿನಗಿದೆ ಎಂದು ನಾಬಲ್ಲೆ. ಅಥವಾ ಆಭರಣವಿಲ್ಲದಿದ್ದರೂ ಬಾಧಕವಿಲ್ಲ ಎಂಬ ಪತಿಯನ್ನು ನೀನು ಪಡೆಯಬೇಕಾದೀತು. ನಿನಗೇನೆನಿಸುತ್ತದೆ. ನಾಚಿಕೆ ಪಡದೆ ನಿಸ್ಸಂಕೋಚವಾಗಿ ಹೇಳು."

ಕೌಮುದಿ ಒಳ್ಳೆಯ ಸಂಕಟಕ್ಕೆ ಸಿಲುಕಿಕೊಂಡಳು. ಬಾಪು ಕೇಳಿದ ಪ್ರಶ್ನೆ ಸರಳವಲ್ಲ. ತುಂಬ ಜಟಿಲ. ಹೆಣ್ಣು ಮಕ್ಕಳಿಗೆ ತಮಗೆ ಬೇಕಾದ ವರನನ್ನು ವಿವಾಹ ಮಾಡಿಕೊಳ್ಳುವ ಅವಕಾಶವುಂಟೆ ? ಒಂದು ಕಾಲದಲ್ಲಿ ಸ್ವಯಂವರ ಪದ್ಧತಿ ಇದ್ದಿರಬಹುದು. ಈ ಪದ್ಧತಿ ಕ್ಷತ್ರಿಯರಲ್ಲಿ ಮಾತ್ರ ಆಚರಣೆಯಲ್ಲಿತ್ತು. ಕೌಮುದಿ ಸ್ವಲ್ಪ ಕಾಲ ಮನದಲ್ಲಿಯೇ ಚಿಂತಿಸಿದಳು. ತದನಂತರ ದೃಢ ಮನಸ್ಸಿನಿಂದ ಹೇಳಿದಳು. "ಆಭರಣ ತೊಡುವಂತೆ ನಿರ್ಬಂಧಪಡಿಸದ ವರನನ್ನು ನಾನು ವರಿಸುವೆ."

ಕೌಮುದಿಯ ತಂದೆ ಮತ್ತು ಭಾರತದ ಬಾಪು ಇಬ್ಬರೂ ಹರ್ಷದಿಂದ ತಲೆದೂಗಿದರು. ಈ ಸಂದರ್ಭಕ್ಕೆ ಅನುಗುಣವಾಗಿ ಹಿಂದೆ ನಡೆದ ಮತ್ತೊಂದು ಘಟನೆ ಮನಸ್ಸಿಗೆ ತಂದುಕೊಂಡರು. ಆಂಧ್ರದ ಅನ್ನಪೂರ್ಣ ಮಹಾತ್ಮರ ಸಂದೇಶದಂತೆ, ಆಭರಣ ತ್ಯಜಿಸಿ, ಇನ್ನು ಮುಂದೆ ಆಭರಣ ತೊಡುವುದಿಲ್ಲವೆಂದು ವಚನ ಕೊಟ್ಟಿದ್ದಳು. ಮರಣ ಪರ್ಯಂತ ಕೊಟ್ಟ ವಾಕ್ಯದಂತೆಯೇ ನಡೆದುಕೊಂಡಳು. ಈಗ ಕೇರಳದ ಕೌಮುದಿ ಅವಳ ಸ್ಥಾನ ತೆಗೆದುಕೊಂಡಿದ್ದಾಳೆ. ನನ್ನ ಜೀವಮಾನದಲ್ಲಿ ಅನೇಕ ಅಪೂರ್ವ ಘಟನೆಗಳನ್ನು ನಾನು ಕಂಡಿರುವೆ. ಆದರೆ ಹರಿಜನರಿಗಾಗಿ ಈ ಬಗೆಯ ಅದ್ಭುತ ಪವಾಡ ಸದೃಶ ಸ್ವಾರ್ಥತ್ಯಾಗ ಮಾಡಿರುವ ನಿದರ್ಶನ ಮತ್ತೊಂದು ಇದುವರೆಗೂ ಸಂಭವಿಸಿಲ್ಲ. ಹೀಗೆ ಗಾಂಧೀಜಿ ಎಲ್ಲ ಭಾಷಣಗಳಲ್ಲೂ ಕೌಮುದಿಯ ತ್ಯಾಗ ಉದಹರಿಸುತ್ತಿದ್ದರು.

ಮಹಿಳೆಯರ ಹೊಳಪಿನ ಕೇಶರಾಶಿಗೆ ಪ್ರಸಿದ್ಧವಾದ ಕೇರಳದ ಕೌಮುದಿಯ ಕಥೆಗೆ ಸಾದೃಶವಾದುದು ಬೆಡಗಿನ ಕನ್ನಡದ ಕೊಡಗಿನ ಬಿಂಕದ ಕಥೆ. ಕೊಡಗು ಕಾಡಿನ ಬೆಟ್ಟಗಳ ಬೀಡು. ರಮ್ಯ ನಾಡು. ಕಾಫಿ, ಕಿತ್ತಲೆ, ಏಲಕ್ಕಿ, ಬಾಳೆ, ಮಧು ಮೊದಲಾದ ಮಲೆನಾಡಿನ ಉತ್ಪನ್ನಗಳಿಗೆ ಪ್ರಸಿದ್ಧವಾದುದು. ಕಾವೇರಿ ಹುಟ್ಟಿ ಹರಿವ ನಾಡು. ಗಾಂಧೀಜಿ ಗುಂಡುಗಟ್ಟೆಯಲ್ಲಿ ತಂಗಿದ್ದರು. ಅಲ್ಲಿಯೇ ಗೌರಮ್ಮನ ಮನೆ. ತಮ್ಮ ಮನೆಗೆ ಮಹಾತ್ಮರನ್ನು ಬರಮಾಡಿಕೊಳ್ಳುವ ಆಸೆ ಗೌರಮ್ಮನಿಗೆ. ಸ್ವಾಗತ ಸಮಿತಿ ಇದಕ್ಕೆ ಅವಕಾಶ ಕೊಡಲಿಲ್ಲ. ಈಕೆಗೆ ತುಂಬ ನೋವಾಯಿತು. ಊಟ ತಿಂಡಿ ಬೇಡವಾಯಿತು. ಅನ್ನ ನೀರು ಮುಟ್ಟಲಿಲ್ಲ. ಬೆಳಗಿನಿಂದ ಉಪವಾಸ. ಈ ಸುದ್ದಿ ಗಾಂಧೀಜಿಗೆ ಹೇಗೋ ಮುಟ್ಟಿತು. ಗಾಂಧಿಯವರ ಬಿಡಾರಕ್ಕೆ ಗೌರಮ್ಮ ಬಂದಳು. ಈ ಉಪವಾಸ ಏಕಮ್ಮಾ ತಾಯಿ ಎಂದರು. ಅವಳಿಗೆ ಮಾತೇ ಆಡಲಾಗಲಿಲ್ಲ. ಅಳ ತೊಡಗಿದಳು. ಅಳುತ್ತಾ ಹೇಳಿದಳು, "ನೀವು ನಮ್ಮ ಮನೆಗೆ ಬರಲಿ ಅಂತ. ನಿಮ ಗಾಗಿ ಕೆಲವು ಒಡವೆ ತೆಗೆದು ಇಟ್ಟದ್ದೇನೆ." "ಹೀಗೆ ಚಂಡಿ ಹಿಡಿಯಬಾರದು. ಮೊದಲು ಉಪವಾಸ ನಿಲ್ಲಿಸು" ಎಂದರು. ಗಾಂಧೀಜಿ.

"ಬರುವಿರಾ, ಬರುತ್ತೇನೆ ಎಂದು ಮಾತು ಕೊಡಿ. ಉಪವಾಸ ನಿಲ್ಲಿಸುತ್ತೇನೆ."

"ಮಾತುಕೊಡಿ ಎಂದು ಕೇಳಬೇಡ ತಂಗಿ. ತೆಗೆದುಕೋ ಈ ಕಿತ್ತಲೆಹಣ್ಣು. ತಿನ್ನು. ಹಟ ಮಾಡಬೇಡ. ವ್ಯಾಪಾರ ಮಾಡಬೇಡ. ಷರತ್ತು ಹಾಕಬೇಡ. ಮೊದಲು ಹಣ್ಣು ತಿನ್ನು. ನನ್ನಲ್ಲಿ ನಂಬುಗೆ ಇಡು. ಪ್ರೇಮದ ಶಕ್ತಿ ಅಪಾರ. ಅದರಲ್ಲಿ ವಿಶ್ವಾಸ ಇಡು."

ಮಾತು ಕೊಟ್ಟಂತೆಯೇ ಆಯಿತು. ಇದು ಗೌರಮ್ಮನಿಗೆ ಅರ್ಥವಾಗಲಿಲ್ಲ. ಹಣ್ಣು ಮುಟ್ಟಲಿಲ್ಲ. ಮೀರಾ ಹತ್ತಿರ ನಿಂತಿದ್ದಳು. ಹಣ್ಣು ಸುಲಿದು ಕೊಟ್ಟಳು. ಬರುತಾರೆ ತೆಗೆದುಕೋ ಎಂದಳು. ಆಗಲೂ ಗೌರಮ್ಮನಿಗೆ ಅನುಮಾನ. "ನಿಜ ವಾಗಿಯೂ ಬರುವಿರಾ" ಎಂದು ಮತ್ತೆ ಕೇಳಿದಳು.

"ಬರುತ್ತೇನೆ, ಆದರೆ ಕೊಟ್ಟ ಆಭರಣ ಮತ್ತೆ ತೊಡಬಾರದು" ಎಂದರು. ಆಗಲಿ ಎಂದಳು ಗೌರಮ್ಮ. ಈ ಮಾತು ಕೊಟ್ಟಾಗ ಗೌರಮ್ಮನಿಗೆ ಇಪ್ಪತ್ತೊಂದು ವರ್ಷ ವಯಸ್ಸು. ವಿವಾಹ ಆಗಿತ್ತು. ಇದೆಲ್ಲ ನೋಡುತ್ತ, ಕೇಳುತ್ತ, ಗಂಡ ಗೋಪಾಲ ಕೃಷ್ಣಯ್ಯ ಅಲ್ಲಿಯೇ ಇದ್ದರು.

"ಒಡವೆ ಕೊಡಲು ನಿಮ್ಮ ಅನುಮತಿ ಉಂಟೇ" ಎಂದು ಗಾಂಧೀಜಿ ಕೇಳಿ ದರು." "ಒಡವೆ ಅವಳಿಗೆ ಸೇರಿದ್ದು. ಮನ ಬಂದಂತೆ ಮಾಡಲಿ. ನನ್ನ ಆಕ್ಷೇಪಣೆ ಏನೂ ಇಲ್ಲ. ನಾನೂ ಸಮ್ಮತಿಸುತ್ತೇನೆ." ಸತಿಪತಿಯರನ್ನು ಸಂತೋಷಪಡಿಸಲು

ಗಾಂಧೀಜಿ ಅವರ ಮನೆಗೆ ಹೋದರು. ಕೊಟ್ಟ ಒಡವೆ ಸ್ವೀಕರಿಸಿದರು. ಮಹಾತ್ಮರು ಮನೆಗೆ ಬಂದು ಕೊಟ್ಟ ಒಡವೆ ಸ್ವೀಕರಿಸಿ ತಮ್ಮ ಪಾದ ಧೂಳಿಯಿಂದ ನಮ್ಮ ಮನೆ ಪುನೀತಗೊಳಿಸಿರುತ್ತಾರೆ ಎಂದು ಸತಿಪತಿ ಹಿಗ್ಗಿದರು. ಒಡವೆ ಹೋಯಿತಲ್ಲಾ ಎಂದು ದುಃಖಿಸಲಿಲ್ಲ. ತ್ಯಾಗದ ಮಹಿಮೆ, ಮಹಾತ್ಮರ ಮಹಿಮೆ ಅಂಥದು.

ಬೆಟ್ಟದ ತುದಿಯ ಮಡಿಕೇರಿಯಿಂದ ಸಮುದ್ರತೀರದ ಮಂಗಳೂರು, ಉಡುಪಿ ವರೆಗೂ ಪ್ರಯಾಣ ಬೆಳಸಿದರು. ದಾರಿಯ ಉದ್ದಕ್ಕೂ ಜನ ಇವರ ಮೋಟಾರನ್ನು ತಡೆದು ನಿಲ್ಲಿಸಿ ಕಾಣಿಕೆ ಅರ್ಪಿಸುತ್ತಿದ್ದರು. ಪುತ್ತೂರಿನಲ್ಲಿ ಒಬ್ಬ ಹುಡುಗಿ ತನ್ನ ಬೆರಳಿನಿಂದ ಉಂಗುರ ತೆಗೆದುಕೊಟ್ಟಳು. ಉಂಗುರ ಬೆರಳಿಗೆ ಬಿಗಿಯಾಗಿತ್ತು. ಸುಲಭವಾಗಿ ಬರಲಿಲ್ಲ. ಅಂತೂ ಹೇಗೋ ಮಾಡಿ ಸಭೆ ಮುಗಿಯುವುದರೊಳಗಾಗಿ ತೆಗೆದುಕೊಟ್ಟಳು. ಕರ್ನಾಟಕದಿಂದ ಬರುವುದೆಲ್ಲವೂ ಗಟ್ಟಿಯೇ ಎಂದು ಹಾಸ್ಯ ಮಾಡಿದರು.

ಉಡುಪಿಯಲ್ಲಿ ನಿರುಪಮ ಪುಟ್ಟ ಹುಡುಗಿ ಹಿಂದೀ ಭಾಷೆಯಲ್ಲಿ ಬಿನ್ನವತ್ತಳೆ ಓದಿದಳು. ಗಾಂಧೀಜಿ ಪದ್ಧತಿಯಂತೆ ಒಡವೆ ಕೇಳಿದರು. ಕೈಬಳೆ, ಕತ್ತಿನ ಸರ ತೆಗೆದುಕೊಟ್ಟಳು. ಆದರೆ ಮುಖದಲ್ಲಿ ಸಂತಸವಿರಲಿಲ್ಲ. ಗಾಂಧೀಜಿ ಇದನ್ನು ಗಮನಿಸಿದರು. ಸಂತೋಷದಿಂದ ಕೊಡದ ಒಡವೆ ಬೇಡವೆಂದು ಹಿಂದಕ್ಕೆ ಕೊಟ್ಟರು. ನಿರುಪಮೆಯ ಮಾತಾಪಿತೃಗಳು ಇದನ್ನು ನೋಡಿದರು. ಮಗಳು ಆಭರಣದ ಆಸೆ ಬಿಡಬೇಕೆಂದು ಅವರ ಅಭಿಲಾಷೆ. ಮನಃಪೂರ್ವಕ ಒಡವೆ ಒಪ್ಪಿಸುವಂತೆ ಮಗಳ ಮನ ಒಲಿಸಿದರು. ನಿರುಪಮ ಮಾರನೇ ದಿನ ಗಾಂಧೀಜಿ ತಂಗಿದ್ದ ಸ್ಥಳಕ್ಕೆ ಬಂದು ಮತ್ತೆ ಒಡವೆ ಒಪ್ಪಿಸಿದಳು. ಆದರೂ ಅವರಿಗೆ ಪೂರ್ಣ ಸಮಾಧಾನವಾಗಲಿಲ್ಲ. ಕಾಣಿಕೆಯಾಗಿ ಒಂದೆರಡು ಇಟ್ಟುಕೊಂಡು, ಮಿಕ್ಕವನ್ನು ಹಿಂದಕ್ಕೆ ಕೊಡ ಹೋದರು. ಅವಳು ತೆಗೆದುಕೊಳ್ಳಲಿಲ್ಲ. ತಂದೆ ತಾಯಿ ಮಗಳ ಮನಕ್ಕೆ ಒಪ್ಪಿಗೆಯಾಗುವಂತೆ ಮಾಡಿರಬೇಕೆಂದು ಊಹಿಸಿದರು. ಕಸಿಯುವುದರಲ್ಲೂ ಒಂದು ನೀತಿ.

ವೈದ್ಯರು, ಪತ್ರಿಕೋದ್ಯಮಿಗಳು ಕೊಡುವ ವರ್ಗಕ್ಕೆ ಸೇರಿದವರಲ್ಲ. ಕಸಿಯುವ ಶ್ರೇಣಿಗೆ ಸೇರಿದವರು. ಅವರಿಂದಲೂ ಹಣ ಗಿಟ್ಟಿಸುವ ಸಾಮರ್ಥ್ಯ ಮಹಾತ್ಮರದು. ಗಾಂಧೀಜಿ ಒಮ್ಮೆ ಲಾಹೋರಿಗೆ ಹೋಗಿದ್ದರು. ಪಂಜಾಬ್ ಕೇಸರಿ ಎಂದು ಕೀರ್ತಿ ಗಳಿಸಿದ್ದ ದೇಶಭಕ್ತ ಲಾಲಾ ಲಜಪತರಾಯರ ಜನಸೇವಾ ಸಂಘದಲ್ಲಿ ತಂಗಿದ್ದರು. ಬಾಪು ದೇಹಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಅಲ್ಲದೆ ರೈಲು ಪ್ರಯಾಣದಿಂದ ತುಂಬ ಬಳಲಿದ್ದರು.

ಮಹಾತ್ಮರ ಆರೋಗ್ಯ ನೆಟ್ಟಗೆ ಇಲ್ಲವೆಂದು ಒಬ್ಬ ವೈದ್ಯನಿಗೆ ಗೊತ್ತಾಯಿತು. ಅವರನ್ನು ಪರೀಕ್ಷಿಸಲು ತಾನಾಗಿಯೇ ಧಾವಿಸಿ ಬಂದ. ತಮ್ಮ ದೇಹಸ್ಥಿತಿ ಕೆಟ್ಟಿದೆ

ಎಂದು ಕೇಳಿದೆ. ತಾವು ನಮ್ಮ ದೇಶದ ಭಾಗ್ಯ. ಚಿಕಿತ್ಸೆ ನೀಡಿ ಸರಿಪಡಿಸುವುದು ನಮ್ಮ ಕರ್ತವ್ಯ. ತಮ್ಮ ದೇಹಸ್ಥಿತಿ ಪರೀಕ್ಷಿಸಲು ಬಂದಿರುವೆ ಎಂದ. "ನನ್ನ ಆರೋಗ್ಯ ಏನೂ ಕೆಟ್ಟಿಲ್ಲ. ಚೆನ್ನಾಗಿಯೇ ಇದೆ" ಎಂದರು ಬಾಪು.

ಭಕ್ತಿ ಭಾವದಿಂದ ಕೂಡಿದ್ದ ವೈದ್ಯನಿಗೆ ಸಮಾಧಾನವಾಗಲಿಲ್ಲ. "ತಾವು ಹಾಗೆ ಹೇಳಬಹುದು. ನನ್ನ ಮನಸ್ಸಿಗೆ ಸಮಾಧಾನ ಆಗಬೇಕಲ್ಲ. ತಮ್ಮ ದೇಹಸ್ಥಿತಿ ಪರೀಕ್ಷಿಸುವವರೆಗೂ ನನಗೆ ಸಮಾಧಾನವಾಗದು" ಎಂದ ವೈದ್ಯ.

"ತಮಗೆ ಸಮಾಧಾನವಾಗಬೇಕಾದರೆ ಅದು ಪ್ರತ್ಯೇಕ ವಿಷಯ. ರೋಗಿ ಬಯಸಿದರಲ್ಲವೇ ವೈದ್ಯ ಪರೀಕ್ಷಿಸಬೇಕು. ನನಗೆ ಅದರ ಅಗತ್ಯ ಕಾಣುವುದಿಲ್ಲ. ನನ್ನನ್ನು ನೋಡಲು ಬಹಳ ಜನ ಕಾದಿದ್ದಾರೆ. ನನ್ನ ವೇಳೆ ಅಮೂಲ್ಯ. ನನ್ನ ಕೋರಿಕೆಯಂತೆ ತಾವು ನನ್ನನ್ನು ಪರೀಕ್ಷಿಸಿದರೆ ನಾನು ನಿಮಗೆ ರುಸುಂ ಕೊಡಬೇಕಾದೀತು. ಆದರೆ ತಮ್ಮ ಸಮಾಧಾನಕ್ಕಾಗಿ ನನ್ನ ದೇಹಸ್ಥಿತಿ ಪರೀಕ್ಷಿಸಲು ತಾವು ಅಪೇಕ್ಷಿಸುವುದಾದರೆ ತಾವೇ ನನಗೆ ಶುಲ್ಕ ಕೊಡಬೇಕಾಗುತ್ತದೆ" ಎಂದರು ಗಾಂಧೀಜಿ.

ಪಾಪ ವೈದ್ಯ ಒಳ್ಳೆ ಸಂಕಟಕ್ಕೆ ಸಿಕ್ಕಿಕೊಂಡ. ಒಂದು ಕಡೆ ಭಕ್ತಿ, ಗೌರವ. ಮಹಾತ್ಮರನ್ನು ಪರೀಕ್ಷಿಸಿದ ವೈದ್ಯ. ಈ ಹೆಸರುಗಳಿಸುವ ಸೌಭಾಗ್ಯ, ಕೀರ್ತಿ ಮತ್ತೊಂದು ಕಡೆ. ತನ್ನ ಕಿಸೆಗೆ ಕೈ ಹಾಕಿದ. 16 ರೂಪಾಯಿಗಳು ಇದ್ದವು. ಸ್ವಲ್ಪ ಕಾಲಕ್ಕೆ ಮೊದಲು ತಾನು ಪರೀಕ್ಷಿಸಿದ ಒಬ್ಬ ರೋಗಿ ಕೊಟ್ಟಿದ್ದ ಹಣ. ಇದು ಅಲ್ಪ. ಆದರೆ ನನ್ನ ಕಿಸೆಯಲ್ಲಿರುವುದು ಇಷ್ಟೇ. ದಯಮಾಡಿ ಸ್ವೀಕರಿಸಿ ಎಂದ.

ಬಾಪು ಅದನ್ನು ಸ್ವೀಕರಿಸಿ ಹರಿಜನ ನಿಧಿಗೆ ಜಮಾ ಮಾಡಿದರು. ದೇಹಸ್ಥಿತಿ ಪರೀಕ್ಷಿಸಲು ಅವನಿಗೆ ಅವಕಾಶ ಕೊಟ್ಟರು.

ಬಾಪು ಬಂದಲ್ಲಿ; ಸುದ್ದಿಗಾರರು ಬರುತ್ತಾರೆ. ಪ್ರಿಯ ಬಾಪುವಿನ ವಿಷಯ ತಿಳಿದುಕೊಳ್ಳುವ ಕಾತರ ಜನರಿಗೆ. ಅವರು ಏಳುವುದು, ಕೂಡುವುದು, ನಡೆಯುವುದು, ಮಾತನಾಡುವುದು, ಬರೆಯುವುದು ಎಲ್ಲವೂ ಸುದ್ದಿ. ಯಾರೊಡನೆ ಮಾತನಾಡಿದರು, ಏನು ಹೇಳಿದರು, ಏನು ಹೇಳುತ್ತಾರೆ, ಏನು ಬರೆದರು. ಮುಂದಿನ ಕಾರ್ಯಕ್ರಮವೇನು. ಎಲ್ಲಿಗೆ ಹೋಗಲಿದ್ದಾರೆ. ದೇಶಕ್ಕೆ ನೀಡಲಿರುವ ಸಂದೇಶವೇನು, ದೇಹಸ್ಥಿತಿ ಹೇಗಿದೆ. ಈ ಎಲ್ಲ ಸುದ್ದಿ ಜನಕ್ಕೆ ಮುಟ್ಟಿಸುವವರು ಸುದ್ದಿಗಾರರು, ಪತ್ರಿಕೆಗಳು. ಈ ಕಾರಣಗಳಿಂದ ಮಹಾತ್ಮರಿದ್ದಲ್ಲಿಗೆ ಸುದ್ದಿಗಾರರು ಬರುವುದು ಸಹಜ.

ಅಂತೆಯೇ ಸುದ್ದಿಗಾರರು ಬಂದರು. "ನನ್ನ ವಿಷಯ ಪತ್ರಿಕೆಗಳಲ್ಲಿ ಅಚ್ಚು ಹಾಕಿಸಿ ಹಣ ಗಳಿಸುತ್ತೀರಿ. ಆದ್ದರಿಂದ ನೀವೂ ನನಗೆ ಹಣ ಕೊಡಬೇಕಷ್ಟೆ"

ಎಂದರು ಗಾಂಧೀಜಿ. ಸುದ್ದಿಗಾರರು ಪೆಚ್ಚಾದರು. ತಮ್ಮ ಹೆಸರು, ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಲೆಂದು ಪತ್ರಿಕೆಗಳಿಗೆ ಹಣ ಕೊಡುವುದುಂಟು. ಆದರೆ ಈ ಮಹಾರಾಯ ನಮ್ಮಿಂದಲೇ ಹಣ ಗಳಿಸಬಯಸುತ್ತಾನೆ. ಈತ ಸಾಮಾನ್ಯ ಮುದುಕನಲ್ಲ. ಘಾಟಿ ಮುದುಕ. ಮಹಾತ್ಮರ ಬೇಡಿಕೆ ತಿರಸ್ಕರಿಸಲು ಯಾರಿಗೆ ತಾನೆ ಮನಸ್ಸು ಬಂದೀತು. ಅಲ್ಲಿ ನೆರೆದಿದ್ದ ಸುದ್ದಿಗಾರರು ತಮ್ಮ ತಮ್ಮಲ್ಲಿಯೇ ಹಣ ಕೂಡಿಸಿ ಕಾಣಿಕೆ ಒಪ್ಪಿಸಿದರು. ಎಲ್ಲರೂ ವೈದ್ಯನಿಗೆ ಮನಸಾರೆ ಕೈತುಂಬ ಹಣ ಕೊಡುತ್ತಾರೆ. ಆದರೆ ಈ ಮುದುಕ ವೈದ್ಯನಿಂದಲೇ ಹಣ ಗಿಟ್ಟಿಸುತ್ತಾನೆ. ಇದೇನೂ ಸಾಮಾನ್ಯ ವಿಷಯವಲ್ಲ. ಸುದ್ದಿಗಾರರು ಇತರರಿಂದ ಹಣ ಗಳಿಸುತ್ತಾರೆ. ಆದರೆ ನಮ್ಮಿಂದಲೇ ಈ ಮುದುಕ ಹಣ ವಸೂಲ್ಮಾಡಿದ. ನಾವು ಬಂದುದು ಸುದ್ದಿಗಾಗಿ. ನಮ್ಮಿಂದಲೇ ಇವರು ಸುದ್ದಿ ಸೃಜಿಸಿದರು. ನಮ್ಮಿಂದಲೇ ಹಣ ತೆಗೆದುಕೊಂಡರು. ನಾವೇ ಶರಣು ಹೊಡೆದೆವು. ಇದೂ ಸುದ್ದಿಯೇ. ಈತ ಸಾಮಾನ್ಯ ಮುದುಕನಲ್ಲ. ಮಹಾನ್ ಮುದುಕ. ಆದ್ದರಿಂದಲೇ ಮಹಾತ್ಮ ಎಂದು ಕೊಂಡಾಡುತ್ತಾ ನಗೆಯಾಡುತ್ತಾ ಹೊರಟರು. ಈ ವಿವರಗಳೆಲ್ಲ ಪತ್ರಿಕೆಗಳಲ್ಲಿ ಪ್ರಕಟವಾದುವು.

1937ರಲ್ಲಿ ಗಾಂಧೀಜಿ ಹಿಂದೀ ಸಾಹಿತ್ಯ ಸಮ್ಮೇಳನಕ್ಕೆ ರೈಲಿನಲ್ಲಿ ಹೊರಟಿದ್ದರು. ಗಾಡಿಯಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ನಸುಕಿನಲ್ಲಿ ಬೆಜವಾಡ (ವಿಜಯವಾಡಕ್ಕೆ) ಗಾಡಿ ಬಂದಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಚಂಡ ಜಯಗಳಿಸಿತ್ತು. ಕಾಂಗ್ರೆಸ್ ಅಧಿಕಾರ ಸ್ವೀಕರಿಸುವುದೋ, ಅಥವಾ ಅಸಹಕಾರ ತೋರುವುದೋ, ಈ ಪ್ರಶ್ನೆ ದೇಶದಲ್ಲಿ ಕುತೂಹಲ ಕೆರಳಿಸಿತ್ತು. ಗಾಂಧೀಜಿ ಇದಕ್ಕೆ ಉತ್ತರ ನೀಡಬಲ್ಲವರಾಗಿದ್ದರು. ಸಹಜವಾಗಿಯೇ ಸುದ್ದಿಗಾರರು ಈ ವಿಷಯ ಮಹಾತ್ಮರಿಂದ ತಿಳಿಯಲು ಉತ್ಸಾಹಿಗಳಾಗಿದ್ದರು.

ಬೆಜವಾಡಕ್ಕೆ ರೈಲು ಬರುತ್ತಲೇ ಸುದ್ದಿಗಾರರು ಅವರನ್ನು ಸುತ್ತುಗಟ್ಟಿದರು. "ಕಾಂಗ್ರೆಸ್ ಅಧಿಕಾರ ಸ್ವೀಕರಿಸಲಿದೆಯೇ, ಅಥವಾ ಅಸಹಕಾರ ಚಳವಳಿ ಹೂಡಲಿದೆಯೇ?" ಎಂದು ಒಬ್ಬ ಪತ್ರಿಕೋದ್ಯಮಿ ಪ್ರಶ್ನಿಸಿದ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸೇರಿ ವಿಷಯ ಪರ್ಯಾಲೋಚಿಸಬೇಕಾಗಿತ್ತು. ಅಗ್ರಗಣ್ಯ ನಾಯಕರೂ, ಮಾರ್ಗದರ್ಶಕರೂ ಆದ ಮಹಾತ್ಮರ ಮಾತಿಗೆ ಮರುಮಾತನಾಡುವ ಸಾಧ್ಯತೆ ಇರಲಿಲ್ಲ. ಆದರೂ ಶಿಸ್ತಿನ ಪರಿಪಾಠದ ಗಾಂಧೀಜಿ ಸಹಪಾಟಿಗಳೊಂದಿಗೆ ಸಮಾಲೋಚನೆ ನಡೆಸದೆ ಉತ್ತರ ನೀಡುವುದು ಸೂಕ್ತವಲ್ಲವೆಂದು ಅರಿತಿದ್ದರು. ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗುವ ಉಪಾಯ ಅವರಿಗೆ ಯಾರೂ ಹೇಳಿ ಕೊಡಬೇಕಾಗಿರಲಿಲ್ಲ. "ಏನು, ನೀವು ಮಂತ್ರಿಗಳಾಗಬಯಸುವಿರಾ?" ಎಂದು ಒಂದು ಚಟಾಕಿ ಹಾರಿಸಿದರು. ಎಲ್ಲರೂ ಘೊಳ್ಳೆಂದು ನಗುತ್ತಿದ್ದಂತೆಯೇ ಒಬ್ಬ ಪತ್ರಿಕಾ ಪ್ರತಿನಿಧಿಯ ತಲೆಯಮೇಲಿದ್ದ ಟೋಪಿ 'ಹ್ಯಾಟ್' ತೆಗೆದುಕೊಂಡರು. "ಎಲ್ಲಿ ನಿಮ್ಮ ಕಾಣಿಕೆ" ಎಂದು ಅವರ

ಮುಂದೆ ಟೋಪಿ ಹಿಡಿದರು. ಎಲ್ಲರಿಂದಲೂ ಹಣ ಕಸಿದುಕೊಳ್ಳುವುದರಲ್ಲಿ ನಿಷ್ಣಾತರಾದ ಪತ್ರಿಕೋದ್ಯಮಿಗಳು ವಿಧಿಯಿಲ್ಲದೆ ಪುಡಿ ಕಾಸುಗಳನ್ನು ಟೊಪ್ಪಿಗೆಯಲ್ಲಿ ಹಾಕಿದರು. "ಎಲ್ಲಿ ನಿಮ್ಮ ಭಾವೀ ಮಂತ್ರಿವರ್ಯ" ಎನ್ನುತ್ತಾ ತಮ್ಮನ್ನು ಪ್ರಶ್ನೆ ಕೇಳಿದ ಪತ್ರಿಕೋದ್ಯಮಿಯನ್ನು ಅರಸತೊಡಗಿದರು. ಇಂಗು ತಿಂದ ಮಂಗನಂತಾಗಿದ್ದ ಸುದ್ದಿಗಾರ ಗದ್ದಲದಿಂದ ಯಾವಾಗಲೊ ಕಾಲಿಗೆ ಬುದ್ಧಿ ಹೇಳಿದ್ದ.

1927ರಲ್ಲಿ ಒರಿಸ್ಸಾದಲ್ಲಿ ಪ್ರವಾಸ ಮಾಡುತ್ತ ಬೋಳಗಾರ ಗ್ರಾಮ ತಲುಪಿದರು. ನಾಗರೀಕತೆಯ ಸೋಂಕು ಈ ಗ್ರಾಮಕ್ಕೆ ತಗುಲಿರಲಿಲ್ಲ. ಅತಿ ಸಮೀಪದ ರೈಲ್ವೆ ಸ್ಟೇಷನ್ 31 ಮೈಲಿ ದೂರ. ಒಂದುದಿನ ಗಾಂಧೀಜಿ ಗುಡಿಸಲು ಹೊರಗೆ ದೀನಬಂಧು ಆಂಡ್ರೂಸ್ ಅವರೊಡನೆ ಮಾತನಾಡುತ್ತ ಕುಳಿತ್ತಿದ್ದರು. ಆಗ ಅರ್ಧ ಬಾಗಿದ್ದ ಲಂಗೋಟಿ ಧರಿಸಿದ್ದ ಒಬ್ಬ ವ್ಯಕ್ತಿ ಬಂದ. ಅವನು ದೀನತೆಯ ಅವತಾರವೇ ಆಗಿದ್ದ. ಬಂದವನು ಮೊದಲು ರೂಢಿಯಂತೆ ಕೈಜೋಡಿಸಿ ನಮಸ್ಕರಿಸಲಿಲ್ಲ. ತಲೆಯಲ್ಲಿ ಸಿಕ್ಕಿಸಿಕೊಂಡಿದ್ದ ಹುಲ್ಲುಕಡ್ಡಿ ತೆಗೆದು ಬಾಯಲ್ಲಿ ಇರಿಸಿಕೊಂಡ. ಸಾಷ್ಟಾಂಗ ಪ್ರಣಾಮಮಾಡಲು ನೆಲದಮೇಲೆ ಮುಖ ಕೆಳಗೆ ಮಾಡಿಕೊಂಡು ಮಲಗಿದ. ನಮಸ್ಕರಿಸಿದ. ಎದ್ದ. ಮತ್ತೆ ಕೈಮುಗಿದ. ಬಾಯಲ್ಲಿದ್ದ ಒಣ ಹುಲ್ಲುಕಡ್ಡಿ ತೆಗೆದು ತಲೆಗೆ ಸಿಕ್ಕಿಸಿದ.

ಮಹಾತ್ಮರನ್ನು ನೋಡಲು ಆರು ಮೈಲಿ ದೂರದಿಂದ ಅವನು ನಡೆದು ಬಂದಿದ್ದ. ಬರುವಾಗ ತಲೆಯಮೇಲೆ ಸೌದೆ ಹೊತ್ತುತಂದಿದ್ದ. ಹೊರೆಯನ್ನು ಪೇಟೆಯಲ್ಲಿ ಮಾರಿ ನಾಲ್ಕು ಪುಡಿಗಾಸು ಸಂಪಾದಿಸಿದ್ದ. ಅದನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ. ಬಂದ ಕೆಲಸ ಆಯಿತು. ಮಹಾತ್ಮರನ್ನು ನೋಡಿದ್ದಾಯಿತು. ಅವರ ಪಾದ ಧೂಳಿ ಶಿರಸ್ಸಿಗೆ ಏರಿಸಿಕೊಂಡದ್ದಾಯಿತು. ಇನ್ನು ಹೊರಡಲು ಸಿದ್ಧನಾದ.

ಈ ದೃಶ್ಯ ನೋಡಿ ಮಹಾತ್ಮರಿಗೆ ದುಃಖ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಎರಡು ಕಣ್ಣುಗಳಿಂದಲೂ ಧಾರಾಕಾರವಾಗಿ ಅಶ್ರುಧಾರೆ ಹರಿಯ ತೊಡಗಿತು. ಸಮೀಪದಲ್ಲಿದ್ದ ದ್ವಿಭಾಷಿಯನ್ನು ಕರೆದು, ಬಂದವನು ಬಾಯಿಗೆ ಹುಲ್ಲುಕಡ್ಡಿ ಕಚ್ಚಿಕೊಂಡ, ತಲೆಗೆ ಸಿಕ್ಕಿಸಿಕೊಂಡ ಹೀಗೇಕೆ ಮಾಡಿದ, ಎಂದು ಕೇಳಿದರು. ಇಲ್ಲಿಯ ಅಸ್ಪೃಶ್ಯರು ಹಿರಿಯರಿಗೆ ಗೌರವ ತೋರಲು ಹೀಗೆ ಮಾಡುತ್ತಾರೆ. ತಾವು ಹುಲ್ಲುತಿನ್ನುವ ಪ್ರಾಣಿಗಳಿಗೆ ಸಮ ಇದರ ಅರ್ಥ. ಹೀಗೆ ವಿವರಿಸಿದ.

ಇಂಥ ಸಂಕಟದಲ್ಲೂ ಈ ಹುಲು ಪ್ರಾಣಿಯಿಂದ ಕಾಣಿಕೆ ಕೇಳಲು ಗಾಂಧೀಜಿ ಮರೆಯಲಿಲ್ಲ. ನಿನ್ನ ಕಾಣಿಕೆ ಎಲ್ಲಿ ಎಂದರು. ಕಾಣಿಕೆ ಕೊಡಲು ತನ್ನ ಸೊಂಟಕ್ಕೆ ಆವನು ಕೈ ಹಾಕಿದ. ಅವನನ್ನು ಗಾಂಧೀಜಿ ಕೇಳಿದರು, ನೀನು ಸತ್ತ ದನಗಳ

ಮಾಂಸ ತಿನ್ನುವಿಯಾ, ಕುಡಿಯುವಿಯಾ. ಹೌದು ಎಂದು ಅವನು ಒಪ್ಪಿಕೊಂಡ. ನಿನ್ನಿಂದ ನನಗೆ ಹಣದ ಕಾಣಿಕೆ ಬೇಡ. ಇನ್ನು ಮುಂದೆ ಅವರು ಎಂಥ ದೊಡ್ಡವರೇ ಆಗಲಿ, ಬಾಯಲ್ಲಿ ಹುಲ್ಲು ಕಡ್ಡಿ ಕಚ್ಚಿಕೊಂಡು ನಮ್ಸ್ಕರಿಸುವುದಿಲ್ಲ. ಹೀಗೆ ಮಾಡು ವುದು ಮಾನವತ್ವಕ್ಕೇ ಅಪಮಾನಕರ. ಕುಡಿತ ಮನುಷ್ಯನನ್ನು ಮೃಗವಾಗಿ ಮಾಡುತ್ತದೆ. ಆದ್ದರಿಂದ ಮದ್ಯ ಇನ್ನು ನಾನು ಸೇವಿಸುವುದಿಲ್ಲ. ಮೃತ ಪ್ರಾಣಿ ಗಳ ಮಾಂಸ ಭಕ್ಷಣೆ ಹಿಂದೂ ಧರ್ಮದಲ್ಲಿ ನಿಷಿದ್ಧ. ಆದ್ದರಿಂದ ಮೃತ ಪ್ರಾಣಿಗಳ ಮಾಂಸ ತಿನ್ನುವುದಿಲ್ಲ. ಈ ಮೂರು ವಚನಗಳನ್ನು ಸದಾಕಾಲಕ್ಕೂ ಸಾಯುವ ವರೆಗೂ ನಡೆಸಿಕೊಂಡು ಬರುವ ಭರವಸೆ ನನಗೆ ಕೊಡು ಎಂದರು.

ಬೇಲಗಾರ ಗ್ರಾಮದ ಹರಿಜನ ಹೇಳಿದ, "ಸತ್ತ ಮಾಂಸ ತಿನ್ನದಿದ್ದರೆ, ಕುಡಿಯದಿದ್ದರೆ ನನ್ನನ್ನು ಜಾತಿಯಿಂದ ಹೊರಹಾಕುತ್ತಾರೆ. ನಾನೇನು ಮಾಡಲಿ, ಹೇಗೆ ಬದುಕಲಿ?"

ಗಾಂಧೀಜಿ ಅವನಿಗೆ ಹೇಳಿದರು, "ಭಯಪಡಬೇಡ, ಒಳ್ಳೆಯ ನಡತೆಗೆ ಭಯ ವೇಕೆ? ಜಾತಿಯಿಂದ ಹೊರದೂಡಿದರೆ, ಹಳ್ಳಿ ಬಿಡಬೇಕಾಗಿ ಬಂದರೆ ಬಿಟ್ಟು ಹೋಗು. ಬೇರೆ ಗ್ರಾಮಕ್ಕೆ ಹೋಗು. ಸತ್ಯವಿದ್ದರೆ ಎತ್ತಲೂ ಭಯವಿಲ್ಲ. ಭಗ ವಂತ ನಿನ್ನನ್ನು ಕಾಪಾಡುತ್ತಾನೆ." ಅದರಂತೆಯೇ ಅವನು ವಚನವಿತ್ತ. ಮಹಾತ್ಮ ರಿಗೆ ಕೊಟ್ಟ ವಚನ ತಪ್ಪಿ ನಡೆದರೆ ತನಗೆ ಕೇಡು ಸಂಭವಿಸಬಹುದು ಭೀತಿಯಿಂದ ವಚನಭ್ರಷ್ಟನಾಗದೆ ನಡೆದುಕೊಂಡುಬಂದ. ಇದರಿಂದ ಉತ್ತಮ ಸ್ಥಿತಿಗೆ ಏರಿದ.

1933–34 ರಲ್ಲಿ ಗಾಂಧೀಜಿ ಹರಿಜನ ಪ್ರವಾಸ ಕೈಗೊಂಡು ಸುಮಾರು 12,500 ಮೈಲಿ ಸಂಚರಿಸಿದರು. ಹತ್ತು ತಿಂಗಳಲ್ಲಿ ಹರಿಜನ ನಿಧಿಗೆ ಎಂಟು ಲಕ್ಷ ವಸೂಲ್ಮಾಡಿದರು. ಮನಸ್ಸು ಮಾಡಿದ್ದರೆ ಈ ಹಣವನ್ನು ಒಬ್ಬಿಬ್ಬರು ಶ್ರೀಮಂತ ರಿಂದಲೇ ಪಡೆಯಬಹುದಾಗಿತ್ತು. ಆದರೆ ಈ ಸುಲಭ ಮಾರ್ಗ ಅವರಿಗೆ ಬೇಡ ವಾಗಿತ್ತು. ದೀನದಲಿತರೊಡನೆ ನೇರ ಸಂಪರ್ಕ ಬೆಳೆಸುವುದು ಅವರ ಉದ್ದೇಶ. ಬಿಹಾರ, ಒರಿಸ್ಸ, ಆಂಧ್ರ ಈ ಪ್ರದೇಶಗಳಲ್ಲಿ ಬಡಸ್ತ್ರೀಯರು ಕಂಕುಳಲ್ಲಿ ಮಗು ಎತ್ತಿ ಕೊಂಡು, ಶ್ರಮದಿಂದ ಆರ್ಜಿಸಿದ ಕೆಲವು ತಾಮ್ರದ ನಾಣ್ಯ ಕಾಣಿಕೆಯಾಗಿ ಕೊಡು ತ್ತಿದ್ದರು. ಶ್ರೀಮಂತನ ಲೆಕ್ಕಾಚಾರದ ಕಾಣಿಕೆಗಿಂತ ಬಡವರ ಕಿಲುಬು ಕಾಸುಗಳು ತನಗೆ ಹೆಚ್ಚು ಪ್ರಿಯ, ಅಧಿಕ ಸಂತೋಷ ನೀಡುತ್ತದೆ ಎಂದು ಹೇಳುತ್ತಿದ್ದರು.

ಹರಿಜನ

ಗಾಂಧೀಜಿ ಅಸ್ಪೃಶ್ಯತೆಯ ನಿವಾರಣೆಯಲ್ಲಿ ತೊಡಗಿದ್ದ ಕಾಲ. ಎಲ್ಲರೂ ದೇವರ, ಹರಿಯ ಮಕ್ಕಳು. ಆದ್ದರಿಂದ ಅಸ್ಪೃಶ್ಯರು ಹರಿಜನರು ಎಂಬ ಹೊಸ ಹೆಸರನ್ನೇ ಕೊಟ್ಟರು ಅವರಿಗೆ. ದೇಶದ ಆದ್ಯಂತ ಅಸ್ಪೃಶ್ಯತಾ ನಿವಾರಣೆಗಾಗಿ ಪ್ರವಾಸ ನಡೆಸಿದರು. ಇದಕ್ಕಾಗಿಯೇ 'ಹರಿಜನ' ಹೆಸರಿನ ಪತ್ರಿಕೆ ಹೊರಡಿಸಿದರು. ಪ್ರಾಂತ ಭಾಷೆಗಳಲ್ಲಿ ಇದರ ಅನುವಾದ ಇದೇ ಹೆಸರಿನಲ್ಲಿ ಪ್ರಕಟಗೊಳ್ಳಲಾರಂಭವಾಯಿತು. ಕಾಂಗ್ರೆಸ್ ಅಕ್ರಮ ಕೂಟವೆಂದು ಸಾರಲಾಗಿದ್ದ ಕಾಲವದು. ಶಾಸನ ಸಭೆಗಳಿಂದ ತನ್ನ ಪ್ರತಿನಿಧಿಗಳನ್ನುಕಾಂಗ್ರೆಸ್ ಹಿಂದಕ್ಕೆ ಕರಿಸಿಕೊಂಡಿತ್ತು. ಇಂತಹ ಸನ್ನಿವೇಶದಲ್ಲಿ ಗಾಂಧಿಯವರು ಕಾಂಗ್ರೆಸ್ಸನ್ನು ಪುನರುಜ್ಜೀವಗೊಳಿಸುವ ಕಾರ್ಯಕ್ಕೆ ತೊಡಗದೆ, ಸಮಾಜದ ಸುಧಾರಣೆಯಲ್ಲಿ ಮಗ್ನರಾಗಿದ್ದುದು ಎಲ್ಲರಿಗೂ ಬಗೆಹರಿಸಲಾಗದ ಒಗಟಾಗಿತ್ತು. ಹೊಲೆಯ, ಮಾದಿಗ, ಚಂಡಾಳ. ಇವನ ನೆರಳು ಮೈಯಿಗೆ ತಾಗಿದರೂ ಮೈಲಿಗೆ ಆಗುತ್ತೆ. ಮಡಿವಂತರ ಸಮೀಪಕ್ಕೆ ಬರಲಾಗದು. ಸವರ್ಣಿಗಳ ಬೀದಿಗಳಲ್ಲಿ ನಡೆಯಲಾಗದು. ಮೆಟ್ಟು ಮೆಟ್ಟಲಾಗದು. ಕೊಡೆ ಹಿಡಿಯಲಾಗದು ಸತ್ತ ದನಗಳ ಮಾಂಸ ತಿನ್ನಲು ಮಾತ್ರ ಇವನು ಯೋಗ್ಯ. ಮಲ ಹೊರಲು, ಕಸ ಗುಡಿಸಲು ಮಾತ್ರ ಇವನು ಯೋಗ್ಯ. ಇಂಥ ಭಯಂಕರ ಸ್ಥಿತಿಗೆ ಒಳಗಾಗಿದ್ದ. ಇವನ ಹೀನ ಪರಿಸ್ಥಿತಿಯನ್ನು ತಮ್ಮ ಪ್ರಚಂಡ ಬಿರುಗಾಳಿಯ ಪ್ರಚಾರದಿಂದ ಗಾಂಧೀಜಿಯವರು ದೂರ ಮಾಡಿದ್ದರು. ಶಾಸ್ತ್ರಗಳಲ್ಲಿ ಉಕ್ತವಾಗಿರುವುದು ನಾಲ್ಕು ವರ್ಣಗಳು. ಐದನೆಯ ವರ್ಣ ಶಾಸ್ತ್ರಸಮ್ಮತವಾದುದಲ್ಲ ಎಂದು ಸವಾಲ್ ಒಡ್ಡಿದರು. ಹಿಂದೂ ಸಮಾಜದಲ್ಲಿ ಅಸ್ಪೃಶ್ಯರಿಗೂ ಸಮಾನ ಅವಕಾಶ ಕೊಡಬೇಕೆಂದು ಟೊಂಕ ಕಟ್ಟಿನಿಂತರು. ಹರಿಜನರು ಅನ್ಯಮತೀಯರಾಗುವುದನ್ನು ತಡೆಗಟ್ಟಿದರು. ಸಾವಿರಾರು ಸವರ್ಣೀಯರು ಅಸ್ಪೃಶ್ಯತೆಯ ನಿವಾರಣೆಯಲ್ಲಿ ಮಹಾತ್ಮರಿಗೆ ಬೆಂಬಲರಾಗಿ ನಿಂತರು. ಅಸ್ಪೃಶ್ಯ ಎಂಬ ಕಳಂಕಹೀನ ಹೆಸರು ಅಳಿದು ಹೋಗಿ, ಹರಿಜನ ಎಂಬ ಹೆಸರು ಶಾಶ್ವತವಾಯಿತು.

ಅಸ್ಪೃಶ್ಯತೆ ಹೋಗಲಾಡಿಸಲು ಗಾಂಧೀಜಿ ಕೈಗೊಂಡ ಉಪಾಯಗಳು ಅನೇಕ. ಹರಿಜನರು ಸತ್ತ ದನದ ಮಾಂಸ ತಿನ್ನುವುದು, ಮದ್ಯಪಾನ ಇವುಗಳನ್ನು ತೊರೆದು ಶುಚಿಯಾಗಿರುವಂತೆ ಅವರಿಗೆ ಬೋಧಿಸಿದರು. ಸಹಪಂಕ್ತಿ ಭೋಜನ, ದೇವಾಲಯ ಪ್ರವೇಶ ಇವು ಅವರು ಕೈಗೊಂಡ ಕಾರ್ಯಗಳಲ್ಲಿ ಮುಖ್ಯವಾದುವು.

ಭಂಗಿ ಎನಿಸಿಕೊಳ್ಳುವುದರಲ್ಲಿ ಸಂತೃಪ್ತಿ ಅನುಭವಿಸಿದರು. ಭಂಗಿಯ ಕೆಲಸ ಸ್ವತಃ ತಾವೇ ಮಾಡುವರು. ಸಮಾಜ ಸುಧಾರಕರನ್ನು ಭಂಗಿ ಕೆಲಸದಲ್ಲಿ ತೊಡಗಿಸುವುದು ಅವರ ಪ್ರಾಮಾಣಿಕತೆಯ ಸತ್ವಪರೀಕ್ಷೆ ಆಗುತ್ತಿತ್ತು. ಆಶ್ರಮಕ್ಕೆ ಶಿಕ್ಷಣಾರ್ಥಿಗಳಾಗಿ ಬರುವವರನ್ನು ಮೊದಲು ತೊಡಗಿಸುವುದು ಭಂಗಿಯ ಕೆಲಸದಲ್ಲಿ.

ಅಸ್ಪೃಶ್ಯತೆಯ ನಿವಾರಣೆಗಾಗಿ ಹರಿಜನ ಸೇವಕ ಸಂಘ ಸ್ಥಾಪಿಸಿದರು. ಇದರ ಶಾಖೆಗಳು ದೇಶದ ಆದ್ಯಂತ ಹರಡಿಕೊಂಡುವು. ಸಾಮಾನ್ಯವಾಗಿ ಸನಾತನಿಗಳು, ಸವರ್ಣೀಯರೇ ಇವುಗಳ ಅಧ್ಯಕ್ಷರು, ಕಾರ್ಯದರ್ಶಿಗಳೂ ಆಗಿರುತ್ತಿದ್ದರು. ಕಾಂಗ್ರೆಸ್ ಕಾರ್ಯಕರ್ತರನ್ನೂ, ಸಮಾಜಸುಧಾರಕರನ್ನೂ ಈ ಕೆಲಸದಲ್ಲಿ ತೊಡಗಿಸಿದರು. ಸಬರಮತಿ ಆಶ್ರಮವನ್ನು ಹರಿಜನ ಸಂಘಕ್ಕೆ ದತ್ತಿಯಾಗಿ ಕೊಟ್ಟರು. ಜನರನ್ನು ಬಡಿದೆಬ್ಬಿಸಲು, ಭಾರತದ ಮೂಲೆಮೂಲೆಗಳಲ್ಲೂ ಪ್ರವಾಸ ನಡೆಸಿದರು. ಹರಿಜನ ಪ್ರವಾಸದಲ್ಲಿ ಈ ಪವಿತ್ರ ಕಾರ್ಯಕ್ಕಾಗಿ ನಿಧಿ ಶೇಖರಿಸುತ್ತಿದ್ದರು. ಹರಿಜನರಿಗೆ ಕ್ಷೌರ ಮಾಡದ ನಾಪಿತನಿಂದ ತಾನು ಕ್ಷೌರ ಮಾಡಿಸಿಕೊಳ್ಳುವುದಿಲ್ಲವೆಂದರು. ಹರಿಜನರಿಗೆ ಪ್ರವೇಶವಿಲ್ಲದ ದೇಗುಲಗಳಿಗೆ ಹೋಗಲು ನಿರಾಕರಿಸುತ್ತಿದ್ದರು. ಪೂರಿ ಜಗನ್ನಾಥದ ದೇವಾಲಯಕ್ಕೆ ಪತ್ನಿ ಕಸ್ತೂರಿಬಾ ಹೋದುದರಿಂದ ಮನನೊಂದರು. ಹರಿಜನ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಳ್ಳುವಂತೆ ಮಾಡುವುದರಲ್ಲಿ ವಿದ್ಯಾರ್ಥಿನಿಲಯಗಳ ಸ್ಥಾಪನೆಯಲ್ಲಿ ಯಶಸ್ಸನ್ನು ಕಂಡರು.

ಸಮಾಜ ಸುಧಾರಣೆಯಲ್ಲಿ ಶಾಸನದ ಬೆಂಬಲ ಪಡೆಯಲು ಅಷ್ಟಾಗಿ ಅವರು ಅಪೇಕ್ಷಿಸುತ್ತಿರಲಿಲ್ಲ. ಆದರೂ 1933ರಲ್ಲಿ ಕೇಂದ್ರ ಶಾಸನ ಸಭೆಯು, ಹರಿಜನರು ದೇವಾಲಯ ಪ್ರವೇಶಿಸಲು ಇದ್ದ ಅಡಚಣೆ ತೆಗೆಯಲು ಶಾಸನ ಮಾಡುವುದನ್ನು ಗಾಂಧೀಜಿ ಸಮರ್ಥಿಸಿದರು. ದೇವಾಲಯ ಪ್ರವೇಶ ದೇಶದಲ್ಲಿ ಬೃಹದ್ರೂಪ ತಾಳಿತು. ಇದು ಸುಲಭದ ಪ್ರಯೋಗವಾಗಿರಲಿಲ್ಲ. ಇದರಲ್ಲಿ ಸನಾತನಿಗಳ ಮತ್ತು ಸುವರ್ಣೀಯರ ವಿರೋಧ ಕಟ್ಟಿಕೊಂಡರು. ಸ್ವತಃ ಹರಿಜನರೇ ಹಿಂತೆಗೆಯುತ್ತಿದ್ದರು. ದೇವಾಲಯಗಳ ಮುಂದೆ ದೇವ ಪ್ರಾರ್ಥನೆ ಮಾಡುತ್ತ, ಯಾರಿಗೂ ತೊಂದರೆ ಕೊಡದೆ ವಿರೋಧಿಗಳ ಹೃದಯ ಪರಿವರ್ತನೆ ಮಾಡುವುದು ದೇವಾಲಯ ಪ್ರವೇಶದ ವಿಧಾನ. ಮಲಬಾರಿನ ವೈಕಾಂನಲ್ಲಿ ನಾಲ್ಕು ತಿಂಗಳಿಗೂ ಹೆಚ್ಚು ಕಾಲ ದೇವಾಲಯದ ಪ್ರವೇಶಕ್ಕಾಗಿ ಈ ರೀತಿಯ ಸತ್ಯಾಗ್ರಹ ನಡೆಸಬೇಕಾಯಿತು. ಮಳೆಗಾಲದ ಮಳೆಯಲ್ಲಿ, ಮೊಳಗಾಲಿನ ನೀರಿನಲ್ಲಿ ನಿಂತು ಸತ್ಯಾಗ್ರಹಿಗಳು ಸತ್ಯಾಗ್ರಹ ಆಚರಿಸಿ, ಹೃದಯ ಪರಿವರ್ತನೆಯಲ್ಲಿ ಜಯಶೀಲರಾದರು.

ಪ್ರವಾಸದಲ್ಲಿ ಗಾಂಧೀಜಿ ಅನೇಕ ಕಷ್ಟ ಸಂಕಟ ಅನುಭವಿಸಿದರು. ಪ್ರಾಣಾಪಹರಣದ ಪ್ರಯತ್ನಗಳೂ ನಡೆದುವು. ಆದರೂ ತಮ್ಮ ಪ್ರಯತ್ನ ಬಿಡಲಿಲ್ಲ. ಪುರಾಣ

ಕಾಲದಿಂದ ಹರಿಜನರನ್ನು ಹಿಂದೂ ಸಮಾಜದಲ್ಲಿ ಒಂದುಗೂಡಿಸುವ ಪ್ರಯತ್ನಗಳು ನಡೆದಿರುತ್ತವೆ. ಆಧುನಿಕ ಕಾಲದಲ್ಲಿ ಹಲವಾರು ಸುಧಾರಕರು ಈ ಪ್ರಯತ್ನ ನಡೆಸಿರುತ್ತಾರೆ. ಆದರೆ ಗಾಂಧಿಯವರಿಗೆ ಲಭಿಸಿದಷ್ಟು ಜಯ ಮತ್ತೆ ಯಾರಿಗೂ ಲಭಿಸಿರುವುದಿಲ್ಲವೆಂದು ಹೇಳಬಹುದು.

ಸೆಪ್ಟಂಬರ್ 13, 1932 ದಿನಾಂಕ ಗಾಂಧೀಜಿ ಯರವಾಡ ಜೈಲಿನಲ್ಲಿದ್ದರು. ಹರಿಜನರಿಗಾಗಿ ಪ್ರತ್ಯೇಕ ಚುನಾವಣೆ ನಡೆಸುವುದನ್ನು ವಿರೋಧಿಸಿ 21ದಿನಗಳ ನಿರಶನ ಪ್ರಾರಂಭಿಸಿದರು. ಜವಹರಲಾಲರು ಆಗ ಡೆಹರಾಡೂನ್ ಜೈಲಿನಲ್ಲಿದ್ದರು. ರಾಜಕೀಯ ವಾತಾವರಣ ಇಳಿಮುಖವಾಗಿದ್ದ ಕಾಲದಲ್ಲಿ ಈ ಮುದುಕ ಹರಿಜನೋದ್ಧಾರದಲ್ಲಿ ತೊಡಗಿರುವನಲ್ಲ ಎಂದು ಬಂಧನದಲ್ಲಿದ್ದದರಿಗೆ ತುಂಬ ಕೋಪ. ಆದರೆ ಜವಹರರಿಗೆ ಬಾಪುವಿನಲ್ಲಿದ್ದ ಪ್ರೇಮ ಗೌರವ ಅವರನ್ನು ಟೀಕಿಸಲು ಅವಕಾಶಕೊಡಲಿಲ್ಲ. ಗಾಂಧೀಜಿ ಎಂಥ ಪರಿಸ್ಥಿತಿಯನ್ನಾದರೂ ತಮ್ಮ ಗುರಿಸಾಧನೆಗೆ ಬಳಸಿಕೊಳ್ಳುವ ಅಸಾಧಾರಣ ಶಕ್ತಿ ಪಡೆದಿದ್ದರು. ಅಂಧಕಾರಮಯವಾಗಿದ್ದ ಪರಿಸ್ಥಿತಿಯನ್ನು ತಮ್ಮ ಪ್ರಾಯೋಪವೇಶದಿಂದ ಹೋಗಲಾಡಿಸಿ ಮತ್ತೆ ದೇಶವನ್ನು ಸ್ವರಾಜ್ಯದ ಹಾದಿಯಲ್ಲಿ ಮುನ್ನಡೆಸಿದರು.

ಹರಿಜನರ ಪರಿಸ್ಥಿತಿ ಉತ್ತಮಗೊಳಿಸಲು ಇಷ್ಟು ಕಷ್ಟ ಸಂಕಟ ಅನುಭವಿಸುತ್ತ, ತಮ್ಮ ಜೀವವನ್ನೇ ಮುಡಿಪಾಗಿಟ್ಟರೂ, ಆಪಾದನೆಗಳಿಂದ ಅವರು ಮುಕ್ತರಾಗಲಿಲ್ಲ. ಬ್ರಾಹ್ಮಣನನ್ನು ಶೀಘ್ರಲಿಪಿಗಾರನಾಗಿ ನೇಮಿಸಿಕೊಂಡಿದ್ದರು. ಅದಕ್ಕೂ ಆಕ್ಷೇಪಣೆ. ಆದರೆ ಅವರಿಗೆ ಇದರಲ್ಲಿ ಯಾವ ಅಸಂಬದ್ಧತೆಯೂ ಕಾಣಲಿಲ್ಲ. ಇದು ಸಹಿಷ್ಣುತೆಯ ನಿದರ್ಶನ. ಯಾರನ್ನೂ ದ್ವೇಷಿಸದೆ, ಎಲ್ಲರನ್ನೂ ಪ್ರೀತಿಸುವುದೇ ತನ್ನ ಧರ್ಮ ಎಂದರು. ಅವನು ಮೊದಲು ಬಂದ, ಕೆಲಸ ತೃಪ್ತಿಕರವಾಗಿ ಮಾಡುತ್ತಿದ್ದ. ಆದ್ದರಿಂದ ಈಗಲೂ ತನ್ನಲ್ಲಿರುವುದಾಗಿ ಸಮರ್ಥಿಸಿಕೊಂಡರು.

ಕೆಲವು ದಿನಗಳಲ್ಲಿ ಶೀಘ್ರಲಿಪಿಗಾರ ಶಾಸ್ತ್ರಿಗೆ ತಂದೆಯಿಂದ ಪತ್ರ ಬಂತು. ತನಗೆ ತೀವ್ರ ಕಾಯಿಲೆ. ಉಳಿಯಲಾರೆ. ಆದ್ದರಿಂದ ಗೃಹಕೃತ್ಯದ ಸರಿ ಮಾಡಲು ಬರುವಂತೆ ಕಾಗದದ ಒಕ್ಕಣೆ. ಈ ಪತ್ರವನ್ನು ಶಾಸ್ತ್ರೀ, ಗಾಂಧಿಯವರಿಗೆ ತೋರಿಸಿದರು. ಊರಿಗೆ ಹೋಗುವಂತೆ ಗಾಂಧೀಜಿ ಅವರಿಗೆ ತಿಳಿಸಿದರು. ಅದಕ್ಕೆ ಮೊದಲು ಬೊಂಬಾಯಿಗೆ ಹೋಗಿ, ತನಗೆ ಬದಲಿಯಾಗಿ ಬೇರೊಬ್ಬ ಕಾರಕೂನನನ್ನು ಕಳುಹಿಸಿಕೊಡುವಂತೆ ತಿಳಿಸಿದರು. ಮದರಾಸು ವಿಶ್ವವಿದ್ಯಾಲಯದ ಒಬ್ಬ ಪದವೀಧರ ಪರ್ಣಕುಟಿಗೆ ಬಂದ. ತಾನು ಕೆಲವು ಕಚೇರಿಗಳಲ್ಲಿ ಗುಮಾಸ್ತನಾಗಿ ಕೆಲಸಮಾಡಿ ಅನುಭವ ಪಡೆದಿರುವುದಾಗಿ ಹೇಳಿಕೊಂಡ. ಶಾಸ್ತ್ರಿ ಅವನನನ್ನು ಗಾಂಧಿಯವರ ಬಳಿ ಕರೆದುಕೊಂಡು ಹೋದರು. ಹೆಚ್ಚಿನ ವೇತನ ಅವನು ಪಡೆಯುತ್ತಿದ್ದುದು ತಿಂಗಳಿಗೆ

ರೂ. 60, ಶಾಸ್ತ್ರಿ ಪಡೆಯುತ್ತಿದ್ದುದು ರೂ. 100 ಮತ್ತು ಉಚಿತ ವಸತಿ ಮತ್ತು ಊಟ. ಪದವೀಧರನಿಗೆ ಎರಡು ಪತ್ರ ಹೇಳಿ ಬರೆಸಿದರು. ಬಹಳ ತಪ್ಪುಗಳನ್ನು ಮಾಡಿದ್ದ. ಇವನ ಕೆಲಸ ಸಮರ್ಪಕವಾಗಿಲ್ಲ. ಆದ್ದರಿಂದ ಸಮರ್ಥನಾದವನನ್ನು ನೀನೇ ಗೊತ್ತುಮಾಡಿಕೊಡು. ನೀನು ಮರಳಿ ಬಂದಮೇಲೆ ಸ್ಥಾನ ಬಿಟ್ಟು ಕೊಡುವಂತೆ ಷರತ್ತಿನ ಮೇಲೆ ಕೆಲಸಕ್ಕೆ ನೇಮಿಸಿಕೊಳ್ಳುವೆ ಎಂದರು. ಆದರೆ ದಕ್ಷನಾದ ಗುಮಾಸ್ತನನ್ನು ಹುಡುಕಿಕೊಡಲು ಶಾಸ್ತ್ರಿಗೆ ಸಾಧ್ಯವಾಗಲಿಲ್ಲ. ತಾವೇ ಯಾರನ್ನಾದರೂ ನೇಮಿಸಿಕೊಳ್ಳಿ ಎಂದು ಹೇಳಿ ಶಾಸ್ತ್ರಿ ಹೊರಟುಹೋದ. ಮೂರು, ನಾಲ್ಕು ತಿಂಗಳನಂತರ ಶಾಸ್ತ್ರಿ ಬೊಂಬಾಯಿಗೆ ಬಂದು, ಹಿಂದಿನ ಯಜಮಾನನಲ್ಲಿ ಹೆಚ್ಚಿನ ವೇತನಕ್ಕೆ ಕೆಲಸಕ್ಕೆ ಸೇರಿಕೊಂಡ. 1934ರಲ್ಲಿ ಗಾಂಧೀಜಿ ಬೊಂಬಾಯಿ ಮಣಿ ಭವನದಲ್ಲಿದ್ದಾಗ ಅವರನ್ನು ಕಾಣಲು ಶಾಸ್ತ್ರಿ ಬಂದ. ಗಾಂಧೀಜಿ ಅವನ ಮತ್ತು ಅವನ ತಂದೆಯ ಕ್ಷೇಮಸಮಾಚಾರ ವಿಚಾರಿಸಿದರು. ಶಾಸ್ತ್ರಿಗೆ ಮತ್ತೆ ಗಾಂಧಿಯವರಲ್ಲಿ ಕೆಲಸಕ್ಕೆ ಸೇರಿಕೊಳ್ಳಬೇಕೆಂಬ ಇಚ್ಛೆ. ತಾನು ಮದರಾಸು ಮತ್ತು ಕಲ್ಲಿಕೋಟೆಗೆ ಬಂದಿದ್ದಾಗ ಶಾಸ್ತ್ರಿ ಎಲ್ಲಿರುವನು, ಏನು ಮಾಡುತ್ತಿರುವನೆಂದು ತಿಳಿಯಲು ಮಾಡಿದ ಪ್ರಯತ್ನ ವಿಫಲಗೊಂಡಿತ್ತು. "ಊರು ಬಿಟ್ಟಾಗಿನಿಂದ ನಿನ್ನ ವಿಷಯ ಕುರಿತು ಒಂದು ಪತ್ರವನ್ನೂ ನೀನು ನನಗೆ ಬರೆಯಲಿಲ್ಲ. ನಿನ್ನ ಮನೆಯ ವಿಳಾಸ ನನ್ನಲ್ಲಿ ಇರಲಿಲ್ಲ. ಆದ್ದರಿಂದ ನಿನಗೆ ಪತ್ರ ಬರೆಯಲು ನನಗೆ ಸಾಧ್ಯವಾಗಲಿಲ್ಲ. ತಪ್ಪು ನಿನ್ನದು" ಅವನ ಬಡಾವಣೆಯ ರೈಲು ಹಿಡಿಯಲು 40 ನಿಮಿಷ ಇತ್ತು. "ಓಡು ರೈಲು ಹಿಡಿ" ಎಂದು ಕಳುಹಿಸಿಬಿಟ್ಟರು.

"ಬೇಡ, ಇಲ್ಲಿಗೆ ಬರಬೇಡಿ. ಹೆಚ್ಚು ಜನರನ್ನು ಆಶ್ರಮಕ್ಕೆ ಸೇರಿಸಿಕೊಳ್ಳಲು ಸಾಧ್ಯವಾಗದು ಎಂದು ಗಾಂಧೀಜಿ ತಿಳಿಸುತ್ತಿದ್ದರು, ಅವರ ವ್ಯಕ್ತಿತ್ವಕ್ಕೆ ಮಾರು ಹೋಗಿ ಮೇಲಿಂದ ಮೇಲೆ ಜನ ಬರುತ್ತಲೇ ಇರುವರು. ದೀರ್ಘಕಾಲ ಅಲ್ಲೇ ಉಳಿಯ ಬಯಸುವವರು ಕೆಲವರು, ಶಿಕ್ಷಣಾರ್ಥಿಗಳಾಗಿ ನಿರ್ದಿಷ್ಟಕಾಲವಿದ್ದು ಹೋಗಲಪೇಕ್ಷಿಸುವವರು ಹಲವರು. ಆಶ್ರಮ ಮತ್ತು ಮಹಾತ್ಮರನ್ನು ನೋಡಿ ಹೋಗಲು ಬರುವ ಕುತೂಹಲರ ಸಂಖ್ಯೆಗೆ ಮಿತಿಯೇ ಇಲ್ಲ.

ತಾತ್ಕಾಲಿಕ ಇದ್ದು ಹೋಗಲು ಬಂದ ವಯಸ್ಕರಲ್ಲಿ ಭಾನು ಎಂಬ ಚಮ್ಮಾರನೂ ಒಬ್ಬ. ಮುದುಕ, ಆದರೂ ಗಟ್ಟಿ ಆಳು. ಕಡುಬಡವ. ದಂತಪಂಕ್ತಿ ಇನ್ನೂ ಗಟ್ಟಿಯಾಗಿಯೇ ಇತ್ತು. ಆರೋಗ್ಯ ದೃಢಕಾಯನಾಗಿದ್ದ, ಹಳೆಯ ಕಾಲದ ವೃದ್ಧರಂತೆ. ಭಾನು ಬಾಪ ಇವನ ಅಕ್ಕರೆಯ ಹೆಸರು.ಅಹ ಮದಾಬಾದಿನ ಬಳಿ ಗಾಂಧೀಜಿ ಸ್ಥಾಪಿಸಿದ ಸತ್ಯಾಗ್ರಹ ಆಶ್ರಮಕ್ಕೆ ಅಸ್ಪೃಶ್ಯರ ಕುಟುಂಬವೊಂದನ್ನು ಸೇರಿಸಿಕೊಂಡಿದ್ದರಿಂದ ಆಶ್ರಮವನ್ನೇ ಮುಚ್ಚಿ ಬಿಡಬೇಕಾದ ಪರಿಸ್ಥಿತಿ ಒಂದು ಕಾಲಕ್ಕೆ ಗಾಂಧೀಜಿ ಎದುರಿಸಬೇಕಾಗಿತ್ತು. ಕಾಲ ಬದಲಾಯಿಸಿತ್ತು. ಸಾಬರ

ಮಣಿಯಲ್ಲಿ ಬಹಳ ನೀರು ಹರಿದು ಹೋಗಿತ್ತು. ಅಸ್ಪೃಶರು ಈಗ ಹರಿಜನ ರಾಗಿದ್ದರು. ಭಾನು ಹರಿಜನನಾದುದರಿಂದಲೇ ಅವನಿಗೆ ಆಶ್ರಮದಲ್ಲಿ ಉಳಿಯಲು ಅವಕಾಶ ಸಿಕ್ಕಿತು.

ಹರಿಜನರು ಮಾಡುತ್ತಿದ್ದ ಕೆಲಸವನ್ನೇ ಆಶ್ರಮದಲ್ಲಿಯೂ ಮಾಡಲು ಅವನು ಬಂದ. ಕಸ ತೆಗೆಯುವುದು, ಶೌಚಗೃಹ ಶುಚಿಯಾಗಿ ಇಡುವುದು. ಅವನು ಸ್ವತೇವ ವಹಿಸಿಕೊಂಡಿದ್ದ ಕೆಲಸ. ಗಾಳಿ, ಬಿಸಿಲು, ಚಳಿ, ಮಳೆ ಯಾವುದನ್ನೂ ಲೆಕ್ಕಿಸದೆ ತನ್ನ ಕೆಲಸ ತಪ್ಪದೆ ಅವನು ನಿರ್ವಹಿಸುತ್ತಿದ್ದ. ಒಪ್ಪತ್ತು ಮಾತ್ರ ಊಟ ಮಾಡು ವನು. ಒಳ್ಳೆಯ ವಸ್ತ್ರ ಧರಿಸಲು ಗತಿ ಇಲ್ಲದವನು ಜೋಡಿಗೆ ಹಣ ಎಲ್ಲಿಂದ ತಂದಾನು. ಜೋಡು ಇಲ್ಲದೆ, ಬರಿಗಾಲಿನಲ್ಲಿ ನಡೆಯುತ್ತಿದ್ದ, ದುಡಿಯುತ್ತಿದ್ದ. ಆದರೆ ರಾತ್ರಿ ವೇಳೆಯಲ್ಲಿ, ಮಳೆಗಾಲದಲ್ಲಿ ಜೋಡು ಇಲ್ಲದೆ ಕೆಲಸ ಮಾಡಲು ತೊಂದರೆಯಾಗುತ್ತಿತ್ತು.

ಹೀಗಿರುವಾಗ, ಒಂದು ದಿನ ಅವನು ಹಳೆಯ ತುಂಡುರಟ್ಟುಗಳನ್ನು ಜೋಡಿಸಿ ಜೊತೆ ಜೋಡು ಹೊಲೆದು ಕಾಲಿಗೆ ಹಾಕಿಕೊಂಡ. ರಟ್ಟಿನ ಜೋಡು ಎಷ್ಟು ಕಾಲ ಬಾಳೀತು? ತೇವ ತಾಗುತ್ತಲೇ ಅದು ಕೆಟ್ಟು ಹೋಯಿತು. ಅವನು ಬಾಪು ಬಳಿಗೆ ಹೋಗಿ, ತನಗೆ ಒಂದು ಜೊತೆ ಹಳೆಯ ಚಪ್ಪಲಿ ದಯಪಾಲಿಸು ವಂತೆ ಬೇಡಿಕೊಂಡ. ಗಾಂಧಿಯವರ ಮನನೊಂದಿತು. ಹಳೆಯದು ಏಕೆ ಬೇಡುವೆ? ಹೊಸತನ್ನೇ ಮಾಡಿಸಿ ಕೊಡುವೆ ಎಂದರು. "ಭಗವಂತ, ಎಂಜಲು ಎಲೆಯಲ್ಲಿ ಬಿಸಾಟ ಎಂಜಲು ತಿನ್ನುವ ಎನಗೆ ಹೊಸ ಜೋಡಿನ ಅಗತ್ಯವೇನು? ಅಲ್ಲದೆ ಆಧುನಿಕ ಕಾಲದ ಜೋಡು ನನಗೆ ಸರಿಹೋಗದು. ನನಗೆ ಹಳೆಯ ಕಾಲದ 'ಗಿರಿಮಿಟ್' ಜೋಡು ಎಂದರೆ ಆಸೆ. ಈ ಕಾಲದ ಚಮ್ಮಾರ ಅದನ್ನು ತಯಾರಿಸಲಾರ ಎಂದ" ಭಾನು.

"ಆದರೆ ನಾಲ್ವಾಡಿಯಲ್ಲಿರುವ ನಮ್ಮ ಚಮ್ಮಾರರು ತಯಾರಿಸಬಲ್ಲರು" ಎಂದರು ಗಾಂಧೀಜಿ.

"ಕೆಲಸ ಬಿಟ್ಟು ನಾಲ್ವಾಡಿಗೆ ನಾನು ಹೇಗೆಹೋಗಲಿ. ನನ್ನ ಈ ಕೀಳು ದರ್ಜೆಯ ಕೆಲಸ ಬೇರೆಯಾರೂ ಮಾಡರು" ಎಂದ ಬಡ ಭಾನು.

ಭಾನು ಬಾಪಾಗೆ ಸಂತೋಷ ಪಡಿಸಬೇಕು, ಅವನು ಆಸೆಪಟ್ಟ ಜೋಡು ಮಾಡಿಸಿ ಕೊಡಬೇಕು ಎಂದು ಮನಸ್ಸು ಮಾಡಿದರು, ಗಾಂಧೀಜಿ. ಹಳೆಯ ದಪ್ಪನೆ ರಟ್ಟು ತೆಗೆದುಕೊಂಡು, 'ಗಿರಿಮಿಟ್' ಮಾದರಿಯ ಜೋಡು ಕತ್ತರಿಸಿ, ಹೊಲೆದು ಸಿದ್ಧಪಡಿಸಿದರು. ಈ ಬಗೆಯ ಜೋಡು ಅವರು ನೋಡಿದ್ದುದು

ಮೂವತ್ತು ವರ್ಷಗಳ ಹಿಂದೆ. ಆದರೂ ಆ ಮಾದರಿಯು ಪಾದರಕ್ಷೆ ಅವರ ಚಿತ್ತ ಫಲಕದಲ್ಲಿ ಮನೆಮಾಡಿಕೊಂಡಿತ್ತು. ಆದರಂತೆ ರಟ್ಟು ತೆಗೆದುಕೊಂಡು ಅದೇ ಮಾದರಿಯ ಗಿರಿಮಿಟ್ ಜೋಡು ದಾರದಿಂದ ಹೊಲೆದು ತಯಾರಿಸಿದರು. "ಇದೇ ಮಾದರಿಯ ಚಪ್ಪಲಿ ಅಲ್ಲವೇ ನಿನಗೆ ಬೇಕಾದುದು" ಎಂದು ಭಾನು ಬಾಪನನ್ನು ಕೇಳಿದರು. ಭಾನು ಬಾಪ ಸಂತಸದಿಂದ 'ಹೌದು ಹೌದು', ಎಂದು ತಲೆತೂಗಿದ. ಭಾರತದ ಬಾಪು, ಭಾನುವಿನ ಪಾದದ ಅಳತೆ ತೆಗೆದುಕೊಂಡರು. ಮಾದರಿಯನ್ನು ಅಳತೆಯೊಡನೆ ನಾಲ್ವಾಡಿಗೆ ಕಳುಹಿಸಿಕೊಟ್ಟರು. ಜೋಡು ಕೆಲವು ದಿನಗಳಲ್ಲೇ ತಯಾರಾಗಿ ಬಂತು. ಅದನ್ನು ಮೆಟ್ಟಿಕೊಂಡು ಭಾನು ತರುಣನಂತೆ ನಲಿದಾಡಿದ. ಅತ್ಯಂತ ದಲಿತ ವರ್ಗಕ್ಕೆ ಸೇರಿದ ಚಿಂದಿ ಬಟ್ಟೆಯ ಕಡು ಬಡವನಿಗೆ ಬಾಪು ಅಲ್ಲದೆ ಸಹಾಯಮಾಡುವವರು ಬೇರೆ ಯಾರುಂಟು ಎಂದು ಆನಂದದಲ್ಲಿ ಮುಳುಗಿ ಹೋದ.

ಹರಿಜನರಿಗೆ ಪ್ರವೇಶವಿಲ್ಲದ ದೇವಾಲಯಗಳಿಗೆ ತಾನು ಪ್ರವೇಶಿಸುವುದಿಲ್ಲವೆಂಬ ಪ್ರತಿಜ್ಞೆ ಗಾಂಧೀಜಿ ತೆಗೆದುಕೊಂಡಿದ್ದರು. ನಂದೀ ಬೆಟ್ಟದ ಮೇಲಿನ ಆಂಜನೇಯ ದೇವಾಲಯದಲ್ಲಿ ಪ್ರತಿ ಶನಿವಾರ ಭಜನೆ ಮತ್ತು ಮಹಾಮಂಗಳಾರತಿ ನಡೆಯುವ ವಾಡಿಕೆ. ದೇವಾಲಯಕ್ಕೆ ಅವರನ್ನು ಬರಮಾಡಿಕೊಳ್ಳುವಂತೆ ಚನ್ನಪ್ಪನವರು ನ್ಯಾಯಾಧೀಶ ಕೆ. ಶಂಕರನಾರಾಯಣರಾಯರಿಗೆ ತಿಳಿಸಿದರು. "ಸಾಮಾನ್ಯವಾಗಿ ದೇವಾಲಯಕ್ಕೆ ಹೋಗುವ ಪದ್ಧತಿಯನ್ನು ಅವರು ಇಟ್ಟುಕೊಂಡಿಲ್ಲ. ಹರಿಜನರಿಗೆ ಪ್ರವೇಶವಿಲ್ಲದ ದೇಗುಲಕ್ಕೆ ಅವರು ಹೋಗುವುದೇ ಇಲ್ಲ. ಈ ಆಂಜನೇಯನಿಗೆ ಅವರನ್ನು ಬರಮಾಡಿಕೊಳ್ಳುವ ಇಚ್ಛೆ ಇದ್ದರೆ ಅವನೇ ಬರಮಾಡಿಕೊಳ್ಳುತ್ತಾನೆ. ನಮಗೇಕೆ ಆ ಚಿಂತೆ". ಈ ರೀತಿ ಲೋಕಾಭಿರಾಮವಾಗಿ ಶಂಕರನಾರಾಯಣರಾಯರು ಉತ್ತರವಿತ್ತರು. ಆದರೆ ಚನ್ನಪ್ಪನವರಿಗೆ ಸಮಾಧಾನವಾಗಲಿಲ್ಲ. ಅವರು ಮಹಾತ್ಮರನ್ನೇ ಸಂದರ್ಶಿಸಿ ನಂದಿಯಿಂದ ನಿರ್ಗಮಿಸುವ ಮೊದಲು ಆಂಜನೇಯ ದೇವಾಲಯಕ್ಕೆ ದಯಮಾಡಿಸಬೇಕೆಂದು ಪ್ರಾರ್ಥಿಸಿದರು. "ಹರಿಜನರಿಗೆ ಈ ದೇವಾಲಯಕ್ಕೆ ಪ್ರವೇಶವುಂಟೇ ?" ಎಂದು ಗಾಂಧೀಜಿ ಪ್ರಶ್ನಿಸಿದರು. ಗರ್ಭಗುಡಿಯವರೆಗೆ ಎಲ್ಲ ಹಿಂದೂಗಳಿಗೂ ಪ್ರವೇಶವುಂಟು. ಅಲ್ಲಿಯವರೆಗೆ ಹರಿಜನರೂ ಪ್ರವೇಶಿಸಬಹುದು ಎಂದು ಚನ್ನಪ್ಪನವರು ತಿಳಿಸಿದರು. "ಹಾಗಾದರೆ ಪೂಜಾ ವೇಳೆಗೆ ಪರಿವಾರ ಸಮೇತ ಬರುತ್ತೇನೆ" ಎಂದು ಗಾಂಧೀಜಿ ತಿಳಿಸಿದರು. ಅಂತೆಯೇ ಪೂಜೆಯ ವೇಳೆಗೆ ಸರಿಯಾಗಿ ಬಂದರು. ಪೂಜೆ ಆಯಿತಲ್ಲ, ನಡೆಯಿರಿ ಹೊಗೋಣ ಎಂದು ಸಂಗಡಿಗರನ್ನು ಕರೆದರು. ಆದರೆ ಪ್ರಸಾದ ತೆಗೆದುಕೊಳ್ಳದೆ ಯಾರೂ ಹೋಗುವಂತಿಲ್ಲ ಎಂದು ಸ್ವಲ್ಪ ಗಡುಸಾಗಿಯೇ ಚನ್ನಪ್ಪನವರು ಹೇಳಿದರು. ಪ್ರಸಾದ ಸ್ವೀಕರಿಸಿ, "ನಾನು ಹೋಗಬಹುದಲ್ಲಾ,

ಅಪ್ಪಣೆಯೇ" ಎಂದು ನಗುತ್ತಾ ಕೇಳಿ ಅಲ್ಲಿದ್ದವರನ್ನೆಲ್ಲ ನಗುವಿನ ಅಲೆಯಲ್ಲಿ ತೇಲಿಸಿ, ಮೆಲ್ಲನೆ ಅಲ್ಲಿಂದ ನಿರ್ಗಮಿಸಿದರು.

ಸಿರಸಿಯ ಶ್ರೀ ಮಾರಿಕಾಂಬ ದೇವಾಲಯ ಆ ಪ್ರಾಂತದಲ್ಲಿ ಬಹಳ ಪ್ರಸಿದ್ಧವಾದುದು. ಇಲ್ಲಿ ಹಣ್ಣುಕಾಯಿ ಅಲ್ಲದೆ ಪ್ರಾಣಿಬಲಿಕೊಡುವ ಸಂಪ್ರದಾಯವೂ ಇತ್ತು. ಕರನಿರಾಕರಣೆ ನಡೆಸಿ ಅಪಾರ ಕಷ್ಟನಷ್ಟ ಅನುಭವಿಸಿ, ಅಪೂರ್ವ ಹೋರಾಟ ನಡೆಸಿದ ಕಾರವಾರದ ಜನತೆಗೆ ತಮ್ಮ ಮೆಚ್ಚಿಗೆ ವ್ಯಕ್ತಪಡಿಸಲು ಗಾಂಧೀಜಿ ಪ್ರವಾಸ ಕೈಗೊಂಡಿದ್ದರು. ಸಿರಸಿಯ ಸೀರೀಕೇಣಿಯ ಶ್ರೀ ಸುಬ್ರಮಣ್ಯದೇವಸ್ಥಾನವು ಮಹಾತ್ಮರ ಸಮ್ಮುಖದಲ್ಲಿ ಹರಿಜನರಿಗೆ ಪ್ರವೇಶ ವಿತ್ತಿತು. ಹರಿಜನರಿಗಾಗಿ ಮಹಾತ್ಮರು ಉಪವಾಸ ಕೈಗೊಂಡುದದರ ಪರಿಣಾಮ ವಾಗಿ ಈ ಭಾಗದ ಅನೇಕ ದೇವಾಲಯಗಳು ಅಸ್ಪೃಶ್ಯರಿಗೆ ತೆರವಾದುವು. ಸುಪ್ರಸಿದ್ಧ ಮಾರಿಕಾಂಬ ದೇವಾಲಯವೂ ಇದೇ ರೀತಿಯಲ್ಲಿ ಹರಿಜನರ ಪ್ರವೇಶಕ್ಕೆ ಕೇಶವೈ, ಶ್ರೀಧರಕಿಣಿ, ವಿಠ್ಠಲ ಅನಂತ ಹೊದಿಕೆ ಮೊದಲಾದವರ ಪ್ರಯತ್ನ ದಿಂದ ಸಿರಸಿ ತಾಲ್ಲೂಕಿನ ಬಹುತೇಕ ದೇವಾಲಯಗಳು ಹರಿಜನರ ಪ್ರವೇಶಕ್ಕೆ ತೆರವಾದವು. ಮಾರಿಕಾಂಬ ದೇವಾಲಯಕ್ಕೆ ದಯಮಾಡಿಸುವಂತೆ ಮಹಾತ್ಮರನ್ನು ಆಹ್ವಾನಿಸಲಾಯಿತು. ಒಪ್ಪಿಗೆ ಕೊಡುವಷ್ಟರಲ್ಲಿ ಮಾರಿಗುಡಿಯಲ್ಲಿ ಪ್ರಾಣಿ ಬಲಿ ನಿಂತಿರುವುದಿಲ್ಲ ಎಂಬ ಸುದ್ದಿ ಮಹಾತ್ಮರಿಗೆ ಮುಟ್ಟಿತು. ಇದು ತಿಳಿದು ಬರುತ್ತಲೇ ಪ್ರಾಣಿವಧೆ ನಡೆಯುತ್ತಿರುವ ದೇವಾಲಯಕ್ಕೆ ತಾನು ಬರಲಾರೆ ಎಂದು ಗಾಂಧೀಜಿ ತಿಳಿಸಿದರು.

ಕಲ್ಕತ್ತೆಯ ಕಾಳಿದೇವಾಲಯ ಬಹಳ ಪ್ರಸಿದ್ಧವಾದುದು. ಪ್ರಾಣಿವಧೆ ನಿರಂತರ ನಡೆಯುತ್ತಲೇ ಇರುತ್ತದೆ. ಗಾಂಧೀಜಿ ಈ ದೇವಸ್ಥಾನ ಪ್ರವೇಶಿಸಲು ಒಪ್ಪಲಿಲ್ಲ.

ಬೇಲೂರು ಚನ್ನಕೇಶವ ದೇಗುಲದ ಶಿಲ್ಪಕಲೆ ಜಗತ್ಪ್ರಸಿದ್ಧ. ನಾಜೂಕಾದ ಕೆತ್ತನೆಯ ಕೆಲಸ ನೋಡುವುದಕ್ಕಾಗಿಯೇ ಪ್ರಪಂಚದ ನಾನಾಭಾಗಗಳಿಂದ ಕಲಾ ರಾಧಕರು ಬರುತ್ತಾರೆ. ಮಹಾತ್ಮರು ಪರಿಹಾರ ಸಮೇತ ಬೇಲೂರಿಗೆ ದಯ ಮಾಡಿಸಿದ್ದರು. ಆಗ ಈ ದೇಗುಲಕ್ಕೆ ಹರಿಜನರಿಗೆ ಪ್ರವೇಶವಿರಲಿಲ್ಲ. ಸುಪ್ರಸಿದ್ಧ ವಾದ ಶಿಲ್ಪಕಲಾ ಚಾತುರ್ಯ, ನೋಡದೆ ಹೋಗಬಾರದೆಂದು ಮಹಾತ್ಮರಿಗೆ ಬಹಳ ಒತ್ತಾಯ ಪಡಿಸಲಾಯಿತು. ಹರಿಜನರಿಗೆ ಪ್ರವೇಶವಿಲ್ಲದ ದೇವಾಲಯಕ್ಕೆ ತಾನು ಬರಲು ಸಾಧ್ಯವಾಗದೆಂದು ನಿರಾಕರಿಸಿ, ತಮ್ಮ ಆಪ್ತಕಾರ್ಯದರ್ಶಿ ಮಹದೇವ ದೇಸಾಯಿ ಮತ್ತು ಇತರರನ್ನು ದೇವಾಲಯದ ಸೌಂದರ್ಯ ತಣಿಯಲು ಕಳುಹಿಸಿ ಕೊಟ್ಟರು.

ಒಮ್ಮೆ ಗಾಂಧೀಜಿಯವರನ್ನು ಭೇಟಿಯಾಗಲು ಒಂದು ದೊಡ್ಡ ತಂಡ ಆಶ್ರಮಕ್ಕೆ ಬಂದಿತು. ಅಷ್ಟು ಜನ ಉಳಿದುಕೊಳ್ಳಲು ಆಶ್ರಮದಲ್ಲಿ ಕೊಠಡಿಗಳಿರಲಿಲ್ಲ. ಒಂದು ದಿನದ ಮಟ್ಟಿಗೆ ಆಗಮಿಸಿರುವ ಅತಿಥಿಗಳಿಗಾಗಿ ನಿಮ್ಮ ಕೊಠಡಿಗಳನ್ನು ತೆರವು ಮಾಡಿಕೊಡಿ ಎಂದು ಖಾಯಂ ಆಶ್ರಮವಾಸಿಗಳಿಗೆ ತಿಳಿಸಿದರು. ಅವರೆಲ್ಲ ತಮ್ಮ ಸಾಮಾನು ತೆಗೆದುಕೊಂಡು ಮರಗಳ ಆಶ್ರಯ ಪಡೆದರು. ಆದರೆ ಕಸ್ತೂರಿ ಬಾ ತಮ್ಮ ಕೊಠಡಿ ಬಿಟ್ಟುಕೊಡಲಿಲ್ಲ. ಇದು ಗಾಂಧಿಯವರ ಗಮನಕ್ಕೆ ಬಂತು. ಅವರು ಕಸ್ತೂರಿ ಬಾ ಅವರಲ್ಲಿ ಹೋಗಿ 'ಹರಿಜನರೂ ನಿಮ್ಮ ಮಕ್ಕಳಲ್ಲವೇ ಅವರಿಗಾಗಿ ನಿಮ್ಮ ಕೊಠಡಿ ತೆರವುಮಾಡಿ ಕೊಡಬೇಡವೇ' ಎಂದರು. ಕುಪಿತರಾದ ಕಸ್ತೂರಿ ಬಾ, "ಅವರು ನನ್ನ ಮಕ್ಕಳಲ್ಲ, ನಿಮ್ಮ ಮಕ್ಕಳಿರಬಹುದು" ಎಂದರು. ಆದರೆ ಹಟವಾದಿ ಗಾಂಧೀಜಿ ಸುಮ್ಮನೆ ಬಿಟ್ಟಾರೆ. ಕಡೆಗೆ ಕಸ್ತೂರಿ ಬಾ ಅವರೂ ಹರಿಜನರಿಗಾಗಿ ತಮ್ಮ ಕೊಠಡಿ ತೆರವು ಮಾಡಿ ಕೊಡಬೇಕಾಯಿತು. ಆಶ್ರಮವಾಸಿಗಳು ತಮ್ಮ ಕೊಠಡಿಗಳನ್ನು ತೆರವುಮಾಡಿಕೊಡದಿದ್ದರೆ, ಬಂದಿದ್ದ ಹರಿಜನರು ಮರಗಳ ಆಶ್ರಯ ಪಡೆಯ ಬೇಕಾಗುತ್ತಿತ್ತು. ಇದಕ್ಕೆ ಪ್ರತಿಯಾಗಿ ಆಶ್ರಮವಾಸಿಗಳು ಮರಗಳ ಆಶ್ರಯ ಪಡೆದು ಹರಿಜನ ಅತಿಥಿಗಳಿಗೆ ತಮ್ಮ ಬಿಡಾರಗಳಲ್ಲಿ ಆಶ್ರಯ ಕೊಟ್ಟು ಆದರ್ಶ ಅತಿಥಿ ಸತ್ಕಾರ ನೀಡಿದರು.

ಚಾಂದಾ ಜಿಲ್ಲೆಯ ಜಿಲ್ಲಾ ಬೋರ್ಡಿನಲ್ಲಿ ತಮಗೆ ಸ್ಥಾನಕೊಡಿಸಬೇಕೆಂದು ಕೆಲವು ಹರಿಜನರು ಗಾಂಧಿಯವರ ಆಶ್ರಮಕ್ಕೆ ಬಂದರು. ವಿಷಯ ಪರಿಶೀಲಿಸಿ ನೋಡೋಣ ಎಂದರು ಗಾಂಧೀಜಿ. ಅದಾಗದು ಈಗಲೇ ಮಾಡಿಸಿಕೊಡಿ. ನಿಮ್ಮ ಮಾತು ನಡೆಯುತ್ತದೆ ಎಂದು ಬಾಗಿಲಿಗೆ ಅಡ್ಡಲಾಗಿ ಕುಳಿತು ಮುಷ್ಕರ ಹೂಡಿದರು. ಅವರಲ್ಲಿ ಕೆಲವರು ಮಹಿಳೆಯರು ಉಪವಾಸ ಮಾಡತೊಡಗಿದರು. ತನ್ನ ಚಿಕ್ಕಕುಟಿಯಲ್ಲೇ ಅವರೆಲ್ಲರಿಗೂ ಜಾಗಮಾಡಿಕೊಟ್ಟರು. ಆಶ್ರಮವಾಸಿಗಳು ಇವರೊಡನೆ ಗೌರವದಿಂದ ವರ್ತಿಸುವಂತೆ ತಿಳಿಸಿದರು. ಆದರೆ ವಿಷಯ ಪರಿಶೀಲಿಸದೆ ತಾನು ಏನೂ ಮಾಡುವುದಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ತಿಳಿಸಿದರು. ಕಡೆಗೆ ಉಪವಾಸ ಮುಷ್ಕರ ಹೂಡಿದ್ದವರು ಗುರಿಸಾಧಿಸಲು ಸೋತು, ಪೆಚ್ಚು ಮೋರೆ ಹಾಕಿಕೊಂಡು ಮುಷ್ಕರ ಕೊನೆಗಾಣಿಸಿ ಹೊರಟು ಹೋದರು.

ಮಹಾತ್ಮ ಗಾಂಧಿಯವರು ಭಾರತ ದೇಶದ ಆದ್ಯಂತ ಅನೇಕಬಾರಿ ಸುತ್ತಾಡಿದ್ದಾರೆ. ಖಾದಿ, ಹರಿಜನೋದ್ಧಾರ, ವಿದೇಶಿ ಬಹಿಷ್ಕಾರ, ಸ್ವದೇಶಿ ಪ್ರೋತ್ಸಾಹ, ಪಾನನಿರೋಧ, ಹಿಂದೂ ಮುಸ್ಲಿಂ ಸಖ್ಯ, ಸ್ವಾತಂತ್ರ್ಯ, ಸತ್ಯ, ಅಹಿಂಸೆ ಇವುಗಳ ಬಗ್ಗೆ ತಿಳಿವಳಿಕೆ ನೀಡುವುದು ಪ್ರವಾಸದ ಮುಖ್ಯ ಉದ್ದೇಶವಾಗಿರುತ್ತಿತ್ತು.

ಧನ ಸಂಗ್ರಹಿಸಲು ಮಾರ್ಗಗಳು ಅನೇಕ. ನೀತಿಯುಕ್ತವಾದ ಮಾರ್ಗ ಬಿಟ್ಟು ಅನ್ಯಮಾರ್ಗ ಹಿಡಿಯಲಾರರು. 1969 ರಲ್ಲಿ ಅವರು ಆಂಧ್ರ ಪ್ರದೇಶ ದಲ್ಲಿ ಪ್ರವಾಸ ನಡೆಸುತ್ತಿದ್ದರು. ತಮ್ಮ ಮನೆಗೆ ಮಹಾತ್ಮರನ್ನು ಬರಮಾಡಿ ಕೊಳ್ಳಬೇಕೆಂದು ಅನೇಕರು ಹಾತೊರೆಯುತ್ತಿದ್ದರು. ಆಂಧ್ರದ ವಿಜಯನಗರಂ ಊರಿಗೆ ಬಂದಾಗ ಮಹಾತ್ಮರನ್ನು ತಮ್ಮ ಮನೆಗೆ ಕರೆದುಕೊಂಡು ಬರಬೇಕೆಂದು ಬೊಡ್ಡು ಸೀತಾರಾಮಸ್ವಾಮಿ ಚೆಟ್ಟಿ ವ್ಯವಸ್ಥಾಪಕರಲ್ಲಿ ಮೊರೆಯಿಟ್ಟ. ನಿಮಿಷಕ್ಕೆ ರೂ. 116 ಗಳಂತೆ ತಮ್ಮ ಮನೆಯಲ್ಲಿ ಉಳಿಯುವಷ್ಟು ಕಾಲ ಹಣ ಕೊಡುವು ದಾಗಿ ಅವನು ಕರಾರು ಮಾಡಿಕೊಂಡ. ಗಾಂಧಿಯವರನ್ನು ಸೀತಾರಾಮ ಸ್ವಾಮಿ ಚೆಟ್ಟಿಯಾರರ ಮನೆಗೆ ಕರೆದುಕೊಂಡು ಹೋಗುವುದು ಅಷ್ಟು ಸುಲಭವಾಗಲಿಲ್ಲ. ಇದು ಕೇವಲ ಶ್ರೀಮಂತಿಕೆಯ ಡಾಂಭಿಕತನದ ಪ್ರದರ್ಶನ ಎನಿಸಿತು ಅವರಿಗೆ. ಏನೂ ಪ್ರಯಾಸವಿಲ್ಲದೆ, ಗಡಿಯಾರದ ಮುಳ್ಳು ಟಿಕ್ ಟಿಕ್ ಎಂದು ತಿರುಗುತ್ತಿದ್ದಂತೆ, ಸುಲಭವಾಗಿ ಹಣ ಗಳಿಸಬಹುದಾಗಿತ್ತು. ಆದರೂ ಕೆಲವು ನಿಮಿಷಗಳಿಗಿಂತ ಹೆಚ್ಚಾಗಿ ಅವರ ಮನೆಯಲ್ಲಿ ಗಾಂಧೀಜಿ ಉಳಿಯಲಿಲ್ಲ.

ಪ್ರವಾಸ ಮಾಡುತ್ತಾ ಎಲ್ಲೋರಕ್ಕೆ ಬಂದರು. ತಾವು ಸಂಗ್ರಹಿಸಿದ್ದ ಹಣ ವನ್ನು ಹರಿಜನ ವಿದ್ಯಾರ್ಥಿಗಳಿಗೆ ಕೊಡುವಂತೆ ಒಬ್ಬ ವಿದ್ಯಾರ್ಥಿ ಅವರನ್ನು ಪ್ರಾರ್ಥಿಸಿದ. ಅಲ್ಲದೆ ಉಚ್ಚ ವ್ಯಾಸಂಗಕ್ಕಾಗಿ ಪರದೇಶಗಳಿಗೆ ಹೋಗಬಯಸುವ ಬಡ ವಿದ್ಯಾರ್ಥಿಗಳಿಗೆ ನೆರವು ನೀಡಲು ಈ ಹಣ ಬಳಸಿಕೊಳ್ಳಬಹುದೆಂದು ಆತನ ಸಲಹೆ.

ಈ ಸಲಹೆಗೆ ಉತ್ತರ ನೀಡುತ್ತ ಗಾಂಧೀಜಿ ಹೇಳಿದರು, "ಯೋಗ್ಯ ವಿದ್ಯಾರ್ಥಿಗಳ ಊಟ, ವಸತಿ ಮತ್ತು ಶುಲ್ಕಕ್ಕಾಗಿ ಹಣ ವೆಚ್ಚ ಮಾಡುವುದು ಕಠಿಣವಲ್ಲ. ಆದರೆ ವಿದ್ಯಾರ್ಥಿ ನಿಲಯಗಳನ್ನು ತೃಪ್ತಿಕರವಾಗಿ ನಡೆಸುವುದು ಅಷ್ಟು ಸುಲಭವಲ್ಲ. ಪುಣೆ ಯಲ್ಲಿರುವ ಹರಿಜನ ವಿದ್ಯಾರ್ಥಿ ನಿಲಯ ಆದರಣೀಯವೂ, ಆದರ್ಶಪ್ರಾಯವೂ ಆಗಿದೆ. ಅದರಂತೆಯೇ ಇತರ ವಿದ್ಯಾರ್ಥಿ ನಿಲಯಗಳು ದೇಶದಲ್ಲಿ ಇದೆಯೋ ಇಲ್ಲವೋ ನಾನರಿಯೆ. ಜನರ ವಿಶ್ವಾಸಕ್ಕೆ ಪಾತ್ರವಾಗುವಂಥ ಯೋಗ್ಯ ಯೋಜನೆಗಳನ್ನು ತಯಾರಿಸಿ ಜನರ ಮುಂದಿಟ್ಟರೆ ಹಣ ತಾನಾಗಿಯೇ ಬರುತ್ತದೆ. ಆದರೆ ವ್ಯಾಸಂಗಕ್ಕಾಗಿ ವಿದೇಶಗಳಿಗೆ ಹೋಗ ಬಯಸುವ ವಿದ್ಯಾರ್ಥಿಗಳಿಗೆ ಧನ ಸಹಾಯ ನೀಡುವುದು ಕಠಿಣ. ಉಚ್ಚ ಶಿಕ್ಷಣಕ್ಕಾಗಿ ಪರದೇಶಗಳಿಗೆ ಹೋಗುವುದಕ್ಕೆ ಪ್ರೋತ್ಸಾಹ ನೀಡ ಬಾರದೆಂದು ನನ್ನ ಅಭಿಪ್ರಾಯವಲ್ಲ. ಆದರೆ ವಿದ್ಯಾರ್ಥಿಗಳನ್ನು ಹೊರದೇಶಗಳಿಗೆ ಕಳುಹಿಸುವುದು ಬುದ್ಧಿವಂತಿಕೆ ಅಲ್ಲ ಎಂದು ನನ್ನ ವಿಚಾರ. ಕಾರಣ ಇದರಿಂದ ಉದ್ದೇಶ ಸಫಲವಾಗದು. ಬೇಕಾದುದು ಬೂಕರ್ ಟಿ. ವಾಷಿಂಗ್‌ಟನ್ ಅವರ ಅನುಕರಣೆ. ಅವರು ವಿಶ್ವಕ್ಕೇ ಒಂದು ಆದರ್ಶ. ಅನವಶ್ಯಕ ಪರದೇಶಕ್ಕೆ

ಹೋಗಲು ಆಶಿಸಬಾರದು. ಭಾರತದಲ್ಲಿ ಇಬ್ಬರು ಅಂಬೇಡ್ಕರ್‌ಗಳು ಇರುವುದಿಲ್ಲ. ಸರ್ ಮನೂಭಾಯಿ ಪಟೇಲರು, ಅಂಬೇಡ್ಕರ್ ಅವರನ್ನು ವಿದೇಶಕ್ಕೆ ಕಳುಹಿಸಿ ಕೊಟ್ಟರೆಂಬುದನ್ನು ನಾನು ಬಲ್ಲೆ. ಬರೋಡ ಸಹ ಇವರಿಗೆ ಧನ ಸಹಾಯ ನೀಡಿತು. ಡಾಕ್ಟರ್ ಅಂಬೇಡ್ಕರ್ ಅವರಂಥ ಸಮರ್ಥರಿದ್ದರೆ ಅಂಥವರನ್ನು ಯೂರೋಪಿಗೆ ಕಳುಹಿಸಿ ಕೊಡಲು ನಾನು ಸಿದ್ಧ. ನಿಮ್ಮ ರೆಕ್ಕೆಗಳನ್ನು ತರಿದುಹಾಕುವ ವ್ಯಕ್ತಿನಾನಲ್ಲ. ಪವಿತ್ರ ಚಿಂತನೆ ಮತ್ತು ಪವಿತ್ರ ಕಾರ್ಯಾಚರಣೆಯಲ್ಲಿ ಅಡಕವಾಗಿದೆ ನಮ್ಮ ಉದ್ಧಾರ. ನಿಮ್ಮ ಸುತ್ತಲ ವಾತಾವರಣದಿಂದ ಬೇರೆಯಾಗಲು ಪ್ರಯತ್ನಿಸಬೇಡಿ. ಯಂತ್ರ ತಂತ್ರ ಕಲಿಯಿರಿ. ಈ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ನೆರವು ನೀಡಲು ಮತ್ತು ಉದ್ಯೋಗ ದೊರಕಿಸಿ ಕೊಡಲು ಸದಾ ನಾನು ಸಿದ್ಧ.

ರಾಷ್ಟ್ರಪಿತ – ನಾಪಿತ

ಹಳೆಯ ಕಾಲದ ಗ್ರಾಮ ಸ್ವರಾಜ್ಯ ಪದ್ಧತಿಯಲ್ಲಿ ನಾಪಿತನಿಗೆ ಒಂದು ಸ್ಥಾನವಿತ್ತು. ನಾಪಿತ ಅಥವಾ ಹಜಾಮ ಹಜಾಮತಿ ಮಾಡುವುದು ಮಾತ್ರವಲ್ಲದೆ ವೈದ್ಯ, ಶಸ್ತ್ರಚಿಕಿತ್ಸಕ, ಗಾಯಕನೂ ಆಗಿದ್ದ. ದೂಷಣಾರ್ಥದಲ್ಲಿ 'ಹಜಾಮ' ಪದ ಬಳಸುವುದುಂಟು. ಆದರೆ ಹಿಂದಿನ ಕಾಲದಲ್ಲಿ 'ಹಜಾಮ' ಗೌರವ ಸೂಚಕ ಕೆಲಸಗಾರ, ಸಮಾಜ ಸೇವಕ ಎಂಬ ಅರ್ಥದಲ್ಲಿ ಬಳಸಲಾಗಿತ್ತು. ಕ್ಷೌರಿಕ ಪದಕ್ಕೂ ಅಪಾರ್ಥ ಕಲ್ಪಿಸುವುದುಂಟು. ಕೇಶ ತೆಗೆಯುವವನು—ಕ್ಷೌರ ಮಾಡುವವನು ಕ್ಷೌರಿಕ.

ಹಿಂದಿನ ಕಾಲದಲ್ಲಿ ವಾರ, ನಕ್ಷತ್ರ, ತಿಥಿ, ನೋಡಿ ಕ್ಷೌರ ಮಾಡಿಸಿ ಕೊಳ್ಳುತ್ತಿದ್ದರು. ಅಮಾವಾಸ್ಯೆ, ಹುಣ್ಣಿಮೆ, ಏಕಾದಶಿ ಹೀಗೆ ಕೆಲವು ದಿನಗಳು ಹಜಾಮತಿಗೆ ನಿಷಿದ್ಧ. ಕ್ಷೌರ ಮಾಡಿಸಿಕೊಳ್ಳುವುದು ಆಯುಷ್ಯದ ಒಂದು ಕರ್ಮ ಎಂದು ಭಾವಿಸಲಾಗುತ್ತಿತ್ತು. ಆಯುಷ್ಕರ್ಮ ಶಾಲೆಗಳು ಸ್ಥಾಪಿತವಾದವು. ಈಗ ಇವು "ಸೆಲೂನ್" ಎಂಬ ಆಂಗ್ಲ ಪದದಿಂದ ಮರ್ಯಾದಿತವಾಗಿವೆ.

ಆಗಿನ ಕಾಲದಲ್ಲಿ ನಾಯಿಂದ ಗೊತ್ತಾದ ದಿನಗಳಲ್ಲಿ ಮನೆಗೇ ಬರುತ್ತಿದ್ದ. ಕ್ಷೌರ ಮಾಡಿಸಿಕೊಂಡು ಸ್ನಾನ ಮಾಡುತ್ತಿದ್ದರು. ಸ್ನಾನ ಮಾಡಿದರೇನೇ ಮಡಿ. ನಾಪಿತನನ್ನು ಮುಟ್ಟಿದರೂ ಸ್ನಾನ ಮಾಡಬೇಕು. ನಾನು ಅಸ್ಪೃಶ್ಯನನ್ನು ಸ್ಪರ್ಶಿಸಿದೆ ಎಂದು ಚೇಷ್ಟೆಗಾಗಿ ತಾಯಿಗೆ ಗಾಂಧೀಜಿ ಹೇಳಿಕೊಳ್ಳುವರು. ಕ್ಷೌರ ಮಾಡಿಸಿಕೊಂಡವನನ್ನು ಮುಟ್ಟುವುದು ನಿಷಿದ್ಧ. ಆಗಲೂ ಸ್ನಾನ ಮಾಡಬೇಕು. ಹಜಾಮತಿ ಮಾಡಿಸಿಕೊಂಡವನು ಹಂಡೆ ಮುಟ್ಟುವಂತಿಲ್ಲ. ದೇವರಮನೆ, ಅಡುಗೆಮನೆ ಪ್ರವೇಶಿಸುವಂತಿಲ್ಲ. ಮತ್ತೊಬ್ಬರು ಅವನಿಗೆ ನೀರೆರೆಯಬೇಕು. ಇಷ್ಟು ಬಿಗಿಕಟ್ಟು ಪಾಡಿತ್ತು, ಸವರ್ಣಿಗಳಲ್ಲಿ. 'ಸೆಲೂನ್' ಬಂದ ಮೇಲೆ ರಾತ್ರಿಯೂ ಕ್ಷೌರ ಮಾಡಿಸಿಕೊಳ್ಳುವುದು ಪ್ರಾರಂಭಿಸಿತು.

ಶುಭಾಶುಭಗಳಲ್ಲಿಯೂ ನಾಪಿತನ ಸೇವೆ ಅಗತ್ಯ. ಮಗುವಿಗೆ ಮೊಟ್ಟ ಮೊದಲು ಕೇಶ ತೆಗೆಸುವ ಚೌಲದಿಂದ ಪ್ರಾರಂಭಿಸಿ, ಆಮರಣ ಪರ್ಯಂತ ಅವನ ಸೇವೆ ಬೇಕು. ಬ್ರಹ್ಮಚರ್ಯ, ಗೃಹಸ್ಥಾಶ್ರಮ, ಸನ್ಯಾಸ ಸ್ವೀಕರಿಸುವಾಗ, ಮುಂಜಿ ಮದುವೆ ಮರಣ—ಜೀವನದ ಈ ನಾಲ್ಕು ಘಟ್ಟಗಳಲ್ಲೂ ಅವನ ಸೇವೆ ಬೇಕು. ಮರಣಾನಂತರ ಕರ್ಮ ಮಾಡುವವರು ಮುಂಡನ ಮಾಡಿಸಿಕೊಳ್ಳಬೇಕು.

ಪತಿಯನ್ನು ಕಳೆದುಕೊಂಡ ನಿರ್ಭಾಗ್ಯರು ಮುಂಡನ ಮಾಡಿಸಿಕೊಂಡು ವಿಧವೆ ಅನಿಸಿಕೊಳ್ಳುತ್ತಿದ್ದರು. ಎಲ್ಲವೂ ಅಯುಷ್ಯದ ಕರ್ಮ. ಪುಣ್ಯಕ್ಷೇತ್ರಗಳಲ್ಲಿ ಹರಕೆಯ ಮುಡಿ ತೆಗೆಯುವವನೂ ಇವನೇ.

ಉತ್ತರ ಕರ್ನಾಟಕದಲ್ಲಿ ಈ ಕರ್ಮಕ್ಕೆ 'ಕಷ್ಟ' ಎನ್ನುತ್ತಾರೆ. ಕಷ್ಟ ಮಾಡಿಸಿಕೊಳ್ಳುತ್ತೀರಾ ಎಂದರೆ ಕ್ಷೌರ ಮಾಡಿಸಿಕೊಳ್ಳುವಿರಾ ಎಂದು ಅರ್ಥ. ಆಗಿನ ಕಾಲದಲ್ಲಿ ಕ್ಷೌರ ಮಾಡಿಸಿಕೊಳ್ಳುವುದು ಅಷ್ಟು ಕಷ್ಟವಾಗಿತ್ತು. ಹಜಾಮ ದೇಶೀ ಕತ್ತಿಯಿಂದ ತಲೆ ಮುಖ ಕೆರೆಯುವನು. ಮಾಡಿಸಿಕೊಳ್ಳುವವನಿಗೆ ಸಹನೆ ಕಲಿಸುವುದು. ಯಾತನೆ ತಡೆದುಕೊಳ್ಳುವ ಶಕ್ತಿ ಕಲಿಸುವುದು. ದಕ್ಷಿಣ ದೇಶದ ಕೆಲವು ಭಾಗಗಳಲ್ಲಿ ಸರ್ವಾಂಗ ಕ್ಷೌರ ಮಾಡಿಸಿಕೊಳ್ಳುವುದೂ ಉಂಟು. ಬಹುಶಃ ಬಿಸಿಲಿನ ಬೇಗೆ ತಡೆಯಲಾರದೆ, ಮೈಮೇಲಿನ ಕೇಶ ತೆಗೆಸುತ್ತಿರಬಹುದು. ಕ್ಷೌರ ಮಾಡಿಸಿಕೊಂಡು ತಲೆಗೆ ಎಣ್ಣೆ ಲೇಪಿಸಿಕೊಳ್ಳುವುದುಂಟು. ಅನೇಕರಿಗೆ ಬಳಸುವ ಕತ್ತಿಯಿಂದ ಕಜ್ಜಿ ಮೊದಲಾದ ಚರ್ಮ ರೋಗಗಳು ಅಂಟದಿರಲೆಂದು ಎಣ್ಣೆ ಮತ್ತು ಸ್ನಾನ ಕಡ್ಡಾಯ ಮಾಡಿದ್ದರು ಪೂರ್ವಿಕರು.

ನಾಪಿತ ಸಣ್ಣ ಸಣ್ಣ ಶಸ್ತ್ರಚಿಕಿತ್ಸೆ ಮಾಡುತ್ತಿದ್ದ. ನಾಗಸ್ವರ ನುಡಿಸುವುದು ವಂಶ ಪಾರಂಪರ್ಯದ ಕಲೆ ಅವನಿಗೆ. ಶುಭ ಕಾರ್ಯಗಳಲ್ಲಿ ನಾಗಸ್ವರ ಅನಿವಾರ್ಯ. ಇಷ್ಟು ವಿಧಗಳಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿದ್ದುದರಿಂದ ಸಮಾಜ ಅವನ ಪೋಷಣೆ ವಹಿಸಿಕೊಳ್ಳುತ್ತಿತ್ತು. ಕಮ್ಮಾರ, ಚಮ್ಮಾರ, ನೇಕಾರ, ಬಡಗಿ, ವೈದ್ಯ, ಉಪಾಧ್ಯಾಯ, ಪುರೋಹಿತ, ನೀರುಗಂಟಿ ಇವರೆಲ್ಲ ಸಮಾಜ ಸೇವಕರ ಸಂಸಾರ ನಿರ್ವಹಣೆ ಗ್ರಾಮದ ಹೊಣೆ.

ನಾಯಿಂದನನ್ನು ಮುಟ್ಟಿದರೆ ಸ್ನಾನ ಮಾಡಬೇಕು ಎಂದಿದ್ದರೂ, ಇದೇ ನಾಪಿತ ಹರಿಜನರಿಗೆ ಹಜಾಮತಿ ಮಾಡ. ಅವನು ಪಂಚಮ ವರ್ಗಕ್ಕೆ ಸೇರಿದ ಪಂಚಮ. ಇವನು ನಾಲ್ಕನೆಯ ವರ್ಗಕ್ಕೆ ಸೇರಿದ ಕಾರ್ಮಿಕ. ಅವನು ಅಪರಿಶುದ್ಧ. ಇವನು ಶುದ್ಧಮಾಡುವವನು.

ಪಾಶ್ಚಾತ್ಯ ದೇಶಕ್ಕೆ ಹೋಗಿ ಬಂದವನು ಒಂದು ವಿದ್ಯೆಯನ್ನಾದರೂ ಕಲಿಯುತ್ತಾನೆ. ಮುಖಕ್ಷೌರ ಮಾಡಿಕೊಳ್ಳುವ ವಿದ್ಯೆ. ಹೀಗೆ ಬರೆಯುತ್ತಾರೆ ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ. ಹಿಂದಿನ ಕಾಲದಲ್ಲಿ ಕೇವಲ ಮುಖಕ್ಷೌರ ಮಾಡಿಸಿಕೊಳ್ಳುವ ಪದ್ಧತಿ ಇರಲಿಲ್ಲ. ಇದು ಪಾಶ್ಚಾತ್ಯ ರಾಷ್ಟ್ರಗಳಿಂದ ಆಮದಾದ ನಾಗರೀಕತೆ. ಗಾಂಧೀಜಿ ಈ ವಿದ್ಯೆಯನ್ನು ಲಂಡನ್‌ನಲ್ಲಿ ಇದ್ದಾಗ ಕಲಿತರು.

ದಕ್ಷಿಣ ಆಫ್ರಿಕದ ಪ್ರಿಟೋರಿಯಾದಲ್ಲಿ ಒಬ್ಬ ಆಂಗ್ಲ ಹಜಾಮನ ಅಂಗಡಿಗೆ ಗಾಂಧೀಜಿ ಹೋದರು—ಕ್ಷೌರ ಮಾಡಿಸಿಕೊಳ್ಳಲು. ಕರಿಯನ ಕೂದಲನ್ನು ಬಿಳಿಯನಾದ ನಾನು ಮುಟ್ಟಲಾರೆ ಎಂದು ಕಡೆಗಣಿಸಿ ಹೊರಕ್ಕೆ ಕಳುಹಿಸಿದ ಬ್ಯಾರಿಸ್ಟರ್ ಗಾಂಧಿಯನ್ನು. ಈ ವರ್ಣ ಭೇದದ ಅಹಂಕಾರ ಗಾಂಧೀಜಿ ಸಹಿಸಲಾರದೆ ಹೋದರು. ಅಂದೇ ಅಂಗಡಿಗೆ ಹೋಗಿ ಕೂದಲು ಕತ್ತರಿಸುವ 'ಕ್ಲಿಪ್ಪರ್ಸ್' ಮಿಷಿನ್ ಕೊಂಡರು.

ಮುಖಕ್ಷೌರ ಮಾಡಿಸಿಕೊಳ್ಳುವ ಕಲೆಯಂತೂ ಕರಗತವಾಗಿತ್ತು. ಆದರೆ ತನ್ನ ಕೂದಲನ್ನು ತಾನೇ ಕತ್ತರಿಸಿಕೊಳ್ಳುವ ಕಲೆ ಕಲಿತಿರಲಿಲ್ಲ. ಆದರೂ ಮಿಷಿನ್ ಬಳಸಿ 'ಕ್ರಾಪ್' ಕತ್ತರಿಸಿಕೊಂಡರು. ಸ್ನಾನಮಾಡಿ ಯೋಗ್ಯ ಉಡುಪು ಧರಿಸಿ ಕೋರ್ಟಿಗೆ ಹೋದರು.

"ಏನು ಗಾಂಧೀಜಿ, ರಾತ್ರಿ ನಿಮ್ಮ ತಲೆಕೂದಲನ್ನು ಇಲಿಗಳು ತಿಂದಂತೆ ಕಾಣಿಸುತ್ತದೆ" ಎಂದು ವಕೀಲರು ಹಾಸ್ಯಮಾಡಿ ನಕ್ಕರು. ನಿಮ್ಮ ನಗುವಿಗೆ ನಾನು ಕಾರಣನಾದೆನಲ್ಲ. ಸಂತೋಷ ಎಂದು ಹೇಳಿ ಗಂಭೀರ ಮುಖ್ರೆಯಿಂದ ತಾನೇ ಹಜಾಮತಿ ಮಾಡಿಸಿಕೊಳ್ಳಬೇಕಾದ ಪ್ರಸಂಗ ವಿವರಿಸಿದರು. ಇವನು ಸಾಮಾನ್ಯ ವ್ಯಕ್ತಿಯಲ್ಲ ಎಂದು ಗ್ರಹಿಸಿದರು, ಹಾಸ್ಯಮಾಡಿದವರು.

ಕಲಿತ ವಿದ್ಯೆ ಎಂದಾದರೂ ಉಪಯೋಗಕ್ಕೆ ಬರುತ್ತದೆ. ಈ ಕಲೆಯನ್ನು ಬಳಸಿಕೊಂಡ ನಿದರ್ಶನಗಳು ಎಷ್ಟೋ. ೧೯೩೭ರಲ್ಲಿ ಗಾಂಧೀಜಿ ಸಾಬರಮತಿ ಆಶ್ರಮ ದಲ್ಲಿದ್ದರು. ಬೆಳಿಗ್ಗೆ ೪–೩೦ ಘಂಟೆಗೆ ಎರಡನೆಯ ಘಂಟೆ ಬಾರಿಸಿತು. ಪ್ರಾರ್ಥನೆ ಪ್ರಾರಂಭವಾಗಬೇಕು. ಹರಿಜನ ಹುಡುಗಿ ಲಕ್ಷ್ಮೀ ಬರಲಿಲ್ಲ. ಎಲ್ಲಿ ಲಕ್ಷ್ಮೀ ಎಂದು ಕೇಳಿದರು. ಪಕ್ಕದಲ್ಲಿ ಲಕ್ಷ್ಮಿಯನ್ನು ಕೂಡಿಸಿಕೊಂಡು ಪ್ರಾರ್ಥನೆ ಪ್ರಾರಂಭಿಸುವುದು ವಾಡಿಕೆ. ಅವಳಿಗಾಗಿ ಕೆಲವು ನಿಮಿಷ ಕಾದರು. ಲಕ್ಷ್ಮೀ ಬಂದಳು. ಏಕೆ ಇಷ್ಟು ತಡ ಏನು ಮಾಡುತ್ತಿದ್ದೆ ಎಂದು ಪ್ರಶ್ನಿಸಿದರು. ಅವಳದು ಸಂಕೋಚ ಸ್ವಭಾವ. ಮಾತನಾಡಲಿಲ್ಲ, ತುಟಿ ಅಲುಗಿಸಲಿಲ್ಲ. ಒಂದು, ಎರಡು, ಮೂರು, ಐದಾರು ಸಾರಿ ಪ್ರಶ್ನಿಸಿದರೂ ಬಾಯಿ ಬಿಡಲಿಲ್ಲ. ಬೆಳದಿಂಗಳ ಬೆಳಕಿನಲ್ಲಿ ಬಾಪೂಜಿ ಕಪೋಲ ಕೆಂಪೇರಿದ್ದನ್ನು ಕಾಣಬಹುದಾಗಿತ್ತು.

ನಿಮಿಷ ನಿಮಿಷಕ್ಕೂ ಕೋಪ ಉಕ್ಕುತ್ತಿತ್ತು. ಧ್ವನಿ ಗಡುಸಾಗುತ್ತಿತ್ತು. ಕಡೆಗೆ ಕಪಾಲಕ್ಕೆ ಬಾರಿಸುವಂತೆ ಕೈ ಎತ್ತಿದರು. ಇದನ್ನು ನೋಡಿ ಲಕ್ಷ್ಮೀ ಬಾಯಿ ಬಿಟ್ಟಳು. ತಲೆ ಬಾಚಿಕೊಳ್ಳುತ್ತಿದ್ದೆ ಎಂದಳು. ಉತ್ತರದಿಂದ ಅವರ ಕೋಪ ಇಳಿಯಿತು. ಎತ್ತಿದ ಅಹಿಂಸೆಯ ಕೈ ಹಿಂಸಾಕೃತ್ಯ ಎಸಗದೆ ಕೆಳಗಿಳಿಯಿತು. ಕೋಪ ನುಂಗಿಕೊಂಡರು. ಪ್ರಾರ್ಥನೆ ಪ್ರಾರಂಭವಾಗಿ ಸ್ವಲ್ಪಕಾಲದನಂತರ

ಮುಗಿಯಿತು. ಪ್ರಾರ್ಥನೆ ಮುಗಿದ ಮೇಲೆ ಲಕ್ಷ್ಮಿಯನ್ನು ಸಮೀಪಕ್ಕೆ ಕರೆದು ಪ್ರಾರ್ಥನೆಯ ಕಾಲಕ್ಕೆ ಸರಿಯಾಗಿ ಬರಲು ನಿನ್ನ ಕೂದಲನ್ನು ಕತ್ತರಿಸಿ ಬಿಡ ಬಹುದಲ್ಲವೇ ಎಂದು ಪ್ರಶ್ನಿಸಿದರು. ಮಗು ಲಕ್ಷ್ಮೀ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಬಾಯಿಬಿಡಲಿಲ್ಲ. ಕತ್ತರಿ ತರಿಸಿದರು. ಸ್ವತಃ ತಾವೇ ಅವಳ ಕೂದಲನ್ನು ಸಣ್ಣ ದಾಗಿ ಕತ್ತರಿಸಿದರು.

ಸುಮಿತ್ರೆ ಐದು ವರ್ಷದ ಮುದ್ದು ಕೂಸು. ವರ್ಧಾ ಮಹಿಳಾಶ್ರಮದ ಪಕ್ಕ ದಲ್ಲಿ ಅವರ ಮನೆ. ಸುಮಿತ್ರೆಗೆ ತಲೆ ತುಂಬ ತುಂಟ ಗುಂಗುರು ಕೂದಲು. ಹಿಂದಕ್ಕೆ ಬಾಚಿದರೂ ಮುಂದಕ್ಕೆ ಮುಖದ ಮೇಲೆ ಬಂದು ಬೀಳುವುದು. ಗುಂಗುರಿನ ನಡುವೆ ನೋಡಬೇಕು. ದಿಟ್ಟಿಸಿ ನೋಡುವುದರಿಂದ ಅವಳ ದೃಷ್ಟಿಗೆ ಹಾನಿಯಾಗುವ ಸಂಭವವಿತ್ತು. ಇವಳ ಕೂದಲನ್ನು ಕತ್ತರಿಸಲು ತಾಯಿ ಎಷ್ಟು ಹೇಳಿದರೂ ಇವಳು ಕೇಳುತ್ತಿರಲಿಲ್ಲ. ಓಡಿಹೋಗುವಳು ಕೈಗೆ ಸಿಗದೆ.

ಸುಮಿತ್ರೆಯ ತಾಯಿ–ತಂದೆ ಈ ವಿಷಯ ಮಹಾತ್ಮರಿಗೆ ತಿಳಿಸಿದ್ದರು. ದೀಪಾವಳಿ ಬಂತು. ಸುಮಿತ್ರೆ ನೆರೆಹೊರೆಯವರಿಗೆ ಸಿಹಿ ಹಂಚಿದಳು. ಮಾರನೆಯ ದಿನ ನೂತನ ವರ್ಷ ಗುಜರಾತಿಗಳಿಗೆ. ಅಂದು ಹಿರಿಯರಿಗೆ ನಮಸ್ಕರಿಸುವುದು ವಾಡಿಕೆ. ಆಶ್ರಮಕ್ಕೆ ಸುಮಿತ್ರೆ ಬಂದು ಬಾಪೂಜಿಗೆ ನಮಸ್ಕರಿಸಿದಳು. ಆರೋಗ್ಯವಾಗಿ ದೀರ್ಘಕಾಲ ಬಾಳು ಎಂದು ಆಶೀರ್ವದಿಸಿದರು. ದೀಪಾವಳಿಯಂದು ಎಲ್ಲರಿಗೂ ಸಿಹಿ ಹಂಚಿದೆ ಎಂದು ಜಂಭ ಕೊಚ್ಚಿಕೊಂಡಳು ಸುಮಿತ್ರೆ. ನನಗೆ ಕೊಡಲಿಲ್ಲವಲ್ಲ ಎಂದರು ಬಾಪೂಜಿ ಕಣ್ಣು ಮಿಟಕಿಸುತ್ತ. "ಅಯ್ಯೋ, ಮರತೆ, ಈಗ ಮನೆಗೆ ಹೋಗಿ ಅಮ್ಮನಿಂದ ಸಿಹಿ ಕೇಳಿ ತಂದುಕೊಡುವೆ" ಎಂದಳು ಸುಮಿತ್ರೆ. "ಈಗ ನನಗೆ ತಿಂಡಿ ಬೇಡ. ನಾನು ಕೇಳಿದ್ದನ್ನು ನೀನು ಕೊಡುವೆಯಾ" ಎಂದರು ತುಂಟ ನಗು ನಗುತ್ತಾ ಬಾಪೂಜಿ. ಏನು ಕೇಳಿಯಾರು ಎಂದು ಯಾರು ತಾನೆ ಊಹಿಸಿಯಾರು. ನನಗೊಂದು ಮುತ್ತುಕೊಡು ಎಂದು ಕೇಳಬಹುದು. ಹೀಗೆ ಭಾವಿಸಿದಳು ಮುಗ್ಧ ಸುಮಿತ್ರೆ. ಆಗಲಿ ಕೇಳಿದ್ದು ಕೊಡುವೆ ಎಂದಳು ಉತ್ಸಾಹ ದಿಂದ. ಥಾಟಿ ಮುದುಕ "ನಿನ್ನ ಕೂದಲು ಕೊಡು" ಎಂದ. ಸುಮಿತ್ರೆ ಅವಕ್ಕಾದಳು. ಅಳು ಬರುವಂತಾಯಿತು. ಮಾಡುವುದೇನು? ಮಾತುಕೊಟ್ಟದ್ದಾಯಿತು. "ಆಗಲಿ. ಆದರೆ ನೀವೇ ಕತ್ತರಿಸಬೇಕು." ಆಗಲಿ ಎಂದರು ಬಾಪೂಜಿ. ಕೂಡಲೇ ಸಮೀಪ ದಲ್ಲಿದ್ದ ಕನು ಗಾಂಧಿಯನ್ನು ಕರೆದು ಕೂದಲು ಕತ್ತರಿಸುವ ಮಿಷನ್ ತರಿಸಿ ದರು. ಮಿಷನ್ ಚೊಕ್ಕಟ ಮಾಡಿ ಸಣ್ಣದಾಗಿ ಕೂದಲು ಕತ್ತರಿಸಿದರು. ಸುಮಿತ್ರೆ ಕೂದಲು ಕತ್ತರಿಸಿಕೊಂಡು ತಾಯಿ ಬಳಿಗೆ ಹೋಗಿ ನಡೆದುದೆಲ್ಲ ತಿಳಿಸಿದಳು. "ನಿನ್ನ ಕೂದಲನ್ನು ಬಾಪು ಕತ್ತರಿಸುವಂತೆ ಮಾಡಿದೆಯಲ್ಲ. ನೀನೇ ಪುಣ್ಯಶಾಲಿ" ಎಂದಳು ತಾಯಿ. ತನ್ನಿಂದ ಆಗದ ಕೆಲಸ ಬಾಪು ಮಾಡಿದರಲ್ಲ ಎಂದು

ಹರ್ಷಿಸಿದಳು. ಅಂದಿನಿಂದ ಕೂದಲು ಕತ್ತರಿಸಿಕೊಳ್ಳುವ ವಾಡಿಕೆ ಆಯಿತು ಸುಮಿತ್ರಳಿಗೆ.

ವಯಸ್ಸು ಹನ್ನೊಂದು ಆಗಿದ್ದಾಗ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳ ಬೇಕಾಯಿತು ಸುಮಿತ್ರೆ. ಸುಮಿತ್ರೆ ಬೇರೆಯಾರೂ ಅಲ್ಲ. ಗಾಂಧಿಯವರ ಮೊಮ್ಮಗಳು. ರಾಮದಾಸನ ಮಗಳು. ಮುಂದೆ ಬಿ. ಎ. ಪದವೀಧರಳಾದವಳು.

1934 ಮೇ ತಿಂಗಳಲ್ಲಿ ಗಾಂಧೀಜಿ ಓರಿಸ್ಸ ಪ್ರಾಂತದಲ್ಲಿ ಪಾದಯಾತ್ರಿಯಾಗಿ ಹೊರಟಿದ್ದರು. ಎರಡನೆಯ ದಿನ ಸಾಖಿಗೋಪಾಲ ಊರಿನ ಸೇವಾಸದನದಲ್ಲಿ ತಂಗಿದ್ದರು. ಹಳ್ಳಿಯ ನಾಪಿತ ಕ್ಷೌರ ಮಾಡಲು ಬಂದ. ಗಾಂಧಿಯವರ ಸೂಕ್ಷ್ಮ ದೃಷ್ಟಿ ಅವನು ತಂದಿದ್ದ ಹೊಸ ಅಲ್ಯುಮಿನಿಯಂ ಬಟ್ಟಲತ್ತ ಹೊರಳಿತು. ಕೂಡಲೇ ಗೋಪಬಂಧು ಚೌಧುರಿಯವರನ್ನು ಬರಮಾಡಿಕೊಂಡು ನನಗಾಗಿ ಈ ಬಟ್ಟಲು ಕೊಂಡಿರಾ ಎಂದು ಪ್ರಶ್ನಿಸಿದರು. ತಮಗಾಗಿ ಮತ್ತು ತಮ್ಮ ಪರಿವಾರಕ್ಕಾಗಿ ವಿಶೇಷ ವೆಚ್ಚಮಾಡಬಾರದೆಂದು ಮೊದಲೇ ಅವರು ತಿಳಿಸಿದ್ದರು. ನಾಲ್ಕಾಣೆಯ ಒಂದು ಸಣ್ಣ ಬಟ್ಟಲನ್ನು ತಮಗಾಗಿ ಕೊಂಡಿರಬೇಕೆಂದು ಅವರು ಸಿಟ್ಟಾಗಿದ್ದರು. ಇಲ್ಲಿ ಇದು ಆಶ್ರಮಕ್ಕೆ ಸೇರಿದ ಬಟ್ಟಲು ಎಂದು ಸಮಾಧಾನಪಡಿಸಿದ ಮೇಲೆ ಗಾಂಧೀಜಿ ಶಾಂತರಾದರು.

ಇದೇ ಪ್ರವಾಸದಲ್ಲಿ ಬಾಹುಕುಡ್ ಎಂಬಲ್ಲಿ ಉಳಿದಿದ್ದರು. ಒಬ್ಬ ಹೆಣ್ಣು ಕಸಬುದಾರಳು ಕ್ಷೌರ ಮಾಡಲು ಬಂದಳು. ದೊಡ್ಡವರನ್ನು ಸಂದರ್ಶಿಸಲು ಹೋದಾಗ ಒಳ್ಳೆಯ ಸೀರೆಕುಪ್ಪಸ, ಆಭರಣ ತೊಟ್ಟು ಹೋಗಬೇಕಲ್ಲವೇ ? ನೆರೆಮನೆಯವರಿಂದ ಬೆಳ್ಳಿಯ ಆಭರಣ ಎರವಲಾಗಿ ಪಡೆದು ತೊಟ್ಟು ಬಂದಿದ್ದಳು. ನೋಡುತ್ತಲೇ ಇವು ಇವಳದಲ್ಲ ಎಂದು ಹೇಳಬಹುದಾಗಿತ್ತು. ಅವು ಗಾತ್ರವಲ್ಲಿ ಅಷ್ಟು ದೊಡ್ಡವು. ಸ್ತ್ರೀಯರ ಆಭರಣ ಕಸಿಯುವುದರಲ್ಲಿ ಗಾಂಧೀಜಿ ನಿಷ್ಣಾತರು. ಆಭರಣ ಹರಿಜನ ನಿಧಿಗೆ ಲಪಟಾಯಿಸಬೇಕೆಂದು ಬಗೆದು ಇವೆಲ್ಲ ನಿನ್ನವೇ ಎಂದು ಕೇಳಿಯೇಬಿಟ್ಟರು. ತಮ್ಮಂಥ ದೊಡ್ಡವರಲ್ಲಿ ಬಂದಾಗ ಆಭರಣವಿಲ್ಲದೆ ಹೇಗೆ ಬರುವುದು. ನೆರೆಯವರಿಂದ ಎರವಲು ಪಡೆದು ತಂದಿರುವೆ ಎಂದು ನಿಜ ಹೇಳಿದಳು. ಆದರೆ ಮಹಾತ್ಮರಿಗೆ ಕಾಣಿಕೆ ಕೊಡಬೇಕೆಂದು ಅವಳ ಮನಸ್ಸಿನಲ್ಲೂ ಇತ್ತು. ಮಹಾತ್ಮರಿಗೆ ಕ್ಷೌರ ಮಾಡಿದ ಪುಣ್ಯಾತ್ಮಗಿತ್ತಿಯಿಂದ ಕ್ಷೌರ ಮಾಡಿಸಿಕೊಳ್ಳಲು ಬಹುಜನ ಕಾತರರಾಗಿ ಕಾದಿದ್ದರು. ಹಜಾಮತ್ತಿನಿಂದ ಐದು ರೂಪಾಯಿ ಸಂಪಾದಿಸಿದಳು. ಐದು ರೂಪಾಯಿ ಅವರಿಗೆ ಸಮರ್ಪಿಸಿ ಕೃತಾರ್ಥಳಾದಳು.

ಸೇವಾಗ್ರಾಮದಲ್ಲಿ ಆಶ್ರಮ ಸ್ಥಾಪಿಸಿ ಬಹುಕಾಲವಾಗಿರಲಿಲ್ಲ. ಒಂದು ದಿನ ಗ್ರಾಮದ ಪಟೇಲ ಮಹಾತ್ಮರನ್ನು ನೋಡಲು ಬಂದ. ದಢೂತಿ ಆಕಾರದ

ಮುದುಕ. ಆಕಾರಕ್ಕೆ ತಕ್ಕ ದಪ್ಪ ಮೀಸೆ. ವಯಸ್ಸಿನಿಂದ ಬಿಳುಪಾಗಿತ್ತು. ಅಸ್ಪೃಶ್ಯತೆಯ ನಿವಾರಣೆಯಲ್ಲಿ ತನ್ನ ಸಹಕಾರ ದೊರೆಯದು. ಹೀಗೆಂದು ಮೊದಲೇ ಅವನು ತಿಳಿಸಿದ್ದ. ಹರಿಜನರಿಗೆ ಕ್ಷೌರ ಮಾಡಲು ಒಪ್ಪದವರಿಂದ ತಾನು ಕ್ಷೌರ ಮಾಡಿಸಿಕೊಳ್ಳುವುದಿಲ್ಲವೆಂದು ಬಾಪು ನಿರ್ಧರಿಸಿದ್ದರು. ಹಿಂದಿನ ದಿನ ಗ್ರಾಮದ ಹಜಾಮ, ಅವನ ಮಗಳು ಮತ್ತು ಹೆಂಡತಿ ಮಹಾತ್ಮರ ದರ್ಶನಕ್ಕಾಗಿ ಬಂದಿದ್ದರು. ಆಗ ಅವರ ಗಡ್ಡದ ಕೂದಲು ಬೆಳೆದಿತ್ತು. ಅದನ್ನು ಪ್ರದರ್ಶಿಸುತ್ತ ನಿನ್ನ ಗಂಡ ನನಗೆ ಕ್ಷೌರ ಮಾಡುವನೇ ಎಂದು ಪ್ರಶ್ನಿಸಿದ್ದರು. ತಾವು ಹೇಳಿ ಕಳುಹಿಸಿದರೆ ಅಗತ್ಯವಾಗಿ ಬಂದು ಕ್ಷೌರ ಮಾಡುವನು ಎಂದು ಭರವಸೆ ನೀಡಿದ್ದಳು. ಆದರೆ ಹರಿಜನರಿಗೂ ಕ್ಷೌರ ಮಾಡಲು ಸಮ್ಮತಿಸುವಿಯಾ ಎಂಬ ಪ್ರಶ್ನೆಗೆ ಉತ್ತರ ಕೊಡಲು ಅವಳು ಅಸಮರ್ಥಳಾಗಿದ್ದಳು. ಗಂಡನನ್ನು ಕೇಳುವೆ ಎಂದು ಮಾತ್ರ ತಿಳಿಸಿದ್ದಳು. ಈಗ ಊರಿನ ಪಟೇಲ ಬಂದಿದ್ದ. ನಾಪಿತನನ್ನು ಕಳುಹಿಸಿ ಕೊಡುವೆಯಾ ಎಂದು ಅವನಿಗೂ ಕೇಳಿದರು. ಅಗತ್ಯವಾಗಿ ಆಗಬಹುದು ಎಂದ. ನನ್ನ ಮಾತು ಅವನು ಮೀರಲಾರ. ಆದರೆ ಹರಿಜನರಿಗೂ ಕ್ಷೌರ ಮಾಡಲು ಅವನು ಒಪ್ಪುತ್ತಾನೆಯೇ. ನೀನು ಅವನಿಗೆ ಅನುಮತಿ ಕೊಡುತ್ತೀಯಾ ಎಂದು ಕೇಳಿದರು. ಅವನು ತಬ್ಬಿಬ್ಬಾದ. "ನನ್ನ ಸಂಸಾರದಲ್ಲಿ ಹರಿಜನರು ಹಲವರು. ಹರಿಜನ ಗೋವಿಂದನೂ ನನ್ನ ಮನೆ ಕುಟುಂಬಕ್ಕೆ ಸೇರಿದವನೇ. ನನ್ನ ಸಮೀಪಕ್ಕೆ ಬರಗೊಡಿಸದಿದ್ದರೆ ನನ್ನ ಹಜಾಮತಿ ಹೇಗೆ ಅವನು ಮಾಡಿಯಾನು. ನಿನ್ನನ್ನು ಒಂದು ಮದುವೆಗೆ ಆಹ್ವಾನಿಸುತ್ತಾರೆಂದು ತಿಳಿ. ನಿನ್ನ ಮಗನೊಡನೆ ನೀನು ಅಲ್ಲಿಗೆ ಹೋಗುತ್ತೀಯ. ನಿನ್ನ ಮಗನನ್ನು ಒಳಕ್ಕೆ ಬಿಡಲಾಗದು. ನಿನ್ನನ್ನು ಮಾತ್ರ ಬಿಡುತ್ತೇವೆ ಎಂದರೆ ನೀನು ಆಗ ಏನು ಮಾಡುವೆ" ಎಂದು ಪ್ರಶ್ನಿಸಿದರು ಗಾಂಧೀಜಿ.

ಸಂಭಾಷಣೆ ನಡೆಯುತ್ತಿದ್ದುದನ್ನು ಕೇಳುತ್ತಾ ಜಮುನಾಲಾಲ್ ಬಜಾಜರು ನಿಂತಿದ್ದರು. ಹಲವು ವರ್ಷಗಳಿಂದ ಆ ಪಟೇಲನ ಪರಿಚಯ ಸಾಹುಕಾರರಿಗೆ ಇತ್ತು. 'ಪಾಪ, ಅವನನ್ನು ಪೇಚಿಗೆ ಸಿಕ್ಕಿಸುತ್ತಿರುವಿರಿ. ಅಸ್ಪೃಶ್ಯತೆ ಬಿಡುವುದರಿಂದ ನೇರವಾಗಿ ಸ್ವರ್ಗಕ್ಕೆ ಹೋಗಬಲ್ಲ. ಈ ಭರವಸೆ ಅವನಿಗೆ ಖಾತ್ರಿ ಮಾಡಿ ಕೊಟ್ಟರೆ, ಇಂದಿನಿಂದಲೇ ಅಸ್ಪೃಶ್ಯತೆ ತೊರೆಯಲು ಅವನು ಸಿದ್ಧ. ಆದರೆ ನಿಮ್ಮ ನಮ್ಮ ಭರವಸೆ ಅವನ ಸಂದೇಹ ನಿವಾರಣೆ ಮಾಡದು. ತೃಪ್ತಿಗೊಳಿಸದು" ಹೀಗೆ ಹಾಸ್ಯ ಮಾಡಿದರು. ಈ ಹಾಸ್ಯದಿಂದ ಎಲ್ಲರೂ ನಗುವಿನಲ್ಲಿ ಮುಳುಗಿದರು. ಆದರೆ ಪಟೇಲ ಗಂಭೀರ ಮುದ್ರೆಯನ್ನೇ ತಾಳಿದ್ದ. "ತಮ್ಮಂಥ ಮಹಾತ್ಮರು ಎಲ್ಲವನ್ನೂ ನುಂಗಿ ಜೀರ್ಣಿಸಿಕೊಳ್ಳಬಲ್ಲರು. ಆದರೆ ನನ್ನಂಥ ಸಾಮಾನ್ಯನಿಗೆ ಸಾಧ್ಯವಾಗದು" ಎಂದು ಹೇಳುತ್ತಾ ಅಲ್ಲಿಂದ ಪಟೇಲ ಕಾಲ್ತೆಗೆದ.

ಆದರೆ ಇಷ್ಟಕ್ಕೇ ಈ ವಿಷಯ ಅಂತ್ಯಗೊಳ್ಳಲಿಲ್ಲ. ಒಬ್ಬ ಸಾಧು ಆಶ್ರಮಕ್ಕೆ ಬಂದು ಉಳಿದ. ಇವನ ಶಿಷ್ಯರಿಗೆ ಇವನು ಸಾಧು ಬಾವಾ. ಸಾಧು ಬಾವಾ ಹರಿಜನೋದ್ಧಾರ ಕಾರ್ಯದಲ್ಲಿ ಮಹಾತ್ಮರೊಡನೆ ಸಹಕರಿಸುತ್ತಿದ್ದ. ಹರಿಜನರು ಮಾಡಿದ ಅಡುಗೆಯ ಊಟ ಮಾಡುತ್ತಿದ್ದ. ಆದರೆ ಇವನ ಅನು ಯಾಯಿಗಳಿಗೆ ಇದು ಸರಿ ಎನಿಸುತ್ತಿರಲಿಲ್ಲ. ಅವರ ಮನ ಒಲಿಸಲು ಸಾಧ್ಯ ವಾಗದೆ ಶಿಷ್ಯರೊಡಗೂಡಿ ಮಹಾತ್ಮರಲ್ಲಿಗೆ ಬಂದ.

'ಹರಿಜನರು ಸವರ್ಣೆಗಳ ಸಮಾನಸ್ಕರಾದಾರೆಯೇ?' ಚರ್ಚೆ ಪ್ರಾರಂಭಿಸಿತು. ಕೆಳದರ್ಜೆಯ ಪಶು ಪ್ರಾಣಿಗಳೂ ಅಸ್ಪೃಶ್ಯತೆ ಆಚರಿಸುತ್ತವೆ. ಹೀಗಿರುವಲ್ಲಿ ಮಾನವರಾದ ನಮಗೆ ಅಸ್ಪೃಶ್ಯತೆ ತೊರೆಯುವುದು ಶಕ್ಯವೇ?

"ನಿಮ್ಮ ವಾದ ವಿಚಿತ್ರವೆನಿಸುತ್ತದೆ. ವಿವರಿಸಿ ಹೇಳಿ" ಎಂದರು ಗಾಂಧೀಜಿ.

"ಕತ್ತೆ, ನಾಯಿಯೊಡನೆ ಬೆರೆಯುವುದಿಲ್ಲ, ಕಾಗೆ, ಪಾರಿವಾಳದ ಮೊಟ್ಟೆ ಮುಟ್ಟದು. ಪ್ರತಿಯೊಂದು ಪ್ರಾಣಿಯೂ ತನ್ನ ಗುಂಪಿನೊಡನೆಯೇ ಇರುತ್ತದೆ. ಅವುಗಳಿಂದಾಗುವ ಉಪಯೋಗ ಪ್ರತ್ಯೇಕ. ಇವೆಲ್ಲವೂ ದೈವ ನಿಮಿತ್ತ."

ಹಸು ಮತ್ತು ನಾಯಿಗಳಲ್ಲಿರುವ ಭಿನ್ನತೆ ಸವರ್ಣೆ ಮತ್ತು ಅಸ್ಪೃಶ್ಯರಲ್ಲಿ ಇದೆ. ಇದು ನಿಮ್ಮ ವ್ಯಾಖ್ಯಾನವೇ ಎಂದು ಕೇಳಿದರು. ಬಾಪೂಜಿ, ಪ್ರಶ್ನೆಗೆ ಉತ್ತರ ತಾವೇ ಹೇಳಿದರು.

ಹಸು, ಎಮ್ಮೆ, ಕತ್ತೆ, ನಾಯಿ ಇವುಗಳನ್ನು ಸರಿಯಾಗಿ ಪಾಲಿಸಿದರೆ ಅವೆಲ್ಲವೂ ಒಂದೇ ಛಾವಣಿಯ ಕೆಳಗೆ ಸುಖವಾಗಿ ಇರುತ್ತವೆ. ಕ್ರೂರ ಮೃಗಗಳಿಂದ ನಾವು ದೂರ ಸರಿಯುವುದಿಲ್ಲವೇ ಎಂದು ಮರು ಸವಾಲು ಹಾಕಿದರು.

"ಸಿಂಹ, ಹುಲಿ, ಹಾವು ಇವು ಅಸ್ಪೃಶ್ಯರೆಂದು ಅದರಿಂದ ನೀವು ದೂರ ಸರಿಯುವಿರೋ. ಅರ್ಥವಿಲ್ಲ. ಅವನ್ನು ಕಂಡರೆ ಭಯ. ಆದ್ದರಿಂದ ದೂರವಿರುವಿರಿ. ಸಾಧ್ಯವಾದರೆ ಅವನ್ನು ಪಳಗಿಸಲು ಬಯಸುವಿರಿ. ಕ್ರೂರ ಪ್ರಾಣಿ ಗಳನ್ನು ಪಳಗಿಸಿದವನು ಪವಾಡ ಪುರುಷನೆಂದು ಅವನ ಆಶೀರ್ವಾದ ಬಯಸುವಿರಿ."

ಆದರೆ ಹಂದಿಯನ್ನು ನಾವು ಮುಟ್ಟೆವು. ಅದು ಕ್ರೂರ ಪ್ರಾಣಿಯೆಂದಲ್ಲ, ಆದರೆ ಅದು ಗಲೀಜು ಪ್ರಾಣಿ. ಅಮೇಧ್ಯ ತಿನ್ನುತ್ತದೆ. ರೊಚ್ಚೆಯಲ್ಲಿ ಬಿದ್ದು ಆನಂದ ಪಡುತ್ತದೆ.

"ಉತ್ತಮ ವಸ್ತ್ರ ಧರಿಸಿದವನು, ಕೊಳಕು ಮನುಷ್ಯ, ಅಸ್ಪೃಶ್ಯ ಎಂದು ನಿಮ್ಮನ್ನು ಸಮೀಪಕ್ಕೆ ಬರಗೊಡದಿದ್ದರೆ ನಿಮ್ಮ ಮನಸ್ಸು ಒಪ್ಪೀತೆ? ಮನೆಯ

ಗೃಹಿಣಿ ಮಕ್ಕಳ ಮಲ ತೊಳೆಯುವುದಿಲ್ಲವೇ ? ಈ ಕಾರಣದಿಂದ ಅವಳು ಅಸ್ಪೃಶ್ಯಳಾಗುತ್ತಾಳೆಯೇ ? ಅವಳೇ ಮನೆಯ ಯಜಮಾನಿ, ರಾಣಿ ಆಗುವುದಿಲ್ಲವೇ ?"

ಮಾತು ಬೆಳೆಯಿತು. ಮಹಾತ್ಮರ ಪ್ರಶ್ನೆಗಳಿಗೆ ಸಮರ್ಪಕ ಉತ್ತರಕೊಡಲು ಬಾವಾ ಶಿಷ್ಯರಿಗೆ ಸುಲಭವೆನಿಸಲಿಲ್ಲ. ಜಟಿಲ ಸಮಸ್ಯೆ ಸುಗಮಗೊಳಿಸುವ ಪ್ರಯತ್ನ ಮಾಡಿದರು ಗಾಂಧೀಜಿ. "ಪಾಯಖಾನೆ, ಮೋರಿ, ಬೀದಿಯ ಕಸ ಗುಡಿಸುವ ಕೆಲಸ ಮುಗಿಸಿ, ಸ್ನಾನಮಾಡಿ ಮಡಿ ಉಟ್ಟು ಬಂದರೆ ಅವರನ್ನು ಸ್ಪರ್ಶಿಸಲು, ಜತೆಗೂಡಿಸಿಕೊಳ್ಳಲು ಅಭ್ಯಂತರವಿಲ್ಲವಷ್ಟೆ. ನಿಮ್ಮ ಮಲಕೂಪ ಸ್ವಚ್ಛಗೊಳಿಸುವುದರಿಂದ ನ್ಯಾಯವಾಗಿ ನೀವು ಅವರಿಗೆ ಋಣಿಯಾಗಿರಬೇಕು. ಈಗ ನಡೆಯುತ್ತಿರುವುದು ತಿರುಗು–ಮುರುಗು. ಸತ್ತ ಪ್ರಾಣಿ, ದನದ ಮಾಂಸ ತಿನ್ನದೆ ಶುಚಿಯಾದ ಆಹಾರ ಸೇವಿಸಿದರೆ ನೀವು ಅವರನ್ನು ಮುಟ್ಟಬಹುದಲ್ಲ. ಈ ರೀತಿ ಉತ್ತಮ ಆಹಾರ, ಸ್ವಚ್ಛ ಉಡುಪು ಧರಿಸಿ, ನಮಗಿಂತ ಶುಚಿಯಾಗಿರುವ ಅನೇಕ ಹರಿಜನ ಭಾರತದಲ್ಲಿದ್ದಾರೆ. ಆದರೂ ಅಸ್ಪೃಶ್ಯರೆಂದು ಅವರನ್ನು ದೂರ ಇರಿಸುತ್ತೇವೆ. ಭಗವಂತ ನಮ್ಮ ಈ ಅಪರಾಧಗಳನ್ನು ಹೇಗೆ ಮನ್ನಿಸಿಯಾನು ?"

"ಆದರೆ ದೇವಾಲಯಕ್ಕೂ ಅವರಿಗೆ ಪ್ರವೇಶವಿರಬೇಕು. ಬ್ರಾಹ್ಮಣರ ಜತೆನಿಂತು ಪೂಜೆಮಾಡಲಿ ಎನ್ನುವಿರಿ. ಹೇಸಿಗೆ ಕೆಲಸದಲ್ಲಿ ನಿರತರಾದವರನ್ನು ದೇವಸ್ಥಾನದ ಒಳಕ್ಕೆ ಹೇಗೆ ಸೇರಿಸುವುದು ?"

"ತಲೆಯಮೇಲೆ ಮಲದ ಕುಕ್ಕೆ ಹೊತ್ತು ದೇವ ಮಂದಿರ ಪ್ರವೇಶಿಸಲು ಅವರಿಗೆ ನಾನು ಕರೆಕೊಟ್ಟಿಲ್ಲ. ಸ್ನಾನ ಮಾಡಿ, ಶುಭ್ರ ಉಡುಪುತೊಟ್ಟು ದೇವಾಲಯ ಪ್ರವೇಶಿಸಲು ತಿಳಿಸಿರುವೆ. ನಿಮ್ಮ ವಾದದಂತೆ ವೈದ್ಯರು, ಶಸ್ತ್ರಚಿಕಿತ್ಸಕರು, ದಾದಿಯರೂ ಅಸ್ಪೃಶ್ಯರಲ್ಲವೆ? ಹೆಣಕುಯ್ಯುತ್ತಾರೆ. ಪ್ರಾಣಿಗಳನ್ನು ಕತ್ತರಿಸುತ್ತಾರೆ, ಪ್ರಯೋಗಕ್ಕಾಗಿ. ಆದ್ದರಿಂದ ಅವರೂ ಅಸ್ಪೃಶ್ಯರಲ್ಲವೆ ?"

ಅಂತ್ಯವಿಲ್ಲದೆ ಮಾತು ಮುಂದುವರಿಯುತ್ತಿತ್ತು. ಇಷ್ಟರಲ್ಲಿ ಮಾಸಹೊತ್ತ ಊರಿನ ಪಟೇಲ ಪ್ರವೇಶಿಸಿದ. ಆಶ್ರಮದ ಹರಿಜನ ಬಾಲಕ ಗೋವಿಂದನಿಗೆ ಕ್ಷೌರ ಮಾಡಲು ಅಡ್ಡಿ ಮಾಡಿದ್ದವನು ಈ ಪಟೇಲನೇ. ಮಹಾತ್ಮರಿಗೆ ಕ್ಷೌರ ಮಾಡಲು ನಿರಾಕರಿಸಿದ್ದ ಹಜಾಮನೆಂದು ಈ ಕ್ಷೌರಿಕ ಪ್ರಸಿದ್ಧ ಪುರುಷನಾಗಿದ್ದ. ಏಕೆ ನಿರಾಕರಿಸಿದೆ ಎಂದು ಎಲ್ಲರೂ ಕೇಳುವವರೇ. ಮಹಾತ್ಮರಿಗೆ ಅವನ ಸೇವೆಯ ಅಗತ್ಯ ಅಷ್ಟಾಗಿ ಇರಲಿಲ್ಲ. ಸ್ವತಃ ಅವರೇ ಕ್ಷೌರ ಮಾಡಿಕೊಳ್ಳಬಲ್ಲವರಾಗಿದ್ದರು. ಆ ಬಡ ನಾಯಿಂದನಿಗೆ ತಿಂಗಳಿಗೆ 15 ಆಣೆಯ ಕೆಲಸ ಕೊಡುವುದು ಅವರ ಉದ್ದೇಶ. ಅವನಿಗೆ 15 ಆಣೆ ತುಂಬ ಪ್ರಯೋಜನಕ್ಕೆ ಬರುತ್ತಿತ್ತು. ಆದರೆ ಬಹಿಷ್ಕಾರದ ಭಯ ಅವನಿಗೆ. ಹರಿಜನ ಗೋವಿಂದನಿಗೆ ಕ್ಷೌರ ಮಾಡಲು ಆದಕ್ಕಾಗಿ ಅವನು

ಹಿಂಜರಿಯುತ್ತಿದ್ದ. ಮೊದಲು ಬಹಿಷ್ಕಾರ ವಿಧಿಸುವವನು ಸೇವಾಗ್ರಾಮದ ಪಟೇಲ.

ಹೀಗಿರುವಲ್ಲಿ ಒಂದು ದಿನ ಹಟಾತ್ತನೆ ಗಾಂಧಿಯವರ ಆಶ್ರಮಕ್ಕೆ ಬಂದ. ಅವನಲ್ಲಿ ಏನೋ ಪರಿವರ್ತನೆ ಆಗಿಹೋಗಿತ್ತು. "ಮಹಾರಾಜ, (ಮಹಾತ್ಮರನ್ನು ಮಹರಾಜ ಎನ್ನುವುದು ವಾಡಿಕೆ) ಗೋವಿಂದನಿಗೆ ಹಜಾಮತಿ ಮಾಡುವ ನಾಪಿತನಿಂದ, ನಾನು ಕ್ಷೌರ ಮಾಡಿಸಿಕೊಳ್ಳಲು ಸಿದ್ಧ ಎಂದು ಎಲ್ಲರ ಸಮ್ಮುಖದಲ್ಲಿ ನಾನು ಘೋಷಿಸ ಬಯಸುತ್ತೇನೆ. ಗೋವಿಂದ ನಿಮ್ಮ ಮಗನೆಂದು ನೀವು ತಿಳಿಯುತ್ತೀರಿ. ಮೊದಲು ಗೋವಿಂದನಿಗೆ ಅವನು ಕ್ಷೌರ ಮಾಡಲಿ. ಪಕ್ಕದಲ್ಲಿಯೇ ನಾನು ಕುಳಿತು ಕ್ಷೌರ ಮಾಡಿಸಿಕೊಳ್ಳುವೆ. ಈ ನನ್ನ ಬಹಿರಂಗ ಹೇಳಿಕೆಯಿಂದ ಬಹಿಷ್ಕಾರದ ಭಯ ದೂರವಾಗುತ್ತೆ."

ಈ ವಾಕ್ಯಗಳು ಎಲ್ಲರನ್ನೂ ಹರ್ಷ ಚಕಿತಗೊಳಿಸಿದುವು. "ಆದರೆ ಇನ್ನೇನು ಆತಂಕ" ಎಂದು ಕೇಳಿದರು ಬಾಪೂಜಿ.

"ಏನೂ ಇಲ್ಲ. ಆದರೆ, ಒಮ್ಮೆಯಾದರೂ ಅವನ ಮನೆಯಲ್ಲಿ ಅವನೊಡನೆ ಕುಳಿತು ಊಟಮಾಡಬೇಕಂತೆ. ಮಹರಾಜ, ದೇವರ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನನಗೆ ಈಗ ಎಂಬತ್ತು ವರ್ಷ. ಒಂದು ದಿನವಾದರೂ ಹೋಟಲಿನಲ್ಲಿ ನಾನು ತಿಂಡಿ ತಿಂದಿಲ್ಲ, ಚಹಾ ಕುಡಿದಿಲ್ಲ. ಇವನ ಮನೆಗೆ ಹೋಗಿ ಹೇಗೆ ಊಟ ಮಾಡಲಿ. ತಾವು ಆಶ್ರಮ ಸ್ಥಾಪಿಸಲು ಬಂದಾಗ, ಅಸ್ಪೃಶ್ಯತೆಯ ನಿವಾರಣೆಯಲ್ಲಿ ನೆರವಾಗಲು ಸಾಧ್ಯವಿಲ್ಲವೆಂದು ನುಡಿದವನು ನಾನೇ. ಆದರೆ, ಇಂದು ಗ್ರಾಮದ ಇತರರು ಅಸ್ಪೃಶ್ಯರೊಡನೆ ಬೆರೆಯಲು ಸಂಕೋಚ ಪಡುತ್ತಿರುವಾಗ ಧೈರ್ಯವಾಗಿ ನಾನು ಮುಂದೆ ಬಂದಿರುವೆ. ಅಸ್ಪೃಶ್ಯತೆ ನನ್ನ ಮನಸ್ಸಿನಿಂದ ದೂರ ಮಾಡಿರುವೆ. ಆತ್ಮ ಸಾಕ್ಷಿಯಾಗಿ ನುಡಿಯುತ್ತಿರುವೆ. ಇದು ಸಾಲದೆ ಅವನ ಮನೆಗೆ ಹೋಗಿ ಸಹಪಂಕ್ತಿ ಭೋಜನ ಮಾಡಬೇಕೇ? ಇದು ನಿಮ್ಮ ಕಾರ್ಯದಲ್ಲಿ ಸೇರಿದೆಯೇ?"

ಗಾಂಧೀಜಿ ಮುದುಕ ಪಟೇಲನ ಮಾತುಗಳಿಂದ ಸಂತೋಷಗೊಂಡರು. ತಾನು ಹರಿಜನ ಗೋವಿಂದ ಮಾಡಿದ ಅಡುಗೆ ಸೇವಿಸುತ್ತಿದ್ದರೂ, ಸಹ ಪಂಕ್ತಿ ಭೋಜನ ಮಾಡುವಂತೆ ತಾನು ಒತ್ತಾಯ ಮಾಡುವುದಿಲ್ಲ ಎಂದು ಪಟೇಲನಿಗೆ ತಿಳಿಸಿದರು. ಅಂದಿನಿಂದ ವೃದ್ಧ ಪಟೇಲ ಆಶ್ರಮಕ್ಕೆ ಆಡಿಗಡಿಗೆ ಬಂದು ಗೋವಿಂದನನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದ. ಕ್ಷೌರಿಕ ಗೋವಿಂದನಿಗೆ ಮತ್ತು ಆಶ್ರಮದ ಎಲ್ಲರಿಗೂ ಕ್ಷೌರ ಮಾಡಿ ಹೋಗುತ್ತಿದ್ದ. ಅವನ ಸ್ಥಾನಮಾನ ಮತ್ತು ವರಮಾನ ಎರಡೂ ಹೆಚ್ಚಿತು.

ಬ್ರಜಕೃಷ್ಣ ಚಾಂದೀವಾಲ ಒಂದು ದಿನ ಬೆಳಿಗ್ಗೆ ಸೇಗಾಂನಲ್ಲಿ ಗಾಂಧಿಯವರನ್ನು ಕಾಣಲು ಹೋದರು. ಕೂದಲು ಕತ್ತರಿಸುವ ಮಿಷನ್ ಭಾಗಗಳನ್ನು ತೆಗೆದು ಚೊಕ್ಕಮಾಡಿ ಎಣ್ಣೆ ಹಾಕುವುದರಲ್ಲಿ ಬಾಪು ತೊಡಗಿದ್ದರು. ಮತ್ತೆ ಮಿಷನ್ ಜೋಡಿಸಿ, ಎದುರಿಗೆ ಕನ್ನಡಿ ಇಟ್ಟುಕೊಂಡು ಕೂದಲು ಕತ್ತರಿಸಿಕೊಳ್ಳಲು ಅಣಿಮಾಡಿಕೊಳ್ಳುತ್ತಿದ್ದರು. ಇಷ್ಟರಲ್ಲಿ ಸಾಧು ಬಾವ ಮತ್ತು ಅವರ ಶಿಷ್ಯ ಭೀಮ ಇಬ್ಬರೂ ಬಂದರು. ಗಾಂಧೀಜಿ ತಮ್ಮ ಕೂದಲನ್ನು ತಾವೇ ಕತ್ತರಿಸಿಕೊಳ್ಳುವ ಕೆಲಸದಲ್ಲಿ ತೊಡಗಿದ್ದರು.

“ಬೇಡ, ಭೀಮ ಆ ಕೆಲಸ ಮಾಡಲಿ. ಅವನು ಕಸಬುದಾರ” ಎಂದು ಬಾವ ಕೂಗಿ ಹೇಳಿದರು. ಆಗಲಿ ಒಳ್ಳೆಯದು ಎಂದು ಮಿಷನ್ ಭೀಮನ ಕೈಗೆ ಕೊಟ್ಟರು. ಭೀಮ ಕೂದಲು ಕತ್ತರಿಸಲು ಪ್ರಾರಂಭಿಸಿದ. ಕೆಲಸ ಸಾಗುತ್ತಿದ್ದಂತೆ, “ಹರಿಜನರಿಗೆ ಕ್ಷೌರ ಮಾಡಲು ನಿನಗೆ ಅಭ್ಯಂತರವಿಲ್ಲವಷ್ಟೆ” ಎಂದು ಪ್ರಶ್ನಿಸಿದರು.

“ವ್ಯಕ್ತಿಶಃ ಹರಿಜನರಿಗೂ ಕ್ಷೌರ ಮಾಡಲು ಅಡ್ಡಿಯಿಲ್ಲ. ಅವರಲ್ಲಿ ನನಗೆ ದ್ವೇಷವಿಲ್ಲ.”

“ಸರಿಯೆ, ನಿನ್ನ ಮಾತು ನಂಬಬಹುದು. ಆದರೆ ನನಗೆ ಕ್ಷೌರ ಮಾಡುವಂತೆ ಅವರಿಗೂ ಮಾಡುವೆಯಾ ?”

ಭೀಮ ಉತ್ತರ ಕೊಡಲು ಹಿಂದುಮುಂದು ನೋಡಿದ. ಆಗ ಗಾಂಧೀಜಿ, ಸಾಧುವಿನ ಕಡೆ ತಿರುಗಿ, “ಅಸ್ಪೃಶ್ಯರಿಗೂ ಇವನು ಹಜಾಮತಿ ಮಾಡಲು ಸಿದ್ಧನೇ ಎಂದು ತಿಳಿದು ಈ ಕೆಲಸ ಅವನಿಗೆ ಒಪ್ಪಿಸಬೇಕಾಗಿತ್ತು. ನನ್ನ ಷರತ್ತು ನಿನಗೆ ತಿಳಿದೇ ಇದೆ” ಎಂದರು.

ಸಾಧು ಬಾವ ಈ ವಿಷಯದತ್ತ ಗಮನ ಹರಿಸಿರಲಿಲ್ಲ. ತಪ್ಪಾಯಿತು ಎಂದ. ನನ್ನ ತತ್ವಕ್ಕೆ ಅವನಿಂದ ಕ್ಷೌರ ಮಾಡಿಸಿಕೊಳ್ಳುವುದು ತಪ್ಪಾಗುತ್ತದೆ. ಆದ್ದರಿಂದ ಕ್ಷೌರ ಪೂರ್ಣವಾಗದೆ ಅರೆಬರೆ ಆಗಿದ್ದರೂ, ಇಷ್ಟಕ್ಕೆ ಕಷ್ಟ ಮಾಡಿಸಿಕೊಳ್ಳುವುದನ್ನು ನಿಲ್ಲಿಸಬೇಕಾದೀತು. ಹೀಗೆ ನುಡಿದರು ಗಾಂಧೀಜಿ.

ಕ್ಷೌರ ಮಾಡುತ್ತಿದ್ದ ಭೀಮ ತಾನು ನಾಗಪುರದ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡು ನಾಗಪುರದ ತುರಂಗದಲ್ಲಿ ಶಿಕ್ಷೆ ಅನುಭವಿಸಿದ್ದನೆಂದೂ ಆಗ ಜಾತಿ ಭೇದವೆಣಿಸದೆ ಎಲ್ಲರಿಗೂ ಕ್ಷೌರ ಮಾಡುತ್ತಿದ್ದುದಾಗಿಯೂ ತಿಳಿಸಿದ. ಆದರೆ ಹೊರ ಬಂದ ಮೇಲೆ ಸಮಾಜದ ಕಟ್ಟಳೆಯಂತೆ ನಡೆದುಕೊಳ್ಳುತ್ತಿರುವುದಾಗಿಯೂ ತಿಳಿಸಿದ. ಇನ್ನು ಮೇಲೆ ಜಾತಿಭೇದ ಗಮನಿಸದೆ ಎಲ್ಲರಿಗೂ ಕೇಶಕಾರ್ಯ ಮಾಡುವು

ದಾಗಿ ವಾಗ್ದಾನ ಮಾಡಿದ. ಸತ್ಯಾಗ್ರಹದಲ್ಲಿ ಭಾಗವಹಿಸಿದವನಾದ್ದರಿಂದ ಇವನ ಮಾತಿನಲ್ಲಿ ವಿಶ್ವಾಸವಿಡಬಹುದೆಂದು ತೀರ್ಮಾನಿಸಿ ಭೀಮನಿಂದ ಕೇಶ ಕತ್ತರಿಸಿ ಕೊಳ್ಳುವ ಕೆಲಸ ಮುಗಿಸಿಕೊಂಡರು.

1942 'ಚಲೇಜಾವ್' ಚಳವಳಿಯು ಯುಗ. ಆಂದೋಳನ ಸದೆ ಬಡಿಯಲು ಸರ್ಕಾರ ಉಗ್ರಕ್ರಮ ಕೈಗೊಂಡಿತು. ಕಾಂಗ್ರೆಸ್ಸಿಗರು ಮತ್ತು ಸಹಾನುಭೂತಿ ಯುಳ್ಳವರು ಎಲ್ಲರನ್ನು ಪೂರ್ವ ಯೋಜಿತ ಕ್ರಮದಂತೆ ಬಂಧಿಸಿ, 'ಡೆಟಿನ್ಯೂ' ಆಗಿ ಸಾವಿರಾರು ಜನರನ್ನು ತುರಂಗಗಳಿಗೆ ತುರುಕಿದರು. ಭಾರತದ ಎಲ್ಲ ಜೈಲುಗಳೂ ತುಂಬಿ ಸ್ಥಳವಿಲ್ಲದೆ ಅನೇಕ ತಾತ್ಕಾಲಿಕ ಜೈಲುಗಳು ರೂಪುಗೊಂಡುವು. ಬಂಧಿತರಿಗೆ ಎಲ್ಲ ಬಂದೀಖಾನೆಗಳಲ್ಲೂ ಒಂದೇ ಬಗೆಯ ಸೌಲಭ್ಯ ಲಭಿಸು ತ್ತಿರಲಿಲ್ಲ. ಕೆಲವು ತುರಂಗಗಳಲ್ಲಿ ಸ್ವಯಂ ಕ್ಷೌರ ಮಾಡಿಕೊಳ್ಳಲು ಅವಕಾಶ ಕೊಡಲಾಗಿತ್ತು. ಕೆಲವೆಡೆ ವಾರಕ್ಕೊ, ಹತ್ತು ಹದಿನೈದು ದಿನಗಳಿಗೋ ಒಂದು ಸಾರಿ ಸರದಿಯಂತೆ ಕ್ಷೌರಿಕ ಬಂದು ಕಷ್ಟ (ಕ್ಷೌರ) ಮಾಡುತ್ತಿದ್ದ. ಮೈಸೂರು ಸಂಸ್ಥಾನದ ಶಿವಮೊಗ್ಗ ಜೈಲಿನಲ್ಲೂ ಕೆಲವರು ದೇಶ ಪ್ರೇಮಿಗಳು ಬಂಧಿತರಾಗಿದ್ದರು. ಇವರಿಗೆ ಹಜಾಮತಿ ಮಾಡಲು ಗಾಂಧೀ ಕ್ಷೌರಿಕ ಊರಿನಿಂದ ಬರುತ್ತಿದ್ದ. ಮಹಾತ್ಮ ಗಾಂಧಿಯವರಿಗೆ ಕ್ಷೌರ ಮಾಡಿದ್ದುದರಿಂದಲೇ ಇವನು ಈ ಪ್ರತಿಷ್ಠೆಯ ಹೆಸರು ಗಳಿಸಿದ್ದ. ಖಾದಿ ಧರಿಸಿದವನಿಂದ ಮಾತ್ರ ಹಜಾಮತಿ ಮಾಡಿಸಿ ಕೊಳ್ಳುವ ಸಂಕಲ್ಪ ಅವರು ತೊಟ್ಟಿದ್ದರು. ತಾರುಣ್ಯದಲ್ಲಿದ್ದ ಈ ಹಜಾಮನನ್ನು ಕರೆಸಿಕೊಂಡು ಅವನಿಗೆ ತಮ್ಮ ಖಾದಿ ಷರಟು, ಪಂಚೆ ಇವುಗಳನ್ನು ತೊಡಲು ಒಬ್ಬ ವಕೀಲರು ಇವನಿಗೆ ಕೊಟ್ಟಿದ್ದರು. ಅವರು ಆಜಾನುಬಾಹು. ಹಜಾಮನಿ ಗಿಂತ ನಾಲ್ಕು ಪಟ್ಟು ದೊಡ್ಡ ಶರೀರ. ಈ ಉಡುಪನ್ನೇ ಧರಿಸಿ ಗಾಂಧಿಯವರಿಗೆ ಕ್ಷೌರ ಮಾಡಲು ಹೋದ. ಧರಿಸಿದ್ದ ಉಡುಪು ಇವನದಲ್ಲ ಎಂದು ಸುಲಭವಾಗಿ ಗಾಂಧೀಜಿ ಗ್ರಹಿಸಿದರು. ಅವರ ಸಮ್ಮುಖದಲ್ಲಿ ತನ್ನದೇ ಎಂದು ಹೇಳಿಕೊಳ್ಳಲು ಇವನಿಂದ ಸಾಧ್ಯವಾಗಲಿಲ್ಲ. ಸತ್ಯ ಸಾಕ್ಷಾತ್ಕಾರದ ಸನಿಹದಲ್ಲಿ ಅಸತ್ಯ ಹಿಮ್ಮೆಟ್ಟಿತು. ಮುಂದೆ ಸತತ ಖಾದಿ ಧಾರಿಯಾಗುವೆನೆಂಬ ವಚನ ಪಡೆದು ಅವನಿಂದ ಕ್ಷೌರ ಮಾಡಿಸಿಕೊಂಡರು. ಅಂದಿನಿಂದ ಇವನು ಗಾಂಧೀ ಕ್ಷೌರಿಕ ಎನಿಸಿಕೊಂಡ.

ಬೆಂಗಳೂರಿನ ಕುಮಾರ ಕೃಪದಲ್ಲಿ ಗಾಂಧೀಜಿ ತಂಗಿದ್ದರು. ಈ ಭವ್ಯ ಕಟ್ಟಡ ನಗರದ ಇತರ ಪ್ರದೇಶಗಳಿಂದ ದೂರವಾಗಿದೆ. ಗಾಂಧೀಜಿ ಕ್ಷೌರ ಮಾಡಿಸಿಕೊಳ್ಳಲು ಬಯಸುತ್ತಾರೆ. ಕ್ಷೌರಿಕನನ್ನು ಕರೆದು ತರುವಂತೆ ಒಬ್ಬ ಸ್ವಯಂಸೇವಕನಿಗೆ ಮಹದೇವ ದೇಸಾಯಿ ತಿಳಿಸಿದರು. ದೂರದಿಂದ ನಾಪಿತನನ್ನು ಕರೆದುತರಲು ತುಂಬ ತಡವಾಯಿತು. ಇತರ ಕಾರ್ಯಗೌರವದಿಂದ ಗಾಂಧೀಜಿ ಬಿಡಾರದಿಂದ ಹೊರಕ್ಕೆ ಹೊರಟುಹೋಗಿದ್ದರು. ದೂರದಿಂದ ನಾಯಿಂದ ಬಂದಿದ್ದ.

ಅವನನ್ನು ಬರಿಗೈಯಲ್ಲಿ ಹಿಂದಕ್ಕೆ ಕಳುಹಿಸುವುದು ಉಚಿತವಲ್ಲವೆಂದು ಮಹದೇವ ಭಾಯಿ ಭಾವಿಸಿದರು. ಒಂದ ಹಜಾಮ ಇವರನ್ನೇ ಗಾಂಧೀಜಿ ಎಂದು ತಿಳಿದು ಕ್ಷೌರ ಮಾಡಲು ಅಣಿಮಾಡಿಕೊಂಡ. ಇವನನ್ನು ಅಸಂತೋಷಪಡಿಸಲು ಇಷ್ಟವಿಲ್ಲದೆ ಮಹದೇವ ದೇಸಾಯಿ ಮತ್ತು ಇತರರು ಅವನಿಂದ ಕ್ಷೌರ ಮಾಡಿಸಿಕೊಂಡರು.

ಶಿವಮೊಗ್ಗದಲ್ಲಿ ನಡೆದಂಥಾ ಘಟನೆ 1937ರಲ್ಲಿ ಬೆಳಗಾಂ ಜಿಲ್ಲೆಯ ಹುದಲಿಯಲ್ಲೂ ನಡೆಯಿತು. ಸುಲಧಾಳದ ಮಲ್ಲಪ್ಪನನ್ನು ಅಲ್ಲಿಂದ ಕರೆದು ತರಲಾಯಿತು. ಇವನೂ ಖಾದಿಧಾರಿಯಲ್ಲ. ಅಜಾನುಬಾಹು. ಪುಂಡಲೀಕಜಿ ತಮ್ಮ ಷರಟನ್ನು ಅವನಿಗೆ ತೊಡಿಸಿದರು. ಅವನಿಗೆ ಅದು ದೊಗಲೆ. ಕ್ಷೌರ ಮಾಡಿಸಿಕೊಂಡು ಇದು ಯಾರ ಷರಟು ಎಂದು ಕೇಳಿಯೇಬಿಟ್ಟರು. ನಿಜ ಹೊರಬಂತು. ಖಾದಿ ಧಾರಿಯಾಗುವಂತೆ ಗಾಂಧೀಜಿ ಅವನಿಗೆ ತಿಳಿಸಿದರು. ಅಂತೆಯೇ ಅವನು ಸತತ ಖಾದಿ ಧಾರಿಯಾದ.

ದುಃಖತಪ್ತ

ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಲು ಮಾರ್ಗಗಳು ಹಲವು. ಭಕ್ತಿ, ಕರ್ಮ, ಜ್ಞಾನ, ವೈರಾಗ್ಯ–ಇವು ವಿಧಿ ಕರ್ಮಗಳಲ್ಲಿ ಮುಖ್ಯವಾದುವು. ಭಕ್ತಿಯಿಂದ ಪರಮಾತ್ಮನನ್ನು ಪೂಜಿಸುವುದು. ಫಲಪುಷ್ಪ ಮಂತ್ರ ತಂತ್ರಗಳಿಂದ ಅರ್ಚಿಸುವುದು. ಸ್ತುತಿಧ್ಯಾನಗಳಿಂದ ಆರಾಧಿಸುವುದು. ದಾನ ಧರ್ಮ ಸದ್ಧರ್ಮ ಕಾರ್ಯವೆಸಗುವುದು. ನೊಂದವರ, ದುಃಖಿಗಳ ಸಂಕಟ ನಿವಾರಿಸುವುದು. ಸುಖ–ಕಷ್ಟ–ಭೋಗ ಇವೆಲ್ಲವೂ ಕ್ಷಣಿಕ. ಯಾವುದೂ ಶಾಶ್ವತವಲ್ಲ ಎಂಬ ವೈರಾಗ್ಯ ಭಾವನೆ ತಳೆದು ಜ್ಞಾನ, ತಪಸ್ಸು ಈ ಮಾರ್ಗಗಳಿಂದ ಮೋಕ್ಷ ಸಾಧಿಸಲು ಪ್ರಯತ್ನಿಸುವುದು ಜ್ಞಾನಿಗಳ, ವಿರಕ್ತರ ಮಾರ್ಗ.

ಪುನಃ ಜನ್ಮ ತಾಳದೆ ಇರುವುದು ; ಪರಮಾತ್ಮನಲ್ಲಿ ಐಕ್ಯವಾಗುವುದು ; ಸ್ವರ್ಗದಲ್ಲಿ ಸುಖವಾಗಿ ಬಾಳುವುದು ; ಮೋಕ್ಷಗಳಿಸುವುದು ಎಲ್ಲ ಧರ್ಮಗಳ ಗುರಿ. ಹಿಂದೂ ಧರ್ಮದ ಅತ್ಯುನ್ನತ ಗುರಿ ಮೋಕ್ಷ ಸಾಧನೆ. ಮಹಾತ್ಮಗಾಂಧಿ ಇದನ್ನು ಬಯಸರು.

ನತ್ವಹಂ ಕಾಮಯೇ ರಾಜ್ಯಂ, ನ ಸ್ವರ್ಗಂ
ನಾ ಪುನರ್ಭವಂ । ಕಾಮಯೇ ದುಃಖ ತಪ್ತಾನಾಂ
ಪ್ರಾಣಿನಾಂ ಆರ್ತಿನಾಶನಂ ॥

ನಾನು ರಾಜ್ಯವನ್ನು ಬಯಸೆ, ಸ್ವರ್ಗವನ್ನೂ ಅಪೇಕ್ಷಿಸೆ, ಪುನರ್ಜನ್ಮ ಬೇಡವೆಂದೂ ಬೇಡಲಾರೆ ಇದು ಗಾಂಧಿಯವರ ದಿನ ನಿತ್ಯದ ಪ್ರಾರ್ಥನೆ. ಅವರು ಬಯಸುವುದು ದುಃಖದಿಂದ ಬೆಂದು ಕಣ್ಣೀರು ಸುರಿಸುವವರ ಕಣ್ಣೀರು ಒರಸುವ ಶಕ್ತಿ. ಹಸಿವು ತೃಷೆಗಳಿಂದ ನರಳುವ ಪ್ರಾಣಿಗಳ ಸಂಕಟ ಪರಿಹರಿಸುವ ಶಕ್ತಿ.

ಎಲ್ಲ ಮತಧರ್ಮಗಳೂ ಪ್ರಾಣಿಗಳ ಕಷ್ಟ, ದುಃಖ, ಸಂಕಟ ಪರಿಹರಿಸುವುದು ಉತ್ತಮ ಮಾರ್ಗವೆಂದು ಸಾರುತ್ತವೆ. ಕ್ರೈಸ್ತಧರ್ಮ ರೋಗಿಗಳ ಸೇವೆಗೆ ಮಹತ್ವದ ಸ್ಥಾನ ಕೊಡುತ್ತದೆ. ಆಸ್ಪತ್ರೆ ಸ್ಥಾಪಿಸಿ ರೋಗಿಗಳ ಸೇವೆಗಾಗಿ ತಮ್ಮ ಜನ್ಮ ಮುಡುಪಾಗಿಡುವ ಅನೇಕ ಸತ್ಕರ್ಮಿಗಳನ್ನು ಇವರಲ್ಲಿ ಕಾಣಬಹುದು. ರೋಗಿಗಳ ಸೇವೆಯಲ್ಲಿ ಗಾಂಧೀಜಿ ತೊಡಗುತ್ತಿದ್ದರು.

ಪರಚುರೆ ಶಾಸ್ತ್ರೀ ಘನ ಸಂಸ್ಕೃತ ವಿದ್ವಾಂಸರು. ಸತ್ಯಾಗ್ರಹಿ ಆಗಿ ಹಲವು ಬಾರಿ ತುರಂಗವಾಸ ಅನುಭವಿಸಿದ್ದರು. ಇವರು ಮಹಾಮಾರಿ ಎನಿಸಿಕೊಳ್ಳುವ ಕುಷ್ಠರೋಗ ಪೀಡಿತರಾದರು. ಸ್ವಸ್ಥಾನ ಬಿಟ್ಟು ಹರಿದ್ವಾರಕ್ಕೆ ಹೋಗಿ ಊರಿನ ಆಚೆ ಒಂಟಿಗರಾಗಿ ಕಾಲ ದೂಡುತ್ತಿದ್ದರು. ಅವಸಾನ ಕಾಲ ಸಮೀಪಿಸುತ್ತಿದೆ ಎಂಬ ಭಾವನೆ ಅವರಲ್ಲಿ ಮೂಡಿತು. ಆಗ ಕಡೆಯ ಕಾಲಕ್ಕೆ ಗಾಂಧಿಯವರ ದರ್ಶನ ಪಡೆಯುವ ಬಯಕೆ ಅವರಲ್ಲಿ ಉತ್ಕಟವಾಯಿತು. ಹರಿದ್ವಾರದಿಂದ ಸೇವಾ ಗ್ರಾಮಕ್ಕೆ ಬಂದರು. ಸಂಕೋಚದಿಂದ, ಆಶ್ರಮದ ಹೊರಗೆ ದನದ ಕೊಟ್ಟಿಗೆಯ ಬಳಿ ಒಂದು ಮರದ ಆಶ್ರಯ ಪಡೆದು ಮಲಗಿದರು. ಮೀರಾಬೆಹನ್ ಇವರನ್ನು ನೋಡಿದಳು. ಒಳಕ್ಕೆ ಹೋಗಿ ಗಾಂಧೀಯವರನ್ನು ಕಾಣುವಂತೆ ತಿಳಿಸಿದಳು. ಎಲ್ಲೂ ಆಶ್ರಯ ದೊರೆಯದೆ ತಮ್ಮಲ್ಲಿಗೆ ಬಂದಿರುವೆ. ಆಶ್ರಮದ ಹೊರಗಿನ ಮರದ ಕೆಳಗೆ ಕಾಲ ಕಳೆಯುವೆ. ಯಾರಿಗೂ ತೊಂದರೆ ಕೊಡಲು ಬಯಸು ವುದಿಲ್ಲ. ನನಗೆ ಬೇಕಾದ್ದು ದಿನವಹಿ ಎರಡು ಚಪಾತಿ. ಇಷ್ಟು ಸಾಕು ಎಂದು ವಿನಯದಿಂದ ಅರುಹಿದರು. ಈ ಬೇಡಿಕೆ ಕೇಳಿ ಗಾಂಧೀಜಿ ಚಿಂತಾಕ್ರಾಂತರಾದರು. ಕುಷ್ಠ ನಿವಾರಿಸಲಾಗದ ಭಯಂಕರ ಅಂಟು ಜಾಡ್ಯ. ಆಶ್ರಮವಾಸಿಗಳಲ್ಲದೆ ನೂರಾರು ಆಗುಂತಕರು ದಿನವಹಿ ಆಶ್ರಮಕ್ಕೆ ಬಂದು ಹೋಗುತ್ತಾರೆ. ರೋಗ ಪೀಡಿತ ನಿರ್ಗತಿಕ ಶಾಸ್ತ್ರಿಗೆ ಇಲ್ಲಿ ಆಶ್ರಯ ಕೊಡುವುದು ಉಚಿತವೇ ? ಆದರೆ ಭಗವಂತನೇ ಪಂಡಿತ ಶಾಸ್ತ್ರಿಯವರನ್ನು ಇಲ್ಲಿಗೆ ಕಳುಹಿಸಿರುವಂತೆ ತೋರುತ್ತದೆ. ಅವರಿಗೆ ಆಶ್ರಯ ನೀಡದಿರುವುದು ಉಚಿತವಾಗದು, ಹೀಗೆ ತಿರ್ಮಾನಿಸಿಕೊಂಡರು. ಆಶ್ರಮದ ಸಮೀಪದಲ್ಲಿಯೇ ಅವರಿಗೊಂದು ಪ್ರತ್ಯೇಕ ಗುಡಿಸಲು ಕಟ್ಟಿಸಿದರು. ಊಟ, ಔಷಧೋಪಚಾರದ ವ್ಯವಸ್ಥೆ ಮಾಡಿದರು. ಸಮೀಪಕ್ಕೆ ಹೋಗಲೂ ಅಸಹ್ಯವಾಗುತ್ತಿದ್ದ ರೋಗಿಯ ಬಳಿ ದಿನವಹಿ ಹೋಗಿ ತಮ್ಮ ಕೈಯಿಂದಲೇ ಎಣ್ಣೆ ಲೇಪಿಸಿ, ಗಾಯ ತೊಳೆದು ಸ್ನಾನ ಮಾಡಿಸಹತ್ತಿದರು. ಇದರಿಂದ ಶಾಸ್ತ್ರೀ ಚೇತರಿಸಿಕೊಂಡರು. ಸ್ವಲ್ಪಕಾಲದ ನಂತರ ಆಶ್ರಮವಾಸಿಗಳಿಗೆ ಸಂಸ್ಕೃತ ಕಲಿಸ ತೊಡಗಿದರು. ಶುಭಾಶುಭ ಕಾರ್ಯಗಳಲ್ಲಿ ಭಾಗವಹಿಸತೊಡಗಿದರು. ಇವರ ಸಂಪರ್ಕ ದಿಂದ ಅಂಟು ಜಾಡ್ಯ ಯಾರಿಗೂ ವ್ಯಾಪಿಸಲಿಲ್ಲ.

ದಕ್ಷಿಣ ಆಫ್ರಿಕಾದಲ್ಲಿದ್ದಾಗ ವಿಚಿತ್ರ ಅನುಭವವಾಯಿತು. ಆಫ್ರಿಕದಲ್ಲಿ ನೆಟಾಲ್ ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸಲು ಊರಿಂದ ಊರಿಗೆ ಹೋಗುತ್ತಿದ್ದರು. ಹೀಗೆ ಸುತ್ತಾಡುತ್ತಾ ಒಂದು ದಿನ ಊರು ಹೊರಗಿನ ತೋಪಿಗೆ ಬಂದರು. ಮರದ ಹಿಂದುಗಡೆ ಯಾರೋ ಓಡಾಡುತ್ತಿದ್ದುದು ಕಣ್ಣಿಗೆ ಕಾಣಿಸಿತು. ದೃಷ್ಟಿಗೆ ಗೋಚರಿಸದಂತೆ ಅವಿತುಕೊಳ್ಳುತ್ತಿರುವ ಜನ ಇವರ್‍ಯಾರು ಎಂದು ಪಕ್ಕದಲ್ಲಿದ್ದವರನ್ನು ವಿಚಾರಿಸಿದರು. ಒಬ್ಬೊಬ್ಬರೂ ನಿಜಸಂಗತಿ ಮರೆಮಾಚಿ ಏನೇನೋ ಉತ್ತರ

ನೀಡಿದರು. ಕಡೆಗೂ ನಿಜಾಂಶ ಹೊರಬಂತು. ಇವರೆಲ್ಲ ಕುಷ್ಠರೋಗ ಪೀಡಿತ ಭಾರತೀಯರು. ಸಮಾಜದಿಂದ ಹೊರದೂಡಲ್ಪಟ್ಟವರು. ಆದ್ದರಿಂದ ಊರಿನ ಹೊರಗೆ ತೋಪಿನಲ್ಲಿ ಅವರ ವಾಸ ಎಂದು ತಿಳಿಯಿತು.

ಗಾಂಧೀಜಿ ಈ ದಾರಿಯಲ್ಲಿ ಹೋಗುವುದನ್ನು ತಿಳಿದು ಅವರನ್ನು ಕಾಣಲು ತೋಪಿನಲ್ಲಿ ನೆರೆದಿದ್ದರು. ಈ ವಿಷಯ ತಿಳಿಯುತ್ತಲೇ ಗಾಂಧೀಜಿ ನೇರವಾಗಿ ತೋಪಿನೊಳಕ್ಕೆ ಹೋದರು. ಎಲ್ಲ ರೋಗಿಗಳನ್ನು ಮಾತನಾಡಿಸಿ ಸಮಾಧಾನಕರ ಮಾತುಗಳನ್ನಾಡಿದರು. ಇದೇ ರೀತಿ ಒರಿಸ್ಸಾದಲ್ಲಿ ಕ್ರೈಸ್ತ ಪಾದ್ರಿಗಳು ನಡೆಸುತ್ತಿದ್ದ ಕುಷ್ಟ ರೋಗಿಗಳ ಆಸ್ಪತ್ರೆಗೆ ಹೋದರು. ಪ್ರತಿಯೊಬ್ಬ ರೋಗಿಯ ಕೈ ಕುಲುಕಿ, ತಲೆ ಸವರಿ, ಸವಿಮಾತುಗಳಿಂದ ಅವರನ್ನು ಸಂತೋಷಗೊಳಿಸಿದರು.

ಬಲವಂತ ಸಿಹ್ನನನ್ನು ಗಾಂಧೀಜಿ ಮೊಜಾರಿಯಲ್ಲಿದ್ದ ತುಕಡೋಜಿ ಮಹಾರಾಜರ ಆಶ್ರಮಕ್ಕೆ 1936 ರಲ್ಲಿ ಕಳುಹಿಸಿಕೊಟ್ಟರು. ಬಲವಂತ ಸಿಹ್ನ ಸೇವಾ ಗ್ರಾಮದಲ್ಲಿ ದನ ಮತ್ತು ಆಡುಗಳನ್ನು ನೋಡಿ ಕೊಳ್ಳುತ್ತಿದ್ದ. ಮೊಜಾರಿಯಲ್ಲಿದ್ದಾಗ ಬಲವಂತ ಸಿಹ್ನ ಜ್ವರ ಪೀಡಿತನಾದ. 55 ಮೈಲಿಗಳ ದೂರದ ಮೊಜಾರಿಯಿಂದ ಬಲವಂತ ಸಿಹ್ನನನ್ನು ಮೋಟಾರಿನಲ್ಲಿ ಸೇವಾಗ್ರಾಮಕ್ಕೆ ಕರೆತರಲಾಯಿತು. ಗಾಂಧಿಯವರೇ ಮೋಟಾರಿನ ಬಳಿಗೆ ಹೋಗಿ ಸಿಹ್ನನನ್ನು ಆಶ್ರಮಕ್ಕೆ ಕರೆತಂದರು. ಇದೇ ಸಮಯಕ್ಕೆ ನಾನಾವತಿ ಮತ್ತು ಮೀರಾ ವಿಶಮ ಶೀತ ಜ್ವರ ಪೀಡಿತರಾಗಿ ಹಾಸಿಗೆ ಹಿಡಿದರು. ನಿನಗೆ ಕಾಯಿಲೆ ಹೇಗೆ ಬಂತು ಎಂದು ಗಾಂಧೀಜಿ ವಿಚಾರಿಸುತ್ತಿದ್ದಂತೆಯೇ ಸಿಹ್ನ ಜ್ಞಾನ ತಪ್ಪಿ ಕೆಳಗೆ ಬೀಳುವಂತಾದ. ಕೂಡಲೆ ಸಿಹ್ನನನ್ನು ತನ್ನ ಕೊಠಡಿಗೆ, ಅಲ್ಲಿಂದ ಪಾಯಿಖಾನೆಗೆ ಕರೆದುಕೊಂಡು ಹೋದರು. ತಮ್ಮ ಕೈಯಿಂದಲೇ 'ಎನಿಮಾ' ಕೊಟ್ಟರು. ಒದ್ದೆ ಬಟ್ಟೆಯಿಂದ ದೇಹ ಒರಸಿ, ಬೇರೆ ಬಟ್ಟೆ ತೊಡಿಸಿದರು. ವರ್ಧಾದಿಂದ ಡಾಕ್ಟರ್ ಮಹೋದಯ ಅವರನ್ನು ಬರಮಾಡಿಕೊಂಡರು. ಸಿಹ್ನನ ಹೃದಯ ದುರ್ಬಲವಾಗಿದೆ. ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕಾದೀತು ಎಂದು ಡಾಕ್ಟರ್ ತಿಳಿಸಿದರು. ಬಾಪೂಗೆ ತೊಂದರೆ ಕೊಡಲು ಇಚ್ಛಿಸದೆ ತನನ್ನು ವರ್ಧಾ ಸಿವಿಲ್ ಆಸ್ಪತ್ರೆಗೆ ಸೇರಿಸುವಂತೆ ಸಿಹ್ನ ಕೇಳಿಕೊಂಡ. ಆದರೆ ಗಾಂಧೀಜಿ ಒಪ್ಪಲಿಲ್ಲ. "ಕಾಯಿಲೆಯಾಯಿತೆಂದು ತಾಯಿ, ತನ್ನ ಮಗುವನ್ನು ತೊರೆದಾಳೆ? ಮಗು ತಾಯಿಯನ್ನು ಬಿಟ್ಟು ಇದ್ದೀತೆ? ಹೀಗಿರುವಲ್ಲಿ ಆಸ್ಪತ್ರೆಗೆ ಕಳುಹಿಸಿಕೊಡುವಂತೆ ನೀನೇಕೆ ಕೇಳುವೆ? ನಿನ್ನ ಶುಶ್ರೂಷೆಗೆ ಸರಿಯಾದ ವ್ಯವಸ್ಥೆ ಇಲ್ಲಿ ನಾನು ಮಾಡಲಾರೆ ಎಂದು ಭಾವಿಸುವುದಾದರೆ ಕೂಡಲೇ ನೀನು ವರ್ಧಾ ಆಸ್ಪತ್ರೆಗೆ ಹೋಗಬಹುದು'' ಎಂದರು ಗಾಂಧೀಜಿ. "ಈಗಲೇ ತಮಗೆ ಕೈ ತುಂಬ ಕೆಲಸವಿದೆ. ಮತ್ತಷ್ಟು ತೊಂದರೆ ಕೊಡಲು ಬಯಸದೆ ಹೀಗೆ ಹೇಳಿದೆ" ಎಂದ ಸಿಹ್ನ. ಅಲ್ಲಿಯೇ ಉಳಿದ. ಗಾಂಧೀಜಿ ತಮ್ಮದೇ ಆದ ಪ್ರಕೃತಿ

ಚಿಕಿತ್ಸೆ ಕೊಡತೊಡಗಿದರು. ಹೊಟ್ಟೆಯ ಮೇಲೆ ಮಣ್ಣಿನ 'ಪೋಲ್ಟೀಸ್' ಹಾಕುವುದು ಪ್ಯಾರೇಲಾಲರ ಹೊಣೆ ಆಯಿತು. ಖಾನ್ ಸಾಹೇಬರು ಸಿಹ್ನಸಿಗೆ ಹಣ್ಣಿನ ರಸ ಕೊಡುವರು. ಒಂದು 'ಕಮೋಡ್', ಒಂದು ತೊಟ್ಟಿ ನೀರು, ಕುಡಿಯಲು ಪ್ರತ್ಯೇಕ ಹೂಜಿ ನೀರು, ತಟ್ಟೆ, ಬಟ್ಟಲು, ಚಂಚ ಮತ್ತು ನೆರವು ಬೇಕಾದಾಗ ಗಂಟೆ ಬಾರಿಸಲು ಸಿಹ್ನನ ಪಕ್ಕದಲ್ಲಿಯೇ ಗಂಟೆ ಇರಿಸಲಾಯಿತು. ಧಾರಾಳವಾಗಿ ನೀರು ಕುಡಿಯುತ್ತಾ ಮೂತ್ರ ವಿಸರ್ಜನೆ ಮಾಡುವಂತೆ ಸಿಹ್ನಸಿಗೆ ತಿಳಿಸಲಾಗಿತ್ತು. ಗಂಟೆಯ ಶಬ್ದಕ್ಕೆ ಬೇರೆ ಯಾರೂ ಓಗೊಡದಿದ್ದರೆ ಬಾಪೂಜಿ ಸ್ವತಃ ತಾವೇ ಓಗೊಟ್ಟು ಏನು ಬೇಕೆಂದು ವಿಚಾರಿಸುತ್ತಿದ್ದರು. ಔಷಧಕ್ಕಿಂತ ಬಾಪುವಿನ ಪ್ರೀತ್ಯಾದರ ಸಿಹ್ನ ಗುಣವಾಗಲು ನೆರವಾಯಿತು.

ಬಲವಂತಸಿಹ್ನ ಗುಣಮುಖನಾಗುತ್ತಿದ್ದಂತೆ ಮೀರಾಬೆಹೆನ್ ಅವಳ ಜ್ವರ ಉಲ್ಬಣಿಸಿತು. ಗಾಂಧೀಜಿ ಸ್ವತಃ ಅವಳಿಗೆ ಒದ್ದೆ ಬಟ್ಟೆಯಿಂದ ಮೈ ಒರಸು ತ್ತಿದ್ದರು. ಎನಿಮಾ ಕೊಡುತ್ತಿದ್ದರು. ನಾನಾವತಿಯೂ ತುಂಬ ಕಾಯಿಲೆ ಆದ. ಸನ್ನಿ ಬರುತ್ತಿತ್ತು. ಅವನು ಸಾಯಬಹುದೆಂದು ಆಶ್ರಮವಾಸಿಗಳು ಹೆದರಿದರು. ಆದರೆ ಗಾಂಧೀಜಿ ಅಧೀರರಾಗಲಿಲ್ಲ. ತನ್ನನ್ನು ಆಸ್ಪತ್ರೆಗೆ ಕಳುಹಿಸಿಕೊಡುವಂತೆ ಕೇಳಿದರೂ, ಬಲವಂತಸಿಹ್ನನಿಗೆ ಕೊಟ್ಟ ಉತ್ತರವನ್ನೇ ಇವನಿಗೂ ಕೊಟ್ಟರು. ಇಷ್ಟರಲ್ಲೇ ಚಿಮನ್‌ಲಾಲ್ ವಿಷಮ ಶೀತ ಜ್ವರ ಪೀಡಿತರಾದರು. ಇವರ ಸ್ಥಿತಿ ವಿಷಮಿಸಿತು. ಚಿಮನಲಾಲರ ಹೆಂಡತಿ ಸಕ್ರೀ ಬೆಹೆನ್ ಸಮೀಪದ ಅಹಮದಾಬಾದಿ ನಲ್ಲೇ ಇದ್ದಳು. ಅವಳನ್ನು ಬರಮಾಡಿಕೊಡುವಂತೆ ಗಾಂಧಿಯವರಿಗೆ ಸಲಹೆ ಮಾಡಲಾಯಿತು. ಇದನ್ನೂ ಗಾಂಧೀಜಿ ಒಪ್ಪಲಿಲ್ಲ. ಚಿಮನಲಾಲ್ ಸಾಯುವ ಸ್ಥಿತಿಯಲ್ಲಿದ್ದಾನೆ. ರಾತ್ರಿ ನೀನು ಅವನ ಹಾಸಿಗೆ ಬಳಿ ಮಲಗಿಕೋ, ಎಚ್ಚರದಿಂದ ನೋಡಿಕೋ, ಎಂದು ಚೀತರಿಸಿಕೊಳ್ಳುತ್ತಿದ್ದ ಸಿಹ್ನನಿಗೆ ಒಪ್ಪಿಸಿದರು. ಇಂಥ ಪರಿಸ್ಥಿತಿಯಿಂದ ಚಿಮನಲಾಲ್ ಉಳಿದುಕೊಂಡ.

1938ರಲ್ಲಿ ಗಜಾನನರಾವ್ ನಾಯಕ್ ಅವರ ನೇತೃತ್ವದಲ್ಲಿ ನೀರಾ ಪ್ರಯೋಗ ನಡೆಯುತ್ತಿತ್ತು. ನೀರಾದಿಂದ ಬೆಲ್ಲ, ಸಕ್ಕರೆ ತಯಾರಿಸುವುದನ್ನು ಕಲಿಯಲು ಹಲವರು ವರ್ಧಾಗೆ ಬರುತ್ತಿದ್ದರು. ಒಂದು ಲೋಟಾ ನೀರಾ ಸೇವಿಸುವಂತೆ ಗಾಂಧೀಜಿ ಎಲ್ಲರನ್ನೂ ಪ್ರೋತ್ಸಾಹಿಸುತ್ತಿದ್ದರು. ಒಂದು ದಿನ ಬಾಬುರಾವ್ ಕಾಮತ್ ಒಂದು ಡಬ್ಬದಲ್ಲಿ ನೀರಾ ತುಂಬಿ ತಂದು ಕಾಕಾಲೇಲ್ಕರ್, ಆಠವಳೆ, ಭುರ್ಕೆ, ದಾಬ್ಕೆ, ಸಬ್ನಿಸ್ ಶ್ರೀಪಾದಜೋಷಿ ಮೊದಲಾದವರಿಗೆ ಕೊಟ್ಟರು. ಡಬ್ಬ ಸ್ವಲ್ಪ ತುಕ್ಕು ಹಿಡಿದಂತೆ ಇತ್ತು. ಅದೇನು ಕಾರಣವೋ ನೀರಾ ಸೇವಿಸಿದವರೆಲ್ಲ ವಾಂತಿ ಭೇದಿ ಮಾಡಿಕೊಳ್ಳತೊಡಗಿದರು. ಮರಕ್ಕೆ ಕಟ್ಟಿದ ಮಡಕೆಗೆ ವಿಷಸರ್ಪ ವಿಷಕಾರಿರಬಹುದು. ಹಲ್ಲಿ ಬಿದ್ದಿರಬಹುದು.

ಹೇಗೋ ವಿಷ ಬೆರೆಕೆಯಾದಂತೆ ಕಾಣುತ್ತೆ ಎಂದು ಕೆಲವರ ಊಹೆ. ಎಲ್ಲರನ್ನೂ ವರ್ಧಾದ ಸಿವಿಲ್ ಆಸ್ಪತ್ರೆಗೆ ಸೇರಿಸಲಾಯಿತು. ಡಾಕ್ಟರ್ ಮಹೋದಯ ಚಿಕಿತ್ಸೆ ನಡೆಸಿದರು. ಗಾಂಧೀಜಿ ಪ್ರತಿ ದಿನವೂ ಆಸ್ಪತ್ರೆಗೆ ಹೋಗಿ ಈ ರೋಗಿಗಳನ್ನು ನೋಡಿ, ದೇಹಸ್ಥಿತಿ ವಿಚಾರಿಸಿಕೊಂಡು ಬರುತ್ತಿದ್ದರು. ಕಾಲೇಲ್ಕರ ರನ್ನು ನೋಡಲು ಪುಣೆಯಿಂದ ಅವರ ಶಿಷ್ಯರು ಧಾವಿಸಿ ಬಂದರು. ಇದು ಕಾಲರಾ ಇರಬಹುದೆಂಬ ಶಂಕೆಯಿಂದ ವರ್ಧಾಗೆ ಯಾರೂ ಬರಬಾರದೆಂದು ಸರ್ಕಾರ ಆಜ್ಞೆ ಹೊರಡಿಸಿತು. ಆದರೆ ಗಾಂಧೀಜಿ ಮಾತ್ರ ತಪ್ಪದೆ ಪ್ರತಿನಿತ್ಯ ಬಂದು ಅತಿವಾತ್ಸಲ್ಯದಿಂದ ಎಲ್ಲರ ಆರೋಗ್ಯ ವಿಚಾರಿಸಿಕೊಳ್ಳುತ್ತಿದ್ದರು. ಮೂರು ನಾಲ್ಕು ದಿನಗಳಲ್ಲೇ ದಾಬ್ಕೆ, ಭುರ್ಕೆ ಮತ್ತು ನಾನಾಅತವಳೆ ಮೃತ್ಯುವಶರಾದರು. ಅತವಳೆ ಆಗಸ್ಟ 11,1938 ರಂದು ತೀರಿಕೊಂಡರು.ಇವರು ನೈಷ್ಠಿಕ ಬ್ರಹ್ಮಚಾರಿ. ತಂದೆ–ತಾಯಿಗೆ ಒಬ್ಬನೇ ಮಗ. ವರ್ಧಾದ ಮಹಿಳಾ ಆಶ್ರಮವನ್ನು ಅತ್ಯಂತ ಪ್ರೀತಿ, ಉತ್ಸಾಹದಿಂದ ಅವರು ಬೆಳೆಸಿದ್ದರು. ವೃದ್ಧ ತಾಯಿ ಮಗನ ಹಾಸಿಗೆ ಬಳಿ ಇದ್ದು ಅತ್ಯಂತ ಧೈರ್ಯದಿಂದ ಸಾವು ಎದುರಿಸಿದರು. ಇವರ ಧೈರ್ಯ ಮಹಾತ್ಮರನ್ನು ಚಕಿತಗೊಳಿಸಿತು. ಈ ದುರಂತದಿಂದ ಗಾಂಧೀಜಿ ತುಂಬ ನೊಂದುಕೊಂಡರು. ಅದೇನು ವಿಧಿವಿಲಾಸವೋ ಕಾಯಿಲೆ ಆದವರು, ಮೃತರಾದವರು, ಎಲ್ಲರೂ ಮಹಾರಾಷ್ಟ್ರದವರು. ಪುಣೆಯ ಸಾಪ್ತಾಹಿಕ 'ವಿವಿಧವೃತ್ತ' ಗಾಂಧಿಯವರೇ ಈ ದುರಂತಕ್ಕೆ ಕಾರಣ. ಮಹಾರಾಷ್ಟ್ರದವರನ್ನು ಕಂಡರೆ ಅವರಿಗಾಗದು. ಈ ರೀತಿ ಇಲ್ಲದ ಸಲ್ಲದ ಆರೋಪ ಹೊರಿಸಿ ದ್ವೇಷಪೂರಿತ ಲೇಖನಗಳನ್ನು ಪ್ರಕಟಿಸಿತು.

ಇದೇ ಸಮಯದಲ್ಲಿ ಗೋವಿಂದದಾಸ ಕಾನ್ಸಲ ಎಂಬಾತ Mahatma Gandhi : The Great Rogue of India. ಭಾರತದ ಮಹಾಠಕ್ಕ ಮಹಾತ್ಮ ಗಾಂಧಿ ಎಂಬ ಪುಸ್ತಕ ಬರೆದು ಮಹಾತ್ಮರಿಗೇ ಅದನ್ನು ಅರ್ಪಿಸಿದ್ದ. ಮಹಾತ್ಮರಿಗೆ ಖುದ್ದಾಗಿ ಈ ಪುಸ್ತಕ ಅವರ ಹುಟ್ಟುಹಬ್ಬದಂದು ಅರ್ಪಿಸಲು ಗೋವಿಂದದಾಸರ ಶಿಷ್ಯ ರಣಜಿತ್‌ಕುಮಾರ ಎಂಬ ತರುಣ ರೈಲಿನಲ್ಲಿ ಹೊರಟಿದ್ದ. ಅಂದು ಗಾಂಧೀಜಿ ರೈಲಿನಲ್ಲಿ ಖಾನ್ ಗಫಾರ್‌ಖಾನರೊಡನೆ ದಿಲ್ಲಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ರಣಜಿತ್‌ಕುಮಾರ ಗಾಂಧಿಯವರು ಪ್ರಯಾಣ ಮಾಡುತ್ತಿದ್ದ ಡಬ್ಬಿ ಹೊಕ್ಕು ಅವರ ಕೈಯಲ್ಲಿ ಈ ಪುಸ್ತಕ ಇಟ್ಟ. ಪುಸ್ತಕದ ಶೀರ್ಷಿಕೆ ನೋಡಿ ಕೋಪಗೊಂಡ ಗಫಾರ್‌ಖಾನರು ಅದನ್ನು ಕಿತ್ತುಕೊಂಡು ಹೊರಕ್ಕೆ ಎಸೆಯು ವುದರಲ್ಲಿದ್ದರು. ಅಷ್ಟರಲ್ಲಿ ಗಾಂಧೀಜಿ ಪುಸ್ತಕ ನೋಡಿ ಮನಸಾರೆ ನಕ್ಕರು. ನಿಮ್ಮ ಅಭಿಪ್ರಾಯ ಬರೆದು ಕೊಡಿ' ಎಂದು ನಿಸ್ಸಂಕೋಚದಿಂದ ರಣಜಿತ್‌ಕುಮಾರ ಕೇಳಿದ. 'ನಿಮ್ಮ ಅಭಿಪ್ರಾಯ ನಿಮಗೆ ತೋರಿದಂತೆ ವ್ಯಕ್ತಪಡಿಸಲು ನೀವು

ಸ್ವತಂತ್ರರು' ಎಂದು ಸ್ವಲ್ಪವೂ ವಿಚಲಿತರಾಗದೆ ಬರೆದು ಕೊಟ್ಟರು. ಬೈಗಳಿಂದ ನಮಗಾಗುವ ನಷ್ಟವೇನು ಎಂದು ಗಫಾರ್‌ಖಾನರನ್ನು ಸಮಾಧಾನಪಡಿಸಿದರು. 'ನಿಂದಕರಿರಬೇಕು' ಎಂದು ಪುರಂದರದಾಸರು ಹಾಡಿಲ್ಲವೇ ?

ರೋಗಿಗಳ ಸೇವೆ, ದೇವರಸೇವೆ. ಈ ಭಾವನೆ ಬಾಲ್ಯದಿಂದಲೂ ಗಾಂಧಿಯವರಲ್ಲಿ ಬೆಳೆದು ಬಂದಿತ್ತು. ತಂದೆಯವರು ಕಾಯಿಲೆಯಾಗಿ ಹಾಸಿಗೆ ಹಿಡಿದಿದ್ದಾಗ ಗಾಂಧೀಜಿ ಇನ್ನೂ ಹುಡುಗ. ಆ ವಯಸ್ಸಿನಲ್ಲೇ ತಂದೆಯ ಸೇವಾ ಶುಶ್ರೂಷೆ ನಡೆಸುತ್ತಿದ್ದ. ದಕ್ಷಿಣ ಆಫ್ರಿಕದಲ್ಲಿದ್ದಾಗ ತನ್ನ ದೇಶ ಬಾಂಧವರ ಸೇವೆ ಸಲ್ಲಿಸಬೇಕೆಂಬ ಆಕಾಂಕ್ಷೆ ಅವರಲ್ಲಿ ತೀವ್ರವಾಗಿತ್ತು. ಪಾರ್ಸಿ ರುಸ್ತುಂಜಿ ಅವರ ಉಚಿತ ಆಸ್ಪತ್ರೆಯಲ್ಲಿ, ಕಾಂಪೌಂಡರಾಗಿ ದಿನಕ್ಕೆ ಎರಡು ಗಂಟೆಯ ಕಾಲ, ವೈದ್ಯರ ಅನುಪಾನದಂತೆ ಔಷಧಿ ತಯಾರಿಸಿ ಕೊಡುತ್ತಿದ್ದರು. ಪುಸ್ತಕದಿಂದ ಹೆರಿಗೆ ಮಾಡುವುದನ್ನು ಕಲಿತು ತನ್ನ ಹೆಂಡತಿಯ ಕಡೆಯ ಮಗುವಿನ ಪ್ರಸವ ಸ್ವತಃ ತಮ್ಮ ಕೈಯಾರೆ ಗಾಂಧೀಜಿ ನಡೆಸಿದ್ದರು.

ಬ್ರಿಜಕೃಷ್ಣ ಚಾಂದೀವಾಲ ಕಾಯಿಲೆಯಾಗಿ ಚಿಕಿತ್ಸೆಗಾಗಿ ದಿಲ್ಲಿಗೆ ಹೋದರು. ದಿಲ್ಲಿಯಲ್ಲಿ ಪಡೆಯುತ್ತಿರುವ ಚಿಕಿತ್ಸೆ ವರ್ಧಾದಲ್ಲಿಯೂ ಪಡೆಯಬಹುದೆಂದು ಗಾಂಧೀಜಿ ಅವರಿಗೆ ಪತ್ರ ಬರೆದರು. ಚಾಂದೀವಾಲಾ ವರ್ಧಾಗೆ ಬಂದರು. ಪ್ರತಿದಿನ ಹಾಲಿನ ಕೆನೆ, ಬೆಣ್ಣೆ ಸೇವಿಸುವಂತೆ ದಿಲ್ಲಿಯ ವೈದ್ಯ ಅವರಿಗೆ ತಿಳಿಸಿದ್ದ. ಆಶ್ರಮದಲ್ಲಿ ಇಂಥ ಭೋಗವಸ್ತು ಸೇವಿಸುವುದು ಉಚಿತವಲ್ಲವೆಂದು ಬ್ರಿಜಕೃಷ್ಣ ಸುಮ್ಮನಿದ್ದ. ಆದರೆ ಗಾಂಧೀಜಿ ಬಲವಂತ ಸಿಂಹನಿಗೆ ಪ್ರತಿದಿನ 20 ತೊಲ ಕೆನೆ ಬೆಣ್ಣೆ ತೆಗೆದು ಕೊಡುವಂತೆ ತಿಳಿಸಿದರು. ಹಾಲು ಕಾಯಿಸಿ ಇಂಗಿಸಲು ಪ್ರತ್ಯೇಕ ಪಾತ್ರೆಯ ಆಗತ್ಯವಿತ್ತು. ಪಾತ್ರೆ ಕೊಂಡು ತರುವಂತೆ ಬ್ರಿಜಕೃಷ್ಣನಿಗೆ ತಿಳಿಸಿದರು. ಪಾತ್ರೆ ತಂದು ಪ್ರತಿ ನಿತ್ಯ 20 ತೊಲ ಕೆನೆಬೆಣ್ಣೆ ಚಾಂದೀವಾಲ ಅವರಿಗೆ ಅವರ ದೇಹಸ್ಥಿತಿ ಉತ್ತಮಗೊಳ್ಳುವವರಿಗೂ ಕೊಡಲಾಗುತ್ತಿತ್ತು. ಸಮಯಕ್ಕೆ ತಕ್ಕಂತೆ ಗಾಂಧೀಜಿ ವಜ್ರದಂತೆ ಕಠಿಣವಾಗಬಲ್ಲರು, ಹೂವಿನಂತೆ ಮೃದುವಾಗಬಲ್ಲರು.

ಗಾಂಧಿಯವರ ಪ್ರಕೃತಿ ಚಿಕಿತ್ಸಾ ಕೇಂದ್ರದ ಉರುಲಿಕಾಂಚನದ ಸಮೀಪದಲ್ಲಿ ಭಾರತೀಯ ಸೈನಿಕರ ಶಿಬಿರವಿತ್ತು. ಪ್ರತಿದಿನ ಮಹಾತ್ಮರನ್ನು ಇವರು ನೋಡುವರು. ಪ್ರಾರ್ಥನಾ ಸಭೆಯಲ್ಲಿ ಹಾಜರಿರುವರು. ಗಾಳಿ ಸೇವನೆಗೆ ಹೊರಟಾಗ ಜೊತೆಗೂಡುವರು.

ಗಾಂಧೀಜಿ ಅಲ್ಲಿಂದ ಹೊರಡುವ ಎರಡು ದಿನಗಳ ಮುನ್ನ ಅವರಿಗೆ ತಮ್ಮ ನಮನ ಸಲ್ಲಿಸಲು ಎರಡು ತಂಡಗಳಲ್ಲಿ ಸಿಪಾಯಿಗಳು ಬಂದರು. ಸೇನಾಧಿಕಾರಿಗಳೂ ತಂಡದಲ್ಲಿದ್ದರು. ಪ್ರಶ್ನೋತ್ತರ ಪ್ರಾರಂಭಿಸಿತು.

"ನಾವು ಭಾರತ ಸ್ವಾತಂತ್ರ್ಯದ ಯೋಧರು."

"ತುಂಬ ಸಂತೋಷ. ಇದುವರೆಗೂ ಸ್ವಾತಂತ್ರ್ಯ ಹೋರಾಟ ದಮನ ಕಾರ್ಯಕ್ಕೆ ನೀವು ಸಹಾಯಕರಾಗಿದ್ದೀರಿ. ಜಾಲಿಯನ್‌ವಾಲಬಾಗ್ ದುರಂತ ನೀವು ಕೇಳಿ ಬಲ್ಲಿರಲ್ಲವೇ? ಜನರಲ್ ಡೈಯರ್ ಆಧೀನದಲ್ಲಿ ಗೋರ್ಖಾ ಸೈನಿಕರು ನಿಶ್ಶಸ್ತ್ರ ಭಾರತೀಯ ಗುಂಪಿನ ಮೇಲೆ ಗುಂಡು ಹಾರಿಸಿದ್ದು ನೀವು ಬಲ್ಲಿರಷ್ಟೆ."

"ನಿಜ. ನಮಗೆ ಗೊತ್ತಿದೆ. ಅವು ಗತಕಾಲದ ದಿನಗಳು. ಆಗ ನಾವು ಕೂಪ ಮಂಡೂಕಗಳಾಗಿದ್ದೆವು. ಈಗ ಪ್ರಪಂಚದ ಅರಿವು ನಮಗಾಗಿದೆ. ನಮ್ಮ ಕಣ್ಣು ತೆರದಿದೆ."

"ಹಣಕ್ಕಾಗಿ ದುಡಿಯುವ ಸಿಪಾಯಿಗಳು ನಾವು ಎಂದು ಒಪ್ಪಿಕೊಳ್ಳುತ್ತೇವೆ. ಆದರೆ ಈಗ ನಮ್ಮ ಹೃದಯ ಪರಿವರ್ತನೆ ಆಗಿದೆ."

"ತುಂಬ ಸಂತೋಷ. ನಿಮ್ಮನ್ನು ಅಪಮಾನಕ್ಕೆ ಈಡುಮಾಡಲು ಆ ಪದ್ದ ನಾನು ಬಳಸಲಿಲ್ಲ. ನಿಮ್ಮ ಮನ ನೋಯಿಸಲು ಹೇಳಿದ್ದಲ್ಲ. ಜೀವನಕ್ಕಾಗಿ ವಿದೇಶಿ ಸರ್ಕಾರದಲ್ಲಿ ಸಿಪಾಯಿಗಳಾಗಿರುವ ಎಲ್ಲರಿಗೂ ಇದು ಅನ್ವಯಿಸುತ್ತದೆ."

"ಸ್ವತಂತ್ರ ಭಾರತದಲ್ಲಿ ನಮ್ಮ ಸ್ಥಾನವೇನು?"

"ಸ್ವತಂತ್ರ ವಾತಾವರಣದಲ್ಲಿ ಇತರ ದೇಶಬಾಂಧವರೊಡನೆ ಅದರಲ್ಲಿ ನೀವೂ ಪಾಲ್ಗೊಳ್ಳುವಿರಿ. ನೀವು ಮಿಲಟರಿ ಶಿಕ್ಷಣ ಪಡೆದಿರುವಿರಿ. ಸಂಕಟ ಸನ್ನಿವೇಶದಲ್ಲಿ ಇತರರೊಡನೆ ಭುಜಕ್ಕೆ ಭುಜಕೊಟ್ಟು ಕಷ್ಟ ಸನ್ನಿವೇಶ ಎದುರಿಸುವುದನ್ನು ಕಲಿತಿರುವಿರಿ. ಈ ಶಿಕ್ಷಣದ ಪ್ರಯೋಜನ ಭಾರತಕ್ಕೆ ನೀವು ನೀಡುವಿರಿ. ಸ್ವತಂತ್ರ ಭಾರತಕ್ಕೆ ನಿಮ್ಮ ಸೇವೆ ಅಗತ್ಯ. ಈಗ ನಿಮ್ಮನ್ನು ಲಾಲಿಸಿ ಮುದ್ದಿಸುವಂತೆ ಆಗ ಮಾಡಲಾಗದು. ಬಡ ಜೋರೇಗೌಡನನ್ನು ಸುಲಿಗೆ ಮಾಡಿ ಈಗ ನಿಮಗೆ ಒದಗಿಸಲಾಗುತ್ತಿರವ ವಿಶೇಷ ಸೌಲಭ್ಯಗಳು ಆಗ ನಿಮಗೆ ಲಭಿಸದು. ಪಾಶ್ಚಾತ್ಯ ಸರ್ಕಾರ ಬಡವರನ್ನು ಶೋಷಿಸಿ ನಿಮಗೆ ವಿಶೇಷ ಅನುಕೂಲ ಒದಗಿಸುತ್ತಿದೆ. ಭಾರತ ಬಡದೇಶ. ಈ ವಿಶೇಷ ಸವಲತ್ತುಗಳನ್ನು ನೀವು ತ್ಯಜಿಸದೆ ಹೋದರೆ, ಸ್ವಾತಂತ್ರ್ಯಾನಂತರ, ಹಳೆಯ ಕಾಲ, ಹಳೆಯ ಯಜಮಾನರನ್ನು ಸ್ಮರಿಸಿಕೊಂಡು ದುಃಖಪಡಬೇಕಾದೀತು.

"ಸಾರ್ವಜನಿಕ ಪತ್ರಿಕೆಗಳನ್ನು ಓದಲು ಅವಕಾಶ ನಮಗೆ ಲಭಿಸದ ಕಾಲವೊಂದಿತ್ತು. ಆದರೆ ಈಗ ಕಾಲ ಬದಲಾಯಿಸಿದೆ. ನಮ್ಮ ದೇಶದ ಮಹೋನ್ನತ

ನಾಯಕರನ್ನು ನೋಡಲು ನಾವು ಹೋಗಲಿದ್ದೇವೆಂದು ನಮ್ಮ ಮೇಲಧಿಕಾರಿಗಳಿಗೆ ತಿಳಿಸುತ್ತೇವೆ. ನಮ್ಮನ್ನು ತಡೆಗಟ್ಟುವ ಧೈರ್ಯ ಯಾರಿಗೂ ಇಲ್ಲ."

"ಸಿಪಾಯಿಗಳಲ್ಲಿ ತಳಮಳ ಎದ್ದಿದೆ. ನೂತನ ವಾತಾವರಣ ಮೂಡಿದೆ. ಇದು ನನಗೆ ಅರಿವಾಗಿದೆ. ನೇತಾಜಿ ಬೋಸರು ಇದಕ್ಕೆ ಬಹುಮಟ್ಟಿಗೆ ಕಾರಣ. ಅವರ ಕ್ರಮ, ಮಾರ್ಗ ಒಪ್ಪಲಾರೆ ನಾನು. ಆದರೆ ಭಾರತದ ಯೋಧರಿಗೆ ಹೊಸದೃಷ್ಟಿ, ನೂತನ ಧ್ಯೇಯಕೊಟ್ಟು ಭಾರತಕ್ಕೆ ದೊಡ್ಡ ಉಪಕಾರ ಅವರು ಮಾಡಿರುತ್ತಾರೆ.

"ಭಾರತವನ್ನು ಎರಡುಮೂರು ತುಂಡುಗಳಾಗಿ ವಿಭಜಿಸುವುದು, ಯೋಧರಾದ ನಮಗೆ ಅರ್ಥವಾಗದು. ನಮ್ಮ ರಕ್ತ ತೆತ್ತಿರುವುದು ಅಖಂಡ, ಅವಿಭಾಜ್ಯ ಭಾರತಕ್ಕೆ" ಎಂದ ಒಬ್ಬ ಉನ್ನತ ಅಧಿಕಾರಿ.

"ಲೋಕೋ ಭಿನ್ನರುಚಿಃ". ಎಲ್ಲ ಬಗೆಯ ಜನರಿಂದ ಕೂಡಿದೆ ಈ ಲೋಕ."

ಎಲ್ಲರೂ ನಕ್ಕರು. ವೇಳೆ ಆಯಿತು. ಜಯಕಾರ ಮಾಡಬಹುದೇ ಎಂದು ಕೇಳಿದರು.

"ಅಡ್ಡಿ ಇಲ್ಲ. ಆಗಬಹುದು."

"ಭಾರತ ಮಾತಾಕಿ ಜೈ", "ಜೈಹಿಂದ್", "ನೇತಾಜೀಕಿ ಜೈ"

ಜಯಕಾರಗಳು ಮಾಳಿಗೆ ಕುಸಿಯುವಂತೆ ಅಬ್ಬರಿಸಿದವು. ಚಿಕ್ಕ ಮಕ್ಕಳ ಉತ್ಸಾಹದಂತೆ ಅವರ ಉತ್ಸಾಹ.

ಎರಡು ದಿನಗಳನಂತರ ವಿಶೇಷ ರೈಲುಗಳಲ್ಲಿ ಯೋಧರು ಶಿಬಿರದಿಂದ ನಿರ್ಗಮಿಸಿದರು. ಕಾಂಗ್ರೆಸ್ ಅಧಿವೇಶನಕ್ಕೆ ಹೋಗುವ ವಿಶೇಷ ರೈಲನ್ನು ಹೋಲುತ್ತಿದ್ದುವು ಈ ರೈಲುಗಳು. ನಭೋ ಮಂಡಲವನ್ನೇ ಭೇದಿಸುವಂತ್ತಿತ್ತು ಅವರ ದೇಶ ಭಕ್ತಿ ಪ್ರೇರಿತ ಜಯಕಾರಗಳು.

ಸ್ವರಾಜ್ಯ ಪ್ರಾಪ್ತವಾಗುವ ಕೆಲವು ದಿನಗಳ ಮೊದಲು ಗಾಂಧೀಜಿ ದೇಹಸ್ಥಿತಿ ಕೆಟ್ಟಿತು. ಚೇತರಿಸಿಕೊಳ್ಳಲು ಡೆಹರಾಡೂನ್ ಮಸೂರಿಗೆ ಹೋದರು. ಆಗ ಮಹಾವೀರ ತ್ಯಾಗಿ ಉತ್ತರ ಪ್ರದೇಶದ ವಿಧಾನ ಸಭೆಯ ಸದಸ್ಯರಾಗಿದ್ದರು. 15-20 ಸ್ವಯಂ ಸೇವಕರೊಡನೆ ಮಹಾತ್ಮರಿಗೆ ಸೇವೆ ಸಲ್ಲಿಸಲು ಮಸೂರಿಗೆ ಬಂದರು. ಮಹಾತ್ಮರ ಮಸೂರಿಯ ಬಿರ್ಲ ಬಂಗಲೆಯಲ್ಲಿ ಬಿಡಾರ ಹೂಡಿದ್ದರು. ಸಮೀಪದ ಒಂದು ಮನೆಯಲ್ಲಿ ಸ್ವಯಂ ಸೇವಕರೊಡನೆ ತ್ಯಾಗಿ ತಂಗಿದ್ದರು.

ಮಹಾತ್ಮರ ಸೇವೆಯಲ್ಲಿ ತ್ಯಾಗಿ ತಲ್ಲೀನರಾಗಿ ಆನಂದಿಸುತ್ತಿದ್ದರು. ಹಲವೊಮ್ಮೆ ತ್ಯಾಗಿ ಅವರ ಬೆನ್ನಿನ ಮೇಲೆ ಗಾಂಧೀಜಿ ಕೈ ಹಾಕಿಕೊಂಡು ವಾಯು ಸಂಚಾರಕ್ಕೆ ಹೋಗುತ್ತಿದ್ದರು.

ಪದ್ಧತಿಯಂತೆ ಪ್ರಾರ್ಥನಾ ಸಭೆ ಊರ ಹೊರಗಿನ ಮೈದಾನದಲ್ಲಿ ನಡೆಯುತ್ತಿತ್ತು. ಅಷ್ಟು ದೂರ ಹೋಗಲು ಜನರಿಗೆ ತೊಂದರೆ ಆಗುತ್ತೆ. ಆದ್ದರಿಂದ ನಗರದ ನಡುವಿನ 'ಸಿಲ್ವರ್‌ಟನ್' ಹೊಟೇಲಿನ ನೆರೆಯ ಮೈದಾನದಲ್ಲಿ ಸಭೆ ನಡೆಯುವ ವ್ಯವಸ್ಥೆ ಮಾಡಲಾಯಿತು. ಆ ಕಾಲಕ್ಕೆ ಮಹಾತ್ಮರ ಸೇವೆ ಮತ್ತು ಬೀಡಿ, ತ್ಯಾಗಿ ಅವರಿಗೆ ತುಂಬ ಪ್ರಿಯವಾಗಿತ್ತಂತೆ! ತ್ಯಾಗಿಯವರೇ ಹೀಗೆ ಹೇಳಿಕೊಂಡಿರುತ್ತಾರೆ. ಸಿಗರೇಟು ಸೇದಲು ಹಣ ಸದಾ ಇರುತ್ತಿರಲಿಲ್ಲ. ಆದ್ದರಿಂದ ಬೀಡಿ ಸೇದುವುದರಲ್ಲೇ' ತೃಪ್ತರಾಗಿರಬೇಕಾಗುತ್ತಿತ್ತಂತೆ! . ಪ್ರಾರ್ಥನಾ ಸಭೆಯಲ್ಲಿ ಹಾಜರಿದ್ದು, ಮಹಾತ್ಮರ ಅಮೃತ ವಾಕ್ಯಗಳನ್ನು ಆಲಿಸುವುದು ಮತ್ತೊಂದು ನ ೬ ತ್ಯಾಗಿಯವರಿಗೆ. ಸಿಗರೇಟು, ಬೀಡಿಗೆ ದುಡ್ಡು ಬೇಕು. ಅಮೃತವಾಣಿ ಕೇಳಲು ಹಣ ಕೊಡಬೇಕಾಗಿರಲಿಲ್ಲ.

ತ್ಯಾಗಿ ಮತ್ತು ನೆರೆಯ ಗ್ರಾಮಗಳಿಂದ ಬಂದಿದ್ದ ಗ್ರಾಮೀಣ ಸ್ವಯಂ ಸೇವಕರು ಬಾಪೂಜಿ ಸೇವೆಯಲ್ಲಿ ಸಂತೃಪ್ತರಾಗಿರುತ್ತಿದ್ದರು. ಹೀಗಿರುವಾಗ ಯಾರೋ ಕಿಡಿಗೇಡಿಗಳು ತ್ಯಾಗಿ ಮತ್ತು ಅವರ ಸ್ವಯಂ ಸೇವಕರು ಹರಕು–ಮುರುಕು ಕೊಳೆ ಬಟ್ಟೆ ಧರಿಸಿದ ಬಡವರು ಪ್ರಾರ್ಥನಾ ಸಭೆಗೆ ಬಾರದಂತೆ ಅಡ್ಡಿ ಮಾಡುತ್ತಿದ್ದಾರೆಂದು ದೂರಿದರು. ಈ ಆರೋಪಣೆ ನಿಜವೆಂದು ನಂಬಿ, ಮಹಾವೀರ ತ್ಯಾಗಿ ಮತ್ತು ಸ್ವಯಂ ಸೇವಕರು ಈ ರೀತಿ ಮಾಡುವುದು ಸರಿಯಲ್ಲವೆಂದು ಮಾರನೆಯ ದಿನದ ಸಭೆಯಲ್ಲಿ ಬಹಿರಂಗವಾಗಿ ಬಾಪೂಜಿ ಖಂಡಿಸಿದರು. ಇದು ತ್ಯಾಗಿ ಮತ್ತು ಅವರ ಸ್ವಯಂ ಸೇವಕರ ಮೇಲೆ ತುಂಬ ಕೆಟ್ಟ ಪರಿಣಾಮ ಮಾಡಿತು. ಈ ಕಠೋರ ಆಪಾದನೆಗೆ ಗುರಿಯಾದ ಸ್ವಯಂ ಸೇವಕರು, ಬಾಡಿದ ಸೂರ್ಯ ಕಾಂತಿ ಹೂವಿನ ಗಿಡದಂತೆ ತಲೆ ಬಾಗಿ ನಿಂತರು. ಸ್ವಯಂ ಸೇವಕರ ಮತ್ತು ತ್ಯಾಗಿಯವರ ಮುಖ ಹೃದಯ ವೇದನೆಯಿಂದ ವಿವರ್ಣವಾಯಿತು.

ಸ್ವಯಂ ಸೇವಕರು ಈ ಸ್ಥಿತಿ ಗಮನಿಸಿ, ತ್ಯಾಗಿ ಕುಪಿತರಾದರು. "ಬಾಪೂಜಿ, ಶ್ರೀರಾಮನ ಮಂದಿರದಲ್ಲಿ ಕುಳಿತು, ನಿಜಾಂಶ ತಿಳಿಯಲು ಪ್ರಯತ್ನಿಸದೆ, ಈ ರೀತಿ ತಾವು ನನ್ನ ಸ್ವಯಂ ಸೇವಕರನ್ನು ದೂಷಿಸುವುದು ಸರಿಯಲ್ಲ. ಈ ಸುಳ್ಳು ಸುದ್ದಿ ನಿಮಗೆ ಯಾರು ತಿಳಿಸಿದರು. ಈ ಸುಳ್ಳು ಆಪಾದನೆ ಹೊರಿಸುವುದರಿಂದ ತಮಗಾಗುವ ಲಾಭ ಏನು? ನನ್ನ ಮುಖಭಂಗಮಾಡಿದಿರಿ. ನನ್ನ ಮತ್ತು ನನ್ನ ಸ್ವಯಂ ಸೇವಕರ ಉತ್ಸಾಹಕ್ಕೆ ತಣ್ಣೀರು ಎರಚಿದಂತಾಗಿದೆ." ಹೀಗೆ ಬಹಿ

ರಂಗ ಸಭೆಯಲ್ಲೇ ಪ್ರತಿಭಟಿಸಿದರು. ಶಾಂತ ಚಿತ್ತರಾಗಿ ಇದೆಲ್ಲ ಬಾಪೂಜಿ ಆಲಿಸಿದರು. ತ್ಯಾಗಿ ಅವರ ಕೋಪ ಹೆಚ್ಚಿದಂತೆ ಬಾಪೂಜಿ ಶಾಂತತೆ ಅಷ್ಟೂ ಅಧಿಕವಾಗುತ್ತಿತ್ತು.

ಗಾಂಧೀಜಿ ಬಿರ್ಲ ಭವನ ಸೇರಿದ ಕೂಡಲೇ ಪ್ಯಾರೇಲಾಲ್ ಮತ್ತು ಬ್ರಿಜಕೃಷ್ಣ ಚಾಂದೀವಾಲ ಇಬ್ಬರನ್ನೂ ಬರಮಾಡಿಕೊಂಡು, ಅಪಾದನೆಯ ಸಿಜಾಂಶ ವಿಚಾರಿಸಿ ತಮಗೆ ತಿಳಿಸುವಂತೆ ಹೇಳಿದರು. ಇಬ್ಬರೂ ಮಸೂರಿಯಲ್ಲಿ ಅಡ್ಡಾಡಿ, ಹಲವಾರು ಸಜ್ಜನರನ್ನೂ, ರಿಕ್ಷಾ ಎಳೆಯುವವರನ್ನೂ, ಡೋಲಿ ಹೊರುವವರನ್ನೂ ಪ್ರಶ್ನಿಸಿದರು. ಬಾಪೂಜಿ ಆಗಮನದಿಂದ ತಮ್ಮ ವರಮಾನ ಬಹಳ ಹೆಚ್ಚಿದೆ. ಪ್ರಾರ್ಥನಾಸಭೆಗೆ ಹೋಗಲು ಕೇಳಿದಷ್ಟು ಮಜೂರಿ ಜನ ಕೊಡುತ್ತಾರೆ. ಆದ್ದರಿಂದ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಲು ತಮಗೆ ಆಗುತ್ತಿಲ್ಲ. ನಮಗೆ ವರಮಾನಗಿಟ್ಟುವುದು ಆಗಲೇ, ಅದನ್ನು ನಾವು ಬಿಟ್ಟು ಕೊಡಲಾರೆವು. ಹೀಗೆ ಹೇಳಿದರು ಈ ಶ್ರಮ ಜೀವಿಗಳು. ಸಭೆಯಲ್ಲಿ ಹಾಜರಿರಲು ತಮಗೆ ಅಡ್ಡಿಯಾಗುತ್ತಿರುವುದಾಗಿ ಒಬ್ಬರೂ ಹೇಳಲಿಲ್ಲ.

ಮಾರನೆಯ ದಿನದ ಪ್ರಾರ್ಥನಾ ಸಭೆಯಲ್ಲಿ ಮಹಾವೀರ ತ್ಯಾಗಿಯವರು ದುಃಖಿತರಾಗಿ ಬಾಪೂಜಿಯವರಿಂದ ದೂರವಾಗಿ ಸಭೆಯ ಅಂಚಿನಲ್ಲಿ ನಿಂತಿದ್ದರು. ಪ್ರಾರ್ಥನೆ ಮುಗಿಯಿತು. ಪ್ರವಚನ ಪ್ರಾರಂಭವಾಯಿತು. ಅವರೆಂದರು, ನಿನ್ನೆಯ ದಿನದ ಪ್ರಾರ್ಥನಾ ಸಭೆಯಲ್ಲಿ ನಾನು ತ್ಯಾಗಿಯವರನ್ನು ನಿಂದಿಸಿದೆ. ಅವರು ನನ್ನ ಮೇಲೆ ಕೋಪಗೊಂಡರು. ಇನ್ನೂ ಅವರ ಕೋಪ ತಾಪ ಇಳಿದಿಲ್ಲನೆಂದು ಕಾಣುತ್ತೆ. ಆದ್ದರಿಂದ ಅವರು ದೂರ ಸರಿದು ನಿಂತಿದ್ದಾರೆ. ಪೂರ್ವೋತ್ತರ ವಿಚಾರಿಸದೆ ನಿನ್ನೆ ನಾನು ಮಾತನಾಡಿದ್ದು ತಪ್ಪು. ಇದರಿಂದ ತ್ಯಾಗಿಯವರ ಮನ ನೊಂದಿದೆ. ಇದಕ್ಕೆ ಕಾರಣ ನಾನು. ಈ ಅಪರಾಧಕ್ಕಾಗಿ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗಿದೆ.

ಈ ವಾಕ್ಯಗಳನ್ನು ಕೇಳುತ್ತಲೇ ಇಡೀ ಸಭೆ ತಲ್ಲಣಿಸಿ ಹೋಯಿತು. ಪ್ರಾಯಶ್ಚಿತ್ತ ಎಂದರೆ, ಬಾಪೂ ಎಲ್ಲಿ ಉಪವಾಸ ಕೈಗೊಳ್ಳುವರೋ ಎಂಬ ಶಂಕೆ. ಆದರೆ ಅಂದು ಉಪವಾಸದ ಪ್ರಶ್ನೆ ಬಾಪು ಎತ್ತಲಿಲ್ಲ. ಇದರಿಂದ ಸಭೆಯನ್ನು ಆವರಿಸಿಕೊಂಡಿದ್ದ ಭೀತಿ ದೂರವಾಯಿತು. ಬಾಪೂಜಿ ಹೇಳಿದರು. "ನಾನು ಮಹಾತ್ಮ ಎನಿಸಿಕೊಂಡಿರುವೆ. ನಾನೇ ಇಂಥ ಅಪರಾಧ ಮಾಡಬಹುದಾದರೆ, ಸಾಮಾನ್ಯ ರಾದ ನೀವು ದಿನವಹಿ ತಪ್ಪುಮಾಡುತ್ತಿರಬಹುದು. ಈ ಪಾಪಗಳನ್ನು ತೊಳೆದು ಹಾಕಬೇಕು. ಮುಂದೆ ಈ ಬಗೆಯ ತಪ್ಪುಗಳು ಸಂಭವಿಸದಂತೆ ಜಾಗರೂಕತೆ ವಹಿಸಬೇಕು. ಪಾಪ ಅಥವಾ ತಪ್ಪು ಸಂಭವಿಸುವ ಸಮಯ ತಲೆದೋರಿದಾಗ

ರಾಮನಾಮ ಜಪಿಸಬೇಕು. ಕೆಟ್ಟ ದೃಶ್ಯ ಕಣ್ಣಿನಿಂದ ನೋಡಬಾರದು; ಕಣ್ಣು ಮುಚ್ಚಿಕೊಳ್ಳಬೇಕು. ಕೆಟ್ಟ ಮಾತು ಕಿವಿಯಾರೆ ಕೇಳಬಾರದು. ಬಾಯಿಂದ ಕೆಟ್ಟ ಮಾತು ಆಡಬಾರದು; ಬಾಯಿ ಮುಚ್ಚಿಕೊಳ್ಳಬೇಕು. ಒಬ್ಬರ ಮೇಲೆ ಇನ್ನೊಬ್ಬರು ಆರೋಪ ಹೊರಿಸಿದಾಗ, ಹಿಂದು ಮುಂದು ವಿಚಾರ ಮಾಡದೆ ಆರೋಪ ನಿಜವೆಂದು ನಂಬಬಾರದು. ಇಂದಿನಿಂದಲೇ ಈ ಪ್ರತಿಜ್ಞೆ ಕೈಗೊಳ್ಳುವೆ. ತಾವೂ ಇದೇ ರೀತಿಯ ಪ್ರತಿಜ್ಞೆ ಕೈಗೊಳ್ಳಬೇಕೆಂದು ಆಶಿಸುವೆ. ಇದು ನಾನು ಸೂಚಿಸುವ ಪ್ರಾಯಶ್ಚಿತ್ತ."

ಸಭೆ ಮುಗಿಯಿತು. ತ್ಯಾಗಿಯವರನ್ನು ಸಮೀಪಕ್ಕೆ ಕರೆದು, ಅವರ ಭುಜದ ಮೇಲೆ ಕೈ ಹಾಕಿಕೊಂಡು, ಸಭೆಯಿಂದ ನಡೆದರು. ಬಾಪುವಿನ ಉದಾರ ವರ್ತನೆಯಿಂದ ತ್ಯಾಗಿಯವರ ಹೃದಯ ನೀರಾಯಿತು. ಇಬ್ಬರ ಹೃದಯ ಮತ್ತೆ ಒಂದಾಯಿತು.

ಇದರಿಂದ ಗಾಂಧೀಜಿ ಪಾಠ ಕಲಿತರೋ ಎಂಬಂತೆ ಬೆಂಗಳೂರಿನಲ್ಲಿ ಒಂದು ಘಟನೆ ನಡೆಯಿತು. ಬೆಂಗಳೂರಿಗೆ ಗಾಂಧೀಜಿ ದಯಮಾಡಿಸಿದ್ದಾಗ ವಿಶ್ವ ಕರ್ನಾಟಕದ ತಾತಾಚಾರ್ಯಶರ್ಮ ಅವರ ಭಾಷಣಗಳ ಅನುವಾದಕರಾಗಿದ್ದರು. ಗಾಂಧೀಜಿ 'ಕುಮಾರ ಕೃಪ' ದಲ್ಲಿ ರಾಜ ಅತಿಥಿಗಳಾಗಿ ವಾಸ್ತವ್ಯ ಹೂಡಿದ್ದರು. ಶರ್ಮರು ಇಲ್ಲಿಗೆ ತಮ್ಮ ಪತ್ನಿ ರಾಜಮ್ಮನವರೊಂದಿಗೆ ಹೋಗುವುದು ವಾಡಿಕೆ. ಒಂದು ದಿನ ರಾಜಮ್ಮನವರು ಶರ್ಮರ ಜೊತೆ ಇರಲಿಲ್ಲ. ಏಕೆ, ಎಂದು ವಿಚಾರಿಸಿದರು. ರಾಜಮ್ಮನವರು ತುಂಬು ಗರ್ಭಿಣಿ. ಆದ್ದರಿಂದ ಅಲುಗಾಡುವ ಜಟಕ ಬಂಡಿಯಲ್ಲಿ ಪತ್ನಿಯನ್ನು ಶರ್ಮ ಕರೆದು ತಂದಿರಲಿಲ್ಲ. ಆಗ 'ಟಾರ್' ರಸ್ತೆಗಳು ಇರಲಿಲ್ಲ. ಇದೆಲ್ಲವನ್ನೂ ಸಮೀಪದಲ್ಲಿದ್ದ ವ್ಯವಸಾಯ ಇಲಾಖೆಯ ಕುಣ್ಣಿ ಕಣ್ಣನ್ ಕೇಳಿಸಿಕೊಳ್ಳುತ್ತಿದ್ದರು. ಗಾಂಧಿಯವರ ಅಭಿಮತ ಗ್ರಹಿಸಿ, ಶರ್ಮ. ಮನೆಗೆ ಹೋಗಿ, ತಮ್ಮ ಮೋಟಾರಿನಲ್ಲಿ ರಾಜಮ್ಮನವರನ್ನು ಗಾಂಧಿಯವರ ಬಳಿ ಕರೆತಂದರು. ಗರ್ಭವತಿ ರಾಜಮ್ಮನವರನ್ನು ನೋಡಿ, 'ನಿಮಗೆ ಸುಪುತ್ರನಾಗಲಿ. ನೀವು ದೀರ್ಘ ಸುಮಂಗಲಿಯಾಗಿ ಬಾಳಿ' ಎಂದು ಹರಸಿದರು.

ಇಷ್ಟಕ್ಕೇ ನಿಲ್ಲಲಿಲ್ಲ. ಶರ್ಮರ ಕಡೆ ತಿರುಗಿ, 'ನಾನು ಒಮ್ಮೆ ಸೂಲಗಿತ್ತಿಯ ಕೆಲಸ ಮಾಡಿದ್ದೆ. ಇದು ನಿಮಗೆ ಗೊತ್ತೆ' ಎಂದು ಕೇಳಿದರು. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ಇದ್ದಾಗ, ಅವರ ಪತ್ನಿ ಕಸ್ತೂರಿಬಾ ಗರ್ಭವತಿ ಆದರು. ಪ್ರಸವ ಕಾಲಕ್ಕೆ ಸೂಲಗಿತ್ತಿಯ ಸಹಾಯ ದೊರೆಯಲಿಲ್ಲ. ಆದಕಾರಣ ಸೂಲಗಿತ್ತಿಯ ಕೆಲಸ ಇವರೇ ನಿರ್ವಹಿಸಿದ್ದರು. ನಿಮಗೆ ಸುಪುತ್ರನಾಗಲಿ, ಅವನು ನಿಮಗಿಂತ ಉತ್ತಮ ಅನುವಾದಕನಾಗಲಿ ಎಂದು ಶರ್ಮಾರಿಗೆ ಹರಸಿದರು.

ಗಾಂಧೀಜಿ ಬೆಂಗಳೂರಿನಿಂದ ನಿರ್ಗಮಿಸುವ ಮುನ್ನ ಶರ್ಮರು ತಮ್ಮ ವಿಶ್ವಕರ್ನಾಟಕ ಪತ್ರಿಕೆಗೆ ಒಂದು ಸಂದೇಶ ಕೊಡುವಂತೆ ಗಾಂಧಿಯವರನ್ನು ಪ್ರಾರ್ಥಿಸಿದರು. ತಾತಾಚಾರ್ಯ ಶರ್ಮ ಅವರ ಪರಿಚಯ ಸಾಕಷ್ಟು ಆಗಿತ್ತು ಗಾಂಧಿಯವರಿಗೆ. ಆದರೆ ಅವರ ಸಂಪಾದಕತ್ವದಲ್ಲಿ ನಡೆಯುತ್ತಿದ್ದ ವಿಶ್ವಕರ್ನಾಟಕ ಕನ್ನಡದ ವಾರಪತ್ರಿಕೆಯ ಪರಿಚಯವಿರಲಿಲ್ಲ. ಪತ್ರಿಕೆಯ ಧೋರಣೆ, ಅದರಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳ ಪರಿಚಯವಿರಲಿಲ್ಲ. ಈ ವಿವರಗಳನ್ನು ತಿಳಿಯ ಬಯಸಿದರು. ಶರ್ಮರ ಗೆಳೆಯರಾದ ವಕೀಲ ನಿಟ್ಟೂರು ಶ್ರೀನಿವಾಸರಾಯರು ಈ ಹೊಣೆ ವಹಿಸಿಕೊಂಡರು. ವಿಶ್ವಕರ್ನಾಟಕದ ಸಂಪುಟಗಳನ್ನು ತಂದು ಅದರಲ್ಲಿ ಪ್ರಕಟವಾಗಿದ್ದ ಸಂಪಾದಕೀಯ ಮತ್ತು ಇತರ ಲೇಖನ ಓದಿ ಅನುವಾದ ಮಾಡಿ ತಿಳಿಸಿದರು. ಈ ಕೆಲಸ ಒಂದೇ ದಿವಸದಲ್ಲಿ ಮುಗಿಯಲಿಲ್ಲ. ಎರಡು ದಿನ ಸಾಗಿತು. ವಿಶ್ವಕರ್ನಾಟಕ ಉತ್ತಮ ರಾಷ್ಟ್ರೀಯ ಪತ್ರಿಕೆ ಎಂದು ಮನದಟ್ಟು ಮಾಡಿಕೊಂಡು, ತದನಂತರ ಪತ್ರಿಕೆಗೆ ಸೂಕ್ತ ಸಂದೇಶ ಕೊಟ್ಟರು. ಮುಂದೆ ತಾತಾಚಾರ್ಯಶರ್ಮ ಮತ್ತು ನಿಟ್ಟೂರು ಶ್ರೀನಿವಾಸರಾಯರು, ಗಾಂಧಿಯವರ ಆತ್ಮಕಥೆ, ಸತ್ಯ ಶೋಧನೆ ಎಂಬ ಶಿರೋನಾಮೆಯಲ್ಲಿ ಅನುವಾದಮಾಡಿ, ವಿಶ್ವ ಕರ್ನಾಟಕದಲ್ಲಿ ಧಾರಾವಾಹಿಯಾಗಿ ಪ್ರಕಟಿಸಿದರು. ತದನಂತರ ಶ್ರೀನಿವಾಸರಾಯರು ಸ್ಥಾಪಿಸಿದ ಸತ್ಯಶೋಧನೆ ಪ್ರಕಟನಾಲಯದಿಂದ ಗಾಂಧಿಯವರ ಸತ್ಯಶೋಧನೆ ಪುಸ್ತಕವಾಗಿ ಪ್ರಕಟಗೊಂಡಿತು.

ಬಂಗಾಳದಲ್ಲಿ ಜಾತೀಯತೆಯ ಕಿಚ್ಚು ಭಯಂಕರವಾಗಿ ಹತ್ತಿ ಉರಿಯುತ್ತಿತ್ತು. ಹಿಂದೂ ಮುಸ್ಲಿಂ ಐಕ್ಯತೆಗಾಗಿ ತಾನು ಮಾಡಿದ್ದ ಇಡೀ ಜೀವಮಾನದ ಪ್ರಯತ್ನ ವ್ಯರ್ಥವಾಯಿತೆಂದು ಮನೋಯಾತನೆ ಗಾಂಧೀಜಿ ಅನುಭವಿಸುತ್ತಿದ್ದರು. ಆಫ್ರಿಕದ ಟಾಲಸ್ಟಾಯಿ ಆಶ್ರಮದಲ್ಲಿ ಹಿಂದೂ–ಮುಸ್ಲಿಂ–ಪಾರ್ಸಿ ಮತ್ತು ಇತರ ಮತೀಯ ಯುವಕರು ಸೌಹಾರ್ದದಿಂದ ಬಾಳುತ್ತಿದ್ದುದನ್ನು ಸ್ಮರಿಸಿ ಕೊಳ್ಳುತ್ತಿದ್ದರು. ಖಿಲಾಫತ್ ಚಳವಳಿಯ ಕಾಲದಲ್ಲಿ ಹಿಂದೂ–ಮುಸಲ್ಮಾನರು ಐಕ್ಯರಾಗಿ ಅಸಹಕಾರ ಚಳವಳಿ ನಡೆಸಲು ಸಿದ್ಧರಾಗಿದ್ದರು. ಮಹಮ್ಮದೀಯರ ಅಪಾರ ನಂಬಿಕೆ ಗಾಂಧೀಜಿ ಗಳಿಸಿಕೊಂಡಿದ್ದರು. ಪರ್ದಾ ಸ್ತ್ರೀಯರ ಸಭೆಗಳಲ್ಲಿ ಭಾಷಣ ಮಾಡುವ ವಿಶೇಷ ಅವಕಾಶ ಗಳಿಸಿಕೊಂಡಿದ್ದ ಏಕಮಾತ್ರ ಪುರುಷ ಗಾಂಧೀ. ಅದರಲ್ಲೂ ಗೋಹತ್ಯೆಯ ವಿರೋಧಿಯಾಗಿದ್ದ ಹಿಂದೂ. ಅದೆಷ್ಟು ಮಸೀದಿಗಳಲ್ಲಿ ಅವರು ಸಭೆನಡೆಸಿದ್ದರು. ಹಿಂದೂ–ಮುಸ್ಲಿಂ ಐಕ್ಯತೆಗೆ ಜಯವಾಗಲಿ, ಮಹಾತ್ಮ ಗಾಂಧಿಗೆ ಜಯವಾಗಲಿ ಘೋಷಣೆಗಳು ಸಹಸ್ರಾರು ಮುಸ್ಲಿಂ ಕಂಠಗಳಿಂದ ಹೊರಹೊಮ್ಮಿ ನಭೋಮಂಡಲ ಮುಟ್ಟುತ್ತಿದ್ದುವು. ಅಧಿಕಾರ ಪೀಠದಿಂದ ಚ್ಯುತನಾದ ಕಲೀಫನನ್ನು ಮತ್ತೆ ಒಟ್ಟೋಮನ್ ಚಕ್ರಾಧಿಪತ್ಯದ ಗದ್ದುಗೆಗೆ

ಏರಿಸುವುದರಲ್ಲಿ ಹಿಂದೂ ಮತ್ತು ಮುಸ್ಲಿಮೇತರರಿಗೆ ಯಾವ ಆಸಕ್ತಿಯೂ ಇರಲಿಲ್ಲ. ಆದರೆ ಈ ಅವಕಾಶವನ್ನು ಮತೀಯ ಸೌಹಾರ್ಧತೆಯ ಸ್ಥಾಪನೆಗೆ ತುಂಬ ಯಶಸ್ವಿಯಾಗಿ ಗಾಂಧೀಜಿ ಬಳಸಿಕೊಂಡಿದ್ದರು. ಮತೀಯ ಸೌಹಾರ್ದತೆ ಶಾಶ್ವತವಾಗಿ ಸ್ಥಾಪಿಸುವ ಈ ಕನಸು ನುಚ್ಚು ನೂರಾಗಿ ಒಡೆದು ಹೋಗಿತ್ತು. ಭಾರತವನ್ನು ಮತೀಯ ಆಧಾರದ ಮೇಲೆ ಇಬ್ಭಾಗ ಮಾಡುವ ಮೊದಲು ನನ್ನ ದೇಹವನ್ನು ಎರಡಾಗಿ ತುಂಡರಿಸಬೇಕಾದೀತು ಎಂಬ ಮನೋವೇದನೆಯ ಭಾವೋದ್ರೇಕ ವಾಕ್ಯಗಳು, ಭಾರತದ ವಿಭಜನೆಯನ್ನು ತಡೆಯಲಾರದೆ ಅಸಹಾಯಕವಾಗಿದ್ದುವು. ಹಿಂದೂಗಳ ರುಂಡ ಮುಂಡಗಳು ಭೂಮಿಯ ಮೇಲೆ ಬಿದ್ದು ಉರುಳಾಡುತ್ತಿದ್ದ ಭಯಂಕರ ಬಂಗಾಳಕ್ಕೆ ಏಕಾಂಗಿಯಾಗಿ ಹೊರಟಿದ್ದರು ಬಾಪೂಜಿ. ಅಹಿಂಸೆಯ ಸತ್ವ ಪರೀಕ್ಷೆಯ ಕಾಲ ಬಂದು ಒದಗಿತ್ತು.

ಎಲ್ಲಿ ನೋಡಿದರೂ ಮುರಿದ ಮನೆ, ಸುಟ್ಟ ಗುಡಿಸಲು, ಬೆಂದು ಬೂದಿಯಾದ ಮನೆ, ರುಂಡ ಮುಂಡದ ಅವಶೇಷಗಳು, ರಾಕ್ಷಸೀ ಮಾನವ ಯಾವ ಮಟ್ಟಕ್ಕೆ ಇಳಿಯ ಬಲ್ಲನೆಂದು ಉದಹರಿಸುತ್ತಿದ್ದುವು. ಬರೆಯಲಾಗದ, ಬಾಯಿಂದ ಹೇಳಲಾಗದ, ಕಿವಿಯಾರೆ ಕೇಳಲಾಗದ ಹೇಯ ಕೃತ್ಯಗಳು ನಡೆದಿದ್ದುವು. ಅಮಾವಾಸ್ಯೆಯ ಕತ್ತಲಲ್ಲಿ ಹೊಳೆವ ಮಿಂಚಿನಂತೆ, ಅಲ್ಲಲ್ಲಿ ಪಾಪವನ್ನು ತೊಳೆಯುವ ಉತ್ತಮ ಘಟನೆಗಳು ಘಟಿಸಿದ್ದುವು. 125 ವರ್ಷ ಬಾಳಬೇಕೆಂಬ ಅವರ ಬಯಕೆ ಮಣ್ಣುಗೂಡಿತ್ತು. ಮರಣ ಬರಬಾರದೆ ಎಂಬ ನೊಂದ ಹೃದಯ ಹೊತ್ತು, ತನ್ನ ದುಃಖ ಲಕ್ಷಿಸದೆ ಆರ್ತರ ದುಃಖ ನೀಗಿಸಲು ಮೆಲ್ಲ ಮೆಲ್ಲನೆ ಅಡಿಯಿಡುತ್ತಾ, ಹಳ್ಳಿಯಿಂದ ಹಳ್ಳಿಗೆ ಸಾಗುತ್ತಿದ್ದರು ಸತ್ಯ ಧೀರ ಬಾಪೂಜಿ ವಿಹ್ವಲರಾಗಿ. ಜೊತೆಯಲ್ಲಿ ಮೊಮ್ಮಗಳಾದ ಮನೂ ಒಬ್ಬಳೇ.

ಇಂಥ ಸಂಕಟ ಸಮಯದಲ್ಲೂ ಬಾಪು ನಮ್ಮ ಕೈ ಬಿಡಲಿಲ್ಲ. ಮಹಾತ್ಮರು ನಮ್ಮ ಗ್ರಾಮಕ್ಕೆ, ನಮ್ಮ ಮನೆಗೆ ಬಂದರು. ಅವರ ಪಾದಧೂಳಿಯಿಂದ ನಮ್ಮ ಮನೆ ಪುನೀತವಾಯಿತು. ಹೀಗೆ ದುಃಖಾರ್ತರು ತಮ್ಮ ದುಃಖ ನೀಗಿಸಿಕೊಳ್ಳುತ್ತಿದ್ದರು. ಬಾಪೂಜಿ ಎಂಟು–ಹತ್ತು ಮೈಲಿ ನಡೆಯುವರು. ''ನನ್ನಿಂದ ಇನ್ನು ಸೇವೆ ಬಯಸುವುದಾದರೆ ನನ್ನ ಪ್ರಾಣ ಉಳಿಸಿಕೋ. ಬೇಡವೆನಿಸಿದಾಗ ನನ್ನನ್ನು ನಿನ್ನ ಬಳಿಗೆ ಕರೆದುಕೋ. ಈ ದುಃಖ, ಸಂಕಟ ತಡೆದುಕೊಂಡು ಬಾಳುವ ಇಚ್ಛೆ ನನಗಿಲ್ಲ. ಬಾಳಬೇಕೆಂಬ ಬಯಕೆಯೂ ಇಲ್ಲ. ಎಲ್ಲ ನಿನ್ನ ಮಾಯೆ. ನಿನ್ನ ಇಚ್ಛೆ.'' ಹೀಗೆ ಭಗವಂತನ ಮೇಲೆ ಭಾರ ಹೊರಿಸಿ ಹೆಜ್ಜೆ ಹಾಕುತ್ತಿದ್ದರು. ಹಗಲು ಸಂಚಾರ. ಸದಾ ರಾಮನಾಮ ಸ್ಮರಣೆ. ರಾತ್ರಿ ಆಶ್ರಯ ನೀಡುವ ನೊಂದ ಬಡವರ ಮನೆಯಲ್ಲಿ ಬಿಡಾರ. ಅನೇಕರು ತಮ್ಮ ಮನೆ, ಮಠ,

ಮಡದಿ, ಮಕ್ಕಳು, ಆಸ್ತಿ–ಪಾಸ್ತಿ ಎಲ್ಲ ಕಳೆದುಕೊಂಡು ದಿಕ್ಕು ಕಾಣದ ಕಂಗಾಲರು. ಇಂಥವರ ಮನೆಯೇ ಬಾಪೂವಿಗೆ ಆಶ್ರಯ.

ಕರುಣಾಮೂರ್ತಿ ಗಾಂಧೀಜಿ ಹೀಗೆ ಅಲೆಯುತ್ತ ನವಾಖಲಿಯ ನಾರಾಯಣಪುರಕ್ಕೆ ರಾತ್ರಿ ಏಳಕ್ಕೆ ಬಂದರು. ಒಬ್ಬ ಬಡ ನೇಕಾರನ ಮನೆಯಲ್ಲಿ ಬಿಡಾರ. ಇವರಿಗೆ ಅಗತ್ಯವಾದ ನೀರು, ಸ್ನಾನ, ಪಾನ, ಆಹಾರ, ಬಟ್ಟೆ–ಬರೆ, ಹಾಸಿಗೆ ಹೊದಿಕೆ, ಕಾಗದ–ಪತ್ರ, ವಿಶ್ರಾಂತಿ ಎಲ್ಲ ಹೊರೆ ಹೊತ್ತಿದ್ದಳು ಮನೂ. ಬಿಡುವಿಲ್ಲದ ಕೆಲಸ. ಅವಳ ವಯಸ್ಸಿಗೆ ಅಪಾರ ಹೊಣೆ. ಅವಳೂ ಕೃಶಾಂಗಿಯಾಗಿದ್ದಳು. ಆಗಾಗ ಜ್ವರ ಬರುತ್ತಿತ್ತು.

ಬಾಪೂಜಿ ಮನೆಗೆ ಬರುತ್ತಲೇ ಮನೂ ಅವರ ಪಾದ ಬಿಸಿನೀರಿನಿಂದ ತೊಳೆಯುವಳು. ಬಟ್ಟೆಯಿಂದ ಕಾಲು ಒರೆಸುವಳು. ತರುವಾಯ ಬಾಪೂಜಿ ಬರೆಯಲು ಕೂಡುವರು. ಇಷ್ಟರಲ್ಲಿ ಎಣ್ಣೆ ತೀಡಿ, ಸ್ನಾನ ಮಾಡಿಸಲು ಸಿದ್ಧ ಪಡಿಸುವಳು. ಬಾಪು ಸಾಬೂನು ಬಳಸುತ್ತಿರಲಿಲ್ಲ. ಮುಖ ಕ್ಷೌರ ಮಾಡಿಕೊಳ್ಳುವಾಗಲೂ ಸಾಬೂನು ಉಪಯೋಗಿಸರು. ಹೊಳೆಯಲ್ಲಿ ದೊರೆಯುವ ನುಣುಪು ಕಲ್ಲಿನಿಂದ ಮೈ ಉಜ್ಜಿಕೊಳ್ಳುವರು. ಅನೇಕ ವರ್ಷಗಳ ಹಿಂದೆ ಮೀರಾ ಇಂಥ ಒಂದು ನುಣುಪು ಕಲ್ಲು ಕೊಟ್ಟಿದ್ದಳು. ಎಲ್ಲಿಗೆ ಹೋದರೂ ಜೊತೆಗೆ ಒಯ್ಯುವರು ಈ ಕಲ್ಲು. ನಾರಾಯಣಪುರಕ್ಕೆ ಬಂದರು. ಕಾಲು ತೊಳೆದುಕೊಂಡರು. ಮನೂ ಸ್ನಾನಕ್ಕೆ ಸಿದ್ಧ ಪಡಿಸಿದಳು. ಮೈ ತೊಳೆದುಕೊಳ್ಳುವ ಕಲ್ಲು ದೊರಕಲಿಲ್ಲ. "ಹಿಂದಿನ ಹಳ್ಳಿಯಲ್ಲಿ ಮರೆತು ಬಂದಿರಬೇಕು. ಇಂಥ ಕಲ್ಲುಗಳು ಅಪಾರ ಸಂಖ್ಯೆಯಲ್ಲಿ ಎಲ್ಲ ಹೊಳೆಗಳಲ್ಲೂ ದೊರೆಯುತ್ತೆ ಒಂದು ತರುವೆ" ಎಂದು ಸಮಾಧಾನ ಹೇಳಿದಳು ಮನೂ.

"ಈ ಕಲ್ಲು ಮೀರಾ ಅಕ್ಕರೆಯಿಂದ ಕೊಟ್ಟದ್ದು. ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲದಿಂದ ಅದು ನನ್ನ ಬಳಿ ಇದೆ. ಅದೇ ನನಗೆ ಬೇಕು" ಎಂದು ಮಕ್ಕಳಂತೆ ಹಟ ಹಿಡಿದರು. "ಹಿಂದಿನ ಹಳ್ಳಿಗೆ ಹೋಗಿ ಅದೇ ಕಲ್ಲು ಹುಡುಕಿ ತೆಗೆದುಕೊಂಡು ಬಾ. ನನ್ನ ಊಟ ತಯಾರಿಸಲು ನಿರ್ಮಲ ಬಾಬೂಗೆ ಹೇಳು. ಇದೇ ನಿನಗೆ ತಕ್ಕ ಶಿಕ್ಷೆ."

"ಇಲ್ಲಿ ಸ್ವಯಂ ಸೇವಕರಿದ್ದಾರೆ. ಯಾರನ್ನಾದರೂ ಸಂಗಡ ಕರೆದುಕೊಂಡು ಹೋಗಲೇ", ಎಂದಳು ಮನೂ.

"ಏಕೆ, ಭಯವಾಗುತ್ತದೆಯೇ? ರಾಮನಾಮ ಜಪಿಸುತ್ತಾ ಹೋಗು". ಮನೂ ಇದಕ್ಕೆ ಉತ್ತರ ಕೊಡಲಿಲ್ಲ. ಭಯ ಆದರೆ ಹೇಳಿಕೊಳ್ಳಲು ಬಾಯಿ

ಬಾರದು. ಹೋಗಲು ಎಂಟು, ಹಿಂತಿರುಗಿ ಬರಲು ಎಂಟು ಒಟ್ಟು ಹದಿನಾರು ಮೈಲಿ ನಡೆಯಬೇಕು. ದಟ್ಟವಾದ ವೀಳೆ, ಅಡಕೆ ತೋಟಗಳು. ದೊಡ್ಡ ರಸ್ತೆಯಲ್ಲ, ಸೀಳುದಾರಿ. ಸುಲಭವಾಗಿ ದಾರಿ ತಪ್ಪಬಹುದು. ಜನ ಹೆಚ್ಚಾಗಿ ಸುಳಿದಾಡುವ ಪ್ರದೇಶವಲ್ಲ. ಒಂದೆರಡು ಮುಸಲ್ಮಾನರ ಮನೆಗಳು. ಮತೀಯ ಕಲಹದಿಂದ ನಾಡು ಸುಡುಗಾಡು ಆಗಿತ್ತು. ಪುಂಡರು ನನ್ನ ಮೇಲೆ ಬಿದ್ದರೆ ಮಾಡಲೇನು? ಇಂಥ ಯೋಚನೆಗಳು ಮನೂ ತಲೆಯಲ್ಲಿ ಸುಳಿದಾಡಿ ಹೋದವು. ದೇವರಿದ್ದಾನೆ, ನನ್ನನ್ನು ಕಾಪಾಡುವುದು ಅವನ ಹೊಣೆ. ಬಾಪುವಿನ ಆತ್ಮಶಕ್ತಿ ನನ್ನನ್ನು ಕಾಪಾಡದೆ ಹೋದೀತೆ? ರಾಮನಾಮ ಜಪಿಸುತ್ತ ಹಿಂದಿನ ದಿನ ಬಂದ ದಾರಿಯಲ್ಲೇ ಹೆಜ್ಜೆ ಹಾಕುತ್ತಾ ಒಂಟಿಯಾಗಿಯೇ ಹೊರಟಳು ಮನೂ.

ಅಂತೂ ಇಂತೂ ಹೇಗೋ ಆ ಹಳ್ಳಿ ಹೋಗಿ ಸೇರಿದಳು. ನೇಕಾರರ ಮನೆ ಗೊತ್ತು ಹಚ್ಚಿದಳು. ಒಳ ಹೊಕ್ಕಳು. ಅಲ್ಲಿ ವಾಸಿಸುತ್ತಿದ್ದವಳು ಒಬ್ಬ ಮುದುಕಿ. ಆ ಕಲ್ಲನ್ನು ಅವಳು ಎಸೆದು ಬಿಟ್ಟಿದ್ದಳು. ತುಂಬ ಹೊತ್ತು ಹುಡುಕಿದ ಮೇಲೆ ಆ ಕಲ್ಲು ಸಿಕ್ಕಿತು. ಮನೂಗೆ ತುಂಬ ಸಂತೋಷ ಆಯಿತು. ಕಲ್ಲು ತೆಗೆದುಕೊಂಡು ಮತ್ತೆ ನಾರಾಯಣಪುರದ ದಾರಿ ಹಿಡಿದಳು. ಈಗ ಅಧೈರ್ಯವೂ ದೂರವಾಗಿತ್ತು. ಉತ್ಸಾಹ ತುಂಬಿತ್ತು. ಬೇಗ ಬೇಗ ಅಡಿಯಿಡುತ್ತ ನಾರಾಯಣಪುರ ಸೇರಿದಳು. ಆಗ ಗಂಟೆ ಒಂದೂವರೆ ಆಗಿತ್ತು. ಹಸಿವು, ದಣಿವು. ಬಾಪೂಗೆ ಅಡುಗೆ ಮಾಡಿ ಬಡಿಸುವ ಅವಕಾಶ ತಪ್ಪಿ ಹೋಗಿತ್ತು. ಈ ದುಃಖ ದೇಹಶ್ರಮಕ್ಕಿಂತ ಅತಿಯಾಗಿತ್ತು. ಮನೂ ಧಾವಿಸಿ ಬಂದು ಬಾಪು ಕೈಯಲ್ಲಿ ಆ ಕಲ್ಲು ಇರಿಸಿದ್ದೇ ತಡ ಕಣ್ಣಿನಿಂದ ನೀರಿನ ಕೋಡಿ ಹರಿಯ ತೊಡಗಿತು. ದುಃಖ ತಡೆಯಲು ಸಾಧ್ಯವಾಗಲಿಲ್ಲ.

ಬಾಪು, ಮನೂಥಿಯ ತಲೆ ನೇವರಿಸುತ್ತಾ ಹೇಳಿದರು. "ಈ ಕಲ್ಲು ತಂದುದಕ್ಕೆ ತುಂಬ ಸಂತೋಷ. ಈ ಕಲ್ಲು ಕಳೆದ 25 ವರ್ಷಗಳಿಂದ ನನ್ನ ಜೊತೆಯಲ್ಲೇ ಬಾಳಿದೆ. ಅರಮನೆ, ಹೊರಮನೆ, ಜೈಲುಮನೆ ಎಲ್ಲಿ ಹೋದರೂ ಅದು ನನ್ನ ಜೊತೆ ಬಿಟ್ಟಿಲ್ಲ. ಇದನ್ನು ಕೊಟ್ಟವಳು ಮೀರಾ. ಈ ಕಲ್ಲು ದೊರೆಯದೆ ಹೋಗಿದ್ದರೆ ನನಗೂ ಅವಳಿಗೂ ಅತಿ ದುಃಖವಾಗುತ್ತಿತ್ತು. ಇಂಥ ಕಲ್ಲುಗಳು ಹೇರಳವಾಗಿ ದೊರೆಯುತ್ತವೆ, ನಿಜ. ಆದರೂ, ಒಂದು ಹೋದರೆ ಮತ್ತೊಂದು ಸಿಗುತ್ತೆ. ಈ ಭಾವನೆ ಸಲ್ಲ. ಅಲ್ಪಕ್ಕೂ ಬೆಲೆ ಉಂಟು. ಸಹವಾಸದಿಂದ ಇದರ ಬೆಲೆ ಏರಿದೆ."

"ನೀನು ನನ್ನೊಡನೆ ಇರಲು ಬಂದಾಗಲೇ ಎಚ್ಚರಿಕೆ ನೀಡಿದೆ. ಈಗ ನಾನು ಕೈಗೊಂಡಿರುವ ಕಾರ್ಯ ತುಂಬ ಕಠಿಣ. ಭಯಂಕರ. ಆದರೆ ಒಮ್ಮೆ

ಇಟ್ಟ ಅಡಿ ಹಿಂತೆಗೆಯಲಾರೆ. ಈ ಮೊದಲ ಪರೀಕ್ಷೆಯಲ್ಲಿ ನೀನು ತೇರ್ಗಡೆ ಆಗಿರುವೆ. ಸಂತೋಷ. ಮುಂದೆ ಇನ್ನೂ ಎಷ್ಟೋ ಕಠಿಣ ಪ್ರಸಂಗ ಎದುರಿಸ ಬೇಕಾಗಿ ಬಂದೀತು. ಅವೆಲ್ಲ ಎದುರಿಸಲು ಎದೆಗಾರಿಕೆ ಬೇಕು. ನಿನಗೆ ಅಗತ್ಯವಾದ ಧೈರ್ಯ ಉತ್ಸಾಹ ಇಲ್ಲವಾದರೆ ಈಗಲೇ ನೀನು ಮನೆಗೆ ಹೋಗ ಬಹುದು. ಮುಂದೆ ದೊರೆಯದು ಅವಕಾಶ. ಯೋಚಿಸಿ ನೋಡು."

''ನಿಮ್ಮನ್ನಗಲಿ ಹೋಗುವ ಯೋಚನೆ ಮಾಡಲಾರೆ. ನಾನು ಹೋಗುವುದಿಲ್ಲ. ಮನಸಾರೆ ಎಂದಾದರೂ ರಾಮನಾಮ ಎತ್ತಿಕೊಂಡಿದ್ದರೆ ಅದು ಇಂದೇ. ಭಯದಿಂದ ಎದೆ ನಡುಗುತ್ತಿತ್ತು. ಆದರೆ ರಾಮನಾಮ ನನಗೆ ಧೈರ್ಯ ಕೊಟ್ಟಿತು,'' ಎಂದಳು ದಿಟ್ಟ ಮನೂ.

''ಸಂಕಟ ಬಂದಾಗ ವೆಂಕಟರಮಣ'' ಎಂದು ಹಾಸ್ಯ ಮಾಡಿದರು ಬಾಪು.

ಅರೆನಗ್ನ ಫಕೀರ

ಗಾಂಧಿಯವರ ಉಡುಪಿನಲ್ಲಿ ಆದ ಬದಲಾವಣೆಯಿಂದ ಅವರ ಮನೋಧರ್ಮದ ಪರಿವರ್ತನೆಯನ್ನು ಅರಿಯಬಹುದು. ರಾಜಕೋಟೆಯ ಬಾಲ್ಯದಲ್ಲಿ ಮಂತ್ರಿ ಕುವರನಿಗೆ ಯೋಗ್ಯವಾದ ಶ್ರೀಮಂತಿಕೆಯ ಉಡುಪು. ಉದ್ದನೆಯ ನಿಲುವಂಗಿ, ಧೋತರ, ಜರತಾರಿ ಟೋಪಿ, ಕಾಲಿಗೆ ಜೋಡು. ಹದಿನೆಂಟನೆಯ ವಯಸ್ಸಿನಲ್ಲೇ ಗಾಂಧೀಜಿ ಕಲಿಯಲು ಇಂಗ್ಲೆಂಡಿಗೆ ಹೋದರು. ಸಹಪಾಟಿ ವಿದ್ಯಾರ್ಥಿಗಳಂತೆ ಉಡುಪು ಬದಲಾಯಿಸಿದರು. ಜುಟ್ಟು, ಜನಿವಾರ ಹೋಯಿತು. 'ಕ್ರಾಪ್' ಬೈತಲೆ, ಕೋಟು, ಪ್ಯಾಂಟು, ಬೂಟು, ಹ್ಯಾಟು, ಟೈ ಬಂತು. ನೃತ್ಯ, ಪಿಟೀಲು ವಾದ್ಯ ಕಲಿಯುವ ಪ್ರಯತ್ನ ನಡೆಸಿದರು. ಸಾರ್ಥಕವಾಗದೆ ಕೈ ಬಿಟ್ಟರು. ನಾಲ್ಕು ವರ್ಷಕಾಲ ಇಂಗ್ಲೆಂಡಿನಲ್ಲಿದ್ದು, ಭಾರತಕ್ಕೆ ಮರಳಿದರು. ವಕೀಲರಾದರು. ವಕೀಲರ ಉಡುಪು ತೊಟ್ಟರು.

ಕೆಲವೇ ವರ್ಷಗಳನಂತರ ದಕ್ಷಿಣ ಆಫ್ರಿಕಾಗೆ ಹೋದರು. ಅಲ್ಲಿ ಬಡ ಭಾರತೀಯ ಕಾರ್ಮಿಕರು ಧರಿಸುತ್ತಿದ್ದ ಉಡುಪು ಇವರೂ ತೊಟ್ಟರು. ದಕ್ಷಿಣ ಆಫ್ರಿಕದಲ್ಲಿ ಮೊದಲು ದೊಡ್ಡ ಪ್ರಮಾಣದ ಸತ್ಯಾಗ್ರಹ ನಡೆಸಿದರು. ಆಗಲೇ ಕಾರ್ಮಿಕರ ಸಾಮಾನ್ಯ ಉಡುಪು ತೊಟ್ಟದ್ದು ಮಾನವೀಯತೆಯ ಮಾನ ಸಂರಕ್ಷಣೆಗಾಗಿ ನಡೆದ ಸತ್ಯಾಗ್ರಹವಿದು. ಹೋರಾಟ ಬ್ರಿಟಿಷ್ ಸಾಮ್ರಾಜ್ಯದ ಅಧೀನರಾದ ಬಿಳಿಯ ಬೋಯರ್ ಸರ್ಕಾರದ ವಿರುದ್ಧವಾದರೂ ಭಾರತದ ವೈಸರಾಯಿ ಲಾರ್ಡ್ ಹಾರ್ಡಿಂಜರು ಮಾನವೀಯತೆಗಾಗಿ ಗಾಂಧೀಜಿ ನಡೆಸಿದ ಈ ಸಾತ್ವಿಕ ವಿರೋಧಕ್ಕೆ ಬೆಂಬಲ ಕೊಟ್ಟದ್ದು ಗಮನಾರ್ಹ.

ದಕ್ಷಿಣ ಆಫ್ರಿಕದ ಭಾರತೀಯರ ಮಾನವೀಯ ಹಕ್ಕು ಬಾಧ್ಯತೆಗಳ ಹೋರಾಟ ಜಯಪ್ರದವಾಗಿ ಮುಕ್ತಾಯಗೊಳಿಸಿ, ತಮ್ಮ ನಾಲ್ವತ್ತೈದನೆಯ ವಯಸ್ಸಿನಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ಈ ವಯಸ್ಸಿಗೆ ಅವರ ವ್ಯಕ್ತಿತ್ವ ಸಾಕಷ್ಟು ಪರಿಪೂರ್ಣವಾಗಿತ್ತು. ಆಹಾರ, ದುಡಿಮೆಯ ಕಾಲ, ವ್ಯಾಯಾಮ, ಚಿಂತನೆ, ಪ್ರಾರ್ಥನೆ, ಮತ್ತು ಅನುಲ್ಲಂಘನೀಯ ಸಂಪ್ರದಾಯವಾದ ಮೌನ, ಇವೆಲ್ಲ ನಿಯಮಗಳಲ್ಲಿ ಅನೇಕವನ್ನು ಅವರು ಅನುಷ್ಠಾನಕ್ಕೆ ತಂದಿದ್ದರು. ಆದರೆ ಎದ್ದು ಕಾಣುತ್ತಿದ್ದ ಒಂದು ಗಣನೀಯ ಅಪವಾದ ಅವರ ಉಡುಪು. ಅವರು ಇನ್ನೂ ಆಂಗ್ಲ ಉಡುಗೆ ತೊಡಿಗೆಗಳನ್ನೇ ಧರಿಸುತ್ತಿದ್ದರು.

ಆದರೂ ಆಫ್ರಿಕಾದ ಕೆಲವು ಬಹಿರಂಗ ಸಭೆಗಳಲ್ಲಿ ಅವರು ಭಾರತೀಯ ಪೋಷಾಕು ಧರಿಸಿ ಬಂದಿದ್ದರು. ಬಿಳಿಯರ ದೃಷ್ಟಿಯಲ್ಲಿ, ಭಾರತೀಯ ಎಷ್ಟೇ ವಿದ್ಯಾವಂತ ನಿರಲಿ, ಎಷ್ಟೇ ಶ್ರೀಮಂತನಿರಲಿ ಅವನು ಕೂಲಿ. ಹೀಗೆ ಧಿಕ್ಕರಿಸಲ್ಪಡುತ್ತಿದ್ದ ಕೂಲಿ ಜನಾಂಗದ ಪ್ರತಿನಿಧಿ ತಾನು. ಬ್ಯಾರಿಸ್ಟರ್ ಆದ ಮಾತ್ರಕ್ಕೆ ತನಗೆ ಕೋಡು ಬೆಳೆದಿಲ್ಲ, ಅವರಂತೆ ತಾನೂ ಒಬ್ಬ ಎಂಬ ತಾದಾತ್ಮ್ಯ ಭಾವನೆ ಬಹಿರಂಗವಾಗಿ ವ್ಯಕ್ತಪಡಿಸಲು ಅವರು ಹೀಗೆ ಮಾಡುತ್ತಿದ್ದರು.

ನಾಲ್ವತ್ತೈದು ತುಂಬುವ ವೇಳೆಗೆ ತ್ಯಾಗದ ಪಥದಲ್ಲಿ ಬಹಳ ಮುಂದುವರೆದಿದ್ದರು. ಸತ್ಯ ಅಹಿಂಸೆ, ಜಿಹ್ವಾ ಚಾಪಲ್ಯ, ಇಂದ್ರಿಯ ನಿಗ್ರಹ, ಬ್ರಹ್ಮಚರ್ಯ, ಪರಿಶುದ್ಧತೆ, ಅಸಂಗ್ರಹ ಈ ದಿಸೆಯಲ್ಲಿ ಬಹಳ ದೂರ ಸಾಗಿದ್ದರು. ಜೀವನಕ್ಕೆ ಅಗತ್ಯವಲ್ಲದ ಪದಾರ್ಥಗಳ ಸಂಗ್ರಹ, ತನಗೆ ಕಾಣಿಕೆಯಾಗಿ ಬಂದಿದ್ದ ಬೆಲೆ ಬಾಳುವ ಆಭರಣ, ಸ್ವಯಾರ್ಜಿತ ಕೂಡಿಟ್ಟಹಣ, ಜೀವವಿಮೆ, ಎಲ್ಲವನ್ನೂ ತೊರೆದಿದ್ದರು. ಭಾರತೀಯ ಕುಟುಂಬ ಸ್ವಾಭಿಮಾನದಿಂದ ಬದುಕಿ ಬಾಳಲು ಅಗತ್ಯವಾದ ಸ್ಥಾನಮಾನ ವಿನಾ, ಸಮಾಜದ ಎಲ್ಲ ಗೌರವ ಸ್ಥಾನಗಳನ್ನೂ ಬಿಟ್ಟು ಕೊಟ್ಟಿದ್ದರು. ತ್ಯಾಗಮೂರ್ತಿ ಎನಿಸಿಕೊಳ್ಳಲು ಇನ್ನೂ ತೊರೆಯಬೇಕಾದ್ದು, ತ್ಯಾಗ ಮಾಡಬೇಕಾದ್ದು ಏನೂ ಇರಲಿಲ್ಲ. 'ತ್ಯಾಗಿ' ಎನಿಸಿಕೊಂಡವನು ಮಾತ್ರ ಪ್ರಪಚಂಕ್ಕೆ ಮಾರ್ಗದರ್ಶನ ನೀಡಲು ಅರ್ಹ, ಎಂದು ಅವರು ಗ್ರಹಿಸಿದ್ದರು.

1915ರಲ್ಲಿ ಭಾರತಕ್ಕೆ ಮರಳುತ್ತಿದ್ದಾಗ, ಮೊದಲೇ ತಂತಿ ಕಳುಹಿಸಿ, ಭಾರತೀಯ ಪೋಷಾಕು ತರಿಸಿಕೊಂಡು, ಜಹಜಿನಲ್ಲಿದ್ದಾಗಲೇ ತೊಟ್ಟು, ಪೇಟ, ಕೋಟು, ಅಂಗವಸ್ತ್ರದೊಡನೆ ಭಾರತದ ಭೂಮಿಯ ಮೇಲೆ ಕಾಲಿಟ್ಟರು. ಕಾಥಿವಾಡಿಗಳ ಉಡುಪು ಇದು. ಎರಡು ವರ್ಷಗಳ ನಂತರ ಚಂಪಾರಣ್ಯಕ್ಕೆ ಹೋದಾಗಲೂ ಸ್ವದೇಶದ ಗಿರಣಿಯಲ್ಲಿ ತಯಾರದ ಬಟ್ಟೆಯ ಇದೇ ಉಡುಪು ಅವರು ತೊಟ್ಟಿದ್ದರು. ದೇಶೀವಸ್ತ್ರ ಗಾಂಧೀಜಿ ಧರಿಸುತ್ತಿರುವುದು ಕೇವಲ ಬೂಟಾಟಿಕೆ. ರೈತರನ್ನು ವಶಪಡಿಸಿಕೊಳ್ಳಲು ಈ ರೀತಿ ಮಾಡುತ್ತಿರುವುದಾಗಿ ಆಂಗ್ಲರೊಬ್ಬರು ಟೀಕಿಸಿದ್ದರು. ಇದಕ್ಕೆ ಉತ್ತರವಾಗಿ 21 ವರ್ಷಗಳ ಹಿಂದೆ ಕಾಥಿವಾಡದ ನ್ಯಾಯಸ್ಥಾನದ ವಕೀಲನಾಗಿದ್ದಾಗ ಇದೇ ಮಾದರಿಯ ಉಡುಪು ತಾನು ಧರಿಸುತ್ತಿದ್ದುದಾಗಿ ತಿಳಿಸಿದರು. "ವೃತ್ತಿಯಲ್ಲಿ ತಾನು ರೈತ, ನೇಕಾರ ಎನಿಸಿಕೊಂಡು ಸ್ವದೇಶಿವ್ರತ ತೊಟ್ಟಾಗಿನಿಂದ ಕೈಮಗ್ಗದ ಬಟ್ಟೆ, ನನ್ನಿಂದ ಅಥವಾ ತನ್ನ ಕೆಲಸಗಾರರಿಂದ ಹೊಲೆಯಲ್ಪಟ್ಟ ಉಡುಪು ಧರಿಸುತ್ತಿರುವೆ, ವಶೀಕರಣಕ್ಕಾಗಿ ಅಲ್ಲ. ಈ ಉಡುಪು ಭಾರತೀಯನಿಗೆ ಒಪ್ಪವೂ, ಯೋಗ್ಯವೂ ಆದ ಸುಸಂಸ್ಕೃತ ತೊಡಿಗೆ. ಐರೋಪ್ಯರ ಉಡುಪನ್ನು ಧರಿಸುವುದು ನಮ್ಮ ದೌರ್ಬಲ್ಯ, ಕೀಳುಮಟ್ಟ ಮತ್ತು ದಾಸ್ಯದ

ಕುರುಹು. ನಮ್ಮ ದೇಶದ ಹವಾಗುಣಕ್ಕೆ ಯೋಗ್ಯವೂ, ಅಗ್ಗವೂ, ಕಲಾತ್ಮಕವೂ, ಆರೋಗ್ಯಕರವೂ ಆದುದು ಈ ಉಡುಪು. ಇದಕ್ಕೆ ಸಾಟಿಯಾದ ಉಡುಪು ಪ್ರಪಂಚದಲ್ಲೇ ಬೇರೊಂದು ಇರದು. ಇಂಥ ಉಡುಪನ್ನು ತೊರೆಯುವುದು ರಾಷ್ಟ್ರೀಯ ಪಾಪ. ಪೊಳ್ಳು ಅಹಂಭಾವ, ಡಂಭಾಚಾರ ಆಂಗ್ಲರಲ್ಲಿ ಇಲ್ಲದಿದ್ದಲ್ಲಿ ಇದೇ ಉಡುಪು ಎಂದಿನಿಂದಲೋ ಅವರು ಅನುಕರಿಸುತ್ತಿದ್ದರು. ಬರಿ ತಲೆಯಲ್ಲಿ ಚಂಪಾರಣ್ಯದಲ್ಲಿ ನಾನು ಅಲೆದಾಡುವುದಿಲ್ಲ. ಪಾದರಕ್ಷೆ ಧರಿಸದಿರುವುದು ಅನ್ಯ ಪವಿತ್ರ ಕಾರಣಕ್ಕಾಗಿ. ಇವನ್ನು ತೊರೆಯುವುದು ಸಹಜ ಮತ್ತು ಆರೋಗ್ಯಕರ. ಇದು ತನ್ನ ಅಭಿಪ್ರಾಯ". ಹೀಗೆಂದು ಅವರು 'ಪಯನೀರ್' ಪತ್ರಿಕೆಗೆ ಬರೆದರು. ರಾಟೆಯು ಪುನರುದ್ಧಾರವಾಗಿ, ಸ್ವಯಂ ನೂತ ನೂಲಿನಿಂದ ಬಟ್ಟೆ ಮಾಡಿಸಿ ಧರಿಸಿಕೊಳ್ಳುವವರೆಗೂ ಸ್ವದೇಶಿ ಉಡುಪು ತೊಡುತ್ತಿದ್ದರು.

ಚಂಪಾರಣ್ಯದಲ್ಲಿ ಹೀಗೆ ಸತಿ ಕಸ್ತೂರಿ ಬಾ ಅವರೊಡನೆ ಪ್ರವಾಸ ಮಾಡುತ್ತ ಭಿತಿಹರ್ವ ಎಂಬ ಸಣ್ಣ ಗ್ರಾಮಕ್ಕೆ ಬಂದರು. ಆಂಗ್ಲ ಮತ್ತು ಭಾರತೀಯ ಜಮೀನ್ದಾರರು ಇಲ್ಲಿಯ ರೈತರನ್ನು ನಾನಾ ವಿಧಗಳಲ್ಲಿ ಶೋಷಿಸಿ ಅವರನ್ನು ದರಿದ್ರರಾಗಿ ಮಾಡಿದ್ದರು. ಈ ಕುಗ್ರಾಮದ ಒಂದು ಮನೆಯ ಹೊರಗೆ ಸ್ತ್ರೀಯರು ಇವರ ದರುಶನಕ್ಕಾಗಿ ಕಾದಿದ್ದರು. ನೀರು ಕಾಣದ ಅವರ ಸೀರೆ ತುಂಬ ಕೊಳಕಾಗಿ, ಅಸಹ್ಯವಾಗಿತ್ತು. ಸೀರೆ ಏಕೆ ಒಗೆದುಕೊಳ್ಳುವುದಿಲ್ಲ ಎಂದು ಕಸ್ತೂರಿ ಬಾ ಅವರನ್ನು ವಿಚಾರಿಸಿದರು. ಒಬ್ಬಾಕೆ ಅವರನ್ನು ತನ್ನ ಮನೆಯೊಳಕ್ಕೆ ಕರೆದು ಕೊಂಡು ಹೋದಳು. ವಸ್ತ್ರ ಇರಿಸಲು ಅಲ್ಲಿ ಕಪಾಟ, ಪೆಟ್ಟಿಗೆ ಯಾವುದೂ ಇರಲಿಲ್ಲ. ಇಬ್ಬರು ತಂಗಿಯರು ಅರೆಬೆತ್ತಲೆಯ ಚಿಂದಿ ಬಟ್ಟೆ ತೊಟ್ಟಿದ್ದರು. ಮೂವರಿಂದಲೂ ಸೇರಿ ನಮ್ಮಲ್ಲಿರುವುದು ಒಂದೇ ಒಳ್ಳೆಯ ಸೀರೆ. ಮನೆಯಿಂದ ಹೊರಬರುವವಳು ಸೀರೆ ಉಟ್ಟು ಬರುತ್ತಾಳೆ. ನಿಮ್ಮ ಪತಿಗೆ ಹೇಳಿ ನಮಗೆ ಸೀರೆ ಕೊಡಿಸಿ, ಆಗ ಸೀರೆ ಒಗೆದುಕೊಳ್ಳುತ್ತೇವೆ ಎಂದಳು. ಈ ವಿಷಯ ಕಸ್ತೂರಿ ಬಾ ಪತಿಗೆ ತಿಳಿಸಿದರು. ಮೂರು ಸೀರೆ ಅವರಿಗೆ ಕೊಡಿಸಿದರು. ಮಹಾತ್ಮರು ಈ ದರಿದ್ರಾವಸ್ಥೆ ನೋಡಿ ತುಂಬ ದುಃಖಪಟ್ಟರು. ತನ್ನ ಉಡುಪನ್ನು ಬಡವರ ಮಟ್ಟಕ್ಕೆ ಇಳಿಸಿಕೊಳ್ಳಲು ಚಿಂತಿಸತೊಡಗಿದರು.

ನಮ್ಮ ದೇಶದಲ್ಲಿ ಎಲ್ಲರೂ ಒಂದೇ ಬಗೆಯ ಉಡುಪು ಧರಿಸುವುದಿಲ್ಲ. ಸಮವಸ್ತ್ರ ಎಂಬುದಿಲ್ಲ. ನಾನಾ ಬಗೆಯ ಜನ, ಅನೇಕ ವಿಧ ಉಡುಗೆ-ತೊಡುಗೆ. ಒಂದೇ ಪ್ರಾಂತದಲ್ಲಿ ಅದೆಷ್ಟೋ ವಿಧವಾದ ವೇಷಭೂಷಣಗಳು. ಇಡೀ ಜನತೆಗೆ ಸರಿಹೋಗಬಲ್ಲ ಒಪ್ಪವಾದ ಉಡುಪು ಯಾವುದಾದೀತು ? ಇದೇ ಚಿಂತೆ.

ಹೀಗಿರುತ್ತ 1921 ರಲ್ಲಿ ದಕ್ಷಿಣ ಭಾರತದ ಪ್ರವಾಸದಲ್ಲಿದ್ದರು. ರೈಲಿನಲ್ಲಿ ಮಧುರೆಗೆ ಪ್ರಯಾಣ ಮಾಡುತ್ತಿದ್ದರು. ಗಾಡಿಯಲ್ಲಿದ್ದಾಗಲೂ ಖಾದಿ ಪ್ರಚಾರ ನಡೆಸುವರು. ಖಾದಿ ಏಕೆ ಧರಿಸುವುದಿಲ್ಲ ಎಂಬ ಪ್ರಶ್ನೆಗೆ ಬೆಲೆ ಅಧಿಕ, ಬಟ್ಟೆ ಒರಟು, ಹೆಚ್ಚು ಬಾಳಿಕೆ ಬಾರದು. ಈ ಉತ್ತರ ಸಾಮಾನ್ಯವಾಗಿ ದೊರೆಯುತ್ತಿತ್ತು. ಅಗತ್ಯವಾದ ನೂಲು ನೀವೇ ನೂಲಬೇಕು. ನೇಯಿಸಿಕೊಳ್ಳಬೇಕು. ಮನೆಯವರೆಲ್ಲ ಹೊಟೇಲು ಅಥವಾ ಖಾನಾವಳಿಗೆ ಹೋಗುವುದಿಲ್ಲವಷ್ಟೆ. ಮನೆಯಲ್ಲೇ ಅಡುಗೆ ಮಾಡಿಕೊಳ್ಳುತ್ತಾರೆ. ಇದೇ ಖಾದಿಯ ಮರ್ಮ. ಹೀಗೆ ಗಾಂಧೀಜಿ ತಿಳಿಸುತ್ತಿದ್ದರು.

ಖಾದಿ ನಯವಾಗಿ ಒಂದೇ ಸಮನೆ ಇರುವುದಿಲ್ಲ. ನಿಜ. ಮೋತಿಲಾಲ್ ನೆಹರು ವಸ್ತ್ರ ಪ್ರಿಯರು. ತಮ್ಮ ಉಡುಪು ಪ್ಯಾರಿಸ್ ಪಟ್ಟಣದಿಂದ ಮಡಿ ಮಾಡಿಸಿ ತರಿಸಿಕೊಳ್ಳುತ್ತಿದ್ದರಂತೆ—ನಮ್ಮವರಿಗೆ ಸರಿಯಾಗಿ ಇಸ್ತ್ರಿ ಮಾಡಲು ಬರುವುದಿಲ್ಲವೆಂದು. ಅಷ್ಟು ಸೊಗಸುಗಾರ. ಇವರು ಮೋಹನದಾಸನ ಮಂತ್ರಕ್ಕೆ ಮುಗ್ಧರಾಗಿ ಖಾದಿ ಧರಿಸತೊಡಗಿದರು. ಖಾದಿ ತುಂಬಾ ಒರಟು ಎಂದಾಗ, ಖಾದಿ" ಬಟ್ಟೆಯ ಮೇಲೆ ಕೈ ಆಡಿಸುತ್ತ, "ಭೂಮಿ ಒಂದೇ ಮಟ್ಟವಾಗಿ, ಸಮನಾಗಿ ಇರುವುದಿಲ್ಲ. ಹಳ್ಳ–ದಿಣ್ಣೆ, ಏರು–ಪೇರು. ಹಿಮಾಲಯವೂ ಹೀಗೆಯೇ. ಆದ್ದರಿಂದಲೇ ಬೆಟ್ಟ, ಗುಡ್ಡ, ನದಿ, ನೀರು ನೋಟಕ್ಕೆ ಚಂದ. ಅಂತೆಯೇ ಖಾದಿ ಎಂದು ಅದರ ಚೆಲುವು ಬಣ್ಣಿಸಿದರು. ಸ್ವದೇಶ, ಸ್ವದೇಶಿ ಪ್ರೇಮ ಇದಕ್ಕೆ ಕಾರಣ. ಹೆತ್ತವರಿಗೆ ಹೆಗ್ಗಣ ಮುದ್ದು. ತನ್ನದು, ತನ್ನ ದೇಶದ್ದು ಎಂಬ ಹೆಮ್ಮೆ. ಖಾದಿ ನಿರ್ಬಲರಿಗೆ ಒಂದು ತುತ್ತು ಅನ್ನಕೊಡುತ್ತೆ. ನಮ್ಮ ದೇಶದ ಐಶ್ವರ್ಯ ನಮ್ಮಲ್ಲೇ ಉಳಿಯುವಂತೆ ಮಾಡುತ್ತೆ.

ಬಡವರಲ್ಲಿ ಬಡವನಾಗಿ ತಾದಾತ್ಮ್ಯ ಭಾವನೆ ಹೊಂದಿರಲು ಯಾವ ಉಡುಪು ತನಗೆ ಸೂಕ್ತ. ಈ ಚಿಂತೆ ಅವರನ್ನು ಕಾಡುತ್ತಲೇ ಇತ್ತು. ಮಧುರೆಗೆ ಬಂದರು. ಮಧುರೆ ಮೀನಾಕ್ಷಿ ದೇವಾಲಯಕ್ಕೆ ಪ್ರಸಿದ್ಧವಾದ ನಗರ. ತಮಿಳುನಾಡಿನ ದ್ವಿತೀಯ ದೊಡ್ಡ ನಗರ. ಬಲು ಬಿಸಿಲು. ತಡೆಯಲಾಗದ ತಾಪ. ಅಲ್ಲಿನ ಜನರ ಉಡುಪು ಈ ಹವಾಗುಣಕ್ಕೆ ಅನುಗುಣ. ಲುಂಗಿ, ಪಂಚೆ, ಜುಬ್ಬ ಇಲ್ಲವೇ ಮೈಮೇಲೆ ಸಣ್ಣನೆಯ ವಸ್ತ್ರ. ಕೇರಳದ ಬಹು ಜನರ ಉಡುಪೂ ಇದೇ.

ಭಾರತ ಉಷ್ಣದೇಶ. ಎಲ್ಲೋ ಕೆಲವಡೆಗಳಲ್ಲಿ ಮಾತ್ರ ಚಳಿ. 'ಇದೇ ತನಗೆ ಸರಿಯಾದ ಉಡುಪು, ದರಿದ್ರ ನಾರಾಯಣನ ಪ್ರತಿನಿಧಿಯಾದ ತನಗೆ' ಎಂದು ನಿರ್ಧರಿಸಿದರು. ಭಾರತೀಯರು ಧರಿಸುವ ಬಟ್ಟೆಯು ಸರಾಸರಿ 16 ಗಜ. ಇವಕ್ಕಿಂತ ಹೆಚ್ಚು ತಾನು ಬಳಸಲಾಗದು ಎಂದು ತೀರ್ಮಾನಿಸಿದರು.

ಈ ಕಾಲಕ್ಕೆ ಗಾಂಧೀಜಿ ಷರಟು, 'ವೇಸ್ಟ್'ಕೋಟು, ಎಂಟು ಮೊಳದ ಧೋತ್ರ, ಟೋಪಿ ಧರಿಸುತ್ತಿದ್ದರು. ಸನ್ಯಾಸಿಗಳೂ, ಅನೇಕ ಮಠಾಧಿಪತಿಗಳೂ ಹೊಲೆದ ಬಟ್ಟೆ ಸಾಮಾನ್ಯವಾಗಿ ಧರಿಸರು. ತಮ್ಮ ಉಡುಪು ಬದಲಾಯಿಸಲು ಇವೆಲ್ಲ ಸಮರ್ಥನೀಯ ಕಾರಣಗಳಾದವು. ಒಮ್ಮೆ ಮನಸ್ಸು ಮಾಡಿದರೆ ಸಕಾರಣ ವಿಲ್ಲದೆ ಕೈಗೊಂಡ ತೀರ್ಮಾನ ಬದಲಿಸರು, ಹಟವಾದಿ ಗಾಂಧೀಜಿ.

ಮಧುರೆಯಲ್ಲಿ ರಾಮಜೀ ಕಲ್ಯಾಣಜೀ ಅವರ 251–A ಪಶ್ಚಿಮ ಮಾಸಿ ಮನೆ ಯಲ್ಲಿ ತಂಗಿದ್ದರು, ಪರಿವಾರ ಸಮೇತ. ಈ ಮನೆಯನ್ನು ತಮಿಳು ನಾಡಿನ ಖಾದಿ ಸಂಸ್ಥೆ ಖರೀದಿಮಾಡಿ ಇಲ್ಲಿ ಖಾದಿ ಮತ್ತು ಗ್ರಾಮೋದ್ಯೋಗದ ಅಂಗಡಿ ನಡೆಸುತ್ತಿದೆ. ದಿನಾಂಕ ಸೆಪ್ಟಂಬರ್ 8, 1921 ರಾತ್ರಿ ಅವರು ಬಟ್ಟೆ ಬದಲಾಯಿಸುವ ನಿರ್ಧಾರ ತೆಗೆದುಕೊಂಡಿದ್ದರು. ಮಾರನೆಯದಿನ ಗುರುವಾರ– ಎಂದಿನಂತೆ ಉಷಃಕಾಲ ಪ್ರಾರ್ಥನೆಗೆ ಎದ್ದರು. ನಾಪಿತನನ್ನು ಬರಮಾಡುವಂತೆ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿ ಅವರಿಗೆ ತಿಳಿಸಿದರು.

ಗೊತ್ತಾದ ದಿನಗಳಲ್ಲಿ ಮಾತ್ರ ಕ್ಷೌರ ಮಾಡಿಸಿಕೊಳ್ಳುವ ಪದ್ಧತಿ ಗಾಂಧಿ ಯವರದು. ಇಂದು ಕ್ಷೌರ ಮಾಡಿಸಿಕೊಳ್ಳುವ ದಿನವಲ್ಲ ಎಂದು ಕಸ್ತೂರಿ ಬಾ ಮತ್ತು ಮಹದೇವ ಭಾಯಿ ತಿಳಿಸಿದರು. ಗಾಂಧೀಜಿ ಮಾತನಾಡಲಿಲ್ಲ. ಕ್ಷೌರಕ ಬಂದ. ತಲೆಮುಂಡನ ಮಾಡಿಸಿಕೊಂಡರು. ಸ್ನಾನ ಮಾಡಿ ಬಂದರು.

ಉಟ್ಟಿದ್ದ ಎಂಟು ಮೊಳದ ಧೋತ್ರ ತೆಗೆದು ಹಾಕಿ, ನಾಲ್ಕು ಮೊಳದ ತುಂಡು ಪಂಚೆ ಸೊಂಟಕ್ಕೆ ಸುತ್ತಿದರು. ತೊಟ್ಟ ಬಟ್ಟೆ ಸ್ನಾನಕ್ಕೆ ಮೊದಲೇ ತೆಗೆದು ಹಾಕಿದ್ದರು. ಈ ದೃಶ್ಯ ನೋಡುತ್ತಿದ್ದ ಸತಿ ಕಸ್ತೂರಿ ಬಾ ಅವರ ಕಣ್ಣುಗಳು ಹನಿಗೂಡಿದುವು. ದುಃಖ ಉಕ್ಕಿ ಬಂತು. ಹೃದ್ಗತವಾದ ತಾಳಲಾರದ ದುಃಖದಿಂದ ಪತಿಯ ಕಾಲು ಹಿಡಿದು, "ನಿಮ್ಮೊಡನೆ ಸಹ ಧರ್ಮಿಣಿಯಾಗಿ ಪಡಬಾರದ ಕಷ್ಟ ಅನುಭವಿಸಿದೆ. ಈಗ ನನ್ನನ್ನು ತೊರೆದು ಸನ್ಯಾಸ ಸ್ವೀಕರಿಸುತ್ತಿರುವಿರಾ ? ಬೇಡ, ಬೇಡ," ಎಂದು ಗೋಗರೆದರು. ಮಹದೇವಭಾಯಿ ಅವರೂ ದನಿಗೂಡಿಸಿದರು. ಆದರೆ ಯಾರ ಮಾತನ್ನೂ ಕೇಳಲೊಲ್ಲರು. ತಾನು ಸನ್ಯಾಸ ಸ್ವೀಕರಿಸುತ್ತಿಲ್ಲ. ಉಡುಪು ಮಾತ್ರ ಬದಲಾಯಿಸುತ್ತಿರುವುದಾಗಿಯೂ, ಅಂದಿನಿಂದ ಇದೇ ತನ್ನ ದಿನ ನಿತ್ಯದ ಉಡುಪಾಗುವುದಾಗಿಯೂ, ತಿಳಿಸಿದರು. ಅಂದಿನಿಂದ ಇದೇ ಅವರ ಸಮವಸ್ತ್ರ ವಾಯಿತು. ಇಂಗ್ಲೆಂಡಿನ ಚಳಿಯಲ್ಲೂ ಇದೇ ವಸ್ತ್ರ. ಜಾರ್ಜ್ ಚಕ್ರವರ್ತಿಯ ವರನ್ನು ನೋಡಲು ಹೋದಾಗಲೂ ಇದೇ ವಸ್ತ್ರ. ಇಟಲಿಯ ಸರ್ವಾಧಿಕಾರಿ ಮುಸೋಲಿನಿಯವರನ್ನು ಭೇಟಿಯಾದಾಗಲೂ ಇದೇ ವಸ್ತ್ರ. ಫೆಬ್ರವರಿ 1931 ರಲ್ಲಿ

ವೈಸರಾಯಿ ಲಾರ್ಡ್ ಇರ್ವಿನ್ ಅವರನ್ನು ಭೇಟಿಯಾಗಲು ಇದೇ ಉಡುಪಿನಲ್ಲಿ ಹೋದುದು ಪ್ರಧಾನಿ ಚರ್ಚಿಲ್ಲರನ್ನು ಕೆರಳಿಸಿತು. ಚಕ್ರವರ್ತಿಯ ಪ್ರತಿನಿಧಿ ವೈಸರಾಯಿ ಅವರೊಡನೆ ಸರಿಸಮನಾಗಿ, ಈ ಅರೆನಗ್ನ ಬೈರಾಗಿ, ಸಂಧಿಮಾಡಿ ಕೊಳ್ಳಲು ವೈಸರಾಯಿ ಭವನದ ಮೆಟ್ಟಲೇರುತ್ತಿರುವುದನ್ನು ತಾನು ಸಹಿಸಲಾರೆ ಎಂದು ಅವರು ಅಬ್ಬರಿಸಿದರು.

ದುಂಡು ಮೇಜಿನ ಪರಿಷತ್ತಿಗೆ ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿಯಾಗಿ ಲಂಡನ್ನಿಗೆ ಹೋಗಲು ನಿಶ್ಚಯಿಸಿದಾಗ, ತಾವು ಈ ಉಡುಪಿನಲ್ಲಿ ಹೋಗುವುದು ಸಲ್ಲ. ಕಾಂಗ್ರೆಸ್ಸನ್ನು ಪ್ರತಿನಿಧಿಸಲು ತಾವು ಒಪ್ಪವಾದ ಉಡುಪು ಧರಿಸಬೇಕೆಂದು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮಹಾತ್ಮರಿಗೆ ಪತ್ರಬರೆದರು. ಒಪ್ಪವಾದ ಆಗಲೇ ಇಸ್ತ್ರಿಮಾಡಿದ ಪಾಶ್ಚಾತ್ಯ ಮಾದರಿಯ ವಸ್ತ್ರ ತೊಡುವ ವ್ಯಕ್ತಿ ಎಂದು ಮೋಕ್ಷಗುಂಡಂ ಖ್ಯಾತಿಗಳಿಸಿದ್ದರು. ಎಲ್ಲ ಅಧಿಕಾರಿಗಳೂ ಗರಿಗರಿ ಇಸ್ತ್ರಿ ಮಾಡಿದ ಉಡುಪು ಧರಿಸಲು ಒತ್ತಾಯ ಮಾಡುತ್ತಿದ್ದರು. ಸ್ವದೇಶಿಯ ಪ್ರೋತ್ಸಾಹಕರೇ ಆದರೂ ಮಹಾತ್ಮರಂತೆ ಇವರು ನಿಷ್ಠುರವಾದಿಯಲ್ಲ. ಸ್ವದೇಶಿ ಮಾಲು ಕಳಪೆ ಆದರೆ, ವಿದೇಶಿ ಕೊಳ್ಳಲು ವಿಶ್ವೇಶ್ವರಯ್ಯನವರು ಹಿಂತೆಗೆಯುತ್ತಿರಲಿಲ್ಲ. ಆದರೆ ಗಾಂಧೀಜಿ ಸ್ವದೇಶಿ ದೊರಯದಿದ್ದರೆ, ತ್ಯಾಗ ಮನೋಭಾವನೆಯಿಂದ ಇದ್ದುದರಲ್ಲೇ ತೃಪ್ತಿಪಡೆಯುತ್ತಿದ್ದರು. ಸ್ವದೇಶಿಯ ಬಳಕೆಯಲ್ಲಿ ಇವರಿಬ್ಬರ ನಡುವೆ ಇಷ್ಟು ಭಿನ್ನತೆ ಇತ್ತು. ಆಮರಣಪರ್ಯಂತ ಚರ್ಚಿಲ್ಲರ ಅವಹೇಳನಕ್ಕೆ ಕಾರಣವಾದ ತುಂಡು ಮುಂಡು ವಸ್ತ್ರ ಧರಿಸಿದ್ದರು. ಬ್ರಿಟಿಷ್ ಚಕ್ರಾಧಿಪತ್ಯದ ಅಳಿವಿಗಾಗಿ ತಾನು ಇಂಗ್ಲೆಂಡಿನ ಪ್ರಧಾನಿಯ ಅಧಿಕಾರ ಸ್ವೀಕರಿಸುತ್ತಿಲ್ಲ, ಅದರ ಉಳಿವಿಗಾಗಿಯೇ ಅಧಿಕಾರ ಸ್ವೀಕರಿಸುತ್ತಿರುವುದಾಗಿ ಹೇಳಿಕೊಂಡ ಚರ್ಚಿಲ್ಲರ ಡಂಭ ಇಳಿಸಿತು ಈ ತುಂಡು ಮುಂಡು ಪೋಷಾಕು.

ರೈಲು ಪ್ರವಾಸ

ಮೊದಲ ದರ್ಜೆ ರೈಲು ಡಬ್ಬಿಯಲ್ಲಿ ಪ್ರವಾಸ ಮಾಡುವ ಸೌಲಭ್ಯವಿದ್ದರೂ, ಗಾಂಧೀಜಿ ಮೂರನೆಯ ತರಗತಿಯ ರೈಲು ಗಾಡಿಯಲ್ಲೇ ಪ್ರವಾಸ ಮಾಡುತ್ತಿದ್ದರು. ಇದಕ್ಕೆ ಅವರು ಕಾರಣಕೊಟ್ಟು ಸಮರ್ಥಿಸಿಕೊಂಡಿರುತ್ತಾರೆ.

ಮೊದಲ ದರ್ಜೆಯ ಪ್ರಯಾಣದ ಕಹಿ ಪ್ರಸಂಗ ಅವರು ಅನುಭವಿಸಿದ್ದು ದಕ್ಷಿಣ ಆಫ್ರಿಕದಲ್ಲಿ. ದರ್ಬಾನಿನಿಂದ ಪ್ರಿಟೋರಿಯಾಗೆ ಪ್ರಯಾಣ ಮಾಡಲು ಮೊದಲ ತರಗತಿಯ ಟಿಕೀಟು ಪಡೆದರು. ದರ್ಬಾನಿನಿಂದ ನೆಟಾಲಿನ ರಾಜಧಾನಿ ಮಾರಿಟ್ಸ್‌ಬರ್ಗಿಗೆ ರೈಲು ರಾತ್ರಿ 9 ಘಂಟೆಗೆ ಬಂದಿತು. ಅಲ್ಲಿನವರೆಗೆ ಪ್ರಯಾಣ ಸುಗಮವಾಗಿಯೇ ನಡೆಯಿತು. ಮಾರಿಟ್ಸ್‌ಬರ್ಗಿನಲ್ಲಿ ಒಬ್ಬ ಆಂಗ್ಲೇಯ ಇವರನ್ನು ನೋಡಿ, ಕರಿಯರಿಗಾಗಿ ಮೀಸಲಾದ ಗಾಡಿಗೆ ಹೋಗುವಂತೆ ಒತ್ತಾಯಮಾಡಿದ. ತನ್ನಲ್ಲಿ ಮೊದಲ ದರ್ಜೆಯ ಚೀಟಿ ಇದೆ. ಇದೇ ಗಾಡಿಯಲ್ಲಿ ಪ್ರಯಾಣ ಮುಂದುವರಿಸುವ ಹಕ್ಕು ತನಗುಂಟು. ಹೀಗೆ ಹೇಳಿ ಅವರು ಡಬ್ಬಿ ಬಿಟ್ಟು ಹೋಗಲು ನಿರಾಕರಿಸಿದರು. ಆಗ ಆ ಶ್ವೇತವರ್ಣದ ಪ್ರಯಾಣಿಕ ಕೆಳಗೆ ಇಳಿದು ಇವರನ್ನು ಹೊರದೂಡಲು ರೈಲ್ವೆ ಅಧಿಕಾರಿಯೊಬ್ಬನನ್ನು ಕರೆದುಕೊಂಡು ಬಂದ. ಮೊದಲ ತರಗತಿಯ ಟೀಕೆಟು ಪಡೆದಿದ್ದ ಗಾಂಧೀಜಿ ಗಾಡಿ ಬಿಟ್ಟುಹೋಗಲು ನಿರಾಕರಿಸಿದರು. ಅಧಿಕಾರಿ ಪೋಲೀಸಿನವನ್ನು ಕರೆದುತಂದ. ಆಗಲೂ ಗಾಂಧೀಜಿ ತಾವಾಗಿ ಗಾಡಿ ಬಿಟ್ಟುಹೋಗಲು ಒಲ್ಲೆ ಎಂದರು. ಆಗ ಪೋಲೀಸಿನವ ಇವರ ತೋಳುರೆಟ್ಟೆ ಹಿಡಿದು ಗಾಡಿಯಿಂದ ಹೊರಕ್ಕೆ ದೂಡಿದ. ಇವರ ಹಾಸಿಗೆ ಸಾಮಾನುಗಳೂ ಇಳಿಸಲ್ಪಟ್ಟವು. ಗಾಂಧೀಜಿ ಮೂರನೆಯ ದರ್ಜೆ ಗಾಡಿಯಲ್ಲಿ ಪ್ರಯಾಣ ಮುಂದುವರೆಸಲು ನಿರಾಕರಿಸಿದರು. ರೈಲು ಇವರನ್ನು ನಿರ್ಲಕ್ಷಿಸಿ ಹೊರಟೇ ಹೋಯಿತು. ತಮ್ಮ ಚೀಲದಲ್ಲಿ ನಿಲುವಂಗಿ ಇದ್ದರೂ, ಅದನ್ನು ಹೊರತೆಗೆದು ತೊಟ್ಟುಕೊಳ್ಳುವ ಸಾಹಸ ಮಾಡದೆ ಚಳಿಯಲ್ಲಿ ನಡುಗುತ್ತಾ, ರಾತ್ರಿ ಎಲ್ಲ ಘಟನೆ ಮತ್ತು ತನ್ನ ಮುಂದಿನ ಕರ್ತವ್ಯ ಕುರಿತು ಚಿಂತಿಸುತ್ತ ಕಾಲಕಳೆದರು.

ಮೂರನೇ ದರ್ಜೆ ಗಾಡಿಯಲ್ಲಿ ಬಲವಂತಕ್ಕೆ, ಅಧಿಕಾರದ ದರ್ಪಕ್ಕೆ, ವರ್ಣದ ಹೆಚ್ಚುಳಿಕೆಗೆ, ಹಿಂಸೆಗೆ ಮಣಿಯಲು ನಿರಾಕರಿಸಿದ ಗಾಂಧೀಜಿ ಸ್ವತೀವ, ಸ್ವಯಂ ಪ್ರೇರಣೆಯಿಂದ, ಸುಖ ಪ್ರವಾಸದ ಮೊದಲ ದರ್ಜೆ ಗಾಡಿಯಲ್ಲಿ ಪ್ರಯಾಣಮಾಡದೆ

ಜನಸಾಮಾನ್ಯರಂತೆ ಮೂರನೆ ತರಗತಿಯಲ್ಲೇ ಪ್ರಯಾಣ ಮಾಡಲು ನಿಶ್ಚಯಿಸಿದರು. 1902ರಲ್ಲಿ ಕಲ್ಕತ್ತದಿಂದ ರಾಜಕೋಟೆಯ ದೀರ್ಘ ಪ್ರಯಾಣ ಕಾಶಿ, ಆಗ್ರ, ಜಯಪುರ, ಪಳನಪುರದ ಮಾರ್ಗವಾಗಿ. ಆದರಲ್ಲೂ ವೇಗವಾಗಿ ಓಡುವ ಮೇಲ್ ಅಥವಾ ಟಪಾಲು ರೈಲಿನಲ್ಲಿ ಪ್ರಯಾಣ ಬೆಳಸುವುದಕ್ಕಿಂತ ನಿಧಾನವಾಗಿ ಸಂಚರಿಸುವ ಪ್ರಯಾಣಿಕರ ರೈಲಿನಲ್ಲಿ ಪ್ರವಾಸಮಾಡುವುದು ಅವರಿಗೆ ಸರಿ ಎನಿಸಿತ್ತು. ಕಾರಣ ಟಪಾಲು ಗಾಡಿಯಲ್ಲಿ ಜನಸಂದಣಿ ಹೆಚ್ಚು, ದರವೂ ಅಧಿಕ. 1915 ರಿಂದ 1919ರ ವರೆಗೆ, ಮತ್ತೆ ತದನಂತರ ಆಜೀವ ಪರ್ಯಂತ ಅವರ ಪ್ರವಾಸ ಮೂರನೇ ದರ್ಜೆಗಾಡಿಯಲ್ಲೇ. 1919ರಲ್ಲಿ ಬರೆಯುತ್ತ—ಹದಿನೇಳು ವರ್ಷಗಳ ಹಿಂದೆ ಇದ್ದಂತೆಯೇ ಮೂರನೆ ದರ್ಜೆ ಪ್ರವಾಸದ ಸೌಲಭ್ಯದಲ್ಲಿ ಏನೂ ಬದಲಾವಣೆ ಆಗಿರಲಿಲ್ಲ, ಹಿಂದಿನಂತೆಯೇ ಇತ್ತು ಎಂದು ಬರೆದಿದ್ದಾರೆ. ಏನೋ ಅಲ್ಪ ಸ್ವಲ್ಪ ಬದಲಾವಣೆ ಆಗಿದೆ. ಮೊದಲ ಮತ್ತು ಮೂರನೇ ದರ್ಜೆ ದರದಲ್ಲಿ ಎಷ್ಟು ಅಂತರವೋ ಸೌಲಭ್ಯವೊದಗಿಸುವುದರಲ್ಲೂ ಅಷ್ಟೇ ಅಂತರ. ಚೊಕ್ಕಟವಿಲ್ಲ. ಕಕ್ಕಸು ವಿಪರೀತ ಗಲೀಜು. ಮೂರನೇ ದರ್ಜೆ ಪ್ರಯಾಣಿಕರು ಕುರಿಗಳಿಗೆ ಸಮಾನ. ಕುರಿಗಳಿಗೆ ದೊರೆಯುವ ಸೌಲಭ್ಯ ಇವರಿಗೂ. ಯೂರೋಪಿನಲ್ಲಿ ಒಂದನೇ ಮತ್ತು ಮೂರನೇ ತರಗತಿಯ ಅನುಕೂಲಗಳ ವ್ಯತ್ಯಾಸ ಅರಿಯಲು ಒಮ್ಮೆ ಅವರು ಮೊದಲ ತರಗತಿಯಲ್ಲಿ ಪ್ರವಾಸಮಾಡಿದ್ದರು. ಅಷ್ಟೇನೂ ಅಂತರ ಅವರಿಗೆ ಕಂಡುಬರಲಿಲ್ಲ ಭಾರತದಲ್ಲಿರುವಂತೆ. ಆಫ್ರಿಕದಲ್ಲಿ ನೀಗ್ರೋ ಜನವೇ ಮೂರನೇ ದರ್ಜೆ ಗಾಡಿಯಲ್ಲಿ ಪ್ರಯಾಣ ಮಾಡುವವರು. ಆದರೂ ಇಲ್ಲಿಗಿಂತ ಅಲ್ಲಿ ಸೌಲಭ್ಯ ಹೆಚ್ಚು. ಮಲಗಲು ಪ್ರತ್ಯೇಕ ವ್ಯವಸ್ಥೆ, ಕೂಡಲು ಮೆತ್ತೆ. ಜನಸಂದಣಿ ಹೆಚ್ಚಾಗದಂತೆ ನೋಡಿಕೊಳ್ಳಲಾಗುತ್ತೆ. ಆದರೆ ಇಲ್ಲಿ ಆಸನಗಳಿಗಿಂತ ಪ್ರಯಾಣಿಕರ ಸಂಖ್ಯೆಯೇ ಸರ್ವ ಸಾಮಾನ್ಯವಾಗಿ ಹೆಚ್ಚು.

ಮೂರನೆ ದರ್ಜೆ ಪ್ರಯಾಣಿಕರಿಗೆ ಒದಗಿಸಬೇಕಾದ ಸೌಲಭ್ಯದಲ್ಲಿ ರೈಲ್ವೆ ಅಧಿಕಾರಿಗಳ ಉದಾಸೀನತೆ, ಜೊತೆಗೆ ಪ್ರಯಾಣಿಕರ ಅಶುಚಿತ್ವ, ಇತರರಿಗೆ ತೊಂದರೆಯಾಗುತ್ತೆ ಎಂಬ ಸೌಜನ್ಯತೆಯ ಅಭಾವ, ಇವು ಶುಚಿತ್ವಕ್ಕೆ ಒಗ್ಗಿದವರಿಗೆ ಮೂರನೆ ದರ್ಜೆಯ ಪ್ರವಾಸ ತುಂಬ ತ್ರಾಸದಾಯಕವಾಗಿರುತ್ತೆ. ಕಸಕಡ್ಡಿ ಗಾಡಿಯಲ್ಲೇ ಬಿಸಾಡುವುದು; ಹೊತ್ತುಗೊತ್ತಿಲ್ಲದೆ ಬೀಡಿ ಸೇದುತ್ತ ಉಗಿಯುತ್ತಿರುವುದು; ಬೀಡಿ ತುಣುಕುಗಳನ್ನು ಗಾಡಿಯಲ್ಲೇ ಹಾಕುವುದು. ಹೊಗೆಸೊಪ್ಪು, ಎಲೆಅಡಿಕೆ ಜಗಿದು ಸಿಕ್ಕಲ್ಲಿ ಉಗಿಯುತ್ತ ಇಡೀ ಡಬ್ಬಿಯನ್ನೇ ಥೂಕುದಾನಿಯಾಗಿ ಪರಿವರ್ತಿಸುವುದು; ಏರುದನಿಯಲ್ಲಿ ಕೂಗಾಡುವುದು ಇತರ ಪ್ರಯಾಣಿಕರಿಗೆ ಆಗುವ ತೊಂದರೆಯನ್ನು ಗಮನಿಸದೆ ಬೈಯ್ಯುವುದು ಇವು ಅವರ ಅನುಭವದ ಮಾತುಗಳು.

"ಜಾತ್ರೆ, ರಥೋತ್ಸವ, ಪರ್ವಕಾಲ, ತೀರ್ಥಯಾತ್ರೆ, ಸಮ್ಮೇಳನ ಮೊದಲಾಗಿ ಪ್ರಯಾಣಿಕರ ಸಂಖ್ಯೆ ಮಿತಿಮೀರಿ ಬೆಳೆಯುವ ಕಾಲದಲ್ಲಿ ಬೆಳೆಯುವ ಅವಧಿಯಲ್ಲಿ ಶುಚಿತ್ವಕ್ಕೆ ಹೆಚ್ಚು ಗಮನ ಅತ್ಯಗತ್ಯ. ದೊಡ್ಡವರು ಜೀವನದಲ್ಲಿ ಅವರ ಅಂತಸ್ತು ಏನೇ ಇರಲಿ ಮೂರನೇ ದರ್ಜೆಗಾಡಿಯಲ್ಲಿ ಪ್ರವಾಸ ನಡೆಸಿದರೆ, ಬಡವರು ಅನುಭವಿಸಬೇಕಾದ ತೊಂದರೆ ಅವರೂ ಅನುಭವಿಸಬೇಕಾಗುತ್ತದೆ. ಅಧಿಕಾರಿಗಳು ಭೇದವೆಣಿಸಲಾರರಷ್ಟೆ! ಪ್ರಯಾಣಿಕರೂ ತಮ್ಮಂತೆಯೇ ಮಾನವರು ಎಂಬ ಭಾವನೆ ಅಧಿಕಾರಿಗಳಿಗಿರುವುದಿಲ್ಲ. ಅವರೆಲ್ಲರನ್ನೂ ಕುರಿಗಳಂತೆ ಭಾವಿಸುತ್ತಾರೆ. ಇದು ತನ್ನ ಅನುಭವ ಎನ್ನುತ್ತಾರೆ ಗಾಂಧೀಜಿ. ಅವರನ್ನು ತೃಣೀಕರಿಸಿ ಅಗೌರವದಿಂದ ಕಾಣುತ್ತಾರೆ. ಜವಾಬು ವಾದವಿವಾದಕ್ಕೆ ಕಿವಿಗೊಡರು. ಮೂರನೇ ದರ್ಜೆ ಪ್ರಯಾಣಿಕ ಅಧಿಕಾರಿಯ ದಾಸನಂತೆ ತಲೆಬಾಗಿ ನಡೆದುಕೊಳ್ಳಬೇಕು. ಟಿಕೀಟು ಕೊಡುವ ಮುನ್ನ ಅವನನ್ನು ಜರಿಯಲೂ ಬಹುದು. ಬಡಿಯಲೂಬಹುದು. ಆದಷ್ಟು ತೊಂದರೆಕೊಟ್ಟು ಹಿಂಸಿಸಲು ನಡೆಯುವ ಪ್ರಯತ್ನದಲ್ಲಿ ಪ್ರಯಾಣಿಕನಿಗೆ ಗಾಡಿಯೇ ಸಿಗದೆ ಹೋಗಬಹುದು. ಇವೆಲ್ಲವನ್ನೂ ನನ್ನ ಕಣ್ಣಾರೆ ನಾನು ನೋಡಿರುವೆ. ಕೆಲವು ವಿದ್ಯಾವಂತರು, ಶ್ರೀಮಂತರು ಸ್ವಪ್ರೇರಣೆಯಿಂದ ತಾವಾಗಿ ಮೂರನೇ ದರ್ಜೆ ಪ್ರವಾಸಿಗರ ಅಂತಸ್ತು ಸ್ವೀಕರಿಸಿ, ಬಡವರಿಗೆ ದೊರೆಯದ ಸೌಲಭ್ಯ ತಮಗೆ ದೊರೆತರೂ ನಿರಾಕರಿಸಿ, ನಿವಾರಣೆಯ ಕಷ್ಟಗಳನ್ನು, ಅಪಮಾನ ಪ್ರಸಂಗ ಮತ್ತು ಅನ್ಯಾಯಗಳನ್ನು ಅನಿವಾರಣೀಯ ಎಂದು ತಲೆಬಾಗಿ ಅಂಗೀಕರಿಸದೆ, ಪ್ರತಿಭಟಿಸುತ್ತ ಮೂರನೇ ದರ್ಜೆಯಲ್ಲಿ ಪ್ರಯಾಣ ಮಾಡಿದರೆ ಮಾತ್ರ ಸುಧಾರಣೆ ಸಾಧ್ಯವಾದೀತು."

"ಸಾರ್ವಜನಿಕ ಕಾರ್ಯಕ್ಕಾಗಿ ನಾನು ಪ್ರವಾಸ ಕೈಗೊಳ್ಳಬೇಕಾದ ಹಸಿಗೂಸಿನಂತೆ ರಕ್ಷಿತವಾಗಿ ನೆಮ್ಮದಿಯಲ್ಲಿ ಪ್ರಯಾಣ ಮಾಡುವುದರಿಂದ ಜನತೆಗೆ ಹೆಚ್ಚು ಸೇವೆಸಲ್ಲಿಸಲಾರೆ. ನಾನೂ ಬಡವರಂತೆ ಬದುಕುತ್ತಾ ಅವರಂತೆಯೇ ಮೂರನೇ ತರಗತಿಯ ಗಾಡಿಯಲ್ಲೇ ಪ್ರವಾಸಮಾಡಬೇಕು, ಇಲ್ಲವೇ ಪ್ರವಾಸವನ್ನೇ ನಿಲ್ಲಿಸಿಬಿಡಬೇಕು. ಸಮೀಪಕ್ಕೆ ಹೋಗಲೂ ಸಾಧ್ಯವಿಲ್ಲದ ಸಿಮ್ಲಾ ಬೆಟ್ಟದ ಮೇಲಿನಿಂದ ಭಾರತದ ಜನಕೋಟಿಯ ಹೃದಯ ಗೆಲ್ಲಲು ವೈಸರಾಯಿಗೆ ಎನಿತು ಸಾಧ್ಯವಿಲ್ಲವೋ ಅಂತೆಯೇ ಹತ್ತು ಪಾಲಿನಷ್ಟು ಶ್ರೇಷ್ಠವಾದ ಮೊದಲ ತರಗತಿಯಲ್ಲಿ ಪ್ರವಾಸ ಮಾಡುವುದರಿಂದ ನನ್ನ ಸಂದೇಶವನ್ನು ಯಶಸ್ವಿಯಾಗಿ ಮುಟ್ಟಿಸಲು ನನ್ನಿಂದ ಸಾಧ್ಯವಾಗದು" ಎಂದಿರುತ್ತಾರೆ ಗಾಂಧೀಜಿ.

ಇವೆಲ್ಲವೂ ಗಾಂಧಿಯವರ ಸ್ವಂತ ಅನುಭವದ ವಾಕ್ಯಗಳು. ಮೂರನೇ ದರ್ಜೆಯ ಎಲ್ಲ ಪ್ರಯಾಣಿಕರ ಅನುಭವವೂ ಹೆಚ್ಚು ಕಡಮೆ ಇದೇ. ಗಾಡಿಯಲ್ಲಿ

ಕೂಡಲು ಇಷ್ಟು ಜನಕ್ಕೆ ಸ್ಥಳವಸತಿ ಒದಗಿಸಲಾಗಿದೆ ಎಂದು ಗಾಡಿಯಲ್ಲೇ ಸೂಚಿಸಲಾಗಿರುತ್ತೆ. ಆದರೆ ಎಂಟು ಜನ ಕೂಡಬೇಕಾದ ಗಾಡಿಯಲ್ಲಿ ಮೂರರಷ್ಟು ಜನ ಮೇಲೋ–ಕೆಳಗೋ, ನಿಂತೋ–ಕುಂತೋ ಪ್ರಯಾಣ ಮಾಡುತ್ತಿರುತ್ತಾರೆ. ಸಂಸಾರದೊಡನೆ ಪ್ರಯಾಣಮಾಡುವವರಿಗೆ ಕುಟುಂಬದ ಸಕಲ ಸಾಮಾನುಗಳಿಗೂ ಗಾಡಿಯಲ್ಲೇ ಜಾಗವಾಗಬೇಕು. ಹಾಸಿಗೆ, ಪೆಟ್ಟಿಗೆ, ಗಂಟು–ಮೂಟೆ, ಪಾತ್ರೆ ಪದಾರ್ಥ ಎಲ್ಲಕ್ಕೂ ಸ್ಥಳ ಆಗಬೇಕು ಅದೇ ಡಬ್ಬಿಯಲ್ಲಿ. ಗಂಟಿನಮೇಲೆ ಪೆಟ್ಟಿಗೆಯ ಮೇಲೆ ಕೂಡಬೇಕು. ಬಾಗಿಲಿನಿಂದ ಒಳಕ್ಕೆ ಬರಲು ಸಾಧ್ಯವಾಗದಿದ್ದರೆ ಕಿಟಕಿಯಿಂದ ತೂರಿಬರಬೇಕು. ಹೇಗೋ ಜಾಗ ಮಾಡಿಕೊಳ್ಳಬೇಕು. ತನ್ನಂತೆಯೇ ಇನ್ನೊಬ್ಬ ಪ್ರಯಾಣಿಕ ಒಳಬರಲು ಪ್ರಯತ್ನಿಸಿದರೆ, ಗಾಡಿಯೆಲ್ಲವೂ ತನ್ನದೆಂದೇ ತಿಳಿಯುತ್ತಾ, ಅವನನ್ನು ಹೊರಕ್ಕೆ ದೂಡಬೇಕು. ಮಕ್ಕಳನ್ನು ಸುಧಾರಿಸಬೇಕು. ಹೊರಗಡೆ ಮಾರಾಟವಾಗುವ ತಿಂಡಿತಿನಿಸು, ಹಣ್ಣು–ಹಂಪಲು, ಬಾಳೇಹಣ್ಣು, ಕಳ್ಳೇಕಾಯಿ, ಆಟದ ಸಾಮಾನು, ಪೀಪಿ ತೆಗೆಸಿಕೊಡಬೇಕು. ತಿಂಡಿ ತಿಂದು ಕಾಗದ ಅಲ್ಲಿಯೇ ಹಾಕಬೇಕು. ಬಾಳೇಸಿಪ್ಪೆ, ಕಡಲೇಕಾಯಿ ಸಿಪ್ಪೆ ಜತೆಯಲ್ಲೇ ಪ್ರಯಾಣ ಮಾಡಬೇಕು. ಅವಕ್ಕೆ ಹಣ ತೆತ್ತಿಲ್ಲವೇ? ಅಳುವ ಮಕ್ಕಳಿಗೆ ಹಾಲುಣಿಸಬೇಕು, ಅವು ಅಲ್ಲಿಯೇ ಮೂತ್ರ ವಿಸರ್ಜನೆ ಮಾಡಬೇಕು, ದೇಹಬಾಧೆ ತೀರಿಸಿಕೊಳ್ಳಬೇಕು. ನೆರೆಯವನ ಭುಜದಮೇಲೋ, ತೊಡೆಯಮೇಲೋ ತಲೆಯಿಟ್ಟು ತೂಕಡಿಸಬೇಕು. ಏನು ಮಾಡುವುದು. ವಿಧಿಯಿಲ್ಲ. ಇಂದು ಪ್ರಯಾಣ ಮಾಡಲೇಬೇಕು. ಕೋಳಿ ಮರಿಗಳೂ ಬುಟ್ಟಿಯಲ್ಲಿ ಕೂತು ಕಿಚಿಪಿಚಿಗುಟ್ಟುತ್ತಾ ಸಂಸಾರದೊಂದಿಗೆ ಸಾಗಲೇ ಬೇಕು. ಅವಕ್ಕೆ ಬೇರೆ ತಾವಿಲ್ಲ. ಯಜಮಾನಿಯನ್ನು ಬಿಟ್ಟು ಅವು ಹೇಗೆ ಇರಬಲ್ಲವು?

ಪ್ರಯಾಣಕಾಲದ ಅಲ್ಪಸಮಯದಲ್ಲೇ ಅಪರಿಚಿತರೂ ಪರಿಚಿತರಾಗುತ್ತಾರೆ, ಬಲು ಸುಲಭದಲ್ಲಿ. ನಿಮ್ಮ ಹೆಸರೇನು, ಮಕ್ಕಳೆಷ್ಟು, ಎಲ್ಲಿಗೆ ಪ್ರಯಾಣ, ಏನು ಕೆಲಸ. ಇಲ್ಲಿಂದ ಮೊದಲಾಗಿ ಗಾಡಿಯಿಂದ ಇಳಿದು ಹೋಗುವವರೆಗೂ ಸಂಸಾರ ಸಾಗರದ ಸಮಾಚಾರ ಬೆಳೆಯುತ್ತಲೇ ಇರುತ್ತೆ. ಕೆಲವೇ ನಿಮಿಷಗಳಲ್ಲಿ ಸ್ನೇಹ ಚಿಗುರುತ್ತದೆ. ಪ್ರವಾಸದ ಅನುಭವಗಳ ಕಥೆ ಸಾಗುತ್ತದೆ. ಕಾಲು ಚಾಚಿ ಮಲಗಿದವನು, ಅಯ್ಯೋ ಪಾಪ ಎಂದು ಸಿಂತವನಿಗೆ ಜಾಗಮಾಡಿಕೊಡುತ್ತಾನೆ. ಕನ್ಯೆ, ವರ, ರಾಜಕೀಯ ಮಾತುಕಥೆ, ವಾದವಿವಾದ ಬೆಳೆಯುತ್ತದೆ. ಪ್ರವಾಸದ ಫಲ

ಒಮ್ಮೆ ಗಾಂಧೀಜಿ ವಾರಣಾಸಿಯಿಂದ ಪ್ರಯಾಣ ಮಾಡಬೇಕಾಗಿತ್ತು. ರೈಲು ನಿಲ್ದಾಣದಲ್ಲಿ ವಿಪರೀತ ಜನ ಸಂದಣಿ. ಟಿಕೇಟು ಕೊಳ್ಳಲು ನೂಕುನುಗ್ಗಲು. ಪೋಲೀಸರಿಗೆ ಹಣಕೊಟ್ಟು ಕೆಲವರು ಟಿಕೀಟು ಕೊಂಡರು. ಆದರೆ ಹೀಗೆಮಾಡಲು

ಅವರ ಮನ ಒಪ್ಪದು. ತತ್ವನಿಷ್ಠೆ. ವ್ಯವಹಾರ ದೃಷ್ಟಿ ಇಲ್ಲ ಎನ್ನಿ. ಇಷ್ಟು ಜನ ಸಂದಣಿಯಿದ್ದರೂ ಗಾಡಿ ಹೊರಡಲು ಇನ್ನೇನು ವೇಳೆ ಆಯಿತು ಎನ್ನುವ ಹೊತ್ತಿಗೆ ಟಿಕೀಟು ಕೊಡಲು ಪ್ರಾರಂಭವಾಯಿತು. ಒಂದು ಘಂಟೆಗೂ ಹೆಚ್ಚು ಕಾಲ ಕಾದು ಇವರು ಟಿಕೀಟು ಪಡೆದರು. ಜನರಿಗೆ ಸೌಲಭ್ಯ ಒದಗಿಸಿಕೊಡಬೇಕಾದ ಪೋಲೀಸಿನವರಿಂದ ಪಾಪ, ಕೆಲವು ಪ್ರಯಾಣಿಕರು ಒದೆತ ತಿಂದರು. 'ನನ್ನ ಪುಣ್ಯ' ನನಗೆ ಒದೆತ ಬೀಳಲಿಲ್ಲ ಎಂದು ಗಾಂಧಿಯವರೇ ಹೇಳಿಕೊಂಡಿರುತ್ತಾರೆ.

ಟಿಕೆಟ್ ಕೊಳ್ಳಲು ಆದ ಕಷ್ಟದಿಂದ ತೊಂದರೆ ಕೊನೆಗೊಳ್ಳಲಿಲ್ಲ. ಗಾಡಿಯಲ್ಲಿ ಪ್ರವೇಶಿಸಬೇಕಲ್ಲ. ಗಾಡಿಯಲ್ಲಿ ಕೂಡಲು ಸ್ಥಳವಿಲ್ಲದೆ ನಿಂತಿದ್ದವರು ಎಷ್ಟೋ! ಕೆಲವರು ಕಿಟಕಿಯಿಂದ ತೂರಿ ಒಳನುಗ್ಗಿದರು. ಜನಸಂದಣಿಯೇ ಬಾಗಿಲ ಬಳಿನಿಂತಿದ್ದ ಗಾಂಧಿಯವರನ್ನು ಒಳಕ್ಕೆ ದೂಡಿತು. ಕೂಡಲು ಸ್ಥಳವಿಲ್ಲ. ಕಂಕುಳಲ್ಲಿ ಮೂಟೆ ಇರಿಸಿಕೊಂಡು ನಿಂತೇ ಪ್ರಯಾಣ ಬೆಳಸಿದರು. ನಿನ್ನ ಮೂಟೆಯನ್ನಾದರೂ ಕೆಳಗಿಡು ಎಂದು ಯಾರೂ ಹೇಳಲಿಲ್ಲ. ಸ್ಥಳಕೊಡಲಿಲ್ಲ. ಹಗಲು ಹೀಗಾದರೆ, ರಾತ್ರಿಕಳೆಯುವುದೆಂತು ಎಂದು ಚಿಂತಿಸುತ್ತಿದ್ದರು. ಇಷ್ಟರಲ್ಲಿ ಒಬ್ಬ ಪ್ರಯಾಣಿಕ ಮುಂದಿನ ಸ್ಟೇಷನ್‌ನ್ನಿನಲ್ಲಿ ಕೆಳಗಿಳಿದ. ಕುಸಿದುಬೀಳುವಂತಾಗಿತ್ತು ಗಾಂಧಿಯವರಿಗೆ. ದೇವರೇ ನನ್ನ ಸಹಾಯಕ್ಕೆ ಬಂದು ಎಂದು ಭಗವಂತನನ್ನೂ ವಂದಿಸುತ್ತಾ ಕುಳಿತು ಪ್ರಯಾಣ ಬೆಳಸಿದರು.

"ರೈಲ್ವೆ ಪ್ರಯಾಣದ ಈ ಭಯಾನಕ ಪರಿಸ್ಥಿತಿ ಹೋಗಲಾಡಿಸಲು ಇರುವ ಏಕೈಕ ಮಾರ್ಗ ಸುಶಿಕ್ಷಿತರು ಮೂರನೆ ದರ್ಜೆಗಾಡಿಯಲ್ಲಿ ಪ್ರಯಾಣ ಬೆಳೆಸುವುದು. ಜನರ ದುಷ್ಟಪದ್ಧತಿ ತಿದ್ದುವುದು. ಅಗತ್ಯ ಬಿದ್ದಾಗಲೆಲ್ಲ ತೊಂದರೆಗಳನ್ನು ಗಮನಿಸಿ ಅವನ್ನು ಸರಿಪಡಿಸುವವರೆಗೂ ಅಧಿಕಾರಿಗಳಿಗೆ ಶಾಂತಿಕೊಡದೆ ನಿರಂತರ ಹೋರಾಟ ನಡೆಸುತ್ತಲೇ ಇರುವುದು. ಲಂಚ ಮತ್ತು ಇತರ ಅಕ್ರಮ ವಿಧಾನಗಳಿಂದ ತಮ್ಮ ಸೌಲಭ್ಯ ಸಾಧಿಸಿಕೊಳ್ಳುವುದನ್ನು ತ್ಯಜಿಸುವುದು. ಯಾರೇ ಆಗಲಿ ನಿಯಮಗಳನ್ನು ಅತಿಕ್ರಮಿಸಿ ನಡೆಯುವುದಕ್ಕೆ ಎಡೆಗೊಡದಿರುವುದು. ಈ ರೀತಿಯಲ್ಲಿ ನಡೆದುಕೊಳ್ಳುವುದರಿಂದ ಪರಿಸ್ಥಿತಿ ಬೇಗ ಸುಧಾರಿಸುವುದರಲ್ಲಿ ಸಂದೇಹವಿಲ್ಲ."

ಮೋಹನದಾಸ ಮಹಾತ್ಮನೆನಿಸಿಕೊಂಡ ತರುವಾಯ ರೈಲ್ವೆಯವರು ಇವರಿಗಾಗಿ ಪ್ರತ್ಯೇಕ ಮೂರನೆ ದರ್ಜೆ ಡಬ್ಬಿ ಮೀಸಲಾಗಿ ಒದಗಿಸುತ್ತಿದ್ದರು. ತನ್ನ ಅನುಕೂಲಕ್ಕಾಗಿ ರೈಲ್ವೆಯವರು ಅನುಸರಿಸುವ ಇದೊಂದು ಮೋಸ ಎನ್ನುತ್ತಾರೆ, ಅವರು ಈ ಪದ್ಧತಿಯನ್ನು. ಗಾಂಧೀಜಿ ಒಬ್ಬೊಂಟಿಗರಾಗಿ ಪ್ರಯಾಣ ಮಾಡುತ್ತಿ

ರಲಿಲ್ಲ. ಸದಾ ಪರಿವಾರ ಇರುತ್ತಿತ್ತು. ಪ್ರಯಾಣವೆಂದರೆ ಇವರಿಗೆ, ಇವರ ಪರಿವಾರಕ್ಕೆ, ರೈಲ್ವೆ ಅಧಿಕಾರಿಗಳಿಗೆ, ವ್ಯವಸ್ಥಾಪಕರಿಗೆ ಎಲ್ಲರಿಗೂ ತಲೆನೋವು. ಗಾಡಿ ಚೊಕ್ಕಟವಾಗಿರಿಸಬೇಕು. ಪಾಯಿಖಾನೆಗೆ ನೀರೊದಗಿಸಬೇಕು. ಶುಭ್ರವಾಗಿರಿಸ ಬೇಕು. ವೇಳೆಗೆ ಸರಿಯಾಗಿ ಸಂಚರಿಸಬೇಕು. ಗಾಂಧೀ ಮತ್ತು ಪರಿವಾರ ರೈಲ್ವೆ ಪ್ರಯಾಣದಿಂದ ಸಾಕಷ್ಟು ಅನುಭವಗಳಿಸಿದ್ದರು. ಡಬ್ಬಿಯಲ್ಲಿ ಮಲಮೂತ್ರ ವಿಸರ್ಜನೆಗೆ ಸಣ್ಣ ಕಕ್ಕಸ್ ಇರುತ್ತದೆ. ಇಲ್ಲಿ ಒತ್ತು ನಳವೂ ಇರುತ್ತದೆ. ಆದರೆ ಅನೇಕಸಾರಿ ನೀರು ಇರುವುದಿಲ್ಲ. ಹಲವರಿಗೆ ಇದನ್ನು ಬಳಸುವ ವಿಧಾನವೂ ತಿಳಿಯದೆ ಗಲೀಜು ಮಾಡಿರುತ್ತಾರೆ. ಗೋಡೆಯ ಮೇಲೆ ಅಶ್ಲೀಲ ಚಿತ್ರ ಬರೆದಿರುವುದು ಅಪರೂಪವಲ್ಲ. ಗಾಂಧೀ ಪರಿವಾರ ಇವೆಲ್ಲವನ್ನೂ ಸರಿಪಡಿಸುವುದು. ನೀರಿಲ್ಲದಿದ್ದರೆ ನೀರು ತುಂಬಿಸುವಂತೆ ಮಾಡುವರು.

ಗಾಂಧಿಯವರಿಗೆ ಪ್ರಯಾಣಕಾಲದಲ್ಲಿ ಅಗತ್ಯವಾದ ಸಣ್ಣ ಹಾಸಿಗೆ, ಹೂಜ, ಪುಸ್ತಕ, ಕಾಗದ, ಮಸಿಕುಡಿಕೆ, ಚರಖ, ಚಂಬು, ಹಳೆಯ ವೃತ್ತಪತ್ರಿಕೆ, ಮೇಣದ ಬತ್ತಿ ಅಥವಾ ಲಾಟೀನ್, ಬೆಂಕಿ ಪೊಟ್ಟಣ, (ಬೀಡಿ ಸೇದುವುದಕ್ಕಲ್ಲ) ಎರಡು ಪೊರಕೆ ಒಯ್ಯುತ್ತಿದ್ದರು. ಏಕೆ ಗೊತ್ತೆ ?

ಗಾಂಧೀ ಸಂಗಡಿಗರು ನೀರು ಇದೆಯೇ, ಪಾಯಿಖಾನೆ ಚೊಕ್ಕಟವಾಗಿದೆಯೇ ಎಂದು ನೋಡುವರು. ಮೊಂಡು ಪೊರಕೆಯಿಂದ ಶೌಚಗೃಹ ಚೊಕ್ಕಟ ಮಾಡುವರು. ಮತ್ತೊಂದು ಪೊರಕೆಯಿಂದ ಡಬ್ಬಿಯ ಕಸಗುಡಿಸಿ ಶುಚಿಗೊಳಿಸುವರು. ಮೂರನೆ ದರ್ಜೆ ಗಾಡಿಯಲ್ಲಿ ಮಲಗಲು ಪ್ರತ್ಯೇಕ ಸ್ಥಳ ಇರುವುದಿಲ್ಲ. ಬೆಂಚು ಅಥವಾ ನೆಲದ ಮೇಲೆ ಮಲಗಬೇಕಾಗುತ್ತದೆ. ಈಗ ಹಳೆಯ ವೃತ್ತಪತ್ರಿಕೆ ಒಳ್ಳೆ ಕೆಲಸಕ್ಕೆ ಬರುತ್ತೆ. ಕಾಗದ ಹರಡಿ ಅದರ ಮೇಲೆ ಹಾಸಿಗೆ ಹಾಕುವರು. ಇದರಿಂದ ಹಾಸಿಗೆ ಹೆಚ್ಚು ಕೊಳೆಯಾಗುವುದಿಲ್ಲ. ಅಲ್ಪ ವಿಷಯಕ್ಕೂ ಅಷ್ಟು ಗಮನ. ತಿಗಣೆಕಾಟ ತಪ್ಪಿದ್ದಲ್ಲ. ಗಾಂಧೀಜಿ ಇದಕ್ಕೆ ಏನು ಮಾಡುತ್ತಿದ್ದರೋ ತಿಳಿಯದು.

ಗಾಡಿಯಲ್ಲಿ 'ಗ್ಯಾಸ್' ಅಥವಾ ವಿದ್ಯುದ್ದೀಪಗಳಿರುತ್ತವೆ. ಕೆಲವೊಮ್ಮೆ ಇವು ಉರಿಯವು. ಸಾಕಷ್ಟು ಬೆಳಕು ಕೊಡಲು ನಿರಾಕರಿಸುವುವು. ಇದಕ್ಕಾಗಿ ಮೇಣದ ಬತ್ತಿ ಅಥವಾ ಕಂದೀಲು ಸಿದ್ಧ. ಓಡುತ್ತಿರುವ ಗಾಡಿಯಲ್ಲೂ ಓದುವುದು, ಬರೆಯುವುದು ತಡೆಯಿಲ್ಲದೆ ನಡೆಯುತ್ತಿರುವುದು. ಬಲಗೈ ಸೋತರೆ ಎಡಗೈ ನೆರವಿಗೆ ಬರುವುದು. ಈ ಕಾರಣದಿಂದ ಅವರ ಬರವಣಿಗೆ ಓದುವುದೂ ಕಷ್ಟ. ಗಾಡಿಯಲ್ಲೇ ಹಜಾಮರ ಕತ್ತಿಯಿಂದ (ಸೇಫ್ಟಿ ರೇಜರ್ ಅಲ್ಲ) ಮುಖಕ್ಷೌರ ಮಾಡಿಕೊಳ್ಳುವರು. ಶೌಚಗೃಹದಲ್ಲೇ ಮುಖ ತೊಳೆದು ಕೊಳ್ಳುವರು. ಗಾಡಿ ನಿಲ್ದಾಣದಲ್ಲಿ

ನಿಂತಾಗ ಇತರರು ಒಳಕ್ಕೆ ನುಗ್ಗದಂತೆ ಪಹರೆ ಕಾಯುತ್ತಿರಬೇಕು. ರಾತ್ರಿಯಲ್ಲೂ ದರ್ಶನಾಕಾಂಕ್ಷಿಗಳ ಕಾಟ ತಪ್ಪಿದ್ದಲ್ಲ. ಕಿಟಕಿಯಿಂದ ಕೈ ಹೊರಕ್ಕೆ ಚಾಚಿ ಹರಿಜನ ನಿಧಿಗೆ ಕಾಣಿಕೆ ಬೇಡುವರು. ಒಂದು ಕೈ ಬರೆಯುತ್ತಿರುವುದು, ಮತ್ತೊಂದು ಕೈ ಬೇಡುತ್ತಿರುವುದು.

ಗಾಂಧೀಜಿ, ಆಕಳು ಅಥವಾ ಎಮ್ಮೆಯ ಹಾಲು ಕುಡಿಯುವುದಿಲ್ಲವಷ್ಟೆ. ಹಾಲು ಕೆಲವು ನಿಲ್ದಾಣಗಳಲ್ಲಿ ಲಭ್ಯ. ಆದರೆ ಆಡಿನ ಹಾಲು ಯಾವ ನಿಲ್ದಾಣ ದಲ್ಲೂ ದೊರೆಯದು. ಮಹಾತ್ಮರಿಗೆ ಬೇಕು, ಆಡಿನ ಹಾಲು. ಇದಕ್ಕಾಗಿ ವಿಶೇಷ ವ್ಯವಸ್ಥೆ ಮಾಡಲಾಗುತ್ತಿತ್ತು. ಒಮ್ಮೆ ಇವರು ಪ್ರಯಾಣ ಮಾಡುತ್ತಿದ್ದಾಗ ತಾಜ ಕರೆದ ಹಾಲು ಸೇವಿಸಲೆಂದು ಒಂದು ಆಡನ್ನು ಇವರ ಡಬ್ಬಿಯೊಳಕ್ಕೇ ದೂಡಿ ಬಿಟ್ಟರು. ಪಾಪ, ಅದೇನು ಮಾಡೀತು. ಗಾಂಧೀಜಿ ಅದರ ಸಂಗಡ ಇಕ್ಕಟ್ಟಾದ ಗಾಡಿಯಲ್ಲೇ ಪ್ರಯಾಣ ಮಾಡಬೇಕಾಯಿತು.

ಮತ್ತೊಂದು ಸಲ ಇವರು ಪ್ರಯಾಣ ಮಾಡುತ್ತಿದ್ದಾಗ, ಕಿಟಕಿಯಿಂದ ಇಣಕಿ ನೋಡಿ, ಇಷ್ಟೊಂದು ಜಾಗವಿದೆಯಲ್ಲ ಎಂದು ಒಬ್ಬ ಗೌಡ ಕೋಲೂರಿಕೊಂಡು ಗಾಡಿ ಹೊರಡುವ ವೇಳೆಗೆ ಒಳಕ್ಕೆ ನುಗ್ಗಿದ. ಗಾಂಧೀಜಿ ಕಾಲು ಚಾಚಿ ಕೊಂಡು ಮಲಗಿದ್ದರು. "ಏನಯ್ಯ, ನಿನ್ನ ತಾತನದೆ ಈ ಗಾಡಿ" ಎಂದು ಗಾಂಧಿಯ ವರ ಪಕ್ಕದಲ್ಲಿಯೇ ಹೋಗಿ ಕುಳಿತ. ಎಲ್ಲಿಗೆ ಪ್ರಯಾಣ ಎಂದು ಅವರು ಕೇಳಿದರು. ಮಹಾತ್ಮರು ಬರುತ್ತಾರಂತೆ ಅವರನ್ನು ನೋಡಲು ಹೋಗುತ್ತಿರುವೆ ಎಂದ. ನಾನೂ ಅದಕ್ಕಾಗಿಯೇ ಪ್ರಯಾಣ ಮಾಡುತ್ತಿರುವೆ ಎಂದರು ಬಾಪೂಜಿ. ಪರಿವಾರ ದವರು ಬಾಯಿಮುಚ್ಚಿಕೊಂಡು ಹಾಸ್ಯದಲ್ಲಿ ಪಾಲ್ಗೊಳುತ್ತ ನಗುತ್ತಿದ್ದರು. ನಿರ್ದಿಷ್ಟ ನಿಲ್ದಾಣ ಬಂತು. ಸ್ವಾಗತ ಸಮಿತಿಯ ಮುಖಂಡರು ಮಹಾತ್ಮರನ್ನು ಎದುರುಗೊಳ್ಳಲು ಹಾರಗಳೊಂದಿಗೆ ಬಂದರು. ಆಗಲೇ ಅವನಿಗೆ ಅರಿವಾದದು ಗಾಂಧೀಜಿ ಯಾರೆಂದು. ಅವರ ಪಾದಗಳಿಗೆರಗಿ ಕ್ಷಮೆ ಬೇಡಿದ. ಗಾಂಧೀಜಿತಮಗೆ ಅರ್ಪಿಸಿದ ಹಾರ ತೆಗೆದು ಅವನ ಕೊರಳಿಗೆ ಹಾಕಿದರು. ಗೌಡನ ಆನಂದಕ್ಕೆ ಪಾರವೇ ಇಲ್ಲದಂತಾಯಿತು.

ಗಾಂಧೀಜಿ ರೈಲಿನಲ್ಲಿ ಪ್ರಯಾಣ ಮಾಡುವುದನ್ನು ತಿಳಿಯುತ್ತಲೇ ಪ್ರತಿ ಯೊಂದು ನಿಲ್ದಾಣದಲ್ಲೂ, ಅವರ ದರ್ಶನ ಪಡೆಯಲು ಗುಂಪುಗುಂಪಾಗಿ ಜನ ನೆರೆಯುವರು. ಹಗಲು, ಇರಳು, ಚಳಿ, ಬಿಸಿಲು, ಮಳೆ ಲೆಕ್ಕಿಸದೆ ಜನ ಸೇರುವರು. ರೈಲು ಕೆಲವು ನಿಲ್ದಾಣಗಳಲ್ಲಿ ನಿಲ್ಲದು. ಅಂಥ ಎಡೆಗಳಲ್ಲೂ ಜನ ಬಲಾತ್ಕಾರದಿಂದ ಗಾಡಿ ನಿಲ್ಲಿಸುವರು. ಮಲಗಿ ವಿಶ್ರಾಂತಿ ಪಡೆಯಲೂ ಅವಕಾಶ ಕೊಡರು. ಜನರು ರೈಲಿಗೆ ಸಿಕ್ಕಿ ಸಾಯದಂತೆ ನೋಡಿಕೊಳ್ಳುವುದು ರೈಲ್ವೆಯ ಅಧಿಕಾರಿ

ಗಳಿಗೆ, ಪೋಲೀಸರಿಗೆ ದೊಡ್ಡ ಹೊಣೆ. ಆದರೂ ಒಂದು ಸಲ ಒಬ್ಬ ಚಲಿಸು ತ್ತಿದ್ದ ಗಾಡಿ ಏರುವ ಪ್ರಯತ್ನದಲ್ಲಿ ಚಕ್ರಗಳಿಗೆ ಸಿಕ್ಕಿ ಸತ್ತ. ಇನ್ನೊಮ್ಮೆ ಒಬ್ಬ ರೈಲು ಹತ್ತುವ ಆತುರದಲ್ಲಿ ಕೆಳಕ್ಕೆ ಬಿದ್ದ. ಕಾಲಿಗೆ ಪೆಟ್ಟಾಯಿತು. ಸಾಯಲಿಲ್ಲ. ಗಾಂಧೀಜಿ ಗಾಡಿಯಿಂದ ಇಳಿದು ಅವನನ್ನು ನೋಡಲು ಬಂದರು. ಮಹಾತ್ಮ ರಾದ ತಾವು ಗಾಡಿಯಲ್ಲಿದ್ದುದರಿಂದ ನನ್ನ ಪ್ರಾಣ ಉಳಿಯಿತು. ಇಲ್ಲವೇ ನಾನು ಸಾಯುತ್ತಿದ್ದೆ ಎಂದ ಆತ. ಎಂಥ ಮೂರ್ಖ ನಂಬಿಕೆ. ನಾನು ಗಾಡಿಯಲ್ಲಿದ್ದು ದರಿಂದಲೇ ನಿನ್ನ ಕಾಲು ಮುರಿದುದು. ನನ್ನನ್ನು ನೋಡಲು ಬಂದು ಕಾಲು ಕಳೆದುಕೊಂಡೆ ಎಂದರು ಗಾಂಧೀಜಿ.

ಆಂಧ್ರದಲ್ಲಿ ಪ್ರವಾಸ ನಡೆಯುತ್ತಿತ್ತು. ದೇಶಭಕ್ತ ಕೊಂಡ ವೆಂಕಟಪ್ಪಯ್ಯ, ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ ಮೊದಲಾದ ಪ್ರಮುಖರು ಜತೆಯಲ್ಲಿ ಪ್ರಯಾಣ ಮಾಡುತ್ತಿದ್ದರು. ಮಧ್ಯಾಹ್ನ ಕರ್ನೂಲಿನಿಂದ ಮೋಟಾರಿನಲ್ಲಿ ಹೊರಟು ಸಂಜೆ 6ಕ್ಕೆ ಬಳ್ಳಾರಿ ಸೇರುವುದೆಂದು ಗೊತ್ತಾಗಿತ್ತು. ಹೊರಡು ವೇಳೆಗೆ ಮೋಟಾರು ವಾಹನ 90 ಮೈಲಿ ಹೋಗುವ ಸ್ಥಿತಿಯಲ್ಲಿರಲಿಲ್ಲ ಎಂದು ತಿಳಿಯಿತು. ರೈಲು ಹೋಗುವುದಿಲ್ಲವೇ ಎಂದು ಗಾಂಧೀಜಿ ವಿಚಾರಿಸಿದರು. ಕೆಲವೇ ನಿಮಿಷಗಳಲ್ಲಿ ರೈಲು ಹೊರಡಲಿದೆ. ಆದರೆ ಅದು ಅವೇಳೆ—ನಡುರಾತ್ರಿಗೆ ಬಳ್ಳಾರಿ ಸೇರುತ್ತದೆ. ಆದ್ದರಿಂದ ಬೆಳಿಗ್ಗೆ ಬೇರೆ ಮೋಟಾರಿನಲ್ಲಿ ಹೋಗೋಣ ಎಂದರು ವೆಂಕಟಪ್ಪಯ್ಯ. ಗಾಂಧೀಜಿ ಒಪ್ಪಲಿಲ್ಲ. ಆತುರಾತುರವಾಗಿ ಗಂಟುಮೂಟೆಕಟ್ಟಿ, ಜಟಕ ಗಾಡಿಯಲ್ಲಿ ಕುಳಿತು, ಸಕಾಲಕ್ಕೆ ನಿಲ್ದಾಣ ಮುಟ್ಟಿದರು. ಹೇಗೋ ಜಾಗ ಮಾಡಿಕೊಂಡರು. ರೈಲಿನಲ್ಲಿ ರಾತ್ರಿ 12 ಘಂಟೆಗೆ ಬಳ್ಳಾರಿ ಸೇರುವುದಾಗಿ ತಂತಿ ಕಳುಹಿಸಲಾಯಿತು. ಅಲ್ಪ ಸಮಯ ಮತ್ತು ಅವೇಳೆ ಆದರೂ ಸಾವಿರಾರು ಜನ ನಿಲ್ದಾಣದಲ್ಲಿ ನೆರೆದಿದ್ದರು. ಗಾಂಧೀಜಿ ಸ್ವಯಂ ಸೇವಕರ ನೆರವಿನಿಂದ ದಾರಿ ಬಿಡಿಸಿಕೊಂಡು ಮೋಟಾರು ಹತ್ತಿ ಬಿಡಾರಕ್ಕೆ ಹೋದರು. ಆದರೆ ಕೊಂಡ ವೆಂಕಟಪ್ಪಯ್ಯ ಗುಂಪಿನಲ್ಲಿ ಸಿಕ್ಕಿಕೊಂಡು ಹಿಂದು ಮುಂದೆ ಹೋಗಲಾರದೆ ಪೇಚಾ ಡುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಯಾರೋ ಇವರನ್ನು ಅನಾಮತ್ತಾಗಿ ಎತ್ತಿ ಕೊಂಡು, ಗುಂಪಿನಿಂದ ಸುರಕ್ಷಿತವಾಗಿ ಹೊರಕ್ಕೆ ಒಯ್ದ. ಮಾರನೆಯ ಬೆಳಿಗ್ಗೆಯೇ ಮಹಾತ್ಮರನ್ನು ನೋಡಲು ಇವರಿಗೆ ಸಾಧ್ಯವಾದುದು.

ಕೊಂಡ ವೆಂಕಟಪ್ಪಯ್ಯ ಸುಪ್ರಸಿದ್ಧ ದೇಶಭಕ್ತ. ವಕೀಲಿ ತೊರೆದು ಗಾಂಧೀ ಪಂಥ ಸೇರಿದ್ದರು. ಸರಳ ಜೀವಿ ಆದರು. ತುಂಡು ಪಂಚೆ, ಮೈಮೇಲೆ ಅಂಗ ವಸ್ತ್ರ. ಇಷ್ಟೇ ಇವರ ಉಡುಪು. ಮಾರನೆಯ ಬೆಳಿಗ್ಗೆ ಗಾಂಧಿಯುವರನ್ನು ನೋಡಿ ದಾಗ ಅವರು ಮಾನಪತ್ರಗಳನ್ನು ಸ್ವೀಕರಿಸುತ್ತ ವೇದಿಕೆಯಮೇಲೆ ಮಂಡಿಸಿದ್ದರು.

ನೂಕುನುಗ್ಗಲಿನಲ್ಲಿ ತಮ್ಮ ಅಂಗವಸ್ತ್ರ ವೆಂಕಟಪ್ಪಯ್ಯ ಕಳೆದು ಕೊಂಡಿದ್ದರು. ಒಂದು ಮಾನಪತ್ರ ದೊಡ್ಡ ಖಾದಿ ಬಟ್ಟೆಯ ಮೇಲೆ ಅಚ್ಚಾಗಿತ್ತು. ಅದನ್ನೇ ಗಾಂಧೀಜಿ ಹೊದ್ದುಕೊಳ್ಳಲು ವೆಂಕಟಪ್ಪಯ್ಯನವರ ಕಡೆ ಒಗೆದರು. "ಅಂತೂ ಬಂದಿರಲ್ಲ" ಎಂದು ಗಾಂಧೀಜಿ ಹಾಸ್ಯಮಾಡಿದರು.

ಬಿಡುವಿಲ್ಲದ ಕಾರ್ಯಕ್ರಮ ಮುಗಿಯುವಷ್ಟರಲ್ಲಿ ಬೆಳಗ್ಗೆ 3 ಘಂಟೆಯಾಗಿತ್ತು. ಬೆಳಿಗ್ಗೆ 6 ಘಂಟೆಗೆ ಬಂದು ಹೊರಡುವ ಗಾಡಿಯಲ್ಲಿ ಗುಂತಕಲ್ಲಿಗೆ ಹೋಗುವುದೆಂದು ಗೊತ್ತಾಗಿತ್ತು. ಬೆಳಗಿನ ಗಾಡಿ ಹಿಡಿಯಲು ಸ್ಟೇಷನ್ನಿನಲ್ಲೇ ಮಲಗುವುದು ಎಂದು ಎಲ್ಲರೂ ಬೆಳಗಿನ 3 ಘಂಟೆಗೆ ಸ್ಟೇಷನ್ ಸೇರಿದರು. ಒಂದು ಮೂಲೆಯಲ್ಲಿ ವೆಂಕಟಪ್ಪಯ್ಯ ಕಾಲು ಮುದುಡಿಕೊಂಡು ಮಲಗಿದರು. ಎಲ್ಲಿ ಮಲಗಿದ್ದಾರೆ ಎಂದು ಹುಡುಕಿನೋಡಿ ತದನಂತರ ಒಂದು ಘಂಟೆ ವಿಶ್ರಾಂತಿ ಪಡೆಯಲು ಗಾಂಧೀಜಿ ಮಲಗಿದರು. ಕಾರ್ಯಕ್ರಮದಂತೆ ನಡೆದುಕೊಳ್ಳಲು ಮಹಾತ್ಮರು ಪಡುತ್ತಿದ್ದ ಶ್ರಮಕ್ಕೆ ಇದೊಂದು ನಿದರ್ಶನ.

ಬೆಳಿಗ್ಗೆ 6 ಘಂಟೆಗೆ ಗುಂತಕಲ್ಲಿನ ಕಡೆ ಹೊರಡುವ ರೈಲು ಬಂತು. ಈಗ ಲಾದರು ವಿಶ್ರಾಂತಿ ಪಡೆಯಲೆಂದು ರೈಲ್ವೆ ಅಧಿಕಾರಿಗಳು ಎರಡನೇ ದರ್ಜೆ ಡಬ್ಬಿ ಯಲ್ಲಿ ಪ್ರಯಾಣ ಮಾಡುತ್ತಿದ್ದವರನ್ನು ಮಹಾತ್ಮರಿಗಾಗಿ ಗಾಡಿ ಖಾಲಿ ಮಾಡು ವಂತೆ ಕೇಳಿಕೊಂಡರು. ಯಾರುತಾನೆ ಒಲ್ಲೆ ಎಂದಾರು. ಅವರೆಲ್ಲ ಮೂರನೆಯ ತರಗತಿಯ ಡಬ್ಬಿಗೆ ಹೋದರು. ತಮಗಾಗಿ ಪ್ರಯಾಣಿಕರು ಡಬ್ಬಿ ಖಾಲಿ ಮಾಡಿದ್ದು ಗಾಂಧಿಯವರಿಗೆ ತಿಳಿಯಿತು. ಖಾಲಿ ಮಾಡಲ್ಪಟ್ಟ ಎರಡನೇ ದರ್ಜೆ ಗಾಡಿ ಏರಲು ನಿರಾಕರಿಸಿ ಮೂರನೇ ದರ್ಜೆ ಗಾಡಿ ಏರಿದರು.

ಗುಂತಕಲ್ ಬಂತು. ಆದವಾನಿಗೆ ಹೋಗುವ ಗಾಡಿ ದೂರದ ಆಚೆಬದಿ ಯಲ್ಲಿ ಹೊರಡಲು ಸಿದ್ಧವಾಗಿ ನಿಂತಿತ್ತು. ಮೆಟ್ಟಲು ಏರಿ ಇಳಿದು ಅಷ್ಟುದೂರ ನಡೆಯ ಬೇಕು. ಸಾಮಾನು ಸಾಗಿಸಲು 'ಕೂಲಿ, ಕೂಲಿ' ಎಂದು ಸಂಗಡಿಗರು ಕೂಗಿದರು. ಸದ್ದುಗದ್ದಿಲ್ಲದೆ ಒಂದು ಮೂಟೆ ಹೊತ್ತು, ಹಮಾಲಿಗೆ ಕಾಯದೆ ಗಾಂಧೀಜಿ ನಡೆದರು. ಉಪಾಯಕಾಣದೆ ಮಿಕ್ಕವರೆಲ್ಲ ಮೂಟೆ ಹೊತ್ತು ಮಹಾತ್ಮರನ್ನು ಹಿಂಬಾಲಿಸಿದರು. ಹಣ ಮತ್ತು ವೇಳೆ ಉಳಿಯಿತು. "ಮಹಾಜನೋ ಏನ ಗಥಾಃ ಸ ಪಂಥಾಃ"

ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮವನ್ನು ಮುಚ್ಚಿ ತಮ್ಮ ಪತ್ನಿ, ಪುತ್ರ ಮತ್ತು ಆಶ್ರಮವಾಸಿಗಳೊಡನೆ ಕವಿ ರವೀಂದ್ರರ ಶಾಂತಿನಿಕೇತನಕ್ಕೆ ಬಂದರು. ಹಲವಾರು

ಪ್ರಯೋಗಗಳನ್ನು ನಡೆಸುತ್ತ ಕೆಲವು ದಿನ ಅಲ್ಲಿ ಉಳಿದಿದ್ದರು. ಇಷ್ಟರಲ್ಲಿ ಗೋಖಲೆ ಯವರು ದಿವಂಗತರಾದ ಸುದ್ದಿ ಮುಟ್ಟಿತು. ಕೂಡಲೇ ಕಸ್ತೂರಿಬಾ, ಅವರೊಡನೆ ರೈಲಿನಲ್ಲಿ ಪುಣೆಗೆ ಹೊರಟರು. ಬರ್ದವಾನವರೆಗೆ ಆಂಡ್ರೂಸ್ ಅವರ ಸಂಗಡ ಪ್ರಯಾಣ ಮಾಡಿದರು.

ಗೋಖಲೆ ಅವರು ಮೂರನೇ ತರಗತಿಯಲ್ಲಿ ಪ್ರಯಾಣ ಮಾಡಬೇಡಿ ಎಂದರೂ ಗಾಂಧೀಜಿ ಅದಕ್ಕೆ ಕಿವಿಗೊಡಲಿಲ್ಲ. ಅನುಭವದಿಂದ ಈ ದರ್ಜೆಯಲ್ಲಿ ಪ್ರಯಾಣ ಸಾಕು ಸಾಕು ಎಂದು ನೀವೇ ಕೊನೆಗಾಣಿಸುವಿರಿ ಎಂದು ಗೋಖಲೆ ತಮಾಷೆ ಮಾಡುತ್ತಿದ್ದರು. ಬರ್ದವಾನಿನಲ್ಲಿ ಇದು ಅನುಭವಕ್ಕೆ ಬಂತು.

ಬರ್ದವಾನಿನಲ್ಲಿ ಗಾಡಿ ಬದಲಾಯಿಸಬೇಕಾಗಿತ್ತು. ಟಿಕೆಟ್ ಕೊಳ್ಳಬೇಕು. ಮೂರನೇ ದರ್ಜೆಯವರಿಗೆ ರೈಲು ಬಂದ ಮೇಲೆ ಟಿಕೆಟ್ ಕೊಡಲು ಪ್ರಾರಂಭಿಸುತ್ತಾರೆ ಎಂದರು ಅಲ್ಲಿದ್ದ ಪ್ರಯಾಣಿಕರು. ಸ್ಟೇಷನ್ ಮಾಸ್ತರನ್ನು ಪತ್ತೆಹಚ್ಚುವುದೂ ಕಷ್ಟವೇ ಆಗಿತ್ತು. ಯಾರ ಸಹಾಯದಿಂದಲೋ ಅವರನ್ನು ಪತ್ತೆಮಾಡಿ ಅವರ ಬಳಿಗೆಹೋಗಿ ಟಿಕೀಟುಕೊಡುವಂತೆ ಪ್ರಾರ್ಥಿಸಿದರು. ಗಾಡಿ ಬರಲಿ, ಆಮೇಲೆ ಕೊಡಲಾಗುತ್ತೆ ಎಂದರು ಅವರು. ಟಿಕೀಟು ಕೊಡುವ ಕಿಟಕಿಯ ಬಾಗಿಲು ಅವರು ತೆಗೆದರು. ಕೂಡಲೆ ಎಲ್ಲ ಪ್ರಯಾಣಿಕರೂ ಕಿಟಕಿಯತ್ತ ಧಾವಿಸ ತೊಡಗಿದರು. ಗಾಂಧಿಯವರು ಟಿಕೀಟುಕೊಳ್ಳಲು ಮುಂದೆ ಹೋದರು. ನೂಕು ನುಗ್ಗಲಲ್ಲಿ ಇವರು ಹಿಂದಕ್ಕೆ ತಳ್ಳಲ್ಪಡುತ್ತಿದ್ದರು. ಕಟ್ಟಕಡೆಯ ಟಿಕೆಟ್ ಕೊಂಡವರು ಇವರೇ ಆದರು.

ಗಾಡಿ ಬಂತು. ಒಳಕ್ಕೆ ತೂರಿಕೊಳ್ಳಲು ಬಹಳ ಪ್ರಯತ್ನಿಸಿದರು. ಒಳಗಿದ್ದವರಿಗೂ, ಒಳಕ್ಕೆ ತೂರಲು ಪ್ರಯತ್ನಿಸುತ್ತಿದ್ದವರಿಗೂ ಹೊಡೆದಾಟ ಬೈದಾಟ ನಡೆಯುತ್ತಿತ್ತು. ಗಾಂಧಿ ಮತ್ತು ಕುಟುಂಬದವರು ಡಬ್ಬಿಯಿಂದ ಡಬ್ಬಿಗೆ ಓಡಾಡಿದರು. 'ಇಲ್ಲಿ ಜಾಗವಿಲ್ಲ, ಬೇರೆ ಡಬ್ಬಿಗೆ ಹೋಗಿ' ಹೀಗೆ ಪ್ರತಿಯೊಂದು ಡಬ್ಬಿಯವರೂ ಇವರನ್ನು ಒಳಕ್ಕೆ ಬಿಡುತ್ತಿರಲಿಲ್ಲ. ಕಡೆಗೆ ಗಾರ್ಡನ ಮೊರೆ ಹೊಕ್ಕರು. "ನಿಮ್ಮ ಪ್ರಯತ್ನದಿಂದ ಒಳಕ್ಕೆ ತೂರಿಕೊಳ್ಳಬೇಕು. ಸಾಧ್ಯವಾಗದಿದ್ದರೆ ಬರಲಿರುವ ಇನ್ನೊಂದು ಗಾಡಿಯಲ್ಲಿ ಬನ್ನಿ" ಎಂದು ಅವನು ಉತ್ತರಿಸಿದ.

"ನನಗೆ ಜರೂರು ಕೆಲಸವಿದೆ. ನಾನು ಕೂಡಲೇ ಹೋಗಬೇಕು" ಎಂದರು ಗಾಂಧೀಜಿ, ನಮ್ರತೆಯಿಂದ. ಈ ಮಾತುಗಳನ್ನು ಅವನು ಕಿವಿಗೇ ಹಾಕಿಕೊಳ್ಳಲ್ಲಿಲ್ಲ .ಗಾಂಧೀಜಿ ಗಾಬರಿಗೊಂಡರು. "ಯಾವುದಾದರೂ ಡಬ್ಬಿಗೆ ತೂರಿಕೋ"

ಎಂದು ಕೂಗಿ ಹೇಳಿದರು ಮಗ ಮಗನಲಾಲನಿಗೆ. ಗಾಂಧೀ ಮತ್ತು ಕಸ್ತೂರಿಬಾ 'ಇಂಟರ್‌ಮೀಡಿಯಟ್' ಡಬ್ಬಿಗೆ ಹತ್ತಿಕೊಂಡರು. ಗಾರ್ಡು ಇದನ್ನು ಗಮನಿಸಿದ. ಗಾಡಿ ಹೊರಟಿತು.

ಅಸನ್‌ಸಾಲ್ ಸ್ಟೇಷನ್ ಬಂತು. ಗಾರ್ಡು ಬಂದ. ಇಂಟರ್ ಗಾಡಿಯಲ್ಲಿ ಪ್ರಯಾಣಮಾಡಿದ್ದರಿಂದ ಹೆಚ್ಚುವರಿ ಕೊಡುವಂತೆ ಕೇಳಿದ. "ನಮಗೆ ಸ್ಥಾನ ಕೊಡಿಸುವುದು ನಿನ್ನ ಕರ್ತವ್ಯ. ನಮಗೆ ಮೂರನೆ ದರ್ಜೆ ಡಬ್ಬಿಯಲ್ಲಿ ಸ್ಥಾನ ದೊರೆಯಲಿಲ್ಲ. ಆದ್ದರಿಂದ ಈ ಡಬ್ಬಿಗೆ ಹತ್ತಬೇಕಾಯಿತು. ಮೂರನೇ ತರಗತಿ ಯಲ್ಲಿ ಸ್ಥಳ ಕೊಡಿಸಿದರೆ, ಸಂತೋಷದಿಂದ ಅಲ್ಲಿಗೆ ಹೋಗುತ್ತೇವೆ," ಹೀಗೆ ತಿಳಿಸಿ ದರು ಗಾಂಧೀಜಿ.

"ನನ್ನೊಡನೆ ವಾದಿಸಲಾಗದು. ಮೂರನೆ ತರಗತಿಯಲ್ಲಿ ಸ್ಥಾನ ನಾನು ಕೊಡಿಸ ಲಾರೆ. ಹೆಚ್ಚುವರಿ ಹಣ ಕೊಡಿ, ಇಲ್ಲವೇ ಗಾಡಿಯಿಂದ ಇಳಿಯಿರಿ" ಹೀಗೆ ಆರ್ಭಟಿ ಸಿದ ಗಾರ್ಡು.

ಹೇಗಾದರೂ ಮಾಡಿ ಬೇಗ ಪುಣೆ ಮುಟ್ಟಬೇಕಾಗಿತ್ತು. ಆದ್ದರಿಂದ ಗಾರ್ಡಿ ನೊಡನೆ ಹೋರಾಡಲು ಇದು ಸಮಯವಲ್ಲವೆಂದು ಗಾರ್ಡಿನ ಬೇಡಿಕೆಯಂತೆ ಪುಣೆ ವರೆಗೆ ಇಂಟರಿನ ಪ್ರಯಾಣದ ಹೆಚ್ಚಿನ ದರ ಗಾಂಧೀಜಿ ಸಲ್ಲಿಸಿದರು.

ಬೆಳಿಗ್ಗೆ ರೈಲು ಮೊಗಲಸರಾಯಿ ತಲುಪಿತು. ಮಗನ್‌ಲಾಲ್ ಮೂರನೆ ದರ್ಜೆಯಲ್ಲಿ ಸ್ಥಳಮಾಡಿಕೊಂಡಿದ್ದ. ಗಾಂಧೀ ಮತ್ತು ಕಸ್ತೂರಿಬಾ ಅವನ ಬಳಿ ಹೋಗಿ ಕುಳಿತರು. ಟಿಕೀಟು ಅನ್ವೇಷಕ ಬಂದ. ನಡೆದ ವಿಷಯವನ್ನೆಲ್ಲ ಅವನಿಗೆ ತಿಳಿಸಿ, ಮೊಗಲಸರಾಯಿನಲ್ಲಿ ಇಂಟರ್ ಗಾಡಿಯಿಂದ ಮೂರನೇ ತರಗತಿ ಬಂದು ದಕ್ಕೆ 'ಸರ್ಟಿಫಿಕೇಟ್' ಕೊಡುವಂತೆ ಕೇಳಿದರು. ಕೊಡಲು ಅವನು ನಿರಾಕರಿಸಿದ.

ಈ ವಿಷಯವೆಲ್ಲವನ್ನು ಸಂಗ್ರಹಿಸಿ ರೈಲ್ವೆಯ ಉನ್ನತ ಅಧಿಕಾರಿಗಳಿಗೆ, ತಾನು ಸಲ್ಲಿಸಿದ್ದ ಹೆಚ್ಚುವರಿ ಹಣ ಹಿಂದಕ್ಕೆ ಕೊಡುವಂತೆ ಪತ್ರ ಬರೆದರು. "ಸರ್ಟಿಫಿಕೇಟು ಇಲ್ಲದೆ ಸಲ್ಲಿಸಿದ ಹೆಚ್ಚುವರಿಯನ್ನು ಪರತ್ ಕೊಡುವುದು ನಮ್ಮ ಪದ್ಧತಿಯಲ್ಲ. ಆದರೆ ನಿಮ್ಮ ವಿಷಯದಲ್ಲಿ ನಾವು ವಿನಾಯಿತಿ ತೋರಿಸುತ್ತೇವೆ. ಆದರೂ ಬರ್ದವಾನ್ ಇಂದ ಮೊಗಲ್‌ಸರಾಯಿವರೆಗೆ ಇಂಟರ್ ತರಗತಿಯಲ್ಲಿ ಮಾಡಿದ ಪ್ರಯಾಣದ ಹೆಚ್ಚುವರಿ ವಾಪಸ್ಸು ಕೊಡಲು ಸಾಧ್ಯವಾಗದು" ಹೀಗೆ ಉತ್ತರ ಬಂತು.

"ಮೂರನೇ ದರ್ಜೆ ಪ್ರಯಾಣಿಕರ ಸಂಕಟಗಳಿಗೆ ರೈಲ್ವೆ ಅಧಿಕಾರಿಗಳ ದಬ್ಬಾಳಿ ಕೆಯೇ ಮುಖ್ಯಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ಪ್ರಯಾ

ಣಿಕರ ಒರಟುತನ, ಅಸ್ವಚ್ಛತೆ, ಸ್ವಾರ್ಥ, ತಿಳಿಗೇಡಿತನ ಇವೆಲ್ಲವೂ ಅಲ್ಪ ಕಾರಣಗಳಲ್ಲ. ತಾವು ಒರಟಾಗಿ, ಅಶುಚಿಯಾಗಿ, ಸ್ವಾರ್ಥಿಯಾಗಿ ವರ್ತಿಸುವುದು ಪ್ರಯಾಣಿಕರ ಗಮನಕ್ಕೇ ಬರುವುದಿಲ್ಲ. ಎಲ್ಲವೂ ಸಹಜವೆಂದೇ ಅವರ ಭಾವನೆ. ವಿದ್ಯಾವಂತರು ಪ್ರಯಾಣಿಕರಲ್ಲಿ ಹೊಂದಿರುವ ಧೋರಣೆ ಇವೆಲ್ಲಕ್ಕೂ ಮೂಲ ವೆಂದು ಹೇಳಬಹುದು". ಇದು ಗಾಂಧಿಯವರ ಅಭಿಪ್ರಾಯ.

ಕಲ್ಯಾಣ ನಿಲ್ದಾಣಕ್ಕೆ ಗಾಂಧೀಜಿ ದಣಿದು ಸುಸ್ತಾಗಿ ಮುಟ್ಟಿದರು. ಸ್ಟೇಷನ್ ನಳದ ನೀರು ಬಳಸಿ ಗಾಂಧೀಜಿ ಮತ್ತು ಮಗನಲಾಲ್ ಸ್ನಾನಮಾಡಿದರು. ಇಷ್ಟ ರಲ್ಲಿ 'ಸರ್ವೆಂಟ್ ಆಫ್ ಇಂಡಿಯಾ' ಸಂಸ್ಥೆಯ ಕೌಲ್ ಬಂದರು. ಅವರೂ ಪುಣೆಗೆ ಹೋಗುತ್ತಿದ್ದರು. ನಳದ ಕೆಳಗೆ ಕಸ್ತೂರಿ ಬಾ ಅವರನ್ನೂ ಸ್ನಾನಕ್ಕೆ ಒಯ್ಯಲು ಗಾಂಧೀಜಿ ತವಕ ಪಡಿಸುತ್ತಿದ್ದರು. ಎರಡನೆಯ ದರ್ಜೆ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಕೌಲ್ ಶ್ರೀಮತಿಯವರಿಗೆ ದ್ವಿತೀಯ ತರಗತಿಯ ಸ್ನಾನ ಗೃಹಕ್ಕೆ ಕರೆದೊಯ್ಯುವುದಾಗಿ ತಿಳಿಸಿದರು. ಈ ಸೌಲಭ್ಯ ಪಡೆಯುವ ಹಕ್ಕು ಇವರಿಗೆ ಇರಲಿಲ್ಲ. ಕಸ್ತೂರಿಬಾ ಅವರು ಈ ಅನುಕೂಲತೆ ಬಳಸಿಕೊಳ್ಳಲು ಕಾತರರಾಗಿ ಇರಲಿಲ್ಲ. ಬಳಸಿಕೊಳ್ಳುವುದು ಸತ್ಯೋಪಾಸಕನಿಗೆ ತಕ್ಕುದಲ್ಲವಾದರೂ, ಹೆಂಡತಿಗೆ ಅನುಕೂಲಮಾಡಿಕೊಡಬೇಕೆಂಬ ಭಾವನೆ ಸತ್ಯವನ್ನು ಮರೆಮಾಚಿತು. ಸತ್ಯವು ಹೊನ್ನಿನ ಮಾಯೆಯ ತೆರೆಯಮರೆಯಲ್ಲಿ ಅಡಗಿದೆ ಎನ್ನುತ್ತದೆ ಉಪನಿಷತ್. "ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿ ಹಿತಂಮುಖಂ".

ಹರಿದ್ವಾರದಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಕುಂಭಮೇಳ ಲಕ್ಷಾಂತರ ಹಿಂದೂ ಯಾತ್ರಿಕರನ್ನು ಆಕರ್ಷಿಸುತ್ತದೆ. 1915ರಲ್ಲಿ ಗಾಂಧೀಜಿ ಫೀನಿಕ್ಸ್ ಆಶ್ರಮವಾಸಿಗಳೊಡನೆ ಕಲ್ಕತ್ತಾದಿಂದ ಹರಿದ್ವಾರಕ್ಕೆ ಹೊರಟರು. ಈ ಪ್ರಯಾಣದಲ್ಲಿ ಅನುಭವಿಸಿದ ಅಪಾರ ತೊಂದರೆ ಆತ್ಮಕಥೆಯಲ್ಲಿ ವರ್ಣಿಸಿರುತ್ತಾರೆ. ಸಹ್ರಾನಪುರದಿಂದ ಬೆಳೆಸಿದ ಪ್ರಯಾಣ ನರಕಯಾತನೆಯಾಗಿತ್ತು. ತೆರೆದ ಉಕ್ಕಿನ ವ್ಯಾಗನ್ ಡಬ್ಬಿಗಳಲ್ಲಿ ಕೂತುನಿಂತು ಪ್ರಯಾಣ. ತಲೆಯ ಮೇಲೆ ಮಧ್ಯಾಹ್ನ ತಲೆಸಿಡಿಯುವ ಸೂರ್ಯನ ಪ್ರಖರಕಿರಣ. ಕೆಳಗೆ ಕಾದ ಕಬ್ಬಿಣ. ಬಾಂಡ್ಲೆ ಯಲ್ಲಿ ಕರೆದಂತಾಗಿತ್ತು ಇವರ ಸ್ಥಿತಿ. ತಡೆಯಲಾಗದ ಬಾಯಾರಿಕೆ. ಇಂಥ ಭೀಕರ ಸ್ಥಿತಿಯಲ್ಲೂ ಹಿಂದೂ ಧಾರ್ಮಿಕರು ಹಿಂದೂಗಳು ಕೊಡುವ ನೀರನ್ನೇ ಕುಡಿಯಬೇಕು. ನಿಲ್ದಾಣಗಳಲ್ಲಿ ಕೇಳಿಸುವ ಕೂಗು "ಹಿಂದೂ ಪಾನಿ," "ಮುಸ್ಲಿಂ ಪಾನಿ". ಸಂಪ್ರದಾಯವಾದಿಗಳು ಹಿಂದೂ ನೀರೇ ಕುಡಿಯಬೇಕು. ಆದರೆ ಇದೇ ಹಿಂದೂಗಳು, ತಾವು ಕಾಯಿಲೆಯಾದಾಗ, ವೈದ್ಯ, ಕಿರಿಸ್ತಾನ ಅಥವಾ ಮುಸಲ್ಮಾನನೇ ಇರಲಿ, ಕೊಡುವ ಔಷಧಿ ಮಾದಕ ದ್ರವವೇ ಇರಲಿ, ದನದ

ಮಾಂಸದ ಸಾರವೇ ಇರಲಿ. ಅದೇನು ಎಂದು ವಿಚಾರಿಸದೆ ಅವರು ಕೊಡುವ ಬಣ್ಣದ ನೀರನ್ನು ಹಿಂದು-ಮುಂದು ನೋಡದೆ ಸೇವಿಸುವರು.

ರೈಲು ಪ್ರಯಾಣದ ಅನುಭವ ಹೀಗಿದ್ದರೆ ಜಹಜಿನ ಪ್ರಯಾಣ ಇದ್ದಕ್ಕಿಂತ ಉತ್ತಮವೇನೂ ಇರಲಿಲ್ಲ. ಕಲ್ಕತದಿಂದ ರಂಗೂನಿಗೆ ಜಹಜಿನ ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡಿದರು. ಸ್ವಚ್ಛತೆಗೆ ಸ್ವಲ್ಪವೂ ಗಮನವಿಲ್ಲ. ಪ್ರಯಾಣಿಕರಿಗೆ ಅಗತ್ಯವಾದ ಕನಿಷ್ಠ ಸೌಲಭ್ಯಗಳೂ ಅಲಭ್ಯವಾಗಿದ್ದುವು. ಹೆಸರಿಗೊಂದು ಸ್ನಾನದ ಮನೆ. ಸಹಿಸಲಸಾಧ್ಯವಾದ ಕೊಳಕು. ದುರ್ನಾತದ ಪಾಯಿಖಾನೆ. ಅಲ್ಲಿಗೆ ಹೋಗಲು ಮೂತ್ರ ಮತ್ತು ಹೇಸಿಗೆಯ ಮೇಲೆ ನಡೆದು ಹೋಗಬೇಕು. ಅಥವಾ ಮಲ ತುಳಿಯದೆ ದಾಟಿಹೋಗಬೇಕು. ಇದನ್ನೆಲ್ಲ ಸಹಿಸಿಕೊಳ್ಳುವುದು ದುಸ್ತರವಾಗಿತ್ತು. ಜಹಜಿನ ಮುಖ್ಯಾಧಿಕಾರಿಯನ್ನು ಕಂಡು ಈ ದುಸ್ಸಹ ಗಲೀಜು ನಿವಾರಿಸುವಂತೆ ಪ್ರಾರ್ಥಿಸಿದರು. ಏನೂ ಪ್ರಯೋಜನವಾಗಲಿಲ್ಲ. ಇದು ಸಾಲದೆಂದು ಯೋಚನೆಯಿಲ್ಲದ ಜನ ತಮ್ಮ ನಡತೆಯಿಂದ ಮತ್ತಷ್ಟು ಗಲೀಜು ಸೇರಿಸುತ್ತಿದ್ದರು. ಕುಳಿತಕಡೆ ಉಗಿಯುವರು. ತಾಂಬೂಲ ಚರ್ವಣ ನಡೆಯಬೇಕು. ಬೀಡಿ ತುಣುಕುಗಳ ರಾಶಿ. ಊಟ ಮಾಡಿದ ಎಂಜಲು ಅಲ್ಲಿಯೇ. ಸದ್ದುಗದ್ದಲಕ್ಕೆ ಮಿತಿ ಇಲ್ಲ. ಆದಷ್ಟು ಸ್ಥಳ ಆಕ್ರಮಿಸಿಕೊಳ್ಳಲು ಪ್ರತಿಯೊಬ್ಬರೂ ಪ್ರಯತ್ನಿಸುವರು. ಜನಕ್ಕಿಂತ ಸಾಮಾನು ಅಧಿಕಸ್ಥಳ ತೆಗೆದುಕೊಳ್ಳುವುದು. ಎರಡು ದಿನ ಈ ಸಂಕಟ ಅನುಭವಿಸಬೇಕಾಯಿತು. ರಂಗೂನು ಸೇರಿದ ಮೇಲೆ ಮೂರನೆ ದರ್ಜೆಯ ಪ್ರವಾಸಿಗರ ಈ ತೊಂದರೆಗಳನ್ನು ಕಂಪನಿಯ ಏಜಂಟರ ಗಮನಕ್ಕೆ ಪತ್ರಬರೆದು ತಂದರು. ಪತ್ರದ ಪ್ರಭಾವ ಮತ್ತು ಡಾಕ್ಟರ ಮೆಹಥಾ ಅವರ ಪ್ರಯತ್ನದಿಂದ ಮರುಪ್ರಯಾಣದ ಕಷ್ಟ ಸ್ವಲ್ಪ ಸುಧಾರಿಸಿತು.

ಸಾಮಾನ್ಯವಾಗಿ ನಮ್ಮ ರೈಲುಗಳಲ್ಲಿ ಮೂರು ದರ್ಜೆಗಳಿವೆ. ಮೊದಲನೆಯದು ಶ್ರೀಮಂತರಿಗೆ, ಎರಡನೆಯದು ಮಧ್ಯಮ ವರ್ಗಕ್ಕೆ, ಮೂರನೆಯದು ಬಡವರಿಗೆ. ಗಾಂಧೀಜಿ ಬಡವರ ಪ್ರತಿನಿಧಿ. ಆದ್ದರಿಂದ ಮೂರನೆ ತರಗತಿಯ ಗಾಡಿಯಲ್ಲಿ ಪ್ರಯಾಣ ಮಾಡುವರು. ತಾನು ಮತ್ತು ಇತರ ಬಲ್ಲವರು ಮೂರನೆಯ ತರಗತಿಯಲ್ಲಿ ಪ್ರಯಾಣ ಮಾಡುವುದರಿಂದ ಪರಿಸ್ಥಿತಿ ಸುಧಾರಿಸೀತು. ಇದು ಅವರ ಉದ್ದೇಶ.

ಗಾಂಧೀಜಿ ಪುಣೆಯಿಂದ ಬೊಂಬಾಯಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ದಾದರ್ ಸ್ಟೇಷನ್‌ವರೆಗೆ ಮಾತ್ರ ಅವರಲ್ಲಿ ಟಿಕೀಟು ಇತ್ತು. ಬೊಂಬಾಯಿಗೆ ಸೇರಿದ ಮಸ್‌ಜಿದ್ ಸ್ಟೇಷನ್‌ವರೆಗೆ ಪ್ರಯಾಣ ಮಾಡ ಬಯಸಿದರು.

ಇದನ್ನು ಗಾರ್ಡಿಗೆ ತಿಳಿಸಿ, ಹೆಚ್ಚಿದ ದೂರದ ವೆಚ್ಚ ಕೊಡುವುದಾಗಿ ತಿಳಿಸಿದರು. ಮಸ್‌ಜಿದ್ ಸ್ಟೇಷನ್‌ಗೆ ಗಾಡಿ ಬಂದಾಗ ಇಳಿದರು. ಹೊರಕ್ಕೆ ಹೋಗುವ ಬಾಗಿಲ ಬಳಿ ಬಂದರು. ಟಿಕೀಟು ಕಲೆಕ್ಟರಿಗೆ ಟಿಕೀಟು ತೋರಿಸಿದರು. ಪಾದರ್‌ವರೆಗೆ ಮಾತ್ರ ಪ್ರಯಾಣ ಮಾಡಬಹುದಾದ ಟಿಕೀಟು ಅದು. ಅಧಿಕ ದೂರ ಪ್ರಯಾಣ ಮಾಡಿರುವಿರಿ. ಆದ್ದರಿಂದ ದಂಡ ಸೇರಿ ಎರಡೂವರೆ ಆಣೆ ಕೊಡುವಂತೆ ಟಿಕೀಟು ಕಲೆಕ್ಟರ್ ಕೇಳಿದ.

ಮಹಾತ್ಮರೆಂದು ವಿಶ್ವಖ್ಯಾತಿ ಗಾಂಧೀಜಿ ಆಗ ಪಡೆದಿರಲಿಲ್ಲ. ಎಲ್ಲರೂ ಇವರನ್ನು ಗುರುತಿಸಬಲ್ಲವರಾಗಿರಲಿಲ್ಲ. ಸರ್ವಸಾಮಾನ್ಯರಂತೆ ಅವರು ಷರಟು ತೊಟ್ಟಿದ್ದರು. ಬರಿಗಾಲು, ಚಪ್ಪಲಿಯೂ ಇರಲಿಲ್ಲ. ಗೋಖಲೆ ತೀರಿಕೊಂಡ ದಿನದಿಂದ ಒಂದು ವರ್ಷಕಾಲ ಪಾದರಕ್ಷೆ ಧರಿಸುವುದಿಲ್ಲವೆಂದು ತೀರ್ಮಾನಿಸಿದ್ದರು. ಹೆಗಲಿನಿಂದ ಒಂದು ಖಾದಿಚೀಲ ತೂಗಾಡುತ್ತಿತ್ತು.

ದಾದರಿನಿಂದ ಮಸ್‌ಜಿದ್ ನಿಲ್ದಾಣಕ್ಕೆ ಐದು ಪೈಸೆ ಮಾತ್ರ. ಪ್ರಯಾಣ ಬೆಳೆಸುವುದನ್ನು ಗಾರ್ಡಿಗೆ ತಿಳಿಸಿರುವೆ. ಆದ್ದರಿಂದ ದಂಡ ತೆರಬೇಕಾದ್ದಿಲ್ಲ. ತಾನು ಅಪರಾಧ ಮಾಡಿಲ್ಲ ಎಂದು ವಾದಿಸಿದರು. ಅಷ್ಟಕ್ಕೇ ಸಾಲದೆ ಚೀಲದಿಂದ ರೈಲಿನ ವೇಳಾಪಟ್ಟಿ ಮತ್ತು ದರ ಸೂಚಿಸುವ ಪುಸ್ತಕ ಹೊರ ತೆಗೆದು ತನ್ನ ನಡತೆ ಸಮರ್ಥಿಸಿಕೊಂಡರು. "ಗಾರ್ಡಿನಿಂದ ಅಧಿಕ ಪ್ರಯಾಣದ ಅನುಮತಿ ಚೀಟಿ ತನ್ನಿ" ಎಂದ ಟಿಕೀಟು ಕಲೆಕ್ಟರ್. ಆಗಲಿ ಎಂದು ಗಾರ್ಡನ್ನು ನೋಡಲು ಹೋದರು. ಅವನು ಚೀಟಿಕೊಡಲು ನಿರಾಕರಿಸಿದ. ಮತ್ತೆ ಹಿಂತಿರುಗಿ ಬಂದು ಈ ವಿಷಯ ಅವನಿಗೆ ತಿಳಿಸಿ, ನಾನು ಸುಳ್ಳಾಡುವುದಿಲ್ಲ. "ಈಗ ಏನು ಮಾಡೋಣ" ಎಂದು ಕೇಳಿದರು. ಐದು ಕಾಸಿಗಾಗಿ ಇಷ್ಟು ಹಟ ಮಾಡುತ್ತಿರುವ ಈ ವ್ಯಕ್ತಿಯಾರು ಎಂಬ ಕುತೂಹಲ ಕೆರಳಿ, ನಿಮ್ಮ ಹೆಸರೇನು ಎಂದು ಕೇಳಿದ. ನನ್ನ ಹೆಸರು ಮೋಹನದಾಸ ಕರಮ ಚಂದ್ ಗಾಂಧಿ ಎಂದ ಆ ವ್ಯಕ್ತಿ. ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ನಡೆಸಿದ್ದ ಆಂದೋಳನ ಹಿಂದಿನ ದಿನವೇ ಪತ್ರಿಕೆಗಳಲ್ಲಿ ಅವನು ಓದಿದ್ದ. "ತಾವು ಯಾರೆಂದು ತಿಳಿದಿರಲಿಲ್ಲ ಕ್ಷಮಿಸಿ. ತಾವು ಕೊಡ ಬೇಕಾದ ಹೆಚ್ಚುವರಿ ಹಣ ನಾನೇ ಕೊಡುವೆ" ಎಂದ. ಅದಕ್ಕೆ ಗಾಂಧೀಜಿ ಒಪ್ಪಲಿಲ್ಲ. ತಪ್ಪು ನಿನ್ನದಲ್ಲ. ನಿನ್ನ ಕರ್ತವ್ಯ ನೀನು ಪಾಲಿಸುತ್ತಿರುವೆ. ಹೀಗೆ ಹೇಳಿ ಐದು ಕಾಸು ಕೊಟ್ಟು ಅಲ್ಲಿಂದ ಹೊರಟರು. ಕೇವಲ ಎರಡೂವರೆ ಆಣೆ ಎಂದು ಉಪೇಕ್ಷಿಸಲಿಲ್ಲ. ಮಾತು ಉಳಿಸಿಕೊಂಡರು.

ಲಾರ್ಡ್ ವೇವಲ್ ಭಾರತದ ವೈಸರಾಯಿ. ರಾಜಕೀಯ ವಿಚಾರ ವಿನಿ ಮಯಕ್ಕಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಿಗೆ ಆಹ್ವಾನವಿತ್ತರು.

ಬಿಸಿಲುಕಾಲ. ವೈಸರಾಯರು ಸಿಮ್ಲಾದಲ್ಲಿ ಬಿಡಾರ ಹೂಡಿದ್ದರು. ಅಲ್ಲಿಗೆ ಬರಲು ಮುಖಂಡರಿಗಾಗಿ ಹವಾ ನಿಯಂತ್ರಣ ವ್ಯವಸ್ಥೆಯ ವಿಶೇಷ ರೈಲಿನ ವ್ಯವಸ್ಥೆ ಮಾಡಲಾಗಿತ್ತು. ನೆಹರು, ಪಟೇಲ್ ಮೊದಲಾದ ನಾಯಕರು ಹವಾ ನಿಯಂತ್ರಣ ಡಬ್ಬಿಗಳ ಸುಖಾಸನಗಳಲ್ಲಿ ಪ್ರಯಾಣ ಮಾಡುತ್ತಿದ್ದರು. ಆದರೆ ಗಾಂಧಿಯವರ ಪ್ರಯಾಣ ಎಂದಿನಂತೆ ಮೂರನೇ ದರ್ಜೆ ಡಬ್ಬಿಯಲ್ಲೇ. ದಿಲ್ಲಿಯಲ್ಲಿ ಅತಿ ಸೆಕೆ. ಸಿಮ್ಲಾದಲ್ಲಿ ಅತಿ ಚಳಿ. ಜಿಟ್ಟದ ತಪ್ಪಲಿನವರೆಗೂ ಬಿಸಿಲು, ದಗೆ, ಬೆವರು. ಆಮೇಲೆ ಚಳಿ. ಗಾಂಧೀಜಿ ನಿದ್ದೆ ಮಾಡಿ ಎರಡು ದಿನಗಳಾಗಿದ್ದುವು. ಪತ್ರಿಕಾ ಪ್ರತಿನಿಧಿಗಳೂ ಇದೇ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ದಯಮಾಡಿ ಹವಾ ನಿಯಂತ್ರಿತ ಗಾಡಿಯಲ್ಲಿ ಸುಖವಾಗಿ ನಿದ್ರಿಸಿ ಎಂದು ಸುದ್ದಿಗಾರರು ಪ್ರಾರ್ಥಿಸಿದರು. ತಾನು ಹೋಗುತ್ತಿರುವುದು ದರಿದ್ರ ನಾರಾಯಣನ ಪ್ರತಿನಿಧಿಯಾಗಿ. ಅವರಿಗೆ ಸುಖದ ಈ ಸೌಲಭ್ಯ ಲಭಿಸೀತೆ. ಅವರಿಗೆ ಎಟುಕಲಾಗದುದು ತನಗೂ ಬೇಡ. ಇದೇ ಅವರ ಬದುಕಿನ ಒರೆಗಲ್ಲು.

ಭಾರತದ ವೈಸರಾಯಿ ಲಾರ್ಡ್ ಮೌಂಟ್ ಬೇಟನ್ ಭಾರತಕ್ಕೆ ಮಾರ್ಚಿ 22, 1947ರಲ್ಲಿ ಬಂದರು. ಆಗ ಗಾಂಧೀಜಿ ಬಿಹಾರದಲ್ಲಿ ಶಾಂತಿ ಸ್ಥಾಪನೆಗಾಗಿ ಪ್ರವಾಸದಲ್ಲಿದ್ದರು. ವೈಸರಾಯರು ಕೂಡಲೇ ಹೊರಟು ಬರುವಂತೆ ಮಹಾತ್ಮರಿಗೆ ಪತ್ರ ಬರೆದರು. ಕೂಡಲೇ ಹೊರಟು ಬರಲು ಸಾಧ್ಯವಿಲ್ಲ, ಪ್ರವಾಸ ಮುಗಿಸಿ ಮಾರ್ಚ್ 30ಕ್ಕೆ ಹೊರಡುವುದಾಗಿ ಗಾಂಧೀಜಿ ತಿಳಿಸಿದರು. ಅಂತೆಯೇ 30 ನೆಯ ದಿನಾಂಕ ಪಾಟ್ನಾದಿಂದ ದಿಲ್ಲಿಗೆ ಎಂದಿನಂತೆ ಮೂರನೆಯ ದರ್ಜೆ ಗಾಡಿಯಲ್ಲಿ ಹೊರಟರು. ಮೌಂಟ್‌ಬೇಟನ್ ತಮ್ಮ ಯಾರ್ಕ್ ವಿಮಾನ ಕಳುಹಿಸಿಕೊಡಲು ಸಿದ್ಧವೆಂದು ಪತ್ರ ಬರೆದಿದ್ದರು. ಗಾಂಧೀಜಿ ಬೇಡವೆಂದರು. ಕಡೆಯವರೆಗೂ ಅವರು ವಿಮಾನ ಪ್ರಯಾಣ ಮಾಡಲೇ ಇಲ್ಲ. ವಿಶೇಷ ರೈಲಿನ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು. ಇದಕ್ಕೂ ಗಾಂಧೀಜಿ ಸಮ್ಮತಿಸಲಿಲ್ಲ. ಕಡೆಗೂ ಸಾಮಾನ್ಯ ಮೂರನೆ ತರಗತಿಯೇ. ಮನು ಇವರಿಗಾಗಿ ಎರಡು ಡಬ್ಬಿಗಳನ್ನು ಕಾದಿರಿಸಿದಳು, ಗಾಂಧೀಜಿ ಮತ್ತು ಪರಿವಾರಕ್ಕಾಗಿ. ಗಾಡಿ ಹತ್ತಿದ ಮೇಲೆ ಇದು ಅವರಿಗೆ ತಿಳಿಯಿತು. ಮುಂದಿನ ನಿಲ್ದಾಣದಲ್ಲಿ ರೈಲಿನಿಂದ ಇಳಿದು ಸ್ಟೇಷನ್ ಮಾಸ್ತರಲ್ಲಿಗೆ ಹೋಗಿ, ಒಂದಕ್ಕೆ ಬದಲಾಗಿ ಎರಡು ಡಬ್ಬಿಗಳನ್ನು ಕಾದಿರಿಸಿದುದು ತಪ್ಪಾಯಿತು. ಅರಿವಿಲ್ಲದ ಮನು ಈ ಕೆಲಸ ಮಾಡಿದ್ದಾಳೆ. ರೈಲಿನಲ್ಲಿ ಸ್ಥಳಾಭಾವದಿಂದ ಜನ ತೊಂದರೆಪಡುತ್ತಿರುವಾಗ ಎರಡು ಡಬ್ಬಿಗಳನ್ನು ಕಾದಿರಿಸಿಕೊಳ್ಳುವುದು ಅಪರಾಧ. ಹೀಗೆ ಹೇಳಿ ಒಂದು ಗಾಡಿ ಮುಕ್ತ ಮಾಡಿಕೊಟ್ಟರು. ಸ್ಟೇಷನ್ ಮಾಸ್ತರು ಇತರ ಪ್ರಯಾಣಿಕರಿಗಾಗಿ ಮತ್ತೊಂದು ಗಾಡಿ ಜೋಡಿಸಿ ಕೊಡುವುದಾಗಿ ಹೇಳಿದರೂ ಗಾಂಧೀಜಿ ಒಪ್ಪಲಿಲ್ಲ. "ನನ್ನ

ಮನದೋಟ ಇನ್ನು ನೀನು ಅರ್ಥಮಾಡಿಕೊಂಡಿರುವುದಿಲ್ಲವಲ್ಲ" ಎಂದು ಮನೂಗೂ ಸಾಕಷ್ಟು ಶಾಸ್ತಿ ಆಯಿತು.

ಗಾಂಧಿಯವರ ಜೊತೆ ಕಾರ್ಯದರ್ಶಿಗಳೂ ಇರಲಿಲ್ಲ. ಎಲ್ಲರನ್ನೂ ನವಾಖಲಿಯಲ್ಲಿ ಶಾಂತಿ ಸ್ಥಾಪನೆಗಾಗಿ ಬಿಟ್ಟು ಬಂದಿದ್ದರು. ಜೊತೆಯಲ್ಲಿ ಇದ್ದವಳು ಮನೂ ಒಬ್ಬಳೇ. ಆದ್ದರಿಂದ ಪತ್ರ ವ್ಯವಹಾರ ಇವರೇ ನೋಡಿ ಕೊಳ್ಳಬೇಕಾಗಿತ್ತು. ಕಿವಿ ಸರಿಯಾಗಿ ಕೇಳಿಸದಿದ್ದ ಒಬ್ಬ ನಿಕಟಸಹವರ್ತಿ, ಚಿಕಿತ್ಸೆಗಾಗಿ ಅಮೇರಿಕಾಗೆ ಹೋಗಲೇ ಎಂದು ಸಲಹೆ ಕೇಳಿ ಪತ್ರ ಬರೆದಿದ್ದ. ಪ್ರಯಾಣ ಮಾಡುತ್ತ ಅವನಿಗೆ ಉತ್ತರ ಬರೆದರು. "ಭಾರತದ ಎಷ್ಟು ಜನ ನಿನ್ನಂತೆ ಅಮೇರಿಕಾಗೆ ಹೋಗಬಲ್ಲರು. ಅಲ್ಲಿಗೆ ಹೋಗುವ ಮನಸ್ಸು ನಿನಗೆ ಹೇಗೆ ಬಂದೀತು. ಭಾರತದಲ್ಲಿ ದೊರೆಯುವ ಚಿಕಿತ್ಸೆಯಿಂದಲೇ ನೀನು ತೃಪ್ತನಾಗಬೇಕು. ಜೊತೆಗೆ ಇದ್ದೇಇದೆ ರಾಮನಾಮ."

ಮಹಾತ್ಮರು ದಿಲ್ಲಿಯ ನಿಲ್ದಾಣದಲ್ಲಿ ಬಂದು ಇಳಿದರೆ, ಅಲ್ಲಿ ಸೇರುವ ಜನರ ಗುಂಪನ್ನು ನಿಯಂತ್ರಿಸುವುದು ಕಷ್ಟವೆಂದು ದಿಲ್ಲಿಯ ಸಮೀಪದ ಸಣ್ಣ ನಿಲ್ದಾಣದಲ್ಲಿ ಇವರಿಗಾಗಿ ರೈಲನ್ನು ನಿಲ್ಲಿಸಲಾಯಿತು. ದೊಡ್ಡ ನಗರಗಳ ರೈಲ್ವೆ ನಿಲ್ದಾಣದಲ್ಲಿ ಇಳಿಯಬೇಕಾದ ಪ್ರಸಂಗ ಬಂದಾಗಲೆಲ್ಲ ಹೀಗೆಯೇ ಮಾಡಲಾಗುತ್ತಿತ್ತು. ಪೊಲೀಸ ರಿಂದ ಮಹಾತ್ಮರ ದರುಶನಕ್ಕಾಗಿ ಅಷ್ಟು ನೂಕು ನುಗ್ಗಲು ದೊಡ್ಡ ಸ್ಟೇಷನ್‌ಗಳಲ್ಲಿ. ಅವರಿಗಾಗಿ ಅಲ್ಲಿ ಮೋಟಾರು ಸಿದ್ಧವಾಗಿತ್ತು. ಅದರಲ್ಲಿ ಕುಳಿತರು. ಮೋಟಾರು ದಿಲ್ಲಿಯ ಭಂಗೀ ಉಪನಗರದತ್ತ ತೆರಳಿತ್ತು. ಇನ್ನೂ ಎರಡು ಮೈಲಿ ಇದ್ದಾಗ ಮೋಟಾರು ನಿಲ್ಲಿಸಿ, ಇಳಿದು ಕಾಲ್ನಡೆಯಲ್ಲೇ ತಮ್ಮ ಬಿಡಾರಕ್ಕೆ ಹೊರಟರು. ಎಷ್ಟೇ ಕೆಲಸವಿದ್ದರೂ ನಡೆಯ ವ್ಯಾಯಾಮಕ್ಕೆ ಅವರು ಲೋಪ ತರುತ್ತಿರಲಿಲ್ಲ. ಅವರ ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕೆ ಇದೇ ಕಾರಣ.

1947 ಮಾರ್ಚಿ 31 ಮಧ್ಯಾಹ್ನ 3 ಘಂಟೆಗೆ ವೈಸರಾಯಿ ಭವನದಲ್ಲಿ ಗಾಂಧೀ-ಮೌಂಟ್‌ಬೇಟನ್ ಪ್ರಥಮ ಸಂದರ್ಶನ ನಡೆಯಿತು. ಭೇಟಿಯಿಂದ ಹಿಂತಿರುಗಿ ಬಂದು ತಮ್ಮ ದಿನಚರಿಯಲ್ಲಿ ತೊಡಗಿದ್ದರು. ಮಲಗಲು ತುಂಬ ಹೊತ್ತಾಯಿತು. ಆದರೂ ಮಾರನೆಯ ಬೆಳಿಗ್ಗೆ 3 ಘಂಟೆಗೆ ಎದ್ದರು. ಪ್ರಾತರ್ವಿಧಿ ಮತ್ತು ಪ್ರಾರ್ಥನೆ ಮುಗಿಸಿಕೊಳ್ಳುವ ವೇಳೆಗೆ 5 ಘಂಟೆ ಆಯಿತು. ಇಷ್ಟರಲ್ಲೇ ಟಪಾಲು ವಿಲೇವಾರಿ ಆದಷ್ಟು ಮಾಡಿದ್ದರು. ಬೆಳಿಗ್ಗೆ 5ಕ್ಕೆ ರಾಜಕುಮಾರಿ ಅಮೃತ ಕೌರ್ ಬಂದರು. ಮೌಲಾನ ಆಜಾದ್ 6-30ಕ್ಕೆ. ಇದರಿಂದ ಬೆಳಗಿನ ವಾಯು ಸಂಚಾರ ಮತ್ತು ಕಾಲು ತೀಡಿಸಿಕೊಳ್ಳುವುದು ತಡವಾಯಿತು. ಕಾಲು ನೀಯುವ ಸಮಯ ಕಡಮೆ ಮಾಡಲಾಯಿತು. ಇದೇ ಸಮಯ ಅವರಿಗೆ ಸ್ವಲ್ಪ ವಿಶ್ರಾಂತಿ

ಪಡೆಯಲು. ಇಷ್ಟು ಹೊತ್ತಿಗೆ ಜವಹರಲಾಲರು ಬಂದರು. ಕಾಲು ತೀಡಿಸಿ ಕೊಳ್ಳು ತ್ತಿದ್ದ ಮೇಜಿನ ಪಕ್ಕದಲ್ಲಿ ನೆಹರೂಗಾಗಿ ಕುರ್ಚಿ ಹಾಕಲಾಯಿತು. ನೀವುವುದು ಮತ್ತು ಸಂದರ್ಶನ ಎರಡೂ ಏಕಕಾಲದಲ್ಲಿ ನಡೆಯುತ್ತಿತ್ತು. ಸ್ನಾನಕ್ಕೆ ಹೋಗ ಬೇಕು. ಇಷ್ಟರಲ್ಲಿ ರಾಜಾಜಿ ಬಂದರು. ಕಾಲ ಉಳಿಸಲು ಮಹಾತ್ಮರ ಮುಖ ಕ್ಷೌರ ಮನೂ ಮಾಡತೊಡಗಿದಳು. ಕ್ಷೌರ ಮುಗಿಸಿಕೊಂಡು ಸ್ನಾನಕ್ಕೆ ಎದ್ದರು. ನೀರಿನ ತೊಟ್ಟಿಯಲ್ಲಿ ಕುಳಿತಿದ್ದಾಗಲೇ ರಾಜಾಜಿಯೊಡನೆ ಸಂಭಾಷಣೆ ನಡೆಯುತ್ತಿತ್ತು. ನಿಮ್ಮ ಮೊಮ್ಮಗಳು ನಿಮ್ಮ ಹಜಾಮಳೂ ಆಗಿದ್ದಾಳೆ. ಒಳ್ಳೆಯ ಶಿಕ್ಷಣ ಕೊಡು ತ್ತಿದ್ದೀರಿ ಎಂದು ರಾಜಾಜಿ ಚಟಾಕಿ ಹಾರಿಸಿದರು. ಸ್ನಾನದ ತೊಟ್ಟಿಯಲ್ಲಿ ಕುಳಿತಿದ್ದಾಗ, ರಾಜಾಜಿ ಮತ್ತು ಮನೂ ಮಾತನಾಡುತ್ತಿದ್ದಾಗ ಕಣ್ಣು ಮುಚ್ಚಿ ಕೆಲ ನಿಮಿಷ ತೂಕಡಿಸಿದರು. ಸ್ನಾನ ಮುಗಿಯುವುದರೊಳಗಾಗಿ ರಾಜೇಂದ್ರಪ್ರಸಾದರು ಕಾದಿದ್ದರು. ಉಪಾಹಾರತೆಗೆದುಕೊಳ್ಳುತ್ತಾ ಬಾಬು ಪ್ರಸಾದರೊಡನೆ ಮಾತು ಸಾಗುತ್ತಿತ್ತು. ಕೈ ತೊಳೆಯುತ್ತಿದ್ದಂತೆ ಪಟೇಲರು ಬಂದರು, ಮಹಾತ್ಮರನ್ನು ವೈಸ್‌ರಾಯರ ಸಂದರ್ಶನಕ್ಕೆ 9 ಘಂಟೆಗೆ ಒಯ್ಯಲು.

ಮೌಂಟ್‌ಬೇಟನ್ ಮಹಾತ್ಮರಿಗಾಗಿ ಕಾದಿದ್ದರು. ದ್ವಾರದ ಬಳಿ ಕಾದಿದ್ದು ಬಿಸಿಲು ಮಚ್ಚಿಗೆ ಕರೆದೊಯ್ದರು. ಮನೂ ಜೊತೆಯಲ್ಲಿದ್ದಳು. "ಮಹಾತ್ಮ ರೊಡನೆ ಇರುವ ನಿನ್ನ ಚಿತ್ರ ನೋಡಿ ನೀನೆಷ್ಟು ಪುಣ್ಯ ಮಾಡಿದವಳೆಂದು ನನ್ನ ಮಗಳಿಗೆ ಅಸೂಯೆ. ನಾಳೆ ಅವಳನ್ನು ಮಹಾತ್ಮರ ಪ್ರಾರ್ಥನಾ ಸಭೆಗೆ ಕಳುಹಿಸುವೆ" ಎಂದರು ವೈಸರಾಯರು.

ಸಂಭಾಷಣೆ ನಡೆಯುತ್ತಿದ್ದಂತೆ ಬ್ರಿಜಕೃಷ್ಣ ಚಾಂದೀವಾಲ ಮಹಾತ್ಮರಿಗೆ ಊಟ ತಂದರು. ವೈಸರಾಯರಿಗೆ ಚಹಾ ಬಂತು. ಊಟ ಮತ್ತು ಸಂಭಾಷಣೆ ಮುಂದುವರೆಯುತ್ತಿದ್ದಂತೆ, ಮನೂ ತಮ್ಮ ತೋಟದಲ್ಲಿ ಅಲೆದಾಡಬಹುದಲ್ಲ ಎಂದರು ಗಾಂಧೀಜಿ.

"ನಾವು ಕೇವಲ ಧರ್ಮದರ್ಶಿಗಳು. ಎಲ್ಲ ನಿನಗೇ ಸೇರಿದ್ದು. ನಿನಗೆ ವಹಿಸಿ ಕೊಡುವುದಕ್ಕಾಗಿಯೇ ನಾನು ಬಂದಿರುವುದು" ಎಂದರು ವೈಸರಾಯರು ಮನು ವನ್ನು ಉದ್ದೇಶಿಸಿ.

"ಆಯುಧ ಹುದುಗಿಸಿ ಇಟ್ಟುಕೊಂಡಿದ್ದಾಳೋ ಎಂದು ಶೋಧಿಸಿ ನೋಡ ಬಹುದು" ಎಂದರು, ಗಾಂಧೀಜಿ ನಗುತ್ತ.

"ನಿಮ್ಮ ಶಿಷ್ಯಳಲ್ಲಿ ಆಯುಧ ಇರಲಾರದೆಂದು ನನಗೆ ಸಂಪೂರ್ಣ ವಿಶ್ವಾಸವಿದೆ" ಎಂದರು ಮೌಂಟ್‌ಬೇಟನ್.

ಮೌಂಟ್‌ಬೇಟನ್ನರಿಗೆ ಗಾಂಧೀಜಿ ಉಪನಿಷತ್ತು ಮತ್ತು ಗೀತೆಯ ಅನುವಾದದ ಆಂಗ್ಲ ಪ್ರತಿಗಳನ್ನು ಕೊಟ್ಟರು.

ರೈಲ್ವೆ ಪ್ರಕರಣಕ್ಕೆ ಈ ವಿಷಯ ಸಂಬಂಧಿಸದಿದ್ದರೂ, ಮಹಾತ್ಮರ ಬಿಡುವಿಲ್ಲದ ದುಡಿತ, ಮೌಂಟ್‌ಬೇಟನ್ ಮತ್ತು ಮಹಾತ್ಮರಲ್ಲಿ ಮೊದಲ ಸಂದರ್ಶನದಲ್ಲೇ ಪರಸ್ಪರ ವಿಶ್ವಾಸಗೌರವ ಮೂಡಿದ್ದನ್ನು ನಿದರ್ಶಿಸಲು ಅಪ್ರಕೃತವಾದರೂ ಕೊಡಲಾಗಿದೆ.

1947 ಗಾಂಧೀಜಿ ನವಖಲಿಗೆ ಹೊರಟಿದ್ದರು. ಕಾಶ್ಮೀರದಿಂದ ಲಾಹೋರ್ ಅಮೃತಸರ, ಪಾಟ್ನ, ಕಲ್ಕತ್ತ ಮೂಲಕ ನವಾಖಲಿಗೆ. ದಿಲ್ಲಿಯ ಮೂಲಕ ಹೋಗುವುದು ಬೇಡವೆಂದು ತೀರ್ಮಾನಿಸಿದ್ದರು. ಅಮೃತಸರದಲ್ಲಿ ಒಂದು ವಾರದ ಹಿಂದೆ ಕಾಶ್ಮೀರಕ್ಕೆ ಹೋಗುತ್ತಿದ್ದಾಗ "ಗಾಂಧೀ ಹಿಂತಿರುಗು" ಎಂದು ಕೆಲವರು ಕೂಗುತ್ತ ಕಪ್ಪುಧ್ವಜದ ಪ್ರದರ್ಶನ ನಡೆಸಿದ್ದರು. ಆದರೆ ಈ ಸಾರಿ ಸಾವಿರಾರು ಜನ ವ್ಯವಸ್ಥಿತವಾಗಿ ಸಾಲುಗಟ್ಟಿ ನಿಂತಿದ್ದರು, ಅಮೃತಸರದ ನಿಲ್ದಾಣದಲ್ಲಿ. ಬುದ್ಧಿಯಿಲ್ಲದೆ ದೊಡ್ಡ ಅಪರಾಧ ಮಾಡಿದೆವು. ದಯಮಾಡಿ ಕ್ಷಮಿಸಿ. ನಿಮ್ಮ ನಾಲ್ಕುದಿನಗಳ ಪ್ರವಾಸ ಪಂಜಾಬಿನ ವಾತಾವರಣವನ್ನೇ ಬದಲಾಯಿಸಿಬಿಟ್ಟಿದೆ. ನಿಮ್ಮ ಚೀಲ ಕೊಡಿ. ಹರಿಜನ ನಿಧಿಗಾಗಿ ತುಂಬಿಸಿಕೊಡುವೆವು. "ಆದದ್ದು ಆಗಿಹೋಯಿತು. ಎದ್ದ ಕಾಲದಿಂದ ದಿನ ಪ್ರಾರಂಭವಾಗುತ್ತದೆ. ಈ ಹೇಳಿಕೆ ನೆನಪಿಡಿ. ಈಗಲಾದರೂ ಜಾಗೃತರಾಗೋಣ" ಹೀಗೆ ಸಮಾಧಾನಪಡಿಸಿದರು ಗಾಂಧೀಜಿ ಆ ಜನರನ್ನು.

ಎಲ್ಲ ನಿಲ್ದಾಣಗಳಲ್ಲೂ ಅಪಾರ ಜನಸಂದಣಿ. ಕಿವಿ ಕಿವುಡಾಗುವಂತೆ ಜಯಕಾರ. ಸಾಲದ್ದಕ್ಕೆ ಮಳೆ. ಗಾಂಧೀಜಿ ಪ್ರಯಾಣಮಾಡುತ್ತಿದ್ದ ಗಾಡಿಯ ಮೇಲಿನಿಂದ ನೀರು ಸೋರಲಾರಂಭಿಸಿ ಗಾಡಿಯ ಒಳಗೆ ನೀರು ಸೇರಿ ಕೊಂಡಿತು. ಗಾರ್ಡ್‌ಬಂದ. ದಯಮಾಡಿ ಬೇರೆಡಬ್ಬಿಗೆ ಬದಲಾಯಿಸಿ ಎಂದ. ಆಗ ಈ ಡಬ್ಬಿ ಏನಾಗುತ್ತದೆ ಎಂದು ಗಾಂಧೀಜಿ ಪ್ರಶ್ನಿಸಿದರು. ತಮಗೆ ಒಂದು ಡಬ್ಬಿ ಖಾಲಿ ಮಾಡಿ ಅಲ್ಲಿನ ಪ್ರಯಾಣಿಕರು ಇಲ್ಲಿಗೆ ಬರುತ್ತಾರೆ. "ಅವರಿಗೆ ಅನುಕೂಲವಾದುದು ನನಗೂ ಸರಿಯಾಗಬೇಕಲ್ಲವೇ? ಅವರಿಗೆ ತೊಂದರೆಕೊಟ್ಟು ಸುಖವಾಗಿ ನಾನು ಪ್ರಯಾಣ ಮಾಡಲು ಬಯಸೆ". "ಹಾಗಾದರೆ ನಾನು ಏನು ಸೇವೆ ಸಲ್ಲಿಸಬಹುದು", ಎಂದು ಕೇಳಿದ ಗಾರ್ಡ್. "ಪ್ರಯಾಣೀಕರಿಗೆ ತೊಂದರೆಕೊಡಬೇಡ. ಲಂಚ ತೆಗೆದುಕೊಳ್ಳಬೇಡ. ಇದು ನೀನು ನನಗೆ ಸಲ್ಲಿಸಬಹುದಾದ ದೊಡ್ಡ ಸೇವೆ."

ಆಗಸ್ಟ್ 8 ಪಾಟ್ನಾದಲ್ಲಿ ಪ್ರಾರ್ಥನಾಸಭೆ ಸಂಜೆ ಮುಗಿಸಿ ಕಲ್ಕತ್ತಾಗೆ ಹೊರಟು ನೇರವಾಗಿ ನಿಲ್ದಾಣಕ್ಕೆ ಬಂದರು. ರೈಲು ಹತ್ತಿದರು, ಗಾಡಿಹೊರಟಿತು. ಎಲ್ಲ

ನಿಲ್ದಾಣಗಳಲ್ಲೂ ದರ್ಶನಕ್ಕಾಗಿ ನೂಕು ನುಗ್ಗಲು. ಒಂದು ಚಿಕ್ಕ ನಿಲ್ದಾಣದಲ್ಲಿ ಜನ ಹುಚ್ಚೆದ್ದಂತೆ ಗಾಡಿಯತ್ತ ನುಗ್ಗತೊಡಗಿದರು. ಚಕ್ರದ ಕೆಳಗೆ ಸಿಕ್ಕಿಕೊಳ್ಳ ಬಹುದೆಂಬ ಭೀತಿ ಪ್ರಬಲಿಸಿತು. ಹಿಂದೆ ನಾಲ್ಕೈದು ಸಾರಿ ಇಂಥ ಘಟನೆ ನಡೆದಿತ್ತು. ಕೋಲು ತೆಗೆದು ಜನರ ಮೊಣಕಾಲಿಗೆ ಹಿಂದೆ ಸರಿಯಿರಿ ಎಂದು ಹೊಡೆಯತೊಡ ಗಿದರು. ಆ ಮೂರ್ಖ ಜನರಿಗೆ ಇದೇ ಆರ್ಶೀವಾದ ಎನಿಸಿತು! ನೂಕುನುಗ್ಗಲು ಮತ್ತಷ್ಟು ಹೆಚ್ಚಿತು. ಆಬಾ ಮತ್ತು ಮನೂ ಸಮಯೋಚಿತ ಬುದ್ಧಿವಂತಿಕೆ ಮಾಡಿದರು. "ರಘುಪತಿ ರಾಘವ ರಾಜಾರಾಂ" ರಾಮಧುನ್ ಪ್ರಾರಂಭಿಸಿದರು. ಜನ ಧ್ವನಿ ಎತ್ತಿಕೊಂಡು ತಾಳಹಾಕುತ್ತಾ ರಾಮಧ್ಯಾನದಲ್ಲಿ ತಲ್ಲೀನರಾದರು. ಸಂಭವಿಸಬಹುದಾಗಿದ್ದ ದುರ್ಘಟನೆ ತಪ್ಪಿತು. ಗಾಡಿ ಮುಂದೆ ಸಾಗಿತು.

ಗೆರಾಲ್ಡ್ ಫೋರ್ಡ್ ಎಂಬಾಕೆ ಇಂಗ್ಲೆಂಡಿನಿಂದ ಒಂದು ಸಮ್ಮೇಳನದಲ್ಲಿ ಭಾಗವಹಿಸಲು ಭಾರತಕ್ಕೆ ಬಂದಳು. ಈಕೆ ಬೊಂಬಾಯಿಂದ ಲಾಹೋರಿಗೆ ಹೋಗಬೇಕಾಗಿತ್ತು. ರೈಲ್ವೆ ಸ್ಟೇಷನ್ನಿಗೆ ಬಂದು ಎರಡನೇ ದರ್ಜೆಯ ಟಿಕೇಟು ಕೊಂಡಳು. ರೈಲು ಲಾಹೋರಿಗೆ ಹೊರಡಲು ಸಿದ್ಧವಾಗಿ ನಿಂತಿತ್ತು. ಆದರೆ ಎರಡನೆಯ ದರ್ಜೆ ಡಬ್ಬಿಯಲ್ಲಿ ಸ್ಥಳವಿರಲಿಲ್ಲ. ಎಲ್ಲ ಸ್ಥಾನಗಳೂ ಭರ್ತಿಯಾಗಿದ್ದುವು. ಮೊದಲ ದರ್ಜೆಗೆ ಹೆಚ್ಚು ಹಣ ಕೊಟ್ಟು ಪ್ರಯಾಣ ಮಾಡಬಯಸಿದಳು. ಆ ದರ್ಜೆಯ ಎಲ್ಲ ಸ್ಥಾನಗಳೂ ಮೀಸಲಾಗಿದ್ದುವು. ಅಲ್ಲಿಯೂ ಜಾಗ ಸಿಗಲಿಲ್ಲ. ಇವಳ ಸಾಮಾನು ನಿಲ್ದಾಣದಲ್ಲಿ ರಾಶಿರಾಶಿಯಾಗಿ ಬಿದ್ದಿದ್ದುವು. ಮೂರನೆಯ ದರ್ಜೆಯಲ್ಲಿ ಪ್ರಯಾಣ ಮಾಡಲು ಇಷ್ಟವಿಲ್ಲ. ಅಲ್ಲಂತೂ ಗರುಡುವಾಹನ. ಒಳಕ್ಕೆ ತೂರಲೂ ಸಾಧ್ಯವಾಗದು. ಪಾಪ, ಪರದೇಶದಿಂದ ಬಂದಿದ್ದಾಳೆ. ಇಲ್ಲಿಯ ಜನರ, ಪರಿಸ್ಥಿತಿಯ ಪರಿಚಯವಿಲ್ಲ. ಸ್ಥಳಸಿಗದೆ, ಏನುಮಾಡಲೂ ಅರಿಯದೆ ಗಾಬರಿಗೊಂಡಳು. ಅತ್ತಿಂದಿತ್ತ ಚಡಪಡಿಸುತ್ತ ಪರದಾಡತೊಡಗಿದಳು. ರೈಲು ಹೊರಡಿಸಲು ಗಾರ್ಡು ಸೀಟಿ ಊದಿದ. ಗಂಟೆಹೊಡೆಯಿತು. ಇನ್ನೇನು ಗತಿ ಎಂದು ಭಯಗ್ರಸ್ಥಳಾದಳು. ಮೊದಲ ದರ್ಜೆ ಡಬ್ಬಿಯ ಬಳಿ ನಾಲ್ಕೈದು ಜನ ನಿಂತು ಮಾತನಾಡುತ್ತಿದ್ದರು. ಯಾರೂ ಇವಳನ್ನು ಮಾತನಾಡಿಸರು. ತಮಾಷೆ ನೋಡುತ್ತಿದ್ದರು.

ಇಷ್ಟರಲ್ಲಿ ಜೊಕ್ಕ ಬಾಯಿಯ ಜೋಲು ತಲೆಯ ಒಬ್ಬ ಗಿಡ್ಡ ವ್ಯಕ್ತಿ, ಗೆರಾಲ್ಡ್ ಫೋರ್ಡ್ ಅವರ ಸಮೀಪಕ್ಕೆ ಬಂದು, "ನನ್ನಿಂದ ಏನಾದರೂ ಸಹಾಯ ಬೇಕೆ?" ಎಂದು ಮೆಲು ದನಿಯಲ್ಲಿ ಮಾತನಾಡಿಸಿದ. "ನನಗೆ ಈ ರೈಲಿನಲ್ಲಿ ಒಂದು ಸ್ಥಾನ ಕೊಡಿಸಿದರೆ ತುಂಬ ಉಪಕಾರವಾದೀತು. ನಾನು ಲಾಹೋರಿಗೆ ಸಮ್ಮೇಳನಕ್ಕೆ ಹೋಗಬೇಕಾಗಿದೆ" ಎಂದಳು.

ಈ ಬಿಳಿಯ ಹೆಂಗಸು ಚಡಪಡಿಸುತ್ತಿರುವುದನ್ನು ನೋಡಿ ಅಲ್ಲಿದ್ದ ಜನ ನಗುತ್ತಿದ್ದರು. ಪರದೇಶದಿಂದ ಬಂದಿರುವ, ನಮ್ಮ ದೇಶದ ರೈಲು ಪ್ರವಾಸ ಅನುಭವವಿಲ್ಲದ ಈ ನಿರುಪಾಯುಗಳಿಗೆ ಸಹಾಯ ಮಾಡಬೇಕೆಂದು ಯಾರೂ ಮುಂದೆ ಬರಲಿಲ್ಲ.

ಮೊದಲು ಮಾತನಾಡಿಸಿದ ಬೊಕ್ಕಬಾಯಿಯ ಮುದುಕ ಹೇಳಿದ, "ನಾನೂ ಲಾಹೋರಿಗೆ ಹೊರಟಿರುವೆ. ನನ್ನ ಬಳಿ ಮೊದಲ ದರ್ಜೆಯ ಟಿಕೀಟು ಇದೆ. ಯಾವಾಗಲೂ ಮೂರನೇ ವಿಭಾಗದ ಡಬ್ಬಿಯಲ್ಲಿ ಪ್ರಯಾಣ ಮಾಡುವ ವಾಡಿಕೆ ನನಗೆ. ಈಗಲೂ ಮೂರನೇ ದರ್ಜೆ ಗಾಡಿಯಲ್ಲೇ ಪ್ರಯಾಣ ಮಾಡಬೇಕೆಂಬ ಇಚ್ಛೆ ನನಗೆ. ಆದರೆ ಕೆಲವು ಹಿತೈಷಿಗಳು ನನ್ನ ಮಾತು ಕಡೆಗಣಿಸಿ ಮೊದಲ ಶ್ರೇಣಿಯ ಟಿಕೀಟು ತೆಗೆದುಕೊಟ್ಟಿದ್ದಾರೆ. ಸಂಕೋಚ ಪಡಬೇಡ. ನನ್ನಲ್ಲಿರುವ ಟಿಕೀಟು ನೀನು ತೆಗೆದುಕೋ. ನಿನ್ನ ಟಿಕೀಟು ನನಗೆ ಕೊಡು. ನನಗಾಗಿ ಮೊದಲ ಶ್ರೇಣಿಯ ಡಬ್ಬಿಯಲ್ಲಿ ಒಂದು ಸ್ಥಾನ ಮೀಸಲಾಗಿದೆ. ನೀನು ಆ ಸ್ಥಳ ಆಕ್ರಮಿಸಿಕೋ. ಗಾರ್ಡಿಗೆ ನಾನು ತಿಳಿಸುತ್ತೇನೆ". ಹೀಗೆ ಹೇಳುತ್ತ ತನ್ನ ಸೊಂಟಕ್ಕೆ ಕೈ ಹಾಕಿ, ಪಂಚೆಯ ಮಡಿಲಲ್ಲಿ ಸಿಕ್ಕಿಸಿದ್ದ ಟಿಕೀಟು ತೆಗೆದು ಆವಳ ಕೈಯಲ್ಲಿ ಇರಿಸಿದ. ಆಕೆ ತನ್ನ ಕೈ ಚೀಲದಿಂದ ಎರಡನೇ ದರ್ಜೆಯ ಟಿಕೀಟು ತೆಗೆದು ಮುದುಕನ ಕೈಗೆ ಕೊಟ್ಟಳು. ಗಾರ್ಡಿಗೆ ಕೈ ಸನ್ನೆಮಾಡಿ ರೈಲು ಹೊರಡುವುದನ್ನು ತಡಮಾಡಬೇಕೆಂದು ಸೂಚಿಸಿದ. ಗಾರ್ಡು ಕೆಂಪು ಬಾವುಟ ತೋರಿಸಿ ಗಾಡಿ ಹೊರಡುವುದನ್ನು ನಿಲ್ಲಿಸಿದ.

ಗಂಟೆ ಬಾರಿಸಿ ರೈಲು ಹೊರಡಲು ಅನುಮತಿಕೊಟ್ಟರೂ ಗಾಡಿ ಹೊರಡದಿರಲು ಕಾರಣವೇನು ಎಂದು ಕೋಪಕುತೂಹಲದಿಂದ ಸ್ಟೇಷನ್ ಮಾಸ್ಟರ್ ಓಡಿಬಂದ. ಮುದುಕನನ್ನು ನೋಡಿ ಅವಾಕ್ಕಾಗಿ ಮರ್ಯಾದೆಯಿಂದ ಸರಿದು ನಿಂತ. ಸ್ಟೇಷನ್ ಮೇಲೆ ಬಿದ್ದಿದ್ದ ಗೆರಾಲ್ಡ್ ಫೋರ್ಡಿನ ಸಾಮಾನು ಎಲ್ಲವನ್ನೂ ಒಂದನೇ ದರ್ಜೆಯ ಡಬ್ಬಿಗೆ ತುಂಬುವಂತೆ ಸ್ಟೇಷನ್ ಮಾಸ್ತರಿಗೆ ಕುಳ್ಳ ಮುದುಕ ತಿಳಿಸಿದ. ಹಮಾಲಿಗಳು ಓಡಿ ಬಂದು ಸಾಮಾನುಗಳನ್ನು ಗೆರಾಲ್ಡ್ ಫೋರ್ಡ್ ಹತ್ತಿದ್ದ ಡಬ್ಬಿಗೆ ಏರಿಸಿದರು. ಆಕೆ ಹಮಾಲರಿಗೆ ಮಜೂರಿ ಕೊಟ್ಟಳು. ಏನೋ ದೊಡ್ಡ ಕೆಲಸ ಸಾಧಿಸಿದನ್ನು ಸಂತೋಷದಿಂದ ಹಿಗ್ಗುತ್ತಾ ಮುದುಕ ಓಡಿ ಹೋಗಿ ಮೂರನೆ ದರ್ಜೆ ಡಬ್ಬಿ ಏರಿದ. ಇದೇನು ಹುಚ್ಚು ಮುದುಕ ಎಂದು ಎಲ್ಲರೂ ಚಿಕ್ಕಸ ಬೆರಗಾಗಿ ನೋಡುತ್ತಿದ್ದಂತೆ, ಗಾರ್ಡು ಮತ್ತೆ ಸೀಟಿ ಊದಿ ಹಸುರು ಬಾವುಟ ತೋರಿಸಿದ. ಗಾಡಿ ಹೊರಟಿತು.

ಉಪಕಾರವೆಸಗಿದ ಈ ಮುದುಕ ಯಾರು? ಲಾಹೋರಿಗೆ ಹೋದ ತರುವಾಯವೇ ಆಕೆಗೆ ತಿಳಿದುದು ಈತನೇ ಮಹಾತ್ಮಗಾಂಧಿ ಎಂದು. ಕೀರ್ತಿಗೆ ತಕ್ಕಂತೆ

ಈತನೇ ನಿಜವಾದ ಮಹಾತ್ಮ. ಸಂಕಟದಲ್ಲಿ ಸಿಲುಕಿರುವವರಿಗೆ ಸಹಾಯ ಮಾಡುವವನೇ ನಿಜವಾದ ಮಹಾತ್ಮ ಎಂದು ಗಾಂಧಿಯವರನ್ನು ಆಕೆ ಕೊಂಡಾಡಿದಳು.

ಮೇ 1947 ಗಾಂಧೀಜಿ ಬಿಹಾರಿನಲ್ಲಿ ಶಾಂತಿ ಯಾತ್ರೆ ಮುಗಿಸಿ ಅಲ್ಲಿಂದ ಬಂಗಾಳಕ್ಕೆ ಹೊರಡಲು ಪಾಟ್ನ ರೈಲ್ವೆ ನಿಲ್ದಾಣಕ್ಕೆ ಬಂದರು. ಇವರನ್ನು ಬೀಳ್ಕೊಡಲು ಬಿಹಾರಿನ ಕಾಂಗ್ರೆಸ್ ಸಂಪುಟದ ಮಂತ್ರಿಗಳು ಬಂದಿದ್ದರು. ಮಾತುಕಥೆ ನಡೆಯುತ್ತಿತ್ತು. ರೈಲು ಹೊರಡುವ ವೇಳೆ ಆಯಿತು. ಸ್ಟೇಷನ್ ಮಾಸ್ತರಿಗೆ ಏನೋ ಸಂಕೋಚ ಮಹಾತ್ಮರು ಮತ್ತು ಮಂತ್ರಿಗಳು ಮಾತನಾಡುತ್ತಿದ್ದಾರೆ. ಸೀಟಿ ಊದಿ ರೈಲು ಹೊರಡಿಸುವುದು ಸರಿಯೇ? ಹಿಂಜರಿಯುತ್ತ ಮಹಾತ್ಮರಲ್ಲಿಗೆ ಬಂದ. ರೈಲು ಹೊರಡಿಸಲೇ ಎಂದು ಕೇಳಿದ. “ರೈಲು ಹೊರಡಿಸಲು ಪ್ರಯಾಣಿಕರ ಅನುಮತಿ ನೀನು ಕೇಳುವುದುಂಟೆ. ಈಗೇಕೆ ಈ ನಿಯಮಕ್ಕೆ ಲೋಪ, ಈ ದಾಕ್ಷಿಣ್ಯ. ಮಂತ್ರಿಗಳಿಗೆ ನೀನು ಭಯಪಡಬೇಕಾದ್ದಿಲ್ಲ. ನಿನ್ನ ಕರ್ತವ್ಯ ಪಾಲಿಸು, ಇದರಿಂದ ನಿನಗೂ ಅವರಿಗೂ ಇಬ್ಬರಿಗೂ ಒಳಿತಾಗುತ್ತದೆ. ಅವರಾದರೂ ನಿಯಮಗಳನ್ನು ಬದಿಗೊತ್ತಿ ಉಲ್ಲಂಘಿಸಿ ನಡೆಯಲಾಗದು. ಹಾಗೆ ಮಾಡಿದರು ಪ್ರಜಾಪ್ರಭುತ್ವ ನುಚ್ಚು ನೂರಾದೀತು.”

“ಪ್ರತಿಯೊಂದು ಇಲಾಖೆಯಲ್ಲೂ ನಿಯಮ ಪಾಲಿಸುವ ನಿಮ್ಮಂಥಾ ಒಬ್ಬ ವ್ಯಕ್ತಿಯಿದ್ದರೆ ಸಾಕು. ಆಡಳಿತ ಎಷ್ಟೋ ನಿಯಮಬದ್ಧ, ಮತ್ತು ವ್ಯವಸ್ಥಿತವಾಗಿ ನಡೆಯುತ್ತಿತ್ತು. ನಮ್ಮ ಹಿರಿಯ ಅಧಿಕಾರಿಗಳ ಮನೋಭೀಷ್ಟಕ್ಕೆ ಅನುಗುಣವಾಗಿ ನಡೆದುಕೊಳ್ಳದಿದ್ದರೆ ಬಡ ಸರ್ಕಾರಿ ನೌಕರರು ಪಡಬೇಕಾದ ಪಾಡು ತಾವೇನು ಬಲ್ಲಿರಿ. ನನ್ನ ನಲ್ವತ್ತು ವರ್ಷಗಳ ದೀರ್ಘ ಅನುಭವದಲ್ಲಿ, ನಿರ್ಭಯವಾಗಿ ನಿಯಮ ಪಾಲಿಸು ಎಂದು ಹೇಳಿದ ಮತ್ತು ಅಂತೆಯೇ ನಡೆದುಕೊಂಡ ವ್ಯಕ್ತಿ ನೀವೊಬ್ಬರೇ. ತಮ್ಮನ್ನು ರಾಷ್ಟ್ರ ಪಿತನೆಂದು ದೇಶ ಸನ್ಮಾನಿಸುವುದರಲ್ಲಿ ಆಶ್ಚರ್ಯವೇನು” ಎಂದು ಹೇಳುತ್ತ ಮಹಾತ್ಮರಿಗೆ ತಲೆಬಾಗಿ ರೈಲು ಹೊರಡಲು ಸೀಟಿ ಊದಿದ.

ಮೊಟ್ಟಮೊದಲು ಗಾಂಧೀಜಿ ಬೆಂಗಳೂರಿಗೆ ದಯ ಮಾಡಿಸಿದ್ದು 1915ರಲ್ಲಿ. ಆಗ ಮದರಾಸಿನಿಂದ ಬೆಂಗಳೂರಿಗೆ ರಾತ್ರಿಯ ರೈಲಿನಲ್ಲಿ ಮೊದಲ ದರ್ಜೆ ಗಾಡಿಯಲ್ಲಿ ಬಂದರು. ಯಾವಾಗಲೂ ಮೂರನೇ ಶ್ರೇಣಿಯ ಗಾಡಿಯಲ್ಲಿ ಬರುವವರು ಮೊದಲ ದರ್ಜೆಯಲ್ಲಿ ಪ್ರಯಾಣ ಬೆಳಸಲು ವಿಶೇಷ ಕಾರಣವಿತ್ತು. ಇವರ ಗೆಳೆಯ ಜಿ. ಎ. ನಟೇಶನ್ ಅಸ್ವಸ್ಥರಾಗಿ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದರು. ಅವರನ್ನು ನೋಡಿಕೊಳ್ಳಲು ಯಾರೂ ಇರಲಿಲ್ಲ. ಆದ್ದರಿಂದ ಅವರ ಸುಶ್ರೂಶೆಗಾಗಿ ಅವರೊಡನೆ ಮೊದಲ ಶ್ರೇಣಿ ಡಬ್ಬಿಯಲ್ಲೇ ಪ್ರಯಾಣ ಬೆಳಸಬೇಕಾಗಿ ಬಂತು. ಇವರನ್ನು ಎದುರ್ಗೊಳ್ಳಲು

ಮೂರನೆಯ ದರ್ಜೆ ಡಬ್ಬಿಗಳನ್ನು ಹುಡುಕಿ ತಮ್ಮ ಮಾನ್ಯ ಅತಿಥಿಯನ್ನು ಕಾಣದೆ ಸ್ವಾಗತ ಸಮಿತಿಯ ಸದಸ್ಯರು ನಿರಾಶರಾದಾಗ ಅವರು ಮೊದಲ ದರ್ಜೆಯ ಗಾಡಿಯಲ್ಲಿ ಬರುತ್ತಿದ್ದುದನ್ನು ನೋಡಿದರು. ಇದು ಅವರ ವಾಡಿಕೆಗೆ ಅಪವಾದವಾಗಿತ್ತು.

ಬೆಂಗಳೂರಿನ ಕಾರ್ಯಕ್ರಮ ಮುಗಿಸಿಕೊಂಡು ವೆಲ್ಲೂರಿಗೆ ಅವರು ಹೋಗುವ ಕಾರ್ಯಕ್ರಮವಿತ್ತು. ಆಗ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದರು. ಸುಖಪ್ರಯಾಣ ಮಾಡಲಿ. ಮೊದಲ ಶ್ರೇಣಿಯ ಟಿಕೇಟು ತಗೆದುಕೊಡುವಂತೆ ಸ್ವಾಗತ ಸಮಿತಿಗೆ ತಿಳಿಸಿದರು. ಆದರೆ ಗಾಂಧೀಜಿ ಒಪ್ಪಬೇಕಲ್ಲ. ವೃಥಾ ಹಣ ವೆಚ್ಚಮಾಡಬೇಡಿ. ಹಾಗೂ ತನಗೆ, ತನ್ನ ಇಚ್ಛೆಯ ವಿರುದ್ಧ ಮೊದಲ ದರ್ಜೆಯ ಟಿಕೇಟು ತೆಗೆಸಿಕೊಟ್ಟು ಆ ದರ್ಜೆಯ ಡಬ್ಬಿಯಲ್ಲಿ ಕೂಡಿಸಿದರೆ, ಮೂರನೆಯ ನಿಲ್ದಾಣದಲ್ಲಿ ತಾನು ಮೂರನೆ ತರಗತಿಯ ಡಬ್ಬಿಗೆ ಹೋಗಿ ಕೂಡುವುದಾಗಿ ಎಚ್ಚರಿಕೆ ಕೊಟ್ಟರು. ಇದರಿಂದ ಉಪಾಯ ಕಾಣದೆ ಮೂರನೇ ತರಗತಿಯ ಟಿಕೀಟನ್ನೇ ತೆಗೆಸಿ ಕೊಡಬೇಕಾಯಿತು.

ತಮ್ಮ ಪ್ರಯಾಣದ ಅನುಭವ ಬರೆದರೆ ಅದೇ ಒಂದು ದೊಡ್ಡ ಸಂಪುಟ ಆದೀತು ಎಂದು ಗಾಂಧೀಯವರೇ ಹೇಳಿರುತ್ತಾರೆ. ಇಲ್ಲಿ ಕೊಟ್ಟಿರುವುದು ಕೆಲವು ನಿದರ್ಶನಗಳು ಮಾತ್ರ.

ನಿರಶನ

ಎಲ್ಲ ಧರ್ಮಗಳೂ ಉಪವಾಸಕ್ಕೆ ಪ್ರಮುಖ ಸ್ಥಾನ ಕೊಟ್ಟಿವೆ. ಮಹಾತ್ಮ ಗಾಂಧಿಯವರು ಕೆಲವು ಸಂದರ್ಭಗಳಲ್ಲಿ ಹಲವು ಕಾರಣಗಳಿಗಾಗಿ ಉಪವಾಸ ಅಥವಾ ನಿರಶನ ವ್ರತ ಕೈಗೊಂಡಿರುತ್ತಾರೆ. ಉಪವಾಸ ಕೈಗೊಳ್ಳುತ್ತಿದ್ದುದಕ್ಕೆ ಕಾರಣಗಳನ್ನು ಪ್ರತಿಯೊಂದು ಸಂದರ್ಭದಲ್ಲೂ ಅವರೇ ವಿವರಿಸಿರುತ್ತಾರೆ. ಜನವರಿ 12, 1947ರಲ್ಲಿ ಅವರು ಕೊಟ್ಟ ಹೇಳಿಕೆ ಹೀಗಿದೆ:—

"ದೇಹಾರೋಗ್ಯಕ್ಕಾಗಿ, ಆರೋಗ್ಯಶಾಸ್ತ್ರ ನಿಯಮದಂತೆ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವಾಗಿ; ಈ ಉಪವಾಸ ಕೈಗೊಳ್ಳುವುದನಲ್ಲಿ ಅಹಿಂಸೆಯಲ್ಲಿ ವಿಶ್ವಾಸ ಅನಗತ್ಯ. ಆದರೆ ಅಹಿಂಸೆಯಲ್ಲಿ ವಿಶ್ವಾಸವುಳ್ಳವರು, ಸಮಾಜ ತಪ್ಪು ಮಾಡಿದಾಗ ಅನ್ಯಮಾರ್ಗ ಕಾಣದೇಹೋದಾಗ, ಉಪವಾಸ ಮಾಡಲೇಬೇಕೆಂಬ ಭಾವನೆ ಬಲವಾಗಿ ಒತ್ತಾಯಪಡಿಸಿದಾಗ, ಅಹಿಂಸಾವಾದಿ ಉಪವಾಸ ಆಚರಿಸುವನು."

ಗಾಂಧೀಜಿ ಆಗತಾನೆ ಕಲ್ಕತ್ತೆಯಿಂದ ಹಿಂದಿರುಗಿ ದಿಲ್ಲಿಗೆ ಬಂದಿದ್ದರು. ಹಿಂದೂ ಮತ್ತು ಮುಸಲ್ಮಾನರು ಹುಚ್ಚೆದ್ದು ಅಮಾನುಷ ರಾಕ್ಷಸೀ ಕೃತ್ಯಗಳನ್ನೆಸಗಿದ್ದ ಕಲ್ಕತ್ತೆಯ ಮಹಾನಗರದಲ್ಲಿ ತಮ್ಮ ನಿರಶನ ವ್ರತದಿಂದ ಮತ್ತೆ ಶಾಂತಿ ಮೂಡುವಂತೆ ಗಾಂಧೀಜಿ ಮಾಡಿದ್ದರು. ಆದರೆ ದಿಲ್ಲಿಯ ವಾತಾವರಣ, ಪರಿಸ್ಥಿತಿ ಪ್ರತ್ಯೇಕವಾಗಿತ್ತು. ಆದರೂ ಅನ್ಯಮಾರ್ಗಕಾಣದೆ ಅವರು ಉಪವಾಸ ಕೈಗೊಂಡರು. ಉಪವಾಸ ಕೈಗೊಳ್ಳಲು ಕಾರಣ ವಿವರಿಸಿ ದೊಡ್ಡ ಹೇಳಿಕೆಯನ್ನಿತ್ತರು.

ಉಪವಾಸ ಜನತೆಯನ್ನು ಒತ್ತಾಯಪಡಿಸುವ ಬಲವಂತಿಕೆಯ ಮಾರ್ಗವೆಂಬ ಆಕ್ಷೇಪಣೆಗೆ ಉತ್ತರವಾಗಿ—ಉಪವಾಸ ತಾನು ಕೈಗೊಳ್ಳುತ್ತಿರುವುದು ಕರ್ತವ್ಯ ಪಾಲನೆಗಾಗಿ. ಫಲಾಪೇಕ್ಷೆಯಿಂದಲ್ಲ. ಆದರೂ ಪವಿತ್ರ ನಿರಶನ ವ್ರತ ಫಲರಹಿತವಾದುದಲ್ಲ. ಕರ್ತವ್ಯ ಪಾಲನೆಯೇ ಅದರ ಪ್ರತಿಫಲ. ಜನರ ಅಂತರಾತ್ಮವನ್ನು ಪ್ರಚೋದಿಸಿ ಕರ್ತವ್ಯಮೂಢರಾಗಿ ಅಂಧರಾಗಿರುವ ಜನತೆಯ ಕಣ್ಣು ತೆರಸಿದರೆ ತನ್ನ ಉಪವಾಸ ಸಾರ್ಥಕವಾದಂತೆ—ಎಂದು ತಿಳಿಸಿದರು.

ಗಾಂಧೀಜಿ ಕಡೆಯ ಉಪವಾಸ ಪ್ರಾರಂಭಿಸಿದ್ದು ಜನವರಿ 13, 1948 ರಲ್ಲಿ, ದಿಲ್ಲಿಯ ಬಿರ್ಲ ಭವನದಲ್ಲಿ. ಹಿಂದೂ-ಮುಸ್ಲಿಮ್-ಸಿಕ್ ಮತ್ತು ಇತರ ಎಲ್ಲ ಮತೀ

ಯರೂ ಅನ್ಯೋನ್ಯ ಭಾವನೆಯಿಂದ ಬಾಳಬೇಕೆಂಬುದನ್ನು ನಿಜವಾಗಿಯೂ ಗ್ರಹಿಸುತ್ತಲೇ ತನ್ನ ಉಪವಾಸ ಅಂತ್ಯಗೊಳ್ಳುವುದಾಗಿ ಅವರು ಅಂದು ಬೆಳಿಗ್ಗೆ 11 ಗಂಟೆಗೆ ಉಪವಾಸ ಪ್ರಾರಂಭಿಸಿದರು. ಉಪವಾಸ ಪ್ರಾರಂಭಿಸಲಿರುವ ಸುದ್ದಿ ತಿಳಿಯುತ್ತಲೇ ಅವರ ಸಂದರ್ಶನಕ್ಕಾಗಿ ಜನ ಬರತೊಡಗಿದರು. ಪತ್ರಿಕೋದ್ಯಮಿಗಳು, ಚಿತ್ರಗ್ರಾಹಕರು ಬಾಪೂಜಿಯನ್ನು ಆವರಿಸಿಕೊಂಡರು. ಪಾರ್ಸಿ, ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ನರ ಗೀತೆಗಳ ಪಠಣದಿಂದ ಉಪವಾಸ ಗಂಭೀರ ವಾತಾವರಣದಲ್ಲಿ ಪ್ರಾರಂಭವಾಯಿತು. ಉಪವಾಸ ಕೊನೆಗೊಳಿಸಲು ಅವರು ಏಳು ಷರತ್ತುಗಳನ್ನು ಹಾಕಿದ್ದರು. ಎಲ್ಲ ಮತೀಯರ ಪ್ರಮುಖರು ಸಪ್ತ ಷರತ್ತುಗಳಂತೆ ನಡೆದುಕೊಳ್ಳುವ ಭರವಸೆ ಲಿಖಿತಮೂಲಕ, ತಮ್ಮ ತಮ್ಮ ಮತೀಯರ ಪರ ಕೊಟ್ಟ ನಂತರ, ಆಗಸ್ಟ್ 18 ಮಧ್ಯಾಹ್ನ 12-45 ಘಂಟೆಗೆ ಗಾಂಧೀಜಿ ತಮ್ಮ ನಿರಶನ ವ್ರತ, ಮೌಲಾನ ಅಬುಲ್‌ಕಲಾಂ ಆಜಾದರು ತಮ್ಮ ಕೈಯಿಂದ ಕೊಟ್ಟ ಕಿತ್ತಲೇ ಹಣ್ಣಿನ ಒಂದು ಬಟ್ಟಲು ರಸ ಸೇರಿಸಿ ತಮ್ಮ ಪ್ರಾಯೋಪವೇಶ ಅಂತ್ಯಗೊಳಿಸಿದರು.

ಎರಡನೆಯ ದಿನ ಉಪವಾಸ ಮುಂದುವರೆಯುತ್ತಿದ್ದಾಗ ಜವಹರಲಾಲ ನೆಹರು ಮತ್ತು ಸರ್ದಾರ್ ಪಟೇಲ್ ಅವರ ಸಂದರ್ಶನಕ್ಕಾಗಿ ಒಂದು ರಾತ್ರಿ ಹಿಂತಿರುಗುತ್ತಿದ್ದರು. "ಸಾಯಲಿ ಗಾಂಧಿ" "ಏಟಿಗೆ ಏಟು, ಮುಯ್ಯಿಗೆ ಮುಯ್" "ರಕ್ತಕ್ಕೆ ಪ್ರತಿರಕ್ತ". ಈ ಭಯಂಕರ ಘೋಷಣೆಗಳು ಕೇಳಿ ಬಂದಿತು. ಕೋಪಾವಿಷ್ಟರಾದ ನೆಹರು ಮೋಟಾರಿನಿಂದ ಕೆಳಗಿಳಿದು—"ಯಾರು ಘೋಷಣೆ ಕೂಗುತ್ತಿರುವವರು. ಮೊದಲು ನನ್ನನ್ನು ಆಹುತಿ ತೆಗೆದುಕೊಳ್ಳಿ" ಎಂದು ಆರ್ಭಟಿಸಿದರು. ಇವರ ರೌದ್ರಾವೇಶ ಕಂಡು ಘೋಷಣೆ ಕೂಗುತ್ತಿದ್ದವರು ಹಿಮ್ಮೆಟ್ಟಿ ಓಡಿಹೋದರು- ಇದು ಮುಂದೆ ಸಂಭವಿಸಿದ ಮಹಾದುರಂತದ ಮುನ್ಸೂಚನೆಯಾಗಿತ್ತು.

ಲೋಕದ ಕಣ್ಣು ತೆರೆಯಿಸುವುದಕ್ಕಾಗಿ, ಆತ್ಮಶುದ್ಧಿಗಾಗಿ ಮಹಾತ್ಮರು ಕನಿಷ್ಠ 18 ನಿರಶನ ವ್ರತ ಆಚರಿಸಿರುತ್ತಾರೆ. 1944ರಲ್ಲಿ ಕಾಯದೆ ಆಜಂಜಿನ್ನ ಅವರೊಡನೆ ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್ ಸಂಸ್ಥೆಗಳ ರಾಷ್ಟ್ರೀಯ ಸರ್ಕಾರ ರಚಿಸಲು ನಡೆಸಿದ ಮಾತು, ಕಥೆ ವಿಫಲಗೊಂಡಿತು. ಹಿಂದೂ - ಮುಸ್ಲಿಂ ಬಡಿದಾಟ ಪ್ರಾರಂಭವಾಯಿತು. ಉಪವಾಸ ಕೈಗೊಳ್ಳಲು ಚಿಂತಿಸುತ್ತಿದ್ದರು. ನಿಮ್ಮ ಉಪವಾಸದಿಂದ ದೇಶದಲ್ಲಿ ಅಶಾಂತಿ ಮೂಡುವುದಿಲ್ಲವೇ ? ಎಂದು ಅವರನ್ನು ಕೆಲವರು ಪ್ರಶ್ನಿಸಿದರು. ದೇಶದಲ್ಲಿ ಸತ್ಯದ ಕೊಲೆಯಾಗುತ್ತಿರುವಾಗ ನಾನು ಸುಮ್ಮನಿರಲು ಸಾಧ್ಯವೇ ? ಜನರ ಮನಸ್ಸನ್ನು ನನ್ನ ಉಪವಾಸದಿಂದ ತಲ್ಲಣಗೊಳಿಸುವುದೇ ನನ್ನ ಉದ್ದೇಶ. ಬಂಗಾಳದಲ್ಲಿ ಲಕ್ಷಾಂತರ ಜನ ಅನ್ನವಿಲ್ಲದೆ ಸಾಯುತ್ತಿದ್ದಾರೆ. ನಾನು ಈ ಸಂಕಟಗಳನ್ನು ಹೇಗೆ ಸಹಿಸಲಿ —ಎಂದರು.

ಕಾರಲ್ ಹೀತ್ ಎಂಬ ಆಂಗ್ಲ ಕ್ವೇಕರ ಸಂಘದ ಸದಸ್ಯರಿಗೆ ಪತ್ರಬರೆಯುತ್ತಾ "ಅಶಾಂತಿಯ ಜ್ವಾಲೆಯಿಂದ ನನ್ನ ದೇಹ ಸುಡುತ್ತಿದೆ. ಭಗವಂತ ನನ್ನ ಜೀವ ಕೊನೆಗಾಣಿಸಬಾರದೇ" ಎಂದು ತಮ್ಮ ಮನಸ್ಸಿನ ಭಯಂಕರ ಉದ್ವೇಗ ತೋಡಿಕೊಂಡರು.

ನಿಮ್ಮ ಉಪವಾಸದಿಂದ ರಕ್ತಕ್ರಾಂತಿ ತಲೆದೋರಬಹುದಲ್ಲವೇ ಎಂದು ಸ್ನೇಹಿತರು ಪ್ರಶ್ನಿಸಿದರು. "ಸಂಭವಿಸಬಹುದು. ಆದರೆ ಅದು ಬೇಡ. ಅದನ್ನು ಬಯಸೆ. ಅರ್ಧ ಶತಮಾನ ಕಾಲದಿಂದ ಸತ್ಯ ಅಹಿಂಸೆಗಳಿಗಾಗಿ ಆತ್ಮ ಸಾಕ್ಷಿಯಾಗಿ ನನ್ನ ಜೀವ ದೇಹಗಳನ್ನು ಸವಿಸಿರುತ್ತೇನೆ. ಭಾರತ ಇದರ ಅರ್ಥ ಇನ್ನೂ ಗ್ರಹಿಸದೆ ರಕ್ತಕ್ರಾಂತಿ ತಲೆದೋರಿದರೆ, ಅದನ್ನಾದರೂ ನಾನು ಎದುರಿಸಿಯೇನು. ಧೈರ್ಯ ಸಾಹಸಗಳಿಗೆ ಪ್ರಪಂಚ ಮಾರುಹೋಗುತ್ತದೆ. ಜಪಾನೀಯರ ಅಸದೃಶ ಅಭೂತ ಪೂರ್ವ ಸಾಹಸವನ್ನು ಜಗತ್ತೇ ಕೊಂಡಾಡುತ್ತಿದೆ. ಹಿಂಸೆಯನ್ನು ಅಹಿಂಸೆಯಿಂದ ಜಯಿಸಲು ಇನ್ನೂ ಹೆಚ್ಚಿನ ಧೈರ್ಯ, ಸಾಹಸ, ತ್ಯಾಗ ಅಗತ್ಯ. ನಾನು ಅರಾಜಕತೆ ಬಯಸುತ್ತಿಲ್ಲ. ನಾನು ಬಯಸುತ್ತಿರುವುದು ಈ ಬಗೆಯ ಅಹಿಂಸೆಯ ಸಾಕ್ಷಾತ್ಕಾರ."

ಉಪವಾಸವಲ್ಲದೆ ಅನ್ಯಮಾರ್ಗವಿಲ್ಲವೇ ಎಂಬ ಪ್ರಶ್ನೆಗೆ ಉತ್ತರವಾಗಿ ಇತರರಿಗೆ ಇರಬಹುದು. ಆದರೆ ನಿರಶನವ್ರತ, ಜನತೆಯ ಹೃದಯ ಮತ್ತು ಆತ್ಮ ಪ್ರಚೋದಿಸಲು ಭಗವಂತ ದಯಪಾಲಿಸಿರುವ ವಿಶೇಷ ಅಸ್ತ್ರ ಎಂದರು.

ಜೈಲಿನಿಂದ ಬಿಡುಗಡೆ ಆಗಿಬರುವಾಗಲೇ ಆಮಶಂಕೆ, ಜೊತೆಯಲ್ಲೀ ತಂದಿದ್ದರು. ಇದನ್ನು ಹತೋಟಿಗೆ ತರಲು ಆಹಾರ ಸೇವನೆ ಬಹಳ ತಗ್ಗಿಸಿದ್ದರು. ಈಗ ಶೀತ, ಎದೆನೋವು ಕಾಣಿಸಿಕೊಂಡಿತು. ಕಸ್ತೂರಿ ಬಾ ಜೈಲಿನಲ್ಲಿದ್ದಾಗ ಆಕೆಗೆ ಚಿಕಿತ್ಸೆನಡೆಸಿದ್ದ ಒಬ್ಬ ಆಯುರ್ವೇದ ಪಂಡಿತ ಮಹಾತ್ಮರಿಗೆ ಚಿಕಿತ್ಸೆ ನೀಡಲು ಮುಂದಾದ. ಅವರ ಚಿಕಿತ್ಸೆ ಬೇಕಾಗಿರಲಿಲ್ಲ. ಆದರೂ ವೈದ್ಯನನ್ನು ತೃಪ್ತಿಗೊಳಿಸಲು ಅವನು ಕೊಟ್ಟ ಬಾದಾಮಿ ಮಿಶ್ರಣ ತೆಗೆದು ಕೊಂಡರು. ಇದರಿಂದ ಪಚನಕ್ರಿಯೆ ಮತ್ತಷ್ಟು ಕೆಟ್ಟಿತು. ಸುಸ್ತು, ಆಯಾಸ ಹೆಚ್ಚಿತು. ನಿತ್ರಾಣರಾದರು. ಒಂದು ದಿನ ತಲೆಶಿರುಗಿ ಕೆಳಗೆ ಬೀಳುವುದರಲ್ಲಿದ್ದರು. ಅಷ್ಟರಲ್ಲಿ ಒಬ್ಬ ಆಶ್ರಮವಾಸಿ ಕೆಳಗೆ ಬೀಳದಂತೆ ನೆರವಿಗೆ ಬಂದ. ಈ ಸಮಯಕ್ಕೆ ರಾಜಾಜಿ ಆಶ್ರಮಕ್ಕೆ ಬಂದರು. ಗಾಂಧಿಯವರ ದೇಹಸ್ಥಿತಿ ಗಮನಿಸಿದರು. ಈಗ ಉಪವಾಸ ಕೈಗೊಳ್ಳುವುದರಿಂದ ಪರಿಣಾಮ ಜೀವಕ್ಕೆ ಅಪಾಯವಾಗಬಹುದೆಂದು ಗ್ರಹಿಸಿ, ಆಹಾರ ಸೇವನೆ ತಟಸ್ಥಗೊಳಿಸುವುದಕ್ಕೆ ಬದಲಾಗಿ 'ಕಾರ್ಯ ತಟಸ್ಥ' ಗೊಳಿಸುವ ವ್ರತ ತೊಡುವಂತೆ

ಅವರ ಮನ ಒಪ್ಪಿಸಿದರು. ಕಾರ್ಯ ತಟಸ್ಥಗೊಳಿಸಿ, ಮೌನ ಆಚರಿಸುವ ಈ ಕ್ರಮ ಕೈಗೊಳ್ಳದಿದ್ದರೆ ಅವರು ಆಚರಿಸಿದ ನಿರಶನ ಮತ್ತೊಂದು ಸಂಖ್ಯೆಯಿಂದ ಅಧಿಕ ವಾಗುತ್ತಿತ್ತು.

ಮಹಾತ್ಮ ಗಾಂಧಿಯವರು ಆಚರಿಸಿದ ನಿರಶನ ವ್ರತಗಳಿವು:–

1. 1913. ಆಫ್ರಿಕದ ಫೋನಿಕ್ಸ್ ಆಶ್ರಮದಲ್ಲಿದ್ದಾಗ ಇಬ್ಬರು ಆಶ್ರಮ ವಾಸಿಗಳ ನಡತೆ ಸರಿಯಾಗಿರಲಿಲ್ಲವೆಂದು ಒಂದು ವಾರದ ಉಪವಾಸ. ಅಲ್ಲಿಂದ ನಾಲ್ಕುವರೆ ತಿಂಗಳು ಒಪ್ಪತ್ತು ಊಟ.

2. 1914. ಮೇಲ್ಕಾಣಿಸ ರೀತಿಯ ಕಾರಣಗಳಿಗಾಗಿ 14 ದಿನಗಳ ಉಪ ವಾಸ. ಸಾಮಾನ್ಯರಿಗಿಂತ ಉನ್ನತ ಮಟ್ಟದ ನಡತೆ ಅವರು ತಮ್ಮ ಆಶ್ರಮವಾಸಿ ಗಳಿಂದ ನಿರೀಕ್ಷಿಸುತ್ತಿದ್ದುದೇ ಎರಡು ಉಪವಾಸಗಳಿಗೆ ಕಾರಣ.

3. 1918 ಮಾರ್ಚಿ 12 ಅಹಮದಾಬಾದ್ ಹತ್ತಿ ಬಟ್ಟೆ ಗಿರಣಿ ಕಾರ್ಮಿಕರ ಚಂಚಲತೆ ಸರಿಪಡಿಸಿ, ಮುಷ್ಕರ ಯಶಸ್ವಿಯಾಗಲು ಮೂರು ದಿನಗಳ ನಿರಶನವ್ರತ.

4. 1919. ಏಪ್ರಲ್ 13 ರಿಂದ 16 ಗುಜರಾತಿನ ನದಿಯಾದ ಬಳಿ ರೈಲು ಹಳಿಯನ್ನು ಕೀಳಲು ನಡೆಸಿದ ಪ್ರಯತ್ನದ ವಿರುದ್ಧ ಸಾಬರಮತಿ ಆಶ್ರಮದಲ್ಲಿ ಮೂರು ದಿನಗಳ ಉಪವಾಸ.

5. 1921 ನವೆಂಬರ್ 17 ರಿಂದ 22 ರಾಜಕುಮಾರ್ ಪ್ರಿನ್ಸ್ ಆಫ್ ವೇಲ್ಸ್ ಬೊಂಬಾಯಿಗೆ ಬಂದು ಇಳಿದಾಗ ಅಲ್ಲಿನಡೆದ ದೊಂಬಿ ಗಲಾಟೆಯಿಂದ ಮನನೊಂದು ನಡೆಸಿದ ಐದು ದಿನಗಳ ಉಪವಾಸ.

6. 1921 ಫೆಬ್ರವರಿ 12ರಿಂದ 17 ಬಾರ್ಡೋಲಿಯಲ್ಲಿ. ಸಂಯುಕ್ತಪ್ರಾಂತ್ಯದ ಗೋರಖಪುರ ಜಿಲ್ಲೆಯ ಚೌರಿ ಚೌರಾದಲ್ಲಿ ಸತ್ಯಾಗ್ರಹ ಮೆರವಣಿಗೆ ನಡೆಯಿತು. ಪೋಲೀಸರು ತಮ್ಮಲ್ಲಿದ್ದ ಮದ್ದು ಮುಗಿಯುವವರೆಗೂ ಗೋಲೀಬಾರ್ ಮಾಡಿದರು. ಅವರಲ್ಲಿದ್ದ ಮದ್ದುಗುಂಡು ಮುಗಿಯಿತೆಂದು ತಿಳಿದ ಗುಂಪು ಪೋಲೀಸ್ ಠಾಣೆಯ ಮೇಲೆ ಹಲ್ಲೆ ನಡೆಸಿದರು, ಬೆಂಕಿ ಹಚ್ಚಿದರು. ಒಬ್ಬ ಸಬ್‌ಇನ್‌ಸ್ಪೆಕ್ಟರ ಅವರ ಮಗನೂ ಸೇರಿ 22 ಪೋಲೀಸರು ಸಜೀವ ಸುಟ್ಟುಹೋದರು. ಸತ್ಯಾಗ್ರಹಕ್ಕೆ ದೇಶ ಸಿದ್ಧವಾಗಿದೆ ಎಂಬ ತನ್ನ ಎಣಿಕೆ ಹಿಮಾಲಯದಷ್ಟು ದೊಡ್ಡ ಅಪರಾಧವೆಂದು ಐದು ದಿನಗಳ ಪ್ರಾಯಶ್ಚಿತ್ತದ ನಿರಶನ ವ್ರತ ಆಚರಿಸಿದರು. ಸತ್ಯಾಗ್ರಹ ಚಳುವಳಿ ನಿಲ್ಲಿಸಿದರು.

7. 1924 ಸೆಪ್ಟಂಬರ್ 18 ರಿಂದ ಅಕ್ಟೋಬರ್ 9, ದಿಲ್ಲಿಯಲ್ಲಿ. ಕೋಹತ್ತಿನಲ್ಲಿ ಮುಸ್ಲಿಮರು ಅಲ್ಲಿನ 155 ಹಿಂದೂಗಳನ್ನು ಕೊಂದು ಎಲ್ಲ ಹಿಂದೂಗಳನ್ನು ಅಲ್ಲಿಂದ ಅಟ್ಟಿದರು. ಇದಕ್ಕಾಗಿ ಗಾಂಧೀಜಿ 21 ದಿನಗಳ ಪ್ರಾಯೋಪದೇಶ ಆಚರಿಸಿದರು.

8. 1925 ನವಂಬರ್ 24 ರಿಂದ ಡಿಸೆಂಬರ್ 1ರ ವರೆಗೆ ಸಾಬರಮತಿ ಆಶ್ರಮದ ಕೆಲವು ವಿದ್ಯಾರ್ಥಿಗಳ ಅನೈತಿಕ ನಡೆತೆಯಿಂದ ನೊಂದು ನಡೆಸಿದ ನಿರಶನ.

9. 1932 ಸೆಪ್ಟಂಬರ್ 20 ಮಧ್ಯಾಹ್ನದಿಂದ 26 ಸಂಜೆ 5 ಘಂಟೆವರೆಗೆ ಹರಿಜನರನ್ನು ಹಿಂದೂಗಳಿಂದ ಬೇರ್ಪಡಿಸಿ, ಪ್ರತ್ಯೇಕ ಚುನಾವಣೆ ನಡೆಸಬೇಕೆಂಬ ಬ್ರಿಟಿಷ್ ಪ್ರಭುತ್ವದ ಸಲಹೆಯ ವಿರುದ್ಧ ಉಪವಾಸ, ಯರವಾಡ ಜೈಲಿನಲ್ಲಿ.

10. 1932 ಡಿಸೆಂಬರ್ 3 ಯರವಾಡ ಜೈಲಿನಲ್ಲಿ. ಬಂಧನದಲ್ಲಿದ್ದ ಅಪ್ಪಾ ಸಾಹೇಬ ಪಟವರ್ಧನ ಅವರಿಗೆ ಪಾಯಿಖಾನೆ ತೊಳೆಯುವ ಕೆಲಸ ಕೊಡಲು ನಿರಾಕರಿಸಿದ್ದಕ್ಕಾಗಿ ಸಹಾನುಭೂತಿಯ ಉಪವಾಸ. ತರುವಾಯ ಅವರಿಗೆ ಅನುಮತಿ ಕೊಡಲಾಯಿತು.

11. 1933 ಮೇ 8. ಯರವಾಡ ಜೈಲಿನಲ್ಲಿದ್ದಾಗ ಗಾಂಧೀಜಿ ಆತ್ಮಶುದ್ಧಿ ಮತ್ತು ಹರಿಜನೋದ್ಧಾರದ ಚಳವಳಿಗೆ ಹೆಚ್ಚು ಗಮನ ಎಲ್ಲರಿಂದಲೂ ಹರಿಯುವಂತೆ ಮಾಡಲು 21 ದಿನಗಳ ಪ್ರಾಯೋಪವೇಶ ಕೈಗೊಳ್ಳುವುದಾಗಿ ತಿಳಿಸಿದರು. ಸರ್ಕಾರ ಅಂದೇ ಅವರನ್ನು ಬಂಧನದಿಂದ ಬಿಡುಗಡೆ ಮಾಡಿತು. ಆದರೂ ಗಾಂಧೀಜಿ ಉಪವಾಸ ನಿಲ್ಲಿಸಲಿಲ್ಲ. ಪುಣೆಯ ಪರ್ಣಕುಟಿಯಲ್ಲಿ ನಿರ್ದಿಷ್ಟ ಅವಧಿ ಮುಗಿಯುವವರೆಗೂ ವ್ರತ ಮುಂದುವರೆಸಿದರು. ಮೇ 29 ರಂದು ಉಪವಾಸ ಕಟಸ್ಥಗೊಳಿಸಿದರು.

12. 1933 ಆಗಸ್ಟ್ 16 ರಿಂದ 23. ಬಂಧನದಲ್ಲಿದ್ದಾಗಲೂ ಹರಿಜನ ಕಾರ್ಯಕ್ಕಾಗಿ ಯರವಾಡ ಜೈಲಿನಿಂದಲೇ ಪತ್ರವ್ಯವಹಾರ ನಡೆಸುವ ಸೌಲಭ್ಯ ಅವರಿಗೆ ಹಿಂದೆ ಒದಗಿಸಲಾಗಿತ್ತು. ಈ ಸೌಲಭ್ಯ ನಿಲ್ಲಿಸಿದ್ದರಿಂದ ಅದನ್ನು ಮತ್ತೆ ಪಡೆಯಲು ಉಪವಾಸ ಪ್ರಾರಂಭಿಸಿದರು. ಅವರನ್ನು ಪುನೆಯ ಸಸೂನ್ ಆಸ್ಪತ್ರೆಗೆ ಸಾಗಿಸಲಾಯಿತು. ದೇಹಸ್ಥಿತಿ ವಿಷಮಿಸಲು 23ರಂದು ಬಂಧನದಿಂದ ಬಿಡುಗಡೆ ಮಾಡಲಾಯಿತು. ಜೈಲಿಗೆ ಸೇರಿಸುವುದು, ಉಪವಾಸ ಕೈಗೊಂಡರೆ ಬಂಧನದಿಂದ ಬಿಡುಗಡೆಮಾಡುವುದು ಈ ರೀತಿಯ ಚಲ್ಲಾಟಕ್ಕೆ ಎಡೆಗೊಡಬಾರದೆಂದು ಅವರಿಗಾದ ಶಿಕ್ಷೆಯ ಒಂದು ವರ್ಷದ ಅವಧಿಯಲ್ಲಿ ಅಸಹಕಾರದಲ್ಲಿ ತಾವು ಪಾಲ್ಗೊಳ್ಳಬಾರದೆಂದು ನಿರ್ಧರಿಸಿದರು.

13. 1934 ಆಗಸ್ಟ್ 7 ರಿಂದ 14. ಹರಿಜನ ಪ್ರವಾಸ ಕೈಗೊಂಡಿದ್ದಾಗ ಅಜಮೀರಿನಲ್ಲಿ ಹರಿಜನೋದ್ಧಾರದ ಪರ ಇದ್ದ ಕೆಲವರು, ಚಳವಳಿಯ ವಿರೋಧಿ ಬಾಬಲಾಲಾನಾಥನ ಮೇಲೆ ಹಲ್ಲೆ ನಡೆಸಿದರು. ಪರಸ್ಪರ ತಾಳ್ಮೆಯ ಅಭಾವದ ವಿರುದ್ಧ ವರ್ಧಾ ಆಶ್ರಮದಲ್ಲಿ ಒಂದು ವಾರದ ಪ್ರಾಯಶ್ಚಿತ್ತ ನೈಮಿತ್ಯದ ಉಪವಾಸ ಆಚರಿಸಿದರು.

14. 1939 ಮಾರ್ಚಿ 3 ರಿಂದ ಮಾರ್ಚಿ 7ರ ವರೆಗೆ. ರಾಜಕೋಟೆಯ ಠಾಕೂರ ವಚನಭ್ರಷ್ಟನಾದನೆಂದು ಉಪವಾಸ ಪ್ರಾರಂಭಿಸಿದರು. ಭಾರತದ ವೈಸರಾಯರ ಪ್ರವೇಶದಿಂದ ಉಪವಾಸ ನಿಲ್ಲಿಸಿದರು. ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠನ್ಯಾಯಾಧೀಶ ಮಾರಿಸ್‌ಗ್ವೈರ್ ಅವರನ್ನು ವಿಚಾರಣೆ ನಡೆಸಲು ನೇಮಿಸಲಾಯಿತು. ಉಪವಾಸ ಪ್ರಾರಂಭಿಸಿ ವೈಸರಾಯರ ಮಧ್ಯಸ್ತಿಕೆ ತಾನು ಬಯಸಿದ್ದು ಸತ್ಯಾಗ್ರಹದ ಉಚ್ಚ ಧ್ಯೇಯಕ್ಕೆ ಅನುಗುಣವಲ್ಲವೆಂದು ಗಾಂಧೀಜಿ ಅನಂತರ ಪಶ್ಚಾತ್ತಾಪ ವ್ಯಕ್ತಪಡಿಸಿದರು.

15. 1940ರಲ್ಲಿ ಆಶ್ರಮದಲ್ಲಿದ್ದ ಒಬ್ಬ ಮಹಿಳೆಯ ಪತ್ರವನ್ನು ಅದೇ ಆಶ್ರಮದಲ್ಲಿದ್ದ ಮತ್ತೊಬ್ಬಾಕೆ ಅಪಹರಿಸಿದಳೆಂದು ಮೊದಲನೆಯವಳು ಮಹಾತ್ಮರಲ್ಲಿ ದೂರಿದಳು. ಎರಡನೆಯ ಮಹಿಳೆ ಇದನ್ನು ನಿರಾಕರಿಸಿದಳು. ಈಕೆ ಸತ್ಯ ನುಡಿಯುತ್ತಿಲ್ಲವೆಂದು ಶಂಕಿಸಿ ಗಾಂಧೀಜಿ ಉಪವಾಸ ಪ್ರಾರಂಭಿಸಿದರು. ಆದರೆ ಗಾಂಧಿಯವರು ಉಪವಾಸ ಮಾಡುವುದು ಸರಿಯಲ್ಲವೆಂದು ಆಶ್ರಮವಾಸಿಗಳು ಪ್ರತಿಭಟಿಸಿದರು. ಗಾಂಧೀಜಿ ಒಂದು ದಿನ ನಿರಶನವಿದ್ದು ಮುಕ್ತಾಯಗೊಳಿಸಿದರು. ತಾವು ಮಾಡಿದ್ದು ತಪ್ಪೆಂದು ಆ ಮಹಿಳೆಗೆ ಪತ್ರ ಬರೆದು ಕ್ಷಮೆ ಕೋರಿದರು.

16. 1943 ಫೆಬ್ರವರಿ 10 ರಿಂದ ಮಾರ್ಚಿ 3ರ ವರೆಗೆ ಯರವಾಡದ ಆಗಾಖಾನ್ ಅರಮನೆಯಲ್ಲಿ ಪ್ರಾಯೋಪವೇಶ. 'ಕ್ವಿಟ್ ಇಂಡಿಯಾ' ಚಳುವಳಿಯ ನಿಮಿತ್ತ ಗಾಂಧೀಜಿ ಇಲ್ಲಿ ಬಂಧಿತರಾಗಿದ್ದರು. ವೈಸರಾಯಿ ಲಾರ್ಡ್‌ಲಿನ್‌ಲಿತ್‌ಗೊ, ಮಹಾತ್ಮರ ಚಳುವಳಿ ಮತ್ತು ಉಪವಾಸ ಸದುದ್ದೇಶದಿಂದ ಪ್ರೇರಿತವಾದುದಲ್ಲವೆಂದರು. ಇದರಿಂದ ಮನನೊಂದ ಗಾಂಧೀಜಿ ಪ್ರಾರ್ಥನಾರೂಪದ ಆತ್ಮಶುದ್ಧಿಯ ನಿರಶನದಲ್ಲಿ ನಿರತರಾದರು. ವೈಸರಾಯಿ ಸಂಪುಟದ ಮೂವರು ಭಾರತೀಯ ಸದಸ್ಯರು ವೈಸರಾಯರ ನಿಲುವನ್ನು ಪ್ರತಿಭಟಿಸಿ ರಾಜಿನಾಮೆ ಇತ್ತರು. ಮಹಾತ್ಮರ ಪ್ರಾಣ ಉಳಿಸಲು ಅವರನ್ನು ಬಿಡುಗಡೆ ಮಾಡಬೇಕಾಗಿ ಮಾಡಿದ ಬೇಡಿಕೆಗಳು ಸಾರ್ಥಕವಾಗಲಿಲ್ಲ. ಉಪವಾಸ ಜೈಲಿನಲ್ಲಿಯೇ ಮುಕ್ತಾಯಗೊಳಿಸಿದರು.

17. 1943 ಸೆಪ್ಟಂಬರ್ 1 ರಿಂದ 4ರ ವರೆಗೆ. ಹಿಂದೂ–ಮುಸ್ಲಿಂ ಸೌಹಾರ್ದ ಮತ್ತೆ ಮೂಡುವಂತೆ ಮಾಡಲು ನಿರಶನ ವ್ರತ ಪ್ರಾರಂಭಿಸಿದರು. ಎಲ್ಲ ಮತೀಯರ ಪ್ರಯತ್ನದಿಂದ 73 ಘಂಟೆಗಳ ತರುವಾಯ ಉಪವಾಸ ತಟಸ್ಥ ಗೊಳಿಸಿದರು.

18. 1947 ನವೆಂಬರ್ 6 ಕಲ್ಕತ್ತ. ಬಿಹಾರಿನಲ್ಲಿ ಹಿಂದೂ–ಮುಸ್ಲಿಂ ಮತೀಯ ಕೊಲೆ ಪ್ರಾರಂಭವಾಗಿರುವುದನ್ನು ತಿಳಿದು ಅಲ್ಪ ಆಹಾರ ಸೇವನೆಯ ಕ್ರಮ ಪ್ರಾರಂಭಿಸಿದರು.

19. 1948 ಜನವರಿ 13 ರಿಂದ 18. ದಿಲ್ಲಿಯ ಬಿರ್ಲಾಭವನದಲ್ಲಿ ನಿರಶನ ಪ್ರಾರಂಭಿಸಿದರು. ಹಿಂದೂ–ಮುಸಲ್ಮಾನರಲ್ಲಿ ಹೃದ್ಗತ ಸ್ನೇಹ ನೆಲಸಬೇಕು. ಮುಸಲ್ಮಾನರು ಪಶ್ಚಿಮಬಂಗಾಳದಲ್ಲಿ ಹಿಂದೂಗಳ ನಡುವೆ ನಿರಾತಂಕ ನಿರ್ಭಯವಾಗಿ ನೆಲಸುವಂತಾಗಬೇಕು. ಮುಸಲ್ಮಾನರೂ, ಸಿಖ್ಖರೂ ಇದೇ ರೀತಿಯಲ್ಲಿ ಕ್ರೂರತನ ದಿಂದ ವರ್ತಿಸುತ್ತಿರುವರೆಂಬುವುದರಲ್ಲಿ ಅರ್ಥವಿಲ್ಲ. 55 ಕೋಟಿ ರೂಪಾಯಿಗಳ ಅವರ ಪಾಲು ಪಾಕಿಸ್ತಾನಕ್ಕೆ ಸಲ್ಲಬೇಕು. ಇವು ಉಪವಾಸ ನಿಲ್ಲಿಸಲು ಅವರ ಷರತ್ತುಗಳು. ಅವರ ಸಪ್ತಷರತ್ತುಗಳು ಎಲ್ಲರಿಂದಲೂ ಒಪ್ಪಿಗೆ ಪಡೆದುದರಿಂದ ಉಪವಾಸ ನಿಲ್ಲಿಸಿದರು.

ಉಪವಾಸ ಪ್ರಾರ್ಥನೆಯಿಂದ ಪ್ರಾರಂಭವಾಗುವುದು, ಪ್ರಾರ್ಥನೆಯಿಂದ ಮುಕ್ತಾಯಗೊಳ್ಳುವುದು. ಬೆಳಿಗ್ಗೆ ಮತ್ತು ಸಂಜೆಯ ಪ್ರಾರ್ಥನೆ ಎಂದಿನಂತೆ ನಡೆಯುವುದು. ಭಗವದ್ಗೀತೆಯ ಪಾರಾಯಣ ನಡೆಯುವುದು. ಉಪವಾಸದ ಅವಧಿಯಲ್ಲಿ ಆಗಾಗ ಸ್ವಲ್ಪಸ್ವಲ್ಪ ಬಿಸಿನೀರು ಸೇವಿಸುವರು. ನೀರಿನೊಂದಿಗೆ ಚಿಟಿಕೆ ಉಪ್ಪು ಅಥವಾ ಸೋಡ ಬೆರಸುವುದೂ ಉಂಟು. ದೀರ್ಘಾವಧಿಯ ಉಪವಾಸ ದಲ್ಲಿ ಕೆಲವು ದಿನಗಳ ನಂತರ, ಬಾಯಿವಾಸನೆಯಿಂದ ನೀರು ಸೇವಿಸುವುದೂ ಕಷ್ಟ ವಾಗುವುದುಂಟು. ಶಕ್ತಿಯಿದ್ದಷ್ಟು ದಿನ ಎದ್ದು ಸ್ನಾನ ಮಾಡುವರು ಇಲ್ಲವೇ ಒದ್ದೆ ಬಟ್ಟೆಯಿಂದ ಮೈ ಒರಸಲಾಗುವುದು. ಮನು ಪಾದ ಒತ್ತುವಳು. ಮೂತ್ರ ವಿಸರ್ಜನೆಗೆ ಹೆಚ್ಚು ಗಮನ ಕೊಡುವರು. ಪ್ರಾರಂಭದ ಕೆಲವು ದಿನಗಳಲ್ಲಿ ಎನಿಮಾ ತೆಗೆದುಕೊಳ್ಳುವುದೂ ಉಂಟು. ವೈದ್ಯರು ದಿನವಹಿ ದೇಹಪರೀಕ್ಷೆ, ರಕ್ತದ ಒತ್ತಡ, ದೇಹದ ಉಷ್ಣತೆ, ತೂಕ, ನಾಡಿ ಪರೀಕ್ಷೆ ನಡೆಸುವರು. ಶಕ್ತಿ ಇದ್ದಷ್ಟು ದಿನ ಚರಖದಿಂದ ಅಥವಾ ತಕಲಿಯಿಂದ ನೂಲುವರು. ಮಾತು ಕಡಿಮೆ. ರಾಮನಾಮ ಜಪಿಸುತ್ತಲೇ ಇರುವರು. ಒಂದು ಬಟ್ಟಲು ಕಿತ್ತಲೆಹಣ್ಣಿನ ರಸದ ಸೇವನೆಯಿಂದ ಉಪವಾಸ ಮುಕ್ತಾಯಗೊಳಿಸುವರು.

ಪೂರ್ಣ ನಿರಸನವಲ್ಲದ ಒಪ್ಪತ್ತು ಮಾತ್ರ ಆಹಾರ ಸೇವಿಸುವ ಪದ್ಧತಿ ಅವರು ಅನುಸರಿಸಿದ್ದುಂಟು. ದಕ್ಷಿಣ ಆಫ್ರಿಕದಲ್ಲಿದ್ದಾಗ ಗಾಂಧೀಜಿ ಮತ್ತು ಇವರೊಡ ಸಣ್ಣ ಕೋಣೆಯಲ್ಲಿದ್ದ 18 ಭಾರತೀಯರಿಗೆ ಮಾತ್ರ ಲಿಖಿತ ಕೋರಿಕೆಯಂತೆ ಬ್ರೆಡ್, ತುಪ್ಪ ಮತ್ತು ಇತರ ಸೌಲಭ್ಯ ಒದಗಿಸಲು ಜೈಲಿನ ಮೇಲಾಧಿಕಾರಿಗಳು ಒಪ್ಪಿದರು. ಆದರೆ ಈ ಸೌಲಭ್ಯಗಳು ಸವಿನಯ ಕಾಯಿದೆ ಭಂಗದಲ್ಲಿ ಭಾಗವಹಿಸಿ ಶಿಕ್ಷಿತರಾಗಿದ್ದ ಎಲ್ಲ ಭಾರತೀಯರಿಗೂ, ಮತ್ತು ಈ ಚಳುವಳಿಯಲ್ಲಿ ಪಾಲ್ಗೊಂಡಿದ್ದ ಚೀನೀಯರಿಗೂ ದೊರೆಯುವಂತಾಗಬೇಕು. ಅದುವರೆಗೆ ತಾವು ಒಪ್ಪತ್ತು ಮಾತ್ರ ಆಹಾರ ಸ್ವೀಕರಿಸುವುದಾಗಿ ನಿರ್ಧರಿಸಿ ಒಂದು ತಿಂಗಳ ಕಾಲ ಒಪ್ಪತ್ತು ಮಾತ್ರ ಊಟ ಮಾಡುತ್ತಿದ್ದರು. ಎಲ್ಲರಿಗೂ ಸಮಾನ ಸೌಲಭ್ಯ ದೊರೆಯುತ್ತಲೇ ಈ ದೀಕ್ಷೆ ಮುಕ್ತಾಯಗೊಳಿಸಿದರು.

ಗಾಂಧೀಜಿಯವರ ಮೇಲ್ಪಂಕ್ತಿ ಅನುಸರಿಸಿ ಉಪವಾಸ, ಒಪ್ಪತ್ತು, ಕಾಫಿ, ಟೀ, ಹೊಗೆಬತ್ತಿ, ಮಾದಕ ಪಾನೀಯಗಳನ್ನು ಬಿಟ್ಟು ತಮ್ಮ ಜೀವನ ಸರಳ ಮಾಡಿಕೊಂಡವರು ಅಸಂಖ್ಯಾತ ಜನ. ಭಾರತದ ಗಡಿ ದಾಟಿ ದೇಶ ವಿದೇಶಗಳಿಗೂ ಈ ಪದ್ಧತಿ ಹರಡಿತು. ಗಾಂಧೀಜಿ ಆಚರಿಸಿದ ಗರಿಷ್ಠ ಅವಧಿ 21 ದಿನಗಳ ಉಪವಾಸ. ಈ ಅವಧಿ ಮೀರಿಸಿದ ದೃಷ್ಟಾಂತಗಳು ಹಲವು ದೊರೆಯುತ್ತವೆ.

ಐರ್ಲೆಂಡಿನ ವಿಮೋಚನೆಗಾಗಿ ಮ್ಯಾಕ್‌ಸ್ವಿನಿ 1920ರಲ್ಲಿ 65 ದಿನಗಳ ಉಪವಾಸ ಆಚರಿಸಿ ಅಸು ನೀಗಿದರು. 1927ರಲ್ಲಿ ಶಸ್ತ್ರ ಶಾಸನದ ವಿರುದ್ಧ 75 ದಿನಗಳ ಉಪವಾಸ ಅವಾರಿ ಆಚರಿಸಿದರು. ಇವರಿಗೆ 4 ವರ್ಷಗಳ ಶಿಕ್ಷೆ ವಿಧಿಸಲ್ಪಟ್ಟಿತು.

1929 ರಲ್ಲಿ ಜತೀಂದ್ರನಾಥ ದಾಸರು ಪಂಜಾಬಿನ ಜೈಲಿನಲ್ಲಿ ಭಗತ್‌ಸಿಂಗರ ಜೊತೆಯಲ್ಲಿದ್ದಾಗ ರಾಜಕೀಯರನ್ನು ಕ್ರಿಮಿನಲ್ ಅಪರಾಧಿಗಳಿಂದ ಬೇರ್ಪಡಿಸಿ, ರಾಜಕೀಯರಿಗೆ ವಿಶೇಷ ಸೌಲಭ್ಯ ನೀಡಬೇಕೆಂದು 64 ದಿನಗಳ ನಿರಶನ ಆಚರಿಸಿದರು. ಬಲಾತ್ಕಾರದಿಂದ ಆಹಾರ ತುರುಕುವ ಪ್ರಯತ್ನಕ್ಕೆ ಅವರು ಅವಕಾಶ ಕೊಡದೆ ಅಸು ನೀಗಿದರು.

1929ರಲ್ಲಿ ಫಾಂಗಿ ವಿಜಯ ಎಂಬ ಬೌದ್ಧ ಸನ್ಯಾಸಿ, ಜೈಲಿನಲ್ಲೂ ತನಗೆ ಹಳದಿ ವಸ್ತ್ರ ಧರಿಸುವ ಅವಕಾಶ ಕೊಡಬೇಕೆಂದು 164 ದಿನ ಉಪವಾಸ ಆಚರಿಸಿ ಅಸು ನೀಗಿದರು. ಇವರು ಹಲವು ಬಾರಿ ರಾಜದ್ರೋಹಕ್ಕಾಗಿ ಶಿಕ್ಷಿತರಾಗಿದ್ದರು.

ಈ ಮೂವರು ಮಹಾತ್ಯಾಗಿಗಳ ನಿಧನಕ್ಕಾಗಿ ಸಂತಾಪ ವ್ಯಕ್ತ ಪಡಿಸುವ ನಿರ್ಣಯಗಳನ್ನು ಕಾಂಗ್ರೆಸ್ ಮಹಾಧಿವೇಶನ ಅಂಗೀಕರಿಸಿರುತ್ತದೆ.

ದೇಹವನ್ನು ತೃಣಸಮ ಭಾವಿಸಿ ಅದನ್ನು ಸಂಪೂರ್ಣವಾಗಿ ತಮ್ಮ ಹತೋಟಿ ಯಲ್ಲಿರಿಸಿಕೊಂಡಿದ್ದರು ಆಚಾರ್ಯ ಭನಸಾಲಿ. ಚಿಮೂರಿನಲ್ಲಿ ಪೋಲೀಸರು ಸ್ತ್ರೀಯರಿಗೆ ತೋರಿದ ಅಪಮಾನ ಪ್ರತಿಭಟಿಸಲು ಸೇವಾಗ್ರಾಮದಿಂದ ೬3 ಮೈಲಿಗಳ ದೂರದ ಅಲ್ಲಿಗೆ 64 ದಿನಗಳ ಉಪವಾಸ ಆಚರಿಸುತ್ತಾ ನಡೆದರು ಇವರು. ಮತ್ತೊಮ್ಮೆ 40 ದಿನಗಳ ಉಪವಾಸ ಆಚರಿಸಿದರು.

1932ರಲ್ಲಿ ಕಾರವಾರ ಜಿಲ್ಲೆಯ ಸಿರಸಿಯಲ್ಲಿ ಕರನಿರಾಕರಣೆ ಚಳವಳಿಯಲ್ಲಿ ಭಾಗವಹಿಸಿದ್ದವರ ಎಮ್ಮೆಯನ್ನು ಸರ್ಕಾರ ವಶಪಡಿಸಿಕೊಂಡು ಹರಾಜು ಮಾಡಿತು. ಇದನ್ನು ಸರ್ಕಾರದ ಕಾರಕೂನನೊಬ್ಬ ಕೊಂಡ. ಅದನ್ನು ಮಾವಿನಗುಂಡಿ ಎಂಬ ತನ್ನ ಹಳ್ಳಿಗೆ ಒಯ್ದ. ಎಮ್ಮೆಯನ್ನು ಬಿಡಿಸಿಕೊಳ್ಳಲು ಬೆಂಗಳೂರಿನ ಕೆ. ವಿ. ವೆಂಕಟರಾಮಯ್ಯನವರ ಪತ್ನಿ ಗೌರಮ್ಮ ಮತ್ತು ಇತರ ಮಹಿಳೆಯರು ಉಪವಾಸ ವ್ರತ ಕೈಗೊಂಡರು. ಕಲ್ಲಾಳ ಲಕ್ಷ್ಮಮ್ಮನವರು 22 ದಿನ, ಭುವನೇಶ್ವರಮ್ಮ 31 ದಿನಗಳ ಉಪವಾಸ ಆಚರಿಸಿ ಎಮ್ಮೆಯನ್ನು ಹಿಂದಕ್ಕೆ ಪಡೆದರು.

ಪ್ರತ್ಯೇಕ ಆಂಧ್ರ ಪ್ರಾಂತ ರಚಿತವಾಗಬೇಕೆಂದು ಪೊಟ್ಟಿ ಶ್ರೀರಾಮುಲು 50 ದಿನಗಳ ಉಪವಾಸ ಆಚರಿಸಿ ಹುತಾತ್ಮರಾದರು ಇವರ ಉದ್ದೇಶ ಫಲಿಸಿ 1953ರಲ್ಲಿ ಆಂಧ್ರ ಪ್ರಾಂತ ರಚಿತವಾಯಿತು.

1961ರಲ್ಲಿ ಪಂಜಾಬಿನ ಅಕಾಲಿದಳದ ಪ್ರಮುಖ ನಾಯಕ ಮಾಸ್ಟರ್ ತಾರಾಸಿಂಗ್ ಪಂಜಾಬು ಪ್ರತ್ಯೇಕ ರಾಜ್ಯವಾಗಬೇಕೆಂದು 48 ದಿನಗಳ ನಿರಶನ ಆಚರಿಸಿದರು.

ದರ್ಶನಸಿಂಗ್ ಪೆರುಮಾನ್ ಸ್ವಾತಂತ್ರ್ಯ ಹೋರಾಟದಲ್ಲಿ 15 ವರ್ಷಗಳಿಗೂ ಹೆಚ್ಚು ಕಾಲ ಜೈಲುವಾಸ ಅನುಭವಿಸಿರುತ್ತಾರೆ. ಮಲಯ ಜೈಲಿನಲ್ಲಿದ್ದಾಗ 21 ಉಪವಾಸ ಆಚರಿಸಿ ಬಂಧಮುಕ್ತರಾದರು. ಚಂದೀಘಡ ಪಂಜಾಬಿಗೆ ಸೇರಬೇಕೆಂದು 69ನೆಯ ಮುಪ್ಪಿನಲ್ಲಿ ಆಗಸ್ಟ್ 15, 1969 ರಂದು ಉಪವಾಸ ಪ್ರಾರಂಭಿಸಿ 74 ದಿನ ಉಪವಾಸವಿದ್ದು ಅಕ್ಟೋಬರ್ 27, 1969 ರಂದು ದೈವಾಧೀನರಾದರು. ಇವರು 1952 ರಿಂದ 1954ರವರೆಗೆ ರಾಜ್ಯ ಸಭೆಯ ಸದಸ್ಯರಾಗಿದ್ದರು. ಅಕಾಲಿ ದಳದ ಅಧ್ಯಕ್ಷರೂ ಆಗಿದ್ದರು.

ಆತ್ಮ ವಿದ್ಯೆ

1936 ರಲ್ಲಿ ಗಾಂಧೀಜಿ ಕರ್ನಾಟಕದಲ್ಲಿ ಪ್ರವಾಸ ನಡೆಸುತ್ತಿದ್ದರು. ಹಟಾತ್ತನೆ ರಕ್ತದ ಒತ್ತಡ ಅಧಿಕವಾಗಿ ಅವರು ತುಂಬ ಬಳಲಿದರು. ವಿಶ್ರಾಂತಿ ತೆಗೆದುಕೊಳ್ಳುವಂತೆ ವೈದ್ಯರು ಸಲಹೆ ನೀಡಿದರು. ಆಗ ಮೈಸೂರಿನ ಮಹಾರಾಜರಾಗಿದ್ದ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಆಜ್ಞೆಯಂತೆ ದಿವಾನ್ ಸರ್ ಮಿರ್ಜಾ ಇಸ್ಮಾಯಿಲರು ಗಾಂಧೀಯವರನ್ನು ಗಿರಿಧಾಮವೆಂದು ಪ್ರಸಿದ್ಧವಾದ ನಂದೀ ಬೆಟ್ಟದ ಮೇಲೆ ವಿಶ್ರಾಂತಿ ಪಡೆಯುವಂತೆ ಆಹ್ವಾನಿಸಿದರು. ಮಹಾತ್ಮರು ಆಹ್ವಾನ ಸ್ವೀಕರಿಸಿ ಪರಿವಾರ ಸಮೇತ, ನಂದಿಗೆ ಹೋಗಲು ಮೇ 2, 1936 ರಂದು ಬೆಂಗಳೂರಿಗೆ ಆಗಮಿಸಿದರು. ಶ್ರೀಮತಿಯರಾದ ಕಸ್ತೂರಿ ಬಾ, ಮಣಿಬೆಹೆನ್ ಪಟೇಲ್ ರಾಮೇಶ್ವರಿ ನೆಹರು. ತಾರಾಬೆಹೆನ್ ಮಶ್ರುವಾಲ, ಶಾಂತಿಬೆಹೆನ್ ಎಂದು ನಾಮಾಂಕಿತರಾದ ಮಿಸ್ ಬ್ರಿಂಗ್‌ಹ್ಯಾಂ, ಕುಸುಮ ಬೆಹೆನ್ ಮತ್ತು ಶ್ರೀಯುತರಾದ ಸರ್ದಾರ್ ವಲ್ಲಭಾಯಿ ಪಟೇಲ್, ಮಹದೇವ ದೇಸಾಯಿ, ಕಾಕಾ ಕಾಲೇಲ್ಕರ,, ಜೆ. ಸಿ. ಕುಮಾರಪ್ಪ, ಕನ್ಹಾಯಿಲಾಲ್ ಗಾಂಧಿ, ನವೀನಚಂದ್ರ ಗಾಂಧಿ, ಮತ್ತು ಕಾಂತಿಲಾಲ್ ಗಾಂಧಿ ಇವರು ಮಹಾತ್ಮರ ಪರಿವಾರದಲ್ಲಿದ್ದರು.' 'ಆನಂದಗಿರಿ' ಎಂದು ಹೆಸರಾಂತ ನಂದೀ ಬೆಟ್ಟಕ್ಕೆ ಆಗ ರಸ್ತೆ ಇರಲಿಲ್ಲ. ಮೆಟ್ಟಲು ಹತ್ತಿ ಹೋಗಬೇಕಾಗಿತ್ತು. ಸಾವಿರಕ್ಕೂ ಹೆಚ್ಚಿನ ಕಡಿದಾದ ಮೆಟ್ಟಲು ಏರಲು ನಿಶ್ಯಕ್ತರಾಗಿದ್ದ ಮಹಾತ್ಮರಿಗೆ ಸಾಧ್ಯವಾಗದೆಂದು ಅವರನ್ನು ಡೋಲಿ ಅಥವಾ ಕುರ್ಚಿಯಲ್ಲಿ ಕೂಡಿಸಿ ನಿಧಾನವಾಗಿ ಮೇಲಕ್ಕೆ ಒಯ್ಯುವಂತೆ ದಿವಾನರು, ನಂದೀಬೆಟ್ಟದ ಆರೋಗ್ಯಧಾಮದ ಮೇಲ್ವಿಚಾರಕರಾಗಿದ್ದ ಬಿ. ಎ. ಚನ್ನಪ್ಪನವರಿಗೆ ತಿಳಿಸಿದರು. ಬೆಟ್ಟದ ಬುಡದಲ್ಲಿ ಕುರ್ಚಿ ಸಮೇತ ಆಳುಗಳು ಸಿದ್ಧವಾಗಿ ನಿಂತಿದ್ದರು. ಆದರೆ ಮೆಟ್ಟಲು ಹತ್ತದೆ ಐದು ಮೈಲಿಗಳ ನೀಳು ದಾರಿಯಲ್ಲಿ ಮಹಾತ್ಮರು, ಬೇಸಿಗೆಯ ಬಿಸಿಲಿನಲ್ಲಿ ನಡೆಯುತ್ತಲೇ ಬೆಟ್ಟ ಹತ್ತಿದರು. ಬೆಟ್ಟದ ತುದಿ ಮುಟ್ಟುತ್ತಲೇ ಚನ್ನಪ್ಪನವರನ್ನು ಕರೆದು ತಾನು ಸುಖವಾಗಿ ಬೆಟ್ಟವೇರಿದ್ದನ್ನು ದಿವಾನ್ ಮಿರ್ಜಾ ಅವರಿಗೆ ತಿಳಿಸುವಂತೆ ಹೇಳಿದರು. ನನ್ನಿಂದ ಬೆಟ್ಟ ಏರಲು ಸಾಧ್ಯವಾಗದೆಂದು ನಿಮ್ಮ ದಿವಾನರು ನನಗೆ ಸವಾಲು ಹಾಕಿದ್ದರು. ನಾನು ಸುರಕ್ಷಿತವಾಗಿ ಬೆಟ್ಟದ ಮೇಲಕ್ಕೆ ಬಂದಿರುವೆನೆಂದು ದಿವಾನರಿಗೆ ತಿಳಿಸಿ ಎಂದರು. ಅವರ ಸಂಕಲ್ಪ, ಮನೋದಾರ್ಢ್ಯವೇ ಇದಕ್ಕೆ ಕಾರಣ.

ನಂದಿಯಲ್ಲಿದ್ದಾಗ ವೈದ್ಯ ಇಲಾಖೆಯ ವೈದ್ಯರು ಮಹಾತ್ಮರ ದೇಹಸ್ಥಿತಿಯನ್ನು ಆಗಿಂದಾಗ ಪರೀಕ್ಷಿಸುತ್ತಿದ್ದರು. ಒಂದು ದಿನ ಮೂತ್ರ ಸಾಕಷ್ಟು ತಿಳಿಯಾಗಿಲ್ಲ ಶುಭ್ರವಾಗಿಲ್ಲ ಎನಿಸಿತು ವೈದ್ಯರಿಗೆ. ಮೂತ್ರ ಸರಿಯಾಗಿಲ್ಲ ಇದಕ್ಕೆ ಔಷಧ ತೆಗೆದುಕೊಳ್ಳುವಂತೆ ವೈದ್ಯರು ಗಾಂಧೀಯವರಿಗೆ ಸಲಹೆ ನೀಡಿದರು. ಔಷಧಿಯ ಅಗತ್ಯವಿಲ್ಲ, ನಾಳೆಯೊಳಗಾಗಿ ಸರಿಪಡಿಸಿಕೊಳ್ಳುತ್ತೇನೆ ಎಂದರು ಅವರು. ಮಾರನೆಯ ದಿನ ಪರೀಕ್ಷಿಸಿದಾಗ ಹಿಂದಿನ ದಿನ ಕಂಡು ಬಂದಿದ್ದ ದೋಷ ನಿವಾರಣೆಯಾಗಿತ್ತು. ಆಹಾರದಿಂದ ಸರಿಪಡಿಸಿಕೊಂಡರೋ ಅಥವಾ ತಮ್ಮ ಆತ್ಮ ಬಲದಿಂದ, ಇಂದ್ರಿಯ ನಿಗ್ರಹದಿಂದ ಸರಿಪಡಿಸಿಕೊಂಡರೋ ಎಂದು ವೈದ್ಯರು ಬೆರಗಾದರು.

ಗಾಂಧೀಜಿ ಮೇ 31 ರಂದು ನಂದೀ ಬೆಟ್ಟ ಇಳಿದು ಚಿಕ್ಕಬಳ್ಳಾಪುರಕ್ಕೆ ಕೆ. ಸಿ. ರೆಡ್ಡಿಯವರೊಂದಿಗೆ ಹೊರಟರು. ಹೊರಡುವ ಹಿಂದಿನ ದಿನ ಅವರ ತೂಕ ತೆಗೆದುಕೊಂಡ ವೈದ್ಯರು ಗಾಂಧೀಯವರ ತೂಕ ಎಂಟು ಪೌಂಡ್ ಅಧಿಕವಾಗಿದೆ ಎಂದು ತಿಳಿಸಿದರು. ಅವರ ದೇಹಸ್ಥಿತಿ ಸುಧಾರಿಸಿರುವುದಕ್ಕೆ ಎಲ್ಲರೂ ಸಂತುಷ್ಟರಾದರು. "ಇದು ಹೇಗೆ ಸಾಧ್ಯ. ವೈದ್ಯ ತಕ್ಕಡಿಗೆ ಏನೋ ಮೋಸ ಮಾಡಿರಬೇಕು. ಇಲ್ಲದಿದ್ದರೆ ನನ್ನ ತೂಕ ಒಮ್ಮೆಲೆ ಎಂಟುಪೌಂಡು ಅಧಿಕವಾಗಲು ಸಾಧ್ಯವಿಲ್ಲ" ಎಂದು ಹಾಸ್ಯ ಮಾಡಿದರು.

ಇದೇ ನಂದೀ ಬೆಟ್ಟಕ್ಕೆ ರಸ್ತೆ ಮಿರ್ಜಾ ನಿರ್ಮಿಸಿ, ತಾವು ಮಾಡಿಸಿದ ಕೆಲಸ ಮಹಾತ್ಮರ ಮೆಚ್ಚುಗೆ ಪಡೆದೀತೆಂದು, ಈ ವಿಷಯವನ್ನು ಸ್ವತಃ ಮಹಾತ್ಮರಿಗೆ ಮಿರ್ಜಾ ತಿಳಿಸಲು ಹೋದರು, ತಿಳಿಸಿದರು. ಆದರೆ ಮಹಾತ್ಮರ ದೃಷ್ಟಿಯೇ ಬೇರೆಯಾಗಿತ್ತು. ಏಕಾಂಗಿಯಾಗಿ, ಜನಜಂಗುಳಿಯಿಂದ ತೊಂದರೆಗೆ ಒಳಗಾಗದೆ ಆರಾಮವಾಗಿ ಕಾಲ ಕಳೆಯುವ ಅವಕಾಶ ಇದರಿಂದ ತಪ್ಪಿಸಿದಂತೆ ಆಯಿತು ಎಂದರು ಗಾಂಧೀಜಿ.

ನಂದೀ ಬೆಟ್ಟದ ಪಕ್ಕದಲ್ಲಿ ಚನ್ನಗಿರಿ ಬೆಟ್ಟವಿದೆ. ಈ ಬೆಟ್ಟದಲ್ಲಿ ನೀಲಕಂಠ ಬ್ರಹ್ಮಚಾರಿ ಎಂಬ ಕ್ರಾಂತಿಕಾರಿ, ಓಂಕಾರಸ್ವಾಮಿ ಎಂಬ ಹೆಸರಿನಿಂದ ಏಕಾಂತವಾಸಿಗಳಾಗಿದ್ದರು. ಆಷ್ ಎಂಬ ಆಂಗ್ಲೇಯನ ಕೊಲೆಯಲ್ಲಿ ಪ್ರಮುಖ ನಾಯಕರಾಗಿದ್ದರೆಂದು ಇವರು ಜೈಲುವಾಸ ಅನುಭವಿಸಿ ಬಿಡುಗಡೆಯಾಗಿ, ಸನ್ಯಾಸದೀಕ್ಷೆ ಸ್ವೀಕರಿಸಿ ಚನ್ನಗಿರಿಯಲ್ಲಿ ಯೋಗಾನಿಷ್ಠರಾಗಿ ನೆಲೆಸಿದ್ದರು. ಒಂದು ದಿನ ಜೆ.ಸಿ. ಕುಮಾರಪ್ಪನವರು ಓಂಕಾರಸ್ವಾಮಿಗಳಿದ್ದಲ್ಲಿಗೆ ಹೋಗಿ ಒಂದು ಗಂಟೆ ಕಾಲ ಅವರೊಡನೆ ಪಾರಮಾರ್ಥಿಕ ವಿಚಾರ ಕುರಿತು ಚರ್ಚಿಸಿ, ಬಹಳ ಉಲ್ಲಸಿತರಾಗಿ ನಂದೀ ಬಿಡಾರಕ್ಕೆ ಹಿಂತಿರುಗಿ ಬಂದು ಅಲ್ಲಿ ನಡೆದ ಮಾತುಕಥೆಗಳನ್ನು ಸವಿಸ್ತಾರವಾಗಿ ವಲ್ಲಭಾಯಿ ಪಟೇಲ್ ಮತ್ತು ಮಹದೇವ ದೇಸಾಯಿ ಅವರಿಗೆ ತಿಳಿಸಿದರು. ತಾವೂ ಓಂಕಾರ ಸ್ವಾಮಿಯವರ ದರ್ಶನ

ಲಾಭ ಪಡೆಯ ಬೇಕೆಂಬ ಕುತೂಹಲ ಸಹಜವಾಗಿ ಅವರಲ್ಲಿ ಕೆರಳಿತು. ಮಾರನೆಯ ದಿನವೇ ಚನ್ನಗಿರಿಗೆ ಇಬ್ಬರೂ ಹೋಗಲು ತೀರ್ಮಾನಿಸಿದರು. ಬುತ್ತಿ ಕಟ್ಟಿಕೊಂಡು ದಾರಿ ತೋರಿಸಲು ಕೆಲವು ಸ್ಥಳೀಯರನ್ನು ಜೊತೆ ಮಾಡಿಕೊಂಡು ಮುಂಜಾನೆ ಎದ್ದು ಹೊರಟರು. ನಂದೀಬೆಟ್ಟ ಇಳಿದು, ಸೀಳು ದಾರಿಯ ಮೂಲಕ ಚನ್ನಗಿರಿ ಬೆಟ್ಟ ಪ್ರಯಾಸದಿಂದ ಮುಟ್ಟಿದರು. ಅಲ್ಲಿ ಓಂಕಾರ ಸ್ವಾಮಿಗಳ ಜೊತೆ ಒಂದು ಗಂಟೆ ಕಾಲ ಮಾತನಾಡಿ,ತರುವಾಯ ತಮ್ಮೊಡನೆ ತಂದಿದ್ದ ಆಹಾರ ತೆಗೆದುಕೊಂಡು, ಬೆಟ್ಟ ಇಳಿದು, ಬೆಟ್ಟ ಹತ್ತಿ ನಂದೀ ಸೇರಿ, ಅಲ್ಲಿ ಸ್ವಾಮಿಗಳೊಡನೆ ನಡೆದ ವಿಷಯ ಸವಿಸ್ತಾರವಾಗಿ ಗಾಂಧೀಯವರಿಗೆ ತಿಳಿಸಿದರು. ಇವರ ವರದಿಗಳನ್ನು ಆಲಿಸಿದ ಮಹಾತ್ಮರಿಗೆ ಓಂಕಾರ ಸ್ವಾಮಿಗಳನ್ನು ತಾವೂ ನೋಡಬೇಕು ಎನಿಸಿತು. ತಮ್ಮ ಆಪ್ತ ಕಾರ್ಯದರ್ಶಿಗಳಾದ ಮಹದೇವ ದೇಸಾಯಿಯವರಿಂದ ಸ್ವಾಮಿಗಳಿಗೆ ಪತ್ರ ಹೇಳಿ ಬರೆಸಿದರು. ಮಹದೇವ ದೇಸಾಯಿಯವರ ವರದಿ ಕೇಳಿ ತಮ್ಮನ್ನು ಕಾಣಬೇಕೆಂಬ ಬಯಕೆ ಬಲವಾಗಿದೆ ನನ್ನಲ್ಲಿ. ಅನಾರೋಗ್ಯದ ನಿಮಿತ್ತ ತಮ್ಮಲ್ಲಿಗೆ ಬರಲು ನನ್ನಿಂದ ಸಾಧ್ಯವಿಲ್ಲ. ತಮ್ಮನ್ನು ನೋಡಬೇಕೆಂಬುದಕ್ಕೆ ಕುತೂಹಲವಷ್ಟೇ ಕಾರಣವಲ್ಲ. ಉಭಯತ್ರರ ವಿಚಾರ ವಿನಿಮಯದಿಂದ ಮಾನವ ಕಲ್ಯಾಣಕ್ಕೆ ಶ್ರೇಯಸ್ಸು ಲಭಿಸೀತು ಎಂಬ ಆಸೆಯೇ ಇದಕ್ಕೆ ಕಾರಣ. ಈ ರೀತಿ ಪತ್ರ ಬರೆಯಿಸಿ ಸ್ವಾಮಿಗಳಿಗೆ ಕಳುಹಿಸಿಕೊಟ್ಟರು. ಓಂಕಾರ ಸ್ವಾಮಿಗಳು ಮಹಾತ್ಮರ ಪತ್ರಕ್ಕೆ ಮನ್ನಣೆಯಿತ್ತು ಮೇ 30, 1936 ರಂದು ರಾತ್ರಿ ಏಳು ಘಂಟೆಗೆ ನಂದೀ ಬೆಟ್ಟಕ್ಕೆ ಆಗಮಿಸಿದರು. ಬಂದ ಕೂಡಲೇ ಗಾಂಧೀಯವರೊಡನೆ ವಿಚಾರ ವಿನಿಮಯ ಪ್ರಾರಂಭವಾಯಿತು. ಎರಡು ಘಂಟೆ ಕಾಲ ಇದು ನಡೆಯಿತು. ನಡೆದ ಮಾತುಕಥೆಯನ್ನು ಮಹದೇವ ದೇಸಾಯಿ ಅವರು ವರದಿ ಮಾಡಿರುತ್ತಾರೆ.

"ಮಾನವನ ಮೂಲಭೂತ ಸಮಸ್ಯೆ ರಾಜಕೀಯವಲ್ಲ, ಸಾಮಾಜಿಕವಲ್ಲ, ಆರ್ಥಿಕವೂ ಅಲ್ಲ, ಅದು ಮಾನಸಿಕ. ಪ್ರಪಂಚದ ನಾನಾ ಜಟಿಲ ಸಮಸ್ಯೆಗಳಿಗೆ, ಸಂಕಷ್ಟಗಳಿಗೆ, ಭಯ ಭೀತಿ ಕಲಹ ಯುದ್ಧ ಇವುಗಳೆಲ್ಲಕ್ಕೂ ಮೂಲಕಾರಣ ಮನಸ್ಸು. ಇದನ್ನು ಬಗೆಹರಿಸದಿದ್ದರೆ ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಮಸ್ಯೆಗಳನ್ನು ಬಿಡಿಸಲು ಸಾಧ್ಯವಾಗದು. ಮನಸ್ಸು, ಚಿತ್ತ ಚಂಚಲ, ನಿಮಿಷ ಮಾತ್ರವೂ ಸುಮ್ಮನಿರದೆ ತೂರಾಡುತ್ತಿರುತ್ತದೆ. ಇದನ್ನು ಹತೋಟಿಗೆ ತರಬೇಕು. ನಿಯಂತ್ರಿಸಬೇಕು. ಇದು ಹೇಗೆ ಸಾಧ್ಯ. ಮನಸ್ಸು ತನ್ನನ್ನು ತಾನೇ ಹತೋಟಿಗೆ ತಂದುಕೊಳ್ಳಲಾರದು. ಅದನ್ನು ನಿಯಂತ್ರಿಸಬಲ್ಲ ಶಕ್ತಿ ಇದಕ್ಕೆ ಅಗತ್ಯ. ಅದೇ ಆತ್ಮಶಕ್ತಿ, ಆತ್ಮವಿದ್ಯೆಯಿಂದ ಇದು ಸಾಧ್ಯ. ಮನಸ್ಸು ಮತ್ತು ಇಂದ್ರಿಯಗಳನ್ನು ನಿಯಂತ್ರಿಸಬಲ್ಲ ವಿಜ್ಞಾನವೇ ಆತ್ಮವಿದ್ಯೆ. ಆತನನ್ನು ಅರಿತುಕೊಳ್ಳುವುದರಿಂದ ಮನುಷ್ಯನಲ್ಲಿ ಸುಪ್ತವಾಗಿರುವ ಆತ್ಮಶಕ್ತಿ ಜಾಗೃತವಾಗುತ್ತದೆ. ಅಂದಿನಿಂದ ಆವನ

ಜೀವನ ಪರಿಪಕ್ವವಾಗುತ್ತದೆ. ಮನಸ್ಸು ಮತ್ತು ಇಂದ್ರಿಯಗಳು ಸುಮುಖವಾಗಿ ಕೆಲಸ ಮಾಡತೊಡಗುತ್ತವೆ.

"ಆತ್ಮ ವಿದ್ಯೆ ಧಾರ್ಮಿಕಕ್ಕೆ ಸಂಬಂಧಪಟ್ಟದ್ದಲ್ಲ. ಇದು ಕ್ರಿಯಾತ್ಮಕ ಮನೋವಿಜ್ಞಾನವಾಗಬಹುದು. ಸರಳ ವಿಜ್ಞಾನವಾಗಿ ಸಾಮಾನ್ಯರೂ ಆಚರಿಸುವಂತೆ ಆಗಬಹುದು. ವಿಚಾರಬದ್ಧವಾಗಿ, ವೈಜ್ಞಾನಿಕವಾಗಿ ಈ ವಿದ್ಯೆಯ ಮರ್ಮವನ್ನು ಪಾಶ್ಚಾತ್ಯರಾಷ್ಟ್ರಗಳಿಗೆ ಭಾರತ ಮಾಡಿಕೊಟ್ಟರೆ, ಪ್ರಪಂಚದ ಪ್ರಗತಿಗೆ, ಮಾನವ ಕಲ್ಯಾಣಕ್ಕೆ ಅಭೂತಪೂರ್ವ ಕೊಡುಗೆ ನಮ್ಮ ದೇಶ ಕೊಟ್ಟಂತೆ ಆದೀತು. ಈ ರೀತಿಯಾಗಿ ಓಂಕಾರ ಸ್ವಾಮಿಗಳು ಆತ್ಮ ವಿದ್ಯೆ ಕುರಿತು ಭಾವನಾ ಪ್ರದೀಪ್ತರಾಗಿ ಎರಡು ಘಂಟೆ ಕಾಲ ನಿರರ್ಗಳವಾಗಿ ತಮ್ಮ ವಿಷಯ ನಿರೂಪಿಸಿದರು. ಮಹಾತ್ಮರೂ ಏಕಮನಸ್ಸಿನಿಂದ ಸ್ವಾಮಿಗಳ ವಾಕ್ಯಗಳನ್ನು ಆಲೈಸಿ ಆತ್ಮ ವಿದ್ಯೆಯನ್ನು ಸಾಧಿಸಿಕೊಳ್ಳಬಹುದಾದ ಸುಲಭೋಪಾಯಗಳನ್ನು ತಿಳಿಸಬೇಕಾಗಿ ಕೋರಿದರು. ತಾವು ಇನ್ನು ಸಂಶೋಧನಾವಸ್ಥೆಯಲ್ಲೇ ಇರುವುದಾಗಿಯೂ, ತನ್ನ ಮೇಲೆಯೇ ಪ್ರಯೋಗಗಳನ್ನು ನಡೆಸಿಕೊಳ್ಳುತ್ತಿರುವುದಾಗಿಯೂ ಸ್ವಾಮಿಗಳು ತಿಳಿಸಿದರು. ಇನ್ನೂ ಈ ಪ್ರಯೋಗಗಳು ಬಹಿರಂಗ ಪಡಿಸುವಷ್ಟು ಯಶಸ್ವಿಯಾಗಿರುವುದಿಲ್ಲವೆಂದೂ ತಿಳಿಸಿದರು. ಸ್ವಾಮಿಗಳು ವರ್ಧಾಗೆ ದಯಮಾಡಿಸಿ ವಿಚಾರ ವಿನಿಮಯ ಮುಂದುವರಿಸಬೇಕೆಂದು ತಿಳಿಸಿದರು. ಕ್ಷಣವೂ ವ್ಯರ್ಥಮಾಡದೆ, ಸದಾ ಏನೋ ಕೆಲಸದಲ್ಲಿ ನಿರತರಾಗಿ ರಾರಾಜಿಸುತ್ತಿರುವ ಪಾಶ್ಚಾತ್ಯರಿಗೆ, ಆತ್ಮ ವಿದ್ಯೆಯನ್ನು ಸುಲಭವಾಗಿ ಆಚರಿಸುವ ಕ್ರಮ ಕಂಡು ಹಿಡಿಯಲು ತಾನು ಶ್ರಮಿಸುತ್ತಿರುವುದಾಗಿ ಸದ್ಗುರು ಓಂಕಾರ ಸ್ವಾಮಿಗಳು ತಿಳಿಸಿದರು. ಈ ವಿಷಯವನ್ನು ಪ್ರಸಿದ್ಧ ಪಡಿಸುವುದಕ್ಕೂ ಅವರು ಒಪ್ಪಲಿಲ್ಲ.

ಓಂಕಾರ ಸ್ವಾಮಿಗಳ ಪೂರ್ವೋತ್ತರ ಗುಂಭವಾಗಿಯೇ ಇತ್ತು. ಇವರ ಪೂರ್ವಾಶ್ರಮದ ಹೆಸರು ನೀಲಕಂಠ ಬ್ರಹ್ಮಚಾರಿ. ವಿ. ಒ. ಚಿದಂಬರಂ, ಶಿವಭಾರತಿ, ವಿ. ವಿ. ಎಸ್. ಅಯ್ಯರ್ ಮೊದಲಾದ ಬಂಗಾಳದ ಕ್ರಾಂತಿಕಾರಿ ದಳಕ್ಕೆ ಸೇರಿದವರು. ತಿರುನಲ್‌ವೇಲಿ ಪಿತೂರಿ ಮೊಕದ್ದಮೆ ಎಂದು ಪ್ರಸಿದ್ಧವಾದ ಮದರಾಸಿನ ಆಷ್ ಎಂಬ ಆಂಗ್ಲ ಅಧಿಕಾರಿಯನ್ನು ಕೊಲೆ ಮಾಡಿದ ಅಪರಾಧಕ್ಕಾಗಿ 1911 ರಲ್ಲಿ ಇವರು ಬಂಧಿತರಾದರು. ಬಂಧಿತರ ತಂಡದ ವಿಚಾರಣೆಗಾಗಿ ವಿಶೇಷ ನ್ಯಾಯಾಲಯ ನೇಮಿಸಲ್ಪಟ್ಟಿತು. ಮೂರು ವರ್ಷಗಳ ದೀರ್ಘಕಾಲ ವಿಚಾರಣೆ ನಡೆದು ನೀಲಕಂಠ ಬ್ರಹ್ಮಚಾರಿಗೆ ಏಳು ವರ್ಷಗಳ ಕಠಿಣ ಶಿಕ್ಷೆ ಲಭಿಸಿತು. ಬಳ್ಳಾರಿ ಜೈಲಿನಿಂದ ತಪ್ಪಿಸಿಕೊಂಡರೂ ಮೂರು ದಿನಗಳಲ್ಲಿ ಮತ್ತೆ ಪೋಲೀಸರಿಗೆ ಸಿಕ್ಕಿಬಿದ್ದು ಮತ್ತೆ ಆರು ತಿಂಗಳ ಶಿಕ್ಷೆಗೆ ಗುರಿಯಾದರು. ಏಳು ವರ್ಷಗಳನ್ನು ಏಳು ಜೈಲುಗಳಲ್ಲಿ ಕಳೆದು 1919 ರಲ್ಲಿ ಬಂಧನ ಮುಕ್ತರಾದರು. ಪುನಃ ಕ್ರಾಂತಿಕಾರಿ ಚಳುವಳಿಯಲ್ಲಿ

ತೊಡಗಿದರೆಂದು 1922 ರಲ್ಲಿ ಬಂಧಿತರಾಗಿ 10 ವರ್ಷಗಳ ಕಠಿಣ ಶಿಕ್ಷೆ ಪಡೆದರು. ಈ ಅವಧಿಯನ್ನು ಪಂಜಾಬಿನ ಮಾಂಟಿಗೊಮರಿ, ರಂಗೂನ್ ಮತ್ತು ಇತರ ಜೈಲುಗಳಲ್ಲಿ ಕಳೆದು 1930 ರಲ್ಲಿ ಬಿಡುಗಡೆಯಾದರು. ಜೈಲಿನಲ್ಲಿ ಆಧ್ಯಾತ್ಮಿಕ ವಿಚಾರಗಳತ್ತ ಮನ ತಿರುಗಿತು. ಯೋಗಾಭ್ಯಾಸದಲ್ಲಿ ತೊಡಗಿ ಕೆಲವು ಸಾಧನಗಳಲ್ಲಿ ಪ್ರಾವೀಣ್ಯತೆ ಗಳಿಸಿದರು. ತುಂಗಭದ್ರೆಯ ತೀರದ ಆನೆಗೊಂದಿಯಲ್ಲಿ ಕೆಲಕಾಲ ಆಶ್ರಮ ವಾಸಿಗಳಾಗಿದ್ದರು. ಏಕಾಂತ ಬಯಸಿ ಅಲೆಯುತ್ತ ಕೋಲಾರ ಜಿಲ್ಲೆಯ ನಂದೀದುರ್ಗದ ಸಮೀಪದ ಚಂದ್ರಗಿರಿಗೆ 1933 ರಲ್ಲಿ ಬಂದು ನೆಲೆಸಿದರು. 1946 ರಲ್ಲಿ ನಂದೀ ದುರ್ಗದಲ್ಲಿದ್ದ ಮಹಾತ್ಮ ಗಾಂಧೀ, ಮಹದೇವ ದೇಸಾಯಿ ಇವರ ಸಂದರ್ಶನವಾಯಿತು. ಮಾರ್ಚಿ 4, 1978 ರಲ್ಲಿ ದೈವಾಧೀನರಾದರು. ತಮ್ಮ ಸಾಧನೆಗಳನ್ನು ಕುರಿತು ಇವರು ಬರೆದು ಪ್ರಕಟಿಸಿರುವ ಪುಸ್ತಕಗಳು ಅಲಭ್ಯವಾಗಿವೆ.

ಪ್ರಕೃತಿ ಜೀವನ ಮತ್ತು ಪ್ರಕೃತಿ ಚಿಕಿತ್ಸೆ

ಮಹಾತ್ಮರಿಗೆ ಪ್ರಕೃತಿ ಜೀವನ, ಪ್ರಕೃತಿ ಚಿಕಿತ್ಸೆಯಲ್ಲಿ ತುಂಬ ವಿಶ್ವಾಸ. ತನ್ನ ದೇಹವನ್ನು ನಾನಾ ವಿಧ ಪ್ರಯೋಗಗಳಿಗೆ ಒಡ್ಡಿ ಅದರ ಪರಿಣಾಮವಾಗಿ ಅವರು ಕಾಯಿಲೆಗಳಿಗೆ ಗುರಿಯಾಗುತ್ತಿದ್ದರು. ಅವರು ಕಾಯಿಲೆ ಬಿದ್ದ ಸುದ್ದಿ ತಿಳಿಯುತ್ತಲೇ ಪಾಶ್ಚಾತ್ಯ ಪದ್ಧತಿಯ ಡಾಕ್ಟರು, ಆಯುರ್ವೇದ ಪದ್ಧತಿಯ ವೈದ್ಯರು, ಅಲೋಪತಿ(?) ಪಂಡಿತರು, ಹಕೀಮರು, ಹೋಮಿಯೋ ವೈದ್ಯರು, ಅನುಭವಿಗಳು ನಾನಾ ಚಿಕಿತ್ಸೆಯ ವಿಧಾನಗಳನ್ನು ಅನುಸರಿಸುವಂತೆ ಬರೆಯುತ್ತಿದ್ದರು. ಇದಲ್ಲದೆ ತಮ್ಮದೇ ಆದ ಮಣ್ಣಿನ ಚಿಕಿತ್ಸೆ, ಜಲ ಚಿಕಿತ್ಸೆ, ಆಹಾರ ನಿಯಂತ್ರಣದ ಪ್ರಯೋಗಗಳನ್ನು ಗಾಂಧೀಜಿ ನಡೆಸುತ್ತಲೇ ಇದ್ದರು. 1946ರಲ್ಲಿ ಪೂನಾ–ಸೊಲ್ಲಾಪುರ ರೈಲುಮಾರ್ಗದ ಸಮೀಪದ ಉರುಲಿಕಾಂಚನದಲ್ಲಿ ಪ್ರಕೃತಿ ಚಿಕಿತ್ಸಾಲಯ ನಡೆಸುವ ಅವಕಾಶ ಇವರಿಗೆ ದೊರೆಯಿತು. ಇದು ಆದರ್ಶ ಚಿಕಿತ್ಸಾಲಯವಾಗಬೇಕೆಂದು ಇವರ ಬಯಕೆ. ಆದರೆ ಭರದಿಂದ ಓಡುತ್ತಿದ್ದ ರಾಜಕೀಯ ಪರಿಸ್ಥಿತಿ ಇದಕ್ಕೆ ಅವಕಾಶ ಕೊಡಲಿಲ್ಲ.

ಇವರಿಗೆ ವೈದ್ಯ ಸಹಾಯ ನೀಡುತ್ತಿದ್ದವರೆಲ್ಲರೂ ಸಾಮಾನ್ಯವಾಗಿ ಪಾಶ್ಚಾತ್ಯ ಪದ್ಧತಿಯ ತಜ್ಞರೇ ಆಗಿರುತ್ತಿದ್ದರು. ಡಾಕ್ಟರ್ ಅನ್ಸಾರಿ, ದಿನೇಶ್, ಸುಶೀಲ ನಯ್ಯಾರ್, ಜೀವರಾಜ ಮೆಹಥಾ, ಗಿಲ್ಡರ್, ಬಿ. ಸಿ. ರಾಯ್ ಮೊದಲಾದವರು ಪಾಶ್ಚಾತ್ಯ ವೈದ್ಯಕೀಯ ತಜ್ಞರೇ ಆಗಿದ್ದರು. 1924ರಲ್ಲಿ ಯರವಾಡ ಮಂದಿರದಲ್ಲಿ ಬಂಧಿಯಾಗಿದ್ದಾಗ ಹಟಾತ್ತನೆ ಒಂದು ರಾತ್ರಿ ತಡೆಯಲಾಗದ ಹೊಟ್ಟೆನೋವು ಪ್ರಾರಂಭಿಸಿತು. ಇದು 'ಅಪೆಂಡಿಸೈಟಿಸ್' ಕರುಳು ಬಾಲದ ರೋಗ. ತಕ್ಷಣ ಶಸ್ತ್ರ ಚಿಕಿತ್ಸೆ ಆಗಬೇಕು. ಇಲ್ಲವಾದರೆ ಮರಣ ಖಂಡಿತ ಎಂದರು ತಜ್ಞರು.

ಸರ್ಕಾರ ತುಂಬ ಸಂಕಟಕ್ಕೆ ಸಿಲುಕಿಕೊಂಡಿತು. ಶಸ್ತ್ರಚಿಕಿತ್ಸೆ ನಡೆಸದಿದ್ದರೆ ರೋಗಿ ಸಾಯಬಹುದು. ಶಸ್ತ್ರಚಿಕಿತ್ಸೆ ಯಾವ ಕಾಲಕ್ಕೂ ಅಪಾಯದಿಂದ ಹೊರತಾದುದಲ್ಲ. ಆಗಿನ ಕಾಲಕ್ಕೆ ಶಸ್ತ್ರಚಿಕಿತ್ಸೆ ಅಷ್ಟು ಮುಂದುವರೆದಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಗಾಂಧೀಯವರನ್ನು ಜನವರಿ 11, 1924ರಲ್ಲಿ ಪುಣೆಯ ಸಸೂನ್ ಆಸ್ಪತ್ರೆಗೆ ಸಾಗಿಸಲಾಯಿತು. ಕರ್ನಲ್ ಮೆಡಾಕ್ ಇವರನ್ನು ಪರೀಕ್ಷಿಸಿ ಶಸ್ತ್ರಚಿಕಿತ್ಸೆ

ಕೂಡಲೇ ಆಗಬೇಕೆಂದರು. ತಮ್ಮ ವಿಶ್ವಾಸಕ್ಕೆ ಪಾತ್ರರಾದ ವೈದ್ಯರನ್ನು ಬರಮಾಡಿಕೊಳ್ಳುವಂತೆ ಗಾಂಧೀಯವರಿಗೆ ತಿಳಿಸಲಾಯಿತು. ಡಾಕ್ಟರ್ ಜೀವರಾಜ ಮೆಹಥ, ಡಾಕ್ಟರ್ ಗಿಲ್ಡರ್ ಇವರನ್ನು ಬರಮಾಡಿಕೊಳ್ಳುವ ಪ್ರಯತ್ನ ಯಶಸ್ವಿಯಾಗಲಿಲ್ಲ. ಆಗ ಗಾಂಧೀಜಿ ಪುಣೆಯಲ್ಲಿದ್ದ ಮಾನ್ಯ ಶ್ರೀನಿವಾಸ ಶಾಸ್ತ್ರಿಗಳಿಗೆ ಹೇಳಿಕಳುಹಿಸಿದರು. ಶಸ್ತ್ರಚಿಕಿತ್ಸೆ ಅಯಶಸ್ವಿಯಾದರೆ ಜನ ಹುಚ್ಚೆದ್ದು ಪರಿಣಾಮ ಭಯಂಕರವಾಗಬಹುದೆಂದು ಗಾಂಧೀಜಿ ಗ್ರಹಿಸಿದ್ದರು. ಡಾಕ್ಟರ್ ಮೆಡಾಕ್, ಆಸ್ಪತ್ರೆಯ ಇತರ ವೈದ್ಯರ, ಸ್ನೇಹಿತರ ಸಮ್ಮುಖದಲ್ಲಿ ಶಾಸ್ತ್ರಿಯವರಿಗೆ ದೀರ್ಘ ಹೇಳಿಕೆ ಹೇಳಿ ಬರೆಸಿದರು. ತನ್ನ ಸಮ್ಮತಿಯಂತೆ ಶಸ್ತ್ರಚಿಕಿತ್ಸೆ ನಡೆಯುತ್ತಿದೆ. ಡಾಕ್ಟರ್ ಮೆಡಾಕ್ ಮತ್ತು ಇವರ ಸಹಾಯಕರು ಅತ್ಯಂತ ಪ್ರೀತಿ ವಿಶ್ವಾಸ ತನಗೆ ತೋರುತ್ತಿದ್ದಾರೆ. ಏನಾದರೂ ಹೆಚ್ಚು ಕಡಮೆ ಆದಲ್ಲಿ ತಾನೇ ಅದಕ್ಕೆ ಹೊಣೆ. ಕರ್ನಲ್ ಮೆಡಾಕ್ ಹೊಣೆಯಾಗರು. ಜನ ತಪ್ಪು ತಿಳಿದು ರೊಚ್ಚಿಗೇಳಬಾರದು. ಎಲ್ಲವೂ ಭಗವದಿಚ್ಛೆ.

ಜನವರಿ 12, 1924 ರಾತ್ರಿ 10 ಘಂಟೆಗೆ ಗಾಂಧೀಯವರನ್ನು ಶಸ್ತ್ರಚಿಕಿತ್ಸಾಲಯಕ್ಕೆ ಒಯ್ದು, ಚಿಕಿತ್ಸಾಮಂಚದ ಮೇಲೆ ಮಲಗಿಸಿ ಮತ್ತು ಬರಿಸುವ ಕ್ರಮ ತೆಗೆದುಕೊಳ್ಳಲಾಯಿತು. ಜಾಜ್ವಲ್ಯವಾದ ವಿದ್ಯುತ್ ಬೆಳಕಿನಲ್ಲಿ ಶಸ್ತ್ರಚಿಕಿತ್ಸೆ ಪ್ರಾರಂಭವಾಯಿತು. ಶಸ್ತ್ರಚಿಕಿತ್ಸೆ ನಡೆಯುತ್ತಿದ್ದಂತೆ ವಿದ್ಯುತ್ ದೀಪಗಳು ನಂದಿ ಹೋದವು. ಟಾರ್ಚ್‌ಲೈಟ್ ಬೆಳಕಿನಲ್ಲಿ ಚಿಕಿತ್ಸೆ ಮುಂದುವರೆಯಿತು. ಅದೂ ಸ್ವಲ್ಪ ಹೊತ್ತಿನಲ್ಲೇ ಆರಿಹೋಯಿತು. ಆದರೂ ಶಸ್ತ್ರಚಿಕಿತ್ಸೆ ಮುಂದುವರೆಯಿತು. ಅಂತೂ ಶಸ್ತ್ರಚಿಕಿತ್ಸೆ ಯಶಸ್ವಿಯಾಯಿತು. ಮಾರನೆಯ ಬೆಳಿಗ್ಗೆ ವೈದ್ಯರು ರೋಗಿಯನ್ನು ಪರೀಕ್ಷಿಸಿ, ಕರುಳಬಾಲದ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ. ರೋಗಿ ರಾತ್ರಿ ಸುಖವಾಗಿ ನಿದ್ರಿಸಿದರು. ರೋಗಿಯ ಸ್ಥಿತಿ ಉತ್ತಮವಾಗಿದೆ. ಕಳವಳ ಪಡಬೇಡಿ. ಈ ರೀತಿಯ ತಂತಿ ಸುದ್ದಿ ಕಸ್ತೂರಿಬಾಗೆ ಕಳುಹಿಸಿದರು. ಇದಕ್ಕೆ ಮೊದಲು ಪತಿಯ ಕಾಯಿಲೆ, ಶಸ್ತ್ರಚಿಕಿತ್ಸೆಯ ವಿಷಯವೇ ಅವರಿಗೆ ತಿಳಿದಿರಲಿಲ್ಲ.

ಗಾಂಧೀಜಿಯನ್ನು ಫೆಬ್ರವರಿ 5, 1924 ರಂದು ಬಂಧನದಿಂದ ಬಿಡುಗಡೆ ಮಾಡಲಾಯಿತು. ಕರ್ನಲ್ ಮೆಡಾಕ್ ಈ ಸುದ್ದಿಯನ್ನು ಮಹಾತ್ಮರಿಗೆ ತಿಳಿಸಿದರು. ಕೆಲವು ದಿನಗಳ ನಂತರ ಗಾಂಧೀಜಿ ಆಸ್ಪತ್ರೆಯಿಂದ ಹೊರಬಂದರು.

* * * *

ಗಾಂಧೀಜಿ ಕುಟುಂಬಸಹಿತ ಬೊಂಬಾಯಿಂದ ಜಹಜಿನಲ್ಲಿ ದಕ್ಷಿಣ ಆಫ್ರಿಕಾಗೆ ಪ್ರಯಾಣಮಾಡುತ್ತಿದ್ದರು. ಹಡಗಿನ ಕಪ್ತಾನನೊಡನೆ ಆಟವಾಡುತ್ತ ಮೂರನೆಯ ಮಗ ಜಾರಿ ಬಿದ್ದು ಕೈ ಮುರಿದುಕೊಂಡ. ಹಡಗಿನ ವೈದ್ಯ ಪಟ್ಟಿಕಟ್ಟಿ, ಕೈಯನ್ನು

'ಸ್ಲಿಂಗ್' ಕೊರಳಿಗೆ ಕಟ್ಟಿದ್ದ ಬಟ್ಟೆಯಲ್ಲಿ ಕೈ ಇಳಿಬೀಳದಂತೆ ತೂಗಿಹಾಕಿದ್ದ. ಗಾಯ ಮಾಗಿ ಮೂಳೆ ಕೂಡಿಕೊಳ್ಳಲು ಒಂದು ತಿಂಗಳಾದರೂ ಆದೀತು ಎಂದು ವೈದ್ಯ ತಿಳಿಸಿದ್ದ. ಊರು ಸೇರುತ್ತಲೇ ಉತ್ತಮ ವೈದ್ಯನಿಂದ ಚಿಕಿತ್ಸೆ ಮಾಡಿಸು ವಂತೆ ತಿಳಿಸಿದ್ದ. ಆದರೆ ಗಾಂಧೀ ಜಲಚಿಕಿತ್ಸೆ, ಮಣ್ಣಿನಚಿಕಿತ್ಸೆಪ್ರಯೋಗ ನಡೆಸು ತ್ತಿದ್ದರು. ಪ್ರಯೋಗ ಫಲಕಾರಿಯಾಗಿ ಕಂಡಿತ್ತು. ಇವರ ಕೆಲವು ಕಕ್ಷಿಗಾರರೂ ಪ್ರಯೋಗದಿಂದ ಗುಣಹೊಂದಿದ್ದರು. ಆದ್ದರಿಂದ ರಾಮದಾಸನನ್ನೂ ಮಣ್ಣು ಚಿಕಿತ್ಸೆಯ ಪ್ರಯೋಗಕ್ಕೆ ಒಳಪಡಿಸುವ ಕುತೂಹಲ ಇವರಿಗೆ. ಎಂಟು ವರ್ಷದ ಮಗನಿಗೆ ತನ್ನ ಈ ಹುಚ್ಚು ಪ್ರಯೋಗಕ್ಕೆ ಒಳಗಾಗುವ ಇಚ್ಛೆಯುಂಟೇ ಎಂದು ಕೇಳಿದರು. ಅಳಲೇಕಾಯಿ ಪಾಂಡಿತ್ಯ, ಆಧುನಿಕ ವೈದ್ಯ ಚಿಕಿತ್ಸೆ ಇವುಗಳ ಭಿನ್ನತೆ ಅರಿಯುವಷ್ಟು ಬುದ್ಧಿವಂತಿಕೆ ಅವನಲ್ಲಿತ್ತು. ತಂದೆಯ ಪ್ರಯೋಗ ಪಾಂಡಿತ್ಯಕ್ಕೆ ಒಳಗಾಗಲು ಸಮ್ಮತಿಸಿದ. ಗಾಂಧೀಜಿ ಮಗನ ಪಟ್ಟಿಬಿಚ್ಚಿ, ಭಯಭಕ್ತಿಯಿಂದ ಶುಭ್ರಮಣ್ಣಿನ 'ಪೌಲ್ಟೀಸ್' ಕಟ್ಟಿ, ಮೇಲೆ ಪಟ್ಟಿಕಟ್ಟಿದರು. ಈ ಬಗೆಯ ಚಿಕಿತ್ಸೆ ಒಂದು ತಿಂಗಳ ಕಾಲ ನಡೆಯಿತು. ಗಾಯ ಸರಿಹೋಯಿತು. ಪಾಶ್ಚಾತ್ಯ ವೈದ್ಯರು ಗಾಯ ಮಾಗಲು ಅಗತ್ಯವೆಂದು ಭಾವಿಸಿದ್ದ ಅವಧಿಯಲ್ಲಿಯೇ ಈ ಕುರುಡು ಚಿಕಿತ್ಸೆ ಯಿಂದ ರಾಮದಾಸನ ಕೈ ಗುಣವಾಯಿತು.

ಈ ಪ್ರಯೋಗದಿಂದ ಗೃಹವೈದ್ಯದಲ್ಲಿ ಗಾಂಧೀಯವರಿಗೆ ವಿಶ್ವಾಸ ಹೆಚ್ಚಿತು. ಜಲ, ಮಣ್ಣು, ನಿರಶನ ಈ ಕ್ರಮಗಳಿಂದ ಜ್ವರ, ಮಹೋದರ, ಕಾಮಾಲೆ ಮೊದ ಲಾದ ಕಾಯಿಲೆಗಳನ್ನು ಗುಣಪಡಿಸುವ ಧೈರ್ಯ ಪ್ರಾಪ್ತವಾಯಿತು. ಬಹುತೇಕ ಪ್ರಯೋಗಗಳು ಯಶಸ್ವಿಯಾದುವು. ಆದರೆ ಈ ಪ್ರಕೃತಿ ಚಿಕಿತ್ಸಾ ಕ್ರಮ ಎಲ್ಲ ಸಂದರ್ಭಗಳಲ್ಲೂ ಸಂಪೂರ್ಣ ಯಶಸ್ವಿಯಾದೀತು. ಹೀಗೆ ಹೇಳಲು ತನಗೆ ಧೈರ್ಯ ಬಾರದು ಎಂದು ಗಾಂಧೀಜಿ ಸ್ವತಃ ನಿಸ್ಸಂಕೋಚವಾಗಿ ಹೇಳಿಕೊಂಡಿರುತ್ತಾರೆ. ತಮ್ಮ ಆತ್ಮಕಥೆಯಲ್ಲಿ ಈ ಪ್ರಯೋಗಗಳನ್ನು ಕುರಿತು ದಕ್ಷಿಣ ಆಫ್ರಿಕದಲ್ಲಿ ಮೂಡಿದ್ದ ನಂಬಿಕೆ ಈಗ ತಮಗಿಲ್ಲವೆಂದು ತಿಳಿಸಿರುತ್ತಾರೆ. ತಾನೇ ಪ್ರಯೋಗದ ಪ್ರಾಣಿ ಆಗಬೇಕು. ಹೀಗೆ ಮಾಡುವುದರಿಂದ ಸತ್ಯದ ಅರಿವು ಬೇಗ ಆಗುತ್ತದೆ. ನಿಜ ಸತ್ಯಶೋಧಕನನ್ನು ಭಗವಂತ ಎಂದಿಗೂ ರಕ್ಷಿಸುತ್ತಾನೆ.

ಹಲ್ಲು ನೋವು ಬಂದಾಗ ದಂತ ವೈದ್ಯರಿಂದ ಹಲ್ಲು ಕೀಳಿಸಿಕೊಂಡರು. ಈ ರೀತಿಯಲ್ಲಿ ಪಾಶ್ಚಾತ್ಯ ವೈದ್ಯರ ಸೇವೆ ಪಡೆಯಬೇಕಾದ ಸನ್ನಿವೇಶ ಹಲವು ಬಾರಿ ಒದಗಿ ಬಂದುವು. ಹೀಗಾದರೂ ಅವರಿಗೆ ಪ್ರಕೃತಿ ಚಿಕಿತ್ಸೆಯಲ್ಲಿ ವಿಶ್ವಾಸ ಅಪಾರ. ಪ್ರಕೃತಿ ನಿಯಮ ಉಲ್ಲಂಘಿಸುವುದರಿಂದ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಅದು ಪ್ರಕೃತಿದೇವಿ ವಿಧಿಸುವ ಶಿಕ್ಷೆ. ನಿಯಮವರಿತು ಆಹಾರ, ನಿದ್ದೆ, ಅಂಗಸಾಧನೆ

ಕಾರ್ಯಕ್ರಮ ರೂಢಿಸಿಕೊಂಡರೆ ಕಾಯಿಲೆ ದೂರವಿರುತ್ತದೆ. ನೂರರಲ್ಲಿ ಎಂಭತ್ತು ಕಾಯಿಲೆಗಳಿಗೆ ಆಹಾರ ಸೇವನೆ ಸರಿಯಾಗಿಲ್ಲದಿರುವುದೇ ಕಾರಣ. ಅತಿ ಸಿಹಿ, ಅತಿ ಖಾರ, ಅತಿ ಕ್ಷಾರ; ತವುಡು ತೆಗೆದ ಅಕ್ಕಿ, ಗಿರಣಿಯಲ್ಲಿ ಬೀಸಿ ಮಾಡಿದ ಗೋಧಿ ಹಿಟ್ಟು, ಗಿರಣಿ ಎಣ್ಣೆ, ಕರಿದ ಪದಾರ್ಥ, ಕೃತಕ ಆಹಾರ, ಬೆಲ್ಲಕ್ಕೆ ಬದಲು ಬಿಳಿಸಕ್ಕರೆ; ಶುಚಿತ್ವ; ಬೆವರು ಸುರಿಸಿ ದುಡಿತ ವ್ಯಾಯಾಮ ಇಲ್ಲದಿರುವುದು: ನಿರ್ಮಲ ನೀರು, ಸ್ವಚ್ಛಗಾಳಿ; ಮಿತಾಹಾರ; ಕಾಲಕಾಲಕ್ಕೆ ಊಟ, ನಿದ್ದೆ. ಈ ಎಲ್ಲ ವಿಷಯಗಳಲ್ಲೂ ಗಾಂಧೀಜೀ ಪ್ರಯೋಗ ಸ್ವತಃ ನಡೆಸಿರುತ್ತಾರೆ. ತಮ್ಮ ದೇಹವನ್ನೇ ಪ್ರಯೋಗಾಲಯವಾಗಿ ಮಾಡಿಕೊಂಡು ಕಾಯಿಲೆ ಬರಮಾಡಿಕೊಂಡಿದ್ದಾರೆ. ಪ್ರಯೋಗದ ಫಲಿತಾಂಶಗಳನ್ನು ಪ್ರಕಟಿಸಿರುತ್ತಾರೆ. ಈ ಪ್ರಯೋಗಗಳಿಂದ ತಮ್ಮ ಆಹಾರ ಮತ್ತು ಜೀವನಕ್ರಮ ರೂಪಿಸಿಕೊಂಡಿರುತ್ತಾರೆ.

ಆಕಾಶ, ಬೆಂಕಿ, ನೀರು, ವಾಯು, ಸೂರ್ಯ, ತೇಜಸ್ಸು, ಮಣ್ಣು ಇವುಗಳ ಚಿಕಿತ್ಸೆಯಲ್ಲಿ ಬಹಳ ವಿಶ್ವಾಸ ಅವರಿಗೆ. ದಿನವಹಿ ಕಟಿ (ತೊಟ್ಟಿಯಲ್ಲಿ ಕುಳಿತು ಮಾಡುವ ಸ್ನಾನ) ಸ್ನಾನ ಮಾಡುವರು. ಪಾದಕ್ಕೆ ತುಪ್ಪ ಅಥವಾ ಬಾದಾಮಿಎಣ್ಣೆಯಿಂದ ತೀಡಿಸಿಕೊಳ್ಳುವರು. ಒರಟು ಟವಲಿನಿಂದ ಮೈ ಒರಸಿಕೊಳ್ಳುವರು. ಜಾಲಿ ಅಥವಾ ಬೇವಿನಕಡ್ಡಿ ದಂತಧಾವನವಾಗಿ ಬಳಸುವರು. ಟೂತ್‌ಪೇಸ್ಟ್, ಸಾಬೂನು ಬಳಸಿದವರಲ್ಲ. ಇದ್ದಿಲು ಪುಡಿಮಾಡಿ, ಉಪ್ಪು ಬೆರಸಿ ಬಳಸುವುದೇ ಉತ್ತಮ ಹಲ್ಲುಪುಡಿ ಎಂದು ಸುಪ್ರಸಿದ್ಧ ಹೃದಯತಜ್ಞ ವೈದ್ಯ ಬಿ. ಸಿ. ರಾಯ್ ಹೇಳುತ್ತಿದ್ದರಂತೆ. ಸೂರ್ಯಾಸ್ತಮದ ಒಳಗೆ ರಾತ್ರಿಯ ಊಟ ಮುಗಿಸುತ್ತಿದ್ದರು. ರಾತ್ರಿ 9 ಕ್ಕೆ ಮಲಗಿ, ಉಷಃಕಾಲ 4 ಘಂಟೆಗೆ ಏಳುವರು. ಮಧ್ಯಾಹ್ನ ಸ್ವಲ್ಪ ಹೊತ್ತು ವಿಶ್ರಾಂತಿ. ಪ್ರತಿದಿನ ಬೆಳಿಗ್ಗೆ, ಸಂಜೆ ಒಂದು ಘಂಟೆಯ ಕಾಲವಾದರೂ ನಡೆಯುವರು. ಅರ್ಧ ಘಂಟೆಯಾದರೂ ನೂಲಬೇಕು. ಇದು ಅವರ ಸಾಮಾನ್ಯ ದಿನಚರಿ.

ಬಾಲ್ಯದಿಂದಲೂ ನಡುಗೆಯ ಅಭ್ಯಾಸ ಅವರಿಗೆ. ಇಂಗ್ಲೆಂಡಿನಲ್ಲಿ ಇದ್ದಾಗಲೂ ಇದು ಮುಂದುವರೆಯಿತು. ಆಫ್ರಿಕದಲ್ಲಿ ಕೆಲವೊಮ್ಮೆ ದಿನಕ್ಕೆ 30 ಮೈಲಿ ನಡೆದಿರುವುದೂ ಉಂಟು. ದಾಂಡಿಯಾತ್ರೆ ಪ್ರಸಿದ್ಧವಾದುದು. ಸೊಪ್ಪು, ಹಣ್ಣು ಹಂಪಲು, ನೆಲಗಡಲೆ ಇವನ್ನು ಧಾರಾಳವಾಗಿ ಸೇವಿಸಬಹುದು. ಸೇಬು, ಕಿತ್ತಲೆ, ದ್ರಾಕ್ಷಿ ಮೊದಲಾದ, ಬಡವರಿಂದ ಕೊಳ್ಳಲು ಸಾಧ್ಯವಾಗದ ಹಣ್ಣು ಅವರಿಗೆ ವರ್ಜ್ಯ. ಪಪ್ಪಾಯಿ, ಸೀಬೆ, ಮಾವು, ಬಾಳೆ ಇವುಗಳನ್ನು ಸಾಮಾನ್ಯವಾಗಿ ಸೇವಿಸುವರು. ಆಫ್ರಿಕಾದಲ್ಲಿದ್ದಾಗ ದಿನಕ್ಕೆ12 ಬಾಳೆಹಣ್ಣು ಸೇವಿಸುತ್ತಿದ್ದರು. ಬಿಸಿನೀರಿನಲ್ಲಿ ನಿಂಬೆರಸ ಹಿಂಡಿ, ಜೇನುತುಪ್ಪ ಬೆರಸಿ ಸೇವಿಸುವರು. ಅದರ ಸಿಪ್ಪೆಯಿಂದ ಮೈ ಉಜ್ಜಿಕೊಳ್ಳುವರು. ಆಯಾಸವಾದಾಗ ಕಬ್ಬು ಅಥವಾ ತಾಟಿಯ ಬೆಲ್ಲದ ತುಣುಕು ಬಾಯಿಗೆ ಹಾಕಿ

ಕೊಳ್ಳುವರು. ನಿಧಾನವಾಗಿ ಆಹಾರ ಅಗಿದು ಜಗಿದು ಊಟಮಾಡುವರು ಊಟದ ಜೊತೆ ಮಾತ್ರ ಉಪ್ಪಿನಕಾಯಿ. ಆಶ್ರಮದಲ್ಲಿ ತರಕಾರಿ ಬೇಯಿಸಿ ಬಡಿಸುವರು. ಖಾರ, ಒಗ್ಗರಣೆ, ಎಣ್ಣೆ ಏನೂ ಇಲ್ಲ. ಉಪ್ಪು ಸೇರಿಸಿ ತೆಗೆದುಕೊಳ್ಳುವರು.

ಕುದಿಸಿ ಆರಿಸಿದ ನೀರು ಕುಡಿಯಲು ಬಳಸುವರು. ಬಾಟಲಿಗಳಲ್ಲಿ ನೀರು ತುಂಬಿ ಹಾಸಿಗೆಯ ಬಳಿ ಇಡಲಾಗುವುದು. ಬಾಯಿ ಮುಕ್ಕಳಿಸಲು ಇದೇ ನೀರು ಬಳಸುವರು. ಮುಖ ತೊಳೆಯಲು ತಣ್ಣೀರು. ಬೇಸಿಗೆಯಲ್ಲಿ ನೀರಿನ ಶೀಷೆಗಳನ್ನು ಒದ್ದೆ ಬಟ್ಟೆಯಿಂದ ಸುತ್ತಿ ಇಡಲಾಗುತ್ತಿತ್ತು ಅಥವಾ ಮಂಜುಗಡ್ಡೆಯಲ್ಲಿ ಇರಿಸಲಾಗುವುದು. ಆದರೆ ನೇರವಾಗಿ ಮಂಜುಗಡ್ಡೆ ತೆಗೆದುಕೊಳ್ಳುತ್ತಿರಲಿಲ್ಲ. ದಿನವಹಿ ಹೊಟ್ಟೆಯ ಮೇಲೆ ಹಸಿಮಣ್ಣು ಲೇಪಿಸಿಕೊಳ್ಳುವರು. ಇದರಿಂದ ಪಚನ ಕ್ರಿಯೆಗೆ ಸಹಾಯವಾಗುವುದೆಂದು ಅವರ ನಂಬಿಕೆ. ತಲೆಶೂಲೆ, ರಕ್ತದ ಒತ್ತಡ ಇವಕ್ಕೆ ಒದ್ದೆಮಣ್ಣಿನ ಪಟ್ಟಿಯೇ ಮದ್ದು.

ಆಹಾರ ಸೇವನೆ ದೇಹ ಪೋಷಣೆಗೆ, ನಾಲಿಗೆಯ ರುಚಿಗಲ್ಲ. ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಪ್ರಯೋಗ ಆಮರಣಾಂತರ ನಾನಾ ವಿಧಗಳಲ್ಲಿ ಮುಂದುವರೆಯುತ್ತಲೇ ಇತ್ತು. ಆಫ್ರಿಕದಲ್ಲಿದ್ದಾಗ ಪೋಲಕ್ ಮತ್ತು ಕಾಲೆನ್‌ಬೆಕ್ ಪ್ರಯೋಗಗಳಲ್ಲಿ ಭಾಗವಹಿಸುತ್ತಿದ್ದರು. ಸಾವಿರ ಕಾಯಿಲೆಗಳಲ್ಲಿ 999 ಕಾಯಿಲೆಗಳನ್ನು ಪಥ್ಯ, ನೀರು, ಬಿಸಿಲು, ಮಣ್ಣಿನ ಪೋಲ್ಟೀಸ್ ಇವುಗಳಿಂದ ಗುಣಪಡಿಸಬಹುದು. ಅಲ್ಪ ದೇಹ ಬಾಧೆಗಳಿಗಾಗಿ ವೈದ್ಯ ಅಥವಾ ಹಕೀಮರಲ್ಲಿ ಓಡಿ, ನಾನಾ ಬಗೆಯ ಮೂಲಿಕೆಗಳ ಅಥವಾ ರಾಸಾಯನಿಕ ಔಷಧಿಗಳನ್ನು ತೆಗೆದುಕೊಳ್ಳುವವರು ತಮ್ಮ ಆಯುಷ್ಯ ಕುಗ್ಗಿಸಿಕೊಂಡು, ದೇಹವನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳದೆ, ಅದರ ದಾಸರಾಗುತ್ತಾರೆ. ಇದು ಅವರ ಮತ.

ಪ್ರತಿ ದಿನ ಮಲವಿಸರ್ಜನೆ ಆಗಬೇಕು. ಇದಕ್ಕೆ ತೀವ್ರ ಗಮನ ಕೊಡುವರು. ವಿಸರ್ಜನೆ ಆಗದಿದ್ದರೆ, ಎನಿಮಾ ಅಥವ ಹರಳೆಣ್ಣೆ ತೆಗೆದುಕೊಳ್ಳುವರು. ಸಾಸಿವೆಎಣ್ಣೆ ಮತ್ತು ಆಲಿವ್ ಎಣ್ಣೆ ಬೆರಸಿ ಮೈ ತೀಡಿಸಿಕೊಳ್ಳುವರು. ಆಡಿನ ತುಪ್ಪ ಪಾದಕ್ಕೆ ಲೇಪಿಸಿ ತೀಡಿಸಿಕೊಳ್ಳುವರು.

ಸಕಲ ರೋಗಗಳ ಸಂಜೀವಿನಿ ರಾಮನಾಮ. ರಾಮನಾಮ ಭವರೋಗ ವೈದ್ಯ. ಮಣ್ಣು ಎಡೆಹಾಲಿಗೆ ಸಮಾನ. ಮುಖದ ಮೇಲೆ ಮಡಮೆ ಎದ್ದಿತು. ಅದಕ್ಕೆ ಹಸಿಮಣ್ಣು ಹಚ್ಚಿದರು. ಒಮ್ಮೆ ಬಯಲಿನಲ್ಲಿ ಆಹಾರ ತೆಗೆದುಕೊಳ್ಳುತ್ತಿದ್ದಾಗ ಹದ್ದು ಎರಗಿಬಂದು ನಖಗಳಿಂದ ಗಾಯಗೊಳಿಸಿತು. ರಕ್ತ ಬಂತು. ಇದಕ್ಕೂ ಮಣ್ಣಿನ ಪ್ಲಾಸ್ಟರ್.

ಜಲಚಿಕಿತ್ಸೆ ಅವರ ಅನುಭವದಲ್ಲಿ ಬಹಳ ಪ್ರಯೋಜನಕಾರಿ. ಒಮ್ಮೆ ಮೋಟಾರಿನಿಂದ ಇಳಿಯುತ್ತಿದ್ದರು ಬೆರಳುಗಳನ್ನು ಇನ್ನೂ ಹೊರಕ್ಕೆ ತೆಗೆದಿರಲಿಲ್ಲ. ಇಷ್ಟರಲ್ಲಿ ಚಾಂದೀವಾಲ ಬಾಗಿಲು ಮುಚ್ಚಿದರು. ಎರಡು ಬೆರಳುಗಳು ಜಜ್ಜಿ ಹೋದುವು. ನೋವು ತಡೆಯಲಾರದೆ ಕ್ಷಣಕಾಲ ಪ್ರಜ್ಞಾಹೀನರಾದರು. ಪ್ರಜ್ಞೆ ಮೂಡುತ್ತಲೇ ಕೈ ಬೆರಳು ತಣ್ಣೀರಿನಲ್ಲಿ ಮುಳುಗಿಸಿದರು. ಟಿಂಕ್ಚರ್ ಹಚ್ಚುವಂತೆ ಕೆಲವರು ಹೇಳಿದರೂ ಕೇಳಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ನೋವು ನಿಂತು, ಎಂದಿನಂತೆ ಕೆಲಸದಲ್ಲಿ ಮಗ್ನರಾದರು.

ಮಗ ಮಣಿಲಾಲ್ ಗಾಂಧಿ, ವಿಷಮಶೀತ ಜ್ವರ ಪೀಡಿತನಾದ. ಆಗ ಅವನ ವಯಸ್ಸು ಹತ್ತು. ವೈದ್ಯರು ಕೋಳಿಮೊಟ್ಟೆ, ಕೋಳಿ ಮಾಂಸದ ಸಾರು ಕೊಡಬೇಕು ಎಂದರು. ಗಾಂಧೀಜಿ ಒಪ್ಪಲಿಲ್ಲ. ಕುಹ್ನೆ ಪದ್ಧತಿಯಂತೆ ಮೂರು ನಿಮಿಷ ಕಾಲ ಕಟಿ ಸ್ನಾನ ಮಾಡಿಸುವರು. ತಣ್ಣೀರಿನಲ್ಲಿ ಅದ್ದಿ ಹಿಂಡಿದ ಬಟ್ಟೆ, ಅದರ ಮೇಲೆ ಎರಡು ಕಂಬಳಿ ಹೊದಿಸುವರು. ತಲೆಗೆ ಒದ್ದೆ ಬಟ್ಟೆಯ ವಸ್ತ್ರ. ಕೆಲವು ದಿನಗಳ ಈ ಬಗೆಯ ಚಿಕಿತ್ಸೆಯಿಂದ ಜ್ವರ ಇಳಿಯಲಿಲ್ಲ. ಉಷ್ಣಾಂಶ 104 ಡಿಗ್ರಿಗೆ ಏರುತ್ತಿತ್ತು. ರಾತ್ರಿ ಪ್ರಜ್ಞಾಹೀನನಾಗಿ ಕನವರಿಸಿಕೊಳ್ಳುವನು. ಕಿತ್ತಲೆ ಹಣ್ಣಿನ ರಸಕ್ಕೆ ನೀರು ಬೆರಸಿ ಮೂರು ದಿನ ಕೊಟ್ಟರು.

"ಒಂದು ನನ್ನ ಚಿಕಿತ್ಸೆ ನಡೆಯಬೇಕು, ಇಲ್ಲವೇ ನಿಮ್ಮದು", ಹೀಗೆಂದು ಪಾಶ್ಚಾತ್ಯ ವಿಧಾನದ ವೈದ್ಯ ಕೈಬಿಟ್ಟರು. ನೀರು ಬೆರಸಿದ ಹಾಲು ಕೊಡಬಹುದು. ಆದರೆ ಈ ಬಗೆಯ ಆಹಾರ ಸೇವನೆ ರೋಗಿಗೆ ಶಕ್ತಿಕೊಡದು. ಕೋಳಿ ಮಾಂಸದ ಸಾರು, ಕೋಳಿಮೊಟ್ಟೆ ಇವನ್ನು ತನ್ನ ಸಲಹೆಯಂತೆ ಎಲ್ಲ ಹಿಂದೂ ಕುಟುಂಬಗಳೂ ತೆಗೆದುಕೊಳ್ಳುತ್ತಾರೆ ಹೀಗೆ ಹೇಳಿದರು, ವೈದ್ಯರು.

ಆದರೆ ಭಗವಂತನ ಮೇಲೆ ಭಾರಹಾಕಿ ಗಾಂಧೀಜಿ ತಮ್ಮ ಪ್ರಕೃತಿ ಚಿಕಿತ್ಸೆ ಪದ್ಧತಿಯನ್ನೇ ಮುಂದುವರೆಸಿದರು. ಭಗವಂತನ ಕೃಪೆಯಿಂದ ಮಣಿಲಾಲ್‌ನಿಗೆ ಗುಣವಾಯಿತು. ಇದರಿಂದ ಜಲಚಿಕಿತ್ಸಾ ವಿಧಾನದಲ್ಲಿ ಅವರ ನಂಬಿಕೆ ಹೆಚ್ಚಿತು.

ಆಫ್ರಿಕದ ಫೋನಿಕ್ಸ್ ಆಶ್ರಮದಲ್ಲಿದ್ದಾಗ ಸತಿ ಕಸ್ತೂರಿಬಾ ತುಂಬ ಕಾಯಿಲೆಯಾದರು. ಶಸ್ತ್ರಚಿಕಿತ್ಸೆ ಮಾಡಲಾಯಿತು. ಆದರೂ ರಕ್ತಸ್ರಾವ ನಿಲ್ಲಲಿಲ್ಲ. ವೈದ್ಯರು ರೋಗಿಯನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಪ್ರೀತ್ಯಾದರದಿಂದ ಔಷಧೋಪಚಾರ ನಡೆಸುತ್ತಿದ್ದರು. ರೋಗಿಗೆ ದನದ ಮಾಂಸದ ಟೀ ಕೊಡಬೇಕು ಎಂದ ವೈದ್ಯ. ಗಾಂಧೀಜಿ ಮತ್ತು ಕಸ್ತೂರಿಬಾ ಇಬ್ಬರೂ ಒಪ್ಪಲಿಲ್ಲ. ಡಾಕ್ಟರ್

ತುಂಬ ಸಿಟ್ಟುಗೊಂಡ. ಎಂಥಾ ನಿರ್ಧಯಿ ಗಂಡ ನೀನು ಎಂದು ರೇಗಾಡಿದ. ತನ್ನ ಮನೆಯಿಂದ ಕಸ್ತೂರಿಬಾ ಅವರನ್ನು ಸಾಗಿಸುವಂತೆ ತಿಳಿಸಿದ. ರೋಗಿ ಮೂಳೆ ಚಕ್ಕಳ ಆಗಿದ್ದರೂ, ಅವಳನ್ನು ರಿಕ್ಷಾ ಮತ್ತು ರೈಲಿನಲ್ಲಿ ಸಾಗಿಸಿ, ಅಲ್ಲಿಂದ ಎರಡೂವರೆ ಮೈಲಿ ಜೋಲಿಯಲ್ಲಿ ಆರು ಜನ ಹೊತ್ತು ರೋಗಿಯನ್ನು ಆಶ್ರಮಕ್ಕೆ ಸಾಗಿಸಿದರು. ಜಲಚಿಕಿತ್ಸೆಯಿಂದ ಅವರು ಕ್ರಮೇಣ ಗುಣಹೊಂದಿದರು.

ಆಫ್ರಿಕದಲ್ಲಿದ್ದಾಗ ಗಾಂಧೀಜಿ ಪುಪ್ಪುಸ ಅಥವಾ ಶ್ವಾಸಕೋಶದಲ್ಲಿ ನೀರು ಸೇರುವ, ಕೀವುಕಟ್ಟುವ ಗಂಭೀರ ರೋಗಪೀಡಿತರಾದರು. ಇದನ್ನು ಕ್ಷಯರೋಗದ ಹಂತವೆನ್ನುತ್ತಾರೆ. ಆಗಲೂ ಪ್ರಕೃತಿ ಚಿಕಿತ್ಸಾಪದ್ಧತಿ ಅನುಸರಿಸಲು ತೀರ್ಮಾನಿಸಿದರು. ಡಾಕ್ಟರ್ ಜೀವರಾಜ ಮೆಹಥ ದೇಹದ ಹೊರಭಾಗಕ್ಕೆ ಚಿಕಿತ್ಸೆ ನೀಡುತ್ತಿದ್ದರು. ಔಷಧವಿಲ್ಲ. ಹಾಲು ತೆಗೆದುಕೊಳ್ಳುವುದಿಲ್ಲವೆಂದು ಹಟಹಿಡಿದರು ಗಾಂಧೀಜಿ. ಪಥ್ಯದಿಂದಲೇ ಗುಣಮುಖರಾಗಲು ಪ್ರಯತ್ನಿಸಿದರು. ಕಡೆಗೆ ಶೀತ ದೇಶದಿಂದ ಭಾರತಕ್ಕೆ ಮರಳುವಂತೆ ವೈದ್ಯರು ಸಲಹೆ ನೀಡಿದರು. ಅಂತೆಯೇ ಭಾರತಕ್ಕೆ ಮರಳಿ ಬಂದರು. ಪ್ರಕೃತಿಚಿಕಿತ್ಸೆಯಿಂದ ಗುಣಮುಖರಾದರು.

* * * *

ಪ್ರಥಮ ವಿಶ್ವಸಂಗ್ರಾಮ ನಡೆಯುತ್ತಿತ್ತು. ಸೇನೆಗೆ ಸೈನಿಕರನ್ನು ಒದಗಿಸುವ ಕಾರ್ಯದಲ್ಲಿ ಗಾಂಧೀಜಿ ತೊಡಗಿದ್ದರು. ಹೊತ್ತುಹೊತ್ತಿಗೆ ಇವರ ಪದ್ಧತಿಯಂತೆ ಸರಿಯಾದ ಆಹಾರವಿಲ್ಲದೆ ಆಮಶಂಕೆಗೆ ಗುರಿಯಾದರು. ಅಪಥ್ಯವೂ ಆಯಿತು. ಹಟವಾದಿ. ಯಾರು ಎಷ್ಟು ಒತ್ತಾಯಮಾಡಿದರೂ ಔಷಧಿ ಸೇವಿಸಲು ಒಪ್ಪಲಿಲ್ಲ. ಅಂಬಲಾಲ್ ಸಾರಾಭಾಯಿ, ವಲ್ಲಭಾಯಿ ಪಟೇಲ, ರಾಜೇಂದ್ರಪ್ರಸಾದ, ಅನುಸೂಯ ಬೆಹನ್, ಡಾಕ್ಟರ್ ಕನೂಗ ಯಾರ ಹಿತವಚನಕ್ಕೂ ಕಿವಿಗೊಡರು. ಮೊಂಡು ಮಹಾತ್ಮನಿಗೆ ಬುದ್ಧಿ ಹೇಳುವವರು ಯಾರು. ನಿಶ್ಶಕ್ತಿಯಿಂದ ತನ್ನ ಜೀವ ಉಳಿಯದೆಂಬ ತೀರ್ಮಾನಕ್ಕೆ ಬಂದರು ಗಾಂಧೀಜಿ. ಈ ಹೊತ್ತಿಗೆ ಅವರಂತೆಯೇ ಪ್ರಯೋಗಗಳ ಹುಚ್ಚಿನ ಕೇಳ್ಕರನನ್ನು ಡಾಕ್ಟರ್ ತಲವಾಲ್ಕರ್ ಕರೆದುತಂದರು. ಮಂಜುಗಡ್ಡೆಯಿಂದ ಸಕಲ ಕಾಯಿಲೆಗಳನ್ನೂ ಗುಣಪಡಿಸಬಹುದೆಂಬ ಭ್ರಮೆ ಇವರಿಗೆ. ಮೈ ತುಂಬ ಮಂಜುಗಡ್ಡೆ ಹೇರಿಸಿ, ಚಿಕಿತ್ಸೆ ನಡೆಸಿದರು. ಈ ಚಿಕಿತ್ಸೆಯಿಂದಲೋ ಎಂತೋ ಏನೋ ಗುಣಮುಖರಾದರು. ಮರಿಯಾಗದ ಮೊಟ್ಟೆ, ಮಾಂಸದ ಸಾರು ಎಲ್ಲವೂ ತ್ಯಾಜ್ಯ. ಕಡೆಗೆ ಹಾಲಾದರೂ ದೇಹಪುಷ್ಟಿಗಾಗಿ ತೆಗೆದುಕೊಳ್ಳುವಂತೆ ಒತ್ತಾಯ ಮಾಡಲಾಯಿತು. ವ್ರತ ಕೈಗೊಂಡಿರುವುದು ಆಕಳ ಹಾಲು ಸೇವಿಸುವುದಿಲ್ಲವೆಂದು. ಆಡಿನ ಹಾಲು ತೆಗೆದುಕೊಳ್ಳುವುದರಿಂದ ವಚನಭಂಗ, ವ್ರತಭಂಗ

ಆಗದೆಂದು ಸತಿ ಸಲಹೆ ಮಾಡಿದರು. ಮರಣಶಯ್ಯೆಯಲ್ಲಿದ್ದ ಗಾಂಧೀಗೆ ಜೀವ ಉಳಿಸಿಕೊಳ್ಳುವ ಪ್ರಬಲ ಇಚ್ಛೆ ಉತ್ಕಟವಾಯಿತು ಯಾರು ತಾನೆ ಪ್ರಾಣ ಕಳೆದುಕೊಳ್ಳಲು ಅಪೇಕ್ಷಿಸುತ್ತಾರೆ. ಬದುಕುವ ಇಚ್ಛೆ ಬಲವಾಗಿ ಆಡಿನ ಹಾಲು ತೆಗೆದುಕೊಳ್ಳಲು ಒಪ್ಪಿದರು. ಸತ್ಯನಿಷ್ಠೆಗಿಂತ, ಪ್ರಾಣ ಉಳಿಸಿಕೊಳ್ಳುವುದು ಪ್ರಥಮ ಸ್ಥಾನ ಪಡೆಯಿತು. ಅಂದಿನಿಂದ ಇದು ಅವರಿಗೆ ರೂಢಿಯಾಯಿತು. ಸೂಜಿಮದ್ದು ಮತ್ತು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಇಷ್ಟಾದರೂ ಪ್ರಕೃತಿ ಜೀವನ, ಪ್ರಕೃತಿ ಚಿಕಿತ್ಸೆಯಲ್ಲಿ ಇವರ ವಿಶ್ವಾಸ ಕುಗ್ಗಲಿಲ್ಲ.

ಬಾಣಂತಿಗೆ ಗಾಳಿ ಸೋಂಕದಂತೆ, ಬೆಚ್ಚನೆ ಉಡುಪು ತೊಡಿಸಿ, ಕಂಬಳಿ ಹೊದ್ದಿಸಿ, ಗಾಳಿ ಆಡದಂತೆ ಕಿಟಕಿಗಳನ್ನು ಮುಚ್ಚುವ ರೂಢಿ ನಮ್ಮದು. ಕಾಯಿಲೆ ಆದರೂ ಹೀಗೆಯೇ. ಆದರೆ ಬೇಕು ಗಾಳಿ ಗಾಂಧಿಯವರಿಗೆ ಪಂಚಪ್ರಾಣ. ಎಷ್ಟೇ ಚಳಿ ಇರಲಿ, ಗಾಳಿ ಮನೆಯಲ್ಲಿ ಓಡಾಡಲು ಕಿಟಕಿಗಳೆಲ್ಲವನ್ನೂ ತೆರದಿರಿಸುವರು. ಕೊರೆಯುವ ಚಳಿಯ ಡಿಸೆಂಬರ್. ಜನವರಿ ತಿಂಗಳಿನಲ್ಲೂ ಬರಿಗಾಲಿನಲ್ಲಿ ನಡೆಯು ವರು. ಒಂದು ಶಾಲು ಹೊದ್ದು ವಾಯು ಸಂಚಾರಕ್ಕೆ ಹೊರಡುವರು. 1931ರಲ್ಲಿ ಲಂಡನ್ನಿಗೆ ದುಂಡು ಮೇಜಿನ ಪರಿಷತ್ತಿಗೆ ಹೋಗಿದ್ದಾಗ ಬಡವರು ವಾಸಿಸುವ ಪೂರ್ವ ಭಾಗದಲ್ಲಿ ಮುರಿಯಲ್ ಲೆಸ್ಟರ್ ಮನೆಯಲ್ಲಿ ಬಿಡಾರ ಹೂಡಿದ್ದರು. ಮುಂಜಾನೆ ಅಲ್ಲಿನ ಚಳಿಯಲ್ಲಿ 4 ಘಂಟೆಗೆ ಎದ್ದು ಉಪ್ಪರಿಗೆಯ ಮೇಲ್ಛಾವಣಿಯ ಮೇಲೆ ಪ್ರಾರ್ಥನಾ ಸಭೆ ನಡೆಸುವರು. ಮೈ ಮೇಲೆ ತೆಳ್ಳನೆಯ ಶಾಲು. ಸಂಜೆಯೂ ಇದೇ ಕ್ರಮ. ಕೆಲವು ದಿನಗಳಲ್ಲಿ ಸಭೆ ಮುಗಿಸಿ ಬರಲು ನಡು ರಾತ್ರಿ ಆಗುವುದು. ಆಗಲೂ ಉಷಃಕಾಲ 4 ಘಂಟೆಯ ಚಳಿಯಲ್ಲಿ ಎದ್ದು ಪ್ರಾರ್ಥನೆ ನಡೆಸುವರು.

ಗಾಳಿ, ಚಳಿ ಏನೇ ಇರಲಿ, ಮಳೆ ಇಲ್ಲದಿದ್ದರೆ ಸರಿ, ಬಯಲಲ್ಲಿ ಮಂಚದ ಮೇಲೆ ಮಲಗುವರು. ಒರಿಸ್ಸಾದ ಚಂದನಪುರದಲ್ಲಿ ಮಾವಿನ ತೋಪಿನ ಖಾಲಿ ನಿವೇಶನದಲ್ಲಿ ಮಂಚ ಹಾಕಿತ್ತು. ಅಲ್ಲಿಂದ ಎತ್ತರದ ದಿಣ್ಣೆಗೆ ಮಂಚ ಸಾಗಿಸುವಂತೆ ತಿಳಿಸಿದರು. ಪಕ್ಕದಲ್ಲಿ ಪೊದೆಗಳು. ಹಾವುಗಳ ಸುಳಿದಾಟ. ನನಗೇನೂ ಮಾಡಲಾರವು ಎಂದು ಅಲ್ಲಿಯೇ ಮಲಗಿದರು.

ನಂದಿಬೆಟ್ಟದ ಮೇಲೆ ಗಾಳಿ ಬಲವಾಗಿ ಬೀಸುವುದು. ಹೊರಗೆ ನಿಲ್ಲಲೂ ಆಗದಷ್ಟು ಬಲವಾದ ಗಾಳಿ. ಗಾಂಧೀಜಿ ಹೊರಗೆ ಮಲಗಲು ರಾಜಾಜಿ ಅವಕಾಶ ಕೊಡಲಿಲ್ಲ. ಕೋಣೆಯಲ್ಲಿ ಮಲಗುವಂತೆ ಬಲವಂತ ಪಡಿಸಿದರು. ತಾರೆಗಳನ್ನು ನೋಡಲು ಸಾಧ್ಯವಾಗುವಂತೆ ಕಿಟಕಿಯ ಬಳಿಯಾದರೂ ಮಂಚ ಹಾಕುವಂತೆ ಗಾಂಧೀಜಿ ಆಗ್ರಹ ಮಾಡಿದರು. ನಕ್ಷತ್ರಗಳನ್ನು ನೋಡುತ್ತಿದ್ದಂತೆ ನಿದ್ರಿಸಬೇಕು. ಇಲ್ಲವೇ ನಿದ್ದೆ ಬಾರದು.

ಮನೆಯ ಹಾಗೂ ಮನಸ್ಸಿನ ಕಿಟಕಿ ತೆರೆದಿಡುವುದು ಅವರ ಪ್ರಕೃತಿ. ನಾಲ್ಕು ಕಡೆಗಳಿಂದ ಗಾಳಿ ಬೀಸುತ್ತಿರಬೇಕು. ಗಾಳಿ ಎಷ್ಟೇ ಬಲವಾಗಿ ಬೀಸಲಿ ಅವರ ದೇಹ ಸ್ವಾಸ್ಥ್ಯ ಮತ್ತು ಚಿತ್ತಸ್ವಾಸ್ಥ್ಯ ಅದೃಢಗೊಳಿಸಲು ಸಾಧ್ಯವಾಗದು.

ಊಟದ ಜೊತೆಯಲ್ಲಿ ಪ್ರತಿದಿನ ಬೇವಿನಸೊಪ್ಪನ್ನು ನುಣ್ಣಗೆ ಅರೆದು ಎರಡು ಸಣ್ಣ ಗೋಲಿಯಷ್ಟು ಗಾತ್ರದ ಉಂಡೆಮಾಡಿ ನುಂಗುತ್ತಿದ್ದರು. ಇದು ವಿಷಾಪಹಾರಿ ಎಂದು ಅವರ ನಂಬಿಕೆ. ಪ್ರೊಫೆಸರ್ ಬನ್ಸಾಲಿ ಹೀಗೆ ಮಾಡುತ್ತಿದ್ದರು.

ಸರ್ದಾರ ಪಟೇಲರು 1945ರಲ್ಲಿ ಬಂಧನಮುಕ್ತರಾಗಿ ಹೊರಬಂದರು. ಅವರ ದೇಹಸ್ಥಿತಿ ಬಹಳ ಕೆಟ್ಟಿತ್ತು. ದೊಡ್ಡ ಶಸ್ತ್ರಚಿಕಿತ್ಸೆ ಆಗತ್ಯವೆಂದರು ವೈದ್ಯರು. ಪ್ರಕೃತಿ ಚಿಕಿತ್ಸೆಯಿಂದ ಪ್ರಯೋಜನವಾದೀತೆಂದು ಬಾಪೂಜಿ ಸಲಹೆ ಮಾಡಿದರು. ಇಬ್ಬರೂ ಪುಣೆಯ ಡಾಕ್ಟರ್ ದಿನಷಾ ಮೆಹಥಾ ಅವರು ನಡೆಸುತ್ತಿದ್ದ ಪ್ರಕೃತಿ ಚಿಕಿತ್ಸಾ ಕೇಂದ್ರಕ್ಕೆ ಬಂದರು ಪುಣೆ ಮತ್ತು ಸಿಂಹಗಡಗಲ್ಲಿದ್ದ ತಮ್ಮ ಪ್ರಕೃತಿ ಚಿಕಿತ್ಸಾ ಕೇಂದ್ರಗಳನ್ನು ಮೆಹಥಾ ಗಾಂಧೀಜಿಗೆ ಒಪ್ಪಿಸಿದರು 76 ತುಂಬಿ ಎಲ್ಲರೂ ವಾನಪ್ರಸ್ತಾಶ್ರಮ ಸ್ವೀಕರಿಸಿ, ಎಲ್ಲ ಪ್ರಾಪಂಚಿಕ ಹೊಣೆ ಕಳೆದುಕೊಳ್ಳುವ ಈ ವಯಸ್ಸಿಗೆ ಮೆಹಥ ಅವರ ಪ್ರಕೃತಿ ಜೀವನ ಕೇಂದ್ರದ ಧರ್ಮದರ್ಶಿಯಾಗಲು ಬಾಪೂಜಿ ಒಪ್ಪಿ, ಸರ್ದಾರ್ ಪಟೇಲರ ಹಾಸ್ಯಕ್ಕೆ ಗುರಿಯಾದರು

* * * *

ಜಮುನಲಾಲ್ ಬಜಾಜ್ ದೊಡ್ಡ ಶ್ರೀಮಂತರು. ಮಹಾತ್ಮರ ನಿಧಿ. ಬಾಪು ಬೇಡಿದರೆ ಸಾಕು. ಬಜಾಜ್ ಮತ್ತು ಬಿರ್ಲ ಎಷ್ಟು ಹಣವಾದರೂ ಕೊಡಲು ಸಿದ್ಧ. ಇವರು ಸಹಿಮಾಡಿದ ಬ್ಯಾಂಕಿನ ಖಾಲಿ ಚೆಕ್ಕು ಗಾಂಧಿಯವರಲ್ಲೇ ಇರುವುದು. ಎಷ್ಟು ಹಣ ಬೇಕಾದರೂ ಪಡೆಯಬಹುದು. ವರ್ಧಾ ಆಶ್ರಮದ ಖಜಾನ್ಚಿ ಜಮುನಾಲಾಲ್ ಕೆಲಕಾಲ ಅಖಿಲ ಕಾಂಗ್ರೆಸ್ ಸಮಿತಿಯ ಕೋಶಪಾಲಕರೂ ಆಗಿದ್ದರು.

ಇವರ ಮಗ ಕಮಲನಯನ ಬಜಾಜ್, ಮಹಾತ್ಮರು ದಾಂಡಿ ದಂಡೆಯಾತ್ರೆ ಮುಗಿಸಿ ಕರಾಚಿಯಲ್ಲಿದ್ದಾಗ ಅವರೊಡನೆ ಕೂಡಿಕೊಳ್ಳಲು ಹೋದ. ಜ್ವರ ಬರುತ್ತಿತ್ತು. ಅಲ್ಲಿಗೆ ಹೋದ ಮೇಲೆ ಜ್ವರ 104 ಡಿಗ್ರಿಗೆ ಏರಿತು. ಮಲೇರಿಯ. ಒಂದೂವರೆ ವರ್ಷದಿಂದ ಹಣ್ಣು ಹಾಲು ಮಾತ್ರ ತೆಗೆದುಕೊಳ್ಳುತ್ತಿದ್ದ. ಆದರೂ ಜ್ವರ ಬಿಟ್ಟಿರಲಿಲ್ಲ. ಗಾಂಧೀಯವರ ಜೊತೆಯಲ್ಲಿದ್ದವರೆಲ್ಲ ಒಂದೇ ಪಾಕಶಾಲೆಯ ಆಹಾರ ತೆಗೆದುಕೊಳ್ಳುತ್ತಿದ್ದರು. ಇದು ಆಶ್ರಮದ ನಿಯಮ. ಕಮಲನನ್ನು ಈ

ನಿಯಮಕ್ಕೆ ಒಳಪಡಿಸಲಿಲ್ಲ. ನಿನ್ನ ಪದ್ಧತಿಯಂತೆ ಹಣ್ಣು ಹಾಲು ತೆಗೆದುಕೋ. ಎಲ್ಲರೊಡನೆ ಕೂಡಿ ನಡೆಯುವುದು ಬೇಡ. ನಿನಗಾಗಿ ಬಂಡಿ ಗೊತ್ತು ಮಾಡುವೆ ಎಂದರು. ಆದರೆ ಕಮಲ ತನಗಾಗಿ ಪ್ರತ್ಯೇಕ ವ್ಯವಸ್ಥೆ ಬೇಡವೆಂದು ಎಲ್ಲವನ್ನೂ ನಿರಾಕರಿಸಿದ. ಎರಡು ವಾರಗಳಲ್ಲಿ ಜ್ವರಬಾಧೆ ನಿಂತಿತು. ತೂಕ ಹೆಚ್ಚಿತು. ದೇಹಸ್ಥಿತಿ ಉತ್ತಮ ಗೊಂಡಿತು. ಆದರೆ ಕರಾಡಿಗೆ ನಡದೇ ಹೋಗುತ್ತಿದ್ದುದರಿಂದಲೋ ಏನೋ ಜ್ವರ ಮತ್ತೆ ಉಲ್ಬಣಿಸಿತು. ಕಣ್ಣುಗಳು ಕೆಂಪಾಗಿ ಊದಿಕೊಂಡುವು. ತೆರೆಯಲು ಆಗುತ್ತಿರಲಿಲ್ಲ. ವಿಪರೀತ ನೋವು. ಉಪವಾಸ ಮಾಡು ಎಂದರು. ಕಣ್ಣುಗಳ ಮೇಲೆ ಮಣ್ಣಿನ ಲೇಪನ ಹಚ್ಚುವರು. ಜ್ವರ ಇಳಿಮುಖವಾಯಿತು. ಆದರೆ ಕಣ್ಣಿನ ಉರಿತ ಇಳಿಯಲಿಲ್ಲ. ದಿನದಿನಕ್ಕೂ ಬಾಧೆ ಅಧಿಕವಾಗುತ್ತಿತ್ತು. ಕಮಲನಯನನ ಬಗ್ಗೆ ಚಿಂತೆ ಹೆಚ್ಚಿತು.

ತಂದೆ ಜಮುನಾಲಾಲರು ಬೊಂಬಾಯಿ ವಿಲಿಪಾರ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹ ಚಳುವಳಿಯಲ್ಲಿ ಮಗ್ನರಾಗಿದ್ದರು. ಅವರಿಗೆ ಗಾಂಧೀಜಿ ಪತ್ರ ಬರೆದು ಮಗನ ಸ್ಥಿತಿ ತಿಳಿಸಿದರು. ಬಾ ಪೂ ಜಿ ಹೇಳಿದಂತೆ ನಡೆದುಕೊ ಎಂದು ಉತ್ತರಬಂತು. ಬೊಂಬಾಯಿಗೆ ಹೋಗಲು ವ್ಯವಸ್ಥೆ ಮಾಡುವುದಾಗಿಯೂ ತಿಳಿಸಿದರು. ಆದರೆ ಕಮಲನಯನ ಹೋಗಲು ಒಪ್ಪಲಿಲ್ಲ. ಇಷ್ಟರಲ್ಲಿ ಕಾಕಾಸಾಹೇಬ ಕಾಲೇಲ್ಕರರು ಒಬ್ಬ ನೇತ್ರವೈದ್ಯನೊಡನೆ ಅಹಮದಾಬಾದಿನಿಂದ ಕರಾಡಿಗೆ ಬಂದರು. ನೇತ್ರವೈದ್ಯ ಕಮಲನಯನನ ನಯನಗಳನ್ನು ಪರೀಕ್ಷಿಸಿದ. ಎಡಗಣ್ಣು ಪೂರಾ ಕೆಟ್ಟಿದೆ. ಇದನ್ನು ಸರಿಪಡಿಸಲು ಸಾಧ್ಯವಾಗದು. ಸರಿಯಾದ ಚಿಕಿತ್ಸೆ ನಡೆಸದಿದ್ದರೆ ಬಲಗಣ್ಣು ಸಹ ಸರಿಪಡಿಸಲು ಸಾಧ್ಯವಾಗದೆ ಕೆಟ್ಟೀತು ಎಂದು ವೈದ್ಯ ಎಚ್ಚರಿಸಿದ. ಅಂಗಗಳಲ್ಲಿ ಅತಿ ಶ್ರೇಷ್ಠವಾದುದು ಕಣ್ಣು. ಕಣ್ಣು ಹೋದವನು ಕುರುಡ. ಕಾಕಾಸಾಹೇಬ ರೊಡನೆ ಅಹಮದಾಬಾದಿನ ಗುಜರಾತ ವಿದ್ಯಾಪೀಠಕ್ಕೆ ಹೋಗು. ನೇತ್ರವೈದ್ಯನಿಂದ ಚಿಕಿತ್ಸೆ ಪಡೆ ಎಂದು ಹಿತ ನುಡಿದರು. ನಿಮ್ಮ ಪ್ರಕೃತಿ ಚಿಕಿತ್ಸೆಯಲ್ಲಿ ನನಗೆ ಪೂರ್ಣ ವಿಶ್ವಾಸವಿದೆ. ಅಹಮದಾಬಾದಿಗೆ ಹೋಗುವೆ. ಆದರೆ ಅಲ್ಲಿಯೂ ಇದೇ ಚಿಕಿತ್ಸೆ ಯನ್ನೇ ಮುಂದುವರಿಸುವೆ ಎಂದ ಕಮಲನಯನ. ಆದರೆ ಕಣ್ಣುಗಳನ್ನು ಕಳೆದು ಕೊಂಡು ಅಂಧನಾಗಬಹುದೆಂದು ಬಾಪೂಜಿ ಎಚ್ಚರಿಸಿದರು. ಪ್ರಕೃತಿ ಚಿಕಿತ್ಸೆಯಿಂದ ಗುಣವಾಗದಿದ್ದರೂ ನಿನ್ನ ದೇಹಸ್ಥಿತಿ ಸುಧಾರಿಸಿದೆ. ಈ ಚಿಕಿತ್ಸೆಯಲ್ಲಿ ನಿನಗೆ ವಿಶ್ವಾಸವಿದ್ದರೆ ವಿದ್ಯಾಪೀಠದಲ್ಲೂ ಈ ವಿಧಾನವನ್ನೇ ಮುಂದುವರೆಸು. ಆಗಿಂದಾಗ ನೇತ್ರವೈದ್ಯರಿಂದ ಕಣ್ಣುಪರೀಕ್ಷೆ ನಡೆಸಿಕೋ. ನನಗೆ ವರದಿ ಕಳುಹಿಸಿಕೊಡುತ್ತಿರು. ಹೀಗೆ ಹೇಳಿ ಅವನನ್ನು ಅಹಮದಾಬಾದಿಗೆ ಕಳುಹಿಸಿಕೊಟ್ಟರು.

ಕಮಲನಯನ ಬಜಾಜ್ ಕಾಕಾಸಾಹೇಬರೊಡನೆ ವಿದ್ಯಾಪೀಠಕ್ಕೆ ಹೋದ. ಸುಮಾರು ಮೂರು ವಾರಗಳ ಕಾಲ ಹಾಲು, ಮೊಸರು, ಹಣ್ಣಿನ ರಸ ಇದೇ ಆಹಾರ.

ಹೊಟ್ಟೆ ಮತ್ತು ಕಣ್ಣಿನ ಮೇಲೆ ಮಣ್ಣಿನ ಪೋಲ್ಟೀಸ್ ಕಟ್ಟಲಾಗುತ್ತಿತ್ತು. ಆರು ವಾರಗಳಲ್ಲಿ ಕಮಲ ಪೂರ್ಣ ಗುಣಹೊಂದಿದ. ಕಣ್ಣುಗಳು ಮೊದಲಿಗಿಂತ ಉತ್ತಮವಾದವು. ಎರಡು ವರ್ಷಗಳಿಂದ ಎಡಬಿಡದೆ ತೊಂದರೆ ಕೊಡುತ್ತಿದ್ದ ಮಲೇರಿಯ ಜ್ವರವೂ ಮಾಯವಾಯಿತು. ಸುಮಾರು 17 ವಯಸ್ಸಿದ್ದಾಗ ಕಮಲನ ಬೆಳವಣಿಗೆ ಕುಂಠಿತವಾಗಿತ್ತು. ಆದರೆ ಪ್ರಕೃತಿ ಚಿಕಿತ್ಸೆಯಿಂದ ದೇಹಸ್ಥಿತಿ ಸುಧಾರಿಸಿತು. ವಿದ್ಯಾಪೀಠಕ್ಕೆ ಬಂದಮೇಲೆ ಮೊದಲ ತಿಂಗಳಲ್ಲಿ ತೂಕ 33 ಪೌಂಡುಗಳಿಂದ ಹೆಚ್ಚಿತು. ಆರು ತಿಂಗಳಲ್ಲಿ 70 ಪೌಂಡು ಅಧಿಕವಾಯಿತು. ಮೊದಲು 80–85 ಪೌಂಡು ತೂಗುತ್ತಿದ್ದ ಅವನ ತೂಕ 160 ಪೌಂಡಿಗೆ ಏರಿತು.

ಗಾಂಧೀಜಿ 1927ರಲ್ಲಿ ರಕ್ತದ ಒತ್ತಡದಿಂದ ತೊಂದರೆ ಪಡುತ್ತಿದ್ದರು. ನಂದಿ ಬೆಟ್ಟದ ಮೇಲೆ ವಿಶ್ರಾಂತಿಗಾಗಿ ಬಂದು ಉಳಿದರು. ದಿವಾನ್ ಮಿರ್ಜಾಇಸ್ಮಾಯಿಲರು ಇಬ್ಬರು ದೊಡ್ಡ ವೈದ್ಯರನ್ನು ಇವರ ಚಿಕಿತ್ಸೆಗಾಗಿ ನೇಮಿಸಿದ್ದರು. ವೈದ್ಯರು ನಾಡಿ, ರಕ್ತದ ಒತ್ತಡ ಪರೀಕ್ಷಿಸುತ್ತಿದ್ದರೆ ವಿನಾ ಔಷಧ ತೆಗೆದುಕೊಳ್ಳಲು ಗಾಂಧೀಜಿ ಒಪ್ಪುತ್ತಿರಲಿಲ್ಲ. ಆಹಾರ ನಿಯಮ, ಶೀರ್ಷಾಸನ, ಬೇವಿನೆಲೆ, ಬೆಳ್ಳುಳ್ಳಿ, ಮಿತ ಓಡಾಟ ಇವುಗಳಿಂದ ಸ್ವತಃ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದರು. ಒಂದು ಮೂಗಿನ ಹೊಳ್ಳೆಯಿಂದ ದಾರ ಮೇಲಕ್ಕೆ ಎಳೆದು ಮತ್ತೊಂದು ರಂಧ್ರದಿಂದ ಹೊರತೆಗೆಯುವ 'ನೇತಿ' ಕ್ರಿಯೆ ಮಾಡಿಕೊಳ್ಳುತ್ತಿದ್ದರು. ಲೋನಾವಾಲದ ಕುಮಾರಯಾನಂದ ಇವರ ಶೀರ್ಷಾಸನ ಮತ್ತು ನೇತಿಕ್ರಿಯೆ ಸರಿಯಾಗಿ ಶಾಸ್ತ್ರೀಯವಾಗಿದೆ ಎಂದರು.

1946 ಮಾರ್ಚಿಯಲ್ಲಿ ಪುನೆಯ ಸಮೀಪದ ಉರ್ಲಿಕಾಂಚನ ಗ್ರಾಮಕ್ಕೆ ಬಂದರು. 3,000 ಪ್ರಜಾ ಸಂಖ್ಯೆಯ ಗ್ರಾಮ. ಒಳ್ಳೆಯ ಹವಾಗುಣ. ಮಿಲಿಟರಿ ಇಲಾಖೆ ಈ ಗ್ರಾಮಕ್ಕೆ ಒಳ್ಳೆಯ ಶೋಧಿತ ನೀರು ಒದಗಿಸುತ್ತಿದ್ದರು. ಕಿತ್ತಲೆ, ಪರಂಗಿ, ಸೀಬೆ, ಸಪೋಟ ಮೊದಲಾದ ಫಲಗಳು ಸಮೃದ್ಧಿ ಬೆಳೆಯಾಗುವುವು. ಗಾಂಧೀಜಿ ಇದನ್ನು ಆದರ್ಶ ಪ್ರಕೃತಿ ಚಿಕಿತ್ಸ ಕೇಂದ್ರವಾಗಿ ಮಾಡಲು ಆಶಿಸಿದರು. ಸ್ವತಃ ಬಾಪೂಜಿ ಚಿಕಿತ್ಸೆ ನೀಡುವರೆಂಬ ಸುದ್ದಿ ಸುತ್ತಮುತ್ತಲ ಹಳ್ಳಿಗಳಿಗೆ ಹರಡಿ ಮೊದಲ ದಿನವೇ ಸುಮಾರು 30 ರೋಗಿಗಳು ಹಾಜರಾದರು. ಯಾವ ಕಾಲೇಜಿನ ಡಿಗ್ರಿಯನ್ನೂ ಪಡೆಯದ ಈ ವೈದ್ಯ ಕೆಲವು ರೋಗಿಗಳನ್ನು ಪರೀಕ್ಷಿಸಿದ. ಎಲ್ಲರಿಗೂ ಹೆಚ್ಚು ಕಡಿಮೆ ಒಂದೇ ಬಗೆಯ ಸಲಹೆ. ರಾಮನಾಮ, ಸೂರ್ಯಸ್ನಾನ ಎಂದರೆ ಬಿಸಿಲಿನಲ್ಲಿ ಮೈ ಕಾಸಿಕೊಳ್ಳುವುದು· ಮೈ ನೀವಿಸಿಕೊಳ್ಳುವುದು, ಕಟಿ ಸ್ನಾನ, ಮಜ್ಜಿಗೆ ಪಾನ, ಹಣ್ಣು ಸೇವನೆ ಮತ್ತು ಧಾರಾಳವಾಗಿ ನೀರು ಕುಡಿಯುವುದು.

ಡಾಕ್ಟರ್, ವೈದ್ಯ, ಪಂಡಿತ, ಹಕೀಮ ಎನಿಸಿಕೊಳ್ಳುವವರು ರೋಗಿಗೆ ಔಷಧ ಕೊಡುತ್ತಾರೆ. ಆದರೆ ಪ್ರಕೃತಿ ಚಿಕಿತ್ಸೆಯ ವೈದ್ಯ, ರೋಗಿಗೆ ಬದುಕುವ ರೀತಿ,

ಜೀವನ ಕ್ರಮ ತೋರಿಸಿಕೊಡುತ್ತಾನೆ. ನಿಸರ್ಗದ ಕ್ರಮ ಅನುಸರಿಸಿ ಜೀವನ ಪದ್ಧತಿ ರೂಪಿಸಿಕೊಂಡು, ತನ್ನ ಕಾಯಿಲೆ ತಾನೇ ಗುಣಪಡಿಸಿಕೊಳ್ಳುತ್ತಾನೆ. ದೇಹಕ್ಕೆ ಮಾತ್ರವಲ್ಲ, ದೇಹಾತ್ಮನಿಗೂ ಚಿಕಿತ್ಸೆ ಲಭಿಸುತ್ತದೆ. ರಾಮನಾಮ ಎಲ್ಲ ರೋಗಗಳಿಗೂ ಮದ್ದು. ಪ್ರಕೃತಿ ಚಿಕಿತ್ಸೆಯಿಂದ ಎಲ್ಲ ರೋಗಗಳನ್ನು ಗುಣಪಡಿಸಲು ಸಾಧ್ಯವಾಗದೆ ಹೋಗಬಹುದು. ಮುಂದೆ ಕಾಯಿಲೆಬಾರದಂತೆ ಅನುಸರಿಸಬೇಕಾದ ವಿಧಾನ ತೋರಿಸಿಕೊಡುವುದೇ ಇದರ ವೈಶಿಷ್ಟ್ಯ.

ಬಹು ಸಂಖ್ಯೆಯಲ್ಲಿ ರೋಗಿಗಳು ತಮ್ಮಲ್ಲಿಗೆ ಬರುತ್ತಿದ್ದಾರಂತೆ. ಮಹಾತ್ಮರು ಪವಾಡ ಪುರುಷರು. ಒಳ್ಳೆಯ ಹಸ್ತಗುಣ. ರೋಗಿಯನ್ನು ಮುಟ್ಟಿದರೆ ಸಾಕು, ಕಾಯಿಲೆ ಮಾಯವಾಗುತ್ತದಂತೆ. ಈ ಭಾವನೆಯಿಂದ ತಂಡೋಪತಂಡ ರೋಗಿಗಳು ತಮ್ಮಲ್ಲಿಗೆ ಬರಬಹುದು. ಏನೇ ಆಗಲಿ, ಮೋಸದ ಮದ್ದಿಗಿಂತ ನಿಮ್ಮ ಚಿಕಿತ್ಸೆ ಒಳ್ಳೆಯದೇ. ಈ ರೀತಿ ಹಾಸ್ಯಮಾಡಿ ರಾಜಾಜಿ ಪತ್ರ ಬರೆದರು.

ರಾಜಾಜಿಯವರ ಹಾಸ್ಯಕ್ಕೆ ಆಧಾರವಿಲ್ಲದಿರಲಿಲ್ಲ. ಒಬ್ಬ ವಿಧವೆ ಕ್ಯಾನ್ಸರ್ ಅರ್ಬುದ ವ್ರಣದಿಂದ ನರಳುತ್ತಿದ್ದಳು. ಎಷ್ಟು ಚಿಕಿತ್ಸೆ ನಡೆಸಿದರೂ ಗುಣವಾಗಲಿಲ್ಲ. ಆಕೆಗೆ ಒಂದೇ ನಂಬಿಕೆ. ಮಹಾತ್ಮರ ಹಸ್ತಸ್ಪರ್ಶದ ಗಂಗಾಜಲ ತಂದುಕೊಡಿ. ಅದರ ಸೇವನೆಯಿಂದ ಗುಣವಾಗುತ್ತದೆ. ಆಕೆಯ ಮಗ ಒಂದು ತಂಬಿಗೆ ನೀರು ತೆಗೆದುಕೊಂಡು ಗಾಂಧಿಯವರಲ್ಲಿಗೆ ಬಂದು ಹಸ್ತ ಮುಟ್ಟಿಸಿಕೊಡುವಂತೆ ಪ್ರಾರ್ಥಿಸಿದ. ನಾನು ಪವಾಡಪುರುಷನಲ್ಲ. ಮಾಯಾವಿ ಅಲ್ಲ. ಒಲ್ಲೆ ಎಂದರು ಬಾಪೂಜಿ. ತಮಗೆ ನಂಬಿಗೆ ಇಲ್ಲದಿರಬಹುದು. ಆದರೆ ನನ್ನ ತಾಯಿಗೆ ವಿಶ್ವಾಸವಿದೆ. ಮೂಢ ನಂಬಿಕೆಯೇ ಇದ್ದೀತು. ರಾಮನಾಮ ಸಕಲ ರೋಗಗಳ ಸಂಜೀವಿನಿ ಎಂದು ತಾವು ನಂಬುವುದಿಲ್ಲವೆ? ನನ್ನ ತಾಯಿಗೆ ತಮ್ಮಲ್ಲಿ ಅಷ್ಟೇ ವಿಶ್ವಾಸ. ನನ್ನ ತಾಯಿಯ ಪ್ರಾಣ ಉಳಿಸಿ ಎಂದು ಹಟಮಾಡಿ ನಿರಶನ ಮಾಡುತ್ತ ಕುಳಿತ. ಅವನಿಗೆ ಮಣಿಯಬೇಕಾಯಿತು. ಮಹಾತ್ಮರ ಹಸ್ತ ಸ್ಪರ್ಶಿತ ಗಂಗಾಜಲಪಾನದಿಂದ ಆಕೆ ಗುಣ ಹೊಂದಿದರು.

ಫೆಥಿಕ್‌ಲಾರೆನ್ಸ್ ಮದರಾಸಿನ ಜನರಲ್ ಆಸ್ಪತ್ರೆಯಲ್ಲಿ ಜ್ವರ ಪೀಡಿತರಾಗಿ ಮಲಗಿದ್ದರು. ವಾರದಿಂದ ನಿದ್ದೆ ಇಲ್ಲ. ಗಾಂಧೀಜಿ ಅವರನ್ನು ನೋಡಲು ಆಸ್ಪತ್ರೆಗೆ ಹೋದರು. ಅವರ ಹಣೆಯ ಮೇಲೆ ತನ್ನ ಕೈಯಿಟ್ಟು ಕ್ಷಣಕಾಲ ಅವರನ್ನು ದಿಟ್ಟಿಸಿ ನೋಡುತ್ತ, ಧ್ಯಾನನಿರತರಾಗಿ, ಇಂದು ರಾತ್ರಿ ನೀವು ಚೆನ್ನಾಗಿ ನಿದ್ರಿಸುವಿರಿ ಎಂದರು. ರಾತ್ರಿ 9 ರಿಂದ ಬೆಳಿಗ್ಗೆ 7 ಘಂಟೆವರೆಗೆ ಗಾಢ ನಿದ್ರೆ ಲಾರೆನ್ಸ್‌ಗೆ. ಪೆಥಿಕ್‌ಲಾರೆನ್ಸ್ ಈ ಘಟನೆ ಸ್ವತಃ ಬರೆದಿರುತ್ತಾರೆ. ಇಂದ್ರಜಾಲವಲ್ಲ, ಮೂಢನಂಬಿಕೆ.

ಒಬ್ಬ ಹೋಮಿಯೋ ವೈದ್ಯ ಜುಹು ತೀರದಲ್ಲಿ ಗಾಂಧೀಜಿ ಇದ್ದಾಗ ಬಂದ. ರೋಗದ ಮೂಲ ಕಂಡುಹಿಡಿಯಲು ಪೂರ್ವಜರು ಯಾವ ಕಾಯಿಲೆಗಳಿಂದ ನರಳುತ್ತಿದ್ದರೆಂದು ಪ್ರಶ್ನಿಸತೊಡಗಿದ.

ಪ್ರಶ್ನೆ: ನಿಮ್ಮ ತಂದೆ ಯಾವ ಕಾಯಿಲೆಯಿಂದ, ಎಷ್ಟನೇ ವಯಸ್ಸಿಗೆ ತೀರಿಕೊಂಡರು.

ಉತ್ತರ: ಅವರೊಮ್ಮೆ ಕೆಳಕ್ಕೆ ಬಿದ್ದರು. ಫಿಸ್ಟುಲ, ಭಗಂದರ ಬೆಳೆಯಿತು. 65ನೆಯ ವಯಸ್ಸಿನಲ್ಲಿ ಸತ್ತರು.

ಪ್ರಶ್ನೆ: ನಿಮ್ಮ ತಾಯಿ.

ಉತ್ತರ: ಅವರು ವಿಧವೆಯಾದರು. ಹೃದಯಬೇನೆಯಿಂದ ಸತ್ತರು.

ವೈದ್ಯನಿಗೆ ಕೋಪಬಂತು. ಸ್ವಲ್ಪ ಉದ್ವೇಗದಿಂದಲೇ ಕೇಳಿದ. "ನಿಮ್ಮ ಸ್ಮರಣಶಕ್ತಿ ಚೆನ್ನಾಗಿದೆಯೇ?"

"ಎಷ್ಟು ಕೆಡಬಹುದೋ ಅಷ್ಟು ಕೆಟ್ಟಿದೆ. ವಿವರಗಳು ನೆನಪಿಗೆ ಬರುವುದಿಲ್ಲ. ಆ ಶಕ್ತಿ ನನಗೆ ಮತ್ತೆ ಕೊಡಿಸಿದರೆ, ತಮ್ಮ ಉಚಿತ ಪ್ರಕಟನಾ ಪ್ರತಿನಿಧಿಯಾಗಿ ತಮ್ಮ ಪ್ರತಿಭೆ ಜಗಜ್ಜಾಹಿರ ಮಾಡುವೆ" ಎಂದರು ಕಣ್ಣುಮಿಟಿಕಿಸುತ್ತ.

"ತಮ್ಮ ಸಂಭಾವನೆ ಎಷ್ಟೇ ಆಕರ್ಷಕವಾಗಿರಲಿ, ಸ್ಮರಣಶಕ್ತಿ ಮತ್ತೆ ಕೊಡಿಸಲು ನನ್ನಿಂದ ಸಾಧ್ಯವಿಲ್ಲ. ಭಗವಂತನೇ ದಯಪಾಲಿಸಬೇಕು."

"ಯಾವ ಸಂಭಾವನೆಯನ್ನೂ ಪಡೆಯದೆ ಕೊಡಬಹುದಲ್ಲ?"

ಪ್ರಶ್ನೆಗೆ ಉತ್ತರ ಕೊಡಲು ಸಾಧ್ಯವಾಗದೆ ಹೋಮಿಯೋ ವೈದ್ಯ ವಿಷಯ ಪಲ್ಲಟಿಸಿದ. ತಾವು ಹರಿದ್ವಾರದ ಮಿಷನ್ ಆಸ್ಪತ್ರೆಗೆ ಕೆಲವು ವರ್ಷಗಳ ಹಿಂದೆ ಬಂದಿರಲಿಲ್ಲವೇ? ಆಗ ಆಸ್ಪತ್ರೆ ಎಲ್ಲವನ್ನೂ ತೋರಿಸಿದವನು ನಾನೇ. ತಮಗೆ ಜ್ಞಾಪಕವಿದೆಯಷ್ಟೆ?

"ಹರಿದ್ವಾರದ ಮಿಷನ್ ಆಸ್ಪತ್ರೆಗೆ ಭೇಟಿ ಇತ್ತದ್ದು ನೆನಪಿದೆ."

ವೈದ್ಯನಿಗೆ ತುಂಬ ಸಂತೋಷವಾಯಿತು. "ನಿಮ್ಮ ಸ್ಮರಣಶಕ್ತಿ ಚೆನ್ನಾಗಿದೆಯಲ್ಲ."

"ಇಲ್ಲ. ಆಸ್ಪತ್ರೆಗೆ ಹೋದದ್ದು ನೆನಪಿದೆ. ಆದರೆ ನಿಮ್ಮನ್ನು ನೋಡಿದ ನೆನಪೇ ಇಲ್ಲ."

ಸಂತೋಷಭರಿತನಾಗಿದ್ದ ವೈದ್ಯನ ಮುಖ ಸಪ್ಪೆಯಾಯಿತು. ಆಸ್ಪತ್ರೆ ನೋಡಿದ ನೆನಪಿದೆ. ಆದರೆ ತನ್ನನ್ನು ನೋಡಿದ ನೆನಪಿಲ್ಲ! ಪಾಪ ಮುಖಭಂಗವಾಯಿತು.

ಗಾಂಧೀಜಿ ಹೇಳುತ್ತಿದ್ದುದನ್ನೆಲ್ಲ ಬರೆದುಕೊಳ್ಳುತ್ತಿದ್ದ ವೈದ್ಯ ರೋಗಿಯ ಬಗ್ಗೆ ತನ್ನ ಅಭಿಪ್ರಾಯ ಬರೆದು ಅವರ ಕೈಗೆ ಕೊಟ್ಟ: "ಮನೋಧರ್ಮ – ತುಂಬ ಬುದ್ಧಿವಂತ ; ಮತಧರ್ಮಗಳ ಅಭ್ಯಾಸಿ........" ಇತ್ಯಾದಿ.

ಕಾಗದ ಕೈಗೆ ತೆಗೆದುಕೊಂಡು ಮನೋಧರ್ಮದ ಮುಂದೆ ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಹಾಕಿದರು, ಗಾಂಧೀಜಿ.

ಎಲ್ಲವನ್ನೂ ಗಮನಿಸುತ್ತ ಅಲ್ಲಿಯೇ ಕುಳಿತಿದ್ದ ಡಾಕ್ಟರ್ ಬಿದನ್‌ಚಂದ್ರರಾಯ್ ನಡುವೆ ತಲೆ ಹಾಕಿ "ಮನೋಧರ್ಮದ ನಿಜಾಂಶ ಪ್ರಶ್ನಿಸುವ ಸ್ವಭಾವ" ಇದನ್ನೂ ಸೇರಿಸಬೇಕಾಗಿತ್ತು ಎಂದರು.

ವೈದ್ಯ : "ಅದು ನಿರಭಿಮಾನ, ವಿನಯ."

ಗಾಂಧೀಜಿ : "ಇದು ನನ್ನ ಸ್ವಭಾವವಲ್ಲ."

ಎಲ್ಲರೂ ಗೊಳ್ಳನೆ ನಕ್ಕರು.

"ನನ್ನ ರಕ್ತದ ಒತ್ತಡ ಇಳಿಸುವ ಕ್ರಮವಿದು" ಎಂದರು ಗಾಂಧೀಜಿ. ರಕ್ತದ ಇಳಿಸುವ ಒಳ್ಳೆಯ ಮದ್ದು ಹಾಸ್ಯ.

* * * *

ದುರ್ಗಾಬೆನ್ ದೇಸಾಯಿ ಅವರ ಕಾಲಿಗೆ ಸಂಧಿವಾತ ನೋವು ಕಾಣಿಸಿಕೊಂಡಿತು. ಕನು ನಾರಾಯಣದಾಸ ಗಾಂಧಿ ದಿನ ಬೆಳಿಗ್ಗೆ ಒಂದು ಘಂಟೆ ಕಾಲ ಎಣ್ಣೆ ಹಾಕಿ ದುರ್ಗಾಬೆನ್ನಳ ಕಾಲು ನೀವುತ್ತಿದ್ದರು, ಮಹಾತ್ಮರ ಸಲಹೆಯಂತೆ. ಏನೂ ಗುಣ ಕಾಣಲಿಲ್ಲ. ಪ್ರತಿಯಾಗಿ ವ್ಯಾಧಿ ಉಲ್ಬಣಿಸಿತು. ಬೆಳಗಿನ ನಡೆಯ ವ್ಯಾಯಾಮ ಮುಗಿಸಿಕೊಂಡು ತಂಗಿ ದುರ್ಗಿಯನ್ನು ನೋಡಲು ಬಂದರು. ಕನೂ ಕಾಲು ನೀವುತ್ತಿದ್ದ. ನೋವು ತಡೆಯಲಾರದೆ ಅವಳು ಬಹಳ ಸಂಕಟಪಡುತ್ತಿದ್ದಳು. ಕೆಲವು ನಿಮಿಷ ಚಿಕಿತ್ಸೆಯ ವಿಧಾನ ನೋಡುತ್ತಾ ಗಾಂಧೀಜಿ ನಿಂತರು. ಅವಳು ಅನುಭವಿಸುತ್ತಿದ್ದ ಯಾತನೆ ಇವರು ನೋಡಲಾರದೆಹೋದರು. ತೀಡುವುದನ್ನು ಬೇಗ ಮುಗಿಸು ಎಂದರು. ಎಂದಿನಂತೆ ಮಧ್ಯಾಹ್ನ ನಿದ್ರಿಸಲಿಲ್ಲ. ನಿದ್ದೆ ಬಾರದು. "ಅವಳು ಅನುಭವಿಸುತ್ತಿರುವ ಯಾತನೆ ನನ್ನ ಮನಸ್ಸನ್ನು ತಲ್ಲಣಿಸುತ್ತಿದೆ. ನನ್ನ

ನೇತೃತ್ವದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಬಗೆಗೆ ಚಿಂತಿಸುವುದು ನನ್ನ ಸ್ವಭಾವ. ನಾನು ವೈದ್ಯನಲ್ಲ, ಡಾಕ್ಟರ್ ಅಲ್ಲ, ಹೃತ್ಪೂರ್ವಕ ಭಗವಂತನ ನಾಮ ಸ್ಮರಣೆ ಮಾಡುವೆ. ನನ್ನ ಹೃದಯ ಮತ್ತು ಅಂತರಾತ್ಮದ ದುಗುಡ ರೋಗಿಯ ಮನಸ್ಸಿನಲ್ಲಿ ಪ್ರವಹಿಸುವಂತೆ ಮಾಡುವೆ. ತನ್ಮೂಲಕ ಚಿಕಿತ್ಸಾ ವಿಧಾನ ಕಂಡು ಹಿಡಿಯಲು ಪ್ರಯತ್ನಿಸುವೆ. ಭಗವಂತ ಸದಾ ನನ್ನ ನೆರವಿಗೆ ಬಂದಿರುತ್ತಾನೆ ಎಂದಿಗೂ ನನ್ನ ಕೈಬಿಟ್ಟಿಲ್ಲ. ಆದರೆ ಆದೇಕೋ ಇಂದು ಅವನ ಮಾರ್ಗದರ್ಶನ ನನಗೆ ಲಭಿಸುತ್ತಿಲ್ಲ" ಎಂದರು.

* * * *

ಜೂನ್ 1947. ಗಾಂಧೀಜಿ ಕಲ್ಕತ್ತ ಸಮೀಪದ ಸೋದೇಪುರ ಆಶ್ರಮದಲ್ಲಿ ತಂಗಿದ್ದರು. ಮನೂ ಜೊತೆಯಲ್ಲಿದ್ದಳು. ಪಾಟ್ನಾಕ್ಕೆ ಹೊರಟಿದ್ದರು. ಪಾಟ್ನಾ ಸೇರಿದ ಮಾರನೆಯ ದಿನ ತಡೆಯಲಾರದ ಹೊಟ್ಟೆನೋವಿನಿಂದ ಮನು ನರಳ ತೊಡಗಿದಳು. ಪ್ರಕೃತಿ ಚಿಕಿತ್ಸೆಯ ವೈದ್ಯರು ಇದು ಕರುಳು ಬಾಲದ ರೋಗ ಅಲ್ಲ ಎಂದರು. ಆದರೆ ಪಾಶ್ಚಾತ್ಯ ಪದ್ಧತಿಯ ವೈದ್ಯರು ಇದು ಅಪೆಂಡಿಸೈಟಿಸ್, ಕೂಡಲೇ ಶಸ್ತ್ರ ಚಿಕಿತ್ಸೆ ಆಗಬೇಕು ಎಂದರು. ಪಾಟ್ನ ಮೆಡಿಕಲ್ ಆಸ್ಪತ್ರೆಗೆ ಮನುವನ್ನು ಸೇರಿಸಲಾಯಿತು. ರಾತ್ರಿ 9–30 ಘಂಟೆಗೆ ಪ್ರಜ್ಞೆ ತಪ್ಪಿಸುವ ಔಷಧಿ ಮನುವಿಗೆ ಕೊಡಲಾಯಿತು. ರೋಗಾಣು ರಕ್ಷಣೆಯ ಬಟ್ಟೆಯನ್ನು, ವೈದ್ಯರು ಧರಿಸುವಂತೆ, ಮೂಗಿಗೆ ಕಟ್ಟಿಕೊಂಡು, ಶಸ್ತ್ರಚಿಕಿತ್ಸೆ ಮುಗಿಯುವವರೆಗೂ ಆಪರೇಷನ್ ಕೊಠಡಿಯ ಒಂದು ಮುಕ್ಕಾಲಿಯ ಮೇಲೆ ಗಾಂಧೀಜಿ ನಿಶ್ಶಬ್ದರಾಗಿ ಕುಳಿತ್ತಿದ್ದರು. ಚಿಕಿತ್ಸೆ ಮುಗಿಯುತ್ತಲೇ ಎದ್ದು ಹೋಗಿ, ನಿಜವಾಗಿಯೂ ಮನು ಕರುಳು ಬಾಲದ ರೋಗ ದಿಂದ ನರಳುತ್ತಿದ್ದಳೇ ಎಂದು ಪರೀಕ್ಷಿಸಿ ತಮ್ಮ ಸಂದೇಹ ಪರಿಹರಿಸಿಕೊಂಡರು. ಮನುವನ್ನು ಶಸ್ತ್ರಚಿಕಿತ್ಸೆಯ ಕೊಠಡಿಯಿಂದ ರೋಗಿಗಳ ಶಯ್ಯಾಗಾರಕ್ಕೆ ಒಯ್ದು ಹಾಸಿಗೆಯ ಮೇಲೆ ಮಲಗಿಸುವವರೆಗೂ ಗಾಂಧೀಜಿ ಮನು ಸಮೀಪದಲ್ಲಿಯೇ ಇದ್ದರು. ಎರಡು ಗಂಟೆಗಳ ನಂತರ 11–30ಕ್ಕೆ ಅವಳಿಗೆ ಸ್ಮೃತಿ ಬಂತು. ಅವಳ ಹಣೆಯ ಮೇಲೆ ಕೈಯಿಟ್ಟು ರಾಮನಾಮ ಜಪಿಸುತ್ತಿದ್ದರು. ಎಲ್ಲವೂ ಸರಿಹೋಗು ತ್ತದೆ ಎಂದು ಅವಳನ್ನು ಸಮಾಧಾನ ಪಡಿಸಿ ನಡುರಾತ್ರಿಯಲ್ಲಿ ತಮ್ಮ ಬಿಡಾರಕ್ಕೆ ಹಿಂತಿರುಗಿದರು.

ಮನುವನ್ನು ಸಾಮಾನ್ಯ ರುಗ್ಣಾಲಯದಲ್ಲಿ ಇರಿಸಬೇಕೆಂದು ಬಾಪೂಜಿ. ಆವಳು ಬಡವರ ಮಗು. ಸಾಮಾನ್ಯ ವಾರ್ಡು ಸಾಕು. ವೈದ್ಯರು ಒಪ್ಪಲಿಲ್ಲ. ಶ್ರೀ ಸಾಮಾನ್ಯರ ವಾರ್ಡಿನಲ್ಲಿ ಇರಿಸಿದರೆ, ನಿಮ್ಮ ದರುಶನಕ್ಕಾಗಿ ರೋಗಿಗಳು ಹಾಸಿಗೆ

ಬಿಟ್ಟು ಎದ್ದು ಬರುತ್ತಾರೆ. ಇತರರೂ ಬರುತ್ತಾರೆ. ರೋಗಿಗೆ ವಿಶ್ರಾಂತಿ ದೊರೆಯ ದಂತೆ ಆಗುತ್ತೆ. ರೋಗಿಯನ್ನು ನೋಡಿಕೊಳ್ಳಲು ನಮಗೂ ಸಾಧ್ಯವಾಗದಂತೆ ತುಂಬ ತೊಂದರೆ ಆಗುತ್ತೆ, ಎಂದು ಅವರನ್ನು ಸಮಾಧಾನ ಪಡಿಸಿ ಅವಳನ್ನು ಪ್ರತ್ಯೇಕ ಕೊಠಡಿಯಲ್ಲಿ ಇರಿಸಿದರು. ಹಾಸಿಗೆ ಬಿಟ್ಟು ಬರಲಾಗದಂತೆ ಕಟ್ಟುನಿಟ್ಟನಲ್ಲಿದ್ದ ರೋಗಿಗಳೂ ಮಹಾತ್ಮರ ದರ್ಶನಕ್ಕಾಗಿ ಮನುವಿನ ಕೊಠಡಿಗೇ ಬರತೊಡಗಿದರು. ವೈದ್ಯರಿಗೂ, ದಾದಿಯರಿಗೂ ಏನು ಮಾಡಲೂ ತೋರಲಿಲ್ಲ. ಆಗ ಬಾಪೂಜಿ ತಾವೇ ಅದಕ್ಕೆ ಪರಿಹಾರ ತೋರಿಸಿಕೊಟ್ಟರು. ಪ್ರತಿ ವಾರ್ಡಿಗೂ ಸ್ವತಃ ತಾವೇ ಹೋಗಿ ರೋಗಿಗಳ ಯೋಗಕ್ಷೇಮ ವಿಚಾರಿಸತೊಡಗಿದರು. ರೋಗಿಗಳು ಮತ್ತು ವೈದ್ಯ ಶಾಖೆಯ ಎಲ್ಲರೂ ಸಂತೃಪ್ತರಾದರು. ರುಗ್ಣಾಲಯಗಳು ಶುಚಿಯಾದವು. ರೋಗಿಗಳ ಸೇವೆಯಲ್ಲಿ, ಆಹಾರ ಔಷಧ ಕೊಡುವುದರಲ್ಲಿ, ತಮ್ಮ ತಮ್ಮ ಕೆಲಸ ಮನಃಪೂರ್ವಕ ಮಾಡುವುದರಲ್ಲಿ ಎಲ್ಲರೂ ನಿರತರಾದರು. ಎಂಟನೆಯ ದಿನ ಮನುವನ್ನು ಆಸ್ಪತ್ರೆ ಯಿಂದ ಕಳುಹಿಸಿಕೊಡಲಾಯಿತು.

ತಮ್ಮ ಸಹಚರರು, ಮಿತ್ರರು ಕಾಯಿಲೆಯಾದರೆ ಗಾಂಧೀಜಿ ತುಂಬ ಕಳವಳ ಪಡುತ್ತಾರೆ. ಸ್ವಂತ ದೇಹಾರೋಗ್ಯಕ್ಕಿಂತ ಆಪ್ತರ ಕಾಯಿಲೆ ಅವರ ಮನಃಶ್ಶಾಂತಿ ಬಹಳ ಕದಡುತ್ತದೆ. ಮನೂಗೆ ಈ ಕಾಯಿಲೆ ಏಕೆ? ಅವರೂ ಇದೇ ರೋಗದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ರಾಮನಾಮದಲ್ಲಿ ತನ್ನ ಮತ್ತು ಮನುವಿನ ವಿಶ್ವಾಸ ಕುಗ್ಗಿರಬೇಕು. ಪ್ರಕೃತಿ ಚಿಕಿತ್ಸೆಯ ಅವರ ವಿಶ್ವಾಸಕ್ಕೂ ಇದರಿಂದ ದೊಡ್ಡ ಆಘಾತ ವಾಯಿತು.

"ಭಗವಂತ ನನ್ನ ಗರ್ವಭಂಗ ಮಾಡಿದ್ದಾನೆ. ದಿಲ್ಲಿಯಲ್ಲಿದ್ದಾಗಲೇ ಮನುವಿಗೆ ಕರಳುಬಾಲದ ರೋಗವಿರಬಹುದೆಂದು ಶಂಕಿಸಿದೆ. ಮಣ್ಣಿನ ಪೊಲ್ಟೀಸಿನಿಂದ ಗುಣ ವಾದೀತೆಂದು ನಂಬಿ ಚಿಕಿತ್ಸೆ ನಡೆಸಿದೆ ಫಲಿಸಲಿಲ್ಲ. ಕೂಡಲೇ ಶಸ್ತ್ರಚಿಕಿತ್ಸೆ ನಡೆಸಲೇ ಬೇಕೆಂದರು ವೈದ್ಯರು. ಹೀಗೆ ಭವವೈದ್ಯ ನನ್ನ ಅಹಂಕಾರಕ್ಕೆ ಚಿಕಿತ್ಸೆ ನೀಡಿರುತ್ತಾನೆ. ಕಡೆಗೆ ನನ್ನನ್ನು ಅವನು ಎಲ್ಲಿಗೆ ಒಯ್ಯುತ್ತಾನೋ ನಾನರಿಯೆ. ಪ್ರಕೃತಿ ಚಿಕಿತ್ಸೆ ಯಿಂದ ಗುಣವಾಗದಿದ್ದರೆ ಮೃತ್ಯುವನ್ನು ಎದುರಿಸುವಂತೆ, ಈ ಘಟನೆಯ ನಂತರ, ಯಾರಿಗಾದರೂ ನಾನು ಬುದ್ಧಿ ಹೇಗೆ ಹೇಳಲಿ? ನನ್ನ ಬಗೆಗೆ ಹೀಗೆ ನಡೆದು ಕೊಳ್ಳಲು ಸಾಧ್ಯವಾದರೆ ಅಷ್ಟರಿಂದಲೇ ನಾನು ತೃಪ್ತನಾಗಬಹುದು". ಈ ರೀತಿ ಯಲ್ಲಿ ಬರೆದರು ಬಾಪೂಜಿ ಮನುವಿನ ತಂದೆಗೆ.

ಪ್ರಕೃತಿ ಚಿಕಿತ್ಸಕರೊಬ್ಬರಿಗೆ ಹೀಗೆ ಬರೆದರು ಗಾಂಧೀಜಿ: "ಪ್ರಕೃತಿ ಚಿಕಿತ್ಸೆಯೂ ಅಹಿಂಸೆಯ ಒಂದು ಪ್ರಯೋಗ ನನಗೆ. ನನ್ನಲ್ಲಿ ಮನುವಿಗೆ ಪೂರ್ಣ ವಿಶ್ವಾಸ.

ನಿಮ್ಮ ಇಷ್ಟದಂತೆ ಚಿಕಿತ್ಸೆ ನಡೆಸಿ ಎಂದು ನನಗೆ ತಿಳಿಸಿದ್ದಳು. ನಾನು ಹೇಳಿದಂತೆ ನಡೆದುಕೊಳ್ಳುತ್ತಿದ್ದಳು. ಕರುಳು ಬಾಲದ ರೋಗದಂತೆ ಚಿಹ್ನೆಗಳು ಕಾಣಿಸಿ ಕೊಂಡಾಗ ಏನು ಮಾಡಬೇಕೆಂಬ ಚಿಂತೆ ನನ್ನನ್ನು ಬಾಧಿಸತೊಡಗಿತು. ಮಣ್ಣು, ನೀರು, ಪಥ್ಯದ ಚಿಕಿತ್ಸೆ ನಾನು ಕೊಡುತ್ತಲೇ ಇದ್ದೆ. ಎನಿಮಾ ಮತ್ತೆ ಕೊಡ ತೊಡಗಿದೆ. ಆದರೆ ಬೇಧಿ ಪ್ರಾರಂಭವಾಯ್ತು. ಪೂರ್ಣ ಪರಿಣತ ಪ್ರಕೃತಿ ಚಿಕ್ಸಿತೆಯ ವೈದ್ಯ ಸಮೀಪದಲ್ಲಿ ಯಾರೂ ಇರಲಿಲ್ಲ. ಯಾವ ಪ್ರಕೃತಿ ಚಿಕಿತ್ಸೆ ವೈದ್ಯ ನಾದರೂ ಸರಿ. ಅವರ ಸಲಹೆಯಂತೆ ನಡೆದುಕೊಳ್ಳಲು ನಾನು ಸಿದ್ಧನಿದ್ದೆ. ಕಡೆಗೆ ಅರೆಬರೆಯಾದರೂ ನಾನೇ ಸರಿಯಾದ ಪ್ರಕೃತಿ ಚಿಕಿತ್ಸಕನೆಂಬ ತೀರ್ಮಾನಕ್ಕೆ ಬಂದೆ. ನನ್ನ ಪ್ರಯೋಗಗಳು ವಿಫಲಗೊಂಡುವು. ಕಡೆಗೆ ಸೋಲೊಪ್ಪಿಕೊಂಡೆ. ಶಸ್ತ್ರ ಚಿಕಿತ್ಸೆಯೇ ಸರಿ ಎಂಬ ತೀರ್ಮಾನಕ್ಕೆ ಬಂದೆ. ವಿಧಿಯಿಲ್ಲದೆ, ಅನ್ಯಮಾರ್ಗ ಕಾಣದೆ. ಅಗತ್ಯ ಯೋಗ್ಯತೆ ಇದ್ದಿದ್ದರೆ, ಶಸ್ತ್ರಚಿಕಿತ್ಸೆ ತಪ್ಪಿಸಬಹುದಾಗಿತ್ತು. ಈ ಸನ್ನಿವೇಶದಲ್ಲಿ ನೀವೇನು ಮಾಡುತ್ತಿದ್ದೀರಿ ? ದಯಮಾಡಿ ತಿಳಿಸೋಣವಾಗಲಿ. ಮುಂದೆಯಾದರೂ ಉಪಯೋಗಕ್ಕೆ ಬಂದೀತು."

ಪ್ರಕೃತಿ ಚಿಕಿತ್ಸೆಯ ಮಿತಿಯನ್ನು ತಿಳಿಸಿ ಮಹಾತ್ಮರನ್ನು ಸಂತೈಸಲು ಪ್ರಯತ್ನಿಸಿದ ಮತ್ತೊಬ್ಬ ಪ್ರಕೃತಿ ಚಿಕಿತ್ಸಕರಿಗೆ ಗಾಂಧೀಜಿ ಬರೆದರು, "ಪ್ರಕೃತಿ ಚಿಕಿತ್ಸೆಗೆ ಮಿತಿ ಇದೆಯೆಂದು ನೀವು ಹೇಳುತ್ತೀರಿ. ಉದಾಹರಣೆಗೆ, ಒಬ್ಬನಿಗೆ ಅವನ ಪಾದದ ಮೂಳೆ ಮುರಿದರೆ, ಶಸ್ತ್ರಚಿಕಿತ್ಸೆ ನಡೆಸಿ ಹೊಸ ಪಾದ ಕೊಡಲು ಪ್ರಕೃತಿ ಚಿಕಿತ್ಸಕನಿಗೆ ಸಾಧ್ಯವಾಗದೆ ಹೋಗಬಹುದು. ಈ ವಾದ ಅಪೆಂಡಿಸೈಟಿಸ್ ಕಾಯಿಲೆಗೂ ಅನ್ವಯಿಸುತ್ತದೆಯೇ ? ಪಾದವಿಲ್ಲದೆ ಕುಂಟನಾಗಿ ಬದುಕಬಹುದು. ಆದರೆ ಕರುಳು ಬಾಲದ ಬಾಧೆ ಕಾಣಿಸಿಕೊಂಡಾಗ, ಶಸ್ತ್ರಚಿಕಿತ್ಸೆ ಅಲ್ಲದೆ ಬೇರೆ ಮಾರ್ಗವಿಲ್ಲ. ಶಸ್ತ್ರ ಚಿಕಿತ್ಸೆ ಅಥವಾ ಮರಣ ಇದನ್ನು ಸ್ವೀಕರಿಸಬೇಕೇ ?"

ಪ್ರಕೃತಿ ಚಿಕಿತ್ಸಾ ಪ್ರಪಂಚದ ಅಸ್ತವ್ಯಸ್ತತೆ ಅವರನ್ನು ಚಿಂತೆಗೆ ಈಡುಮಾಡಿತು. ಇಬ್ಬರಲ್ಲಿ ಒಮ್ಮತವಿಲ್ಲ. ಪ್ರತಿಯೊಬ್ಬನೂ ತನ್ನದೇ ಕಡೆಯ ಮಾತೆಂದು ಹೇಳಿ ಕೊಳ್ಳುತ್ತಾನೆ. ವೈಜ್ಞಾನಿಕವಾಗಿ ಇದನ್ನು ಅಭಿವೃದ್ಧಿಗೊಳಿಸಲು ಯಾರೂ ಮುಂದೆ ಬರುತ್ತಿಲ್ಲ. ಆದರೆ ಇಷ್ಟರಿಂದಲೇ ತೃಪ್ತರಾಗಲು ಅವರು ಅವಕಾಶಕೊಡರು. ತಾನು ಕ್ರಾಂತಿಕಾರಿ. ಪಾಶ್ಚಾತ್ಯ ವೈದ್ಯ ವಿದ್ಯೆ ದೇಹಕ್ಕೆ ಪ್ರಮುಖ ಸ್ಥಾನಕೊಟ್ಟು ಆತ್ಮವನ್ನು ಕಡೆಗಣಿಸುತ್ತದೆ. ಇದು ಸಲ್ಲ.

ಮನುವಿನ ಕಾಯಿಲೆಯನ್ನು ಸರಿಯಾಗಿ ಗ್ರಹಿಸದೇ ಹೋದ ಪ್ರಕೃತಿ ಚಿಕಿತ್ಸಕನಿಗೆ ಅವರು ಬರೆದರು. ನಿಮ್ಮ ಉತ್ಸಾಹ ಪ್ರಶಂಸನೀಯ. ಆದರೆ ಕೇವಲ

ಉತ್ಸಾಹದಿಂದ ಕಾರ್ಯ ಸಾಧಿಸದು. ಅಥವಾ ನನ್ನ ಹೆಸರೆತ್ತಿಕೊಂಡು ಅದನ್ನು ಜೀವಂತವಾಗಿಡುವ ಪ್ರಯತ್ನವೂ ಯಶಸ್ವಿಯಾಗದು. ಈ ವಿದ್ಯೆಯಲ್ಲಿ ನನ್ನ ತಿಳಿವಳಿಕೆ ಸೊನ್ನೆ. ಏನೂ ಅರಿಯೆ ನಾನು, ನಿಮ್ಮ ಉತ್ಸಾಹವನ್ನು ತಿಳಿವಳಿಕೆಯಾಗಿ ಸ್ವಲ್ಪ ಆಸೆ ಕಾಣಬಹುದು. ಪ್ರಕೃತಿ ಚಿಕಿತ್ಸೆಯು ನಮ್ಮ ಜ್ಞಾನ, ಲೋಪದೋಷ ಒಪ್ಪಿಕೊಂಡರೆ ಅಂಗರಚನೆ, ದೈಹಿಕ ಶಾಸ್ತ್ರದ ಅಭ್ಯಾಸ ಏಕೆ ಶಾಸ್ತ್ರೀಯವಾಗಿ ಕೈಗೊಳ್ಳಬಾರದು. ಅನೇಕ ವರ್ಷಗಳ, ದೀರ್ಘಕಾಲದ ಸಂಶೋಧನೆಯಿಂದ ಪಾಶ್ಚಾತ್ಯ ವೈದ್ಯಕೀಯ ವಿಜ್ಞಾನ ಗಳಿಸಿರುವ ವಿದ್ಯೆಯ ಪ್ರಯೋಜನ ನೀವು ಪಡೆದಿದ್ದರೆ, ಮನುವಿನ ಕಾಯಿಲೆಯ ಕಾರಣ ನಿರ್ಧರಿಸುವುದರಲ್ಲಿ ನೀವು ತಪ್ಪು ಮಾಡುತ್ತಿರಲಿಲ್ಲ. ಸರ್ಕಾರದಿಂದ ದೊರೆಯುತ್ತಿರುವ ಪ್ರೋತ್ಸಾಹ ಮತ್ತು ಬೆಂಬಲದಿಂದ ಪಾಶ್ಚಾತ್ಯ ವೈದ್ಯಶಾಸ್ತ್ರ ಇಂದಿನ ಸ್ಥಾನ ಪಡೆದಿದೆ ಎಂದು ಭ್ರಮಿಸಬೇಡಿ. ಅದು ಅಸತ್ಯೆಯ ವಿದ್ಯೆಯಾದರೂ, ಅದರ ಅಭ್ಯಾಸಿಗಳಿಗೆ ಅದರಲ್ಲಿ ವಿಶ್ವಾಸವಿದೆ. ಆ ವಿದ್ಯೆಯನ್ನು ಮುಂದುವರಿಸಲು ಅವರು ಬಹಳ ತ್ಯಾಗ ಮಾಡಿರುತ್ತಾರೆ. ಈ ಕಾರಣದಿಂದ ಪ್ರಪಂಚದಲ್ಲಿ ಇಂದಿನ ಸ್ಥಾನ ಅದು ಗಳಿಸಿದೆ. ಆದಕಾರಣ, ಬಡವರನ್ನು ಸುಲಿದು ತಾವು ಶ್ರೀಮಂತರಾಗುವುದು ಸರಿ ಎಂದು ಅವರು ತಿಳಿಯುತ್ತಾರೆ.

ರೋಗಿಯ ಹೃದಯ ಸೂರೆಗೊಳ್ಳುವುದು ಪ್ರಕೃತಿ ಚಿಕಿತ್ಸಕನ ಕರ್ತವ್ಯ. ತದ್ವಿರುದ್ಧವಲ್ಲ. ರೋಗಿ ವೈದ್ಯನ ಹೃದಯ ಗೆದ್ದರೆ, ರೋಗಿಯೇ ವೈದ್ಯನಾಗುತ್ತಾನೆ. ವೈದ್ಯ ರೋಗಿಯಾಗುತ್ತಾನೆ. ಈ ಪರಿಸ್ಥಿತಿಯಲ್ಲಿ ವೈದ್ಯನ ನೆರವು ರೋಗಿ ಬಯಸುತ್ತಾನೆ. ಆದರೆ ಸಂಪೂರ್ಣವಾಗಿ ವೈದ್ಯ ಹೇಳಿದಂತೆ ನಡೆದುಕೊಳ್ಳಲು ರೋಗಿ ಸಿದ್ಧನಿರುವುದಿಲ್ಲ. ಈ ಸಂದರ್ಭದಲ್ಲಿ ರೋಗಿಯ ತಿಳುವಳಿಕೆಗೆ ಅನುಗುಣವಾಗಿ ಸರಿಹೊಂದಿಕೊಳ್ಳಲು ತಾಳ್ಮೆಯಿಂದ ವೈದ್ಯ ಪ್ರಶ್ನಿಸಬೇಕು.

ಪಾಶ್ಚಾತ್ಯ ವೈದ್ಯರನ್ನೂ ತರಾಟೆಗೆ ತೆಗೆದುಕೊಳ್ಳದೆ ಹೋಗಲಿಲ್ಲ. ವೈದ್ಯಕೀಯ ಪದವಿಗಳನ್ನು ಪಡೆದು, ಅರೆಬೆಂದ ಜ್ಞಾನದ ಲಾಭ ಪಡೆದು, ತಮ್ಮ ಕಿಸೆ ತುಂಬಿಕೊಳ್ಳಲು ಅವರು ಪ್ರಯತ್ನಿಸುತ್ತಾರೆ. ಪರಿಣತಿ ಪಡೆಯಲು ಪಾಶ್ಚಾತ್ಯ ದೇಶಗಳಿಗೆ ಧಾವಿಸುತ್ತಾರೆ. ಏಳು ಲಕ್ಷ ಹಳ್ಳಿಗಳ ಹಳ್ಳಿಯವರನ್ನು ಮನಸ್ಸಿನಲ್ಲಿಟ್ಟುಕೊಂಡು, ಅವರ ಬಾಳ್ವೆಗೆ ತಕ್ಕದಾದ ವೈದ್ಯ ಶಿಕ್ಷಣ ರೂಪಿಸುವುದು ಅಗತ್ಯ. ಆಗ ನಮ್ಮಲ್ಲಿಯೇ ದೊರೆಯುವ ಗಿಡಮೂಲಿಕೆಗಳನ್ನು, ಮತ್ತು ನಮ್ಮ ವೈದ್ಯ ಪದ್ಧತಿಯ ಪ್ರಯೋಜನ ಪಡೆಯಲು ಸಾಧ್ಯವಾದೀತು. ಪಾಶ್ಚಾತ್ಯ ಪದ್ಧತಿಯ ವೈದ್ಯರು ಪಾಶ್ಚಾತ್ಯ ಔಷಧಿ ಮತ್ತು ಗುಳಿಗೆಗಳ ಪ್ರಚಾರಕರಾಗಬಾರದು. ನಮ್ಮಲ್ಲಿ ಯಥೇಚ್ಛವಾಗಿ ದೊರೆಯುವ ಗಿಡಮೂಲಿಕೆಗಳ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕು. ನಿಜ ವೈದ್ಯನ ಕರ್ತವ್ಯ ಔಷಧ ಕೊಡುವುದಲ್ಲ. ಆದರೆ ಕಾಯಿಲೆ ಬಾರದಂತೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ

ಕ್ರಮಗಳನ್ನು ತಿಳಿಯ ಹೇಳುವುದು. ಈ ನನ್ನ ಮತ ಎಲ್ಲ ವೈದ್ಯ ಪದ್ಧತಿಗಳಿಗೂ ಅನ್ವಯಿಸುತ್ತದೆ.

ತನಗೆ ರಾಮನಾಮದಲ್ಲಿ ಅಚಲ ವಿಶ್ವಾಸವಿದ್ದಿದ್ದರೆ, ತನಗಾಗಲಿ, ಮನುವಿಗಾಗಲಿ ಕಾಯಿಲೆ ಬರುತ್ತಲೇ ಇರಲಿಲ್ಲ. ಪರಿಪೂರ್ಣ ವಿಶ್ವಾಸವಿದ್ದಿದ್ದರೆ ಕಾಯಿಲೆ ಬಂದರೂ ರಾಮಧ್ಯಾನದಿಂದಲೇ ಗುಣವಾಗುತ್ತಿತ್ತು. ಇದೇ ಅವರ ಪ್ರಕೃತಿಚಿಕಿತ್ಸೆಯ ಮೂಲ. ಈ ಭಾವನೆ ಅವರನ್ನು ಸದಾ ಕಾಡುತ್ತಿತ್ತು.

* * * *

ದಾಂಡಿ ಯಾತ್ರೆಗೆ ಹೊರಡುವ ಕೆಲವು ತಿಂಗಳ ಮೊದಲು ಸಾಬರಮತಿ ಆಶ್ರಮದಲ್ಲಿ ಸಿಡುಬು ರೋಗ ಕಾಣಿಸಿಕೊಂಡಿತು. ಅವರಿಗೆ ದೇವಿ ಹಾಕಿಸಿಕೊಳ್ಳುವುದರಲ್ಲಿ ವಿಶ್ವಾಸವಿರಲಿಲ್ಲ. ಆದರೆ ವಿಶ್ವಾಸವುಳ್ಳವರು ಸಿಡುಬು ರಕ್ಷಣೆಯ ದೇವಿ ಹಾಕಿಸಿಕೊಳ್ಳಲು ಅವಕಾಶವಿತ್ತರು. ಆದರೆ ಯಾರೂ ಸಿಡುಬು ಎಬ್ಬಿಸಿಕೊಳ್ಳಲಿಲ್ಲ. ಮುಂಜಾಗ್ರತೆ ಮತ್ತು ರೋಗ ನಿವಾರಣೆಯ ಎಲ್ಲ ಕ್ರಮಗಳನ್ನೂ ವೈದ್ಯರ ಸಲಹೆಯಂತೆ ತೆಗೆದುಕೊಳ್ಳಲಾಯಿತು. ಆದರೂ ಸಿಡುಬು ಕಾಣಿಸಿಕೊಂಡಿತು. ಎಲ್ಲರಿಗೂ ಗುಣವಾದರೂ ಇಬ್ಬರು ಮಕ್ಕಳು ಮಾತ್ರ ಸಾವಿನ ದವಡೆಯಿಂದ ಪಾರಾಗಲಿಲ್ಲ. ಗೀತಾ ಒಂಬತ್ತು ವಯಸ್ಸಿನ ಹುಡುಗಿ. ಅವಳ ತಂದೆ ಪಕ್ಕದಲ್ಲಿ ಕುಳಿತು ಗೀತೆಯನ್ನು ಓದುತ್ತಿದ್ದಾಗ ಅವಳು ಕಣ್ಣು ಮುಚ್ಚಿದಳು. ಮತ್ತೆ ತೆರೆಯಲಿಲ್ಲ.

ಕೆಲವು ದಿನಗಳ ನಂತರ ಪಂಡಿತ ನಾರಾಯಣ ಖರೆ ಅವರ ಮಗು ವಸಂತ, ಸಿಡುಬಿನಿಂದ ತೀರಿಕೊಂಡಿತು. ಈ ವೇಳೆಯಲ್ಲಿ ಆಶ್ರಮದ ಸಾಯಂ ಪ್ರಾರ್ಥನೆ ಖರೆ ನಡೆಸುತ್ತಿದ್ದರು. ಮೇಘಜೀ ಅವರ ಪುಟ್ಟ ಮಗು ಕೆಲವು ದಿನಗಳಲ್ಲಿ ಇದೇ ಅಂಟು ಜಾಡ್ಯದಿಂದ ತೀರಿಕೊಂಡಿತು. ಇವು ಮೂರು ಹಸು ಮಕ್ಕಳ ಜೀವ ಉಳಿಸಲು ಸಾಧ್ಯವಾಗಲಿಲ್ಲ.

ಮಕ್ಕಳ ಮರಣದಿಂದ ಮಹಾತ್ಮರ ಮನ ಸಮುದ್ರದ ತರಂಗಗಳಂತೆ ಅಲ್ಲೋಲ ಕಲ್ಲೋಲವಾಗಿ ಹೋಯಿತು. ನಿದ್ದೆ ಬಾರದು. ರಾತ್ರಿ ಒಂದು ಘಂಟೆಗೆ ಎದ್ದು, ಸೀಮೆಎಣ್ಣೆ ದೀಪಹತ್ತಿಸಿ, ಪತ್ರಗಳನ್ನು ಬರೆಯ ತೊಡಗಿದರು. ಬೊಂಬಾಯಿನ ಪ್ರೇಮಕಂಟಕ್, ಆಶ್ರಮದಲ್ಲಿ ಗಾಂಧೀಜಿಯವರ ಗುಡಿಸಿಲಿನಲ್ಲಿ ಸಮೀಪದಲ್ಲಿಯೇ ಮಲಗಿದ್ದಳು.

"ಏನು, ಬಾಪೂಜಿ, ಅವೇಳೆಗೆ ಎದ್ದು ಬರವಣಿಗೆಯಲ್ಲಿ ತೊಡಗಿರುವಿರಲ್ಲ. ನಾನು ಎದ್ದು ಸಹಾಯ ಮಾಡಲೇ".

"ಬೇಡ, ಬೇಡ, ನೀನು ಮಲಗಿಕೊ".

"ಮೂರು ಮಕ್ಕಳು ಆಸು ನೀಗಿದುವು ಆಶ್ರಮದಲ್ಲಿ. ಮರಣ ಸಂಭವಿಸಿದ ಮೂರು ದಿನಗಳ ನಡುರಾತ್ರಿ ಎದ್ದು ಕೆಲಸದಲ್ಲಿ ತೊಡಗುತ್ತಿರುವಿರಲ್ಲ. ಮಕ್ಕಳ ಮರಣ ನಿಮ್ಮ ಮೇಲೆ ತೀವ್ರ ಪರಿಣಾಮ ಬೀರಿರುವಂತೆ ತೋರುತ್ತದೆ."

"ನಿಜ. ನಿದ್ದೆ ಬಾರದು. ಮಾಡಲೇನು. ಅರಳುವ ಮೊಗ್ಗೆಗಳು ವಿಕಸಿತ ಗೊಂಡು ಅರಳುವ ಮೊದಲೇ ಬಾಡಿಹೋದುವು. ಈ ದೃಶ್ಯ ನನ್ನ ಕಣ್ಣುಮುಂದೆಯೇ ನಡೆಯುತ್ತಿದೆ. ಈ ಮಕ್ಕಳ ಅಕಾಲ ಮರಣಕ್ಕೆ ಕಾರಣ ನಾನಲ್ಲವೇ? ಅದಕ್ಕೆ ದೇವಿ ಹಾಕಿಸುವುದು ಬೇಡವೆಂದು ಅವರ ಮಾತಾಪಿತೃಗಳನ್ನು ಒತ್ತಾಯ ಮಾಡಿದೆ. ಇದಕ್ಕೆ ನನ್ನ ಮೌಢ್ಯ ಮತ್ತು ಹಟಮಾರಿತನ ಕಾರಣವಲ್ಲವೇ. ಈ ಹೊಣೆಯ ಭಾರ ಹೊರಲು ಸಾಧ್ಯವಾಗುತ್ತಿಲ್ಲ."

"ಈ ಮಾತುಗಳು ಹೊರಬರುತ್ತಿರುವುದು. ಮಹಾತ್ಮರ ಬಾಯಿಂದಲೇ" ಎಂದು ಮೂದಲಿಸಿದಳು ಪ್ರೇಮಕಂಟಕ್ ಕಾಯಿಲೆ ಸರಿಯಾಗಿ ಗೊತ್ತು ಮಾಡಿದಿರಿ. ಸರಿಯಾದ ಔಷದೋಪಚಾರ ನಡೆಸಿದಿರಿ. ನಿಮ್ಮ ಚಿಕಿತ್ಸಾ ವಿಧಾನ ವೈದ್ಯರ ಒಪ್ಪಿಗೆ ಪಡೆದಿರುತ್ತದೆ. ಮನ್ನಣೆಗೆ ಪಾತ್ರವಾಗಿರುತ್ತದೆ. ಮರಣ ತಪ್ಪಿಸಲು ಯಾರಿಂದ ತಾನೆ ಸಾಧ್ಯ? ಮಕ್ಕಳು ಸತ್ತರೆ ಯಾರೇನು ಮಾಡಬಲ್ಲರು? ಜನನ ಮರಣ ಸಮ ದೃಷ್ಟಿಯಿಂದ ಕಾಣಬೇಕು. ಎಲ್ಲವೂ ಪ್ರಕೃತಿ ನಿಯಮ. ಇದರಿಂದ ವಿಚಲಿತರಾಗ ಲಾರದು ಎಂದು ಬೋಧಿಸುವ ನೀವು ಹೀಗೆ ದುಃಖಪರವಶರಾಗಬಹುದೇ ? ನಿಮ್ಮ ಹೃದಯ ಇಷ್ಟು ಕೋಮಲವಾಗಿರಬಾರದು."

"ನಿಜ, ನೀನು ಹೇಳುವುದೆಲ್ಲ ಸರಿ. ನನ್ನ ದೌರ್ಬಲ್ಯ ನಾನು ಒಪ್ಪಿಕೊಳ್ಳಲೇ ಬೇಕು. ವ್ಯಕ್ತಿ ಎಷ್ಟೇ ಧೈರ್ಯವಾಗಿರಲಿ. ಎಷ್ಟೇ ನಿರ್ಲಿಪ್ತನಾಗಿರಲಿ, ಅವನು ಮೃದು ಹೃದಯಿ ಆಗಿರಬಾರದೆ" ಎಂದು ಮರು ಪ್ರಶ್ನೆ ಹಾಕಿದರು. ಮರುದಿನ ಸಂಜೆಯ ಪ್ರಾರ್ಥನಾ ಪ್ರವಚನದಲ್ಲಿ ದೇವಿ ಹಾಕಿಸಿಕೊಳ್ಳುವುದನ್ನು ಕುರಿತು ಮಾತನಾಡಿದರು. ತನಗೆ ಇದರಲ್ಲಿ ವಿಶ್ವಾಸವಿಲ್ಲ. ಆದರೆ ತನ್ನ ಅಭಿಮತವನ್ನು ಇತರರ ಮೇಲೆ ಹೊರಿಸಲ ತಾನು ಬಯಸುವುದಿಲ್ಲ. ಯಾರು ಬೇಕಾದರೂ ಸಿಡುಬು ಹಾಕಿಸಿಕೊಳ್ಳ ಬಹುದೆಂದು ತಿಳಿಸಿದರು. ಆದರೆ ಯಾರೂ ಹಾಕಿಸಿಕೊಳ್ಳಲಿಲ್ಲ. ಮುಂದೆ ಸಿಡುಬಿ ನಿಂದ ಆಶ್ರಮದಲ್ಲಿ ಮರಣ ಸಂಭವಿಸಲಿಲ್ಲ.

* * * *

ಬಲವಂತ ಸಿನ್ಹ ಭಾರತದ ಸೇನೆಯಲ್ಲಿ ಸಾಮಾನ್ಯ ಸೈನಿಕನಾಗಿದ್ದು ಜಾಲಿಯನ್ ವಾಲ ದುರಂತ ಅವನ ಮೇಲೆ ತುಂಬ ಪರಿಣಾಮ ಬೀರಿತು. ಆಗಿನ ಕಾಲದಲ್ಲಿ ಸೇನಾ ನೌಕರರಿಗೆ ದೇಶದ ಆಗುಹೋಗುಗಳ ವಿಷಯ ತಿಳಿಯದಂತೆ ಮರೆ ಮಾಚ ಲಾಗುತ್ತಿತ್ತು. ಆದರೂ ಹಾಗೂ ಹೀಗು ಮಹಾತ್ಮರ ನಾಯಕತ್ವದಲ್ಲಿ ನಡೆಯುತ್ತಿದ್ದ ಅಹಿಂಸಾ ಹೋರಾಟದ ವಿಷಯ ತಿಳಿಯುತ್ತಿದ್ದ. ಸೇನೆಗೆ ಶರಣು ಹೊಡೆದು ಮಹಾ ತ್ಮರ ಸೇವಾಗ್ರಾಮ ಆಶ್ರಮಕ್ಕೆ ಬಂದ.

ಗೋಸೇವೆಯ ಕಾರ್ಯದಲ್ಲಿ ಇವನನ್ನು ಗಾಂಧೀಜಿ ತೊಡಗಿಸಿದರು. ಸ್ವಲ್ಪ ಕಾಲದ ನಂತರ ಸೇವಾಗ್ರಾಮದಿಂದ 55 ಮೈಲಿಗಳ ದೂರದ ಮೊಜಾರಿಯಲ್ಲಿ ತುಕ ಡೋಜಿ ಆಶ್ರಮಕ್ಕೆ ಸೆಪ್ಟಂಬರ್ 1936ರಲ್ಲಿ ಕಳುಹಿಸಿಕೊಟ್ಟರು. ಸುಮಾರು 60 ಜನ ಅಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಎಂಟುಹತ್ತು ದಿನಗಳಲ್ಲಿ ಬಲವಂತಸಿನ್ಹ ಜ್ವರಪೀಡಿತ ನಾಗಿ ಹಾಸಿಗೆ ಹಿಡಿದ. ಮಹಾತ್ಮರಿಗೆ ಇವನ ದೇಹಸ್ಥಿತಿಯನ್ನು ತಿಳಿಸಿ ತಂತಿ ಕಳುಹಿಸಲಾಯಿತು. ಸೇವಾಗ್ರಾಮಕ್ಕೆ ಬಲವಂತ ಸಿನ್ಹನನ್ನು ಕಳುಹಿಸಿಕೊಡ ಲಾಯಿತು. ಮಹಾತ್ಮರೇ ಅವನನ್ನು ಎದುರ್ಗೊಂಡು ಆಶ್ರಮಕ್ಕೆ ಕರೆದುತಂದರು. ಮೆಣಸಿನಕಾಯಿ ತುಂಬ ತಿಂದೆಯಂತೆ ನಿಜವೇ ಎಂದು ಗಾಂಧೀಜಿ ಪ್ರಶ್ನಿಸಿದರು. ಇಲ್ಲ, ಸರಿಯಾದ ಆಹಾರವಿಲ್ಲದೆ ಅತಿಯಾಗಿ ಬಾಳೆಹಣ್ಣು ತಿಂದುದಾಗಿ ಸಿನ್ಹ ತಿಳಿಸಿದ.

ಮಾತನಾಡುತ್ತಿದ್ದಂತೆಯೇ ಹೊಟ್ಟೆನೋವು, ಎದೆ ನೋವು, ತಡೆಯಲಾರ ದಂತಾಯಿತು. ಬಾಪೂಜಿಯ ಸ್ನಾನದ ಮನೆಗೆ ಬಲವಂತ ಸಿನ್ಹನನ್ನು ಎತ್ತಿಕೊಂಡು ಹೋಗಲಾಯಿತು. ಬಾಪೂಜಿ ಸ್ವತಃ ಸಿನ್ಹನಿಗೆ ಎನಿಮ ಕೊಟ್ಟರು. ಒದ್ದೆ ಬಟ್ಟೆ ಯಿಂದ ಮೈ ಒರಸಿ, ಬಟ್ಟೆ ಬದಲು ಮಾಡಿದರು. ಡಾಕ್ಟರ್ ಮಹೋದಯ ಬಂದು ರೋಗಿಯನ್ನು ಪರೀಕ್ಷಿಸಿದರು. ಹೃದಯ ತುಂಬ ದುರ್ಬಲವಾಗಿದೆ. ಯಾವ ಘಳಿಗೆಯಲ್ಲಾದರೂ ಮರಣ ಸಂಭವಿಸಬಹುದು. ಜಾಗರೂಕತೆಯಿಂದ ನೋಡಿ ಕೊಳ್ಳುವಂತೆ ತಿಳಿಸಿ, ಔಷಧಿಗಳನ್ನು ಬರೆದುಕೊಟ್ಟು ಡಾಕ್ಟರ್ ನಿರ್ಗಮಿಸಿದರು. ತನ್ನ ವಿಷಮ ಪರಿಸ್ಥಿತಿ ಗ್ರಹಿಸಿದ ಸಿನ್ಹ ತನ್ನನ್ನು ವರ್ಧಾ ಸಿವಿಲ್ ಆಸ್ಪತ್ರೆಗೆ ಸೇರಿಸು ವಂತೆ ಮಹಾತ್ಮರಿಗೆ ತಿಳಿಸಿದ.

"ಮಗು ಕಾಯಿಲೆಯಾಯಿತೆಂದು ತಾಯಿ ಮಗುವನ್ನು ಇತರರ ಕೈಗೆ ಒಪ್ಪಿಸಲು ಬಯಸುತ್ತಾಳೆಯೇ? ತಾಯಿಗೆ ತೊಂದರೆಯಾಗುತ್ತೆ ತನ್ನಿಂದ ಎಂದು ಮಗುವಾದರೂ ತಾಯಿಯನ್ನು ಬಿಟ್ಟುಹೋಗಲು ಬಯಸೀತೇ? ನನಗೆ ಕೆಲಸ ಎಷ್ಟೇ ಇರಲಿ ನಿನ್ನ ಶುಶ್ರೂಷೆಗೆ ಯೋಗ್ಯ ವ್ಯವಸ್ಥೆ ಮಾಡಲಾಗುವುದು. ಆದರೆ

ಇದನ್ನು ನೀನು ಸಂದೇಹಿಸಿದರೆ ಕೂಡಲೆ ನಿನ್ನ ಆಸ್ಪತ್ರೆಗೆ ಕಳುಹಿಸಿಕೊಡುವೆ.” ಹೀಗೆ ಗಾಂಧೀಜಿ ತಿಳಿಸಿದರು.

ಮಹಾತ್ಮರ ಸ್ವಹಸ್ತದಿಂದ ಸೇವೆ ಪಡೆಯುವ ಸೌಭಾಗ್ಯ ದೊರೆತಾಗ ಯಾರಾದರೂ ಅಂಥ ಅವಕಾಶ ಕಳೆದುಕೊಂಡಾರೆ? ಬಲವಂತ ಸಿನ್ಹ ಆಶ್ರಮ ಬಿಟ್ಟು ಹೋಗಲಿಲ್ಲ. ಇವನ ಆರೈಕೆಯ ಹೊಣೆಯನ್ನು ಪ್ಯಾರೆಲಾಲರಿಗೆ ಗಾಂಧೀಜಿ ಒಪ್ಪಿಸಿದರು. ಡಾಕ್ಟರ್ ಮಹೋದಯರ ಅನುಪಾನದಂತೆ ಔಷಧಿ ಕೊಡಲಿಲ್ಲ. ಪ್ರಕೃತಿ ಚಿಕಿತ್ಸಾಕ್ರಮದಂತೆ ಹೊಟ್ಟೆಯ ಮೇಲೆ ಹಸಿಮಣ್ಣು ಲೇಪಿಸಲಾಯಿತು. ಇದು ಪ್ಯಾರೆಲಾಲರ ಹೊಣೆ. ಖಾನ್ ಸಾಹೇಬರು ಆಗಿಂದಾಗ ಹಣ್ಣಿನ ರಸ ಕೊಡುತ್ತಿದ್ದರು. ಮಂಚದ ಪಕ್ಕದಲ್ಲಿ ದೇಹಬಾಧೆ ತೀರಿಸಿಕೊಳ್ಳಲು ‘ಕಮೋಡ್’ಗೆ ಒಂದು ತೊಟ್ಟಿ. ನೀರು ಕುಡಿಯಲು ಹೂಜಿ ನೀರು. ಸಹಾಯ ಬೇಕಾದಾಗ ಬಾರಿಸಲು ಗಂಟೆ ಇರಿಸಲಾಯಿತು. ಗಂಟೆಯ ಶಬ್ದ ಕೇಳಿ ಯಾರೂ ಬರದಿದ್ದರೆ ಗಾಂಧೀಜಿ ಸ್ವತಃ ತಾವೇ ಎದ್ದು ಬಂದು ಏನು ಬೇಕೆಂದು ಕೇಳುತ್ತಿದ್ದರು. ಮೀರಾ ಮೇಲಿನ ಉಸ್ತುವಾರಿಗೆ. ಧಾರಾಳವಾಗಿ ನೀರು ಕುಡಿಯುವಂತೆ ತಿಳಿಸಲಾಗಿತ್ತು. ಔಷಧಿಗಿಂತ ಅಧಿಕವಾಗಿ ಸುರಿಮಳೆಯಾಗುತ್ತಿದ್ದ ಅಪಾರ ಪ್ರೇಮ ತನ್ನ ಪ್ರಾಣ ಉಳಿಸಿತು ಎನ್ನುತ್ತಾನೆ ಬಲವಂತಸಿನ್ಹ.

ಕಾಯಿಲೆ ಗುಣವಾದಂತೆ ಹಸಿವು ಹೆಚ್ಚಿತು. ಚಪಾತಿ ಬೇಡಿದ ಸಿನ್ಹ. “ಹತ್ತು ಸೇರು ಹಾಲನ್ನಾದರೂ ಕೊಡುವೆ, ಆದರೆ ಒಂದು ಚಪಾತಿಯನ್ನೂ ಕೊಡಲಾರೆ” ಎಂದರು ಬಾಪೂಜಿ. ಹಸಿವಾದರೆ ಕಿತ್ತಲೆ, ಸೇಬು, ಮೂಸಂಬಿ ತೆಗೆದುಕೋ ಎನ್ನುತ್ತಿದ್ದರು. ಮೂರು ತಿಂಗಳು ಇದೇ ರೀತಿ ನಡೆಯಿತು. ಈ ಅವಧಿಯಲ್ಲಿ ಸಿನ್ಹ ನೀರು ಕುಡಿಯುತ್ತಿರಲಿಲ್ಲ. ಹಸಿವು ತಡೆಯಲಾರದೆ ಒಂದು ದಿನ ಸಿನ್ಹ ತಂಗಿ ವಿಜಯಳಿಂದ ಅರ್ಧ ಚಪಾತಿ ತೆಗೆದುಕೊಂಡು ತಿಂದ. ಇದು ಬಾಪೂಜಿಗೆ ತಿಳಿಯಿತು. ಕೋಪಮಾಡಿಕೊಂಡರು.

ಬಾಪೂಜಿ ಆಶ್ರಮ ಬಿಟ್ಟು ಪ್ರವಾಸಕ್ಕೆ ಹೊರಡಬೇಕಾಯಿತು. ಬಾಪೂಜಿ ಆಶ್ರಮದಲ್ಲಿ ಇದ್ದಾಗ ಬಂದವರು ಹಣ್ಣು ತಂದುಕೊಡುತ್ತಿದ್ದರು. ಅವರು ಹೊರಟು ಹೋದ ಮೇಲೆ ತನ್ನ ಪಾಡೇನು. ಯಾರು ತನಗೆ ಬೇಕಾದಷ್ಟು ಹಣ್ಣು ಕೊಟ್ಟಾರು ಎಂಬ ಚಿಂತೆ ಸಿನ್ಹನಿಗೆ. ಇದನ್ನು ಅವರಿಗೆ ತಿಳಿಸಿದ. ದೊರತಷ್ಟು ಹಣ್ಣು ಮತ್ತು ಚಪಾತಿ ತಿನ್ನಲು ಅನುಮತಿ ಕೊಟ್ಟರು ಬಾಪೂಜಿ, ಅವನಿಗೆ.

ಇದೇ ಸಮಯದಲ್ಲಿ ಮೀರಾಬೆಹನ್ ಮತ್ತು ನಾನಾವತಿ ಇಬ್ಬರಿಗೂ ಜ್ವರ ಕಾಣಿಸಿಕೊಂಡಿತು. ವಿಷಮಶೀತ ಜ್ವರ. ಮೀರಾಳ ಚಿಕಿತ್ಸೆ ಸ್ವತಃ ಬಾಪೂಜಿ

ನಡೆಸುತ್ತಿದ್ದರು. ಧಾರವಾಡ ಜಿಲ್ಲೆ ಹಾವೇರಿ ತಾಲ್ಲೂಕಿಗೆ ಸೇರಿದ ಸಂಗೂರಿನ ಕರಿಯಪ್ಪ ಎರೇಸೀಮೆ ಈ ಸಮಯದಲ್ಲಿ ಪತ್ನಿ ಸಮೇತ ಆಶ್ರಮದಲ್ಲಿದ್ದರು. ಮುಂದೆ ಇದೇ ಕರಿಯಪ್ಪ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಸಾಹಸಮಯ ವಿಧ್ವಂಸಕ ಕೃತ್ಯಗಳನ್ನೆಸಗಿ, ಬಾಂಬು ಸಿಡಿದು ಹಸ್ತ ಕಳೆದುಕೊಂಡ. ಕರಿಯಪ್ಪನು ಮಹಾತ್ಮರ ಆಜ್ಞೆಯಂತೆ ಮೀರಾಳಿಗೆ ಎನಿಮಾ ಕೊಡುತ್ತಿದ್ದ. ಬಿಳಿಯ ಹೆಂಗಸಿಗೆ ತಾನು ಎನಿಮಾ ಕೊಡುವುದೇ ಎಂದು ಸಂಕೋಚಪಟ್ಟಾಗ, ಅವಳನ್ನು ಪುರುಷನೆಂದು ಭಾವಿಸಿ ಎನಿಮಾ ಕೊಡು ಎಂದರು ಬಾಪೂಜಿ. ಎನಿಮಾ ಕೊಡುತ್ತಿದ್ದಾಗ ತನ್ನ ಮನಸ್ಸು ಸ್ವಲ್ಪವೂ ವಿಕಾರಗೊಳ್ಳುತ್ತಿರಲಿಲ್ಲ, ಚಂಚಲವಾಗುತ್ತಿರಲಿಲ್ಲ ಎಂದಿರುತ್ತಾನೆ ಕರಿಯಪ್ಪ. ಕಾಯಿಲೆ ಗುಣಮುಖವಾಯಿತು. ಮೀರಾ ತುಂಬಾ ನಿಶ್ಯಕ್ತಳಾದಳು. ಆದರೆ ಪ್ರಜ್ಞಾಹೀನಳಾಗಲಿಲ್ಲ. ನಾನವತಿ ಪ್ರಜ್ಞೆ ಕಳೆದುಕೊಳ್ಳುತ್ತಿದ್ದಳು. ಅವರು ಆಸ್ಪತ್ರೆಗೆ ಹೋಗಲು ಸಿದ್ಧರಾಗಿದ್ದರೂ ಸಿನ್ಹನಿಗೆ ತಿಳಿಸಿದಂತೆಯೇ ನಾನಾವತಿಗೂ ತಿಳಿಸಿದರು. ಬಾಪೂಜಿ ನಡೆಸಿದ ಚಿಕಿತ್ಸೆಯಿಂದ ಸಿನ್ಹ ಗುಣಹೊಂದಿದ.

ಕೆಲವು ದಿನಗಳ ನಂತರ ಚಿಮನಲಾಲ್ ಟೈಫಾಯಿಡ್ ಜ್ವರಪೀಡಿತನಾಗಿ ಹಾಸಿಗೆ ಹಿಡಿದ. ಜ್ವರ ಉಲ್ಬಣಿಸಿತು. ಉಳಿಯುವ ಸಂದೇಹ ತಲೆ ಹಾಕಿತು. ಅವನು ಪ್ರಜ್ಞಾಹೀನನಾಗಿ ಕನವರಿಸಿಕೊಳ್ಳುತ್ತಿದ್ದ. ಅವನ ಹೆಂಡತಿ ಸಕ್ರಿಬಾಯಿ ಆಹಮದಾಬಾದಿನಲ್ಲಿದ್ದಳು. ಅವಳನ್ನು ಬರಮಾಡಿಕೊಳ್ಳುವಂತೆ ಬಲವಂತಸಿನ್ಹ ಸಲಹೆ ಮಾಡಿದ. ಚಿಮನಲಾಲ್ ಬಯಸಿದರೆ ಹೇಳಿಕಳುಹಿಸೋಣ ಎಂದರು ಬಾಪೂಜಿ. ಆಕೆಯನ್ನು ಬರಮಾಡಿಕೊಳ್ಳಲಿಲ್ಲ. ಕಾಯಿಲೆಯಾದವರಿಗೆ ಬಾಪೂಜಿ ತಾನೇ ಹೆಂಡತಿ, ತಾನೇ ತಾಯಿ, ತಾನೇ ದಾದಿ. ಸಾರ್ವಜನಿಕ ಸೇವಾ ಕೆಲಸದ ಒತ್ತಡ, ಮಹತ್ವ ಎಷ್ಟೇ ಇರಲಿ ಆಶ್ರಮವಾಸಿಗಳನ್ನು ನೋಡಿಕೊಳ್ಳುವುದು ತನ್ನ ಹೊಣೆ ಎನ್ನುತ್ತಿದ್ದರು ಗಾಂಧೀಜಿ.

ಚಿಮನಲಾಲ ತುಂಬ ನಿಶ್ಯಕ್ತನಾದ. ಸಿನ್ಹ ಇನ್ನೂ ಸುಧಾರಿಸಿಕೊಳ್ಳುತ್ತಿದ್ದ. ಚಿಮನಲಾಲ ಯಾವ ಘಳಿಗೆಯಲ್ಲಾದರೂ ಪ್ರಾಣ ಕಳೆದುಕೊಳ್ಳಬಹುದು. ಆದ್ದರಿಂದ ಅವನ ಸಮೀಪದಲ್ಲಿಯೇ ಮಲಗಿಕೋ ಜಾಗೃತನಾಗಿರು. ಅಪಾಯ ಸಂಭವಿಸು ವಂತಿದ್ದರೆ ನನ್ನನ್ನು ಎಚ್ಚರಿಸಿ ಎಂದರು. ಆ ಸ್ಥಿತಿಗೆ ಬಂದಿದ್ದ ಚಿಮನಲಾಲ, ಆದರೂ ಬಾಪೂಜಿ ನಡೆಸಿದ ಪ್ರಕೃತಿ ಚಿಕಿತ್ಸೆಯಿಂದ ಬದುಕಿದ.

ಬಲವಂತಸಿನ್ಹನಿಗೆ ಕಾಲಿನ ಮೇಲೆ ಬೊಬ್ಬೆಗಳು ಕಾಣಿಸಿಕೊಂಡವು. ಆಗ ಸಿನ್ಹ ಸೇಗಾಂನಲ್ಲಿ ಇದ್ದ. ಆಶ್ರಮದಲ್ಲಿ ಇರಲಿಲ್ಲ. ದಿನವೂ ವರ್ಧಾ ಸಿವಿಲ್ ಆಸ್ಪತ್ರೆಗೆ ಹೋಗಿ ಔಷಧಿ ಹಾಕಿಸಿಕೊಂಡು ಬರುತ್ತಿದ್ದ. ತಾನು ಆಗಾಗ ಕಾಯಿಲೆ ಬೀಳುತ್ತ

ಬಾಪೂ ಮತ್ತು ಆಶ್ರಮವಾಸಿಗಳಿಗೆ ತೊಂದರೆ ಕೊಡುತ್ತಿರುವುದರಿಂದ ತನ್ನನ್ನು ಆಶ್ರಮದಿಂದ ಕಳುಹಿಸಿಬಿಡುವಂತೆ ಸಿನ್ಹ ಬೇಡಿದ. ಗಾಂಧೀಜಿ ಒಪ್ಪಲಿಲ್ಲ. ವಕೀಲರೂ, ವೈದ್ಯರು, ಡಾಕ್ಟರೂ ಕೆಲವೊಮ್ಮೆ ತಪ್ಪುಮಾಡುವುದುಂಟು. ನಿನ್ನ ಡಾಕ್ಟರಲ್ಲಿ ವಿಶ್ವಾಸವಿಡು. ಗುಣವಾಗುತ್ತೆ. ಎಲ್ಲಕ್ಕಿಂತ ಉತ್ತಮವಾದುದು ಪ್ರಕೃತಿ ಚಿಕಿತ್ಸೆ. ಪೂರ್ಣ ವಿಶ್ವಾಸವಿದ್ದರೆ ಮಾತ್ರ ಇದನ್ನು ಅನುಸರಿಸು. ಹೀಗೆಂದು ಪತ್ರ ಬರೆದರು. ಪ್ರಕೃತಿ ಚಿಕಿತ್ಸೆಯಲ್ಲಿ ಅನುಭವ ಪಡೆದಿರುವವರ ಸಂಖ್ಯೆಯೂ ಅತಿವಿರಳ.

ಬಲವಂತಸಿನ್ಹ ಸೇಗಾಂನಲ್ಲಿ ಇದ್ದಾಗ ಅವರ ಗೆಳೆಯ ಅಡುಗೆ ಕೆಲಸ ನೋಡಿ ಕೊಳ್ಳುತ್ತಿದ್ದ. ಸಿನ್ಹನ ಆರೋಗ್ಯ ವಿಚಾರಿಸಲು ಒಂದು ದಿನ ಅವನ ವಾಸಸ್ಥಳಕ್ಕೇ ಬಾಪೂಜಿ ನೇರವಾಗಿ ಬಂದರು. ಸಿನ್ಹನ ಗೆಳೆಯನನ್ನು ನೋಡಿ ಅಡುಗೆ ನೀನು ಮಾಡಿಕೊಡಬೇಡ. ಅವನೇ ಮಾಡಿಕೊಳ್ಳಲಿ ಅಥವಾ ಆಶ್ರಮದಿಂದ ತರಿಸಿಕೊಳ್ಳಲಿ. ಸೋಮಾರಿ ಚಂಚಲೆ ಅವನಿಗಾಗಿ ಅಡುಗೆ ಮಾಡಿ ಇಡುವಳೇ ಎಂದು ಹೇಳಿ ಹೊರಟು ಹೋದರು.

ಸಿನ್ಹನ ಗೆಳೆಯ ಈ ವಿಷಯವನ್ನು ಅವನಿಗೆ ತಿಳಿಸಿದ. ನಾನು ಸೋಮಾರಿ, ಆದ್ದರಿಂದ ಗೆಳೆಯನಿಂದ ಅಡುಗೆ ಮಾಡಿಸಿಕೊಳ್ಳುತ್ತಿರುವೆ ಎಂದು ಬಾಪು ತಿಳಿದಿದ್ದಾರೆ. ಈ ವಿಷಯಗಳಲ್ಲಿ ಬಾಪೂಜಿ ಏಕೆ ಪ್ರವೇಶಿಸಬೇಕು? ಹೀಗೆ ಕೋಪಗೊಂಡು. ಅದೇ ಸಿಟ್ಟಿನಲ್ಲಿ ಕೋಪಾವಿಶಿಷ್ಟವಾದ ಪತ್ರ ಬಾಪೂಗೆ ಬರೆದುಕಳುಹಿಸಿದ.

"ನಿನ್ನ ಪತ್ರ ನೋಡಿದೆ. ನಗಬೇಕೋ ಅಳಬೇಕೋ ನನಗೆ ಅರಿವಾಗುತ್ತಿಲ್ಲ. ಒಬ್ಬ ಸೋಮಾರಿ ಹುಡುಗನ ಮಾತು ಕೇಳಿಕೊಂಡು ಕಿಡಿಕಿಡಿಯಾಗಿ ಈ ಕಾಗದ ಬರೆದಿರುವುದು ಸ್ವಯಂವೇದ್ಯ. ಅಳಬೇಕಾದ್ದೇ. ಆದರೆ ನಾನು ಕಣ್ಣೀರು ಹಾಕ ಲಾರೆ, ಅಳಲಾರೆ. ಆದ್ದರಿಂದ ನಿನ್ನ ದಡ್ಡತನಕ್ಕೆ ನಗಲೇಬೇಕು. ಆಶ್ರಮ ನೀನು ಬಿಟ್ಟುಹೋಗಲು ಅಡ್ಡಿಇಲ್ಲ. ಆದರೆ ನಾನು ನಿನ್ನ ಗೆಳೆಯನಿಗೆ ತಿಳಿಸಿದ ವಿಷಯ ಏನೆಂದು ತಿಳಿಯಲು ಇಲ್ಲಿಗೇ ಬಾ" ಎಂದು ಬರೆದರು.

ಹೀಗೆಯೇ ಇನ್ನೂ ಒಂದೆರಡು ಕಾಗದಗಳನ್ನು ಸಿನ್ಹನಿಗೆ ಬರೆದರು. ಕೋಪವೇ ಈ ಅನರ್ಥಕ್ಕೆ ಕಾರಣ. ಕೋಪ ಕೆಡಿಸುವುದು ಇತರರನ್ನಲ್ಲ. ಕೋಪಗೊಂಡವ ನನ್ನೇ ಬಲವಂತಸಿನ್ಹನಿಗೆ ಈ ವಾಕ್ಯಗಳ ಸತ್ಯಾಂಶ ಮನಸ್ಸಿಗೆ ನಾಟಿತು. ತಪ್ಪು ಗ್ರಹಿಸಿದ. ವ್ರಣ ಗುಣಮಾಡಿಕೊಂಡು ಆಶ್ರಮಕ್ಕೆ ಮರಳಿದ. ಕೋಪದಿಂದ ಮುಕ್ತನಾಗಲು ಒಂದು ತಿಂಗಳ ಮೌನ ಆಚರಿಸು ಎಂದರು ಸಿನ್ಹನಿಗೆ. ಎರಡು ತಿಂಗಳು ಆಚರಿಸಿದ. ಇದರಿಂದ ಒಳ್ಳೆಯ ಪರಿಣಾಮವಾಯಿತು.

ಮಣ್ಣಿನ ಚಿಕಿತ್ಸಾ ಪ್ರಯೋಗ ಮಾನವನಿಗೆ ಮಾತ್ರ ಗಾಂಧೀಜಿ ಸೀಮಿತಗೊಳಿಸ ಲಿಲ್ಲ. ಆಶ್ರಮದ ಒಂದು ಕರುವಿಗೆ ಹೇನುಗಳು ಅಂಟಿಕೊಂಡವು. ಹೊಗೆಸೊಪ್ಪನ್ನು ಬೂದಿಯಲ್ಲಿ ಬೆರಸಿ, ಸೀಮೆಎಣ್ಣೆಯಲ್ಲಿ ಕದಡಿ ಕರುವಿನ ಮೈಗೆ ಸಿನ್ಹ ಲೇಪಿಸಿದ. ಸಿನ್ಹ ಮಲಗಿ ನಿದ್ರಿಸಿದ. ಒಂದು ಗಂಟೆಯ ನಂತರ ಎದ್ದು ನೋಡಿದರೆ ಕರು ಕೆಳಗೆ ಬಿದ್ದು ಮರಣೋನ್ಮುಖವಾಗಿ ಚಡಪಡಿಸುತ್ತಿತ್ತು. ಬಾಪೂಜಿ ಬಳಿಗೆ ಓಡಿ ತನ್ನ ಅಜಾಗರೂಕತೆಯಿಂದ ಕರು ಸಾಯಲಿದೆ ಎಂದು ತಿಳಿಸಿದ. ಬಾಪೂಜಿ ಎದ್ದು ಬಂದು ಆಕಳನ್ನು ನೋಡಿದರು. ಕರುವಿನ ಮೈಗೆ ಹಸಿ ಮಣ್ಣು ಬಳಿ. ಅದೃಷ್ಟವಿದ್ದರೆ ಜೀವ ಉಳಿಯುತ್ತೆ ಎಂದರು. ನಾಲ್ಕೈದು ಸಾರಿ ಮಣ್ಣು ಬಳಿದು ಬಳಿದು ತೊಳೆದ. ಇದರಿಂದ ದೇಹಕ್ಕೆ ಅಂಟಿಕೊಂಡಿದ್ದ ಹೊಗೆಸೊಪ್ಪು, ಸೀಮೆಎಣ್ಣೆ ಎಲ್ಲವೂ ಹೊರ ಬಿದ್ದವು. ಕರು ಉಳಿದುಕೊಂಡಿತು.

ಆಶ್ರಮವಾಸಿಗಳ ಚಿಕಿತ್ಸೆ ನಡೆಸುತ್ತಿದ್ದ ಬಾಪೂಜಿ ತಾವೇ ಸಾಮಾನ್ಯ ಮಲೇರಿಯ ಜ್ವರಪೀಡಿತರಾದರು. ಜಮುನಾಲಾಲರ ಪ್ರೇಮದ ಒತ್ತಾಯಕ್ಕೆ ಮಣಿದು ವರ್ಧ ಸಿವಿಲ್ ಆಸ್ಪತ್ರೆ ಸೇರಿದರು. ಆಸ್ಪತ್ರೆಯಲ್ಲಿದ್ದಾಗ ವಿಚಿತ್ರ ಸಂಗತಿ ನಡೆಯಿತು. ಆಧುನಿಕ ವಿದ್ಯಾವಂತನೊಬ್ಬ ಪೆಟ್ಟಿಗೆ ತುಂಬಾ ಹಾವುಗಳನ್ನು ಹಾಕಿಕೊಂಡು ಬಾಪು ಇದ್ದಲ್ಲಿಗೆ ಬಂದ. ದಿಂಬಿಗೆ ಒರಗಿಕೊಂಡು ಬಾಪು ಕುಳಿತ್ತಿದ್ದರು. ಕೆಲವು ಹಾವಿನ ಮರಿಗಳನ್ನು ಅವರ ಹಾಸಿಗೆ ಮೇಲೆಯೇ ಬಿಟ್ಟ. ಬಣ್ಣ ಬಣ್ಣದ ಒಂದು ವಿಷಭರಿತ ಹಾವು, ಎದ್ದು ಎದ್ದು ಬಾಪು ಮುಖ ನೋಡುತ್ತಿತ್ತು. ತರುಣ ತನ್ನ ಕೈ ಅದರ ತಲೆಯ ಮೇಲೆ ಆಡಿಸುತ್ತಲೇ ಅದು ಸುಮ್ಮನಾಯಿತು. ಎಲ್ಲ ಹಾವುಗಳನ್ನೂ ಪೆಟ್ಟಗೆಗೆ ಸೇರಿಸಿದ. ಇನ್ನೊಂದು ಪೆಟ್ಟಗೆ ತೆರೆದು ಎರಡು ಸರ್ಪಗಳನ್ನು ನೆಲದ ಮೇಲೆ ಬಿಟ್ಟ. ಒಂದು ಕೋಪದಿಂದ ಹೆಡೆಬಿಚ್ಚಿ ಅತ್ತಿತ್ತ ಓಡಾಡತೊಡಗಿತು. ಎಲ್ಲರನ್ನೂ ಹಿಂದಕ್ಕೆ ಸರಿಯುವಂತೆ ಎಚ್ಚರಿಸಿದ. ನೋಟ ನೋಡುತ್ತಿದ್ದ ಮೀರಾ ಮತ್ತು ಇತರರು ಭಯದಿಂದ ಹಿಂದೆ ಸರಿದರು. ಕಡೆಗೆ ಉಪಾಯದಿಂದ ಎರಡು ಸರ್ಪಗಳನ್ನೂ ಪೆಟ್ಟಗೆಗೆ ಸೇರಿಸಿದ. ಅನಂತರ ತಿಳಿಸಿದ. "ಈ ಸಣ್ಣ ಸರ್ಪದ ಸ್ವಭಾವ ತುಂಬ ಕೆಟ್ಟದ್ದು. ಕೆಲವು ದಿನಗಳ ಹಿಂದೆ ತನ್ನ ತಾಯಿಯನ್ನೇ ತಿಂದು ಹಾಕಿತ್ತು." ಸದ್ಯ ಬಾಪು ಜೀವ ಉಳಿಯಿತು ಎಂದು ಎಲ್ಲರೂ ತಲ್ಲಣಿಸಿದರು.

ಬಾಪು ಕೆಲವು ದಿನಗಳಲ್ಲಿ ಗುಣವಾದರು. ಆದರೆ 1927ರಲ್ಲಿ ಕಾಣಿಸಿಕೊಂಡ ರಕ್ತದ ಒತ್ತಡ ಮತ್ತೆ ಮರುಕಳಿಸಿತು. ಪೂರ್ಣ ವಿಶ್ರಾಂತಿ ತೆಗೆದುಕೊಳ್ಳುವಂತೆ ವೈದ್ಯರು ತಿಳಿಸಿದರು. ಸೇವಾಗ್ರಾಮದಿಂದ ನಾಲ್ಕು ಮೈಲಿಗಳ ಆಚೆಯ ವೆರೋಡ ಗ್ರಾಮದಲ್ಲಿ ಮೀರಾ ಒಬ್ಬಳೇ ಇದ್ದಳು. ಅಲ್ಲಿಗೆ ಬಾಪು ಹೋಗಿ ಒಂದು ವಾರ ಉಳಿದು ವಿಶ್ರಾಂತಿ ಪಡೆದು ಗುಣಮುಖರಾದರು. ವೆರೋಡದಲ್ಲಿ ಮೀರಾ ಟೈಫಾ

ಯಿಡ್ ಜ್ವರಪೀಡಿತಳಾದಾಗ, ಅವಳನ್ನು ಎತ್ತಿನ ಗಾಡಿಯಲ್ಲಿ ಮಲಗಿಸಿ, ಗಾಡಿಯ ಹಿಂದೆ ತಾವು ನಡೆಯುತ್ತ ಅವಳನ್ನು ಸೇವಾಗ್ರಾಮಕ್ಕೆ ಕರತಂದರು, ಗುಣ ಪಡಿಸಿದರು.

1943 ಗಾಂಧೀಜಿ ಅಗಖಾನರ ಅರಮನೆಯಲ್ಲಿ 21 ದಿನಗಳ ಪ್ರಾಯೋಪವೇಶದಲ್ಲಿ ತೊಡಗಿದ್ದಾಗ, ಕಿವಿಯಲ್ಲಿ ಸಣ್ಣ ಗುಳ್ಳೆ ಕಾಣಿಸಿಕೊಂಡು ತುಂಬ ನೋವು ಕೊಡತೊಡಗಿತು. ಸರ್ಕಾರದ ವೈದ್ಯರು ಬಂದು ಪರೀಕ್ಷಿಸಿದರು. "ಶಸ್ತ್ರಚಿಕಿತ್ಸೆ ಮಾಡಬೇಕಾದೀತು. ಬಂಧನದಿಂದ ಬಿಡುಗಡೆ ಮಾಡಬೇಕಾಗಬಹುದು" ಎಂದರು. ಕಿವಿ, ಗಂಟಲು, ಮೂಗು ವ್ಯಾಧಿಗಳ ತಜ್ಞ ವೈದ್ಯನನ್ನು ಸರ್ಕಾರ ಕಳುಹಿಸಿತು. ಗಾಂಧೀಜಿಗೆ ಚಿಕಿತ್ಸೆ ನೀಡಲು. ಎರಡು ದಿನ ಚಿಕಿತ್ಸೆ ನಡೆಸಿದರು. ಗುಣ ಕಾಣಲಿಲ್ಲ. ಅವರು ಚಿಂತಾಕ್ರಾಂತರಾದರು. ತಮ್ಮ ಚಿಕಿತ್ಸೆ ನಡೆಸಿಕೊಳ್ಳಲು ವೈದ್ಯರ ಅನುಮತಿ ಗಾಂಧೀಜಿ ಕೋರಿದರು. ವೈದ್ಯರ ಜವಾಬ್ದಾರಿ ಬಹಳವಾಗಿತ್ತು. ಮಹಾತ್ಮ ಬಂಧನದಲ್ಲಿರುವ ಮಹಾಪುರುಷ. ಹೆಚ್ಚು ಕಡಮೆ ಆದರೆ ವೈದ್ಯನ ತಲೆಗೇ ಬಂದೀತು. ಡಾಕ್ಟರು ಅರಿಮನಸ್ಸಿನಿಂದ ಆಗಲಿ ಎಂದರು. ಸುಶೀಲನಯ್ಯಾರ್ ಮತ್ತು ಡಾಕ್ಟರ್ ಗಿಲ್ಡರ್ ಅವರನ್ನು ಬರಮಾಡಿಕೊಂಡು ಚಿಕಿತ್ಸೆಯ ವಿಧಾನ ಗಾಂಧೀಜಿ ಅವರಿಗೆ ವಿವರಿಸಿದರು. ಒಂದೇ ದಿನದಲ್ಲಿ ಗುಳ್ಳೆ ಮಾಯವಾಯಿತು. ಮಾರನೆಯ ದಿನ ಕಿವಿ ವ್ಯಾಧಿಯ ಪಾಶ್ಚಾತ್ಯ ಪಂಡಿತ 'ಟಾರ್ಚ್' ದೀಪದ ಬೆಳಕು ಕಿವಿಯೊಳಕ್ಕೆ ಬಿಟ್ಟು ನೋಡಿದ. ಗುಳ್ಳೆ ಅದೃಶ್ಯವಾಗಿತ್ತು. ಆಶ್ಚರ್ಯಭರಿತನಾದ ಡಾಕ್ಟರ್ ಯಾವ ಅಪೂರ್ವ ಔಷಧ ವ್ಯಾಧಿಯನ್ನು ಗುಣಪಡಿಸಿತು, ದಯಮಾಡಿ ತಿಳಿಸಿ ಎಂದು ವಿನಂತಿಸಿಕೊಂಡ. ಆಧುನಿಕ ವಿಧಾನಗಳನ್ನು ನಾವು ಅರಿಯಬೇಕು. ಗಾಂಧೀಜಿ ಗಹಗಹಿಸಿ ನಗುತ್ತಾ ಹೇಳಿದರು. "ನನ್ನ ಚಿಕಿತ್ಸೆ ನಿಮಗೆ ಚೋದ್ಯವಾಗಿ ಕಂಡೀತು. ಬಲು ಸರಳ ಚಿಕಿತ್ಸೆ. ನಾನೂ ಮರೆತಿದ್ದೆ. ಬಾ ಮತ್ತು ದುರ್ಗ ಈ ವಿಧಾನ ಕುರಿತು ಮಾತನಾಡಿಕೊಳ್ಳುತ್ತಿದ್ದರು. ಪ್ರಯೋಗ ಮಾಡಿ ನೋಡೋಣ ಎಂದು ನಿಶ್ಚಯಿಸಿದೆ. ಎಣ್ಣೆಯಲ್ಲಿ ಒಂದು ತೊಳೆ ಬೆಳ್ಳುಳ್ಳಿ ಹಾಕಿ ಕಾಯಿಸುವುದು. ಕಿವಿ ತಡೆದುಕೊಳ್ಳುವಷ್ಟು ಕಾವು ಇದ್ದಾಗ ಕಿವಿಯೊಳಕ್ಕೆ ಬಿಟ್ಟು ಹತ್ತಿ ಇಡುವುದು. ಇಟ್ಟಿಗೆ ಬೆಚ್ಚಗೆ ಕಾಯಿಸಿ ಕಿವಿಯ ಸಮೀಪ ಇರಿಸುವುದು. ಕಿವಿಯ ಒಳಗೂ ಹೊರಗೂ ದೀರ್ಘಕಾಲ ಕಾವು ಕೊಟ್ಟಂತೆ ಆಗುತ್ತದೆ. ಗುಳ್ಳೆ ಒಡೆಯುತ್ತದೆ. ಆದರೆ ವೆಚ್ಚವೆಷ್ಟು ಎರಡೇ ಕಾಸು". ಡಾಕ್ಟರ್ ಆಶ್ಚರ್ಯದಿಂದ ತಲೆದೂಗಿದ. ತಾನು ಸೋತೆ ಎಂದ. ತಪ್ಪು ಒಪ್ಪಿದ್ದೇ ತಡ "ಹಾಗಾದರೆ ನಿನ್ನ ವೈದ್ಯ ಪದವಿಗಳನ್ನು ತೊರೆದು, ಪಕೃತಿ ಚಿಕಿತ್ಸೆಯ ವಿಧಾನ ಅವಲಂಬಿಸು" ಎಂದರು. ಅಲ್ಲಿದ್ದ ಇತರ ವೈದ್ಯ ಪ್ರವೀಣರೂ ಈ ಹಾಸ್ಯದಲ್ಲಿ ಪಾಲ್ಗೊಂಡರು.

ಮದ್ಯಪಾನದಷ್ಟೇ ಕೆಡಕು ಮಾಡುವುದು ಧೂಮಪಾನ. ಒಂದು ದೆವ್ವ ಮತ್ತೊಂದು ಪಿಶಾಚಿ. ಮದ್ಯಪಾನದಿಂದ ಇಡೀ ಸಂಸಾರ ಮತ್ತು ವಿಶೇಷವಾಗಿ

ಗೃಹಣಿಯರು ಕಷ್ಟ ಸಂಕಟ ಅನುಭವಿಸಬೇಕಾಗುತ್ತದೆ. ಧೂಮಪಾನ ಮಾಡುವವನು ತನಗೆ ಅರಿವಿಲ್ಲದಂತೆಯೇ ಕ್ರಮಕ್ರಮವಾಗಿ ತನ್ನ ಆರೋಗ್ಯ ಕೆಡಿಸಿಕೊಳ್ಳುತ್ತಾನೆ. ಇಂದ್ರಿಯದ ಮೇಲಿನ ಹತೋಟಿ ತಪ್ಪಿಹೋಗುತ್ತದೆ. ಕೆಲವರಂತೂ ಒಂದರ ಹಿಂದೆ ಒಂದಾಗಿ ಸರಪಳಿಯಂತೆ ಸದಾ ಧೂಮಪಾನ ಮಾಡುತ್ತಲೇ ಇರಬೇಕು. ಬಾಯಲ್ಲಿ ಹೊಗೆಬತ್ತಿ ಇಲ್ಲದೆ ಕ್ಷಣ ಕಾಲವೂ ಇವರು ಇರಲಾರರು. ಕಾಫಿ, ಟೀ, ಸಿಗರೇಟು ಇಲ್ಲದೆ ನಿದ್ದೆ ಬರುತ್ತದೆ ಎಂದ ಒಬ್ಬ ಗಾಂಧಿಯವರಲ್ಲಿ. ಹಾಗಾದರೆ ನೀನು ಕೆಲಸಮಾಡಬೇಕಾದ್ದಿಲ್ಲ, ನಿದ್ರಿಸುತ್ತಿರು ಎಂದರು ಗಾಂಧೀಜಿ.

ಲುಟುವನ್ ದಕ್ಷಿಣ ಆಫ್ರಿಕಾಗೆ ಬದುಕಿಗಾಗಿ ಬಂದ ಕೂಲಿ ಆಳು. ವಯಸ್ಸು ಎಪ್ಪತ್ತು. ಗೂರಲು ಅಥವಾ ಉಬ್ಬಸ ವ್ಯಾಧಿಯಿಂದ ನರಳುತ್ತಿದ್ದ. ಎಷ್ಟೋ ಡಾಕ್ಟರುಗಳಿಂದ ಚಿಕಿತ್ಸೆ ಮಾಡಿಕೊಂಡಿದ್ದ. ಆದರೆ ಪ್ರಯೋಜನವಾಗಿರಲಿಲ್ಲ. ಗಾಂಧಿಯವರ ಚಿಕಿತ್ಸೆಯಿಂದ ಪ್ರಯೋಜನವಾದೀತೆ ಒಂದು ಕೈ ನೋಡಿಬಿಡೋಣ ಎಂದು ಅವರಲ್ಲಿ ಬಂದ. ಆಶ್ರಮದಲ್ಲಿ ಉಳಿದು ಕಟ್ಟುನಿಟ್ಟಾದ ಪಥ್ಯ ಆಚರಿಸಬೇಕು, ತಾನು ಹೇಳಿದಂತೆ ಚಾಚೂ ತಪ್ಪದೆ ನಡೆದುಕೊಳ್ಳಬೇಕು. ಹೀಗೆ ಷರತ್ತು ವಿಧಿಸಿದರು. ಬೀಡಿ, ಸಿಗರೇಟು ಹೊಗೆಸೊಪ್ಪಿನ ಸೇವನೆ ಬಿಡಬೇಕೆಂದರು. ಇದು ತುಂಬ ಕೆಟ್ಟ ಚಟ. ಕಲಿಯುವುದು ಸುಲಭ ಬಿಡುವುದು ಕಷ್ಟ. ಎಟುವನ್ ಎಲ್ಲ ನಿಯಮಗಳನ್ನೂ ಪಾಲಿಸುವುದಾಗಿ ಒಪ್ಪಿಕೊಂಡು ಆಶ್ರಮದಲ್ಲಿಯೇ ಉಳಿದ. ಒಂದು ದಿನದ ಉಪವಾಸ ಮಾಡಿಸಿ, ಚಿಕಿತ್ಸೆ ಪ್ರಾರಂಭಿಸಿದರು. ಮಾರನೆಯ ದಿನ ಸ್ವಲ್ಪ ಅನ್ನ, ಹಣ್ಣು, ಜೇನುತುಪ್ಪ ಇದೇ ಮುಖ್ಯ ಆಹಾರ. ಉಪ್ಪು ಕಾರ ವರ್ಜ್ಯ. ಚಿಕಿತ್ಸೆಯಿಂದ ಕೆಮ್ಮು ದಮ್ಮು ಕಡಮೆಯಾಯಿತು. ಆದರೂ ರಾತ್ರಿಯಾದರೆ ಕೆಮ್ಮು ಹೆಚ್ಚುತ್ತಿತ್ತು. ಧೂಮಪಾನದಿಂದ ಹೀಗಾಗುತ್ತಿರಬೇಕೆಂದು ಗಾಂಧೀಜಿ ಊಹಿಸಿ, ಬೀಡಿ ಸೇದುತ್ತಿರುವೆಯಾ ಎಂದು ಅವನನ್ನು ಕೇಳಿದರು. ಲುಟುವನ್ ಇಲ್ಲವೆಂದ. ಆದರೂ ಗಾಂಧಿಯವರ ಸಂದೇಹ ನಿವೃತ್ತಿಯಾಗಲಿಲ್ಲ. ಪರೀಕ್ಷಿಸಿ ನೋಡೋಣವೆಂದು ಹೊರ ಅಂಗಳದಲ್ಲಿ ಮಲಗಿದರು. ಒಳಗೆ ಲುಟುವನ್. ಗಾಂಧೀಜಿಗೆ ನಿದ್ದೆ ಹತ್ತಲಿಲ್ಲ. ನಿದ್ದೆ ಮಾಡುತ್ತಿರುವರೆಂದು ತಿಳಿದು ಲುಟುವನ್ ಬೀಡಿ ಹಚ್ಚಿದ. ಒಂದೆರಡು ದಮ್ಮು ಎಳೆದ. ಜಾಗರೂಕ ಗಾಂಧೀಜಿ ಕೋಣೆ ಒಳಹೊಕ್ಕು ಟಾರ್ಚ್ ಹಚ್ಚಿ ನೋಡಿದರು. ಬೀಡಿ ಸೇದುತ್ತಿದ್ದ ದೃಶ್ಯ ಕಣ್ಣಿಗೆ ಕಾಣಿಸಿತು. ಸಿಕ್ಕಿಬಿದ್ದ ಲುಟುವನ್ ಅಳತೊಡಗಿದ. ತಪ್ಪಾಯಿತು ಕ್ಷಮಿಸಿ ಎಂದ. ಗಾಂಧೀಜಿ ಅವನ ಮೇಲೆ ಸಿಟ್ಟು ಮಾಡಲಿಲ್ಲ. ಕೆಟ್ಟ ಅಭ್ಯಾಸ ಬಿಡುವುದು ಕಷ್ಟ. ರೋಗ ಗುಣವಾಗಬೇಕಾದರೆ ಬಿಡಲೇಬೇಕು ಎಂದರು. ಲುಟುವನ್ ಬೀಡಿಯ ಅಭ್ಯಾಸ ಬಿಟ್ಟ. ಆರೋಗ್ಯ ಉತ್ತಮವಾಯಿತು.

ಜವಹರರೂ ಒಮ್ಮೊಮ್ಮೆ ಸಿಗರೇಟು ಸೇದುವರು. ಆದರೆ ಮಹಾತ್ಮರ ಎದುರಿನಲ್ಲಿ ಸಿಗರೇಟು ಸೇದರು. ಒಮ್ಮೆ ಗಾಂಧಿಯವರ ಆಶ್ರಮಕ್ಕೆ ಬಂದು ಮಾತು ಮುಗಿಸಿ ಕೋಣೆಯಿಂದ ಹೊರಬಂದರು. ಒಬ್ಬ ಪರಿಚಿತರು ಸಿಗರೇಟ್ ಕೊಡಲು ಡಬ್ಬಿ ತೆಗೆದರು. ಆಶ್ರಮದ ಆವರಣದಲ್ಲಿ ಸಿಗರೇಟು ಸೇದುವುದು ಇಲ್ಲಿನ ವಾತಾವರಣವನ್ನು ಅಪವಿತ್ರಗೊಳಿಸಿದಂತೆ. ನಾನು ಮಾಡಲಾರೆ. ಅವರ ಎದುರು ಸಿಗರೇಟು ಸೇದಲಾರೆ ಎಂದರು.

ಗಾಂಧೀಜಿ ನವಾಖಲಿಯಲ್ಲಿದ್ದಾಗ ಒಂದು ಸೇವಾ ಸಂಸ್ಥೆ ನೊಂದವರಿಗೆ ಕೊಡಲು ಕೆಲವು ಪದಾರ್ಥಗಳನ್ನು ಕಳುಹಿಸಿಕೊಟ್ಟರು. ಸಿಗರೇಟ್ 'ಪ್ಯಾಕ್' ಸಹ ಇತ್ತು. ನಾಳೆ ಜವಾಹರ್ ಬರಲಿದ್ದಾನೆ. ಇದು ಅವನಿಗೆ ಇರಲಿ ಎಂದು ಪ್ರತ್ಯೇಕವಾಗಿ ತೆಗೆದಿಟ್ಟರು. ಅಬ್ದುಲ್‌ಕಲಾಂ ಅಜಾದ್ ಈ ನಿಯಮಕ್ಕೆ ಹೊರಕಾದವರು. ಗಾಂಧಿಯವರಿದ್ದರೂ ಹೊಗೆಬತ್ತಿ ಸೇದುತ್ತಲೇ ಇರುವರು.

ಮಹದೇವಭಾಯಿಗೆ ಚಹಾ ಚಟ. ಆಂಧ್ರದಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಗಾಡಿ ನಿಲ್ದಾಣಕ್ಕೆ ಬಂದು ನಿಂತಿತು. ಬೆಳಗಾಗಿತ್ತು, ಮಹದೇವ ಇನ್ನೂ ಮಲಗಿದ್ದರು. ಗಾಂಧೀಜಿ ಉಪಹಾರ ಗೃಹಕ್ಕೆ ಹೋಗಿ ಚಹಾ ಮತ್ತು ಉಪಹಾರ ತಾವೇ ತಂದುಕೊಟ್ಟರು. ರಾಜಾಜಿ ಮತ್ತು ದಕ್ಷಿಣ ಭಾರತದ ಪ್ರಮುಖ ನಾಯಕರು ಆಶ್ರಮಕ್ಕೆ ಬಂದಾಗ ಕಾಫಿ ಮಾಡಿಸಿಕೊಡುವರು.

1932 ರಲ್ಲಿ ಸೇವಾ ಗ್ರಾಮದ ಹಳ್ಳಿಯಲ್ಲಿ ಕಾಲರ ಕಾಣಿಸಿಕೊಂಡಿತು. ಗಾಂಧೀಜಿ, ಡಾಕ್ಟರ್ ಸುಶೀಲನಯ್ಯಾರಳನ್ನು ಬರಮಾಡಿಕೊಂಡು ಗ್ರಾಮಕ್ಕೆ ಹೋಗಿ ರೋಗಿಗಳಿಗೆ ಚಿಕಿತ್ಸೆ ನೀಡುವಂತೆಯೂ ಅಂಟುಜಾಡ್ಯ ಉಲ್ಬಣಿಸಿ ಹರಡದಂತೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆಯೂ ಸೂಚಿಸಿದರು. ಎಲ್ಲರಿಗೂ ಕಾಲರ ನಿರೋಧಕಚುಚ್ಚುಮದ್ದು ಕೊಡಲು ಮತ್ತು ವ್ಯಾಧಿಗ್ರಸ್ತರಾದವರನ್ನು ಸೇವಾಗ್ರಾಮದ ಆಶ್ರಮಕ್ಕೆ ಕರೆದು ತಂದು ಚಿಕಿತ್ಸೆ ನೀಡಲು ಆಶ್ರಮದ ಹಿಂಬದಿಯ ಕೆಲವು ಕೊಠಡಿಗಳನ್ನು ಬಿಟ್ಟುಕೊಡುವಂತೆ ಗಾಂಧೀಯವರನ್ನು ಸುಶೀಲನಯ್ಯಾರ್ ಕೇಳಿದಳು. ಗಾಂಧೀಜಿ ಈ ಪ್ರಾರ್ಥನೆಗೆ ಕಿವಿಗೊಡಲಿಲ್ಲ. ಸಾಧ್ಯವಾಗದು. ಹಳ್ಳಿಯೇ ನಿನ್ನ ಆಸ್ಪತ್ರೆ. ಪ್ರತಿಯೊಂದು ಗುಡಿಸಲು ಒಂದು ರುಗ್ಣಾಲಯ, ವಾರ್ಡ್. ಈಗ ಹಳ್ಳಿಗೆ ಹೋಗಿ ಕೆಲಸದಲ್ಲಿ ತೊಡಗು ಎಂದರು. ಸುಶೀಲ ಚಕಿತಳಾದಳು. ದಿಗ್ಭ್ರಮೆಯಾಯಿತು. ತನ್ನೊಬ್ಬಳಿಂದಲೇ ಈ ಕಾರ್ಯ ಮಾಡಲು ಹೇಗೆ ಸಾಧ್ಯವಾದೀತೆಂದು ಪ್ರಶ್ನಿಸಿದಳು. ತನಗೆ ಕೆಲವು ಸ್ವಯಂಸೇವಕರ ನೆರವನ್ನಾದರೂ ಕೊಡಿಸುವಂತೆ ಪ್ರಾರ್ಥಿಸಿದಳು. ಸ್ವಲ್ಪ ಕಾಲ ಮನದಲ್ಲೇ ಚಿಂತಿಸಿ, ಸಂಜೆಯ ಪ್ರಾರ್ಥನಾ ಸಭೆಯಲ್ಲಿ ಸ್ವಯಂಸೇವಕರಿಗಾಗಿ ಕರೆ ಕೊಡುವುದಾಗಿ ತಿಳಿಸಿದರು. ಅಂತೆಯೇ ಪ್ರಾರ್ಥನಾ ಸಭೆ

ಯಲ್ಲಿ ಕಾಲರ ಪೀಡಿತ ಗ್ರಾಮದಲ್ಲಿ ಪ್ರಾಣದ ಹಂಗು ತೊರೆದು ಕೆಲಸ ಮಾಡಬಲ್ಲ ಸ್ವಯಂಸೇವಕರಿಗಾಗಿ ಕರೆ ಕೊಟ್ಟರು. ಆರೇಳು ಜನ ಕೈಎತ್ತಿ ಸಮ್ಮತಿ ಸೂಚಿಸಿದರು. ಸುಶೀಲ ಇವರಿಗೆ ಶುಶ್ರೂಷೆ ಮಾಡುವ ವಿಧಾನ ಒಂದೆರಡು ದಿನಗಳ ಶಿಕ್ಷಣದಿಂದ ಕಲಿಸಿಕೊಟ್ಟಳು. ಸ್ವಯಂಸೇವಕರೊಂದಿಗೆ, ಕೆಲವು ಅಗತ್ಯ ಔಷಧಗಳನ್ನು ತೆಗೆದುಕೊಂಡು ನಯ್ಯಾರ್ ಗ್ರಾಮಕ್ಕೆ ಹೋದಳು. ಅನೇಕ ಗುಡಿಸಲುಗಳಲ್ಲಿ ರೋಗ ಪೀಡಿತರಿದ್ದರು. ರೋಗಿ ಮಲಗಿದ್ದ ಮಂಚದ ಮೇಲಿನಿಂದ ಮಲ ನೀರಾಗಿ ಹನಿಯುತ್ತಿತ್ತು, ಕೆಳಗಿನ ಮಣ್ಣಿನ ನೆಲಕ್ಕೆ. ಒಂದು ಮನೆಯಲ್ಲಿ ಮಂಚದ ಕೆಳಗೆ ಇರಿಸಿದ್ದ ಬೀಸುಕಲ್ಲಿನ ಮೇಲೆ ಮಲ ಹನಿಯುತ್ತ ಹರಿದು ಬರುತ್ತಿತ್ತು. ಮಗು ಮಲದ ಬಳಿಗೆ ಸಾಗಿ ಸಮೀಪದ ಮಣ್ಣು ಕೆದರಿ ಬಾಯಿಗೆ ಇಟ್ಟುಕೊಳ್ಳುತ್ತಿತ್ತು. ಈ ದೃಶ್ಯ ನೋಡಿ ಸುಶೀಲಳ ಮೈ ನಿವಿರೇಳಿತು. ಕಂಪಿಸಿತು. ಏನಾದರೂ ಕ್ರಮ ತ್ವರಿತಗತಿಯಿಂದ ಕೂಡಲೇ ಕೈಗೊಳ್ಳಬೇಕಾಗಿತ್ತು. ಸುಶೀಲ ಆಶ್ರಮಕ್ಕೆ ಹಿಂತಿರುಗಿ ಬಂದಳು. ರೋಗ ಹರಡದಂತೆ ಅನುಸರಿಸಬೇಕಾದ ವಿಧಾನ, ಅನುಸರಿಸಬೇಕಾದ ಕ್ರಮ, ಎಡೆಗೊಡಬಾರದ ಪದ್ಧತಿ ಇವುಗಳನ್ನು ಸಂಕ್ಷೇಪವಾಗಿ ಹಿಂದಿಯಲ್ಲಿ ಬರೆದಳು. ಇದನ್ನು ಒಬ್ಬ ಸ್ವಯಂಸೇವಕ ಮರಾಠಿಗೆ ಅನುವಾದಿಸಿದ. ಸಂಜೆಯೊಳಗಾಗಿ ಪ್ರತಿಗಳು ಮುದ್ರಿತವಾದುವು. ಪ್ರತಿಗಳನ್ನು ಗ್ರಾಮದ ಪ್ರತಿಮನೆಗೂ ಹಂಚಲಾಯಿತು. ಕೆಲವು ಬಕೆಟ್ಟುಗಳನ್ನು ಶೇಖರಿಸಿಕೊಂಡು, ಅವುಗಳಲ್ಲಿ 'ಬ್ಲೀಚಿಂಗ್ ಪೌಡರ್' ವಸ್ತ್ರ ಮಡಿ ಮಾಡುವ ಸೋಡಪುಡಿ ಹಾಕಿಕೊಂಡು ಸ್ವಯಂಸೇವಕರೊಡನೆ ನಯ್ಯಾರ್ ಹಳ್ಳಿಗೆ ಹೋದಳು. ಒಂದೊಂದು ಚೌಕದಲ್ಲೂ ಬಕೆಟ್ ಹೊತ್ತ ಸ್ವಯಂಸೇವಕರನ್ನು ನಿಲ್ಲಿಸಿ, ರೋಗಿಯ ವಾಂತಿ ಮತ್ತು ಬೇಧಿಯ ಮೇಲೆ ಸೋಡಪುಡಿ ಸಿಂಪಡಿಸುವಂತೆ ತಿಳಿಸಿದಳು. ರೋಗಿಯ ಸಂಬಂಧಿಗಳು ಪೊರಕೆ ತೆಗೆದುಕೊಂಡು ವಮನ ಮತ್ತು ಮಲ ಗುಡಿಸಿ ತುಂಬಿಕೊಂಡು, ಗ್ರಾಮದ ಹೊರಗೆ, ಬಾವಿಯಿಂದ ಅತಿ ದೂರದಲ್ಲಿ ಗುಂಡಿ ತೋಡಿ, ವಾಂತಿ ಬೇಧಿಯನ್ನು ಅದರಲ್ಲಿ ಹಾಕಿ, ಗುಂಡಿಯನ್ನು ಮಣ್ಣಿನಿಂದ ಮುಚ್ಚುವಂತೆ ತಿಳಿಸಿದಳು. ವ್ಯಾಧಿ ಹರಡದಂತೆ ಬಹು ಬೇಗ ಹತೋಟಿಗೆ ತರಲಾಯಿತು. ಇಲ್ಲಿನ ಮರಣ ಪ್ರಮಾಣ ರೋಗ ಪೀಡಿತ ಇಡೀ ಜಿಲ್ಲೆಯಲ್ಲಿ ಅತಿ ಕಡಮೆಯಾಗಿತ್ತು.

ಕೆಲವು ವರ್ಷಗಳ ನಂತರ ವರ್ಧ ಜಿಲ್ಲೆಯಲ್ಲಿ ಕಾಲರ ಕಾಣಿಸಿಕೊಂಡಿತು. ಸೇವಾಗ್ರಾಮದ ಹಳ್ಳಿಯನ್ನೂ ಬಿಡಲಿಲ್ಲ. ಹೊರಗಿನಿಂದ ಬಂದ ಒಬ್ಬನಿಗೆ ರೋಗ ಪ್ರಾಪ್ತವಾಗಿರುವುದಾಗಿ ಸುಶೀಲ ನಯ್ಯಾರಳ ಚಿಕಿತ್ಸಾಲಯಕ್ಕೆ ಒಬ್ಬ ಓಡಿ ಬಂದು ಔಷಧಿ ಮತ್ತು ವ್ಯಾಧಿ ಹರಡದಂತೆ ಕೈಗೊಳ್ಳಬೇಕಾದ ಕ್ರಮ ಕುರಿತು ವಿಚಾರಿಸಿದ. ರೋಗಿಯನ್ನು ಗ್ರಾಮದ ಹೊರಗಿನ ಜೋಪಡಿಗೆ ಸಾಗಿಸಲಾಯಿತು. ಸೀಮೆಎಣ್ಣೆ ದೀಪದ ಬೆಳಕಿನಲ್ಲಿ ಪ್ರತಿಯೊಬ್ಬರಿಗೂ ರೋಗ ನಿರೋಧಕ ಚುಚ್ಚು ಮದ್ದು ಕೊಡ

ಲಾಯಿತು. ಗ್ರಾಮದಿಂದ ಯಾರೂ ಒಳಕ್ಕೆ ಬರಲಾಗದು, ಯಾರೂ ಹೊರಕ್ಕೆ ಹೋಗಲಾಗದೆಂಬ ಕಟ್ಟುಪಾಡು ಗ್ರಾಮಸ್ಥರೇ ನಿಯೋಜಿಸಿಕೊಂಡರು. ಹಾಗೂ ಹೋಗಲೇಬೇಕಾದರೆ ಹೊರಗಡೆ ಏನೂ ತಿನ್ನಲಾಗದು. ಗ್ರಾಮ ಪ್ರವೇಶಿಸುವಾಗ, ಹಳ್ಳಿಯ ಹೊರಗಡೆ ಕಾಲು ಮತ್ತು ಪಾದರಕ್ಷೆ ನೀರಿನಿಂದ ಸ್ವಚ್ಛ ಮಾಡಿಕೊಳ್ಳಬೇಕು. ಈ ಕಟ್ಟುಪಾಡಿನಂತೆ ಎಲ್ಲರೂ ನಡೆದುಕೊಂಡರು. ಇದರ ಪರಿಣಾಮವಾಗಿ ಸೇವಾ ಗ್ರಾಮಕ್ಕೆ ರೋಗ ವ್ಯಾಪಿಸಲಿಲ್ಲ. ಒಬ್ಬರೂ ಸಾಯಲಿಲ್ಲ. ಗ್ರಾಮವೇ ಆಸ್ಪತ್ರೆ, ಪ್ರತಿ ಗುಡಿಸಲೂ ಒಂದು ರುಗ್ಣಾಲಯ ಎಂದು ಪರಿಗಣಿಸುವಂತೆ ತಿಳಿಸಿದ ಗಾಂಧಿಯವರು ಕೊಟ್ಟ ತಿಳುವಳಿಕೆಯ ಪರಿಣಾಮದ ಪ್ರತಿಕ್ರಿಯೆಯೇ ರೋಗ ಹರಡದಂತೆ ತಡೆಗಟ್ಟಲು ಸಾಧ್ಯ ಮಾಡಿಕೊಟ್ಟತೆಂದು ಎರಡನೆಯ ಘಟನೆ ಖಚಿತ ಮಾಡಿ ಕೊಟ್ಟಿತು.

"ಯಾರು ಯೋಗ್ಯ ವೈದ್ಯ. ದೀರ್ಘಾಲೋಚನೆಯ ನಂತರ ಗಾಂಧೀಜಿ ಈ ಖಚಿತ ತೀರ್ಮಾನಕ್ಕೆ ಬಂದರು. ಯಾರು ಅತ್ಯಂತ ಕಡಮೆ ಪ್ರಮಾಣದಲ್ಲಿ, ಕಡಮೆ ಸಂಖ್ಯೆಯ ಔಷಧ ಕೊಡುತ್ತಾನೋ ಅವನೇ ನಿಜವಾದ ವೈದ್ಯ. ಪ್ರಕೃತಿ ಅತ್ಯಂತ ಮಧುರವಾದ ತೀವ್ರಗತಿಯಲ್ಲಿ ವ್ಯಾಧಿ ಹೋಗಲಾಡಿಸಿ ಆರೋಗ್ಯ ಪುನಸ್ಥಾಪಿಸುವ ವೈದ್ಯನೆಂಬ ಗುಟ್ಟನ್ನು ನಮ್ಮ ವೈದ್ಯರು ಗ್ರಹಿಸುವರೆಂದು ನನ್ನ ವಿಶ್ವಾಸ. ಔಷಧಿಗಳ ಜಾಹಿರಾತು ನನಗೆ ನೋವು ನೀಡುತ್ತವೆ. ಎಲ್ಲ ಔಷಧಿಗಳೂ ರೋಗಗಳಿಗೆ ರಾಮಬಾಣವೆಂದು ಹೇಳಿಕೊಳ್ಳುವ ವೈದ್ಯರು ಮಾನವ ಕುಲಕ್ಕೆ ಅತ್ಯಂತ ದೊಡ್ಡ ಅಪಕಾರ ಮಾಡುತ್ತಾರೆಂದು ನನ್ನ ಭಾವನೆ. ತಗ್ಗಿ ನಡೆಯುವ ನಮ್ರತೆ, ಸರಳತೆ ಮತ್ತು ನಂಬಿಕೆ ಇವು ವೈದ್ಯನಲ್ಲಿರಬೇಕಾದ ಮುಖ್ಯ ಗುಣಗಳು."

ನಮ್ಮೂರಿನಲ್ಲಿ ಹೆಚ್ಚು ಆಸ್ಪತ್ರೆಗಳಿವೆ ಎಂದು ಹೆಮ್ಮೆ ಪಡುವುದು ನಾಗರೀಕತೆಯ ಕುರುಹೆ? ರುಗ್ಣಾಲಯದ ರೋಗಿಗಳ ಸಂಖ್ಯೆ ಬೆಳೆಯುವುದು ಪ್ರಗತಿಯ ಲಕ್ಷಣ ಎಂದು ಗಾಂಧೀಜಿ ತಿಳಿದಿರಲಿಲ್ಲ.

"ರೋಗಿಯನ್ನು ಔಷಧದಿಂದ ಗುಣಪಡಿಸುವುದು ಒಂದು ವಿಧಾನ. ಕಾಯಿಲೆಯ ಚಿಹ್ನೆಗಳು, ಈ ವ್ಯಾಧಿ ರೋಗಿಗೆ ಬರಲು ಕಾರಣ, ರೋಗ ಬಾರದಂತೆ ಕೈಗೊಳ್ಳಬೇಕಾದ ನಿವಾರಣೋಪಾಯ, ಇವುಗಳನ್ನು ತಿಳಿದು ಹೇಳಬಲ್ಲವನು ಮತ್ತೊಂದು ಶ್ರೇಣಿಯ ವೈದ್ಯ. ಆರೋಗ್ಯ ಕಾಪಾಡಿಕೊಳ್ಳುವ ವಿಧಾನ, ಶುಚಿತ್ವ ಇವುಗಳನ್ನು ತಿಳಿಸುವವನು ನಿಜವಾದ ವೈದ್ಯ. ಗ್ರಾಮ ಸೇವಕರಲ್ಲಿ ಸ್ವಲ್ಪ ಔಷಧ ಸಾಮಗ್ರಿಗಳಿದ್ದರೆ ಸಾಕು. ಬಿಸಿನೀರು, ಸೂರ್ಯನ ಬೆಳಕು, ಶುದ್ಧ ಉಪ್ಪು ಮತ್ತು ಸೋಡ; ಆಗಾಗ ಹರಳೆಣ್ಣೆ ಮತ್ತು ಕ್ವೈನ ಬಳಸುವುದರಿಂದ ಅನೇಕ ಕಾಯಿಲೆಗಳನ್ನು ಗುಣಪಡಿಸಬಹುದು."

"ಔಷಧ ತಯಾರಿಕರ ಪ್ರತಿನಿಧಿಗಳು ಉಚಿತವಾಗಿ ಕೊಡುವ ಗುಳಿಗೆಗಳು, ಮಾತ್ರೆಗಳು, ಪುಡಿಗಳು, ದ್ರಾವಣಗಳು ಇವುಗಳನ್ನು ರೋಗದ ಲಕ್ಷಣ ಮತ್ತು ಕಾರಣ ಅರಿಯದೆ, ಸೇವಿಸುವುದರಿಂದ ರೋಗ ಗುಣವಾಗುತ್ತದೆ ಎಂದು ತಿಳಿಯುವುದು ಅತ್ಯಂತ ಸೋಮಾರಿ ಕ್ರಮ ಮತ್ತು ಹಲವು ವೇಳೆ ತೊಂದರೆ ಉಂಟು ಮಾಡತಕ್ಕವು. ಉಚಿತವಾಗಿ ದೊರೆಯುವ ಗುಳಿಗೆ ಅಥವಾ ಇತರ ಔಷಧಗಳಿಂದ ಕೆಲವು ಕಾಯಿಲೆಗಳನ್ನು ಸುಲಭವಾಗಿ ಗುಣಪಡಿಸಿಕೊಳ್ಳಬಹುದೆಂಬ ಕಲ್ಪನೆ ಮತ್ತೆ ಅದೇ ಕಾಯಿಲೆ ತರಿಸಿಕೊಳ್ಳಲು ಸಹಾಯಕವಾಗುತ್ತದೆ."

ಕ್ವೈನ ಅಥವಾ ಕ್ವಿನೈನ್ ಬಳಸಬೇಕೆಂದು ಹೇಳುತ್ತಿದ್ದ ಕಾಲ ಈಗ ಮಿಂಚಿ ಹೋಗಿದೆ. ಕ್ವಿನೈನ್ ಹೆಚ್ಚಾಗಿ ಬಳಸುವುದರಿಂದ ಶ್ರವಣೇಂದ್ರಿಯಕ್ಕೆ ಆಘಾತವಾಗುತ್ತದೆ. ಕಿವುಡೇ ಆಗಬಹುದು. ಮಲೇರಿಯ ಜ್ವರ ಹರಡುವ ಸೊಳ್ಳೆಯ ಜಾತಿಯನ್ನು ನಿರ್ನಾಮಗೊಳಿಸುವುದರಿಂದ ಮಲೇರಿಯ ಜ್ವರ ಮೂಲೋತ್ಪಾಟನ ಮಾಡಬಹುದೆಂದು ಭಾರತ ಮತ್ತು ವಿಶ್ವದ ಅನೇಕ ಭಾಗಗಳಲ್ಲಿ, ವಿಶ್ವಸಂಸ್ಥೆಯ ಆರೋಗ್ಯ ವಿಧಾನ ಕೆಲಕಾಲ ಯಶಸ್ವಿಯಾಗಿ ತೋರಿದರೂ ಮತ್ತೆ ಅದೇ ಪ್ರದೇಶಗಳಲ್ಲಿ ಮಲೇರಿಯ ತಲೆದೋರುತ್ತಿದೆ. ಸಿಡುಬು ನಿರೋಧಕ ಚುಚ್ಚುಮದ್ದು ಬಳಸುವುದನ್ನು ಗಾಂಧೀಜಿ ವಿರೋಧಿಸುತ್ತಿದ್ದರು. ಆದರೆ ಇದರ ವ್ಯಾಪಕ ಬಳಕೆಯಿಂದ ಸಿಡುಬನ್ನು ಭಾರತದಲ್ಲಿ ಸಂಪೂರ್ಣವಾಗಿ ನಿರ್ಮೂಲಗೊಳಿಸಲಾಗಿದೆ.

ಚಕ್ರಯ್ಯ ಅಂಧ್ರದ ಹರಿಜನ ಆಶ್ರಮಕ್ಕೆ ಬಂದ. ಒಳ್ಳೆಯ ಕೈ ಕೆಲಸಗಾರ. ಒಂದು ದಿನ ಮೂರ್ಛಿತನಾದ. ಮೂರ್ಛೆ ರೋಗ ಎಂದು ಭಾವಿಸಲಾಯಿತು. ಆದರೆ ಡಾಕ್ಟರ್ ಪರೀಕ್ಷಿಸಿ ಮೆದುಳಿನಲ್ಲಿ ಹುಣ್ಣಾಗಿದೆ. ಶಸ್ತ್ರಚಿಕಿತ್ಸೆಯೊಂದೇ ಚಿಕಿತ್ಸೆ, ಬೇರೆ ಮಾರ್ಗವಿಲ್ಲ ಎಂದರು. ಶಸ್ತ್ರಚಿಕಿತ್ಸೆ ನಡೆಯಿತು. ಗುಣವಾಗದೆ ಮೃತನಾದ.

ಹಿಂದೂ-ಮುಸ್ಲಿಂ ಹತ್ಯಾಖಾಂಡ್ಯ ನಡೆಯುತ್ತಿತ್ತು. ಗಾಂಧೀಜಿ ದಿಲ್ಲಿಯಲ್ಲಿದ್ದರು. ಅವರಿಗೆ ನಾಯಿಕೆಮ್ಮು ಕಾಣಿಸಿಕೊಂಡಿತು. 1947 ಸೆಪ್ಟೆಂಬರ್ 26ರಂದು ಜ್ವರ 102 ಡಿಗ್ರಿಗೆ ಏರಿತು. ಭೇಟಿ ಕೊಡುವುದನ್ನು ರದ್ದುಮಾಡಿ, ನೂಲುವುದು ಬೇಡ ಎಂದರೆ ಕೇಳರು. ನೊಂದವರಿಗೆ ಎರಡು ಹಿತ ನುಡಿಗಳನ್ನಾದರೂ ಆಡಲು ಸಾಧ್ಯವಾಗದಿದ್ದರೆ ಈ ಬಾಳು ವ್ಯರ್ಥ ಎಂದರು. ಒಬ್ಬಾತ ಭೇಟಿಗೆ ಬಂದ. ಕೆಮ್ಮು ಪ್ರಾರಂಭವಾಯಿತು. ನೋಡಿದಿರಾ, ನಿಮಗೆ ದೊರೆಯುತ್ತಿರುವ ಸ್ವಾಗತ ಎಂದು ಹಾಸ್ಯ ಮಾಡಿದರು. ರಾತ್ರಿ ಮಲಗಿದ್ದಾಗ, ಬೆಳಗಿನ ಝಾವ ಮತ್ತೆ ಕೆಮ್ಮು ಕೆರಳಿತು. ಬಹಳ ಹೊತ್ತು ನಿಲ್ಲಲಿಲ್ಲ. ಕಸ್ತೂರಿ ಬಾ ಹೀಗೆಯೇ ಕಷ್ಟಪಟ್ಟಳು. ಅವಳ ನೆನಪಾಗುತ್ತಿದೆ. ಅವಳು ಎದುರಿಗೆ ನಿಂತಂತೆ ಕನಸಾಯಿತು ಎಂದರು. ರಾಮ

ನಾಮ ನನ್ನನ್ನು ಆವರಿಸಿಕೊಂಡರೆ ಕೆಮ್ಮು ಏನೂ ಮಾಡಲಾರದು. ಹೀಗೆ ಸಮಾಧಾನ ಮಾಡಿಕೊಂಡರು.

ಸ್ಮರಣೆ ತಪ್ಪಿದರೆ ತನಗೆ ಮಾದಕ ದ್ರವ ಕೊಡಲಾಗದು. ಚುಚ್ಚುಮದ್ದು ಬೇಡ. ಯಾರಾದರೂ ನಾನು ನಿಷೇಧಿಸಿರುವ ಔಷಧಗಳನ್ನು ಕೊಟ್ಟು ಜೀವ ಉಳಿಸಲು ಪ್ರಯತ್ನಿಸಿದರೆ ಜೀವದೊಡನೆ ಅಸಹಕಾರ ಮಾಡುವೆ. ಎಂತೋ ಹೇಗೋ ಬದುಕಿರಬೇಕು. ಈ ಆಸೆ ನನಗಿಲ್ಲ. ನನ್ನ ಧ್ಯೇಯಗಳಿಗೆ ಅಂಟಿಕೊಂಡು ಮೃತ್ಯು ವಶವಾಗಲು ಬಯಸುವೆ ಎಂದರು. ಆಯುರ್ವೇದ ಪಂಡಿತರು ಕೆಮ್ಮಿಗೆ ಕೊಡುವ 'ಅದುಲಸಾ' ಔಷಧ ತೆಗೆದುಕೊಳ್ಳಲು ನಿರಾಕರಿಸಿದರು.

ಪ್ರಕೃತಿ ಚಿಕಿತ್ಸಕನೊಬ್ಬ ಬಂದು ಕೆಳಕಂಡ ಸಲಹೆ ನೀಡಿದ. ಉದರ ಶುದ್ಧೀಕರಣ; ಲಘು ಆಹಾರ; ಪ್ರತಿದಿನ ನಾಲ್ಕೈದು ಪಿಂಟ್ ನೀರು ಸೇವನೆ; ಕೈಕಾಲು ಬೆಚ್ಚಗೆ ಇರಿಸುವುದು; ಪೂರ್ಣ ವಿಶ್ರಾಂತಿ.

ರಾತ್ರಿ ಕೆಮ್ಮು ಅಧಿಕವಾಗುತ್ತಿತ್ತು. ಮಾತನಾಡಲೂ ಕಷ್ಟವಾಗುತ್ತಿತ್ತು. ಹೇಳುವುದನ್ನು ಗ್ರಹಿಸಲೂ ಕಷ್ಟವಾಗುತ್ತಿತ್ತು. ರಾಮನಾಮ ಜಪಿಸುತ್ತಾ ಕೆಮ್ಮುತ್ತಿದ್ದರು. ನಿದ್ದೆ ಬಾರದು. ಕೆಲವೊಮ್ಮೆ ಉಗುಳಿನಲ್ಲಿ ರಕ್ತ ಕಾಣಿಸಿಕೊಳ್ಳುತ್ತಿತ್ತು. ಹೊಟ್ಟೆ, ಎದೆ ಮತ್ತು ಕುತ್ತಿಗೆಗೆ ಮಣ್ಣಿನ ಪ್ಲಾಸ್ಟರ್ ಹಚ್ಚಲಾಗುವುದು. ಬಿಸಿ ನೀರಿನ ಬಾಟ್ಲಿಯಿಂದ ಕಾವು ಕೊಡಲಾಗುವುದು. ಮೂರು ಘಂಟೆಗೊಮ್ಮೆ ಮಣ್ಣಿನ ಲೇಪನ ಬದಲಾಯಿಸಲಾಗುತ್ತಿತ್ತು. ಬಿಸಿನೀರಿನ ಹಬೆ ಎಳೆದುಕೊಳ್ಳಲು ಕೊಡಲಾಗುತ್ತಿತ್ತು. ಸಾಸುವೆ ಅರೆದು ಬಿಸಿನೀರಿಗೆ ಸೇರಿಸಿ ಪಾದಗಳನ್ನು ಅದರಲ್ಲಿ ಇರಿಸಲಾಗುತ್ತಿತು. ಪಲ್ಯಕ್ಕೆ ಒಂದು ಚಿಟಿಕೆ 'ಅಮೋನಿಯಂ ಕ್ಲೋರೈಡ್' ಬೆರಸಲು ಅವಕಾಶಕೊಟ್ಟರು. ಹಾಲಿಗೆ ಸ್ವಲ್ಪ ಅರಸಿನ ಪುಡಿ ಸೇರಿಸಿಕೊಡಲಾಗುತ್ತಿತ್ತು. ಕೆಮ್ಮು ನಿಲ್ಲಲಿಲ್ಲ. ಇಳಿಯಲಿಲ್ಲ. ಪೆನ್ಸಿಲಿನ್ ಸೂಜಿಮದ್ದು ತೆಗೆದುಕೊಳ್ಳುವಂತೆ ಡಾಕ್ಟರ್ ಹೇಳಿದರು. ಬಾಪು ಒಪ್ಪಲಿಲ್ಲ.

ರೋಗಗಳ ಕಾರಣ ವೈದ್ಯ ವಿಜ್ಞಾನ ನಿರ್ಧರಿಸಿದೆ. ಕಾಯಿಲೆಯ ಕಾರಣ ಗೊತ್ತುಮಾಡಿ ಚಿಕಿತ್ಸೆ ನೀಡಿದರೆ, ಕಾಯಿಲೆ ಗುಣವಾಗುತ್ತದೆ. ಸೂಕ್ಷ್ಮಾಣುಗಳಿಂದ ರೋಗ ಹರಡುತ್ತದೆ. ತದ್ವಿರುದ್ಧ ಕಾಲರ ಅಣುಗಳ ಸೂಜಿಮದ್ದು ಚುಚ್ಚಿದರೆ ಕಾಲರ ಕಾಣಿಸಿಕೊಳ್ಳುತ್ತದೆ. ವಿಜ್ಞಾನದ ನಿಯಮ ಅನುಲ್ಲಂಘನೀಯ. ಹೀಗೆ ಪಾಶ್ಚಾತ್ಯ ವೈದ್ಯತಜ್ಞರು ವಾದಿಸಿದರು.

"ಇದು ದುರಹಂಕಾರದ ವಾದ. ವಿಜ್ಞಾನ ಕಲಿಯಬೇಕಾದ್ದು ಅಪಾರವಿದೆ. ಪ್ರಕೃತಿ ನಿಯಮ ಅರ್ಥಾತ್ ಭಗವಂತನ ನಿರೂಪದ ಉಲ್ಲಂಘನೆಯ ಪರಿಣಾಮವೇ

ವ್ಯಾಧಿ. ಉಲ್ಲಂಘನೆಗೆ ತಕ್ಕ ಶಿಕ್ಷೆ. ರಾಮನಾಮ ಇದಕ್ಕೆ ಏಕೈಕ ಮದ್ದು. ಇದನ್ನು ದೃಢಪಡಿಸಿಕೊಡುವ ಪ್ರಯೋಗದಲ್ಲಿ ನಾನು ತೊಡಗಿರುವೆ. ಪ್ರಯೋಗ ಫಲಿಸದಿದ್ದರೆ ಪ್ರಯತ್ನದಲ್ಲೇ ಅಸುನೀಗುವೆ. ಇದು ನನ್ನ ಸಂಕಲ್ಪ" ಎಂದರು.

ಜೀವರಾಜ ಮೆಹಥ ಬಂದರು. "ನಾನೊಬ್ಬ ಹೊಸ ವೈದ್ಯನನ್ನು ನೇಮಿಸಿಕೊಂಡಿರುವೆ" ಎಂದರು ಗಾಂಧೀಜಿ. ಡಾಕ್ಟರ್ ಮೆಹಥಾಗೆ ಅರ್ಥವಾಗಲಿಲ್ಲ. ದೀರ್ಘಕಾಲದಿಂದ ಮೆಹಥ ಮಹಾತ್ಮರ ವೈದ್ಯರಾಗಿದ್ದರು. ನಿಮಗೆ ಅರ್ಥವಾಗಲಿಲ್ಲವೇ, ಅವನೇ ಶ್ರೀರಾಮ. ಅವನ ಇಚ್ಛೆಯಿದ್ದರೆ ಸರ್ವಾಂಗ ಸುಂದರನಿಗಿಂತ ಅನಂಗ ಅಧಿಕ ಸೇವೆ ಸಲ್ಲಿಸಬಲ್ಲ. ಔಷಧ ದೈಹಿಕ ಕಾಯಿಲೆಯನ್ನು ಗುಣಪಡಿಸಬಲ್ಲದು. ಇದರಲ್ಲಿ ಸಂಶಯವಿಲ್ಲ. ಆದರೆ ಸುತ್ತಲೂ ಭಯಂಕರ ಕೋಮುವಾರು ವಿಷಜ್ವಾಲೆ ಸುಡುತ್ತಿರುವಾಗ ಪರಮಾತ್ಮನಲ್ಲಿ ಮೊದಲಿಗಿಂತ ಹೆಚ್ಚು ವಿಶ್ವಾಸವಿಡಬೇಕು. ದೇಹ ಮತ್ತು ದೇಶವನ್ನು ದಹಿಸುತ್ತಿರುವ ಬೆಂಕಿಯನ್ನು ಆರಿಸಲು ಜನರಿಗೆ ಶಕ್ತಿ ದಯಪಾಲಿಸಬಲ್ಲವನು ಆತನೊಬ್ಬನೇ. ಆತನ ಅನುಗ್ರಹವಿಲ್ಲದೆ ಯಾವ ಕೆಲಸವೂ ಸಾಧ್ಯವಾಗದು.

ದಿನಗಳು ಉರುಳಿದವು. ಆದರೂ ಕೆಮ್ಮು ನಿಲ್ಲಲಿಲ್ಲ. ದೈಹಿಕವಾಗಿ ಸಾಧ್ಯವಾಗದೆ ಭೇಟಿ ಕೊಡುವುದನ್ನು ಕಡಮೆ ಮಾಡಿದರು. ಅಕ್ಟೋಬರ್ 2, 1947 ಎಂದಿನಂತೆ ಅವರ ಹುಟ್ಟುಹಬ್ಬ. ಬೆಳಿಗ್ಗೆ ಸ್ನಾನ ಮುಗಿಸಲು 8-30 ಘಂಟೆ ಆಯಿತು. ಪಂಡಿತ ಜವಹರಲಾಲ್ ನೆಹರು, ವಲ್ಲಭಾಯಿ ಪಟೇಲ್, ಬಿರ್ಲ ಕುಟುಂಬ, ಅನ್ಯ ರಾಷ್ಟ್ರಗಳ ರಾಜದೂತರು ಅವರ ಸಂದರ್ಶನಕ್ಕಾಗಿ ಕಾದಿದ್ದರು. ಮೀರಾಬೆಹನ್ ಪುಷ್ಪಗಳಿಂದ 'ಹೇ ರಾಮ್' ಮತ್ತು ಸಿಲುಬೆಯ ಪ್ರತಿಕೃತಿ ಜೋಡಿಸಿದ್ದಳು. ಪ್ರಾರ್ಥನೆ ನಡೆಯಿತು. ಎಲ್ಲರೂ ಬಂದು ಮಹಾತ್ಮರ ಕಾಲಿಗೆರಗಿ ಆಶೀರ್ವಾದ ಕೋರಿದರು. "ಹುಟ್ಟುಹಬ್ಬದ ದಿನ ಹಿರಿಯರನ್ನು ನಮಸ್ಕರಿಸಿ ಆಶೀರ್ವಾದ ಬಯಸುವುದು ವಾಡಿಕೆ. ಆದರೆ ನಿಮ್ಮ ಹುಟ್ಟುಹಬ್ಬದಂದು, ನಿಮ್ಮ ಪಾದ ಮುಟ್ಟಿ ಆಶೀರ್ವಾದ ಜನ ಬಯಸುತ್ತಾರೆ. ತಿರುಗು ಮುರುಗು. ಇದು ಸರಿಯೇ" ಎಂದು ಒಬ್ಬರು ಹಾಸ್ಯವಾಗಿ ಪ್ರಶ್ನಿಸಿದರು. "ಕಪಟಿಯೇ ಆಗಲಿ, ನನ್ನನ್ನು ಮಹಾತ್ಮನನ್ನಾಗಿ ನೀವು ಮಾಡಿರುವುದರಿಂದ ಆಗಿರುವ ಪ್ರತಿಕ್ರಿಯೆ ಇದು. ಮಹಾತ್ಮರ ಮಾರ್ಗ ಪ್ರತ್ಯೇಕ."

ಕತ್ತರಿ ತೆಗೆದುಕೊಂಡು ಕಾಗದ ಕತ್ತರಿಸುತ್ತಿದ್ದರು. ಕೈ ನಡುಗುತ್ತಿತ್ತು. ಚಳಿಯಿಂದ ಕೈನಡುಗುತ್ತಿದೆ ಎಂದರು ಒಬ್ಬರು. "ವಾತಾವರಣದ ಪ್ರಕೃತಿಯ ಸಹಜ ಚಳಿ ಒಳ್ಳೆಯದೇ. ದುಡಿದು ಕೆಲಸಮಾಡಲು ಉತ್ತೇಜಕ. ಆದರೆ ನನ್ನ ಕೈ

ನಡುಗುತ್ತಿರುವುದು ಚಳಿಯಿಂದ ಅಲ್ಲ. ನಮ್ಮ ದೇಶದ ಬಡತನ. ಕಡು ಬಡವರ ದೌರ್ಭಾಗ್ಯ ಈ ಕಂಪನಕ್ಕೆ ಕಾರಣ. ಎಂದು ಕೊನೆಗೊಂಡೀತು ಈ ದಾರಿದ್ರ್ಯ" ಎಂದರು ಗಾಂಧೀಜಿ.

* * * *

ಆರ್ಯನಾಯಗಂ ಮತ್ತು ಅವರಪತ್ನಿ ಆಶಾದೇವಿ ಮೂಲಶಿಕ್ಷಣದ ಅಧ್ವರ್ಯುಗಳು. ಸೇವಾಗ್ರಾಮದಲ್ಲೇ ಇರುತ್ತಿದ್ದರು. ಇವರಿಗೆ ಇಬ್ಬರು ಮಕ್ಕಳು. ಮಿಟು ಹೆಣ್ಣುಮಗು. ಇವಳ ತಮ್ಮ ಆನಂದ. ಒಂದು ದಿದ ಬಲವಂತಸಿನ್ಹ ಜೋಳ ತಂದ. ಹಸಿ ಜೋಳ ಸುಟ್ಟು ತಿನ್ನಲು ಬಲು ರುಚಿ. ಜೋಳ ತಿನ್ನಲು ಎಲ್ಲರನ್ನೂ ಆಹ್ವಾನಿಸಿದ. ಜಮನಾಲಾಲರೂ ಬಂದರು. ಆನಂದನೂ ಬಂದ. ಎಲ್ಲರೂ ಜೋಳ ಸವಿದರು. ತಿನ್ನುತ್ತಾ ತಿನ್ನುತ್ತಾ ಆನಂದ ನೆಲಕ್ಕೆ ಉರುಳಿದ. ಪ್ರಜ್ಞೆ ತಪ್ಪಿತು. ಡಾಕ್ಟರ್ ಸುಶೀಲನಯ್ಯಾರ್ ಅಜೀರ್ಣವಾಯಿತೆಂದು ಏನೇನೋ ಚಿಕಿತ್ಸೆ ನಡೆಸಿದಳು. ಪ್ರಯೋಜನವಾಗಲಿಲ್ಲ. ಡಿಸೆಂಬರ್ 19, 1939ರಂದು ಈ ಘಟನೆ ನಡೆದು ಅಂದೇ ಆನಂದ ಅಸುನೀಗಿದ. ಆರ್ಯನಾಯಗಂ ಊರಿನಲ್ಲಿ ಇರಲಿಲ್ಲ. ತಂತಿ ಸುದ್ದಿ ಕಳುಹಿಸಿ ಅವರನ್ನು ಬರಮಾಡಿಕೊಳ್ಳಲಾಯಿತು. ಆನಂದನ ಸಾವಿಗೆ ಕಾರಣ ಅನಂತರ ಗೊತ್ತಾಯಿತು. ಸಕ್ಕರೆ ಲೇಪಿಸಿದ ಕ್ವೈನಾ ಗುಳಿಗೆಗಳನ್ನು ಚಾಕೊಲೆಟ್ ಎಂದು ಭಾವಿಸಿ ಅರವತ್ತು ಗುಳಿಗೆಗಳನ್ನು ಅವನು ತಿಂದಿದ್ದ. ಯಾವ ಚಿಕಿತ್ಸೆಯಿಂದಲೂ ಆನಂದನ ಜೀವ ಉಳಿಸಲು ಸಾಧ್ಯವಾಗಲಿಲ್ಲ.

1931ರಲ್ಲಿ ಗಾಂಧೀಜಿ ಉಗ್ರಸ್ವರೂಪದ ಆಮಶಂಕೆಯಿಂದ ನರಳುತ್ತಿದ್ದರು. ಡಾಕ್ಟರ್ ತಲವಾಲಕರ್, ಡಾಕ್ಟರ್ ಕನೂಂಗ ಇವರ ಪರೀಕ್ಷಿಸಿ ಸೂಜಿ ಮದ್ದು ಕೊಡಬೇಕು. ಬೇರೆ ಚಿಕಿತ್ಸೆ ಪರಿಣಾಮಕಾರಿ ಅಲ್ಲ. ಇದರಿಂದ ಖಂಡಿತ ಗುಣವಾಗುತ್ತೆ ಎಂದರು. ಆದರೆ ಸೂಜಿಮದ್ದು ತೆಗೆದುಕೊಳ್ಳಲು ಗಾಂಧೀಜಿ ಒಪ್ಪಲಿಲ್ಲ. 'ಎನಿಮಾ' ತೆಗೆದುಕೊಳ್ಳಲು ಒಪ್ಪಿದರು. 'ಎಮಿಟೈನ್ ಹೈಡ್ರೊ ಕ್ಲೋರೈಡ್' ಮತ್ತು 'ಮಾರ್ಫಿಯ' ಉಗುರುಬೆಚ್ಚನ ಬಿಸಿನೀರಿನಲ್ಲಿ ಸೇರಿಸಿ 'ಎನಿಮಾ' ಕೊಟ್ಟರು. ಗುಣವಾಯಿತು.

ದಿನಕ್ಕೆ ಒಂದೆರಡು ಡರ್ಜ ಕಿತ್ತಲೆ ಹಣ್ಣು ಸಾಕು. ಆಹಾರಕ್ಕೆ ಬೇರೆ ಏನೂ ಅಗತ್ಯವಿಲ್ಲವೆಂದು ಗಾಂಧೀಜಿ ತಿಳಿದಿದ್ದರು. ಆದರೆ ದಿನಕ್ಕೆ ಐವತ್ತು, ಅರವತ್ತು ತೆಗೆದುಕೊಂಡರೂ ದೇಹಪುಷ್ಟಿಗೆ ಸಾಲದು ಎಂದರು ಡಾ|| ಜಿ. ಆರ್. ತಲವಾಲಕರ್. ಈ ಹೇಳಿಕೆಯನ್ನು ಆಧಾರ ಗ್ರಂಥಗಳಿಂದ ಸಮರ್ಥಿಸುವವರೆಗೂ ಗಾಂಧೀಜಿ ತೃಪ್ತರಾಗಲಿಲ್ಲ. ತದನಂತರ ಮಾತ್ರವೇ ದೇಹದಾರ್ಢ್ಯಕ್ಕೆ ಚಪಾತಿ ಮತ್ತು ಅನ್ನ ತೆಗೆದು

ಕೊಳ್ಳಲು ಪ್ರಾರಂಭಿಸಿದರು. ಇದರೊಡನೆ ಆಡಿನ ಹಾಲು ತೆಗೆದುಕೊಳ್ಳಲು ಉಪಕ್ರಮಿಸಿದ ನಂತರ ದೇಹದಾರ್ಢ್ಯ ಬೆಳೆಯಿತು.

1935ರಲ್ಲಿ ಗಾಂಧೀಜಿ ರಕ್ತದ ಒತ್ತಡದಿಂದ ಬಳಲುತ್ತಿದ್ದರು. ದಕ್ಷಿಣ ಇಟಲಿಯಲ್ಲಿ ಬೆಳ್ಳುಳ್ಳಿಯ ಗಟ್ಟಿ ರಸವನ್ನು ಕ್ಷಯರೋಗದ ಚಿಕಿತ್ಸೆಗೆ ಬಳಸುವುದಾಗಿ ತಿಳಿಯಿತು. ವಿಷಯದ ಗಾಢ ಅಭ್ಯಾಸ ನಡೆಸುವಂತೆ ಮಹದೇವ ದೇಸಾಯಿ ಅವರಿಗೆ ತಿಳಿಸಿದರು. ಬೆಳ್ಳುಳ್ಳಿಯ ಗುಣಾವಗುಣ ಕುರಿತು ಹರಿಜನ ಪತ್ರಿಕೆಯಲ್ಲಿ ಲೇಖನಗಳು ಪ್ರಕಟವಾದುವು.

'ಕೀ ಟು ಹೆಲ್ತ್', 'ಆರೋಗ್ಯದ ಕೀಲಿ', 'ಆರೋಗ್ಯ ರಹಸ್ಯ' ಎಂಬ ಕಿರು ಹೊತ್ತಿಗೆಯಲ್ಲಿ ಪ್ರಕೃತಿ ಚಿಕಿತ್ಸೆಯ ಕ್ರಮ ಮತ್ತು ತಮ್ಮ ಅನುಭವ ಗಾಂಧೀಜಿ ತಿಳಿಸಿದ್ದಾರೆ. ಈ ಪುಸ್ತಕದಲ್ಲಿರುವ ಆರೋಗ್ಯ ನಿಯಮಗಳನ್ನು ಪಾಲಿಸಿದರೆ ಆರೋಗ್ಯ ಮಂದಿರದ್ವಾರಕ್ಕೆ ಬೀಗದ ಕೈ ಸಿಗುತ್ತದೆ. ಅವನು ವೈದ್ಯರ ಮನೆ ಬಾಗಿಲು ತಟ್ಟಬೇಕಾಗಿಲ್ಲ ಎಂದಿದ್ದಾರೆ ಗಾಂಧೀಜಿ.

ಆರೋಗ್ಯ ರಹಸ್ಯದ ಬೀಗದಕೈ ನಮಗೆ ಗಾಂಧೀಜಿ ಕೊಟ್ಟು 30 ವರ್ಷಗಳಿಗೂ ಹೆಚ್ಚು ಕಾಲ ಕಳೆದುಹೋಗಿದೆ. ಅವರ ಮುಖದರ್ಶನ ಮಾಡುವಂತಿಲ್ಲ. ಪ್ರಪಂಚದ ಎಲ್ಲ ಕ್ಷೇತ್ರಗಳಲ್ಲೂ ಎಷ್ಟೋ ಬದಲಾವಣೆಗಳಾಗಿವೆ. ಆದರೂ ಆರೋಗ್ಯದ ಮೂಲ ರಹಸ್ಯ ಅಚಲ, ಶಾಶ್ವತ. ಅಂದಿನಂತೆಯೇ ಇಂದೂ. ಅನುಭವ ಜ್ಞಾನ ಬಹಳ ಬೆಳೆದಿರಬಹುದು. ಅಂದು ಪ್ರಕೃತಿ ಚಿಕಿತ್ಸಕರಿಗೆ ಗಾಂಧೀಜಿ ಹೇಳಿರುವ ಮಾತು ಇಂದಿಗೂ ಸ್ಮರಣೀಯ. "ಪ್ರಕೃತಿ ಚಿಕಿತ್ಸಾವಾದಿಗಳ ಜ್ಞಾನ ಅತ್ಯಲ್ಪವಾದರೂ ಬಹಳ ತಿಳಿದವರಂತೆ ಬಡಾಯಿಕೊಚ್ಚುತ್ತಾರೆ. ಅವರಿಗೆ ಸಂಘಟನಾ ಬುದ್ಧಿಯಿಲ್ಲ. ಪ್ರತಿಯೊಬ್ಬನೂ ತನ್ನ ಪಾಡಿಗೆ ತಾನು ತೃಪ್ತನಾಗಿ ಕೆಲಸ ಮಾಡುತ್ತಾನೆ. ಎಲ್ಲರೂ ಕಲೆತು ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿ ಆ ಪದ್ಧತಿಯನ್ನು ಮೇಲೆತ್ತಲು ದುಡಿಯರು. ಪ್ರಕೃತಿ ಚಿಕಿತ್ಸಾ ಪದ್ಧತಿಯ ಸಾಧ್ಯಾಸಾಧ್ಯತೆಯನ್ನೂ, ಆದರ ವಿವರಗಳನ್ನೂ ಶಾಸ್ತ್ರೀಯವಾಗಿ ಪರಿಶೋಧನೆ ಮಾಡಲು ಯಾರಿಗೂ ಮನಸ್ಸಿಲ್ಲ."

ಕರ್ಮಯೋಗ

"ದೇಶಕ್ಕೆ ದೈಹಿಕ ಸೇವೆ ಸಲ್ಲಿಸುವವರಿಗೆ ಮಾತ್ರ ವೋಟಿನ ಅಧಿಕಾರವಿರತಕ್ಕದ್ದು. ಇದು ನಿಮ್ಮ ಅಭಿಪ್ರಾಯವೇ ?"

"ಖಂಡಿತವಾಗಿಯೂ ಹೌದು. ವಯಸ್ಸಿಗೆ ಬಂದ ಪ್ರತಿಯೊಬ್ಬ ಸ್ತ್ರೀ ಪುರುಷ, ಒಂದು ನಿರ್ದಿಷ್ಟ ವಯಸ್ಸಿನವರೆಗೆ ರಾಜ್ಯಕ್ಕೆ ಯಾವುದಾದರೂ ರೂಪಿನಲ್ಲಿ ದೈಹಿಕ ಸೇವೆ ಸಲ್ಲಿಸಬೇಕು. ಇಂಥವರಿಗೆ ಮಾತ್ರ ಮತದಾನದ ಹಕ್ಕು ಲಭಿಸತಕ್ಕದ್ದು. ಸಾಮಾನ್ಯ ಶ್ರಮಜೀವಿ ಸುಲಭವಾಗಿ ಮತದಾರನಾಗಬಲ್ಲ. ಅದೇ ಒಬ್ಬ ಲಕ್ಷಾಧೀಶ, ವಕೀಲ ಅಥವಾ ವರ್ತಕ ಸ್ವಪ್ರೇರಣೆಯಿಂದ ತಾನೇ ಶ್ರಮಜೀವಿಯಾಗಿ ರಾಜ್ಯಕ್ಕೆ ಉಪಯುಕ್ತ ದೈಹಿಕ ಸೇವೆ ಸಲ್ಲಿಸಿದರೆ ಮಾತ್ರ ವೋಟಿನ ಹಕ್ಕಿಗೆ ಅರ್ಹನಾಗಬಲ್ಲ."

ಮಹಾ ತಪಸ್ವಿಗಳಾದ ರಮಣ ಮಹರ್ಷಿ, ಕವಿವರ್ಯ ರವೀಂದ್ರನಾಥ ಠಾಕೂರರಂಥವರೂ ದೈಹಿಕ ಶ್ರಮದಿಂದ ತಮ್ಮ ಅನ್ನ ಸಂಪಾದಿಸಬೇಕೇ ? ಬುದ್ಧಿ ಶಕ್ತಿಯಿಂದ ಸೇವೆ ಸಲ್ಲಿಸುವವರು ದೈಹಿಕ ಶ್ರಮದಿಂದ ಸೇವೆ ಸಲ್ಲಿಸುವವರಿಗೆ ಸಮ ಎಂದ ಭಾವಿಸಲಾಗದೇಕೆ ? ಇಬ್ಬರೂ ಸಮಾಜಕ್ಕೆ ಉಪಯುಕ್ತ ಸೇವೆ ಸಲ್ಲಿಸುತ್ತಾರಷ್ಟೆ.

"ಜೀವನದಲ್ಲಿ ಬೌದ್ಧಿಕ ಸೇವೆಗೆ ಪ್ರಮುಖ ಸ್ಥಾನವಿರುವುದರಲ್ಲಿ ಸಂದೇಹವಿಲ್ಲ. ಆದರೆ ಪ್ರತಿಯೊಬ್ಬರೂ ದೈಹಿಕ ಸೇವೆ ಸಲ್ಲಿಸಲೇಬೇಕೆಂದು ನನ್ನ ಮತ. ಇದರಿಂದ ಯಾರೂ ತಪ್ಪಿಸಿಕೊಳ್ಳಲಾಗದು. ಬೌದ್ಧಿಕ ಸೇವೆ ಸಲ್ಲಿಸುವವರಿಗೆ ದೈಹಿಕ ಸೇವೆ ಹೆಚ್ಚು ಪ್ರಯೋಜನ. ಅದು ಬೌದ್ಧಿಕ ಸೇವೆಯ ಶತ್ರುವಲ್ಲ. ಇದರಿಂದ ಬೌದ್ಧಿಕ ಸೇವೆಯ ಗುಣಮಟ್ಟ ಹೆಚ್ಚುತ್ತದೆ. ಇದು ಟಾಲ್‌ಸ್ಟಾಯಿ ಅವರ ಅಭಿಪ್ರಾಯ. ನನ್ನ ಮತವೂ ಇದೇ. ಹಿಂದಿನ ಕಾಲದಲ್ಲಿ ಬ್ರಾಹ್ಮಣರು ಬೌದ್ಧಿಕ ಸೇವೆ ಮಾತ್ರವಲ್ಲದೆ ದೈಹಿಕ ಸೇವೆಯನ್ನೂ ಸಲ್ಲಿಸುತ್ತಿದ್ದರೆಂದು ನನ್ನ ಅನಿಸಿಕೆ. ಆ ಕಾಲದಲ್ಲಿ ಹೀಗೆ ಅವರು ಮಾಡದಿದ್ದರೂ ಈ ಕಾಲದಲ್ಲಿ ದೇಹಶ್ರಮದ ಕೆಲಸ ಅಗತ್ಯವೆಂದು ನನ್ನ ಖಚಿತ ಅಭಿಪ್ರಾಯ."

ಗಾಂಧೀಜಿ ಪ್ರತಿದಿನ ಅರ್ಧ ಗಂಟೆಯಾದರೂ ನೂಲುವರು. ಕಾಯಿಲೆಯಾಗಿದ್ದರೂ ಸರಿ, ದೀರ್ಘಾವಧಿಯ ಉಪವಾಸ ಕೈಗೊಂಡಿದ್ದಾಗಲೂ ಅಷ್ಟೇ.

ಚರಖ ತಿರುವುತ್ತಲೇ ಇರಬೇಕು. ಊಟವನ್ನಾದರೂ ಬಿಡಲು ಸಿದ್ಧ. ಆದರೆ ನೂಲುವುದನ್ನು ಬಿಡರು. ಮಹಾತ್ಮರು ಹಿಂದೂ–ಮುಸ್ಲಿಂ ಸೌಹಾರ್ದಕ್ಕಾಗಿ 21 ದಿನಗಳ ಪ್ರಾಯೋಪವೇಶ ದಿಲ್ಲಿಯಲ್ಲಿ ಆಚರಿಸುತ್ತಿದ್ದರು. ಆಗಲೂ ದಿನಕ್ಕೆ ಅರ್ಧ ಘಂಟೆಯಾದರೂ ನೂಲುವ ಹಟ. 19ನೆಯ ದಿನ ಡಾಕ್ಟರ್ ಅನ್ಸಾರಿ ಗಾಂಧಿಯವರ ಮೂತ್ರ ಪರೀಕ್ಷಿಸಿ, ದೇಹ ಅಪಾಯಕಾರಿ ಸ್ಥಿತಿ ಮುಟ್ಟಿದೆ. ದಯ ಮಾಡಿ ಉಪವಾಸ ನಿಲ್ಲಿಸಿ. ನಿಮ್ಮ ಪ್ರಾಣ ಉಳಿಸುವ ಹೊಣೆ ನಾನು ಹೊರಲಾರೆ ಎಂದರು. ನೀವು ಮುಸಲ್ಮಾನರು. ಭಗವಂತನಲ್ಲಿ ವಿಶ್ವಾಸವುಳ್ಳವರು. 'ಅಲ್ಲಾ 'ಅವನಲ್ಲಿ ನಂಬಿಕೆ ಇಡಿ. ಎಲ್ಲ ಒಳಿತಾಗುತ್ತದೆ. ಈಗ ನೂಲಬೇಕು, ರಾಟೆ ತಂದು ಕೊಡಿ ಎಂದರು ಗಾಂಧೀಜಿ. ಡಾಕ್ಟರ್ ಅನ್ಸಾರಿ ಮತ್ತು ದೀನಬಂಧು ಆಂಡ್ರೂಸ್ ಇಬ್ಬರೂ ಉಪವಾಸ ಮುಕ್ತಾಯಗೊಳಿಸುವಂತೆ ಒತ್ತಾಯಮಾಡಿದರು. ಆದರೆ ಗಾಂಧೀಜಿ ಒಪ್ಪಲಿಲ್ಲ. ಪ್ರತಿಯಾಗಿ ಚರಖದಿಂದ ನೂತರೆ ದೇಹಸ್ಥಿತಿ ಸುಧಾರಿಸುತ್ತದೆ ಎಂದರು. ಮಂಚದ ಮೇಲೆಯೇ ದಿಂಬುಗಳಿಂದ ಒರಗಿಸಿ, ಹೊಟ್ಟೆಯ ಮೇಲೆ ರಾಟೆ ಇರಿಸಿದರು. ಇದೇ ಸ್ಥಿತಿಯಲ್ಲಿ ಸ್ವಲ್ಪಹೊತ್ತು ನೂತರು. ಅನಂತರ ವೈದ್ಯರು ಅವರ ನಾಡಿ ಪರೀಕ್ಷಿಸಿದರು. ನಾಡಿಯ ಹೊಡೆತ ಮೊದಲಿಗಿಂತ ಉತ್ತಮಗೊಂಡಿತ್ತು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗೆ ಹೋದಾಗ ಸಂಗಡವೇ ರಾಟೆ ಒಯ್ಯುವರು. ಬಿಡುವಾದಾಗ ಅಲ್ಲಿಯೂ ನೂಲುವರು. ಒಮ್ಮೆ ವರ್ಕಿಂಗ್ ಕಮಿಟಿ ಸಭೆ ವರ್ಧಾದಲ್ಲಿ ನಡೆಯಿತು. ಸೇವಾ ಗ್ರಾಮದಿಂದ ವರ್ಧಾಗೆ ಹೋಗಿ, ಸಭೆ ಮುಗಿಸಿಕೊಂಡು ಬರುವಾಗ ರಾತ್ರಿ ವೇಳೆ ಬಹಳ ಆಗಿತ್ತು. ಮುಖದ ಮೇಲೆ ಬಳಲಿಕೆ ಎದ್ದು ಕಾಣುತ್ತಿತ್ತು. ನೂಲಬೇಕು, ರಾಟೆ ತನ್ನಿ ಎಂದರು. ತಾವು ತುಂಬ ದಣಿದಿರುವಿರಿ. ಇಲ್ಲಿ ಬೆಳಕುಕೊಡುತ್ತಿರುವುದು ಸೀಮೆಎಣ್ಣೆ ದೀಪ. ಈ ಮಬ್ಬಿನಲ್ಲಿ ಕಣ್ಣಿಗೆ ತೊಂದರೆ ಆದೀತು, ಬೇಡ ಎಂದರು ಕಾರ್ಯಕರ್ತರು. "ಆಯಾಸವಾಗಿದೆ. ದಣಿದಿರುವೆ ಹೀಗೆ ನೆಪ ಹೂಡಿ ನಾನೇ ಸೋಮಾರಿಯಾದರೆ ಇತರರಿಗೆ ನೂಲುವಂತೆ ಯಾವ ಮುಖ ಇಟ್ಟುಕೊಂಡು ಹೇಳಲಿ. ನಾನು ಬಳಲಿರುವುದು ನಿಜ. ಆದರೆ ನೂಲು ತೆಗೆಯುವ ಯಜ್ಞ ಮಾಡದೆ ಮಲಗಿದರೆ, ನಿದ್ದೆ ಬಾರದು. ಇಡೀ ರಾತ್ರಿ ಮನೋವೇದನೆ ಅನುಭವಿಸಬೇಕಾದೀತು". ಹೀಗೆ ವಿವರಿಸಿ, ರಾಟೆ ತರಸಿ, ದಣುವಾಗಿದ್ದರೂ, ಬೆಳಕು ಮಸುಕುಮಸುಕಾಗಿದ್ದರೂ ತಮ್ಮ ದಿನಚರಿಯ ಕೆಲಸ ಮುಗಿಸದೆ ಮಲಗಲಿಲ್ಲ.

ದಕ್ಷಿಣ ಆಫ್ರಿಕದಲ್ಲಿ ಜೊಹಾನ್ಸ್‌ಬರ್ಗ್‌ನಿಂದ ದರ್ಬಾನಿಗೆ ಗಾಂಧೀಜಿ ರೈಲಿನಲ್ಲಿ ಹೊರಟಿದ್ದರು. 24 ಘಂಟೆಗಳ ಪ್ರಯಾಣ. ಮಿಸ್ಟರ್ ವೆಸ್ಟ್ ಅವರ ಕೈಯಲ್ಲಿ 'ಅಂಟು ದಿ ಲಾಸ್ಟ್' ಎಂಬ ರಸ್ಕಿನ್ ಅವರ ಪುಸ್ತಕವಿಟ್ಟರು. ಆ ಪುಸ್ತಕ

ಅವರನ್ನು ಮಂತ್ರಮುಗ್ಧರಾಗಿ ಮಾಡಿತು. ಗಾಂಧೀಜಿ ಓದುವ ಹವ್ಯಾಸ ಅಷ್ಟಾಗಿ ಬೆಳಸಿಕೊಂಡಿರಲಿಲ್ಲ. ಓದಿದ್ದು ಕೆಲವೇ ಪುಸ್ತಕಗಳು. ಆದ್ದರಿಂದ ಓದಿದ್ದನ್ನು ಜೀರ್ಣಿಸಿ ಮೈಗೂಡಿಸಿಕೊಳ್ಳುವ ಅಭ್ಯಾಸ ಅವರಲ್ಲಿ ಚೆನ್ನಾಗಿ ಬೆಳೆಯಿತು. ಈ ಪುಸ್ತಕ ಅವರ ಬದುಕಿನಲ್ಲಿ ತತ್‍ಕ್ಷಣ ಪರಿಣಾಮಕಾರಿ ಪ್ರಭಾವ ಬೀರಿತು. ಗಾಂಧಿಯವರ ಮನಸ್ಸಿನಲ್ಲಿ ಹುದುಗಿದ್ದ ಗಾಢ ವಿಶ್ವಾಸವನ್ನು ಈ ಪುಸ್ತಕ ಪ್ರತಿಬಿಂಬಿಸುತ್ತಿತ್ತು. ಕವಿಯ ಉದ್ದೇಶವೂ ಇದೇ ಅಲ್ಲವೇ? ಮಾನವನ ಹೃದಯದಲ್ಲಿ ಅಡಗಿರುವ ಸುಪ್ತ ಭಾವನೆಗಳನ್ನು ಹೊರಸೂಸಿ ಪ್ರಕಾಶಕ್ಕೆ ತರುವಾತನೇ ನಿಜವಾದ ಕವಿ. ಗಾಂಧಿಯವರಲ್ಲಿ ಸುಪ್ತವಾಗಿದ್ದ ಭಾವನೆಗಳನ್ನು ಹೊರಗೆಳೆದು ಮೆರಗು ಕೊಟ್ಟ ಕೀರ್ತಿ ರಸ್ಕಿನ್ ಮಹಾಶಯನಿಗೆ ಸೇರುತ್ತದೆ. ಈ ಸಣ್ಣ ಪುಸ್ತಕ 'ಸರ್ವೋದಯ' ಎಂಬ ಹೆಸರಿನಲ್ಲಿ ಗುಜರಾತಿ, ಕನ್ನಡ ಮತ್ತು ಇತರ ಭಾಷೆಗಳಲ್ಲಿ ಅನುವಾದಿತವಾಗಿದೆ. ಗಾಂಧೀಜಿ ಈ ಹೊತ್ತಿಗೆಯಿಂದ ಈ ವಿಷಯಗಳನ್ನು ಗ್ರಹಿಸಿದರು :

1. ವ್ಯಕ್ತಿಯ ಒಳಿತು ಸರ್ವರ ಒಳಿತಿನಲ್ಲಿ ಅಡಕವಾಗಿದೆ.

2. ವಕೀಲನ ವೃತ್ತಿಯ ಮೌಲ್ಯ, ನಾಪಿತನ ಸೇವೆಯ ಬೆಲೆ ಎರಡೂ ಸಮ. ಕಾರಣ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಕೆಲಸದಿಂದ ಉದರ ಪೋಷಣೆ ಮಾಡಿಕೊಳ್ಳುವ ಸಮ ಅಧಿಕಾರವುಂಟು.

3. ದುಡಿಮೆಯ ಜೀವನವೇ ಶ್ರೇಷ್ಠ. ಭೂಮಿ ಉಳುವವನ ಮತ್ತು ಕೈಕೆಲಸ ಮಾಡುವವನ ಬದುಕೇ ನಿಜವಾದ ಬದುಕು.

ಮೊದಲ ತತ್ವ ಗಾಂಧೀಜಿ ಅರಿತಿದ್ದರು. ಎರಡನೆಯ ಸಿದ್ಧಾಂತ ಮಸುಕು ಮಸುಕಾಗಿ ಗ್ರಹಿಸಿದ್ದರು. ಮೂರನೆಯದು ಅವರ ಮನಸ್ಸಿಗೇ ಬಂದಿರಲಿಲ್ಲ. ಎರಡನೇ ಮತ್ತು ಮೂರನೇ ತತ್ವಗಳು ಮೊದಲ ತತ್ವದಲ್ಲೇ ಅಡಕವಾಗಿವೆ ಎಂಬುದು ಬೆಳಗಿನ ಬೆಳಕಿನಷ್ಟೇ ಸ್ಪಷ್ಟವಾಗಿತ್ತು. ಪುಸ್ತಕದ ತತ್ವಗಳನ್ನು ರಾತ್ರಿಯೆಲ್ಲಾ ಮೆಲಕು ಹಾಕಿದರು. ಅರುಣೋದಯವಾದಂತೆ ಈ ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರಲು ದೃಢ ಸಂಕಲ್ಪ ಮಾಡಿದರು.

ಸಂಕಲ್ಪ ಮೂಡಿದ್ದೇ ತಡ ಮಿಸ್ಟರ್ ವೆಸ್ಟ್, ಮದನಜಿತ್, ಚಗ್ಗನಲಾಲ್ ಗಾಂಧಿ, ಗೋವಿಂದಸ್ವಾಮಿ, ರುಸ್ತುಂಜೀ ಮೊದಲಾದವರೊಡನೆ ವಿಷಯದ ಪ್ರಸ್ತಾಪ ಮಾಡಿದರು. ದರ್ಬಾನಿನಿಂದ ಅನತಿ ದೂರದಲ್ಲಿ ರೈಲು ನಿಲ್ದಾಣದ ಸಮೀಪದಲ್ಲಿ ಒಂದು ನೂರು ಎಕರೆ ಜಮೀನು ಸಾವಿರ ಪೌಂಡಿಗೆ ಒಂದು ವಾರದಲ್ಲಿ ಕೊಂಡರು.

ರುಸ್ತುಂಜೀ ಅವರ ನೆರವಿನಿಂದ ತಾತ್ಕಾಲಿಕ ತಗಡು ಹೊದಿಕೆಯ ಕಟ್ಟಡಗಳು ಸಿದ್ಧವಾದುವು. ಇದೇ ಫೀನಿಕ್ಸ್ ಆಶ್ರಮ. ಎರಡುವರೆ ಮೈಲಿಯ ಸಮೀಪದ ರೈಲ್ವೆ ನಿಲ್ದಾಣದ ಹೆಸರು ಫೀನಿಕ್ಸ್. ಈ ಕಾರಣದಿಂದ ಆಶ್ರಮವೂ ಇದೇ ಹೆಸರು ತಾಳಿತು. ದರ್ಬಾನಿನಿಂದ ಆಶ್ರಮಕ್ಕೆ 14 ಮೈಲಿ.

'ಇಂಡಿಯನ್ ಒಪಿನಿಯನ್' ವಾರಪತ್ರಿಕೆ ಗಾಂಧಿಯವರ ನೇತೃತ್ವದಲ್ಲಿ ಪ್ರಕಟವಾಗುತ್ತಿತ್ತು. ಗಾಂಧೀಜಿ ಇದರ ಸಂಪಾದಕರಲ್ಲದಿದ್ದರೂ ಪ್ರತಿ ಸಂಚಿಕೆಯಲ್ಲೂ ಇವರ ಲೇಖನ ಇದ್ದೇಇರುತ್ತಿದ್ದುವು. ಮದನಜಿತ್ ಇದರ ಮಾಲೀಕ. ಮನ್‌ಸುಖಲಾಲ್ ನಾಜರ್ ಸಂಪಾದಕ. ದರ್ಬಾನಿಂದ ಹೊರಡುತ್ತಿದ್ದ ಈ ಪತ್ರಿಕೆಯನ್ನು ಫೀನಿಕ್ಸ್ ಆಶ್ರಮದಿಂದಲೇ ಹೊರಡಿಸಲು ನಿಶ್ಚಯಿಸಿದರು. ಮದನಜಿತ್ ಸುಲಭವಾಗಿ ಸಮ್ಮತಿಸಲಿಲ್ಲ. ಮುದ್ರಣಾಲಯದ ಕೆಲಸಗಾರರು ಅಷ್ಟು ದೂರ ಬರಲಾರರೆಂದು ಅವರ ಅಭಿಪ್ರಾಯ. ಎಲ್ಲ ಕೆಲಸಗಾರರೂ ಆಶ್ರಮದಲ್ಲಿಯೇ ಕುಟುಂಬ ಸಹಿತ ಇರಬೇಕೆಂದು ಗಾಂಧಿಯವರ ಯೋಜನೆ. ಗೋವಿಂದಸ್ವಾಮಿ ಮುದ್ರಕ. ಅವನು ಸಂತೋಷದಿಂದ ಬರಲು ಒಪ್ಪಿಕೊಂಡ. ಇತರ ಕೆಲಸಗಾರರು ಆಶ್ರಮದಲ್ಲಿ ಬಂದು ಉಳಿಯಲು ಒಪ್ಪಲಿಲ್ಲ. ಆದರೆ ದರ್ಬಾನಿನಿಂದ ಪ್ರತಿದಿನ ಬಂದು ಹೋಗಲು ಸಮ್ಮತಿಸಿದರು. ಗಾಂಧಿಯವರ ಸಮೀಪ ಬಂಧು ಚಗನಲಾಲ್ ಗಾಂಧಿ ಮುದ್ರಣಾಲಯದ ಕೆಲಸ ನೋಡಿಕೊಂಡು ಆಶ್ರಮದಲ್ಲಿಯೇ ಇರಲು ಒಪ್ಪಿದ. ಇನ್ನೂ ಅವಿವಾಹಿತರಾಗಿದ್ದ ವೆಸ್ಟ್ ಭುಜಕ್ಕೆ ಭುಜ ಕೊಟ್ಟು ಕಟ್ಟಡದ ಕಟ್ಟೋಣ, ಮುದ್ರಣ ಯಂತ್ರ, ಮನೆಯ ಸಾಮಾನುಗಳನ್ನು ದರ್ಬಾನ್ನಿಂದ ಆಶ್ರಮಕ್ಕೆ ಸಾಗಿಸುವುದು ಮೊದಲಾದ ಎಲ್ಲ ಕೆಲಸಗಳನ್ನೂ ಉತ್ಸಾಹದಿಂದ ನಡೆಸಿಕೊಟ್ಟರು.

ಎಣ್ಣೆಯ ಎಂಜಿನ್ ಸಹಾಯದಿಂದ ಮುದ್ರಣಯಂತ್ರ ನಡೆಯುತ್ತಿತ್ತು. ಆದರೆ ಸಮಯ ಬಂದರೆ ಕೈಯಿಂದಲೂ ಕೆಲಸ ನಡೆಸಲು ಅದಕ್ಕೊಂದು ಗಾಲಿಯನ್ನು ಜೋಡಿಸಲಾಗಿತ್ತು. ಫೀನಿಕ್ಸ್ ಆಶ್ರಮದಿಂದ ಮೊದಲ ಸಂಚಿಕೆ ಮುದ್ರಿಸಲು ಎಲ್ಲವೂ ಸಿದ್ಧವಾಯಿತು. ವೆಸ್ಟ್ ಅವರ ಮೇಲ್ವಿಚಾರಣೆಯಲ್ಲಿ ಇನ್ನೇನು ಮುದ್ರಣ ಯಂತ್ರ ಚಾಲೂ ಮಾಡಬೇಕು ಎಂದಾಗ ಶಕ್ತಿಉತ್ಪಾದಕ ಎಣ್ಣೆ ಇಂಜಿನ್ ಮುಷ್ಕರ ಹೂಡಿತು. ಕೆಲಸ ಮಾಡಲು ನಿರಾಕರಿಸಿತು. ಎಂಜಿನ್ ಸರಿಪಡಿಸಲು ತಮ್ಮ ಎಲ್ಲ ಬುದ್ಧಿವಂತಿಕೆ ವೆಸ್ಟ್ ವ್ಯಯ ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ತಮ್ಮ ಪ್ರಯತ್ನವೆಲ್ಲಾ ವಿಫಲಗೊಂಡಿತಲ್ಲ ಎಂಬ ದುಃಖ ತುಂಬಿಬಂದು ಕಣ್ಣೀರು ಸುರಿಸುತ್ತಾ ಗಾಂಧಿಯವರಲ್ಲಿಗೆ ಬಂದರು.

ಎಂಜಿನ್ ಕೆಲಸ ಮಾಡದಿದ್ದರೆ ಬೇರೆ ಪ್ರಯತ್ನ ಮಾಡಬೇಕಷ್ಟೆ. ಗಾಲಿ ತಿರುಗಿಸಿ ಮುದ್ರಣಯಂತ್ರ ನಡೆಸಬಹುದಲ್ಲ ಎಂದರು ಗಾಂಧೀಜಿ. ಗಾಲಿ ತಿರುಗಿಸಲು

ನಾಲ್ವರು ಬೇಕು. ಪ್ರಯಾಸದ ಕೆಲಸ. ಪಾಳಿಯಲ್ಲಿ ಕೆಲಸ ಮಾಡಬೇಕು. ಎಲ್ಲಿದ್ದಾರೆ ಜನ. ಇರುವ ಮರ ಕೆಲಸಗಾರರೂ ದಣಿದಿದ್ದಾರೆ ವೆಸ್ಟ್ ಎಂದರು. ಅದನ್ನು ನನಗೆ ಬಿಡಿ ಎಂದು ವೆಸ್ಟ್ ಅವರನ್ನು ಸಮಾಧಾನಗೊಳಿಸಿ, ಮರಕೆಲಸಗಾರರು ಮಲಗಿದ್ದಲ್ಲಿಗೆ ಹೋಗಿ ಅವರನ್ನು ಗಾಂಧೀಜಿ ಎಬ್ಬಿಸಿದರು. ಚಕ್ರ ತಿರುಗಿಸಲು ಅವರ ಸಹಾಯ ಕೋರಿದರು. ಸಂಕಟ ಸಮಯದಲ್ಲಿ ನೆರವಾಗದ ಬಾಳು ವ್ಯರ್ಥ. ನಾವು ಗಾಲಿ ತಿರುಗಿಸಿ ಯಂತ್ರ ಚಾಲೂ ಮಾಡುತ್ತೇವೆ. ತಾವು ವಿಶ್ರಾಂತಿ ಪಡೆಯಿರಿ ಎಂದರು ಗಾಂಧಿಯವರಿಗೆ ಆ ಬಡಗಿಗಳು. ಗಾಂಧೀಜಿ ಒಪ್ಪಲಿಲ್ಲ. ತಾವೂ ಅವರೊಡನೆ ಸೇರಿ ಕೊಂಡು ಪಹಳಿಯಲ್ಲಿ ಕೆಲಸ ಮಾಡಿದರು. ತಾನು ಒಡೆಯನೆಂದು ಮಲಗಲು ಹೋಗ ಲಿಲ್ಲ. ಬೆಳಗಿನ ಏಳು ಘಂಟೆಯವರೆಗೂ ಕೆಲಸ ಸಾಗುತ್ತಲೇ ಇತ್ತು. ಆದರೂ ಮುದ್ರಣ ಕೆಲಸ ಮುಗಿದಿರಲಿಲ್ಲ. ಇನ್ನೂ ಹಾಳೆಗಳು ಉಳಿದಿದ್ದವು. ಎಂಜಿನಿಯರನ್ನು ಎಬ್ಬಿಸಿ ಎಣ್ಣೆಯ ಯಂತ್ರ ಚಾಲು ಮಾಡಲು ಸಾಧ್ಯವೇ ಒಂದು ಕೈ ನೋಡಿ ಎಂದರು ಗಾಂಧೀಜಿ. ವೆಸ್ಟ್, ಎಂಜಿನ್ ಮುಟ್ಟುತ್ತಲೇ ಗುಯ್‌ಗುಟ್ಟುತ್ತಾ ನಿದ್ರಿಸುತ್ತಿದ್ದ ಯಂತ್ರ ಕೆಲಸಕ್ಕೆ ತೊಡಗಿತು. ಎಲ್ಲರೂ ಅಚ್ಚರಿಯಿಂದ ಚಪ್ಪಾಳೆ ತಟ್ಟಿದರು. ಸ್ವಲ್ಪ ಕಾಲದಲ್ಲೇ ಮುದ್ರಣ ಮುಗಿಯಿತು. ಪತ್ರಿಕೆಯನ್ನು ಪ್ಯಾಕ್ ಮಾಡಿ ಚಂದಾದಾರ ರಿಗೆ ಕಳುಹಿಸುವುದರಲ್ಲೂ ಗಾಂಧೀಜಿ ನೆರವಾದರು. ಭಗವಂತ ನಮ್ಮ ಸಾಮರ್ಥ್ಯ ಪರೀಕ್ಷಿಸುವುದಕ್ಕೆ ಎಂಜಿನ್ ನಡೆಯಲು ಅವಕಾಶ ಕೊಡಲಿಲ್ಲವೇನೋ ಎಂದು ಸಮಾಧಾನ ತಂದುಕೊಂಡರು. ಪ್ರಾಮಾಣಿಕ ನಿಚ್ಚಳ ಶ್ರಮ ಎಂದಿಗೂ ಅಸಫಲ ವಾಗದು. ಈ ಪಾಠ ಎಲ್ಲರೂ ಕಲಿತರು. ಉದ್ದೇಶಪೂರ್ವಕ ಎಂಜಿನ್ ಬಳಸು ವುದನ್ನು ತ್ಯಜಿಸಿ ದೇಹಶ್ರಮದಿಂದಲೇ ಮುದ್ರಣ ಕೆಲಸ ನಡೆಸಲು ಪ್ರಾರಂಭಿಸಿದರು. ಫೋನಿಕ್ಸ್ ಆಶ್ರಮದ ದಿನಗಳು ಅತ್ಯಂತ ಉನ್ನತ ನೈತಿಕ ಮಟ್ಟಕ್ಕೆ ಏರಿದ ಸುದಿನ ಗಳಾಗಿದ್ದುವು ಎಂದು ಗಾಂಧೀಜಿ ಆ ದಿನಗಳನ್ನು ಸ್ಮರಿಸುತ್ತಿದ್ದರು.

ಗಾಂಧೀಜಿ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ತಮ್ಮ ಅಡುಗೆ ತಾವೇ ಮಾಡಿಕೊಳ್ಳುತ್ತಿದ್ದರು. ಆಫ್ರಿಕದಲ್ಲಿ ತಮ್ಮ ಬಟ್ಟೆ ಒಗೆದು ಮಡಿಮಾಡಿಕೊಳ್ಳು ವುದು, ಕೂದಲು ಕತ್ತರಿಸಿಕೊಳ್ಳುವುದು ಎಲ್ಲವನ್ನೂ ಸ್ವತಃ ತಾವೇ ಮಾಡಿಕೊಳ್ಳು ತ್ತಿದ್ದರು. ತಾವು ಬ್ಯಾರಿಸ್ಟರ್ ವಕೀಲ, ಕಾಯಕದ ಕೆಲಸಗಳನ್ನು ಮಾಡುವುದು ಮರ್ಯಾದೆಗೆ ಕಡಮೆ ಈ ಬಿಂಕ ಅವರಲ್ಲಿ ಇರಲಿಲ್ಲ. ರಾಟೆ ತಿರುಗಿಸುವುದು ಅವರ ದಿನಚರಿಯ ಯಜ್ಞವಾಗಿತ್ತು.

ಆಫ್ರಿಕಾದಿಂದ ಹಿಂದಿರುಗಿ ಬಂದ ಗಾಂಧೀಜಿ ಕಾಂಗ್ರೆಸ್ ಅಧಿವೇಶನದಲ್ಲಿ ಆಫ್ರಿಕಾದ ಭಾರತೀಯರಿಗೆ ಸಹಾನುಭೂತಿ ವ್ಯಕ್ತಪಡಿಸುವ ನಿರ್ಣಯ ಮಂಡಿಸಲು ಕಲ್ಕತ್ತೆಗೆ ಹೋದರು. ಕಾಂಗ್ರೆಸ್ ಅಧಿವೇಶನ ನೆರೆಯಲು ಇನ್ನೂ ಎರಡು ದಿನ

ಗಳಿದ್ದವು. ಕಾಂಗ್ರೆಸ್ ಕಾರ್ಯದರ್ಶಿ ಭೂಪೇಂದ್ರನಾಥ ಬಸು ಅವರಲ್ಲಿಗೆ ಹೋಗಿ ಸ್ವಯಂಸೇವಕನಾಗಿ ಸೇವೆ ಸಲ್ಲಿಸಲು ತನಗೆ ಅವಕಾಶಕೊಡುವಂತೆ ಕೇಳಿದರು. ಇನ್ನೊಬ್ಬ ಕಾರ್ಯದರ್ಶಿ ಘೋಸಾಲಬಾಬು ಅವರಲ್ಲಿಗೆ ಹೋಗುವಂತೆ ಅವರು ತಿಳಿಸಿದರು. ಗಾಂಧೀಜಿ ಗೋಸಾಲಬಾಬು ಬಳಿಗೆ ಹೋಗಿ, ಏನಾದರೂ ಕೆಲಸ ಕೊಡಿ ಎಂದು ಕೇಳಿದರು. ಗುಮಾಸ್ತನ ಕೆಲಸ ಮಾತ್ರ ಕೊಡಬಲ್ಲೆ, ಮಾಡುವಿಯಾ ಎಂದು ಕೇಳಿದರು ಘೋಸಾಲಬಾಬು. "ನನ್ನ ಶಕ್ತಿ ಮೀರದ ಯಾವ ಕೆಲಸವನ್ನಾದರೂ ಮಾಡಲು ಖಂಡಿತವಾಗಿಯೂ ಸಿದ್ಧ" ಎಂದರು ಗಾಂಧೀಜಿ. ಘೋಸಾಲ್‌ಗೆ ಸಂತೋಷವಾಯಿತು ಈ ಉತ್ತರದಿಂದ. ತನ್ನನ್ನು ಸುತ್ತುಗಟ್ಟಿದ್ದ ಸ್ವಯಂಸೇವಕರನ್ನ ನೋಡಿ, "ಈ ತರುಣನ ಉತ್ತರ ಕೇಳಿದಿರಾ? ಇದೀಗ ಸ್ವಯಂಸೇವಕನಲ್ಲಿರಬೇಕಾದ ಗುಣ" ಎಂದರು. ಅಲ್ಲಿ ರಾಶಿಯಾಗಿ ಬಿದ್ದಿದ್ದ ಕಾಗದಪತ್ರಗಳನ್ನು ಗಾಂಧಿಯವರಿಗೆ ಒಪ್ಪಿಸಿ, ಅವೆಲ್ಲವನ್ನೂ ವಿಂಗಡಿಸಿ, ಸರಳ ಉತ್ತರ ಬರೆಯಬೇಕಾದವರಿಗೆ ತಾವೇ ಉತ್ತರಿಸಿ, ಜಟಿಲವಾದುವನ್ನು ತನ್ನ ಗಮನಕ್ಕೆ ತರುವಂತೆ ತಿಳಿಸಿದರು. ಗಾಂಧಿಯವರಿಗೆ ಈ ಕೆಲಸ ತುಂಬ ಸುಲಭವಾಗಿತ್ತು. ಕೆಲವು ಘಂಟೆಗಳಲ್ಲೇ ಕೆಲಸ ಮುಗಿಸಿದರು.

ಇಷ್ಟು ಸಮರ್ಪಕವಾಗಿ ಕೆಲಸ ನಿರ್ವಹಿಸಿದ ಯಾರು ಈ ತರುಣ ಎಂದು ಘೋಸಾಲ್ ಕುತೂಹಲದಿಂದ ಗಾಂಧಿಯವರನ್ನು ಅವರ ಪೂರ್ವೋತ್ತರ ವಿಚಾರಿಸಿದರು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ವಿಮೋಚನೆಗಾಗಿ ದುಡಿಯುತ್ತಿದ್ದ ಸಾಹಸಿ ಈತ ಎಂದು ತಿಳಿದು, ಈ ಅಲ್ಪ ಕೆಲಸವನ್ನು ಗಾಂಧಿಯವರಿಗೆ ಒಪ್ಪಿಸಿದುದಕ್ಕೆ ದುಃಖಿಸಿದರು. "ತಾವು ಹಿರಿಯರು, ದೊಡ್ಡವರು. ನಾನು ಅನುಭವ ರಹಿತ ತರುಣ. ಕಾಂಗ್ರೆಸ್ಸಿನ ಸೇವೆಯಲ್ಲಿ ತಾವು ಮುಪ್ಪಾಗಿರುವಿರಿ. ಕಾಂಗ್ರೆಸ್ಸಿಗೆ ಸೇವೆ ಸಲ್ಲಿಸಲು ಇಷ್ಟು ಅವಕಾಶ ಮಾಡಿಕೊಟ್ಟುದಕ್ಕೆ ನಾನು ತಮಗೆ ಋಣಿ" ಎಂದು ಗಾಂಧೀಜಿ ಘೋಸಾಲಬಾಬು ಅವರನ್ನು ಸಂತೈಸಿದರು.

ಕಾಂಗ್ರೆಸ್ಸಿನ ಸೇವೆಯಲ್ಲಿ ಮುಪ್ಪಾಗಿರುವಿರಿ ಎಂದು ತನ್ನನ್ನು ಹೊಗಳಿದುದಕ್ಕಾಗಿ ಘೋಷಾಲರು ಉಬ್ಬಿಹೋದರು. ಮಿಸ್ಟರ್ ಹ್ಯೂಂ ಸಂಗಡ ಕಾಂಗ್ರೆಸ್ಸಿನ ಸ್ಥಾಪನೆಯಲ್ಲಿ ತಾನೂ ಪಾತ್ರವಹಿಸಿದ್ದುದಾಗಿ ತಿಳಿಸಿದರು. ಷರಟಿನ ಗುಂಡಿ ಹಾಕಿಕೊಳ್ಳುವಷ್ಟು ಬಿಡುವೂ ಕಾಂಗ್ರೆಸ್ ಕಾರ್ಯದರ್ಶಿಯಾದ ತನಗಿಲ್ಲವೆಂದು ಹೇಳಿಕೊಂಡರು. ಅವರ ಆಳು ಗುಂಡಿ ಹಾಕಿ ಕೊಡುತ್ತಿದ್ದ. ಈ ಕೆಲಸವನ್ನೂ ತಾನು ಮಾಡಲು ಗಾಂಧೀಜಿ ಸಂತೋಷದಿಂದ ಒಪ್ಪಿಕೊಂಡರು.

ಫೋನಿಕ್ಸ್ ಆಶ್ರಮದ ಜೀವನ ಆದಷ್ಟು ಸರಳ ಮತ್ತು ಸ್ವಾವಲಂಬಿಯಾಗಿ ಮಾಡಿದ್ದರು ಗಾಂಧೀಜಿ. ಗಿರಣಿಯ ಹಿಟ್ಟು ರೊಟ್ಟಿ ಮಾಡಲು ಬಳಸದೆ ಮನೆಯಲ್ಲೇ

ಬೀಸುಕಲ್ಲಿನಲ್ಲಿ ಗೋಧಿ ಬೀಸಿ ಹಿಟ್ಟು ಮಾಡಿಕೊಳ್ಳುವರು. ಇದು ಕಬ್ಬಿಣದ ಬೀಸು ಕಲ್ಲು. ಒಬ್ಬರಿಗೆ ಭಾರ, ಇಬ್ಬರಿಗೆ ಹಗುರ. ಗಾಂಧೀ ಮತ್ತು ಪೋಲಕ್ ತಾವೇ ಹಿಟ್ಟು ಮಾಡಿಕೊಡುವರು. ಕೆಲವೊಮ್ಮೆ ಕಸ್ತೂರಿಬಾ ಮತ್ತು ಶ್ರೀಮತಿ ಪೋಲಕ್ ಗೋಧಿ ಬೀಸುವರು. ಮಕ್ಕಳಿಗೆ ಇದೊಂದು ಚಲ್ಲಾಟ. ಖುಷಿಯಾದಾಗ ತಾವೂ ಕೈ ಜೋಡಿಸಿ ಬೀಸುವರು.

ಮನೆ ಕೆಲಸಕ್ಕೆ ಒಬ್ಬ ಆಳು. ಇವನೂ ಗಾಂಧೀ ಬಳಗವಾಗಿ ಸಂಸಾರದಲ್ಲಿ ಕೂಡಿಕೊಂಡು ಇರುತ್ತಿದ್ದ. ಪೌರಸಭೆಯ ನೌಕರ ಮಲ ತೆಗೆದುಕೊಂಡು ಹೋಗು ತ್ತಿದ್ದ. ಗಾಂಧೀ ಮತ್ತು ಅವರ ಮಕ್ಕಳು ಪಾಯಿಖಾನೆ ಸ್ವತಃ ಸ್ವಚ್ಛಗೊಳಿಸುವರು. ಇದರಿಂದ ಪಾಯಿಖಾನೆ ಸ್ವತಃ ಸ್ವಚ್ಛಗೊಳಿಸಲು ಗಾಂಧಿಯವರ ಮಕ್ಕಳಿಗೆ ಸಹಜ ವಾಯಿತು. ಈ ಹೇಸಿಗೆಯ ಕೆಲಸ ತಾವು ಮಾಡಲಾಗದು ಎಂಬ ಭಾವನೆಯಿಂದ ಅವರು ಮುಕ್ತರಾಗಿದ್ದರು.

1901ರಲ್ಲಿ ಕಲ್ಕತ್ತ ಕಾಂಗ್ರೆಸ್ಸಿನ ಗಲೀಜು ಸ್ಥಿತಿ ಗಾಂಧಿಯವರನ್ನು ತುಂಬ ದುಃಖಗೊಳಿಸಿತು. ಜನ ಸಿಕ್ಕಿದ ಕಡೆ ಉಗಿಯುವರು. ಎಲ್ಲಂದರಲ್ಲಿ ಮಲ ಮೂತ್ರ ವಿಸರ್ಜನೆ. ಕಟ್ಟಡದ ವರಾಂಡದಲ್ಲೂ ಮೂತ್ರ ವಿಸರ್ಜನೆಗೆ ಹಿಂತೆಗೆಯು ತ್ತಿರಲಿಲ್ಲ. ಪಾಯಿಖಾನೆಯ ದುರ್ನಾಥ ತಡೆಯಲು ಸಾಧ್ಯವಾಗದು. ಎಲ್ಲೆಂದರಲ್ಲಿ ಎಂಜಲು ಎಲೆ, ಕಾಗದ, ಬೀಡಿ, ಸಿಗರೇಟು ತುಣುಕು. ಬಾಳೆಹಣ್ಣಿನ ಸಿಪ್ಪೆಯ ಮೇಲೆ ಕಾಲಿಟ್ಟು ಮುಗ್ಗರಿಸುವವರು ಅದೆಷ್ಟು ಜನವೋ? ಅಂಟು ಜಾಡ್ಯ ಹರಡಲು ಬೇಕಾದ ಎಲ್ಲವೂ ಸಿದ್ಧ. ಹರಡದಿದ್ದುದಕ್ಕೆ ಆಶ್ಚರ್ಯ ಪಡಬೇಕು.

ಇವೆಲ್ಲ ಸಹಿಸಿಕೊಂಡಿರುವುದು ಗಾಂಧೀಯವರಿಗೆ ಸಾಧ್ಯವಿರಲಿಲ್ಲ. ಅಧಿ ವೇಶನಕ್ಕೆ ಬಂದ ಪ್ರತಿನಿಧಿಗಳು ಸ್ವತಃ ಮೈಬಗ್ಗಿಸಿ ಏನನ್ನೂ ಮಾಡದೆ, 'ವಾಲಂಟಿಯರ್, ಸ್ವಯಂಸೇವಕ, ಈ ಕೆಲಸ ಮಾಡು, ಆ ಕೆಲಸ ಮಾಡು' ಎಂದು ಆಜ್ಞಾಪಿ ಸುತ್ತಿರುರವರು. ಪೂರ್ವಭಾವಿ ಶಿಕ್ಷಣವಿಲ್ಲದ ಸ್ವಯಂಸೇವಕರು ಅತ್ತಿತ್ತ ಅಲೆದಾಡು ವುದರಲ್ಲಿಯೇ ಕಾಲ ಕಳೆಯುವರು. ಪಾಯಿಖಾನೆಯ ಗಲೀಜು ತೋರಿಸಿ, ಇದನ್ನು ನಾವೇ ಚೊಕ್ಕಟ ಮಾಡೋಣ ಎಂದು ಗಾಂಧೀಜಿ ಸ್ವಯಂಸೇವಕರನ್ನು ಕರೆದರು. ಇದು ನಮ್ಮ ಕೆಲಸವಲ್ಲ, ಝಾಡಮಾಲಿಯದು ಎಂದು ಯಾರೂ ಈ ಕೆಲಸ ಮಾಡಲೂ ಒಪ್ಪಲಿಲ್ಲ. ಗಾಂಧೀಜಿ ಒಂದು ಪೊರಕೆ ಬೇಡಿ ತಂದು ತಾವು ಬಳಸುತ್ತಿದ್ದ ಪಾಯಿಖಾನೆ ತಾವೇ ಸ್ವಚ್ಛ ಮಾಡಿಕೊಂಡರು. ಇವನೆಂಥ ಪ್ರತಿನಿಧಿ ಎಂದು ಎಲ್ಲರಿಗೂ ಅಚ್ಚರಿ ಮತ್ತು ತಿರಸ್ಕಾರ ಭಾವನೆ.

ಮುಂದಿನ ಅಧಿವೇಶನದಲ್ಲಿ ತೋಡು ಕಕ್ಕಸುಗಳು ಮತ್ತು ಮೂತ್ರಿಗಳು ಬಳಕೆಗೆ ಬಂದುವು. ಮಲ ಮೂತ್ರ ವಿಸರ್ಜನೆ ಮಾಡಿದವರು, ಹಿಡಿಮಣ್ಣು ಅದರ

ಮೇಲೆ ಹಾಕಬೇಕು. ಇದು ವ್ಯವಸ್ಥೆ. ಆದರೆ ಇದನ್ನು ಕೆಲವರು ಮಾಡರು. ಹಿಂದಿನ ಅಧಿವೇಶನಗಳಿಂದ ಪಾಠ ಕಲಿತ ಗಾಂಧೀಜಿ ಬೆಳಗಾಂ ಅಧಿವೇಶನದಲ್ಲಿ ಸ್ವಚ್ಛತೆ ಕಾಪಾಡುವುದಕ್ಕಾಗಿಯೇ ಕಾಕಾ ಕಾಲೇಲ್ಕರರ ನೇತೃತ್ವದಲ್ಲಿ 'ಸಫಾಯಿ ದಸ್ತ' ಏರ್ಪಡಿಸಿದರು. ಈ ತಂಡದವರೆಲ್ಲ ಬೆಂಗಳೂರು ದೇಶೀ ವಿದ್ಯಾಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು. ಬ್ರಾಹ್ಮಣರು. ಬೆಳಗಾವಿಯ ಪುರಸಭೆಯ ನೌಕರರು ಕಾಂಗ್ರೆಸ್ ಬಿಡಾರದ ಸ್ವಚ್ಛತೆ ನೋಡಿಕೊಳ್ಳುತ್ತಿದ್ದರೂ, ಉಸ್ತುವಾರಿ ಮತ್ತು ನೈರ್ಮಲ್ಯ ಕಾಪಾಡಲು ಈ ತಂಡದವರೂ ಶ್ರಮಿಸುತ್ತಿದ್ದರು. ಈ ತಂಡ ಸಲ್ಲಿಸಿದ ಸೇವೆಗೆ ತಮ್ಮ ಉಪಸಂಹಾರ ಭಾಷಣದಲ್ಲಿ ಗಾಂಧೀಜಿ ವಿಶೇಷ ಮೆಚ್ಚುಗೆ ವ್ಯಕ್ತಪಡಿಸಿದರು. ಕಾಂಗ್ರೆಸ್ ನಗರಕ್ಕೆ ವಿಜಯನಗರದ ಹೆಸರು ಇಡಲಾಗಿತ್ತು. ಸ್ವಚ್ಛತೆ ನೋಡಲು ಪ್ರತಿದಿನ ಬೆಳಿಗ್ಗೆ ಸ್ವತಃ ಗಾಂಧೀಜಿ ಅಡ್ಡಾಡಿ ಬರುತ್ತಿದ್ದರು.

ಒಮ್ಮೆ ಸೇವಾಗ್ರಾಮದಲ್ಲಿ ಸ್ವಚ್ಛತೆಯ ಕೆಲಸ ಮಾಡುತ್ತಿದ್ದ ನೌಕರ ಬರಲಿಲ್ಲ. ಈ ಕೆಲಸ ಮಾಡಲು ಪೊರಕೆ, ತೊಟ್ಟಿ, ನೀರು ತೆಗೆದುಕೊಂಡು ಸ್ವತಃ ಗಾಂಧೀಜಿ ಹೊರಟರು. ಗಡಿನಾಡಿನ ಗಾಂಧೀ ಎಂದು ಹೆಸರಾದ ಕೆಂಪು ಅಂಗಿ ತಂಡದ ಅಜಾನುಬಾಹು ಮಹಾನಾಯಕ ಖಾನ್ಅಬ್ದುಲ್‌ಗಫಾರಖಾನರೂ ಜೊತೆಗೂಡಿದರು. ಇವರು ಹೊರಟ ಮೇಲೆ ಕೇಳಬೇಕೆ? ಆಶ್ರಮವಾಸಿಗಳು ನಾನು ತಾನೆಂದು ಮುಂದೆ ನುಗ್ಗಿ ಬಂದರು. ಭಂಗಿಯ ಕೆಲಸ ಸ್ವಲ್ಪದರಲ್ಲೇ ಮುಗಿಯಿತು.

ಸೇವಾಗ್ರಾಮ ಆಶ್ರಮದಲ್ಲಿ ಬಾಪೂಜಿ ಅವರ ಪರ್ಣಕುಟಿಯ ಹಿಂದೆಯೇ ಎಣ್ಣೆಯ ಗಾಣ. ಸಾಸುವೆಯಿಂದ ಎಣ್ಣೆ ತೆಗೆಯುವರು. ಗಾಣಕ್ಕೆ ಸಾಸುವೆ ಹಾಕುವ ಮುನ್ನ ಅದರಲ್ಲಿನ ಕಸಕಡ್ಡಿ, ಕಲ್ಲು ಮಣ್ಣು ಚೊಕ್ಕಟ ಮಾಡುವುದು ಕಸ್ತೂರಿ ಬಾ ಕೆಲಸ. ಇವರಿಗೆ ಕಣ್ಣು ಚೆನ್ನಾಗಿ ಕಾಣುತ್ತಿರಲಿಲ್ಲ. ಆದ್ದರಿಂದ ಆಶ್ರಮಕ್ಕೆ ಹೊಸತಾಗಿ ಸೇರಿಕೊಂಡಿದ್ದ ಮಾಜಿ ಸಿಪಾಯಿ ಬಲವಂತ ಸಿನ್ಹ ಈ ಕೆಲಸವನ್ನು ಒಬ್ಬ ಹೆಣ್ಣು ಕೂಲಿ ಆಳಿಗೆ ಒಪ್ಪಿಸಿದ. ಆಗಿನ ಕಾಲಕ್ಕೆ ಒಂದು ಚೀಲ ಸಾಸುವೆ ಚೊಕ್ಕಟ ಮಾಡಲು ಎರಡರಿಂದ ನಾಲ್ಕು ಆಣೆ ಮಜೂರಿ ಕೊಡಲಾಗುತ್ತಿತ್ತು. ಈ ಕೆಲಸ ಅವಳು ಮಾಡುತ್ತಿದ್ದುದನ್ನು ಬಾಪೂಜಿ ತಮ್ಮ ಗುಡಿಸಿಲಿನಿಂದ ನೋಡಿ ಮುಖ ಸಿಂಡರಿಸಿಕೊಂಡು ದಡದಡನೆ ಓಡಿ ಬಂದು, ಕೆಲಸಗಾರಳ ಕೈಯಿಂದ ಮೊರ ಕಿತ್ತುಕೊಂಡು, ಇವಳಿಗೆ ಯಾರು ಈ ಕೆಲಸ ಒಪ್ಪಿಸಿದ್ದು ಎಂದು ಕೂಗಾಡಿದರು. ಹತ್ತಿರದಲ್ಲಿದ್ದ ಪ್ರಭುದಾಸ ತಾನು ಈ ಕೆಲಸ ಅವಳಿಗೆ ಒಪ್ಪಿಸಿದುದಾಗಿ ಭಯದಿಂದ ಮೆಲ್ಲನೆ ಉಸುರಿದ. ನಾನು ಈ ಕೆಲಸ ಬಾಗೆ ಒಪ್ಪಿಸಿದೆ. ಅವಳು ಮಾಡಬೇಕಾದ ಕೆಲಸವಿದು. ನೀನು ಅದನ್ನು ಮತ್ತೊಬ್ಬಳಿಗೆ ಒಪ್ಪಿಸುತ್ತೀಯ. ನಿಮ್ಮಿಂದ ಆಗದಿದ್ದರೆ ನಾನೇ ಮಾಡುವೆ ಎಂದು ಮೊರ ಆಡಿಸತೊಡಗಿದರು. ಇದೆಲ್ಲವನ್ನೂ ನೋಡುತ್ತಿದ್ದ ಕಸ್ತೂರಿ

ಬಾ, ತಮ್ಮ ಗುಡಿಸಲಿಂದ ಹೊರಬಂದು, ಬಾಪೂಜಿ ಕೈಯಿಂದ ಮೊರ ಕಿತ್ತುಕೊಂಡು, ಇದು ಹೆಂಗಸರ ಕೆಲಸ, ನಿಮ್ಮ ಕೆಲಸ ಮಾಡಲು ಒಳಕ್ಕೆ ಹೋಗಿ ಎಂದು ಚೊಕ್ಕಟ ಮಾಡಲುತಾವೇ ಪ್ರಾರಂಭಿಸಿದರು. ತನಗೆ ಅಲ್ಪವೆಂದು ತೋರಿದ್ದು ಬಾಪೂಜಿಯ ದೃಷ್ಟಿಯಲ್ಲಿ ಮಹತ್ತರವಾಗಿತ್ತು. ಅಣುವು ರಣಿಯಾಗಿಯೂ, ಮಹತ್ತರವು ಅಣು ವಾಗಿಯೂ ಕಂಡೀತು ಮಹಾತ್ಮರಿಗೆ. ಇದು ಮಹಾತ್ಮರ ಲಕ್ಷಣವಲ್ಲವೇ ?

ಅವಧೇಶ, ಬಾಲಿಯಾ ಜಿಲ್ಲೆಯ ತರುಣ. ಕಾಂಗ್ರೆಸ್ ಅಧಿವೇಶನ ನೋಡಲು ಕರಾಚಿಗೆ ಹೋಗಿ ಸ್ವಯಂಸೇವಕನಾಗಿ ಸೇವೆ ಸಲ್ಲಿಸಿದ. ಅಲ್ಲಿಂದ ಊರಿಗೆ ಹಿಂತಿರುಗಿ ಹೋಗಲು ಕೈಯಲ್ಲಿ ಹಣವಿಲ್ಲ. ಸ್ವಲ್ಪ ಹಾದಿ ನಡೆಯುತ್ತ, ಸ್ವಲ್ಪ ದೂರ ರೈಲಿನಲ್ಲಿ ಟಿಕೀಟು ಕೊಳ್ಳದೆ ಪ್ರಯಾಣ ಮಾಡುತ್ತ, ಹಾಗೂ ಹೀಗೂ ವರ್ಧ ತಲುಪಿ, ಸೇವಾ ಗ್ರಾಮಕ್ಕೆ ಬಂದ. ಬಾಪೂಜೀ ಅವರನ್ನು ಭೇಟಿಯಾದ. ತನ್ನ ಸಂಕಟ ತೋಡಿ ಕೊಂಡ. ಹಣವಿಲ್ಲದೆ ಕಾಡಿ ಬೇಡಿ ಊಟ ಮಾಡುತ್ತ ಅಲ್ಲಿಗೆ ಬಂದುದಾಗಿ ತಿಳಿಸಿ, ಊರಿಗೆ ಹಿಂತಿರುಗಲು ಹಣ ಬೇಡಿದ. ಚಟುವಟಿಕೆಯಿಂದ ಕೂಡಿದ್ದ ಈ ತರುಣ ನನ್ನು ನೋಡಿ, ಇಲ್ಲಿ ಉಚಿತ ಊಟ ದೊರೆಯದು, ದುಡಿಯದವನಿಗೆ ಹಣವೂ ಸಿಗದು. ಗಟ್ಟಿಮುಟ್ಟಾದ ಪ್ರತಿಯೊಬ್ಬನೂ ದುಡಿಯಲೇಬೇಕು. ದುಡಿದು ಆರ್ಜಿಸಿ, ಊಟ ಮಾಡಬೇಕು. ಪ್ರತಿಯೊಬ್ಬನಿಗೂ ಉದ್ಯೋಗ ದೊರಕಿಸುವುದು ಸರ್ಕಾರದ ಹೊಣೆ, ಹಾಗೂ ಸಮಾಜದ ಜವಾಬ್ದಾರಿ. ಇಂದು ಆಡಳಿತ ನಡೆಸುತ್ತಿರುವುದು ವಿದೇಶಿ ಸರ್ಕಾರ. ಸರ್ಕಾರ ಮತ್ತು ಸಮಾಜ ಇದಕ್ಕೆ ಸಾಕಷ್ಟು ಗಮನ ಕೊಡುತ್ತಿಲ್ಲ. ಆದರೆ ಆಶ್ರಮಕ್ಕೆ ಬಂದವರಿಗೆ ಕೆಲಸ ನಾನು ನಿರಾಕರಿಸಲಾರೆ. ಹೀಗೆ ಹೇಳಿ ಬಲವಂತಸಿನ್ಹನನ್ನು ಕರೆದು ಅವಧೇಶನಿಗೆ ಏನಾದರೂ ಕೆಲಸ ಮತ್ತು ದಿನಕ್ಕೆ ಎಂಟು ಆಣೆ ಮಜೂರಿ ಕೊಡುವಂತೆ ತಿಳಿಸಿದರು. ಅವಧೇಶ ಅಡುಗೆಮನೆ ಕೆಲಸ ನೋಡಿ ಕೊಳ್ಳಲು ನೇಮಿತನಾದ. ಚಪಾತಿ ಪಲ್ಯ ಮಾಡಲು ಕಲಿತ. ಸುಮಾರು ಒಂದೂ ವರೆ ತಿಂಗಳು ಆಶ್ರಮದಲ್ಲಿ ಉಳಿದು ಟಿಕೀಟು ಕೊಳ್ಳಲು ಸಾಕಷ್ಟು ಹಣ ಸಂಪಾದಿಸಿ ಊರಿಗೆ ಹಿಂತಿರುಗಿದ.

ಯಾವ ಕೆಲಸವೇ ಆಗಲಿ, ಉಪದೇಶ ಮಾಡುವುದಕ್ಕಿಂತ, ಮಾಡಿ ತೋರಿ ದಾರಿ ದರ್ಶನ ನೀಡುವುದು ಮಹಾತ್ಮರ ಕ್ರಮ. ಕಸ್ತೂರಿಬಾ ತನಗೆ ಗುರು ಎಂದು ಅವರು ಹೇಳಿಕೊಳ್ಳುವುದುಂಟು. ಆದರೆ ಎಲ್ಲ ದೃಷ್ಟಿಯಿಂದಲೂ ಕಸ್ತೂರಿಬಾಗೆ ಬಾಪುವೇ ಗುರು. ಅಡುಗೆಮನೆ ಸ್ವಚ್ಛವಾಗಿಡುವುದನ್ನು ಗಾಂಧೀಯವರು ಕಲಿಸಿದ್ದರು. ತಾವೇ ಮುಸುರೆ ಪಾತ್ರೆ ಬೆಳಗಿ ತೋರಿಸಿಕೊಟ್ಟಿದ್ದರು. ಉಗ್ರವಾದಿ ಎಂದು ಹೆಸ ರಾಂತ ಪ್ರೊಫೆಸರ್ ಕೃಪಲಾನಿ ಸೇವಾಗ್ರಾಮ ಆಶ್ರಮಕ್ಕೆ ಶಿಕ್ಷಣ ಪಡೆಯಲು ಬಂದರು. ಮುಸುರೆ ಪಾತ್ರೆ ತಿಕ್ಕುವ ಕೆಲಸ ಒಂದು ದಿನ ಗಾಂಧೀಜಿ ಮತ್ತು ಕೃಪಲಾನಿ ಇಬ್ಬರೂ

ವಹಿಸಿಕೊಂಡರು. ಗಾಂಧೀಜಿ ಈ ಕೆಲಸದಲ್ಲಿ ನುರಿತವರಾಗಿದ್ದರು. ಮಣ್ಣು ಮತ್ತು ನಾರಿನ ನೆರವಿನಿಂದ ಸ್ವಲ್ಪವೇ ನೀರು ಬಳಸಿ ಪಾತ್ರೆ ಸ್ವಚ್ಛಗೊಳಿಸುವುದು ಅವರಿಗೆ ಅಭ್ಯಾಸವಾಗಿತ್ತು. ಆಚಾರ್ಯ ಕೃಪಲಾನಿಯವರಿಗೆ ಈ ವಿಧ್ಯೆ ಬಾರದು. ಅವರ ಮೊಳಕೈವರೆಗೆ ಮಸಿ ಇಳಿದು ಬಿಳಿಯ ಬಣ್ಣದ ಜುಬ್ಬ ಪಂಚೆ ಎಲ್ಲವೂ ಮಸಿಯ ಚುಕ್ಕೆಗಳಾಗಿ, ಕಪ್ಪು ಚುಕ್ಕೆಯ ಚಿರತೆಯಂತೆ ಕಾಣುತ್ತಿತ್ತು.

ಚಂಪಾರಣ್ಯದ ಸತ್ಯಾಗ್ರಹ ಕಾಲದಲ್ಲಿ ಕೃಪಲಾನಿ ಗಾಂಧಿಯವರ ಸಂಗಡ ಇದ್ದರು. ಇವರು ಕ್ರಾಂತಿಕಾರರು, ಹಿಂಸಾ ಪ್ರವೃತ್ತಿಯವರೆಂದು ಪೊಲೀಸರು ತಿಳಿದಿದ್ದರು. ಅಲ್ಲಿನ ಕಲೆಕ್ಟರ್ ಗಾಂಧಿಯವರಲ್ಲಿಗೆ ಬಂದು ನೀವು ಸತ್ಯ ಅಹಿಂಸೆಯ ಪ್ರವಾದಿಗಳು. ಆದರೆ ನಿಮ್ಮ ಜೊತೆ ಇರುವ ಕೃಪಲಾನಿ ಹಿಂಸಾವಾದಿ ಬಂಡಾಯ ಗಾರ ಎಂದು ಪೊಲೀಸ್ ವರದಿಗಳು ತಿಳಿಸುತ್ತವೆ. ತಮ್ಮ ಅಭಿಪ್ರಾಯ ಏನು ಎಂದು ಮಹಾತ್ಮರನ್ನೇ ನೇರವಾಗಿ ಪ್ರಶ್ನಿಸಿದರು. ಮಹಾತ್ಮರು ಯಾವ ವಿಷಯ ವನ್ನೂ ಮರೆಮಾಚದೆ ಸತ್ಯ ನುಡಿಯುವರೆಂಬ ವಿಶ್ವಾಸ ಅವರಿಗಿತ್ತು. "ಕೃಪಲಾನಿ ಓಂದನೇ ನಂಬರ್ ಘಟಿಂಗ. ಬಡಕಲು ಉಪಾಧ್ಯಾಯ. ಅವನ ಪರಿಚಯ ನಿಮಗೆ ಮಾಡಿಕೊಡುತ್ತೇನೆ" ಎಂದು ಹೇಳುತ್ತ, ತಲೆ ಎತ್ತಲೂ ಆಗದೆ ಮುಸುರೆ ತೀಡುತ್ತಿದ್ದ ಕೃಪಲಾನಿಯನ್ನು ಕಲೆಕ್ಟರ್ ಸಾಹೇಬರಿಗೆ ತೋರಿಸಿದರು. ಎಂಥ ಬಂಡಾಯಗಾರ ನನ್ನೂ ತಿದ್ದಿ ವಶವರ್ತಿ ಮಾಡಿಕೊಳ್ಳುವ ಗಾಂಧಿಯವರ ಸಾಮರ್ಥ್ಯ ನೋಡಿ ಕಲೆಕ್ಟರ್ ಆಶ್ಚರಿಯಿಂದತಲೆತೂಗಿ, ಕೃಪಲಾನಿಯವರನ್ನು ಬಂಧಿಸಲು ಬಂದವನು ಹಿಂತಿರುಗಿದ.

ಸೇವಾಗ್ರಾಮದ ತಾಲಿಮಿ ಸಂಘದ ಸಮೀಪದಲ್ಲಿ ಈಗ ಹಣ್ಣಿನ ತೋಟವಿದೆ. ಇಲ್ಲಿ ಕಟ್ಟಡ ಕಟ್ಟಲು ಉದ್ದೇಶಿಸಲಾಗಿತ್ತು. ಆದರೆ ಈ ಪ್ರದೇಶವನ್ನು ಹಣ್ಣಿನ ತೋಟವಾಗಿ ಮಾರ್ಪಡಿಸಬೇಕೆಂದು ಬಲವಂತ ಸಿನ್ಹನ ಬಯಕೆ ಆಗಿತ್ತು. ನೆಲ ಇದಕ್ಕೆ ಸೂಕ್ತವಾಗಿದೆ ಎಂದು ನಾಗಪುರದಿಂದ ಬಂದ ಮಣ್ಣು ಪರೀಕ್ಷಕ ತಜ್ಞ ತಿಳಿಸಿದ. ಇದನ್ನು ತಿಳಿದು ಈ ಪ್ರದೇಶವನ್ನು ಹಣ್ಣಿನ ತೋಟ ಮಾಡಲು ಗಾಂಧೀಜಿ ಒಪ್ಪಿಗೆ ಕೊಟ್ಟರು. ತೋಟಕ್ಕೆ ನೀರು ಅಗತ್ಯವಷ್ಟೆ. ಸಮೀಪದಲ್ಲಿಯೇ ಬಾವಿ ತೋಡಲು ನಿಶ್ಚಯಿಸಲಾಯಿತು. ಇದರ ಪ್ರಾರಂಭೋತ್ಸವ ಬಾಪೂಜಿ ಸೆಪ್ಟಂಬರ್ 9, 1940ರಂದು ನೆರವೇರಿಸಿದರು. ತಮ್ಮ ಮೈಮೇಲಿನ ವಸ್ತ್ರವನ್ನೆಲ್ಲ ಕಳಚಿ, ತುಂಡು ಪಂಚೆ ಉಟ್ಟು, ಗುದ್ದಲಿ ತೆಗೆದುಕೊಂಡು, ಕೂಲಿ ಆಳು ಕೆಲಸ ಮಾಡು ವಂತೆ ಬೆವರು ಸುರಿಸಿ ಗುಂಡಿ ತೋಡಿದರು. ಹದಿನಾರನೆಯ ದಿನ ನೀರು ಚಿಮ್ಮಿತು. ಪರಚುರೆ ಶಾಸ್ತ್ರಿ ವೇದಮಂತ್ರ ಪಠಿಸುತ್ತಿದ್ದಂತೆ, ಬಾಪೂಜಿ ನೀರು ಎತ್ತಿದರು. ಈ ಬಾವಿಯ ನೀರು ಆಶ್ರಮದ ಇತರ ಎಲ್ಲ ಬಾವಿಗಳಿಗಿಂತ ಉತ್ತಮವಾಗಿತ್ತು. ಹಣ್ಣಿನ ಮೊದಲ ಸಸಿಯನ್ನು ಸ್ವಹಸ್ತ ಬಾಪೂಜಿ ನೆಟ್ಟರು.

ಗುಜರಾತ್ ವಿದ್ಯಾಪೀಠದ ಉಪಕುಲಪತಿ ಕಾಕಾ ಕಾಲೇಲ್ಕರ್ ಸೇವಾಗ್ರಾಮದ ಆಶ್ರಮದಲ್ಲಿಯೇ ಇರುತ್ತಿದ್ದರು. ಆಶ್ರಮಕ್ಕೆ ಬಾವಿಯಿಂದ ನೀರು ತರಬೇಕು. ಆಶ್ರಮವಾಸಿಗಳೇ ಈ ಕೆಲಸ ಮಾಡುತ್ತಿದ್ದರು. ಗಾಂಧಿಯವರೂ ನೀರು ಸೇದಿ ಹೊತ್ತು ತರುವರು. ಹೀಗಿರುವಲ್ಲಿ ಬೊಂಬಾಯಿಗೆ ಗಾಂಧೀಜಿ ಹೋಗಿಬಂದರು. ಸರದಿಯಂತೆ ಬೆಳಿಗ್ಗೆ ಗೋಧಿಬೀಸಿ ಹಿಟ್ಟು ಮಾಡಿದ್ದರು. ಪ್ರಯಾಣ ಮತ್ತು ಕೆಲಸದಿಂದ ತುಂಬ ದಣಿದಿದ್ದರು. ತುಂಬ ದಣಿದಿರುವುದರಿಂದ ನೀರು ಸೇದಲು ಬರಬೇಡಿ ಎಂದು ತಿಳಿಸಿ ಹಗ್ಗ ತೆಗೆದುಕೊಂಡು ನೀರು ಸೇದಲು ಕಾಲೇಲ್ಕರ್ ಹೊರಟರು. ಆಶ್ರಮದಲ್ಲಿದ್ದ ದೊಡ್ಡವರು ಚಿಕ್ಕವರು ಎಲ್ಲರನ್ನೂ ಕಲೆ ಹಾಕಿ, ಗಾಂಧಿಯವರಿಗೆ ಒಂದು ಪಾತ್ರೆಯೂ ಸಿಗದಂತೆ ನೀರು ತೆಗೆದುಕೊಂಡು ಹೋಗಲು ವ್ಯವಸ್ಥೆ ಮಾಡಿದರು. ನೀರು ಹೊರಲು ಗಾಂಧಿಯವರಿಗೆ ಅವಕಾಶ ಕೊಡಬಾರದು ಎಂದು ಇವರ ಉದ್ದೇಶ. ಕಾಕಾಜಿ ನೀರು ಸೇದಿ ಎಲ್ಲ ಪಾತ್ರೆಗಳನ್ನೂ ಬಾವಿಯ ಬಳಿ ತುಂಬಿದರು. ಗಾಂಧಿಯವರಿಗೆ ತಾವೂ ನೀರು ಹೊತ್ತು ತರಬೇಕೆಂದು ಆಸೆ. ಆಶ್ರಮದಲ್ಲಿ ಒಂದು ಪಾತ್ರೆಯೂ ಸಿಗಲಿಲ್ಲ. ಬಚ್ಚಲು ಮನೆಗೆ ಹೋದರು. ಅಲ್ಲಿ ಮಕ್ಕಳ ಸ್ನಾನದ ತೊಟ್ಟಿ ಇತ್ತು. ಇದನ್ನು ಯಾರೂ ಗಮನಿಸಿರಲಿಲ್ಲ. ಅದನ್ನು ಹೊತ್ತು ಬಾವಿಯ ಬಳಿಗೆ ಹೋದರು. ಕಾಲೇಲ್ಕರರಿಗೆ ಇದನ್ನು ನೋಡಿ ವಿಸ್ಮಯವಾಯಿತು. ತೊಟ್ಟಿ ಕೆಳಗಿರಿಸಿ ಇದರ ತುಂಬ ನೀರು ಸುರಿ ಎಂದರು. ಉಪಾಯ ಕಾಣದೆ ಕಾಲೇಲ್ಕರ್ ಹಾಗೆಯೇ ಮಾಡಿದರು. ತಲೆಯ ಮೇಲೆ ಇರಿಸು ಎಂದರು. ಹೊರಲಾರದ ಭಾರ. ಆದರೂ ತಲೆಯ ಮೇಲೆ ನೀರು ಹೊತ್ತು ಆಶ್ರಮಕ್ಕೆ ನಡೆದರು. ತನ್ನ ಪಾಲಿನ ಕೆಲಸ ಮಾಡಲೇ ಬೇಕೆಂಬ ಹಟ.

ರಾಮಚಂದ್ರ ವೆಂಕಟೇಶ ವಡವಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿಯಾಗಿದ್ದರು. ಇದಕ್ಕೆ ಮೊದಲು ಗಂಗಾಧರರಾವ್ ದೇಶಪಾಂಡೆ, ಅವರ ಹುದಲಿ ಆಶ್ರಮದಲ್ಲಿ ಪ್ರಮುಖ ಕಾರ್ಯಕರ್ತರಾಗಿ, ಗಂಗಾಧರರಾಯರ ನೇತೃತ್ವದಲ್ಲಿ ಶಿಕ್ಷಣ ಪಡೆದು ಅವರ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು. ರಚನಾತ್ಮಕ ಕಾರ್ಯಗಳಲ್ಲಿ ವಿಶೇಷ ಪರಿಶ್ರಮ ಪಡೆದವರು. ಸತ್ಯಾಗ್ರಹ ಚಳುವಳಿಗಳಲ್ಲಿ ಭಾಗ ವಹಿಸಿ ಅನೇಕ ಸಾರಿ ತುರಂಗವಾಸ ಅನುಭವಿಸಿರುತ್ತಾರೆ. ಉದಾರ ಚರಿತರು, ಸ್ನೇಹಪ್ರಿಯರು. 1920ರಲ್ಲಿ ವಡವಿಯವರು ತಮ್ಮ ಗೆಳೆಯರಾದ ಹನುಮಂತ ಜೋಶಿ ಮತ್ತು ನರಸಿಂಹ ದೇಸಾಯಿ ಕುಲಕರ್ಣಿ ಅವರೊಂದಿಗೆ ಸಾಬರಮತಿ ಆಶ್ರಮಕ್ಕೆ ಓಡಿ ಹೋದ ಅನುಭವ ಗಾಂಧೀ ಮತ್ತು ಕರ್ನಾಟಕ ಗ್ರಂಥದಲ್ಲಿ ಕಥಾರೂಪದಲ್ಲಿ ಬರೆದಿರುತ್ತಾರೆ. ವಿದ್ಯಾರ್ಥಿ ದೆಸೆಯಲ್ಲಿದ್ದ ಈ ಮೂವರು ತರುಣರೂ ಸಾಬರಮತಿಗೆ ಹೋಗಿ ಗಾಂಧಿಯವರನ್ನು ಸಂದರ್ಶಿಸಿದರು. ಕರ್ನಾಟಕದಿಂದ ಬಂದವರೆಂದು ಗಾಂಧೀಜಿ ಇವರನ್ನು ಕಾಲೇಲ್ಕರಲ್ಲಿಗೆ ಕಳುಹಿಸಿದರು. ಕನ್ನಡಿಗರೇ ಆದ ಕಾಕಾ

ಕಾಲೇಲ್ಕರರು, ಕನ್ನಡಿಗರೆಂದು ಈ ಉತ್ಸಾಹಿ ತರುಣರಿಗೆ ವಿಶೇಷ ಆದರವೇನೂ ತೋರಿಸಲಿಲ್ಲ. "ನೀವು ಓಡಿ ಬಂದವರು. ನಿಮ್ಮ ಸ್ವಭಾವ ನಮಗೆ ಗೊತ್ತಿಲ್ಲ. ನಾಲ್ಕಾರು ತಿಂಗಳು ನಿಮ್ಮ ಕಾಲ ಮೇಲೆಯೇ ನೀವು ನಿಂತಿರಾದರೆ ನಿಮ್ಮ ಸ್ವಭಾವ ನೋಡಿಕೊಂಡು ನಿಮಗೆ ಸಹಾಯ ಮಾಡುವೆವು" ಎಂದು ತಿಳಿಸಿದರು. ಆಶ್ರಮಕ್ಕೆ ಬಂದರೆ ದುಡಿದು ಉಣಬೇಕು, ಈ ಭಾವನೆ ತರುಣರಿಗೆ ವೇದ್ಯವಿರಲಿಲ್ಲ. ಹಿಂದೀ ತಿಳಿಯದ ಇವರು ಏನಾದರೂ ಕೆಲಸ ಕೊಡುವಂತೆ ಕಾಕಾ ಸಾಹೇಬರನ್ನೇ ಕೋರಿದರು. ದೊರೆತ ಉತ್ತರ ಎದೆ ಒಡೆಯುವಂತಿತ್ತು. ರೈಲ್ವೆ ಸ್ಟೇಷನ್ನಿಗೆ ಹೋಗಿ ಹಮಾಲಿ ಕೆಲಸ ಮಾಡಿ, ಮುನಿಸಿಪಾಲಿಟಿಗೆ ಹೋಗಿ ಭಂಗಿ ಕೆಲಸ ಬೇಡಿ ಮಾಡಿ ಎಂದರು. ಹುಡುಗರ ಉತ್ಸಾಹ ಸಿಡಿದು ಹೋಯಿತು. ಮ್ಲಾನವಾದ ಇವರ ಮುಖ ನೋಡಿ, ನವಜೀವನ ಮುದ್ರಣಾಲಯಕ್ಕೆ ಹೋಗಿ ಸ್ವಾಮಿ ಆನಂದರನ್ನು ಭೇಟಿಯಾಗುವಂತೆ ಚೀಟಿ ಬರೆದು ಕೊಟ್ಟರು. ಓಡಿಬಂದಿರುವ ಈ ತರುಣರಿಗೆ ಬಿನ್ ಜವಾಬ್ದಾರಿಯ ಕೆಲಸವಿದ್ದರೆ ಕೊಡಿ ಎಂದು ಅದರ ಒಕ್ಕಣೆ.

ಸ್ವಾಮಿ ಆನಂದರು ಲೋಕಮಾನ್ಯರಿಂದ ಪ್ರಭಾವಿತರಾಗಿ ಮನೆಬಿಟ್ಟು ದೇಶ ಕಾರ್ಯದಲ್ಲಿ ತೊಡಗಲು ಓಡಿಬಂದ ವ್ಯಕ್ತಿ. ಆದ್ದರಿಂದ ಸಹಜ ಅನುಕಂಪ ಈ ತರುಣರಲ್ಲಿ ಅವರಿಗೆ. ಶಿಕ್ಷಣ ಮುಂದುವರಿಸಲು ನೆರವು ನೀಡುವುದಾಗಿಯೂ ಕೆಲಸ ಕೊಡಿಸುವುದಾಗಿಯೂ ಭರವಸೆ ನೀಡಿದರು. ಪ್ರತಿಯೊಬ್ಬರಿಗೂ 25 ಗುಜರಾತಿ ನವಜೀವನ ಪತ್ರಿಕೆಯ ಪ್ರತಿಗಳನ್ನು ಕೊಟ್ಟು, ಐದು ಬಿಲ್ಲೆಗೆ ಒಂದರಂತೆ ಪ್ರತಿಗಳನ್ನು ಪೇಟೆಯ ಬೀದಿಗಳಲ್ಲಿ ಕೂಗಿ ಮಾರುವಂತೆ ತಿಳಿಸಿದರು. ಇದರಿಂದ ದಿನಕ್ಕೆ ನಾಲ್ಕಾಣೆ ಸಂಪಾದನೆ. ಇದರಿಂದಲೇ ದಿನಕಳೆಯಬೇಕು. ಹೊಟ್ಟೆ ತುಂಬಿಸಿಕೊಳ್ಳಬೇಕು. ಚುರುಮುರಿ, ಸೇಂಗಾ ಸೇವಿಸಿ ಎರಡುದಿನ ಕಳೆದರು.

ದುಡಿಮೆ ಇಷ್ಟರಿಂದಲೇ ಮುಗಿಯಲಿಲ್ಲ. ರಾತ್ರಿ ಎಂಟು ಗಂಟೆಯಿಂದ ಬೆಳಗಿನ 4 ಗಂಟೆಯುವರೆಗೂ, ನಾಲ್ಕು ಗಂಟೆಗಳ ಪಾಳಿಯಲ್ಲಿ ಕೆಲಸ. ವಡವಿಯವರನ್ನು ಮುದ್ರಣ ಅಕ್ಷರದ ಮೊಳೆ ಜೋಡಿಸುವ ಕೆಲಸಕ್ಕೂ ಹಚ್ಚಿದರು. ಮುಂಜಾನೆ ಬೀದಿಗಳಲ್ಲಿ ಪತ್ರಿಕೆ ಮಾರುವುದು, ಮಧ್ಯಾಹ್ನ ಕಂಪೋಜಿಂಗ್, ರಾತ್ರಿ ಮುದ್ರಿತವಾದ ಪತ್ರಿಕೆಗಳ ಹಾಳೆ ಜೋಡಿಸುವುದು. ಈ ರೀತಿಯ ವೈ ಮುರಿವ ಕೆಲಸ. ವಡವಿ ಶಾಲೆಗೆ ಸೇರಿದರು. ಬೆಳಗಿನಿಂದ ಸಂಜೆಯುವರೆಗೆ ಶಾಲೆ. ಅನಂತರ ರಾತ್ರಿ 10 ಗಂಟೆಯುವರೆಗೂ ಮುದ್ರಣಾಲಯದಲ್ಲಿ ಕಂಪೋಜಿಂಗ್. ದಿನಗೂಲಿ ನಾಲ್ಕಾಣೆಯಿಂದ ಎಂಟಾಣೆ. ಕಂಪೋಜಿಂಗ್ ಕೆಲಸದಲ್ಲಿ ಸಾಕಷ್ಟು ಪ್ರಾವೀಣ್ಯತೆ ಪಡೆದ ಮೇಲೆ ಒಂದು ರೂಪಾಯಿ ಈ ರೀತಿ ವೇತನ ದೊರೆಯಲಾರಂಭಿಸಿತು.

ವಡವಿಯರ ಉಡುಪು ಹರಿದಿದ್ದುದನ್ನು ನೋಡಿ ಜೀಠಾಲಾಲ್ ಸೇಠರು ಇವರಿಗೆ ಉಚಿತ ಉಡುಪು ಕೊಡಲು ಬಂದಾಗ ಉಜ್ವಲ ದೇಶಭಕ್ತನಾಗಲು ಮನೆ ಬಿಟ್ಟು ಬಂಧವನನ್ನು ಭಿಕಾರಿಯಾಗಿ ಮಾಡಬೇಡಿರೆಂದು ಈ ಉಚಿತ ಕೊಡುಗೆ ಸ್ವೀಕರಿಸಲು ಕಾಲೇಲ್ಕರರು, ವಡವಿ ಅವರಿಗೆ ಅವಕಾಶ ಕೊಡಲಿಲ್ಲ.

ಅಹಮದಾಬಾದಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಾಮಿ ಆನಂದರ ಸಲಹೆಗೆ ವಿರುದ್ಧವಾಗಿ ಸ್ವಯಂಸೇವಕರಾಗಿ ಹೋದುದರಿಂದ ವಡವೀಜಿ ನವಜೀವನ ಮುದ್ರಣಾಲಯದ ಕೆಲಸ ಕಳೆದುಕೊಂಡರು. ಮತ್ತೆ ನಿರುದ್ಯೋಗಿ ಆದರು. ನವಜೀವನದ ಆಶ್ರಯ ಕಳೆದುಕೊಂಡರು. ಬೀದಿಯಲ್ಲಿ ಮಲಗುವ ಪಾಡಿಗೆ ಇಳಿಯ ಬೇಕಾಯಿತು. ಇವುಗಳೆಲ್ಲದರ ಪರಿಣಾಮವಾಗಿ ವಿಷಮಶೀತ ಜ್ವರಕ್ಕೆ ಗುರಿಯಾದರು. ಹಾಸಿಗೆ ಹಿಡಿದರು. ನೋಡಿಕೊಳ್ಳುವವರು ಯಾರೂ ಇಲ್ಲ.

ವಡವಿಯವರು ಪ್ರತಿ ಸಂಜೆಯ ಪ್ರಾರ್ಥನೆಗೆ ಆಶ್ರಮಕ್ಕೆ ಹೋಗಿ ಗಾಂಧಿಯವರನ್ನು ನೋಡುವ ಪದ್ಧತಿ. ಒಂದು ತಿಂಗಳಿಂದಲೂ ಆಶ್ರಮಕ್ಕೆ ಹೋಗಿರಲಿಲ್ಲ. ಗಾಂಧಿಯವರ ಗಮನಕ್ಕೆ ಇದು ಬಂದಿತು. ಸ್ವಾಮಿ ಆನಂದರಿಂದ ನಡೆದ ಎಲ್ಲ ಸಂಗತಿಯನ್ನೂ ಆಮೂಲಾಗ್ರವಾಗಿ ಕೇಳಿ ತಿಳಿದರು. ಯಃಕಶ್ಚಿತ್ ಹುಡುಗನೆಂದು ಉದಾಸೀನತೆ ತೋರಿಸದೆ, ರಾಮಚಂದ್ರವಡವಿ ಅವರ ಸುಶ್ರೂಷೆ ಮತ್ತು ಔಷಧೋಪಚಾರಕ್ಕೆ ಯೋಗ್ಯವ್ಯವಸ್ಥೆ ಮಾಡಿಸಿದರು. ದುಡಿದು ಜೀವಿಸಬೇಕು. ಉಚಿತವಾಗಿ ದೊರೆತುದನ್ನು ಸ್ವೀಕರಿಸಲಾಗದು. ಶಿಸ್ತಿನಿಂದ ಬಾಳಬೇಕು. ಈ ಪಾಠಗಳನ್ನು ರಾಮಚಂದ್ರ ವಡವಿ ಕಲಿತರು. ಅಲ್ಲದೆ ಸಾಮಾನ್ಯ ಕೆಲಸಗಾರನಾದರೂ ಅವರ ಬಗ್ಗೆ ಮಹಾತ್ಮರ ಕಳಕಳಿ ಮತ್ತು ಕಾಳಜಿ ಸ್ವಯಂ ಅನುಭವದಿಂದ ಅರಿತರು.

ದುಡಿಯದೆ ಉಣುವವನು ಕಳ್ಳ. ಈ ಭಾವನೆ ಆಶ್ರಮದಲ್ಲಿ ಎಷ್ಟು ಮಟ್ಟಿಗೆ ಬೆಳೆದಿತ್ತು ಎಂಬುದಕ್ಕೆ ಚೊಟ್ಟೆಲಾಲ್ ಜೈನ ಅವರು ಆತ್ಮಹತ್ಯೆ ಮಾಡಿಕೊಂಡ ದುಃಖಕರ ದುರ್ದೈವೀ ಪ್ರಸಂಗವೇ ಸಾಕು. ಚೊಟ್ಟೆಲಾಲ್ ಇನ್ನೂ ಬಾಲ್ಯಾವಸ್ಥೆಯಲ್ಲೇ ಇದ್ದಾಗ ಬಾಂಬು ಪಿತೂರಿಯ ಮೊಕದ್ದಮೆಯಲ್ಲಿ 1915ರಲ್ಲಿ ಬಂಧಿತನಾಗಿ, 1917 ರಲ್ಲಿ ಅಪವಯಸ್ಕನೆಂದು ಬಿಡುಗಡೆಯಾದ. ಬಂಧನದಿಂದ ಬಿಡುಗಡೆಯಾಗಿ ಸಾಬರಮತಿ ಆಶ್ರಮಕ್ಕೆ ಬಂದ. ಅಂದಿನಿಂದ ಆಶ್ರಮದಲ್ಲಿಯೇ ಉಳಿದು ಆಶ್ರಮದ ಕೆಲಸ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ನಿಪುಣನಾದ. ಅಡುಗೆಮನೆ ಕೆಲಸ, ಭಂಗೀ ಕೆಲಸ, ನೂಲುವುದು, ನೇಯುವುದು, ಲೆಕ್ಕವಿಡುವುದು, ಭಾಷಾಂತರ ಹೀಗೆ ವಹಿಸಿಕೊಟ್ಟ ಸಮಗ್ರ ಕೆಲಸಗಳನ್ನೂ ತೃಪ್ತಿಕರವಾಗಿ ಮಾಡುತ್ತಿದ್ದ. ಇವನ ಕಾರ್ಯತತ್ಪರತೆಯಿಂದ ಆಕರ್ಷಿತರಾದ ಜಮುನಾಲಾಲಜಿ ಇವನನ್ನು ವರ್ಧಾಗೆ ಕರೆದು ತಂದು ಗ್ರಾಮ ಕೈಗಾರಿಕೆ ವಿಭಾಗಕ್ಕೆ ಶಿಕ್ಷಕನಾಗಿ ನೇಮಿಸಿದರು. ಮಗನವಾಡಿ ಮತ್ತು ಸೇವಾಗ್ರಾಮ

ದಲ್ಲೂ ಇವನು ಸೇವೆ ಸಲ್ಲಿಸಿದ. ಜೇನು ಸಾಕುವುದು ಇವನ ಅಂತ್ಯದ ಪ್ರಯೋಗವಾಯಿತು. ಜೇನು ಹುಳುವಿನ ಗೂಡು ಹುಡುಕಿಕೊಂಡು ಅಲೆಯುತ್ತಿದ್ದ. ಈ ಅಲೆದಾಟದ ಪರಿಣಾಮವಾಗಿ ವಿಷಮಶೀತ ಜ್ವರ ಕಾಣಿಸಿಕೊಂಡು ಹಾಸಿಗೆ ಹಿಡಿದ. ತಾನು ಕಾಯಿಲೆಯಾಗಿ ಇನ್ನೊಬ್ಬರಿಗೆ ಭಾರವಾದೆನಲ್ಲ. ಕಾಯಕ ಮಾಡದೆ ಉಣಬೇಕಾಗಿ ಬಂದಿತಲ್ಲ ಎಂಬ ಮನೋವೇದನೆ ಜೊಟ್ಟಲಾಲನನ್ನು ಬಹಳ ಬಾಧಿಸತೊಡಗಿತು. ಇದಕ್ಕಿಂತ ಪ್ರಾಣ ಕಳೆದುಕೊಳ್ಳುವುದೇ ಲೇಸು ಎನಿಸಿತು. ಇನ್ನೊಬ್ಬರಿಗೆ ಶ್ರಮ ಕೊಟ್ಟು ಬದುಕುವುದಕ್ಕಿಂತ ಪ್ರಾಣ ಬಿಡುವುದೇ ಲೇಸೆಂದು ಕಾಗದ ಬರೆದಿಟ್ಟು ಸೆಪ್ಟಂಬರ್ 1937ರಲ್ಲಿ ಮಗನವಾಡಿಯ ಬಾವಿಯೊಂದರಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡ. ಬಾಪೂಜಿ ಅವರಿಗೂ ತನ್ನ ಮನೋವೇದನೆಯ ವಿಷಯ ಅವನು ತಿಳಿಸಲೇ ಇಲ್ಲ. ತಿಳಿಸಿದ್ದರೆ ಖಂಡಿತವಾಗಿ ಅವನನ್ನು ಸಾಂತ್ವವನಗೊಳಿಸಿ ಪ್ರಾಣ ಕಳೆದುಕೊಳ್ಳಲು ಬಿಡುತ್ತಿರಲಿಲ್ಲ. ಹಿಂದಿ, ಗುಜರಾತಿ, ಮರಾಠಿ, ಬಂಗಾಲಿ, ತಮಿಳು, ಸಂಸ್ಕೃತ, ಇಂಗ್ಲೀಷ್ ಈ ಭಾಷೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದ. ಆಶ್ರಮದ ಪ್ರತಿಯೊಂದು ವಿಭಾಗದ ಕೆಲಸವನ್ನೂ ತೃಪ್ತಿಕರವಾಗಿ ಮಾಡುತ್ತಿದ್ದ. ವನಿತಾಶಾಸ್ತ್ರ, ನೆಯ್ಗೆಕಸುಬಿನ ಪುಸ್ತಕದ ರಚನೆಯಲ್ಲಿ ದಿವಂಗತ ಮಗನಲಾಲನಿಗೆ ನೆರವಾಗಿದ್ದ. ಇಂಥ ನಿಷ್ಠಾವಂತ ಕಾರ್ಯಕರ್ತನನ್ನು ಕಳೆದು ಕೊಂಡುದು ತನ್ನ ದೌರ್ಭಾಗ್ಯವೆಂದು ಸೆಪ್ಟಂಬರ್ 11, 1937 ಹರಿಜನ ಸಂಚಿಕೆಯಲ್ಲಿ ತಮ್ಮ ದುಃಖಾಶ್ರು ಗಾಂಧೀಜಿ ಅರ್ಪಿಸಿರುತ್ತಾರೆ.

ಉತ್ಸಾಹಿ ತರುಣರು ಮಹಾತ್ಮರ ಸಾನ್ನಿಧ್ಯದಲ್ಲಿ ದೇಶಸೇವೆಗಾಗಿ ಶಿಕ್ಷಣ ಪಡೆಯಲು ಅವರ ಆಶ್ರಮಕ್ಕೆ ಓಡಿಹೋಗುತ್ತಾರೆ. ವಿದ್ಯಾರ್ಥಿ ನಿಲಯಗಳಂತೆ ಅಲ್ಲಿಯ ಜೀವನಕ್ರಮ ಎಂಬ ಭಾವನೆ ಅವರಿಗೆ. ಆದರೆ ಅಲ್ಲಿಯ ಕಟ್ಟುನಿಟ್ಟಾದ ಸಂಯಮಿ ಸರಳ ಜೀವನ ಅರಿಯಲು ಬಹು ದಿನಗಳು ಬೇಕಾಗುವುದಿಲ್ಲ. ಕಾಫಿ, ಚಹ, ಬೀಡಿ, ಸಿಗರೇಟು, ಬಗೆಬಗೆಯ ರುಚಿಕರ ಆಹಾರ, ತಿಂಡಿತಿನಿಸು, ಜೀವನದ ಸುಖಭೋಗ ರಹಿತ ದಿನಚರಿ ನಡೆಸುವುದು ಕಠಿಣವೆಂದು ಗ್ರಹಿಸಿ ಅಲ್ಲಿಂದ ಕಾಲ್ತೆಗೆದವರು ಅದೆಷ್ಟು ಜನವೋ? ಉಷಃಕಾಲ 4 ಘಂಟೆಯಿಂದ ರಾತ್ರಿ 9 ಘಂಟೆವರೆಗೆ ಅವಿರತ ಕಾರ್ಯಕ್ರಮ. ಬೆಳಿಗ್ಗೆ 4–20ಕ್ಕೆ ಸಾಮೂಹಿಕ ಪ್ರಾರ್ಥನೆ. ಆಶ್ರಮದ ಹೆಂಗಸರು ಮಕ್ಕಳು ಎಲ್ಲರೂ ಕಲೆಯುವರು. ತೂಕಡಿಸುವವರನ್ನು ಎದ್ದು ನಿಲ್ಲುವಂತೆ ಮಾಡುವರು. ಸೋಮಾರಿಯಾಗಿ, ಚಪಲಚಿತ್ತನಾಗಿ ಕೂಡುವ ಅವಕಾಶವಿಲ್ಲ. ಬೆಳಗಿನ ಉಪಹಾರ 6 ರಿಂದ 7. ಊಟ 11 ಘಂಟೆಗೆ ಸರಿಯಾಗಿ. 15 ನಿಮಿಷಕ್ಕೆ ಗಂಟೆ ಆಗುವುದು. ಆಗ ಎಲ್ಲಕೆಲಸಗಳನ್ನು ನಿಲ್ಲಿಸಿ, ತಟ್ಟೆ ಬಟ್ಟಲು ತೆಗೆದುಕೊಂಡು ಎಲ್ಲರೂ ಊಟದ ಮನೆಗೆ ಬರುವರು. ತಡವಾಗಿ ಬಂದವರು ಎರಡನೆಯ ಪಂಕ್ತಿಗೆ ಕೂಡಬೇಕು. ಎಲ್ಲರೂ ತಮ್ಮತಮ್ಮ ಸ್ಥಾನಗಳಲ್ಲಿ ಕುಳಿತ ಒಡನೆಯೇ ಮತ್ತೆ

ಗಂಟೆ ಆಗುವುದು. ಊಟದ ಕಾಲದಲ್ಲಿ ಮೌನ ಆಚರಣೆ. ಯಾರೂ ಮಾತನಾಡ ಕೂಡದು. ತಡವಾಗಿ ಬಂದ ಗಾಂಧೀಜಿ ಎಷ್ಟೋ ಸಾರಿ ಮೊದಲ ಪಂಕ್ತಿಗೆ ಕೂಡಲಾರದೆ ಎರಡನೆಯ ಪಂಕ್ತಿಗೆ ಕುಳಿತಿರುವುದುಂಟು. ಸಹನಾವವತು ಶಾಂತಿ ಮಂತ್ರದಿಂದ ಊಟ ಪ್ರಾರಂಭಿಸುವುದು.

ಚಪಾತಿ, ಅನ್ನ, ಬೇಳೆ, ಮಜ್ಜಿಗೆ, ಹಾಲು, ಎಣ್ಣೆ, ತುಪ್ಪ, ಬೆಲ್ಲ. ಹಣ್ಣು, ಬೇಯಿಸಿದ ತರಕಾರಿ. ಇವಕ್ಕೆ ಎಣ್ಣೆ, ಸಾಂಬಾರ ಪದಾರ್ಥಗಳು ಎಂದರೆ ಕಾರ, ಹುಳಿ, ಉಪ್ಪು ಏನೂ ಇಲ್ಲ. ಬೇಕಾದವರು ಉಪ್ಪು ಬಡಿಸಿಕೊಳ್ಳಬಹುದು. ಯಾರಿಗೆ ಯಾವ ಪದಾರ್ಥ ಎಷ್ಟು ಬೇಕೋ ಅಷ್ಟೇ ಬಡಿಸಿಕೊಳ್ಳಬೇಕು. ಚೆಲ್ಲಲಾಗದು. ತಟ್ಟೆ ಬಟ್ಟಲು ಅವರೇ ತೊಳೆದುಕೊಳ್ಳಬೇಕು. ಸಂಜೆಯ ಊಟ 5-30 ಗಂಟೆಗೆ. ಸಂಜೆಯ ಸಾಮೂಹಿಕ ಪ್ರಾರ್ಥನೆ 7ಕ್ಕೆ, ರಾತ್ರಿ 9ಕ್ಕೆ ವಿಶ್ರಾಂತಿ. ದೀಪ ಆರಿಸ ಲಾಗುವುದು. ಮೌನ, ಯಾರೂ ಮಾತನಾಡಲಾಗದು. ಮಲಗುವುದು.

ಆಶ್ರಮದಲ್ಲಿ ಆಳುಗಳಿಲ್ಲ. ಕಸಗುಡಿಸುವುದರಿಂದ ಮೊದಲ್ಗೊಂಡು ಎಲ್ಲ ಕೆಲಸಗಳನ್ನೂ ಆಶ್ರಮವಾಸಿಗಳೇ ಮಾಡಿಕೊಳ್ಳುವರು. ತರಕಾರಿ ಹೆಚ್ಚುವುದು, ಪಾತ್ರೆ ತೊಳೆಯುವುದು, ಅಡುಗೆ ಮಾಡುವುದು, ಬಡಿಸುವುದು, ಎಲ್ಲಕ್ಕೂ ಆಶ್ರಮ ವಾಸಿಗಳೇ ಹೊಣೆ. ಪ್ರತಿಯೊಬ್ಬರೂ ನೂಲಲೇಬೇಕು. ಪ್ರತಿಯೊಬ್ಬರೂ ಎಷ್ಟು ನೂತರೆಂದು ಪುಸ್ತಕದಲ್ಲಿ ಬರೆದಿಡಲಾಗುವುದು. ನೂಲದೆ ಇದ್ದರೆ, ಕಾರಣ ಕೊಡ ಬೇಕು. ಆಹಾರದಲ್ಲಿ ಪ್ರಯೋಗ ನಡೆಯುತ್ತಲೇ ಇರುವುದು. ಆಶ್ರಮವಾಸಿಗಳೇ ಬಾಪು ಅವರ ಪ್ರಯೋಗ ಪಶುಗಳು. ಬೇಯಿಸದ ಕೇವಲ ಹಸಿ ತರಕಾರಿ ತಿನ್ನು ವವರು ಕೆಲವರು. ಕೇವಲ ಹಾಲು ಮಾತ್ರ ಕೆಲವರಿಗೆ. ಚಪಾತಿ ಹಾಲು ಮತ್ತು ಚಪಾತಿ ಹಾಲು ಏನೂ ಇಲ್ಲದ ಕೇವಲ ಬೆಂದ ತರಕಾರಿ ಮಾತ್ರ ಕೆಲವರಿಗೆ. ಮೊಳಕೆ ಒಡೆದ ಗೋಧಿ, ಕಡಲೆ, ಹುರುಳಿ ಇವುಗಳ ಪ್ರಯೋಗ. ಪ್ರಕೃತಿ ಜೀವನ, ಪ್ರಕೃತಿ ಚಿಕಿತ್ಸೆಯ ಪ್ರಯೋಗ. ಅಂತೆಯೇ ಅರಳೆ ಎಕ್ಕುವುದು, ಬತ್ತಿ ಹಂಜಿಮಾಡುವುದು, ನೂಲುವುದು, ನೇಯುವುದು, ಬಡಗಿ, ಕಮ್ಮಾರ, ಚಮ್ಮಾರ ಈ ಉದ್ಯೋಗಗಳ ಪ್ರಯೋಗಗಳು ನಡೆಯುತ್ತಲೇ ಇರುವುವು. ಸ್ವಾಭಾವಿಕವಾಗಿ ಸತ್ತ ದನದ ತೊಗಲಿ ನಿಂದ ಮಾಡಿದ ಮೆಟ್ಟು ಗಾಂಧೀಜಿ ಧರಿಸುವರು. ಪ್ರತಿ ಆಶ್ರಮವಾಸಿಗೂ ತಿಂಗಳಿಗೆ ಐದು ರೂಪಾಯಿ ಮೀರದಂತೆ ವೆಚ್ಚ ಹಿಡಿತದಲ್ಲಿರಬೇಕೆಂದು ಬಾಪೂವಿನ ಗುರಿ. ಪ್ರತಿಯೊಬ್ಬನೂ ತನ್ನ ದಿನಚರಿ ಬರೆಯುವುದು ಕಡ್ಡಾಯ.

ಸೇವಾಗ್ರಾಮದ ಹುಟ್ಟು ಬೆಳವಣಿಗೆ ಬಾಪುವಿನ ಮನದೋಟ ತಿಳಿಸುವ ಒಂದು ಕಥೆ. 1930 ರಲ್ಲಿ ಮಾರ್ಚಿ 12, ರಂದು ಸಾಬರಮತಿ ಆಶ್ರಮದಿಂದ ದಾಂಡಿ ಜೈತ್ರ

ಯಾತ್ರೆ ಗಾಂಧೀಜಿ ಪ್ರಾರಂಭಿಸಿದರು. ಸ್ವರಾಜ್ಯ ಸಂಪಾದಿಸುವವರೆಗೆ ಈ ಆಶ್ರಮಕ್ಕೆ ಕಾಲಿಡುವುದಿಲ್ಲವೆಂದು ಪ್ರತಿಜ್ಞೆ ತೊಟ್ಟರು. 1933ರಲ್ಲಿ ಬಂಧನ ಮುಕ್ತರಾದರು. ಕೆಲವು ವರ್ಷ ಮಗನವಾಡಿಯಲ್ಲಿ ಉಳಿದರು. ತನ್ನದೇ ಪ್ರತ್ಯೇಕ ಆಶ್ರಮ ನಡೆಸ ಬೇಕೆಂಬ ಹಂಬಲ ಅವರನ್ನು ಬಿಟ್ಟಿರಲಿಲ್ಲ. ಒಂದು ದಿನ ವರ್ಧಾ ಇಂದ ನಾಲ್ಕು ಮೈಲಿಗಳ ಅಂತರದ ಸೇವಾಗ್ರಾಂ ಹಳ್ಳಿಗೆ ಜೊತೆಯಲ್ಲಿ ಯಾರನ್ನೂ ಕರೆದುಕೊಳ್ಳದೆ ಏಕಾಂಗಿಯಾಗಿ ಹೊರಟರು. ಸತಿ ಕಸ್ತೂರಿಬಾ ಇಲ್ಲ. ಆತ್ಮಬಂಧು ಮಹದೇವ ಭಾಯಿ ಇಲ್ಲ. ಒಂದು ಆಲದ ಮರದ ಆಶ್ರಯ ಪಡೆದರು. ಮಹದೇವ ದೇಸಾಯಿ ಪ್ರತಿದಿನ ಮಗನವಾಡಿಯಿಂದ ಅಲ್ಲಿಗೆ ಹೋಗಿ ದಿನನಿತ್ಯ ವರದಿ ಒಪ್ಪಿಸಿ ಸಂಜೆಗೆ ಹಿಂತಿರುಗುತ್ತಿದ್ದರು. ಮೊದಲು ಮಹದೇವ, ತದನಂತರ ಬಾ, ಆಮೇಲೆ ಪ್ಯಾರೇಲಾಲ್ ಜೊತೆಗೂಡಿದರು. ಗುಡಿಸಲುಗಳು ಹುಟ್ಟಿಕೊಂಡವು. ಸನ್ಯಾಸಿಯ ಸಂಸಾರ ಕ್ರಮೇಣ ಬೆಳೆಯುತ್ತ ಸೇವಾಗ್ರಾಂ ಆಶ್ರಮ ಬೆಳೆಯಿತು.

ಕಾಯಕ, ಶಿಸ್ತು, ಸಂಯಮ ಇವುಗಳಿಗೆ ಗಾಂಧೀಜಿ ಕೊಟ್ಟಿದ್ದ ಪ್ರಧಾನ ಸ್ಥಾನ ತೋರಿಸುವುದಕ್ಕಾಗಿ ಆಶ್ರಮ ಜೀವನದ ನಿದರ್ಶನ ಇಲ್ಲಿ ಕೊಡಲಾಗಿದೆ. ಆಶ್ರಮ ನಿಯಮಗಳಿಂದ ಗಾಂಧೀಜಿ ಹೊರತಾಗಿರಲಿಲ್ಲ. ಸರದಿಯಂತೆ ಊಟ ಬಡಿಸಲು ಬರುವರು. ಉಪಾಧ್ಯಾಯರಂತೆ ಹಿಂದಿ, ಇಂಗ್ಲೀಷ್ ಕಲಿಸುವರು.

1939ರಲ್ಲಿ ಹಿರೇಹಳ್ಳಿ ದಾಸಪ್ಪನವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರು, ವಕೀಲರು. ಸ್ವಾತಂತ್ರ್ಯಾನಂತರ ಕೇಂದ್ರ ಮಂತ್ರಿಮಂಡಲದ ಸಚಿವರಾದರು. 1940ರಲ್ಲಿ ಕಾಯಿಲೆಯಾಗಿ ಸೇವಾಗ್ರಾಮಕ್ಕೆ ಹೋದರು. ತೂಕ ಕಡಿಮೆ ಮಾಡಿ ಕೊಂಡರೆ ಗುಣವಾಗುತ್ತೆ ಎಂದರು, ಗಾಂಧೀಜಿ. ಒಬ್ಬ ವೈದ್ಯನ ಕೈಕೆಳಗೆ ದಾಸಪ್ಪ ನವರು ಉಪವಾಸ ಪ್ರಾರಂಭಿಸಿದರು. ಮೂರು ತಿಂಗಳಲ್ಲಿ ತೂಕ 150ರಿಂದ 114 ಪೌಂಡಿಗೆ ಇಳಿಯಿತು. ಕಾಯಿಲೆ ಗುಣವಾಯಿತು.

1944ರಲ್ಲಿ ಎಚ್. ಸಿ. ದಾಸಪ್ಪನವರು ಮತ್ತೆ ಸೇವಾಗ್ರಾಮಕ್ಕೆ ಹೋಗಿ ಆರು ತಿಂಗಳ ಕಾಲ ಉಳಿದಿದ್ದರು. ಮೈಸೂರಿನಲ್ಲಿ ಮಂತ್ರಿಗಳಾಗಿದ್ದ ಇವರು ಆಶ್ರಮದಲ್ಲಿ ಗೋಧಿ ಬೀಸುತ್ತಿದ್ದರು. ಒಂದು ದಿನ ದಾಸಪ್ಪನವರೂ ಬೀಸಲು ಹೋದಾಗ ಪಂಜಾಬಿನ ಧನಿಕರೂ ಶಾಸನ ಸಭಾಧ್ಯಕ್ಷರೂ ಆದವರು, ತಮ್ಮ ವಾಹನ ಚಾಲಕ ನೊಡನೆ ಗೋಧಿ ಬೀಸುತ್ತಿದ್ದುದನ್ನು ನೋಡಿದರು. ಪ್ರೊಫೆಸರ್ ಭನಸಾಲಿ ಮತ್ತು ಎಂ.ಎಸ್‌ಸಿ. ವಿಜ್ಞಾನ ಪದವೀಧರರಾದ ಇನ್ನೊಬ್ಬರೂ ಬೀಸುವುದರಲ್ಲಿ ನಿಪುಣರಾಗಿ ದ್ದರು. ಸಾಬರಮತಿ ಆಶ್ರಮದಲ್ಲಿದ್ದಾಗ ಗಾಂಧಿಯವರೂ ಬೀಸುವುದರಲ್ಲಿ ಪರಿಣತ ರಾಗಿದ್ದರಂತೆ! ಮಲವಿಸರ್ಜನೆಗೆ ಬಕೆಟ್ಟುಗಳನ್ನು ಇಡುವ ಪದ್ಧತಿ. ಅದನ್ನೆಲ್ಲ ಒಂದು

ಕಡೆ ಚರಂಡಿಗೆ ಹಾಕಿ ಬಕೆಟ್ಟುಗಳನ್ನು ತೊಳೆದಿಡುವುದೇ ಒಂದು ಕಲೆ. ಇದರಲ್ಲಿ ತಾವು ಪ್ರವೀಣರಾಗಿದ್ದುದಾಗಿ ದಾಸಪ್ಪನವರೇ ಹೇಳಿಕೊಂಡಿರುತ್ತಾರೆ. ಕುಡಿಯುವ ನೀರನ್ನು ತುಂಬಿ ಇಡುವಷ್ಟು ಚೊಕ್ಕಟಗೊಳಿಸಬೇಕು ಈ ತೊಟ್ಟಿಗಳನ್ನು.

ಪುಂಡಲೀಕ ಕಾತಗಡೆ ಅವರು ಒಂದು ವರ್ಷ ಕಾಲ ಸಾಬರಮತಿ ಆಶ್ರಮದಲ್ಲಿ ಇದ್ದರು. ಗಂಗಾಧರರಾವ್ ದೇಶಪಾಂಡೆ ಅವರ ವತಿಯಿಂದ ಇವರು ಹೋಗಿದ್ದುದರಿಂದ ಆಶ್ರಮದ ಅತ್ಯುತ್ತಮ ಮತ್ತು ಅತಿ ಮಹತ್ವದ ಕಾರ್ಯವನ್ನೇ ಇವರಿಗೆ ವಹಿಸಿಕೊಡಲಾಗಿತ್ತು. ಇವರ ವಾಕ್ಯಗಳಲ್ಲೇ ಅದೆಂದರೆ, ಅಲ್ಲಿದ್ದ ಎಂಟು ಸಂಡಾಸುಗಳನ್ನು ಸ್ವಚ್ಛಮಾಡುವುದು! ಕೆಲವು ದಿನ ಈ ಕಾರ್ಯ ಮಾಡಿದ ಮೇಲೆ ಎಷ್ಟು ದಿನ ಈ ಕಾರ್ಯ ಮಾಡಬೇಕು ಎಂದು ಪುಂಡಲೀಕಜಿ ಗಾಂಧಿಯವರನ್ನು ಕೇಳಿದರು. "ಬಹಳ ದಿವಸವೂ ಅಲ್ಲ, ಅನಿಶ್ಚಿತ ಕಾಲದವರೆಗೂ ಅಲ್ಲ ; ಈ ಕಾರ್ಯ ನೀನು ಕೇವಲ ಒಂದು ಜೀವಾವಧಿ ಮಾಡಿದರೆ ಸಾಕು" ಎಂದು ಗಾಂಧೀಜಿ ನಗುತ್ತ ನುಡಿದರು. ಆಗ ಕಾತಗಡೆ ಬೆರಗಾಗಿ ಗಾಂಧಿಯವರನ್ನು ದಿಟ್ಟಿಸಿ ನೋಡತೊಡಗಿದರು. ಹದಿನೈದು ದಿನಗಳ ತರುವಾಯ ಆಶ್ರಮದ ಪಾಕಶಾಲೆಗೂ, ಆಶ್ರಮವಾಸೀ ಕುಟುಂಬಗಳಿಗೂ ಬಾವಿಯಿಂದ ನೀರು ಪೂರೈಸುವ ಕೆಲಸ ಕೊಡಲಾಯಿತು.

ಕೆಲವು ದಿನಗಳಾದ ಮೇಲೆ ಈ ಕೆಲಸ ಬದಲಿಸಿ ಆಶ್ರಮದ ಸಮಗ್ರ ಆವರಣವನ್ನೂ ಗುಡಿಸಿ ಸ್ವಚ್ಛ ಮಾಡುವ ಕೆಲಸ ಪುಂಡಲೀಕರಿಗೆ ಒಪ್ಪಿಸಲ್ಪಟ್ಟಿತು. ಈ ಕೆಲಸ ಮಾಡಿ ಮುಗಿಸಲು ಎಂಟು ತಾಸು ಬೇಕಾಗುತ್ತಿತ್ತು. ಒಂದು ತುಣುಕು ಕಾಗದ ಕೆಳಗೆ ಬಿದ್ದಿದ್ದರೂ ಎಲ್ಲರೂ ಸಿಡಿಮಿಡಿಗೊಳ್ಳುತ್ತಿದ್ದರು. ಆಮೇಲೆ ಈ ಕೆಲಸದಿಂದ ನೇಯ್ಗೆ ಕಲಿಯಲು ತೊಡಗಿಸಲಾಯಿತು. ಪುಂಡಲೀಕರು ಮಗ್ಗದ ಮುಂದೆ ಕುಳಿತು ಉಪನಿಷತ್ತುಗಳನ್ನು ಕಂಠಪಾಠ ಮಾಡುತ್ತಿದ್ದರು. ಮಗ್ಗ ಆಡಿಸುತ್ತಿರಲಿಲ್ಲ. ಕಾತಗಡೆ ಅವರನ್ನು ಬರಮಾಡಿಕೊಂಡು ಕಾರಣ ವಿಚಾರಿಸಿದರು ಗಾಂಧೀಜಿ. ಎಲ್ಲರ ಮನಸ್ಸಿನಲ್ಲೂ ಇದ್ದ ಪ್ರಶ್ನೆಯನ್ನೇ ಪುಂಡಲೀಕರು ಕೇಳಿದರು. "ನಾವೆಲ್ಲ ಕಾರ್ಯಕರ್ತರೂ ಈ ಬಗೆಯ ಶರೀರ ಶ್ರಮದಲ್ಲಿಯೇ ಆಯುಷ್ಯವನ್ನೆಲ್ಲ ಕಳೆಯಬೇಕೇ ? ನಮಗೆ ಓದಲು ಸಮಯ ಬೇಡವೆ ?" ಆದಕ್ಕೆ ಗಾಂಧೀಯವರ ಉತ್ತರ ವೈಶಿಷ್ಟ್ಯಪೂರ್ಣವಾಗಿತ್ತು. ಆಶ್ರಮದ ನಿತ್ಯ ಕಾರ್ಯಕ್ರಮಗಳ ನಡುವೆ ಮೂರು ಗಂಟೆಯಷ್ಟು ಕಾಲ ಬಳಸಿಕೊಳ್ಳಬಹುದು, ಎಂದರು. ಈಗೊಮ್ಮೆ ಆಗೊಮ್ಮೆ ಸಿಗುವ ಅಲ್ಪ ಅವಕಾಶಗಳಲ್ಲಿ ಮನಸ್ಸು ಏಕಾಗ್ರಗೊಳಿಸಲು ಹೇಗೆ ಸಾಧ್ಯ ಎಂದು ಪುಂಡಲೀಕರು ಕೇಳಿದರು. ಏಕಾಗ್ರಗೊಳಿಸುವುದೇ ಯೋಗ. ಇದನ್ನು ಕಲಿಸುವುದಕ್ಕಾಗಿಯೇ ಕಾಯಕದ ಶಿಕ್ಷಣ ಕೊಡಲಾಗುತ್ತಿದೆ ಎಂದು ಗಾಂಧೀಜಿ ವಿವರಿಸಿದರು. ತದನಂತರ ಪುಂಡಲೀಕರು ನೇಯ್ಗೆ ಕೆಲಸ ಕಲಿತರು. ವ್ಯವಸ್ಥಾಪಕ

ರಾದ ಮಗನಭಾಯಿಯವರು ಗಾಂಧಿಯವರ ತತ್ವವನ್ನೇ ಮೇಲಿಂದ ಮೇಲೆ ನೆನಹು ಮಾಡಿಕೊಡುತ್ತಿದ್ದರು. "ನೀನು ನಿನ್ನೆ ಒಂದು ಗಜ ಬಟ್ಟೆ ನೇಯ್ದಿದ್ದರೆ ಇಂದು ಊಟ ಮಾಡಲು ಅಡ್ಡಿಯಿಲ್ಲ" ಎಂದು ಹೇಳುತ್ತಿದ್ದರು.

ಕರ್ನಾಟಕದಲ್ಲಿ ಖಾದಿ ಕೇಂದ್ರ ನಡೆಸುತ್ತಿರುವ ಶಂಕರ ಕುರ್ತುಕೋಟಿ ಕಾಂಗ್ರೆಸ್ ಸೋಷಿಯಲಿಸ್ಟ ಪಕ್ಷದ ಕಾರ್ಯದರ್ಶಿಯಾಗಿದ್ದರು. ಕಾರ್ಯ ನಿಮಿತ್ತ 1940ರಲ್ಲಿ ಅವರು ಸೇವಾಗ್ರಾಮಕ್ಕೆ ಹೋಗಿ ಗಾಂಧಿಯವರನ್ನು ಭೆಟ್ಟಿಯಾದರು. ಕುರ್ತುಕೋಟಿಯನ್ನು ಕುರಿತು ಯಾವ ಉದ್ಯೋಗ ಮಾಡುತ್ತಿರುವುದಾಗಿ ಕೇಳಿದರು. ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿರುವುದಾಗಿ ಶಂಕರ್ ಉತ್ತರ ಕೊಟ್ಟರು. "ಕಾಂಗ್ರೆಸ್ ಕೆಲಸ ಉದ್ಯೋಗವಲ್ಲ, ನಿನ್ನ ಹೊಟ್ಟೆಗೆ ನಡೆಸುತ್ತಿರುವ ಉದ್ಯೋಗ ವೇನು? ಕಾಂಗ್ರೆಸ್ ಸಮಿತಿಯಿಂದ ಸಂಬಳ ಪಡೆಯುತ್ತೀಯೋ ಎಂದು ಗಾಂಧೀಜಿ ಕೇಳಿದರು. ಕುರ್ತುಕೋಟಿ ವೇತನ ಪಡೆಯುತ್ತಿರಲಿಲ್ಲ. ಅವರ ಅಣ್ಣ ಹೊಟ್ಟೆ ಬಟ್ಟೆ ನೋಡಿಕೊಳ್ಳುತ್ತಿದ್ದ. ಆಗ ಅಡ್ಡಾಗಿ ಮಲಗಿದ್ದ ಬಾಪೂಜಿ ಎದ್ದು ಕುಳಿತು ನಗುತ್ತಾ, "ಇದು ಶುದ್ಧ ತಪ್ಪು. ಪ್ರತಿಯೊಬ್ಬ ನಾಗರೀಕನೂ ಹೊಟ್ಟೆಗಾಗಿ ಒಂದು ಉದ್ಯೋಗ ಕಲಿಯಲೇ ಬೇಕು. ನೀನು ಹೀಗೆ ಉಡಾಳನಂತೆ ಬರೇ ಕಾಂಗ್ರೆಸ್ ಕೆಲಸ ಅನ್ನಬೇಡ. ನೇಯ್ಗೆ, ನೂಲುವುದು, ಬಡಗಿ, ಚರ್ಮಗಾರಿಕೆ ಇಂಥ ಉದ್ಯೋಗ ಮಾಡಿ ಹೊಟ್ಟೆಗಾಗಿ ಗಳಿಸಿಬೇಕು" ಎಂದರು.

ಗಾಂಧೀಜಿ ರಾಜಕೀಯದಿಂದ ದೂರವಾಗಿ ಒಂದು ಕಾಲವನ್ನು ರಚನಾತ್ಮಕ ಕಾರ್ಯಗಳಿಗಾಗಿ ಮೀಸಲಿಟ್ಟು, ಖಾದಿ ಪ್ರಚಾರಕ್ಕಾಗಿ ಭಾರತದ ಆದ್ಯಂತ ಸಂಚರಿಸಿದರು. 1927ರಲ್ಲಿ ಖಾದಿ ಪ್ರಚಾರಕ್ಕಾಗಿ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡರು. ರಕ್ತದ ಒತ್ತಡ ಅಧಿಕವಾಗಿತ್ತು. ಬಹಳ ಬೇಗ ದಣಿವಾಗುತ್ತಿತ್ತು. ಕರ್ನಾಟಕದಲ್ಲಿ ಸಂಚರಿಸುತ್ತ ನಿಪ್ಪಾಣಿಗೆ ಬಂದರು. ರಕ್ತದ ಒತ್ತಡ ಹೆಚ್ಚಿ ಕಾಯಿಲೆ ಯಾದರು. ಗಂಗಾಧರರಾಯರು ಮಿರಜಿಗೆ ಹೋಗಿ ಖ್ಯಾತ ವೈದ್ಯರಾದ ಜರ್ಮನಿಯ ವ್ಯಾನಲೀಸ್, ವಿಜಾಪುರದ ಅಂಕಲೇಕರ, ಘಟಪ್ರಭೆಯ ಕರ್ನಾಟಕ ಆರೋಗ್ಯ ಧಾಮದ ಸ್ಥಾಪಕರಾದ ಕೋಕಟನೂರ್ ಇವರನ್ನು ನಿಪ್ಪಾಣಿಗೆ ಕರೆದು ತಂದರು. ಯಂತ್ರದ ನೆರವಿನಿಂದ ಗಾಂಧಿಯವರ ರಕ್ತದ ಒತ್ತಡ ವಾನ್‌ಲೀಸ್ ಪರೀಕ್ಷಿಸಿದರು. ರಕ್ತದ ಒತ್ತಡ ಬಹಳ ಹೆಚ್ಚಿದೆ. ಸಂಪೂರ್ಣ ವಿಶ್ರಾಂತಿ ಇದಕ್ಕೆ ಮದ್ದು ಎಂದರು ವೈದ್ಯರು. ಆಗ ನೂಲುವ ಸಮಯ. ಗಾಂಧೀಜಿ ನೂಲಲು ರಾಟಿ ತರುವಂತೆ ಹೇಳಿದರು. ಇಂಥ ಪರಿಸ್ಥಿತಿಯಲ್ಲಿ ನೀವು ಅರ್ಧ ತಾಸು ನೂತರೆ ನಿಮಗೆ ಅರ್ಧಾಂಗ ವಾಯು ನಿಶ್ಚಿತ ಎಂದರು ಡಾಕ್ಟರ್ ವಾನಲೀಸ್. ನೂಲುತ್ತ ನೂಲುತ್ತ ಮರಣ ಪ್ರಾಪ್ತವಾದರೆ ಅದಕ್ಕಿಂತ ಹೆಚ್ಚಿನ ಪುಣ್ಯವಿದೆಯೇ ಎನ್ನುತ್ತಾ, ಎಷ್ಟು ಬೇಡವೆಂದರೂ

ಕೇಳದೆ ನೂಲಲು ಪ್ರಾರಂಭಿಸಿದರು. ಮಹದೇವ ದೇಸಾಯಿ ಇದನ್ನು ಅಶ್ರುಪೂರ್ಣ ನೇತ್ರಗಳಿಂದ ನೋಡುತ್ತಿದ್ದರು. ಅರ್ಧ ತಾಸು ನೂತ ಮೇಲೆ ಡಾ. ಅಂಕಲೇಕರರು ರಕ್ತದ ಒತ್ತಡ ಮತ್ತೆ ತೆಗೆದುಕೊಂಡರು. ಒತ್ತಡ ಸಂಪೂರ್ಣವಾಗಿ ಇಳಿದು ಹೋಗಿತ್ತು. ಆಗ ವಾನಲೀಸ್ ಅವರನ್ನು ಉದ್ದೇಶಿಸಿ, "ನೀವು ಡಾಕ್ಟರ್ ಅಲ್ಲ, ಯಂತ್ರದ ಗುಲಾಮರು" ಎಂದು ಹಾಸ್ಯ ಮಾಡಿದರು ಬಾಪು.

ಪುಣೆಯಿಂದ ಸಿಪ್ಪಾಣಿಗೆ ಬರುವಾಗಲೇ ಗಾಂಧಿಯವರ ಆರೋಗ್ಯ ಕೆಟ್ಟಿತ್ತು. ದಾರಿಯಲ್ಲೇ ಅಕಸ್ಮಾತ್ ತಲೆ ತಿರುಗಿದಂತೆ ಆಯಿತು. ದೇಹದ ಎಡ ಮಗ್ಗಲು ಚೇತನ ರಹಿತವಾಗಿ ಭಾರವಾಯಿತು. ಪುಣೆಯ ರೈಲ್ವೆ ನಿಲ್ದಾಣದಲ್ಲಿ ಅವರನ್ನು ಪುಣೆ ಗಾಡಿಯಿಂದ ಬೆಂಗಳೂರು ಗಾಡಿಗೆ ಹೊತ್ತು ತರಬೇಕಾಯಿತು. ಈ ಪರಿಸ್ಥಿತಿಯಲ್ಲೇ ಅವರು ನಿಪ್ಪಾಣಿಗೆ ಬಂದುದು.

ಆರೋಗ್ಯ ಕೆಟ್ಟಿರುವ ಸುದ್ದಿ ಹರಡಿತು. ಆಗ ಮೈಸೂರಿನ ಕೃಷ್ಣರಾಜಪ್ರಭುಗಳು, ಬ್ರಿಟಿಷ್ ಚಕ್ರಾಧಿಪತ್ಯದ ಪರಮಶತ್ರು ಎನಿಸಿದ ಮಹಾತ್ಮರನ್ನು ನಂದಿ ಬೆಟ್ಟದ ಮೇಲೆ ವಿಶ್ರಾಂತಿ ಪಡೆಯಲು ಆಹ್ವಾನಿಸಿದರು. ದಿವಾನ್ ಮಿರ್ಜಾ ಇಸ್ಮಾಯಿಲರು ಎಲ್ಲ ವ್ಯವಸ್ಥೆ ಮಾಡಿಸಿದ್ದರು. ಆಗ ಬೆಟ್ಟ ಏರಲು ರಸ್ತೆ ಇರಲಿಲ್ಲ. ಮೆಟ್ಟಲು ಹತ್ತಿಯೇ ಹೋಗಬೇಕಾಗಿತ್ತು. ಬೆಟ್ಟದ ಬುಡದಿಂದ ಮೇಲಕ್ಕೆ ಹೋಗಲು ದೋಲಿ ಕುರ್ಚಿ ಮತ್ತು ಆಳುಗಳು ಸಿದ್ಧವಾಗಿ ನಿಂತಿದ್ದರು. ಗಾಂಧೀಜಿ ಕುರ್ಚಿಯಲ್ಲಿ ಕುಳಿತು ಹೋಗಲು ಒಪ್ಪಲಿಲ್ಲ. ರಕ್ತದ ಒತ್ತಡವಿದ್ದರೂ ಮೆಟ್ಟಲು ಏರಿ ಶಿಖರ ತಲುಪಿದರು. ತಾನು ಸುರಕ್ಷಿತವಾಗಿ ಬೆಟ್ಟ ಹತ್ತಿರುವುದಾಗಿ ಮಿರ್ಜಾ ಅವರಿಗೆ ತಿಳಿಸಲು ಹೇಳಿದರು.

ಪುಣೆಯಿಂದ ಬೆಂಗಳೂರಿಗೆ ಬಂದ ಡಾಕ್ಟರ್ ಜೀವರಾಜ ಮೆಹತ ಮಹಾತ್ಮರನ್ನು ಪರೀಕ್ಷಿಸಿ, ಡಾಕ್ಟರ್ ವಾನಲೀಸ್ ಮೊದಲಾದ ವೈದ್ಯರ ಸಲಹೆಯನ್ನೇ ಪುಷ್ಟೀಕರಿಸಿದರು. ಇವರಿಗೂ ಡಾಕ್ಟರ್ ವಾನಲೀಸ್ ಅವರಿಗೆ ಕೊಟ್ಟ ಉತ್ತರವೇ. ನೂಲುವುದನ್ನು ನಿಲ್ಲಿಸಲಾರೆ ಎಂದು. ಆದರೆ ಕಡೆಗೂ ಎರಡು ತಿಂಗಳ ಕಾಲ ನಂದಿಯ ಗಿರಿಧಾಮದಲ್ಲಿ ವಿಶ್ರಾಂತಿ ಪಡೆಯಲು ಒಪ್ಪಿದರು.

ವಿಶ್ರಾಂತಿ ಅಥವಾ ಬಿಡುವು ಎಂದರೆ ವಯಸ್ಸಿಗೆ ಅನುಗುಣವಾಗಿ ಇಸ್ಪೀಟು, ಪಿಂಗ್‌ಪಾಂಗ್ ಹೀಗೆ ಯಾವುದಾದರೂ ಆಟದಲ್ಲಿ ಮಗ್ನರಾಗಿರುವುದು ಎಂಬುದನ್ನು ಗಾಂಧೀಜಿ ಒಪ್ಪುತ್ತಿರಲಿಲ್ಲ. ಮಾಡುತ್ತಿದ್ದ ಕೆಲಸ ಬಿಟ್ಟು ಮತ್ತೊಂದು ಕೆಲಸಕ್ಕೆ ಬದಲಾಯಿಸಿಕೊಳ್ಳುವುದೇ ಅವರ ದೃಷ್ಟಿಯಲ್ಲಿ ವಿಶ್ರಾಂತಿ. ನೂಲುವುದೇ ಅವರಿಗೆ

ವಿಶ್ರಾಂತಿ. ಬಿಡುವಿನ ವೇಳೆಯಲ್ಲಿ ಪತ್ನಿಗೆ ಜಾಕೆಟ್ ಹೊಲಿದು ಕೊಟ್ಟಿರುತ್ತಾರೆ. ಟೋಪಿ ಹೊಲಿದು ಕೊಟ್ಟಿರುತ್ತಾರೆ. ಒಂದು ನಿಮಿಷವೂ ಸುಮ್ಮನಿರುವುದು ಅವರ ಸ್ವಭಾವಕ್ಕೇ ವಿರುದ್ಧ. ಬೆಳಿಗ್ಗೆ ಸಂಜೆ ಗಾಳಿ ಸವಾರಿಗೆ ಹೋಗುವುದೇ ವಿಶ್ರಾಂತಿ.

ದಕ್ಷಿಣ ಆಫ್ರಿಕದಿಂದ ಹಿಂತಿರುಗಿ ಬಂದ ಕೆಲಕಾಲದ ತರುವಾಯ ರವೀಂದ್ರ ನಾಥರ ಶಾಂತಿನಿಕೇತನಕ್ಕೆ ಹೋದರು. ಇವರಿಗೆ ಭವ್ಯ ಸ್ವಾಗತ ನೀಡಲಾಯಿತು. ಫೋನಿಕ್ಸ್ ಆಶ್ರಮದಿಂದ ಭಾರತಕ್ಕೆ ಮರಳಿದ್ದ ಆಶ್ರಮವಾಸಿಗಳು ಇಲ್ಲಿದ್ದರು. ಇವರಿಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಮಗನ್‌ಲಾಲ್ ಗಾಂಧೀಯ ನೇತೃತ್ವದಲ್ಲಿ ಫೋನಿಕ್ಸ್ ಆಶ್ರಮದ ನಿಯಮಗಳನ್ನು ಇಲ್ಲಿಯೂ ಅನುಸರಿಸ ಲಾಗುತ್ತಿತ್ತು. ಶಾಂತಿನಿಕೇತನದಲ್ಲಿ ಆಂಡ್ರೂಸ್, ಪಿಯರ್‌ಸನ್ ಇವರೂ ಇದ್ದರು. 125 ವಿದ್ಯಾರ್ಥಿಗಳು ಅಲ್ಲಿಯೇ ಉಳಿದು ಶಿಕ್ಷಣ ಪಡೆಯುತ್ತಿದ್ದರು. ಅಡುಗೆ ಮಾಡುವುದು, ಬಡಿಸುವುದು, ಪರಿಚಾರಿಕೆ, ಪಾತ್ರೆ ತಿಕ್ಕುವುದು, ಕಸ ಗುಡಿಸುವುದು, ಬಟ್ಟೆ ಒಗೆಯುವುದು ಈ ಪ್ರಕಾರವಾಗಿ ಎಲ್ಲ ಕೆಲಸಗಳನ್ನು ವಿದ್ಯಾರ್ಥಿಗಳೂ ಉಪಾಧ್ಯಾಯರೂ ಕಲೆತು ಮಾಡುವ ಸ್ವಸಹಾಯ ಪದ್ಧತಿ, ಶಾಂತಿನಿಕೇತನದಲ್ಲಿ ಆಚರಣೆಗೆ ತರಬೇಕೆಂಬ ಸಲಹೆ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ಮುಂದೆ ಗಾಂಧೀಜಿ ಮಂಡಿಸಿದರು.

ವಿದ್ಯಾರ್ಥಿಗಳ ಶಾರೀರಿಕ ಹಾಗೂ ನೈತಿಕ ಆರೋಗ್ಯದ ದೃಷ್ಟಿಯಿಂದ ಅಡುಗೆ ಮನೆಯ ಮೇಲೆ ಹತೋಟಿ ಇಟ್ಟುಕೊಳ್ಳಲು ಉಪಾಧ್ಯಾಯರಿಗೆ ಇದರಿಂದ ಅನುಕೂಲವಾಗುತ್ತದೆ. ಒಬ್ಬಿಬ್ಬರು ಸಲಹೆಯನ್ನು ವಿರೋಧಿಸಿದರೂ ಬಹುಸಂಖ್ಯೆ ಸಲಹೆಗೆ ಪ್ರಬಲ ಬೆಂಬಲ ವ್ಯಕ್ತಪಡಿಸಿದರು. ಹೊಸತನ್ನು ಸ್ವಾಗತಿಸುವ ಹುಡುಗರ ಹುಟ್ಟು ಸ್ವಾಭಾವ ಪ್ರಯೋಗವನ್ನು ಸ್ವಾಗತಿಸಿತು. 'ಸ್ವರಾಜ್ಯದ ಬೀಗದ ಕೈ ಪ್ರಯೋಗದಲ್ಲಿ ಅಡಕವಾಗಿದೆ' ಎಂದರು ಕವಿವರ್ಯರು. ಉಪಾಧ್ಯಾಯರಿಂದಲೂ ಅನುಕೂಲ ಪ್ರತಿಕ್ರಿಯೆ ದೊರೆಯಿತು. ಉಪಾಧ್ಯಾಯರು ಸಮ್ಮತಿಸಿದರೆ ತಾನು ಅಡ್ಡಿ ಬರುವುದಿಲ್ಲ ಎಂದರು ಠಾಕೂರರು. ಇಷ್ಟೆಲ್ಲ ಅನುಕೂಲಕರ ಬೆಂಬಲ ಪಡೆದು ಕೊಂಡ ಪ್ರಯೋಗವನ್ನು ಉತ್ಸಾಹದಿಂದ ಪ್ರಾರಂಭಿಸಲಾಯಿತು.

ಪ್ರಯೋಗ ಯಶಸ್ವಿಗೊಳಿಸಲು ತಮ್ಮ ದೇಹ ಶ್ರಮಿಸತೊಡಗಿದರು ಪಿಯರ್ ಸನ್. ಅತ್ಯುತ್ಸಾಹದಿಂದ ಅವರು ಕೆಲಸಕ್ಕೆ ಇಳಿದರು. ತರಕಾರಿ ಹಚ್ಚಿ ಸಿದ್ಧಗೊಳಿಸಲು ಗೋಧಿ, ಅಕ್ಕಿ ಮತ್ತು ಧಾನ್ಯಗಳ ಕಸಕಡ್ಡಿ ಕಲ್ಲುಮಣ್ಣು ತೆಗೆದು ಚೊಕ್ಕಮಾಡಲು, ಪ್ರತ್ಯೇಕ ತಂಡಗಳು ರಚಿತವಾದುವು. ಅಡುಗೆಮನೆ ಮತ್ತು ಸುತ್ತಮುತ್ತಲ ಪ್ರದೇಶ

ಚೊಕ್ಕಟವಾಗಿರಿಸುವ ಹೊಣೆ ನಾಗೇನಬಾಬು ಹೊತ್ತರು. ಉತ್ಸಾಹದಿಂದ ಕೆಲಸ ಮಾಡುತ್ತಿದ್ದುದನ್ನು ನೋಡುವುದೇ ಆನಂದದಾಯಕವಾಗಿತ್ತು ಬಾಪೂಜಿಗೆ.

ಆದರೆ 125 ವಿದ್ಯಾರ್ಥಿಗಳಿಗೂ ಮತ್ತು ಉಪಾಧ್ಯಾಯರಿಗೂ ದೈಹಿಕ ಶ್ರಮದ ಈ ಕಾರ್ಯ ಸ್ವಾಭಾವಿಕವಾಗಿತ್ತು ಎಂದು ನಿರೀಕ್ಷಿಸುವುದು ಸರಿ ಎನಿಸದು. ಸಾಧಕ ಬಾಧಕಗಳನ್ನು ಕುರಿತು ಪ್ರತಿದಿನ ವಿಚಾರವಿನಿಮಯ ಪ್ರಾರಂಭವಾಯಿತು. ಕೆಲವರಿಗೆ ದಣಿವು. ಆದರೆ ಪಿಯರ್‌ಸನ್ ಬೇಸರಗೊಳ್ಳುವ ಸ್ವಭಾವದವರಲ್ಲ. ಅಡುಗೆಮನೆ ಅಥವಾ ಅಕ್ಕಪಕ್ಕದಲ್ಲಿ ಸದಾ ಏನಾದರೂ ಅವರು ಮಾಡುತ್ತಲೇ ಇರುತ್ತಿದ್ದರು. ಸದಾ ನಗುಮೊಗ. ದೊಡ್ಡ ದೊಡ್ಡ ಪಾತ್ರೆ ತೊಳೆಯುವ ಕೆಲಸ ಇವರು ವಹಿಸಿಕೊಂಡರು. ಪಾತ್ರೆ ತಿಕ್ಕಿ ಬೆಳಗುವ ಕಠಿಣ ಕೆಲಸದಲ್ಲಿ ತೊಡಗಿದ್ದವರಿಗೆ ಶ್ರಮ ವ್ಯಕ್ತವಾಗದಂತೆ ಮಾಡಲು ಕೆಲವರು ಸಿತಾರ್ ನುಡಿಸುವರು. ಶಾಂತಿನಿಕೇತನ ಜೇನುಗೂಡಿನಂತೆ ಉತ್ಸಾಹದಿಂದ ನಲಿಯತೊಡಗಿತು. ಅಡುಗೆಯಲ್ಲಿ ಸರಳತೆ, ಸುಲಭ ಕ್ರಮ ಮೊದಲಾದ ಪ್ರಯೋಗಗಳು ನಡೆದವು. ಆದರೆ ಕಾಲ ಕ್ರಮೇಣ ಉತ್ಸಾಹ ಕುಗ್ಗತೊಡಗಿತು. ಕೆಲವು ಕಾಲದ ನಂತರ ಪ್ರಯೋಗ ಪರೀಕ್ಷೆಯನ್ನು ಕೈಬಿಡಲಾಯಿತು. ಈ ಪ್ರಯೋಗದಿಂದ ಶಾಂತಿನಿಕೇತನದ ಮಹಾ ಸಂಸ್ಥೆಗೆ ನಷ್ಟವೇನೂ ಆಗಲಿಲ್ಲ. ಉಪಾಧ್ಯಾಯರೂ ವಿದ್ಯಾರ್ಥಿಗಳೂ ಅಪಾರ ಅನುಭವ ಗಳಿಸಿದಂತಾಯಿತು ಎಂದಿದ್ದಾರೆ ಗಾಂಧೀಜಿ.

1927ರಲ್ಲಿ ಖಾದಿ ಪ್ರಚಾರಕ್ಕಾಗಿ ದಕ್ಷಿಣ ಭಾರತದಲ್ಲಿ ಪ್ರವಾಸ ನಡೆಸುತ್ತಿದ್ದರು. ಚಿತ್ತೂರಿಗೆ ಬಂದರು· ಮದರಾಸಿನ ಶಾಸನಸಭಾ ಸದಸ್ಯ ಸಿ. ದೊರಸ್ವಾಮಿ ಅಯ್ಯಂಗಾರ್ಯರು ಗಾಂಧಿಯವರನ್ನು ಸಂದರ್ಶಿಸಿ ತಮ್ಮಲ್ಲಿದ್ದ ಉತ್ತಮ ನೂಲು ಮತ್ತು ಹಂಜಿಗಳನ್ನು ಮಹಾತ್ಮರಿಗೆ ಅರ್ಪಿಸಿದರು. ನೀವೇ ನೂತ್ತಿದ್ದೇ ಎಂದು ಗಾಂಧೀಜಿ ಪ್ರಶ್ನಿಸಿದರು. ಬಹುಕಾಲದಿಂದಲೂ ಖಾದಿಧಾರಿಯಾಗಿದ್ದ ವಕೀಲ ದೊರೆಸ್ವಾಮಿ ಅಯ್ಯಂಗಾರ್ಯರು ತಾನು ನೂತದ್ದಲ್ಲ, ಗೆಳೆಯನೊಬ್ಬ ನೂತು ಕೊಟ್ಟದ್ದು ಎಂದು ಸತ್ಯ ನುಡಿದರು. ಅಯ್ಯಂಗಾರ್ಯರನ್ನು ದಿನವೂ ಎಷ್ಟು ಹೊತ್ತು ನೂಲುತ್ತೀರಿ, ಎಷ್ಟು ಹಂಜಿ ಮಾಡುತ್ತೀರಿ ಹೀಗೆ ವಿವರವಾಗಿ ಪ್ರಶ್ನಿಸಿದರು. ದಿನಕ್ಕೆ ಅರ್ಧ ಅಥವಾ ಒಂದು ತಾಸು ನೂಲುವುದಾಗಿಯೂ, ಬಿಡುವಾದಾಗ ಗಂಟೆಗಟ್ಲೆ ಕೂತು ಹಳೆಯ ಬಾಕಿಯನ್ನೆಲ್ಲ ತೀರಿಸಿಬಿಡುವುದಾಗಿಯೂ ತಿಳಿಸಿದರು. ಪ್ರವಾಸದಲ್ಲಿರುವಾಗಲೂ ಮಡಿಸುವ ರಾಟೆ ಅಥವಾ ತಕಲಿ ತೆಗೆದುಕೊಂಡು ಕ್ಲಿಪ್ತವಾಗಿ ಅರ್ಧ ಗಂಟೆ ನೂಲುವ ಕಾಯಕ ಮಾಡಬೇಕಾಗಿ ಬಾಪು ತಿಳಿಸಿದರು. ಉಪಾಧ್ಯಾಯರೂ, ವಿದ್ಯಾರ್ಥಿಗಳೂ ನೂಲಬೇಕು ಎನ್ನುತ್ತಿದ್ದರು ಗಾಂಧೀಜಿ. ಆದರೆ ನೂಲುವುದು ಪೂರ್ಣಸಮಯದ ಉದ್ಯೋಗವಲ್ಲ, ಜೀವನೋಪಾಯವಲ್ಲ ಎಂದು

ಗ್ರಾಮಸ್ಥರಿಗೂ ಮಹಾತ್ಮರು ತಿಳಿಸಿರುತ್ತಾರೆ. ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳೂ ದಿನವಹಿ ಶಾಲೆ ಪ್ರಾರಂಭವಾಗುವಾಗ ಅರ್ಧ ಗಂಟೆ ನೂಲಬೇಕು. ತಾನೇ ವೈಸರಾಯಿ ಆಗಿದ್ದರೆ ಪ್ರತಿಯೊಬ್ಬ ನೌಕರನೂ ಮೇಜಿನ ಮುಂದೆ ಕೂಡುವ ಮೊದಲು ತಕಲಿಯಿಂದ ತಾನೇ ನೂಲಬೇಕು ಎಂದು ಕಡ್ಡಾಯಮಾಡುತ್ತಿದ್ದೆ ಎಂದಿರುತ್ತಾರೆ ಗಾಂಧೀಜಿ. ನೂಲುವುದು ಅತ್ಯಂತ ಸುಲಭವಾದ, ಎಲ್ಲರೂ ಮಾಡಬಹುದಾದ ಕಾಯಕ. ಇಷ್ಟು ಕಾಯಕವನ್ನಾದರೂ ಪ್ರತಿಯೊಬ್ಬರೂ ಮಾಡಲೇಬೇಕು ಇದು ಗಾಂಧಿಯವರ ಅಭಿಮತ.

ಬೆಳಗಾಂ ಜಿಲ್ಲೆಯ ಹುದಲಿ ಗ್ರಾಮದಲ್ಲಿ 1937ರಲ್ಲಿ ಗಾಂಧಿ ಸೇವಾ ಸಂಘದ ಸಮ್ಮೇಳನ ನಡೆದಿತ್ತು. ಗ್ರಾಮದ ರಸ್ತೆಗಳು ಸರಿಯಾಗಿರಲಿಲ್ಲ. ಮೋರಿಗಳು ಕಟ್ಟಿಕೊಂಡು ನೀರು ಹರಯುತ್ತಿರಲಿಲ್ಲ. ರಸ್ತೆ ಸರಿಮಾಡುವ ಕಾರ್ಯದಲ್ಲಿ ಎಲ್ಲರೂ ನೆರವಾಗಬೇಕೆಂದು ನಿಶ್ಚಯಿಸಲಾಯಿತು. ಮಹಾನಾಯಕರಾದ ಬಾಬುರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಭಾಯಿಪಟೇಲ ಮೊದಲಾದ ನಾಯಕರು ಗುದ್ದಲಿ ಸನಿಕೆ ಹಿಡಿದು ರಸ್ತೆ ಅಗೆದು ಸರಿಮಾಡುವ ಕೆಲಸದಲ್ಲಿ ತೊಡಗಿದರು. ಮಹಾತ್ಮಗಾಂಧಿ ಸ್ವತಃ ಜಲ್ಲಿಕಲ್ಲುಗಳನ್ನು ಹೊತ್ತು ತಂದು ರಸ್ತೆಯ ಮೇಲೆ ಜೋಡಿಸುತ್ತಿದ್ದರು. ಬಾವಿ ತೋಡುವ ಮತ್ತು ಮೋರಿ ಗುಡಿಸುವ ಕೆಲಸವನ್ನೂ ಗಾಂಧೀಜಿ ಮಾಡಿದರು. ಎಲ್ಲರಿಗೂ ಮೇಲ್ಪಂಕ್ತಿ ಹಾಕಿಕೊಡುವುದೇ ಇದರ ಉದ್ದೇಶ.

ಕಾಯಕವೇ ಕೈಲಾಸ. ಇದು ಬಸವಣ್ಣನವರ ಉಕ್ತಿ. ಮಹಾತ್ಮಗಾಂಧಿ ಮತ್ತು ಪೂಜ್ಯಬಸವಣ್ಣನವರ ಅಭಿಪ್ರಾಯ ಇವೆರಡೂ ಒಂದೇ ಆಗಿದ್ದವು. ಮಾತಿಗಿಂತ ಕೃತಿಯಲ್ಲಿ ಗಾಂಧೀಜಿ ದಿನವಹಿ ಕಾಯಕ ಮಾಡಿ ಮಾರ್ಗದರ್ಶನ ನೀಡಿರುತ್ತಾರೆ. ಶಾರೀರಕ ಶ್ರಮ ಮಾಡದಿದ್ದರೆ ಊಟವಿಲ್ಲ. ಇದು ಅವರು ಕೃತಿ ಮತ್ತು ಕಾರ್ಯದಿಂದ ಮಾಡಿ ತೋರಿಸಿರುತ್ತಾರೆ. ಭಿಕ್ಷಾವೃತ್ತಿ, ಉಚಿತ ಅನ್ನದಾನ ಇದನ್ನು ಅವರು ಕಠೋರವಾಗಿ ಖಂಡಿಸಿರುತ್ತಾರೆ "ಕಾಯಕ ಮಾಡದ ಆರೋಗ್ಯವಂತನಿಗೆ, ನಿರೋಗಿಗೆ ಉಚಿತ ಅನ್ನಕೊಡುವುದಕ್ಕೆ ನನ್ನ ಅಹಿಂಸೆಯುಲ್ಲಿ ಸ್ಥಾನವಿಲ್ಲ. ಅನ್ನಕ್ಕಾಗಿ ಆಪನು ಪ್ರಾಮಾಣಿಕ ಮಾರ್ಗದಲ್ಲಿ ದುಡಿಯಬೇಕು. ನನಗೆ ಅಧಿಕಾರವಿದ್ದಿದ್ದರೆ ಉಚಿತ ಅನ್ನ ನೀಡುವ ಪ್ರತಿಯೊಂದು ಸದವ್ರತ ಅಥವಾ ಅನ್ನಸತ್ರವನ್ನು ಮುಚ್ಚಿಬಿಡುತ್ತಿದೆ. ಈ ಪದ್ಧತಿ ರಾಷ್ಟ್ರದ ಅವನತಿಗೆ ಕಾರಣ. ಸೋಮಾರಿತನ, ಜಡಪ್ರವೃತ್ತಿ, ಮೋಸ ಮತ್ತು ಹಿಂಸಾಕೃತ್ಯಗಳಿಗೆ ಇದು ಪ್ರೋತ್ಸಾಹ ನೀಡಿದೆ."

ವೈಸರಾಯ್ ಮೌಂಟ್‌ಬೇಟನ್ ಅವರ ಭ್ರಾತೃಬಂಧು ರಾಜಕುಮಾರ ಫಿಲಿಪ್ ಮುಂದೆ ಬ್ರಿಟನ್ನಿನ ರಾಣಿ ಆಗಲಿರುವ ರಾಜಕುಮಾರಿ ಎಲಿಜಬತ್ ಅವಳನ್ನು

ವಿವಾಹವಾಗಲಿರುವ ಸುದ್ದಿ ಮಹಾತ್ಮರಿಗೆ ಬಹಳ ಸಂತೋಷಕೊಟ್ಟಿತು. ಈ ಸುದ್ದಿ ಕೇಳಿ ಅವರು ಬಹಳ ಉತ್ಸಾಹಿತರಾದರು. "ಭವಿಷ್ಯದ ರಾಣಿಯನ್ನು ನಿಮ್ಮ ಬಂಧು ವಿವಾಹವಾಗಲಿರುವುದನ್ನು ಕೇಳಿ ನನಗೆ ತುಂಬ ಹರ್ಷವಾಗಿದೆ. ಅವರಿಗೆ ಏನಾದರೂ ಉಡುಗೊರೆ ಕೊಡಬೇಕೆನಿಸುತ್ತಿದೆ. ಉಚಿತ ಉಡುಗೊರೆ ಕೊಡಲು ನನ್ನಲ್ಲಿ ಏನೂ ಇಲ್ಲವಲ್ಲ, ಕೊಡಲೇನು?" ಈ ರೀತಿ ಅವರು ಮೌಂಟ್‌ಬ್ಯಾಟನ್ ಅವರಿಗೆ ಪತ್ರ ಬರೆದರು. "ಏನೂ ಏಕೆ ಇಲ್ಲ. ನಿಮ್ಮಲ್ಲಿ ರಾಟೆ ಇದೆಯಲ್ಲ. ರಾಟೆ ತಿರುಗಿಸಿ ಏನಾದರೂ ಮಾಡಿಕೊಡಬಹುದಲ್ಲ" ಹೀಗೆ ಉತ್ತರಿಸಿದರು. ವೈಸರಾಯರು. ಅಂತೆಯೇ ತಾವೇ ಸ್ವತಃ ನೂಲು ನೂತು, ಆಶ್ರಮದ ಪಂಜಾಬಿ ಹುಡುಗಿಗೆ ಕೊಟ್ಟರು. ಅವಳು ಕಸೂತಿ ಕೆಲಸದಲ್ಲಿ ಪರಿಣತಳು. ಕೆಲವೇ ದಿನಗಳಲ್ಲಿ ಸಣ್ಣ ಮೇಜಿನ ಮೇಲೆ ಹೊದಿಸಬಹುದಾದ ಸೊಗಸಾದ 'ಟೇಬಲ್‌ಕ್ಲಾತ್' ಕಸೂತಿ ಹಾಕಿ ಕೊಟ್ಟಳು. ಗಾಂಧೀಜಿ ಸ್ವತಃ ಇದನ್ನು ಮೌಂಟ್‌ಬ್ಯಾಟನ್ ಅವರಿಗೆ ಮುಟ್ಟಿಸಿದರು. ಅವರು ಈ ವಸ್ತ್ರವನ್ನು ತಮ್ಮೊಡನೆ ಒಯ್ದು ವಿವಾಹ ಕಾಲದಲ್ಲಿ ಎಲಿಜಬೆತ್ ಕನ್ಯೆಗೆ ಮಹಾತ್ಮರ ಉಡುಗೊರೆಯಾಗಿ ಕೊಡುತ್ತಾ, "ಇದು ಬೆಲೆಕಟ್ಟಲು ಸಾಧ್ಯವಿಲ್ಲದ ಅತ್ಯಮೂಲ್ಯ ವಸ್ತ್ರ. ಕಿರೀಟಾಭರಣಗಳ ಪೆಟ್ಟಿಗೆಯಲ್ಲಿ ಜೋಪಾನವಾಗಿರಿಸು" ಎಂದು ತಿಳಿಸಿದರು. ಕಾಲಾನಂತರ ಎಲಿಜಬೆತ್ ಬ್ರಿಟನ್ನಿನ ರಾಣಿ ಆದಳು. ಆಗ ಮಾನ್ಯ ಅತಿಥಿಯೊಬ್ಬರನ್ನು ವೈಸರಾಯಿ ಸ್ಥಾನದಿಂದ ನಿವೃತ್ತರಾಗಿದ್ದ ಮೌಂಟ್‌ಬ್ಯಾಟನ್ ರಾಣಿಯ ಬಳಿ ಒಯ್ದು, ಮಹಾತ್ಮರು ಕೊಟ್ಟ ಉಡುಗೊರೆ ಭದ್ರವಾಗಿ ಇರಿಸಿರುವಿಯಾ, ಎಲ್ಲಿ ತೆಗೆ ನೋಡೋಣ ಎಂದರು. ಖಜಾನ್ಚಿಯನ್ನು ಕರೆಸಿ ರತ್ನಖಚಿತ ಕಿರೀಟ ಮುತ್ತು ಇತರ ವಜ್ರವೈಢೂರ್ಯಗಳ ಪೆಟ್ಟಿಗೆಯಲ್ಲಿ ಜೋಪಾನವಾಗಿ ಇರಿಸಿದ್ದ ಮಹಾತ್ಮರು ಕೊಟ್ಟಿದ್ದ ಖಾದಿಯ 'ಟೇಬಲ್‌ಕ್ಲಾತ್' ತೆಗೆದು ತೋರಿಸಿದರು. ಆದರ ಮಹತ್ವದ ಬೆಲೆ ಅವರು ಅರಿತಿದ್ದರು. ಉಡುಗೊರೆ ಎಂದರೆ ಬಂಗಾರದ ಆಭರಣ, ಲಕ್ಷ್ಮೀಕಾಸು, ಬೆಲೆಬಾಳುವ ಸೀರೆ, ಧೋತ್ರ, ಶಾಲು, ಮೇಲು ವಸ್ತ್ರ ಕೊಡುವುದು ವಾಡಿಕೆ. ನವೀನ ಕಾಲದಲ್ಲಿ ಪೇಟೆಗೆ ಹೋಗಿ ಸುಂದರ, ಆದರೆ ದಿನ ನಿತ್ಯ ಬಳಕೆಗೆ ಬಾರದ ಪದಾರ್ಥ ಕೊಂಡು ಕೊಡುವುದು ವಾಡಿಕೆ ಆಗಿದೆ. ಸ್ವಂತ ಕಾಯಕದಿಂದ ಮಾಡಿದ ವಸ್ತು, ಅಂದವಿಲ್ಲದಿದ್ದರೂ ಚಂದ. ಇದನ್ನು ಮೇಲಿನ ಮಹಾತ್ಮರ ನಿದರ್ಶನದಿಂದ ಗ್ರಹಿಸಬಹುದು.

ಒಮ್ಮೆ ಪ್ರವಾಸದಲ್ಲಿದ್ದಾಗ, ಮೋಟಾರು ಹತ್ತಿ ಒಳಕ್ಕೆ ಹೋದರು. ದ್ವಾರದಿಂದ ಕೈ ತೆಗೆದಿರಲಿಲ್ಲ. ಇಷ್ಟರಲ್ಲಿ ಯಾರೋ ಬಾಗಿಲು ದಬ್ಬಿಹಾಕಿದರು. ಕೈ ಬೆರಳುಗಳು ಜಜ್ಜಿಹೋದುವು. ಬಲಗೈಯಿನಿಂದ ಕೆಲಸಮಾಡಲು ಸಾಧ್ಯವಾಗಲಿಲ್ಲ. ಅಂದಿನಿಂದಲೇ ಎಡಗೈ ಬರೆಯುವುದಕ್ಕೂ ಬಳಸತೊಡಗಿದರು. ಅತ್ತಿತ್ತ ಅಲುಗಾಡುವ ಮೂರನೆ ದರ್ಜೆ ಡಬ್ಬಿಯ ರೈಲಿನಲ್ಲಿ ಪ್ರಯಾಣಮಾಡುತ್ತ, ಬಲಗೈಯಿಂದ

ಕತ್ತಿಯಲ್ಲಿ ಕ್ಷೌರ ಮಾಡಿಕೊಳ್ಳುವರು, ಎಡಗೈಯಿಂದ ಬರೆಯುವರು. ಆದ್ದರಿಂದ ಅಕ್ಷರಗಳು ಅಂಕುಕೊಂಕು. ಅವರ ಬರವಣಿಗೆ ಓದುವುದು ಸುಲಭವಲ್ಲ. ಸಣ್ಣ ವಯಸ್ಸಿನಲ್ಲಿ ಕಾಪಿ ಪುಸ್ತಕ ಬರೆಯುವ ಅಭ್ಯಾಸ ಮಾಡಿಕೊಳ್ಳಲಿಲ್ಲ. ಆದ್ದರಿಂದ ತನ್ನ ಬರವಣಿಗೆ ಕೆಟ್ಟುಹೋಯಿತು ಎಂದು ದುಃಖಪಟ್ಟಿರುತ್ತಾರೆ. ವಿದ್ಯಾರ್ಥಿಗಳು ಸ್ಫುಟ ಮತ್ತು ದುಂಡಾಗಿ ಬರೆಯುವುದನ್ನು ಅಭ್ಯಾಸಮಾಡಿಕೊಳ್ಳಬೇಕು ಎಂದು ಎಚ್ಚರಿಸಿರುತ್ತಾರೆ.

ಅವರಿಗೆ ವೈಸರಾಯರು, ರಾಜಮಹಾರಾಜರೂ, ರಾಜಕಾರಣಿಗಳು, ನಾನಾ ಬಗೆಯ ವಿಷಯದಲ್ಲಿ ಸಲಹೆ ಕೇಳುವವರು, ಪುಟ್ಟಮಕ್ಕಳು, ತಾಯಂದಿರು, ವಿಧವೆಯರು ಹೀಗೆ ಪ್ರಪಂಚದ ನಾನಾ ಭಾಗಗಳಿಂದ ಪತ್ರಗಳು ಬರುತ್ತಿದ್ದವು. ಇವರ ವಿಳಾಸ ಸರಿಯಾಗಿ ಅರಿಯದ ವಿದೇಶಿಯರು ಮಹಾತ್ಮಗಾಂಧಿ, ಇಂಡಿಯ ಎಂದು ವಿಳಾಸ ಬರೆದು ಅಂಚೆಯಲ್ಲಿ ಕಳುಹಿಸುತ್ತಿದ್ದರು. ಭಾರತದಲ್ಲಿ ಪ್ರವಾಸದಲ್ಲಿ ಎಲ್ಲಿದ್ದರೂ ಅಂಚೆ ಇಲಾಖೆ ಅದನ್ನು ಮುಟ್ಟಿಸುತ್ತಿತ್ತು. ಇಷ್ಟು ಪತ್ರಗಳನ್ನೂ ಸ್ವತಃ ತಾನೇ ಓದಿನೋಡಿ ಉತ್ತರ ಬರೆಯಬೇಕೆಂಬ ಬಯಕೆ. ಇದು ಅಸಾಧ್ಯ ವಾಗುತ್ತ ಬಂತು. ಒಮ್ಮೆ ಜವಹರಲಾಲರು ಬಾಪೂಜಿಯಿನ್ನು ಕಾಣಲು ಬಂದು, ಎದುರಿಗಿದ್ದ ಪತ್ರಗಳ ರಾಶಿ ನೋಡಿ, ನಿಮಗೆ ಆರು ಸಹಾಯಕರಾದರೂ ಬೇಕು ಪತ್ರಗಳ ವಿಲೇವಾರಿ ಮಾಡಲು ಎಂದರು. ಕಾರ್‍ಯದರ್ಶಿಗಳಿಗೆ ಸಂಭಾವನೆ ಕೊಡುವ ಯೋಗ್ಯತೆ ತನಗಿಲ್ಲ ಎಂದರು ಗಾಂಧೀಜಿ. ಮಹದೇವ ದೇಸಾಯಿ ವಿಶ್ವವಿದ್ಯಾಲಯದ ಎಂ.ಎ. ಪರೀಕ್ಷೆ ಮುಗಿಸಿ ಮಹಾತ್ಮರಿಗೆ ನೆರವಾಗಲು ಸ್ವಯಂಪ್ರೇರಿತರಾಗಿ ಆಶ್ರಮಕ್ಕೆ ಬಂದರು. ತಮ್ಮ ಆಯುಷ್ಯಪರ್ಯಂತ ಗಾಂಧಿಯವರ ಆಪ್ತಕಾರ್ಯದರ್ಶಿಯಾಗಿ, ಆಳಾಗಿ, ಮಗನಾಗಿ, ಸಲಹೆಗಾರನಾಗಿ ತಮ್ಮ ಜೀವನವನ್ನೇ ಸವೆಸಿದರು. ಮಹದೇವ ಭಾಯಿ ಬಂದ ಮೇಲೆ ಮಹಾತ್ಮರ ಕೆಲಸದ ಭಾರ ಬಹಳಷ್ಟು ಕಡಮೆ ಆಯಿತು. ರಾಜಕುಮಾರಿ ಅಮೃತಕೌರ್, ಪ್ಯಾರೇಲಾಲ್, ನಿರ್ಮಲಕುಮಾರ ಬೋಸ್ ಇವರೂ ಕೆಲವು ಕಾಲ ಪತ್ರವ್ಯವಹಾರದ ವಿಲೇವಾರಿಯಲ್ಲಿ ಮಹಾತ್ಮರಿಗೆ ನೆರವಾದರು. ಆದರೂ ಸ್ವತಃ ಪತ್ರಗಳನ್ನು ಬರೆಯುವುದು ತಪ್ಪಲಿಲ್ಲ. ಕೇಂದ್ರ ಸರ್ಕಾರ ಗಾಂಧೀಜಿ ಬರೆ ದಿರುವ ಪತ್ರಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿದೆ. ಲಭ್ಯವಾಗಿರುವ ಪತ್ರಗಳನ್ನು ಮುದ್ರಿಸಲು ಸುಮಾರು 500 ಪುಟಗಳ ಒಟ್ಟು 130 ಸಂಪುಟಗಳಾದೀತೆಂದು ಪರಿಗಣಿಸಲಾಗಿದೆ.

ಹಿಂದೂಗಳು ಎಡಗೈಯನ್ನು ಪವಿತ್ರ ಕೆಲಸಗಳಿಗೆ ಬಳಸರು. ಎಡಗೈ ಮಲ ತೊಳೆಯುವುದಕ್ಕೆ ಮೀಸಲು. ಊಟ ಮಾಡಲು, ಬರೆಯಲು ಎಡಗೈ ಬಳಸು ವವರನ್ನು ಎಡಚ ಎಂದು ಹಾಸ್ಯಮಾಡುವುದುಂಟು. ದೇವರ ಪ್ರಸಾದ, ಊಟ

ತಿಂಡಿ, ಹಣ ಏನೇ ಆಗಲಿ ಎಡಗೈಯಿಂದ ಕೊಟ್ಟರೆ ಅದು ಅಶುಭವೆನಿಸುತ್ತದೆ. ಬಲಗೈಯಿಂದ ಕೊಡು ಎನ್ನುತ್ತಾರೆ. ನೂತನ ಗೃಹಲಕ್ಷ್ಮಿ ಗಂಡನ ಮನೆ ಪ್ರವೇಶಿಸುವಾಗ ಮೊದಲು ಬಲಗಾಲಿಡು ಎನ್ನುತ್ತಾರೆ ಯಾವ ಕೆಲಸಕ್ಕೂ ಬಲಗೈ ಮುಂದು. ಎಡಗೈ ಹಿಂದು. ಜರ್ಮನಿಯಲ್ಲಿ ಎಲ್ಲ ಕೆಲಸಕ್ಕೂ ಎಡಗೈ ಬಳಸುವುದೇ ಹೆಚ್ಚು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಎಡಗೈ ಪವಿತ್ರ ಕೆಲಸಗಳಿಗೆ ಬಾರದು ಈ ಭೇದವಿಲ್ಲ. ಎರಡೂ ಸಮ. ಕಾರಣ ಏನೇ ಇರಲಿ ಎರಡೂ ಕೈಗಳನ್ನು ಬಳಸುವ ಅಭ್ಯಾಸ ಗಾಂಧೀಜಿ ಮಾಡಿಕೊಂಡಿದ್ದರು. ಬಿಡುವಿಲ್ಲದ ಕೆಲಸ ಅವರಿಗೆ. ದೈವಸೃಷ್ಟಿಯಲ್ಲಿ ಎರಡು ಕೈಗಳೂ ಸಮಾನ. ಅಭ್ಯಾಸಬಲದಿಂದ ಒಂದನ್ನು ಹೆಚ್ಚಾಗಿ ಬಳಸುತ್ತೇವೆ, ಮತ್ತೊಂದನ್ನು ಅಷ್ಟಾಗಿ ಬಳಸುವುದಿಲ್ಲ. ಕಾಯಕ ಮಾಡಲು, ಬರೆಯಲು ಗಾಂಧೀಜಿ ಎರಡೂ ಕೈಗಳನ್ನು ಬಳಸುವರು.

ಮಹಾತ್ಮರು ಅಸಹಕಾರದ ಕಹಳೆ ಊದಿ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಂದ ಹೊರಬರಲು ಕರೆಕೊಟ್ಟರು. ದೇಶಭಕ್ತಿ, ಸ್ವಾತಂತ್ರ್ಯದ ಬಯಕೆಯಿಂದ ಪ್ರೇರಿತರಾದ ಉತ್ಸಾಹಿ ತರುಣರು ಶಿಕ್ಷಣಕ್ಕೆ ಶರಣುಹೊಡೆದು ಹೊರಬಂದರು. ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಇದರಿಂದ ಸ್ಫೂರ್ತಿ ಮತ್ತು ಅವಕಾಶ ದೊರೆಯಿತು. ಬೆಂಗಳೂರಿನ ದೇಶೀಯ ವಿದ್ಯಾಶಾಲೆ, ನ್ಯಾಷನಲ್ ಹೈಸ್ಕೂಲ್ ಹುಟ್ಟಿಕೊಂಡುದು ಆಗಲೇ.

ಶಾಲೆಯಿಂದ ಹೊರಬಂದವರಲ್ಲಿ ಸುಪ್ರಸಿದ್ಧ ಕನ್ನಡ ಬರಹಗಾರರಾದ ಡಾಕ್ಟರ್ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರೂ ಒಬ್ಬರು. ಇವರು ಶಾಲೆ ತೊರೆದು ದೇಶಸೇವೆ ಮಾಡುವ ಉತ್ಸಾಹದಿಂದ ಸಾಬರಮತಿ ಆಶ್ರಮಕ್ಕೆ ಹೋದರು. ಗಾಂಧಿಯವರನ್ನು ಸಂದರ್ಶಿಸಿ ಆಶ್ರಮದಲ್ಲಿ ಉಳಿಯಲು ತನಗೆ ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಂಡರು. ದೇಶಸೇವೆ ಮಾಡಲು ಮೈಸೂರಿನಿಂದ ಇಷ್ಟುದೂರ ಬರಬೇಕೆ ? ಅಲ್ಲಿಯೇ ಸಾಕಷ್ಟು ಅವಕಾಶ ಇರುವುದಲ್ಲ. ಹರಿಜನ ಸೇವೆ, ಖಾದಿ ಮಾರಾಟ, ವಯಸ್ಕರಿಗೆ ಓದು ಕಲಿಸುವುದು, ಪಾನ ನಿರೋಧದ ಪ್ರಚಾರ ಇವೆಲ್ಲವೂ ದೇಶಸೇವೆಯ ಕಾರ್ಯಗಳೇ. ನಿಮ್ಮೂರಿಗೆ ಮರಳಿ ಈ ಕಾರ್ಯಗಳಲ್ಲಿ ತೊಡಗಿರಿ. ಇಲ್ಲಿಗೆ ಬರುವವರೆಲ್ಲರಿಗೂ ಆಶ್ರಮದಲ್ಲಿ ಸ್ಥಳ ಮಾಡಿಕೊಡಲು ಈ ಆಶ್ರಮವನ್ನು ಬಹಳ ವಿಸ್ತರಿಸಬೇಕಾಗುತ್ತದೆ. ಭಾರತದಷ್ಟೇ ವಿಸ್ತರಿಸಬೇಕಾದೀತು. ನಿಮಗೆ ಇಲ್ಲಿ ಸ್ಥಳ ಸಿಗದು ಎಂದರು.

ಬಾಲಕ ರಾಮಸ್ವಾಮಿಗೆ ಇದು ಯಾವುದೂ ಮನಸ್ಸಿಗೆ ಹೊಳೆದಿರಲಿಲ್ಲ. ಕಕ್ಕಾಬಿಕ್ಕಿಯಾದ. ಏನೂ ಉತ್ತರ ಕೊಡಲು ತೋಚಲಿಲ್ಲ. ಖಿನ್ನನಾದ. ಕಣ್ಣು

ಗಳಿಂದ ಅಶ್ರುಧಾರೆ ಹೊರಬರುವುದರಲ್ಲಿತ್ತು. ಗಾಂಧೀಜಿ ಹುಡುಗನ ಮುಖ ನೋಡಿದರು. ಮನಸ್ಸು ಕರಗಿತು. ಅಜ್ಞಾನಿ ಹುಡುಗ. ಏನೂ ಯೋಚಿಸದೆ, ಮುಂದಾಲೋಚನೆಯಿಲ್ಲದೆ, ಉತ್ಸಾಹದ ಭರದಲ್ಲಿ ಓಡಿಬಂದಿದ್ದಾನೆ ಎಂದು ಮನಗಂಡರು. ಆಶ್ರಮದಲ್ಲಿ ಉಳಿದು ಗುಜರಾತಿ ವಿದ್ಯಾಪೀಠದಲ್ಲಿ ಕಲಿಯಲು ಅವಕಾಶ ಮಾಡಿಕೊಟ್ಟರು. ಕಾಯಕ ಮಾಡು. ದುಡಿದು ಉಣು ಎಂದು ರಾಮಚಂದ್ರ ವೆಂಕಟೇಶ ವಡವಿ ಅವರು ಅನುಭವಿಸಬೇಕಾಗಿ ಬಂದ ಗತಿ ಇವರಿಗೆ ಬರಲಿಲ್ಲ.

ಮೇಲಿನ ನಿದರ್ಶನಗಳಿಂದ ಕಾಯಕಕ್ಕೆ ಗಾಂಧಿಯವರು ಕೊಡುತ್ತಿದ್ದ ಮಹತ್ವ ಅರಿಯಬಹುದು. ಕಾಯಕವೇ ಕಾಯಕಲ್ಪ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂ ಚ
ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾಃ ।
ಮಾಗೃಧಾಃ ಕಸ್ಯ ಸ್ವಿದ್ಧನಂ ॥

ಸತ್ಯ, ಅಹಿಂಸೆ, ಸತ್ಯಾಗ್ರಹ

ಮಹಾತ್ಮ ಗಾಂಧೀಯವರಿಗೆ ಸತ್ಯವೇ ದೇವರು. ದೇವರೇ ಸತ್ಯ. ಎರಡೂ ಒಂದೇ. ಒಂದೇ ನಾಣ್ಯದ ಎರಡು ಮುಖಗಳು. ಇವೆರಡನ್ನೂ ಪ್ರತ್ಯೇಕಿಸಲಾಗದು. ಮಹಾತ್ಮರನ್ನು ಸತ್ಯ ಅಹಿಂಸೆಯಿಂದ ಬೇರ್ಪಡಿಸಿದರೆ, ಕಬ್ಬನ್ನು ಗಾಣಕ್ಕೆ ಕೊಟ್ಟು, ರಸ ಹಿಂಡಿದ ಮೇಲೆ ಏನು ಉಳಿಯುವುದೋ, ಅದೇ.

ದೇವರು ಸತ್ಯ ಮತ್ತು ಪ್ರೇಮ, ನೀತಿ ಧರ್ಮ ಮತ್ತು ಶೀಲ. ಯಾರಿಗೆ ನಂಬಿಕೆ ಉಂಟೋ ಅವರ ಪಾಲಿಗೆ ದೇವ ಇದ್ದೇ ಇದ್ದಾನೆ. ನನಗೆ ದೇವರಲ್ಲಿ ನಂಬಿಕೆ ಇಲ್ಲ ಎಂದು ಹೇಳುವುದು ಬಹಳ ಸುಲಭ. ಏಕೆಂದರೆ, ತನ್ನ ವಿಚಾರವಾಗಿ ಯಾರು ಏನು ಬೇಕಾದರೂ ಹೇಳಲೆಂದು ಆತ ದಯಾನಿಧಿಯಾಗಿದ್ದಾನೆ.

ಸಾವಿನ ಮಧ್ಯೆ ಜೀವ ನಿಂತಿದೆ; ಅಸತ್ಯದ ಮಧ್ಯೆ ಸತ್ಯ ನಿಂತಿದೆ. ಕತ್ತಲ ಮಧ್ಯೆ ಬೆಳಕು ಇದೆ. ದೇವರು ಪ್ರೇಮ. ಆತ ಹಿತದ ಪರಮ ಸ್ವರೂಪ. "ತೇನ ಮಪಿ ತೃಣಮಪಿ ನ ಚಲತಿ." ಅವನಿಂದಲ್ಲದೆ ಒಂದು ಹುಲ್ಲು ಕಡ್ಡಿಯೂ ಅಡದು. ಈ ಮಾತಿನಲ್ಲಿ ನನಗೆ ಪೂರ್ಣ ನಂಬಿಕೆ ಇದೆ.

ಪ್ರತಿದಿನವೂ ನಾನು ಅಪಾರ ದುಃಖವನ್ನೂ, ನಿರಾಶೆಯನ್ನೂ, ನೋಡುತ್ತಿದ್ದೇನೆ. ಅನುಭವಿಸುತ್ತಿದ್ದೇನೆ. ದೇವರಿದ್ದಾನೆಂಬ ಭಾವನೆ ಹುಚ್ಚನಾಗದಂತೆ ನನ್ನನ್ನು ಕಾಪಾಡಿದೆ. ನೀನೂ ನಾನೂ ಈ ಕೋಣೆಯಲ್ಲಿ ಕೂತಿರುವುದಕ್ಕಿಂತ ನಿಜವಾಗಿ ದೇವರು ಖಂಡಿತವಾಗಿಯೂ ಇದ್ದಾನೆಂಬುದನ್ನು ನಾನು ನಂಬುತ್ತೇನೆ. ನೀರಿಲ್ಲದೆ, ಗಾಳಿಯಿಲ್ಲದೆ ನಾನು ಇರಬಲ್ಲೆ. ಆದರೆ ಆತನಿಲ್ಲದೆ ಇರಲಾರೆ. ನೀವು ನನ್ನ ಕಣ್ಣುಗಳನ್ನು ಕೀಳಬಹುದು; ಆದರೂ ನನ್ನನ್ನು ಕೊಲ್ಲಲಾರಿರಿ. ನನ್ನ ಮೂಗನ್ನು ತರಿದು ಹಾಕಿ ಬಿಡಬಹುದು; ಆದರೂ ನಾನು ಸಾಯಲಾರೆ. ಆದರೆ ನನಗೆ ದೇವರಲ್ಲಿರುವ ನಂಬಿಕೆಯನ್ನು ಧ್ವಂಸ ಮಾಡಿ; ನಾನು ಸತ್ತೆ.

ನನ್ನ ಮಟ್ಟಿಗೆ ದೇವರನ್ನು ಅರಿಯಲು ಅಹಿಂಸೆ ಎಂದರೆ ಪ್ರೇಮವೊಂದೇ ನಿಜವಾದ ಸಾಧನ. ಸತ್ಯಕ್ಕಿಂತ ಧರ್ಮಕ್ಕಿಂತ ಹೆಚ್ಚಾದ ಮತವಿಲ್ಲ.

ಮಾನವನ ಕೈಲಿರುವ ಶಕ್ತಿಗಳಲ್ಲೆಲ್ಲ ಅಹಿಂಸೆಯು ಪರಮ ಶ್ರೇಷ್ಠವಾದುದು. ಮಾನವನ ಚಾತುರ್ಯದಿಂದ ನಿರ್ಮಿತವಾದ ಮಹಾ ವಿಧ್ವಂಸಕ ಶಸ್ತ್ರಗಳಲ್ಲೆಲ್ಲ ಮಹತ್ತಮವಾದುದು.

ಜಗತ್ತು ತರ್ಕದ ಆಡಳಿತಕ್ಕೆ ಒಳಗಾಗಿಲ್ಲ. ದೇವರು ತರ್ಕಾತೀತ. ಜೀವನ ವೆಂದರೆಯೇ ಒಂದು ಬಗೆಯ ಹಿಂಸೆ. ಕಡಿಮೆ ಹಿಂಸೆಯ ಮಾರ್ಗ ನಾವು ಹಿಡಿಯ ಬೇಕಾಗಿದೆ.

ಮಾನವ ಕುಲದ ಧರ್ಮ ಶಾಸನ ಅಹಿಂಸೆ. ಅದು ಪಶು ಬಲಕ್ಕಿಂತ ಹಿರಿದು ಮತ್ತು ಶ್ರೇಷ್ಠವಾದುದು. ಜಗತ್ತಿನಲ್ಲಿ ಪ್ರೀತಿಯನ್ನು ಮೀರಿದ ಪರಮ ಶಕ್ತಿ ಮತ್ತೊಂದಿಲ್ಲ. ಆದರೂ ಅದು ದೀನತಮ.

ದೇವರಲ್ಲಿ ಅಚಲ ಶ್ರದ್ಧೆ ಇಲ್ಲದೆ, ಅಹಿಂಸೆಯಲ್ಲಿ ಅಚಲ ಶ್ರದ್ಧೆ ಇರುವುದು ಅಸಾಧ್ಯ. ನಾವು ಶರೀರಿಗಳಾಗಿರುವವರೆಗೂ ಇರಲು ನಮಗೊಂದಿಷ್ಟು ಸ್ಥಳ ಬೇಕು. ಅಂದ ಮೇಲೆ ಪೂರ್ಣ ಅಹಿಂಸೆಯ ಜೀವನ ಸಾಧ್ಯವಿಲ್ಲ. ಜೀವಾವಧಿ ನಾವು ಆ ಸಾಧನೆಗಾಗಿ ದುಡಿಯಬೇಕು.

ಅಹಿಂಸೆ ಕೇವಲ ದರ್ಶನ ತತ್ತ್ವವಲ್ಲ. ಅದು ನನ್ನ ಜೀವನದ ಉಸಿರು.

ಷಂಡತನ ಇಲ್ಲವೇ ಹಿಂಸೆ ಎಂಬ ಸಂದರ್ಭವೊದಗಿದಾಗ "ಹಿಂಸೆ" ಎಂಬುದೇ ನನ್ನ ಸಲಹೆ.

ದ್ವೇಷ ಹಿಂಸೆಯ ಸೂಕ್ಷ್ಮ ಸ್ವರೂಪ. ಹೃದಯದಲ್ಲಿ ದ್ವೇಷ ತುಂಬಿಕೊಂಡ ವನು ನಿಜ ಅಹಿಂಸಾವಾದಿ ಆಗಲಾರ.

ತಿದ್ದುವುದಕ್ಕೇ ಅಸಾಧ್ಯವೆನಿಸುವಷ್ಟು ಪಾಪಿ ಮನುಷ್ಯನಿಲ್ಲ. ಪಾಪಿಯೆಂದು ತಾನು ತಿಳಿಯದೇ ಭಾವಿಸುವನೋ ಅವನನ್ನು ನಾಶ ಮಾಡುವಷ್ಟು ಸಂಪೂರ್ಣ ಜ್ಞಾನ ಮನುಷ್ಯನಿಗಿಲ್ಲ.

ಸತ್ಕಾರ್ಯಕ್ಕೆ ಸಹ ಬಲವಂತ ಮಾಡಬಾರದು. ಬಲಾತ್ಕಾರವು ಉದ್ದೇಶಕ್ಕೆ ಭಂಗ ತರುತ್ತದೆ. ಅಹಿಂಸೆಯು ಬಲಾತ್ಕಾರದ ಮಾರ್ಗ ಅಲ್ಲವೇ ಅಲ್ಲ. ಅದು ಪರಿವರ್ತನೆಯ ಮಾರ್ಗ.

ಭೂಮ್ಯಾಕರ್ಷಣ ಶಕ್ತಿಯು ಈ ಭೂಮಿಯನ್ನು ಆಕಾಶದಲ್ಲಿ ಸ್ಥಿರವಾಗಿ ನಿಲ್ಲಿಸಿ ರುವಂತೆ ಸಮಾಜವೆಲ್ಲ ಅಹಿಂಸೆಯಿಂದ ಭದ್ರವಾಗಿ ನಿಂತಿದೆ.

ಪುರಾಣ ಇತಿಹಾಸದ ಕಥೆಗಳು ಬಾಲ್ಯದ ಕರಮಚಂದನ ಮೇಲೆ ಅಪಾರ ಪ್ರಭಾವ ಬೀರಿದ್ದುವು. ರಾಜ ಹರಿಶ್ಚಂದ್ರ, ಶ್ರೀರಾಮ, ಪಾಂಡವರು ಕೊಟ್ಟ ವಚನಕ್ಕಾಗಿ ಪಟ್ಟ ಕಷ್ಟ ಮೋಹನನ ಮೇಲೆ ಅಚ್ಚಳಿಯದ ಮುದ್ರೆ ಒತ್ತಿದ್ದುವು. ಜೈನ ಧರ್ಮದ ತತ್ವಗಳು ಗಾಂಧೀಯವರಿಗೆ ತುಂಬ ಪ್ರಿಯವಾಗಿದ್ದುವು. ಬಾಲ್ಯದಿಂದಲೂ ಗಾಂಧೀಜಿ ಸತ್ಯಮಾರ್ಗವನ್ನೇ ಅನುಸರಿಸುತ್ತಿದ್ದರು. ಶಾಲೆಯ ಪರೀಕ್ಷೆಗೆ ಕುಳಿತಾಗ ನೆರೆಯ ವಿದ್ಯಾರ್ಥಿಯ ಬರವಣಿಗೆ ನೋಡಿ, ತನ್ನ ತಪ್ಪು ತಿದ್ದಿಕೊಳ್ಳಲು 'ಕಾಪಿ' ಮಾಡಲು ಮೋಹನ ನಿರಾಕರಿಸಿದ್ದು ಎಲ್ಲರಿಗೂ ತಿಳಿದ ವಿಷಯ. 1925 ರಲ್ಲಿ ಬಂಗಾಳದಲ್ಲಿ ಪ್ರವಾಸ ಮಾಡುತ್ತಿದ್ದ ಗಾಂಧೀಜಿ ನವಾಬ್‌ಗಂಜಿನ ಹರಿಪಾದ ಬಾಬು ಶಾಲೆಗೆ ಬಂದರು. ಅಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರು, ಸುಳ್ಳಾಡುತ್ತಿದ್ದರೂ, ಸುಳ್ಳು ಹೇಳುತ್ತಿಲ್ಲ ಎಂದು ತಿಳಿಯುವವನು ತನ್ನ ತಪ್ಪು ತಿದ್ದಿಕೊಳ್ಳಲಾರ. ಅವನಿಗೆ ಭವಿಷ್ಯವಿಲ್ಲ. ತಾನು ಸಟೆಯಾಡುತ್ತಿರುವುದನ್ನು ಗ್ರಹಿಸುವವನು, ತನ್ನ ತಪ್ಪು ಸರಿಪಡಿಸಿಕೊಳ್ಳಬಲ್ಲ. ಮಾನವ ಗಾಂಧಿ ತನ್ನ ಜೀವನದಲ್ಲಿ ಅನೇಕ ತಪ್ಪು ಮಾಡಿದರು. ಈ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಬಂದು ಅವರು ಮಹಾತ್ಮರೆನಿಸಿಕೊಂಡರು.

ಸತ್ಯ ಅಹಿಂಸೆಗಳನ್ನು ಖಚಿತವಾಗಿ ನಿರ್ದೇಶಿಸುವುದು ಸುಲಭವಲ್ಲ. ಗಾಂಧೀಯವರ ನಡೆ ನುಡಿಗಳು ಸ್ವಲ್ಪ ಮಟ್ಟಿಗೆ ಮಾರ್ಗದರ್ಶನ ನೀಡುತ್ತವೆ.

ಒಬ್ಬ ಹುಡುಗಿಯನ್ನು ಒಬ್ಬ ಪುಂಡ ಲೇವಡಿ ಮಾಡಿ ಕೆಣಕುತ್ತಾನೆ. ಅವನತ್ತ ತನ್ನ ಜೋಡು ಅವಳು ಎಸೆಯುತ್ತಾಳೆ. ಅವನು ಓಡಿ ಹೋಗುತ್ತಾನೆ. ಅನಂತರ ಬಂದು ಕ್ಷಮೆ ಯಾಚಿಸುತ್ತಾನೆ. ಪ್ರಶ್ನೆ ಹುಡುಗಿ ಮಾಡಿದ್ದು ಸರಿಯೇ? ಗಾಂಧೀಜಿ ತಮ್ಮದೇ ಸ್ವಂತ ಅನುಭವದ ಉದಾಹರಣೆ ಇದಕ್ಕೆ ದೃಷ್ಟಾಂತವಾಗಿ ಕೊಡುತ್ತಾರೆ. ಷೆಲ್‌ಶೀನ್ ಎಂಬ ಜರ್ಮನ್ ತರುಣಿ ಆಫ್ರಿಕದಲ್ಲಿ ಗಾಂಧಿಯವರ ಗುಮಾಸ್ತಳಾಗಿರುತ್ತಾಳೆ. ಇವರನ್ನು ರೇಗಿಸುವುದಕ್ಕಾಗಿಯೇ ಸಿಗರೇಟ್ ಸೇದುತ್ತಾಳೆ. ಸಿಗರೇಟ್ ಕಿತ್ತುಕೊಂಡು, ಕಪಾಳಕ್ಕೆ ಪ್ರೀತಿಯಿಂದ ತಾಡಿಸುತ್ತಾರೆ. ಅವಳ ಕಣ್ಣುಗಳಿಂದ ಧಾರಾಕಾರವಾಗಿ ನೀರು ಕಿತ್ತುಕೊಳ್ಳುತ್ತದೆ. ತಾನು ಮಾಡಿದ ತಪ್ಪನ್ನು ಅವಳು ಗ್ರಹಿಸುತ್ತಾಳೆ. ಅಪರಾಧವಾಯ್ತು. ಇನ್ನು ಮೇಲೆ ಹೀಗೆ ಮಾಡುವುದಿಲ್ಲ. ಕ್ಷಮಿಸಿ. ತಮ್ಮ ವಾತ್ಸಲ್ಯದ ಅರಿವು ನನಗಾಗಿದೆ ಎಂದು ಬರೆದು ಕೊಡುತ್ತಾಳೆ. ಕೋಪದಿಂದ ಹೀಗೆ ಮಾಡಿದ್ದರೆ ಅದು ಅಹಿಂಸೆ ಎನಿಸಿಕೊಳ್ಳದು. ಕರುಣೆ ಮತ್ತು ಪ್ರೀತಿಯಿಂದ, ತನಗೆ ಬುದ್ಧಿ ಕಲಿಸಲು ಗಾಂಧೀಜಿ ಹೀಗೆ ಮಾಡಿದರೆಂಬ ಅರಿವು ಅವಳಿಗೆ ಆಯಿತು. ಅವಳಲ್ಲಿ ಅಹಿಂಸೆ ಪರಿವರ್ತನೆ ಮಾಡಿಸಿತು. ಅಪರಿಚಿತ ಗೇಲಿ ಮಾಡಿ ಚುಡಾಯಿಸಿದರೆ, ಹೇಡಿಯಲ್ಲದವಳು ಅದನ್ನು ಸಹಿಸಿಕೊಂಡಿರಲಾರಳು. ಹಿಂಸೆಯಿಂದ

ಪ್ರತಿಭಟಿಸದೆ ಇರಲಾರಳು. ಆದರೆ ಅಹಿಂಸೆಯನ್ನು ಅವಳು ತನ್ನ ಬದುಕಿನಲ್ಲಿ ಅರಗಿಸಿಕೊಂಡು ತನ್ನದಾಗಿ ಮಾಡಿಕೊಂಡಿದ್ದರೆ, ಅವಳನ್ನು ಕೆಣಕಲು ಯಾರೂ ಬರುತ್ತಿರಲಿಲ್ಲ, ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ತಾನಾಗಿಯೇ ತಲೆ ತಗ್ಗಿಸಿಕೊಂಡು ಹೋಗುತ್ತಿದ್ದ. ಈ ಬಗ್ಗೆ ಗಾಂಧೀಜಿ ಇದಕ್ಕೂ ಹೆಚ್ಚಿನ ದೀರ್ಘ ವಿವರಣೆ ಕೊಟ್ಟಿರುತ್ತಾರೆ.

ಒಬ್ಬ ಹುಚ್ಚ ಕತ್ತಿ ಝಳಪಿಸುತ್ತ, ಅಡ್ಡಲಾಗಿ ಸಿಕ್ಕಿದವರನ್ನೆಲ್ಲ ಕೊಚ್ಚುತ್ತಾ ಓಡುತ್ತಾನೆ. ಸಮಾಜದ ಹಿತದೃಷ್ಟಿಯಿಂದ ಅವನನ್ನು ಗುಂಡಿಕ್ಕಿ ಕೊಲ್ಲುವುದೂ ತಪ್ಪಾಗದು. ಅದೇ ಪರಿಪೂರ್ಣ ಅಹಿಂಸಾವಾದಿ ಅವನೆದುರಿನಲ್ಲಿ ನಿಂತು, ಕಣ್ಣು ಅಥವಾ ಕೈ ಸಂಜ್ಞೆ ಮಾಡುವುದರಿಂದಲೇ ಹುಚ್ಚ ಶಾಂತನಾಗಬಲ್ಲ.

ಶಾಂತಮೂರ್ತಿ ಬುದ್ಧನನ್ನು ಪರೀಕ್ಷಿಸಲು ಮದಿಸಿದ ಆನೆಗೆ ಹೆಂಡ ಕುಡಿಸಿ ಅವನತ್ತ ಓಡಿಸುತ್ತಾರೆ. ಇವನ ಜೊತೆಯಲ್ಲಿದ್ದ ಶಿಷ್ಯರೆಲ್ಲ ಪ್ರಾಣ ಉಳಿಸಿಕೊಳ್ಳಲು ಓಡಿಹೋಗುತ್ತಾರೆ. ಆನಂದನೊಬ್ಬನೇ ಗುರುವಿನ ರಕ್ಷಣೆಗೆ ನಿಲ್ಲುತ್ತಾನೆ. ಅಹಿಂಸೆಯ ಪರಿಪೂರ್ಣತೆ ಪಡೆದಿದ್ದ ಬುದ್ಧನನ್ನು ನೋಡುತ್ತಲೇ, ಮದಿಸಿದ ಆನೆ, ಶಾಂತವಾಗಿ ಕಾಲು ಮಡಿಸಿ, ನೆಲ ಊರಿ, ಸೊಂಡಲೆತ್ತಿ ಅಹಿಂಸಾ ಮೂರ್ತಿಯನ್ನು ನಮಸ್ಕರಿಸಿ ಹೊರಟುಹೋಗುತ್ತದೆ. ಪರಿಪೂರ್ಣ ಅಹಿಂಸಾವ್ಯಕ್ತಿ ಮದಿಸಿದ ಮೃಗದ ಮೇಲೆ ತನ್ನ ಪ್ರಭಾವ ಬೀರಬಲ್ಲವನಾದರೆ, ಮಾನವನ ಮೇಲೆ ಬೀರಲಾರನೇ ?

ಅಹಮದಾಬಾದಿನ ಗಿರಣಿ ಮಾಲೀಕ ಶ್ರೀಮಂತ ಅಂಬಾಲಾಲ್ ಸಾರಾಭಾಯಿ ತನ್ನ ತೋಟದೊಳಕ್ಕೆ ನುಗ್ಗಿ ತೊಂದರೆ ಕೊಡುತ್ತಿದ್ದ ಅರವತ್ತು ಬೀದಿ ನಾಯಿಗಳನ್ನು ಹಿಡಿದು ಕೊಲ್ಲಿಸಿದ. ನಿಮ್ಮ ಮಿತ್ರ ಈ ರೀತಿ ಮಾಡಿದುದು ಸರಿಯೇ ಎಂದು ಗಾಂಧಿಯವರಿಗೆ ಪತ್ರಗಳು ಸುರಿಯಲಾರಂಭಿಸಿದುವು. ಗಾಂಧಿಯವರು 'ಯಂಗ್ ಇಂಡಿಯ' ಪತ್ರಿಕೆಯಲ್ಲಿ ಅಂಬಾಲಾಲರನ್ನು ಸಮರ್ಥಿಸಿ ಲೇಖನಗಳನ್ನು ಬರೆದರು. ಒಂದು ಹುಚ್ಚು ನಾಯಿ ಇತರ ನಾಯಿಗಳಿಗೆ ಹುಚ್ಚು ಹಚ್ಚಬಲ್ಲದು. ಹುಚ್ಚು ನಾಯಿಗಳ ತಂಡ ನಗರವಾಸಿಗಳಿಗೆ ಮೃತ್ಯು ಸ್ವರೂಪವಾದೀತು. ಕೊರಳುಪಟ್ಟಿಯಿಲ್ಲದ ಪ್ರತಿಯೊಂದು ನಾಯಿಯೂ ಅಪಾಯಕಾರಿ. ಪ್ರತಿಯೊಬ್ಬ ನಾಗರೀಕನೂ ಒಂದು ಬೀದಿ ನಾಯಿಯನ್ನು ಸಾಕಿ ಸಲಹಲಿ. ಇದು ಸಮಸ್ಯೆಗೆ ಪರಿಹಾರ. ಹಾಗೆ ಮಾಡದೆ ನಾಯಿಗಳು ಗುಂಪುಗುಂಪಾಗಿ ಪುಂಡಲೆಯಲು ಬಿಡುವುದು ಕ್ಷೇಮವಲ್ಲ.

ಕಪಿಗಳು ಆಶ್ರಮದ ಕೈದೋಟಕ್ಕೆ ನುಗ್ಗಿ ತರಕಾರಿ ಸಸಿ, ಪೈರುಪಚ್ಚೆಗಳನ್ನು ನಾಶಮಾಡುತ್ತಿದ್ದುವು. ಪಟಾಕಿ ಹಚ್ಚಿ, ಶಬ್ದಮಾಡಿ ಬಿಲ್ಲಿನಿಂದ ಬಾಣ ಹೊಡೆದು

ಏನು ಮಾಡಿದರೂ ಹೋಗುತ್ತಿರಲಿಲ್ಲ. ನಮ್ಮನ್ನು ಇಲ್ಲಿಂದ ಓಡಿಸಬಲ್ಲಿರಾ ಎಂಬಂತೆ ಅಣಕಮಾಡುವುವು. ಈ ಸಮಸ್ಯೆ ಭಾರತದ ಬಹುತೇಕ ಗ್ರಾಮಗಳು ಅನುಭವಿಸುತ್ತವೆ. ಇವುಗಳ ಹಾವಳಿಯಿಂದ ತಪ್ಪಿಸಿಕೊಳ್ಳಲು ಗುಂಡಿಟ್ಟು ಕೊಲ್ಲುವುದೂ ಉಂಟು. ದೇವರೆಂದು ಭಾವಿಸುವ ಕಪಿಗಳನ್ನು ಅವು ಹೊಟ್ಟೆಪಾಡಿಗಾಗಿ ತೋಟದೊಳಗೆ ನುಗ್ಗಿ ಒಂದಿಷ್ಟು ತಿಂದರೆ ಅವುಗಳನ್ನು ಬಡಿದು ಸಾಯಿಸುತ್ತಾರೆ. ಶ್ರೀರಾಮನಿಗೆ ನೆರವು ನೀಡಿದ ಸುಗ್ರೀವ, ಆಂಜನೇಯರ ವಂಶಜರು ಕಪಿಗಳೆಂದು ಹಿಂದೂಗಳ ಭಾವನೆ. ಆದ್ದರಿಂದ ಕಪಿಗಳನ್ನು ಹೊಡೆಯದಂತೆ, ಕೊಲ್ಲದಂತೆ ಎಲ್ಲರಿಗೂ ಬುದ್ಧಿವಾದ ನೀಡಿ ಎಂದು ಒಬ್ಬ ಮಹಿಳೆ ಮಹಾತ್ಮರಿಗೆ ಬರೆದಳು. ಅದಕ್ಕೆ ಗಾಂಧೀಜಿ ಉತ್ತರಿಸಿದರು. ಪೈರು ಬೆಳೆಸಿ, ಹಣ್ಣು ಕಾಯಿ ತಿನ್ನಲು ಕಪಿಗಳಿಗೆ ಬಿಡಿ ಎಂದು ಹೇಳಲಾರೆ. ಕಪಿಗಳು ಆಂಜನೇಯರಲ್ಲ, ಮನುಷ್ಯರೆಲ್ಲ ಶ್ರೀರಾಮರಲ್ಲ.

ಹಿಂದೂ ಧರ್ಮದ ಆಚಾರ, ವಿಚಾರ, ವ್ಯವಹಾರ ಎಲ್ಲವೂ ಗಾಂಧಿಯವರಿಗೆ ಆನುವಂಶಿಕ. ಗೀತೆ ಅವರ ಮೇಲೆ ಅಪಾರ ಪ್ರಭಾವ ಬೀರಿದ ಎಲ್ಲ ಸನ್ನಿವೇಶಗಳಲ್ಲೂ ಮಾರ್ಗದರ್ಶನ ನೀಡುತ್ತಿದ್ದ ಧರ್ಮಗ್ರಂಥ. ಗೋವು ಹಿಂದೂ ಧರ್ಮದ ಸಂಕೇತ. ಕರುಣೆಯ ಗೀತೆ. ಮುದಿವಯಸ್ಸಾದರೂ ಅದನ್ನು ನಾಶಮಾಡುವಂತೆ ಹೇಳರು. ಕುಟುಂಬದಲ್ಲಿ ವೃದ್ಧರಾಗಿ, ಕಾಯಿಲೆಯಾಗಿ, ಭೂಬಾರವಾದರೂ ಜೀವ ಗೊನೆಗಾಣಿಸಲು ಯಾರೂ ಪ್ರಯತ್ನಿಸರು. ಜೀವಸಹಿತ ನನ್ನನ್ನೇಕೆ ಉಳಿಸಿರುವೆ ಭಗವಂತ. ನನ್ನ ಜೀವ ಅಂತ್ಯಗೊಳಿಸಬಾರದೆ ಎಂದು ಗುಣವಾಗದ ಕಾಯಿಲೆಯಿಂದ ನರಳುತ್ತಿರುವವರು ಹಲುಬಬಹುದು. ಸಂಯುಕ್ತ ಅಮೇರಿಕದ ಒಂದು ರಾಜ್ಯದಲ್ಲಿ ಇತ್ತೀಚೆಗೆ ಒಂದು ಶಾಸನವಾಗಿವೆ. ದೀರ್ಘಕಾಲದ ವ್ಯಾಧಿಯಿಂದ ನರಳುತ್ತಿರುವವರು, ಅವರ ಸಂರಕ್ಷರು, ಮತ್ತು ಕಾಯಿಲೆ ಗುಣಪಡಿಸಲು ಸಾಧ್ಯವಿಲ್ಲವೆಂದು ಒಮ್ಮನಿಸ್ಸಿನಿಂದ ವೈದ್ಯರು ಅಭಿಪ್ರಾಯಪಟ್ಟಲ್ಲಿ ಅಂಥವರ ಕಷ್ಟ ನಿವಾರಿಸಲು ಚುಚ್ಚುಮದ್ದು ಕೊಟ್ಟು ಜೀವ ಅಂತ್ಯಗೊಳಿಸಬಹುದೆಂಬ ಶಾಸನವಾಗಿದೆ. ಒಬ್ಬ ತರುಣಿ ಮೋಟಾರು ಅಪಘಾತದಲ್ಲಿ ಗಾಯಗೊಂಡಳು. ಮೆದುಳಿಗೆ ಪೆಟ್ಟಾಗಿ ಸ್ಮರಣೆ ತಪ್ಪಿತು. ನಿದ್ರಾವಸ್ಥೆ ಆವಳನ್ನು ಆವರಿಸಿತು. ಗಂಟಲಿಗೆ 'ಗ್ಲೂಕೋಸ್' ಮತ್ತು ದ್ರವ ಆಹಾರ ಬಿಟ್ಟರೆ ಒಳಕ್ಕೆ ಇಳಿಯುವುದು. ಹಾಸಿಗೆಯಲ್ಲೇ ಮಲಮೂತ್ರ ವಿಸರ್ಜನೆ. ಆರು ವರ್ಷಗಳ ದೀರ್ಘಕಾಲ ಇದೇ ನಿದ್ರಾವಸ್ಥೆಯ ಸ್ಥಿತಿ. ಬರಬರುತ್ತಾ ಆಹಾರ ಗಂಟಲಲ್ಲಿ ಇಳಿಯುವುದೂ ಕಷ್ಟವಾಯಿತು. ದೇಹ ಮೂಳೆ ಚಕ್ಕಳ. ಸಾಧ್ಯವಾದ ಎಲ್ಲ ಚಿಕಿತ್ಸೆಗಳನ್ನೂ ನಡೆಸಲಾಯಿತು. ಏನೂ ಪ್ರಯೋಜನವಾಗಲಿಲ್ಲ. ಸೂಜಿ ಮದ್ದು ಕೊಟ್ಟು ಜೀವ ಅಂತ್ಯಗೊಳಿಸಲು ಅವಕಾಶ ಕೊಡಬೇಕಾಗಿ ಮಾತಾಪಿತೃಗಳು ಅರ್ಜಿ ಸಲ್ಲಿಸಿದರು. ಶಾಸನದಲ್ಲಿ ಇದಕ್ಕೆ ಅವಕಾಶವಿಲ್ಲ. ಖೂನಿ ಆಗುತ್ತದೆ ಎಂದಿತು ಸರ್ಕಾರ. ಕಡೆಗೆ ಜನಾಭಿಪ್ರಾಯಕ್ಕೆ ಮಣಿದು ಇಂಥ ಅಪೂರ್ವ ಸನ್ನಿವೇಶಗಳಲ್ಲಿ

ಪ್ರಾಣಹರಣ ಮಾಡಬಹುದೆಂಬ ಶಾಸನ ಮಾಡಿತು. ರೋಗಿ ಬಯಸಿದ, ಪೋಷಕರು ಒಪ್ಪಿದರು ಎಂದರಾಗದು. ಎಷ್ಟೋ ನಿರ್ಬಂಧಗಳು. ಆದರೂ ಮಾನವನ ಅಸಹಾಯಕತೆಯ ಕೊನೆಯ ಮಜಲು ಮುಟ್ಟಿದಾಗ ಪ್ರಾಣಹರಣ ಮಾಡಬಹುದಾದ ಅವಕಾಶ ಕಲ್ಪಿಸಿಕೊಟ್ಟಿರುವ ನಿದರ್ಶನ ಇದೊಂದೇ ಜಗತ್ತಿನಲ್ಲಿ.

ಆಶ್ರಮದ ಒಂದು ಕರು ರೋಗಗ್ರಸ್ತವಾಯಿತು. ಕಾಲು ಒದರಿಕೊಳ್ಳುತ್ತ ನೆಲದ ಮೇಲೆ ಮರಣೋನ್ಮುಖವಾಗಿತ್ತು. ಜೀವ ಉಳಿಸಲು ಮಾಡಿದ ಪ್ರಯತ್ನಗಳು ನಿಷ್ಪ್ರಯೋಜಕವಾದುವು. ಅದರ ಮರಣಯಾತನೆ ಅಸಹ್ಯವಾಯಿತು. ಆಶ್ರಮವಾಸಿಗಳೆಲ್ಲರನ್ನೂ ಕರೆದು ಏನು ಮಾಡಲೆಂದು ವಿಚಾರವಿನಿಮಯ ನಡೆಸಿದರು. ಪ್ರಾಣ ಕೊನೆಗಾಣಿಸುವುದರಿಂದ ಸಂಕಟ ಪರಿಹರಿಸಬಹುದೆಂಬ ಸಲಹೆ ಮಾಡಿದರು. ಗುಂಡಿಟ್ಟು ಕೊಲ್ಲುವ ಸಲಹೆ ಬಂತು. ಗಾಂಧೀಜಿ ಪಶುವೈದ್ಯನನ್ನು ಬರಮಾಡಿಕೊಂಡು, ಪ್ರಾಣ ಉಳಿಸಲು ಸಾಧ್ಯವಿಲ್ಲವೆಂದು ಧೃಡಮಾಡಿಕೊಂಡು, ಚುಚ್ಚುಮದ್ದು ಕೊಟ್ಟು ಅದರ ಅವಸ್ಥೆ ಅಂತ್ಯಗೊಳಿಸಿದರು. ಇದರ ಬಗ್ಗೆ ಬಹಳ ಕ್ರೋಧ, ವಿರೋಧ, ಪ್ರತಿಭಟನೆ ಎದ್ದಿತು. ಕಡೆಯವರೆಗೂ ಗಾಂಧೀಜಿ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ಗೋಹತ್ಯೆ ಶಾಸನ ಬಲದಿಂದ ನಿಲ್ಲಿಸಬೇಕೆಂಬುದು ಹಿಂದೂ ಮತ್ತು ಜೈನರ ಬಹುಮತಾಭಿಪ್ರಾಯ. ಬಲವಂತದಿಂದ ಗೋಹತ್ಯೆ ನಿಷೇಧಿಸುವುದಕ್ಕೆ ಗಾಂಧಿಯವರ ಬೆಂಬಲವಿರಲಿಲ್ಲ. ಗೋ, ಪ್ರಾಣಿವರ್ಗದ ಹಿಂದೂ ಧರ್ಮದ ಸಂಕೇತ. "ಗೋ ಬ್ರಾಹ್ಮಣೇಭ್ಯೋ ಶುಭಂ ಭವಂತು, ಸಮಸ್ತ ಸನ್ಮಂಗಳಾನಿ ಭವಂತು" ಹೀಗೆ ಬ್ರಾಹ್ಮಣರು ಪ್ರತಿದಿನ ಭಗವಂತನಲ್ಲಿ ಮೊರೆಯಿಡುವ ಪ್ರಾರ್ಥನೆ. ಗೋವು ಎಂದರೆ ಕೇವಲ ಹಸು ಎಂದರ್ಥವಲ್ಲ. ಪ್ರಾಣಿ ವರ್ಗದ ಸಂಕೇತವದು. ಅಂತೆಯೇ ಬ್ರಾಹ್ಮಣ ಎಂದರೆ ಉಚ್ಚವರ್ಣದ ಹಿಂದೂ ಎಂದು ಅರ್ಥವಲ್ಲ. ಮಾನವ ಕುಲದ ಸಂಕೇತವೇ ಬ್ರಾಹ್ಮಣ. ಗೋಹತ್ಯೆಯನ್ನು ಶಾಸನ ಬಲದಿಂದ ನಿಲ್ಲಿಸಬೇಕೆಂಬುದು ಮಹಾತ್ಮರ ಶ್ರೇಷ್ಠ ಅನುಯಾಯಿ ವಿನೋಬ ಭಾವೆ ಅವರ ನಿಶ್ಚಿತ ಅಭಿಪ್ರಾಯ. ಈ ಗುರಿ ಸಾಧನೆಗಾಗಿ ಪ್ರಾಣಾರ್ಪಣೆ ಮಾಡಲೂ ಅವರು ಸಿದ್ಧ. ಮರಣಾಂತ್ಯದವರೆಗೂ ಅದರ ರಕ್ಷಕ ಅದನ್ನು ಸರಿಯಾಗಿ ಪಾಲಿಸಿ ಪೋಷಿಸಬೇಕೆಂಬುದು ಮಹಾತ್ಮರ ಮತ. "ಗೋವಿನ ಪ್ರಾಣ ಉಳಿಸಲು ಮಾನವನನ್ನು ನಾನು ಕೊಲ್ಲಲಾರೆ, ಅಂತೆಯೇ ಮಾನವನ ಪ್ರಾಣ ರಕ್ಷಣೆಗೆ ಅದು ಎಷ್ಟೇ ಶ್ರೇಷ್ಠವೆನಿಸಲಿ ಗೋವನ್ನುಬಲಿಗೊಡಲಾರೆ." ಇದು ಅವರ ನಿಲುವು.

ಮಾಂಸದ ಸಾರು ಕೊಟ್ಟು ಮಗನ ಪ್ರಾಣ ಉಳಿಸರು. ಆಕಳಿಗೆ ಕೊಡಲಾಗುತ್ತಿದ್ದ ಹಿಂಸೆ, ಪತ್ನಿಯ ಮೇಲಿನ ಪ್ರೀತಿ, ಪ್ರಾಣ ಉಳಿಸಿ ಕಾಪಾಡಿಕೊಳ್ಳಬೇಕೆಂಬ

ಹಂಬಲ ಇವು ಆಕಳಿನ ಹಾಲು ತ್ಯಜಿಸಿ, ಆಡಿನ ಹಾಲು ಸೇವಿಸುವಂತೆ ಅವರಿಗೆ ಮಾಡಿದುವು. ವೈದ್ಯನಾಗುವ ಬಯಕೆ ಒಂದು ಕಾಲಕ್ಕೆ ಅವರಲ್ಲಿ ಇತ್ತು. ಆದರೆ ವೈದ್ಯಶಾಸ್ತ್ರದ ಅಭ್ಯಾಸಕ್ಕಾಗಿ ಕಪ್ಪೆ, ಇಲಿ, ಮೊಲ, ಹಂದಿ, ಕೋಳಿ ಇವುಗಳನ್ನು ಪ್ರಯೋಗ ಪಶುಗಳಾಗಿ ಬಳಸುವುದು ಅವರಿಗೆ ಸಮ್ಮತವಿರಲಿಲ್ಲ. ಮಾನವನ ಪ್ರಾಣ ಉಳಿಸಲು ಪ್ರಾಣಿಗಳ ಪ್ರಾಣಹರಣ ಮಾಡುವುದು ಅವರಿಗೆ ಅಪ್ರಿಯ. ಅಮೃತ ವೆನಿಸಿಕೊಳ್ಳುವ ಕ್ಷೀರ ಸಹ ಅವರ ದೃಷ್ಟಿಯಲ್ಲಿ ಪ್ರಾಣಿ ಜನ್ಯ. ಆದ್ದರಿಂದ ವರ್ಜ್ಯ. ಜೀವಾಂತ್ಯದವರೆಗೂ ಹಾಲಿನಷ್ಟೇ, ಸಕಲ ಗುಣಗಳಲ್ಲೂ ಯೋಗ್ಯವಾದ ಸಸ್ಯಾಹಾರದ ಸಂಶೋಧನೆಯಲ್ಲಿ ನಿರತರಾಗಿದ್ದರು. ಮಾಂಸಾಹಾರದ ವಿರೋಧಿಗಳಾಗಿದ್ದರೂ, ಮಾಂಸಾಹಾರಿಗಳ ವಿರೋಧಿ ಆಗಿರಲಿಲ್ಲ–ಬಾಪು. ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದ, ಅಷ್ಟೇಕೆ ಗೌತಮಬುದ್ಧ ಇವರೆಲ್ಲರೂ ಮಾಂಸಾಹಾರ ತ್ಯಜಿಸಿದವರಲ್ಲ.

ಬಂಗಾಳದಲ್ಲಿ ಮತೀಯ ಸೌಹಾರ್ದದ ಸ್ಥಾಪನೆಗಾಗಿ ಗಾಂಧೀಜಿ ಏಕಾಂಗಿಯಾಗಿ ಸಂಚರಿಸುತ್ತಿದ್ದರು. ಇಲ್ಲಿಯ ಜನ ದಿನವಹಿ ಮೀನು ಸೇವಿಸುವವರು ಎಂದರು ನಿರ್ಮಲ ಕುಮಾರ ಬೋಸ್. ಆಕ್ಷೇಪಣೆ ಏಕೆ? ಬಂಗಾಳ, ನದಿ ಕಾಲುವೆಗಳಿಂದ ನಿಬಿಡವಾದ ಜಲಭರಿತ ಪ್ರದೇಶ. ಪ್ರತಿಯೊಂದು ಮನೆಯಲ್ಲೂ ಮೀನು ಸಾಕುವ ಕೊಳ. ಆದ್ದರಿಂದ ಅದು ಸಹಜ ಆಹಾರ. ಆಹಾರದ ಕಲುಬೆರಕೆ ಮಾಡುವವರಿಗಿಂತ ಇದರಿಂದ ಸಮಾಜಕ್ಕೆ ಹೆಚ್ಚು ಅನರ್ಥವಾಗದು ಎಂದರು.

ಫೋನಿಕ್ಸ್, ಟಾಲ್‌ಸ್ಟಾಯಿ, ಸಾಬರಮತಿ, ಸೇವಾಗ್ರಾಮ ಎಲ್ಲ ಆಶ್ರಮಗಳಲ್ಲೂ ಹಾವು, ಚೇಳು, ಮಂಡರಗಪ್ಪೆ, ಎಲ್ಲ ಪ್ರಾಣಿಗಳ ವಧೆ ನಿಷೇಧ. ಆಫ್ರಿಕದ ಫೋನಿಕ್ಸ್ ಆಶ್ರಮದಲ್ಲಿ ದೊಡ್ಡಗಾತ್ರದ ಕಪ್ಪು ಜೇಡರ ಹುಳುಗಳಿರುತ್ತಿದ್ದುವು. ಇಂಗ್ಲೆಂಡಿನಿಂದ ಶ್ರೀಮತಿ ಅಡವೆಸ್ಟ್ ಅವರು ತಮ್ಮ ನಾಲ್ಕು ಮಕ್ಕಳೊಡನೆ ಆಶ್ರಮದಲ್ಲಿರುತ್ತಿದ್ದರು. ಜೇಡರ ಹುಳು ನೋಡಿ ಅಂಜುತ್ತಿದ್ದರು. ಅವು ಮನೆಯ ಮೂಲೆಗಳಲ್ಲೇ ಬಲೆ ಕಟ್ಟಿಕೊಂಡು ಇರುತ್ತಿದ್ದುವು. ಅನ್ಯ ಮಾರ್ಗ ಕಾಣದೆ ಅವುಗಳೊಡನೆಯೇ ವಾಸ ಮಾಡಬೇಕಾಗಿ, ಅಭ್ಯಾಸವಾಗಿ ಹೋಯಿತು. ಹಿಂಸಕ ಪ್ರಾಣಿಗಳೆನಿಸಿಕೊಳ್ಳುವ ಹಾವು, ಚೇಳು, ಹುಲಿ, ಸಿಂಹ ಮೊದಲಾದುವೂ ದೈವ ಸೃಜಿತ. ಅವುಗಳೊಡನೆ ಸಹಜೀವನ ನಡೆಸುವ ಅರಿವು ಮನುಷ್ಯನಿಗಿಲ್ಲ. ಆದ್ದರಿಂದ ಮಾನವ ಅವುಗಳನ್ನು ಕೊಲ್ಲಬಯಸುತ್ತಾನೆ. ಅವುಗಳನ್ನು ನಾಶಪಡಿಸದಿದ್ದರೆ ತಾನು ಉಳಿಯಲಾರೆ ಎಂಬ ಭಾವನೆ. ಋಷಿಗಳೊಡನೆ ಅವು ಸಹಬಾಳ್ವೆ ಬಾಳುತ್ತಿದ್ದುವೆಂದು ಪುರಾಣ ಇತಿಹಾಸಗಳು ತಿಳಿಸುತ್ತವೆ. ಅನ್ಯಮತೀಯರೊಡನೆ ಸಹಬಾಳ್ವೆ ನಡೆಸುವುದನ್ನು ಅರಿಯದಿರುವವನು ಕ್ರೂರ ಹಿಂಸಕ ಪ್ರಾಣಿಗಳೊಂದಿಗೆ ಹೇಗೆ ಜೀವಿಸಬಲ್ಲ.

ಫೋನಿಕ್ಸ್ ಆಶ್ರಮದಲ್ಲಿ ಹಲವರನ್ನು ಹಾವುಗಳು ಕಚ್ಚಿದರೂ ಯಾರೂ ಸಾಯಲಿಲ್ಲ. ಯಾವ ಆಶ್ರಮದಲ್ಲೂ ಹಾವಿನಿಂದ ಕಚ್ಚಿ ಸತ್ತವರಿಲ್ಲ. ಇದು ಅವ್ಯಕ್ತ ಪರಮಾತ್ಮನ ಕೃಪೆ. ಮೂಢನಂಬಿಕೆ ಎಂದರೂ ಆಗಬಹುದು ಎನ್ನುತ್ತಾರೆ ಗಾಂಧೀಜಿ. ಒಮ್ಮೆ ಗಾಂಧೀಜಿ ಬರೆಯುತ್ತ ಕುಳಿತಿದ್ದರು. ಅವರ ಬೆನ್ನಿನ ಚಾದರದ ಮೇಲೆ ಒಂದು ಹಾವು ಹರಿಯುತ್ತಿದ್ದುದನ್ನು ಒಬ್ಬ ಆಶ್ರಮವಾಸಿ ನೋಡಿದ. "ಗಾಬರಿ ಆಗಬೇಡಿ. ನಿಮ್ಮ ಬೆನ್ನಿನ ಮೇಲೆ ಹಾವು ಏರುತ್ತಿದೆ. ಉಸಿರು ಹಿಡಿದು ಅಲುಗಾಡದೆ ಕುಳಿತುಕೊಳ್ಳಿ" ಎಂದು ಹೇಳಿ, ವಸ್ತ್ರದ ನಾಲ್ಕು ಮೂಲೆಗಳನ್ನು ಮೆಲ್ಲನೆ ಹಿಡಿದು, ಹಾವನ್ನು ನಡುವೆ ಸೇರಿಸಿ, ಅದನ್ನು ಆಶ್ರಮದ ಹೊರಕ್ಕೆ ತೆಗೆದುಕೊಂಡು ಹೋಗಿ ಬಿಟ್ಟ.

ಇನ್ನೊಮ್ಮೆ ಗಾಂಧೀಜಿ ಕಣ್ಣುಮುಚ್ಚಿ ಧ್ಯಾನಾಸಕ್ತರಾಗಿ ಪ್ರಾರ್ಥನಾ ಸಭೆಯಲ್ಲಿ ಕುಳಿತಿದ್ದರು. ಎದುರಿಗೆ ಮಕ್ಕಳು. ಒಂದು ವಿಷಸರ್ಪ ಎಲ್ಲಿಂದಲೋ ಹರಿದು ಬಂದು, ತೊಡೆ ಏರಿ, ಸುರುಳಿ ಸುತ್ತಿಕೊಂಡು ಮಲಗಿತು. ಮಕ್ಕಳೆಲ್ಲ ಭಯ ಆಶ್ಚರ್ಯಭರಿತರಾಗಿ ಎವೆಇಕ್ಕದೆ ನೋಡುತ್ತಿದ್ದಾರೆ. ಹಿರಿಯರೊಬ್ಬರು ಬಂದರು. ಹಾವು ನಿರ್ಭಯವಾಗಿ ಬಾಪು ತೊಡೆಯ ಮೇಲೆ ಮಲಗಿದ್ದುದನ್ನು ಗಮನಿಸಿದರು. ಒಳಕ್ಕೆ ಹೋಗಿ ಬೊಂಬು, ಗಳ, ಕುಣಿಕೆ ಹಗ್ಗ, ಬುಟ್ಟಿ ಇವುಗಳನ್ನು ತಂದರು ಹಾವು ಹಿಡಿಯಲು. ಗಾಂಧೀಜಿ ತಲೆ ಆಡಿಸಿ ಸುಮ್ಮನಿರಿ ಎಂದು ಸೂಚಿಸಿದರು. ಪ್ರಾರ್ಥನೆ ಮುಗಿಯುವವರೆಗೂ ಅಲುಗಾಡಲಿಲ್ಲ, ಕಣ್ಣು ತೆರೆಯಲಿಲ್ಲ. ಮತ್ತೆ ಹಾವು ಹಿಡಿಯಲು ಆಶ್ರಮವಾಸಿ ಬಂದ. ಸುಮ್ಮನಿರುವಂತೆ ಸಂಜ್ಞೆ ಮಾಡಿದರು. ಮೆಲ್ಲನೆ ಪದ್ಮಾಸನ ಬಿಡಿಸಿಕೊಳ್ಳಲು ಪ್ರಾರಂಭಿಸಿದರು. ಮೆಲ್ಲ ಮೆಲ್ಲನೆ ಮೊಣಕಾಲು, ತೊಡೆ ಆಡಿಸಿದಂತೆ ಹಾವು ಎಚ್ಚೆತ್ತು, ತೊಡೆಯ ಮೇಲಿಂದ ಇಳಿದು ಕಾಡಿಗೆ ಹೊರಟು ಹೋಯಿತು.

ಒಬ್ಬ ಕಿರಿಸ್ತಾನ ಮಿಷಿನರಿ ಹೆಂಗಸು ತನ್ನ ಐದು ವರ್ಷದ ಮಗುವಿನೊಡನೆ ಆಶ್ರಮಕ್ಕೆ ಬಂದಳು. ಇವರಿಬ್ಬರೂ ಮಾತನಾಡುತ್ತಿದ್ದಾಗ ಬೇಸರಗೊಂಡ ಮಗು ಆಟವಾಡಲು ಹೊರಕ್ಕೆ ಹೋಯಿತು. ತಾಯಿ ಹೊರಗಡೆ ಇಣಕಿ ನೋಡಿದಳು. ಮಗು ದೊಡ್ಡ ಹಾವಿನೊಡನೆ ಆಟವಾಡುತ್ತಿದೆ. ಗಾಬರಿಗೊಂಡ ತಾಯಿ ಸಹಾಯ ಅಪೇಕ್ಷಿಸುವ ಕಣ್ಣುಗಳಿಂದ ಗಾಂಧಿಯವರತ್ತ ನೋಡಿದಳು. ಬಾಯಿ ಮುಚ್ಚಿಕೋ ಮಾತನಾಡಬೇಡ, ಕೂಗಬೇಡ ಎಂದು ಗಾಂಧೀಜಿ ಸಂಜ್ಞೆ ಮಾಡಿದರು. ನೀನು ಮಗುವನ್ನು ಕೂಗಿದರೆ ನಿನ್ನ ಧ್ವನಿ ಭಯಭೀತವಾಗಿರುವುದನ್ನು ಮಗು ಗಮನಿಸಿ ಅದೂ ಭಯಗ್ರಸ್ತವಾದೀತು. ಪ್ರೇಮ ಸ್ವರೂಪಿ ಮುಗ್ಧ ಮಗು ಸರ್ಪವೆಂಬ ಅರಿವಿಲ್ಲದೆ ಅದರೊಡನೆ ಆಡುತ್ತಿದೆ. ಹಾವಿಗೂ ಇದರ ಅರಿವಾಗಿದೆ. ಸಾವು ಮಧ್ಯೆ

ಪ್ರವೇಶಿಸಿದರೆ ಅನಾಹುತವಾದೀತು ಸುಮ್ಮನಿರು ಎಂದರು. ಹಾವಿನೊಡನೆ ಆಟವಾಡಿ ಬೇಸರಗೊಂಡ ಮಗು ಅದನ್ನು ಬಿಟ್ಟು ಬಿಟ್ಟಿತು. ಹಾವು ಯಾರಿಗೂ ತೊಂದರೆ ಕೊಡದೆ ಹೊರಕ್ಕೆ ಹರಿದು ಹೋಯಿತು.

ಹಾವು ಚೇಳುಗಳಿಗೆ ಸೇವಾಗ್ರಾಮದಲ್ಲಿ ಕೊರತೆ ಇರಲಿಲ್ಲ. ಮಳೆಗಾಲದಲ್ಲಿ ಹತ್ತು ಚೇಳುಗಳು ಮಾಡದಿಂದ ಕೆಳಗಿಳಿದುವು. ಹಾವು, ಚೇಳು ಹಿಡಿಯಲು ಒಂದು ಇಕ್ಕಳವಿತ್ತು ಆಶ್ರಮದಲ್ಲಿ. ಹಿಡಿದ ಹಾವುಗಳನ್ನು ಬೋನಿಗೆ ಸೇರಿಸಲಾಗುತ್ತಿತ್ತು. ಇದು ವಿಷ ಸರ್ಪವೋ ಅಲ್ಲವೋ ಎಂದು ಗಾಂಧೀಜಿ ಪರೀಕ್ಷಿಸುತ್ತಿದ್ದರು. ಒಂದೆರಡು ಹಾವುಗಳನ್ನು ವರ್ಧಾ ಆಸ್ಪತ್ರೆಗೆ ಕಳುಹಿಸಿದರು. ಒಂದು ದಿನ ಒಂದು ದೊಡ್ಡ ನಾಗಸರ್ಪವನ್ನು ಹಿಡಿದು ಬೋನಿಗೆ ದೂಡಲಾಯಿತು. ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಹೆಡೆಬಿಚ್ಚಿ ಬೋನಿನ ಕಂಬಿಗಳಿಗೆ ತಲೆ ಬಡಿದು ತುಂಬ ಗಾಯ ಮಾಡಿಕೊಂಡಿತು. ಹಾವನ್ನು ಹಿಡಿದು ಬೋನಿಗೆ ಸೇರಿಸಿದ ಬಲವಂತ ಸಿಂಗ್ ಇದನ್ನು ನೋಡಿ ಕನಿಕರದಿಂದ ಅದನ್ನು ಸಮೀಪದ ಕಾಡಿಗೆ ಸೇರಿಸಿದ.

ಗಾಂಧೀಜಿ ಜೈನ ಧರ್ಮ ಮತ್ತು ಬುದ್ಧನ ನೀತಿ ದರ್ಶನದಿಂದ ತುಂಬ ಪ್ರಭಾವಿತರಾಗಿದ್ದರು. ಅವರು ಬೆಳೆದುದು ಜೈನ ಮತೀಯರ ಪರಿಸರದಲ್ಲಿ. ಅವರಿಗೆ ಅರಿವಿಲ್ಲದೆಯೇ ಜೈನ ಧಾರ್ಮಿಕ ತತ್ವಗಳು ಇವರ ಮೇಲೆ ಬೀರಿದ್ದ ಪ್ರಭಾವ ಕ್ರಮೇಣ ರೂಪುಗೊಂಡ ಇವರ ಜೀವನ ಕ್ರಮದಿಂದ ಗ್ರಹಿಸಬಹುದು. ಬಾಲ್ಯದಲ್ಲಿ ಅಣ್ಣತಮ್ಮಂದಿರು, ಅಕ್ಕತಂಗಿಯರು ಪರಸ್ಪರ ಜಗಳವಾಡುವುದು ಕುಟುಂಬದಲ್ಲಿ ಅಪೂರ್ವವಲ್ಲ. ಒಂದು ದಿನ ಮೋನನಿಗೆ ಅಣ್ಣ ಕಪಾಳಕ್ಕೆ ಹೊಡೆದ. ಮೋನ ಅಳುತ್ತ ತಾಯಿಯ ಬಳಿಗೆ ಬಂದ. ಅಣ್ಣ ಹೊಡೆದನೆಂದು ದೂರಿದ. ನೀನೂ ತಿರುಗಿಸಿ ಕೊಡಬೇಕಾಗಿತ್ತು ಎಂದಳು ತಾಯಿ. ಅಮ್ಮಾ, ನೀನು ಈ ರೀತಿ ಹೇಳುವುದು ಉಚಿತವಲ್ಲ. ಏಟಿಗೆ ಏಟು ಕೊಡುವುದು ಸರಿಯಲ್ಲ. ತಮ್ಮನನ್ನು ಹೊಡೆಯಬೇಡ ಎಂದು ಅಣ್ಣನಿಗೆ ಬುದ್ಧಿವಾದ ಹೇಳುವುದಕ್ಕೆ ಪ್ರತಿಯಾಗಿ, ತಿರುಗಿಸಿ ಕೊಡು ಎಂದು ಹೇಳುವುದು ಸರಿಯಲ್ಲ ಎಂದು ವಾದಿಸಿದ. ಎಲ್ಲಿ ಕಲಿತೆಯೋ, ಈ ನೀತಿ ಮಾರ್ಗ ಎಂದು ತಾಯಿ ಮುದ್ದಾಡಿದಳು. ಇದು ಜೈನ ಸ್ನೇಹಿತರ, ಜೈನ ಧರ್ಮದ ವಾತಾವರಣದಲ್ಲಿ ಬೆಳೆದುದರಿಂದ ಆದ ಪರಿಣಾಮ ಎಂದು ಹೇಳಬಹುದು. ಆಫ್ರಿಕದಲ್ಲಿದ್ದಾಗ ಏನೋ ಕಾರಣದಿಂದ ಕೋಪಗೊಂಡು ಹಿರಿಯ ಮಗನಿಗೆ ಒಂದೇಟು ಕೊಟ್ಟರು. ಆಗ ಗಾಂಧಿಯವರ ವಯಸ್ಸು 25. ಮಗನ ಮೇಲೆ ಕೈಮಾಡಿದುದು ಇದೇ ಮೊದಲು, ಇದೇ ಕಡೆ.

ನಿರಶನಕ್ಕೆ ಜೈನ ಧರ್ಮದಲ್ಲಿ ಪ್ರಮುಖ ಸ್ಥಾನವಿದೆ. ಪ್ರಾಯಶ್ಚಿತ್ತಕ್ಕಾಗಿ, ಆತ್ಮಶುದ್ಧಿಗಾಗಿ ಗಾಂಧೀಜಿ ಕೈಗೊಳ್ಳುತ್ತಿದ್ದ ದೀರ್ಘಾವಧಿಯ ಉಪವಾಸಗಳ ಮೂಲ

ಜೈನ ಧರ್ಮ. ಅವರಲ್ಲೂ ಆತ್ಮಶುದ್ಧಿಗಾಗಿ, ಮಾಡಿದ ಅಪರಾಧ ತಿದ್ದಿಕೊಳ್ಳುವುದಕ್ಕಾಗಿ ನಿರಶನ ಕೈಗೊಳ್ಳುವುದುಂಟು. ಆಶ್ರಮವಾಸಿಗಳಿಗೆ ಹನ್ನೊಂದು ವ್ರತಗಳು ಆದರ್ಶಗಳಾಗಿದ್ದುವು.

ಅಹಿಂಸಾ ಸತ್ಯ ಅಸ್ತೇಯ, ಬ್ರಹ್ಮಚರ್ಯ ಅಸಂಗ್ರಹಃ
ಶರೀರ ಶ್ರಮ ಅಸ್ವಾದ ಸರ್ವತ್ರ ಭಯವರ್ಜನ
ಸರ್ವ ಧರ್ಮ ಸಮಾನತ್ವ ಸ್ವದೇಶೀ ಸ್ಪರ್ಶ ಭಾವನಾ
ಹೀ ಏಕಾದಶ ಸೇವಾಹಿ ನಮ್ರತ್ವೆ ವ್ರತ ನಿಶ್ಚಯೇ ||

ಈ ವ್ರತಗಳಿಗೆ ಮೇಲ್ಕಂಡ ಸೂತ್ರರೂಪ ವಿನೋಬ ಕೊಟ್ಟಿರುತ್ತಾರೆ. ಅಹಿಂಸೆ, ಅಸ್ತೇಯ, ಅಸಂಗ್ರಹ, ಸರ್ವಧರ್ಮ ಸಮಾನತ್ವ ಇವುಗಳಿಗೆ ಜೈನ ಧರ್ಮ ಪ್ರಮುಖ ಸ್ಥಾನ ಕೊಡುತ್ತದೆ. ಹಿಂಸೆ ಮಾಡದಿರುವುದೇ ಅಹಿಂಸೆ ಎಂಬ ನಕಾರಾತ್ಮಕ ಅರ್ಥ ಅದಕ್ಕೆ ಕೊಡಲಾಗದು. ಅಹಿಂಸೆಯ ಅನ್ವರ್ಥಕ ನಾಮ ಪ್ರೇಮ. ಸಕಲ ಜೀವಗಳಲ್ಲೂ ನೆಲಸಿರುವ ಜೀವ ಒಂದೇ. ಆದ್ದರಿಂದ ಸಕಲ ಜೀವ ಜಂತುಗಳೂ ಆತ್ಮನ ಭ್ರಾತೃಗಳು. ಪ್ರೇಮ ವಿಶ್ವ ವ್ಯಾಪಕ. ಇದು ಕೇವಲ ಪ್ರಾಣಿವರ್ಗಕ್ಕೆ ಮಾತ್ರ ಅನ್ವಯಿಸುತ್ತದೆ ಎಂದು ತಿಳಿಯಬಾರದು. ಸಸ್ಯವರ್ಗವೂ ಇದರಲ್ಲಿ ಸೇರಿಕೊಳ್ಳುತ್ತದೆ. ಸಸ್ಯಗಳಿಗೂ ಪ್ರಾಣವಿದೆ. ಪ್ರಾಣಿವರ್ಗದಂತೆಯೇ ನೋವು ಅವು ಅನುಭವಿಸಬಲ್ಲವೆಂದು ಖ್ಯಾತ ವಿಜ್ಞಾನಿ ಜಗದೀಶಚಂದ್ರ ಬೋಸರು ವೈಜ್ಞಾನಿಕ ಪ್ರಯೋಗಗಳಿಂದ ತೋರಿಸಿ ಸಾಧಿಸಿರುತ್ತಾರೆ. ಮರಗಳಿಗೂ ಜೀವ ಇದೆ. ಒಬ್ಬನನ್ನು ತುಚ್ಛ ಭಾವನೆಯಿಂದ ಕಂಡರೆ ಅಥವಾ ಇನ್ನೊಬ್ಬನನ್ನು ಶಿಕ್ಷಿಸಿದರೆ ತನ್ನನ್ನೇ ಅವಹೇಳನ ಮಾಡಿಕೊಂಡಂತೆ ಆಯಿತು. ತಾನು ಪಶ್ಚಾತ್ತಾಪ ಪಟ್ಟರೆ ಅದನ್ನು ಮತ್ತೊಂದು ಜೀವವೂ ಅನುಭವಿಸುತ್ತದೆ. ತನ್ನ ಪಶ್ಚಾತ್ತಾಪದ ಪ್ರಭಾವ ತಪ್ಪು ಮಾಡಿದವನ ಮೇಲೂ ಆಗದಿರದು. ಅಹಿಂಸೆ ಷಂಡರ, ನಪುಂಸಕರ, ಹೇಡಿಗಳ ಅಸ್ತ್ರವಲ್ಲ. ಅಹಿಂಸೆ ಆಟಂ ಬಾಂಬಿಗಿಂತ ಪ್ರಭಾವಶಾಲಿಯಾದ ಪ್ರಬಲ ಅಸ್ತ್ರ. ಆಟಂ ಬಾಂಬಿನಿಂದ ಆಗುವ ಪರಿಣಾಮ ಸರ್ವನಾಶ. ದ್ವೇಷ, ಸೇಡು ತೀರಿಸಿಕೊಳ್ಳಬೇಕೆನ್ನುವ ಮನೋಭಾವನೆ. ಅಹಿಂಸೆಯ ಪ್ರಯೋಗದಿಂದ ಯಾವ ಕೇಡುಕೂ ಸಂಭವಿಸದು. ವಿರೋಧಿಗೆ ಸಂಕಟ ಕೊಡುವುದು ಹಿಂಸೆಯ ಗುರಿ. ಅಹಿಂಸೆಯ ಬುನಾದಿಯ ಸತ್ಯಾಗ್ರಹ ಸ್ವಯಂ ಸಂಕಟ ಅನುಭವಿಸುತ್ತ, ವಿರೋಧಿಯ ಹೃದಯ ಪರಿವರ್ತನೆಗೆ ಪ್ರಯತ್ನಿಸುತ್ತದೆ.

ಅನೇಕತಾವಾದ ಅಥವಾ ಸ್ಯಾದ್ವಾದ ಧಾರ್ಮಿಕ ಪ್ರಪಂಚಕ್ಕೆ ಜೈನರ ಕೊಡುಗೆ. ಎಲ್ಲ ವಿಷಯಗಳನ್ನೂ ಬೇರೆ ಬೇರೆ ದೃಷ್ಟಿಗಳಿಂದ ನೋಡಬಹುದು.

ಒಂದು ದೃಷ್ಟಿಯಲ್ಲಿ ಸತ್ಯವೆನಿಸುವುದು, ಒಂದು ದೃಷ್ಟಿಯಲ್ಲಿ ಸತ್ಯವೆಂದು ತೋರದಿರಬಹುದು. ಏಳು ಕುರುಡರು ಆನೆಯನ್ನು ಪರೀಕ್ಷಿಸುವ ದೃಷ್ಟಾಂತರ ಇದಕ್ಕೆ ಕೊಡುವುದು ಸಾಮಾನ್ಯ. ಒಬ್ಬನಿಗೆ ಕಂಬ, ಮತ್ತೊಬ್ಬನಿಗೆ ಮೊರ, ಇನ್ನೊಬ್ಬನಿಗೆ ಹಾವು ಹೀಗೆ ತೋರಬಹುದು ಒಂದೇ ಆನೆ. ರೈಲಿನಲ್ಲಿ ಕುಳಿತವನಿಗೆ ಮರಗಿಡಗಳು ಓಡುತ್ತಿರುವಂತೆ ಭಾಸವಾಗುತ್ತದೆ. ಹೊರಗಿರುವವನಿಗೆ ರೈಲು ಓಡುತ್ತಿರುವುದು ಕಾಣಿಸುತ್ತದೆ.

ಸ್ಯಾದ್ವಾದ ಮನಸ್ಸನ್ನು ವಿಶಾಲಗೊಳಿಸುತ್ತದೆ. ವಸ್ತು ಮತ್ತು ವಿಚಾರ ಇನ್ನೊಬ್ಬನ ದೃಷ್ಟಿಯಿಂದ ನೋಡಲು ಕಲಿಸುತ್ತದೆ. ಮುಸಲ್ಮಾನನ್ನು ಇಸ್ಲಾಮಿನ ದೃಷ್ಟಿಯಿಂದಲೂ, ಕ್ರೈಸ್ತನನ್ನು ಏಸು ಧರ್ಮದ ದೃಷ್ಟಿಯಿಂದಲೂ, ಸಹನೆಯಿಂದ ನೋಡಲು ಅನೇಕತಾವಾದ ತನಗೆ ಕಲಿಸಿತು ಎನ್ನುತ್ತಾರೆ ಗಾಂಧೀಜಿ. ಇದಕ್ಕೆ ಮೊದಲು ಸಹನೆ, ತಾಳ್ಮೆ ಇಲ್ಲದೆ ತಾನು ಬೇಗ ಕೋಪಗೊಳ್ಳುತ್ತಿದ್ದುದಾಗಿ ತಿಳಿಸುತ್ತಾರೆ.

ಅಸ್ತೇಯ, ಅಪರಿಗ್ರಹ, ಅಸಂಗ್ರಹ ಇವೆಲ್ಲ ಒಂದೇ ಗುಂಪಿಗೆ ಸೇರಿದುವು. ಅಸ್ತೇಯ ಎಂದರೆ ಕದಿಯದಿರುವುದು ಎಂದು ಮಾತ್ರವಲ್ಲ. ತನಗಿಂತ ಹೆಚ್ಚಾಗಿ ಇನ್ನೊಬ್ಬನಲ್ಲಿದೆ. ತನಗಿಂತ ಅವನು ಹೆಚ್ಚು ಶ್ರೀಮಂತ ಎಂಬ ಅಸೂಯೆ. ಇದು ಅಸಂಗ್ರಹದ ಅಭಿಪ್ರಾಯ. ಅನಗತ್ಯಕ್ಕಿಂತ ಅಧಿಕ ಸಂಗ್ರಹಿಸುವುದು ಅಸಂಗ್ರಹ, ಬೇಡ ಪಾದುದನ್ನು ಸ್ವೀಕರಿಸುವುದು ಅಪರಿಗ್ರಹ. ದುಡಿಯದೇ ಉಣುವುದೂ ಕಳ್ಳತನ. ಹೆಚ್ಚು ಉಣುವುದು ಇನ್ನೊಬ್ಬನ ಆಹಾರ ಕಸಿದುಕೊಂಡಂತೆ. ನಾಳೆಗೆ ಸಂಗ್ರಹಿಸಿ ಇಡುವುದೂ ಪಾಪಕರ. ಮನೆ, ಮಠ, ಉಡುಪು, ನಾಳೆಯ ಊಟ ಸಂಗ್ರಹಿಸದೆ, ಚಿಂತಿಸದೆ ಹಕ್ಕಿಯಂತೆ ಆರಾಮವಾಗಿ ಹಾರಾಡುತ್ತಿರುವುದು ಆದರ್ಶ. ಆದ್ದರಿಂದ ತಾನು ತನ್ನದು ಎಂಬ ಬಂಧನಕ್ಕೆ ಒಳಗಾಗದೆ, ತನ್ನ ಆಗತ್ಯಗಳನ್ನು ಆದಷ್ಟು ಕಡಮೆಮಾಡಿಕೊಂಡು, ಮೋಕ್ಷ ಅಥವಾ ಪುನರ್ಜನ್ಮವಾಗದಂತೆ ಲೋಕಕಲ್ಯಾಣಕ್ಕಾಗಿ ದುಡಿಯುವ ಗುರಿ ಮಾನವನದಾಗಬೇಕು. ಈ ಗುರಿ ಸಾಧಿಸಲು ಗಾಂಧೀಜಿ ಜೀವನಾದ್ಯಂತ ಶ್ರಮಿಸುತ್ತಿದ್ದರು.

ಆಚಾರ್ಯ ಧರ್ಮಾನಂದ ಕೋಸಾಂಬಿ ಬೌದ್ಧ ಧರ್ಮ ಮತ್ತು ಪಾಲೀಪಿ ಮಹಾ ವಿದ್ವಾಂಸರು. 1947ರಲ್ಲಿ ತಮ್ಮ ಅಂತ್ಯ ದಿನಗಳನ್ನು ಕಳೆಯಲು ಸೇವಾಗ್ರಾಮಕ್ಕೆ ಬಂದರು. ದೇಹಾಲಸ್ಯದಿಂದ ಅವರ ದೇಹ ತುಂಬ ಕ್ಷೀಣಿಸಿತ್ತು. ಆಹಾರ ಸೇವಿಸಲೂ ಸಾಧ್ಯವಾಗುತ್ತಿರಲಿಲ್ಲ. ಬೌದ್ಧ ಧರ್ಮೀಯರಾದರೂ ನಾಸ್ತಿಕರಲ್ಲ. ನೀರು ಸೇವಿಸುವುದನ್ನೂ ಬಿಟ್ಟು ದೇಹ ತ್ಯಜಿಸಲು ಸಿದ್ಧರಾಗುತ್ತಿದ್ದರು. ಉಪವಾಸ ಪ್ರಾರಂಭಿಸಿದರು. ಆಗ ಗಾಂಧೀಜಿ ಪಾಟ್ನಾಕ್ಕೆ ಹೋಗಿದ್ದರು. ಬಾಪುವಿನ ಪ್ರಾರ್ಥನೆ

ಯಂತೆ ಕೋಸಾಂಬಿ ನಿರಶನ ನಿಲ್ಲಿಸಿದರು. ಗಾಂಧೀಜಿ ಆಶ್ರಮಕ್ಕೆ ಹಿಂತಿರುಗಿದ ತರುವಾಯ ಮತ್ತೆ ಅವರ ಅನುಮತಿ ಪಡೆದು ಉಪವಾಸ ಪ್ರಾರಂಭಿಸಿದರು. ಅನುಪಾನ ಭಾವನ ಯೋಗಾಭ್ಯಾಸದಿಂದ ಇಂಥ ದಿನ ಇಷ್ಟು ಹೊತ್ತಿಗೆ ಮರಣ ಸಂಭವಿಸುತ್ತದೆ ಎಂದು ತಿಳಿಯುವ ಶಕ್ತಿ ಸಂಪಾದಿಸಿದ್ದರು. ತೊಟ್ಟ ಉಡುಪಿನಂತೆ. ಈ ದೇಹ ತೊರೆದು ಮತ್ತೊಂದು ಉತ್ತಮ ಜನ್ಮ ಪಡೆಯುವ ನಂಬಿಕೆ ಅವರಿಗಿತ್ತು. ಬೊಂಬಾಯಲ್ಲಿದ್ದ ಮಗ ಮತ್ತು ಮಗಳು ಅಂತ್ಯಕಾಲದಲ್ಲಿ ನೋಡಲು ತಮಗೆ ಅವಕಾಶ ಕೊಡಬೇಕೆಂದು ಮೇಲಿಂದ ಮೇಲೆ ತಂದೆಗೆ ಕಾಗದ ಬರೆದರೂ ಅವಕಾಶ ಕೊಡಲಿಲ್ಲ. ಮರಣಾನಂತರ ಶರೀರಕ್ಕೆ ಹೊಸ ಬಟ್ಟೆ ಬಳಸುವ ಅಗತ್ಯವಿಲ್ಲ. ತೊಟ್ಟ ಬಟ್ಟೆಯನ್ನೇ ಮೃತ ದೇಹಕ್ಕೆ ಸುತ್ತಿ ಭೂಗತ ಮಾಡಬೇಕೆಂದು ತಿಳಿಸಿದ್ದರು. ತನ್ನಲ್ಲಿದ್ದ ಒಂದೇ ಆಸ್ತಿ ಗಡಿಯಾರವನ್ನು ತನ್ನ ಮಗನಿಗೆ ಕೊಡುವಂತೆ ತಿಳಿಸಿದರು. ಅವರು ತಿಳಿಸಿದ ಎರಡು ಗಂಟೆಗಳನ್ನು ಅತಿಕ್ರಮಿಸಿ ಮರಣ ಸಂಭವಿಸಿತು. ಆದರೆ ಗಾಂಧೀಜಿ ದೇಹವನ್ನು ಹೂಳದೆ - ಅದು ಸಮಾಜದ ದೃಷ್ಟಿಯಿಂದ ವಿಹಿತವಲ್ಲವೆಂದು ಚಿತೆಗೆ ಏರಿಸಿ, ವಿನೋಬಾಜಿ ಮಂತ್ರೋಚ್ಚಾರಣೆ ಮಾಡುತ್ತಿದ್ದಂತೆ ಅಗ್ನಿಗೆ ಅರ್ಪಿಸಿದರು.

ಸಾಬರಮತಿ ಆಶ್ರಮಕ್ಕೆ ಒಮ್ಮೆ ಕಳ್ಳರು ಪ್ರವೇಶಿಸಿ ಕಸ್ತೂರಿಬಾ ಅವರ ಸಣ್ಣ ಪೆಟ್ಟಿಗೆ ಒಯ್ದರು. ಪೆಟ್ಟಿಗೆ ಕಳುವಾಯಿತೆಂದು ಬಾಪು ಪೋಲೀಸರಿಗೆ ತಿಳಿಸಲಿಲ್ಲ. ಆಶ್ರಮದಲ್ಲಿ ಕಳ್ಳತನಕ್ಕೆ ಯೋಗ್ಯವಾದ ಪದಾರ್ಥಗಳಿವೆ ಎಂಬ ಭಾವನೆ ಕಳ್ಳರಲ್ಲಿ ಮತ್ತು ಆಶ್ರಮದ ಸುತ್ತಮುತ್ತಲ ಜನರಲ್ಲಿ ಮೂಡಿತ್ತಲ್ಲ. ಇದಕ್ಕೆ ಕಾರಣ ತಾನಲ್ಲವೇ ? ಅಸಂಗ್ರಹದ ಅರ್ಥ ಆಶ್ರಮವಾಸಿಗಳು ಗ್ರಹಿಸಿಲ್ಲ. ತನ್ನ ಪತ್ನಿಯ ಬಳಿ ಪೆಟ್ಟಿಗೆ ಇದ್ದುದೇ ಅವರಿಗೆ ತಿಳಿಯದು. ಮಕ್ಕಳು ಮತ್ತು ಮೊಮ್ಮಕ್ಕಳ ಬಟ್ಟೆ ಬಾ ಅದರಲ್ಲಿ ಇಟ್ಟಿದ್ದರು. ಅವರ ಚಿಂತೆ ನೀ ಮಾಡಲೇಕೆ ಎಂದು ಕೋಪಮಾಡಿ ಗೊಂಡರು. ಅಂದಿನಿಂದ ಆಕೆ ತನಗೆ ಅಗತ್ಯವಾದ ಪದಾರ್ಥಗಳ ವಿನಾ ಬೇರೆ ಏನೂ ಇಟ್ಟುಕೊಳ್ಳುತ್ತಿರಲಿಲ್ಲ.

ಗಾಂಧೀಜಿ ದಕ್ಷಿಣ ಆಫ್ರಿಕ ಬಿಟ್ಟು ಹೊರಡಲು ತೀರ್ಮಾನಿಸಿದಾಗ ಅವರು ಸಲ್ಲಿಸಿದ ಸೇವೆಗಾಗಿ ಮಾನಪತ್ರ, ಹಾರ, ಭಂಗಾರ, ಬೆಳ್ಳಿ, ವಜ್ರಖಚಿತ ಆಭರಣ ಗಳನ್ನು ಜನ ಪ್ರೀತಿಯಿಂದ ಅರ್ಪಿಸಿದರು. ಕಸ್ತೂರಿ ಬಾಗೆ ತುಂಬ ಆನಂದ. ಆದರೆ ಗಾಂಧಿಯವರಿಗೆ ಸಲ್ಲಿಸಿದ ಸೇವೆಗೆ ಪ್ರತಿಯಾಗಿ ಉಡುಗೊರೆ ಸ್ವೀಕರಿಸುವುದು ಯೋಗ್ಯ ವಲ್ಲವೆಂಬ ತೀರ್ಮಾನಕ್ಕೆ ಬಂದರು. ಮಕ್ಕಳನ್ನು ಸಮಾಧಾನಪಡಿಸಿದರು. ಆದರೆ ಹೆಂಡತಿಯನ್ನು ಸಮಾಧಾನ ಪಡಿಸಲು ಸುಲಭವಾಗಲಿಲ್ಲ. ತನ್ನ ಸೊಸೆಯರಿಗೆ

ಮತ್ತು ಆಪತ್ಕಾಲಕ್ಕೆ ಆಭರಣ ಅಗತ್ಯವೆಂದು ಆತ ವಾದಿಸಿದರು. ಕಡೆಗೆ ಅವರನ್ನು ಒಪ್ಪಿಸಿ ನೆಟಾಲ್ ಕಾಂಗ್ರೆಸ್ಸಿಗೆ ಎಲ್ಲವನ್ನೂ ಉಚಿತವಾಗಿ ಕೊಟ್ಟರು.

ಎಲ್ಲ ಸಂಸಾರದಲ್ಲೂ ಗಂಡಹೆಂಡಿರ ಭಿನ್ನತೆ, ಜಗಳ ಇದ್ದೇ ಇರುತ್ತದೆ. ಉಚ್ಚವರ್ಣದ ಹಿಂದೂಗಳಲ್ಲಿ ವಿವಾಹ ವಿಚ್ಛೇದನ ಪದ್ಧತಿ ಇಲ್ಲ. ಗಂಡ–ಹೆಂಡತಿ ಜೀವಾವಧಿ ಕೂಡಿ ಬಾಳಬೇಕು. ಆದ್ದರಿಂದ ಭಿನ್ನತೆ ಆಗಾಗ ಎಷ್ಟೇ ತಲೆದೋರಿದರೂ ಹೇಗೋ ಸರಿಪಡಿಸಿಕೊಂಡು ಕೂಡಿಬಾಳುತ್ತಾರೆ. ತಾಳಿ ಕಟ್ಟಿದ ಹೆಂಡತಿಯ ಕೈ ಬಿಡುವಂತಿಲ್ಲ. ವರಿಸಿದ ಪತಿಯನ್ನು ತೊರೆಯುವಂತಿಲ್ಲ. ಭಿನ್ನತೆಯ ಕಾರಣ ಬಹಳ ಗಂಭೀರವಿದ್ದರೆ, ನಮ್ಮ ಪ್ರಾರಬ್ಧ ಕರ್ಮ ಎಂದು ಸಹನೆಯಿಂದ ಕೂಡಿ ಬಾಳುತ್ತಾರೆ. ಪರಸ್ಪರ ಪ್ರೇಮ, ದೃಷ್ಟಿ ಒಂದೇ ಆಗಿದ್ದರೆ ಭಿನ್ನತೆಗೆ ಅವಕಾಶ ವಿರದು. ಸಂಸಾರ ಸುಖವಾಗಿ ಸುಗಮವಾಗಿ ಸಾಗುತ್ತದೆ.

ಗಾಂಧಿ-ಕಸ್ತೂರಿ ಬಾ ಇವರ ಸಂಸಾರದಲ್ಲಿ ಒಡವೆಯ ವಿಷಯದಲ್ಲಿ ಮಾತ್ರವಲ್ಲ, ಇನ್ನೂ ಎಷ್ಟೋ ವಿಷಯಗಳಲ್ಲಿ ಭಿನ್ನತೆ ತಲೆದೋರುತ್ತಲೇ ಇತ್ತು. ಎಲ್ಲರಂತೆ ಕರಮುಚಂದ ಸಾಮಾನ್ಯ ವ್ಯಕ್ತಿಯಲ್ಲ. ಸಾಮಾನ್ಯರಂತೆ ಸಂಸಾರ ನಿರ್ವಹಣೆಯೇ ಅವರ ಬದುಕಿನ ಗುರಿಯಾಗಿರಲಿಲ್ಲ. ಸತ್ಯ, ಅಹಿಂಸೆ, ನೀತಿ, ಧರ್ಮ, ದಯಾಪರತೆ, ಮಾನವೀಯತೆ, ಸಮಾನತೆ ಮೊದಲಾದವುಗಳಿಂದ ಇವರು ಬಾಧಿತರಾಗುತ್ತಿದ್ದರು. ಇದು ನ್ಯಾಯ, ನೀತಿ ಸರಿ ಎಂದು ತೋರಿದ್ದನ್ನು ನಡೆಸಿಕೊಂಡು ಬರುವ ಛಲ ಸ್ವಭಾವ. ಇಂಥ ವಿಚಿತ್ರ ಪತಿಯೊಡನೆ ಹೆಜ್ಜೆ ಇಟ್ಟ ಸತಿ ಅಡಿಗಡಿಗೂ ಪತಿಯೊಡನೆ ಹೆಜ್ಜೆ ಹಾಕಿ ನಡೆಯುವುದು ಸುಲಭವಿರಲಿಲ್ಲ. ಸಾಧ್ವಿಶಿರೋಮಣಿ ಪತಿಯೊಡನೆ ಸಹಧರ್ಮಿಣಿಯಾಗಿ ಕಷ್ಟಪರಂಪರೆ ಅನುಭವಿಸಿದರು. ತುರಂಗವಾಸ ಅನುಭವಿ ಸಿದರು. ಕಡೆಗೆ ತುರಂಗದಲ್ಲಿಯೇ, ಪತಿಯ ತೊಡೆಯ ಮೇಲೆ ತಲೆ ಇರಿಸಿ ಪರಂಧಾಮವನ್ನೈದಿದರು.

ಕುಹಕಿಗಳ ಮಾತಿಗೆ ಕಿವಿಗೊಟ್ಟು ತಾರುಣ್ಯದಲ್ಲಿಯೇ ಹೆಂಡತಿಯ ಶೀಲ ಶಂಕಿಸಿದ್ದುಂಟು ಗಾಂಧೀಜಿ. ಡರ್ಬಾನಿನ ಪಾಶ್ಚಿಮಾತ್ಯ ರೀತಿಯ ದೊಡ್ಡ ಕಟ್ಟಡ ಇವರ ಮನೆ. ಪ್ರತಿಯೊಂದು ಕೋಣೆಯಲ್ಲೂ ಪ್ರತ್ಯೇಕ ಪಾಯಿಖಾನೆ. ದೇಹ ಬಾಧೆ ತೀರಿಸಿಕೊಳ್ಳಲು ಮೂರು ಕಾಲಿನ ಕೂಡುವ 'ಸ್ಟೂಲ್'. ನೀರು ಹೊರ ಹೋಗಲು ಜೀರೆದಾರಿಯಿಲ್ಲ. ವಕೀಲ ಗಾಂಧಿಯವರಲ್ಲಿ ಗುಜರಾತಿ ಮತ್ತು ತಮಿಳರು ಗುಮಾಸ್ತರಾಗಿದ್ದರು. ಒಮ್ಮೆ ಕಿರಿಸ್ತಾನನೊಬ್ಬ ಇವರ ಗುಮಾಸ್ತನಾದ. ಪಾಯಿಖಾನೆ ಬಳಸುತ್ತಿದ್ದ ಎಲ್ಲರೂ ಮಲವಿಸರ್ಜಿತ ಕುಂಡಾಣ ತಾವೇ ಸ್ವಚ್ಛಮಾಡು ತ್ತಿದ್ದರು. ಸತಿಪತಿಯರು ಅಸ್ಪೃಶ್ಯರ ಕೆಲಸ ತಾವೇ ಮಾಡುತ್ತಿದ್ದರು. ಹೊಸತಾಗಿ

ಬಂದ ಕಿರಿಸ್ತಾನ ಗುಮಾಸ್ತನಿಗೆ ಈ ಪದ್ಧತಿಯು ಅರಿವಿಲ್ಲದೆ, ಹೊಲಸು ಮಾಡಿದ ಕುಂಡಾಣ ತೊಳೆಯಲಿಲ್ಲ. ನೀನೇ ಸ್ವಚ್ಛಮಾಡು ಎಂದರು ಹೆಂಡತಿಗೆ. ನಾನಾ ಜಾತಿಯ ಹಿಂದೂಗಳ ಮಲದ ಪಾತ್ರೆ, ಪತಿಯು ಆಣತಿಯಂತೆ ತೊಳೆಯುತ್ತಿದ್ದ ಆಜ್ಞಾಧಾರಿಣಿ ಸತಿಗೆ ಇದು ತುಂಬ ಅಸಹನೀಯವಾಯಿತು. ಹಿಂದೆ ಪಂಚಮನಾಗಿ ಇಂದು ಕಿರಿಸ್ತಾನನಾಗಿದ್ದ ಗುಮಾಸ್ತನ ಮಲದ ಕುಂಡ ಉಚ್ಚವರ್ಣದ ಸತಿ ತೊಳೆಯ ಬೇಕೆನ್ನುವುದು ಮಿತಿಯ ಪರಾಕಾಷ್ಟತೆ ಮುಟ್ಟಿತು. ಪತಿ ಈ ಕೆಲಸ ಮಾಡುವುದೂ ಸತಿಗೆ ಸರಿದೋರುತ್ತಿರಲಿಲ್ಲ. ತಾನು ಮಾಡಲೂ ಮನಸ್ಸು ಒಪ್ಪದು. ಆದರೂ ಪತಿಯು ಮಾತನ್ನು ಮೀರಲಾರದೆ ಮಲದ ಕುಂಡವನ್ನು ಎತ್ತಿಕೊಂಡು, ಇದೇನು ನನ್ನ ಹಣೆಯ ಬರಹ ಎಂದು ಕಣ್ಣೀರು ಸುರಿಸುತ್ತಾ, ತೊಳೆಯಲು ಹೊರಟಳು.

"ನಗುನಗುತ್ತಾ ಈ ಕೆಲಸ ಮಾಡು. ರೋದಿಸುತ್ತ, 'ಕಣ್ಣೀರು ಸುರಿಸುತ್ತಾ, ನನ್ನ ಮನೆಯಲ್ಲಿ ಈ ಕೆಲಸ ಮಾಡುವ ಅಗತ್ಯವಿಲ್ಲ" ಎಂದು ಅಬ್ಬರಿಸಿದ ಕೋಪಾವಿಷ್ಟ ನಾದ ಪತಿ, ಸಹನೆ ಮೀರಿ.

"ನಿಮ್ಮ ಮನೆ ನಿಮಗೆ ಇರಲಿ, ನನ್ನನ್ನು ಬಿಟ್ಟುಕೊಡಿ ನಾನು ಹೋಗುವೆ" ಎಂದು ಆಕೆ ಉದ್ಗರಿಸಿದರು. ಕೋಪದಿಂದ ಕಿಡಿಕಿಡಿಯಾಗಿದ್ದ ಪತಿ, ಸತಿಯ ರಟ್ಟೆ ಹಿಡಿದು, ಮನೆಯಿಂದ ಹೊರದೂಡಲು, ಬಾಗಿಲವರೆಗೆ ದರದರನೆ ಎಳೆತಂದ.

"ನಿಮಗೆ ನಾಚಿಕೆಯಾಗುವುದಿಲ್ಲವೆ? ನಿಮಗೆ ಪ್ರಜ್ಞೆ ತಪ್ಪಿದಂತಿದೆ. ನಾನು ಎತ್ತ ಹೋಗಲಿ, ಎಲ್ಲಿಗೆ ಹೋಗಲಿ. ಪರಸ್ಥಳ. ನನಗೆ ಆಶ್ರಯ ಕೊಡುವ ಬಂಧು ಬಾಂಧವರು ಇಲ್ಲಿ ಯಾರಿದ್ದಾರೆ. ನಿಮ್ಮ ಹೆಂಡತಿ ಆದ ಮಾತ್ರಕ್ಕೆ ಒದೆ, ಒದೆತ, ಎಲ್ಲವೂ ತಿನ್ನಬೇಕೆ? ತಲೆ ಕೆಟ್ಟದಂತಿದೆ. ಸರಿ ಮಾಡಿಕೊಳ್ಳಿ. ನಿಮ್ಮ ನಡತೆ ನೋಡಿ, ಜನ ಏನೆಂದು ಕೊಂಡಾರು. ಕದ ಮುಚ್ಚಿ. ಸಾಕು, ಈ ಕಾದಾಟ," ಎಂದರು ಕಸ್ತೂರಿ ಬಾ.

ಕೋಪಪರವಶರಾಗಿದ್ದ ಗಾಂಧಿಯವರಿಗೆ ಜ್ಞಾನೋದಯವಾಯಿತು. ಮಾಡುತ್ತಿದ್ದ ಅಪರಾಧ ಮನ ಮುಟ್ಟಿತು. ಶಾಂತಿ ಮೂಡಿತು. ಈ ಘಟನೆಯನ್ನು ಕಣ್ಣೆದುರಿಗೆ ನಿಲ್ಲುವಂತೆ ಗಾಂಧೀಜಿ ಚಿತ್ರಿಸಿದ್ದಾರೆ. ಘಟನೆ ನಡೆದುದು 1898ರಲ್ಲಿ. ಆಗ ಬ್ರಹ್ಮಚರ್ಯದ ಮಹತ್ವ ತಿಳಿದಿರಲಿಲ್ಲ. ಪತಿಯ ಕಾಮುಕ ತೃಪ್ತಿ ಪಡಿಸುವುದು ಸತಿಯ ಕರ್ತವ್ಯ. ಕರ್ತವ್ಯಪಾಲನೆ, ಗಂಡ ಹೇಳಿದಂತೆ ಕೇಳಬೇಕಾದ್ದು ಅವಳ ಪಾಡು. ಸತಿ ತನ್ನ ಬಾಳಸಂಗಾತಿ ಎಂಬ ಅರಿವು ಗಾಂಧಿಯವರಿಗೆ ಆ ಕಾಲಕ್ಕೆ ಇರಲಿಲ್ಲ. ಪತಿಯನ್ನು ಅನುಸರಿಸುವುದು ತನ್ನ ಆದ್ಯ ಕರ್ತವ್ಯ ಎಂದು ಆಕೆ ಅರಿತಿದ್ದರು.

ನಿರಕ್ಷರಸ್ತಳಾದರೂ ಅವಳ ಈ ದೃಷ್ಟಿ ಸಂಸಾರದಲ್ಲಿ ಅನ್ಯೋನ್ಯತೆ ನೆಲಸುವಂತೆ ಮಾಡುತ್ತಿತ್ತು. ಪುಸ್ತಕ ಜ್ಞಾನವಿಲ್ಲದಿದ್ದರೂ ಪ್ರಪಂಚ ಜ್ಞಾನ, ವಿವೇಕ ಆಕೆಗೆ ಇತ್ತು. ತಾಳ್ಮೆ. ಸಹನೆಯಿಂದ ಎಲ್ಲ ಗೃಹಕಲಹಗಳಲ್ಲೂ ಸಾಮಾನ್ಯವಾಗಿ ಗೆಲುವು ಆಕೆಯ ಹಸ್ತವನ್ನೇ ಹಿಡಿಯುತ್ತಿತ್ತು. ಆಕೆಯಿಂದ ತಾವು ಅಹಿಂಸೆ, ಸಹನೆ, ತಾಳ್ಮೆ, ದಯಾಪರತೆ, ಸತ್ಯಾಗ್ರಹದ ದಾರಿ ಕಲಿತೆನೆಂದು ಗಾಂಧೀಜಿ ಹೇಳಿ ಕೊಂಡಿರುತ್ತಾರೆ.

ಹಿಂಸೆ, ಅಕ್ರಮ, ಅನ್ಯಾಯಗಳನ್ನು ಅಹಿಂಸೆಯಿಂದ ಪ್ರತಿಭಟಿಸುವ ಕ್ರಮ ದಕ್ಷಿಣ ಆಫ್ರಿಕ ಗಾಂಧೀಯವರಿಗೆ ಕಲಿಸಿತು. ಮೊದಲ ದರ್ಜೆಯ ರೈಲು ಗಾಡಿಯಲ್ಲಿ ಪ್ರಯಾಣ ಮಾಡಲು ಅವಕಾಶ ದೊರೆಯದೇ ಹೋದುದು; ಸಾರೋಟಿನಲ್ಲಿ ಬಿಳಿಯರೊಡನೆ ಕೂಡಲು ಪ್ರಯತ್ನಿಸಿ ಚಾಟಿ ಏಟು ತಿಂದುದು; ಕೋರ್ಟಿನಲ್ಲಿ ಪೇಟ ಧರಿಸಲು ಅವಕಾಶ ದೊರೆಯದೇ ಹೋದ ಘಟನೆ; ಬಿಳಿಯರಿಗೆ ಮೀಸಲಾದ ಕಾಲು ದಾರಿಯಲ್ಲಿ ನಡೆಯಲು ಹೋಗಿ ಹೊಡೆತ ಅನುಭವಿಸಿದ್ದು; ಭಾರತದಿಂದ ಮರಳಿ ಆಫ್ರಿಕಾಗೆ ಕಾಲಿಟ್ಟಾಗ ಬಿಳಿಯರ ಕ್ರೋಧಕ್ಕೆ ಬಲಿಯಾದುದು ಇವೆಲ್ಲ ಇವರಿಗೆ ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹದ ಮಾರ್ಗದರ್ಶನಗಳಾದುವು.

ಅಹಿಂಸೆಯ ಅಸ್ತ್ರಗಳು ವಿಚಿತ್ರ. ದೈವಭಕ್ತಿ, ಪ್ರಾರ್ಥನೆ, ಕ್ಷಮೆ, ಪ್ರೇಮ, ದಯೆ, ಅಪಕಾರಕ್ಕೆ ಪ್ರತ್ಯುಪಕಾರ, ಕಷ್ಟ ಸಹಿಷ್ಣುತೆ, ಇಂದ್ರಿಯ ನಿಗ್ರಹ, ಬ್ರಹ್ಮಚರ್ಯ, ಸರ್ವಧರ್ಮ ಸಮಾನತ್ವ, ಸ್ವದೇಶಿ, ಅಸ್ತೇಯ, ಅಪರಿಗ್ರಹ, ಶರೀರಶ್ರಮ, ಭಯವರ್ಜನ, ತ್ಯಾಗ, ವಿರೋಧಿಯಲ್ಲಿ ವಿಶ್ವಾಸ, ಗುಟ್ಟು ಗೋಪ್ಯವಿಲ್ಲದ ಬಹಿರಂಗ ಕ್ರಮ; ವ್ಯಕ್ತಿ ಎಷ್ಟೇ ಕಠೋರ ಹೃದಯಿ, ಅಮಾನುಷಿ ಎನಿಸಿಕೊಂಡರೂ ಅವನ ಹೃದಯ ಪರಿವರ್ತನೆಯಲ್ಲಿ ಆತ್ಮವಿಶ್ವಾಸ; ಸಮುದ್ರದ ನೀರನ್ನು ಹಂಚಿಕಡ್ಡಿಯಿಂದ ಹನಿಹನಿಯಾಗಿ ತೆಗೆದು ಬರಿದು ಮಾಡುವ ವಿಶಾಲ ಸಾಗರದ ತಾಳ್ಮೆ; ಸಮಾನತೆ; ಸಹಕಾರ ಮನೋಭಾವ ಹೀಗೆ ಬೆಳಸುತ್ತಾ ಹೋಗಬಹುದು.

ಸತ್ಯದಿಂದ ಕೂಡಿದ ಆಗ್ರಹವೇ ಸತ್ಯಾಗ್ರಹ. ಆಗ್ರಹ ಎಂದರೆ ಕೋಪವಲ್ಲ. ಪ್ರೇಮ. ಪ್ರೇಮದ ಸೋಪಾನ ಅಹಿಂಸೆ. ಸತ್ಯ, ಅಹಿಂಸಾ ಮಾರ್ಗದಿಂದ ನಿರ್ದಿಷ್ಟ ಸಂಕಲ್ಪ ಸಾಧಿಸುವುದೇ ಸತ್ಯಾಗ್ರಹ. ಯುದ್ಧವಿರೋಧ, ಸಾತ್ವಿಕವಿರೋಧ, ಸರಿನಯ ಕಾಯಿದೆ ಭಂಗ, ಅಸಹಕಾರ, ಇವು ಸತ್ಯಾಗ್ರಹದ ಸಂಕುಚಿತ ಪೂರ್ವ ರೂಪಗಳು. ಸೋಲರಿಯದ ಅಜೇಯ ಅಸ್ತ್ರ ಸತ್ಯಾಗ್ರಹ. ಹಿಂಸಾ ಪ್ರತಿಭಟನೆ ಶಸ್ತ್ರ ನಾಶದೊಡನೆ ಮುಕ್ತಾಯವಾಗುತ್ತದೆ. ಶತ್ರುರಾಷ್ಟ್ರಕ್ಕೆ ಅಗತ್ಯ ವಸ್ತುಗಳ ಅಭಾವ ತಲೆದೋರುವಂತೆ ಮಾಡಿ, ಉಪವಾಸ ಕೆಡವಿ, ಶತ್ರುಬಲದ ಶಕ್ತಿ ಮುರಿಯುವುದು ಒಂದು ಮಾರ್ಗ. ಆದರೆ ಸತ್ಯಾಗ್ರಹದಲ್ಲಿ ಆತ್ಮ ಪ್ರೇರಿತ ಸದುಪವಾಸವೇ ಒಂದು

ಅಸ್ತ್ರವಾದೀತು. ರಾಜಕೀಯದಲ್ಲಿ ಗಾಂಧಿಯ ಉಪವಾಸ ಪಾಶ್ಚಿಮಾತ್ಯರಿಗೆ ಅರ್ಥವಾಗದು. "ಬರಿ ಹೊಟ್ಟೆಯಲ್ಲಿ ಬ್ರಿಟಿಷ್ ಪ್ರಭುತ್ವವನ್ನು ಸಂಕಟಕ್ಕೆ ಸಿಲುಕಿಸುವ ಯೋಧ ಎಲುಬಿನ ಗೂಡಿನ ಗಾಂಧಿ" ಎಂದು ಅಮೇರಿಕಾದ ಪತ್ರಿಕೋದ್ಯಮಿ ಒಬ್ಬ ವರ್ಣಿಸುತ್ತಾನೆ. ಆತ್ಮ ಶುದ್ಧಿಗಾಗಿ ಅನಾದಿ ಕಾಲದಿಂದ ಬಂದಿರುವ ಪವಿತ್ರ ವ್ರತ ಉಪವಾಸ. ಗುರಿ ಸಾಧಿಸಲು ಉಪವಾಸ ಕೈಗೊಳ್ಳುವುದು ಅನೂಚಾನ ಪದ್ಧತಿ. ಪರಮಾತ್ಮನ ಪ್ರತ್ಯಕ್ಷ ದರುಶನಕ್ಕಾಗಿ ಬುದ್ಧ, ಏಸು, ಪೈಗಂಬರ್ ಮೊದಲಾಗಿ ಮಹಾಪುರುಷರು ಉಪವಾಸ ವ್ರತ ಮಾಡಿದರು. ನನ್ನ ಉದ್ದೇಶ ಕೀಳಾದರೂ ನಾನು ಅನುಸರಿಸುವುದೂ ಈ ಮಹಾ ಪುರುಷರನ್ನೇ ಎನ್ನುತ್ತಾರೆ ಗಾಂಧೀಜಿ.

ವಿರೋಧಿಯನ್ನು ಪೇಚಾಟಕ್ಕೆ ಸಿಲುಕಿಸಿ, ಬಲೋದ್ಭಂದದಿಂದ ಕಾರ್ಯ ಸಾಧಿಸುವುದು ನಿರಶನ ವ್ರತದ ಗುರಿಯಲ್ಲ. ವ್ರತದ ಪರಿಣಾಮವಾಗಿ ವಿರೋಧಿಯ ಮನ ಒಲಿದರೆ ಅದನ್ನೇ ಬಲ ಪ್ರಯೋಗವೆನ್ನುವುದು ವಿತಂಡವಾದ. "ಗಾಂಧೀಜಿ ಘೋರ ನಿರಶನ ವ್ರತ ಕೈಗೊಂಡರೆ, ಈ ವ್ರತ ಕೈಗೊಳ್ಳಲು ಎಡೆಗೊಟ್ಟ ಸನ್ನಿವೇಶ, ಸಮಾಜ ಅಥವಾ ಸರ್ಕಾರದಲ್ಲಿ ಏನೋ ದೋಷವಿದೆ ಎಂದು ಪ್ರಪಂಚ ತಲ್ಲಣಿಸುವುದೇ ವಿನಾ ಗಾಂಧಿಯ ಉಪವಾಸದಲ್ಲಿ ದೋಷ ಆರೋಪಿಸದು. ಜಾಲಿಯನ್‌ವಾಲಾಬಾಗ್ ಕೊಲೆಗೆ ಕಾರಣನಾದ ಡಯರನಿಗೆ ವಿರಾಮ ವೇತನ, ನೊಂದವರಿಗೆ ಮರುಗಿದ ಸಂತನಿಗೆ ಆರು ವರ್ಷ ಸಶ್ರಮ ಶಿಕ್ಷೆ ವಿಧಿಸುವ ಸಮಾಜ ವ್ಯವಸ್ಥೆಯಲ್ಲಿ ದೋಷ ಯಾರದು" ಎಂದು ಪ್ರಶ್ನಿಸುತ್ತಾನೆ ಗಗನವಿಹಾರಿ ಮೆಹತ. ಅಂತರಾತ್ಮ ಪ್ರೇರಣೆಯಾದರೆ ದಧೀಚಿಯಂತೆ ದೇಹ ತ್ಯಜಿಸಲು ಗಾಂಧಿ ಸಿದ್ಧ. ಗಾಂಧೀಜಿ ಉಪವಾಸ ಕೈಗೊಂಡರೆ, ಭಾರತವೇ ಉಪವಾಸ ಕೈಗೊಂಡಂತೆ. ಒಬ್ಬ ಸತ್ತರೆ ಸಾಯಲಿ. ಅತಿ ಸಂಖ್ಯಾತ ಭಾರತದಲ್ಲಿ ಒಂದು ಅನ್ನ ತಿನ್ನುವ ಬಾಯಿ ಕಡಿಮೆ ಆಯಿತು ಎಂದು ಸರ್ಕಾರ ಉಪೇಕ್ಷಿಸದು.

ಗಾಂಧೀಜಿ ದುಂಡು ಮೇಜಿನ ಪರಿಷತ್ತಿನಿಂದ ಬರಿಗೈಯಲ್ಲಿ ಹಿಂತಿರುಗಿ ಬರುತ್ತಿದ್ದಾಗಲೇ ಅವರನ್ನು ಬಂಧಿಸಿ, ಕಾಂಗ್ರೆಸ್ಸನ್ನು ಸದೆ ಬಡಿಯುವ ವ್ಯವಸ್ಥೆ ಮಾಡಿ ಕೊಂಡಿತ್ತು ಭಾರತ ಸರ್ಕಾರ. ಗಾಂಧಿಯವರನ್ನು ಬಂಧಿಸಿ ಬೊಂಬಾಯಿ ಪ್ರಾಂತದಲ್ಲಿ ಇರಿಸಿದರೆ ತಮ್ಮನ್ನು ಪೇಚಿಗೆ ಸಿಲುಕಿಸಿದಂತೆ ಆದೀತು ಎಂದರು ಬೊಂಬಾಯಿ ಗವರ್ನರ್. ಭಾರತದಲ್ಲಿಯೇ ಅವರನ್ನು ಇರಿಸುವುದಾದರೆ ಕೊಯಮುತ್ತೂರಿನಲ್ಲಿ ಇರಿಸಬಹುದು. ಬಂಧಿತ ಗಾಂಧಿ, ಹೊರಗಿನ ಗಾಂಧಿಗಿಂತ ಹೆಚ್ಚು ನೈತಿಕ ಪ್ರಭಾವಶಾಲಿ. ಆದರೆ ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ಸದೆ ಬಡಿಯುವುದೇ ಭಾರತ ಸರ್ಕಾರದ ಉದ್ದೇಶವಾಗಿದ್ದರೆ, ಅವರನ್ನು ಅಂಡಮಾನ್ ಅಥವಾ ಏಡನಿನಲ್ಲಿ ಇರಿಸುವುದು ಮೇಲು ಇನ್ನು ಕೆಲವು ಪ್ರಾಂತಗಳು ಅವರನ್ನು

ಆಫ್ರಿಕಾಗೆ ಸಾಗಿಸ ಬಹುದೆಂದುವು. ಹಿಂದಿನ ವೈಸರಾಯ್ ಲಾರ್ಡ್‌ಇರ್ವಿನ್ ಗಾಂಧಿಯವರಿಗೆ ವಿಶೇಷ ಗೌರವ ತೋರಿಸಿ ಅವರ ನೈತಿಕ ಮಟ್ಟ ಏರಿಸಲು ಅನುದ್ದೇಶಿತವಾಗಿ ನೆರವಾದರು. ಆದರೆ ಲಾರ್ಡ್‌ವಿಲ್ಲಿಂಗ್ಡನ್ ತಾನು ಈ ತಪ್ಪು ಮಾಡಲಾರೆ ಎಂದು ತೀರ್ಮಾನಿಸಿದರು. ಜಗಳಕ್ಕೆ ಗೂಳಿ ಕಾಲು ಕೆರೆಯುವಂತೆ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್‌ಗಫಾರ್‌ಖಾನ್ ಮತ್ತು ಜವಹರಲಾಲ ನೆಹರು ಅವರನ್ನು, ಗಾಂಧೀಜಿ ಬೊಂಬಾಯಲ್ಲಿ ಇಳಿಯುವುದಕ್ಕೆ ಮೊದಲೇ ಬಂಧಿಸಿಟ್ಟರು. ಪೂರ್ವಸಿದ್ಧತೆಯಾಗಿ ಕರಾಳ ಶಾಸನಗಳು ಜಾರಿಯಾದುವು. ವೈಸರಾಯರು ಗಾಂಧಿಯವರಿಗೆ ಭೇಟಿ ಕೊಡಲು ನಿರಾಕರಿಸಿದರು. ಕಾಂಗ್ರೆಸ್ಸನ್ನು ಸದೆ ಬಡಿಯಲು ಸರ್ವಸಿದ್ಧತೆ ಮಾಡಿಕೊಂಡು ಗಾಂಧಿಯವರನ್ನು ಬಂಧಿಸಿದರು. ಬೊಂಬಾಯಿ ಸರ್ಕಾರದ ಸಲಹೆ ನಿರಾಕರಿಸಿ ಯರವಾಡ ಮಂದಿರದಲ್ಲಿ ಅವರನ್ನಿರಿಸಿದರು.

ಹಠಾತ್ತಾಗಿ ಶತ್ರು ಮೇಲೆ ಧಾಳಿ ನಡೆಸಿ, ಮಣ್ಣು ಮುಕ್ಕಿಸುವುದು ಯುದ್ಧ ಕೌಶಲ್ಯ. ಅನಿರೀಕ್ಷಿತ ಧಾಳಿ, ವಿಶೇಷ ಪ್ರಭಾವಶಾಲಿ. ಆದರೆ ತದ್ವಿರುದ್ಧ ಸತ್ಯಾಗ್ರಹದ ಕಾರ್ಯವಿಧಾನ. ಸತ್ಯಾಗ್ರಹದ ಮೂಲ ಉದ್ದೇಶ ಹೃದಯ ಪರಿವರ್ತನೆ. ಇದರಲ್ಲಿ ಧಾಳಿ ನಡೆಸುವ ಪ್ರಮೇಯವೇ ಬರುವುದಿಲ್ಲ. ಸತ್ಯಾಗ್ರಹದ ಮೂಲ ಉದ್ದೇಶ ವಿಪಕ್ಷಿಯ ಹೃದಯ ಪರಿವರ್ತನೆ. ಕಷ್ಟ ಅನುಭವಿಸುವವನು ಸತ್ಯಾಗ್ರಹಿ. ಸತ್ಯಾಗ್ರಹದ ಜಯ ಸತ್ಯಾಗ್ರಹಿಯ ನೈತಿಕ ಶಕ್ತಿಯನ್ನು ಅವಲಂಬಿಸಿರುತ್ತದೆ. ಸಾಕಷ್ಟು ಅವಕಾಶ ಕೊಡುವುದರಿಂದ, ವಿಪಕ್ಷಿಯ ಹೃದಯ ಪರಿವರ್ತನೆ ಅಷ್ಟರಲ್ಲಿ ಆಗಬಹುದು. ಅಲ್ಲದೆ ಪರಿಸ್ಥಿತಿ ವಿಷಮಿಸುವ ಮೊದಲೇ ಮಧ್ಯಸ್ತಗಾರರಿಗೆ ಒಂದು ಅವಕಾಶ ಕೊಡುತ್ತದೆ. ಉಪವಾಸ ಅಥವಾ ಸತ್ಯಾಗ್ರಹ ಪ್ರಾರಂಭಿಸುವ ಮೊದಲು ಗಾಂಧೀಜಿ ವೈಸರಾಯರಿಗೆ ಪತ್ರ ಬರೆದು ತಮ್ಮ ಉದ್ದೇಶ ಮತ್ತು ಉದ್ದೇಶಿತ ಕಾರ್ಯಕ್ರಮ ನಿಲ್ಲಿಸಲು ತಮ್ಮ ಕನಿಷ್ಠ ಬೇಡಿಕೆಗಳನ್ನು ತಿಳಿಸುತ್ತಿದ್ದರು. ಬಂಧನದಲ್ಲಿದ್ದ ಗಾಂಧೀಜಿ ಮತ್ತು ಇತರ ನಾಯಕರನ್ನು 1930ರ ಸತ್ಯಾಗ್ರಹದ ಕಾಲಕ್ಕೆ ಸಪ್ರು ಮತ್ತು ಜಯಕರರು ಮಧ್ಯಸ್ತಿಕೆ ವಹಿಸಲು ಅವಕಾಶ ಮಾಡಿಕೊಟ್ಟಿತು. ಗಾಂಧಿ–ಇರ್ವಿನ್ ಒಪ್ಪಂದ ಏರ್ಪಟ್ಟಿತು. ಆದರೆ ಮೊಳಕಾಲೂರಿ ವೈಸರಾಯ ವಿಲ್ಲಿಂಗ್ಡನ್ ಅವರಿಗೆ 1935ರಲ್ಲಿ ಭೇಟಿ ಗಾಂಧೀಜಿ ಕೋರಿದರೂ ದೊರೆಯಲಿಲ್ಲ. ಇದರಿಂದ ಮಹಾತ್ಮರ ನೈತಿಕ ಬಲ ವೃದ್ಧಿಸಿತೇ ವಿನಾ ಕುಗ್ಗಲಿಲ್ಲ.

ತನ್ನ ಪ್ರಥಮ ಸತ್ಯಾಗ್ರಹ ಕುರಿತು ಜವಹರಲಾಲರು ಹೀಗೆ ಬರೆಯುತ್ತಾರೆ. ಸ್ವತಂತ್ರ ಭಾವನೆ ಮತ್ತು ನಿರ್ಭಯತೆ ನಮ್ಮಲ್ಲಿ ಎದ್ದು ಕಾಣುತ್ತಿತ್ತು. ನಮ್ಮ ಹೃದಯದಲ್ಲಿ ಭೀತಿಯ ಸುಳಿವೇ ಇರಲಿಲ್ಲ. ಮೊದಲಿನ ಅವಕುಂಠಿತ ಭಾವನೆ, ಅಡ್ಡಿ ಆತಂಕದ ಸುಳಿವೇ ಇರಲಿಲ್ಲ. ಅಧಿಕಾರಿಗಳ ಕೈಗೆ ಸಿಲುಕದೆ ಹೇಗೆ ತಲೆ ತಪ್ಪಿಸಿ

ಕೊಳ್ಳುವುದು; ಶಾಸನದಲ್ಲಿ ಲೋಪ ಎಲ್ಲಿದೆ, ಅದನ್ನುಪಯೋಗಿಸಿಕೊಂಡು ಹೇಗೆ ಜಾರಿಕೊಳ್ಳಬಹುದು ಎಂಬ ದೌರ್ಬಲ್ಯ, ಪಿಸುಮಾತು, ಕುಯುಕ್ತಿ ದೂರ ಸರಿದವು. ನಮ್ಮ ನಿರ್ಭಯ ಹುಂಕಾರದಿಂದ ಗಿರಿಗೋಪುರಗಳು ಪ್ರತಿಧ್ವನಿತವಾಗುತ್ತಿದ್ದವು. ಇದರ ಪರಿಣಾಮದ ದುಗುಡಿನ ಭೀತಿ ನಮಗೇಕೆ? ಸೆರೆಮನೆ! ಇಷ್ಟೇ ತಾನೆ. ಸೆರೆಮನೆ ನಮ್ಮ ಉದ್ದೇಶ ಸಾಧನೆಗೆ ಮತ್ತಷ್ಟು ಸಹಕಾರಿಯಲ್ಲವೇ? ಎಂದು ಉತ್ತೇಜಿತರಾಗುತ್ತಿದ್ದೆವು. ನೆರಳಂತೆ ಹಿಂಬಾಲಿಸುತ್ತಿದ್ದ ಗೂಢಚಾರರ ಪಾಡು ಶೋಚನೀಯವಾಯಿತು. ನಮ್ಮಲ್ಲಿ ರಹಸ್ಯವಿದ್ದರೆ ಅಲ್ಲವೇ, ರಹಸ್ಯ ಬಯಲಿಗೆಳೆಯುವುದು. ದಾಳಿ ಪದಾತಿಗಳೆಲ್ಲ ಬಹಿರಂಗ. ಗುಟ್ಟುಗೋಪ್ಯವಿಲ್ಲ, ಮುಚ್ಚುಮರೆಯಿಲ್ಲ."

"ನಮ್ಮ ನೈತಿಕ ಶಕ್ತಿ ಏರಿದಂತೆ ಸರ್ಕಾರದ ಪ್ರಭಾವ ಇಳಿಯುತ್ತ ಬಂತು. ದಿಗ್ಭ್ರಮೆ ಹಿಡಿದು, 'ಏನು ನಡೆಯುತ್ತಿದೆ', ಇದರ ಅರಿವು ಅವರಿಗಿರಲಿಲ್ಲ. ಪ್ರಭುತ್ವದ ಹಳೆಯ ಸುಭದ್ರ ಕಟ್ಟಡ ಕುಸಿಯುತ್ತಿರುವಂತೆ ಅವರಿಗೆ ಭಾಸವಾಗುತ್ತಿತ್ತು. ಸ್ವಪ್ರತಿಷ್ಠೆ, ಸ್ವಾವಲಂಬನೆ, ಆತ್ಮಗೌರವ ಮತ್ತು ನಿರ್ಭಯ ವಾತಾವರಣ ತಾಂಡವವಾಡುತ್ತಿದ್ದುವು. ದಬ್ಬಾಳಿಕೆಯಿಂದ ಚಳವಳಿಗೆ ಮತ್ತಷ್ಟು ಸ್ಫೂರ್ತಿ. ಮುಖಂಡರ ಮೇಲೆ ಕೈ ಮಾಡಿದರೆ ಪರಿಣಾಮವೇನಾದಿತೋ, ಭೀತಿ ಸರ್ಕಾರಕ್ಕೆ. "ಭಾರತೀಯ ಸೈನ್ಯದಲ್ಲಿ ಭರವಸೆ ಇರಿಸಬಹುದೇ? ಪೋಲೀಸಿನವರು ಆಜ್ಞೆ ಪಾಲಿಸಿಯಾರೆ? ದಿಕ್ಕು ಕಾಣದ ತಲ್ಲಣಿಸಿ ಹೋಯಿತು ಸರ್ಕಾರ, ಎಂದು ವೈಸರಾಯಿ ಲಾರ್ಡ್ ರೀಡಿಂಗ್ ಅವರೇ ಹೇಳಬೇಕಾಯಿತು."

'ಶತ್ರು ಸಂಕಟವೇ ನಮ್ಮ ಸುಸಮಯ' ಎಂದು ಭಾವಿಸದು ಸತ್ಯಾಗ್ರಹ. ಅದು ಹಿಂಸಾಮಾರ್ಗದ ರೀತಿ. ದಕ್ಷಿಣ ಆಫ್ರಿಕದಲ್ಲಿ ಸಾತ್ವಿಕ ವಿರೋಧ ಚಳವಳಿ ಗಾಂಧೀಜಿ ನಡೆಸುತ್ತಿದ್ದಾಗ ರೈಲ್ವೆಯ ಬಿಳಿಯ ಜನಾಂಗದವರು ಮುಷ್ಕರ ಹೂಡಿದರು. ಗಾಂಧೀಜಿ ಈ ಸಮಯ ಬಳಸಿಕೊಂಡು ಸರ್ಕಾರವನ್ನು ಮತ್ತಷ್ಟು ಪೇಚಿಗೆ ಸಿಲುಕಿಸಬಹುದಾಗಿತ್ತು. ಶ್ವೇತವರ್ಣೀಯರು ಯಾವಾಗಲೂ ಕೃಷ್ಣವರ್ಣೀಯರ ವಿರೋಧಿಗಳೇ. ಆದರೆ ಗಾಂಧೀಜಿ ಈ ಸನ್ನಿವೇಶ ಬಳಸಿಕೊಳ್ಳದೆ ತಮ್ಮ ಸತ್ಯಾಗ್ರಹ ಚಳವಳಿಯನ್ನೇ ತಾತ್ಕಾಲಿಕ ನಿಲ್ಲಿಸಿದರು. ಇದರಿಂದ ಭಾರತೀಯರ ಸತ್ಯಾಗ್ರಹದ ಘನತೆ ನೂರ್ಮಡಿಯಾಯಿತು. ಅಹಿಂಸೆಯ ಮೂಲ ತತ್ವಕ್ಕೆ ವಿರೋಧ ಎನಿಸಿದರೂ ಬೋಅರ್ ಮತ್ತು ಮೊದಲ ವಿಶ್ವ ಸಂಗ್ರಾಮದಲ್ಲಿ ಗಾಂಧೀಜಿ ಗಾಯಾಳುಗಳಿಗೆ ಸಹಾಯವೆಸಗಲು ಇದೇ ಮುಖ್ಯ ಕಾರಣ.

ದ್ವಿತೀಯ ವಿಶ್ವ ಸಂಗ್ರಾಮದಲ್ಲಿ ಜಪಾನರ ಸೇನೆಗಳು ಬರ್ಮ ಗಡಿ ದಾಟ ಭಾರತ ಪ್ರವೇಶಿಸಿದ್ದುವು. ಇದೇ ಸುಸಮಯ ಬ್ರಿಟಿಷರನ್ನು ಮತ್ತಷ್ಟು ಪೇಚಿಗೆ

ಸಿಲುಕಿಸಲು ಎಂದು ಸುಭಾಷ್ ಚಂದ್ರಬೋಸರು ಭಾವಿಸಿರಬಹುದು. ಆದರೆ ಗಾಂಧೀಜಿ ಹಾಗೆ ಭಾವಿಸಲಿಲ್ಲ. ಕೇವಲ ವೈಯಕ್ತಿಕ ಸಾಂಕೇತಿಕ ಸತ್ಯಾಗ್ರಹ ನಡೆಸಿದರು. ರಾಮ ರಾವಣರ ಕಾಳಗದಲ್ಲಿ ಶ್ರೀರಾಮನ ರಥ ನಾಶವಾಯಿತು. ರಾಕ್ಷಸನಾದರೂ ಯುದ್ಧ ನೀತಿ ಅನುಸರಿಸಿ, ರಾವಣ ರಥದಿಂದ ಕೆಳಗಿಳಿದ. ದುರ್ಯೋಧನನ ಕೈಯಿಂದ ಗಧೆ ಜಾರಿದರೆ, ಅವನು ಗಧಾಧಾರಿಯಾಗುವವರೆಗೂ ಭೀಮ ಗಧೆ ಬಳಸಲಿಲ್ಲ ಈ ಉದಾರ ನೀತಿಯೇ ಸತ್ಯಾಗ್ರಹದ ಆದರ್ಶ.

ಗಾಂಧಿಯವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ತುಂಬ ಪ್ರಭಾವಯುತ ಸಂಸ್ಥೆಯಾಗಿ ಬೆಳೆಯುತ್ತಿತ್ತು. ಇದರ ಪ್ರಭಾವ ಕುಗ್ಗಿಸಿ ರಾಜಭಕ್ತಿ ಹೆಚ್ಚಿಸಲು ಭಾವೀ ಚಕ್ರವರ್ತಿ "ಪ್ರಿನ್ ಆಫ್ ವೇಲ್ಸ್" ಅವರನ್ನು ಪ್ರಭುತ್ವ ಭಾರತಕ್ಕೆ ಬರಮಾಡಿಕೊಂಡಿತು. ತದ್ವಿರುದ್ಧ ಅವರು ಭಾರತಕ್ಕೆ ಕಾಲಿಡುವ ದಿನವನ್ನು ಪ್ರತಿಭಟನಾ ದಿನವಾಗಿ ಹರತಾಳ ಆಚರಿಸಬೇಕೆಂದು ಕಾಂಗ್ರೆಸ್ ಕರೆ ಕೊಟ್ಟಿತು. ರಾಜಕುಮಾರ ನವಂಬರ್ 17, 1971 ದಿನಾಂಕ ಬೊಂಬಾಯಿಗೆ ಬಂದಿಳಿದರು. ಅಂದು ಮಹಾನಗರ ಬೊಂಬಾಯಿ ಸಂಪೂರ್ಣ ಹರತಾಳ ತುಂಬ ಯಶಸ್ವಿಯಾಗಿ ಆಚರಿಸಿತು. ಅಂಗಡಿ, ಶಾಲೆ, ಸಿನಿಮಾ ಎಲ್ಲವೂ ಬಂದ್. ವಾಹನ ಸಂಚಾರ ಸ್ಥಗಿತ. ವಿದೇಶಿ ವಸ್ತ್ರದಹನ ನಡೆಯಿತು. ರಾಶಿ ರಾಶಿ ವಿದೇಶಿ ವಸ್ತ್ರಗಳು ಅಗ್ನಿಗೆ ಅರ್ಪಿಸಲ್ಪಟ್ಟವು. ಎಲ್ಲವೂ ಶಾಂತ ರೀತಿಯಿಂದ ನಡೆಯುತ್ತಿದ್ದರೂ ಕೆಲವು ಗೂಂಡಾಗಳು ದೊಂಬಿ ನಡೆಸಿದರು. ಪೋಲೀಸರು ನೆಮ್ಮದಿಕಾಪಾಡಲು ಗುಂಡು ಹಾರಿಸಿದರು. ದೊಂಬಿ ನಡೆದ ಪ್ರದೇಶಕ್ಕೆ ಗಾಂಧೀಜಿ ಭೇಟಿ ಕೊಟ್ಟಾಗ ಇಬ್ಬರು ಪೋಲಿಸರು ಗಾಯಗೊಂಡು ಅಪಾಯ ಸ್ಥಿತಿಯಲ್ಲಿದ್ದುದನ್ನು ನೋಡಿ ಗಾಂಧೀಜಿ ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಆರು ದಿನ ಲೂಟಿ, ದೊಂಬಿ ಪ್ರಕರಣ ನಡೆಯಿತು. ಸರ್ಕಾರದ ವರದಿಯಂತೆ ಸತ್ತವರ ಸಂಖ್ಯೆ 53, ಗಾಯಗೊಂಡವರು 400.

ಗಾಂಧೀಜಿ ಇದರಿಂದ ತುಂಬ ನೊಂದರು. ಅಸಹಕಾರ ಚಳುವಳಿ ಹೂಡಲು ಕಾರಣ ತಾನು. ಜನರಲ್ಲಿ ಕ್ರಾಂತಿಕಾರಕ ಮನೋಭಾವನೆ ಬೆಳೆಯಲು ಕಾರಣ ತಾನು. ಈ ಕ್ರಾಂತಿಯನ್ನು ಹತೋಟಿಯಲ್ಲಿರಿಸಿ ಶಿಸ್ತಿನಿಂದ ಜನ ನಡೆದುಕೊಳ್ಳುವಂತೆ ಮಾಡುವುದರಲ್ಲಿ ತಾನು ವಿಫಲನಾಗಿರುವುದರಿಂದ ಅದಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಲು ತೀರ್ಮಾನಿಸಿ, ಸ್ವರಾಜ್ಯ ಪ್ರಾಪ್ತವಾಗುವವರೆಗೆ ಪ್ರತಿ ಸೋಮವಾರ ಉಪವಾಸ ಆಚರಿಸಲು ನಿರ್ಧರಿಸಿದರು. ದೇಹವನ್ನು ಉಪವಾಸಗಳಿಂದ ಶೋಷಿಸಬಾರದೆಂದು ರಾಜಾಜಿ ಮತ್ತು ಇತರ ಆಪ್ತರು ಒತ್ತಾಯ ಮಾಡಿ, ಆಹಾರ ಉಪವಾಸಕ್ಕೆ ಪ್ರತಿಯಾಗಿ ಕಾರ್ಯ ಉಪವಾಸ, ಮೌನ ಆಚರಿಸುವಂತೆ ಸಲಹೆ ಮಾಡಿದರು. ಪ್ರತಿ ಸೋಮವಾರದ ಮೌನಕ್ಕೆ ಇದು ಕಾರಣ.

ನಾಗಪುರದ ಕಾಂಗ್ರೆಸ್ ಅಸಹಕಾರದ ನಿರ್ಣಯ ಅಂಗೀಕರಿಸಿತು. ಸಿ. ಆರ್. ದಾಸ್, ಮೋತಿಲಾಲ್ ನೆಹರು, ಲಾಲಾಲಜಪತರಾಯ್, ಚಕ್ರವರ್ತಿ ರಾಜ ಗೋಪಾಲಚಾರಿ, ಪ್ರಕಾಶಂ, ಮೊದಲಾಗಿ ನೂರಾರು ವಿಖ್ಯಾತ ವಕೀಲರು ವಕೀಲ ವೃತ್ತಿ ತೊರೆದು ಕಾಂಗ್ರೆಸ್ಸಿನ ಪೂರ್ಣಾವಧಿಯ ಕಾರ್ಯಕರ್ತರಾದರು. ಅಕಾಲಿ ಸಿಖ್ಖರು ಗುರುದ್ವಾರ ಪ್ರವೇಶಿಸಲು ಮತ್ತು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳಲು ಪ್ರಚಂಡ ಸತ್ಯಾಗ್ರಹ ಆಚರಿಸಿದರು. ಬ್ರಿಟಿಷ್ ಸೇನೆಯ ಗುಂಡಿಗೆ ತುತ್ತಾಗಿ ಕನಿಷ್ಟ ಇನ್ನೂರು ಸಿಖ್ಖರು ಪ್ರಾಣ ತೆತ್ತರು. ದಾಸ್, ಮೋತಿಲಾಲ್, ಲಜಪತ ರಾಯ್, ಆಲಿ ಸಹೋದರರು ಮೊದಲಾಗಿ 26,000 ಸತ್ಯಾಗ್ರಹಿಗಳು ಬಂಧಿತ ರಾದರು. ಸರ್ಕಾರ ತುಂಬ ಕ್ರೂರತನದಿಂದ ವರ್ತಿಸಿತು.

ಬೊಂಬಾಯಿಯಲ್ಲಿ ನಡೆದ ದೊಂಬಿ ಕಣ್ಣಾರೆ ಕಂಡ ಗಾಂಧೀಜಿ ತುಂಬ ನೊಂದು ಇದೆಲ್ಲಕ್ಕೂ ತಾನೇ ಕಾರಣನೆಂದು ವೈಸರಾಯರಿಗೆ ಪತ್ರ ಬರೆದರು. ಅದೇ ಸಮಯದಲ್ಲಿ ನಿಶ್ಶಸ್ತ್ರ, ಶಾಂತಿಯುತ ಜನರ ಮೇಲೆ ತುಂಬ ಕ್ರೂರತನದಿಂದ ಸರ್ಕಾರ ವರ್ತಿಸುತ್ತಿರುವುದನ್ನು ಖಂಡಿಸಿದರು. 'ಯಂಗ್ ಇಂಡಿಯಾ' ದಲ್ಲಿ ಬರೆದ ಲೇಖನ ಆರು ವರ್ಷಗಳ ಸಶ್ರಮ ಶಿಕ್ಷೆ ಅವರಿಗೆ ಕೊಡಿಸಿತು.

ಗಾಂಧೀಜಿ ಮತ್ತು ರವೀಂದ್ರರ ನಡುವೆ ಅಸಹಕಾರ, ವಿದೇಶೀವಸ್ತ್ರ ದಹನ, ಸತ್ಯಾಗ್ರಹ ಈ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿತ್ತು. ಅಹಿಂಸೆ ಹೃದಯದ ಅಂತರಾಳದಿಂದ ಉದ್ಭವಿಸಬೇಕು. ಬಾಹ್ಯ ಪ್ರೇರಣೆಯಿಂದ ಪ್ರಯೋಜನವಾಗದು. ವಿದೇಶಿವಸ್ತ್ರ ದಹನ ಆರ್ಥಿಕ ಸಿದ್ಧಾಂತಕ್ಕೆ ವಿರುದ್ಧ. ದ್ವೇಷಪೂರಿತವೂ ಹೌದು. ವಸ್ತ್ರದಹನ ಮಾಡುವ ಅಧಿಕಾರ ನಮಗಿಲ್ಲ. ಯಾರು ನಗ್ನರಾಗಿದ್ದಾರೋ ಅವರಿಗೆ ಸೇರಿದ್ದು ಆ ವಸ್ತ್ರ. ಹೀಗೆ ಕವಿ ರವೀಂದ್ರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಇದಕ್ಕೆ ಉತ್ತರವಾಗಿ ಅನ್ಯಾಯ, ಅಸತ್ಯ, ಅಕ್ರಮಗಳೊಡನೆ ಸಹಕರಿಸದಿರು ವುದೇ ಅಸಹಕಾರ. ಸರ್ಕಾರಕ್ಕೆ ಇಲ್ಲ, ಒಲ್ಲೆವು, ಸಹಕರಿಸಲು ಸಾಧ್ಯವಿಲ್ಲ ಎಂದು ತಿಳಿಸುವ ಶಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇನ್ನೂ ನಾವು ಗುಲಾಮ ರಾಗಿ ಇರಲಾರೆವು ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುವುದು ಅಸಹಕಾರದ ಉದ್ದೇಶ. ರವೀಂದ್ರರು ತಿಳಿದಿರುವಂತೆ ಅಸಹಕಾರ ಕೇವಲ ಅಭಾವಾತ್ಮಕವಲ್ಲ. ರವೀಂದ್ರರ ಕನಸಿನ ಸ್ವರಾಜ್ಯ ಅಸಹಕಾರ ಮಾತ್ರದಿಂದ ಸಾಧಿಸೀತು. ವಿದೇಶಿ ವಸ್ತ್ರ ಪಾಶಾಣ ಸದೃಶ. ನಿಮಗೆ ಬೇಡವಾದ ಪಾಶಾಣ ಬಡವರಿಗೆ ನೀಡುವುದು ಉಚಿತವೇ ಎಂದು ವಾದಿಸಿದರು ಗಾಂಧೀಜಿ. ಸ್ವದೇಶಿ ಚಳುವಳಿಗಿಂತ ಅಸಹಕಾರದ ಚಳುವಳಿ ತುಂಬ ವ್ಯಾಪಕವಾಗಿ ಹಬ್ಬಿರುವುದು ನಿಜ. ಭಾರತದ ಜನ ಕೋಟಿ ಯನ್ನು ಆತ್ಮಶಕ್ತಿಯಿಂದ, ಬಡವರ ಬಾಗಿಲ ಮುಂದೆ ಚಿಂದಿಬಟ್ಟೆ ಉಟ್ಟು ಜನ

ಸಾಮಾನ್ಯರನ್ನು ನೀವು ಎಚ್ಚರಗೊಳಿಸಿದ್ದೀರಿ. 'ಮಹಾತ್ಮ' ಇದು ನಿಮಗೆ ಯೋಗ್ಯವಾದ ಅನ್ವರ್ಥ ನಾಮವಾಗಿದೆ ಎಂದು ಒಪ್ಪಿದರು ವಿಶ್ವಕವಿ ರವೀಂದ್ರರು. ವಂಗ ವಿಭಜನೆಯ ಕಾಲದಲ್ಲಿ ಅಶ್ವಿನಿ ಕುಮಾರದತ್ ಪ್ರಾರಂಭಿಸಿದ ಸ್ವದೇಶಿ ಚಳುವಳಿಗಿಂತ ಗಾಂಧಿಯವರ ಮಾರ್ಗದರ್ಶನದಲ್ಲಿ ನಡೆದ ವಿದೇಶಿ ವಸ್ತು ಬಹಿಷ್ಕಾರ ಮತ್ತು ಸ್ವದೇಶಿ ತುಂಬ ಯಶಸ್ವಿಯಾಗಿತ್ತು.

ಫೆಬ್ರವರಿ 1, 1922ರಲ್ಲಿ ಗೋರಖಪುರದ ಚೌರಿ ಚಾರಾದಲ್ಲಿ ಭೀಕರ ಹಿಂಸಾ ಕೃತ್ಯ ನಡೆಯಿತು. ದುಷ್ಟರೀತಿಯಲ್ಲಿ ನಡೆದುಕೊಂಡ ಪೋಲೀಸರನ್ನು ಠಾಣೆಯಲ್ಲಿ ಬಂಧಿಸಿ, ಠಾಣೆಗೆ ಪುಂಡರು ಬೆಂಕಿ ಇಟ್ಟರು. ಇದರಿಂದ 21 ಪೋಲೀಸರು ಸುಟ್ಟು ಹೋದರು. ಜನತೆ ಅಹಿಂಸಾತ್ಮಕವಾಗಿ ನಡೆದುಕೊಳ್ಳಲು ಕಲಿತಿಲ್ಲವೆಂಬುದಕ್ಕೆ ಈ ಭೀಕರ ಕೃತ್ಯ ನಿದರ್ಶನವೆಂದು ಅಸಹಕಾರ ಚಳುವಳಿಯನ್ನು ಗಾಂಧೀಜಿ ಸ್ಥಗಿತಗೊಳಿಸಿದರು. ಐದು ದಿನಗಳ ಪ್ರಾಯಶ್ಚಿತ್ತದ ಉಪವಾಸ ಆಚರಿಸಿದರು. ಬಂಧನದಲ್ಲಿದ್ದ ನಾಯಕರು ಇದರಿಂದ ಬಹಳ ಕುಪಿತರಾದರು. ಚಳುವಳಿ ಹಿಂತೆಗೆದುಕೊಳ್ಳಲು ಕಾರಣ ವಿವರಿಸಿ ಗಾಂಧೀಜಿ ದೊಡ್ಡ ಹೇಳಿಕೆ ಕೊಟ್ಟರು. 1919 ರೌಲತ್ ಶಾಸನ ವಿರುದ್ಧ ಚಳುವಳಿ ಹೂಡಿದಾಗ ಜನತೆ ಅಹಿಂಸಾತ್ಮಕವಾಗಿ ನಡೆದುಕೊಳ್ಳಲಿಲ್ಲ. ಜನ ಸಿದ್ಧರಾಗಿರುವುದಾಗಿ ತಿಳಿದು ತಾನು ಅಸಹಕಾರ ಚಳುವಳಿಗೆ ಕರೆ ಕೊಟ್ಟದ್ದು ಹಿಮಾಲಯ ಪರ್ವತದಷ್ಟು ದೊಡ್ಡ ಅಪರಾಧವಾಯಿತು. 1921 ರಲ್ಲಿ ಬೊಂಬಾಯಿಯಲ್ಲಿ ನಡೆದ ದೊಂಬಿಯನ್ನು, ಉದ್ದೇಶಿತ ಬಾರ್ಡೋಲಿ ಕರನಿರಾಕರಣೆ ನಿಲ್ಲಿಸಲು ಕಾರಣವಾಯಿತು. ಚೌರಿಚಾರ ಭೀಕರ ಕೃತ್ಯ ಇವೆಲ್ಲದರ ಮೂಲಕ ಭಗವಂತ ತನಗೆ ಎಚ್ಚರಿಕೆ ಕೊಡುತ್ತಿದ್ದಾನೆ. ಸರ್ಕಾರ ಎಷ್ಟೇ ಕ್ರೂರ ದಬ್ಬಾಳಿಕೆ ನಡೆಸಿದರೂ ಜನ ತಾಳ್ಮೆಗೆಟ್ಟು ಹಿಂಸಾತ್ಮಕವಾಗಿ ವರ್ತಿಸುವುದನ್ನು ತೋರೆದಿಲ್ಲ. ತನ್ನನ್ನು ಮೂರ್ಖ, ಹೇಡಿ, ಅಪ್ರಯೋಜಕ, ಕಾಲಾನುಗುಣವಾಗಿ ವರ್ತಿಸುವ ರಾಜಕೀಯ ಚಾಕಚಕ್ಯತೆ ಇಲ್ಲದವನೆಂದು ದೂಷಿಸಬಹುದು. ಆದರೆ ಪರಮಾತ್ಮನ ಮಾರ್ಗದರ್ಶನದಂತೆ ಆತ್ಮಸಾಕ್ಷಿಯಾಗಿ ನಡೆದುಕೊಳ್ಳುವುದೇ ಶ್ರೇಷ್ಟ, ಉಚಿತ ಎಂದರು, ಬಾಪು.

ಡಿಸೆಂಬರ್ 31, 1929 ಕಾಂಗ್ರೆಸ್ ಇತಿಹಾಸದಲ್ಲಿ ಐತಿಹಾಸಿಕ ದಿನ. ಅಂದು ಲಾಹೋರಿನಲ್ಲಿ ರಾವಿ ನದಿಯ ತೀರದ ಮೇಲೆ ಸಂಪೂರ್ಣ ಸ್ವಾತಂತ್ರ್ಯ ಘೋಷಿಸಿತು ಕಾಂಗ್ರೆಸ್. ಪ್ರತಿವರ್ಷದ ಜನವರಿ 26 ಸ್ವಾತಂತ್ರ್ಯ ದಿನವಾಗಿ ಆಚರಿಸಲು ಕರೆ ಕೊಟ್ಟಿತು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಸಿದ್ಧತೆ ಮಹಾತ್ಮರ ನೇತೃತ್ವದಲ್ಲಿ ದೇಶ ಮಾಡಿಕೊಳ್ಳತೊಡಗಿತು. ಗಾಂಧೀಜಿ, ನೆಹರು, ಪಟೇಲ್ ಮೊದಲಾಗಿ ನಾಯಕರು ದೇಶದ ಆದ್ಯಂತ ಸಂಚರಿಸುತ್ತ ಸ್ವಾತಂತ್ರ್ಯ ಹೋರಾಟಕ್ಕೆ

ಜನತೆಯನ್ನು ಸಿದ್ಧಗೊಳಿಸ ತೊಡಗಿದರು. ತಮ್ಮ ಬೇಡಿಕೆಗಳನ್ನು ಎಷ್ಟರ ಮಟ್ಟಿಗೆ ಸ್ವೀಕರಿಸಲು ಸರ್ಕಾರ ಒಪ್ಪೀತು ಎಂದು ಪರೀಕ್ಷಿಸಲು ಹನ್ನೊಂದು ಅಂಶಗಳ ಬೇಡಿಕೆ ಸರ್ಕಾರದ ಮುಂದಿಟ್ಟರು ಗಾಂಧೀಜಿ. ಭೂಕಂದಾಯ ತಗ್ಗಿಸುವುದು, ಉಪ್ಪಿನ ಕರ ವಜಾ ಮಾಡುವುದು, ರಕ್ಷಣಾ ವ್ಯವಸ್ಥೆಯ ವೆಚ್ಚ ಇಳಿಸುವುದು, ವಿದೇಶೀ ವಸ್ತ್ರದ ಮೇಲೆ ಸುಂಕ ಏರಿಸುವುದು, ರಾಜಕೀಯ ಬಂಧಿತರ ಬಿಡುಗಡೆ ಮೊದಲಾದ ಅಲ್ಪ ಬೇಡಿಕೆಗಳು ಎಲ್ಲರನ್ನೂ ಅಚ್ಚರಿಗೊಳಿಸಿದುವು. ಎಲ್ಲಿ ಮುಗಿಲೇರುವ ಪೂರ್ಣ ಸ್ವಾತಂತ್ರ್ಯ, ಎಲ್ಲ ರಾಜಭಕ್ತರು ಕೈ ಜೋಡಿಸಿ ಕೇಳಿಕೊಳ್ಳುವಂಥಾ ಅಲ್ಪ ಬೇಡಿಕೆಗಳು! ಈ ಬೇಡಿಕೆಗಳು ಹಾಸ್ಯಾಸ್ಪದ. ಆದರೆ ತಮ್ಮ ಅಧಿಕಾರ ಭಾರತೀಯರಿಗೆ ಬಿಟ್ಟುಕೊಡಲು ಸರ್ಕಾರ ಸಿದ್ಧವಿದೆಯೇ ಎಂದು ಪರೀಕ್ಷಿಸುವ ಉದ್ದೇಶವೇ ಈ ಕನಿಷ್ಟ ಬೇಡಿಕೆಗಳ ಗುರಿ. ಸರ್ಕಾರ ಇದಕ್ಕೆ ಗಮನ ಕೊಡಲೇ ಇಲ್ಲ. ಸರ್ಕಾರ ಎಷ್ಟು ಮಾತ್ರವೂ ಜನರ ಬೇಡಿಕೆಗಳನ್ನು ಈಡೇರಿಸಿ ಕೊಡಲು ಸಿದ್ಧವಿಲ್ಲವೆಂದು ಪ್ರಚಾರ ಮಾಡಲು ಒಳ್ಳೆಯ ಸಾಧನ ಇದರಿಂದ ದೊರೆಯಿತು.

ಜನವರಿ 26 ದಿನಾಂಕ ಸಂಪೂರ್ಣ ಸ್ವಾತಂತ್ರ್ಯ ಪ್ರತಿಜ್ಞೆ ತೆಗೆದುಕೊಳ್ಳುವುದರಿಂದ ಹೋರಾಟಕ್ಕೆ ಸಿದ್ಧವಾಗಿರುವ ಸೂಚನೆ ಕೊಟ್ಟಿತು ದೇಶ. ಸುಪ್ರಸಿದ್ಧ ದಾಂಡಿ ಜೈತ್ರಯಾತ್ರೆ ಪ್ರಾರಂಭಿಸುವ ಮೂಲಕ ಮಹಾತ್ಮರು ಸತ್ಯಾಗ್ರಹದ ಪ್ರಾರಂಭೋತ್ಸವ ನಡೆಸಿದರು. ವಾಡಿಕೆಯಂತೆ ಸತ್ಯಾಗ್ರಹಕ್ಕೆ ಕರೆಕೊಡುವ ಮುನ್ನ ವೈಸರಾಯರಿಗೆ ತಮ್ಮ ಉದ್ದೇಶ ಕುರಿತು ದೀರ್ಘ ಪತ್ರ ಬರೆದರು. ಸ್ವಕಷ್ಟ ಸಹಿಷ್ಣುತೆಯಿಂದ ಬ್ರಿಟಿಷ್ ಜನತೆಯ ಹೃದಯ ಪರಿವರ್ತನೆ ಮಾಡುವುದೇ ತಮ್ಮ ಉದ್ದೇಶವೆಂದು ಸ್ಪಷ್ಟಪಡಿಸಿದರು. ಹಿಡಿಯಷ್ಟು ಬ್ರಿಟಿಷ್ ಜನಾಂಗ, ತಮಗಿಂತ ಅನಾದಿಕಾಲದಿಂದ ಹೆಚ್ಚು ಸುಸಂಸ್ಕೃತವಾದ ಜನಾಂಗವನ್ನು ಶೋಷಿಸಿ ಆಳುತ್ತಿರುವ ಅನ್ಯಾಯ, ಬ್ರಿಟಿಷ್ ಜನರಿಗೆ ತೋರಿಸಿಕೊಟ್ಟು ಅವರ ಹೃದಯ ಪರಿವರ್ತನೆ ಮಾಡುವುದು ತನ್ನ ಗುರಿ ಎಂದು ಉಲ್ಲೇಖಿಸಿದರು. ಶಾಸನ ಭಂಗ ಚಳುವಳಿಯಿಂದ ದೇಶದ ನೆಮ್ಮದಿ ಕದಡುವ ಅಪರಾಧ ಮಾಡುವುದು ವಿಹಿತವಲ್ಲವೆಂದು ಉತ್ತರ ನೀಡಿದರು ವೈಸರಾಯಿ ಲಾರ್ಡ್ ಇರ್ವಿನ್. ಪ್ರಪಂಚದ ಸೋಜಿಗ ಕೆರಳಿಸಿದ ಈ ವಿಚಿತ್ರ ಸತ್ಯಾಗ್ರಹದ ಯಾತ್ರೆ ಮಾರ್ಚಿ 11 ದಿನಾಂಕ ಪ್ರಾರಂಭವಾಗಿ ಮೇ 5, 1930ರಂದು ಮಹಾತ್ಮರ ಬಂಧನದಿಂದ ದೇಶಕ್ಕೆ ಕರೆ ಕೊಟ್ಟಿತು. 241 ಮೈಲಿಗಳ ಜೈತ್ರಯಾತ್ರೆಯ ಬಿಸಿ ದೇಶದ ಆದ್ಯಂತ ವ್ಯಾಪಕವಾಗಿ ಹಬ್ಬಿ ಒಂದು ಲಕ್ಷಕ್ಕೂ ಹೆಚ್ಚು ದೇಶಭಕ್ತರು ತುರಂಗ ಸೇರುವಂತೆ ಮಾಡಿತು.

ದಾಂಡಿ ಸತ್ಯಾಗ್ರಹ ಪ್ರಾರಂಭಿಸುತ್ತಲೇ ತಮ್ಮ ಬಂಧನವಾದೀತೆಂದು ಗಾಂಧೀಜಿ ತಿಳಿದಿದ್ದರು. ದಿನಗಳು ಕಳೆದರೂ ಬಂಧನವಾಗದೆ ಹೋದ ಪ್ರಯುಕ್ತ, ಇನ್ನೂ

ಹೆಚ್ಚು ಪರಿಣಾಮಕಾರಿಯಾದ ಧಾರಾಸಾನಾ ಉಪ್ಪಿನ ಕೋಠಿಯ ಮೇಲೆ ಹಲ್ಲೆ ನಡೆಸುವ ಕಾರ್ಯಕ್ರಮ ಅವರು ಸಿದ್ಧಗೊಳಿಸಿದರು. ಪ್ರತಿಯೊಂದು ಸತ್ಯಾಗ್ರಹವೂ ದೇಶಕ್ಕೆ ಅಹಿಂಸೆಯ ಶಕ್ತಿಯನ್ನು ನಿದರ್ಶಿಸುತ್ತಿತ್ತು. ಅಬಲೆಯರೆನಿಸಿಕೊಳ್ಳುವ, ಸೂರ್ಯರಶ್ಮಿಯನ್ನೇ ಕಾಣದ ತೆರೆಮರೆಯ ಘೋಷಾ ಸ್ತ್ರೀಯರೂ ವಿದೇಶಿ ವಸ್ತ್ರ, ಬ್ರಿಟಿಷ್ ವಸ್ತು, ಪಾನ ನಿರೋಧ ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿ ದುರ್ಬಲ ಅಹಿಂಸೆಯ ಪ್ರಬಲ ಶಕ್ತಿಯನ್ನು ವಿಸ್ಮಯಕಾರಿಯಾಗಿ ಜಗತ್ತಿಗೆ ತೋರಿಕೊಟ್ಟರು. ಧಾರಾಸಾನಾ ಉಪ್ಪಿನ ಕೋಠಿಯ ಧಾಳಿ ಅಹಿಂಸೆಯ ಉತ್ತುಂಗ ಶಿಖರವೇರಿತು. ಕೋಠಿಯ ಮೇಲೆ ಧಾಳಿ ನಡೆಸಲು ತಂಡ ತಂಡಗಳಲ್ಲಿ ಸತ್ಯಾಗ್ರಹಿಗಳು ಜಯಕಾರ ಮಾಡುತ್ತಾ, ನಿಧಾನವಾಗಿ ಹೆಜ್ಜೆಯಿಡುತ್ತಾ ಬರುತ್ತಿದ್ದರು. ತಮ್ಮ ತಲೆ ಬುರುಡೆ ಬಿರಿಯಬಹುದು, ಪ್ರಾಣ ಹೋಗಬಹುದು ಎಂಬ ಪೂರ್ಣ ಅರಿವಿನಿಂದ ಮುಂದುವರಿಯುತ್ತಿದ್ದ ಅಹಿಂಸಾ ಯೋಧರ ದೃಶ್ಯ ಕಲ್ಲೆದೆಯನ್ನು ಕರಗಿಸುವಂತಿತ್ತು. ಉಕ್ಕಿನ ಉಂಗುರಗಳ ಲಾಠಿಗಳಿಂದ ಸಜ್ಜಿತರಾದ ದೇಶೀಯ ಪೋಲೀಸರು ಸತ್ಯಾಗ್ರಹಿಗಳ ತಲೆ ಬುರುಡೆಗೆ ಗುರಿಯಿಟ್ಟು ಹೊಡೆಯುತ್ತಿದ್ದರು. ಕೆಲವರ ಪಕ್ಕೆಲಬುಗಳು ಮುರಿಯುತ್ತಿದ್ದುವು. ಸತ್ಯಾಗ್ರಹಿಗಳು ಹೊಡೆತ ತಪ್ಪಿಸಿಕೊಳ್ಳಲು ಒಂದು ಕೈಯನ್ನೂ ಮೇಲಕ್ಕೆ ಎತ್ತದೆ ಸೂತ್ರದ ಬೊಂಬೆಗಳಂತೆ ನೆಲಕ್ಕೆ ಪ್ರಜ್ಞಾ ಶೂನ್ಯರಾಗಿ ಉರುಳಿ ಬೀಳುತ್ತಿದ್ದರು. ಅನೇಕರ ವಸ್ತ್ರಗಳು ರಕ್ತಮಯವಾಗುತ್ತಿದ್ದುವು. ಕೆಳಕ್ಕುರುಳಿದವರನ್ನು ಪ್ರಥಮ ಚಿಕಿತ್ಸಾ ತಂಡದವರು ಸ್ಟ್ರೆಚರುಗಳ ಮೇಲೆ ಮಲಗಿಸಿ ಆಸ್ಪತ್ರೆಗೆ ಒಯ್ಯುತ್ತಿದ್ದರು. ಅಮೇರಿಕದ ಸುದ್ದಿಗಾರ ವೆಬ್‌ಮಿಲ್ಲರ್ ಕಣ್ಣಾರೆ ಕಂಡ ಈ ದೃಶ್ಯ ಹೃದ್ಯಂಗಮವಾಗಿ ಬಣ್ಣಿಸಿದ್ದಾನೆ. ಒಂದು ತಂಡದ ಹದಿನೆಂಟು ಗಾಯಾಳುಗಳನ್ನು ಒಂದೇ ಸಾರಿಗೆ ಜೋಲಿಯಲ್ಲಿ ಒಯ್ಯಲಾಯಿತು. 42 ಸತ್ಯಾಗ್ರಹಿಗಳು ಚಡಪಡಿಸುತ್ತ ನೆಲದ ಮೇಲೆ ಹೊರಳಾಡುತ್ತಿದ್ದರು. 11 ಗಂಟೆಯೊಳಗಾಗಿ 320 ಗಾಯಾಳುಗಳು ಆಸ್ಪತ್ರೆಗೆ ಸೇರಿದ್ದರು. ಇಬ್ಬರು ಪ್ರಾಣ ತೆತ್ತಿದ್ದರು. ತನ್ನ ಹದಿನೆಂಟು ವರ್ಷಗಳ ಅವಧಿಯಲ್ಲಿ ತಾನು ಇಪ್ಪತ್ತೆರಡು ದೇಶಗಳಲ್ಲಿ ಸುದ್ದಿ ಸಂಗ್ರಹಕ್ಕಾಗಿ ಪ್ರವಾಸ ಮಾಡಿದ್ದ ಅನುಭವಿ ವೆಬ್‌ಮಿಲ್ಲರ್ ಇಂಥ ಹೃದಯಭೇದಕ ದೃಶ್ಯ ಎಲ್ಲೂ ನೋಡಿರಲಿಲ್ಲವೆಂದೂ, ದೃಶ್ಯ ನೋಡಲಾರದೆ ಕಣ್ಣು ಮುಚ್ಚಿಕೊಳ್ಳಬೇಕಾಗುತ್ತಿತ್ತು ಎಂದು ಬರೆದಿರುತ್ತಾನೆ.

ದೇಶದ ಆದ್ಯಂತ 15,000 ಸತ್ಯಾಗ್ರಹಿಗಳು ಬಂಧಿತರಾದರು. ಮದರಾಸು ಮತ್ತು ಇತರ ಕಡೆ ಪೋಲೀಸರು ನಿಶ್ಶಸ್ತ್ರ ಜನರ ಮೇಲೆ ಗುಂಡು ಹಾರಿಸಿದರು. ಪೆಷಾವರಿನಲ್ಲಿ 'ಮಿಷನ್‌ಗನ್' ಪ್ರಯೋಗಿಸಲಾಯಿತು. ಗಡಿನಾಡು ಮತ್ತು ಬಂಗಾಳದ ಕೆಲವು ಭಾಗಗಳ ಮೇಲೆ 'ಮಿಷನ್‌ಗನ್ನಿ'ನಿಂದ ನಿರಪರಾಧಿಗಳ ಮೇಲೆ ವಿಮಾನ

ಗಳು ಗುಂಡಿನ ಮಳೆ ಸುರಿಸಿದವು. ಗಡಿನಾಡಿನ ಜನ ತುಪಾಕಿ ಪ್ರಿಯರು. ಸೇಡು ತೀರಿಸಿಕೊಳ್ಳುವುದು ಅವರ ಜಾಯಮಾನ. ಈ ಪ್ರಾಂತ್ಯಕ್ಕೆ ಸೇರಿದ ಕೆಂಪಂಗಿ ದಳದ 'ಖುದಾ–ಯಿ–ಖಿದ್ಮತ್‌ಗಾರ್', ದೈವಭಕ್ತರ ಅಸಾಧಾರಣ ಅಹಿಂಸಾ ವರ್ತನೆ ದೇಶವನ್ನು ದಂಗುಬಡಿಸಿತು.

ಬಾರಿಸಾಲಿನಲ್ಲಿ ಒಂದೇ ದಿನ ಪೋಲೀಸರ ಲಾಠಿಯಿಂದ 500 ಜನ ಗಾಯ ಗೊಂಡರು. ಕುಪಿತರಾದ ಜನ ಪೋಲೀಸರನ್ನು ಹಿಡಿದು ಶಾಲೆಯಲ್ಲಿ ಬಂಧಿಸಿ ಕಟ್ಟಡಕ್ಕೆ ಬೆಂಕಿ ಇಟ್ಟರು. ಇಬ್ಬರು ಕಾಂಗ್ರೆಸ್ ಸ್ವಯಂ ಸೇವಕರು ಬಾಗಿಲು ಒಡೆದು ಪೋಲೀಸರು ಸಜೀವ ಸುಟ್ಟುಹೋಗದಂತೆ ರಕ್ಷಿಸಿದರು. ಅಮೇರಿಕದ ಪತ್ರಿಕೋದ್ಯಮಿ ಜಾರ್ಜ್ ಸ್ಲೋಕೋಮ್ ಗಾಂಧೀಜಿ ಮತ್ತು ಮೋತಿಲಾಲರನ್ನು ಬಂಧನದಲ್ಲಿ ಸಂದರ್ಶಿಸಿದರು. ಹುಟ್ಟು ಹೋರಾಟಗಾರರಾದ ಮೋತಿಲಾಲರು, ಬಂಧನದಲ್ಲಿ ಏಕಾಗ್ರತೆಯಿಂದ ಚಿಂತಿಸುತ್ತಾ, ಅಹಿಂಸಾ ಹೋರಾಟವನ್ನು ತನ್ನ ದೇಶಬಾಂಧವರು ಇದೇ ರೀತಿಯಲ್ಲಿ ಮುಂದುವರೆಸಿಕೊಂಡು ಬಂದರೆ ಸ್ವರಾಜ್ಯ ಪ್ರಾಪ್ತವಾಗುವುದು ಖಂಡಿತವೆಂದು ಸ್ಲೋಕೋಮ್ ಅವರಿಗೆ ತಿಳಿಸಿದರು.

ಚಂಪಾರಣ್ಯ, ಖೇಡ, ಬಾರ್ಡೋಲಿ ಮತ್ತು ಕಾರವಾರದ ರೈತ ಸತ್ಯಾಗ್ರಹಿ ಗಳು, ಸಾಮಾನ್ಯ ಅಶಿಕ್ಷಿತ ಜನ ಸಹ, ಹೇಗೆ ಅಹಿಂಸಾ ಹೋರಾಟದಲ್ಲಿ ಪಾಲ್ಗೊಂಡು ಜಯಗಳಿಸಬಹುದೆಂಬುದನ್ನು ದೇಶಕ್ಕೆ ತೋರಿಕೊಟ್ಟವು.

ಅಬಿಸೀನಿಯವನ್ನು ಇಟಲಿಯ ಸರ್ವಾಧಿಕಾರಿ ಮುಸೋಲಿನಿ ಪ್ರವೇಶಿಸಿದಾಗ ಮತ್ತು ಜರ್ಮನಿಯ ಹಿಟ್ಲರ್ ಜೆಕೋಸ್ಲೋವೇಕಿಯವನ್ನು ಸಂಪೂರ್ಣವಾಗಿ ತನ್ನ ಹತೋಟಿಗೆ ತೆಗೆದುಕೊಂಡಾಗಲೂ ಆ ದೇಶದ ಜನರಿಗೆ ಗಾಂಧೀಜಿ ನೀಡಿದ ಹಿತೋಕ್ತಿ ಅಹಿಂಸಾ ಹೋರಾಟ. ನಿಮ್ಮ ಸೇನಾಬಲ ಮತ್ತು ಶಸ್ತ್ರಾಸ್ತ್ರ ಹೆಚ್ಚಿಸಿಕೊಳ್ಳುವ ಪ್ರಯತ್ನದಿಂದ ಯಾವ ಪ್ರಯೋಜನವೂ ಆಗದು. ವಿಶ್ವಸಂಸ್ಥೆಯಿಂದ ನೆರವು ನಿರೀಕ್ಷಿಸುವುದು ನಿರಾಶದಾಯಕವಾದೀತು. ಪ್ರತಿಯೊಬ್ಬ ಅಬಿಸೀನಿಯಾದವನೂ, ಸ್ಲೋವೇಕಿಯದ ಪ್ರಜೆಯೂ ಶತ್ರುವಿಗೆ ತಲೆ ಬಾಗುವುದಿಲ್ಲ, ಮೊಳಕಾಲೂರಿ ಮಣಿ ಯುವುದಿಲ್ಲ, ಅವರ ಆಣತಿಯಂತೆ ನಡೆದುಕೊಳ್ಳುವುದಿಲ್ಲ, ಪ್ರಾಣ ಹೋದರೂ ಸರಿ ಯಾವ ರೀತಿಯಲ್ಲೂ ಸಹಕರಿಸುವುದಿಲ್ಲವೆಂದು ದೃಢಸಂಕಲ್ಪ ಮಾಡಲಿ. ಬರಿದಾದ ದೇಶದ ಜನತೆಯ ಮೃತದೇಹಗಳ ಮೇಲೆ ಅವರ ಸೇನೆ ನಡೆದು ಹೋಗಬೇಕಾದೀತು. ಇಂಥ ದೃಢ ಸಂಕಲ್ಪದ ಜನತೆಯ ದೇಶದ ಆಕ್ರಮಣದಿಂದ ಏನೂ ಪ್ರಯೋಜನವಾಗ ದೆಂದು ಆಕ್ರಮಣಕಾರ ಆಕ್ರಮಿತ ದೇಶದಿಂದ ಕಾಲ್ತೆಗೆಯುವನು. ಹೃದಯದಲ್ಲಿ ಲವಲೇಶವೂ ದ್ವೇಷವಿಲ್ಲದೆ ಈ ರೀತಿಯಲ್ಲಿ ಪ್ರತಿಭಟಿಸುವುದರಿಂದ ಆಕ್ರಮಣಕಾರ

ತನ್ನ ಅಮಾನುಷ ವರ್ತನೆಗೆ ನಾಚಿಕೆಯಿಂದ ತಲೆ ತಗ್ಗಿಸಬೇಕಾದೀತು. ಅಲ್ಪ ಬಲಯುತವಾದ ಸಣ್ಣ ರಾಷ್ಟ್ರ ತನ್ನ ಸೇನಾಬಲದಿಂದ ಆಧುನಿಕ ಶಸ್ತ್ರಸಜ್ಜಿತ ಆಕ್ರಮಣಕಾರಿಯೊಡನೆ ಹೋರಾಡಲು ಮಾಡುವ ಪ್ರಯತ್ನ, ವಿರೋಧಿಯನ್ನು ಸಂಪೂರ್ಣವಾಗಿ ನಾಶ ಮಾಡಿ ಬಿಡಬೇಕೆಂಬ ಕ್ರೋಧಕ್ಕೆ ಪೋಷಕವಾಗುತ್ತದೆ. ಆದ್ದರಿಂದ ಈ ಮಾರ್ಗ ಅನುಸರಿಸದೆ ಅನ್ಯ ಅಹಿಂಸಾ ಮಾರ್ಗ ಅನುಸರಿಸುವುದು ಶ್ರೇಷ್ಠ. ಬೇಟೆಗಾರ ತನ್ನ ಮೇಲೆ ತಿರುಗಿ ಬೀಳುವ ಪ್ರಾಣಿಯ ಬೇಟೆಯಾಡಲು ಬಯಸುತ್ತಾನೆ. ದನದ ಬೇಟೆಯಾಡಲು ಯಾರೂ ಬಯಸರು. ಅಹಿಂಸೆ ಅಪರಿಮಿತ ತ್ಯಾಗ, ಧೈರ್ಯ, ಬಲಿದಾನ ನಿರೀಕ್ಷಿಸುತ್ತದೆ. ಯಾವ ಪಾಶವೀ ಬಲಕ್ಕೂ ತಲೆ ಬಾಗುವುದಿಲ್ಲ ಎಂದು ಸೆಟೆದು ನಿಲ್ಲಲು ಅಪ್ರತಿಮ ಎದೆಗಾರಿಕೆ ಅವಶ್ಯಕ. ಇಂಥ ನಿದರ್ಶನ ಇತಿಹಾಸದಲ್ಲಿ ಅಲಭ್ಯ. ತಾರ್ಕಿಕವಾಗಿ ಸರಿದೋರಬಹುದು. ಆದರೆ ಆಚಾರಣೆಯಲ್ಲಿ ಅಸಾಧ್ಯವೆಂದು ಹೇಳಬಹುದು. ಇಂಥವರು ಮಾನವನ ಆತ್ಮಶಕ್ತಿಯ ಬಲ ಅರಿಯರು. ಸಾಧ್ಯ ಮತ್ತು ಅಸಾಧ್ಯ ಇವೆರಡರ ನಡುವಿನ ಗೆರೆ ಅತಿ ಸೂಕ್ಷ್ಮ. ಮಾನವನ ಆತ್ಮಬಲ ಅಸಾಧ್ಯವನ್ನು ಸಾಧಿಸಬಲ್ಲದು. ಹೀಗೆ ಹೇಳಿದ ಮಾತ್ರಕ್ಕೆ ಆಕ್ರಮಣಕಾರನನ್ನು ತಾಂಬೂಲ ವೀಳೆಯವಿಟ್ಟು ಆಹ್ವಾನಿಸಿದಂತೆ ಎಂದು ಭಾವಿಸಲಾಗದು. ಹೇಗಾದರೂ ಸಾವು ಶತಃಸಿದ್ಧ. ಆತ್ಮಾರ್ಪಣೆಯಿಂದ ದೇಶ ನಾಶಗುವುದನ್ನು ಉಳಿಸಬಹುದು. ಪ್ರಪಂಚದ ಮೂಷಕಗಳೆಲ್ಲ ಸಭೆ ಸೇರಿ, ಇನ್ನು ಮಾರ್ಜಾಲವನ್ನು ಕಂಡು ತಾವು ಭಯಪಡುವುದಿಲ್ಲ ಎಂದು ನಿರ್ಧರಿಸಿ ತಾವಾಗಿಯೇ ಬೆಕ್ಕಿನ ಬಾಯಿಗೆ ಹೋಗುವುದಾದರೆ ಮೂಷಕದ ಸಂತತಿ ಉಳಿದೀತು.''

"ಹಿಂಸೆಯನ್ನು ಹಿಂಸೆಯಿಂದ ಅಡಗಿಸಲು ಸಾಧ್ಯವಾಗದು. ಒಂದು ಹಿಂಸೆ ಮತ್ತೊಂದು ಹಿಂಸೆಗೆ ಪ್ರಚೋದನೆ ಕೊಡುತ್ತದೆ. ಒಂದು ರಾಷ್ಟ್ರ ಮತ್ತೊಂದನ್ನು ಹಿಂಸೆಯಿಂದ ವಶಪಡಿಸಿಕೊಂಡರೆ, ಸೋತ ರಾಷ್ಟ್ರ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿರುತ್ತೆ. ಒಳಸಂಚು ನಡೆಸುತ್ತಿರುತ್ತದೆ. ಇದರಿಂದ ಕ್ರೋಧ, ಒಳಗುದಿ ಬೆಳೆಯುತ್ತದೆ. ಒಂದು ಯುದ್ಧ ಮತ್ತೊಂದು ಯುದ್ಧಕ್ಕೆ ದಾರಿ ಮಾಡಿಕೊಡುತ್ತದೆ. ವಿಷಮ ಚಕ್ರ ವರ್ಧಿಸುತ್ತದೆ. ಇದುವರೆಗೂ ಜಗತ್ತಿನಲ್ಲಿ ನಡೆದಿರುವ ಯುದ್ಧಗಳು ಯುದ್ಧದ ಕಾರಣವನ್ನು ತೃಪ್ತಿಕರವಾಗಿ ಬಗೆ ಹರಿಸಿವೆಯೆ? ಫ್ರಾನ್ಸ್ ತನ್ನ ಗಡಿ ರಕ್ಷಿಸಿಕೊಳ್ಳಲು ಅಪಾರ ಹಣ ವ್ಯಯಮಾಡಿ 'ಮ್ಯಾಜಿನೋ' ಕೋಟೆ ನಿರ್ಮಿಸಿತು. ಆದರೆ ಜರ್ಮನಿಯಿಂದ ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಮ್ಯಾಜಿನೊ ಕೋಟೆ, ಜರ್ಮನಿಯ 'ಸೀಗ್‌ಫ್ರೀಡ್' ಕೋಟೆಯ ನಿರ್ಮಾಣಕ್ಕೆ ದಾರಿ ಮಾಡಿ ಕೊಟ್ಟಿತು. ಬಲವನ್ನು ಅತಿಬಲದಿಂದ ಬಡಿಯಬೇಕು. ಆಗ ಯಾವ ಹಿಟ್ಲರ್ ವಾದವನ್ನು ನಾಶಪಡಿಸಲು ಮಿತ್ರರಾಷ್ಟ್ರಗಳು ಒಂದಾಗಿ ಯುದ್ಧದಲ್ಲಿ ತೊಡಗಿದುವೊ,

ಅದೇ ಹಿಟ್ಲರ್‌ಶಾಹಿ, ಎಂದರೆ ಭಯಂಕರ ಹಿಂಸಾವಾದಕ್ಕೆ ಜಯವಾಗುವುದೇ ವಿನಾ, ಯುದ್ಧ ಭೀತಿಯ ನಾಶಕ್ಕಲ್ಲ. ಮೊದಲ ವಿಶ್ವಯುದ್ಧದ ಗುರಿ, ಯುದ್ಧಗಳನ್ನು ಕೊನೆಗಾಣಿಸುವುದೇ ಆಗಿತ್ತು. ನಿಜ, ಮಿತ್ರರಾಷ್ಟ್ರಗಳು ಜಯಗಳಿಸಿದುವು. ಆದರೆ ಅವರ ಉದ್ದೇಶ ಸಾಧಿತವಾಯಿತೇ ?"

"ಶತ್ರು ಪೂರ್ಣ ಪರಾಜಿತನಾದರೂ ಸೋತವರೂ, ಗೆದ್ದವರೂ ಯುದ್ಧದ ಅಂತ್ಯದಲ್ಲಿ ಒಂದುಗೂಡಲೇಬೇಕು. ವಿಷಮ ಪ್ರಕ್ಷುಬ್ಧ ವಾತಾವರಣ ಕಲ್ಪಿಸಿ, ದ್ವೇಷಾಸೂಯೆಗಳ ಜ್ವಾಲಾಮುಖಿ ಉರಿಯುವಂತೆ ಮಾಡಿ, ಮಾನವತೆಯ ಕಲ್ಯಾಣ ಗುಣಗಳನ್ನು ತುಳಿದು ನಾಶಮಾಡಿ, ತದನಂತರ ಜ್ವಾಲೆ ಆರಿಸಲು ತಣ್ಣೀರು ಎರಚಲೇಕೆ? ಅಹಿಂಸಾ ಮಾರ್ಗದಿಂದ ಮಾನವನ ಶ್ರೇಷ್ಠ ಗುಣಗಳನ್ನು ಪ್ರಚೋದಿಸಿ, ಶಾಂತಿ ಮಾರ್ಗದಿಂದ ಭಿನ್ನತೆಗಳನ್ನು ಬಗೆಹರಿಸಿಕೊಳ್ಳುವುದು ಉತ್ತಮ ಅಲ್ಲವೇ ?"

ಹಂಗೇರಿ, ಪೋಲೆಂಡ್, ಈಜಿಪ್ಟ್, ಕೊರಿಯ ಈ ಪ್ರದೇಶಗಳು ಅಹಿಂಸಾತ್ಮಕ ಪ್ರತಿಭಟನೆಯ ಕ್ರಮ ಅನುಸರಿಸಿ ಸ್ವಾತಂತ್ರ್ಯಗಳಿಸಿದ್ದು ಚರಿತ್ರಾರ್ಹ ನಿದರ್ಶನಗಳು. ಇದನ್ನು 'ಗಾಂಧೀವಾದ' ಪುಸ್ತಕದಲ್ಲಿ ಉದಹರಿಸಲಾಗಿದೆ. ಇಟಲಿಯ ಚಿಂತಕ ರೊಮೇನ್ ರೋಲ ಗಾಂಧಿಯವರ ಜೀವನಚರಿತ್ರೆ ಬರೆದಿರುತ್ತಾರೆ. ಗಾಂಧೀಜಿ ಇಟಲಿಯಲ್ಲಿ ಇವರ ಮನೆಯಲ್ಲಿ ಕೆಲವು ದಿನ ಇದ್ದರು. ಇವರಿಬ್ಬರ ನಡುವೆ ಪತ್ರವ್ಯವಹಾರ ನಡೆಯುತ್ತಿತ್ತು. ಈ ಪತ್ರಗಳನ್ನು ಕೇಂದ್ರ ಸರ್ಕಾರ ಸಂಗ್ರಹಿಸಿ ಪ್ರಕಟಿಸಿದೆ. 1861 ರಲ್ಲಿ ರಷ್ಯದ ರಾಜ ಕುಮಾರ ಗಾರ್ಟಿಸಕೋವ ಪೋಲೆಂಡನ್ನು ಸ್ವಾಧೀನಪಡಿಸಿಕೊಳ್ಳಲು ಶಸ್ತ್ರಸಜ್ಜಿತ ಸೇನೆಯೊಡನೆ ಬಂದ. ಸೆವಸ್ತ ಪೋಲ್ ಸಮರ ವೀರನೆಂದು ಇವನು ಖ್ಯಾತಿ ಗಳಿಸಿದ್ದ. ಪೋಲೆಂಡನ್ನು ಆಕ್ರಮಿಸಿಕೊಳ್ಳಲು ಬಂದಾಗ ಆ ದೇಶದ ಮಹಾಕವಿ ಕ್ರನ್‌ಸಿಸ್‌ಸ್ಕಿಯ ಉಪದೇಶದಂತೆ ಪೋಲೆಂಡಿನವರ ಆಕ್ರಮಣ ವಿರೋಧಿಸಲು ಶಸ್ತ್ರ ಬಳಸಲಿಲ್ಲ. ತೋಪು ತುಪಾಕಿಗಳ ಮುಂದೆ ಸ್ವಾತಂತ್ರ್ಯದ ಗೀತೆಗಳನ್ನು ಹಾಡುತ್ತ ಕಾಲೂರಿ ದೇವರ ಪ್ರಾರ್ಥನೆ ಮಾಡುತ್ತಾ ಕುಳಿತರು. ಗಾರ್ಟಿಸೆಕೋವಿಗೆ ನಿರಾಯುಧರನ್ನು ಕೊಲ್ಲಲು ಮನಸ್ಸು ಒಪ್ಪಲಿಲ್ಲ. ಆಯುಧಗಳಿಲ್ಲದಿದ್ದರೆ, ನಾನು ಮದ್ದು ಗುಂಡು ಬಂದೂಕು ಕೊಡುತ್ತೇನೆ ಯುದ್ಧಮಾಡಿ ಎಂದ. ಪೋಲೆಂಡಿನವರು ಒಪ್ಪಲಿಲ್ಲ. ಈ ಅಹಿಂಸಾತ್ಮಕ ಪ್ರತಿಭಟನೆಯಿಂದ ದಿಕ್ಕು ತೋಚದಂತಾದ ಗಾರ್ಟಿಸ್ಕೋವ ಯುದ್ಧ ಮಾಡದೆ ಹಿಂತಿರುಗಿದ. ಈ ನಿದರ್ಶನ ಗಾಂಧೀ ಅವರಿಗೆ ರೊಮೇನ್ ರೋಲ ಬರೆದು ತಿಳಿಸಿ, ತಮ್ಮ ಪೂರ್ವಜರು ನಡೆಸಿದ ಅಸದೃಶ ಅಹಿಂಸಾತ್ಮಕ ಪ್ರತಿಭಟನೆಯ ಮಾರ್ಗ ಇಂದಿನ ಪೀಳಿಗೆ ತೊರೆದಂತಿದೆ. ಹಿಟ್ಲರನನ್ನು ಪೋಲೆಂಡ್ ಸೇನೆ ಶಸ್ತ್ರಾಸ್ತ್ರಗಳೊಡನೆ ಜರ್ಮನ್ ಸೇನೆಯನ್ನು ಒಂದು ದಿನ ಕಾಲವೂ ಪ್ರತಿಭಟಿಸಲು ಸಾಧ್ಯ

ವಾಗದೆ ಪೋಲೆಂಡ್ ತನ್ನ ಸ್ವಾತಂತ್ರ್ಯ ಕಳೆದುಕೊಂಡಿತು. ರೋಮನ್ ರೋಲ ಗಾಂಧಿಯವರ ಅಹಿಂಸಾತ್ಮಕ ಪ್ರತಿಭಟನೆ ಪುಷ್ಟೀಕರಿಸಿ ಪೋಲೆಂಡಿನ ನಿದರ್ಶನ ಅವರ ಗಮನಕ್ಕೆ ಲಿಖಿತಮೂಲಕ ತಿಳಿಸಿದರು.

ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟನ್ನಿನೊಡನೆ ಗಾಂಧೀಜಿ ಹೋರಾಡುತ್ತಿದ್ದರೂ ವಿಶ್ವಯುದ್ಧದಲ್ಲಿ ಇಂಗ್ಲೆಂಡ್ ಪರಾಜಿತವಾಗಲೆಂದು ಎಂದೂ ಅವರು ಆಶಿಸಲಿಲ್ಲ. ದೀನಬಂಧು ಸಿ. ಎಫ್ ಆಂಡ್ರೂಸಿನಂಥಾ ನೂರಾರು ಆಂಗ್ಲೇಯ ಹಿತೈಷಿಗಳೂ ಗಾಂಧಿಯವರ ಆಪ್ತರಾಗಿದ್ದರು. ಪಾರ್ಲಿಮೆಂಟ್ ಭವನದ ಮೇಲೆ ಬಾಂಬು ಬಿದ್ದ ಸಂಗತಿ ತಿಳಿದು ಅವರು ಕಣ್ಣೀರು ಸುರಿಸಿದರು. ಅವರ ಶತ್ರು, ಪರರನ್ನು ಶೋಷಿಸಿ ಕೊಬ್ಬು ಬೆಳೆಸಿಕೊಳ್ಳುವ ಸಾಮ್ರಾಜ್ಯಶಾಹಿ ಬ್ರಿಟಿಷ್ ಜನತೆಯಲ್ಲ. ಯುದ್ಧ ನಿಲ್ಲಿಸುವಂತೆ ಬ್ರಿಟನ್ ಮತ್ತು ಶತ್ರು ರಾಷ್ಟ್ರಗಳಿಗೆ ಅವರು ಬಹಿರಂಗ ಪ್ರಾರ್ಥನೆ ಸಲ್ಲಿಸಿದರು. ಹಿಟ್ಲರಿಗೆ ಗಾಂಧೀಜಿ ಮಾಡಿಕೊಂಡ ಪ್ರಾರ್ಥನೆಯನ್ನು ಬ್ರಿಟಿಷ್ ಪ್ರಭುತ್ವ ಅವನಿಗೆ ಮುಟ್ಟಿಸಲಿಲ್ಲ.

ಜಗತ್ತಿನಲ್ಲಿ ಹೃದಯ ಪರಿವರ್ತನೆಗೆ ನಿಲುಕದ ವ್ಯಕ್ತಿ ಇರಲಾರನೆಂಬ ನಂಬಿಕೆ ಅಹಿಂಸೆಯ ಅಸ್ತಿಭಾರ. ಹಿಟ್ಲರನ ಯೋಧರ ವಿರುದ್ಧ ಕೈ ಎತ್ತದೆ, ಮನಸ್ಸಿನಲ್ಲಿ ಸ್ವಲ್ಪವೂ ದ್ವೇಷಕ್ಕೆ ಎಡೆಗೊಡದೆ ಸಾವಿರಾರು ಅಹಿಂಸಾವಾದಿಗಳು ತಮ್ಮ ದೇಶಕ್ಕಾಗಿ ಪ್ರಾಣ ತ್ಯಜಿಸುವುದನ್ನು ನೋಡಿ ಹಿಟ್ಲರಿನಂಥಾ ಕಠಿಣ ಹೃದಯಿಗಳ ಮನಸ್ಸು ಕರಗದೆ ಇರಲಾರದು.

'ಕ್ವಿಟ್ ಇಂಡಿಯ', ಭಾರತ ಬಿಟ್ಟು ತೊಲಗಿ ನಿರ್ಣಯ ಆಗಸ್ಟ್ 8, 1942 ದಿನಾಂಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಂಗೀಕರಿಸಿತು. ಮಾರನೆಯ ದಿನ ಬೊಂಬಾಯಿ ಅಜಾದ್ ಮೈದಾನದಲ್ಲಿ 'ಮಾಡು ಅಥವಾ ಮಡಿ' ಕರೆ ಕೊಟ್ಟು ಸ್ಫೂರ್ತಿದಾಯಕ ಭಾಷಣ ಮಾಡಿದರು ಗಾಂಧೀಜಿ. ಅಂದೇ ಅವರು ಮತ್ತು ಇತರ ನಾಯಕರು ಬಂಧಿತರಾದರು. ಭಾರತ ವಿಭಾಗದ ಕಾರ್ಯದರ್ಶಿ ಅಮೆರಿ ಮಾಡಿದ ಭಾಷಣದಿಂದ ಪ್ರಾಣ ಹಾನಿಗೆ ಎಡೆಗೊಡದೆ ವಿಧ್ವಂಸಕ ಕೃತ್ಯಗಳನ್ನೆಸಗಬಹುದೆಂದು ಗಾಂಧೀಜಿ ಸೂಚಿಸಿರುವುದಾಗಿ ಜನ ತಿಳಿದರು. ಗಾಂಧಿಯವರ ಆಪ್ತ ಅನುಯಾಯಿಗಳೂ, ಭಾಷ್ಯಕಾರರೂ ಎಂದು ಪ್ರಸಿದ್ಧರಾದ ಕೆ.ಜಿ. ಮಶ್ರುವಾಲ ಆಗ 'ಹರಿಜನ' ಪತ್ರಿಕೆಯ ಸಂಪಾದಕರಾಗಿದ್ದರು. ಕಿಶೋರಿಲಾಲ್ ಮತ್ತು ಕಾಲೇಲ್ಕರು ವಿಧ್ವಂಸಕ ಕೃತ್ಯಗಳ ಅನುಮೋದಕರಾದರು. ವಿಧ್ವಂಸಕ ಕೃತ್ಯ ನಡೆಸಬಹುದೆಂಬ ಸುತ್ತೋಲೆ ಎಲ್ಲೆಲ್ಲೂ ಗೋಪ್ಯವಾಗಿ ಹರಡಿತು.

ಸತ್ಯಾಗ್ರಹಿ ತನ್ನ ಕಾರ್ಯಕ್ರಮ ಸರ್ಕಾರಕ್ಕೆ ಮುಂದಾಗಿ ತಿಳಿಸಿ, ಸಂಭವಿಸ ಬಹುದಾದ ಎಲ್ಲ ಪರಿಣಾಮುಗಳನ್ನೂ ಸ್ವಾಗತಿಸಲು ಸಿದ್ಧನಿರುತ್ತಾನೆ. ಆದರೆ ವಿಧ್ವಂಸಕ ಕೃತ್ಯಗಳಲ್ಲಿ ತೊಡಗುವವರು ಹೀಗೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ 'ಚಲೇಜಾವ್' ಚಳವಳಿಯಲ್ಲಿ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದವರು ಭೂಗತರಾದರು. ತಂತಿ, ಟಪಾಲು, ರೈಲು, ರಸ್ತೆ ಇವುಗಳನ್ನು ನಾಶಪಡಿಸುವುದರಲ್ಲಿ ನಿರತರಾದರು. ಈ ವಿಧ್ವಂಸಕ ಕೃತ್ಯಗಳನ್ನು ಖಂಡಿಸುವಂತೆ ಬಂಧನದಲ್ಲಿದ್ದ ಮಹಾತ್ಮರಿಗೆ ಸರ್ಕಾರ ಮೊರೆಯಿಟ್ಟಿತು. ಎಲ್ಲ ಸುದ್ದಿಯೂ ನಿಷ್ಪಕ್ಷಪಾತವಾಗಿ ಸರಿಯಾಗಿ ತಿಳಿಯದ ಬಂಧಿತ ಗಾಂಧೀಜಿ ಹೇಳಿಕೆ ಕೊಡಲು ನಿರಾಕರಿಸಿದರು.

ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದವರಲ್ಲಿ ಗಾಂಧೀ ಪ್ರಣೀತ ಧುರೀಣ ಕರ್ನಾಟಕದ ರಂಗನಾಥ ದಿವಾಕರರೂ ಒಬ್ಬರು. ಎರಡು ವರ್ಷಕಾಲ ಭೂಗತರಾಗಿ, ಕರ್ನಾಟಕದಲ್ಲಿ ನಡೆದ ಕ್ರಾಂತಿಕಾರಕ ಆಂದೋಲನದಲ್ಲಿ ಸೂತ್ರಧಾರಿಗಳಲ್ಲಿ ಒಬ್ಬರಾಗಿದ್ದರು. ರೈಲ್ವೆ ಸ್ಟೇಷನ್ನುಗಳನ್ನು ಸುಡುವುದು, ರೈಲುಗಾಡಿಗಳನ್ನು ನಿಲ್ಲಿಸುವುದು ಮುಂತಾದ ವಿಧ್ವಂಸಕ ಕೃತ್ಯಗಳು ದೊಡ್ಡ ಪ್ರಮಾಣದಲ್ಲಿ ಕರ್ನಾಟಕದಲ್ಲಿ ನಡೆದುವು. ಗಾಂಧೀಜಿ ಕಠಿಣತರ ಉಪವಾಸ ಅನುಭವಿಸುತ್ತ ಪುಣೆಯ ಆಗಾಖಾನರ ಅರಮನೆಯಲ್ಲಿದ್ದಾಗ ರಂಗರಾಯರು ಅವರನ್ನು ಫೆಬ್ರವರಿ 1943 ರಲ್ಲಿ ಭೆಟ್ಟಿಯಾಗಿ ಕರ್ನಾಟಕದಲ್ಲಿ ನಡೆದ ವಿಧ್ವಂಸಕ ಕೃತ್ಯಗಳ ವರದಿ ಸಲ್ಲಿಸಿದರು. "ಮಾನವರಿಗೆ ಹಿಂಸೆ ಕೊಡದೆ ಇರುವ ನಿಮ್ಮ ಸಂಯಮ, ಪಥ್ಯ ಯೋಗ್ಯವೇ ಇದೆ. ಆದರೆ ಆಸ್ತಿ ಪಾಸ್ತಿಗೆ ಮಾಡಿದ ಹಿಂಸೆ ಕೂಡ ಈ ಹೊತ್ತಲ್ಲ ನಾಳೆ ಮಾನವ ಹಿಂಸೆಗೆ ದಾರಿ ಮಾಡಿಕೊಡುವುದು. ನೀವು ಹಿಂಸೆ ಮಾಡದಿದ್ದರೂ, ಆಸ್ತಿ ಪಾಸ್ತಿಯ ಮಾಲೀಕರಾದ ಸರಕಾರದವರು, ಅದರ ನೌಕರರು ಹಿಂಸೆಗೆ ಎಳೆಸುವುದು ನಿಶ್ಚಿತ. ಆಗ, ನಿಮ್ಮ ಕಾರ್ಯಕರ್ತರಿಂದ ಪ್ರತಿಹಿಂಸೆ ಆಗದಿರುವುದು ಅಸಾಧ್ಯ. ಸ್ವಸಂರಕ್ಷಣಕ್ಕಾದರೂ ಸರಕಾರದ ವಶವಾಗ ಕೂಡದು ಎಂಬ ಬುದ್ಧಿಯಿಂದಾದರೂ ನಿಮ್ಮಿಂದ ಹಿಂಸೆಯಾಗೇ ತೀರುವ ಸಂಭವ ಹೆಚ್ಚು. ಆದುದರಿಂದ ಈ ಮಾರ್ಗ ಸಲ್ಲದು".

ಸತ್ಯಾಗ್ರಹ ಆಜನ್ಮ ಸಿದ್ಧ ಹಕ್ಕು. ಸರ್ಕಾರ ಅಥವಾ ಬೇರೆ ಯಾವ ಅಧಿಕಾರಕ್ಕೂ ಒಳಪಟ್ಟುದಲ್ಲ. ಪ್ರಜಾಪ್ರಭುತ್ವದಲ್ಲೂ ಅದಕ್ಕೆ ಸ್ಥಾನವುಂಟು. ಅಧಿಕಾರಾರೂಢರು ಪ್ರಜಾಪ್ರಭುತ್ವದಲ್ಲಿ ಅವಕಾಶವಿಲ್ಲವೆಂದು ಹೇಳಬಹುದು. ಇದನ್ನು ನಿರ್ಧರಿಸುವವನು ವ್ಯಕ್ತಿ. ತನ್ನ ಅಂತರ್ವಾಣಿಯ ವಿರುದ್ಧ ಸರ್ಕಾರ ವರ್ತಿಸುತ್ತಿದ್ದರೆ, ಜಯಾಪಜಯ ಲಕ್ಷಿಸದೆ, ಆತ್ಮಸಾಕ್ಷಿಗೆ ಅನುಗುಣವಾಗಿ ಸತ್ಯಾಗ್ರಹಿ, ತಾನೊಬ್ಬನೇ ಆದರೂ ಅದನ್ನು ಪ್ರತಿಭಟಿಸುವನು.

ಸತ್ಯಾಗ್ರಹ ಅನಾದಿ ಕಾಲದಿಂದಲೂ ನಮ್ಮಲ್ಲಿ ನಡೆದು ಬಂದಿರುವ ದಾರಿ. ಆಧ್ಯಾತ್ಮಿಕ ಮಾರ್ಗವೆಂದೂ ಹೇಳಬಹುದು. ಪ್ರಹ್ಲಾದ ಇತಿಹಾಸ ಪುರಾಣಗಳಲ್ಲಿ ದೊರೆಯುವ ಪ್ರಥಮ ಸತ್ಯಾಗ್ರಹಿ. ಆತ್ಮ ವಿಶ್ವಾಸಕ್ಕಾಗಿ ಪ್ರಾಣ ತೊರೆಯಲು ಅವನು ಸಿದ್ಧನಾಗಿದ್ದ. ಸತ್ಯ ಸಾಯಿಬಾಬಾ ಅವರು ಹೇಳುವಂತೆ, ಪ್ರಜಾಪ್ರಭುತ್ವದ ಅಸ್ತಿಭಾರವಾದ ಚಿಂತನ ಸ್ವಾತಂತ್ರ್ಯ ಅಭಿಪ್ರಾಯ ಸ್ವಾತಂತ್ರ್ಯ ಬಳಸಿಕೊಳ್ಳದಿದ್ದರೆ ನಮ್ಮ ದೇಶ ಅನೇಕ ಆಚಾರ್ಯ ಪುರುಷರ, ಮತಸ್ಥಾಪಕರ ಜನ್ಮ ಸ್ಥಾನವಾಗುತ್ತಿರಲಿಲ್ಲ. ಆಳುವ ಅರಸರು ತಮ್ಮ ವಿರೋಧವಿದ್ದರೂ ಅದನ್ನು ಲಕ್ಷಿಸದೆ ಈ ಮಹಾ ಪುರುಷರು ತಮ್ಮ ಅಭಿಪ್ರಾಯ ಮತ ನಿರ್ಭಯವಾಗಿ, ನಿರ್ಲಕ್ಷದಿಂದ ಪ್ರತಿಪಾದಿಸುತ್ತಿದ್ದರು. ಅದ್ವೈತ, ದ್ವೈತ, ವಿಶಿಷ್ಟಾದ್ವೈತ, ಜೈನ, ಬೌದ್ಧ, ವೀರಶೈವ, ಕಬೀರ ಪಂಥ, ಬ್ರಹ್ಮಸಮಾಜ, ಆರ್ಯಸಮಾಜ ಮೊದಲಾದ ಮತಧರ್ಮಗಳು ಹುಟ್ಟಿಕೊಳ್ಳಲು ಮತ್ತು ಹೊರಗಿನಿಂದ, ಪಾರಸಿ, ಇಸ್ಲಾಂ, ಕ್ರೈಸ್ತ ಧರ್ಮಗಳು ಪ್ರವೇಶಿಸಿ ಬೆಳೆಯಲು ಅಭಿಪ್ರಾಯ ಸ್ವಾತಂತ್ರ್ಯ, ಧರ್ಮಾಚರಣೆಯ ಸ್ವಾತಂತ್ರ್ಯ, ಮತ ಸ್ವಾತಂತ್ರ್ಯ ಇವು ಮೂಲಕಾರಣಗಳು.

ವ್ಯಕ್ತಿ, ಸಾಂಸಾರಿಕ, ಸಾಮಾಜಿಕ, ಆರ್ಥಿಕ ರಾಜಕೀಯ ಎಲ್ಲವುಗಳಲ್ಲೂ ಸತ್ಯಾಗ್ರಹಕ್ಕೆ ಅವಕಾಶವುಂಟು. ಈ ಸೂಕ್ಷ್ಮ ಅಸ್ತ್ರವನ್ನು ಎಚ್ಚರಿಕೆಯಿಂದ ಆಚರಣೆಗೆ ತರಬೇಕು. ಕಸ್ತೂರಿಬಾ ರಕ್ತಸ್ರಾವದಿಂದ ನರಳುತ್ತಿದ್ದಳು. ಉಪ್ಪು ಬಿಟ್ಟರೆ ಗುಣವಾದೀತು ಎಂದರು ಗಾಂಧೀಜಿ. ಕಸ್ತೂರಿಬಾ ಸಮ್ಮತಿಸಲಿಲ್ಲ. ಒಂದು ವರ್ಷಕಾಲ ಬೇಳೆಕಾಳು, ಉಪ್ಪು ಸ್ವೀಕರಿಸುವುದಿಲ್ಲವೆಂದರು ಗಾಂಧೀಜಿ ಕಸ್ತೂರಿಬಾ ಪತಿಯ ಮಾರ್ಗ ಹಿಡಿಯ ಬೇಕಾಯಿತು. ಸಾಂಸಾರಿಕ ಸತ್ಯಾಗ್ರಹವಾಗಿ ಇದನ್ನು ಗಾಂಧೀಜಿ ನಿದರ್ಶಿಸಿದ್ದಾರೆ. ಹರಿಜನರಿಗೆ ಪ್ರವೇಶವಿಲ್ಲದ ದೇವಾಲಯಗಳಿಗೆ ತಾನು ಪ್ರವೇಶಿಸುವುದಿಲ್ಲವೆಂದು ಆಚರಣೆಗೆ ತಂದುದು ಸಾಮಾಜಿಕ ಸತ್ಯಾಗ್ರಹ. ಪಾನ ನಿರೋಧ ಚಳವಳಿಯೂ ಇದೇ ಶ್ರೇಣಿಗೆ ಸೇರಿದ್ದು. ವಿದೇಶಿ ವಸ್ತ್ರ ಬಹಿಷ್ಕಾರವಾಗಿ ನಡೆಸಿದ ಚಳವಳಿ, ಅಂಗಡಿಗಳ ಮುಂದೆ ಸರ್ಪಕಾವಲು ಹಾಕಿ, ವಿದೇಶಿ ವಸ್ತ್ರಗಳನ್ನು ಮೂಟೆಕಟ್ಟಿ ಇರಿಸುವಂತೆ ಮಾಡಿದ್ದು ಆರ್ಥಿಕ ಸತ್ಯಾಗ್ರಹಕ್ಕೆ ಒಂದು ನಿದರ್ಶನ.

ತಪ್ಪೊಪ್ಪಿಗೆ ಸತ್ಯಾಗ್ರಹದ ಒಂದು ಹೆಜ್ಜೆ. ಮಾನವ ತಪ್ಪು ಮಾಡುತ್ತಲೇ ಇರುತ್ತಾನೆ. ಮನಸ್ಸಿನಲ್ಲೇ ಪಶ್ಚಾತ್ತಾಪ ಪಡಬಹುದು. ಮುಂದೆ ಹೀಗೆ ಮಾಡುವುದಿಲ್ಲವೆಂದು ತನ್ನಲ್ಲಿ ತಾನೇ ನಿರ್ಧರಿಸಿಕೊಳ್ಳಬಹುದು. ಭೋಗಿ ಮತ್ತು ವಿಷಯಾಸಕ್ತ ಈ ರೀತಿಯ ತೀರ್ಮಾನಕ್ಕೆ ಬಂದರೂ, ಅನೇಕಸಾರಿ ಅವನು ವಂಚಿತನಾಗಬಹುದು. ಚಂಚಲ ಬುದ್ಧಿ, ತನ್ನ ತೀರ್ಮಾನದಂತೆ ನಡೆದುಕೊಳ್ಳಲು ಅವನಿಗೆ ಅವಕಾಶ ಕೊಡದು. ಬಹಿರಂಗವಾಗಿ ತಪ್ಪೊಪ್ಪಿಕೊಂಡರೆ, ಸಮಾಜ ತನ್ನ

ನಡವಳಿಕೆಯ ಮೇಲೆ ಕಣ್ಣು ಇಟ್ಟಿರುತ್ತದೆ ಎಂಬ ಭೀತಿ, ತನ್ನ ಮನೋ ನಿರ್ಧಾರ ದಂತೆ ನಡೆದುಕೊಳ್ಳಲು ಅವನಿಗೆ ಬಲ ಕೊಡುತ್ತದೆ. ಕ್ರೈಸ್ತಧರ್ಮದಲ್ಲಿ ತಮ್ಮ ಧರ್ಮ ಗುರುವಿನಲ್ಲಿ ತಮ್ಮ ಅಪರಾಧಗಳನ್ನು ಹೇಳಿಕೊಳ್ಳುವ ಪದ್ಧತಿಯುಂಟು.

1940ರಲ್ಲಿ ಶ್ರೀಮಂತ ದೇಶಭಕ್ತ ಕುಟುಂಬಕ್ಕೆ ಸೇರಿದ ಒಬ್ಬ ಸುಶಿಕ್ಷಿತ ತರುಣ ಶಿಕ್ಷಣ ಪಡೆಯಲು ಸೇವಾಗ್ರಾಮಕ್ಕೆ ಬಂದ. ನೆರೆಯ ವರ್ಧಾದಲ್ಲಿ ಒಬ್ಬ ಹುಡುಗಿ ಯೊಡನೆ ಅನೈತಿಕ ಸಂಬಂಧ ಬೆಳೆಸಿದ. ಗಾಂಧೀಜಿ ಇದರಿಂದ ತುಂಬನೊಂದರು. ಬಹಿರಂಗ ಸಭೆಗಳಲ್ಲಿ ತನ್ನ ತಪ್ಪು ಪ್ರಕಟಿಸುವಂತೆಯೂ, ನೈತಿಕ ಅಪರಾಧಕ್ಕಾಗಿ ಯುದ್ಧ ವಿರೋಧಿ ಭಾಷಣ ಮಾಡಿ ಜೈಲುವಾಸ ಅನುಭವಿಸುವ, ಶಿಕ್ಷೆ ಗಾಂಧೀಜಿ ಅವನಿಗೆ ವಿಧಿಸಿದರು. ಅವನು ತನ್ನ ನೈತಿಕ ಅಪರಾಧ ತಿಳಿಸಿ, ಜಿಲ್ಲಾ ನ್ಯಾಯಾಧೀಶರಿಗೆ ಪತ್ರ ಬರೆದ. ಬಹಿರಂಗ ಸಭೆಗಳಲ್ಲಿ ತಪ್ಪು ಪ್ರಕಟಿಸಿದ. ನಿಜಕಾರಣ ಇದು. ಅಪವಾದ ದಿಂದ ಮುಕ್ತನಾಗಲು ಯುದ್ಧವಿರೋಧಿ ಭಾಷಣ ನೆಪಮಾತ್ರಕ್ಕೆ ಮಾಡಿ, ವಿಧಿಸಲ್ಪಟ ಒಂದು ದಿನದ ಶಿಕ್ಷೆ, ಒಂದು ರೂಪಾಯಿ ದಂಡ ತೆತ್ತ.

1920, 1930, 1932 ಮತ್ತು 1942 ರಲ್ಲಿ ಗಾಂಧೀಜಿ ಸಾಮೂಹಿಕ ಸತ್ಯಾಗ್ರಹ ನಡೆಸಿದರು. 1932 ರಲ್ಲಿ ಸಾಮೂಹಿಕ ಸತ್ಯಾಗ್ರಹ ಸ್ಥಗಿತಗೊಳಿಸಿ ವೈಯಕ್ತಿಕ ಸತ್ಯಾಗ್ರಹ ನಡೆಸಿದರು. ಕ್ರಮೇಣ ತಮ್ಮೊಬ್ಬರಿಗೇ ಈ ಅಸ್ತ್ರ ಮೀಸಲು ಮಾಡಿಕೊಂಡರು. ಈ ರೀತಿ ಮಾಡಿದುದು ಜವಹರಲಾಲರನ್ನು ಚಕಿತಗೊಳಿಸಿತು. ರಾಜಕೀಯ ನಾಯಕ ಈ ರೀತಿ ಮಾಡಬಹುದೇ ಎಂದು ಅವರು ವಿಸ್ಮಿತರಾದರು. ಆದರೆ ಗಾಂಧಿಯವರಲ್ಲಿದ್ದ ಆತ್ಮೀಯ ಗೌರವ ಮಹಾತ್ಮರನ್ನು ಧಿಕ್ಕರಿಸುವ ಅವ ಕಾಶ ನೆಹರೂಗೆ ಕೊಡಲಿಲ್ಲ. ತಮ್ಮೊಬ್ಬರಿಗೇ ಸತ್ಯಾಗ್ರಹ ಮೀಸಲು ಮಾಡಿಕೊಂ ಡುದು, ಸತ್ಯಾಗ್ರಹ ಬಿಟ್ಟು ಕೊಟ್ಟಿಲ್ಲ, ಅದಕ್ಕೆ ಅಪಜಯವಾಗಿಲ್ಲ ಎಂಬುದರ ಸಂಕೇತ. ಸತ್ಯಾಗ್ರಹ ಸೋಲರಿಯದ ಅಜೇಯ ಅಸ್ತ್ರ. ಗಾಂಧೀಜಿ ಆಚರಿಸಿದ ಉಪವಾಸಗಳೂ ಇದೇ ಪಂಕ್ತಿಗೆ ಸೇರಿದುವು. ಅವೊಂದು ಬಗೆಯ ವೈಯಕ್ತಿಕ ಸತ್ಯಾಗ್ರಹ ದೇಶವನ್ನು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿ, ಸಾಮೂಹಿಕ ಸತ್ಯಾಗ್ರಹಕ್ಕೆ ಸಿದ್ಧಗೊಳಿಸಿ 1940 ರಲ್ಲಿ ಸತ್ಯಾಗ್ರಹಕ್ಕೆ ಕರೆಕೊಟ್ಟರು.

'ಚಲೇಜಾವ್' ಚಳುವಳಿ ಪ್ರಾರಂಭಿಸುವ ಮೊದಲು ವೈಸರಾಯರಿಗೆ ಪತ್ರ ಬರೆದು ಅವರ ಭೇಟಿ ಕೋರಿದ್ದರು. ತಾವು ಇಷ್ಟುಬೇಗ ಬಂಧಿತರಾಗುವುದಾಗಿ ಗಾಂಧೀಜಿ ತಿಳಿದಿರಲಿಲ್ಲ. ಇದೇ ಕಡೆಯ ಸ್ವಾತಂತ್ರ್ಯದ ಹೋರಾಟ ಎಂದು ಜನ ತಿಳಿದಿ ದ್ದರು. ಆದ್ದರಿಂದ ಸ್ವಾತಂತ್ರ್ಯಕ್ಕಾಗಿ ತವಕ ಪಡುತ್ತಿದ್ದ ದೇಶಭಕ್ತರು ಶಕ್ತಿಮೀರಿ ದುಡಿ ಯಲು ತ್ಯಾಗ ಮಾಡಲು ಸಿದ್ಧರಾಗಿದ್ದರು. ಆದರೆ ಮಾಡಲೇನು, ಇದು ಸ್ಪಷ್ಟವಾಗಿರ

ಲಿಲ್ಲ. ಕೇವಲ ಜೈಲು ತುಂಬುವುದು ಗಾಂಧಿಯವರಿಗೇ ಅಷ್ಟು ಪ್ರಿಯವಾಗಿರಲಿಲ್ಲ. ಹೊರಗುಳಿದು ಪರಿಣಾಮಕಾರಿ ಕಾರ್ಯಮಾಡುವ ಭಾವನೆ ಕಾರ್ಯಕರ್ತರಲ್ಲಿ ಬಲವಾಗಿತ್ತು. ಮಶ್ರುವಾಲಾ ಅವರಂಥ, ಮಹಾತ್ಮರ ಮನದೋಟ ಗ್ರಹಿಸ ಬಲ್ಲವರೇ, ವಿಧ್ವಂಸಕ ಕೃತ್ಯದಲ್ಲಿ ತೊಡಗಬಹುದೆಂದು ತಿಳುವಳಿಕೆ ಕೊಟ್ಟದ್ದು, ಈ ಬಗೆಯ ಕಾರ್ಯದಲ್ಲಿ ತೊಡಗಲು ಪ್ರೇರಕವಾಯಿತು. ಬಂಧನದಿಂದ ಬಿಡುಗಡೆ ಆದ ತರುವಾಯ ಮಹಾತ್ಮರನ್ನು ಮಶ್ರುವಾಲಾ ಭೇಟಿಯಾಗಿ ತಮ್ಮ ಅಪರಾಧ ಒಪ್ಪಿ ಕೊಂಡರು. ಇದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವ ಸಲಹೆ ಗಾಂಧೀಜಿ ನೀಡಿದರು. ಆದರಂತೆ ಸಿ.ಪಿ. ಮತ್ತು ಬೇರಾರ ಸರ್ಕಾರದ ಮುಖ್ಯಕಾರ್ಯದರ್ಶಿಗೆ ಕಿಶೋರಿಲಾಲರು ತಪ್ಪೊಪ್ಪಿಗೆಯ ಪತ್ರ ಬರೆದರು. ತಾವು ಬಂಧನದಲ್ಲಿದ್ದಾಗಲೇ, ಬ್ಯಾಂಕು ಮತ್ತು ಸರ್ಕಾರದ ಕಟ್ಟಡಗಳಿಗೆ ಬೆಂಕಿ ಇಡುವುದನ್ನು ಕಿಶೋರಿಲಾಲರು ಖಂಡಿಸಿದ್ದರು. ಆದರೆ ತಂತಿ ಕತ್ತರಿಸುವುದು, ರೈಲು ಹಳಿ ತೆಗೆದು ರೈಲು ಸಂಚಾರಕ್ಕೆ ಅಡ್ಡಿ ಮಾಡು ವುದು, ಸೇತುವೆಗೆ ಜಖಂ ಮಾಡುವುದು, ಈ ಬಗೆಯ ವಿಧ್ವಂಸಕ ಕೃತ್ಯಗಳನ್ನು ಸ್ಪಷ್ಟವಾಗಿ ಖಂಡಿಸಿರಲಿಲ್ಲ. ಆದ್ದರಿಂದ ಜನರನ್ನು ತಪ್ಪುದಾರಿಗೆಳೆಯಲು ತಾವು ಕಾರಣವಾದುದಕ್ಕಾಗಿ ಪಶ್ಚಾತ್ತಾಪ ಪಡುವುದಾಗಿ, ಈ ಪತ್ರದ ಒಕ್ಕಣೆ.

ಗಾಂಧೀಜಿ ಹುತಾತ್ಮರಾಗುವ ಕೆಲವು ಗಂಟೆಗಳ ಮುನ್ನ, ಅಮೇರಿಕದ ಪತ್ರಿ ಕೋದ್ಯಮಿ ಮಾರ್ಗರೇಟ್ ಬೋರ್ಕೆ ವೈಟ್ ಗಾಂಧಿಯವರನ್ನು ಸಂದರ್ಶಿಸಿ ಆಟಂ ಬಾಂಬಿನಿಂದ ಅಹಿಂಸೆ ನಿರುಪಯೋಗಿ ಆಗಿ ಶಕ್ತಿ ಕಳೆದುಕೊಳ್ಳುವುದಿಲ್ಲವೇ ಎಂದು ಪ್ರಶ್ನಿಸಿದರು. 'ತದ್ವಿರುದ್ಧ ಆಟಂಬಾಂಬನ್ನು ಎದುರಿಸಲು ಅಹಿಂಸೆಯೇ ಸರಿಯಾದ ಅಸ್ತ್ರ. ಅಣ್ವಸ್ತ್ರ ಎಲ್ಲವನ್ನೂ ನಾಶ ಮಾಡೀತು. ಆದರೆ ಅಹಿಂಸಾ ಶಕ್ತಿಯನು ಮಾತ್ರ ಉಡುಗಿಸಲಾರದು' ಎಂದರು.

"ಹಿರೊಷೀಮ ನಗರವನ್ನು ಅಣುಬಾಂಬು ನಾಶಮಾಡಿದ ಸುದ್ದಿಯಿಂದ ನಾನು ಲೇಶ ಮಾತ್ರವೂ ವಿಚಲಿತನಾಗಲಿಲ್ಲ. ಇದಕ್ಕೆ ಪ್ರತಿಯಾಗಿ ಈಗಲಾದರೂ ಮಾನವ ಕುಲ ಅಹಿಂಸಾ ಮಾರ್ಗ ಸ್ವೀಕರಿಸದಿದ್ದರೆ, ಆತ್ಮಹತ್ಯೆ ಮಾಡಿಕೊಂಡಂತೆ ಆದೀತು. ಆಟಂಬಾಂಬು ಹೊತ್ತು ವಿಮಾನ ಬರಬಹುದು. ಆಗ ನಾನು ಬಾಂಬು ಧಾಳಿಯಿಂದ ರಕ್ಷಣೆ ಪಡೆಯಲು ನೆಲಮಾಳಿಗೆ ಸೇರಲಾರೆ. ವಿಮಾನ ಚಾಲಕನ ಕಣ್ಣಿಗೆ ಬೀಳಲು ಬಯಲಿಗೆ ಬರುವೆ. ನನ್ನ ಹೃದಯದಲ್ಲಿ ಆವನ ವಿರುದ್ಧ ಲೇಶ ಮಾತ್ರ ದ್ವೇಷವಿರದು."

"ಅಷ್ಟು ಎತ್ತರದಿಂದ ನಿಮ್ಮ ಮೋರೆ ಅವನು ವೀಕ್ಷಿಸಬಲ್ಲನೇ ಎಂದು ನೀವು ಪ್ರಶ್ನಿಸಬಹುದು. ನಿಜ, ಇದನ್ನು ನಾ ಬಲ್ಲೆ. ನಮ್ಮ ಹೃದಯ ವೇದನೆ

ಅವನನ್ನು ಮುಟ್ಟದೆ ಇರಲಾರದು. ಅವನ ಒಳಗಣ್ಣನ್ನು ತೆರೆಯಿಸದೆ ಇರಲಾರದು. ಹಿರೋಷೀಮದಲ್ಲಿ ಸಾವಿರಾರು ಜನ ಸತ್ತರಲ್ಲ. ವಿಮಾನ ಚಾಲಕನ ಮೇಲೆ ಏನಾದರೂ ಪರಿಣಾಮ ಆಯಿತೆ? ಹೀಗೆ ಕೇಳಬಹುದು. ಇದೇ ಸಾವಿರಾರು ಜನ ಪರಮಾತ್ಮನ ನಾಮ ಸ್ಮರಣೆ ಮಾಡುತ್ತ, ಹೃದಯದಲ್ಲಿ ಅಹಿಂಸೆ ಹೊತ್ತು ಬಯಲಿಗೆ ಬಂದು ತಾವಾಗಿಯೇ ಮರಣ ಅಪ್ಪಿದ್ದರೆ ಅದರ ಪರಿಣಾಮವೇ ಬೇರೆಯಾಗುತ್ತಿತ್ತು. ನಿಷ್ಪ್ರಯೋಜಕವಾಗುತ್ತಿರಲಿಲ್ಲ"

ಗಾಂಧೀಜಿ ನವಾಖಲಿಯಲ್ಲಿ ಶಾಂತಿದೂತರಾಗಿ ಪ್ರವಾಸ ಕೈಗೊಂಡಿದ್ದರಷ್ಟೆ. ಮಹಾತ್ಮರು ಮುಸಲ್ಮಾನರ ಶತ್ರು ಎಂಬ ಅಪಪ್ರಚಾರ ಅಲ್ಲಿ ಬಲವಾಗಿ ನಡೆದಿತ್ತು. ಈ ಸನ್ನಿವೇಶದಲ್ಲಿ, ಈ ವಾತಾವರಣದಲ್ಲಿ ಗಾಂಧೀಜಿ ಏಕಾಂಗಿ ಪಾದಚಾರಿಯಾಗಿ ಹೋಗುವುದನ್ನು ಸುಶೀಲ ನಯ್ಯಾರ್ ವಿರೋಧಿಸಿದರು. ಗಾಂಧಿಯವರ ಅಂಗರಕ್ಷಕರಾಗಿಯೂ, ಸೇವಕರಾಗಿಯೂ ಹಳೆಯ ಕಾರ್ಯಕರ್ತರು ಅವರೊಡನೆ ಇರಬೇಕೆಂದು ಈಕೆ ವಾದಿಸಿದರು. ಸ್ನಾನ ಮಾಡುತ್ತಿದ್ದ ಗಾಂಧೀಜಿ ಈ ಮಾತು ಕೇಳಿ ತುಂಬ ದುಃಖಿತರಾದರು. ಹಳೆಯ ಸಹಪಾಟಿಗಳನ್ನೇ ತೃಪ್ತಿಪಡಿಸಲು ತನ್ನಿಂದ ಸಾಧ್ಯವಾಗದಿದ್ದರೆ, ಇತರರನ್ನು ತನ್ನ ಜೀವನ ಧ್ಯೇಯ ಕುರಿತು ತೃಪ್ತಿಪಡಿಸಲು ಹೇಗೆ ಸಾಧ್ಯವಾದೀತು ಎಂದು ಕಣ್ಣೀರು ಸುರಿಸುತ್ತ, ತಲೆ ತಲೆ ಚಚ್ಚಿಕೊಂಡರು.

"ಅಣು ಬಾಂಬು ತಯಾರಿಸುವಂತೆ ಸರ್ಕಾರ ಒತ್ತಾಯಪಡಿಸಿದರೆ ವಿಜ್ಞಾನಿಗಳು ಏನು ಮಾಡಬೇಕು" ಎಂದು ಸ್ಕಾಟಿಷ್ ಚರ್ಚ್ ಕಾಲೇಜಿನ ಜಾನ್ ಕೆಲ್ಲಿಸ್ ಪ್ರಶ್ನಿಸಿದರು. ಪ್ರಾಣ ಹೋದರೂ ಸರಿ, ಈ ಪಾಪ ಕೃತ್ಯದಲ್ಲಿ ತೊಡಗುವುದಿಲ್ಲವೆಂದು ದೃಢ ಸಂಕಲ್ಪದಿಂದ ವಿರೋಧಿಸಬೇಕು. ವಿಜ್ಞಾನಿ ಎನಿಸಿಕೊಳ್ಳಲು ಇದೇ ಸಾರ್ಥಕ ಮಾರ್ಗ."

ಭಾರತ ಸೇನೆಯ ಜನರಲ್ ಕಾರಿಯಪ್ಪನವರು ಲಂಡನ್ನಿನಲ್ಲಿದ್ದಾಗ ಪತ್ರಿಕೆಗಳಿಗೆ ಹೇಳಿಕೆಯಿತ್ತು ಅಹಿಂಸೆಯಿಂದ ಭಾರತಕ್ಕೆ ಏನೂ ಉಪಯೋಗವಿಲ್ಲ. ಸಬಲ ಸೇನೆ ಮಾತ್ರ ಭಾರತವನ್ನು ಬಲಿಷ್ಟ ರಾಷ್ಟ್ರವಾಗಿ ಮಾಡಬಲ್ಲದು ಎಂದಿದ್ದರು. ಆದರೆ ಅಹಿಂಸೆಯ ವಿಷಯವಾಗಿ ಮಾತನಾಡಲು ತಮಗೆ ಅಧಿಕಾರವಿಲ್ಲವೆಂದು ಒಪ್ಪಿಕೊಂಡಿದ್ದರು. ಕಾರಿಯಪ್ಪನವರ ಹೇಳಿಕೆಯನ್ನು ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ, "ಅಣುಯುಗದಲ್ಲಿ ಸ್ವಚ್ಛ ಅಹಿಂಸಾ ಶಕ್ತಿ ಮಾತ್ರ ಹಿಂಸೆಯ ಎಲ್ಲ ತಂತ್ರಗಳನ್ನು ಒಟ್ಟಿಗೆ ಎದುರಿಸಿ ದಿಗ್ಭ್ರಮೆಗೊಳಿಸಬಲ್ಲದು" ಎಂದು ಉತ್ತರಿಸಿದ್ದರು.

ಜನರಲ್ ಕಾರಿಯಪ್ಪನವರು 1947 ಡಿಸೆಂಬರ್ ಮೊದಲ ವಾರದಲ್ಲಿ ಭಾರತಕ್ಕೆ ಮರಳಿ, ದಿಲ್ಲಿಯಲ್ಲಿ ಮಹಾತ್ಮರನ್ನು ಸಂದರ್ಶಿಸಿದರು. ಅಂದು ಗಾಂಧಿಯವರ ಮೌನ ದಿನ. ಮಾತನಾಡಿದವರು ಕಾರಿಯಪ್ಪನವರೊಬ್ಬರೇ. ಮುಂದೆ ಇನ್ನೊಮ್ಮೆ ಭೇಟಿಯಾದಾಗ ಅಂತರ ರಾಷ್ಟ್ರೀಯ ವಾದ ವಿವಾದಗಳನ್ನು ಅಹಿಂಸಾತ್ಮಕವಾಗಿ ಬಗೆಹರಿಸುವ ಸಾಧ್ಯತೆ ಕುರಿತು ಮಾತನಾಡೋಣ ಎಂದು ತುಂಡು ಕಾಗದದಲ್ಲಿ ಬರೆದುಕೊಟ್ಟರು, ಗಾಂಧೀಜಿ.

ಕಾರಿಯಪ್ಪನವರು ಆಡಿದ ವಾಕ್ಯಗಳು ಗಮನಾರ್ಹ. ಜಗತ್ತಿನ ಜನ ಸಮುದಾಯದಲ್ಲಿ ಸೈನಿಕರಿಗಿಂತ ತೀವ್ರ ಯುದ್ಧ ದ್ವೇಷಿಗಳು ಬೇರೆ ಇರಲಾರರು. ಯುದ್ಧದ ಗಂಡಾಂತರಗಳು, ಭೀಭತ್ಸಗಳ ಕಾರಣದಿಂದಲ್ಲ, ಆದರೆ ಅಂತರ ರಾಷ್ಟ್ರೀಯ ವಿವಾದಗಳನ್ನು ಬಗೆಹರಿಸುವುದರಲ್ಲಿ ಅವು ತೀರ ನಿರರ್ಥಕವೆಂದು ನಾವು ಗ್ರಹಿಸಿ ಯುದ್ಧ ದ್ವೇಷಿಸುತ್ತೇವೆ. ಒಂದು ಯುದ್ಧ ಮತ್ತೊಂದು ಯುದ್ಧಕ್ಕೆ ದಾರಿ ಮಾಡಿ ಕೊಡುತ್ತದೆ. ಇತಿಹಾಸ ಈ ಪಾಠ ಕಲಿಸುತ್ತದೆ. ಪ್ರಜಾತಂತ್ರದಲ್ಲಿ ಸೈನಿಕರಲ್ಲ ಯುದ್ಧ ಪ್ರಾರಂಭಿಸುವುದು. ಅಂತರ್ರಾಷ್ಟ್ರೀಯ ಸಮಸ್ಯೆಗಳನ್ನು ತೃಪ್ತಿಕರವಾಗಿ ಬಗೆಹರಿಸಲು ಸಾಧ್ಯವಾಗದಿದ್ದಾಗ ರಾಷ್ಟ್ರೀಯ ಸರ್ಕಾರಗಳು ಯುದ್ಧ ಘೋಷಿಸುತ್ತವೆ. ಆಜ್ಞಾಧಾರಿಗಳಾದ ಸೇನೆಗಳು ಆಜ್ಞೆ ಪಾಲಿಸುತ್ತವೆ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಜನರಿಗೆ ಯುದ್ಧ ಬೇಡವಾದರೆ, ಯುದ್ಧಾಪೇಕ್ಷಿ ಸರ್ಕಾರವನ್ನು ಅಧಿಕಾರ ಸ್ಥಾನದಿಂದ ಇಳಿಸಿ, ಬೇರೆ ಸರ್ಕಾರವನ್ನು ಅಧಿಕಾರಕ್ಕೆ ಏರಿಸಬೇಕು. ಸೇನೆಯನ್ನು ದೂಷಿಸುವುದು ಸರಿಯಲ್ಲ. ಸೈನಿಕರು ನಿರ್ದೋಷಿಗಳು. ಹಿಂಸಾ ಯುದ್ಧಕ್ಕಾಗಿ ಸಜ್ಜಾಗುವ ಸಶಸ್ತ್ರ ಸೇನೆಯ ಅಧಿಕಾರಿಗಳು ಅಹಿಂಸಾ ತತ್ವಗಳನ್ನು ಸೈನಿಕರಿಗೆ ಬೋಧಿಸುವುದು ಯುಕ್ತವಾಗದೆಂದೂ ಕಾರಿಯಪ್ಪನವರು ನಮ್ರತೆಯಿಂದ ವಾದ ಮಂಡಿಸಿದರು. ಮಹಾತ್ಮರನ್ನು ಭೇಟಿ ಮಾಡಲು ಬಂದಾಗಲೆಲ್ಲ ತಮ್ಮ ಪಾದರಕ್ಷೆ ಕಳಚಿ ಹೊರಗಿಟ್ಟು, ಕುರ್ಚಿಯ ಮೇಲೆ ಕೂಡಲು ನಿರಾಕರಿಸಿ ಜಮಖಾನದ ಮೇಲೆ ಕೂಡುತ್ತಿದ್ದರು. ಗಾಂಧಿಯವರೂ ಇದನ್ನು ಗಮನಿಸಿದ್ದರು. ಮಹಾತ್ಮರಂಥಾ ದೈವೀ ಪುರುಷರನ್ನು ಸಂದರ್ಶಿಸಲು ಬಂದಾಗ ಹೀಗೆ ಮಾಡುವುದೇ ಉಚಿತವೆಂದು ಜನರಲ್ ಕಾರಿಯಪ್ಪನವರ ನಿಲುವು.

ಭಾರತದ ಹಿಂದೂ–ಮುಸ್ಲಿಂ ದ್ವೇಷ ಬಗೆಹರಿಸಲು ಗಾಂಧೀಜಿ ಅನುಸರಿಸಿದ ಅಹಿಂಸಾತ್ಮಕ ಮಾರ್ಗ, ಉಚ್ಚ ಅನುಭವ ಸೇನಾನಾಯಕರಾದ ಜನರಲ್ ವೇವಲ್ ಮತ್ತು ಲಾರ್ಡ್ ಮೌಂಟ್ ಬೇಟನ್ ಅವರ ಮೆಚ್ಚುಗೆಗೂ ಪಾತ್ರವಾಗಿದೆ. ಶಾಂತಿಯುತ ಅಹಿಂಸಾ ಮಾರ್ಗದಿಂದ ಅಂತರ ರಾಷ್ಟ್ರೀಯ ವಿವಾದ ಬಗೆಹರಿಸಲು ಸಾಧ್ಯವಾಗಲೆಂದೇ ಅವರಿಬ್ಬರ ಸದಾಶಯ. ಆದರೆ ಜನರಲ್ ಕಾರಿಯಪ್ಪ

ನವರಂತೆಯೇ ದೇಶ ರಕ್ಷಣೆಗೆ ಸೇನೆ ಸದಾ ಸಿದ್ಧವಾಗಿರಬೇಕೆಂದು ಅವರ ಅಭಿಪ್ರಾಯ. ದಕ್ಷ ಕಸಬುದಾರ ಸೈನಿಕ ಅಹಿಂಸಾತ್ಮಕವಾಗಿ ಶತ್ರುವನ್ನು ಹೇಗೆ ಎದುರಿಸಬಹುದು. ಈ ವಿಷಯದಲ್ಲಿ ತಾನು ಕತ್ತಲಲ್ಲಿ ತಡಕಾಡುತ್ತಿರುವುದಾಗಿಯೂ, ತೀವ್ರ ಚಿಂತನೆ ಮಾಡುತ್ತಿರುವುದಾಗಿಯೂ, ಅದಕ್ಕೆ ಸೂಕ್ತ ಮಾರ್ಗ ಕಂಡು ಹಿಡಿದು ಕಾರಿಯಪ್ಪನವರಿಗೆ ತಿಳಿಸುವ ಆಶ್ವಾಸನೆ ಗಾಂಧೀಜಿ ಇತ್ತರು. ಜನವರಿ 1948ರಲ್ಲಿ ಕಾಶ್ಮೀರಕ್ಕೆ ಹೋಗುವ ಮುನ್ನ ಕಾರಿಯಪ್ಪ ಮಹಾತ್ಮರನ್ನು ಭೇಟಿಯಾದರು. ಇಷ್ಟು ಹೊತ್ತಿಗೆ ಸಮಸ್ಯೆಗೆ ಸೂಕ್ತ ಪ್ರಭಾವಯುತ ಮಾರ್ಗದರ್ಶನ ಇನ್ನೂ ಗೋಚರಿಸಿರಲಿಲ್ಲ.

ಹಿಂಸಾತ್ಮಕ ಹೋರಾಟಕ್ಕೆ ಅವಕಾಶ ಉದ್ಭವಿಸದಂತೆ ವಿಕೇಂದ್ರೀಕರಣವೇ ಮೊದಲಾದ ಗಾಂಧೀ ಮಾರ್ಗದ ಅನುಸರಣೆಯೇ ಇದಕ್ಕೆ ಮದ್ದು.

"ಪ್ರಪಂಚದಲ್ಲಿರುವುದು ಎರಡೇ ಶಕ್ತಿಗಳು. ಒಂದು ಕತ್ತಿಯ ಅಲಗಿನ ಶಕ್ತಿ, ಮತ್ತೊಂದು ಚೈತನ್ಯ ಸ್ವರೂಪಿ ಆತ್ಮಶಕ್ತಿ. ದೀರ್ಘ ಅವಧಿಯಲ್ಲಿ ಹಿಂಸಾಶಕ್ತಿಯನ್ನು ಆತ್ಮಶಕ್ತಿ ಸದಾ ಜಯಿಸುತ್ತದೆ." ಇವು ಮಹಾತ್ಮ ಗಾಂಧಿಯವರ ವಚನವಲ್ಲ. ನೆಪೋಲಿಯನ್ ಧೀರೋದಾತ್ತನಾಗಿ ಮೆರೆಯುತ್ತಿದ್ದಾಗ ಹೇಳಿದ ವಾಕ್ಯಗಳು.

ಪ್ರಾರ್ಥನೆ

ಎಫ್. ಬಿ. ಫಿಷರ್ ಭಾರತದಲ್ಲಿ ದೀರ್ಘಕಾಲ ಕ್ರೈಸ್ತ ಗುರು ಬಿಷಪ್ ಆಗಿದ್ದರು. ಅವರ ಪತ್ನಿ ಡಾಕ್ಟರ್ ಫಿಷರ್ ತುಂಬ ಕಲಿತವಳು. ಆಗಾಗ ದಂಪತಿಗಳು ಠಾಕೂರರ ಶಾಂತಿ ನಿಕೇತನಕ್ಕೆ ಹೋಗುತ್ತಿದ್ದರು. ಗಾಂಧೀಜಿ ಶಾಂತಿನಿಕೇತನಕ್ಕೆ ಬಂದಿದ್ದಾಗ ಬಿಷಪ್ ಫಿಷರ್ ಅಲ್ಲಿಗೆ ಹೋಗಿದ್ದಾಗ ಸಂಜೆ ಕವಿವರ್ಯ ಠಾಕೂರರು, ಮಹಾತ್ಮ ಗಾಂಧಿ, ದೀನಬಂಧು ಆಂಡ್ರ್ಯೂಸ್, ಪಾದ್ರಿ ಫಿಷರ್ ಎಲ್ಲರೂ ಕೂಡಿ ಅಡ್ಡಾಡಲು ಹೊರಟರು. ಮರದ ಟೊಂಗೆ ಗಾಂಧಿಯವರ ಊರುಗೋಲಾಗಿತ್ತು. ವಿಗ್ರಹಾರಾಧನೆಯ ಸಾಧಕ–ಬಾಧಕಗಳ ಮಾತು ಬೆಳೆಯಿತು.

"ಅರೆಹೊಟ್ಟೆಯ ನಮ್ಮ ಬಡ ಬಾಂಧವರಿಗೆ ಬಣ್ಣಬಳಿದ ಕಲ್ಲುಕಂಬವೇ ದೇವರು. ಭಗವಂತನಿಗೂ ಬಡವನಿಗೂ ಸಂಪರ್ಕ ಬೆಳಸಿಕೊಡಲು ಸಹಕಾರಿಯಾದ ಆ ಕಲ್ಲುದೇವ ಬೇಡ ನಿನಗೆ ಎಂದು ನಾವು ಹೇಳುವುದು ಉಚಿತವೇ?" ಪ್ರಶ್ನಿಸಿದರು ಗಾಂಧೀಜಿ.

ಠಾಕೂರರು–"ನೀವು ಮತ್ತು ನಿಮ್ಮ ಜೈನ ಪೂರ್ವಿಕರು ಭಗವಂತನ ಕೀರ್ತನೆ ಮತ್ತು ಜಪಸರ ಹಿಡಿದು ಜಪಮಾಡುವುದನ್ನು ಬಿಟ್ಟು ಎಷ್ಟೋ ಕಾಲವಾಯಿತು. ಭಗವಂತ ದೇವಸ್ಥಾನದಲ್ಲಿ ಮಾತ್ರವಲ್ಲ, ನೇಗಿಲಯೋಗಿ ಎಲ್ಲಿ ಗಟ್ಟಿ ಭೂಮಿ ಉಳುತ್ತಿರುವನೋ ಅಲ್ಲಿರುವನು. ಮಳೆ, ಬಿಸಿಲು, ಬಿರುಗಾಳಿ ಎಲ್ಲ ಕಾಲಗಳಲ್ಲೂ ಅವನೊಡನೆ ಇರುವನು. ಆತನ ವಸ್ತ್ರ ಮಲಿನ. ಈ ಸತ್ಯ ನೀವು ನಾವು ಎಲ್ಲರೂ ಬಲ್ಲೆವು. ಭಗವಂತನೇ ಮಾನವನೊಡನೆ ತನ್ನ ತಾದಾತ್ಮ್ಯ ಭಾವನೆ ವ್ಯಕ್ತಪಡಿಸಿಕೊಳ್ಳಲು, ಜೀವಂತ ಕ್ರಿಸ್ತನಾಗಿ ಅವತರಿಸಿದನೆಂದು ಬಿಷಪ್ ಬಲ್ಲರು. ಸದಾಕಾಲಕ್ಕೂ ನಮ್ಮಲ್ಲಿಯೇ ಆತನಿರುವ. ಇವೆಲ್ಲ ನಿತ್ಯ ಸತ್ಯಗಳು. ಹೀಗೆಂದ ಮಾತ್ರಕ್ಕೆ ಆತನೇ ಕಲ್ಲು ಎಂದು ತಿಳಿಯಲಾಗದು".

"ಇಲ್ಲ, ವಿಗ್ರಹಗಳೂ, ಮೂರ್ತಿಗಳೂ, ಜಪಸರಗಳೂ, ಬಣ್ಣಬಳಿದ ಕಲ್ಲುಗಳೂ ನಿಮಗೂ ನಮಗೂ ಅನಗತ್ಯವಾಗಿದ್ದರೆ ಮತ್ತೊಬ್ಬ, ಅವನು ಎಷ್ಟೇ ಕೀಳಾದ ಕೆಳ ಹಂತದಲ್ಲಿರಲಿ, ಅವನಿಗೂ ಖಂಡಿತ ಅನವಶ್ಯಕ. ಮನೆ, ಮಠ, ಗುಡಿ, ಮೊಹಲ್ಲ, ಊರು, ಕೇರಿ, ಹಳ್ಳಿ, ಪಟ್ಟಣ ಎಲ್ಲೆಲ್ಲಿ ಮರ, ಕಲ್ಲು, ಲೋಹ, ಸ್ಫಟಿಕ ಇವುಗಳಿಂದ ತಯಾರಾದ ವಿಗ್ರಹಗಳಿವೆಯೋ ಅವೆಲ್ಲವನ್ನೂ ಬೇರುಸಹಿತ ಕಿತ್ತು,

ಮೂಟೆಕಟ್ಟಿ ಸಮುದ್ರಕ್ಕೆ ಒಗೆದು, ಅವುಗಳಿಗೆ ಆಶ್ರಯವಿತ್ತಿರುವ ಕೊಟ್ಟಿಗೆಗಳನ್ನು ಗುಡಿಸಿ ಶುಚಿಗೊಳಿಸಬಯಸುವೆ" ಹೀಗೆಂದರು ಉದ್ರೇಕದಿಂದ ಠಾಕೂರರು. ಬಿರುಗಾಳಿಯ, ಈ ರಭಸ ತಡೆಯಲಾರದೆ ಎಲ್ಲರೂ ಮೌನವಾಗಿದ್ದರು.

ದೇವಾಲಯದ ವಿಗ್ರಹ ತೆಗೆದು ಹಾಕುವ ಠಾಕೂರರು ಒಂದು ಕಡೆ, ಭಂಗಿಯಾಗಿ ಕಸಬರಿಕೆ ಹಿಡಿದು ಶೌಚಗೃಹ ಶುದ್ಧಿಮಾಡುವ ಮಹಾತ್ಮರೊಂದು ಕಡೆ. ಇಬ್ಬರೂ ಮಹಾಮಹಿಮರು. ಇವರ ವಾದ ವಿವಾದ ಕೇಳುವುದರಲ್ಲಿ ಇತರರು ಮೂಕರಾಗಿದ್ದರು.

ಸ್ವಲ್ಪ ತಡೆದು ಗಾಂಧೀಜಿ ಹೇಳಿದರು," ಕುಂಟನಿಗೆ ನಡೆಯಲು ಕಲಿಸುವವರೆಗೆ, ಅವನಿಗೆ ಸಹಾಯಕವಾದ ಊರುಗೋಲನ್ನು ನೀವು ತೆಗೆದುಕೊಳ್ಳಲಾಗದು. ಇದು ಈ ಪಾದ್ರಿಯ ಕೆಲಸ, ಚಾರ್ಲಿ ಆಂಡ್ರೂಸಿನ ಕಾರ್ಯ, ನಿಮ್ಮ ನಮ್ಮ ಹೊಣೆ".

ಧರೆ ಮೌನ ತಾಳಿತು. ದಿನಮಣಿ ಅಸ್ತಂಗತನಾದ. ಕತ್ತಲೆ ಕವಿಯಿತು. ದೂರದ ಗುಡಿಸಲಿನಿಂದ ಭಕ್ತಿಗೀತೆಗಳ, ತಾಳ ಮೇಳಗಳ ನಿನಾದ ತೇಲಿ ಬರುತ್ತಿತ್ತು. ಮಾತನಾಡದೆ ಎಲ್ಲರೂ ಶಾಂತಿನಿಕೇತನಕ್ಕೆ ಹಿಂತಿರುಗಿದರು.

ವಾದದಲ್ಲಿ ಗೆದ್ದವರು ಯಾರು? ಯಾವುದು ಸತ್ಯ ಎಂದು ತೀರ್ಪು ಕೊಡುವ ಸಾಮರ್ಥ್ಯ ಯಾರಿಗೆ ಉಂಟು?

"ನನಗೆ ದೇವರಲ್ಲಿ ನಂಬಿಕೆ ಇಲ್ಲ" ಎಂದು ಹೇಳುವುದು ಬಹಳ ಸುಲಭ. ಏಕೆಂದರೆ, ದೇವರು ತನ್ನ ವಿಚಾರವಾಗಿ ಯಾರೇನು ಬೇಕಾದರೂ ಹೇಳಿಕೊಳ್ಳಲೆಂಬ ದಯಾನಿಧಿಯಾಗಿದ್ದಾನೆ

ದೇವರೊಬ್ಬ ವ್ಯಕ್ತಿಯೆಂದು ನಾನು ಭಾವಿಸಿಲ್ಲ. ನನ್ನ ಪಾಲಿಗೆ ಸತ್ಯವೇ ದೇವರು. ದೇವರೇ ಸತ್ಯ.

ದೇವರೆಂದರೆ ಮುಗಿಲಿನ ಮೋಡಗಳಲ್ಲಿ ವಾಸಮಾಡುವ ಶಕ್ತಿಯಲ್ಲ. ದೇವರು ನಮ್ಮೊಳಗೇ ವಾಸವಾಗಿದ್ದಾನೆ.

ನೀನೂ ನಾನೂ ಈ ಕೋಣೆಯಲ್ಲಿ ಕೂತಿರುವುದಕ್ಕಿಂತ ನಿಜವಾಗಿ ದೇವರು ಖಂಡಿತವಾಗಿಯೂ ಇದ್ದಾನೆಂದು ನಾನು ನಂಬುತ್ತೇನೆ. ನಾನು ನೀರಿಲ್ಲದೆ, ಗಾಳಿಯಿಲ್ಲದೆ ಇರಬಲ್ಲೆ; ಆದರೆ ಆತನಿಲ್ಲದೆ ಇರಲಾರೆ. ನೀವು ನನ್ನ ಕಣ್ಣುಗಳನ್ನು ಕೀಳಬಹುದು; ಆದರೂ ನನ್ನನ್ನು ಕೊಲ್ಲಲಾರಿರಿ. ನನ್ನ ಮೂಗನ್ನು ತರಿದು ಹಾಕ

ಬಹುದು. ಆದರಿಂದ ನಾನು ಸಾಯಲಾರೆ. ಆದರೆ ನನಗೆ ದೇವರಲ್ಲಿರುವ ನಂಬಿಕೆಯನ್ನು ಧ್ವಂಸಮಾಡಿ, ನಾನು ಸತ್ತೆ.

ಮಹಾತ್ಮ ಗಾಂಧಿಯವರಿಗೆ ಭಗವಂತನಲ್ಲಿ ಭಕ್ತಿ. ಪ್ರಾರ್ಥನೆಯಲ್ಲಿ ಅಪಾರ ಶ್ರದ್ಧೆ ಮತ್ತು ವಿಶ್ವಾಸ. ಬೆಳಿಗ್ಗೆ ಸಂಜೆ ಪ್ರಾರ್ಥನೆ ಸಲ್ಲಿಸದೆ ಇರಲಾರರು. ಇದು ಆದ್ಯ ಕರ್ತವ್ಯ. ಶರೀರಕ್ಕೆ ಆಹಾರ ಎಷ್ಟು ಅಗತ್ಯವೋ ಪ್ರಾರ್ಥನೆ ಆತ್ಮಕ್ಕೆ ಅಷ್ಟೇ ಅವಶ್ಯಕ. ಪ್ರಾರ್ಥನೆ ಎಂದರೆ ಬೇಡಿಕೆಯಲ್ಲ. ಆತ್ಮದ ಬಯಕೆ. ಪ್ರಾರ್ಥನೆಯು ಬೆಳಗಿನ ಕೀಲಿ, ಸಂಜೆಯ ಚಿಲಕ.

1927. ಬಾಪು ಆಂಧ್ರದಲ್ಲಿ ಪ್ರವಾಸ ಮಾಡುತ್ತಿದ್ದರು. ರಾತ್ರಿ ಹಗಲು ಬಿಡುವಿಲ್ಲದೆ ರೈಲು ಮತ್ತು ಮೋಟಾರಿನಲ್ಲಿ ಪ್ರವಾಸ. ಉಪನ್ಯಾಸ, ಭೇಟಿ, ಮಾತು. ಹೀಗೆಯೇ ಪ್ರವಾಸಮಾಡುತ್ತ ರಾತ್ರಿ 10 ಘಂಟೆಗೆ ನವುರಾದ ಖಾದಿಗೆ ಪ್ರಸಿದ್ಧವಾದ ಚಿಕಾಕೋಲಿಗೆ ಬಂದರು. ಪ್ರವಾಸದಿಂದ ದೇಹ ದಣಿದು ಹೋಗಿತ್ತು. ಅಲ್ಲಿ ನೂಲುವ ಸ್ಪರ್ಧೆ ಏರ್ಪಡಿಸಿದ್ದರು. ದಣಿವು ತಡೆಯಲಾರದೆ ಕಾಕಾ ಕಾಲೇಲ್ಕರ್ ಮತ್ತು ಮಹದೇವ ದೇಸಾಯಿ ಮಲಗಲು ಹಾಸಿಗೆ ಹಿಡಿದರು. ಆದರೆ ಕರ್ತವ್ಯಶೀಲ ಬಾಪು ಸ್ಪರ್ಧೆನೋಡಲು ಹೋಗಿ ರಾತ್ರಿ ಸುಮಾರು 12 ಘಂಟೆಗೆ ಬಂದು ಮಲಗಿದರು.

ಬೆಳಿಗ್ಗೆ ಎಂದಿನಂತೆ 4 ಘಂಟೆಗೆ ಪ್ರಾರ್ಥನೆಗೆ ಎದ್ದರು. ಕಾಲೇಲ್ಕರ್ ಮತ್ತು ಮಹದೇವ ಇಬ್ಬರೂ ಬಂದರು. ನೆನ್ನೆ ರಾತ್ರಿ ನೀವು ಪ್ರಾರ್ಥನೆ ಸಲ್ಲಿಸಿದಿರಾ ಎಂದು ಪ್ರಶ್ನಿಸಿದರು ಇಬ್ಬರನ್ನೂ ಬಾಪೂಜಿ. ಹಾಸಿಗೆಯಲ್ಲೇ ಕುಳಿತು ಪಾರ್ಥನೆ ಸಲ್ಲಿಸಿದೆ ಎಂದರು ಕಾಲೇಲ್ಕರ್. ತುಂಬ ಆಯಾಸವಾಗಿತ್ತು, ಪ್ರಾರ್ಥನೆ ಸಲ್ಲಿಸದೆ ಮಲಗಿಬಿಟ್ಟೆ ಎಂದರು ಮಹದೇವ.

"ಎಂಥಾ ದ್ರೋಹ ಮಾಡಿದೆ. ನನಗೂ ತುಂಬ ಆಯಾಸವಾಗಿತ್ತು. ಮೈ ಮರೆತು ಪ್ರಾರ್ಥನೆ ಸಲ್ಲಿಸದೆ ನಾನೂ ಮಲಗಿದೆ. ರಾತ್ರಿ ಎರಡು ಗಂಟೆಗೆ ಎಚ್ಚರವಾಯಿತು. ಸಂಜೆ ಪ್ರಾರ್ಥನೆ ಸಲ್ಲಿಸಲಿಲ್ಲವಲ್ಲ ಎಂಬ ನೆನಪು ಬಿರುಗಾಳಿಯಂತೆ ನನ್ನ ಮನಸ್ಸಿಗೆ ಬಡಿಯಿತು. ನನ್ನ ದೇಹ ಕಂಪಿಸತೊಡಗಿತು, ಬೆವರು ಹರಿಯತೊಡಗಿತು. ಹಾಸಿಗೆಯಲ್ಲಿ ಎದ್ದು ಕುಳಿತೆ. ಹೇಳತೀರದ ದುಃಖ ನನ್ನನ್ನು ಆವರಿಸಿತು. ಎಂಥ ಮಹಾಪರಾಧ ಮಾಡಿದೆ. ನನಗೆ ಜೀವ ಕೊಟ್ಟ, ನನ್ನ ಪ್ರಯತ್ನಗಳಲ್ಲಿ ನೆರವಾಗಿ ನಿಲ್ಲುವ ಭಗವಂತನನ್ನು ಮರೆತೆನೇಕೆ ? ಹೇಗೆ ಮರೆತೆ."? ಎಂಥ ಪಾಪಕಾರ್ಯ ಮಾಡಿದೆ ಎಂದು ಚಿತ್ತ ತಳಮಳಿಸತೊಡಗಿತು. ತದನಂತರ ದುಃಖದಿಂದ ನಿದ್ದೆ ಬರಲೇಇಲ್ಲ.

ಕ್ಷಣ ಕಾಲವೂ ಮಲಗಲಿಲ್ಲ. ಭಗವಂತ, ದಯಾಮಯ ನನ್ನ ಅಪರಾಧ ಮನ್ನಿಸು ಎಂದು ಮರುಗುತ್ತ ಬೆಳಗಾಗುವವರೆಗೂ ಹಾಸಿಗೆಯಲ್ಲೇ ಕುಳಿತಿದ್ದೆ". ಈ ರೀತಿ ಯಲ್ಲಿ ಅನಿರ್ವಚನೀಯ ದುಃಖ ತೋಡಿಕೊಂಡರು. ಅಂದಿನಿಂದ ಸಂಜೆ ಎಲ್ಲಿಯೇ ಇರಲಿ, ಪ್ರಯಾಣ ಮಾಡುತ್ತಿರಲಿ, ರಾತ್ರಿ ಏಳು ಘಂಟೆಗೆ ಸರಿಯಾಗಿ ಪ್ರಾರ್ಥನೆ ಸಲ್ಲಿಸುವ ಸಂಕಲ್ಪ ಮಾಡಿದರು.

ಗಾಂಧಿಯವರಿಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಬಲವಾದ ನಂಬಿಕೆ. ಎಲ್ಲ ಧರ್ಮಗಳಲ್ಲೂ ಗೌರವ. ಮಾರ್ಗ ಅನ್ಯವಿರಬಹುದು. ಆದರೆ ಎಲ್ಲ ಧರ್ಮಗಳ ಗುರಿಯೂ ಒಂದೇ–ಮೋಕ್ಷಸಾಧನೆ. ರಾಮಾಯಣದ ರಾಮ ಮಾನವನಿಗೆ ಆದರ್ಶ ಪುರುಷ. ಎಲ್ಲ ಸಮಯಗಳಲ್ಲೂ ಮಾರ್ಗದರ್ಶನ ನೀಡುವ ಗ್ರಂಥ ಗೀತೆ. ಹಿಂದೂ, ಮುಸ್ಲಿಂ, ಸಿಖ್, ಜೈನ, ಬೌದ್ಧ, ಕ್ರೈಸ್ತ, ಪಾರಸಿ ಎಲ್ಲ ಮತಧರ್ಮಗಳಿಗೂ ಬಾಪು ಪ್ರಾರ್ಥನೆಯಲ್ಲಿ ಅವಕಾಶವಿತ್ತು. ಈ ಎಲ್ಲ ಮತಧರ್ಮದ ಗ್ರಂಥಗಳಿಂದ ಆಯ್ದ ಭಾಗಗಳ ಪಠಣ ನಡೆಯುವುದು ಪ್ರಾರ್ಥನಾ ಸಭೆಯಲ್ಲಿ. ಭಕ್ತಿರಸ ಪ್ರಧಾನವಾದ ಹಾಡುಗಳು ಹಾಡಲ್ಪಡುವುವು. ಪ್ರಾರ್ಥನಾ ಸಭೆಯಲ್ಲಿ ತದೇಕಚಿತ್ತರಾಗಿ ಗಾಂಧೀಜಿ ವಿಚಲಿತ ಬುದ್ಧನಂತೆ ಕುಳಿತಿರುವರು. 'ರಘುಪತಿ ರಾಘವ ರಾಜಾರಾಮ್'. ರಾಮಧುನ್ ಸಹಸ್ರಾರು ಕಂಠಗಳು ಮೊಳಗುತ್ತಿರುವಾಗ ಪ್ರಾರ್ಥನೆ ಮುಗಿಯು ವುದು. ಪ್ರಾರ್ಥನೆಯ ಅಂತ್ಯದಲ್ಲಿ ತಮ್ಮ ಮನದೋಟ ಬಹಿರಂಗಪಡಿಸುವ ನಾಲ್ಕು ಮಾತುಗಳನ್ನು ಸಭಿಕರೊಡನೆ ಪಾಲ್ಗೊಳ್ಳುವರು. ದಿಲ್ಲಿಯ ಬಿರ್ಲಾ ಭವನದ ಪ್ರಾರ್ಥನಾ ಸಭೆಯ ಇವರ ಭಾಷಣ ಆಕಾಶವಾಣಿ ಪಸರಿಸುತ್ತಿತ್ತು.

ಏಷ್ಯದ ಮಹಾಸಮ್ಮೇಳನ ಮಾರ್ಚಿ 1947 ರಲ್ಲಿ ದಿಲ್ಲಿಯಲ್ಲಿ ನಡೆಯಿತು. ಭಂಗಿ ವಿಸ್ತರಣದಲ್ಲಿ ಗಾಂಧಿಯವರ ವಾಸ. ತಾನೂ ಒಬ್ಬ ಭಂಗಿ. ದರಿದ್ರ ನಾರಾಯಣನ ಪ್ರತಿನಿಧಿ. ಆದ್ದರಿಂದ ಅಲ್ಲಿಯೇ ಅವರ ಬಿಡಾರ. ಅಲ್ಲಿಯೇ ಪ್ರಾರ್ಥನೆ. ಗೊತ್ತಾದ ದಿನ ಏಷ್ಯ ಸಮ್ಮೇಳನದ ಸದಸ್ಯರನ್ನುದ್ದೇಶಿಸಿ ಮಾತನಾಡಿ, ಅಲ್ಲಿಂದ ನೇರವಾಗಿ ಪ್ರಾರ್ಥನಾ ಸಭೆಗೆ ಬಂದರು. ಕೊರಾನ್ ಪಠಣದಿಂದ ಪ್ರಾರ್ಥನೆ ಪ್ರಾರಂಭವಾಯಿತು. ನಾಲ್ಕು ನುಡಿ ಪಠಿಸುವುದರೊಳಗಾಗಿ ಹಿಂದೂ ಮಹಾಸಭೆಯ ತರುಣನೊಬ್ಬ ಎದ್ದು, "ಇಲ್ಲಿರುವುದು ಹಿಂದೂ ದೇವಾಲಯ. ಆದ್ದರಿಂದ ಮುಸ್ಲಿಂ ಪ್ರಾರ್ಥನೆಗೆ ಇಲ್ಲಿ ಅವಕಾಶವಿಲ್ಲ" ಎಂದ. ಆ ಹಿಂದೂ ಯುವಕನನ್ನು ಕತ್ತು ಹಿಡಿದು ಆಚೆಗೆ ತಳ್ಳುವ ಪ್ರಯತ್ನ ನಡೆಯಿತು. ಗಾಂಧೀಜಿ ನಡುವೆ ಪ್ರವೇಶಿಸಿ ಬೇಡ ಎಂದು ತಡೆದರು. "ಮುಸ್ಲಿಂ ಪ್ರಾರ್ಥನೆ ನಡೆಯಲು ನಾನು ಅವಕಾಶ ಕೊಡುವುದಿಲ್ಲ" ಎಂದು ಅರಚಿದ ಆ ಯುವಕ. ಅವನು ಗಾಂಧಿಯವರತ್ತ ನುಗ್ಗಲು ಪ್ರಯತ್ನಿಸಿದ. ಜನ ಅವನನ್ನು ತಡೆದರು. ಇದನ್ನು ನೋಡುತ್ತಿದ್ದ ಬಾಪೂಜಿ

ವೇದಿಕೆಯಿಂದ ಇಳಿದು ಅವನತ್ತ ಹೋಗತೊಡಗಿದರು. "ಮಧ್ಯೆ ಯಾರೂ ಪ್ರವೇಶಿಸಬೇಡಿ. ತರುಣ ಕೋಪಪರವಶನಾಗಿದ್ದಾನೆ. ಕೋಪ ಹುಚ್ಚಿನ ಹೊಸಲು. ಹುಚ್ಚನ್ನು ಹುಚ್ಚಿನಿಂದ ದಮನಿಸಲು ಸಾಧ್ಯವಿಲ್ಲ. ನಾನು ಈಗ ತಾನೆ ಬಿಹಾರದ ಪ್ರವಾಸ ಮುಗಿಸಿ ಬಂದಿರುವೆ. ಹುಚ್ಚೆದ್ದ ಜನ ಏನು ಮಾಡಬಲ್ಲರೆಂಬುದನ್ನು ನನ್ನ ಕಣ್ಣಾರೆ ನೋಡಿರುವೆ. ತಲೆ ತಗ್ಗಿಸುವಂತೆ ಮಾಡಿವೆ ಈ ಕೃತ್ಯಗಳು. ಈ ತರುಣ ನನ್ನಲ್ಲಿಗೆ ಬರಲಿ. ಪ್ರಾರ್ಥನೆಯ ವಿರುದ್ಧ ಒಬ್ಬನಿದ್ದರೂ ಸರಿ. ಪ್ರಾರ್ಥನೆ ನಾನು ಮುಂದುವರಿಸುವುದಿಲ್ಲ. ವಿರೋಧಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡುವುದು ನನ್ನ ಉದ್ದೇಶ. ಆದರೆ ಇವರ ಮಾತು ಮುಗಿಯುವುದರೊಳಗಾಗಿಯೇ ತರುಣನನ್ನು ಹಿಡಿದು ಹೊರಕ್ಕೆ ದೂಡಲಾಗಿತ್ತು.

ಮಾರನೆಯ ದಿನ ಗಾಂಧೀಜಿ ಪ್ರಾರ್ಥನಾ ಸಭೆಗೆ ಬಂದರು. "ಪ್ರಾರ್ಥನೆ ನಡೆಯಲು ಯಾರದಾದರೂ ಆಕ್ಷೇಪಣೆ ಉಂಟೇ" ಎಂದು ಕೇಳಿದರು. ಎದ್ದ ಒಬ್ಬ ತರುಣ, 'ಇದು ಹಿಂದೂಗಳ ದೇವಾಲಯ' ಎಂದು ಮಾತು ಪ್ರಾರಂಭಿಸಿದ. 'ನಿಜ, ಆದರೆ ಭಂಗಿಗಳಿಗೆ ಸೇರಿದ್ದು ಈ ದೇವಸ್ಥಾನ. ಅದರ ಟ್ರಸ್ಟಿಗಳಿಗೆ ಆಕ್ಷೇಪಣೆ ಮಾಡಲು ಅವಕಾಶವುಂಟು. ಆದರೆ ಅವರು ಆಕ್ಷೇಪಿಸಿಲ್ಲ'.

ಯುವಕ --- 'ಇದು ಸಾರ್ವಜನಿಕ ಸ್ಥಳ ಕೊರಾನ್ ಪಠಿಸಲು ಬೇರೆಡೆ ಹೋಗಬೇಕು.'

ಗಾಂಧೀಜಿ — 'ಅತ್ಯಂತ ನಮ್ರತೆಯಿಂದ ನುಡಿಯುವೆ. ಆಚರಣೆಯಲ್ಲಿ ನಾನು ಭಂಗಿ. ನಿನಗಿಂತ ಅವರ ಪರ ಮಾತನಾಡಲು ನನಗೆ ಹೆಚ್ಚು ಅಧಿಕಾರವುಂಟು. ಬಹುಶಃ ನಿನ್ನ ಜನ್ಮದಲ್ಲೇ ಪಾಯಿಖಾನೆ ನೀನು ಶುದ್ಧಿ ಮಾಡಿರಲಾರೆ. ಈಗಲೂ ಮಾಡಲು ಸಿದ್ಧನಿರಲಾರೆ'.

ಜನ ಕೂಗಿದರು, ನಮಗೆ ಪ್ರಾರ್ಥನೆ ಬೇಕು. ಸಾವಿರಾರು ಜನರಿಗೆ ಪ್ರಾರ್ಥನೆ ಅಗತ್ಯವಿರುವಾಗ ಇವನ್ಯಾರು ಅದಕ್ಕೆ ಅಡಚಣೆ ಒಡ್ಡಲು.

ಆ ತರುಣನಿಗೆ ಗಾಂಧೀಜಿ ವಿನಂತಿಸಿದರು. 'ಸಾವಿರಾರು ಜನ ಪ್ರಾರ್ಥನೆ ಬೇಕು ಎನ್ನುತ್ತಿರುವಾಗ ನೀನು ಅಡ್ಡಿ ಮಾಡುವುದು ಸರ್ವಥಾ ಉಚಿತವಲ್ಲ. ಅವರಿಗೆ ನಿರಾಶೆ ಆಗುತ್ತೆ. ಇದು ನಿನಗೆ ತರವೇ?'

ಯುವಕ ಕುಳಿತ. ಆದರೆ ಎದ್ದ ಮತ್ತೊಬ್ಬ ಧೀರ. 'ಮಸೀದಿಗೆ ಹೋಗಿ ಏಕೆ ನೀವು ಗೀತೆ ಪಠಿಸಬಾರದು' ಎಂದು ಆಬ್ಬರಿಸಿದ.

ಗಾಂಧೀಜಿ — 'ಶಾಂತನಾಗು, ಉದ್ವಿಗ್ನನಾಗಬೇಡ. ತಿಳವಳಿಕೆರಹಿತ ಕೋಪಾಟೋಪದಿಂದ ಹಿಂದೂ ಧರ್ಮಕ್ಕೆ ಏನೂ ಸಹಾಯವಾಗದು. ಪ್ರತಿಯಾಗಿ ಹಿಂದೂ ಧರ್ಮದ ನಾಶಕ್ಕೆ ನೀನು ದಾರಿ ಮಾಡಿಕೊಡುತ್ತಿರುವೆ. ತಾಳ್ಮೆಯ ಉತ್ತುಂಗ ಹಿಂದೂ ಧರ್ಮ. ಉದಾರತೆಯ, ಸಹನೆಯ ಆಗರ. ಖಾನ್‌ಅಬ್ದುಲ್ ಗಫಾರ್ ಖಾನ್ ಅವರತ್ತ ಕೈತೋರಿಸುತ್ತ, ನೋಡು ಇಲ್ಲಿದ್ದಾರೆ ಬಾದಷಾಖಾನ್. ಅವರ ನೀಳ ದೇಹದ ಪ್ರತಿಯೊಂದು ಅಂಗುಲವೂ ಮಾನವಸ್ವರೂಪಿ ಪರಮಾತ್ಮ. ಅವರಿಗಾದರೂ ನೀನು ಮರ್ಯಾದೆ ಕೊಡಬೇಡವೆ? ಒಂದು ಮಗು ಆಕ್ಷೇಪಿಸಿದರೂ ಸರಿ, ಪ್ರಾರ್ಥನೆ ನಾನು ಮುಂದುವರಿಸುವುದಿಲ್ಲ.

ಪ್ರಶ್ನೆ — 'ಪಂಜಾಬಿಗೆ ನೀವು ಏಕೆ ಹೋಗಬಾರದು ?'

ಜನರ ಕೂಗು— 'ಅಡ್ಡಿಮಾಡಲು ನೀನ್ಯಾರು. ಇಲ್ಲಿಂದ ಎದ್ದು ಹೋಗು ನಮಗೆ ಬೇಕು ಪ್ರಾರ್ಥನೆ'.

ತರುಣನನ್ನು ಹೊರಕ್ಕೆ ಅಟ್ಟುವ ಪ್ರಯತ್ನ ನಡೆಯಿತು. ಹೀಗೆ ಮಾಡಬೇಡಿ ಎಂದು ಗಾಂಧೀಜಿ ಮೊರೆಯಿಟ್ಟರು.

'ಮಾತನಾಡಲು ಐದು ನಿಮಿಷ ಕೊಡಿ' ಎಂದು ಕೂಗಿದ ತರುಣ.

ಪ್ರಾರ್ಥನೆ ಬೇಕೋ ಬೇಡವೋ. ಇದಕ್ಕೆ ಉತ್ತರ ಕೊಡು ಎಂದರು ಗಾಂಧೀಜಿ.

'ಇಲ್ಲಿ ಮುಸ್ಲಿಂ ಪ್ರಾರ್ಥನೆ ನಡೆಸಲಾಗದು' ಎಂದ ಯುವಕ.

ಗಾಂಧೀಜಿ — 'ಆಗಲಿ, ಪ್ರತಿಯೊಬ್ಬರೂ ದಯಮಾಡಿ ಶಾಂತಚಿತ್ತರಾಗಿರಿ. ನಾಳೆಯೂ ಇದೇ ಪ್ರಶ್ನೆ ನಾನು ಕೇಳುವೆ. 'ಬೇಡ' ಎಂದು ಮಗು ಹೇಳಿದರೂ ಸರಿ, ನಾನು ಪ್ರಾರ್ಥನೆ ನಡೆಸುವುದಿಲ್ಲ'.

ಹೀಗೆಂದು ಹೇಳಿ, ಗಾಂಧೀಜಿ ಒಳಕ್ಕೆ ನಡೆದು, ತಮ್ಮ ಕೋಣೆಯಲ್ಲಿ ಪ್ರಾರ್ಥನೆ ಪ್ರಾರಂಭಿಸಿದರು. ತಮ್ಮ ಅನುಯಾಯಿಗಳೊಡನೆ ಪ್ರಾರ್ಥನೆ ನಡೆಸುತ್ತಿದ್ದಂತೆ ಜವಹರಲಾಲರು ಬಂದರು. ಸದ್ದಿಲ್ಲದೆ ಮೂಲೆ ಹಿಡಿದು ಕುಳಿತರು.

ಮಾರನೆಯ ದಿನ ಪ್ರಾರ್ಥನಾ ಸಭೆಗೆ ಬರುತ್ತಿದ್ದಂತೆ ಅವರ ಕೈಯಲ್ಲಿ ಯಾರೊ ಒಂದು ಕಾಗದವಿಟ್ಟರು. ಭಂಗಿ ವಿಸ್ತರಣೆ ಬಿಟ್ಟು ಹೋಗಿ ಎಂದು ಭಂಗಿ ಸಂಘದ ಅಧ್ಯಕ್ಷ ಬರೆದಂತೆ ಆ ಪತ್ರದ ಒಕ್ಕಣೆ. ಆದರೆ ಅದು ಮೋಸದ ಕೃತಕ ಪತ್ರವೆಂದು ಗೊತ್ತಾಯಿತು.

'ಎಂಥ ಕ್ರೂರ ಪರಿಹಾಸ್ಯ ಈ ಮುದುಕನ ಮೇಲೆ'. 'ಕುರಾನ್ ಪಠಿಸದೆ ಪ್ರಾರ್ಥನೆ ನಡೆಸಲು ಅವಕಾಶಕೊಡುವರಂತೆ. ನನ್ನ ಇಚ್ಛೆಯಂತೆ ಪ್ರಾರ್ಥನೆ ನಡೆಸುವ ಸ್ವಾತಂತ್ರ್ಯವೂ ನನಗಿಲ್ಲವೆ ?'

'ಬಹು ಜನ ನನ್ನನ್ನು ವಿರೋಧಿಸಿದ್ದರೆ, ಖಂಡಿತ ಅವರ ಕೋಪವನ್ನೆದುರಿಸಿ ಪ್ರಾರ್ಥನೆ ನಡೆಸುತ್ತಿದ್ದೆ. ಆದರೆ ವಿರೋಧಿಗಳಿರುವುದು ಕೇವಲ ಒಂದು ಹಿಡಿಯಷ್ಟು. ಬಹು ಸಂಖ್ಯಾತರಾದ ನಾವು ಅವರನ್ನು ಅಲಕ್ಷಿಸಿ ಪ್ರಾರ್ಥನೆ ನಡೆಸಬಹುದು. ಆದರೆ ಅದು ಭಕ್ತಿಯ ಜಯವೆನಿಸದು. ಅದು ದೆವ್ವದ ಜಯವಾದೀತು. ಹೃದಯದಲ್ಲಿ ಶಾಂತಿ ಮೂಡುವಂತೆ ಮಾಡುವುದೇ ಪ್ರಾರ್ಥನೆಯ ಉದ್ದೇಶ. ಬಹುಸಂಖ್ಯಾತರ ಬಲದಿಂದ ಅಲ್ಪಸಂಖ್ಯಾತರನ್ನು ತುಳಿದು ಬಿಡುವುದು ಅದರ ಉದ್ದೇಶವಲ್ಲ'.

ಎಂಥ ಉದಾತ್ತ ಭಾವನೆ.

ಮತ್ತೆ ಗಾಂಧೀಜಿ ಪ್ರಶ್ನಿಸಿದರು 'ಪ್ರಾರ್ಥನೆಯ ವಿರೋಧಿಗಳು ಯಾರಾದರೂ ಇದ್ದಾರೆಯೇ ?,

ಮೂವರು ಎದ್ದು ನಿಂತರು. ವಿರೋಧಕ್ಕೆ ತಾನು ತಲೆಬಾಗುವುದಾಗಿ ಹೇಳಿ ಗಾಂಧೀಜಿ ಅಲ್ಲಿಂದ ಹೊರಡಲು ಉದ್ಯುಕ್ತರಾದರು.

'ಇಲ್ಲ, ನಮಗೆ ಪ್ರಾರ್ಥನೆ ಬೇಕು. ಪ್ರಾರ್ಥನೆ ನಡೆಯಲಿ' ಎಂದು ಜನ ಕೂಗಿದರು.

ಗಾಂಧೀಜಿ—" ಇವತ್ತು ಬೇಡ. ವಿರೋಧಿಗಳ ಸಂಖ್ಯೆ ಹೆಚ್ಚಿದೆ. ಹುತಾತ್ಮ ನಾಗುವ ಪರಮ ಸುಖ ಇಂದು ನಾನು ಬಯಸುವುದಿಲ್ಲ. ಪ್ರಮುಖ ಕೆಲಸ ಗಳು ನನಗಾಗಿ ಕಾದಿವೆ "ನವಾಖಲಿಯಲ್ಲಿ ರಾಮಧುನ್ ಭಜನೆ ನಡೆಸಲು ಮುಸಲ್ಮಾರು ಅಡ್ಡಿ ಬರುತ್ತಿರಲಿಲ್ಲ. ವಿರೋಧಿಗಳು ತಾವಾಗಿ ಸಭೆಯಿಂದ ನಿರ್ಗ ಮಿಸುತ್ತಿದ್ದರು." ವಿರೋಧಿಗಳಿಗೆ ತೊಂದರೆ ಕೊಡಬೇಡಿ ಎಂದು ಪೋಲೀಸರನ್ನು ಪ್ರಾರ್ಥಿಸಿದರು.

ನಾಲ್ಕನೆಯ ದಿನ. ಮನುವನ್ನು ಹತ್ತಿರಕ್ಕೆ ಕರೆದರು. "ವಿರೋಧ ಇನ್ನೂ ಬಲಿಯುತ್ತಿದೆಯಲ್ಲ. ಪ್ರಾರ್ಥನೆ ನಡೆಸುವವಳು ನೀನು. ನಿನ್ನ ಹೃದಯಾಂತ ರಾಳದಿಂದ ಪ್ರಾರ್ಥನೆ ಹೊರ ಹೊಮ್ಮುತ್ತಿದ್ದರೆ, ವಿರೋಧ ಕರಗಿ ಹೋಗಬೇಕು. ಎಲ್ಲಿಯೋ ದೋಷವಿದೆ. ನಿನ್ನ ಮೂಗಿನಿಂದ ಆಗಾಗ ರಕ್ತ ಹರಿದು ಬರುತ್ತೆ. ನಿನ್ನ ಪ್ರಾರ್ಥನೆ ಹೃದಯಾಂತರದಿಂದ, ನಿಷ್ಕಲ್ಮಶ ಭಾವನೆಯಿಂದ ಹೊರಸೂಸು ತ್ತಿದ್ದರೆ, ರಕ್ತಸ್ರಾವ ನಿಲ್ಲಬೇಕು. ಇದೊಂದು ಪರೀಕ್ಷೆಯ ಬಾಹ್ಯ ಕುರುಹು. ಅಹಿಂಸೆಗೆ ಸವಾಲು ಇವೆಲ್ಲವೂ! ಭಗವಂತ ಬಹುಕಾಲ ನನ್ನನ್ನು ಉಳಿಸುವಂತೆ ಕಾಣಿಸುವುದಿಲ್ಲ."

ಮಹಾತ್ಮರ ಮತ್ತು ಮನುವಿನ ಪ್ರಾರ್ಥನೆ ಫಲಿಸದೆ ಹೋಗಲಿಲ್ಲ. ಮಾರನೆಯ ಸಂಜೆ ರಾಷ್ಟ್ರೀಯ ಸ್ವಯಂಸೇವಕದಳದ ಓರ್ವ ಪ್ರಮುಖ ಅವರಲ್ಲಿ ಬಂದು

ಅಂದಿನಿಂದ ಪ್ರಾರ್ಥನಾ ಸಭೆಗೆ ಯಾವ ಆತಂಕವೂ ಆಗದೆಂದು ಭರವಸೆ ನೀಡಿದ. ಎಂದಿನಂತೆ ವೇದಿಕೆಯೇರಿ ಕುಳಿತರು ಮಹಾತ್ಮರು. ಪದ್ಮಾಸನನಾದ ಗೌತಮ ಬುದ್ಧನ ನೆನಪು ತರುತ್ತಿತ್ತು ಆ ದೃಶ್ಯ. ಗಂಭೀರ ಮುಖ ಮುದ್ರೆ. ಇಡೀ ದೇಹದಿಂದ ಅವರ್ಣನೀಯ ಕಾಂತಿ ಹೊರಚೆಲ್ಲುತ್ತಿದ್ದಂತೆ ಭಾಸವಾಗುತ್ತಿತ್ತು.

ಪ್ರಾರ್ಥನೆ ನಡೆಯಲು ಯಾರದಾದರೂ ಅಭ್ಯಂತರ ಇದೆಯೇ ಎಂದು ಕೇಳಿದರು. ಒಬ್ಬ ಹುಡುಗ ಕೈ ಎತ್ತಿದ. ಇಷ್ಟರಲ್ಲಿ ಹಿಂದೂ ಮಹಾಸಭೆಯ ತರುಣನೊಬ್ಬ ಎದ್ದು, "ಮೂರು ದಿನಗಳಿಂದ ಮಹಾತ್ಮರ ಪ್ರಾರ್ಥನಾ ಸಭೆ ನಡೆಯುತ್ತಿಲ್ಲ. ನಮ್ಮ ದುರ್ನಡತೆಯೇ ಇದಕ್ಕೆ ಕಾರಣ. ಕೈ ಮುಗಿದು ಬೇಡುವೆ ಯಾರೂ ಪ್ರಾರ್ಥನೆಗೆ ಅಡ್ಡಿ ಮಾಡಬಾರದೆಂದು. ನಮ್ಮ ಅಸಮಾಧಾನ ವ್ಯಕ್ತಪಡಿಸಲು ಹಲವು ಮಾರ್ಗಗಳಿವೆ. ಈ ರೀತಿಯಲ್ಲಿ ಸಭಿಕರನ್ನು ಅವನು ಸಮಾಧಾನ ಪಡಿಸಿ ಕುಳಿತ.

ಮತ್ತೆ ಬಾಪೂ ಕೇಳಿದರು. ಯಾರಾದರೂ ಅಭ್ಯಂತಕರಿದ್ದರೆ ಕೈ ಎತ್ತಬಹುದು "ವಿಟೋ" ಚಲಾಯಿಸಬಹುದು.

ಮೊದಲು ಎದ್ದವನು ಕೂತ, ಆದರೆ ಮತ್ತೊಬ್ಬ ಎದ್ದ.

"ನಾನು ಸೋಲೊಪ್ಪಿಕೊಳ್ಳುತ್ತೇನೆ. ಆದರೆ ಇದು ಸಭೆಯ ಸೋಲಲ್ಲ. ಕೋಪದಿಂದ ಆ ಯುವಕನನ್ನು ಥಳಿಸದೆ ಸುಮ್ಮನಿರುವುದು ಅಹಿಂಸೆಗೆ ಶಾಂತಿಗೆ ಜಯ".

ಹಿಂದೂ ಮಹಾಸಭೆಯ ಗೆಳೆಯ ಮತ್ತೊಮ್ಮೆ ಎದ್ದ. ಅಡ್ಡಿ ಮಾಡುತ್ತಿದ್ದವನೊಡನೆ ವಾದಿಸಿ ಅವನ ಮನವೊಲಿಸಿದ. ಆಗ ಆ ತರುಣ ತನ್ನ ಆಕ್ಷೇಪಣೆ ಹಿಂತೆಗೆದುಕೊಂಡು, ಪ್ರಾರ್ಥನೆ ನಡೆಯಲು ಅವಕಾಶ ಮಾಡಿಕೊಟ್ಟ. ಅಂತೂ ನಾಲ್ಕನೆಯ ದಿನ ಪ್ರಾರ್ಥನೆ ನಿರಾತಂಕವಾಗಿ ನಡೆಯಿತು. ನಾಲ್ಕು ಮತ್ತು ಐದನೆಯ ಪ್ರಾರ್ಥನಾ ಸಭೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಸೇರಿದ್ದರು. ಯಾವ ಗಲಾಟೆ ಗೊಂದಲವೂ ನಡೆಯಲಿಲ್ಲ. ನಿಶ್ಶಬ್ದ ವಾತಾವರಣದಲ್ಲಿ ಶಾಂತವಾಗಿ ಪ್ರಾರ್ಥನೆ ನಡೆಯಿತು.

"ಮೂರು ದಿನಗಳಲ್ಲಿ ಪ್ರಾರ್ಥನೆ ಅರ್ಪಿಸಲ್ಪಡಲಿಲ್ಲವೆಂದು ಯಾರೂ ಭಾವಿಸಲಾಗದು. ತುಟಿ ಅಲುಗಿಸಿ, ಬಾಯಾಡಿಸಿ ಪ್ರಾರ್ಥನೆ ನಾವು ಸಲ್ಲಿಸಲಿಲ್ಲ, ಅಷ್ಟೆ. ಆದರೆ ನಮ್ಮ ಅಂತಃಕರಣ ಪ್ರಾರ್ಥನೆ ಸಲ್ಲಿಸಿತು. ಹೃದಯಾಂತರ್ಗತ ಪ್ರಾರ್ಥನೆಯ ಮಹತ್ವವೇ ಅಧಿಕ. ಪ್ರಾರ್ಥನೆಯನ್ನು ವಿರೋಧಿಸುವವರೂ, ಅವರಿಗೆ ಅರಿವಿಲ್ಲದಂತೆಯೇ ನನಗೆ ನೆರವು ನೀಡಿರುತ್ತಾರೆ. ಅಂತಃಶೋಧನೆಗೆ ಸಹಾಯವೆಸಗಿರುತ್ತಾರೆ ನನಗೆ. ಭಾರತದ ಭವಿಷ್ಯದ ಗಂಭೀರ ಸಮಸ್ಯೆ ಕುರಿತು ಮೌಂಟ್

ಬೀಟನ್ ಅವರೊಡನೆ ವಿಚಾರ ವಿನಿಮಯ ನಡೆಯುತ್ತಿದ್ದಾಗ ಈ ಅಲ್ಪ ವಿಚಾರಗಳತ್ತ ಗಮನ ಹರಿಸುವುದು ಸರಿಯೇ ಎಂದು ನೀವು ಕೇಳಬಹುದು. ಇದು ಅಲ್ಪ, ಅದು ದೊಡ್ಡದು ಈ ದೃಷ್ಟಿ ನನ್ನದಲ್ಲ. ಎಲ್ಲವೂ ಸಮಾನ. ಈ ಸಭೆ ಸಹನೆಯ ಪಾಠ ನನಗೆ ಕಲಿಸಿದೆ. ಭಗವಂತ ಪಾಠ ಕಲಿಸುತ್ತಿದ್ದಾನೆ.'' ಈ ರೀತಿಯಲ್ಲಿ ಪ್ರಾರ್ಥನೆಯ ಅಂತ್ಯದಲ್ಲಿ ನುಡಿದರು, ಗಾಂಧೀಜಿ.

ಕೆಲವು ವಾರಗಳ ಕಾಲ ಪ್ರಾರ್ಥನೆ ನಿರಾತಂಕವಾಗಿ ನಡೆಯಿತು. ಆದರೆ ಇದೇ ರೀತಿಯಲ್ಲಿ ಕೊರಾನ್ ಪಠಣ ಮುಂದುವರೆಯುವುದಾದರೆ ಕಪ್ಪುಬಾವುಟದ ಪ್ರದರ್ಶನ ನಡೆಸುವ ಪತ್ರಗಳು ಬರತೊಡಗಿದುವು. ಪತ್ರ ಬರೆದವರ ಬಾಹ್ಯಸೌಜನ್ಯಕ್ಕಾಗಿ 28ನೇ ತಾರೀಖು ಸಂಜೆಯ ಸಭೆಯಲ್ಲಿ ಅವರಿಗೆ ವಂದನೆ ಅರ್ಪಿಸಿದರು. ದಿಲ್ಲಿಯ ಜನ ಈಗ ಶಿಸ್ತು, ಶಾಂತಿ ಮತ್ತು ತಾಳ್ಮೆ ಕಲಿತಿದ್ದಾರೆ. ಅಡಚಣೆ ಮಾಡುವವರನ್ನು ಅವರು ಪೀಡಿಸಲಾರರು. ಆದ್ದರಿಂದ ಪ್ರಾರ್ಥನೆ ಬೇಡ ಎನ್ನುವವರಿದ್ದರೂ ಪ್ರಾರ್ಥನೆ ನಡೆಸುವೆ. ಲಾಠಿ ತೆಗೆದುಕೊಂಡು ಬಂದರೂ, ಪ್ರಾರ್ಥನಾ ಸಭೆ ನಡೆಸುವೆ. ಲಾಠಿ ಪೆಟ್ಟು ಬೀಳುತ್ತಿದ್ದರೂ ಸರಿ, ವಿರೋಧಿಗಳಿಗೆ ಕೇಡೆಣಿಸದೆ, ರಾಮನಾಮ ಸ್ಮರಿಸುತ್ತ ಕಡೆಯ ಉಸಿರೆಳೆಯಲೂ ನಾನು ಸಿದ್ಧ. ಪೋಲೀಸರ ಸಹಾಯ ಅಪೇಕ್ಷಿಸಲಾರೆ. ನಾನು ಸಾಯಬಹುದು. ತದನಂತರ ನಿಮ್ಮ ಕೃತ್ಯಕ್ಕಾಗಿ ನೀವೇ ಪರಿತಪಿಸುವಿರಿ. ಆದರೆ ಪೋಲೀಸರ ಸಹಾಯ ಪಡೆದೂ ನಾನು ಸತ್ತರೆ, ಆಗ ತಮ್ಮ ಜಯಕ್ಕಾಗಿ ವಿರೋಧಿಗಳು ಅತಿ ಸಂತುಷ್ಟರಾಗಬಹುದು. ಪೋಲೀಸರು ಬಂದರೂ ತಮ್ಮ ಗುರಿ ಸಾಧಿಸಿಕೊಂಡೆವೆಂದು ಹೆಮ್ಮೆ ಪಡಬಹನು. ಭಗವಂತನೇ ನನ್ನ ರಕ್ಷಕ. ಅವನಿಚ್ಛೆಯಿಲ್ಲದೆ ಒಂದು ಘಳಿಗೆಯೂ ಇಲ್ಲಿರಲು ಸಾಧ್ಯವಾಗದು. ಪ್ರಾರ್ಥನೆಯೇ ನನ್ನ ಅಂತಃಶಕ್ತಿ, ಆತ್ಮಶಕ್ತಿ.

ಯಾರ ವಸ್ತ್ರ ಮಲಿನವಾಗಿ ಹರಿದು ಚಿಂದಿಯಾಗಿದೆಯೋ ಅವರಲ್ಲಿರುತ್ತಾನೆ ಭಗವಂತ. ಇದು ವಿಶ್ವ ಕವಿ ಟಾಗೂರರ ಒಂದು ಗೀತೆ. ಗಾಂಧೀಜಿ ತಮ್ಮ ವಸ್ತ್ರದ ಅಂಚನ್ನು ನೋಡಿಕೊಂಡು ನನ್ನ ವಸ್ತ್ರ ಹರಿದಿಲ್ಲ, ಮಲಿನವಾಗಿಲ್ಲ ಶುಭ್ರವಾಗಿದೆ. ಆದ್ದರಿಂದ ಪರಮಾತ್ಮ ನನ್ನಲ್ಲಿ ಇಲ್ಲ ಎನ್ನುತ್ತಿದ್ದರು.

ಕೆಲವು ಸ್ತ್ರೀಯರು ಪ್ರಾರ್ಥನೆಯ ಅಂತ್ಯಕ್ಕೆ ಬಂದು ಕೆಲ ನಿಮಿಷವಿದ್ದು ಹೊರಟು ಹೋಗುತ್ತಿದ್ದರು. ಇದು ಅವರ ಗಮನಕ್ಕೆ ಬಂತು. ಏಷ್ಯ ಸಮ್ಮೇಳನಕ್ಕೆ ಹೋಗಿದ್ದ ನೆನಪು ಮಾಡಿಕೊಂಡರು. ಏಷ್ಯದ ನಾನಾ ಭಾಗದಿಂದ ಬಂದಿದ್ದ ಪ್ರತಿನಿಧಿಗಳು ತಮ್ಮ ದೇಶ ಪದ್ಧತಿಯಂತೆ ಸಾಮಾನ್ಯ ಉಡುಪು ಧರಿಸಿದ್ದರು. ಆದರೆ ನಮ್ಮ ಸ್ತ್ರೀಯರು ಬೆಲೆಬಾಳುವ ರೇಷ್ಮೆ ಸೀರೆ ಉಟ್ಟು ತುಟಿಗೆ ಬಣ್ಣ ಬಳಿದುಕೊಂಡು

ಬೊಂಬೆಗಳಂತೆ ಕಾಣುತ್ತಿದ್ದರು. ಖಾದಿ ಸೀರೆ ಉಟ್ಟದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.

ಈಗಿನ ಪೀಳಿಗೆಗೆ ಪ್ರಾರ್ಥನೆಯಲ್ಲಿ ವಿಶ್ವಾಸ ಕುಗ್ಗುತ್ತಿದೆ. ಪ್ರಾರ್ಥನೆ ಅಹಿಂಸೆಯ ಸೋಪಾನ. ಅಹಿಂಸಾಮಾರ್ಗದಿಂದ ನಾವು ಸ್ವಾತಂತ್ರ್ಯ ಸಂಪಾದಿಸಿರುತ್ತೇವೆ. ಪ್ರಾರ್ಥನೆಯಲ್ಲಿ ವಿಶ್ವಾಸ ಕಳೆದುಕೊಂಡರೆ, ಅಹಿಂಸಾ ಮಾರ್ಗದಿಂದ ಗಳಿಸಿದ ಸ್ವಾತಂತ್ರ್ಯ ಹೇಗೆ ಉಳಿಸಿಕೊಂಡೇವು. ಇದು ಅವರ ಸಮಸ್ಯೆ.

ಒಮ್ಮೆ ಗಾಂಧೀಜಿ ಶ್ರೀಪ್ರಕಾಶರೊಡನೆ ವಾರಣಾಸಿ ಬಳಿ ದೋಣಿಯಲ್ಲಿ ಗಂಗಾ ನದಿ ದಾಟುತ್ತಿದ್ದರು. ಇದ್ದಕ್ಕಿದ್ದಂತೆ ಬಿರುಗಾಳಿ ಬಲವಾಗಿ ಬೀಸತೊಡಗಿ, ದೊಡ್ಡ ಅಲೆಗಳು ಎದ್ದವು. ದೋಣಿ ಅಂಬಿಗನ ಹತೋಟಿ ಮೀರಿತು. ಎಲ್ಲರೂ ಭಯಗ್ರಸ್ತರಾದರು. ಎಲ್ಲರೂ ಕೂಡಿ ರಾಮ ಧ್ಯಾನ ಮಾಡೋಣ ಎಂದರು ಗಾಂಧೀಜಿ. ರಘುಪತಿ ರಾಘವ ರಾಜಾರಾಮ, ಪತಿತ ಪಾವನ ಸೀತಾರಾಮ ಎಂದು ಎಲ್ಲರೂ ರಾಮಧುನ್ ಭಜನೆಯಲ್ಲಿ ಕೊರಲು ಕೂಡಿಸಿದರು. ಆದರೆ ಶ್ರೀಪ್ರಕಾಶರು ಮಾತ್ರ ದನಿಗೂಡಿಸಲಿಲ್ಲ. ಏಕೆ ದನಿಗೂಡಿಸಲಿಲ್ಲ ಎಂದು ಕೇಳಿದರು ಬಾಪೂಜಿ. ಶ್ರೀಪ್ರಕಾಶ ಒಳ್ಳೆಯ ಹಾಸ್ಯಗಾರ. ಪಾಪಿಯಾದ ನಾನು ರಾಮನಾಮ ಹೇಳತೊಡಗಿದರೆ, ಇನ್ನೇನು ಗತಿ ಎಂದು ದೇವರೇ ದೋಣಿ ಮುಳುಗಿಸಿಬಿಟ್ಟಾನು ಎಂದರು. ಪಾಪ ಪರಿಹಾರವಾಗುತ್ತೆ, ದೋಣಿ ತೀರ ಸೇರುತ್ತೆ ಎಂದರು ಗಾಂಧೀಜಿ. ದೋಣಿ ಸಾಗಿತು ತೀರ ಸೇರಿತು.

ಭಾರತದಲ್ಲಿ ಮುಸ್ಲಿ–ಹಿಂದೂ ಭಯಂಕರ ನರಹತ್ಯೆ ನಡೆಯುತ್ತಿತ್ತು. ಗಾಂಧೀಜಿ ಒಂಟಿಗರಾಗಿ ಬಂಗಾಳದಲ್ಲಿ ಶಾಂತಿಸ್ಥಾಪಿಸಲು ಶಾಂತಿಯಾತ್ರೆ ನಡೆಸುತ್ತಿದ್ದರು. ಆಗ ವೈಸರಾಯಿ ಮೌಂಟ್ ಬೇಟನ್ ಗಾಂಧೀಜೀಗೆ ಬರೆದರು. "ಪಂಜಾಬಿನಲ್ಲಿ ಶಾಂತಿ ರಕ್ಷಣೆಗಾಗಿ 55,000 ಸೈನಿಕರಿದ್ದಾರೆ. ಆದರೂ ದೊಡ್ಡ ಪ್ರಮಾಣದಲ್ಲಿ ದೊಂಬಿ, ನರಹತ್ಯೆ ಸಾಗುತ್ತಿದೆ. ಆದರೆ ಬಂಗಾಳದಲ್ಲಿ ಗಡಿ ರಕ್ಷಣೆಗಾಗಿ ಇರುವ ಸೇನಾ ಬಲ ಮಹಾತ್ಮರೊಬ್ಬರೇ. ಅಲ್ಲಿ ಶಾಂತಿ ನೆಲೆಸುವಂತಾಗಿದೆ". ಪಂಜಾಬಿನಲ್ಲೂ ಈ ಪ್ರಯೋಗ ನಡೆಸಬೇಕೆಂಬುದು ನಿಮ್ಮ ಉದ್ದೇಶವೇ ಎಂದರು ಗಾಂಧೀಜಿ. ಪ್ರಾರ್ಥನೆಯೇ ಅವರ ಊರುಗೋಲು. ಏಕೈಕ ಸೇನಾನಿಯ ಅಸ್ತ್ರ.

ಧರ್ಮದ ಶ್ರೇಷ್ಠತೆ

ರೌದ್ರಾವತಾರದ ಮಹಾಕಾಳಿಯ ನಾಡಿನ ಬಂಗಾಳದಲ್ಲಿ ಮತೀಯ ಕಲಹ ಭಯಂಕರ ರೂಪು ತಾಳಿತ್ತು. ರುಂಡ ಮುಂಡಗಳು ಉರುಳುತ್ತಿದ್ದುವು. ಕಲ್ಕತ್ತ ಮಹಾನಗರದಲ್ಲಿ ಮಾತ್ರವಲ್ಲ, ಹಳ್ಳಿ ಹಳ್ಳಿಗಳಲ್ಲೂ ಮೃತ್ಯುದೇವತೆ ಕೇಕೆ ಹಾಕುತ್ತಾ, ಆರ್ಭಟಿಸುತ್ತ ನಿರಾತಂಕವಾಗಿ ನಲಿಯುತ್ತಿದ್ದಳು. ರೌದ್ರಾವತಾರ ತಾಳಿದ್ದ ಮಹಾ ಕಾಳಿಯ ರಕ್ತ ಪಿಪಾಸೆ ತಣಿಸಲು ಮಾನವನ ರಕ್ತದ ಕೋಡಿ ಹರಿಯುತ್ತಿತ್ತು. ನಾರಿಯರ ಮಾನಹರಣ ದಿನನಿತ್ಯದ ನಾಟಕವಾಗಿತ್ತು. ಮತೀಯ ಅಂಧಕಾರದ ಕಿಚ್ಚು ಮನೆಗಳನ್ನು ಗುಡಿಸಲುಗಳನ್ನು ಸುಟ್ಟು ದಹಿಸುತ್ತಿತ್ತು. ನರಮಾನವ ರಕ್ತ ಪಿಪಾಸಿಯ ರಾಕ್ಷಸನಾಗಿದ್ದ.

1946 ಆಗಸ್ಟ್ 16 ಮುಸ್ಲಿಂಲೀಗಿನ ಆಣತಿಯಂತೆ ಮುಸಲ್ಮಾನರು ಪಾಕಿಸ್ಥಾನದ ಬೇಡಿಕೆಗಾಗಿ ಪ್ರತ್ಯಕ್ಷ ಹೋರಾಟದ ದಿನವಾಗಿ ಆಚರಿಸಿದರು. ಕಲ್ಕತ್ತದ ಮಹಾನಗರದಲ್ಲಿ ಪುಂಡು ಪೋಕರಿಗಳು ದೊಣ್ಣೆ, ಭರ್ಜಿ, ಕತ್ತಿ, ಕಠಾರಿ, ಮಚ್ಚು, ತುಪಾಕಿ ಕೈಗೆ ಸಿಕ್ಕಿದ ಆಯುಧ ತೆಗೆದುಕೊಂಡು, ನಗರದ ಬೀದಿಗಳಲ್ಲಿ 'ಅಲ್ಲಾ ಹೋ ಅಕ್ಬರ್,' 'ಪಾಕಿಸ್ಥಾನ ಜಿಂದಾಬಾದ್' ಮೊದಲಾಗಿ ಅರಚುತ್ತಾ, ಪುಂಡಲಿಯುತ್ತಾ, ಎದುರಿಗೆ ಸಿಕ್ಕಿದವರನ್ನು ಕೊಚ್ಚುತ್ತಾ, ಕೈಗೆ ಸಿಕ್ಕಿದ್ದನ್ನು ಲೂಟಿ ಮಾಡುತ್ತಾ, ನಿರ್ಭಯವಾಗಿ ಅಲೆದಾಡುತ್ತಿದ್ದರು. ಈ ಆಚರಣೆಯಲ್ಲಿ 5,000ಕ್ಕೂ ಹೆಚ್ಚು ನಿರಪರಾಧಿಗಳು ಕೊಲೆಯಾದರು. 15,000ಕ್ಕೂ ಹೆಚ್ಚು ಜನ ಗಾಯ ಗೊಂಡರು. ಸತ್ಯದ ನಾಶವಾಗುತ್ತಿದೆ. ನಿಜಾಂಶ ಕಂಡುಹಿಡಿಯಲು ನನ್ನಿಂದ ಸಾಧ್ಯವಾಗುತ್ತಿಲ್ಲ. ಹಳೆಯ ಮಧುರ ಬಾಂಧವ್ಯ ತುಂಡರಿಸಿ ಹೋಗುತ್ತಿದೆ. ಕಳೆದ ಅರವತ್ತು ವರ್ಷಗಳಿಂದ ನನ್ನ ಜೀವನಾಧಾರಗಳಾಗಿದ್ದ ಸತ್ಯ ಮತ್ತು ಅಹಿಂಸೆ, ತಮ್ಮ ಗುಣಲಕ್ಷಣಗಳನ್ನು ಕಳೆದುಕೊಂಡು ನಶಿಸಿ ಹೋಗುತ್ತಿರುವಂತೆ ತೋರುತ್ತಿದೆ. ಆದ್ದರಿಂದ ಸತ್ಯ ಅಹಿಂಸೆಗಳನ್ನು, ಅಲ್ಲ ಅವುಗಳ ಆರಾಧಕನಾದ ತನ್ನ ಪರೀಕ್ಷೆ ನಡೆ ಸಲು ನವಾಖಲಿಯ ಶ್ರೀರಾಂಪುರಕ್ಕೆ ತೆರಳುವುದಾಗಿ ಮಹಾತ್ಮಗಾಂಧಿ ಘೋಷಿಸಿದರು. ಶ್ರೀರಾಮಪುರದ ಇನ್ನೂರು ಹಿಂದೂ ಕುಟುಂಬಗಳಲ್ಲಿ ಮೂರು ಮಾತ್ರ ಉಳಿದಿದ್ದವು. ಇದರಿಂದ ಬಂಗಾಳದ ಹತ್ಯಾಕಾಂಡದ ಭೀಕರತೆಯನ್ನು ಊಹಿಸಬಹುದು.

ಕ್ರೋಧವನ್ನು ಅಕ್ರೋಧದಿಂದ, ಹಿಂಸೆಯನ್ನು ಅಹಿಂಸೆಯಿಂದ ಅರಿಸು ಎಂದು ಶತಮಾನಗಳ ಹಿಂದೆ ಬೋಧಿಸಿದ ದಯಾಸಾಗರ ಗೌತಮ ಬುದ್ಧ. ನವಂಬರ್ 6,1946 ರಂದು ಮತ್ತೊಬ್ಬ ಶಾಂತಿದೂತ ಮಹಾತ್ಮ ಗಾಂಧಿ ಪೂರ್ವ ಬಂಗಾಳದಲ್ಲಿ ಶಾಂತಿಸ್ಥಾಪಿಸಲು 'ಏಕಲಾ ಚಲೋ' ಎಂದು ಏಕಾಂಗಿಯಾಗಿ ಹೊರಟ. ಅತ್ಯಂತ ಉನ್ನತ ಮಟ್ಟದ ಪರಿಪೂರ್ಣ ಶಾಂತಿಮಯ ಬದುಕು ಬದುಕುವ ಏಕೈಕ ವ್ಯಕ್ತಿ ಲಕ್ಷಾಂತರ ಜನರ ಕ್ರೋಧಾಗ್ನಿಯನ್ನು ಶಾಂತಗೊಳಿಸಲು ಸಾಧ್ಯವಾದೀತು. ಹೀಗೆ ಒಮ್ಮೆ ಬರೆದಿದ್ದರು ಗಾಂಧೀಜಿ ಅಂತರರಾಷ್ಟ್ರೀಯ ಯುದ್ಧ ವಿರೋಧಿ ಸಂಘದ ರುನ್ ಹ್ಯಾಂ ಬ್ರೌನ್ ಅವರಿಗೆ. ಈ ಹೇಳಿಕೆಯನ್ನೇ ಸ್ವಾನುಭವದಿಂದ ಒರೆಗೆ ಹಚ್ಚಲು ಈ ಸತ್ಯೋಪಾಸಕ ಹೊರಟಂತೆ ಭಾಸವಾಗುತ್ತಿತ್ತು. ನುಡಿದಂತೆ ನಡೆಯುವುದು ಮಹಾಪುರುಷರ ಲಕ್ಷಣ. ನುಡಿಯದೆಯೇ ಮೊದಲು ತಾನು ನಡೆದು ತೋರಿಸಿ, ತದನಂತರ ಅದನ್ನು ವಿಶ್ಲೇಷಿಸಿ ಹೇಳುವುದು ಮಹಾತ್ಮ ಗಾಂಧಿಯವರ ವೈಶಿಷ್ಟ್ಯ. ಸತ್ಯ ಮತ್ತು ನುಡಿಯ ಪರೀಕ್ಷಣಕ್ಕಾಗಿಯೇ ಈಗ ಅವರು ಮತೀಯ ದೌರ್ಜನ್ಯದಿಂದ ಜರ್ಝರಿತವಾಗಿದ್ದ ಬಂಗಾಳದ ನವಾಖಲಿ ಜಿಲ್ಲೆಗೆ ಹೊರಟಿದ್ದರು.

ಭಗವಂತನ ಕೈಯಲ್ಲಿದೆ ನನ್ನ ರಕ್ಷಣೆ. ಅವನ ಇಚ್ಛಾನುಸಾರ ನಡೆಯಲಿ. ನನ್ನೊಡನೆ ಯಾರೂ ಬರಬೇಕಾದ್ದಿಲ್ಲ. ನನ್ನ ರಕ್ಷಣೆಗಾಗಿ ಸರ್ಕಾರ ಯಾವ ವ್ಯವಸ್ಥೆಯನ್ನೂ ಮಾಡಬೇಕಾದ್ದಿಲ್ಲ. ಭಗವಂತನ ಮೇಲೆ ಭಾರ ಹಾಕಿ ಹೊರಟರು ನವಾಖಲಿಗೆ ಏಕಾಂಗಿಯಾಗಿ. ಸಂಗಡ ಬರಲು ಅಪೇಕ್ಷಿಸಿದ ಆಶ್ರಮವಾಸಿಗಳನ್ನು ಬರಬೇಡ ಎಂದು ತಡೆದರು. ಹಾಗೂ ಸಂಗಡ ಹೊರಟಿದ್ದ ಪ್ಯಾರೆಲಾಲ್, ಸುಶೀಲ ನಯ್ಯಾರ್, ಅಬಾಗಾಂಧಿ, ಕನೂಗಾಂಧಿ, ಸುಚೇತಕೃಪಲಾನಿ ಇವರನ್ನು ಪ್ರತ್ಯೇಕ ಗ್ರಾಮಗಳಿಗೆ ಬೇರೆ ಬೇರೆಯಾಗಿ ಹೋಗಿ ನೆಲೆಸುವಂತೆ ಮಾಡಿದರು. ಕಡೆಗೆ ಉಳಿದವರು ದುಭಾಷಿ ಪ್ರೊಫೆಸರ್ ನಿರ್ಮಲಕುಮಾರಬೋಸ್, ಶೀಘ್ರಲಿಪಿಗಾರ ಪರಶುರಾಂ ಮತ್ತು ಮನೂಗಾಂಧಿ. ಕಾರಣಾಂತರದಿಂದ ಬೋಸ್ ಮತ್ತು ಪರಶುರಾಂ ಇಬ್ಬರೂ ಬಿಟ್ಟು ಹೋದರು. ಮನೂ ಒಬ್ಬಳೇ ಉಳಿದಳು.

ಎಲ್ಲ ಕೆಲಸ ಇವಳ ಪಾಲಿಗೇ ಬಿತ್ತು. ಸ್ನಾನ, ಅಡುಗೆ, ಬಡಿಸುವುದು, ಬಟ್ಟೆ ಒಗೆಯುವುದು, ಕಾಲು ತೀಡುವುದು, ಹಾಸಿಗೆ ಹಾಕುವುದು ಎಲ್ಲ ಕೆಲಸ ಮಾಡಲು ಮನೂ ಒಬ್ಬಳೇ. ದಿನಕ್ಕೆ ಹದಿನಾರು ಇಪ್ಪತ್ತು ಗಂಟೆಗಳ ಕೆಲಸ. ಮರದ ಮಂಚವೇ ಮಹಾತ್ಮರ ಕಾರ್ಯಾಲಯ. ಅದರ ಮೇಲೆಯೇ ಕುಳಿತು ಕಾಗದ ಪತ್ರ ಬರೆಯುವುದು. ಅದರ ಮೇಲೆಯೇ ಮಲಗುವುದು. ಒಮ್ಮೊಮ್ಮೆ ಗಾಂಧೀಜಿ ರಾತ್ರಿ ಎರಡಕ್ಕೇ ಎದ್ದು ತಾನೇ ಕಂದೀಲು ಹಚ್ಚಿಸಿ ಕಾಗದ ಪತ್ರಗಳ ವಿಲೇವಾರಿ ಮಾಡುತ್ತ ಕೂಡುವರು. ಎಷ್ಟು ಗಂಟೆಗೆ ಮಲಗಿದರೂ ಪ್ರಾರ್ಥನೆಗಾಗಿ ಬೆಳಿಗ್ಗೆ

ನಾಲ್ಕು ಗಂಟೆಗೆ ಏಳುವರು. ಪ್ರಾರ್ಥನೆ ನಡೆಸುವರು. ಪ್ರಾತರ್ವಿಧಿ ಮುಗಿಸಿಕೊಂಡು, ಸ್ಥಳದಲ್ಲೇ ದೊರೆಯುವ ಹಣ್ಣಿನ ರಸ, ಎಳನೀರು, ಮನೂ ಸಿದ್ಧಗೊಳಿಸಿದ ಏನಾದರೂ ಉಪಾಹಾರ ಸ್ವೀಕರಿಸಿ ಪಾದಚಾರಿಗಳಾಗಿ ಮುಂದಿನ ಹಳ್ಳಿಗೆ ಹೊರಡುವರು. ಹೆಜ್ಜೆ ಹೆಜ್ಜೆಗೂ ರಾಮನಾಮ ಸ್ಮರಿಸುತ್ತ, ಅಪಾರ ಹೃದಯವೇದನೆ ಅನುಭವಿಸುತ್ತಾ, ಹಿಂದೂ–ಮುಸ್ಲಿಂ ಐಕ್ಯತೆ ಬೋಧಿಸುತ್ತ, ಹಳ್ಳಿಯಿಂದ ಹಳ್ಳಿಗೆ ನಡೆಯುವರು. ನೊಂದ ಬೆಂದ ಹಿಂದೂಗಳ ಮನೆ ಪ್ರವೇಶಿಸಿ ಅಲ್ಲಿ ಉಳಿದವರ ದಾರುಣ ಕಥೆ ಆಲಿಸುವರು. ಅವರನ್ನು ಸಾಂತ್ವನಗೊಳಿಸಲು ಪ್ರಯತ್ನಿಸುವರು. ನೆರೆಹೊರೆಯವರೇ ಶತ್ರುಗಳಾಗಿ ಪರಿವರ್ತನೆಗೊಂಡು ಕೈ ಬಿಟ್ಟದ್ದ ವಿಪತ್ಕಾಲದಲ್ಲಿ ಶಾಂತಿದೂತ ಪೂಜ್ಯ ಮಹಾತ್ಮ, ತಮ್ಮ ಪಾದಧೂಳಿಯಿಂದ ತಮ್ಮ ಮನೆ ಪವಿತ್ರಗೊಳಿಸಲು ಬಂದರಲ್ಲಾ ಎಂದು ಸಮಾಧಾನ ಅವರು ತಂದುಕೊಳ್ಳುವರು. ಹೀಗೆ ಅಡಿಯಿಡುತ್ತ ಚಾಂದೀಪುರಕ್ಕೆ ಬಂದರು.

ಚಾಂದೀಪುರ ಹಿಂದೂಗಳ ರಕ್ತಸಿಂಚಿತ ಪುಣ್ಯ ರುದ್ರಭೂಮಿ. ಈ ಕ್ಷೇತ್ರದಲ್ಲಿ ಪಾದರಕ್ಷೆ ಧರಿಸಿ ಹೆಜ್ಜೆ ಇಡಲಾಗದು ಎಂದರು. ಪಾದರಕ್ಷೆ ತೊರೆದು ಬರಿಗಾಲಿನಲ್ಲಿ ಶಾಂತಿಯಾತ್ರೆ ಮುಂದುವರಿಸಿದರು. ಶಾಂತಿಯಾತ್ರೆ ಮುಗಿಯುವವರೆಗೂ ಮತ್ತೆ ಪಾದರಕ್ಷೆ ಹಾಕಿಕೊಳ್ಳಲಿಲ್ಲ. ಹೊಲಗದ್ದೆಗಳಲ್ಲಿ ನಡೆಯಬೇಕು. ಕೂಳೆಗಳು ಕಾಲು ಕತ್ತರಿಸುವುವು. ಕೆಲವು ಕಡೆ ಸವೆದ ಕಾಲುದಾರಿಯೂ ಕಾಣಿಸದು. ಹಳ್ಳಕೊಳ್ಳ, ಕೆಸರು ಕೊಚ್ಚೆ, ಯಾವುದನ್ನೂ ಲಕ್ಷಿಸದೆ ನಡೆಯುವರು. ನವಾಖಲಿ ನಾಲೆಗಳ ನಾಡು. ನಾಲ್ಕೈದು ಬೊಂಬು ಅಥವಾ ಅಡಕೆ ಮರದ ದಿಂಡು ಜೋಡಿಸಿ ರಚಿಸಿರುವರು ನಾಲೆ ಹಾಯಲು. ಅದು ಕಾಲೂರಿದರೆ ತೂರಾಡುವುದು. ಅಭ್ಯಾಸ ವಿದ್ದವರು ನಿರ್ಭಯವಾಗಿ ನಡೆಯುವರು. ತಮ್ಮ ಉದ್ದನೆಯ ಕೋಲೂರಿಕೊಂಡು ಇದರ ಮೇಲೆ ಗಾಂಧೀಜಿ ನಡೆಯುವರು. ಒಂದೆರಡು ಸಾರಿ ಜಾರಿ ಬೀಳುವ ಪ್ರಸಂಗಗಳೂ ನಡೆದವು. ಸಮೀಪದಲ್ಲಿದ್ದವರು ಹಿಡಿದುಕೊಳ್ಳದಿದ್ದರೆ ನಾಲೆಗೆ ಬೀಳುತ್ತಿದ್ದರು. ಕಲ್ಲು, ಮುಳ್ಳು, ಗಾಜು, ಕಾಲು ಕತ್ತರಿಸುವುವು. ಇಷ್ಟಾದರೂ ಪಾದರಕ್ಷೆ ಧರಿಸಲೊಲ್ಲರು. ನಡೆದು ಶಿಬಿರ ಸೇರುತ್ತಲೇ ಬಿಸಿ ನೀರಿನಿಂದ ಪಾದ ತೊಳೆಯುವಳು, ಮನೂ.

ಬಿಜಾಪುರದ ನಾರಾಯಣ ಅಣ್ಣಾರಾವ್ ಕುಲಕರ್ಣಿ ಛಾಯಾಚಿತ್ರಗ್ರಾಹಕ. ಮಹಾತ್ಮರ ಚರಿತ್ರಾರ್ಹ ಶಾಂತಿಯಾತ್ರೆಯ ಫೋಟೋ ಇಳಿಸಲು ಕ್ಯಾಮರ ತೆಗೆದುಕೊಂಡು, ಮಹಾತ್ಮರಿಗೆ ಪರಿಚಿತರಾದ ದೊಡ್ಡವರಿಂದ ಪರಿಚಯ ಪತ್ರಗಳನ್ನು ಪಡೆದು, ಅತಿ ಪ್ರಯಾಸದಿಂದ ನವಾಖಲಿಯ ಶ್ರೀನಗರ ಸೇರಿದರು. ಅಲ್ಲಿ ನಿರ್ಮಲ ಕುಮಾರ್ ಬೋಸರನ್ನು ಕಂಡರು. ಗಾಂಧೀಜಿ ತಮ್ಮ ಬಳಿಯಾರೂ ಸೇರಿಕೊಳ್ಳದಂತೆ

ಬಲವಾದ ನಿರ್ಬಂಧ ರಚಿಸಿಕೊಂಡಿದ್ದಾರೆ. ಹೊರಗಿನಿಂದ ಬಂದವರು ಗಾಂಧೀಜಿ ಇರುವ ಹಳ್ಳಿಯಲ್ಲೂ ಉಳಿಯುವಂತಿಲ್ಲ. ದೂರ ಪ್ರದೇಶದಿಂದ ಎಷ್ಟೋ ಜನ ಬಂದು, ನಿರಾಶೆಯಿಂದ ಹಿಂತಿರುಗಿ ಹೋಗಿರುತ್ತಾರೆ. ಹೀಗೆ ಅವರು ತಿಳಿಸಿದರು. ಆದರೂ ಅಣ್ಣಾರಾಯ ದೂರದ ಕರ್ನಾಟಕದಿಂದ ಬಂದಿರುವ ವಿಷಯ ಗಾಂಧಿಯವರಿಗೆ ತಿಳಿಸಿದರು. ಈ ದೀರ್ಘ ಪ್ರಯಾಣಕ್ಕಾಗಿ ಮಾಡಿದ ವೆಚ್ಚದ ಹಣವನ್ನು ನವಾಖಲಿಯ ದುಃಖಿತರ ಉಪಯೋಗಕ್ಕೆ ಕಳುಹಿಸಿದ್ದರೆ ಚೆನ್ನಾಗಿತ್ತು. ಇಲ್ಲವೆ ಆ ಹಣವನ್ನು ಕೊನೆ ಮುಟ್ಟದ ಹರಿಜನ ನಿಧಿಗೆ ಕೊಡಬಹುದಾಗಿತ್ತು. ಇದು ಗಾಂಧಿಯವರು ತಿಳಿಸಿದ ಅಭಿಪ್ರಾಯವೆಂದು ನಿರ್ಮಲಕುಮಾರರು ಅಣ್ಣಾರಾಯರಿಗೆ ತಿಳಿಸಿದರು. ಸಂಜೆಯ ಪ್ರಾರ್ಥನಾಸಭೆಗೆ ಬರಬಹುದು. ತದನಂತರ ಶ್ರೀನಗರದಲ್ಲೂ ಉಳಿಯದೆ ಪಕ್ಕದ ಹಳ್ಳಿಗೆ ಹೋಗಿ ಉಳಿಯುವಂತೆ ತಿಳಿಸಿದರು. ಎಂಥ ಕಠಿಣ ಹೃದಯ ಪ್ರಾರ್ಥನಾ ಸಭೆಯಲ್ಲಿ ಕುಳಿತಿದ್ದಾಗ ಗಾಂಧಿಯವರ ಭಾವಚಿತ್ರ ಕುಲಕರ್ಣಿಗಳು ತೆಗೆದರು.

ಪ್ರಾರ್ಥನಾ ಸಭೆಯಲ್ಲಿ ಹಿಂದಿಯಲ್ಲಿ ಮಾಡಿದ ಭಾಷಣವನ್ನು ನಿರ್ಮಲ ಕುಮಾರರು ಬಂಗಾಳಿಗೆ ಅನುವಾದಿಸಿದರು. "ದೇವರಲ್ಲಿ ವಿಶ್ವಾಸವಿಡಿ. ನೆರೆ ಹೊರೆಯವರನ್ನು ಸೋದರ ಸೋದರಿಯಂತೆ ಕಾಣಿರಿ. ಆಗ ಮಾತ್ರದಿಂದ, ದ್ವೇಷ ದಿಂದ ಮುಕ್ತರಾಗುವಿರಿ. ನಾನು ಕೈಗೊಂಡಿರುವ ಕೆಲಸ ಬಹಳ ಕಷ್ಟಕರವಾದುದು. ನನ್ನ ಜೀವಮಾನದಲ್ಲಿ ಇಂಥಾ ಕತ್ತಲೆಯ ನಿರಾಸೆಯ ಅನುಭವ ನನಗಾಗಿಲ್ಲ. ಆತುರ ದಿಂದ ಹಿಂತಿರುಗಲು ನಾನಿಲ್ಲಿಗೆ ಬಂದಿಲ್ಲ. ನಾನಿಲ್ಲೇ ಇದ್ದು, ನಿಮ್ಮೊಂದಿಗೆ ಬೆರೆತು ಜೀವಿಸಲು, ಬೇಕಾದರೆ ಸಾಯಲೂ, ಸಂಕಲ್ಪ ಮಾಡಿ ಬಂದಿದ್ದೇನೆ. ಹಿರಿದ ಕತ್ತಿ ಮತ್ತೆ ಒರೆಗೆ ಸೇರಿಸುವವರೆಗೆ, ಬಂಗಾಳ ನಾನು ಬಿಡುವುದಿಲ್ಲ. ಏಕಾಂಗಿಯಾಗಿ ಹಿಂದೂ ಹುಡುಗಿಯೊಬ್ಬಳು ನಿರ್ಭಯವಾಗಿ, ಮುಸ್ಲಿಮರ ಮಧ್ಯೆ ಓಡಾಡುವಂತಾಗುವವರೆಗೆ ನಾನಿಲ್ಲೇ ಇರುತ್ತೇನೆ. ಭಯ ಮುಕ್ತರಾಗುವುದೇ ನೀವು ನನಗೆ ಕೊಡಬಹುದಾದ ನೆರವು. ಭಯಕ್ಷೇತ್ರದಿಂದ ಹೆದರಿ ಪಲಾಯನ ಮಾಡಲಾಗದು, ಎದುರಿಸಿ ಪ್ರಾಣ ತ್ಯಜಿಸಲೂ ಸಿದ್ಧರಾಗಿರಬೇಕು. ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸದಿರುವುದು ದೇವರಲ್ಲಿ ಅಪನಂಬಿಕೆ ವ್ಯಕ್ತಪಡಿಸಿದಂತೆ. ನಾನೀಗ ಕೈಗೊಂಡಿರುವುದು ನನ್ನ ಜೀವನದ ಅಂತ್ಯದ ಕಾರ್ಯ. ಇಲ್ಲಿಂದ ಜೀವಂತ ವಾಗಿ ಹಿಂತಿರುಗಿದರೆ ಪುನರ್ಜನ್ಮವಾದಂತೆಯೇ. ಇಲ್ಲಿ ಹಿಂದೂ ಮತ್ತು ಮುಸಲ್ಮಾನರು ಸೌಹಾರ್ದದಿಂದ ಕೂಡಿಬಾಳಬೇಕು. ಈ ಗುರಿ ಸಾಧನೆಯಲ್ಲಿ ನಾನು ಪ್ರಾಣತ್ಯಾಗ ಮಾಡಲು ಸಿದ್ಧ."

ಮಹಾತ್ಮರ ಈ ವಾಕ್ಯಗಳು ಎಂಥ ಭಯಂಕರ ಪರಿಸ್ಥಿತಿಯನ್ನು ಅವರು ಎದುರಿಸುತ್ತಿದ್ದರು ಎಂಬುದನ್ನು ಸೂಚಿಸುತ್ತದೆ. ಪರಮಾತ್ಮನಲ್ಲಿ ದೃಢ ವಿಶ್ವಾಸ

ವಿಟ್ಟು ಆತ್ಮಾರ್ಪಣೆ ಮಾಡಲೂ ಅವರು ಸಿದ್ಧರಾಗಿ ಹೊರಟಿದ್ದರು. ಭಗವಂತ ನಲ್ಲಿ ತಮಗಿರುವ ಭಕ್ತಿವಿಶ್ವಾಸಕ್ಕೆ ತಮ್ಮ ಜೀವವನ್ನೇ ಪಣವಾಗಿ ಒಡ್ಡಿದ್ದರು.

ಶ್ರೀನಗರದಿಂದ ಧರ್ಮಪುರಿಗೆ ಹೊರಟರು. ಮೂರು ಮೈಲಿನಡೆಯಲು ನೂರು ನಿಮಿಷ ದಾರಿಯುದ್ದಕ್ಕೂಹತ್ತು ಹನ್ನೆರಡು ಅಲಂಕೃತ ಸ್ವಾಗತ ಮಂಟಪ ನಿರ್ಮಿಸಿದ್ದರು. ಧರ್ಮಪುರಿಯಲ್ಲಿ ಮಹಮ್ಮದೀಯರ ಸಂಖ್ಯೆಯೇ ಅಧಿಕ. ಮುಸಲ್ಮಾನರ ಮನೆ ಗಳಿಗೆ ಹೋದರು. ಮುಸ್ಲಿಂ ಸ್ತ್ರೀಯರು ಹಿತ್ತಾಳೆ ತಟ್ಟೆಗಳನ್ನು ಹಿಡಿದು ಹಾಡು ಹಾಡುತ್ತ ಬಾಪೂಜಿ ಮುಂದೆ ಹಣ್ಣುಗಳನ್ನು ಇರಿಸಿದರು. ನೆರೆದಿದ್ದ ಮಕ್ಕಳಿಗೆ ಬಾಪೂಜಿ ಹಣ್ಣು ಹಂಚಿದರು.

ನಾ. ಅ. ಕುಲಕರ್ಣಿ ಎರಡು ದಿನಗಳಿಂದ ಊಟ ಮಾಡಿರಲಿಲ್ಲ. ಅದೇಕೋ ಗಾಂಧೀಜಿ ಅಂದು ಊಟಮಾಡಲಿಲ್ಲ. ಕಾರಣ ತಿಳಿಯದು. ಬೋಸರೊಂದಿಗೆ ಕುಲಕರ್ಣಿ ಊಟಕ್ಕೆ ಕುಳಿತರು. ಬಾಪು ಅವರಿಗಾಗಿಯೇ ಬೇಯಿಸಿದ್ದ ಬಾಳೆಕಾಯಿ, ಕಾಡು ಹುರುಳಿಕಾಯಿ, ಅನ್ನ, ಹಾಲು, ಬೆಲ್ಲ ಎಲ್ಲರಿಗೂ ಮನೂ ಬಡಿಸಿದಳು. ಗಾಂಧೀ ಬಿಡಾರದಲ್ಲಿ ಊಟದಕ್ಕಿದ್ದು ಈ ಪ್ರವಾಸದಲ್ಲಿ ಅಣ್ಣಾರಾವ್ ಕುಲಕರ್ಣಿ ಒಬ್ಬರಿಗೇ.

ಧರ್ಮಪುರಿಯಲ್ಲಿದ್ದಾಗ ಸುದ್ದಿಗಾರರು ಬಂದು ಸುದ್ದಿಗಾಗಿ ತಡಕಾಡಿದರು, ಓಡಾಡಿದರು. ಬರಿಗಾಲಿನಲ್ಲಿ ನಡೆಯುವುದರಿಂದ ತಮಗೇನೂ ತೊಂದರೆ ಆಗು ತ್ತಿಲ್ಲವೆಂದೂ ರತ್ನಕಂಬಳಿಯ ಮೇಲೆ ನಡೆಯುತ್ತಿರುವಂತೆ ಇದೆಯೆಂದೂ ಬಾಪೂಜಿ ಹೇಳಿದರು. ಗೋಪಾಲಕೃಷ್ಣ ಗೋಖಲೆ ತೀರಿಕೊಂಡಾಗ ಒಂದು ವರ್ಷಕಾಲ ಪಾದರಕ್ಷೆ ಇಲ್ಲದೆ ಗಾಂಧೀಜಿ ಪ್ರವಾಸ ಮಾಡಿದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಚಾಂದೀಪುರದಿಂದ ಗಾಂಧೀಜಿ ದೇವೀಪುರಕ್ಕೆ ಹೊರಟಿದ್ದರು. ಇದು ನವಾಖಲಿಯ ಕಡೆಯ ದೊಡ್ಡ ಗ್ರಾಮ. ಕಿರಿದಾದ ಕಾಲುದಾರಿ. ಒಬ್ಬರ ಹಿಂದೆ ಒಬ್ಬರು ನಡೆಯಬೇಕು. ಕೆಲವು ದುಷ್ಟರು ಉದ್ದೇಶಪೂರ್ವಕ ಗಾಜು, ಮುಳ್ಳು ಚಲ್ಲಿದ್ದರು. ದಾರಿಯಲ್ಲೇ ಹೇಸಿಗೆ ಮಾಡಿದ್ದರು. ಮನೂ ಇವೆಲ್ಲವನ್ನು ದಾಟಿಕೊಂಡು ಮುಂದೆ ಸಾಗಿದ್ದಳು. ನಡುದಾರಿಯಲ್ಲೇ ಬಿದ್ದಿದ್ದ ಮಲವನ್ನು ಮಹಾತ್ಮರು ಒಣಗಿದ ಎಲೆಗಳಿಂದ ಪಕ್ಕಕ್ಕೆ ತಳ್ಳಿ ಶುದ್ಧಿಗೊಳಿಸತೊಡಗಿದ್ದರು. ಬಾಪು ಏಕೆ ಬರಲಿಲ್ಲ ಎಂದು ಹಿಂತಿರುಗಿ ನೋಡಿದ ಮನೂ ಓಡಿಬಂದು, ಈ ಹೊಲಸು ಕೆಲಸ ನೀವು ಮಾಡಬೇಕೆ? ನನಗೆ ಹೇಳಿದ್ದರೆ ನಾನು ಮಾಡುತ್ತಿರಲಿಲ್ಲವೆ? ಎಂದು ಕೋಪಮಾಡಿದಳು. "ಕಸಗುಡಿಸುವ, ಮಲ ಎತ್ತಿ ಹಾಕುವ ಕೆಲಸ, ಅಸ್ಪೃಶ್ಯರಿಗೆ ಮೀಸಲಾದ ಕೆಲಸವಲ್ಲ. ಅಪವಿತ್ರವನ್ನು ಪವಿತ್ರಗೊಳಿಸುವ ಕಾರ್ಯ

ವಿದು. ವಿಶಾಲ ಅರ್ಥದಲ್ಲಿ ಶುಚಿಗೊಳಿಸುವುದೇ ನನ್ನ ಜೀವನ ಧ್ಯೇಯ'' ಎಂದರು. ಮಾನವ ಕೋಟಿಯ ಮಾಲಿನ್ಯ ತೊಡೆದು, ಜಗತ್ತಿನ ಕಣ್ಣು ತೆರೆಯಿಸಿ, ಸತ್ಯ ಅಹಿಂಸೆಯ ಆಧಾರಿತವಾದ ನೂತನ ಸಮಾಜ ಸ್ಥಾಪಿಸುವುದು ಮಹಾತ್ಮರ ಮಹೋನ್ನತ ಧ್ಯೇಯವಲ್ಲವೆ?

ದೇವೀಪುರ ನವಾಖಲಿಯ ಕಡೆಯ ದೊಡ್ಡ ಗ್ರಾಮ. ಇಲ್ಲಿ ಶ್ರೀಮಂತ ಹಿಂದೂ ಕುಟುಂಬವೊಂದು ಇರುತ್ತಿತ್ತು. ಹೇಳ ಹೆಸರಿಲ್ಲದೆ ಮನೆಯವರೆಲ್ಲರೂ ಕೊಲೆಯಾಗಿದ್ದರು. ಬಂಗಲೆ ನೆಲಸಮವಾಗಿತ್ತು. ಬಂಗಲೆಯ ಅವಶೇಷಗಳನ್ನು ಅಲ್ಲಿ ಇಲ್ಲಿ ನೋಡಬಹುದಾಗಿತ್ತು. ಮಾನವ ಯಾವ ಮಟ್ಟಕ್ಕೆ ಇಳಿಯಬಲ್ಲ ಎಂಬುದನ್ನು ಅವಶೇಷಗಳು ನಿದರ್ಶಿಸುತ್ತಿದ್ದುವು. ಈ ದೃಶ್ಯಗಳನ್ನು ನೋಡಿದ್ದ ಡಕಾತಿ ಹೊಳೆ ದುಃಖದಿಂದ ಮೆಲ್ಲನೆ ಮಂದಗಾಮಿಯಾಗಿ ಹರಿಯುತ್ತಿತ್ತು. ಮಹಾತ್ಮರನ್ನು ಸ್ವಾಗತಿಸುವುದಕ್ಕಾಗಿಯೋ ಎಂಬಂತೆ ಇಕ್ಕೆಡೆಗಳಲ್ಲಿದ್ದ ಮರಗಳು ಪುಷ್ಪಗಳ ಭಾರದಿಂದ ತಲೆತಗ್ಗಿಸಿ, ಪೂಮಳೆಗರೆಯುತ್ತಾ ಮಂದಮಾರುತ ಬೀರುತ್ತಿದ್ದುವು. ಇಂಚರಗಳು ಸ್ವಾಗತಗೀತೆ ಹಾಡುವಂತೆ ಚಿಲಿಪಿಲಿಗುಟ್ಟುತ್ತಿದ್ದುವು. ಆದರೆ ಬಾಪೂಜಿ ಇದು ಯಾವುದನ್ನು ಗಮನಿಸದೆ, ಮಾನವನ ಭಯಂಕರ ರಾಕ್ಷಸೀ ಕೃತ್ಯಗಳನ್ನು ನೆನೆಯುತ್ತ, ಶೋಕತಪ್ತ ಹೃದಯದಿಂದ ಮೆಲ್ಲಮೆಲ್ಲನೆ ಅಡಿಯಿಡುತ್ತಿದ್ದರು.

ಬಾಪೂಜೀ ಅವರನ್ನು ಸ್ವಾಗತಿಸಲು ಹಳೆಯ ಕಾಂಗ್ರೆಸ್ ಕಾರ್ಯಕರ್ತನೊಬ್ಬ ವಿಶೇಷ ಆಸಕ್ತಿವಹಿಸಿದ್ದ. ಅವನ ನೇತೃತ್ವದಲ್ಲಿ ದಾರಿಯ ಇಕ್ಕೆಡೆಗಳೂ ತಳಿರು ತೋರಣ, ಬಣ್ಣ ಬಣ್ಣದ ಪತಾಕೆಗಳಿಂದ ಸಿಂಗರಿಸಲ್ಪಟ್ಟಿತ್ತು. ನಡುನಡುವೆ ಮಿನುಮಿನುಗುವ ಹೊಂಬಣ್ಣದ ಮತ್ತು ಬೆಳ್ಳಿಯ ಬಣ್ಣದ ಕಾಗದದ ಸರ. ಆದರೆ ಇವು ಅವರ ಮನಸ್ಸಿಗೆ ಹರ್ಷತಾರದೆ ಹೋದುವು. ಅಂದು ಮೌನ ದಿನ. ಮಾತನಾಡಲೊಲ್ಲರು. ಆದರೆ ಕೆಂಪಡರಿದ ಅವರ ಕಣ್ಣುಗಳು ಮನಸ್ಸಿನ ಉದ್ವೇಗ ಪ್ರತಿಬಿಂಬಿಸುತ್ತಿದ್ದುವು.

ಮಾರನೆಯದಿನ ಈ ಅಲಂಕಾರಕ್ಕೆ ಕಾರಣನಾದ ಕಾಂಗ್ರೆಸ್ ಕಾರ್ಯಕರ್ತನನ್ನು ಬರಮಾಡಿಕೊಂಡರು. ಉತ್ಸಾಹದಿಂದ ಅವನು ಓಡಿಬಂದ. ಆದರೆ ಅವನಿಗೆ ಕಾದಿದ್ದ ಸ್ವಾಗತವೇ ಪ್ರತ್ಯೇಕ. "ಮೃತ್ಯು ತಾಂಡವವಾಡುತ್ತಿರುವ ಸ್ಮಶಾನ ಸದೃಶ ಈ ಭೂಮಿಗೆ ಈ ಅಲಂಕಾರ ಒಪ್ಪುತ್ತದೆಯೇ? ಖಾದಿ ಖಾದಿ ಎಂದು ಅರವತ್ತು ವರ್ಷಗಳ ದೀರ್ಘ ಕಾಲದಿಂದ ಜಪಿಸುತ್ತಿರುವ ನನಗೆ ಮಿಲ್ಲು ಬಟ್ಟೆಯ ತೋರಣ, ವಿದೇಶಿ ಕಾಗದದ ತೋರಣ ಇವೆಲ್ಲವೂ ಅಪ್ರಿಯ, ತಿರಸ್ಕೃತ ಎಂದು ನಿನಗೆ ತಿಳಿಯದೇ? ಇವೆಲ್ಲವೂ ನನಗೆ ಸಂತೋಷದಾಯಕವಲ್ಲ, ದುಃಖದಾಯಕ."

"ನನ್ನ ಸಂಗಾತಿಗಳಲ್ಲಿ ನಾಳೆ ಯಾರಾದರೂ ಸಚಿವರಾಗಿ ಪುಷ್ಪಮಾಲಿಕೆಗೆ ಅವರು ಹಾತೊರೆಯುತ್ತ ಹೋಗಬಹುದಲ್ಲವೇ? ನನ್ನ ಕಾರ್ಯಕರ್ತರು ಅತಿ ಬುದ್ಧಿವಂತರಲ್ಲದಿರಬಹುದು, ಆದರೆ ಕಾಂಗ್ರೆಸ್ ಯಾವ ಧ್ಯೇಯಕ್ಕಾಗಿ ಇಷ್ಟು ದೀರ್ಘಾವಧಿಯ ಹೋರಾಟ ನಡೆಸುತ್ತ ಬಂದಿದೆಯೋ ಅದನ್ನು ಅವರೆಂದಿಗೂ ಮರೆಯಲಾರರೆಂದು ಮಾತ್ರ ನನ್ನ ಆಶಯ. ಮರೆಯಲಾರರಷ್ಟೆ ಎಂದು ಪ್ರಶ್ನಿಸಿದರು. ಕ್ಷಣಕಾಲದ ನಂತರ ಸ್ವಗತ. ಅವರು ಮಾತನಾಡಿಕೊಂಡರು. "ನಾನು ಕನಸುಕಾಣುತ್ತಿರುವೆನೇ? ನನ್ನ ಆಶೆ ನಿರಾಶೆಯಾದೀತೆ? ನಾನು ಭಗ್ನಮನೋರಥ ನಾದೇನೇ?"

ಮನೂವನ್ನು ಹತ್ತಿರಕ್ಕೆ ಕರೆದು ಕಾಗದದ ಪತಾಕೆಗಳ ಸರ ಕಿತ್ತು ಅದರಲ್ಲಿಯ ದಾರ ಉಂಡೆ ಮಾಡಿ ಇಡು. ಮುಂದೆ ಉಪಯೋಗಕ್ಕೆ ಬಂದೀತು ಎಂದರು.

ತಮ್ಮ ಪ್ರವಾಸದಲ್ಲಿ ಬಾಪೂಜಿ ಬಿಲಾಸಪುರಕ್ಕೆ ಬಂದರು. ಒಮ್ಮೆ ಮೇಘನಾ ನದಿ ಈ ಗ್ರಾಮದ ಪಕ್ಕದಲ್ಲಿ ಹರಿಯುತ್ತಿತ್ತು. ಇಲ್ಲಿ ನಡೆದ ಘೋರ ದುಷ್ಕೃತ್ಯಗಳನ್ನು ನೋಡಲಾರದೆ ಮೇಘನಾ ತನ್ನ ಪಾತ್ರ ಬದಲಾಯಿಸಿ, ಸರಿದು ಆರು ಮೈಲಿಗಳ ಆಚೆ ಹರಿಯತೊಡಗಿತ್ತು. ಇಲ್ಲಿದ್ದವರೆಲ್ಲರೂ ಬೆಸ್ತರು. ಅವರೂ ಊರು ತೊರೆದು ನದಿ ಹರಿಯುತ್ತಿದ್ದಲ್ಲಿಗೆ ಹೊರಟು ಹೋಗಿದ್ದರು. ಸ್ವಾಗತ ನೀಡಲು ಯಾರೂ ಇರಲಿಲ್ಲ. ಮನೂ ಮತ್ತು ಬಾಪೂಜಿ ಇಲ್ಲಿಗೆ ಬಂದುದು ಅಮಾವಾಸ್ಯೆಯ ರಾತ್ರಿ. ಸಂಗಡ ಯಾರೂ ಇಲ್ಲ. ಹಳೆಯ ಒಡಕು ಮುರುಕ ಗುಡಿಸಲು ಇವರಿಗೆ ಆಶ್ರಯ ಕೊಟ್ಟಿತು. ತಣ್ಣನೆಯ ಗಾಳಿ ಬೀಸುತ್ತಿತ್ತು. ತಂಗಾಳಿಯಲ್ಲ. ಮೈಯನ್ನು ಕಂಪಿಸುವ ಚಳಿಗಾಳಿ. ಮರದ ಮಂಚದ ಮೇಲೆ ಗಾಂಧೀಜಿ ಮಲಗಿದರು. ಚಾಪೆಯ ಗೋಡೆ ಮತ್ತು ಸೂರಿನಿಂದ ಮೈ ಕೊರೆವ ಗಾಳಿ ತೂರಿ ಬರುತ್ತಿತ್ತು. ಚಳಿಯಿಂದ ನಿದ್ದೆ ಬಾರದೆ ನಡುರಾತ್ರಿ ಎದ್ದರು. ಮೈ ಕಂಪಿಸುತ್ತಿತ್ತು. ಜಾಗರೂಕ ಮನೂ ಕೂಡಲೆ ಎದ್ದಳು. ಬಿಸಿನೀರಿನ ಬಾಟ್ಲಿ ಏನೋ ಇತ್ತು. ಅದಕ್ಕೆ ಬಿಸಿನೀರು ತುಂಬಬೇಕಲ್ಲ. ನೀರು ಕಾಯಿಸಲು ಉರುವಲು ಬೇಕು. ಎಲ್ಲಿಂದ ತರುವುದು, ಹೊರಗೆ ಹೋಗಲು ಗಾಢಾಂಧಕಾರ. ಅಪರಿಚಿತ ಸ್ಥಳ. ಸಹಾಯಕ್ಕೆ ಬರಲು ಸಮೀಪದಲ್ಲಿ ಯಾರೂ ಇಲ್ಲ. ಇದ್ದಬದ್ದ ಬಟ್ಟೆಗಳನ್ನು ಅವರ ಮೇಲೆ ಹೊದಿಸಿದಳು. ಆದರೂ ನಡುಕ ನಿಲ್ಲಲಿಲ್ಲ. ಪಾದಗಳು ತಣ್ಣಗಾಗಿದ್ದುವು. ಉಪಾಯಕಾಣದೆ ಅವರ ಕೈಕಾಲು ತೀಡತೊಡಗಿದಳು. ಸೆಟೆದುಕೊಂಡಿದ್ದ ಪಾದಗಳು ಸ್ವಲ್ಪ ಬೆಚ್ಚಗಾದುವು. ತೀಡುತ್ತ ತೀಡುತ್ತ ನಿದ್ರಾಪರವಶದಿಂದಲೂ ಆಯಾಸದಿಂದಲೂ ತಾತನ ಮೇಲೆಯೇ ಬಿದ್ದುಕೊಂಡಳು. ನಿದ್ರಾದೇವಿಯ ಕೃಪೆಯಿಂದ ಇಬ್ಬರೂ ನಿದ್ರಾಪರವಶರಾದರು. ಕಣ್ಣು ತೆರೆದು ಎಚ್ಚೆತ್ತಾಗ ಪ್ರಾರ್ಥನೆಯ ವೇಳೆ ಆಗಿತ್ತು. ಹಿಂದೂ-ಮುಸ್ಲಿಂ ಮೈತ್ರಿಗಾಗಿ, ಶಾಂತಿ ಸ್ಥಾಪನೆಗಾಗಿ ಭಾರತದ ಅನಭಿಷಕ್ತ ಚಕ್ರವರ್ತಿ

ಬಾಪು ಪಡುತ್ತಿದ್ದ ಪಾಡಿದು. ಯಾರದೋ ಪಾಪದ ಪ್ರಾಯಶ್ಚಿತ್ತ ಸ್ವಯಂ ತಾವೇ ಮಾಡಿ ಕೊಳ್ಳುತ್ತಿದ್ದರು.

ಚಾಂದೀಪುರದಿಂದ ದೇವೀಪುರಕ್ಕೆ ಬಂದರು. ಒಳ್ಳೆಯವನೆಂದು ಹೆಸರುಗಳಿಸಿದ್ದ ಪೀರ್‌ಸಾಹೇಬ ಇವರ ಸಂದರ್ಶನಕ್ಕೆ ಬಂದ. ಅನೇಕ ಹಿಂದೂಗಳನ್ನು ಇವನು ಇಸ್ಲಾಂ ಮತಕ್ಕೆ ಸೇರಿಸಿಕೊಂಡಿದ್ದ. ಅವರ ಹಿತಕ್ಕಾಗಿಯೇ ಹೀಗೆ ಮಾಡಿದೆ ಎಂದು ವಾದಿಸಿದ. ಇಸ್ಲಾಂ ಸ್ವೀಕರಿಸದಿದ್ದರೆ ಅವರು ಪ್ರಾಣ ಕಳೆದುಕೊಳ್ಳು ತ್ತಿದ್ದರು. ಬುದ್ಧಿಹೀನ ವಿಧರ್ಮಿಗಳು ಇಸ್ಲಾಂ ಸ್ವೀಕರಿಸದೆ ಪ್ರಾಣ ಕಳೆದು ಕೊಂಡರು. ಅನೇಕರ ಪ್ರಾಣ ಈ ರೀತಿಯಲ್ಲಿ ಉಳಿಸಿದೆನೆಂಬ ಹೆಮ್ಮೆ ಇವನಿಗೆ. "ಧರ್ಮ ತ್ಯಜಿಸಿ ಪ್ರಾಣ ಉಳಿಸಿಕೊಂಡುದು ಲೇಸೇ. ಪ್ರಾಣ ಹೋದರೂ ಹೋಗಲಿ, ಧರ್ಮ ತ್ಯಜಿಸುವುದು ಸರಿಯಲ್ಲವೆಂದು ನೀನು ಹಿಂದೂಗಳಿಗೆ ಬೋಧಿಸುವುದು ಯುಕ್ತವಾಗುತ್ತಿರಲಿಲ್ಲವೇ" ಎಂದು ಪೀರನನ್ನು ಕೇಳಿದರು. "ಸುಳ್ಳಾದರೂ ಆಡಿ ಜೀವ ಉಳಿಸಿಕೊಳ್ಳುವುದೇ ಬುದ್ಧಿವಂತಿಕೆ ಎಂದು ಮರುತ್ತರ ಕೊಟ್ಟ" ಜಾಣ ಪೀರ್ ಸಾಹೇಬ. ಪರಮಾತ್ಮನನ್ನು ಎಂದಾದರೂ ಸಂದರ್ಶಿಸಿದರೆ, ಇಂಥವನನ್ನು ಧರ್ಮ ಗುರು ಪೀರ್ ಆಗಿ ಮಾಡಿರುವೆಯಲ್ಲ, ಇದು ನಿನಗೆ ತರವೇ ಎಂದು ಕೇಳುವೆ. ಹೀಗೆ ಹೇಳಿದರು ಗಾಂಧೀಜೀ. ಸ್ವಧರ್ಮೇ ನಿಧನಂ ಶ್ರೇಯಃ। ಪರಧರ್ಮೋ ಭಯಾವಹಃ॥ ಹೀಗೆ ಹೇಳುತ್ತದೆ ಭಗವದ್ಗೀತೆ. ಸ್ವಧರ್ಮ ತ್ಯಜಿಸಿ, ಪರಧರ್ಮ ಸ್ವೀಕರಿಸಲು ಗಾಂಧಿಯವರ ಆತಂಕವಿಲ್ಲ. ಮೊದಲು ಅರಿಯಬೇಕು ತನ್ನ ಧರ್ಮ. ಎಲ್ಲ ಧರ್ಮಗಳೂ ಶ್ರೇಷ್ಠ. ತನ್ನ ಮತ್ತು ಪರಧರ್ಮದ ಗಾಢ ಅಭ್ಯಾಸ ಮಾಡಿ, ತನ್ನ ಧರ್ಮಕ್ಕಿಂತ ಪರಧರ್ಮ ಶ್ರೇಷ್ಠವೆಂದು ಖಂಡಿತ ಮಾಡಿಕೊಂಡು ಪರಧರ್ಮ ಸ್ವೀಕರಿಸುವುದರಲ್ಲಿ ದೋಷವಿಲ್ಲ. ಆದರೆ ಆಶೆ ಆಮಿಷಗಳಿಗೆ ಬಲಿಯಾಗಿ ಪರಮ ಧರ್ಮ ಸ್ವೀಕರಿಸುವುದು ಹೀನ. ಸಾಮೂಹಿಕ ಮತ ಪ್ರವರ್ತನೆ ಗಾಂಧೀಜಿ ಎಂದಿಗೂ ಒಪ್ಪರು. ಗಾಂಧಿಯವರನ್ನು ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಪರಿವರ್ತಿಸಲು ಪ್ರಯತ್ನಗಳು ನಡೆದುವು. ಇವರು ಏಸುಸ್ವಾಮಿಯ ನಿಜ ಅನುಯಾಯಿ ಎಂದು ಕಿರಿಸ್ತಾನರು ಮೆಚ್ಚಿಕೊಂಡಿರುವರು. ಇವರ ಮಗ ಕುಡುಕ ಹೀರಾಲಾಲ್ ಮುಹಮ್ಮದೀಯನಾದ. ಕಸ್ತೂರಿಬಾ ತುಂಬ ನೊಂದುಕೊಂಡರು. ಆಸೆ ಆಮಿಷಗಳಿಗೆ ತಲೆಬಾಗಿ, ಬಲಿಯಾಗಿ ಹೀರಾಲಾಲ್ ಇಸ್ಲಾಂ ಸ್ವೀಕರಿಸಿದ. ಮನಃಪೂರ್ವಕ ಇಸ್ಲಾಂ ಧರ್ಮ ಸ್ವೀಕರಿಸಿದ್ದರೆ ತನ್ನ ಆಕ್ಷೇಪಣೆ ಇರುತ್ತಿರಲಿಲ್ಲ, ಹೀಗೆ ಹೇಳಿರುತ್ತಾರೆ ಗಾಂಧೀಜಿ.

ಧರ್ಮ ಶ್ರೇಷ್ಠವೋ ಪ್ರಾಣ ಶ್ರೇಷ್ಠವೋ ಎಂದು ಹೇಳುವುದು ಸುಲಭವಾಗಿ ಬಿಡಿಸಲಾಗದ ಪ್ರಶ್ನೆ. ಸಾಕ್ರಟೀಸ್, ಮಹಾವೀರ, ಹರಿಶ್ಚಂದ್ರ, ಗೌತಮಬುದ್ಧ,

ಏಸುಕ್ರಿಸ್ತ, ಮಹಾತ್ಮಗಾಂಧಿ ಮೊದಲಾದ ಪುರುಷೋತ್ತಮರಿಗೆ, ಆ ಶ್ರೇಷ್ಠ ಗುಣಗಳಾದ ನ್ಯಾಯ, ನೀತಿ, ಸತ್ಯ, ಧರ್ಮ ಮೊದಲಾದುವು ಪ್ರಾಣಕ್ಕಿಂತ ಶ್ರೇಷ್ಠ. ಈ ಪುರುಷ ಶ್ರೇಷ್ಠರು ಈ ಶ್ರೇಷ್ಠ ಗುಣಗಳಿಗಾಗಿ ನಗುನಗುತ್ತಾ ಪ್ರಾಣ ಅರ್ಪಿಸಿದರು. ಸಾಮಾನ್ಯರೆನಿಸಿಕೊಂಡ ಎಷ್ಟೋ ದೊಡ್ಡವರು ಧ್ಯೇಯಕ್ಕಾಗಿ ಮನೆ. ಮಠ, ಮಡದಿ, ಮಕ್ಕಳು, ಆಸ್ತಿಪಾಸ್ತಿ ತೊರೆದಿರುವ ನಿದರ್ಶನಗಳಿಗೆ ಕೊರತೆಯಿಲ್ಲ. ದೇಶಭಕ್ತಿ, ದೈವಭಕ್ತಿ, ಪ್ರಾಣ ಅರ್ಪಿಸುವಂತೆ ಎಷ್ಟು ಜನರನ್ನು ಪ್ರೇರೇಪಿಸಿರುವುದಿಲ್ಲ.

ಲೋಕಸುಂದರಿ ಪದ್ಮಿನಿಯನ್ನು ಅಪಹರಿಸಿ ತನ್ನ ವಶಕ್ಕೆ ತೆಗೆದುಕೊಳ್ಳಲು ಅಲ್ಲಾವುದ್ದೀನ್ ಖಿಲ್ಜಿ ರಾಜಸ್ತಾನದ ಚಿತ್ತೂರಿಗೆ ಮುತ್ತಿಗೆ ಹಾಕಿದ. ನಗರ ಉಳಿಸಲು, ರಾಣಿಯ ಮಾನ ಸಂರಕ್ಷಿಸಲು, ರಜಪೂತರು ವೀರಾವೇಶದಿಂದ ಹೋರಾಡಿದರು. ಖಿಲ್ಜಿಯ ಸೇನೆ ಕೋಟೆ ಭೇದಿಸಿ ಊರಿನೊಳಕ್ಕೆ ಪ್ರವೇಶಿಸದಂತೆ ತಡೆಯಲು ಸಾಧ್ಯವಾಗದೆ ಹೋಯಿತು. ಆಗ ರಾಣಿ ಪದ್ಮಿನಿ ಮತ್ತು ಅನೇಕ ಮಾನಿನಿಯರು ದೊಡ್ಡ ಚಿತೆ ಹೊತ್ತಿಸಿ ಧಗ ಧಗಿಸುತ್ತಿದ್ದ ಚಿತೆಗೆ ಹಾರಿ ಅಗ್ನಿದೇವನಿಗೆ ಪ್ರಾಣಾರ್ಪಣೆ ಮಾಡಿದರು. ಊರಿನಲ್ಲಿದ್ದ ಮಿಕ್ಕ ರಜಪೂತರು ಕತ್ತಿ ಹಿಡಿದು ಕೋಟೆ ಪ್ರವೇಶಿಸುತ್ತಿದ್ದ ಅಲ್ಲಾವುದ್ದೀನನ ಸೇನೆಯ ಮೇಲೆ ಬಿದ್ದು ಪ್ರಾಣ ಕಳೆದುಕೊಂಡರು. ಒಬ್ಬ ಸ್ತ್ರೀಯ ಸಲುವಾಗಿ ಇಷ್ಟು ಜನ ಪ್ರಾಣ ಕಳೆದುಕೊಳ್ಳಲೇಕೆ ಎಂದು ಪದ್ಮಿನಿಯನ್ನು ಅಲ್ಲಾವುದ್ದೀನನಿಗೆ ಒಪ್ಪಿಸಿ ಪ್ರಾಣ ಮತ್ತು ಚಿತ್ತೂರನ್ನು ಉಳಿಸಬಹುದಾಗಿತ್ತು. ಆದರೆ ವೀರ ರಜಪೂತರು ಪ್ರಾಣ ಉಳಿಸಿಕೊಳ್ಳಲು ಈ ಉಪಾಯದ ಮಾರ್ಗ ಅನುಸರಿಸಲಿಲ್ಲ. ಇಂಥಾ ಅಪೂರ್ವ ನಿದರ್ಶನ ಇತಿಹಾಸದಲ್ಲಿ ಬೇರೊಂದು ಸಿಗದು.

ಇದೇ ರೀತಿಯಲ್ಲಿ ಚಿತ್ತೂರಿನ ರಾಣಾಸಂಘನ ರಾಣಿ ಕರುಣಾವತಿ ರಾಜ್ಯ ನಾಳುತ್ತಿದ್ದಾಗ ಬಹದ್ದೂರ್ ಷಾ ನಗರಕ್ಕೆ ಮುತ್ತಿಗೆ ಹಾಕಿದ. ಕೋಟೆಯನ್ನು ರಕ್ಷಿಸಲು ಸಾಧ್ಯವಾಗದು. ಆದ್ದರಿಂದ ಶರಣಾಗುವಂತೆ ಆಸ್ಥಾನದವರು ಸಲಹೆ ನೀಡಿದರು. ರಾಣಿ ಕರುಣಾವತಿ ಸಮ್ಮತಿಸಲಿಲ್ಲ. ಪ್ರತಿಯಾಗಿ ಚಕ್ರವರ್ತಿ ಹುಮಾಯೂನನಿಗೆ ತನಗೆ ರಕ್ಷಣೆ ನೀಡುವಂತೆ ಭ್ರಾತೃಭಾವ ಸೂಚಕವಾದ 'ರಾಖಿ' ಕಳುಹಿಸಿದಳು. ಹುಮಾಯೂನನ ಸೇನೆ ಆಗ ಬಂಗಾಳದ ಯುದ್ಧದಲ್ಲಿ ತೊಡಗಿತ್ತು. ಆದ್ದರಿಂದ ಕೂಡಲೇ ಚಿತ್ತೂರಿಗೆ ಧಾವಿಸಲು ಹುಮಯೂನನಿಗೆ ಸಾಧ್ಯವಾಗಲಿಲ್ಲ. ಚಿತ್ತೂರಿನ ಭದ್ರಕೋಟೆ ಬಹದ್ದೂರ್‌ಷಹನ ಸೇನೆಯ ವಶವಾಗಲಿದೆ ಎಂಬ ಸುದ್ದಿ ಮುಟ್ಟುತ್ತಲೇ ರಾಣಿ ಕರುಣಾವತಿ ಇತರ ರಾಣಿವಾಸದ ಸ್ತ್ರೀಯರೊಡನೆ ಚಿತೆಗೆ ಧುಮಿಕಿ 'ಜೊಹಾರ್' ಅನುಸರಿಸಿ ಪ್ರಾಣ ನೀಗಿದಳು.

ಪ್ರಾಣಹೋದ ತನ್ನ ಪತಿಯೊಡನೆ, ಅದೇ ಚಿತೆಯಲ್ಲಿ ಸಜೀವ ಸುಟ್ಟು ಕೊಳ್ಳುವ ಸತಿ ಪದ್ಧತಿ—ಅನಾಗರೀಕ ಕ್ರೂರ ಪದ್ಧತಿ ಎಂದು ಸಮಾಜದ ದೃಷ್ಟಿಯಲ್ಲಿ

ನ್ಯಾಯಬಾಹಿರವಾಗಿದೆ. ಆದರೆ ಒಂದು ಕಾಲದಲ್ಲಿ ಪತಿಯೊಡನೆ ಸಹಗಮನ ಮಾಡಿಕೊಳ್ಳುವುದು ಉನ್ನತ ಮಟ್ಟದ ಧಾರ್ಮಿಕ ಪದ್ಧತಿ ಎನಿಸಿಕೊಂಡಿತ್ತು. ಬಂಗಾಳದಲ್ಲಿ, ಅಲ್ಲದೆ ವಿಶೇಷವಾಗಿ ರಜಪೂತರಲ್ಲಿ, ಈ ಪದ್ಧತಿ ಆಚರಣೆಯಲ್ಲಿತ್ತು. ತಮ್ಮ ಪತಿದೇವನೊಡನೆ ಪ್ರಾಣ ಕಳೆದುಕೊಂಡು ಸದ್ಗತಿ ಪಡೆದ ವೀರ ಸತಿಯರ ಪಟ್ಟಿ ಈಗ ಲಭ್ಯವಿಲ್ಲ. ಕೆಲವು ಉನ್ನತ ಶ್ರೇಣಿಯ ಚರಿತ್ರಾರ್ಹ ಘಟನೆಗಳು ದೊರೆಯುತ್ತವೆ. ಕರ್ನಾಟಕದಲ್ಲಿಯೂ ಇಂಥ ಕೆಲವು ಘಟನೆಗಳು ನಡೆದಿವೆ. ಮಹಾರಾಣಾ ಪ್ರತಾಪಸಿಂಹ ಮೃತನಾದಾಗ ಅವನ ಅನೇಕ ಪತ್ನಿಯರು ಸಹಗಮನ ಆಚರಿಸಿದರು. ರಾಜಸಿಂಹ, ಜಸವಂತ ಸಿಂಹ ಇವರ ಪತ್ನಿಯರು ತಮ್ಮ ಆಭರಣಗಳನ್ನು ದಾನ ಮಾಡಿ, ಹಳದಿ ಸೀರೆ ಉಟ್ಟು ಚಿತೆಯಲ್ಲಿ ಬಿದ್ದು ದೇಹತ್ಯಾಗ ಮಾಡಿದವರಲ್ಲಿ ಹಲವರು. ಜಯಪುರದಿಂದ 170 ಕಿ.ಮೀ.ದೂರದ ಜುನ್ ಜುನ್ ಎಂಬ ಪವಿತ್ರ ಪ್ರದೇಶದಲ್ಲಿ ರಾಣಿ ಸತಿ ದೇವಾಲಯವಿದೆ. ಜುನ್ ಜುನ್ ದಿವಾನನ ಬಳಿ ಇದ್ದ ಸೊಗಸಾದ ಅಶ್ವ ಕದಿಯುವ ಪ್ರಯತ್ನದಲ್ಲಿ ಹಿಸ್ಸಾರಿನ ನವಾಬನ ಮಗ ಮೃತನಾದ. ಇದಕ್ಕೆ ಪ್ರತೀಕಾರವಾಗಿ ದಿವಾನನ ಮಗನನ್ನು ಹಿಸ್ಸಾರಿನ ನವಾಬ ಕೊಲೆ ಮಾಡಿಸಿದ. ದಿವಾನನ ಸೊಸೆ ನಾರಾಯಣ ದೇವಿ, ಪತಿಯ ಚಿತೆಯೊಡನೆ ಭಸ್ಮವಾದಳು. ಇದು ನಡೆದುದು ಸುಮಾರು ಆರು ಶತಮಾನಗಳ ಹಿಂದೆ. ನಾರಾಯಣ ದೇವಿಯ ತರುವಾಯ, ಕಾಲಾಂತರದಲ್ಲಿ ಇನ್ನೂ ಹನ್ನೆರಡು ವೀರ ರಮಣಿಯರು ವೈಧವ್ಯದ ಬಾಳಿಗಿಂತ ಮರಣವೇ ಲೇಸೆಂದು ಇದೇ ಪುಣ್ಯ ಭೂಮಿಯಲ್ಲಿ ಸತಿ ಆಚರಿಸಿ ಆತ್ಮಾರ್ಪಣೆ ಮಾಡಿಕೊಂಡರು. ಜುನ್ ಜುನ್ ಬಳಿ ಹದಿಮೂರು ವೀರಸತಿಯರ ಸ್ಮಾರಕವಾಗಿ ಹದಿಮೂರು ಗೋಪುರಗಳ ಮಂಟಪವಿದೆ. ಇಲ್ಲಿ ನಾರಾಯಣ ದೇವಿ ಮತ್ತು ಇತರ ಹನ್ನೆರಡು ಸತಿಯರ ಚಿತಾ ಭಸ್ಮ ಕರಂಡವಿದೆ. ಇದು ಪುನೀತ ದೇಗುಲವೆಂದು ಚರಿತ್ರಾರ್ಹ ಯಾತ್ರಾಸ್ಥಳವಾಗಿದೆ. ನಾರಾಯಣ ದೇವಿ, ರಾಣಿ ಸತಿ ಎಂದು ಪ್ರಸಿದ್ಧಳಾದಳು.

ದೊಡ್ಡವರಿಗೆ ಧ್ಯೇಯವೇ ದೊಡ್ಡದು.
ಪ್ರಾಣಕ್ಕಿಂತ ಮಾನ, ಧರ್ಮ ಶ್ರೇಷ್ಠ.

ಹಾಸ್ಯ ಪ್ರವೃತ್ತಿ

ಗಾಂಧೀಜಿ ಒಂದು ಪತ್ರ ಬರೆಸುತ್ತಿದ್ದರು. ಹಟಾತ್ತನೆ ಹೇಳಿ ಬರೆಸುತ್ತಿದ್ದುದನ್ನು ನಿಲ್ಲಿಸಿ, "ನನಗಿಂತ ನೀವು ದೊಡ್ಡವರೆಂದು ಭಾರತ ಸರ್ಕಾರದ ಅಭಿಪ್ರಾಯವೆಂದು ಕಾಣುತ್ತೆ," ಎಂದರು. ನನಗೆ ಅರ್ಥವಾಗಲಿಲ್ಲ. ನಾನು ಕಕ್ಕಾಬಿಕ್ಕಿ ಆದೆ.

ಗಾಂಧೀಜಿ—"ಇದೇಕೆ ಹೀಗೆ ಗಾಬರಿಯಾಗುತ್ತಿದ್ದೀರಿ".

ಶಾಸ್ತ್ರಿ—"ನಿಮ್ಮ ಮನಸ್ಸಿನಲ್ಲಿರುವುದೇನೋ ನನಗೆ ಅರ್ಥವಾಗುತ್ತಿಲ್ಲ. ನನ್ನನ್ನು ಪರಿಹಾಸ್ಯ ಮಾಡುತ್ತಿರುವಂತಿದೆ. ನನಗೆ ಏನೂ ಅರಿವಾಗುತ್ತಿಲ್ಲ."

ಗಾಂಧೀಜಿ—"ಇಲ್ಲ ನಾನು ಹಾಸ್ಯ ಮಾಡುತ್ತಿಲ್ಲ. ನಾನು ಯಥಾರ್ಥ ಮಾತನಾಡುತ್ತಿರುವೆ. ನಿಮಗೆ ಅರ್ಥವಾಗುತ್ತಿಲ್ಲವೇ. ನಾನು ಯರವಾಡ ಜೈಲು ಪ್ರವೇಶಿಸಬೇಕಾದರೆ, ಪ್ರತಿಸಾರಿಯೂ ಯಾವುದಾದರೂ ಶಾಸನಭಂಗ ಮಾಡಬೇಕು. ಇಲ್ಲವಾದರೆ ಒಳಕ್ಕೆ ಬಿಡುವುದಿಲ್ಲ. ನೀವು ಯಾವ ಅಪರಾಧವನ್ನೂ ಎಸಗಿಲ್ಲ. ಕಾಯಿದೆ ಮುರಿದಿಲ್ಲ. ಆದರೂ ನಿಮ್ಮನ್ನು ಒಳಕ್ಕೂ ಹೊರಕ್ಕೂ ಯಾವ ಅಡ್ಡಿ ಆತಂಕವೂ ಇಲ್ಲದೆ ಬಿಡುತ್ತಾರೆ. ಇದರಿಂದಲೇ ನೀವು ದೊಡ್ಡವರೆಂದು ಸರ್ಕಾರ ಭಾವಿಸುತ್ತದೆ. ಅರ್ಥವಾಯಿತಷ್ಟೆ?"

ಇಬ್ಬರೂ ಮನಸಾರೆ ನಕ್ಕರು. ಬಾಪೂಜಿ ಪರ್ಣಕುಟಿಯಲ್ಲಿದ್ದರು. ಅಯ್ಯರ್ ಪ್ರತಿನಿತ್ಯವೂ ಸೈಕಲ್ ಸವಾರಿ ಮಾಡಿಕೊಂಡು ಪರ್ಣಕುಟಿಗೆ ಹೋಗಿಬರುತ್ತಿದ್ದರು.

ಒಂದು ದಿನ ಗಾಂಧೀಜಿ ಕೇಳಿದರು. ನೀವು ಎಲ್ಲಿ ಉಳಿದಿರುವಿರಿ, ಎಲ್ಲಿ ಊಟ ಮಾಡುತ್ತೀರಿ ?

"ನಾನು ಸರ್ವೆಂಟ್ಸ್ ಅಫ್ ಇಂಡಿಯಾ" ಸಂಘದ ಕಟ್ಟಡದಲ್ಲಿರುವೆ. ಅಲ್ಲಿಯೇ ಊಟ, ಸೈಕಲ್ ಬಾಡಿಗೆಗೆ ಪಡೆದು ಬಂದು ಹೋಗುತ್ತಿರುವೆ.

ಗಾಂಧೀಜಿ ಶ್ರೀಮತಿ ಥ್ಯಾಕರ್ಸ್ ಅವರಿಗೆ ಪತ್ರಬರೆದು ಶ್ರೀಯುತ ಅಯ್ಯರ್‌ರವರು ಪರ್ಣಕುಟಿಯಲ್ಲೇ ಉಳಿಯುವ ಅವಕಾಶ ಕಲ್ಪಿಸಿ ಕೊಡುವಂತೆ ಸೂಚಿಸಿದರು.

ಮೂರನೆಯ ದಿನವೇ ಅಯ್ಯರ್ ಅವರಿಗೆ ಪರ್ಣಕುಟಿಯಲ್ಲಿ ಉಳಿಯುವ ವ್ಯವಸ್ಥೆ ಮಾಡಿಕೊಡಲಾಯಿತು.

ಯರವಾಡ ಜೈಲಿನ ಒಳಕ್ಕೆ ಬಂದು ಹೋಗುವ ಏರ್ಪಾಟು ಮಾಡಿಕೊಟ್ಟದ್ದ ವರೂ ಗಾಂಧಿಯವರೇ. ಪರಿಹಾಸ್ಯಕ್ಕಾಗಿ ಮೇಲಿನಂತೆ ಮಾತನಾಡಿದರು.

ಪ್ರಶ್ನೆ—"ನೀವು ನಮಗೆ ಭಗವದ್ಗೀತೆ ಕುರಿತು ಆಗಾಗ ಹೇಳುತ್ತಿರುತ್ತೀರಿ. ಅರ್ಜುನ ಕೇಳುವುದು ಒಂದು ಪ್ರಶ್ನೆ. ಅದಕ್ಕೆ ಶ್ರೀಕೃಷ್ಣ ದೀರ್ಘ ಉತ್ತರ ಕೊಡುತ್ತಾನೆ. ನಾವು ಅನೇಕ ಪ್ರಶ್ನೆ ಕೇಳಿದರೂ, ಒಂದೆರಡು ಮಾತುಗಳಲ್ಲಿ ಉತ್ತರ ಕೊಡುತ್ತೀರಲ್ಲ ಏಕೆ? ಇದು ಸರಿಯೇ?

ಗಾಂಧೀಜಿ—"ಮಗು, ಭಗವಾನ್ ಕೃಷ್ಣನಿಗೆ ಪ್ರಶ್ನೆ ಕೇಳಿದವನು ಒಬ್ಬನೇ ಅರ್ಜುನ. ಅದಕ್ಕೆ ವಿಸ್ತಾರವಾಗಿ ಉತ್ತರ ಕೊಡಲು ಸಾಧ್ಯವಿತ್ತು. ಆದರೆ, ನನ್ನ ಅರ್ಜುನರ ಸಂಖ್ಯೆ ಅಪಾರ. ಅವರ ಪ್ರಶ್ನೆಗಳೋ ಬುಟ್ಟಿ ತುಂಬುವಷ್ಟು. ಅವುಗಳಿಗೆಲ್ಲಾ ದೀರ್ಘ ಉತ್ತರ ನಾನು ಹೇಗೆ ಕೊಡಲಿ, ವೇಳೆ ಎಲ್ಲಿದೆ. ನೀವೆಲ್ಲ ನನಗೆ ದಯೆ ತೋರಿಸಬೇಕಲ್ಲವೇ?"

ಎಲ್ಲ ಅರ್ಜುನರೂ ನಗತೊಡಗಿದರು.

ಗಾಂಧೀಜಿ ಸೆರೆಮನೆಯಲ್ಲಿದ್ದರು. ಅವರ ಆರೋಗ್ಯ ತುಂಬಾ ಕೆಟ್ಟಿತ್ತು. ಆಗ ಚಿಕಿತ್ಸೆಗಾಗಿ ಅವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದರು. ಅವರ ಮಿತ್ರರು 'ಹೋಮಿಯೋಪತಿ' ವೈದ್ಯರೊಬ್ಬರನ್ನು ಕರೆದು ತಂದರು. ಗಾಂಧಿಯವರ ಕೋಣೆಯಲ್ಲಿ ಸ್ವಲ್ಪ ಬೆಲ್ಲವಿತ್ತು, ಅದನ್ನು ನೋಡಿ ವೈದ್ಯ ಕೇಳಿದ. "ಬಾಪೂಜಿ" ನಿಮಗೆ ಪ್ರಿಯ ಯಾವುದು? ಸಿಹಿಯೋ ಖಾರವೋ? ನಿಮಗೆ ಸಿಹಿ ಇಷ್ಟವೆಂದು ತೋರುತ್ತದೆ.

ಬಾಪೂಜಿ—"ನನ್ನ ಹಲ್ಲಿಗೆ ಸಿಹಿ ಇಷ್ಟ. ನನ್ನ ನಾಲಿಗೆಗೆ ಖಾರ ತುಂಬ ಪ್ರಿಯ."

ಈ ಚಮತ್ಕಾರದ ಉತ್ತರದಿಂದ ವೈದ್ಯರು ಅವಾಕ್ಕಾದರು. ತನ್ನ ಸಂತೋಷ ವ್ಯಕ್ತಪಡಿಸಲು ಹೇಳಿದರು.—"ತಾವು ಹೇಳಿದ್ದು ಸರಿಯೇ. ಮೊದಲು ಸಿಹಿ ತಿನ್ನಬೇಕು. ಆಮೇಲೆ ಖಾರ. ಸಿಹಿ ಒಂದನ್ನೇ ತಿನ್ನಲಾಗುವುದಿಲ್ಲ. ಖಾರವೂ ಬೇಕು."

ಬಾಪೂಜಿ ಸುಮ್ಮನಿರಬೇಕಲ್ಲ. "ಬ್ರಾಹ್ಮಣರು ಉಂಡೆ ತಿನ್ನುವುದನ್ನು ನೀವು ನೋಡಿಲ್ಲವೇ" ಎಂದು ನಕ್ಕರು.

ಖಾರವಿಲ್ಲದೆ, ಕೇವಲ ಸಿಹಿ ಮಾತ್ರ ತಿನ್ನುವವರಿದ್ದಾರೆ ಎಂದು ವೈದ್ಯರು ಅರ್ಥ ಮಾಡಿಕೊಂಡರು.

ಗಾಂಧಿಯವರ ದೇಹಸ್ಥಿತಿ ಪರೀಕ್ಷಿಸುತ್ತ, "ಬಾಪೂಜಿ, ನನ್ನಲ್ಲಿ ಒಬ್ಬ ಹುಡುಗಿ ಕೆಲಸ ಕಲಿಯುತ್ತಿದ್ದಾಳೆ. ತುಂಬ ಸೌಂದರ್ಯವತಿ, ಗುಜರಾತಿ ಹುಡುಗಿ. ಅವಳಿಗೆ ತಮ್ಮನ್ನು ಕಾಣಬೇಕೆಂಬ ಆಸೆ ಉತ್ಕಟವಾಗಿದೆ: ಕರೆದು ತರಲೇ'' ಎಂದು ಕೇಳಿದ. ಆ ವೈದ್ಯ.

ಗಾಂಧೀಜಿ—"ಎಲ್ಲ ಗುಜರಾತಿ ಹುಡುಗಿಯರೂ ಸುಂದರವಾಗಿರುತ್ತಾರೆ. ಎಲ್ಲ ಹುಡುಗಿಯರೂ ರೂಪವತಿಯರೇ, ಅಲ್ಲವೇ ?"

ವೈದ್ಯ—"ಈ ಗುಜರಾತಿ ಹುಡುಗಿ ತುಂಬ ಚಲುವೆ."

ಗಾಂಧೀಜಿ—"ಹಾಗೋ, ಈ ಗುಜರಾತಿ ಹುಡುಗಿ ಚೆಲುವೆ ಎಂದು 'ಅವಳನ್ನು ಹಾರಿಸಿಕೊಂಡು ಹೋದೀರಿ, ಜೋಕೆ !"

ವೈದ್ಯರಿಗೆ ಈ ಮಾತು ಕೇಳಿ ತುಂಬ ವ್ಯಸನವಾಯಿತು. ತುಂಬ ಕಸಿವಿಸಿಯಾಗತೊಡಗಿತು. "ಬಾಪೂಜಿ" ನನಗೀಗ ಅರವತ್ತು ವರ್ಷ. ಈ ವಯಸ್ಸಿನಲ್ಲಿ ಚೆಲುವೆಯನ್ನು ಹಾರಿಸಿಕೊಂಡು ಹೋಗಲು ಸಾಧ್ಯವೇ ?"

ಗಾಂಧೀಜಿ—"ವೈದ್ಯರೇ, ಈ ಆಸೆಗೆ ಮಿತಿಯುಂಟೇ ? ನನಗೊಬ್ಬರ ಪರಿಚಯವಿತ್ತು. ಅವರಿಗೂ ಅರವತ್ತು ಮೀರಿತ್ತು. ಆದರೂ ಅವರು ಒಬ್ಬ ಫ್ರೆಂಚ್ ಹುಡುಗಿಯನ್ನು ಲಪಟಾಯಿಸಿಕೊಂಡು ಹೋದರು."

ಈ ಮಾತು ಕೇಳಿ ಅಲ್ಲಿದ್ದವರೆಲ್ಲ ನಗತೊಡಗಿದರು. ಆದರೆ ಪಾಪ, ಆ ವೈದ್ಯ ಮಾತ್ರ ಪೆಚ್ಚುಮೋರೆ ಹಾಕಿಕೊಂಡ. ಇದು ಬಾಪು ಗಮನಕ್ಕೆ ಬಾರದೆ ಹೋಗಲಿಲ್ಲ.

"ವೈದ್ಯರೇ, ತಪ್ಪು ತಿಳಿಯಬೇಡಿ. ನಿಮ್ಮನ್ನು ಕುರಿತು ಈ ಮಾತುಗಳನ್ನು ಆಡಲಿಲ್ಲ. ಪರಿಹಾಸ್ಯವಾಗಿ ಮಾತನಾಡಿದೆ. ಹಾಸ್ಯ, ನಗು ಕಾಯಿಲೆಗೆ ದಿವ್ಯೌಷಧ ಅಲ್ಲವೇ ?"

ವೈದ್ಯನಿಗೆ ಸಮಾಧಾನವಾಯಿತು. ಬಾಪೂಗೆ ಸಂತೋಷವಾಯಿತು. ಕಾಯಿಲೆ ಬೇಗನೆ ಇಳಿಮುಖವಾಯಿತು.

ದಕ್ಷಿಣ ಆಫ್ರಿಕದಲ್ಲಿದ್ದಾಗಲೇ, ಗಾಂಧೀಜಿ ವಿವಾಹಿತರಾಗಿ ಮಕ್ಕಳ ತಂದೆಯಾಗಿದ್ದರೂ, ಪತ್ನಿಯೊಡನೆ ಸಂಭೋಗಿಸುವುದಿಲ್ಲವೆಂಬ ಬ್ರಹ್ಮಚರ್ಯ ವ್ರತ ಸ್ವೀಕರಿಸಿದ್ದರು. ಎಪ್ಪತ್ತು ಮೀರಿದ ಮೇಲೂ ತಮ್ಮ ಇಬ್ಬರು ಮೊಮಕ್ಕಳನ್ನು ಎಡಬಲಗಳಲ್ಲಿ ಮಲಗಿಸಿಕೊಂಡು ಮನಸ್ಸು ವಿಕಾರವಾಗುತ್ತದೆಯೇ ಎಂಬ ಸತ್ಯಶೋಧನೆಯ ಪ್ರಯೋಗ ನಡೆಸುತ್ತಿದ್ದರು. "ಈ ವಯಸ್ಸಿನಲ್ಲೂ ಮುದುಕನಿಗೆ ಚಾಪಲ್ಯವೇ ?" ಎಂಬ ಕುತ್ಸಿತ ಮನೋಭಾವನೆಯಿಂದ ಪ್ರಶ್ನಿಸಿದವರೂ ಉಂಟು. ದೊಡ್ಡ ತತ್ತ್ವೋಪದೇಶ ಮಾಡುವ, ಮಹಾತ್ಮನೆನಿಸಿಕೊಳ್ಳುವ ಈ ವ್ಯಕ್ತಿಗೆ ಇನ್ನೂ ಚಾಪಲ್ಯ ತೀರಿಲ್ಲವೇ ಎಂದು ಗೇಲಿ ಮಾಡುವವರೂ ಇದ್ದರು. ಆದರೆ, ಇಬ್ಬರು ಹೆಣ್ಣುಮಕ್ಕಳೂ ಅವರ ಮೊಮ್ಮಕ್ಕಳು. ಮನಸ್ಸು ಚಂಚಲವಾಗುವುದೇ ಎಂದು ಪ್ರಯೋಗಾರ್ಥವಾಗಿಯೇ ಹೀಗೆ ಮಾಡುತ್ತಿರುವುದಾಗಿ ಅವರಿಗೆ ತಿಳಿಸಿಯೂ ಇದ್ದರು. ಕೃಪಲಾನಿಯವರಿಗೆ ಬರೆದು ತಿಳಿಸಿದ್ದರು. ಅವರ ಅಭಿಪ್ರಾಯ ಕೇಳಿದ್ದರು. ಗುಟ್ಟು, ಗೋಪ್ಯ ಏನೂ ಇರಲಿಲ್ಲ.

ರವೀಂದ್ರನಾಥ ಠಾಕೂರರು ಗಾಂಧಿಯವರನ್ನು ನೋಡಲು ಒಮ್ಮೆ ಸಾಬರಮತಿ ಆಶ್ರಮಕ್ಕೆ ಹೋದರು. ಗಾಂಧಿಯವರಿಗಿಂತ ರವೀಂದ್ರರು ಹತ್ತು ವರ್ಷ ಹಿರಿಯರು.

ರವೀಂದ್ರರು—ಬಾಪೂಜಿ, ನಿಮಗೆ ಅರವತ್ತು ವರ್ಷ ವಯಸ್ಸಾದರೆ ನನಗೆ ಎಪ್ಪತ್ತು ಎಂದರು.

ರವೀಂದ್ರರು ಇಳಿ ವಯಸ್ಸಿನಲ್ಲೂ ನಾಟಕದಲ್ಲಿ ಭಾಗವಹಿಸುತ್ತಿದ್ದುದನ್ನು ಗಮನದಲ್ಲಿಟ್ಟುಕೊಂಡು, ಗಾಂಧೀಜಿ ಹೇಳಿದರು, "ನಿಮಗೆ ಎಪ್ಪತ್ತಾದರೂ ನನಗಿಂತ ಚೆನ್ನಾಗಿ ಕುಣಿಯಬಲ್ಲಿರಿ."

ಗಾಂಧೀಜಿ ಶಾಂತಿನಿಕೇತನಕ್ಕೆ ಹೋಗಿದ್ದಾಗ ರವೀಂದ್ರರು ಅವರಿಗಾಗಿ ಕಲಾತ್ಮಕವಾಗಿ ಅಲಂಕೃತವಾದ ಪ್ರತ್ಯೇಕ ಕೊಠಡಿ ಸಿದ್ಧಗೊಳಿಸಿದ್ದರು. ಗಾಂಧೀಜಿ ಇದನ್ನು ಕಂಡು ಚಕಿತರಾದರು.

"ಇದೇನು ಅಲಂಕಾರ; ಹೊಸದಾಗಿ ಮದುವೆಯಾದ ಗಂಡನ್ನು ಹೆಣ್ಣಿನ ಕೋಣೆಗೆ ಕರೆದುಕೊಂಡು ಹೋಗುವಂತಿದೆಯಲ್ಲ."

ಠಾಕೂರರು—"ಬಾಪೂಜಿ, ನೀವು ಒಬ್ಬ ಕವಿಯ ಕೈಗೆ ಸಿಕ್ಕಿದ್ದೀರೆಂಬುದನ್ನು ಮರೆಯಬೇಡಿ."

ಗಾಂಧೀಜಿ—"ವಧುವೆಲ್ಲಿ, ತೋರಿಸಿ, ನೋಡಿಯೇ ಬಿಡೋಣ?" ಅಲ್ಲಿದ್ದ ಮಹಿಳೆಯರು ಈ ಮಾತು ಕೇಳಿ ನಕ್ಕರು. ಕವಿಯ ಭಾವನೆಗೆ ಕೊರತೆಯುಂಟೆ.

"ಚಿರ ಯುವತಿ ಶಾಂತಿನಿಕೇತನದ ದೇವಿಯೇ ನಿಮ್ಮನ್ನು ಸ್ವಾಗತಿಸುತ್ತಿದ್ದಾಳೆ."

ಗಾಂಧೀಜಿ—"ನಿಮ್ಮ ವಧು ಚಿರ ಯುವತಿ. ನಾ ನಾ ದ ರೋ ಹಲ್ಲಿಲ್ಲದ ಮುದುಕ. ಆಕೆ ನನ್ನನ್ನು ಕಣ್ಣೆತ್ತಿ ನೋಡಿಯಾಳೆ? ಅವಳಿಗೆ ಪ್ರೇಮ ಅಂಕುರಿಸೀತೆ?"

ಠಾಕೂರರು—"ಶಾಂತಿನಿಕೇತನದ ದೇವಿ ಸತ್ಯದ ಆರಾಧಕಳು; ಸತ್ಯಪ್ರೇಮಿ. ಅವಳದು ವಿಶಾಲ ಹೃದಯ."

ಗಾಂಧೀಜಿ—"ಹಾಗಾದರೆ, ಈ ಮುದುಕನಿಗೆ ಇನ್ನೂ ಮದುವೆಯಾಗುವ ಅವಕಾಶವಿದೆ, ಅಲ್ಲವೇ?"

ಅವರಿಬ್ಬರ ಉನ್ನತ ಮಟ್ಟದ ಹಾಸ್ಯ, ಅಲೆಅಲೆಯಾಗಿ ಪಸರಿಸಿ, ಸುತ್ತಲ ಜನರನ್ನು ನಗಿಸಿ, ದೂರದ ಬಯಲಲ್ಲಿ ಹಾದು ಹೋಯಿತು.

ಗಾಂಧೀಜಿ ಮಗನವಾಡಿ ಆಶ್ರಮದಲ್ಲಿ ವಾಸಿಸುತ್ತಿದ್ದರು. ಅಲ್ಲಿನ ಆಶ್ರಮ ವಾಸಿಗಳು ಮೇಲು ಕೀಳೆನ್ನದೆ ಎಲ್ಲ ಕೆಲಸಗಳನ್ನೂ ತಾವೇ ಮಾಡಿಕೊಳ್ಳಬೇಕಾಗಿತ್ತು. ಅಲ್ಲಿ ಆಳುಕಾಳು ಇರಲಿಲ್ಲ. ಕಸ ಗುಡಿಸುವುದು, ಬಡಿಸುವುದು, ನೀರೆತ್ತುವುದು, ತೋಟದ ಕೆಲಸ– ಎಲ್ಲವನ್ನೂ ಸರದಿಯಂತೆ ಎಲ್ಲರೂ ಮಾಡಬೇಕು.

ಒಮ್ಮೆ ಪಾತ್ರೆ ತಿಕ್ಕುವ ಕೆಲಸ ಗಾಂಧೀಜಿ ಮತ್ತು ಕುಮಾರಪ್ಪ ಇವರ ಪಾಲಿಗೆ ಬಂತು. ತೆಂಗಿನ ಜುಂಗು ಮತ್ತು ಬೂದಿ ತೆಗೆದುಕೊಂಡು ಪಾತ್ರೆ ತಿಕ್ಕಲು ಇಬ್ಬರೂ ಪ್ರಾರಂಭಿಸಿದರು. ಮೈ, ಮೋರೆ, ಬಟ್ಟೆ ಎಲ್ಲಕ್ಕೂ ಕಪ್ಪು ಮೆತ್ತಿಕೊಂಡಿತ್ತು. ನಗುತ್ತಾ, ಎಂದೂ ಮಾಡದ ಕೆಲಸ ಮಾಡುತ್ತಾ, ಮುಸುರೆ ಪಾತ್ರೆ ತಿಕ್ಕುತ್ತಿದ್ದಾಗ ಕಸ್ತೂರಿಬಾ ಅಲ್ಲಿಗೆ ಬಂದರು. ವಿಶ್ವವಿಖ್ಯಾತ ಪತಿ ಮುಸುರೆ ತಿಕ್ಕುತ್ತಿದ್ದುದನ್ನು ನೋಡಿ ಅವರ ಮನಸ್ಸಿಗೆ ತುಂಬ ಯಾತನೆ ಆಯಿತು. ದುಃಖ ತಡೆಯಲಾಗಲಿಲ್ಲ. ಸ್ವಲ್ಪ ಕೋಪವೂ ಕೂಡಿಕೊಂಡಿತು.

"ನಿಮಗೆ ಬೇರೆ ಉದ್ಯೋಗವಿಲ್ಲವೇ? ಇದು ಗಂಡಸರು ಮಾಡುವ ಕೆಲಸವೇ? ಸಾಕು" ಎಂದು ಕಸ್ತೂರಿ ಬಾ ರೇಗಿದರು.

ಗಾಂಧೀಜಿ ಏನೂ ಕಿವಿಗೆ ಬೀಳದಂತೆ ಪಾತ್ರೆ ತೀಡುವ ಕೆಲಸ ಮಾಡುತ್ತಲೇ ಇದ್ದರು. ಕಸ್ತೂರಿಬಾ ಅವರಿಗೆ ಈ ನೋಟ ನೋಡುತ್ತಿರಲು ಸಾಧ್ಯವಾಗಲಿಲ್ಲ. ಗಾಂಧಿಯವರ ಸಮೀಪಕ್ಕೆ ಬಂದು ಅವರ ಕೈಯಲ್ಲಿದ್ದ ಪಾತ್ರೆ ಕಿತ್ತುಕೊಂಡು "ಸಾಕು ಇಲ್ಲಿಂದ ಹೊರಡಿ, ನಿಮ್ಮ ಹುಡುಗಾಟ ನಿಲ್ಲಿಸಿ, ಕೈ ತೊಳೆದುಕೊಂಡು ಇಲ್ಲಿಂದ ಹೊರಡಿ" ಎಂದರು.

ಜುಂಗು ಮತ್ತು ಬೂದಿ ಹಿಡಿದು ಗಾಂಧೀಜಿ ಮಂಕು ಬಡಿದಂತೆ ಹಾಗೆಯೇ ನಿಂತುಬಿಟ್ಟರು. ಕುಮಾರಪ್ಪ ಈ ದೃಶ್ಯ ನೋಡಿ ನಗುತ್ತಿದ್ದರು.

ಗಾಂಧೀಜಿ—"ಅಯ್ಯ, ಕುಮಾರಪ್ಪ, ನೀನು ತುಂಬ ಪುಣ್ಯವಂತ. ನನಗಿರುವಂತೆ ಜಗಳವಾಡುವ ಹೆಂಡತಿ ನಿನಗಿಲ್ಲ. ಅದು ನಿನ್ನ ಭಾಗ್ಯ. ಹೆಂಡತಿಯ ಶ್ರಮ ಸ್ವಲ್ಪ ತಗ್ಗಿಸೋಣ ಎಂದರೆ, ಅದಕ್ಕೂ ನನ್ನ ಹೆಂಡತಿ ಅವಕಾಶ ಕೊಡಲೊಲ್ಲಳು. ಏನು ಮಾಡಲಿ, ಈ ಕೆಲಸ ಅವಳಿಗೆ ಒಪ್ಪಿಸಿ ಹೋಗಬೇಕಾಗಿದೆ."

ಕುಮಾರಪ್ಪ—"ಈ ಹಾಳು ಕೆಲಸ ಮಾಡಲು ನನಗೆ ಹೆಂಡತಿ ಇಲ್ಲವಲ್ಲಾ, ಎನಿಸುತ್ತಿದೆ ನನಗೆ. ನೀನೇ ಭಾಗ್ಯವಂತ."

"ಅದನ್ನು ನನಗೇ ಕೊಡಿ" ಎಂದರು ಕಸ್ತೂರಿಬಾ. ಚೆನ್ನಾಯಿತು ಎಂದು ಇಬ್ಬರೂ ಮುಸುರೆ ತಿಕ್ಕುವುದನ್ನು ಕಸ್ತೂರಿಬಾಗೆ ಒಪ್ಪಿಸಿ ಹೋದರು. ಆಶ್ರಮ ವಾಸಿಗಳು ನಡೆದ ಈ ವಿಷಯ ಕೇಳಿ ಹೊಟ್ಟೆ ಬಿರಿಯುವಂತೆ ನಕ್ಕರು.

ಫ್ರಾನ್ಸಿನ ಸುಪ್ರಸಿದ್ಧ ಕಲಾವಿದೆ ಕೆಬ್ರಾಲ್ ಗಾಂಧಿಯವರ ಭಾವಚಿತ್ರ ರೂಪಿಸಿದ್ದಳು. ಪ್ಯಾರಿಸ್ ವಿಶ್ವವಿದ್ಯಾಲಯದ ಪ್ರೊಫೆಸರ್ ಫಾಕನ್ ಬಾಪೂಜಿಗೆ ಈ ಚಿತ್ರವನ್ನು ಕಾಣಿಕೆಯಾಗಿ ಒಪ್ಪಿಸಲು ಭಾರತಕ್ಕೆ ಬಂದರು. ಅವರಿಗೆ ಪ್ರಸಿದ್ಧ ಕಲಾವಿದೆ ಬರೆದ ಚಿತ್ರ ತೋರಿಸಿದರು. ಕಿವಿಗಳು ತುಂಬ ಉದ್ದವಾಗಿ ಕಾಣಿಸುತ್ತವೆ ಎಂದರು ಗಾಂಧೀಜಿ. "ನಿಮ್ಮ ಕಿವಿಗಳು ಸ್ವಲ್ಪ ಉದ್ದವಾಗಿಯೇ ಇವೆ", ಎಂದರು ಆಚಾರ್ಯ ಫಾಕನ್.

"ಕತ್ತೆಕಿವಿಯಂತೆ ಇದ್ದರೂ ಇರಬಹುದು. ಕನ್ನಡಿಯಲ್ಲಿ ಮೋರೆ ನೋಡಿಕೊಂಡರೆ ತಾನೇ ತಿಳಿಯಬೇಕು" ಎಂದು ನಕ್ಕರು ಗಾಂಧೀಜಿ. ಸ್ವಯಂ ತನ್ನ ಆಕೃತಿಯನ್ನೇ ಟೀಕೆ ಮಾಡಿಕೊಂಡು ನಗುವ ರಸಿಕತೆ ಅವರಲ್ಲಿ ಇತ್ತು. ಕನ್ನಡಿ ಎಲ್ಲಿ ಕಂಡರೂ ಕಿಸೆಯಲ್ಲಿ ಸಿದ್ಧವಿರುವ ಬಾಚಣಿಗೆ ಹೊರ ತೆಗೆದು ಗಂಟೆಗಟ್ಟಲೆ ವೇಳೆ ಕಳೆಯುವ ನವಯುವಕರು ಇದರಿಂದ ಪಾಠ ಕಲಿತಾರೆ? ಇಂಗ್ಲೆಂಡಿನಲ್ಲಿ

ವಿದ್ಯಾರ್ಥಿಯಾಗಿದ್ದಾಗ ಕನ್ನಡಿಯ ಮುಂದೆ ತುಂಬ ವೇಳೆ ಕಳೆಯುತ್ತಿದ್ದರು. ಇದನ್ನು ಗ್ರಹಿಸಿ 'ಕ್ರಾಪ್' ತೆಗೆಸಿಬಿಟ್ಟರು.

ಗಾಂಧೀಜಿ ಮಧ್ಯಪ್ರದೇಶದಲ್ಲಿ ಪ್ರವಾಸದಲ್ಲಿದ್ದರು. ಒಂದು ಊರಿನಲ್ಲಿ ಬಿನ್ನವತ್ತಳೆ ಅರ್ಪಿಸಲು ಸಭೆ ಏರ್ಪಡಿಸಲಾಗಿತ್ತು. ಗಾಂಧೀಜಿ ಬಂದರು. ಬಿನ್ನವತ್ತಳೆಯ ಪ್ರತಿ ನೋಡಿದರು. ಅದರಲ್ಲಿ 'ಶುಭಾಗಮನ' ಎಂಬುದಕ್ಕೆ ಬದಲಾಗಿ "ಶುಭ ಗಮನ" ಎಂದು ಮುದ್ರಿಸಲಾಗಿತ್ತು.

ಇಲ್ಲಿಂದ ನಾನು ಬೇಗ ಹೋಗಬೇಕೆಂದು, ನಿಮ್ಮ ಇಚ್ಛೆ ಇದ್ದಂತೆ ತೋರುತ್ತೆ. ಹಾಗೆಯೇ ಆಗಲಿ. ನಾನು ಬೇಗ ಹೊರಡುತ್ತೇನೆ. ಭಾಷಣ ಸಹ ಮಾಡುವುದಿಲ್ಲ" ಎಂದರು.

ಆ ಊರಿನ ಪುರಸಭಾಧ್ಯಕ್ಷರು ಬೇಗಬೇಗನೆ ಬಿನ್ನವತ್ತಳೆ ಓದಿ ಮುಗಿಸಿದರು. ಓದುತ್ತಿದ್ದಾಗ ಅಚ್ಚಿನ ದೋಷ ಅವರಿಗೆ ವೇದ್ಯವಾಯಿತು. ತಪ್ಪು ಸರಿ ಮಾಡಿಸಿಕೊಂಡು ಬರೋಣ ಎಂದು ಪತ್ರಿಕೆ ತೆಗೆದುಕೊಂಡು ತರಾತುರಿಯಾಗಿ ಹೊರಟರು. ಚೌಕಟ್ಟು ಹಾಕಿದ್ದ ಸನ್ಮಾನ ಫಲಕ ತೆಗೆದುಕೊಂಡು ಹೋಗುತ್ತಿದ್ದುದನ್ನು ನೋಡಿ–

"ಅದು ನನಗೆ ಸೇರಿದ್ದು, ಅದನ್ನು ಎಲ್ಲಿಗೆ ಒಯ್ಯುತ್ತಿದ್ದೀರಿ. ನನಗಿಂತ ಮೊದಲೇ ಅದು ಹೊರಡುತ್ತಿರುವಂತಿದೆ", ಎಂದರು. ಸಭೆ ನಕ್ಕು ನಲಿಯಿತು.

ಗಾಂಧೀಜಿ, ಸರ್ದಾರ್ ಪಟೇಲ್, ಮಹದೇವ ದೇಸಾಯಿ ಮತ್ತು ಇತರರು ಜೈಲಿನಲ್ಲಿ ಒಟ್ಟಿಗೆ ಇದ್ದರು. ಮಹಾತ್ಮರ ಸೇವೆ ಮಾಡಬೇಕೆಂದು ಪಟೇಲರ ಹಂಬಲ. ಆದರೆ ಬಾಪೂಜಿ ಅದಕ್ಕೆ ಅವಕಾಶ ಕೊಡುತ್ತಿರಲಿಲ್ಲ— ಅವರ ಬಟ್ಟೆಯನ್ನಾದರೂ ಒಗೆದು ಮಡಿ ಮಾಡೋಣ ಎಂದು ಪಟೇಲರಿಗೆ. ಆದರೆ ಬಾಪೂಜಿ ಅದಕ್ಕೂ ಅವಕಾಶ ಕೊಡುತ್ತಿರಲಿಲ್ಲ. ಸ್ನಾನದ ಮನೆಯಿಂದ ಹೊರಕ್ಕೆ ಬರುವಾಗ ತಮ್ಮ ವಸ್ತ್ರ, ಕೌಪೀನ ಎಲ್ಲ ತಾವೇ ಹಿಂಡಿ ತರುತ್ತಿದ್ದರು. ಅದನ್ನು ಹರವಿ ಹಾಕುವುದೊಂದೇ ಉಳಿದಿರುತ್ತಿತ್ತು.

ಪ್ರತಿದಿನ ಬೆಳಗ್ಗೆ ಬಿಸಿ ಮಾಡಿದ ಎಂಟು ಔನ್ಸ್ ನೀರಿಗೆ ಐದು ಗ್ರಾಂ ಸೋಡಾಪುಡಿ ಬೆರೆಸಿ ಕುಡಿಯುವುದು ಬಾಪು ವಾಡಿಕೆ. ಖರ್ಜೂರ ರಾತ್ರಿ ನೆನೆಯ ಹಾಕಿ ಬೆಳಗ್ಗೆ ಅದನ್ನು ತಿನ್ನುವರು. ಇದೆಲ್ಲ ಸಜ್ಜು ಮಾಡಿ ಇಡುವ ಕೆಲಸ ಪಟೇಲರು ವಹಿಸಿಕೊಂಡಿದ್ದರು.

ಒಂದುದಿನ ಪಟೇಲರು ಕೇಳಿದರು.—“ಎಷ್ಟು ಖರ್ಜೂರ ನೆನೆಯಹಾಕಲಿ. 10ಕ್ಕೂ 15ಕ್ಕೂ ಹೆಚ್ಚು ವ್ಯತ್ಯಾಸವಿಲ್ಲವಲ್ಲ. ಆದ್ದರಿಂದ 20 ನೆನೆಯಹಾಕುತ್ತೇನೆ” ಎಂದರು.

ಐದಕ್ಕೂ ಹತ್ತಕ್ಕೂ, ವ್ಯತ್ಯಾಸವಿಲ್ಲವಷ್ಟೆ. ಹಾಗಾದರೆ 15ಕ್ಕೆ ಬದಲಾಗಿ ಹತ್ತು ನೆನೆಹಾಕು” ಎಂದರು ಬಾಪೂಜಿ.

ಪಟೇಲರು ಅವಾಕ್ಕಾದರು. ‘ನಿಮ್ಮ ಜಿಪುಣ ತನ ಯಾರೂ ಮೀರಿಸಲಾರರು’ ಎಂದರು.

ಬಿಸಿ ನೀರು ಪಾತ್ರೆ ಬಂತು. ಕೂಡಲೇ ಬಾಪೂಜಿ ಕ್ರಿಮಿಕೀಟಗಳು ಬೀಳದಂತೆ ವಸ್ತ್ರದಿಂದ ಪಾತ್ರೆ ಮುಚ್ಚಿದರು.

‘ಇಷ್ಟು ಸೂಕ್ಷ್ಮವಾಗಿ ಅಹಿಂಸೆಗೆ ನೀವು ಮಹತ್ತರ ಸ್ಥಾನ ಕೊಡುತ್ತಿದ್ದೀರಿ. ಈ ಮಟ್ಟದಲ್ಲಿ ನಾವು ಕೆಲಸ ಮಾಡುವುದು ಹೇಗೆ?’ ಎಂದು ಸರ್ದಾರರು ಪ್ರಶ್ನಿಸಿದರು.

“ಸಾಧ್ಯವಾದ ಮಟ್ಟಿಗಾದರೂ ಆಚರಿಸಬೇಡವೇ” ಎಂದು ಮರು ಪ್ರಶ್ನೆ ಕೇಳಿದರು, ಬಾಪು.

ಉಸಿರಾಡುವಾಗ ಸೂಕ್ಷ್ಮ ಕ್ರಿಮಿಕೀಟಗಳು ಮೂಗು ಬಾಯಿಗಳಿಂದ ಶ್ವಾಸಕೋಶ ಪ್ರವೇಶಿಸದಂತೆ ಬಟ್ಟೆ ಕಟ್ಟಿಕೊಳ್ಳುವ ಜೈನ ಮುನಿಗಳ ಪದ್ಧತಿ ಇದು ಸ್ಮರಣೆಗೆ ತರುತ್ತದೆ. ವೃಥಾ ನೀರು ವ್ಯಯಿಸುವುದೂ ಅಹಿಂಸೆ ಎಂದು ಜೈನ ಮುನಿಗಳು ತಿಳಿಯುತ್ತಾರೆ. ಆದ್ದರಿಂದ ದಿನವಹಿ ಜೈನ ಮುನಿಗಳು ಸ್ನಾನ ಮಾಡುವ ಪದ್ಧತಿಯೂ ಇಲ್ಲ.

o o o o

ಜೈಲಿನಲ್ಲಿ ವೃತ್ತಪತ್ರಿಕೆ ಬಾಪೂಗೆ ಓದಿ ಹೇಳುವುದನ್ನು ಪಟೇಲರು ವಹಿಸಿಕೊಂಡಿದ್ದರು. ಗಾಂಧಿಯವರ ಪದ್ಧತಿ ಪಟೇಲರ ಪರಿಹಾಸ್ಯಕ್ಕೆ ಗುರಿಯಾಗುತ್ತಿತ್ತು. ಕುಡಿಯಲು ನೀರುತಂದರೆ “ಸೋಡಪುಡಿ ಹಾಕಿ ಕೊಡೋಣವೇ” ಎಂದು ಕೇಳುವರು. 70 ವರ್ಷ ವಯಸ್ಸಿನ ಅಸ್ತಮ ರೋಗಿ ಪ್ರಕೃತಿ ಚಿಕಿತ್ಸೆಗಾಗಿ ಗಾಂಧೀಜಿ ಸಲಹೆ ಕೇಳಲು ಬಂದ.

"ಉಪವಾಸ ಮಾಡು, 'ಕ್ಯಾರೆಟ್' ರಸ ಒಂದು ಬಟ್ಟಲು ದಿನವಹಿ ಸೇವಿಸು. ಕಾಶಿಫಲ ಮತ್ತು ಸೋಡಸೀರು ಕುಡಿ" ಈ ರೀತಿ ಅವರಿಗೆ ಚಿಕಿತ್ಸಾ ವಿಧಾನ ತಿಳಿಸ ಬಹುದಲ್ಲ ಎಂದರು ಪಟೇಲ್.

ಬಾಪು ಅವರನ್ನು ಈ ರೀತಿ ಹಾಸ್ಯ ಮಾಡಲು ಇತರರಿಗೆ ಸಾಧ್ಯವಾಗುತ್ತಿರಲಿಲ್ಲ.

ಗಾಂಧೀಜಿ ಇದರಿಂದ ಮುನಿಸಿಕೊಳ್ಳುತ್ತಿರಲಿಲ್ಲ. ನಿಮಗೂ ಇದೇ ಸರಿಯಾದ ಚಿಕಿತ್ಸೆ ಎಂದು ತಮಾಷೆ ಮಾಡುವರು.

o o o o

ತಿರುಮಲೆ ತಾತಾಚಾರ್ಯ ಶರ್ಮ 'ವಿಶ್ವಕರ್ನಾಟಕ' ಪತ್ರಿಕೆಯ ಸಂಪಾದಕರು. ಗಾಂಧೀಜಿ ಬೆಂಗಳೂರಿನಲ್ಲಿ ಭಾಷಣ ಮಾಡುತ್ತಿರುವಾಗ ಕನ್ನಡಕ್ಕೆ ಅನುವಾದ ಮಾಡುವರು. ಗಾಂಧೀಜಿ ಒಂದೊಂದು ವಾಕ್ಯ ನುಡಿದು ಅನುವಾದಕ್ಕೆ ತುಸು ಅವಕಾಶ ಕೊಡುವರು. ಅನುವಾದ ಸರಿಯಾಗಿಲ್ಲವೆಂದು ತೋರಿದರೆ ಅದೇ ವಿಷಯ ಬೇರೊಂದು ರೂಪದಲ್ಲಿ ಹೇಳುವರು. ನಿಮ್ಮ ಮಗ ನಿಮಗಿಂತ ಉತ್ತಮ ಅನುವಾದಕನಾಗಲಿ ಎಂದು ಹೇಳುವರು.

o o o o

ಗಾಂಧಿಯವರ ಪರಿವಾರ ವಿಚಿತ್ರವಾದುದು. ಒಬ್ಬೊಬ್ಬರಿಗೆ ಒಂದೊಂದು ಬಗೆಯ ಊಟ ತಿಂಡಿ ಆಗಬೇಕು. ಒಬ್ಬರಿಗೆ ಚಪಾತಿ, ಇನ್ನೊಬ್ಬರಿಗೆ ಹಾಲು, ಇನ್ನೊಬ್ಬರಿಗೆ ಕಡಲೆ ರಾತ್ರಿ ನೆನೆಹಾಕಿ, ಬೆಳಗ್ಗೆ ತಿರುವಿ ಕೊಡಬೇಕು. ಮತ್ತೊಬ್ಬರಿಗೆ ಬಿಸಿ ನೀರು, ಜೇನು ತುಪ್ಪ; ಇನ್ನೊಬ್ಬರಿಗೆ ಕಷಾಯ. ಗಾಂಧಿಯವರಿಗೆ ಆಡಿನ ಹಾಲು, ಬೇವಿನಸೊಪ್ಪಿನ ಚಟ್ನಿ. ಕಾರ್ಯಕರ್ತರಿಗೆ ಅನ್ನ, ಸಾರು, ಪಲ್ಯ, ಉಪ್ಪಿಟ್ಟು, ದೋಸೆ. ರಾಜಾಜಿಯವರಿಗೆ ಬಿಸಿ ಬಿಸಿ ಕಾಫಿ. ಮಹದೇವ ಭಾಯಿಗೆ ಚಹಾ.

ನಂದಿಯಲ್ಲಿದ್ದಾಗ ಗಾಂಧಿಯವರನ್ನು ಕಾಣಲು ಮೆಟ್ಟಲು ಹತ್ತಿ ಜನ ಬರುವರು. ಬಂದವರು ಬರಿಗೈಯಲ್ಲಿ ಬಾರದೆ ಯಾವುದಾದರೂ ಹಣ್ಣು ತರುವರು. ಏನೂ ದೊರೆ ಯದಿದ್ದರೆ ನಿಂಬೆಹಣ್ಣಾದರೂ ತರುವರು. ದೊಡ್ಡವರನ್ನು ಸಂದರ್ಶಿಸಲು ಹೋಗು ವಾಗ ಬರಿಕೈಯಲ್ಲಿ ಹೋಗಲಾಗದು. ಇದು ಸಂಪ್ರದಾಯ. ಆಗ ಮಾವಿನ ಹಣ್ಣಿನ ಕಾಲ. ಆದ್ದರಿಂದ ಬಹುಜನ ಮಾವಿನ ಹಣ್ಣನ್ನು ತರುತ್ತಿದ್ದರು. ತಟ್ಟೆ ಯಲ್ಲಿ ಹಣ್ಣುಗಳನ್ನಿಟ್ಟು ಅರ್ಪಿಸಿ, ಮಹಾತ್ಮರಿಗೆ ನಮಸ್ಕರಿಸಿ, ಧನ್ಯರಾದೆವೆಂದು ಸಂತೃಪ್ತರಾಗಿ ಹೋಗುವರು. ಬಂದ ಹಣ್ಣುಗಳನ್ನೆಲ್ಲ ಒಳಕ್ಕೆ ಕಳುಹಿಸಲಾಗುತ್ತಿತ್ತು. ಒಂದು ದಿನ ಒಬ್ಬ ರೆಡ್ಡಿ ತನ್ನ ತೋಟದಲ್ಲಿ ಬೆಳೆದ ಸೊಗಸಾದ ನಾಲ್ಕು ಮಾವಿನ ಹಣ್ಣುಗಳನ್ನು ತಟ್ಟೆಯಲ್ಲಿಟ್ಟು ಕೊಟ್ಟ. ಆಗ ರಾಜಾಜಿ, ಮಹದೇವ ದೇಸಾಯಿ,

ತಿ. ತಾ. ಶರ್ಮ ಮೊದಲಾದವರು ಅಲ್ಲಿಯೇ ಇದ್ದರು. ತಟ್ಟೆ ತೆಗೆದುಕೊಳ್ಳಲು ಸ್ವಯಂ ಸೇವಕರು ಬಂದಾಗ, "ರಾಜಾಜಿ ಕಣ್ಣುಗಳು ಈ ಮಾವಿನ ಹಣ್ಣಿನ ಮೇಲಿವೆ. ಆದ್ದರಿಂದ ಈ ಹಣ್ಣುಗಳನ್ನು ಅವರಿಗೇ ಕೊಡಿ. ನೀವು ಒಯ್ದರೆ ಅವರಿಗೆ ಸಂಕಟವಾದೀತು" ಎಂದು ಹಾಸ್ಯ ಮಾಡಿದರು. ರಾಜಾಜಿ ಸಹ ಈ ನಗುವಿನಲ್ಲಿ ಜತೆಗೂಡಿದರು.

o o o o

ಸೇವಾಗ್ರಾಮದ 'ಆದಿನಿವಾಸ'ದಲ್ಲಿ ಗಾಂಧೀಜಿ ವಾಸಿಸುತ್ತಿದ್ದರು. ತಲೆಗೆ ಒದ್ದೆಮಣ್ಣು ಕಟ್ಟಿದ್ದರು. ಇಟಲಿಯಿಂದ ಬಂದಿದ್ದ ಪಾದ್ರಿಯೊಬ್ಬ ಈ ಸ್ಥಿತಿಯಲ್ಲಿರುವ ಅವರ ಭಾವಚಿತ್ರ ತೆಗೆದುಕೊಳ್ಳಲು ಅವಕಾಶ ಬೇಡಿದರು. ಫೋಟೋ ತೆಗೆದು 'ಫಿಲಂ' ಏಕೆ ನಷ್ಟ ಮಾಡಿಕೊಳ್ಳುವಿರಿ. ತಲೆಗೆ ಕಟ್ಟಿರುವ ಪಟ್ಟನೋಡಿ, "ಗಾಂಧಿಯವರ ತಲೆ ಬುರುಡೆ ಒಡೆದಿತ್ತೆ" ಎಂದು ಪ್ರಶ್ನಿಸಬಹುದು. ಈ ಪೇಚಿಗೆ ಸಿಕ್ಕಿಕೊಳ್ಳಲೇಕೆ ಎಂದು ನಗುತ್ತಾ ಫೋಟೋ ತೆಗೆದುಕೊಳ್ಳಲು ಅನುಮತಿಕೊಡಲಿಲ್ಲ.

o o o o

ಗಾಂಧಿಯವರ ಜೀವನ ಚರಿತ್ರೆ ಬರೆದಿರುವ ಲೂಯಿ ಫಿಷರ್ ಅವರನ್ನು ನೋಡಲು ಸೇವಾ ಗ್ರಾಮಕ್ಕೆ ಬಂದರು. ರೈಲ್ವೆ ಸ್ಟೇಷನ್ನಿನಿಂದ ತುಯ್ದಾಡುವ ಹರುಕು ಮುರುಕು 'ಟಾಂಗಾ'ದಲ್ಲಿ ಕುಳಿತು ಉರಿಬಿಸಿಲಿನಲ್ಲಿ ಆಶ್ರಮ ಸೇರಿದರು. ಮೈಯೆಲ್ಲ ಬೆವತು ಬೆವರು ಹರಿಯುತ್ತಿತ್ತು. 'ಅಯ್ಯೋ, ಪಾಪ, ಉರಿಬಿಸಿಲಿನಲ್ಲಿ ಬರಬೇಕೆ ಎಂದು ಸಮಾಧಾನ ಪಡಿಸದೆ, "ನೀವು ಹವಾ ನಿಯಂತ್ರಿತ ಟಾಂಗಾದಲ್ಲಿ ಬಂದಂತೆ ಇದೆ" ಎಂದು ಹಾಸ್ಯಮಾಡಿದರು. ಪಾಪ, ಫಿಷರ್ ನಗುವಿನಲ್ಲಿ ತಾವೂ ಜತೆಗೂಡಬೇಕಾಯಿತು.

"ವೈಸರಾಯಿ ಲಾರ್ಡ್ ಲಿನ್‌ಲಿತ್‌ಗೊ ಶಾಸನ ಸಭೆಯಲ್ಲಿ ಮಾಡಲಿರುವ ಅವರ ಭಾಷಣದ ಮುಂಗಡ ಪ್ರತಿ ತಮಗೆ ಕಳುಹಿಸಿರುವರಂತೆ. ತಮ್ಮ ಸಲಹೆಗೋ ಅಥವಾ ಬದಲಾವಣೆ ಆಗತ್ಯವಿದ್ದರೆ ಮಾಡಲಿಕ್ಕೋ" ಎಂದು ಕೇಳಿದರು ಸರ್ದಾರ್ ಪಟೇಲ್.

ಗಾಂಧೀಜಿ—ಇದು ಅಪ್ಯಾಯಮಾನ ಸುಳ್ಳು. ಸಲಹೆಗೂ ಅಲ್ಲ, ಬದಲಾವಣೆ ಮಾಡಲೂ ಅಲ್ಲ. ಈ ಸುಳ್ಳು ಕಂತೆಯ ಕತೆ ತಳ್ಳಿ ಹಾಕಲು ಮಾತ್ರ ಯೋಗ್ಯ" ಎಂದು ನಗುತ್ತಾ ಉತ್ತರಿಸಿದರು.

o o o o

ಅಮೇರಿಕದ ಪತ್ರಿಕೋದ್ಯಮಿ ಗಾಂಧಿಯವರನ್ನು ಸಂದರ್ಶಿಸಿ ಕೇಳಿದ— "ಪ್ರಪಂಚದ ಪರಿಸ್ಥಿತಿ ಹೇಗಿದೆ."

ಗಾಂಧೀಜಿ—"ನಾನೊಬ್ಬ ಕೂಪಮಂಡೂಕ. ಭಾರತ ಮತ್ತು ಅದರಲ್ಲಿನ ಸೇವಾ ಗ್ರಾಮವೇ ನನ್ನ ವಿಶ್ವ. ಬೇರೆ ವಿಷಯ ನಾನರಿಯೆ."

ಪ್ರಶ್ನೆ — "ಇನ್ನು ಆರು ತಿಂಗಳಲ್ಲಿ ಏನಾದರೂ ನಡೆಯಲಿದೆಯೆ?" ನೀವು ಸತ್ಯಾಗ್ರಹ ಹೂಡಲಿರುವಿರಾ ಎಂದು ಪ್ರಶ್ನೆಯ ಉದ್ದೇಶ.

ಉತ್ತರ — "ಬಾಣ, ಬಿರುಸು ಏನೂ ಹಾರಲಾರದು. ಹಾರಿಸಲು ನನ್ನಲ್ಲಿ ಪಟಾಕಿ ಇಲ್ಲ."

ಪ್ರಶ್ನೆ—"ಏನಾದರೂ ಗಲಭೆ ನಡೆದೀತೆ ?"

ಉತ್ತರ—"ಬ್ರಿಟಿಷ್ ಅಧಿಕಾರಿಗಳಿಗೆ ಗಲಾಟೆ ಬೇಕಾಗಿದ್ದರೆ, ಯಾವಾಗ ಬೇಕಾದರೂ ನಡೆಯಬಹುದು. ಆದರೆ ಕದನಕ್ಕಾಗಿ ನಾನು ಕಾಲು ಕೆರೆಯುತ್ತಿಲ್ಲ. ಅವರಿಗೂ ಅಗತ್ಯವಿರಲಾರದು".

ಪ್ರಶ್ನೆ—"ನಿಮ್ಮ ಆರೋಗ್ಯ ಹೇಗಿದೆ?"

ಉತ್ತರ—"ಮಿಡ್ಲಿಂಗ್" "ಮಧ್ಯಸ್ಥ" ಎಂದು ಮುದ್ರಿತವಾಗಿದ್ದ ಪೆನ್ಸಿಲ್ ತೋರಿಸುತ್ತ, "ಇದರಂತಿದೆ" ಎಂದರು.

ಯಾವ ಪ್ರಶ್ನೆಯನ್ನೂ ಮುಂದೆ ಕೇಳಲು ಸಾಧ್ಯವಾಗದೆ, ಅಮೇರಿಕದ ಪತ್ರಿಕೋದ್ಯಮಿ ಸಲಾಂ ಹೊಡೆದು ಹೊರಟುಹೋದ.

o o o o

ಜುಲೈ 1956 ರಲ್ಲಿ ಉರುಳಿಕಾಂಚನದಲ್ಲಿದ್ದರು ಗಾಂಧೀಜಿ. ಶ್ರೀಪಾದ ಜೋಶಿಯ ಹೆಂಡತಿ ಮಾಣಿಕಳು ಅವರ ದರ್ಶನಕ್ಕಾಗಿ ಒಂದೂವರೆ ಗಂಟೆ ಕಾಲ ಕಾದಿದ್ದಳು. ಹೇಗೋ ಮಾಡಿ ಒಳನುಗ್ಗಿ ಅವರ ಪಾದಸ್ಪರ್ಶಿಸಿ ನಮಸ್ಕರಿಸಿದಳು.

ಗಾಂಧೀಜಿ—"ನೀನು ತುಂಬ ಜಾಣ ಹುಡುಗಿ. ಕೊನೆಗೂ ಒಳಕ್ಕೆ ಬಂದೇ ಬಿಟ್ಟೆಯಲ್ಲ. ಈ ಶ್ರದ್ಧೆ ಮತ್ತು ಜಾಣತನ ಕಡೆಯವರೆಗೂ ಬಳಸುತ್ತಿರಬೇಕು. ಎಷ್ಟು ಜ್ಞಾನಗಳಿಸಲು ಸಾಧ್ಯವೋ ಅಷ್ಟು ಗಳಿಸು."

ಅವಳ ಕೊರಳಲ್ಲಿದ್ದ ಚಿನ್ನದ ಸರ ನೋಡಿದರು. "ನಮ್ಮ ಶ್ರೀಪಾದ ಬಡವ. ಚಿನ್ನದ ಸರ ನಿನಗೆ ಹೇಗೆ ಬಂತು" ಎಂದು ಕೇಳಿದರು. "ನೀನು ತುಂಬ ಚದುರೆ

ಯೆಂದು ಕಾಣುವೆ. ಅವನನ್ನು ನೀನು ಲೂಟಿ ಮಾಡುತ್ತಿರಬೇಕು. ನೀನು ತುಂಬ ಶ್ರೀಮಂತಳೇನು? ಶ್ರೀಮಂತನಾಗಬೇಕೆಂದರೆ ಹೇಗಾದರೂ ಆಗಬಹುದು. ಕಳ್ಳತನಮಾಡಿಯೂ ಆಗಬಹುದು. ನಾನಂತೂ ಬಡವ. ಎಂದಾದರೊಂದು ದಿನ ರಾತ್ರಿ ಬಂದು ನಿನ್ನ ಬಂಗಾರದ ಹಾರ ಕದ್ದು ಬಿಡುವೆ,'' ಎಂದರು.

o o o o

ತಮ್ಮನ್ನು ಕಾಣಬಂದವರೊಡನೆ ಹಾಸ್ಯಮಾಡಿ ಅವರ ಸಂಕೋಚ ನಿವೃತ್ತಿಗೊಳಿಸುವರು. ''ನಿಮಗೆ ಕೋಪ ಬರುವುದುಂಟೆ'' ಎಂದು ಕೇಳಿದರು ಶ್ರೀಮತಿ ನೈಲ್ಸ್. ''ಎಲ್ಲರೊಡನೆ ಸರಸ ಸಲ್ಲಾಪದಲ್ಲಿ ತೊಡಗುವೆ. ಆದರೆ ನನ್ನ ಹೆಂಡತಿಯೊಡನೆ ಮಾತ್ರ ಇಲ್ಲ. ಅವಳನ್ನೇ ಕೇಳಿ ನೋಡಿ'' ಎಂದರು ಗಾಂಧೀಜಿ. ''ಆದರೆ ನನ್ನ ಪತಿ ನನ್ನೊಡನೆ ತುಂಬ ವಿನೋದವಾಗಿ ಕಾಲ ಕಳೆಯುತ್ತಾರೆ'' ಎಂದರು ಶ್ರೀಮತಿ ನೈಲ್ಸ್.

''ಹಾಗಾದರೆ, ನಿನ್ನ ಗಂಡ ನಿನಗೆ ಕೈತುಂಬ ಲಂಚ ಕೊಟ್ಟಿರಬೇಕು'' ಎಂದರು ಗಾಂಧೀಜಿ.

o o o o

"ಕುಡುಕರಲ್ಲಿ ನಿಮಗೇಕೆ ಅಷ್ಟು ನಿರ್ದಯ''

''ಕುಡುಕರಿಂದ ಕಷ್ಟ ಅನುಭವಿಸುವವರಿಗೆ ದಯೆ ತೋರುವುದೇ ಇದಕ್ಕೆ ಕಾರಣ.''

o o o o

''ನಿನಗೆಷ್ಟು ಮಕ್ಕಳು'' ಎಂದು ಒಬ್ಬ ನಾವಿಕನನ್ನು ಗಾಂಧೀಜಿ ಕೇಳಿದರು.

''ನಾಲ್ಕು ಗಂಡು, ನಾಲ್ಕು ಹೆಣ್ಣು, ಒಟ್ಟು ಎಂಟು''

''ಹಾಗಾದರೆ ಓಟದ ಪಂದ್ಯದಲ್ಲಿ ನಿನಗೆ ಅರ್ಧ ಸಮ ನಾನು. ನನಗೆ ನಾಲ್ವರು ಮಕ್ಕಳು'' ಎಂದರು ಗಾಂಧೀಜಿ.

o o o o

ಯರವಾಡ ಜೈಲಿನಲ್ಲಿ ಹರಿಜನರಿಗಾಗಿ 21 ದಿನಗಳ ಉಪವಾಸ ಆಚರಿಸುತ್ತಿದ್ದರು. ಹಿಂದೂ ನಾಯಕರು ಇವರ ಸುತ್ತ ಕುಳಿತ್ತಿದ್ದಾರೆ. ಈ ಭಯಂಕರ ಸನ್ನಿವೇಶದಲ್ಲೂ ಹಾಸ್ಯವೇ? ಸುತ್ತಲೂ ನೋಡಿ, ''ಈ ಸಭೆಗೆ ನಾನೇ ಅಧ್ಯಕ್ಷ'' ಎಂದರು.

ದುಂಡು ಮೇಜಿನ ಪರಿಷತ್ತಿನ ಸದಸ್ಯರಿಗೆ ಜಾರ್ಜ್ ಚಕ್ರವರ್ತಿ ಔತಣ ಕೂಟ ಏರ್ಪಡಿಸಿದ್ದರು. ಕುತೂಹಲಕಾರಿ ಪತ್ರಿಕೋದ್ಯಮಿ ಗಾಂಧಿಯವರನ್ನು ಕೇಳಿದ — "ನೀವು ಕೌಪೀನಧಾರಿಯಾಗಿಯೇ ಔತಣಕ್ಕೆ ಹೋಗಲಿರುವಿರಾ?" "ಇಲ್ಲ. ಹ್ಯಾಟು, ಬೂಟು, ಪ್ಯಾಂಟು, ಕಾಲರ್, ಟೈ ಧರಿಸಿ ಹೋಗಲಿರುವೆ. ಆಗ ನನ್ನ ಫೋಟೋ ಇಳಿಸಿ ತುಂಬ ಗಿಟ್ಟಿಸಬಹುದು." ಗಾಂಧಿಯವರನ್ನು ಅರೆ ನಗ್ನ ಭೈರಾಗಿ ಎಂದು ಎಲ್ಲ ಚಿತ್ರಕಾರರೂ ವ್ಯಂಗ್ಯವಾಗ ಚಿತ್ರಿಸುತ್ತಿದ್ದರು. ಪ್ರಧಾನಿ ಚರ್ಚಿಲ್ಲರು "ಅರೆ ನಗ್ನ ಫಕೀರ" ಎಂದು ಗೇಲಿ ಮಾಡಿದ್ದರು. ಷರಾಯಿ ಇಲ್ಲದ ಮುದುಕ ಎಂದು ಹುಡುಗರೂ ಹಾಸ್ಯ ಮಾಡುತ್ತಿದ್ದರೆಂದು ಇಲ್ಲಿ ಸ್ಮರಿಸಿ ಕೊಳ್ಳಬೇಕು.

o o o o

1934ರಲ್ಲಿ ಗಾಂಧೀಜಿ ಖಾದಿ ಪ್ರವಾಸದಲ್ಲಿ ಕೊಡಗಿಗೆ ಬಂದಿದ್ದರು. ಗುಂಡು ಕುಟ್ಟಿಯ ಗೌರಮ್ಮ ಗಂಡನ ಸಮ್ಮತಿಯಿಂದ ತನ್ನ ಒಡವೆ ಅವರಿಗೆ ಅರ್ಪಿಸಿದ್ದಳು. ಇದರಿಂದ ಸ್ಫೂರ್ತಿ ಪಡೆದ ಮತ್ತೊಬ್ಬ ತರುಣಿ ತನ್ನ ಬಂಗಾರದ ಬಳೆ ಗಾಂಧಿ ಯವರಿಗೆ ತೆಗೆದುಕೊಟ್ಟಳು. ಆಕೆಯ ಗಂಡ ಸಮೀಪದಲ್ಲೇ ನಿಂತಿದ್ದರು. "ಭಂಗಾರದ ಬಳೆ ಕೊಡಲು ನೀವು ಅನುಮತಿ ಕೊಟ್ಟಿರುವಿರಾ" ಎಂದು ಗಾಂಧೀಜಿ ಅವರನ್ನು ಕೇಳಿದರು.

"ಹೌದು, ನಾನೂ ಸಮ್ಮತಿಸಿರುವೆ. ನನ್ನ ಅನುಮತಿಯಿಂದಲೇ ಆಕೆ ಒಡವೆ ಕೊಟ್ಟಿದ್ದಾಳೆ. ಅನುಮತಿ ಕೊಡದೆ ಇರಲು ಸಾಧ್ಯವೇ? ಇಷ್ಟಾಗಿ ಒಡವೆ ಅವಳದಲ್ಲವೆ?"

"ಎಲ್ಲ ಗಂಡಂದಿರೂ ಇಷ್ಟು ವಿವೇಚನೆಯಿಂದ ನಡೆಯುವುದಿಲ್ಲ."

"ನಿನ್ನ ವಯಸ್ಸೆಷ್ಟು"?

"ಮೂವತ್ತು"

"ನಿನ್ನ ವಯಸ್ಸಿನಲ್ಲಿ ಇಷ್ಟು ವಿವೇಕದಿಂದ ನಾನು ನಡೆದುಕೊಳ್ಳಲಿಲ್ಲ. ನನಗೆ ವಿವೇಕ ಕಲಿಸಿದವಳು ನನ್ನ ಹೆಂಡತಿಯೇ" ಎಂದರು ಗಾಂಧೀಜಿ.

o o o o

ಗಾಂಧೀಜಿ ಒಮ್ಮೆ ಲಾಹೋರಿಗೆ ಹೋಗಿದ್ದರು. ಪಂಜಾಬ್ ಕೇಸರಿ ಲಾಲಾ ಲಜಪತರಾಯರ ಜನ ಸೇವಾ ಸಂಘದ ಕಟ್ಟಡದಲ್ಲಿ ವಾಸ್ತವ್ಯ ಹೂಡಿದ್ದರು. ಅವರ

ದೇಹಸ್ಥಿತಿ ಅಷ್ಟೇನು ಉತ್ತಮವಿರಲಿಲ್ಲ. ರೈಲು ಪ್ರಯಾಣದ ಆಯಾಸದಿಂದ ಬಳಲಿದ್ದರು. ಬಾಪು ಆರೋಗ್ಯ ನೆಟ್ಟಗೆ ಇಲ್ಲ ಎಂದು ಕೇಳಿದ ಒಬ್ಬ ವೈದ್ಯ ತಾನಾಗಿಯೇ ಅವರನ್ನು ನೋಡಲು ಬಂದ. ತಮ್ಮ ದೇಹಸ್ಥಿತಿ ಪರೀಕ್ಷಿಸಲು ಬಂದಿರುವೆ" ಎಂದ.

"ನನ್ನ ಆರೋಗ್ಯ ಏನೂ ಕೆಟ್ಟಿಲ್ಲ. ದೇಹ ಸ್ವಲ್ಪ ಬಳಲಿದೆ ಅಷ್ಟೇ" ಎಂದರು. ಭಕ್ತಿಭಾವದಿಂದ ಕೂಡಿದ್ದ ವೈದ್ಯನಿಗೆ ಸಮಾಧಾನವಾಗಲಿಲ್ಲ. "ತಾವು ಹಾಗೆ ಹೇಳಬಹುದು. ಆದರೆ ನನ್ನ ಮನಸ್ಸಿಗೆ ಸಮಾಧಾನವಾಗಬೇಕಲ್ಲ" ಎಂದ.

"ತಮಗೆ ಸಮಾಧಾನವಾಗಬೇಕಾಗಿದ್ದರೆ, ಅದು ಬೇರೆ ವಿಷಯ. ನನ್ನನ್ನು ನೋಡಲು ಎಷ್ಟು ಜನ ಕಾದಿದ್ದಾರೆ ನೀವೇ ನೋಡಿ, ನನ್ನ ವೇಳೆ ಅಮೂಲ್ಯ. ತಮ್ಮ ಸಮಾಧಾನಕ್ಕೆ ನನ್ನ ದೇಹ ಸ್ಥಿತಿ ಪರೀಕ್ಷಿಸಬೇಕಾದರೆ ತಾವೇ ನನಗೆ 'ಫೀಸು' ಕೊಡಬೇಕು" ಎಂದರು.

ವೈದ್ಯ ಪೇಚಿಗೆ ಸಿಕ್ಕಿಕೊಂಡ ಹಾಗೆಯೇ ಹೊರಟು ಹೋದರೆ, ತಾನು ಆಡಿದ್ದೆಲ್ಲ ಸುಳ್ಳು. ಭಕ್ತಿಯೂ ಇಲ್ಲ, ಭಾವವೂ ಇಲ್ಲ, ಇಲ್ಲ ಎಂದಾಗುತ್ತದೆ. ರೋಗಿಯಿಂದ ವೈದ್ಯ ಹಣ ಪಡೆಯುವುದು ವೃತ್ತಿ ನೀತಿ. ಈಗ ವೈದ್ಯನೇ ರೋಗಿಗೆ ಹಣ ಕೊಡಬೇಕಾಗಿದೆ. ವೈದ್ಯನಿಗೆ ಗಾಂಧಿಯವರಲ್ಲಿದ್ದ ಗೌರವ, ತನ್ನ ಕಿಸೆಯಿಂದ ಹಣ ತೆಗೆದುಕೊಡುವಂತೆ ಮಾಡಿತು. ಸ್ವಲ್ಪ ಹೊತ್ತಿಗೆಹಿಂದೆ ವೈದ್ಯ ಒಬ್ಬ ರೋಗಿಯನ್ನು ಪರೀಕ್ಷಿಸಿ ಶುಲ್ಕ ಪಡೆದು ಬಂದಿದ್ದ. ಕಿಸೆಗೆ ಕೈಹಾಕಿ ಇದ್ದ ಹದಿನಾರು ರೂಪಾಯಿ ಕಾಣಿಕೆ ಸಲ್ಲಿಸಿ, ಅವರ ದೇಹ ಪರೀಕ್ಷಿಸಿ ಸಮಾಧಾನ ಪಟ್ಟುಕೊಂಡು ಹೋದ. ಇದೇ ರೀತಿಯಲ್ಲಿ ಭವಿಷ್ಯ ನುಡಿಯಲು ಬಂದ ಜ್ಯೋತಿಷ್ಯನಿಂದ ಸಾವಿರ ರೂಪಾಯಿ ಗಿಟ್ಟಿಸಿದ್ದೂ ಉಂಟು. ಹಸ್ತಸಾಮುದ್ರಿಕೆ, ಜ್ಯೋತಿಷ್ಯದಲ್ಲಿ ತನಗೆ ನಂಬಿಕೆ ಇಲ್ಲ ಎಂದರು. ಇದು "ನಿನ್ನ ಪರೀಕ್ಷೆ ಆದೀತು, ನನ್ನ ಪರೀಕ್ಷೆ ಅಲ್ಲ. ಆದ್ದರಿಂದ ಸಾವಿರ ರೂಪಾಯಿ ಕೊಡು" ಎಂದರು.

o o o o

ಇಂಗ್ಲೆಂಡಿನಲ್ಲಿದ್ದಾಗ ದೂರವಾಣಿಯಿಂದ ಒಬ್ಬ ಹೆಸರಿನ ಕಾಗುಣಿತ ಕೇಳಿದ. ಗಾಂಧೀಜಿ ಹೀಗೆ ತಿಳಿಸಿದರು. G-for God, A-for Ass, N-for No one, D-for Donkey, H-for Hell, I-for Idiot, Gandhi.

o o o o

ಹಾಸ್ಯವಿಲ್ಲದೆ ತಾನು ಹುಚ್ಚನಾಗುತ್ತಿದ್ದೆ ಎನ್ನುತ್ತಾರೆ ಗಾಂಧೀಜಿ ಸಿಟ್ಟುಮಾಡಿಕೊಂಡು, ಗಂಟು ಮೋರೆ ಹಾಕಿಕೊಂಡು ಬರುತ್ತಿದ್ದವರನ್ನು ನಗುಗಡಲಿನಲ್ಲಿ ತೇಲಿಸುತ್ತಿದ್ದರು.

"ಸುಮಿತ್ರೆ, ಪ್ಯಾರೆಲಾಲಳ ಮಗಳು, ಗಾಂಧಿಯವರೊಡನೆ ಯೆರವಾಡ ಜೈಲಿನಲ್ಲಿರಲು ಅಪೇಕ್ಷಿಸಿದಳು. ಬಾಪೂಜಿಯವರೊಡನೆ ಇರಬೇಕೆಂಬ ತನ್ನ ಬಯಕೆ ಬರೆದು ತಿಳಿಸಿದಳು. ತನ್ನೊಡನೆ ಜೈಲಿನಲ್ಲಿರಲು ಅವಳಿಗೆ ವಯಸ್ಸು ಹದಿನಾರು ವಿಾರಿ

ಇರಬೇಕು, ಗಂಡಸಾಗಿರಬೇಕು. ಯಂತ್ರದ ಸಹಾಯದಿಂದ ದೇಹ ಉದ್ದ ಮಾಡಿಸಿ ಕೊಳ್ಳಲಿ. ಪುರುಷ ವೇಷಧರಿಸಿ ಚೋರಿ ಮಾಡಲಿ. ಶಿಕ್ಷಿತಳಾಗಿ ಇಲ್ಲಿಗೆ ಬರಲಿ. ತಪ್ಪಿದರೆ ಬೆಕ್ಕಿನ ರೂಪ ತಾಳಲಿ. ಯಾರ ಅನುಮತಿ ಪಡೆಯದೆ ಬೆಕ್ಕು ಜೈಲಿಗೆ ಕಿಟಕಿಯಿಂದ ತೂರಿ ಬಂದು ಹೋಗುತ್ತದೆ. ಸುಮಿತ್ರೆ ನಾಲ್ಕು ಕಾಲಿನ ಬೆಕ್ಕಾಗಲಿ. ಬಾಲ ಬೆಳೆಸಿಕೊಳ್ಳಲಿ. ಬೆಕ್ಕು ಇಟ್ಟುಕೊಳ್ಳಲು ಸರ್ಕಾರದಿಂದ ಅನುಮತಿ ಪಡೆಯುವೆ. ಗಂಗಾಬಹನ್ ಅವಳಿಂದ ಔಷಧಿ ತೆಗೆದುಕೊಂಡು ಬೆಕ್ಕಿನ ಸ್ವರೂಪ ಪಡೆಯಲಿ. ಗಂಗಾಬೆನ್ ಬೆಕ್ಕನ್ನು ಯರವಾಡ ಜೈಲಿಗೆ ಸಂಗಡ ತರಲಿ. ನನ್ನಲ್ಲಿಯೇ ಸುಮಿತ್ರೆ ಹೆಸರನ್ನು ಸಾಕಿ ಇಟ್ಟುಕೊಳ್ಳುವೆ. ಈ ರೀತಿ ಉತ್ತರ ಬರೆದು ಕಳು ಹಿಸಿದರು.

o o o o

ಒಂದೂರಿಗೆ ತುಂಬ ತಡವಾಗಿ ಹೋದರು. ಬಹಳ ಆಯಾಸವಾಗಿತ್ತು. ಮಾತನಾಡಲು ತ್ರಾಣವಿರಲಿಲ್ಲ. ಸನ್ಮಾನ ಪತ್ರ ಓದಿ ಹೇಳಬೇಕಾಗಿತ್ತು. "ಓದಿ ಆಯಿತೆಂದು ಭಾವಿಸೋಣ, ವೇಳೆ ಉಳಿಸಲು, ಭಾಷಣವೂ ಮುಕ್ತಾಯವಾಯಿ ತೆಂದು ತಿಳಿಯಬಹುದು. ಆದರೆ ನನಗೆ ಸಂದಾಯವಾಗಬೇಕಾದ ರೊಕ್ಕ ಕೊಟ್ಟ ದ್ದಾಯಿತು ಎಂದು ತಿಳಿಯಲಾಗದು. ಅದು ಮಾತ್ರ ನನಗೆ ಸಂದಾಯವಾಗಲೇ ಬೇಕು." ಹೀಗೆ ಹೇಳಿ ಸಭಿಕರನ್ನು ನಗೆಗಡಲಿನಲ್ಲಿ ಮುಳುಗಿಸಿದರು.

o o o o

ಗುಜರಾತಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ನಡೆದಿತ್ತು. ಕೆಲಸ ಮಾಡಲು ವಾಹನ ಸೌಲಭ್ಯ ಬೇಕು ಎಂದು ಕೇಳಿದರು ಕೆಲವರು. ನಮಗೆ ಸಾವಿರಾರು ಕೆಲಸಗಾರರ ಅಗತ್ಯವಿದೆ. ಪ್ರತಿಯೊಬ್ಬರಿಗೂ ಟಾಂಗಾ ಒದಗಿಸಿಕೊಟ್ಟರೆ, ಸಾವಿರ ಕುದುರೆ ಗಾಡಿಗಳು ದ್ವಾರಕ ಮುಟ್ಟಲು ಸಾಧ್ಯವಾಗದೆ ಹೋದೀತು. ಕೃಷ್ಣ ಒಂಟಿಗನಾಗಿಯೇ ಉಳಿಯಬೇಕಾದೀತು ಎಂದು ಹೇಳಿ ಕಾರ್ಯಕರ್ತರ ಬಾಯಿ ಮುಚ್ಚಿಸಿದರು.

o o o o

ಗಾಂಧೀಜಿ ದಿಲ್ಲಿಯ ಹರಿಜನ ಕೇರಿಯಲ್ಲಿ ಉಳಿದಿದ್ದರು ಚಳಿಗಾಲ. ಉಣ್ಣೆ ಬಟ್ಟೆಯ ಬೆಲೆ ಹೆಚ್ಚು. ಇದಕ್ಕೆ ಪ್ರತಿಯಾಗಿ ಎರಡು ಖಾದಿ ವಸ್ತ್ರ ಜೋಡಿಸಿ ಮಧ್ಯೆ ಸ್ವಲ್ಪ ಹತ್ತಿಯಿಟ್ಟು ದಪ್ಪನಾಗಿ ಹೊಲಿಸಿ ರಜಾಯಿ, ಷರಟು ಧರಿಸಿದ್ದ ಒಬ್ಬ ಬಡ ಮುದುಕ ಮಹಾತ್ಮರ ಭೇಟಿಗಾಗಿ ಬಹಳ ಹೊತ್ತು ಕಾದಿದ್ದ. ಏಕೆ ಕಾದಿರುವನೆಂದು ಕಾರ್ಯಕರ್ತರು ಸಮಾಧಾನ ಮಾಡಿಕೊಂಡು ಅವನನ್ನು ಬಾಪು ದರ್ಶನಕ್ಕಾಗಿ ಒಳಕ್ಕೆ ಬಿಟ್ಟರು. ಅವರನ್ನು ನೋಡುತ್ತಲೆ ಅವರ ಪಾದ ಮುಟ್ಟಿ ಪ್ರಣಾಮ ಸಲ್ಲಿಸಿ, ತಾನು ತಂದಿದ್ದ ಹತ್ತು ರೂಪಾಯಿಗಳ, ಒಂದು ನೂರು ಕಟ್ಟಿನ ನೋಟುಗಳನ್ನು ಅವರ ಮುಂದಿಟ್ಟ. ಬಡವರಿಗಾಗಿ ಇದನ್ನು ಕೊಡು

ತ್ತಿರುವೆ. ತಮ್ಮ ಇಚ್ಛೆಯಂತೆ ಖರ್ಚು ಮಾಡಬಹುದು. ನೀವು ಅದನ್ನು ನ್ಯಾಯವಾಗಿ ಬಳಸುತ್ತೀರಿ. ಈ ವಿಶ್ವಾಸ ನನಗಿದೆ" ಎಂದ.

ಈ ಬಡವ ಸಾವಿರ ರೂಪಾಯಿ ಹೇಗೆ ಗಳಿಸಿದನೆಂಬ ತಿಳಿಯುವ ಕುತೂಹಲದಿಂದ ಕೇಳಿದರು–"ಒಳ್ಳೆಯದು, ಈ ಮೊತ್ತ ಸೇರಿಸಲು ಎಷ್ಟು ಕಾಲ ಬೇಕಾಯಿತು."

"ಬಹಳ ವರ್ಷಗಳೇ ಬೇಕಾಯಿತು. ಇನ್ನೂ ಹೆಚ್ಚು ಹಣ ಕೊಡುತ್ತಿದ್ದೆ. ಆದರೆ ಬಿಹಾರಿನ ಭೂಕಂಪದ ಸಂತ್ರಸ್ತರ ನಿಧಿಗೆ ಒಂದು ನೂರು ರೂಪಾಯಿ; ಅಸ್ಸಾಂ ಪ್ರವಾಹ ಪೀಡಿತರ ನಿಧಿಗೆ ಒಂದು ನೂರು ; ನಾಲ್ಕು ವರ್ಷಗಳ ಹಿಂದೆ ಅಲಹಾಬಾದಿಗೆ ಬಂದಿದ್ದಾಗ ರೈತರ ನಿಧಿಗೆ ಐನೂರು ಕೊಟ್ಟೆ. ಉಳಿದಿರುವುದು ಇಷ್ಟೇ."

ಗಾಂಧೀಜಿ ಆಶ್ಚರ್ಯಚಕಿತರಾದರು. ಕಣ್ಣುಗಳಲ್ಲಿ ಹನಿಗೂಡಿದವು.

"ನಿನ್ನ ಉದ್ಯೋಗವೇನು ? ವೇತನ ಎಷ್ಟು ? ನಿನಗೆ ಬರುತ್ತಿರುವ ನಿವೃತ್ತಿ ವೇತನ ಎಷ್ಟು ? ಈ ಹಣ ಹೇಗೆ ಶೇಖರಿಸಿದೆ ?"

"ನಾನೊಬ್ಬ ಉಪಾಧ್ಯಾಯ. ವೇತನ ತಿಂಗಳಿಗೆ ರೂ.52. ನಿವೃತ್ತಿ ವೇತನ ದೊರೆಯುತ್ತಿಲ್ಲ. ಕೆಲವು ವರ್ಷಗಳ ನಂತರ 'ಗ್ರಾಚ್ಯುಯಿಟಿ' ರೂ. 2,700 ಬಂತು.

"ಯಾವಾಗ ನಿವೃತ್ತಿ ಆಯಿತು ?"

"ನಿವೃತ್ತಿಯಾಗಿ ಐದು ವರ್ಷ ಆಯಿತು."

"ನಿಮ್ಮ ಜೀವನಕ್ಕಾಗಿ ಎಷ್ಟು ವೆಚ್ಚ ಆಗುವುದು ?"

"ಸಂಕೋಚದಿಂದ "ಬಹಳ ಸ್ವಲ್ಪ."

ಗಾಂಧಿಯವರ ಕುತೂಹಲ ಮತ್ತಷ್ಟು ಕೆರಳಿತು. "ಉಣ್ಣಬೇಕಲ್ಲ. ನಿಮಗಾಗಿ ಎಷ್ಟು ಖರ್ಚು ಮಾಡುವಿರಿ ?"

ಉಪಾಯ ಕಾಣದೆ ಮುದುಕ ವಿವರಿಸಿದ. "ರೊಟ್ಟಿ, ಬೇಳೆಗೆ ಎಷ್ಟು ಬೇಕು. ತಿಂಗಳಿಗೆ ಹತ್ತು ರೂಪಾಯಿಗಿಂತ ಹೆಚ್ಚು ವೆಚ್ಚವಾಗುವುದಿಲ್ಲ. ನನಗೆ

ಆಶ್ರಿತರು ಯಾರೂ ಇಲ್ಲ. ಅಣ್ಣನ ಮಗ ಒಬ್ಬ ಇದ್ದಾನೆ. ಅವನಿಗೆ ಓದಿಸಿದೆ. ಕೆಲಸ ಮಾಡಿಕೊಂಡು ಸ್ವತಂತ್ರನಾಗಿ ಬೇರೆ ಇದ್ದಾನೆ. ಈಗ ಉಚಿತವಾಗಿ ಸಂಸ್ಕೃತ ಪಾಠ ಹೇಳಿಕೊಡುತ್ತಿರುವೆ.''

'ಅಲ್ಪ ವೇತನದಲ್ಲಿ ಇಷ್ಟು ಉಳಿತಾಯ ಮಾಡಿರುವೆ ಬಡವರಿಗಾಗಿ, ಇದು ಮಹತ್ಸಾಧನೆ. ಇತರರೂ ನಿನ್ನಿಂದ ಪಾಠ ಕಲಿಯಬಹುದು'.

'ನೀನು ತೊಟ್ಟಿರುವ ಖಾದಿ ಹೇಗೆ ಬಂತು'.

'ನಾನೇ ಸ್ವತಃ ನೂತು, ನೇಯಿಸಿದ ಖಾದಿ ಇದು. ಉಣ್ಣೆಯ ಶಾಲಿನ ಅಗತ್ಯವಿಲ್ಲ. ನನ್ನಲ್ಲಿ ಇನ್ನೂ ಸ್ವಲ್ಪ ಹಣ ಇದೆ. ಇದನ್ನು ದಯಮಾಡಿ ಸ್ವೀಕರಿಸೋಣ ವಾಗಲಿ. ನಿಮ್ಮಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ'.

ಅವನ ಸರಳ ಜೀವನ, ಭಕ್ತಿಗೆ ಸಂತುಷ್ಟರಾದರು, ಮೆಚ್ಚಿದರು. ಸುತ್ತಲೂ ಇದ್ದವರನ್ನು ನೋಡಿ— ನಾನು ಸರಳಜೀವಿ, ಜಿಪುಣ, ಬುದ್ಧಿವಂತ ಎನ್ನುತ್ತಾರೆ. ದಂತಧಾವನ, ಟೂತ್‌ಪೇಸ್ಟ್, ಸಾಬೂನಿಗಾಗಿ ತಿಂಗಳಿಗೆ ಹತ್ತು ರೂಪಾಯಿ ಎಷ್ಟೋ ಶ್ರೀಮಂತರು ವೆಚ್ಚಮಾಡುತ್ತಾರೆ. ಡಾಕ್ಟರ್ ರಾಯ್ ಹೇಳುತ್ತಾರೆ. ಹಲ್ಲುಜ್ಜಲು ಸೀಮೆಸುಣ್ಣದ ಪುಡಿ, ಅಥವಾ ಉಪ್ಪುಬೆರೆಸಿದ ಇದ್ದಿಲು ಪುಡಿ ಸಾಕು ಎಂದು. ನಾನು ಸಾಬೂನು ಬಳಸುವುದಿಲ್ಲ. ಇದ್ದಿಲು ಪುಡಿ ಬಳಸುತ್ತೇನೆ. ಬೇವು ಅಥವಾ ಜಾಲಿ ಕಡ್ಡಿಯೇ 'ಬ್ರಷ್'. ಉಳಿತಾಯದಲ್ಲಿ ನಾನೂ ಬುದ್ಧಿವಂತನಲ್ಲವೇ ಎಂದು ನಕ್ಕು ನಲಿಸಿದರು. ವೈದ್ಯನೇ ಹಲ್ಲು ಕಳೆದುಕೊಂಡರೆ ಅವನಿಗೆ ಯಾರು ಚಿಕಿತ್ಸೆ ಮಾಡಬೇಕು.

o o o o

1936 ರಲ್ಲಿ ಹಿಂದೀ ಸಾಹಿತ್ಯ ಸಮ್ಮೇಳನ ಇಂದೂರಿನಲ್ಲಿ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸೇಟ್ ಹುಕುಂಚಂದರು ತಮ್ಮ ಆನಂದ ಭವನದಲ್ಲಿ ಗಾಂಧೀಜಿ ಮತ್ತು ಸುಮಾರು 50 ಪರಿವಾರದವರಿಗೆ ಔತಣ ಏರ್ಪಡಿಸಿದ್ದರು. ಕೂಡಲು ಬೆಳ್ಳಿಯಿಂದ ಅಲಂಕೃತವಾದ ಮಣೆ, ಬೆಳ್ಳಿಯ ತಟ್ಟೆ ಬಟ್ಟಲುಗಳಲ್ಲಿ ಊಟ. ಬಾ ಮತ್ತು ಮಹಾತ್ಮರಿಗೆ ಭಂಗಾರದಿಂದ ಅಲಂಕೃತವಾದ ಮಣೆ, ಭಂಗಾರದ ತಟ್ಟೆ, ಬಟ್ಟಲು. ಸತಿ ಪತಿಯರು ಅಕ್ಕಪಕ್ಕದಲ್ಲಿ ಕುಳಿತರು. ಒಂದು ಚೀಲದಿಂದ ತಾವು ಜೈಲಿನಲ್ಲಿ ಬಳಸುತ್ತಿದ್ದ ಅಲ್ಯುಮಿನಿಯಂ ತಟ್ಟೆ, ಮಣ್ಣಿನ ಕುಡಿಕೆ ಹೊರಕ್ಕೆ ತೆಗೆದು ಭಂಗಾರದ ತಟ್ಟೆ ಬಟ್ಟಲಿನ ಪಕ್ಕದಲ್ಲಿಟ್ಟರು. ಶ್ರೀಮಂತಿಕೆ ಮತ್ತು ಬಡತನಗಳ ನಡುವಿನ ಭಿನ್ನತೆ ಎದ್ದು ಕಾಣುತ್ತಿತ್ತು. ಹುಕುಂಚಂದರು ಇದನ್ನು ನೋಡಿ, 'ನಮ್ಮ

ಮನೆಯ ತಟ್ಟೆ ಬಟ್ಟಲುಗಳಿಂದ ಊಟ ಮಾಡಿ, ತಮ್ಮ ಅಮೃತ ಹಸ್ತದಿಂದ ಅದನ್ನು ಪುನೀತಗೊಳಿಸಿ'. ಎಂದು ಕೈ ಜೋಡಿಸಿ ಬೇಡಿಕೊಂಡರು. ನಗುತ್ತಾ ಗಾಂಧೀಜಿ ಕೇಳಿದರು, ಭಂಗಾರದ ತಟ್ಟೆ ಬಟ್ಟಲಲ್ಲಿ ಊಟ ಮಾಡಿದ ಮೇಲೆ ಅದನ್ನು ಸಂಗಡಲೇ ತೆಗೆದುಕೊಂಡು ಹೋಗಲು ಅವಕಾಶ ಕೊಡುವಿರಾ' ಎಂದು ಕೇಳಿದರು.

ಂ ಂ ಂ ಂ

'ನಿಮಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆಯೇ' ಎಂದು ಒಬ್ಬ ವಕೀಲರು ಪ್ರಶ್ನಿಸಿದರು.

ಗಾಂಧೀಜಿ— 'ಖಂಡಿತ ಇದೆ. ಆದರೆ ಸಾಧಾರವಾಗಿ, ಇದನ್ನು ನಿಮಗೆ ರುಜುವಾತು ಮಾಡಿಕೊಡಲಾರೆ. ಪರಮಾತ್ಮನ ಇರುವಿಕೆಯಲ್ಲಿ ಇರುವಷ್ಟು ನಂಬಿಕೆ ಪುನರ್ಜನ್ಮದಲ್ಲೂ ಇದೆ'.

ವಕೀಲ— 'ಹಾಗಾದರೆ ಮುಂದಿನ ಜನ್ಮದಲ್ಲಿ ನಿಮ್ಮೊಡನೆ ಕೆಲಸ ಮಾಡುವ ಸುಯೋಗ ನನಗೆ ದೊರಕೀತು ಅಲ್ಲವೇ ?'

ಗಾಂಧೀಜಿ— 'ಮುಂದಿನ ಜನ್ಮದ ವರೆಗೆ ಕಾಯಲೇಕೆ ? ಈಗಲೇ ನನ್ನೊಡನೆ ಕೆಲಸ ಮಾಡಬಹುದಲ್ಲ. ಈ ಗೋಧಿ, ಅಕ್ಕಿ ಚೊಕ್ಕಟ ಮಾಡಿ' ಎಂದು ಅವರ ಮುಂದಿಟ್ಟರು.

ಂ ಂ ಂ ಂ

1942 ರಲ್ಲಿ ಸರ್‌ಸ್ಟ್ಯಾಫರ್ಡ್ ಕ್ರಿಪ್ಸ್ ಭಾರತಕ್ಕೆ ಬಂದರು. ಭಾರತೀಯರಿಗೆ ಆಡಳಿತ ವಹಿಸಿಕೊಡುವುದು ಅವರ ಉದ್ದೇಶ. ಮೊದಲು ಗಾಂಧಿಯವರನ್ನು ಅವರು ಸಂದರ್ಶಿಸಿದರು. ಕ್ರಿಪ್ಸ್, ಗಾಂಧೀಜಿ ಮತ್ತು ಇತರ ಕಾಂಗ್ರೆಸ್ ನಾಯಕರು ಮೋಟಾರಿನಲ್ಲಿ ಕುಳಿತು ಹೊರಡಲು ಹೊರಬಂದರು. ತಾವು ಮೊದಲು, ತಾವು ಮೊದಲು, ಮೋಟಾರಿನಲ್ಲಿ ಕೂಡಲು ಎಂದು ಗೌರವ ಸೂಚನೆಯ ಹಿಗ್ಗಾಟ ನಡೆಯಿತು. ಗಾಡಿಯ ಬಾಗಿಲು ತೆರೆದು ಮಾಲೀಕ ಅತಿಥಿಯನ್ನು ಮೊದಲು ಕೊಡಿಸುವುದು ಪದ್ಧತಿ. ಕ್ರಿಪ್ಸ್ ಬಾಗಿಲು ತೆರೆದು ಗಾಂಧಿಯವರನ್ನು ಕೂಡುವಂತೆ ಹೇಳಿದರು. 'ಮಾಲೀಕತ್ವ ಬಿಟ್ಟುಕೊಡಲು ನಿಮಗೆ ಇನ್ನೂ ಇಷ್ಟವಿಲ್ಲವೆಂದು ಕಾಣುತ್ತೆ' ಎಂದರು ಗಾಂಧೀಜಿ ಅರ್ಥಗರ್ಭಿತ ಹಾಸ್ಯದಲ್ಲಿ.

ಂ ಂ ಂ ಂ

ಗಾಂಧೀಜಿ, ಹರಿಜನರಿಗೆ ಪ್ರತ್ಯೇಕ ಮತಕ್ಷೇತ್ರ ನಿರ್ಮಾಣ ವಿರೋಧಿಸಿ ಯರವಾಡ ಜೈಲಿನಲ್ಲಿ ಉಪವಾಸ ಆಚರಿಸುತ್ತಿದ್ದರು. ಶಕ್ತಿ ಇರುವವರೆಗೆ ರಾಟೆಯಿಂದ ನೂಲುತ್ತಿದ್ದರು. ಶಕ್ತಿ ಉಡುಗಿ ಹೋಗುತ್ತಲೇ ಸರೋಜಿನಿಯವರನ್ನು ಬರಮಾಡಿ

ಕೊಂಡು, ನೂಲುವಂತೆ ಅವರಿಗೆ ತಿಳಿಸಿದರು. 'ನನ್ನ ಹೆಬ್ಬೆಟ್ಟು ನೋಯುತ್ತಿದೆ' ಎಂದರು ಅವರು. ''ಈಸ್ಟ್ ಇಂಡಿಯ ಕಂಪನಿಯ ನಿಯಮ ನಿಷ್ಕ್ರಿಯ ಗೊಳಿಸಲು ಬಂಗಾಳದ ಸಣ್ಣ ನೂಲಿನ ನೇಕಾರರು ತಮ್ಮ ಹೆಬ್ಬೆಟ್ಟು ಕತ್ತರಿಸಿಕೊಂಡರಂತೆ, ಒಳ್ಳೆಯ ಯುಕ್ತಿ'' ಎಂದರು ಗಾಂಧೀಜಿ.

ೲ ೲ ೲ ೲ

1921ರಲ್ಲಿ ಡಿಸೆಂಬರ್ ತಿಂಗಳಲ್ಲಿ ಅಹಮದಾಬಾದಿನಲ್ಲಿ ಕಾಂಗ್ರೆಸ್ ಮಹಾಧಿವೇಶನ ಕೂಡಿದ್ದಾಗ ಸೆರೆಯಾಳುಗಳ ಸಂಖ್ಯೆ ನಲ್ವತ್ತು ಸಾವಿರಕ್ಕೂ ಮೀರಿತ್ತು. ಈ ಅಧಿವೇಶನದ ಚುನಾಯಿತ ಅಧ್ಯಕ್ಷ ಚಿತ್ತರಂಜನ ದಾಸರು ಸೆರೆಯಾಗಿದ್ದರು. ಆದ್ದರಿಂದ ಅವರ ಬದಲು ಹಕೀಂ ಅಜ್ಮಲ್ ಖಾ಼ ಅಧ್ಯಕ್ಷರಾಗಿದ್ದರು. ಗಾಂಧಿಯವರನ್ನು ಮಾತ್ರ ಬಂಧಿಸಿರಲಿಲ್ಲ. ಅವರ ಮುಖ್ಯ ಅನುಯಾಯಿಗಳನ್ನು ಬಂಧಿಸಿ ಅವರ ಕೈಕಾಲು ಮುರಿದಂತೆ ಮಾಡುವುದು ಸರ್ಕಾರದ ಉದ್ದೇಶವಿದ್ದಿತೆಂದು ಊಹಿಸಬಹುದು. ದೇಶವನ್ನು ಹೋರಾಟಕ್ಕೆ ಅಣಿಮಾಡಲು ಮಹಾತ್ಮರಿಗೆ ಸರ್ವಾಧಿಕಾರ ಈ ಅಧಿವೇಶನ ಕೊಟ್ಟಿತು. ರಚನಾತ್ಮಕ ಕಾರ್ಯದಲ್ಲಿ ದೇಶ ತೊಡಗಬೇಕು. ವಿಚಾರ ವಿನಿಮಯ ಮಾಡಲು ಬ್ರಿಟಿಷ್ ಪ್ರಭುತ್ವ ಚಕ್ರಗೋಷ್ಠಿ ಕರೆಯಬೇಕೆಂಬ ನಿರ್ಣಯ ಗಾಂಧೀಜಿ ಮಂಡಿಸಿದರು. ಬ್ರಿಟಿಷ್ ಚಕ್ರಾಧಿಪತ್ಯದಲ್ಲೇ ಉಳಿದು ಸ್ವರಾಜ್ಯ ಗಳಿಸುವುದು ಅಂದಿನ ಕಾಂಗ್ರೆಸ್ ಧೋರಣೆ ಆಗಿತ್ತು. ಹಜರತ್ ಮೊಹಾನಿ ಅವರು ಪೂರ್ಣ ಸ್ವಾತಂತ್ರ ಕಾಂಗ್ರೆಸ್ಸಿನ ಧ್ಯೇಯವಾಗಬೇಕೆಂಬ ತಿದ್ದುಪಡಿ ಮಂಡಿಸಿದರು. ಬ್ರಿಟಿಷ್ ಪ್ರಭುತ್ವದಲ್ಲಿ ಪೂರ್ಣವಾಗಿ ವಿಶ್ವಾಸ ಕಳೆದುಕೊಳ್ಳದಿದ್ದ ಗಾಂಧೀಜಿ ಇದನ್ನು ವಿರೋಧಿಸಿದರು. ರಂಗನಾಥ ದಿವಾಕರರ ಮೇಲೆ ರಾಜದ್ರೋಹದ ವಾರೆಂಟ್ ಹೊರಡಿಸಲಾಗಿತ್ತು. ವಾರಂಟ್ ಇದ್ದುದನ್ನು ಗಾಂಧೀಜಿ ಅವರಿಗೆ ರಂಗರಾಯರು ತಿಳಿಸಿದರು. ವಾರಂಟ್ ಹೊರಡಿಸುವಷ್ಟು ಸುದೈವಿ ನಾನಲ್ಲವಲ್ಲ ಎಂದು ನಕ್ಕರು. ನಮ್ಮನ್ನೆಲ್ಲ ಮೊದಲು ಕಳುಹಿ ಆಮೇಲೆ ನೀವು ಹೋಗುವವರು, ಎಂದು ದಿವಾಕರರು ಉತ್ತರಿಸಿದರು. ಅವರು ಮತ್ತಷ್ಟು ಗಹಗಹಿಸಿ ನಕ್ಕರು. ಎಂಥ ಸಂಕಟ ಸನ್ನಿವೇಶದಲ್ಲೂ ನಗಿಸುವ ಮತ್ತು ನಗುವ ಸಾಮರ್ಥ್ಯ ಅವರಿಗಿತ್ತು.

ೲ ೲ ೲ ೲ

1922ರಲ್ಲಿ ಗಾಂಧೀಜಿ ಯರವಾಡ ಜೈಲಿನಲ್ಲಿದ್ದರು. ಜೈಲಿನ ಅಧಿಕಾರಿ ಜೋನ್ಸ್ ಎಲ್ಲರಾಜಕೀಯರನ್ನು ಒಂದೆಡೆ ಸೇರಿಸಿದ್ದರು. ಬ್ರಿಟಿಷ್ ಸರ್ಕಾರದ ವಿರುದ್ಧ ನೀವು ಎಲ್ಲರೂ ಕೂಡಿ ಒಳಸಂಚನ್ನೇನು ನಡೆಸಿಲ್ಲವಲ್ಲ ಎಂದು ಜೋನ್ಸ್, ಗಾಂಧಿಯವರನ್ನು ಕೇಳಿದರು. "ನಾವೆಲ್ಲರೂ ಒಟ್ಟುಗೂಡಿದ ಮೇಲೆ ಮತ್ತೇನು ಮಾಡಬೇಕೆನ್ನುವಿರಿ? ಗಂಡ ಹೆಂಡತಿ ಒಟ್ಟಾಗಿ ಸೇರಿದಾಗ ತಮ್ಮ ಸುಖದುಃಖದ ಮಾತುಗಳನ್ನಾಡಕೂಡದೆಂದು ಹೇಳಿದ ಹಾಗಲ್ಲವೇ ಇದು? ನಮ್ಮದು ಒಳಸಂಚಲ್ಲ, ಪೂರಾ ಹೊರಸಂಚು, ಬಹಿರಂಗ ಸಂಚು" ಎಂದು ಮತ್ತೆ ಮಾತು ಜೋಡಿಸಿದರು.

1924ರಲ್ಲಿ ಬೆಳಗಾಂವಿಯಲ್ಲಿ ಕಾಂಗ್ರೆಸ್ ಮಹಾಧಿವೇಶನ ನೆರವೇರಿತು. ಕಾಂಗ್ರೆಸ್ಸಿನ ಸರ್ವಾಧಿಕಾರಿ ಮಾರ್ಗದರ್ಶಕ ಎನಿಸಿಕೊಂಡಿದ್ದ ಮಹಾತ್ಮರು ಇದೊಂದೇ ಅಧಿವೇಶನದ ಅಧ್ಯಕ್ಷರಾಗಿದ್ದುದು. ಕರ್ನಾಟಕ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಡೆದ ಅಧಿವೇಶನ. ಗಂಗಾಧರರಾವ್ ದೇಶಪಾಂಡೆ ಸ್ವಾಗತ ಸಮಿತಿಯ ಅಧ್ಯಕ್ಷರು. ಗಾಂಧೀಜಿ ಉಳಿದುಕೊಂಡಿದ್ದ ಖಾದಿ ಕುಟಿಗೆ 'ವಿದ್ಯಾರಣ್ಯ ಆಶ್ರಮ' ಎಂದು ಹೆಸರಿಸಲಾಗಿತ್ತು. ನಾರಾಯಣ ಸಂಗಮ ಈ ಆಶ್ರಮದ ಕಾವಲುಗಾರನಾಗಿದ್ದ. ಇವನ ಅನುಮತಿ ಇಲ್ಲದೆ ಯಾರೂ ಒಳ ಹೋಗುವಂತಿಲ್ಲ. ಇಂಥವರನ್ನು ಒಳಕ್ಕೆ ಬಿಡಲೇ ಎಂದು ಮಹಾತ್ಮರನ್ನು ಕೇಳಿ, ಅಪ್ಪಣೆ ಆದರೆ ಒಳಕ್ಕೆ ಬಿಡುವನು. ಒಂದು ದಿನ ಗಾಂಧಿಯವರನ್ನೇ ಬಾಗಿಲಲ್ಲಿ ತಡೆದು ನಿಲ್ಲಿಸಿದ. ಅವನ ಧಾರ್ಷ್ಟ್ಯಕ್ಕೆ ಬೆರಗಾಗಿ ಇದೇನು ಎಂದು ಗಾಂಧೀಜಿ ಕೇಳಿದರು. ತನ್ನ ದಲದ ಸ್ವಯಂ ಸೇವಕನನ್ನು ನಾರಾಯಣ ಬಾಗಿಲಿಗೆ ಅಡ್ಡಲಾಗಿ ನಿಲ್ಲಿಸಿದ್ದ. ನಿಮಗೆ ಸ್ವಯಂ ಸೇವಕರಿಂದ ವಂದನೆ ಅರ್ಪಿಸಲು ಹೀಗೆ ಮಾಡಿರುವೆ ಎಂದ. 'ನಮಸ್ತೆ' ಆಜ್ಞೆ ಕೊಟ್ಟ. ವಂದನೆ ಸ್ವೀಕರಿಸಿ ನಗುತ್ತ ಹುಡುಗನಾದರೂ ನಿನ್ನ ಸಾಹಸ ಮೆಚ್ಚತಕ್ಕದ್ದೇ ಎಂದರು. ನಾರಾಯಣ ಹೆಮ್ಮೆಯಿಂದ ಉಬ್ಬಿದ. ಕುಂಟು ಇಂಗ್ಲೀಷಿನಲ್ಲಿ ಹೇಳಿದ. "ನಾನು ಸಣ್ಣವನಾದರೂ ನನ್ನ ದಲದ ಅನೇಕರಿಗೆ ಕುಡುಮೀಸೆ ಇದೆ". ಆಗ ಗಾಂಧೀಜಿ ನಗುತ್ತ, ಇಲ್ಲಿ ಬಂದವರ ಮೇಲೆ ಏರಿಹೋಗಿ, ನಿನ್ನ ಸ್ವಯಂ ಸೇವಕರು ತಮ್ಮ ಕೊಕ್ಕೆ ಮೀಸೆಗಳಿಂದ ಕುಕ್ಕಿ ಬಿಡುವರೋ ? ಆದರೆ ಅವರ ಮೀಸೆ ನನ್ನ ಗಲ್ಲಕ್ಕೆ ಮಾತ್ರ ಗುರಿ ಇಡದಿರಲಿ," ಎಂದು ತಮ್ಮ ಹಾಸ್ಯಕ್ಕೆ ತಾವೇ ಗಹಗಹಿಸಿ ನಕ್ಕರು. ಆ ಮುಂದೆ ಇವರನ್ನು ನೋಡಿದಾಗಲೆಲ್ಲ ತಮ್ಮ ಮೀಸೆ ಸವರಿಕೊಳ್ಳುತ್ತ ದೂರದಿಂದಲೇ ಕಿರುನಗೆ ಬೀರಿ ಹೋಗುತ್ತಿದ್ದರು.

o o o o

ಈ ಅಧಿವೇಶನದಲ್ಲಿ ಸ್ವಯಂ ಸೇವಕರಿಗೆ ಚಪಾತಿಯನ್ನು ಕುಟ್ಟಿ ಹುಡಿ ಮಾಡಿ ಬೆಲ್ಲ ಬೆರೆಸಿ ದೊಡ್ಡ ಉಂಡೆಗಳಾಗಿ ಮಾಡಿಕೊಡುತ್ತಿದ್ದರು. ಗಾಂಧಿಯವರಿಗೆ ಇಂಥ ಉಂಡೆ ಕೊಡಬೇಕೆನಿಸಿತು, ನಾರಾಯಣ ಸಂಗಮನಿಗೆ. ಆದರೆ ಗುಂಡುಕಲ್ಲಿನಂತಿದ್ದ ಈ ಉಂಡೆ ಗಾಂಧೀಜಿ ತಿನ್ನಬಲ್ಲರೇ ಎಂಬ ಶಂಕೆಯಿಂದ, ಉಂಡೆ ಕೊಟ್ಟರೆ ತಿನ್ನುವಿರಾ ಎಂದು ಕೇಳಿಯೇ ಬಿಟ್ಟ.

"ಉಂಡೆ ಕೊಟ್ಟರೆ ಯಾರು ಬಿಟ್ಟಾರು. ಎಲ್ಲಿ ಕೊಡು" ಎಂದು ಕೈ ಚಾಚಿದರು.

ಆದರೆ ವಾಸ್ತವವಾಗಿ ನಾರಾಯಣನಲ್ಲಿ ಉಂಡೆ ಇರಲಿಲ್ಲ. ಇಲ್ಲ, ಈಗ ಇಲ್ಲ, ತರುತ್ತೇನೆ, ಎಂದು ತಲೆ ತಗ್ಗಿಸಿದ.

"ಎಲಾ ಘಟಿಂಗ, ನನಗೆ ಆಸೆ ತೋರಿ ಮೋಸ ಮಾಡುವಿಯಾ?'' ಎಂದು ಕಿವಿ ಹಿಂಡಿದರು.

ಮಾರನೆಯ ದಿನ ದೊಡ್ಡ ಉಂಡೆ ತಂದು ಉಂಡೆ ತಂದಿದ್ದೇನೆ ಎಂದು ತೋರಿಸಿದ. ಆ ಉಂಡೆಗಳ ಗಾತ್ರ ನೋಡಿ ಕಣ್ಣರಳಿಸಿ, ಮುಖ ಕೊಂಕಿಸಿ, ಒಂದು ಕ್ಷಣ ಸುಮ್ಮನೆ ನಿಂತು, "ಇವನ್ನು ನಾನೆಷ್ಟು ದಿನ ತಿಂದರೂ ಸವೆಸಲು ಸಾಧ್ಯವೆಂದು ಕಾಣುವುದಿಲ್ಲ. ಆದರೂ ನೀನು ತಂದಿರುವೆ, ತಾ" ಎಂದರು. ಆ ಉಂಡೆ ಕೈಯಿಂದ ಮುರಿಯಲು ಮಾಡಿದ ಪ್ರಯತ್ನ ಫಲಿಸಲಿಲ್ಲ. ಅಷ್ಟು ಗಟ್ಟಿ.

"ಈ ಉಂಡೆ ಮುರಿಯಲು ಸ್ವಯಂಸೇವಕರ ಬಾಹುಬಲವೇ ಬೇಕೆಂದು ಕಾಣುತ್ತೆ. ನೀವೇ ನನಗಾಗಿ ಈ ಉಂಡೆಗಳನ್ನು ನುಂಗಿಬಿಡು. ಆದರಿಂದ ನನಗೆ ಸಂತೋಷವಾಗುತ್ತೆ. ಆದರೆ ಒಂದು ಮಾತು. ಹಂಚುವಾಗ ಹೆಚ್ಚು ಕಡಿಮೆ ಎಂದು ನಿನ್ನ ಸ್ವಯಂ ಸೇವಕರು ಜಗಳವಾಡಿದರೆ, ನಾಯಕನೆಂದು ಮಾರ್ಜಾಲಗಳ ಜಗಳ ತೀರಿಸಿದ ಮಂಗನಂತೆ, ತಕ್ಕಡಿ ಹಿಡಿದು ಮಾತ್ರ ಕೂಡಬೇಡ. ನ್ಯಾಯ ತೀರಿಸುವ ನೆಪದಲ್ಲಿ ಉಂಡೆಯನ್ನೇ ನೀನು ತೀರಿಸಿ, ಅವರಿಗೆ ಬರಿಗೈ ಮಾಡೀಯೇ, ಜೋಕೆ," ಎಂದು ನಗುತ್ತಾ ಉಂಡೆಗಳನ್ನು ಹಿಂತಿರುಗಿಸಿ ಕೊಟ್ಟು ಹೊರಟರು.

o o o o

ಟಾನ್‌ಯಾನ್‌ಷಾನ್ ರವೀಂದ್ರರ ವಿಶ್ವಭಾರತಿಯ ಚೀನಾ ವಿಭಾಗದ ವ್ಯವಸ್ಥಾಪಕರು. ಇವರು ಟಿಬೆಟ್ಟಿಗೆ ಹೋಗಿ ದಲೈಲಾಮಾ ಅವರಿಂದ ಮಹಾತ್ಮರಿಗೆ ಶುಭ ಹಾರೈಸುವ ಪತ್ರ ತಂದರು. ಸ್ವಹಸ್ತ ಬರೆದ ಪತ್ರ. ಪವಿತ್ರ ಬಿಳಿಯ ರೇಷ್ಮೆ ವಸ್ತ್ರದಲ್ಲಿ ಸುತ್ತಿ ತಂದಿದ್ದರು. ಟಿಬೆಟ್ ಲಿಪಿ. ಓದಿ ತಿಳಿಸಲು ಟಾನ್‌ಯಾನ್‌ಷಾನ್ ಅವರಿಗೂ ಲಿಪಿ ತಿಳಿಯದು. ಏನೇ ಆಗಲಿ ದಲೈಲಾಮ ಅವರ ಪತ್ರ ಗೌರವ ಯೋಗ್ಯ. ಅವರ ಭಾಷೆ, ಲಿಪಿ ಎರಡೂ ನನಗೆ ಅರ್ಥವಾಗದು. ಅವರಿಗೆ ಗುಜರಾತಿ ಅರ್ಥವಾಗದು. ಆದ್ದರಿಂದ ಗುಜರಾತಿಯಲ್ಲೇ ಉತ್ತರ ಬರೆದು ಕಳುಹಿಸುವೆ ಎಂದರು. ಹಾಗೆಯೇ ಮಾಡಿದರು.

o o o o

ಮಾರ್ಚ್ 1938ರಲ್ಲಿ ಒರಿಸ್ಸಾದ ಹಿಲಾಂಗಿನಲ್ಲಿ ಗಾಂಧೀ ಸೇವಕ ಸಂಘದ ಸಭೆ ನೆರೆದಿತ್ತು. ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯ ಅವರೂ ಸಭೆಯಲ್ಲಿ ಕುಳಿತಿದ್ದರು. ಅವರು ಹೊದ್ದಿದ್ದ ಖಾದಿ ಶಾಲು ಹರಿದು ದೊಡ್ಡ ಕಿಂಡಿ ಕಾಣಿಸುತ್ತಿತ್ತು. ಸುಮ್ಮನಿರಬೇಕಲ್ಲ ಗಾಂಧೀಜಿ. 'ನಿಮ್ಮ ವಸ್ತ್ರದಲ್ಲಿ ಕಾಣುವ ರಂಧ್ರ ಬಡತನದ ಕುರುಹಲ್ಲ. ಹೆಂಡತಿ ಇಲ್ಲದಿರುವಿಕೆ, ಇದ್ದರೂ ಧೂರ್ತಳು ಅಥವಾ ಸೋಮಾರಿತನ ಇದರಿಂದ ವ್ಯಕ್ತವಾಗುತ್ತೆ,' ಎಂದು ಚೀಟಿ ಬರೆದು ಕಳುಹಿಸಿದರು.

ಚೈತ್ರಯಾತ್ರೆ ನಡೆಸುತ್ತ ಗಾಂಧೀಜಿ ದಾಂಡಿಗೆ ಬಂದರು. ಮಾರನೆಯ ಬೆಳಿಗ್ಗೆ ಉಪ್ಪು ಆಯಲು ಸ್ಥಳ ಗೊತ್ತುಮಾಡಿರುವಿರಾ ಎಂದು ಪ್ರಶ್ನಿಸಿದರು. ಖಾದಿಧಾರಿ ಗುಪ್ತಚಾರರು ನನ್ನ ಎದುರಿನಲ್ಲೇ ಕುಳಿತಿದ್ದಾರೆ, ಅವರಿಗೆ ತಿಳಿದರೆ, ಗೊತ್ತಾದ ಸ್ಥಳ ದಲ್ಲಿ ಉಪ್ಪು ದೊರೆಯದಂತೆ ಮಾಡಿಯಾರು, ಜೋಕೆ. ಬೇರೊಂದು ಸ್ಥಳವೂ ನಿಶ್ಚಿತ ವಾಗಿರಲಿ. ಆದರೆ ವಿಶಾಲ ಬ್ರಿಟಿಷ್ ಸಾಮ್ರಾಜ್ಯದಲ್ಲಿ ತನಗೆ ಆಯಲು ಚಿಟಿಕೆ ಉಪ್ಪು ಸಹ ದೊರೆಯದ ಅಪವಾದಕ್ಕೆ ಪ್ರಭುತ್ವ ಗುರಿಯಾಗದಿರಲಿ ಎಂದರು. ತಿಳಿ ಚುಚ್ಚು ಹಾಸ್ಯದ ಎಚ್ಚರಿಕೆ ಎಲ್ಲ ಒಂದೇ ವಾಕ್ಯದಲ್ಲಿ ಅಡಕವಾಗಿತ್ತು.

o o o o

ಆಶ್ರಮದ ಒಬ್ಬ ಹುಡುಗಿ ಬಟ್ಟೆಯ ಮೇಲೆ ಮಸಿ ಚೆಲ್ಲಿಕೊಂಡು ತಾತನ ಜತೆ ಯಲ್ಲಿ ನಡೆಯಲು, ಬಟ್ಟೆ ಬದಲಾಯಿಸಿಕೊಳ್ಳದೆ ಹಾಗೆಯೇ ಓಡಿ ಬಂದಳು. ಗಂಗಾ ಯಮುನಾ ಸಂಗಮ ವಸ್ತ್ರದ ಮೇಲೆ ಆಗಿದೆ ಎಂದರು ಗಾಂಧೀಜಿ. ಪ್ರಯಾಗ ಗಂಗಾ–ಯಮುನೆಯರ ಸಂಗಮಕ್ಕೆ ಪ್ರಸಿದ್ಧವಾದ ಕ್ಷೇತ್ರ. ಇಲ್ಲಿ ಯಮುನೆಯ ನೀರು ಕಪ್ಪಾಗಿಯೂ, ಗಂಗೆಯ ನೀರು ತಿಳಿಯಾಗಿಯೂ ಕಾಣಿಸುತ್ತದೆ. ಈ ಉಪಮಾನ ಮಕ್ಕಳಿಗೂ ಅರ್ಥವಾಗುವಂತೆ ಆಮೇಲೆ ವಿವರಿಸಿದರು. ಪಾಠವೂ ಆಯಿತು. ಹಾಸ್ಯವೂ ಆಯಿತು.

ಹಸ್ತಾಕ್ಷರ

ದೊಡ್ಡವರ ಹಸ್ತಾಕ್ಷರ ಸಂಗ್ರಹಿಸುವುದು ಕೆಲವರ ಚಪಲ. ಅಪ್ರಯೋಜಕವೂ ಅಲ್ಲ. ಇಂಥ ಮಹನೀಯರನ್ನು, ಇಂಥದಿನ ನಾನು ಕಂಡಿದ್ದೆ ಎಂದು ಕಾಲಾನಂತರ ಸ್ಮರಿಸಿಕೊಳ್ಳಲು ಅವಕಾಶ ಕೊಡುತ್ತದೆ. ಎಲ್ಲಿ ಹೋದರೂ ಹಸ್ತಾಕ್ಷರ ಕೊಡುವಂತೆ ಮಹಾತ್ಮರನ್ನು ಕಾಡುವರು. ಮಹಾತ್ಮರ ಹಸ್ತಾಕ್ಷರ ನನ್ನಲ್ಲಿದೆ ಎಂಬ ಹೆಮ್ಮೆ. ಬಿಡುವಿಲ್ಲದ ಗಾಂಧಿಯವರಿಗೆ ಇದರಿಂದ ಅನಾನುಕೂಲವಾಗುತ್ತಿತ್ತು. ನೂರಾರು, ಸಹಸ್ರಾರು ಜನ ಹಸ್ತಾಕ್ಷರ ಬೇಡುವವರೇ. ಈ ಕಾಟದಿಂದ ತಪ್ಪಿಸಿಕೊಳ್ಳಲು ಗಾಂಧೀಜಿ ಒಂದು ಉಪಾಯ ಮಾಡಿದರು. ಪ್ರತಿಯೊಂದು ಹಸ್ತಾಕ್ಷರಕ್ಕೂ ಐದು ರೂಪಾಯಿ ರುಸುಂ. ಬಡವನಿರಲಿ ಬಲ್ಲಿದನಿರಲಿ ರೂಪಾಯಿ ತೆರಬೇಕು. ಕಟ್ಟುನಿಟ್ಟಾಗಿ ನಿಯಮಕ್ಕೆ ಎಲ್ಲರನ್ನೂ ಒಳಪಡಿಸುತ್ತಿದ್ದರು. ಈ ರೀತಿಯಲ್ಲಿ ಸಂಗ್ರಹವಾದ ಹಣ ಹರಿಜನ ನಿಧಿಗೆ ಜಮಾ ಆಗುತ್ತಿತ್ತು.

1934 ರಲ್ಲಿ ಹರಿಜನ ಪ್ರವಾಸದಲ್ಲಿ ಗಾಂಧೀಜಿ ಬೆಂಗಳೂರಿಗೆ ಬಂದರು. ಅಲ್ಲಿಂದ ಸಮೀಪದ ಕೆಂಗೇರಿ ಗ್ರಾಮದಲ್ಲಿ ನಡೆದ ಸಮ್ಮೇಳನಕ್ಕೆ ಆಗಮಿಸಿದ್ದರು. ಅರ್ಜುನನ್ ಎಂಬ ವಿದ್ಯಾರ್ಥಿ ತನ್ನ ಹಸ್ತಾಕ್ಷರ ಸಂಗ್ರಹಿಸುವ ಪುಸ್ತಕ ಅವರ ಮುಂದಿಟ್ಟು ಸಹಿ ಮಾಡುವಂತೆ ಬೇಡಿದ. ಐದು ರೂಪಾಯಿ ಕೊಡು ಎಂದರು ಗಾಂಧೀಜಿ. ನಾನು ಬಡವ, ನನ್ನಲ್ಲಿ ಹಣವಿಲ್ಲ. ಶ್ರೀಮಂತರಿಂದ ನೀವು ಹಣ ಪಡೆಯಬಹುದು. ಇದಕ್ಕಾಗಿಯೇ ನನ್ನ ದೇಹ ತೇದಿರುವೆ ಎಂದ ಅರ್ಜುನ. ಜೀವ ಬಹಳ ದೊಡ್ಡದು. ಅದರ ಉದ್ದೇಶ ಘನವಾದುದು, ಮಹತ್ವದ್ದು. ಇಂಥ ಅಲ್ಪ ಉದ್ದೇಶಕ್ಕಾಗಿ ಜೀವ ಕೊಡುವುದು ಉಚಿತವಲ್ಲ ಎಂದರು ಗಾಂಧೀಜಿ. ಅರ್ಜುನನ ಮನಸ್ಸಿನಲ್ಲಿದ್ದುದು, ಹರಿಜನರಿಗಾಗಿ ತಾನು ತುಂಬ ಶ್ರಮಿಸಿರುವೆ ಎಂದು. ಆದರೆ ತನ್ನ ಅಭಿಪ್ರಾಯ ಸರಿಯಾಗಿ ತಿಳಿಸಲು ಅವನಿಗೆ ಬಾರದು. ಅಲ್ಲದೆ ವೇಳೆಯೂ ಆದೀತು. ಆದರೆ ಬಾಪೂಜಿ ಅದನ್ನು ತಪ್ಪಾಗಿ ಅರ್ಥ ಮಾಡಿಕೊಂಡರು. ಗೀತಾ ಕಂಠ ಸ್ಪರ್ಧೆಯಲ್ಲಿ ಅರ್ಜುನ ಬೆಳ್ಳಿಯ ಪದಕ ಬಹುಮಾನವಾಗಿ ಅಂದು ಪಡೆದಿದ್ದ. ಇದನ್ನು ತೆಗೆದುಕೊಂಡು ಸಹಿ ಮಾಡಿ ಕೊಡಿ ಎಂದ. ಕೋಮಟಿ ಬಾಪು, ಇದು ಐದು ರೂಪಾಯಿ ಬಾಳೀತೆ ಎಂದು ಕೇಳಿದರು. ಉಚಿತವಾಗಿ ತೆಗೆದುಕೊಳ್ಳಿ, ಪ್ರತಿಯಾಗಿ ಹಸ್ತಾಕ್ಷರ ಕೊಡಿ ಎಂದ. ಪದಕ ತೆಗೆದುಕೊಂಡು ಲಿಲಾವು ಮಾಡಿದರು. ನಾಲ್ಕು ರೂಪಾಯಿಗಿಂತ ಹೆಚ್ಚು ಕೊಡಲು ಯಾರೂ ಸಿದ್ಧವಿರಲಿಲ್ಲ. ಒಂದು

ರೂಪಾಯಿ ಕಡಿಮೆ ಆಯಿತು. ಹಸ್ತಾಕ್ಷರ ಕೊಡಲು ಸಾಧ್ಯವಿಲ್ಲ ಎಂದರು ನಿರ್ದಯೆಯಿಂದ ಗಾಂಧೀಜಿ. ಅರ್ಜುನನ್ ಸಪ್ಪೆ ಮೋರೆ ಹಾಕಿಕೊಂಡು ಕುಳಿತ. ಇದನ್ನೆಲ್ಲ ಸಮೀಪದಲ್ಲೇ ಕುಳಿತಿದ್ದ ಶಂಕರ್‌ಲಾಲ್ ಬ್ಯಾಂಕರ್ ಗಮನಿಸಿದ್ದರು. ಸಭೆ ಮುಕ್ತಾಯವಾದ ಮೇಲೆ ಅರ್ಜುನನ್ ಹರಿಜನ ಬಾಲಕ. ಗೀತೆ ಚೆನ್ನಾಗಿ ಪಠಿಸುತ್ತಾನೆ ಎಂದು ಹೇಳಿ ರುಜು ಹಾಕಿಸಿಕೊಟ್ಟರು.

ಕೆಂಗೇರಿಯಲ್ಲಿ ಜಿಲ್ಲಾ ಬೋರ್ಡಿನವರು ಹರಿಜನರಿಗಾಗಿ ಕಟ್ಟಿಸಿದ್ದ ಬಾವಿಯಿಂದ ಬೆಳ್ಳಿ ಚಂಬಿನಲ್ಲಿ ನೀರು ಸೇದಿ, ನೀರನ್ನು ಎಲ್ಲರಿಗೂ ತೀರ್ಥದಂತೆ ಹಂಚಿ ಪ್ರಾರಂಭೋತ್ಸವ ನೆರವೇರಿಸಿದರು. ಅಲ್ಲಿಂದ ಸಭೆಗೆ ನಡೆದರು. ಈ ಸಭೆಯಲ್ಲೇ ನೀರು ಸೇದಿದ ಬೆಳ್ಳಿಯ ಚಂಬು, ಅರ್ಜುನನು ಕೊಟ್ಟ ಪದಕ ಮತ್ತು ಯಾರೋ ಬಹುಮಾನವಾಗಿ ಕೊಟ್ಟಿದ್ದ ಗಾಂಧಿಯವರ ಸಣ್ಣ ವಿಗ್ರಹ ಹರಾಜು ಮಾಡಿದರು. ಸಭೆಯಲ್ಲಿದ್ದ ಒಬ್ಬ ಆಂಗ್ಲ ಆದನ್ನು 25 ರೂಪಾಯಿಗಳಿಗೆ ಸವಾಲು ಮಾಡಿ ಪಡೆದ. 'ಇದು ನನ್ನ ವಿಗ್ರಹವಂತೆ, ನನ್ನನ್ನು ಯಾರು ಕೊಳ್ಳುವಿರಿ' ಎಂದು ಹಾಸ್ಯ ಮಾಡುತ್ತ ವಿಗ್ರಹ ಹರಾಜು ಮಾಡಿದರು. ಕೊಂಡ ಆಂಗ್ಲ ಅತುಲಾನಂದದಿಂದ, ವಿಗ್ರಹ ತನ್ನ ತಲೆಯ ಮೇಲಿರಿಸಿಕೊಂಡು ನಾಟ್ಯವಾಡಿದ.

ಮಂಗಳೂರಿನಲ್ಲಿ ಗಾಂಧೀಜಿ ರಾಟೆಯಿಂದ ನೂಲು ತೆಗೆಯುತ್ತಿರುವಂತೆ ಮರದಲ್ಲಿ ಕಡೆದ ಕೆತ್ತನೆಯ ಕೃತಿ, ಮಹಾತ್ಮರಿಗೆ ಅರ್ಪಿಸಲಾಯಿತು. ಕೀಲು ತಿರುಗಿಸಿದರೆ ರಾಟೆ ಸುತ್ತುತ್ತಿತ್ತು. "ನೂಲುವ ಪೈಲ್ವಾನ್ ನೋಡಿ. ಇದರ ಕಿಮ್ಮತ್ತು ಕಟ್ಟಲು ಸಾಧ್ಯವಿಲ್ಲ. ಯಾರು ಬೇಕಾದರೂ ಸವಾಲ್ ಕೂಗಬಹುದು" ಎಂದು ರೂ. 5ರಿಂದ ಪ್ರಾರಂಭಿಸಿ ರೂ. 35ಕ್ಕೆ ಮಾರಿದರು. ಗಾಂಧಿಯವರಿಗೆ ಗೌರವಾದರಗಳಿಂದ ಕೊಡಲಾಗುತ್ತಿದ್ದ ಕರಂಡ, ಪೂಮಾಲೆ, ಸ್ತ್ರೀಯರು ಸಮರ್ಪಿಸುತ್ತಿದ್ದ ಆಭರಣ ಎಲ್ಲವನ್ನು ಲಿಲಾವು ಮಾಡಿ ಹರಿಜನ ನಿಧಿಗೆ ಸೇರಿಸುತ್ತಿದ್ದರು. ಕಟ್ಟು ಹಾಕಿ ಕೊಡುತ್ತಿದ್ದ ಸನ್ಮಾನ ಪತ್ರಗಳ ಚೌಕಟ್ಟು ತೆಗೆಸಿ, ಮಾನ ಪತ್ರಗಳನ್ನು ಮಾತ್ರ ಜಾಕಾಯಿ ಪೆಟ್ಟಿಗೆಗಳಲ್ಲಿ ಜೋಪಾನ ಮಾಡಿಸಿ, ಭಾಂಗಿ ಮಾಡಿ ರೈಲಿನ ಮೂಲಕ ವರ್ಧಾ ಆಶ್ರಮಕ್ಕೆ ಕಳುಹಿಸುತ್ತಿದ್ದರು. ಬೆಂಗಳೂರಿನ ಮುಲ್ತಾನಿ, ಗುಜರಾತಿ, ಸಿಂಧಿ ಮತ್ತು ಸ್ಥಳೀಯ ವರ್ತಕರು ಕೂಡಿ ಅರ್ಪಿಸಿದ ಗಂಧದ ಕರಂಡ ವಕೀಲ ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರಿಗೆ ರೂ. 400, ಲಿಲಾವು ಮಾಡಿದರು.

ಮದರಾಸಿನ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಎ. ಎಸ್. ಐಯ್ಯರ್ ವಾಕ್ಚತುರರು, ಹಾಸ್ಯ ಪ್ರವೀಣರು ಹರಿಜನ ನಿಧಿಗೆ ಐದು ರೂಪಾಯಿ ಕಾಣಿಕೆ

ಕೊಟ್ಟು ಹಸ್ತಾಕ್ಷರ ಬೇಡಿದರು. ದೇವನಾಗರಿ ಲಿಪಿಯಲ್ಲಿ ಗಾಂಧೀಜಿ ಸಹಿ ಮಾಡಿದರು.

ಅಯ್ಯರ್— "ತಮಿಳಿನಲ್ಲಿ ಸಹಿ ಮಾಡಿ"

ಗಾಂಧೀಜಿ— "ಸರಿ, ನೂರು-ರೂಪಾಯಿ ಕೊಡಿ."

ಅಯ್ಯರ್— "ಹಿಂದಿ ತಮಿಳಿನ ನಡುವೆ ಈ ವ್ಯತ್ಯಾಸವೇಕೆ? ಐದು ರೂಪಾಯಿ ಮಾತ್ರ ಕೊಡುವೆ."

ಗಾಂಧೀಜಿ ಮುಗುಳ್ನಕ್ಕು ಐದು ರೂಪಾಯಿ ಪಡೆದು ಸಹಿ ಮಾಡಿಕೊಟ್ಟರು.

ಅಯ್ಯರ್—"ಈ ಆಂಗ್ಲದಲ್ಲಿ ಸಹಿಮಾಡಿ"

ಗಾಂಧೀಜಿ— "ಭಾರತೀಯರೊಬ್ಬರಿಗೆ ಆಂಗ್ಲದಲ್ಲಿ ಸಹಿಮಾಡಿ ಕೊಡಲು ಒಪ್ಪಲಾರೆ"

ಅಯ್ಯರ್— "ತಾವು ಜಾತಿ, ಮತ ಮತ್ತು ಭಾಷೆಗಳ ನಡುವೆ ಭೇದವೆಣಿಸದವರು ಎಂದು ನಿರೂಪಿಸಲು ಇದನ್ನು ಕೇಳುತ್ತಿದ್ದೇನೆ."

ತುಸು ಚಿಂತಿಸಿ, ಬಾಪು ಯಾವ ವಿರೋಧವನ್ನು ಪ್ರಕಟಿಸದೆ ಆಂಗ್ಲದಲ್ಲಿ ಸಹಿ ಮಾಡಿಕೊಟ್ಟರು. ಐದು ರೂಪಾಯಿ ಪಡೆದರು. ಏಕಕಾಲದಲ್ಲಿ ಮೂರು ಭಾಷೆಗಳಲ್ಲಿ ಸಹಿ ಮಾಡಿಕೊಟ್ಟ ನಿದರ್ಶನ ಅವರ ಜೀವನ ಚರಿತ್ರೆಯಲ್ಲಿ ದೊರೆಯದು. ನಾನು ಸೋತೆ ನೀವು ಗೆದ್ದಿರಿ. ನೀವು ತುಂಬ ಬುದ್ಧಿವಂತರು ಎಂದು ಅಯ್ಯರನ್ನು ಹೊಗಳಿದರು.

1947 ಗಾಂಧೀಜಿ ದಿಲ್ಲಿಯಲ್ಲಿದ್ದರು. ಪ್ರಾರ್ಥನಾ ಸಭೆಯ ಅನಂತರ ಮದರಾಸಿನಿಂದ ಬಂದಿದ್ದ ಒಬ್ಬ ವರ್ತಕ ತಮಿಳಿನಲ್ಲಿ ಹಸ್ತಾಕ್ಷರ ಬೇಡಿದ. ದಕ್ಷಿಣ ಆಫ್ರಿಕದಲ್ಲಿದ್ದಾಗ ಗಾಂಧೀಜಿ ಸ್ವಲ್ಪ ತಮಿಳು ಕಲಿತಿದ್ದರು. ಅಭ್ಯಾಸವಿಲ್ಲದೆ, ಕಲಿತಿದ್ದು ಮರೆತಿದ್ದರು. ಪ್ರಯತ್ನ ಮಾಡುವೆ, ದ್ವಿಗುಣಿತ ರುಸುಂ ಕೊಡಬೇಕು ಎಂದರು. ಹತ್ತು ರೂಪಾಯಿ ಪಡೆದು ಸಹಿ ಮಾಡಿದರು. ಸಹಿ ಸರಿಯಾಗಿದ್ದರೆ, ಇನ್ನೂ ಹತ್ತು ರೂಪಾಯಿ ಕೊಡಬೇಕು ಎಂದರು. ತನ್ನಲ್ಲಿ ಇದ್ದುದೇ ಹತ್ತು ರೂಪಾಯಿ, ಅದೆಲ್ಲ ಕೊಟ್ಟಿರುವೆ ಎಂದ ವರ್ತಕ. ಇನ್ನು ನನ್ನಲ್ಲಿ ಹಣವಿಲ್ಲ. 'ನಿಮ್ಮಲ್ಲಿ ನನಗೆ ಭರವಸೆ ಇದೆ, ನಾಳೆ ತಂದು ಕೊಡಿ, ಎಂದರು ಗಾಂಧೀಜಿ. ಆತ ಕೈಯಲ್ಲಿದ್ದ ಬಂಗಾರದ ಉಂಗುರ ತೆಗೆದುಕೊಟ್ಟ. ಅಷ್ಟು ಹೊತ್ತಿಗೆ ಜವಹರಲಾಲ್ ಬಂದರು.

"ನಿಮ್ಮ ಹಳೆಯ ಆಟ ಆಡುತ್ತಿರುವಿರಿ. ಮದರಾಸಿನ ಚೆಟ್ಟಿಯಾರರಿಗೆ ಸರಿಸಮಾನ ವರ್ತಕರು, ದಳ್ಳಾಳಿಗಳು ಪ್ರಪಂಚದಲ್ಲೇ ಇಲ್ಲವೆಂದು ಕೇಳಿದ್ದೆ." ಆದರೆ ಎಂದು ಮಾತು ಮುಗಿಸುವಷ್ಟರಲ್ಲೇ, ಚೆಟ್ಟಿಯಾರ್ ಹೇಳಿದರು. "ಇತರರ ಜೇಬು ಕಸಿಯುವ ವಿದ್ಯೆಯಲ್ಲಿ ಮಹಾತ್ಮರನ್ನು ಮೀರಿಸುವವರಿಲ್ಲ. ನಾನು ಸೋತೆ, ಶರಣು ಹೋಗುತ್ತೇನೆ" ಹೀಗೆ ಹೇಳಿ ಪಾದ ಮುಟ್ಟಿ ನಮಸ್ಕರಿಸಿದರು.

"ಇಲ್ಲ, ತದ್ವಿರುದ್ಧ, ಗೆದ್ದವರು ನೀವು. ತುಂಬ ಬುದ್ಧಿವಂತಿಕೆ ತೋರಿದ್ದೀರಿ. ಬೆಲೆ ಕಟ್ಟಲಾಗದ ದರಿದ್ರ ನಾರಾಯಣರ ಆಶೀರ್ವಾದ ಗಳಿಸಿರುವಿರಿ."

"ನಿಜ, ತಮ್ಮ ಆಶೀರ್ವಾದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ" ಎಂದು ನಮಸ್ಕರಿಸಿ, ಬಂಗಾರದ ಉಂಗುರ ಕಳೆದುಕೊಂಡು ಮರಳಿದರು.

ಬಿಜಾಪುರದ ಅಣ್ಣಾರಾವ್ ಕುಲಕರ್ಣಿ ಮಹಾತ್ಮರ ಫೋಟೋ ತೆಗೆಯಲು ನವಾಖಲಿಗೆ ಹೋಗಿದ್ದರು. ಗಾಂಧಿಯವರ ಪರಿವಾರದೊಡನೆ ಕೆಲದಿನ ಕಳೆದರು. ಅವರೊಡನೆ ಯಾರೂ ಇರಲಾರದೆಂದು ಕುಲಕರ್ಣಿಯವರಿಗೆ ನವಾಖಲಿ ಬಿಟ್ಟು ತೆರಳುವಂತೆ ಸೂಚಿಸಲಾಯಿತು. ನವಾಖಲಿಯ ಧರ್ಮಪುರಿಯಿಂದ ತೆರಳುವ ಮುನ್ನ ಮಹಾತ್ಮರ ದರ್ಶನಕ್ಕಾಗಿ ಅಣ್ಣಾರಾವ್ ಹೋದರು. ಬಿದಿರು ಚಾಪೆಯ ಮೇಲೆ ಕಾಲ್ಮಡಿಕೆ ಹಾಕಿಕೊಂಡು ಗಾಂಧೀಜಿ ಕುಳಿತಿದ್ದರು. ಎದುರಿಗೊಂದು ಮರದ ಪೆಟ್ಟಿಗೆ, ಪಕ್ಕದಲ್ಲಿ ಸೀಮೆಎಣ್ಣೆ ದೀಪ, ಕೆಲವು ಪುಸ್ತಕಗಳು. ಕರ್ನಾಟಕದ ಮತ್ತು ಕುಲಕರ್ಣಿಯವರ ವಿಷಯ ಕೇಳಿದರು. ಇಷ್ಟು ದೂರ ಬರಬಾರದಾಗಿತ್ತು. ಯಾರೂ ಬರಬಾರದೆಂದು ಪ್ರಚಾರ ಮಾಡಿ. ಮಹದೇವ ದೇಸಾಯಿ ಕಾಲವಾಗುವುದಕ್ಕೆ ಎರಡು ತಿಂಗಳು ಮೊದಲು ತಾನು ಬರೆದಿದ್ದ ಪತ್ರಕ್ಕೆ ದೇಸಾಯಿ ಅವರು ಬರೆದಿದ್ದ ಪ್ರತ್ಯುತ್ತರ ಕುಲಕರ್ಣಿ, ಗಾಂಧಿಯವರ ಕೈಯಲ್ಲಿ ಇಟ್ಟರು. ಅದನ್ನು ನೋಡಿ ಗಾಂಧೀಜಿ ಖಿನ್ನವದನರಾದರು. ಪತ್ರದ ವಿಷಯ ಕೇಳಿ ತಿಳಿದುಕೊಂಡರು.

ಆ ಪತ್ರದ ಮೇಲೆಯೇ ಸಹಿ ಮಾಡುವಂತೆ ಐದು ರೂಪಾಯಿ ಕಾಣಿಕೆ ಒಪ್ಪಿಸಿ ಕುಲಕರ್ಣಿ ಕೇಳಿದರು. ಗಾಂಧೀಜಿ ಹಿಂದಿಯಲ್ಲಿ ಸಹಿ ಮಾಡಿದರು. ಆಂಗ್ಲದಲ್ಲೂ ಸಹಿ ಮಾಡಿರೆಂದು ಇನ್ನೂ ಐದು ರೂಪಾಯಿ ಅಣ್ಣಾರಾವ್ ಇಟ್ಟರು. ದೇಸಾಯಿಯವರ ಪತ್ರ ಇಂಗ್ಲೀಷಿನಲ್ಲಿದೆ, ಹಿಂದೀ ಅದಕ್ಕೆ ಒಪ್ಪದು, ಎಂದರು. ನೀನು ಬಹಳ ಚತುರ ಎಂದು ನಗುತ್ತಾ ಇಂಗ್ಲೀಷಿನಲ್ಲಿ ಸಹಿ ಮಾಡಿ, ಐದು

ರೂಪಾಯಿ ಹಿಂದಕ್ಕೆ ತಳ್ಳಿದರು. ಇನ್ನೂ ಐದು ರೂಪಾಯಿ ಮುಂದಿಟ್ಟು ಕನ್ನಡದಲ್ಲಿ ಸಹಿ ಮಾಡಿ ಎಂದರು ಕುಲಕರ್ಣಿ. ಪೆಟ್ಟಿಗೆಯಿಂದ ಒಂದು ಪುಸ್ತಕ ತೆಗೆದರು ಆದರಲ್ಲಿ ಕನ್ನಡ ಸಹಿಯು ಮಾದರಿಯಿತ್ತು. ನವಾಖಲಿಗೆ ಇದನ್ನೇಕೆ ತಂದಿರಿ ಎಂಬ ಪ್ರಶ್ನೆಗೆ ಕನ್ನಡ ಮತ್ತು ಬಂಗಾಲಿಯಲ್ಲಿ ಸಹಿ ಮಾಡಲು ಮಾದರಿ ಆಗತ್ಯ ಎನ್ನುತ್ತಾ, "ಮೋ. ಕ. ಗಾಂಧಿ" ಎಂದು ಕನ್ನಡದಲ್ಲಿ ಸಹಿ ಮಾಡಿದರು. ಕನ್ನಡದ ಅಂಕಿಗಳು ಗೊತ್ತಿಲ್ಲವೆಂದು ಇಂಗ್ಲೀಷ್ ಅಂಕಿಗಳಲ್ಲೇ ತಾರೀಖು ಹಾಕಿದರು. ಏಕಕಾಲದಲ್ಲಿ ಮೂರು ಲಿಪಿಗಳಲ್ಲಿ ಸಹಿ ಪಡೆದ ಮತ್ತೊಬ್ಬರಾದರು ನಾರಾಯಣ ಅಣ್ಣಾರಾವ್ ಕುಲಕರ್ಣಿ. ಇಲ್ಲಿ ಕುಲಕರ್ಣಿ ಅವರಿಗೆ ಕಲ್ಕತ್ತ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಕುಲಪತಿಯಾಗಿ ಅಧ್ಯಕ್ಷತೆ ವಹಿಸಿದ್ದ ಗವರ್ನರಿಗೆ ಗುರಿಯಿಟ್ಟು ಗುಂಡು ಹಾರಿಸಿದ ವೀರರಮಣಿ ಬೀನಾದಾಸಳ ಪರಿಚಯವಾಯಿತು. ಈ ಅಪರಾಧಕ್ಕೆ ಜೀವಾವಧಿ ಶಿಕ್ಷೆ, ಅವಳಿಗೆ ವಿಧಿಸಲಾಗಿತ್ತು. ದೀರ್ಘಾವಧಿ ಬಂಧನದಲ್ಲಿದ್ದು ಬಂಧ ವಿಮೋಚನಾನಂತರ ಅಹಿಂಸಾವ್ರತ ಸ್ವೀಕರಿಸಿ ಸಮಾಜ ಸೇವಾ ಕಾರ್ಯದಲ್ಲಿ ಈಗ ನಿರತಳಾಗಿದ್ದಳು.

ಒಬ್ಬ ಪ್ರಮುಖ ಗಾಂಧಿಯವರ ಬಹಿರಂಗ ಸಭೆಗೆ 75 ನಿಮಿಷ ತಡವಾಗಿ ಬಂದ. ಅವನ ಮೇಲೆ ಸಿಟ್ಟು ಮಾಡಲಿಲ್ಲ. ಸ್ವರಾಜ್ಯವೂ ಮುಕ್ಕಾಲು ಗಂಟೆ ತಡವಾಗಿ ಪ್ರಾಪ್ತವಾದೀತು ಎಂದರು. ಎಲ್ಲರೂ ನಗೆಗಡಲಿನಲ್ಲಿ ತೇಲಿದರು.

ಹಾಸ್ಯಪ್ರವೃತ್ತಿ ನನ್ನಲ್ಲಿ ಇಲ್ಲವಾಗಿದ್ದರೆ, ಇಲ್ಲಿಯವರೆಗೂ ನಾನು ಅನುಭವಿಸಿರುವ ಕಷ್ಟ ಪರಂಪರೆಗಳು ನನ್ನ ಪ್ರಾಣಹರಣ ಎಂದಿಗೋ ಮಾಡುತ್ತಿದ್ದುವು. ಪರಮಾತ್ಮನಲ್ಲಿ ನನಗೆ ನಿತ್ಯ ಅಚಲ ವಿಶ್ವಾಸವಿದೆ. ಎದುವರೆಗೆ ಪರಮಾತ್ಮ ನನಗೆ ಮಾರ್ಗದರ್ಶನ ನೀಡುತ್ತ ಬರುವನೋ ಅದುವರೆಗೆ ನನ್ನ ಬಗೆಗೆ ಯಾರು ಏನೇ ಹೇಳಲಿ, ಅದನ್ನು ನಾನು ಲಕ್ಷಕ್ಕೆ ತೆಗೆದುಕೊಳ್ಳುವುದಿಲ್ಲ. ಅವನ್ನು ನಾನು ಲಘುವಾಗಿ ತೆಗೆದುಕೊಳ್ಳುವುದು ಮಾತ್ರವಲ್ಲ, ನನ್ನನ್ನು ಕುರಿತು ಪರಿಹಾಸ್ಯ ಮಾಡುವವರೊಂದಿಗೆ ನಾನೂ ಬೆರೆತು ಹಾಸ್ಯದಲ್ಲಿ ಪಾಲ್ಗೊಳ್ಳುವೆ. ಈ ಹಾಸ್ಯ ಪ್ರವೃತ್ತಿಯೇ ನನ್ನನ್ನು ಜೀವಂತವಾಗಿಟ್ಟಿದೆ.

ಇದಕ್ಕೆ ಸಾಕ್ಷಿಯೋ ಎನ್ನುವಂತೆ ಆಗಾಖಾನರ ಅರಮನೆಯಲ್ಲಿ ಸೆರೆಯಾಗಿದ್ದಾಗ ಇವರ ದೇಹಸ್ಥಿತಿ ಚಿಂತಾಜನಕವಾಗಿದ್ದ ಸುದ್ದಿ ಸರ್ಕಾರಕ್ಕೆ ಮುಟ್ಟಿತು. ಮೂತ್ರಕೋಶ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಬೊಂಬಾಯಿ ಸರ್ಕಾರ ಗಾಂಧಿಯವರ ದೇಹಸ್ಥಿತಿ ವರದಿ ಮಾಡಲು

ತಮ್ಮ ಉನ್ನತ ವೈದ್ಯಾಧಿಕಾರಿಯನ್ನು ಕಳುಹಿಸಿತು. ಬಂದೀಖಾನೆಗೆ ವೈದ್ಯರು ಧಾವಿಸಿ ಬಂದರು. ಅವರೊಡನೆ ಹಾಸ್ಯ ಚಟಾಕಿ ಹಾರಿಸುತ್ತ ಗಾಂಧೀಜಿ ಕಾಲ ಕಳೆದರು. ಗಾಂಧಿಯವರ ಹಸನ್ಮುಖ, ಹಾಸ್ಯ ಪ್ರವೃತ್ತಿಯಿಂದ ಮೋಸ ಹೋದ ವೈದ್ಯರು ಅವರ ದೇಹಸ್ಥಿತಿ ಉತ್ತಮವಾಗಿರುವುದಾಗಿ ವರದಿ ಮಾಡಿದರು. ತಮ್ಮ ನೋವು ಇತರರಿಗೆ ತಿಳಿಸಿ ಅದರ ಸೋಂಕು ಅವರಿಗೆ ಹರಡದ ಜಾಗೃತಿ ಗಾಂಧೀಜಿ ವಹಿಸುತ್ತಿದ್ದರು. ಈ ಪ್ರವೃತ್ತಿಯಿಂದ ಮೋಸ ಹೋದ ವೈದ್ಯಾಧಿಕಾರಿ ಮತ್ತೊಂದು ದಿನ ಅವರ ಶರೀರ ಸ್ಥಿತಿ ಪರೀಕ್ಷಿಸಿ ಕೂಡಲೇ ಅವರನ್ನು ಬಂಧಮುಕ್ತರಾಗಿ ಮಾಡುವಂತೆ ಶಿಫಾರಸ್ ಮಾಡಿದ.

ಬಂಧನ—ಬಂಧಿತ

ಆಫ್ರಿಕದ ಎಲ್ಲ ಭಾಗಗಳೂ ಐರೋಪ್ಯರ ವಶವಾಗಿದ್ದುವು. ಅಲ್ಲಿನ ಮೂಲ ನಿವಾಸಿಗಳಾದ ಕಾಫಿರರು, ನೀಗ್ರೋಗಳು ಪೈಗಳ್ಳರು. ಕಷ್ಟಪಟ್ಟು ದುಡಿಯರು. ದಕ್ಷಿಣ ಆಫ್ರಿಕ ಬ್ರಿಟಿಷರ ಅಧೀನ. ಫಲವತ್ತಾದ ಭೂಮಿಯನ್ನು ಉತ್ತು, ಬಿತ್ತು ಬೇಸಾಯ ಮಾಡಲು ಭಾರತದಿಂದ ಜನರನ್ನು ಕರೆಸಿಕೊಳ್ಳಲಾಯಿತು. ಯಜಮಾನ ನಿಗಾಗಿ ಬೆವರು ಸುರಿಸಿ, ಶ್ರಮಿಸಿ ಸಾಕಷ್ಟು ಪ್ರತಿಫಲ ಗಳಿಸಿಕೊಟ್ಟರು. ಪ್ರಪಂಚದ ವ್ಯಾವಹಾರಿಕ ನೀತಿ ಅತಿ ವಿಚಿತ್ರ. ಭಾರತೀಯರ ದುಡಿಮೆ, ತಾಳ್ಮೆ, ಮಿತವ್ಯಯ, ಪ್ರಾಮಾಣಿಕತೆ ಈ ಸದ್ಗುಣಗಳೇ ಅವರಿಗೆ ಕಂಟಕಪ್ರಾಯವಾದುವು. ತಮ್ಮ ಬುದ್ಧಿ ವಂತಿಕೆಯಿಂದ ಐರೋಪ್ಯ ವರ್ತಕರೊಡನೆಯೂ, ಭೂಮಾಲೀಕರೊಡನೆಯೂ ಇವರು ಪೈಪೋಟಿ ಮಾಡತೊಡಗಿದರು. ಇದನ್ನು ತಡೆಗಟ್ಟಲು ಅಧಿಕಾರದಲ್ಲಿದ್ದ ಐರೋಪ್ಯರು ಕೂಲಿ ಭಾರತೀಯರನ್ನು ಹತೋಟಿಯಲ್ಲಿರಿಸಿಕೊಳ್ಳಲು ಹಲವಾರು ಶಾಸನಗಳನ್ನು ಜಾರಿಗೆ ತಂದರು. ಎಲ್ಲ ವಯಸ್ಕರು ತಮ್ಮ ಹೆಸರು ರಿಜಿಸ್ಟ್ರೇಷನ್ ಮಾಡಿಸಿಕೊಳ್ಳ ಬೇಕು. ನೊಂದಾಣಿಸಿಕೊಳ್ಳುವಾಗ ಹತ್ತು ಬೆರಳುಗಳ ಅಚ್ಚು ಕೊಡಬೇಕು. ವರ್ಷಕ್ಕೆ ಮೂರು ಪೌಂಡು ಶಿರಕರ ತೆರಬೇಕು. ಸಂಚರಿಸಲು ರಹದಾರಿ ಪಡೆದಿರ ಬೇಕು. "ಪ್ರಪಂಚದ ಯಾವ ಭಾಗದಲ್ಲೂ ಸ್ವತಂತ್ರ ಪ್ರಜೆಗಳ ಮೇಲೆ ಇಂತಹ ಶಾಸನ ಮಾಡಿರುವುದನ್ನು ತಾನೆಲ್ಲೂ ಕಂಡಿಲ್ಲ" ಎಂದು ಗಾಂಧೀಜಿ ಸಾತ್ವಿಕ ಹೋರಾಟ ನಡೆಸಲು ಕರೆಕೊಟ್ಟರು. ಶಾಸನ ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆ ಕಾದಿತ್ತು. ಗಡೀಪಾರುಮಾಡಿ ಶ್ರೀಮಂತರನ್ನು ದಿವಾಳಿ ಮಾಡಬಹುದಾಗಿತ್ತು. ಹಾಗೆ ಮಾಡಿಯೂ ಮಾಡಿದರು.

ಗಾಂಧೀಜಿ ಸ್ವತಃ ತಾವೇ ಬರೆದಿರುವ 'ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ' ಪುಸ್ತಕ ದಲ್ಲಿ ದೊಡ್ಡ ಪ್ರಮಾಣದಲ್ಲಿ ಮೊದಲು ನಡೆಸಿದ ಸಾತ್ವಿಕ ಹೋರಾಟದ ಕಥೆ ವಿವರ ವಾಗಿ ಕೊಟ್ಟಿರುತ್ತಾರೆ. ಈ ಕರಾಳ ಶಾಸನಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾದುದರಿಂದ 1907–08ರಲ್ಲಿ ಒಮ್ಮೆ ಮತ್ತು 1913ರಲ್ಲಿ ಮತ್ತೊಮ್ಮೆ ದೊಡ್ಡ ಪ್ರಮಾಣದಲ್ಲಿ ಸತ್ಯಾಗ್ರಹ ನಡೆಸಿದರು. 1907 ಡಿಸೆಂಬರ್‌ನಲ್ಲಿ ಚಳವಳಿ ಪ್ರಾರಂಭವಾಗಿ ಅನೇಕರು ಬಂಧಿತರಾದರು ಚೀನೀಯರಿಗೂ ಈ ಶಾಸನ ಅನ್ವಯಿಸುತ್ತಿತ್ತು. ಜೋಹಾನ್ಸಿಸ್‌ಬರ್ಗಿನಲ್ಲಿ 300–400 ಚೀಣಿಯರಿರುತ್ತಿದ್ದರು. ಇವರ ಮುಖಂಡ ಕ್ವಿನ್ ಸಹ ಬಂಧಿತನಾದ. ಎಲ್ಲರಿಗೂ ಮೂರು ತಿಂಗಳ ಕಠಿಣ

ಶಿಕ್ಷೆ ಮತ್ತು ದಂಡ ವಿಧಿಸಲಾಗುತ್ತಿತ್ತು. ಜನವರಿ 10, 1908 ರಂದು ಗಾಂಧೀಜಿ ತಮ್ಮ ಜೀವಮಾನದಲ್ಲಿ ಮೊದಲಸಲ ಬಂಧಿತರಾಗಿ ಎರಡು ತಿಂಗಳ ಸಾದಾ ಶಿಕ್ಷೆ ವಿಧಿಸಲ್ಪಟ್ಟರು. ತನಗೇಕೆ ಕಡಿಮೆ ಶಿಕ್ಷೆ? ಚಳುವಳಿಯ ಪ್ರಮುಖನಾದ ತನಗೆ ಇನ್ನೂ ಹೆಚ್ಚಿನ ಶಿಕ್ಷೆ ವಿಧಿಸಬೇಕೆಂದು ನ್ಯಾಯಾಧೀಶರನ್ನು ಗಾಂಧೀಜಿ ಕೇಳಿ ಕೊಂಡರು. ಇದು ಪುರಸ್ಕೃತವಾಗಲಿಲ್ಲ. ಇದೇ ನ್ಯಾಯಸ್ಥಾನದಲ್ಲಿ ಗಾಂಧೀಜಿ ವಕೀಲರಾಗಿ ವಾದ ಮಾಡುತ್ತಿದ್ದರು. ಇಂದು ಬ್ಯಾರಿಸ್ಟರ್ ಗಾಂಧಿ ಅಪರಾಧಿಯ ಸ್ಥಾನದಲ್ಲಿ! ಎಂಥ ವಿಪರ್ಯಾಸ. ಆದರೆ ಅವರು ಇದರಿಂದ ನೊಂದುಕೊಳ್ಳಲಿಲ್ಲ. ಅನ್ಯಾಯದ ಪರ ನ್ಯಾಯವಾದಿ ಆಗಿರುವುದಕ್ಕಿಂತ, ನ್ಯಾಯದ ಪರ ಅಪರಾಧಿ ಯಾಗಿರುವುದೇ ಲೇಸೆಂಬ ಸಂತಸ.

ಬಂಧನದಿಂದ ಹೊರ ಬರುತ್ತಲೇ ಮತ್ತೆ ಮತ್ತೆ ಚಳವಳಿಯಲ್ಲಿ ಭಾಗವಹಿಸು ತ್ತಲೇ ಇದ್ದರು. 1908 ಫೆಬ್ರುವರಿ 10ರಂದು ಪಠಾಣ ಮಿರ್ ಆಲಂ, ಗಾಂಧೀಜಿ ಕೊಟ್ಟ ಭಾಷೆಗೆ ಲಂಚ ಸ್ವೀಕರಿಸಿ ತಪ್ಪಿ ನಡೆದರೆಂಬ ತಪ್ಪು ತಿಳಿವಳಿಕೆಯಿಂದ ಪ್ರಾಣ ಹೋಗುವಂತೆ ದೊಣ್ಣೆಯಿಂದ ಬಾರಿಸಿದ. ಆದರೆ ಗಾಂಧೀಜಿ ಉಳಿದುಕೊಂಡರು. ಸ್ವಲ್ಪ ವಿಶ್ರಾಂತಿ ಪಡೆದು ಮತ್ತೆ ಚಳವಳಿಗೆ ಧುಮ್ಮಿಕ್ಕಿದರು. ಎರಡನೆಯ ಬಾರಿಗೆ ಅಕ್ಟೋಬರ್ 15, 1908 ಗಾಂಧೀಜಿ ಬಂಧಿತರಾಗಿ ಎರಡು ತಿಂಗಳ ಸಶ್ರಮ ಶಿಕ್ಷೆ ಪಡೆದರು. ವೋಲ್‌ಕ್ರಸ್ಟ್ ಜೈಲಿನಲ್ಲಿ ಎರಡು ತಿಂಗಳಿದ್ದು ಡಿಸೆಂಬರ್ 12 ರಂದು ಬಂಧ ಮುಕ್ತರಾದರು.

ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಪಡೆಯಲಿಲ್ಲವೆಂದು ಜನವರಿ 16, 1909ರಲ್ಲಿ ಬಂಧಿತರಾದರು. ಚಳವಳಿಗೆ ಮಾರ್ಗದರ್ಶನ ನೀಡಲು ತಾನು ಹೊರಗಿರುವುದು ಅಗತ್ಯವೆಂದು ಜಾಮೀನು ಕೊಟ್ಟು ಹೊರಬಂದರು. ನಾಲ್ಕನೆಯ ಸಾರಿ ಫೆಬ್ರುವರಿ 25, 1909 ರಂದು ಬಂಧಿತರಾಗಿ ಮೂರು ತಿಂಗಳ ಸಶ್ರಮ ಶಿಕ್ಷೆ ಪಡೆದರು. ವೋಲ್ ಕ್ರಸ್ಟ್ ಜೈಲಿನಲ್ಲಿ ಶಿಕ್ಷೆ ಅನುಭವಿಸಿ, ಮೇ 24 ಬಂಧನದಿಂದ ಹೊರಬಂದರು.

ಜೈಲಿನಲ್ಲಿ ಇದ್ದಾಗಲೇ ಜನರಲ್ ಸ್ಮಟ್ಸ್ ಹೇಳಿ ಕಳುಹಿಸಿದರು, ಗಾಂಧಿಯವ ರನ್ನು. ಕರಾಳ ಶಾಸನಗಳನ್ನು ಹಿಂತೆಗೆದುಕೊಳ್ಳುವ ಭರವಸೆ ಸ್ಮಟ್ಸ್ ನೀಡಿದ್ದರಿಂದ ಚಳುವಳಿ ನಿಲ್ಲಿಸಲಾಯಿತು. ಆದರೆ ನಡೆದ ವಿಶ್ವಾಸಘಾತದಿಂದ ದೊಡ್ಡ ಪ್ರಮಾಣ ದಲ್ಲಿ ಉಗ್ರ ಹೋರಾಟ ಮತ್ತೆ ನಾಲ್ಕು ವರ್ಷಗಳ ನಂತರ ಪ್ರಾರಂಭವಾಯಿತು. ಸ್ತ್ರೀಯರು ಸ್ವಯಂಪ್ರೇರಣೆಯಿಂದ ಚಳವಳಿಯಲ್ಲಿ ಭಾಗವಹಿಸಲು ಮುಂದಾದರು. ಸೆಪ್ಟೆಂಬರ್–ಅಕ್ಟೋಬರ್ 1913ರಲ್ಲಿ ಕೆಲವರು ಬಂಧಿತರಾಗಿ ಮೂರು ಮೂರು ತಿಂಗಳ ಶಿಕ್ಷೆಗೆ ಗುರಿಯಾದರು.

ಸ್ತ್ರೀಯರ ಧೈರ್ಯ ವರ್ಣನಾತೀತ. ಜೈಲಿನಲ್ಲಿ ಅವರಿಗೆ ಬಹಳ ಹಿಂಸೆ ಕೊಟ್ಟರು. ಆರ್. ಮುನಿಸಾಮಿಯ ಪತ್ನಿ ಹದಿನಾರು ವರ್ಷದ ವಲ್ಲಿಯಮ್ಮ ಜ್ವರ ಪೀಡಿತಳಾಗಿ ಜೈಲಿನಿಂದ ಹೊರಬಂದು ಮಾತೃಭೂಮಿಗಾಗಿ ಅಸು ನೀಗಿದಳು. ಮೊದಲು ಜೈಲಿಗೆ ಹೋದವರೆಲ್ಲ ತಮಿಳುನಾಡಿನ ಮಹಿಳೆಯರು. ಟ್ರಾನ್ಸ್‌ವಾಲಿನ ತಮಿಳು ಸೋದರಿಯರು ಬಂಧಿತರಾದರೆಂದು ಕೇಳಿ ದರ್ಬಾನಿನ ಫಾತಿಮಾಬಾಯಿ ಮತ್ತು ತಾಯಿ ಹನೀಫಬಾಯಿ, ಏಳು ವರ್ಷದ ಮಗನೊಡನೆ ದಸ್ತಗಿರಿಯಾಗಲು ಸಿದ್ಧರಾದರು. ಮಗನನ್ನು ಬಂಧಿಸಲಿಲ್ಲ. ತಾಯಿ ಮತ್ತು ಮಗಳಿಗೆ ತಲಾ ಮೂರು ತಿಂಗಳ ಶಿಕ್ಷೆ ವಿಧಿಸಲಾಯಿತು.

ಇದೇ ಕಾಲಕ್ಕೆ ಕೂಲಿಗಾರರ ಮುಷ್ಕರ ಉಗ್ರರೂಪ ತಾಳಿತು. ಗಂಡಸರು ಹೆಂಗಸರು ತಂಡೋಪತಂಡವಾಗಿ ಸತ್ಯಾಗ್ರಹದಲ್ಲಿ ಭಾಗವಹಿಸಲು ಚಾರ್ಲ್ಸ್‌ಟೌನಿಗೆ ಬರತೊಡಗಿದರು. ಸ್ತ್ರೀಯರು ತಮ್ಮ ಜೊತೆಯಲ್ಲೇ ಎಳೆಯ ಮಕ್ಕಳನ್ನೂ, ಹಸುಗೂಸನ್ನೂ ಕರೆತರುತ್ತಿದ್ದರು. ಚಳಿಗಾಳಿ ತಡೆಯಲಾರದೆ ಒಂದು ಮಗು ದಾರಿಯಲ್ಲೇ ಸತ್ತಿತು. ಇನ್ನೊಂದು ನೀರಿನಿಂದ ತುಂಬಿದ ಹೊಳೆ ದಾಟುವಾಗ ಕೈ ಜಾರಿ ನೀರಿನಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿತು. ಸತ್ತವರಿಗಾಗಿ ಅತ್ತರೆ ಮತ್ತೆ ಬದುಕಿ ಬರುತ್ತಾರೆಯೇ? ಎಂದು ಧೈರ್ಯದಿಂದ ಹೋರಾಟದಲ್ಲಿ ಪಾಲ್ಗೊಂಡರು. ಮೊದಲು ಹೊರಟಾಗ 5,000 ಜನರಿದ್ದ ತಂಡ, ಕ್ರಮೇಣ ಉತ್ಸಾಹ ಉಕ್ಕಿದಂತೆ 13,000ಕ್ಕೆ ಏರಿತು. ಕಸ್ತೂರಿಬಾ ಸೆಪ್ಟಂಬರ್ 16, 1913ರಲ್ಲಿ ಬಂಧಿತರಾದರು.

ಮಹಾಚೈತ್ರಯಾತ್ರೆ ಮುಂದುವರಿಯುತ್ತಲೇ ಇತ್ತು. ನವಂಬರ್ 6,7,8 ಮತ್ತು 9ನೇ ತಾರೀಖುಗಳಲ್ಲಿ ಗಾಂಧಿಯವರನ್ನು ಹಿಡಿಯುವುದು, ಬಿಡುವುದು ಈ ರೀತಿಯ ಚಲ್ಲಾಟ ನಡೆಯಿತು. ತಲೆಗಂದಾಯ ವಜ ಆಗುವವರೆಗೆ ಒಪ್ಪತ್ತು ಊಟ ಮಾಡಲು ಗಾಂಧೀಜಿ ನವಂಬರ್ 10 ರಂದು ಪಣ ತೊಟ್ಟರು. ಮಾರನೆಯ ದಿನ ಡಂಡಿಯಲ್ಲಿ ಬಂಧಿತರಾಗಿ 9 ತಿಂಗಳ ಸಶ್ರಮ ಶಿಕ್ಷೆ ಪಡೆದರು. ಜೈಲಿನಲ್ಲಿದ್ದಾಗಲೇ ಮತ್ತೊಂದು ಅಪರಾಧಕ್ಕೆ ಗುರಿಯಾಗಿ ಅದಕ್ಕೂ ಮೂರು ತಿಂಗಳ ಕಠಿಣ ಶಿಕ್ಷೆ ಗಳಿಸಿದರು. ಕಡೆಗೆ ಡಿಸೆಂಬರ್ 18, ಜೈಲಿನಿಂದ ಬಿಡಲ್ಪಟ್ಟರು. ವೊಲ್ಕ್‌ರಸ್ಟ್ ಜೈಲಿನಲ್ಲಿದ್ದಾಗ ಹರಬತ್‌ಸಿಂಗ್ ಎಪ್ಪತ್ತೈದು ವರ್ಷದ ವಯೋವೃದ್ಧ, ಗಾಂಧಿಯವರ ಹೆಂಡತಿ, ಮಕ್ಕಳು ಎಲ್ಲರೂ ಜೈಲು ಸೇರಿದ್ದನ್ನು ತಿಳಿದು ತಾನೂ ಶಾಸನ ಭಂಗ ಚಳುವಳಿಯಲ್ಲಿ ಪಾಲ್ಗೊಂಡು ಗಾಂಧಿಯವರಿದ್ದ ಜೈಲಿಗೆ ಬಂದು ಸೇರಿದ. ಅವನ ಬಿಡುಗಡೆಗೆ ವ್ಯವಸ್ಥೆ ಮಾಡುವುದಾಗಿ ಗಾಂಧೀಜಿ ಹೇಳಿದರೂ ಮುದುಕ ಒಪ್ಪಲಿಲ್ಲ. 1914 ಜನವರಿ 5 ರಲ್ಲಿ ಡರ್ಬನ್ ಜೈಲಿನಲ್ಲಿ ಹರಬತ್‌ಸಿಂಗ್ ಅಸು ನೀಗಿದ.

ಕಳ್ಳರು, ದರೋಡೆ ಕೋರರು, ಸಮಾಜ ದ್ರೋಹಿಗಳು ಇವರಿಗಾಗಿ ಇರುವುದು ಜೈಲು. ಮಾನಹೀನರು ಮಾತ್ರ ಜೈಲು ಸೇರುತ್ತಾರೆ. ಈ ಭಾವನೆಯನ್ನು ಗಾಂಧೀಜಿ ಹೋಗಲಾಡಿಸಿ ಸ್ವಾಭಿಮಾನ, ದೇಶಾಭಿಮಾನಕ್ಕಾಗಿ ಜೈಲು ಸೇರುವುದು ಸ್ವಾರ್ಥ ತ್ಯಾಗವೆಂದು ದೇಶವಾತ್ಸಲ್ಯದ ಉನ್ನತ ಮಟ್ಟಕ್ಕೆ ಏರಿಸಿದರು. ಜೈಲು ಶ್ರೀ ಕೃಷ್ಣ ಜನಿಸಿದ ಪುಣ್ಯ ಯಾತ್ರಾಸ್ಥಾನವಾಯಿತು. ಸೆರೆಮನೆ ಅರಮನೆಯಲ್ಲ. ಪ್ರಾರಂಭದ ದಿನಗಳಲ್ಲಿ ಕ್ರಿಮಿನಲ್ ಅಪರಾಧಿಗಳು, ರಾಜಕೀಯರು ಎಂಬ ಭೇದ. ಅಧಿಕಾರಿಗಳು ಕಾಣುತ್ತಿರಲಿಲ್ಲ. ವ್ಯಕ್ತಿ ಸ್ವಾತಂತ್ರ್ಯ, ಸಮಾಜದ ಗೌರವ, ದೇಶಭಕ್ತಿ ಮತ್ತು ಮೂಲಾಧಿಕಾರಗಳಿಗೆ ಅಡ್ಡಿ ಬರುವ ನಿಯಂತ್ರಣಗಳ ವಿರುದ್ಧ ಜೈಲು ಸೇರುವುದು ಗೌರವಾನ್ವಿತವಾಗುತ್ತ ಬಂದಂತೆ ರಾಜಕೀಯ ಬಂಧಿತರಿಗೆ ಕೆಲವು ಸೌಲಭ್ಯಗಳು ದೊರಕತೊಡಗಿವೆ. ಬಂಧಿತನಾದವನ ವ್ಯಾಪಾರ, ವಹಿವಾಟು, ಕುಟುಂಬ ಅನೇಕ ತೊಂದರೆಗಳಿಗೆ ಈಡಾಗುತ್ತವೆ. ಬಂಧಿತನ ದೇಹಾರೋಗ್ಯ ಕೆಡುತ್ತದೆ. ಭಾರತ ಸ್ವಾತಂತ್ರ್ಯದ ಹೋರಾಟದಲ್ಲಿ ಸಾವಿರಾರು ದೇಶಭಕ್ತರು ತುರಂಗವಾಸ ಅನುಭವಿಸಿರುತ್ತಾರೆ.

ದಕ್ಷಿಣ ಆಫ್ರಿಕ ಮತ್ತು ಭಾರತ ಎರಡು ದೇಶಗಳ ಸೆರಮನೆಯ ವ್ಯವಸ್ಥೆ, ನಿಯಮ ಇವುಗಳಲ್ಲಿ ಹೆಚ್ಚು ಭಿನ್ನತೆ ಕಾಣುವುದಿಲ್ಲ. ಉಭಯ ದೇಶಗಳು ಬ್ರಿಟಿಷರ ಅಧೀನ. ಜೋಹಾನ್ನೀಸ್‌ಬರ್ಗ್, ವೊಲ್ಕ್ಸ್‌ರಸ್ಟ್, ಪ್ರಿಟೋರಿಯ, ಬ್ಲೂಫಾಂಟೀನ್ ಮೊದಲಾದ ನಾಲ್ಕು ಸೆರೆಮನೆಗಳ ಆತಿಥ್ಯ ಪಡೆಯುವ ಅವಕಾಶ ಗಾಂಧಿಯವರಿಗೆ ಲಭಿಸಿತ್ತು. ಆತ್ಮಗೌರವ ಮತ್ತು ಧಾರ್ಮಿಕ ನೀತಿಗೆ ವಿರೋಧವಲ್ಲದ ನಿಯಮ ಗಳನ್ನು ಪಾಲಿಸಬೇಕೆಂದು ಅವರು ತೀರ್ಮಾನಿಸಿದ್ದರು. ಆದ್ದರಿಂದ ಬಂದ ಕಷ್ಟ ಗಳನ್ನು ಸ್ವಾಗತಿಸಿ ಸಹನೆಯಿಂದ ಸಹಿಸುತ್ತಿದ್ದರು.

ಜೈಲು ಪ್ರವೇಶಿಸುತ್ತಲೇ ಎಲ್ಲ ಉಡುಪು ಕಳಚಿ ಬೆತ್ತಲೆಯಾಗಬೇಕು. ಜೈಲು ಅಧಿಕಾರಿಗಳು ಕೊಟ್ಟ ಬಟ್ಟೆ ತೊಡಬೇಕು. ನೀಗ್ರೋ ಅಪರಾಧಿಗಳು ತೊಟ್ಟು ಕೊಳಕಾಗಿದ್ದ ಬಟ್ಟೆಯನ್ನೇ ಗಾಂಧೀಜಿ ಧರಿಸಬೇಕಾಯಿತು. ಅವರಿಗೆ ದೊರೆತದ್ದು ಒಂದು ಕರಿಯ ಷರಾಯಿ, ಒಂದು ಷರಟು, ಒಂದು ಜಂಪರ್, ಒಂದು ಟೋಪಿ, ಒಂದು ವಸ್ತ್ರ, ಒಂದು ಜೊತೆ ಕಾಲು ಚೀಲ, ಒಂದು ಜೊತೆ ಜೋಡು, ಮಲಗಲು ಮೂರು ಅಂಗುಲ ದಪ್ಪನೆಯ ಹಲಗೆ, ಒಂದು ಸಣ್ಣ ದಿಂಬು, ಒಂದು ಜೊತೆ ಕಂಬಳಿ ಒಂದು ಹುರಿಯ ಚಾಪೆ. ಹಲಗೆಯು ತುಂಬ ಗಿಡ್ಡ? ತಿಗಣೆ.

ಗಾಂಧಿಯವರನ್ನು ಸಹ ಬೆತ್ತಲೆ ಮಾಡಿಯೇ ಶೋಧಿಸಲಾಯಿತು. ಪುರುಷ ರನ್ನು ಬೆತ್ತಲೆ ಮಾಡುವುದನ್ನು ಆಕ್ಷೇಪಿಸಲಿಲ್ಲ. ಇದರಲ್ಲಿ ದೋಷವೇನು ಎಂದು

ಪ್ರಶ್ನಿಸುತ್ತಾರೆ? ಪುರುಷರಲ್ಲದೆ ಸ್ತ್ರೀಯರಿದ್ದರೆ ಆಕ್ಷೇಪಿಸುವುದರಲ್ಲಿ ಅರ್ಥವಿದೆ. ಜೈಲಿಗೆ ಬರುತ್ತಿದ್ದವರ ಸಂಖ್ಯೆ ಹೆಚ್ಚಿದಂತೆ ತಮ್ಮ ಸ್ವಂತ ಬಟ್ಟೆ ತೊಡಲು ಅಧಿಕಾರಿಗಳು ಅವಕಾಶ ಕೊಟ್ಟರು. ಬಂಧಿಗಳಿಗೆ ಕೊಡಲು ಸಾಕಷ್ಟು ಸಮವಸ್ತ್ರ ಇರಲಿಲ್ಲ. ತಲೆಕೂದಲು ಮೀಸೆ ಎಲ್ಲವನ್ನೂ ಕತ್ತರಿಯಿಂದ ಕತ್ತರಿಸಲಾಗುತ್ತಿತ್ತು. ಗಾಂಧಿಯವರಿಗೆ ಮೊದಲು ಎರಡು ತಿಂಗಳ ಶಿಕ್ಷೆ ಆಗಿದ್ದುದರಿಂದ ಅವರು ಕೂದಲು ಮತ್ತು ಮೀಸೆ ಬೋಳಿಸುವುದು ಅನವಶ್ಯಕ ಎಂದರು ಜೈಲು ಅಧಿಕಾರಿಗಳು. ಸೆರೆಮನೆಯಲ್ಲಿ ಕನ್ನಡಿ ಬಳಸುವಂತಿರಲಿಲ್ಲ. ತಲೆಗೆ ಎಣ್ಣೆಯೂ ಇಲ್ಲ. ಆದ್ದರಿಂದ ಬೋಳಿಸಿಕೊಳ್ಳುವುದೇ ಆರೋಗ್ಯಕರ, ಒಳಿತೆಂದು ತನ್ನ ಕೂದಲನ್ನೂ ಮೀಸೆಯನ್ನೂ ತೆಗೆಸುವಂತೆ ಗಾಂಧೀಜಿ ಒತ್ತಾಯ ಮಾಡಿದರು. ಇವರು ಮತ್ತು ನಾಯಿಡು ಕ್ಷೌರಿಕರ ಕೆಲಸ ಮಾಡಲು ಕಲಿತರು. ದಿನಕ್ಕೆ ಎರಡು ಗಂಟೆ ಈ ಕೆಲಸ ಮಾಡುತ್ತಿದ್ದರು.

ಬೆಳಿಗ್ಗೆ ಹನ್ನೆರಡು ಔನ್ಸ್ ಗಂಜಿ. ಉಪ್ಪು ಪ್ರತ್ಯೇಕವಾಗಿ ಕೊಡುವರು. ಸಕ್ಕರೆ, ಬೀಡಿ, ಸಿಗರೇಟು ದೊರೆಯದು. ಮಧ್ಯಾಹ್ನ ನಾಲ್ಕು ಔನ್ಸ್ ಅನ್ನ, ನಾಲ್ಕು ಔನ್ಸ್ ರೊಟ್ಟಿ, ಒಂದು ಔನ್ಸ್ ತುಪ್ಪ, ಉಪ್ಪು; ಸಂಜೆಗೆ ಗಂಜಿ, ಸ್ವಲ್ಪ ತರಕಾರಿ, ವಾರಕ್ಕೆ ಎರಡಾವರ್ತಿ ಹೆಚ್ಚು ತರಕಾರಿ. ಹೆಸರಿಗೆ ತರಕಾರಿ. ಬಿಳಿಯರಿಗೆ ಕೊಡಲು ಹೆರೆಯುತ್ತಿದ್ದ ಮೇಲಿನ ಸಿಪ್ಪೆಯೇ ಭಾರತೀಯರಿಗೆ ದಕ್ಕುತ್ತಿದ್ದ ತರಕಾರಿ. ಕ್ರಮೇಣ ಸತ್ಯಾಗ್ರಹಿಗಳಿಗೆ ತಾವೇ ಅಡುಗೆ ಮಾಡಿಕೊಳ್ಳಲು, ಉಪಾಜಮೆ ಪಡೆಯಲು ಅವಕಾಶ ದೊರೆತಂತೆ ಕಡಿಮೆ ಅಳತೆ, ತೂಕ, ಅರೆಬೆಂದ ಆಹಾರ ಮೊದಲಾದ ಹಲವು ತೊಂದರೆಗಳು ಕಡಮೆ ಆದುವು.

ಕೊಠಡಿಯ ಬಾಗಿಲು ಬೆಳಿಗ್ಗೆ ಐದೂವರೆಗೆ ತೆಗೆದು, ಸಂಜೆ ಐದೂವರೆಗೆ ಮುಚ್ಚುವರು. ಬೆಳಕು ಮೇಲಿನ ಎರಡು ಕಿಂಡಿಗಳಿಂದ ಬರುವುದು. ಪಹರೆದಾರ ಬಂಧಿಗಳ ಚಲನೆ ವಲನೆ ಈ ಕಿಂಡಿಗಳಿಂದ ನೋಡುವನು. ವ್ಯಾಯಾಮಕ್ಕೆ ಸಾಕಷ್ಟು ಜಾಗವಿಲ್ಲ. ಓದಲು ಬೆಳಕು ಸಾಲದು. ದೀಪಕೊಡರು. ಕಾಲ ದೂಡುವುದೇ ಒಂದು ಸಮಸ್ಯೆ. ಹಾಗೂ ಗಾಂಧೀಜಿ ಅನೇಕ ಧಾರ್ಮಿಕ ಗ್ರಂಥಗಳ ಪಠಣ ನಡೆಸಿದರು.

ಸ್ನಾನಕ್ಕೆ ಎರಡು ತುಂತುರು ನಳ. ಎರಡು ಕಲ್ಲಿನ ತೊಟ್ಟಿಯಲ್ಲಿ ನೀರು. ಮಲವಿಸರ್ಜನೆಗೆ ಇದ್ದುದೇ ದೊಡ್ಡ ತೊಂದರೆ. ಮೂರು–ನಾಲ್ಕು ಜನ ಒಟ್ಟಿಗೆ ಒಂದೇ ಸಾಲಿನಲ್ಲಿ ಕೂಡಬೇಕು. ನರಕ ಕೂಪದ ಈ ಯಾತನೆ ಅನುಭವಿಸಲಾರದೆ, ಗಾಂಧೀಜಿ ಎರಡು ದಿನ ದೇಹಬಾಧೆ ತೀರಿಸಿಕೊಳ್ಳಲಿಲ್ಲ. ಕೆಲವು ಸೆರೆಮನೆಗಳಲ್ಲಿ

ಸ್ವಲ್ಪ ಉತ್ತಮ ವ್ಯವಸ್ಥೆ ಇತ್ತು. ಈ ಹೊತ್ತಿನಲ್ಲೂ ವಾರ್ಡರ್‌ನ ಕಣ್ಣಿನ ಕಾಟ ತಪ್ಪಿದ್ದಲ್ಲ. ಒಂದೆರಡು ನಿಮಿಷ ಆಗುತ್ತಲೇ ಏಳಿ ಎಂದು ಕೂಗುವನು. ರಾತ್ರಿ ಒಂದು ಬಕೆಟ್ ನೀರು, ಮೂತ್ರವಿಸರ್ಜನೆಗೆ ಖಾಲಿ ತೊಟ್ಟಿ. ಅದರ ಕೆಳಗೆ ಒಂದು ತಟ್ಟೆ. ಚೀನಿ ಖೈದಿಗಳು ದಿನಕ್ಕೆ ಎರಡು ಸಾರಿ ಇವೆಲ್ಲ ತೆಗೆದು, ವಾರ್ಡಿನ ಕಸ ಗುಡಿಸುವರು. ಸ್ವಚ್ಛತೆಗೆ ವಿಶೇಷ ಗಮನ ಕೊಡುತ್ತಿದ್ದ ಗಾಂಧೀಜಿ, ಇದಲ್ಲದೆ ಸ್ವತಃ ಕಸ ತೆಗೆದು ಸ್ವಚ್ಛಗೊಳಿಸುವರು.

ಕಠಿಣ ಶಿಕ್ಷಿತರಿಗೆ ಕೊಡುತ್ತಿದ್ದ ನಿಜವಾದ ಕಠಿಣ ಕೆಲಸ ಅಗೆಯುವುದು, ಕಲ್ಲು ಒಡೆಯುವುದು, ಅದೂ ಉರಿ ಬಿಸಿಲಿನಲ್ಲಿ. ಈ ಬಗೆಯ ಕಠಿಣ ಕೆಲಸ ಮಾಡಿ ಅಭ್ಯಾಸವಿಲ್ಲದವರು ಮೂರ್ಛಿತರಾಗುತ್ತಿದ್ದರು. ಕೆಲವರನ್ನು ಆಸ್ಪತ್ರೆಗೂ ಸೇರಿಸಬೇಕಾಯಿತು. ಒಬ್ಬಿಬ್ಬರು ಮೃತರಾದರು. ಗಾಂಧೀಜಿ ಟೋಪಿ ಹೊಲೆಯುವುದು, ನೆಲದ ಮೇಲೆ ಗಂಟೆಗಟ್ಲೆ ಕುಳಿತು ಎರಡು ಕಂಬಳಿ ಜೋಡಿಸಿ ಹೊಲೆಯುವುದು, ಜೋಡು ಹೊಲೆಯುವುದು ಈ ಕೆಲಸ ಮಾಡುತ್ತಿದ್ದರು. ದೀರ್ಘಕಾಲ ನೆಲದ ಮೇಲೆ ಕುಳಿತು ಕೆಲಸ ಮಾಡುವಾಗ ಸೊಂಟನೋವು, ಬೆನ್ನುನೋವು ಬರುತ್ತಿತ್ತೆಂದು ಹೇಳಿಕೊಂಡಿದ್ದಾರೆ. ಜೈಲಿನಲ್ಲಿ ಇವರು ಹೊಲೆದ ಒಂದು ಜೊತೆ ಜೋಡು ಜನರಲ್ ಸ್ಮಟ್ಸ್‌ಗೆ ಕಾಣಿಕೆಯಾಗಿ ಕೊಟ್ಟರು. ಗಾಂಧಿಯವರಿಗೆ ಮಾತ್ರ ಸಾಧ್ಯವಾದಷ್ಟು ಸೌಕರ್ಯ ಒದಗಿಸಿಕೊಡಲು ಜೈಲಿನ ಅಧಿಕಾರಿಗಳು ಸಿದ್ಧವಾಗಿದ್ದರು. ಗಾಂಧೀಜಿ ಒಪ್ಪಲಿಲ್ಲ. ಆದರೆ ಎಲ್ಲ ರಾಜಕೀಯರಿಗೂ ಸಮನಾದ ಸೌಲಭ್ಯ ಒದಗಿಸಿಕೊಡಬೇಕೆಂದು ಗಾಂಧೀಜಿ ನವಂಬರ್ 10ರಿಂದ ಉಪ್ಪತ್ತು ಊಟ ಪ್ರಾರಂಭಿಸಿದರು. ಡಿಸೆಂಬರ್ 18 ಇವರ ಬಿಡುಗಡೆ ಆಯಿತು.

ಭಾರತದಲ್ಲಿ ಗಾಂಧಿಯವರ ಮೊದಲ ಬಂಧನ ಬಿಹಾರಿನ ಚಂಪಾರಣ್ಯದಲ್ಲಿ ಏಪ್ರಿಲ್ 1917ರಲ್ಲಿ ಆಯಿತು. ಹೆಸರು ರಾಜಕುಮಾರ ಶುಕ್ಲ, ಬಡ ರೈತರ ಪ್ರತಿನಿಧಿ. ಕಲ್ಕತ್ತ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಯವರನ್ನು ಸಂದರ್ಶಿಸಿ ಚಂಪಾರಣ್ಯದಲ್ಲಿ ಬಿಳಿಯ ಜಮೀನ್ದಾರರು ನೀಲಿ ಬೆಳೆಗಾರರಿಗೆ ಕೊಡುತ್ತಿದ್ದ ಹಿಂಸೆ ವಿವರಿಸಿ, ಅವರ ಕಷ್ಟ ಪರಿಹರಿಸಲು ಚಂಪಾರಣ್ಯಕ್ಕೆ ಬರಬೇಕೆಂದು ಅವರ ಬೆನ್ನು ಹಿಂದೆ ಬಿದ್ದ. ದಕ್ಷಿಣ ಆಫ್ರಿಕದ ಕರ್ಮವೀರ ಗಾಂಧೀಜಿ ಬರುತ್ತಾರೆಂಬ ಸುದ್ದಿ ತಿಳಿದು ಸಾವಿರಾರು ಜನ ಅವರನ್ನು ಸ್ವಾಗತಿಸಲು ಮೋತಿಹಾರಿ ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು. ಬಿಳಿಯರ ವಿರುದ್ಧ ದೂರು ತೋಡಿಕೊಳ್ಳಲೂ ಹೆದರುತ್ತಿದ್ದ ಕಾಲವದು. ರೈಲಿನಿಂದ ಇಳಿಯುತ್ತಲೇ ಕೆಲವು ದಿನಗಳ ಹಿಂದೆ ಒಂದು ಹಳ್ಳಿಯನ್ನು ಕೊಳ್ಳೆಹೊಡೆದಿದ್ದ ಸುದ್ದಿ ಅವರಿಗೆ ಮುಟ್ಟಿತು. ಅಲ್ಲಿಗೆ ಹೋಗಲು ಗಾಂಧೀಜಿ ಸಿದ್ಧರಾದರು. ಈ ವಿಷಯ ಜಿಲ್ಲಾ ನ್ಯಾಯಾಧೀಶನಿಗೆ ತಿಳಿಯಿತು. ಗಾಂಧಿಯವರನ್ನು ಜಿಲ್ಲಾಧಿಕಾರಿ ಬರಮಾಡಿಕೊಂಡು

ಜಿಲ್ಲೆ ಬಿಟ್ಟು ಹೊರಡುವಂತೆ ಆಜ್ಞೆ ಜಾರಿ ಮಾಡಿದರು. ಗಾಂಧೀಜಿ ನಿರಾಕರಿಸಿದರು. ಚಂಪಾರಣ್ಯದ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಮಾಡಲಾಯಿತು. ಆರೋಪಣೆ, ವಿಚಾರಣೆ, ಸಾಕ್ಷಿ, ಸವಾಲು, ಪ್ರತಿಸವಾಲು ಈ ಕ್ರಮಗಳೆಲ್ಲ ಮುಗಿಯಲು ಒಂದು ವಾರವಾದರೂ ಅಗತ್ಯವಾದೀತೆಂಬ ನಿರೀಕ್ಷೆ ನ್ಯಾಯಾಧೀಶರಿಗೆ. ಆದರೆ ಗಾಂಧೀಜಿ ಈ ಕ್ರಮಗಳನ್ನೆಲ್ಲ ಬದಿಗೊತ್ತಿ ಕರ್ತವ್ಯ ಪಾಲನೆಗೆ ಅಡ್ಡಿಬಂದ ಆಜ್ಞೆ ಉಲ್ಲಂಘಿಸಿದ್ದು ನಿಜ ವೆಂದು ಒಪ್ಪಿಕೊಂಡರು. ಶಿಕ್ಷೆ ಅನುಭವಿಸಲು ಸಿದ್ಧ ಎಂದರು. ಮೇಲಧಿಕಾರಿಗಳ ಸಲಹೆ ಪಡೆಯಲು ಅವಕಾಶ ಸಿಕ್ಕೀತೆಂದು ಭಾವಿಸಿದ್ದ ನ್ಯಾಯಾಧೀಶ ಕಕ್ಕಾಬಿಕ್ಕಿ ಯಾದ. ಎರಡು ಗಂಟೆಕಾಲ ಕಳೆದು ತೀರ್ಪುಕೊಡುವುದಾಗಿ ತಿಳಿಸಿ, ಆಗಲೂ ಸಾಧ್ಯವಾಗದೆ ಐದು ದಿನಗಳ ನಂತರ ತೀರ್ಪು ಕೊಡುವುದಾಗಿ ತಿಳಿಸಿ, ಕೋರ್ಟಿಗೆ ಹಾಜರಾಗಲು ಮುಚ್ಚಳಿಕೆ ಬರೆದು ಕೊಡುವಂತೆ ಕೇಳಿದ. ಗಾಂಧೀಜಿ ಒಪ್ಪಲಿಲ್ಲ. ದಾರಿಕಾಣದೆ ಸ್ವಂತ ಜಾಮೀನಿನ ಮೇಲೆ ಬಿಡುಗಡೆ ಮಾಡಿದ. ಮಹಾಯುದ್ಧ ನಡೆ ಯುತ್ತಿದ್ದ ಕಾಲದಲ್ಲಿ ಗಾಂಧಿಯವರಿಗೆ ಶಿಕ್ಷೆ ವಿಧಿಸಿದರೆ ಪ್ರಾಂತದಲ್ಲಿ ಅಶಾಂತಿ ಹಬ್ಬೀ ತೆಂದು ಗಾಂಧಿಯವರ ಗೋಜಿಗೆ ಹೋಗದೆ, ವಿಷಯ ಸಂಗ್ರಹಿಸಲು ತೊಂದರೆ ಕೊಡ ಬಾರದೆಂದು ಸರ್ಕಾರ ಅಧಿಕಾರಿಗಳಿಗೆ ತಿಳಿಸಿತು. ಗಾಂಧೀಜಿ ಶಿಕ್ಷಿತರಾಗಲಿಲ್ಲ. ತಾನು ಶಿಕ್ಷಿತನಾದರೆ ರೈತರ ತೊಂದರೆಗಳ ನಿಜಾಂಶ ಗೊತ್ತುಮಾಡುವ ಪರಿಶೀಲನೆಯ ಕಾರ್ಯ ಮುಂದುವರಿಸಿಕೊಂಡು ಹೋಗಬೇಕೆಂದು ಪ್ರಾಂತದ ಪ್ರಮುಖ ವಕೀಲರಾಗಿದ್ದ ರಾಜೇಂದ್ರಪ್ರಸಾದ್, ಮಜರುಲ್‌ಹಕ್, ಬ್ರಿಜಕಿಶೋರ ಅವರನ್ನು ಬರಮಾಡಿ ಕೊಂಡು ತಿಳಿಸಿದರು. ಇವೆಲ್ಲರ ಆಪ್ತ ಸಂಗಡಿಗರಾಗಿ ಅನೇಕ ಸಾರಿ ಕಾರಾಗೃಹವಾಸ ಅನುಭವಿಸಿದರು. ಪ್ರಸಾದರು ಸ್ವತಂತ್ರ ಭಾರತದ ಪ್ರಥಮ ರಾಷ್ಟ್ರಪತಿ ಆದರು.

ಭಾರತದಲ್ಲಿ ಎರಡನೆಯ ಬಂಧನ ಆದುದು ಏಪ್ರಿಲ್ 8, 1919 ಬೊಂಬಾಯಿಂದ ಗಾಂಧೀಜಿ ದಿಲ್ಲಿಗೆ ಹೊರಟಿದ್ದರು. ಪಂಜಾಬಿನಲ್ಲಿ ಅಶಾಂತಿಯ ವಾತಾವರಣ ಮೂಡಿತ್ತು. ಗಾಂಧೀಜಿ ಪಂಜಾಬಿಗೆ ಬಂದರೆ ಗಲಭೆ ಆದೀತೆಂದು, ಪಂಜಾಬು ಪ್ರವೇಶಿಸದಂತೆ ಪ್ರತಿಬಂಧಕಾಜ್ಞೆ ವಿಧಿಸಲಾಯಿತು. ಇದನ್ನು ಮಾನ್ಯ ಮಾಡಲು ತಿರಸ್ಕರಿಸಿ ರೈಲಿನಲ್ಲಿ ಹೊರಟಿದ್ದರು. ಏಪ್ರಿಲ್ 8, ಅವರನ್ನು ಬಂಧಿಸಿ ಬೊಂಬಾಯಿಗೆ ಕರೆತಂದು ಬಿಡಲಾಯಿತು. ಜಾಲಿಯನ್‌ವಾಲಾಬಾಗ್ ಮಹಾದುರಂತ ಏಪ್ರಿಲ್ 13 1919 ರಲ್ಲಿ ನಡೆದು, ನಾಲ್ಕು ನೂರಿಗೂ ಹೆಚ್ಚು ನಿರಪರಾಧಿಗಳು ಕೊಲೆಯಾದರು. ಬ್ರಿಟಿಷ್ ಪ್ರಭುತ್ವದಲ್ಲಿ ಗಾಂಧೀಜಿ ಹೊಂದಿದ್ದ ವಿಶ್ವಾಸದ ನಾಶಕ್ಕೆ ಇದು ನಾಂದಿ ಯಾಯಿತು. ಇಲ್ಲಿ ನಡೆದ ಘೋರ ದುರಂತದ ಹುತಾತ್ಮರ ಸ್ಮರಣಾರ್ಥ ಪ್ರತಿವರ್ಷದ ಏಪ್ರಿಲ್ 13 ರಿಂದ ಒಂದು ವಾರಕಾಲ ಜಾಲಿಯನ್‌ವಾಲಾಬಾಗ್ ದುರಂತದ ವಾರ ವಾಗಿ ಆಚರಿಸಲು ಕಾಂಗ್ರೆಸ್ ಕರೆ ಕೊಟ್ಟಿತು.

ಮುಸ್ಲಿಮರ ಧರ್ಮಗುರು ಕಲೀಫರ ಪದಚ್ಯುತಿ, ಜಾಲಿಯನ್‌ವಾಲಾಬಾಗ್ ಮಹಾದುರಂತ, ಒಂದು ವರ್ಷದಲ್ಲಿ ಸ್ವರಾಜ್ಯ ಗಳಿಸಿಕೊಡುವ ಭರವಸೆ, ತಿಲಕರ ಮೃತ್ಯು, ಪ್ರಿನ್ಸ್ ಆಫ್‌ವೇಲ್ಸ್ ಅವರ ಭೇಟಿ, ಪರದೇಶೀವಸ್ತು ಬಹಿಷ್ಕಾರ ಇವೆಲ್ಲ ದೇಶದ ವಾತಾವರಣವನ್ನು ಬಹಳ ಕಲುಕಿತ್ತು. ತಮ್ಮ ಪ್ರವಾಸ ಮತ್ತು ಲೇಖನ ಗಳಿಂದ ದೇಶವನ್ನು ಅಸಹಕಾರ ಚಳವಳಿಗೆ ಗಾಂಧೀಜಿ ಮತ್ತು ಇತರ ನಾಯಕರು ಸಿದ್ಧಗೊಳಿಸುತ್ತಿದ್ದರು. ಬಾರ್ದೋಲಿಯಲ್ಲಿ ಸತ್ಯಾಗ್ರಹ ಹೂಡಲು ಗಾಂಧೀಜಿ ನಿಶ್ಚ ಯಿಸಿ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದರು. ತನ್ನನ್ನು ಬಂಧಿಸಿದರೆ ದೇಶದಲ್ಲಿ ಹಿಂಸಾ ಕೃತ್ಯಗಳು ನಡೆಯಬಹುದು, ಅಶಾಂತಿ ತಲೆದೋರಬಹುದೆಂದು ಸರ್ಕಾರ ಬೆದರಿರು ವಂತೆ ತೋರುತ್ತೆ. ದೇಶದಲ್ಲಿ ನಡೆದಿರುವ ದುರಂತಗಳಿಗೆ ತಾನೇ ಹೊಣೆ. ಸರ್ಕಾರ ವಿಧಿ ಸುವ ಶಿಕ್ಷೆ ತಾನು ಅನುಭವಿಸಲು ಸಿದ್ಧ ಈ ರೀತಿಯಲ್ಲಿ 'ಯಂಗ್ ಇಂಡಿಯಾ' ಪತ್ರಿಕೆ ಯಲ್ಲಿ ಲೇಖನ ಬರೆಯುತ್ತಿದ್ದರು. ಸರ್ಕಾರ ಇವರ ಸವಾಲು ಸ್ವೀಕರಿಸಲೇಬೇಕಾ ಯಿತು. ಸಂಪಾದಕ ಗಾಂಧಿಯವರನ್ನೂ 'ಯಂಗ್ ಇಂಡಿಯಾ' ಪತ್ರಿಕೆಯ ಮುದ್ರಕ ಮತ್ತು ಪ್ರಕಾಶಕ ಶಂಕರ್‌ಲಾಲ್ ಬ್ಯಾಂಕರ್ ಇಬ್ಬರನ್ನೂ ಮಾರ್ಚಿ 10, 1922ರಲ್ಲಿ ಬಂಧಿಸಲಾಯಿತು. ಅಹಮದಾಬಾದಿನ ನ್ಯಾಯಸ್ಥಾನದಲ್ಲಿ ಚರಿತ್ರಾರ್ಹ ವಿಚಾರಣೆ ನಡೆದು ಗಾಂಧೀಜಿ ಆರು ವರ್ಷಗಳ ಶಿಕ್ಷೆ ಪಡೆದರು. ಆದರೆ ಕರುಳು ಬಾಲದ ರೋಗದಿಂದ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಜನವರಿ 12, 1924 ರಲ್ಲಿ ಬಂಧ ಮುಕ್ತರಾದರು.

1929ರ ಲಾಹೋರ ಕಾಂಗ್ರೆಸ್ ಮಹಾಧಿವೇಶನ ಪೂರ್ಣ ಸ್ವಾತಂತ್ರ್ಯ ತನ್ನ ಗುರಿ ಎಂದು ಸಾರಿತು. ತಮ್ಮ ಲೇಖನಗಳಿಂದ ದೇಶವನ್ನು ಹೋರಾಟಕ್ಕೆ ಸಿದ್ಧಗೊಳಿಸಲು ತೊಡಗಿದರು. ಉಪ್ಪಿನ ಸತ್ಯಾಗ್ರಹ ನಡೆಸಲು ಗಾಂಧೀಜಿ ತೀರ್ಮಾನಿಸಿದರು. ಸಬರಮತಿ ಸತ್ಯಾಗ್ರಹ ಆಶ್ರಮದಿಂದ ಆರಿಸಿದ 79 ಅನು ಯಾಯಿಗಳೊಡನೆ 241 ಮೈಲಿಗಳ ದೂರದ ದಾಂಡಿ ಸಮುದ್ರ ತೀರಕ್ಕೆ ಲೋಕ ಪ್ರಸಿದ್ಧ ಜೈತ್ರಯಾತ್ರೆ ಮಾರ್ಚಿ, 12 1930 ಪ್ರಾರಂಭಿಸಿದರು. ಅಪಾರವಾಗಿ ದೊರೆ ಯುವ ಉಪ್ಪನ್ನು ಸಂಗ್ರಹಿಸಿ, ಪ್ರಬಲ ಬ್ರಿಟಿಷ್ ಪ್ರಭುತ್ವದೊಡನೆ ಯಾವ ರೀತಿಯ ಹೋರಾಟ ಗಾಂಧೀಜಿ ನಡೆಸಲಿರುವರೆಂಬ ಕುತೂಹಲ ಕೆರಳಿತು. ಈ ಜೈತ್ರಯಾತ್ರೆಯ ಪ್ರಚಾರಕ್ಕಾಗಿ ಪ್ರಪಂಚದ ನಾನಾಭಾಗಗಳಿಂದ ಪತ್ರಿಕಾ ಪ್ರತಿ ನಿಧಿಗಳೂ, ಚಿತ್ರಗ್ರಾಹಕರೂ ಬಂದರು. ದಾಂಡಿ ತೀರ ಸೇರುವವರೆಗೂ ಶಾಂತ ರೀತಿಯಿಂದ ಜೈತ್ರಯಾತ್ರೆ ಮುಂದುವರೆಯಿತು. ಮೇ 4, 1930 ಗಾಂಧೀಜಿ ದಾಂಡಿ ಮುಟ್ಟಿದರು. ಮಾರನೆಯ ಬೆಳಿಗ್ಗೆ ತೀರ ಪ್ರದೇಶದಲ್ಲಿ ಬಿಸಿಲಿನ ತಾಪಕ್ಕೆ ಉಪ್ಪುನೀರು ಆವಿಯಾಗಿ ಸಹಜವಾಗಿ ಆಗಿದ್ದ ಉಪ್ಪನ್ನು ಗಾಂಧೀಜಿ ಹೆಕ್ಕಿದರು. ಸಮುದ್ರ ತೀರದಲ್ಲಿ ದೊರೆಯುವ ಉಪ್ಪು ಶೇಖರಿಸುವುದೂ ಅಪರಾಧವಾಗಿತ್ತು.

ಗಾಂಧೀಜಿ ಮೇ 5ರಲ್ಲಿ ಬಂಧಿತರಾಗಿ, ವಿಚಾರಣೆಗೆ ಒಳಪಡದೆ ಯರವಾಡ ಜೈಲಿಗೆ ಒಯ್ಯಲ್ಪಟ್ಟರು ಉಗ್ರ ಚಳುವಳಿಗೆ ಇದು ಸೂಚನೆ ಆಯಿತು. ದೇಶದ ಮೂಲೆ ಮೂಲೆಗಳಿಗೂ ಸತ್ಯಾಗ್ರಹ ವ್ಯಾಪಿಸಿತು. ದೇಶದ ಅಗ್ರಗಣ್ಯನಾಯಕರು ಜೈಲು ಸೇರಿದರು. ಅಮೇರಿಕದ ಪತ್ರಿಕೋದ್ಯಮಿ ಜಾರ್ಜ್ ಸೋಕ್ಲೋಂ ಅವರು ವೈಸ ರಾಯಿ ಲಾರ್ಡ್ ಇರ್ವಿನ್ನರನ್ನು ಭೇಟಿಯಾಗಿ ಶಾಂತಿ ಸಂಧಾನಕ್ಕೆ ಪ್ರಯತ್ನಿಸಲು ಪ್ರಾರ್ಥಿಸಿದರು. ಖ್ಯಾತ ವಕೀಲರೂ 'ಮಾಡರೇಟ್' ಪಕ್ಷದ ಸಪ್ರೂ, ಜಯಕರರ್ ಇವರು ಪ್ರಮುಖ ನಾಯಕರನ್ನು ಸೆರೆಮನೆಯಲ್ಲಿ ಸಂದರ್ಶಿಸಿ ಸರ್ಕಾರ ಮತ್ತು ಕಾಂಗ್ರೆಸ್ ನಡುವೆ ಒಪ್ಪಂದ ಕುದುರಿಸಲು ಮಾಡಿದ ಪ್ರಯತ್ನ ಫಲಿಸಲಿಲ್ಲ. ಗಾಂಧಿಯವರನ್ನು ಜನವರಿ 25, 1931ರಂದು ಬೇಷರತ್ತಾಗಿ ಸರ್ಕಾರ ಬಿಡುಗಡೆ ಮಾಡಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರೂ ಏಕಕಾಲದಲ್ಲಿ ಬಂಧ ಮುಕ್ತರಾದರು. ತದನಂತರ ವೈಸರಾಯಿ ಲಾರ್ಡ್ ಇರ್ವಿನ್ನರೊಡನೆ ಮಾತು ಕಥೆ ನಡೆದು ಗಾಂಧೀ ಇರ್ವಿನ್ ಒಪ್ಪಂದವಾಗಿ, ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಪರ ಭಾಗವಹಿಸಲು ಗಾಂಧೀಜಿ ಒಪ್ಪಿದರು.

ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಮೂಲಾಧಿಕಾರಗಳ ಸತ್ಯಾಗ್ರಹ, ಕರನಿರಾಕರಣೆಯ ಸತ್ಯಾಗ್ರಹ, ವಿದೇಶಿವಸ್ತ್ರ ಬಹಿಷ್ಕಾರ, ಸೇಂದಿ ಸಾರಾಯಿ ಪಿಕೆಟಿಂಗ್ ಮೊದಲಾದ ಚಳುವಳಿಗಳಲ್ಲಿ ಭಾಗವಹಿಸಿ ಸರ್ಕಾರದ ಲೆಕ್ಕದಂತೆ 60,000; ಕಾಂಗ್ರೆಸ್ಸಿನ ಅಂದಾಜಿನಂತೆ ಒಂದು ಲಕ್ಷ ಜನ ಸೆರೆಮನೆ ಸೇರಿದ್ದರು. ಹಿಂಸಾಕೃತ್ಯಗಳಲ್ಲಿ ಭಾಗವಹಿಸದಿದ್ದ ಎಲ್ಲ ಸತ್ಯಾಗ್ರಹಿಗಳ ಬಿಡುಗಡೆ, ಸರ್ಕಾರ ವಶಪಡಿಸಿಕೊಂಡಿದ್ದ ಸ್ಥಿರ ಆಸ್ತಿ ಹಿಂತಿರುಗಿಸಿ ಕೊಡುವುದು ಇವು ಗಾಂಧಿ–ಇರ್ವಿನ್ ಒಪ್ಪಂದದ ಮುಖ್ಯಾಂಶಗಳು. ಈ ಒಪ್ಪಂದ ಬ್ರಿಟಿಷ್ ಪ್ರಭುತ್ವದ ಪ್ರತಿಷ್ಟೆಯನ್ನು ಕುಂದಿಸಿದೆ. ಅಷ್ಟು ಮಟ್ಟಿಗೆ ಕಾಂಗ್ರೆಸ್ ಮತ್ತು ಗಾಂಧಿಯವರ ಘನತೆಗೆ ಮೆರಗು ಕೊಟ್ಟಿದೆ ಎಂಬ ಭಾವನೆ ದೇಶದಲ್ಲಿ ಬೆಳೆದಿತ್ತು. ಚರ್ಚಿಲ್ ಮತ್ತು ಕನ್‌ಸರ್ ವೇಟಿವ್ ಪಕ್ಷ ಇದರಿಂದ ಬಹಳ ನೊಂದಿತ್ತು. ಸರ್ಕಾರದ ಅಧಿಕಾರಿಗಳಿಗೂ ಒಪ್ಪಂದದ ಷರತ್ತುಗಳ ನೂತನ ವಾತಾವರಣಕ್ಕೆ ಹೊಂದಿಕೊಂಡು ನಡೆದುಕೊಳ್ಳುವ ಮನಸ್ಸು ಇರಲಿಲ್ಲ. ಈ ಪರಿಸ್ಥಿತಿಯಲ್ಲಿ ದೈವಭಕ್ತ ಲಾರ್ಡ್ ಇರ್ವಿನ್ ನಿವೃತ್ತರಾದರು. ಕಾಂಗ್ರೆಸ್ಸನ್ನು ನಿರ್ನಾಮ ಮಾಡಿಬಿಡುವ ಉದ್ದೇಶದ ಲಾರ್ಡ್ ವಿಲ್ಲಿಂಗ್ಡನ್ ವೈಸರಾಯಿ ಆದರು. ಎಲ್ಲ ಮೂಲಾಧಿಕಾರಿಗಳಿಗೂ ಸಂಚಕಾರ ತರುವ ಹದಿಮೂರು ಸುಗ್ರೀವಾಜ್ಞೆಗಳು ಜಾರಿಗೆ ಬಂದವು. ಬಂಗಾಳ ಮತ್ತು ಗಡಿನಾಡಿನಲ್ಲಿ ಕ್ರೂರ ದಬ್ಬಾಳಿಕೆ ನಡೆಯಿತು. ಡಿಸೆಂಬರ್ 28, 1931 ಗಾಂಧೀಜಿ ಜಹಜಿನಲ್ಲಿ ಬೊಂಬಾಯಿಗೆ ಬರಿಗಯ್ಯಲ್ಲಿ ಚಕ್ರಗೋಷ್ಟಿಯಿಂದ ಮರಳಿ ಬಂದರು. ಗಾಂಧೀಜಿ ಭಾರತದಲ್ಲಿ ಕಾಲಿಡುವುದಕ್ಕೆ ಮೊದಲೇ ಜವಹರಲಾಲ್ ಮತ್ತು ಅಬ್ದುಲ್ ಗಫಾರ್

ಖಾನ್ ಬಂಧಿತರಾಗಿದ್ದರು. ಅಸಹಕಾರ ಚಳುವಳಿಗೆ ಕಾಂಗ್ರೆಸ್ ಕರೆಕೊಟ್ಟಿತು. ವೈಸರಾಯರನ್ನು ಸಂದರ್ಶಿಸುವ ಅವಕಾಶ ಗಾಂಧಿಯವರಿಗೆ ನಿರಾಕರಿಸಲ್ಪಟ್ಟಿತು. 1897ನೆ ಇಸವಿಯ ಕರಾಳ ಶಾಸನದಂತೆ ಜನವರಿ 4, 1932ರಲ್ಲಿ ಗಾಂಧಿಯವರನ್ನು ಬಂಧಿಸಿ ಯರವಾಡದ ಸೆರೆಗೆ ಸೇರಿಸಲಾಯಿತು. ಶ್ರೀಮತಿ ಕಸ್ತೂರಿಬಾ, ಮೀರಾ ಬೆಹನ್, ಮೊದಲಾಗಿ ಸಾವಿರಾರು ಜನ ಬಂಧಿತರಾದರು. ಕಾಂಗ್ರೆಸ್ ಅಕ್ರಮ ಕೂಟವಾಯಿತು. ಹರಿಜನರಿಗೆ ಪ್ರತ್ಯೇಕ ಚುನಾವಣೆ ನಡೆಸುವ ಕ್ರಮ ಪ್ರಧಾನಿ ಮ್ಯಾಕ್ಡೊನಾಲ್ಡ್ ಪ್ರಕಟಿಸಿದರು. ಇದರ ವಿರುದ್ಧ ಗಾಂಧೀಜಿ 21 ದಿನಗಳ ನಿರಶನ ಪ್ರಾರಂಭಿಸಿದರು. ತಾತ್ಕಾಲಿಕವಾಗಿ ಸತ್ಯಾಗ್ರಹ ಹಿಂತೆಗೆದುಕೊಳ್ಳಲಾಯಿತು. ಮೇ 8, 1933 ಬಂಧನದಿಂದ ಗಾಂಧಿಯವರ ಬಿಡುಗಡೆ ಆಯಿತು.

ಕಾಂಗ್ರೆಸ್ಸನ್ನು ಸದೆಬಡಿಯಲು ಸರ್ಕಾರದ ದೃಢ ಸಂಕಲ್ಪ ಗ್ರಹಿಸಿ ಬಂಧನ, ಲಾಠಿಪ್ರಹಾರ ಅಲ್ಲದೆ ಆಸ್ತಿಪಾಸ್ತಿಯ ವಶ, ಗುಂಡೇಟಿಗೆ ಆಹುತಿಯಾಗಲು ಸಿದ್ಧರಾಗುವಂತೆ ಗಾಂಧೀಜಿ ದೇಶಕ್ಕೆ ಕರೆಕೊಟ್ಟರು. ಕಾಂಗ್ರೆಸ್ಸಿನ ಪ್ರಭಾವ ಹೆಚ್ಚಿದಂತೆ ಸರ್ಕಾರದ ದಬ್ಬಾಳಿಕೆಯೂ ವಿಷಮಿಸುತ್ತ ಬಂತು. ಅನೇಕ ಸಂಘ ಸಂಸ್ಥೆಗಳು ಅಕ್ರಮ ಕೂಟಗಳಾದುವು. ಅಲಹಬಾದ್, ಸಂಯುಕ್ತ ಪ್ರಾಂತ್ಯ, ಗುಜರಾತ್, ಬಂಗಾಳ, ಕರ್ನಾಟಕ, ಗಡಿನಾಡು ಪ್ರದೇಶಗಳಲ್ಲಿ ದಬ್ಬಾಳಿಕೆ ಬಲಿಯಿತು. ರಾಸ್ ಗ್ರಾಮವೊಂದರಲ್ಲೇ 2,600 ಎಕರೆ ಹಿಡುವಳಿ ಪೈಕಿ 2,400 ಎಕರೆಯನ್ನು ಸರ್ಕಾರ ವಶಪಡಿಸಿಕೊಂಡಿತು. ಮನೆ, ದನ, ನೇಗಿಲು ಮೊದಲಾದ ಉಪಕರಣಗಳು ಸರ್ಕಾರದ ಅಧೀನವಾದುವು. ಸಾಮೂಹಿಕ ಪುಂಡು ಕಂದಾಯ ಅನೇಕ ಗ್ರಾಮಗಳ ಮೇಲೆ ವಿಧಿಸಲ್ಪಟ್ಟಿತು. ಪತ್ರಿಕಾ ಸ್ವಾತಂತ್ರ್ಯ ಮೊಟಕುಗೊಂಡಿತು. ಯಂಗ್ ಇಂಡಿಯ ಪತ್ರಿಕೆಯಿಂದ ಗಾಂಧಿಯವರ ಲೇಖನಗಳನ್ನು ಉದ್ಧರಿಸಿ ಪ್ರಕಟಿಸಿದ ಅಪರಾಧಕ್ಕಾಗಿ ವೃತ್ತ ಪತ್ರಿಕೆಗಳಿಗೆ ಹತ್ತು ಸಾವಿರದಿಂದ ಇಪ್ಪತ್ತು ಸಾವಿರದವರೆಗೆ ದಂಡ ವಿಧಿಸಲ್ಪಟ್ಟಿತು. ಗಾಂಧಿಯವರ ಭಾವಚಿತ್ರ ಪ್ರಕಟಿಸುವುದೂ ಅಪರಾಧವಾಯಿತು. ಕಾಂಗ್ರೆಸ್ ನಾಯಕರ ಭಾವಚಿತ್ರಗಳನ್ನು ಕಛೇರಿಗಳಲ್ಲಿ ಪ್ರದರ್ಶಿಸಲಾಗದೆಂಬ ಸುತ್ತೋಲೆ ಮದರಾಸ್ ಸರ್ಕಾರ ಹೊರಡಿಸಿತು. 1932 ರ ಪ್ರಥಮದಲ್ಲೇ ಅರವತ್ತು ಸಾವಿರಕ್ಕೂ ಹೆಚ್ಚು ಸತ್ಯಾಗ್ರಹಿಗಳು ಬಂಧಿತರಾದರು. ಸರ್ಕಾರದ ಉಗ್ರ ನೀತಿ ಖಂಡಿಸಿ ಗಾಂಧೀಜಿ ಪತ್ರ ಬರೆದರು. ಸತ್ಯಾಗ್ರಹಿಗಳ ಸಂಖ್ಯೆ ಕ್ರಮೇಣ ಕಡಿಮೆ ಆಗುತ್ತಾ ಬಂತು. ದಬ್ಬಾಳಿಕೆಯ ನೀತಿ ಯಶಸ್ವಿಯಾಯಿತೆಂಬ ತೃಪ್ತಿ ಸರ್ಕಾರಕ್ಕೆ. ಸತ್ಯಾಗ್ರಹ ಆಶ್ರಮವನ್ನು ಮುಚ್ಚಿ ಅದನ್ನು ಸರ್ಕಾರಕ್ಕೆ ಗಾಂಧೀಜಿ ಕೊಡುವುದಾಗಿ ತಿಳಿಸಿದರು. ಜುಲೈ 3, 1933 ತಮ್ಮ 34 ಸಂಗಡಿಗರೊಡನೆ ರಾಸ್ ಗ್ರಾಮಕ್ಕೆ ಹೊರಡಲು ಗಾಂಧೀಜಿ ಸಿದ್ಧವಾಗುತ್ತಿದ್ದಂತೆ ಬಂಧಿಸಲ್ಪಟ್ಟರು. ಮತ್ತೆ ಯರವಾಡ. ಆಗಸ್ಟ್ 8 ಗಾಂಧಿಯವರನ್ನು ಬಿಡುಗಡೆ ಮಾಡಿ, ಪುಣೆ ಬಿಟ್ಟು

ಹೋಗದಂತೆ ತಿಳಿಸಿತು. ಗಾಂಧೀಜಿ ಆಜ್ಞೆ ಮುರಿದರು. ಮತ್ತೆ ಬಂಧಿತರಾಗಿ ಒಂದು ವರ್ಷದ ಶಿಕ್ಷೆ ವಿಧಿಸಲ್ಪಟ್ಟರು. ಜೈಲಿನಲ್ಲಿ ಹರಿಜನ ಕೆಲಸ ನಡೆಸುವ ಸೌಲಭ್ಯ ವಜಾ ಮಾಡಲ್ಪಟ್ಟಿತು. ಆದ ಕಾರಣ ಆಗಸ್ಟ್ 16 ರಿಂದ ಉಪವಾಸ ಪ್ರಾರಂಭಿಸಿದರು. ನಾಲ್ಕು ದಿನಗಳಲ್ಲೇ ತುಂಬ ನಿಶ್ಶಕ್ತರಾದುದರಿಂದ, ಸರ್ಕಾರ ಅವರನ್ನು ಸಸೂನ್ ಆಸ್ಪತ್ರೆಗೆ ಸೇರಿಸಿ ಆಗಸ್ಟ್ 23, 1933 ರಂದು ಬಿಡುಗಡೆ ಮಾಡಿತು.

ಆಗಸ್ಟ್ 1933ರಲ್ಲಿ ಗಾಂಧೀಜಿ ಬಿಡುಗಡೆ ಹೊಂದಿದರೂ ಒಂದು ವರ್ಷದ ಶಿಕ್ಷೆ ಅವರಿಗೆ ವಿಧಿಸಲ್ಪಟ್ಟಿತ್ತಷ್ಟೆ. ಉಪವಾಸ ಮತ್ತು ಅನಾರೋಗ್ಯದ ನಿಮಿತ್ತ ಬಿಡುಗಡೆ ಮಾಡಿದ್ದು ಅವರ ಮನಸ್ಸಿಗೆ ನೆಮ್ಮದಿ ತರಲಿಲ್ಲ. ಬಂಧಮುಕ್ತರಾಗಿದ್ದರೂ, ತಾವು ಇನ್ನೂ ಸೆರೆಮನೆಯಲ್ಲಿರುವಂತೆಯೇ ಭಾವಿಸಿಕೊಂಡು, ಹರಿಜನ ಮತ್ತು ರಚನಾತ್ಮಕ ಕಾರ್ಯಗಳಲ್ಲದೆ ರಾಜಕೀಯದಲ್ಲಿ ಆಸಕ್ತಿ ವಹಿಸುವುದಿಲ್ಲವೆಂದು ತಮಗೆ ತಾವೇ ನಿರ್ಬಂಧ ವಿಧಿಸಿಕೊಂಡರು, ಮಿಕ್ಕ ಶಿಕ್ಷಿತ ಅವಧಿಯವರೆಗೆ. ಆರೋಗ್ಯ ಸುಧಾರಿಸಿಕೊಳ್ಳಲು ಬೊಂಬಾಯಿ ಸಮೀಪದ ಜುಹು ಸಮುದ್ರ ತೀರದಲ್ಲಿ ವಿಶ್ರಾಂತಿಯ ಅವಧಿ ಮುಗಿಯುವವರೆಗೂ ಇದ್ದರು. 1933 ರಿಂದ ಒಂಬತ್ತು ವರ್ಷಗಳ ದೀರ್ಘಕಾಲ ಹರಿಜನ, ಗ್ರಾಮ ಕೈಗಾರಿಕೆ, ವರ್ಧಾ ಅಥವಾ ಮೂಲ ಶಿಕ್ಷಣ ಇವುಗಳ ಪ್ರಚಾರದಲ್ಲಿ ತೊಡಗಿದ್ದರು. ತನ್ನ ಒಬ್ಬನ ವ್ಯಕ್ತಿತ್ವ ಕಾಂಗ್ರೆಸ್ಸಿನ ಮೇಲೆ ಪ್ರಭಾವ ಬೀರುವುದು ಪ್ರಜಾಪ್ರಭುತ್ವದ ತತ್ವಗಳಿಗೆ ಸರಿಹೊಂದದೆಂದು ಕಾಂಗ್ರೆಸ್ ರಾಜಕೀಯದಿಂದ ದೂರವಾದರು. ಫೆಬ್ರವರಿ 1937 ರಲ್ಲಿ ಚುನಾವಣೆಗಳು ನಡೆದು ಆರು ಪ್ರಾಂತಗಳಲ್ಲಿ ಕಾಂಗ್ರೆಸ್ ಆಡಳಿತ ವಹಿಸಿಕೊಂಡಿತು. ನವೆಂಬರ್ 1934 ರಲ್ಲಿ ಹರಿಜನ ಪ್ರವಾಸ ಪ್ರಾರಂಭಿಸಿದರು. ಕರೆ ಬಂದ ಕಡೆಗೆ ಧಾವಿಸುತ್ತಿದ್ದರು. 1932 ರಲ್ಲಿ ಜೈಲಿನಲ್ಲಿದ್ದಾಗಲೇ ಹರಿಜನರ ಸೇವೆಗೆ ಮೀಸಲಾದ 'ಹರಿಜನ' ಆಂಗ್ಲ ಮತ್ತು ಹಿಂದೀ ವಾರಪತ್ರಿಕೆ ಹೊರಡಿಸಿದರು. ಫೈಜಪುರದಲ್ಲಿ ನಡೆದ ಮೊದಲ ಗ್ರಾಮಾಂತರ ಪ್ರದೇಶದ ಕಾಂಗ್ರೆಸ್ ಅಧಿವೇಶನದಲ್ಲಿ ಹಾಜರಾಗಿದ್ದರು. ಸುಭಾಷ್ ಚಂದ್ರಬೋಸರು ಇದರ ಅಧ್ಯಕ್ಷರು. ಅಹಿಂಸಾ ತತ್ವದ ಅನುಷ್ಠಾನದಲ್ಲಿ ತನ್ನೊಡನೆ ಕಾಂಗ್ರೆಸ್ ಪ್ರಮುಖರು ಸಮ್ಮತಿಸುವುದಿಲ್ಲವೆಂದು ಕಾಂಗ್ರೆಸ್ಸಿನಿಂದ ವಿರಮಿಸಿದರು. ಇವರ ಪ್ರಯತ್ನದಿಂದ ಬಂಗಾಳದ ಸೆರೆಮನೆಗಳಲ್ಲಿದ್ದ 1650 ರಾಜಕೀಯ ಬಂಧಿತರಲ್ಲಿ 1100 ಬಿಡುಗಡೆ ಆದರು. ಬಾಬು ರಾಜೇಂದ್ರ ಪ್ರಸಾದರ ಕರೆಗೆ ಓಗೊಟ್ಟು ಬಿಹಾರದಲ್ಲಿ ಸಂಭವಿಸಿದ ಭಯಂಕರ ಭೂಕಂಪದಲ್ಲಿ ನೊಂದವರಿಗೆ ನೆರವು ನೀಡಲು ಧಾವಿಸಿದರು. ಆರೋಗ್ಯ ಸುಧಾರಿಸಿಕೊಳ್ಳಲು ಮತ್ತೆ ಜುಹು ತೀರಪ್ರದೇಶಕ್ಕೆ ಡಿಸೆಂಬರ್ 1937 ರಲ್ಲಿ ಬಂದರು. ಖಾನ್ ಅಬ್ದುಲ್ ಗಫಾರ್ ಖಾನರ ಕೋರಿಕೆಯಂತೆ ಗಡಿನಾಡಿನಲ್ಲಿ ಸಂಚರಿಸಿದರು. ರಾಜಕೋಟೆಗೆ ಧಾವಿಸಿ ಉಪವಾಸ ನಡೆಸಿ ತದನಂತರ ಇದು ತಪ್ಪೆಂದು ಪಶ್ಚಾತ್ತಾಪಪಟ್ಟರು. ತ್ರಿಪುರ ಮತ್ತು ಹರಿಪುರ ಕಾಂಗ್ರೆಸ್ ಅಧಿವೇಶನಗಳಲ್ಲಿ ಹಾಜರಿದ್ದರು.

1939 ರಲ್ಲಿ ಯುದ್ಧ ನಿಲ್ಲಿಸುವಂತೆ ಹಿಟ್ಲರಿಗೆ ಪತ್ರ ಬರೆದರು. ಪತ್ರ ಮುಟ್ಟಲಿಲ್ಲ. 1940 ರಲ್ಲಿ ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಜಿನ್ನ ಅವರೊಡನೆ ನಡೆಸಿದ ಮಾತುಕತೆ ವಿಫಲಗೊಂಡಿತು. ಇದೇ ವರ್ಷದಲ್ಲಿ ಯುದ್ಧದ ಯಶಸ್ಸಿಗೆ ಬ್ರಿಟನ್ನಿಗೆ ಎಷ್ಟರ ಮಟ್ಟಿಗೆ ಸಹಕಾರ ಕೊಡಲು ಸಾಧ್ಯವೆಂದು ಪರಿಶೀಲಿಸಲು ವೈಸರಾಯರ ಆಮಂತ್ರಣ ಸ್ವೀಕರಿಸಿ ವಿಚಾರ ವಿನಿಮಯ ನಡೆಸಿದರು. ಅಕ್ಟೋಬರ್ ತಿಂಗಳಲ್ಲಿ ಯುದ್ಧ ವಿರೋಧ ನೈತಿಕ ಪ್ರತಿಭಟನೆ ವ್ಯಕ್ತಪಡಿಸಲು ವೈಯಕ್ತಿಕ ಸತ್ಯಾಗ್ರಹ ನಡೆಸಲು ಅವಕಾಶ ಕೊಟ್ಟರು. ಯುದ್ಧ ವಿರೋಧ ಘೋಷಣೆ ಕೂಗಿ 500 ಪ್ರಮುಖರು ಬಂಧಿತರಾದರು. ಕಾಂಗ್ರೆಸ್ಸಿಗೆ ಮಾರ್ಗದರ್ಶನ ನೀಡುವ ಹೊಣೆಯಿಂದ ತಮ್ಮನ್ನು ಬಿಡಿಸಿಕೊಂಡರು. 1942 ಜನವರಿ ಮತ್ತೆ ಹರಿಜನ ಪತ್ರಿಕೆಯ ಪ್ರಕಟನೆ ಪ್ರಾರಂಭಿಸಿತು. ಮಾರ್ಚಿಯಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸ್ ನಿಯೋಗ-ಅವರೊಡನೆ ಸಂದರ್ಶನ.

"ಕ್ವಿಟ್ ಇಂಡಿಯಾ" ಭಾರತ ಬಿಟ್ಟು ತೊಲಗಿ ಘೋಷಿಸಿದರು, ಭಾರತದ ಮಹಾ ನೇತಾರ ಮಹಾತ್ಮಗಾಂಧಿ ಆಗಸ್ಟ್ 8, 1942 ರಂದು. ಇದರ ಪರಿಣಾಮವಾಗಿ ಗಾಂಧೀಜಿ, ಕಸ್ತೂರಿಬಾ, ಮಹದೇವ ದೇಸಾಯಿ, ಸುಶೀಲನಯ್ಯಾರ್ ಎಲ್ಲರೂ ಬಂಧಿತರಾಗಿ ಪುಣೆಯ ಆಗಾಖಾನ್ ಬಂಗಲೆಯಲ್ಲಿ ಇಡಲ್ಪಟ್ಟರು. ಇದೇ ಇವರೆಲ್ಲರ ಕಡೆಯ ಬಂಧನ.

ಆಗಾಖಾನ್‌ರ ಬಂಗಲೆ ಖಾನರ ಅಂತಸ್ತಿಗೆ ತಕ್ಕ ಅರಮನೆ. ಈಗ ಇದು ಬಂದೀಖಾನೆ. ಅರಮನೆ ಕಾಯಲು ಪೊಲೀಸರ ದೊಡ್ಡ ತಂಡ. ಬಡವನ ಪ್ರತಿನಿಧಿಯಾದ ಎನಗೆ ಇಷ್ಟು ದೊಡ್ಡ ಅರಮನೆ ಏಕೆ? ಕಾವಲಿಗೆ ಎಷ್ಟು ಪೊಲೀಸರು. ಇಲ್ಲಿಂದ ನಾನು ತಪ್ಪಿಸಿಕೊಂಡು ಹೋಗಲಾರೆ ಎಂದು ಸರ್ಕಾರ ಬಲ್ಲುದು. ಎಲ್ಲಕ್ಕೂ ಎಷ್ಟು ವೆಚ್ಚ. ನನಗಾಗಿ ಸರ್ಕಾರ ವೆಚ್ಚಮಾಡುತ್ತಿರುವುದು ಅವರ ಹಣವಲ್ಲ. ಬಡ ಬೋರೆಗೌಡ ಬೆನ್ನು ಮುರಿದು ಆರ್ಜಿಸಿದ ಹಣ. ನನ್ನನ್ನು ರಾಜಕೀಯ ಬಂಧಿಗಳಿರುವ ಬೇರೆ ಎಲ್ಲಿಗಾದರೂ ಬದಲಾಯಿಸಿ ಎಂದು ಸರ್ಕಾರಕ್ಕೆ ಅವರು ಕೇಳಿಕೊಳ್ಳುತ್ತಿದ್ದರು. ಇದೇ ತುರಂಗದಲ್ಲಿ ಪ್ರಾಣಸಖಿ, ಕಸ್ತೂರಿಬಾ ಇವರ ತೊಡೆಯ ಮೇಲೆ ಪ್ರಾಣ ನೀಗಿದ್ದಳು. ಆಪ್ತಕಾರ್ಯದರ್ಶಿಯಾಗಿ, ಸಖನಾಗಿ, ಸೇವಕನಾಗಿ ನಿರಂತರ ಸೇವೆ ಸಲ್ಲಿಸಿದ್ದ ಮಹದೇವ ದೇಸಾಯಿ ಹೃದಯಾಘಾತದಿಂದ ಅಸುನೀಗಿ ಬಾಪೂಜಿ ಹೃದಯಕ್ಕೆ ಅಪಾರ ಆಘಾತ ಮಾಡಿದ್ದರು. ಅತಿ ದೀರ್ಘಕಾಲ — ಆರು ವರ್ಷಗಳ ಕಾಲ, ತಾನು ಬಂಧನದಲ್ಲಿ ಉಳಿಯಬೇಕಾದೀತೆಂದು, ದೀರ್ಘಾವಧಿಯ ಕಾರ್ಯಕ್ರಮ ತನುಗಾಗಿ ಮತ್ತು ಬಂಧನದ ಸಹೋದ್ಯೋಗಿಗಳಿಗಾಗಿ ಅವರು ಸಿದ್ಧಪಡಿಸಿದ್ದರು.

ಆದರೆ ವಿಧಾತ ಬಗೆದಿದ್ದ ಬೇರೆಯಾಗಿ. ಬಂಧನದಲ್ಲಿ ಮಲೇರಿಯ, ಕೊಕ್ಕೆ ಹುಳು, ಮತ್ತು ಜಂತುಹುಳು ಕಾಯಿಲೆಗಳಿಂದ ಪೀಡಿತರಾಗಿ ರಕ್ತಹೀನರಾಗಿದ್ದರು. ತಮ್ಮ ದೇಹಸ್ಥಿತಿ ಎಷ್ಟು ಕುಗ್ಗಿದೆ, ಎಷ್ಟು ಅಪಾಯಕಾರಿಯಾಗಿದೆ ಎಂದು ಅವರಿಗೇ ತಿಳಿದಿರಲಿಲ್ಲ. ಆದರೆ ಸರ್ಕಾರಕ್ಕೆ ಅರಿವಾಗಿತ್ತು. ಇವರು ಬಂಧನದಲ್ಲಿಯೇ ಅಸು ನೀಗಿದರೆ ತಮಗೆ ಕೆಟ್ಟ ಹೆಸರು ಬರುವುದು ಮಾತ್ರವಲ್ಲದೆ, ದೇಶದಲ್ಲಿ ಮಹಾಕ್ರಾಂತಿಯಾಗಬಹುದೆಂದು ಗಾಂಧೀಜಿ ಮತ್ತು ಕೆಲವು ಆಪ್ತ ಸಹಪಾಟಿಗಳನ್ನು ಬಂಧನ ಮುಕ್ತರಾಗಿ ಮಾಡಲು ಸರ್ಕಾರ ತೀರ್ಮಾನಿಸಿತು. ಈ ಸುದ್ದಿಯನ್ನು ಗಾಂಧೀಜಿ ಅವರಿಗೆ ಬಂದೀಖಾನೆಗಳ ಮುಖ್ಯಾಧಿಕಾರಿ ಕರ್ನಲ್ ಭಂಡಾರಿ ಸ್ವತಃ ತಿಳಿಸಲು ಮೇ 5, 1944ರ ಸಂಜೆ ಅಗಾಖಾನ್ ಅರಮನೆಗೆ ಬಂದರು.

"ತಮ್ಮನ್ನು ಮತ್ತು ಬಳಗವನ್ನು ನಾಳೆ ಬೆಳಿಗ್ಗೆ ಅನಿರ್ಬಂಧವಾಗಿ ಬಂಧನದಿಂದ ಬಿಡುಗಡೆ ಮಾಡಲಾಗುವುದು."

"ಏನು ಹಾಸ್ಯ ಮಾಡುತ್ತಿರುವಿರೋ"

"ತಮ್ಮಲ್ಲಿ ಪರಿಹಾಸ್ಯವೇ, ತಮಾಷಿಯಲ್ಲ. ಖಂಡಿತವಾಗಿಯೂ ಬಿಡುಗಡೆ ಮಾಡಲು ಆಜ್ಞೆಯಾಗಿದೆ. ಆರೋಗ್ಯ ಸುಧಾರಿಸಿಕೊಳ್ಳಲು ಬೇಕಾದರೆ ಕೆಲವು ದಿನ ತಾವು ಉಳಿದಿರಬಹುದು. ಏನೇ ಆಗಲಿ ಬೆಳಿಗ್ಗೆ 8 ಘಂಟೆಗೆ ಪಹರೆ ತೆಗೆಯಲಾಗುವುದು."

"ನಾನು ಕೆಲವು ದಿನ ಇಲ್ಲಿ ನಿಂತರೆ, ನನಗೆ ರೈಲ್ವೆ ವೆಚ್ಚ ಕೊಡುವವರು ಯಾರು?"

"ತಾವು ಹೊರಡುವ ಮುನ್ನ ತಮಗೆ ವೆಚ್ಚ ಕೊಡಲಾಗುವುದು"

ಹಾಗಾದರೆ ಒಂದೆರೆಡು ದಿನ ಪುಣೆಯಲ್ಲಿ ಉಳಿದು ಅನಂತರ ಹೋಗುವೆ.

"ಆದರೆ ದಯಮಾಡಿ ತಾವು ಮತ್ತೆ ಇಲ್ಲಿಗೆ ಬರಬೇಡಿ. ನೋಡಿ, ನಿಮ್ಮ ಚಿಂತೆಯಿಂದ ನನ್ನ ಕೂದಲು ಬಿಳುಪಾಗಿ ಹೋಗಿದೆ" ಎಂದರು ಕರ್ನಲ್ ಭಂಡಾರಿ.

ಮಾರನೆಯ ದಿನ ಬೆಳಿಗ್ಗೆ ಮಹಾತ್ಮರನ್ನು ಬಂಧನದಿಂದ ಬಿಡಲು ಭಂಡಾರಿಯವರೇ ಸ್ವತಃ ಅಗಾಖಾನ್ ಅರಮನೆಗೆ ಬಂದರು. ಸಮಯ ಬೆಳಿಗ್ಗೆ 7-45.

ಅವರನ್ನು ನೋಡುತ್ತಲೇ ಹೊರಡಲು ಗಾಂಧೀಜಿ ತಮ್ಮ ಊರುಗೋಲು ತೆಗೆದು ಕೊಂಡರು. ಆದರೆ ಭಂಡಾರಿ ಇನ್ನೂ ಘಂಟೆ 8 ಆಗಿಲ್ಲ. ಆತುರ ಬೇಡ ಎಂದು 8 ಘಂಟೆಗೆ ಸರಿಯಾಗಿ ಹೊರಕ್ಕೆ ದಯಮಾಡಿಸುವಂತೆ ಮಹಾದ್ವಾರದವರೆಗೂ ಕರೆದುಕೊಂಡು ಹೋದರು.

ಹಿಂದಿನ ರಾತ್ರಿ ಜೈಲಿನ ಅಧಿಕಾರಿ ಖಾನ್ ಬಹದ್ದೂರ ಕಾಟ್ಲೆ, ಮಹಾತ್ಮ ರಲ್ಲಿಗೆ ಬಂದು, ನಾಳೆ ದಿನ ಬೆಳಿಗ್ಗೆ ನಾನು ಅಧಿಕಾರಿಯ ಸಮವಸ್ತ್ರದಲ್ಲಿ ಮಹಾ ದ್ವಾರದ ಬಳಿ ಆಜ್ಞಾಧಾರಿಯಾಗಿ ನಿಂತಿರುವೆ. ಆದ್ದರಿಂದ ಈಗಲೆ ತಮ್ಮ ಆಶೀರ್ವಾದ ಕೋರಲು ಬಂದಿರುವೆ ಎಂದು ಮಹಾತ್ಮರ ಪಾದಗಳಿಗೆ ಎರಗಿದ. ಇವರು ಬಂಧಿತರು, ಅವನು ಬಂಧಿಗಳನ್ನು ನೋಡಿಕೊಳ್ಳುವ ಜೈಲು ಅಧಿಕಾರಿ ಎಂಬ ಭಾವನೆ ಕರಗಿ ಹೋಗಿತ್ತು. ಕಸ್ತೂರಿಬಾ ಮತ್ತು ಮಹದೇವಭಾಯಿ ಅವರ ಬೃಂದಾವನ ಗಳ ಬಳಿ ಪ್ರಾರ್ಥನೆ ಮುಗಿಸಿ ಹೊರಡಲು ಗಾಂಧೀಜಿ ಸಿದ್ಧರಾದರು. ಅಷ್ಟು ಹೊತ್ತಿಗೆ ಕಾಟ್ಲೆ ಅವರನ್ನು ಸಂದರ್ಶಿಸಿ 75ನೆಯ ವಯಸ್ಸಿನ ಕುರುಹಾಗಿ ರೂ. 75 ಕಾಣಿಕೆ ಸಲ್ಲಿಸಿದ. ತಮಗೆ ಹೊರಗೆ ಸಾವಿರಾರು ಜನ ಕಾಣಿಕೆ ನೀಡ ಬಹುದು. ಈ ಅಲ್ಪ ಕಾಣಿಕೆ ಮೊದಲ ಕಾಣಿಕೆಯಾಗಿ ಸ್ವೀಕರಿಸೋಣವಾಗಲಿ ಎಂದು ಅವರ ಕೈಯಲ್ಲಿಟ್ಟ.

ಮಹಾದ್ವಾರದಿಂದ ಹೊರಕ್ಕೆ ಬರುತ್ತಲೇ ಸುಶೀಲನಯ್ಯಾರ್, ಪ್ಯಾರೇಲಾಲ್, ಡಾಕ್ಟರ್ ಗಿಲ್ಡರ್, ಮೀರಾಬೆಹನ್ ಮತ್ತು ಮನೂಗಾಂಧಿ ಇವರ ಮೇಲೆ ಬಂಧನ ದಲ್ಲಿದ್ದ ಕಾಲದಲ್ಲಿ ಒಳಗೆ ನಡೆದುದನ್ನು ಬಹಿರಂಗ ಪಡಿಸಿಬಾರದೆಂದು ಅವರೆಲ್ಲರಿಗೂ ನೋಟೀಸು ಜಾರಿಮಾಡಲಾಯಿತು. ಮೇಲ್ಕಾಣಿಸಿದವರೆಲ್ಲರೂ ಗಾಂಧಿಯವರ ಜೊತೆ ಗಾರರಾಗಿದ್ದರು ಬಂಧನದಲ್ಲಿ. ನೋಟೀಸು ಸ್ವೀಕರಿಸಬೇಕೆ, ರುಜು ಮಾಡಬೇಕೆ ಎಂದು ಕೇಳಿದರು. ಸ್ವೀಕರಿಸಿ, ರುಜು ಮಾಡಿ ಎಂದರು. ತನಗೆ ಎಚ್ಚರಿಕೆ ಕೊಡುವುದಿಲ್ಲವೇ ಎಂದು ಪ್ರಶ್ನಿಸಿದರು. ಇಲ್ಲ ಎಂದ ಪೋಲೀಸ್ ಅಧಿಕಾರಿ. ಷರತ್ತಿನ ಮೇಲೆ ಬಿಡುಗಡೆ ಹೊಂದಲು ಅವರು ಒಪ್ಪುತ್ತಿರಲಿಲ್ಲ. ಇದು ಸರ್ಕಾರಕ್ಕೆ ಗೊತ್ತು. ಕಸ್ತೂರಿಬಾ, ಮಹಾದೇವ ದೇಸಾಯಿ ಇಬ್ಬರೂ ಬಂಧನದಲ್ಲಿದ್ದಾಗಲೇ ಅಸು ನೀಗಿದ್ದರು. ಇವರ ಮರಣ ನೈಜವೇ ಎಂಬ ಸಂದೇಹ ದೇಶದಲ್ಲಿ ಹರ ಡಿತ್ತು. ಇನ್ನೊಂದು ದುರ್ಘಟನೆ ನಡೆಯದಿರಲೆಂದು ಬಂಧನದಿಂದ ಅವರನ್ನು ಬಿಡಲು ಸರ್ಕಾರ ನಿರ್ಧರಿಸಿತ್ತು.

ಅವರು ಜೈಲಿನಲ್ಲೇ ಸಾಯಬಹುದೆಂಬ ಭೀತಿ ಸರ್ಕಾರಕ್ಕೆ. ಬ್ರಿಟಿಷ್ ಪ್ರಭುತ್ವದ ವಿದೇಶಾಂಗ ಸಚಿವ ಆಂಥೋನಿ ಈಡನ್ ಮಹಾತ್ಮರು ಮೃತರಾದರೆ

ಈ ಸುದ್ದಿಯನ್ನು ಬಹಿರಂಗಪಡಿಸಬೇಕಾದ ರೀತಿಯನ್ನು ಚಕ್ರಾಧಿಪತ್ಯದ ಎಲ್ಲ ಸಮಾಚಾರ ವಿಭಾಗಗಳಿಗೆ ಪೂರ್ವಭಾವಿಯಾಗಿ ತಿಳಿಸಿದ್ದರು. ಅವರ ನೈತಿಕ ಔನ್ನತ್ಯ ಕುಗ್ಗಿಸಬೇಡಿ, ಹೊಗಳಿ ಉತ್ಪ್ರೇಕ್ಷಿಸಿ. ಭೌತಿಕ ವಿಷಯಗಳಿಗಿಂತ ಪಾರ ಮಾರ್ಥಿಕಕ್ಕೆ ಅವರ ಗಮನ ಅಧಿಕವಾಗಿತ್ತು. ಇಂಥ ಮಹಾವ್ಯಕ್ತಿಯ ಪ್ರತಿಭೆ ಚೀನ, ಭಾರತ ಮತ್ತು ಮಿತ್ರಕೂಟಕ್ಕೆ ಲಭಿಸದಿದ್ದುದು ವಿಷಾದಕರ. ಈ ರೀತಿಯ ಹೇಳಿಕೆ ಹೊರಡಿಸುವಂತೆ ತಿಳಿಸಲಾಗಿತ್ತು.

ಆದರೆ ಭಗವಂತನ ಇಚ್ಛೆ ಅನ್ಯವಾಗಿತ್ತು. ದೇಹಸ್ಥಿತಿ ತುಂಬ ಕೆಟ್ಟಿದ್ದರೂ ಜೈಲಿನಲ್ಲಿ ಅವರನ್ನು ಸಾಯಗೊಡಲಿಲ್ಲ.

ಜೈಲಿನಲ್ಲಿ ಬಂಧನದಲ್ಲಿ ಉಳಿದವರು ತಮ್ಮ ಬಿಡುಗಡೆ ಎಂದು ಆದೀತು ಎಂದು ತಿಂಗಳು, ವಾರ, ದಿನ, ಘಂಟೆ ಲೆಕ್ಕ ಹಾಕುತ್ತಿರುತ್ತಾರೆ, ಪಂಜರದಲ್ಲಿ ಸಿಲುಕಿಕೊಂಡ ಪ್ರಾಣಿಯಂತೆ· ಆದರೆ ಗಾಂಧೀಜಿ ಬಿಡುಗಡೆಯಿಂದ ಸಂತುಷ್ಟ ರಾಗಲಿಲ್ಲ. ಕಾಯಿಲೆಯ ನಿಮಿತ್ತ ಬಿಡುಗಡೆ ಆದುದಕ್ಕೆ ಅವರಿಗೆ ಹರ್ಷವಿರಲಿಲ್ಲ. 1924ರಲ್ಲಿ ಕರುಳುಬಾಲದ ರೋಗ ಅಪೆಂಡಿಸೈಟಿಸ್ ಶಸ್ತ್ರ ಚಿಕಿತ್ಸೆಯ ನಂತರ ಬಿಡುಗಡೆ ಆದಾಗಲೂ ಇದೇ ರೀತಿ ಪರಿತಪಿಸಿದರು.

ಪ್ರಾಣಾಪಾಯದ ಘಟನೆಗಳು

ಸತ್ಯ ಅಹಿಂಸೆಗೆ ಅಗ್ರಸ್ಥಾನ ಕೊಟ್ಟಿದ್ದ ಗಾಂಧೀಜಿ ತಮ್ಮ ಜೀವಮಾನದಲ್ಲಿ ಪ್ರಾಣಾಪಾಯದ ಹಲವಾರು ಭೀಕರ ಸನ್ನಿವೇಶಗಳನ್ನು ಎದುರಿಸಬೇಕಾಗಿ ಬಂತು. ನನ ಜೀವ ಪರಮಾತ್ಮನ ಅಧೀನ. ಅವನಿಚ್ಛೆ ಇರುವವರೆಗೂ ನನ್ನನ್ನು ಈ ಭೂಲೋಕದಲ್ಲಿ ಜೀವಂತ ಇರಿಸುತ್ತಾನೆ. ಈ ಅಪಾರ ಭಕ್ತಿ, ಮತ್ತು 'ಧೈರ್ಯಂ ಸರ್ವತ್ರ ಸಾಧನಂ' ಎಂಬುದರಲ್ಲಿ ಆತ್ಮ ವಿಶ್ವಾಸ, ಇವು ಎಲ್ಲ ಸಂಕಟ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸುವ ಎದೆಗಾರಿಕೆ ಅವರಿಗೆ ಗಳಿಸಿಕೊಟ್ಟಿತ್ತು. ತಮಗೆ ತೊಂದರೆ ಕೊಟ್ಟವರಿಗೆ ಪ್ರತೀಕಾರ ಮಾಡುವುದು ಅವರ ನೀತಿ ಕಲ್ಪನೆಗೆ ವಿರೋಧವೆನಿಸಿತ್ತು.

1886 ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿದ್ದರು. ಏಷ್ಯದ ನಿವಾಸಿಗಳನ್ನು ಗುಲಾಮರಂತೆ ಕಾಣುವ ಶಾಸನ ಟ್ರಾನ್ಸ್‌ವಾಲ್ ಸರ್ಕಾರ ಜಾರಿ ಮಾಡಿತು. ಟ್ರಾನ್ಸ್‌ವಾಲ್ ಪ್ರವೇಶಿಸಲು ಮೂರು ಪೌಂಡ್ ಕೊಡಬೇಕು. ಭಾರತೀಯರು ಪ್ರಿಟೋರಿಯ ನಗರದ ಕಾಲುದಾರಿಯಮೇಲೆ ನಡೆಯಲಾಗದು. ರಹ ದಾರಿಯಿಲ್ಲದೆ ರಾತ್ರಿ 9 ಘಂಟೆಯ ಮೇಲೆ ಸಂಚರಿಸಬಾರದು. ಏಷ್ಯದವರೇ ಆದರೂ ಅರಬ್ಬರೆನಿಸಿಕೊಂಡವರಿಗೆ ಈ ನಿರ್ಬಂಧಗಳು ಅಷ್ಟಾಗಿ ಅನ್ವಯಿಸುತ್ತಿರಲಿಲ್ಲ. ವಿದ್ಯಾವಂತ ಭಾರತೀಯರು ನಿರ್ಬಂಧಗಳಿಗೆ ಹೊರತಾಗಿದ್ದರು. ಆದರೂ ಬ್ಯಾರಿಸ್ಟರ್ ಗಾಂಧೀ ಈ ನಿರ್ಬಂಧಗಳ ಸವಿ ಉಣಬೇಕಾಯಿತು.

ಪ್ರಿಟೋರಿಯದಲ್ಲಿ ಪ್ರೆಸಿಡೆಂಟ್ ಕ್ರೂಗರ್ ಬಂಗಲೆ ಇದೆ. ಆಡಂಬರವಿಲ್ಲದ ನೋಟಕ್ಕೆ ಸಾಮಾನ್ಯವಾದ ಮನೆ. ಆವರಣದಲ್ಲಿ ಹೂದೋಟವೂ ಇಲ್ಲ. ಬಂಗಲೆ ಕಾಯಲು ಸಮವಸ್ತ್ರದ ರಕ್ಷಕರು ಇರುತ್ತಿದ್ದರು. ಪ್ರತಿದಿನ ಸಂಜೆ ಗಾಂಧೀಜಿ ರಸ್ತೆಯ ಅಂಚಿನ ಪಾದಚಾರಿಗಳ ಕಾಲುದಾರಿಯಲ್ಲಿ ನಡೆಯುತ್ತ, ಗಾಳಿಸೇವನೆಗಾಗಿ ಬಯಲು ಪ್ರದೇಶಕ್ಕೆ ಹೋಗುತ್ತಿದ್ದರು. ದಿನವಹಿ ವಾಡಿಕೆಯಾಗಿ ಹೋಗುತ್ತಿದ್ದುದರಿಂದ ರಕ್ಷಕದಳದವರಿಗೆ ಇವರ ಪರಿಚಯವಿತ್ತು. ಕ್ವೇಕರ್ ಪಂಥಕ್ಕೆ ಸೇರಿದ ಮಿಸ್ಟರ್ ಕೋಟ್ಸ್ ಮತ್ತು ಗಾಂಧೀಜಿ ಇದೇ ಬೀದಿಯಲ್ಲಿ ಜತೆಯಾಗಿ ಹೊರಟು ರಾತ್ರಿ 10 ಗಂಟೆಗೆ ಹಿಂತಿರುಗುವ ಪದ್ಧತಿ. ಇದೇ ಕೋಟ್ಸ್ ಮಹಾಶಯ ಗಾಂಧಿಯವರನ್ನು ಕ್ರೈಸ್ತಮತಾವಲಂಬಿಯಾಗಿ ಮಾಡಲು ಪ್ರಯತ್ನಿಸುತ್ತಿದ್ದರು.

ಎಂದಿನಂತೆ ಗಾಂಧೀಜಿ ಒಂದು ದಿನ ರಾಷ್ಟ್ರಪತಿಯ ಮನೆಯ ಮುಂದಿನ ರಸ್ತೆಯ ಅಂಚಿನ ಪಾದಚಾರಿಗಳ ರಸ್ತೆಯಲ್ಲಿ ನಡೆದು ಹೋಗುತ್ತಿದ್ದರು. ರಕ್ಷಣಾದಳದ ಸಿಪಾಯಿ, ಯಾವ ಎಚ್ಚರಿಕೆಯನ್ನೂ ನೀಡದೆ, 'ಇಲ್ಲಿ ನಡೆಯಲಾಗದು ಕೆಳಗೆ ಇಳಿದು ನಡೆ' ಎಂದೂ ತಿಳಿಸದೆ, ಹಟಾತ್ತನೆ ಅವರನ್ನು ದಬ್ಬಿ ಕಾಲಿನಿಂದ ಒದ್ದು ರಸ್ತೆಗೆ ದೂಡಿದ. ಗಾಂಧೀಜಿ ತಲ್ಲಣಿಸಿಹೋದರು. ಹೀಗೇಕೆ ಮಾಡಿದೆ ಎಂದು ಅವನನ್ನು ಪ್ರಶ್ನಿಸು ವಷ್ಟರಲ್ಲಿ ಕುದುರೆ ಸವಾರಿಮಾಡುತ್ತಾ ಹೋಗುತ್ತಲಿದ್ದ ಕೋಟ್ಸ್ ಧಾವಿಸಿ ಬಂದರು. "ಗಾಂಧೀಜಿ, ನಡೆದುದೆಲ್ಲವನ್ನೂ ನಾನು ಕಣ್ಣಾರೆ ಕಂಡಿರುವೆ. ನೀವು ಅವನ ಮೇಲೆ ಕೋರ್ಟಿನಲ್ಲಿ ದಾವಾ ಹೂಡುವುದಾದರೆ ಸಂತೋಷವಾಗಿ ನಾನು ನಿಮ್ಮ ಪರ ಸಾಕ್ಷಿ ನೀಡುವೆ. ನಿಮ್ಮನ್ನು ಇಷ್ಟು ಘಾಸಿಪಡಿಸಿರುವುದಕ್ಕಾಗಿ ನನಗೆ ತುಂಬಾ ಸಂಕಟ ವಾಗಿದೆ," ಹೀಗೆಂದು ದುಃಖ ವ್ಯಕ್ತಪಡಿಸಿದರು.

"ಪಾಪ, ನಾನು ಯಾರೆಂದು ಅವನಿಗೇನು ಗೊತ್ತು. ಎಲ್ಲ ವರ್ಣೀಯರೂ ಅವನಿಗೆ ಒಂದೇ. ನನ್ನನ್ನು ಯಾವ ರೀತಿಯಲ್ಲಿ ಅವನು ತಲ್ಲಣಿಸಿರುತ್ತಾನೋ, ನಿಸ್ಸಂದೇಹವಾಗಿ ಎಲ್ಲ ನೀಗ್ರೋಗಳ ವಿಷಯದಲ್ಲೂ ಇದೇ ರೀತಿಯಲ್ಲಿ ವರ್ತಿಸು ತ್ತಾನೆ. ನನ್ನ ಸ್ವಂತ ತೊಂದರೆಗಳಿಗಾಗಿ ಕೋರ್ಟಿಗೆ ಹೋಗಬಾರದೆಂದು ನಾನು ತೀರ್ಮಾನಿಸಿರುತ್ತೇನೆ. ಆದ್ದರಿಂದ ಅವನ ವಿರುದ್ಧ ನಾನು ಮೊಕದ್ದಮೆ ಹೂಡುವು ದಿಲ್ಲ." ಈ ರೀತಿ ಗಾಂಧೀಜಿ ತಿಳಿಸಿದರು.

ಇದು ನಿಮ್ಮ ಸ್ವಭಾವಕ್ಕೆ ಅನುಗುಣವಾಗಿದೆ. ಆದರೆ ಚಿಂತಿಸಿ ನೋಡಿ ಇಂಥ ವರಿಗೆ ನಾವು ಪಾಠಕಲಿಸಬೇಕು, ಹೀಗೆಂದರು ಕೋಟ್ಸ್. ನಂತರ ಅವರು ಪೊಲೀಸಿನವನನ್ನು ಅವನು ಮಾಡಿದ ಅಪರಾಧಕ್ಕಾಗಿ ತೀಡಿದರು. ಅವನು ಗಾಂಧಿ ಯವರ ಕ್ಷಮಾಪಣೆ ಬೇಡಿದ. ಅವನು ಕ್ಷಮಾಪಣೆ ಬೇಡಬೇಕಾದ ಆವಶ್ಯಕತೆಯೇ ಇರಲಿಲ್ಲ. ಮನಸಾರೆ ಗಾಂಧೀಜಿ ಅವನನ್ನು ಮೊದಲೇ ಕ್ಷಮಿಸಿದ್ದರು. ಪೊಲೀಸಿ ನವರು ಈ ಘಟನೆಯಿಂದ ಪಾಠಕಲಿತರೋ ಇಲ್ಲವೋ ಹೇಳಲಾಗದು. ಪರಂತು ಗಾಂಧಿಯವರೇನೋ ಪಾಠಕಲಿತರು. ಮತ್ತೊಬ್ಬ ಪೇದೆ ಇದೇ ರೀತಿಯಲ್ಲಿ ವರ್ತಿಸಬಹುದು. ಒದೆತ ತಿನ್ನಬಹುದಾದ ಘಟನೆಗೆ ಇನ್ನೊಂದು ಅವಕಾಶ ಮಾಡಿಕೊಡಲೇಕೆ, ಹೀಗೆ ಯೋಚಿಸಿ ಜಾಗರೂಕ ಗಾಂಧೀ ಆ ರಸ್ತೆಯಲ್ಲಿ ನಡೆಯು ವುದನ್ನೇ ಬಿಟ್ಟರು. ಬೇರೊಂದು ಬೀದಿಯ ಮೂಲಕ ಸಂಜೆಯ ಗಾಳಿ ಸಂಚಾರಕ್ಕೆ ಹೋಗತೊಡಗಿದರು.

ಇದಕ್ಕೂ ತೀವ್ರವಾದ ಇನ್ನೊಂದು ದುರ್ಘಟನೆ ಜನವರಿ 1897 ರಲ್ಲಿ ಸಂಭವಿಸಿತು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಅನುಭವಿಸುತ್ತಿದ್ದ ಕಷ್ಟಸಂಕಟ

ದೇಶಬಾಂಧವರಿಗೆ ತಿಳಿಸಲು ಮತ್ತು ತಮ್ಮ ಕುಟುಂಬವನ್ನು ದಕ್ಷಿಣ ಆಫ್ರಿಕಾಗೆ ಕರೆದುಕೊಂಡು ಹೋಗಲು ಅವರು ಭಾರತಕ್ಕೆ ಬಂದಿದ್ದರು. ಅಲ್ಲಿನ ತೊಂದರೆಗಳನ್ನು ವಿವರಿಸುವ ಹಸಿರು ಪುಸ್ತಿಕೆಯೊಂದನ್ನು ಪ್ರಕಟಿಸಿದರು. ಹಲವು ಪತ್ರಿಕಾ ಸಂಪಾದಕರನ್ನು ಕಂಡು ವಿಷಯ ತಿಳಿಸಿದರು. ಪತ್ರಿಕೆಗಳು ಇವರ ಲೇಖನಗಳನ್ನು ಪ್ರಕಟಿಸಿದುವು. ಸ್ವಲ್ಪವೂ ಉತ್ಪ್ರೇಕ್ಷೆಯಿಲ್ಲದ ವರದಿಗಳು. ಭಾಷಣ ಮಾಡಿದರು. ರಾಷ್ಟ್ರೀಯ ಮಹಾ ಕಾಂಗ್ರೆಸ್ ಸಹಾನುಭೂತಿ ವ್ಯಕ್ತಪಡಿಸುವ ನಿರ್ಣಯಮಾಡಿತು. ಹಣ ಶೇಖರಿಸಿದರು. ಇಷ್ಟೆಲ್ಲ ಕೆಲಸ ತೀರಿಸಿಕೊಂಡು ದಕ್ಷಿಣ ಆಫ್ರಿಕಾಗೆ ಕುಟುಂಬದೊಡನೆ ಜಹಜಿನಲ್ಲಿ ಪ್ರಯಾಣ ಬೆಳೆಸಿದರು. ಈ ಜಹಜಿನ ಜೊತೆಯಲ್ಲೇ 'ನದೇರಿ' ಎಂಬ ಮತ್ತೊಂದು ಜಹಜೂ ಹೊರಟಿತ್ತು. ಇದು ಕಾರ್ಮಿಕ ವರ್ಗದ ಕುಟುಂಬದಿಂದ ತುಂಬಿತ್ತು. ದೀರ್ಘ ಪ್ರಯಾಣದ ನಂತರ ಎರಡು ಜಹಜುಗಳೂ ದರ್ಬಾನ್ ಬಂದರು ಮುಟ್ಟಿ ಲಂಗರು ಹಾಕಿದುವು. ಆದರೆ ಪ್ರಯಾಣೀಕರು ಜಹಜಿನಿಂದ ಇಳಿಯಲು ಅಧಿಕಾರಿಗಳು ಅವಕಾಶ ಕೊಡಲಿಲ್ಲ. ಬೊಂಬಾಯಿ ನಗರದಲ್ಲಿ ಪ್ಲೇಗು ಹರಡಿದ್ದಾಗ ಎರಡು ಜಹಜುಗಳೂ ಹೊರಟಿದ್ದುವು. ಸೋಂಕು ಹರಡಲು 23 ದಿನಗಳಾದರೂ ಅಗತ್ಯವೆಂದು ವೈದ್ಯನ ಅಭಿಪ್ರಾಯವಾಗಿತ್ತು. ಇದೊಂದು ನೆಪ. ಅಧಿಕ ಸಂಖ್ಯೆಯಲ್ಲಿ ಭಾರತೀಯರು ದಕ್ಷಿಣ ಆಫ್ರಿಕ ಪ್ರವೇಶಿಸದಂತೆ ತಡೆಯಬೇಕು. ಎರಡು ಜಹಜುಗಳನ್ನೂ ಭಾರತಕ್ಕೆ ಹಿಂತಿರುಗಿ ಕಳುಹಿಸಬೇಕು. ಗಾಂಧೀಜಿ ಮತ್ತೆ ದಕ್ಷಿಣ ಆಫ್ರಿಕದಲ್ಲಿ ಕಾಲೂರಬಾರದು. ಇದು ಅಲ್ಲಿನ ಬಿಳಿಯರ ಉದ್ದೇಶ.

ಈ ಉದ್ದೇಶ ಸಾಧಿಸಲು ಬಿಳಿಯರು ವಿಶೇಷ ಸಮಿತಿಯನ್ನೇ ನೇಮಿಸಿದ್ದರು. ನೆಟಾಲ ಸರ್ಕಾರದ ಬೆಂಬಲ ಈ ಸಮಿತಿ ಪಡೆದಿತ್ತು. ಮಂತ್ರಿ ಸಂಪುಟದ ಪ್ರಭಾವಶಾಲಿ ಹ್ಯಾರಿ ಎಸ್‌ಕೊಂಬ್ ಇದಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ಬಿಳಿಯರ ಮೇಲೆ ಹಲ್ಲೆ ನಡೆಸುವುದಕ್ಕಾಗಿಯೇ ಎರಡು ಜಹಜುಗಳ ತುಂಬ ಭಾರತೀಯರನ್ನು ಕರೆದುಕೊಂಡು ಬಂದಿದ್ದಾರೆ. ನೆಟಾಲ್ ಸರ್ಕಾರ ಮತ್ತು ಇಲ್ಲಿಯ ಬಿಳಿಯರ ವಿರುದ್ಧ ಭಾರತದಲ್ಲಿ ಅವರು ಅಪಪ್ರಚಾರ ಮಾಡಿರುತ್ತಾರೆ. ಈ ರೀತಿಯ ದುಷ್ಟ ಪ್ರಚಾರ ನಡೆದಿತ್ತು ದಕ್ಷಿಣ ಆಫ್ರಿಕದಲ್ಲಿ. ಬಿಳಿಯರ ಕೋಪ ಕೆಂಡ ಕಾರುತ್ತಿತ್ತು.

ಇಂಥ ಕೆರಳಿದ ದುಷ್ಟ ವಾತಾವರಣದಲ್ಲಿ ಜಹಜುಗಳು ಬೊಂಬಾಯಿ ಬಿಟ್ಟ 23 ದಿನಗಳ ತರುವಾಯ ಪ್ರಯಾಣೀಕರನ್ನು ದರ್ಬಾನಿನಲ್ಲಿ ಇಳಿಸಲು ಅವಕಾಶ ಪಡೆದುವು. ಗಾಂಧಿಯವರ ಕುಟುಂಬ ಬಂದರಿನಿಂದ ಎರಡು ಮೈಲಿಗಳ ದೂರದ ರುಸ್ತುಂಜಿಯವರ ಮನೆ ಸೇರಿದರು. 'ಗಾಂಧಿಯವರು ಇಳಿಯುತ್ತಲೇ ಅವರನ್ನು ಕೊಲ್ಲಲು ಬಿಳಿಯರು ಹೊಂಚು ಹಾಕುತ್ತಿದ್ದಾರೆ. ಆದ್ದರಿಂದ ಕತ್ತಲಾದ ಮೇಲೆ ಅವರು ಇಳಿದು ಮನೆ ಸೇರುವುದು ಕ್ಷೇಮ' ಈ ರೀತಿಯಲ್ಲಿ ಹ್ಯಾರಿ ಎಸ್‌ಕೋಂಬ್

ಹೇಳಿಕಳುಹಿಸಿದ್ದರು. ಗಾಂಧಿಯವರೂ ಸಮ್ಮತಿಸಿದ್ದರು. ಇಷ್ಟರಲ್ಲಿ ದಾದಾ ಅಬ್ದುಲ್ಲಾ ಕಂಪನಿಯ ವಕೀಲ ಮತ್ತು ಗಾಂಧಿಯವರ ಗೆಳೆಯ ಲಾಟನ್ ಜಹಜು ಏರಿ, ಗಾಂಧಿಯವರನ್ನು ನೋಡಿ, ಸೂರ್ಯಾಸ್ತಮವಾದ ಮೇಲೆ ಸಂಜೆಯ ಕತ್ತಲಲ್ಲಿ ಕಳ್ಳನಂತೆ ಇಳಿದು ಬಂದು ಮನೆ ಸೇರುವುದು ಗಾಂಧಿಯವರ ಘನತಗೆ ಯೋಗ್ಯವಲ್ಲ. ತಾನೂ ಅವರ ಸಂಗಡ ಬರುವುದಾಗಿ ಹೇಳಿ, ಜಹಜಿನಿಂದ ಇಳಿದು, ಇಬ್ಬರೂ ಕೂಡಿ ಮನೆಯತ್ತ ನಡೆಯುತ್ತ ಹೊರಟರು.

ಸ್ವಲ್ಪ ದೂರ ನಡೆಯುವುದರೊಳಗಾಗಿ ಗಾಂಧಿಯವರನ್ನು ಗುರ್ತಿಸಿ 'ಗಾಂಧೀ ಗಾಂಧೀ' ಎಂದು ಬೊಬ್ಬೆ ಹಾಕತೊಡಗಿದರು. ಕೂಗು ಕೇಳಿ ಬಿಳಿಯರು ದೊಣ್ಣೆ ಕೋಲು ಹಿಡಿದು ಓಡಿ ಬಂದರು. ರಿಕ್ಷಾ ಹತ್ತಿ ಹೋಗಲೂ ಸಾಧ್ಯವಾಗಲಿಲ್ಲ. ರಿಕ್ಷಾ ಚಾಲಕ ಹೆದರಿ ಓಡಿಹೋದ. ತದನಂತರ ಗಾಂಧಿಯವರನ್ನು ಲಾಟನ್ ಅವರಿಂದ ಬೇರ್ಪಡಿಸಲಾಯಿತು. ಗಾಂಧಿಯವರೊಬ್ಬರೇ ಗುಂಪಿನ ನಡುವೆ ಸಿಕ್ಕಿಕೊಂಡರು. ಕಲ್ಲು, ಇಟ್ಟಿಗೆ, ಕೊಳೆತ ಮೊಟ್ಟೆ ಇವರ ಮೇಲೆ ತೂರಿದರು. ಪೇಟ ಕಸಿದರು. ಒಬ್ಬ ಧಾಂಡಿಗ ಇವರ ಕಪಾಳಕ್ಕೆ ರಪ್ಪೆಂದು ಎರಡು ಬಿಟ್ಟ. ಕಾಲಿನ ಒದೆತ, ಕೈಗಳ ಗುದ್ದು ಬೀಳಲು ಪಾರಂಭಿಸಿತು. ಒದೆತ ತಡೆಯಲಾರದೆ ಗಾಂಧೀಜಿ ಪ್ರಜ್ಞಾಹೀನಸ್ಥಿತಿ ಮುಟ್ಟಿದರು. ನೆಲಕ್ಕೆ ಉರುಳುವಂತಾಯಿತು. ಪಕ್ಕದಲ್ಲಿದ್ದ ಬೇಲಿಯ ತಂತಿ ಹಿಡಿದು, ತತ್ತರಿಸುತ್ತ ನಿಂತರು.

ಈ ವೇಳೆಗೆ ಸರಿಯಾಗಿ ಪೊಲೀಸ್ ಪ್ರಾದಾಧಿಕಾರಿ ಅಲೆಕ್ಸಾಂಡರ್ ಅವರ ಪತ್ನಿ ಅತ್ತ ನಡೆದು ಹೋಗುತ್ತಿದ್ದರು. ಇವರಿಗೆ ಗಾಂಧಿಯವರ ಪರಿಚಯವಿತ್ತು. ಕೂಡಲೇ ಅವರ ನೆರವಿಗೆ ಧಾವಿಸಿ ಬಂದರು. ಸಮಯೋಚಿತ ಪ್ರಜ್ಞೆಯಿಂದ ಕೈಯಲ್ಲಿದ್ದ ಕೊಡೆ ಬಿಚ್ಚಿ, ಗಾಂಧಿಯವರನ್ನು ರಕ್ಷಿಸಲು ಅಡ್ಡಲಾಗಿ ಹಿಡಿದು ಏಟುಗಳು ಬೀಳುವುದನ್ನು ತಪ್ಪಿಸಿದರು. ಇಷ್ಟರಲ್ಲಿ ಗಲಭೆ ನಡೆಯುತ್ತಿದ್ದುದನ್ನು ಗಮನಿಸಿದ ಭಾರತೀಯ ತರುಣ ಪೊಲೀಸ್ ಠಾಣೆಗೆ ಓಡಿ ಅಲೆಕ್ಸಾಂಡರ್ ಅವರಿಗೆ ಸುದ್ದಿ ಮುಟ್ಟಿಸಿದ. ಅವರು ಗಾಂಧಿಯವರನ್ನು ಸುರಕ್ಷಿತವಾಗಿ ಮನೆಗೆ ಮುಟ್ಟಿಸಲು ಕೆಲವು ಪೊಲೀಸರನ್ನು ಕಳುಹಿಸಿ ಕೊಟ್ಟರು. ಪೊಲೀಸು ಠಾಣೆಯಲ್ಲೇ ಆಶ್ರಯ ಪಡೆಯುವಂತೆ ಹೇಳಿದರು. ಗಾಂಧೀಜಿ ಈ ಸಲಹೆ ಸ್ವೀಕರಿಸಲಿಲ್ಲ. ಅಂತೂ ಪೊಲೀಸು ರಕ್ಷಣೆಯಲ್ಲಿ ರುಸ್ತುಂಜಿಯವರ ಮನೆ ಸುರಕ್ಷಿತವಾಗಿ ಸೇರಿದರು.

ಆದರೆ ಇಷ್ಟರಿಂದಲೇ ಗಾಂಧೀಜಿ ಅಪಾಯದಿಂದ ಪಾರಾಗಲಿಲ್ಲ. ಬಿಳಿಯರ ತುಂಟರ ತಂಡ ರುಸ್ತುಂಜಿ ಮನೆಗೆ ಅವರನ್ನು ಹಿಂಬಾಲಿಸಿತು. ಮನೆಯನ್ನು ಸುತ್ತುವರೆಯಿತು. 'ಎಲ್ಲಿ ಗಾಂಧಿ, ಅವರನ್ನು ನಮಗೆ ಒಪ್ಪಿಸಿ' ಎಂದು ಅರಚ ತೊಡಗಿತು.

ಅಲೆಗ್ಸಾಂಡರ್ ಅಲ್ಲಿಗೆ ಬಂದರು. ವೇಷ ಮರೆಸಿಕೊಂಡು ಪೊಲೀಸು ಠಾಣೆಗೆ ಹೊರಟು ಹೋಗುವಂತೆಯೂ, ಇಲ್ಲವಾದರೆ ಹದ್ದು ಮೀರಿರುವ ದೊಂಬಿ, ಮನೆಗೆ ಬೆಂಕಿ ಇಡಬಹುದು. ರುಸ್ತೋಂಜಿಯವರ ಮನೆ ಮಂದಿ ಮತ್ತು ಕುಟುಂಬ ಉಳಿಸಲು ತನ್ನ ಸಲಹೆಯಂತೆ ನಡೆದುಕೊಳ್ಳಲು ತಿಳಿಸಿದರು. ಬೇರೆ ಉಪಾಯ ಕಾಣದೆ ಗಾಂಧೀಜಿ ಒಬ್ಬ ಪೊಲೀಸ್ ಕಾನ್‌ಸ್ಟೇಬಲಿನಂತೆ ವೇಷ ಮರೆಸಿಕೊಂಡರು. ಇನ್ನಿಬ್ಬರು ಡಚ್ ಪೊಲೀಸ್ ಅಧಿಕಾರಿಗಳು ಭಾರತೀಯರಂತೆ ವೇಷ ಹಾಕಿಕೊಂಡರು. ಅಲೆಗ್ಸಾಂಡರ್, ಮನೆಯ ಹೆದ್ದಾರಿಗೆ ಅಡ್ಡಲಾಗಿ ನಿಂತು, 'ಏರಿಸಿ ಗಾಂಧಿಯ, ಹುಳಿ ಸೇಬಿನ ಮರಕೆ' ಎಂದು ಹಾಡುತ್ತ, ಕೋಪಾವಿಷ್ಟ ಜನರನ್ನು ಸಂತೈಸುತ್ತಾ ನಿಂತಿದ್ದರು. ಇಷ್ಟರಲ್ಲಿ ವೇಷ ಮರೆಸಿಕೊಂಡ ಗಾಂಧೀಜಿ, ಇನ್ನಿಬ್ಬರು ಪೊಲೀಸರೊಡನೆ ಹಿಂಬಾಗಿಲಿನಿಂದ ಹೊರಬಂದು, ಸಂದು ಗೊಂದುಗಳಲ್ಲಿ ಹಾದು ಪೊಲೀಸ್ ಠಾಣೆ ಮುಟ್ಟಿದರು. ಗುಂಪು ಗಾಂಧೀ, ಗಾಂಧೀ ಎಂದು ಕೂಗುತ್ತಲೇ ಇತ್ತು.

ಪೊಲೀಸ್‌ಠಾಣೆ ಗಾಂಧೀಜಿ ಸುರಕ್ಷಿತ ಸೇರಿದರು. ಈ ಸುದ್ದಿ ಅಲೆಗ್ಸಾಂಡರ್‌ಗೆ ತಿಳಿಯುವವರೆಗೂ ಅವರು ಪುಂಡರನ್ನು ಒಳಕ್ಕೆ ಬಿಡದೆ ಬಾಗಿಲಿಗೆ ಅಡ್ಡಲಾಗಿ ನಿಂತಿದ್ದರು. ಈ ಸುದ್ದಿ ತಿಳಿಯುತ್ತಲೆ, ನಿಮ್ಮ ಹಕ್ಕಿ ಹಾರಿ ಹೋಯಿತು. ಇನ್ನು ನೀವು ನಿಮ್ಮ ಮನೆಗಳಿಗೆ ತೆರಳಬಹುದೆಂದು ತಿಳಿಸಿದರು. ಕುಪಿತರಾದ ಜನಕ್ಕೆ ಸಮಾಧಾನಪಡಿಸಲು ಇಬ್ಬರು ಪ್ರತಿನಿಧಿಗಳು ಮನೆಯ ಒಳಕ್ಕೆ ಹೋಗಿ ಶೋಧಿಸಲು ಅವಕಾಶ ಮಾಡಿಕೊಟ್ಟರು. ಗಾಂಧಿಯವರು ತಪ್ಪಿಸಿಕೊಂಡುಹೋದ ಸುದ್ದಿ ಖಚಿತ ಮಾಡಿಕೊಂಡ ಗುಂಪು ಅಲ್ಲಿಂದ ಚದುರಿತು. ಶ್ರೀಮತಿ ಮತ್ತು ಶ್ರೀ ಅಲೆಗ್ಸಾಂಡರವರ ಸಮಯೋಚಿತ ನೆರವು ದೊರೆಯದಿದ್ದರೆ ಗಾಂಧೀಜಿ ಜೀವಂತ ಉಳಿಯುತ್ತಿದ್ದರೋ ಇಲ್ಲವೋ ಹೇಳಲಾಗದು. ಅಂತೂ ದ್ವಿತೀಯ ಗಂಡಾಂತರದಿಂದ ಗಾಂಧೀಜಿ ಹೇಗೋ ಪಾರಾದರು.

ಗಾಂಧಿಯವರ ಮೇಲೆ ನಡೆಸಿದ ಪ್ರಾಣಾಪಾಯದ ಘಟನೆಯ ವಿವರ ಬ್ರಿಟಿಷ್ ಸರ್ಕಾರಕ್ಕೆ ಮುಟ್ಟಿತು. ಕೂಡಲೇ ನೆಟಾಲ್ ಸರ್ಕಾರಕ್ಕೆ ತಂತಿ ಕಳುಹಿಸಿ, ಹಲ್ಲೆ ಮಾಡಿದ ಘಾತುಕರನ್ನು ಬಂಧಿಸಿ, ಅವರ ಮೇಲೆ ಮೊಕದ್ದಮೆ ಹೂಡುವಂತೆ ತಿಳಿಸಿತು. ಹ್ಯಾರಿ ಎಸ್‌ಕೋಂಬ್ ಅವರೇ ಗಾಂಧಿಯವರಲ್ಲಿಗೆ ಬಂದರು. ತಮ್ಮನ್ನು ಹೊಡೆದವರನ್ನು ಗುರ್ತಿಸುವುದಾದರೆ ಅವರನ್ನು ಬಂಧಿಸಿ ವಿಚಾರಣೆಗೆ ಗುರಿಪಡಿಸುವುದಾಗಿ ತಿಳಿಸಿದರು.

"ಈ ಗಲಭೆ ನಡೆಯಲು ನೀವೇ ಮುಖ್ಯ ಕಾರಣ ಎಂದು ಹೇಳಬಹುದು. ಮಂತ್ರಿ ಸಂಪುಟದ ಸದಸ್ಯರಾಗಿ ಬಿಳಿಯರನ್ನು ಉದ್ರೇಕಗೊಳಿಸಲು ನೀವು ನೆರವಾದಿರಿ. ನಿಮ್ಮ ಪಾತ್ರವೇನೂ ಕಡಿಮೆಯಲ್ಲ. ನನ್ನ ಮೇಲೆ ಹಲ್ಲೆ ನಡೆಸಿದ ಕೆಲವರನ್ನು

ನಾನು ಗುರ್ತಿಸಬಲ್ಲೆ. ಅವರನ್ನು ಶಿಕ್ಷಿಸಿ ಆಗುವ ಫಲವೇನು? ಅವರು ತಪ್ಪಿತಸ್ಥರಲ್ಲ. ನೀವು ಮತ್ತು ಇತರ ಆಂಗ್ಲ ಮುಖಂಡರೇ ನಿಜವಾದ ಅಪರಾಧಿಗಳು. ಇಲ್ಲಿನ ಪತ್ರಿಕೆಗಳು ನನ್ನ ಬಗ್ಗೆ ಉತ್ಪ್ರೇಕ್ಷಿತ ಸುಳ್ಳು ಸುದ್ದಿ ಪ್ರಕಟಿಸಿದುವು. ಭಾರತದಿಂದ ಕಳುಹಿಸಲ್ಪಟ್ಟ ಈ ಸುಳ್ಳು ಸುದ್ದಿಗಳನ್ನು ನೀವೂ ನಿಜವೆಂದು ನಂಬಿದಿರಿ. ನೀವು ಮತ್ತು ಬಿಳಿಯರ ವಿಶೇಷ ಸಮಿತಿ, ನಾನು ನೆಟಾಲಿಗೆ ಬರಲಿರುವುದನ್ನು ತಿಳಿದಾಗ, ನನ್ನನ್ನು ಬರಮಾಡಿಕೊಂಡು ಮೊದಲು ನನ್ನಿಂದ ನಿಜಾಂಶ ಗೊತ್ತು ಮಾಡಿಕೊಳ್ಳಬೇಕಾಗಿತ್ತು. ಭಾರತದಲ್ಲಿ ನಾನು ಮಾಡಿದ ಕೆಲಸದ ವಿವರ ನನ್ನ ವಿಚಾರಣೆಯಿಂದ ತಿಳಿದು ನಿಮ್ಮ ಸಂದೇಹ ನಿವೃತ್ತಿ ಮಾಡಿಸಿಕೊಳ್ಳಬೇಕಾಗಿತ್ತು. ತರುವಾಯ ನಿಮಗೆ ಸರಿದೋರಿದಂತೆ ಮಾಡಬಹುದಾಗಿತ್ತು." ಹೀಗೆ ದಿಟ್ಟತನದ ಉತ್ತರವಿತ್ತರು.

"ತಾವು ಹೇಳುವುದೆಲ್ಲ ಸರಿಯೇ? ಆದರೆ ಆಗಬಾರದ್ದು ಆಗಿಹೋಗಿದೆ. ಅಪರಾಧಿಗಳನ್ನು ಶಿಕ್ಷಿಸಬೇಕಾದ್ದು ಮಾತ್ರಉಳಿದಿದೆ" ಎಂದರು ಎಸ್‌ಕಾಂಬ್.

"ಇರಬಹುದು. ಆದರೆ ನನ್ನ ಮೇಲೆ ನಡೆದ ಘಾತಕ್ಕಾಗಿ ನಿಮ್ಮನ್ನಾಗಲಿ ನಿಮ್ಮ ಸಮಿತಿಯನ್ನಾಗಲಿ ವಿಚಾರಣೆಗೆ ಗುರಿಪಡಿಸಲು ನಾನು ಬಯಸುವುದಿಲ್ಲ. ನ್ಯಾಯಸ್ಥಾನದ ನೆರವು ಇದಕ್ಕಾಗಿ ನಾನು ಪಡೆಯಲಾರೆ. ಬಿಳಿಯರ ಮತ್ತು ಅಧಿಕಾರಗಳ ರಕ್ಷಣೆಗಾಗಿ ನಿಮಗೆ ಸರಿದೋರಿದ ಕ್ರಮ ನೀವು ಕೈಗೊಂಡಿರುವಿರಿ."

"ಅಪರಾಧಿಗಳನ್ನು ಶಿಕ್ಷಿಸಲು ಸರ್ಕಾರಕ್ಕೆ ನೀವು ನೆರವು ನೀಡುವುದಿಲ್ಲವೇ?" ಇದಕ್ಕೆ ಪ್ರತ್ಯುತ್ತರವಾಗಿ 'ಇಲ್ಲ' ಎಂದು ಆಗಲೇ ತಿಳಿಸಿರುವೆ ಎಂದರು ಗಾಂಧೀಜಿ.

ಆದರೆ ಎಸ್‌ಕೊಂಬ್ ಈ ಮಾತಿನಿಂದಲೇ ತೃಪ್ತರಾಗಲಿಲ್ಲ. ಅಪರಾಧಿಗಳ ವಿರುದ್ಧ ಮೊಕದ್ದಮೆ ಹೂಡಲು ಬಯಸುವುದಿಲ್ಲವೆಂದು ತಮ್ಮ ಸರ್ಕಾರಕ್ಕೆ ಬರೆದು ಕೊಡುವಂತೆ ಕೋರಿದರು. ಕೂಡಲೇ ಗಾಂಧೀಜಿ ಬಿಳಿಯ ಹಾಳೆ ತೆಗೆದು ಕೊಂಡು, ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗದು, ಇದು ನನ್ನ ಧರ್ಮ. ಈ ರೀತಿಯಾದ ಸ್ವಾರ್ಥ ತ್ಯಾಗದಿಂದ, ನನ್ನಿಂದ ನನ್ನ ದೇಶಕ್ಕೆ ಹೆಚ್ಚು ಸೇವೆ ಆದೀತೆಂದು ನನ್ನ ಭಾವನೆ. ಹೀಗೆ ಬರೆದುಕೊಟ್ಟರು.

ಆಶ್ಚರ್ಯ ಚಕಿತರಾದ ಎಸ್‌ಕೊಂಬ್ ಮತ್ತೆ ಹೇಳಿದರು, "ನಿಧಾನವಾಗಿ ಯೋಚಿಸಿ ನೋಡಿ. ಮಿಸ್ಟರ್ ಲಾಟನ್ ಮತ್ತು ಇತರ ಗೆಳೆಯರೊಡನೆ ಸಮಾಲೋಚಿಸಿ ತದನಂತರ ಅಂತ್ಯ ತೀರ್ಮಾನ ತೆಗೆದುಕೊಳ್ಳಬಹುದು, ಆತುರವಿಲ್ಲ. ಆದರೆ ಇಷ್ಟು ಹೇಳಬಯಸುತ್ತೇನೆ. ನಿಮಗೆ ಘಾಸಿ ಮಾಡಿದವರನ್ನು ಶಿಕ್ಷೆಗೆ ಗುರಿಪಡಿಸುವುದಿಲ್ಲ

ವೆಂಬ ನಿಮ್ಮ ನಿರ್ಧಾರದಿಂದ ಬೇಗನೆ ದರ್ಬಾರಿನಲ್ಲಿ ನೆಮ್ಮದಿ ನೆಲೆಸಲು ನನಗೆ ಬಹಳ ಸಹಾಯ ಮಾಡಿದಂತೆ ಆದೀತು. ಅಲ್ಲದೆ ನಿಮ್ಮ ಕೀರ್ತಿಯೂ ಹೆಚ್ಚೀತು," ಎಂದರು.

ತಾನು ಯಾರೊಡನೆಯೂ ಸಮಾಲೋಚನೆ ನಡೆಸಬೇಕಾದ್ದಿಲ್ಲ. ಮೊದಲೇ ಈ ನಿರ್ಧಾರಕ್ಕೆ ಬಂದಿರುವುದಾಗಿ ಗಾಂಧೀಜಿ ಮತ್ತೆ ಒತ್ತಿ ಹೇಳಿದರು.

ಈ ಧೀರೋದಾತ್ತ ಘನ ನಡತೆಯಿಂದ ಗಾಂಧಿಯವರ ಘನತೆ, ಗೌರವ ಬೆಳೆಯಿತು. ತಮ್ಮ ನಡತೆಗೆ ದರ್ಬಾರಿನ ಆಂಗ್ಲರು ತಲೆ ತಗ್ಗಿಸುವಂತಾಯಿತು. ಭಾರತೀಯರ ಗೌರವ ಹೆಚ್ಚಿತು. ಗಾಂಧೀಜಿ ನಿರಪರಾಧಿ ಎಂದುವು ಪತ್ರಿಕೆಗಳು. ಗಾಂಧಿಯವರ ಘನಗಂಭೀರ ನಡತೆಯನ್ನು ಎಲ್ಲರೂ ಮುಕ್ತಕಂಠದಿಂದ ಹೊಗಳಿದರು.

ಸ್ವಯಂ ಕೃತಾಪರಾಧ ಎಂದು ಹೇಳಬಹುದಾದ ಪ್ರಾಣಾಪಾಯದ ಮತ್ತೊಂದು ಘಟನೆ 1908ರಲ್ಲಿ ದಕ್ಷಿಣ ಆಫ್ರಿಕದಲ್ಲಿ ಘಟಿಸಿತು.

ಆಗಸ್ಟ್ 22, 1906 ರಂದು ಟ್ರಾನ್ಸ್‌ವಾಲ್ ಗೆಜೆಟ್ "ಏಸಿಯಾಟಿಕ್ ರಿಜಿಸ್ಟ್ರೇಷನ್ ಬಿಲ್," ಏಷ್ಯ ಜನಾಂಗದವರ ನೋಂದಾಣಿಕೆ ಮಸೂದೆ ಪ್ರಕಟಿಸಿತು. ಎಂಟು ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಏಷ್ಯ ಜನಾಂಗದವರೂ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹತ್ತು ಕೈಬೆರಳುಗಳ ಅಚ್ಚು ಕೊಡಬೇಕು. ಯಾವ ಅಧಿಕಾರಿಯಾದರೂ ಸರ್ಟಿಫಿಕೇಟ್ ಕೇಳಿದಾಗ ತೋರಿಸಬೇಕು. ಹೀಗೆ ಮಾಡದೆ ಹೋಗುವುದು ಶಿಕ್ಷಾರ್ಹ ಅಪರಾಧ. ಈ ಮಸೂದೆ ಶಾಸನವಾದಲ್ಲಿ ಭಾರತೀಯರ ಮೂಲಕ್ಕೇ ಕೊಡಲಿಪೆಟ್ಟು ಆದೀತು ಎಂದು ಗಾಂಧೀಜಿ ಗ್ರಹಿಸಿದರು. ಸಭೆಗಳನ್ನು ಏರ್ಪಡಿಸಿ, ಪತ್ರಿಕೆಗಳ ಮೂಲಕ ಪ್ರಚಾರ ಮಾಡಿ, ಇದು ಶಾಸನವಾಗದಂತೆ ಪ್ರತಿಭಟಿಸಲು ಸರ್ವರೂ ಸಿದ್ಧರಾಗಿರಬೇಕೆಂದು ಕರೆ ಇತ್ತರು. ಈ ಶಾಸನಕ್ಕೆ ಯಾವ ಭಾರತೀಯನೂ, ಏನೇ ಆಗಲಿ ತಲೆ ಬಾಗಬಾರದು. ಪ್ರತಿಭಟಿಸಲು ಇತರರು ಸಿದ್ಧರಿಲ್ಲದಿದ್ದಲ್ಲಿ, ಏಕಾಂಗಿಯಾಗಿ ಒಬ್ಬನೇ ಆದರೂ ಸರಿ ತಾನು ಪ್ರತಿಭಟಿಸುವುದಾಗಿ ಜೋಹಾನ್ನೆಸ್‌ಬರ್ಗ್‌ನ ಎಂಪೈರ್ ಸಭಾಂಗಣದಲ್ಲಿ ಗಾಂಧೀಜಿ ಘೋಷಿಸಿದರು. ಕಿಕ್ಕಿರಿದು ನೆರೆದಿದ್ದ ಸಭಿಕರು ದೇವರ ಮೇಲೆ ಆಣೆ ಇಟ್ಟು ತಾವೆಲ್ಲರೂ ಸರ್ವಶಕ್ತಿಯಿಂದ ಪ್ರತಿಭಟಿಸುವುದಾಗಿ ವಚನವಿತ್ತರು.

ಭಾರತೀಯರು ಮಾಡಿದ ಮಸೂದೆಯ ವಿರೋಧವನ್ನು ಲಕ್ಷಿಸದೆ ಅದು ಶಾಸನವಾಯಿತು. ತದನಂತರವೂ ಗಾಂಧೀಜಿ ಮತ್ತು ಇತರ ಪ್ರಮುಖರು ಶಾಸನವನ್ನು

ತೀವ್ರ ರೀತಿಯಲ್ಲಿ ಪ್ರತಿಭಟಿಸಿದರು. ಸದಾಗ್ರಹ ಅಥವಾ ಸತ್ಯಾಗ್ರಹ ಆಚರಿಸಲು ಭಾರತೀಯರು ತೀರ್ಮಾನಿಸಿದರು. ಡಿಸೆಂಬರ್ 28, 1907 ರಂದು ಗಾಂಧೀಜಿ ಮತ್ತು 26 ಭಾರತೀಯ ಪ್ರಮುಖರು ಸತ್ಯಾಗ್ರಹ ಆಚರಿಸಿದರು. ಟ್ರಾನ್ಸ್‌ವಾಲ್ ಬಿಟ್ಟು ಹೋಗುವಂತೆ ಅವರಿಗೆ ಶಿಕ್ಷೆ ವಿಧಿಸಲಾಯಿತು. ಇದರಂತೆ ಅವರು ಆಚರಿಸ ಲಿಲ್ಲ. ಮತ್ತೆ ವಿಚಾರಣೆ ನಡೆದು ಗಾಂಧಿ ಮತ್ತು ಅನುಚರರಿಗೆ ಎರಡು ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು. ಗಾಂಧೀಜಿ ಜೈಲಿನಲ್ಲಿದ್ದಾಗಲೇ ಜನರಲ್ ಸ್ಮಟ್ಸ್ ಅವರಿಂದ ಕರೆ ಬಂದಿತು. ಭಾರತೀಯರು ತಾವಾಗಿಯೇ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಂಡರೆ, ಶಾಸನವನ್ನು ಶಾಸನ ಕಡತದಿಂದ ತೆಗೆದುಹಾಕುವ ಭರವಸೆ ಸ್ಮಟ್ಸ್ ನೀಡಿದರು. ಗಾಂಧಿಯವರನ್ನು ಜೈಲಿನಿಂದ ಬಿಡಲಾಯಿತು. ಇತರ ಸತ್ಯಾಗ್ರಹಿಗಳ ಬಿಡುಗಡೆಯೂ ಮಾರನೆಯ ಬೆಳಿಗ್ಗೆ ಆಯಿತು.

ಬಿಡುಗಡೆ ಆದ ಕೂಡಲೇ ಸ್ಮಟ್ಸ್ ಅವರ ಕಾರ್ಯದರ್ಶಿಯಿಂದ ರೈಲು ಪ್ರಯಾಣಕ್ಕೆ ಸಾಲ ಪಡೆದು ಜೋಹಾನ್ಸಿಸ್‌ಬರ್ಗಿಗೆ ತೆರಳಿದರು.

ಕೂಡಲೆ ಭಾರತೀಯರ ಸಭೆ ಸೇರಿಸಿ ನಡೆದ ಎಲ್ಲ ವಿಷಯ ವಿವರವಾಗಿ ತಿಳಿಸಿದರು. ಎಲ್ಲ ಭಾರತೀಯರೂ ಸ್ವಪ್ರೇರಣೆಯಿಂದ ರಿಜಿಸ್ಟರ್ ಮಾಡಿಸಿಕೊಳ್ಳುವು ದಾಗಿಯೂ, ಕೈ ಬೆರಳಚ್ಚು ಕೊಡುವುದಾಗಿಯೂ, ಎಲ್ಲ ಭಾರತೀಯರ ಪರ ತಾನು ವಚನ ಕೊಟ್ಟಿರುವುದಾಗಿಯೂ ಅದರಂತೆ ಎಲ್ಲರೂ ನಡೆದುಕೊಳ್ಳಬೇಕೆಂದೂ ತಿಳಿಸಿದರು. ಮೊದಲೇ ಶಾಸನವಾಗಿದ್ದ ರಿಜಿಸ್ಟ್ರೇಷನ್ ಆಕ್ಟನ್ನು ರದ್ದುಮಾಡಿಸಿ ಕೊಂಡು, ತದನಂತರ ಸ್ವಯಂಪ್ರೇರಣೆಯಿಂದ ರಿಜಿಸ್ಟರ್ ಮಾಡಿಸಿಕೊಳ್ಳುವುದು ಸೂಕ್ತವಾಗಿರುತ್ತಿರಲಿಲ್ಲವೇ? ನೀವು ದುಡುಕಿ ಜನರಲ್ ಸ್ಮಟ್ಸ್ ಅವರ ಬಲೆಗೆ ಬಿದ್ದಿರುವಿರಿ. ಟ್ರಾನ್ಸ್‌ವಾಲ್ ಸರ್ಕಾರ ವಚನ ಭ್ರಷ್ಟವಾದರೆ ಮಾಡಲೇನು? ಇತ್ಯಾದಿ ರೀತಿಯಲ್ಲಿ ಗಾಂಧಿಯವರನ್ನು ಪ್ರಶ್ನಿಸಲಾಯಿತು. ವಿರೋಧಿಯ ಮಾತಿನಲ್ಲಿ ವಿಶ್ವಾಸವಿಡಬೇಕಾದ್ದು ಸತ್ಯಾಗ್ರಹಿಯ ಧರ್ಮ. ಟ್ರಾನ್ಸ್‌ವಾಲ್ ಸರ್ಕಾರ ಮಾತಿನಂತೆ ನಡೆದುಕೊಳ್ಳದಿದ್ದರೆ ಮತ್ತೆ ಸತ್ಯಾಗ್ರಹ ಪ್ರಾರಂಭಿಸಬಹುದು. ಈ ರೀತಿಯಲ್ಲಿ ಗಾಂಧೀಜಿ ಸಮಜಾಯಿಷಿ ಕೊಟ್ಟರು.

ಆದರೆ ಗಡಿ ಪ್ರಾಂತದ ಪಠಾನ ಮೀರ್ ಆಲಾಂಗೆ ಮತ್ತು ಇತರ ಪಠಾನರಿಗೆ ಇದರಿಂದ ಸಮಾಧಾನವಾಗಲಿಲ್ಲ. ನೀವು 15,000 ಪೌಂಡು ಲಂಚ ಪಡೆದು ಈ ರೀತಿ ಮೋಸ ಮಾಡುತ್ತಿರುವಿರಿ. ಖಂಡಿತ ನಾವು ಕೈ ಬೆರಳಚ್ಚು ಕೊಡುವುದಿಲ್ಲ. ಹೆಸರು ನೊಂದಾಯಿಸಿಕೊಳ್ಳಲು ಪ್ರಮುಖ ಪಾತ್ರವಹಿಸುವ ಮುಂದಾಳನ್ನು ನಾನು

ಕೊಲೆಮಾಡದೆ ಬಿಡುವುದಿಲ್ಲವೆಂದು ಅಲ್ಲಾ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ, ಈ ರೀತಿಯಲ್ಲಿ ಮೀರ್ ಅಲಾಂ ಘರ್ಜಿಸಿದ.

ತಾನು ಲಂಚ ಖಂಡಿತ ತೆಗೆದುಕೊಂಡಿಲ್ಲ. ಸಮಾಜಕ್ಕೆ ದ್ರೋಹ ಬಗೆದಿಲ್ಲ. ಪ್ರಾಣಹರಣ ಮಾಡುವ ಬೆದರಿಕೆ ಹಾಕಿರುವುದು ಭಯಾನಕ. ಇದು ಯುಕ್ತವಲ್ಲ. ಅಲ್ಲಾ ಹೆಸರಿನಲ್ಲಿ ಮತ್ತೊಬ್ಬನನ್ನು ಕೊಲ್ಲುವುದಾಗಿ ಆಣೆಯಿಟ್ಟು ಹೇಳುವುದು ಉಚಿತವಲ್ಲ, ಧರ್ಮವಲ್ಲ. ಕೋಪದಿಂದ ಗೆಳೆಯ ಈ ಮಾತುಗಳನ್ನಾಡಿರಬೇಕು. ತಾತ್ಕಾಲಿಕ ಕೋಪದಿಂದ ಈ ಮಾತುಗಳನ್ನಾಡಿರಬೇಕು. ಬೆರಳಚ್ಚಿನ ಮುದ್ರೆ ಕೊಡಬೇಕಾದ್ದು ನನ್ನ ಸ್ಪಷ್ಟ ಕರ್ತವ್ಯ. ಮರಣ ಜೀವನದ ಅಂತ್ಯ. ಕಾಯಿಲೆ ಮತ್ತು ಇತರ ಕಾರಣಗಳಿಂದ ಸಾಯುವುದಕ್ಕಿಂತ, ಒಬ್ಬ ಸಹೋದರನ ಕೈಯಿಂದ ಮರಣ ಅಪ್ಪುವುದರಲ್ಲಿ ನನಗೆ ದುಃಖವಿರಲಾರದು. ಇಂಥ ಸಂದರ್ಭದಲ್ಲೂ, ಕೊಲೆಪಾತಕನ ಬಗ್ಗೆ ನನ್ನಲ್ಲಿ ಕೋಪ, ತಾಪ, ದ್ವೇಷ, ಇಲ್ಲದಿದ್ದಲ್ಲಿ ನನ್ನ ಆತ್ಮಕ್ಕೆ ಚಿರಶಾಂತಿ ಲಭಿಸುವುದರಲ್ಲಿ ಸಂದೇಹವಿಲ್ಲ. ಅಂತ್ಯದಲ್ಲಿ ಕೊಲೆಪಾತಕನೂ, ನಾನು ನಿರಪರಾಧಿ ಎಂಬುದನ್ನು ಗ್ರಹಿಸದೆ ಇರಲಾರ. ಈ ರೀತಿಯಲ್ಲಿ ಗಾಂಧೀಜಿ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು. ಆದರೆ ಪಠಾಣರಿಗೆ ಸಮಾಧಾನವಾದಂತೆ ತೋರಲಿಲ್ಲ.

ರಿಜಿಸ್ಟ್ರೇಷ ಮಾಡಿಸಿಕೊಳ್ಳಲು ಫೆಬ್ರವರಿ 10, 1908 ರಂದು, ಗಾಂಧೀಜಿ ತಮ್ಮ ಕಚೇರಿಗೆ ಹೋದರು. ಇದೇ ಸತ್ಯಾಗ್ರಹದ ಕಚೇರಿಯೂ ಆಗಿತ್ತು. ತಮ್ಮ ಹಳೆಯ ಕಕ್ಷಿಗಾರ ಮೀರ್ ಆಲಾಂ ಅವನ ಗೆಳೆಯರೊಡನೆ ಕಚೇರಿಯಲ್ಲಿದ್ದ. ಗಾಂಧೀಜಿ ಅವನಿಗೆ 'ಸಲಾಂ' ಹೇಳಿದರು. ಆದರೆ ಪ್ರತಿವಂದನೆ ಬರಲಿಲ್ಲ. ಅವನ ಕೋಪ ಇನ್ನೂ ಇಳಿದಿದ್ದಂತೆ ತೋರಲಿಲ್ಲ. ನಾರನ್ನು ಹುರಿ ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದ ಮೀರ್ ಅಲಾಂ. ಅವನ ಮುಖಚರ್ಯೆ ನೋಡಿ ಇಂದು ಏನೋ ದುರಂತ ನಡೆಯಲಿದೆ ಎನಿಸಿತು ಗಾಂಧಿಯವರಿಗೆ. ತಮ್ಮ ಕಚೇರಿಯಿಂದ ಕೆಲವು ಗೆಳೆಯರೊಡನೆ ರಿಜಿಸ್ಟ್ರೇಷ ಕಚೇರಿಗೆ ಗಾಂಧೀಜಿ ಹೊರಟರು. ಮೀರ್ ಆಲಾಂ ಮತ್ತು ಕೆಲವು ಪಠಾನರೂ ಹಿಂಬಾಲಿಸಿ ನಡೆದರು.

ವಾನ್‌ಬ್ರಾಂಡಿಸ್ ಬೀದಿಯಲ್ಲಿ ನಡೆಯುತ್ತಿದ್ದಾಗ ಎತ್ತ ಹೋಗುತ್ತಿರುವಿರಿ ಎಂದು ಆಲಾಂ ಕೇಳಿದ. ಗಾಂಧೀಜಿ ಉತ್ತರ ಕೊಡುವಷ್ಟರಲ್ಲೇ ಲಠಲಠ ಲಾಠಿ ಪೆಟ್ಟುಗಳು ಬೆನ್ನು, ತಲೆ, ಮುಖದ ಮೇಲೆ ಬಿದ್ದುವು. ಕೆಲವು ಉದ್ದೇಶಗಳಿಂದಲೇ ಹೊಡೆದ ಹೊಡತಗಳು. 'ಹೇ ರಾಂ' ಎಂದು ಉಚ್ಚರಿಸುತ್ತ ಗಾಂಧೀಜಿ ನೆಲಕ್ಕೆ ಉರುಳಿದರು. ಪ್ರಜ್ಞೆ ತಪ್ಪಿತು. ಪಕ್ಕದಲ್ಲಿದ್ದ ಯುಸೂಫ್ ಮಿಯಾನ್ ಮತ್ತು ಂಬಿನಾಯ್ದು ಪಠಾಣರನ್ನು ತಡೆಯದಿದ್ದರೆ ಅವರು ಜೀವಸಹಿತ ಉಳಿಯುತ್ತಿರಲಿಲ್ಲ.

ಹಾದಿಯಲ್ಲಿ ಹಾದುಹೋಗುತ್ತಿದ್ದ ಐರೋಪ್ಯರು ಮೀರ್ ಅಲಾಂ ಮತ್ತು ಸಂಗಡಿಗರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದರು. ಸ್ನೇಹಿತರು ಗಾಂಧಿಯವರನ್ನು ಎತ್ತಿಕೊಂಡು ಪಕ್ಕದ ಅಂಗಡಿಗೆ ಹೋದರು. ಇಷ್ಟರಲ್ಲಿ ಪಾದ್ರಿ ಜೋಸೆಫ್ ಜೆ. ಡೋಕ್ ಬಂದರು. ಪ್ರಥಮ ಚಿಕಿತ್ಸೆ ನಡೆಸಿದರು. ಪ್ರಜ್ಞೆ ಮರಳಿತು. "ಮೀರ್ ಅಲಾಂ ಎಲ್ಲಿ". ಇದು ಗಾಂಧೀಜಿ ಮೊದಲು ಕೇಳಿದ ಪ್ರಶ್ನೆ. "ಅವರನ್ನು ಕೂಡಲೆ ಬಿಡುಗಡೆ ಮಾಡಬೇಕು" ಎಂದರು. 'ಅದೆಲ್ಲ ಅಂತಿರಲಿ. ಈಗ ನೀವು ಯಾರೋ ಅಪರಿಚಿತರ ಮನೆಯಲ್ಲಿರುವಿರಿ. ತುಟಿ ಮತ್ತು ಮುಖಕ್ಕೆ ಪಟ್ಟಿಕಟ್ಟಲಾಗಿದೆ. ಪೊಲೀಸರೂ ಬಂದಿದ್ದಾರೆ. ಅವರು ನಿಮ್ಮನ್ನು ಆಸ್ಪತ್ರೆಗೆ ಸಾಗಿಸಲು ಸಿದ್ಧರಾಗಿದ್ದಾರೆ. ಆದರೆ ನೀವು ನಮ್ಮ ಮನೆಯಲ್ಲಿರುವುದಾದರೆ ನನ್ನ ಪತ್ನಿ ಮತ್ತು ನಾನು ನಮ್ಮ ಕೈಲಾದ ಸುಶ್ರೂಷೆ ಮಾಡುವೆವು ಎಂದರು. ಗಾಂಧೀಜಿ ಡೋಕ್ ಅವರ ಮನೆಗೆ ಹೋಗಲು ಬಯಸಿದರು. ಅಲ್ಲಿಗೆ ಅವರನ್ನು ಸಾಗಿಸಲಾಯಿತು. ವೈದ್ಯರು ಬಂದರು. ಗಲ್ಲಕ್ಕೆ ತುಂಬ ಪೆಟ್ಟಾಗಿದೆ ಹೊಲಿಗೆ ಹಾಕಬೇಕು ಎಂದರು.

ಹೊಲಿಗೆ ಹಾಕಿಸಿಕೊಳ್ಳುವ ಮುನ್ನ ತನ್ನ ಕರ್ತವ್ಯ ನಿರ್ವಹಿಸಬೇಕು. ಮೊದಲ ರಿಜಿಸ್ಟ್ರೇಷನ್ ತನ್ನದಾಗಬೇಕು ಎಂದರು. ರಿಜಿಸ್ಟ್ರಾರ್ ಚಾಮ್ನೆ ಅವರಿಗೆ ಹೇಳಿ ಕಳುಹಿಸಲಾಯಿತು. ನೊಂದಾಣಿಕೆಯ ಕಾಗದ ಪತ್ರ ಬೆರಳಚ್ಚು ಹಾಕಲು ರಬ್ಬರ್ ಸ್ಟಾಂಪ್ ಪೆಟ್ಟಿಗೆ ತೆಗೆದುಕೊಂಡು ಬಂದರು. ಚಾಮ್ನೆ ಅವರ ಬಗ್ಗೆ ಉಗ್ರ ಲೇಖನಗಳು "ಇಂಡಿಯನ್ ಒಪಿನಿಯನ್" ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದುವು. ಗಾಂಧಿಯವರನ್ನು ನೋಡುತ್ತಲೇ ಹತೋಟಿ ಮೀರಿ ಅವರ ಕಣ್ಣುಗಳು ಹನಿಯತೊಡಗಿದುವು. ವೈದ್ಯರು ಗಾಯ ತೊಳೆಯುತ್ತಿದ್ದರು. ಪೊಲೀಸರು ಸಮೀಪದಲ್ಲೇ ನಿಂತಿದ್ದರು. ಈ ಪರಿಸ್ಥಿತಿಯಲ್ಲಿ ಎಲ್ಲ ಸಾಮಾನ್ಯರಂತೆ ಎಲ್ಲ ಪತ್ರಗಳಿಗೂ ಸಹಿ ಹಾಕಿದರು. ಹತ್ತು ಬೆರಳಚ್ಚು ಒತ್ತಿದರು. ಇನ್ನು ಹೊಲಿಗೆ ಹಾಕಬಹುದು. ನೋವು ನಿವಾರಕ ಮದ್ದು ಬೇಡವೆಂದರು. ಅದರ ನೆರವಿಲ್ಲದೆಯೇ ಹೊಲಿಗೆ ಹಾಕಿಸಿಕೊಂಡರು. ಹತ್ತು ದಿನಗಳು ಡೋಕ್ ಅವರ ಮನೆಯಲ್ಲುಳಿದು, ತದನಂತರ ಜೋಹಾನ್ಸ್‌ಬರ್ಗ್ ಸಮೀಪದ ಗೆಳೆಯ ಪೋಲಕ್ ಅವರ ಮನೆಗೆ ಗಾಂಧಿಯವರನ್ನು ಸಾಗಿಸಲಾಯಿತು.

ಡೋಕ್ ಅವರ ಮನೆಯಲ್ಲಿ ನೋವು ಮತ್ತು ಜ್ವರದಿಂದ ನರಳುತ್ತಿದ್ದಾಗಲೂ ಅವರೊಂದು ಹೇಳಿಕೆ ಕೊಟ್ಟರು. "ನನ್ನ ಮೇಲೆ ಹಲ್ಲೆ ನಡೆಸಿದವರಿಗೆ ತಮ್ಮ ಕೃತಿಯ ಅರಿವು ಇರಲಿಲ್ಲ. ನಾನು ಮಾಡುತ್ತಿರುವುದು ತಪ್ಪು ಎಂದು ಅವರ ಅನಿಸಿಕೆ

ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಲು, ಅವರು ಬಲ್ಲ ಒಂದೇ ಮಾರ್ಗ ಅವರು ಅನುಸರಿಸುತ್ತಿದ್ದಾರೆ. ಆದ್ದರಿಂದ ಅವರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಬಾರದೆಂದು ನಾನು ಪ್ರಾರ್ಥಿಸುತ್ತೇನೆ. ಈ ದುಷ್ಕೃತ್ಯ ನಡೆದಿರುವುದು ಮುಸಲ್ಮಾನರಿಂದ. ಹಿಂದೂಗಳು ಇದರಿಂದ ನೊಂದುಕೊಳ್ಳಬಹುದು. ಹೀಗಾದರೆ ಭಗವಂತನ ಮತ್ತು ಪ್ರಪಂಚದ ದೃಷ್ಟಿಯಲ್ಲಿ ಅವರು ದೋಷಪೂರಿತರಾದಾರು. ಪ್ರತಿಯಾಗಿ, ಇಂದು ಚಲ್ಲಲ್ಪಟ್ಟ ನನ್ನ ರಕ್ತ, ಈ ಎರಡು ಕೋಮುಗಳನ್ನು ಒಂದುಗೂಡಿಸಲು ನೆರವಾಗಲಿ. ಇದು ನನ್ನ ಹೃದ್ಗತ ಪ್ರಾರ್ಥನೆ. ಭಗವಂತ ನನ್ನ ಪ್ರಾರ್ಥನೆ ಕರುಣಿಸಲಿ. ಯಾವ ಪುಕ್ಕಲು ಭಯದಿಂದಲೂ ಪ್ರಭಾವಿತರಾಗದೆ, ಬಹುಸಂಖ್ಯಾತ ಶಾಂತ ಸ್ವಭಾವದ ಭಾರತೀಯರು, ಭಗವಂತನಲ್ಲಿ ವಿಶ್ವಾಸವಿಟ್ಟು, ಯಾವ ಭಯಕ್ಕೂ ಅಂಜದೆ, ಸವಿನಯ ಪ್ರತಿಭಟನೆಯ ಸಿದ್ಧಾಂತ ಗ್ರಹಿಸಿ, ತಮ್ಮ ಕರ್ತವ್ಯ ನಿರ್ವಹಿಸಲು ಹಿಂತೆಗೆಯಬಾರದು. ಸ್ವಯಂಪ್ರೇರಣೆಯಿಂದ ರಿಜಿಸ್ಟ್ರೇಷ್ ಮಾಡಿಕೊಂಡರೆ, ಶಾಸನವನ್ನು ರದ್ದುಪಡಿಸುವ ವಚನ ಲಭಿಸಿರುವ ಈ ಸನ್ನಿವೇಶದಲ್ಲಿ, ಸರ್ಕಾರಕ್ಕೆ ಮತ್ತು ಈ ವಸಾಹತಿಗೆ, ಪ್ರತಿಯೊಬ್ಬ ನಿಜ ಭಾರತೀಯನೂ ತನ್ನ ಅತ್ಯಂತ ಹೆಚ್ಚಿನ ಸಹಕಾರ ನೀಡುವುದು, ಅವನ ಪವಿತ್ರ ಕರ್ತವ್ಯ."

ಪೋಲಕ್ ಅವರ ಮನೆಯಿಂದ ಫೋನಿಕ್ಸ್ ಆಶ್ರಮಕ್ಕೆ ಹೋಗುವಷ್ಟು ಶಕ್ತಿ ಬರುತ್ತಲೇ ಅವರು ಅಲ್ಲಿಗೆ ತೆರಳಿದರು. ಪ್ರಯಾಣದ ವೆಚ್ಚ ದೊರೆತಿದ್ದರೆ ಕಸ್ತೂರಿಬಾ ಮತ್ತು ಮಕ್ಕಳು ಪೋಲಕ್ಕರ ಮನೆಗೆ ಹೋಗುತ್ತಿದ್ದರು.

ತನ್ನನ್ನು ಹೊಡೆದು ಕೊಲ್ಲಲಿದ್ದ ಮೀರ್ ಅಲಾಂ ವಿಚಾರಣೆ ನಡೆಯಿತು. ಅವನ ವಿರುದ್ಧ ಸಾಕ್ಷಿ ನೀಡಲು ಗಾಂಧೀಜಿ ನಿರಾಕರಿಸಿದರು. ಅವನು ರಿಜಿಸ್ಟ್ರೇಷ್ ಮಾಡಿಕೊಳ್ಳಲು ಒಪ್ಪಲಿಲ್ಲ. ಅವನನ್ನು ಆಫ್ರಿಕದಿಂದ ಗಡಿಪಾರು ಮಾಡಲಾಯಿತು. ಗಾಂಧಿಯವರು ನಡೆಸುತ್ತಿದ್ದ ಸತ್ಯಾಗ್ರಹಕ್ಕೆ ತನ್ನ ಸಹಾನುಭೂತಿ ವ್ಯಕ್ತಪಡಿಸಿ, ತನ್ನ ಕೈಲಾದ ನೆರವು ನೀಡುವುದಾಗಿ, ಒಂದು ವರ್ಷದ ನಂತರ ಗಾಂಧಿಯವರಿಗೆ ಭಾರತದಿಂದ ಪತ್ರ ಬರೆಸಿದ.

ಮೀರ್ ಆಲಾಂ ಧಾಳಿಯಿಂದ ಪ್ರಾಣ ಉಳಿಸಿಕೊಂಡ ಗಾಂಧಿಯವರಿಗೆ ಇನ್ನೊಂದು ಗಂಡಾಂತರ ಕಾದಿತ್ತು. ಗುಣಹೊಂದಿದ ಕೆಲವು ದಿನಗಳ ನಂತರ ದರ್ಬಾನಿನಲ್ಲಿ ಒಂದು ಸಭೆ ಮುಗಿಸಿಕೊಂಡು ಗಾಂಧೀಜಿ ಹೊರಬರುತ್ತಿದ್ದರು. ಒಬ್ಬ ಪಠಾಣ ದೊಣ್ಣೆ ತೆಗೆದುಕೊಂಡು ಹೊಡೆಯಲು ಕೈ ಎತ್ತಿದ. ಇದೇ ವೇಳೆಗೆ ದೀಪಗಳು ನಂದಿಹೋದುವು. ಪಠಾಣ ಓಡಿಹೋದ. ಪೊಲೀಸ್ ಅಧಿಕಾರಿ ಅಲೆಕ್ಸಾಂಡರ್‌ಗೆ ಸುದ್ದಿ ಮುಟ್ಟಿತು. ಹನ್ನೊಂದು ವರ್ಷಗಳ ಹಿಂದೆ ಬಿಳಿಯ

ಗೂಂಡಾಗಳಿಂದ ಇವರ ಪ್ರಾಣ ಉಳಿಸಿದ್ದ ಅಲೆಕ್ಸಾಂಡರ್, ಗಾಂಧಿಯವರ ಸ್ವದೇಶ ಬಾಂಧವರಿಂದ ಅವರ ಜೀವ ಉಳಿಸಲು ಮತ್ತೊಮ್ಮೆ ಪೊಲೀಸರನ್ನು ಕಳುಹಿಸಿ ಪೊಲೀಸರ ರಕ್ಷಣೆಯಲ್ಲಿ ಗಾಂಧೀಜಿ ತಮ್ಮ ಮನೆ ಸೇರಿದರು.

ಗಾಂಧಿಯವರನ್ನು ಕೊಲೆಮಾಡುವ ಮತ್ತೊಂದು ಪ್ರಯತ್ನ ನಡೆಯಿತು. ಗಾಂಧೀಜಿ ಶ್ರೀಮತಿ ಪೋಲಕ್ ಅವರೊಂದಿಗೆ ಜೊಹಾನ್ನೆಸ್‌ಬರ್ಗಿನ ಪೌರಸಭಾ ಮಂದಿರದಲ್ಲಿ ಭಾಷಣ ಮಾಡಲು ಹೋಗಿದ್ದರು. ಸಭೆ ಮುಗಿಸಿಕೊಂಡು ಹೊರ ಬರುವಷ್ಟರಲ್ಲಿ ಸಭಿಕರೆಲ್ಲರೂ ಬೇಗನೆ ಮನೆ ಸೇರಲು ಹೊರಟುಹೋಗಿದ್ದರು. ಉಳಿದಿದ್ದವರು ಇವರಿಬ್ಬರೇ. ಇಬ್ಬರೂ ಸಭಾಮಂದಿರದಿಂದ ಹೊರಬಂದರು. ಗಾಂಧಿಯವರನ್ನು ಹೊಡೆಯಲು ಕಬ್ಬಿಣದ ಸರಳು ಹಿಡಿದುಕೊಂಡು ಕತ್ತಲಿನಲ್ಲಿ ಒಬ್ಬ ಅವಿತು ಕುಳಿತಿದ್ದ. ಗಾಂಧೀಜಿ ಅವನನ್ನು ನೋಡಿದರು. ನಿರ್ಭಯವಾಗಿ ಅವನಿದ್ದ ಲ್ಲಿಗೆ ನೇರವಾಗಿ ನಡೆದರು. ಇವರ ಧೈರ್ಯ ಅವನನ್ನು ಸ್ತಂಭಿತಗೊಳಿಸಿತು. ಕಂಪಿಸುತ್ತ ಎದ್ದು ನಿಂತ. ಅವನ ತೋಳ ತೆಕ್ಕೆಯಲ್ಲಿ ತಮ್ಮ ಕೈ ಹಾಕಿಕೊಂಡು, ಮಾತ ನಾಡುತ್ತ ಶ್ರೀಮತಿ ಪೋಲಕ್ ಇದ್ದಲ್ಲಿ ಮೆಲ್ಲನೆ ನಡೆದು ಬಂದರು. ಇವೆಲ್ಲವನ್ನು ನೋಡುತ್ತಿದ್ದ ಅವರು ಆಶ್ಚರ್ಯಚಕಿತರಾದರು. ತನ್ನ ಕೈಯಲ್ಲಿದ್ದ ಕಬ್ಬಿಣದ ಸರಳನ್ನು ಗಾಂಧಿಯವರಿಗೆ ಒಪ್ಪಿಸಿ, ಶರಣು ಹೊಡೆದು, ನಮಸ್ಕರಿಸಿ ಅವನು ಹೊರಟು ಹೋದ. ಈ ರೀತಿಯಲ್ಲಿ ಗಾಂಧಿಯವರನ್ನು ಕೊಲೆ ಮಾಡಲು ದಕ್ಷಿಣ ಆಫ್ರಿಕ ದಲ್ಲಿದ್ದಾಗಲೇ ಐದು ವಿಫಲ ಪ್ರಯತ್ನಗಳು ನಡೆದುವು.

ತಾನು ಕೊಟ್ಟ ಮಾತು ಉಳಿಸಿಕೊಳ್ಳಲು ಪ್ರಾಣಹರಣದ ಸಂಕಟಗಳನ್ನು ಗಾಂಧೀಜಿ ಅನುಭವಿಸಿದರೂ, ಜನರಲ್ ಸ್ಮಟ್ಸ್ ರಿಜಿಸ್ಟ್ರೇಷನ್ ಶಾಸನ ವಜಾ ಮಾಡುವ ವಚನ ತಾನು ಕೊಡಲಿಲ್ಲವೆಂದು ಹೇಳಿ ಕರಾಳ ಶಾಸನ ರದ್ದು ಮಾಡಲಿಲ್ಲ.

ಗಾಂಧಿಯವರನ್ನು ಅಪಘಾತಕ್ಕೆ ಒಳಪಡಿಸುವ ಆರನೆಯ ಪ್ರಯತ್ನ 1934ರಲ್ಲಿ ಮದರಾಸು ಪ್ರಾಂತದಲ್ಲಿ ನಡೆಯಿತು. ಅವರು ಹರಿಜನ ಪ್ರವಾಸದಲ್ಲಿದ್ದರು. ದಕ್ಷಿಣ ಭಾಗದ ಒಂದು ಊರಿನಲ್ಲಿ ಭಾಷಣ ಮಾಡಲು ಬಂದರು. ಕೆಲವು ಸನಾತನಿ ಗಳು ಕಪ್ಪು ಪತಾಕೆ ಪ್ರದರ್ಶಿಸುತ್ತ, ಗಾಂಧಿ ಹಿಂತಿರುಗು ಎಂದು ಕೂಗುತ್ತಿದ್ದರು. ಭಾಷಣ ಮಾಡುತ್ತಿದ್ದಾಗ ಕೇಕೆ ಹಾಕುತ್ತ ಗಲಭೆ ಮಾಡುತ್ತಿದ್ದರು. ಆದರೂ ಇವೆಲ್ಲವನ್ನೂ ಲಕ್ಷಿಸದೆ ಗಾಂಧೀಜಿ ಭಾಷಣ ಮಾಡಿ ಮುಗಿಸಿದರು. ಸಭೆಯಿಂದ ಹೊರಬರುವಾಗ ತುಂಟರು ದಾರಿಗೆ ಅಡ್ಡಲಾಗಿ ಮಲಗಿದರು. ಮೋಟಾರಿನಲ್ಲಿ ಯಾರೂ ಇಲ್ಲದಿದ್ದಾಗ ಅದರ ದೊಡ್ಡ ಗಾಜು ಸಡಿಲಿಸಿ ಹೋಗಿದ್ದರು. ಗಾಂಧಿಯ ಸಂಗಡಿಗರು ಇದನ್ನು ಗಮನಿಸಿ ದೋಷ ಸರಿಪಡಿಸಿದರು. ಸರಿಪಡಿಸದಿದ್ದಲ್ಲಿ ಗಾಜು ಕಳಚಿಬಿದ್ದು,

ಮೋಟಾರು ಚಾಲಕನ ಹತೋಟಿ ಮೀರಿ ಭಾರಿ ಅಪಘಾತ ಸಂಭವಿಸಬಹುದಾಗಿತ್ತು. ಈ ಘಟನೆಯಿಂದ ಗಾಂಧೀಜಿ ಚಿಂತಾಕ್ರಾಂತರಾದರು. ಮೋಟಾರಿಗೆ ಹಿಂಸೆ ಏಕೆ ಆಗಬೇಕು? ತನ್ಮೂಲಕ ತನಗೆ ಹಿಂಸೆ ಕೊಡುವುದು ಇದರ ಉದ್ದೇಶವಲ್ಲವೇ? ತನ್ನಲ್ಲಿ ಸಾಕಷ್ಟು ಅಹಿಂಸೆಯ ಬಲವಿದ್ದರೆ ತನಗೆ ಹಿಂಸೆ ಕೊಡಲು ಯಾರಿಂದಲೂ ಸಾಧ್ಯವಾಗದು. ಈ ತೀರ್ಮಾನಕ್ಕೆ ಬಂದರು. ತನಗೆ ಹಿಂಸೆ ಕೊಡುವುದೇ ಉದ್ದೇಶವಾದರೆ ಧೈರ್ಯದಿಂದ ಹಿಂಸೆಯನ್ನು ಅಹಿಂಸೆಯಿಂದ ಎದುರಿಸಬೇಕಾದ್ದು ತನ್ನ ಕರ್ತವ್ಯ ಹೀಗೆ ನಿಶ್ಚಯಿಸಿದರು. ಮೋಟಾರು ಬಿಟ್ಟು ನಡೆದು ಹೋಗಲು ಮತ್ತು ತನ್ನ ದೇಹವನ್ನು ಈ ಪ್ರಯೋಗಕ್ಕೆ ಒಡ್ಡಲು ನಿರ್ಧರಿಸಿದರು. ಮಾರನೆಯ ದಿನ, ನಾಲ್ಕು ಮೈಲಿಗಳ ಆಚೆಯ ಊರಿನಲ್ಲಿ, ಬೆಳಿಗ್ಗೆ 9 ಗಂಟೆಗೆ ಬಹಿರಂಗ ಸಭೆ ನಡೆಯಬೇಕಾಗಿತ್ತು. ತಾನು ನಡೆದು ಬರುವುದಾಗಿಯೂ, ತನಗಾಗಿ ಕಾಯದೆ ಕಾರ್ಯಕಲಾಪ ಮುಂದುವರಿಸುತ್ತಿರುವಂತೆ ತಿಳಿಸಿದರು. ದಾರಿ ತೋರಿಸಲು ತನ್ನಷ್ಟೇ ವಯಸ್ಸಿನ ವೃದ್ಧನನ್ನು ಜೊತೆ ಮಾಡಿಕೊಂಡು ಹೊರಟರು. ಸಭಾಸ್ಥಳಕ್ಕೆ ಹೋಗುತ್ತಲೇ ವೇದಿಕೆ ಏರಿ ಭಾಷಣ ಮಾಡಲುಪಕ್ರಮಿಸಿದರು. ಸನಾತನಿಗಳ ತಂಡ ಇಲ್ಲಿಯೂ ಗಲಭೆ ಮಾಡಲು ಪ್ರಯತ್ನಿಸಿತು. ಜನಭರಿತ ಸಭೆಯಲ್ಲಿ ಇವರ ಪುಂಡಾಟಿಕೆ ಸಾಗಲಿಲ್ಲ.

ಹರಿಜನೋದ್ಧಾರ ಪ್ರವಾಸದಲ್ಲಿ ಜೂನ್ 25, 1934 ಪುಣೆಗೆ ಬಂದರು. ಪೌರಸಭೆಯು ಪುರಭವನದಲ್ಲಿ ಮಾನಪತ್ರ ಅರ್ಪಿಸಲು ವ್ಯವಸ್ಥೆ ಮಾಡಿತ್ತು. ಜನ ಕಿಕ್ಕಿರಿದು ನೆರೆದಿದ್ದರು. ಗಾಂಧಿಯವರು, ಕಸ್ತೂರಿಬಾ ಮತ್ತು ಇತರ ಮೂವರು ಹೆಣ್ಣುಮಕ್ಕಳೊಡನೆ ಸಭೆಗೆ ಬರುತ್ತಿದ್ದರು ಮೋಟಾರಿನಲ್ಲಿ. ಇವರ ಮುಂದೆ ಕಾಂಗ್ರೆಸ್ ಹಾಗೂ ಗಾಂಧಿಯವರ ಕಡು ವಿರೋಧಿ ಎನಿಸಿದ್ದ ಅಣ್ಣಾ ಸಾಹೇಬ ಬೋಪಟ್‌ಕರ್ ಅವರ ಮೋಟಾರು ಸಾಗಿತ್ತು. ಬಾಲಚಮೂ ದಳದವರು ಬ್ಯಾಂಡ್ ನುಡಿಸುತ್ತಿದ್ದರು. ಇದ್ದಕ್ಕಿದ್ದಂತೆ ಕಿವಿ ಕಿವುಡಾಗುವ ಶಬ್ಧ ಕೇಳಿಸಿತು. ಮುಂದೆ ಹೋಗುತ್ತಿದ್ದ ಮೋಟಾರಿನಲ್ಲಿ ಗಾಂಧೀಜಿ ಕುಳಿತಿರುವುದಾಗಿ ಭಾವಿಸಿ ಯಾರೋ ದುರಾತ್ಮ ಬಾಂಬು ಎಸೆದ.

ಬಾಂಬು ಸಿಡಿದು ಅಣ್ಣಾ ಸಾಹೇಬರ ಮೈಗೆ ಗಾಜಿನ ಚೂರುಗಳು ಅಂಟಿಕೊಂಡುವು. ರಕ್ತ ಬರುತ್ತಿದ್ದರೂ ಲಕ್ಷಿಸದೆ ಭೋಪಟಕರರು ವೇದಿಕೆ ಏರಿ ತಮಗಾಗಿ ಮೀಸಲಾಗಿದ್ದ ಆಸನದಲ್ಲಿ ಕುಳಿತರು. ಗಾಂಧಿಯವರಿಗೆ ನಡೆದ ಘಟನೆಯು ವಿಷಯ ಆಗ ತಿಳಿಯಲಿಲ್ಲ. ಅನಂತರ ತಿಳಿಯಿತು. ಬಾಂಬು ಎಸೆದವನನ್ನು ಪೊಲೀಸರು ಪತ್ತೆ ಮಾಡಲಾರದೆ ಹೋದರು. ಈ ವಿಷಾದಕರ ಘಟನೆ ಕುರಿತು ಅವರೊಂದು ದೀರ್ಘ ಹೇಳಿಕೆ ಕೊಟ್ಟರು. "ಈ ದುರದೃಷ್ಟಕರ ಘಟನೆಯಿಂದ

ಅಸ್ಪೃಶ್ಯತೆಯ ನಿವಾರಣೆಯ ಕಾರ್ಯಕ್ಕೆ ತುಂಬ ನೆರವು ದೊರೆಯುವುದರಲ್ಲಿ ಅನುಮಾನ ವಿಲ್ಲ. ತನ್ನ ಜೀವನ ಧ್ಯೇಯದಲ್ಲಿ ತಾನು ಮರಣವಪ್ಪಬೇಕಾದರೆ ತನಗೆ ಸ್ವಲ್ಪವೂ ದುಃಖವಾಗದು. ಅಪವಿತ್ರವೆಂದು ತೋರುವ ತನ್ನ ಶರೀರವನ್ನು ನಾಶಗೊಳಿಸುವುದು ಕಷ್ಟವಲ್ಲ. ಇದರಿಂದ ಬಾಂಬು ಎಸೆದವರು ಲೋಕಾಪವಾದಕ್ಕೆ ಗುರಿಯಾಗು ತ್ತಿದ್ದರು. ಸಮಾಜ ಸುಧಾರಕರೂ ಮತ್ತು ಇತರರೂ, ಬಾಂಬು ಎಸೆಯುವವರ ಮೇಲೆ ಕೋಪಗೊಳ್ಳಬಾರದು. ಇಮ್ಮಡಿ ಉತ್ಸಾಹದಿಂದ ಅಸ್ಪೃಶ್ಯತಾ ನಿವಾರಣೆಯ ಕಾರ್ಯದಲ್ಲಿ ತೊಡಗಬೇಕು. ಹೀಗೆ ಹೇಳಿ ದಕ್ಷಿಣ ಆಫ್ರಿಕದಲ್ಲಿ ತನ್ನ ಮೇಲೆ ಪ್ರಾಣಾಪಾಯದ ಹಲ್ಲೆ ಮಾಡಿದವರ ಮೇಲೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳಬಾರದೆಂದು ತಮ್ಮ ನಿಲುವನ್ನು ಮತ್ತೆ ಸ್ಮರಿಸಿಕೊಂಡು, ಸಾರ್ವಜನಿಕರ ಗಮನಕ್ಕೆ ತಂದರು.

ಭಾರತದ 562 ದೇಶೀಯ ಸಂಸ್ಥಾನಗಳು ಬ್ರಿಟಿಷರ ಕೈಗೊಂಬೆಗಳಾಗಿದ್ದವು. ಐದಾರು ದೊಡ್ಡ ಸಂಸ್ಥಾನಗಳಲ್ಲಿ ಸ್ವಲ್ಪಮಟ್ಟಿನ ಸಾಂಕುಶ ಪ್ರಭುತ್ವವಿತ್ತು. ಮಿಕ್ಕ ಸಂಸ್ಥಾನಗಳಲ್ಲಿ ಬೊಕ್ಕಸದ ಹಣವನ್ನು ಸಂಸ್ಥಾನಾಧೀಶರು ಮನಬಂದಂತೆ ವೆಚ್ಚ ಮಾಡುತ್ತಿದ್ದರು. ಅರಸ ಆಡಿದ್ದೇ ಆಜ್ಞೆ. ಆದರೆ ಸ್ವಾತಂತ್ರ್ಯ ಹೋರಾಟದ ಗಾಳಿ ಸಂಸ್ಥಾನಗಳ ಮೇಲೂ ಬೀರಿ ಅಲ್ಲಿನ ಜನರನ್ನು ಜಾಗೃತಗೊಳಿಸಿತ್ತು. ರಾಜರ ಅಧೀನದಲ್ಲೇ ಜವಾಬ್ದಾರಿ ಸರ್ಕಾರ ಪಡೆಯಲು ಪ್ರಜೆ ಹವಣಿಸುತ್ತಿದ್ದರು. ರಾಜಕೋಟೆ 75,000 ಪ್ರಜಾಸಂಖ್ಯೆಯ ಸಣ್ಣ ಸಂಸ್ಥಾನ. ಗಾಂಧಿಯವರ ತಂದೆ ಇಲ್ಲಿ ದಿವಾನರಾಗಿದ್ದರು. ಈ ಸಂಸ್ಥಾನವನ್ನು ಗಾಂಧೀಜಿ ಚೆನ್ನಾಗಿ ಬಲ್ಲವರಾಗಿದ್ದರು. ಹುಟ್ಟಿ ಬೆಳೆದುದು ಇಲ್ಲಿಯೇ. ವಿಶಾಲ ಪ್ರಪಂಚ ಇವರ ಕಾರ್ಯಕ್ಷೇತ್ರವಾದುದರಿಂದ ಸಣ್ಣ ರಾಜಸ್ಥಾನದಲ್ಲಿ ಉಳಿಯಲು ಸಾಧ್ಯವಾಗಲಿಲ್ಲ. ಆದರೂ ಅಲ್ಲಿ ನಡೆಯುತ್ತಿದ್ದ ವಿದ್ಯಮಾನ ಇವರ ಗಮನಕ್ಕೆ ಬಾರದೆ ಹೋಗುತ್ತಿರಲಿಲ್ಲ. 1938ರಲ್ಲಿ ಇಲ್ಲಿನ ಜನ ತಮ್ಮ ಸ್ವಾತಂತ್ರ್ಯಕ್ಕಾಗಿ ಚಳುವಳಿ ನಡೆಸಿದರು. ವಲ್ಲಭಾಯಿ ಪಟೇಲರ ಮಧ್ಯಸ್ತಿಕೆ ಯಿಂದ ಸಂಸ್ಥಾನದ ಠಾಕೂರರೊಡನೆ ಒಪ್ಪಂದ ಏರ್ಪಟ್ಟಿತು. ಕಪಟಿ ವೀರವಾಲ ಸಂಸ್ಥಾನದ ದಿವಾನನಾಗಿದ್ದ. ಇವನ ಕಪಟತನದಿಂದ ಒಪ್ಪಂದ ಆಚರಣೆಗೆ ಬರಲು ಸಾಧ್ಯವಾಗಲಿಲ್ಲ. ಒಡಕು ಸರಿಮಾಡಲು ಗಾಂಧೀಜಿ ಮಧ್ಯೆ ಪ್ರವೇಶಿಸಿದರು. ಒಪ್ಪಂದದಂತೆ ನಡೆದುಕೊಳ್ಳುವುದಾಗಿ ಠಾಕೂರ್ ವಚನವಿತ್ತ. ಆದರೆ ವಚನ ಭ್ರಷ್ಟನಾದ. ಆಗ ಗಾಂಧೀಜಿ ಮಾರ್ಚಿ 3ರಿಂದ 7ನೇ ತಾರೀಖಿನವರೆಗೆ ಉಪವಾಸ ಆಚರಿಸಿದರು. ಪರಮಾಧಿಕಾರವುಳ್ಳ ವೈಸರಾಯಿ ಲಾರ್ಡ್ ಲಿನ್‌ಲಿತ್‌ಗೊ ಅವರ ನೆರವು ಅಪೇಕ್ಷಿಸಿದರು. ಭಾರತದ ಸುಪ್ರೀಂ ಚೀಫ್ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು, ವೈಸರಾಯರ ಸಲಹೆಯಂತೆ ವಿವಾದ ಮತ್ತು ಒಪ್ಪಂದ ಪರಿಶೀಲಿಸಿ ತೀರ್ಪುಕೊಟ್ಟರು. ತೀರ್ಪು ಪ್ರಜೆ ಮತ್ತು ಗಾಂಧಿಯವರ ನಿಲುವನ್ನು ಸಮರ್ಥಿಸು

ವಂತೆ ಇತ್ತು. ಈ ವಿಚಾರದಲ್ಲಿ ವೈಸರಾಯರು ನೆರವು ತಾನು ಕೋರಿದ್ದು ತಪ್ಪಾಯಿತು. ತನ್ನ ಉಪವಾಸ ಮತ್ತು ತನ್ನ ಆತ್ಮಶಕ್ತಿ ದೋಷಪೂರಿತವಾಗಿಲ್ಲದೆ ಇದ್ದುದರಿಂದ ಥಾಕೂರಿನ ಹೃದಯ ಪರಿವರ್ತನೆ ಮಾಡಲು ಸಾಧ್ಯವಿಲ್ಲದೆ ಹೋಯಿತು. ಈ ರೀತಿಯಲ್ಲಿ ತಮ್ಮ ಆತ್ಮಶೋಧನೆ ಮಾಡಿಕೊಂಡು ಮುಖ್ಯ ನ್ಯಾಯಾಧೀಶರು ನೀಡಿದ್ದ, ಅನುಕೂಲವಾದ ತೀರ್ಪನ್ನು ಗಾಂಧೀಜಿ ತಿರಸ್ಕರಿಸಿದರು ಆದರೆ ಪ್ರಕರಣ ಇಷ್ಟಕ್ಕೇ ಅಂತ್ಯಗೊಳ್ಳಲಿಲ್ಲ.

ರಾಜಕೋಟೆಯಲ್ಲಿದ್ದಾಗ ಪದ್ಧತಿಯಂತೆ ರಾಷ್ಟ್ರೀಯ ಶಾಲೆಯ ಆವರಣದಲ್ಲಿ ಪ್ರಾರ್ಥನಾ ಸಭೆಗೆ ಗಾಂಧೀಜಿ ಬಂದರು. ಪ್ರಾರ್ಥನೆ ಪ್ರಾರಂಭವಾಯಿತು. ಇಷ್ಟರಲ್ಲಿ ಸುಮಾರು ಸಾವಿರ ಪುಂಡು ಜನರ ತಂಡ ಕತ್ತಿ, ದೊಣ್ಣೆ, ಲಾಠಿ ತೆಗೆದುಕೊಂಡು 'ಅಲ್ಲಾಹೊ ಅಕ್ಬರ್' ಎಂದು ಕೂಗುತ್ತ ಶಾಲೆಯ ಮುಖ್ಯ ದ್ವಾರದತ್ತ ನುಗ್ಗಿ ಬಂದರು. ಗಲಭೆಯಿಂದ ಗಾಂಧೀಜಿ ಸ್ವಲ್ಪವೂ ವಿಚಲಿತರಾಗಲಿಲ್ಲ. ಪ್ರಾರ್ಥನೆ ಮುಂದುವರಿಸಿದರು. ಹೊಡಿ, ಕಡಿ, ಬಡಿ ಎಂದು ಪುಂಡರು ಗಟ್ಟಿಯಾಗಿ ಅರಚುತ್ತಲೇ ಇದ್ದರು. ಇದಕ್ಕೆ ಕಿವಿಗೊಡದೆ ಕಣ್ಮುಚ್ಚಿ ಪ್ರಾರ್ಥನೆ ನಡೆಸಿ ಮುಗಿಸಿದರು. ಪ್ರಾರ್ಥನೆ ಮುಗಿಯುತ್ತಲೇ, ಎದ್ದು ಪುಂಡರ ಕಡೆ ಹೊರಟರು. ಇವರಿಗೆ ಏನಾದೀತೋ ಎಂದು ಗಾಬರಿಗೊಂಡ ಜನ ಬೆಂಗಾವಲಾಗಿ ಹೊರಟರು. ಭಗವಂತ ನನ್ನ ಅಂಗರಕ್ಷಕನಾಗಿದ್ದಾನೆ. ನೀವು ಯಾರೂ ಬರಬೇಕಾದ್ದಿಲ್ಲ, ಎಂದು ತಾವೊಬ್ಬರೇ ಧೈರ್ಯವಾಗಿ ಪುಂಡರ ಮಧ್ಯೆ ನುಗ್ಗಿದರು. ಈ ಸಾಹಸದ ಮುಂದೆ ಏನುಮಾಡಲೂ ತೋಚದೆ ಪುಂಡರು ಸ್ತಂಭೀಭೂತರಾದರು. ಆಗ ಅವರ ನಡುವೆ ಇದ್ದ ಒಬ್ಬ ತರುಣ ಜಮೀನ್ದಾರ, ಮಹಾತ್ಮರ ಕೈ ಹಿಡಿದು ಪುಂಡರ ಮಧ್ಯೆಯಿಂದ ಅವರನ್ನು ಹೊರಕ್ಕೆ ಸುರಕ್ಷಿತವಾಗಿ ಸಾಗಿಸಿದ.

ಒಂಭತ್ತನೆಯ ಪ್ರಾಣಾಂತಕ ಘಟನೆ ಮಹಾರಾಷ್ಟ್ರದಲ್ಲೇ ನಡೆದುದು ಗಮನಾರ್ಹ. ತಮ್ಮ ಮಿತ ಪರಿವಾರದೊಡನೆ ಗಾಂಧೀಜಿ ಜೂನ್ 28, 1946 ರಾತ್ರಿ ಪುಣೆ ಬಿಟ್ಟು ವಿಶೇಷ ರೈಲಿನಲ್ಲಿ ಹೊರಟರು. ಎಂಜಿನ್ ಚಾಲಕ ಪೆರೀರ ಗಾಡಿಯನ್ನು ವೇಗವಾಗಿ, ಆದರೂ ಸಾಕಷ್ಟು ಎಚ್ಚರಿಕೆಯಿಂದ ನಡೆಸುತ್ತಿದ್ದ. ರೈಲು ನೇರಳ ಮತ್ತು ಕರ್ಜಗಿ ನಿಲ್ದಾಣಗಳ ನಡುವೆ ವೇಗವಾಗಿ ಓಡುತ್ತಿತ್ತು. ಹಟಾತ್ತನೆ ದಡದಡ ಶಬ್ದವಾಯಿತು. ಡಬ್ಬಿಗಳು ಉಯ್ಯಾಲೆಯಂತೆ ಅತ್ತಿತ್ತ ತೂಗಾಡಿದುವು. ಚಾಲಕ ಪೆರೀರ ತುಂಬ ಜಾಣ್ಮೆಯಿಂದ ರೈಲು ನಿಲ್ಲಿಸಿದ. ಇಳಿದು ನೋಡಿದರೆ ಯಾರೋ ಘಾತುಕರು, ಹಳಿಗೆಗೆ ಅಡ್ಡಲಾಗಿ ದೊಡ್ಡ ಬಂಡೆ ಇರಿಸಿದ್ದುದು ಗೋಚರವಾಯ್ತು. ಇಂಜನ್ನಿನ ಕೆಳಭಾಗದ ಕಬ್ಬಿಣ ಜಜ್ಜಿಹೋಗಿತ್ತು. ಹಿಂದಿನ ಡಬ್ಬಿಯು ಡೈನಮೋಗೆ ಜಖಂ ಆಗಿತ್ತು. ಕಾರ್ಮಿಕರು ಎರಡು ಗಂಟೆಕಾಲ ಶ್ರಮಿಸಿ, ಇಂಜಿನ್ ಮತ್ತು ಡಬ್ಬಿಗಳಿಗೆ ಆಗಿದ್ದ

ನ್ಯೂನತೆಗಳನ್ನು ಸರಿಪಡಿಸಿದರು. ಗಾಂಧಿಯವರಿಗೆ ನಡೆದ ಘಟನೆಯ ಅರಿವಾಗಲೇ ಇಲ್ಲ. ಮುಗ್ಧ ಮಗುವಿನಂತೆ ನಿರಾಳವಾಗಿ ಅವರು ಡಬ್ಬಿಯಲ್ಲಿ ಸುಖವಾಗಿ ನಿದ್ರಿಸುತ್ತಿದ್ದರು.

ನಡೆದ ಘಟನೆಯ ವಿವರ ಅವರಿಗೆ ತಿಳಿದುದು ಪ್ರಾರ್ಥನೆಗಾಗಿ ಮುಂಜಾನೆ ನಾಲ್ಕು ಗಂಟೆಗೆ ಎದ್ದಾಗಲೇ. ಪತ್ರಿಕೋದ್ಯಮಿ ನಾರ್ಮನ್‌ಕ್ಲಿಫ್ ಇದೇ ರೈಲಿನಲ್ಲಿ ವಿಶೇಷ ಅನುಮತಿ ಪಡೆದು ಪ್ರಯಾಣ ಮಾಡುತ್ತಿದ್ದ. ಹಿಂದಿನ ನಿಲ್ದಾಣದಲ್ಲಿ ಅವನು ರೈಲಿನಿಂದ ಇಳಿದು ಪ್ರಯಾಣ ನಿಲ್ಲಿಸಿದ್ದ. ಮಾರನೆಯ ದಿನ ಗಾಂಧಿಯವರಿಗೆ ಪತ್ರ ಬರೆದು ತಿಳಿಸಿದ. ಹಿಂದಿನ ನಿಲ್ದಾಣದಲ್ಲಿ ಇಳಿದು, ಮುಂದೆ ಸಾಗಿ, ಹಳಿಯ ಮೇಲೆ ಬಂಡೆಗಳನ್ನು ಇರಿಸಿದವನು ತಾನಲ್ಲವೆಂದು. ಸಂಕಟ ಸನ್ನಿವೇಶದಲ್ಲೂ ಹಾಸ್ಯ ಮಾಡುವ ಅವನ ಪ್ರವೃತ್ತಿ ಬಾಪುವಿನ ಪ್ರಶಂಸೆಗೆ ಪಾತ್ರವಾಯಿತು.

ಗಾಂಧೀಜಿ ಉಪವಾಸ ನಡೆಸಿ ಮತೀಯ ಹುಚ್ಚಾಟದಿಂದ ಕಂಗಾಲಾಗಿದ್ದ ಕಲ್ಕತ್ತ ನಗರದಲ್ಲಿ ಮತ್ತೆ ಶಾಂತಿ ನೆಲೆಸುವಂತೆ ಮಾಡಿದ್ದರು ಅವರ ಕಲ್ಕತ್ತೆಯ ಬೇಲಿಯಾ ಘಾಟಿನ ಬೀ ಅಮ್ಮ ಎಂಬ ಮುಸ್ಲಿಂ ಮುದುಕಿಯ ಮನೆಯಲ್ಲಿ ತಂಗಿದ್ದರು. ಮಾರನೆಯ ದಿನ ಎಂದರೆ ಸೆಪ್ಟಂಬರ್ 1, 1947 ಬೆಳಗ್ಗೆ ಬಂಗಾಳದ ಮುಸ್ಲಿಂ ಲೀಗಿನ ಸುಹ್ರಾವರ್ದಿ ಅವರೊಡನೆ ನವಾಖಲಿಗೆ ಹೊರಡಬೇಕಾಗಿತ್ತು. ಹೊರಡುವ ಸಿದ್ಧತೆ ಮಾಡಿಕೊಳ್ಳಲು ಸುಹ್ರಾವರ್ದಿ ಗಾಂಧಿಯವರೊಡನೆ ವಿಚಾರ ವಿನಿಮಯ ಮುಗಿಸಿಕೊಂಡು ಮನೆಗೆ ಹೋಗಿದ್ದರು. ಆಗಸ್ಟ್ 31, ರಾತ್ರಿ ಗಾಂಧೀಜಿ ಮತ್ತು ಸಂಗಡಿಗರೆಲ್ಲರೂ ಮಲಗಿದ್ದಾರೆ. ಗಂಟೆ 10. ಅಕ್ಕಪಕ್ಕದಲ್ಲಿ ಮೊಮ್ಮಕ್ಕಳಾದ ಅಬಾ ಮತ್ತು ಮನೂ. ಹಿಂದೂಗಳ ದೊಡ್ಡ ಗುಂಪೊಂದು ಲಾಠಿ, ದೊಣ್ಣೆ ಸಹಿತ ಕಟ್ಟಡದೊಳಕ್ಕೆ ನುಗ್ಗಿ ಕೈಗೆ ಸಿಕ್ಕಿದ ಕುರ್ಚಿ, ಮೇಜು, ಕಿಟಕಿ, ಪಿಂಗಾಣಿ ಸಾಮಾನು ಎಲ್ಲವನ್ನು ಚೂರುಚೂರು ಮಾಡುತ್ತ, "ಎಲ್ಲಿ ಸುಹ್ರಾವರ್ದಿ, 'ನಮಗೆ ಸುಹ್ರಾವರ್ದಿ ಬೇಕು' ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕು" ಎಂದು ಅರಚುತ್ತಿದ್ದರು. ಇಬ್ಬರು ಹೆಣ್ಣು ಮಕ್ಕಳೂ ಹೊರಕ್ಕೆ ಹೋಗಿ ಸುಹ್ರಾವರ್ದಿ ಇಲ್ಲಿಲ್ಲ, ಮನೆಗೆ ಹೊರಟು ಹೋದರು. ಬಾಪೂಜಿ ಮಲಗಿದ್ದಾರೆ ಗಲಾಟೆ ಮಾಡಬೇಡಿ ಎಂದು ಕೈಮುಗಿದು ಬೇಡಿಕೊಳ್ಳುತ್ತಿದ್ದರೂ ಗಲಾಟೆ ನಿಲ್ಲಲಿಲ್ಲ. ಗಾಂಧಿಯವರಿಗೆ ಎಚ್ಚರವಾಯಿತು. ಎದ್ದು ಹೊರಬಾಗಿಲವರೆಗೂ ಹೋದರು. ಸ್ನೇಹಿತರೂ, ಹಿತೈಷಿಗಳೂ ಮಹಾತ್ಮರನ್ನು ಸುತ್ತುಗಟ್ಟಿ ಮುಂದೆ ಹೋಗಲು ಬಿಡಲಿಲ್ಲ. ಮುದುಕಿ ಬೀ ಅಮ್ಮ ಮತ್ತು ಮತ್ತೊಬ್ಬ ಮುಸ್ಲಿಂ ಯುವಕ ರಕ್ಷಣೆ ನೀಡಲು ಅವರ ಎಡಬಲಗಳಲ್ಲಿ ನಿಂತರು. ಮುಂದೆ ಹೆಜ್ಜೆ ಹಾಕಲು ಬಿಡಲಿಲ್ಲ. ಅಂದು ಮೌನ ದಿನ. ವ್ರತಭಂಗ ಮಾಡಿ ಕೈ ಎತ್ತಿ ಗಲಭೆ ಮಾಡಬೇಡಿ ಎಂದು

ಉಪವಾಸದಲ್ಲಿ ನೀರೂ ನಾನು ತೆಗೆದುಕೊಳ್ಳಲಾರೆ. ಸತ್ಯ ಮತ್ತು ಅಹಿಂಸೆಗಳ ಮೋಸದ ನಾಟಕ ಕಣ್ಣಾರೆ ನೋಡಲು ನಾನು ಬಯಸೆ".

ಮಹಾತ್ಮರ ಉಪವಾಸ ಎಲ್ಲರ ಹೃನ್ಮನಗಳ ಮೇಲೂ ಪರಿಣಾಮ ಬೀರಲು ಪ್ರಾರಂಭಿಸಿತ್ತು. ಪುಂಡರೂ ಇದರಿಂದ ಪ್ರತ್ಯೇಕವಿರಲಿಲ್ಲ. ಕಲ್ಕತ್ತದಲ್ಲಿ ಎಲ್ಲಿಯೂ ಗಲಭೆಗಳು ನಡೆಯಲಿಲ್ಲ. ನಗರದ ಎಲ್ಲ ಜಾತಿ ಪಂಥಗಳ ಪ್ರಮುಖರು ಮುಖ್ಯ ಮಂತ್ರಿಗಳ ಮನೆಯಲ್ಲಿ ಕಲೆತು, ಶಾಂತಿ ಕಾಪಾಡುವ ಹೊಣೆ ಹೊರುವ ಭರವಸೆಯ ನಿರ್ಣಯ ಮಾಡಿ, ಮಹಾತ್ಮರಿಗೆ ಒಪ್ಪಿಸಿ ಉಪವಾಸ ನಿಲ್ಲಿಸಬೇಕೆಂದು ಪ್ರಾರ್ಥಿಸಿದರು. ತನ್ನ ಪ್ರಾಣ ಉಳಿಸುವ ಉದ್ದೇಶದಿಂದ, ಉಪವಾಸ ಕೊನೆಗೊಳಿಸಲು ಕಾತರರಾಗಿರಲಾಗದೆಂದೂ, ಅಂಥ ಪೊಳ್ಳು ಭರವಸೆ ತಾನು ಸ್ವೀಕರಿಸಲಾರೆನೆಂದೂ ಗಾಂಧೀಜಿ ತಿಳಿಸಿದರು. ಈಗ ಕಲ್ಕತ್ತದಲ್ಲಿ ಶಾಂತಿ ಮತ್ತು ನೆಮ್ಮದಿ ನೆಲಸಿದೆ. ಮತ್ತೆ ಮತೀಯ ಕಲಹ ತಲೆದೋರದಂತೆ ನೋಡಿಕೊಳ್ಳುತ್ತೇವೆ. ಈ ಗುರಿ ಸಾಧಿಸಲು ಪ್ರಾಣಾರ್ಪಣೆ ಮಾಡಲೂ ನಾವು ಸಿದ್ಧ ಎಂದು ಪ್ರಮುಖರು ಲಿಖಿತ ಭರವಸೆ ಕೊಟ್ಟರು.

ಮುಖಂಡರು ಕೊಟ್ಟ ಭರವಸೆ ಸ್ವೀಕರಿಸಿ, ಪಂಜಾಬಿಗೆ ಹೋಗಲು ತಾವು ಉಪವಾಸ ಕೊನೆಗೊಳಿಸುತ್ತಿರುವುದಾಗಿಯೂ, ಮತ್ತೆ ಉಪವಾಸ ಕೈಗೊಳ್ಳಬೇಕಾದ ಸನ್ನಿವೇಶ ಒದಗಿ ಬರಲಾರದೆಂಬ ಭರವಸೆಯಿಂದ ಉಪವಾಸ ಮುಕ್ತಾಯಗೊಳಿಸಲು ಮಹಾತ್ಮರು ಒಪ್ಪಿಕೊಂಡರು. ಭಾರತ ಮತ್ತು ಮಾನವಕೋಟಿಯ ಕಲ್ಯಾಣಕ್ಕಾಗಿ ದುಡಿಯಲು ತಾನು ಬಯಸುವುದಾಗಿಯೂ, ಆದರೆ ಜೀವಂತ ಉಳಿಯುವ ಉದ್ದೇಶದಿಂದ, ಮೋಸಕ್ಕೆ ಒಳಗಾಗಿ ಪ್ರಾಣ ಉಳಿಸಿಕೊಳ್ಳಲು ಇಚ್ಛಿಸುವುದಿಲ್ಲವೆಂದು ಸ್ಪಷ್ಟಪಡಿಸಿದರು. ಅಖಂಡ ಭಾರತದ ಶಾಂತಿಯ ಕೀಲಿ ಕಲ್ಕತ್ತದಲ್ಲಿದೆ. ಇಲ್ಲಿ ಮತ್ತೆ ಮತೀಯ ಕಿಚ್ಚು ಎದ್ದರೆ ಅದು ಅಖಂಡ ಭಾರತವನ್ನೇ ಆವರಿಸೀತು. ಆದ್ದರಿಂದ ಇಡೀ ಪ್ರಪಂಚ ದಹಿಸುತ್ತಿದ್ದರೂ, ಕಲ್ಕತ್ತ ಶಾಂತಿಮಯವಾಗಿ ಉಳಿಯುವ ಜಾಗ್ರತೆ ವಹಿಸಿಕೊಳ್ಳಬೇಕೆಂದು ಮನವಿ ಸಹಿ ಮಾಡಿದ್ದವರಿಗೆ ತಿಳಿಸಿದರು.

ಹೀಗೆ ಉಪವಾಸ ಪ್ರಾರಂಭಿಸಿದ 73 ಘಂಟೆಗಳ ಅನಂತರ ಸೆಪ್ಟಂಬರ್ 4, 1947, ರಾತ್ರಿ 9–15 ಗಂಟೆಗೆ, ನೀರು ಬೆರೆಸಿದ ಕಿತ್ತಲೆ ಹಣ್ಣಿನ ರಸ ಸೇವಿಸಿ ಪ್ರಾಣಾಪಾಯದ ಉಪವಾಸ ಕೊನೆಗೊಳಿಸಿದರು.

ಮತೀಯ ಕಲಹದ ಜ್ವಾಲೆ ಉತ್ತರ ಭಾರತದಲ್ಲಿ ಒಂದು ಪ್ರಾಂತದಿಂದ ಮತ್ತೊಂದಕ್ಕೆ ಕಾಡ್ಗಿಚ್ಚಿನಂತೆ ಹರಡುತ್ತಿತ್ತು. ಅದು ಬಿಹಾರ ಪಂಜಾಬು ಕಾಶ್ಮೀರ ಆವರಿಸಿತ್ತು

ಒಬ್ಬ ಶಾಂತಿದೂತ ಏಕಕಾಲದಲ್ಲಿ ಎಷ್ಟು ಕಡೆಯಲ್ಲಿ ಇರಬಲ್ಲ. ಪಾಕಿಸ್ಥಾನದಿಂದ ಮನೆ ಮಠ ಎಲ್ಲ ಕಳೆದುಕೊಂಡ, ನೆಲೆಯಿಲ್ಲದ ಜನ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಭಾರತಕ್ಕೆ ಬರುತ್ತಿದ್ದರು. ಹಿಂದುಸ್ಥಾನದಿಂದ ಪಾಕಿಸ್ಥಾನಕ್ಕೆ ಇರುವೆಯ ಸಾಲಿನಂತೆ ಸಾಗಿಹೋಗುತ್ತಿದ್ದರು. ನಿರಾಶ್ರಿತರದು ಭಯಂಕರ ಸಮಸ್ಯೆಯಾಗಿತ್ತು. ಇಂಥ ದೃಶ್ಯ ನೋಡಲು ತನ್ನನ್ನು ಭಗವಂತ ಜೀವಸಹಿತ ಏಕೆ ಉಳಿಸಿದ್ದಾನೆಂದು ಮಹಾತ್ಮರು ತಲ್ಲಣಿಸುತ್ತಿದ್ದರು.

ಈ ಮಹಾ ದುರಂತಗಳಿಗೆ ಮಹಾತ್ಮರೇ ಕಾರಣ. ತಮ್ಮ ಅಹಿಂಸಾ ತತ್ವದಿಂದ ಭಾರತೀಯರನ್ನು ನಿರ್ವೀರ್ಯರಾಗಿ ಮಾಡಿರುತ್ತಾರೆ. ಮಹಮ್ಮದೀಯರು ಬಲಿಷ್ಠ ರಾಗುತ್ತಿದ್ದಾರೆ. ಆದಕಾರಣ ಇವರನ್ನು ಮುಗಿಸಿಬಿಡಬೇಕು. ಈ ಭಾವನೆ ಶಿವಾಜಿಯ ಆರಾಧಕ ಭಕ್ತರಾದ ಮಹಾರಾಷ್ಟ್ರೀಯರಲ್ಲಿ ಬಲವಾಗಿ ಬೇರುಬಿಟ್ಟಿತ್ತು. ಮಹಾತ್ಮರ ಪ್ರಾಣಹರಣಕ್ಕಾಗಿ ಒಳಸಂಚು ನಡೆಯುತ್ತಿತ್ತು. ನಾಥುರಾಂ ಗೋಡ್ಸೆ, ಗೋಪಾಲ್ ಗೋಡ್ಸೆ, ಕರಕರೆ, ಮದನ್‌ಲಾಲ್, ಆಪ್ಟೆ ಈ ಗುಂಪಿಗೆ ಸೇರಿದವರು.

ದಿಲ್ಲಿಯಲ್ಲೂ ಮತೀಯ ಗಲಭೆ ಹರಡಿತ್ತು. ಮತೀಯ ಸೌಹಾರ್ದಕ್ಕಾಗಿ ಗಾಂಧೀಜಿ ಜನವರಿ 13 ರಿಂದ 18 ರವರೆಗೆ ಉಪವಾಸ ಮಾಡಿ ಮುಗಿಸಿದ್ದರು. ಈ ಸಾರಿ ಬಿರ್ಲಾ ಭವನದಲ್ಲಿ ವಾಸ್ತವ್ಯ ಹೂಡಿದ್ದರು. ಭವನದಲ್ಲಿ ಸಂಜೆಯ ಪ್ರಾರ್ಥನೆ ನಡೆಯುತ್ತಿತ್ತು. ಜನವರಿ 20, 1948 ಗಾಂಧೀಜಿ ಪ್ರಾರ್ಥನಾ ಭಾಷಣ ಮಾಡುತ್ತಿದ್ದರು. ಹಟಾತ್ತಾಗಿ ಬಾಂಬು ಸಿಡಿದಂತೆ ಶಬ್ದವಾಯಿತು. ಗಾಬರಿಗೊಂಡವರು ಅತ್ತಿತ್ತ ಓಡಾಡತೊಡಗಿದರು. ದಿಲ್ಲಿಯಿಂದ ಪ್ರಾರ್ಥನಾ ಭಾಷಣ ಬಿತ್ತರಿಸುತ್ತಿದ್ದ ಆಕಾಶವಾಣಿಯಲ್ಲೂ ಶ್ರೋತೃಗಳಿಗೆ ಈ ಸದ್ದು ಕೇಳಿಸಿತು. ಸೈನಿಕರು ಗೋಲಿಬಾರ್ ಅಭ್ಯಾಸದ ಗುಂಡಿನ ಶಬ್ದವಿದು. ಶಾಂತವಾಗಿ ಕುಳಿತುಕೊಳ್ಳಿ ಎಂದು ಸಭಿಕರಿಗೆ ಮನವಿ ಮಾಡಿಕೊಂಡರು. ಆದರೆ ವಾಸ್ತವವಾಗಿ ನಡೆದುದೇ ಬೇರೆ.

ಅಂದು ಸಂಜೆ ಪಶ್ಚಿಮ ಪಂಜಾಬಿನಿಂದ ದಿಲ್ಲಿಗೆ ಬಂದಿದ್ದ ನಿರಾಶ್ರಿತ ಮದನಲಾಲ್ ಪಹ್ವ, ಗೋಪಾಲ ಗೋಡ್ಸೆ, ಆಪ್ಟೆ, ಬಾಗಡೆ, ಶಂಕರ ಇವರು ಬಾಡಿಗೆ ಮೋಟಾರಿನಲ್ಲಿ ಬಿರ್ಲಾಭವನದ ಹಿಂಭಾಗಕ್ಕೆ ಬಂದರು. ಬಿರ್ಲ ಮನೆಯವರ ಮೋಟಾರುವಾಹನ ತೊಳೆಯುವ ಚೊಟ್ಟುರಾಂ, ಗಾಂಧಿಯವರ ಕೊಠಡಿಯ ಮುಂದೆ ಕುಳಿತಿದ್ದ. ಕೊಠಡಿಯ ಒಳಗಿನಿಂದ ಟ್ರೆಲ್ಲಿಸ್ ಸಂದುಗಳಿಂದ ಮಹಾತ್ಮರ ಫೋಟೋ ತೆಗೆಯಲು ಒಳಕ್ಕೆ ಬಿಡುವಂತೆ ಅವನನ್ನು ಕೇಳಿದರು. ಹಣ ಕೊಡುವ ಆಸೆ ತೋರಿಸಿದರು. ಆ ಸಂದಿನಿಂದ ಗುಂಡು ಹಾರಿಸುವುದೇ ಅವರ ಉದ್ದೇಶ. ಆದರೆ ಚೊಟ್ಟುರಾಂ ಇದಕ್ಕೆ ಅವಕಾಶ ಕೊಡಲಿಲ್ಲ.

ಈ ಉಪಾಯ ಕೈಗೂಡದೆ ಹೋದುದರಿಂದ ಬೇರೆ ಕ್ರಮ ಕೈಗೊಳ್ಳಲು ಅವರು ತೀರ್ಮಾನಿಸಿದರು. ಮದನ್‌ಲಾಲ್, ಮಹಾತ್ಮರು ಕುಳಿತಿದ್ದ 75 ಗಜಗಳ ಆಚೆ ಸಣ್ಣ ಬಾಂಬು ಸಿಡಿಸುವುದು. ಸದ್ದು ಕೇಳಿ ಗಾಬರಿಗೊಂಡ ಜನ ಓಡತೊಡಗುತ್ತಲೇ ಇವರು ಐವರೂ ವೇದಿಕೆಯತ್ತ ಧಾವಿಸುವುದು. ತನ್ನ ಕೈಯಲ್ಲಿದ್ದ 'ಗ್ರಿನೇಡ್' ಬಾಗಡೆ, ಮಹಾತ್ಮರ ಮೇಲೆ ಒಗೆಯುವುದು. ಇದು ಅವರ ಸಂಚು.

ಮಹಾತ್ಮರಿಗೆ ಕೇಳಿಬಂದ ಶಬ್ದ ಮದನ್‌ಲಾಲ್ ಸಿಡಿಸಿದ ಸಣ್ಣ ಬಾಂಬು. ಬಾಗಡೆ ಮಹಾತ್ಮರತ್ತ ಧಾವಿಸಿ ಬಂದ. ಆದರೆ ಕಡೆಯ ಗಳಿಗೆಯಲ್ಲಿ ತನ್ನ ಕೈಯಲ್ಲಿದ್ದ 'ಗ್ರಿನೇಡ್' ಬಾಂಬು ಎಸೆಯಲು ಮನ ಒಪ್ಪಲಿಲ್ಲ. ಕೈ ಕಂಪಿಸಿತು. ಅವನು ಇತರ ಆಪ್ತರೊಂದಿಗೆ 'ಟ್ಯಾಕ್ಸಿ' ಇದ್ದಲ್ಲಿಗೆ ಓಡಿಬಂದ. ತಪ್ಪಿಸಿಕೊಂಡು ಬರಲು ಮದನಲಾಲನಿಗೆ ಸಾಧ್ಯವಾಗಲಿಲ್ಲ. ಸುಲೋಚನ ಎಂಬ ಬಡ ಮಹಿಳೆ ಇವನು ಕಡ್ಡಿ ಗೀರಿ ಏನೋ ಹೊತ್ತಿಸುತ್ತಿದ್ದುದನ್ನು ನೋಡಿದ್ದಳು. ಮದನಲಾಲನನ್ನು ಜನ ಹಿಡಿದರು. 25 ವಯಸ್ಸಿನ ಈ ನಿರಾಶ್ರಿತನಲ್ಲಿ ಒಂದು ಕೈಬಾಂಬು ಸಿಕ್ಕಿತು. ಅವನನ್ನು ಪೊಲೀಸರಿಗೆ ಒಪ್ಪಿಸಲಾಯಿತು. ಇತರ ಸಂಚುಗಾರರು ಮೋಟಾರಿನಲ್ಲಿ ಕುಳಿತು ತಪ್ಪಿಸಿಕೊಂಡು ಹೊರಟು ಹೋದರು.

ಬಿರ್ಲಾ ಭವನದ ಸುತ್ತ ಪೊಲೀಸ್ ದಳವನ್ನು ಬಲಪಡಿಸಲಾಯಿತು. ಸಾದಾ ಉಡುಪಿನಲ್ಲಿ ಗೂಢಚಾರರು ಗುಂಪಿನಲ್ಲಿ ಸೇರಿಕೊಂಡು ಎಚ್ಚರಿಕೆ ವಹಿಸಿದ್ದರು. ಬಹು ಸಂಖ್ಯೆಯಲ್ಲಿ ರಕ್ಷಣಾ ದಳದವರು ಗಸ್ತು ತಿರುಗುತ್ತಿರುವುದು ಮಹಾತ್ಮರಿಗೆ ಒಪ್ಪಿಗೆಯಾಗದೆಂದು ತಿಳಿದ ಬಿರ್ಲಾ ಇದಕ್ಕೆ ಸಮ್ಮತಿಯುಂಟೇ ಎಂದು ಕೇಳಿದರು. ಪಟೇಲ ಮತ್ತು ನೆಹರು ಇವರಿಬ್ಬರೂ ಹೊಣೆಯ ಭಾರದಿಂದ ಕುಗ್ಗಿ ಹೋಗಿದ್ದಾರೆ. ತನ್ನ ಚಿಂತೆಯಿಂದ ಅವರ ಮೇಲೆ ಮತ್ತಷ್ಟು ಭಾರ ಹೇರಲು ತಾನು ಬಯಸೆ ಎಂದರು ಬಾಪು. ಆದರೆ ಪ್ರಾರ್ಥನೆಗೆ ಬರುತ್ತಿದ್ದವರನ್ನು ಶಸ್ತ್ರಗಳಿಗಾಗಿ ಶೋಧಿಸಲು ಪಟೇಲರು ಬೇಡಿದ ಅವಕಾಶ ಗಾಂಧೀಜಿ ತಿರಸ್ಕರಿಸಿದರು.

ಮಾರನೆಯ ದಿನದ ಪ್ರಾರ್ಥನಾ ಸಭೆಯಲ್ಲಿ ಈ ಘಟನೆಯನ್ನು ಕುರಿತು ತಮ್ಮ ಮನದೋಟ ಗಾಂಧೀಜಿ ಬಿಚ್ಚಿ ಹೇಳಿದರು. ಬಾಂಬು ತನ್ನ ಮೇಲೆ ಬಿದ್ದು ಸಿಡಿದು ನಾನು ಕೆಳಗೆ ಬಿದ್ದರೆ, ಆಗಲೂ ಘಾತುಕನ ವಿರುದ್ಧ ಕಿಂಚಿತ್ತೂ ಮನದಲ್ಲಿ ದ್ವೇಶ ಬಗೆಯದೆ, ನಗುಮೊಗದಿಂದ ಹತನಾದರೆ, ಆಗ ಅಹಿಂಸೆಯ ಪ್ರಶಸ್ತಿಗೆ ತಾನು ಪಾತ್ರನಾಗಬಹುದು. ದಾರಿತಪ್ಪಿ ಬಾಂಬು ಎಸೆದ ತರುಣನ ವಿರುದ್ಧ ಕೋಪತಾಪ ತಾಳಲಾಗದು. ತಾನು ಹಿಂದೂ ಧರ್ಮದ ಶತ್ರು ಎಂದು ಆ ತರುಣ ಬಗೆದು ತನ್ನನ್ನು ಕೊನೆಗಾಣಿಸಲು, ಅವನನ್ನು ಭಗವಂತ ನಿಮಿತ್ತ ಮಾತ್ರ ಮಾಡಿಕೊಂಡಿರುವುದಾಗಿ ಆ ತರುಣ ಭಾವಿಸಿರ

ಬಹುದು. ತರುಣನಲ್ಲಿ ದಯೆ ತೋರಬೇಕು. ತಮ್ಮ ತಮ್ಮ ಆತ್ಮ ಶೋಧನೆ ಮಾಡಿಕೊಳ್ಳಬೇಕು. ಅಂತ್ಯದಲ್ಲಿ ಆ ತರುಣನ ಹೃದಯ ಪರಿವರ್ತನೆ ಆದೀತು. ಈ ತರುಣ ತನ್ನ ಕಾರ್ಯದಿಂದ ಹಿಂದೂ, ಇಸ್ಲಾಂ, ಭಾರತ ಮತ್ತು ಇಡೀ ಪ್ರಪಂಚಕ್ಕೇ ಹಾನಿ ಮಾಡಿರುವುದನ್ನು ಗ್ರಹಿಸಿ ಮನಃಪೂರ್ವಕ ಪಶ್ಚಾತ್ತಾಪ ವ್ಯಕ್ತಪಡಿಸಿದರೆ ಅವನನ್ನು ಬಿಟ್ಟು ಬಿಡುವಂತೆ ಪೊಲೀಸರಿಗೆ ತಾನು ತಿಳಿಸಬಹುದಾಗಿತ್ತು. ಆದರೆ ಈ ರೀತಿಯಲ್ಲಿ ನಡೆದಿರುವುದಿಲ್ಲ. ಶಾಂತಿ ಮತ್ತು ನೆಮ್ಮದಿ ಕಾಪಾಡುವುದು ಪೊಲೀಸರಿಗೆ ಈಗಲೇ ಸಾಕಷ್ಟು ಶ್ರಮ ಸಾಧ್ಯವಾಗಿದೆ. ತಾನು ನಡುವೆ ಪ್ರವೇಶಿಸುವುದರಿಂದ ಅವರ ಕೆಲಸ ಮತ್ತಷ್ಟು ಕಠಿಣವೂ, ಜಟಿಲವೂ ಆದೀತು. ತರುಣನನ್ನು ಹಿಂಸಿಸ ಬೇಡಿ, ಎಂದು ಅವರು ಪೊಲೀಸರಿಗೆ ವಿನಂತಿಸಿಕೊಂಡರು. ಈ ಘಟನೆಯಿಂದ ಸಭಿಕರೂ ಪಾಠ ಕಲಿಯಬೇಕಾಗಿದೆ. ಒಂದಲ್ಲ, ನೂರಾರು ಬಾಂಬುಗಳು ಸಿಡಿಯಲಿ, ಗುಂಡಿನ ಮಳೆ ಕರೆಯಲಿ, ಸಭಿಕರು ವಿಚಲಿತರಾಗದೆ, ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಬೇಕು. ತರುಣನ ಹಿಂದೆ ಇರುವವರು ಅವನಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು. ಹಿಂದೂ ಧರ್ಮವನ್ನು ರಕ್ಷಿಸುವ ಕ್ರಮ ಇದಾಗದು. ಹೀಗೆ ಹೇಳಿ ಬಿರ್ಲಾ ಭವನದ ತಮ್ಮ ಕೊಠಡಿಗೆ ಹಿಂತಿರುಗಿದರು.

ತಮ್ಮನ್ನು ಕೊಲ್ಲುವ ಪ್ರಯತ್ನಗಳು ಹಿಂದೆ ನಡೆದಿದ್ದರೂ, ಅವುಗಳನ್ನು ಗಾಂಧೀಜಿ ತಮ್ಮ ಲಕ್ಷ್ಯಕ್ಕೆ ಹೆಚ್ಚಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಬಾಂಬು ಸಿಡಿತ ಅವರ ಮೇಲೆ ತುಂಬ ಪರಿಣಾಮ ಬೀರಿತ್ತು. ತಾನು ಇನ್ನು ಉಳಿಯಲಾರೆ ಎಂದು ಅವರ ಒಳದನಿ ತಿಳಿಸುತ್ತಿದ್ದಂತೆ ವೇದ್ಯವಾಗುತ್ತದೆ. ಆದರೂ ತಮ್ಮ ದಿನದ ಕರ್ತವ್ಯ ಪಾಲಿಸುತ್ತಲೇ ಇದ್ದರು. ಜನವರಿ 29 ಬೆಳಗ್ಗೆ ಎಂದಿನಂತೆ ಎದ್ದರು ಪ್ರಾರ್ಥನೆ ಮುಗಿಯುತ್ತಲೇ ಪ್ರಮುಖರು ಒಬ್ಬೊಬ್ಬರಾಗಿ ಭೇಟಿಗೆ ಬರುತ್ತಲೇ ಇದ್ದರು. ವಿದೇಶಗಳಿಂದಲೂ ಮೂರು ನಾಲ್ಕು ಜನ ಬಂದಿದ್ದರು. ಮಧ್ಯಾಹ್ನ ಜಮ್ಮು ಕಾಶ್ಮೀರದ ನಿರಾಶ್ರಿತರು ಇವರನ್ನು ನೋಡಲು ಗುಂಪುಕಟ್ಟಿಕೊಂಡು ಬಂದರು. ಕರಳು ಕತ್ತರಿಸುವ ಹೃದಯ ವಿದ್ರಾವಕ ಕಥೆ ಇವರದು. ತಮ್ಮ ಪ್ರಾಂತದಿಂದ ಹೊರ ದೂಡಲ್ಪಟ್ಟು, ಬನ್ನುವಿನಿಂದ ಆಶ್ರಯಕ್ಕಾಗಿ ಭಾರತಕ್ಕೆ ರೈಲಿನಲ್ಲಿ ಇವರು ಹೊರಟಿದ್ದರು. ಗುಜರಾತಿನಲ್ಲಿ ರೈಲನ್ನು ತಡೆದು ಒಳಗಿದ್ದವರನ್ನು ಹೊಡೆದು ಬಡಿದು ಕೊಲೆಮಾಡಲಾಗಿತ್ತು. ಈಗ ಬಂದಿದ್ದವರು ಈ ಪ್ರಾಣಾಪಾಯದಿಂದ ತಪ್ಪಿಸಿಕೊಂಡ ಕಳೆದುಳಿದವರು. ಸಹಜವಾಗಿಯೇ ಅವರ ಹೃದಯ ತಡೆಯಲಾಗದ ಅತಿದುಃಖದಿಂದ ಕೋಪ ಪರವಶವಾಗಿತ್ತು. ಗಾಂಧಿಯವರನ್ನು ನೋಡುತ್ತಲೇ ಅವರಲ್ಲೊಬ್ಬ ಕೂಗಿದ, "ನಿಮ್ಮಿಂದ ನಾವು ಹಾಳಾದೆವು, ನಾಶವಾದೆವು. ಇನ್ನು ಸಾಕು ನಿಮ್ಮ ಸೇವೆ. ನೀವು ತೆರಳಿ ಹಿಮಾಲಯಕ್ಕೆ".

ಪ್ರಾರ್ಥಿಸಿದರು. ಇವರ ಹಿಂದೀ ವಾಕ್ಯಗಳನ್ನು ಬಂಗಾಲಿ ಮೊಮ್ಮಗಳು ಬಂಗಾಲಿಯಲ್ಲಿ ಅನುವಾದಿಸಿ ಹೇಳುತ್ತಿದ್ದಳು. ಏನೂ ಪ್ರಯೋಜನವಾಗಲಿಲ್ಲ. ವಿವೇಕದ ಮಾತುಗಳಿಗೆ ಕಿವಿಗೊಡುವ ಸ್ಥಿತಿಯಲ್ಲಿರಲಿಲ್ಲ ಕುಪಿತ ಜನ ಸಮೂಹ. ಕೈ ಜೋಡಿಸಿ ನಮಸ್ಕರಿಸಿದರು. ಅದೂ ಪ್ರಯೋಜನವಾಗಲಿಲ್ಲ. ಜನಜಂಗುಳಿ ಮತ್ತಷ್ಟು ಕೋಪಾವಿಷ್ಟವಾಯಿತು. ಕಿಟಕಿಗಳು ಲಟಲಟಿಸಿದುವು. ಮುರಿದುವು. ಅತಿಥೇಯರ ಮನೆಯ ಇಬ್ಬರು ಮುಸ್ಲಿಂ ಯುವಕರನ್ನು ಗುಂಪು ಅಟ್ಟಿಸಿಕೊಂಡು ಬಂತು. ರಕ್ತ ಸುರಿಯುತ್ತಿದ್ದ ಅವರು ಬಾಪು ಹಿಂದೆ ಬಂದು ಆಶ್ರಯ ಪಡೆದರು.

ಗುಂಪಿನಲ್ಲಿದ್ದ ಕೆಲವರು ಕ್ರೋಧಿತರನ್ನು ಶಾಂತಗೊಳಿಸಲು ಪ್ರಯತ್ನಿಸಿದರು. ಇಷ್ಟರಲ್ಲಿ ಪೊಲೀಸ್ ಅಧಿಕಾರಿಗಳು ಬಂದರು. ಅವರೂ ಸಹ, ಕೈಜೋಡಿಸಿ, ಶಾಂತರಾಗಿ, ಇಲ್ಲಿಂದ ಹೊರಟು ಹೋಗಿ ಎಂದು ಪ್ರಾರ್ಥಿಸಿದರು. ಯಾರೋ ಗುಂಪಿನಲ್ಲಿದ್ದವರು ಗಾಂಧಿಯವರನ್ನು ಹೊಡೆಯಲು ಲಾಠಿ ಬೀಸಿದರು. ಗುರಿ ತಪ್ಪಿತು. ಇಟ್ಟಿಗೆ ಚೂರುಗಳು ಹಾರಿದುವು. ಎಸೆದ ಇಟ್ಟಿಗೆ ಗಾಂಧೀಜಿ ಪಕ್ಕದಲ್ಲಿ ನಿಂತಿದ್ದ ಯುವಕನಿಗೆ ಬಡಿಯಿತು. ಗಾಂಧೀಜಿ ಮುಂದುಹೋಗ ಬಯಸಿದರು. ಆದರೆ ಇಬ್ಬರು ಮೊಮ್ಮಕ್ಕಳೂ ಅವರನ್ನು ಬಲವಾಗಿ ಹಿಡಿದು ಮುಂದೆ ಹೋಗಲು ಬಿಡಲಿಲ್ಲ. ಒಳಕ್ಕೆ ಹೋಗುವಂತೆ ಪೊಲೀಸ್ ಅಧಿಕಾರಿಗಳು ಗಾಂಧಿಯವರನ್ನು ಒತ್ತಾಯ ಮಾಡಿದರು. ಒಳಕ್ಕೆ ಬಂದರು. ಹೊರಗಡೆ ನಡೆಯುತ್ತಿದ್ದುದು ಗೋಚರಿಸುತ್ತಿರಲಿಲ್ಲ. ನಡೆದುದು ಹೀಗೆ. ಪೊಲೀಸರು ಲಾಠಿ ಮತ್ತು ಅಶ್ರುವಾಯು ಪ್ರಯೋಗಿಸಿ ಗುಂಪು ಚದರುವಂತೆ ಮಾಡಿದರು. ಸ್ವಲ್ಪ ವೇಳೆಯಲ್ಲಿ ಮುಖ್ಯಮಂತ್ರಿ ಡಾಕ್ಟರ್ ಪ್ರಫುಲ್ಲ ಚಂದ್ರ ಘೋಷ್, ಪೊಲೀಸ್ ಕಮಿಷನರ್, ಅನಂದಬಾಬು, ಡಾಕ್ಟರ್ ನೃಪೇನ ಬಾಬು ಬಂದರು. ಅವರ ಪ್ರಯತ್ನದಿಂದ ಅಲ್ಲಲ್ಲಿ ಗುಂಪು ಕಟ್ಟಿ ನಿಂತಿದ್ದ ಜನ ಹೊರಟು ಹೋದರು. ಮತ್ತೊಂದು ಪ್ರಾಣಾಪಾಯದಿಂದ ಗಾಂಧೀಜಿ ಪಾರಾದರು.

ನೊಂದ ಗಾಂಧೀಜಿ ಮತ್ತೆ ನಿರಶನ ಕೈಗೊಳ್ಳಲು ನಿರ್ಧರಿಸಿದರು. ಸುದ್ದಿ ತಿಳಿದ ಗವರ್ನರ್ ಸಿ. ರಾಜಗೋಪಾಲಚಾರಿಯವರು ಹೀಗೆ ಮಾಡದಿರುವಂತೆ ಪ್ರಾರ್ಥಿಸಲು ರಾತ್ರಿ 8–15 ಗಂಟೆಗೆ ಬಂದರು. ರಾತ್ರಿ 11 ಗಂಟೆಯವರೆಗೂ ಮಹಾತ್ಮರೊಡನೆ ವಾದಮಾಡುತ್ತಿದ್ದರು. ಈ ನಿರ್ಧಾರದಿಂದ ವಿಮುಖರಾಗಬೇಕೆಂದು ಅವರು ಮಾಡಿದ ಪ್ರಯತ್ನಗಳು ಫಲಿಸಲಿಲ್ಲ. ಆಗಸ್ಟ್ 14–15ರಂದು ಕೈಗೊಂಡ ಉಪವಾಸದಿಂದ ಕಲ್ಕತ್ತೆಯಲ್ಲಿ ಶಾಂತಿ ಮೂಡಿತು ಎಂಬ ಈ ಅಹಂಭಾವದಿಂದ ಮತ್ತೆ ಉಪವಾಸ ಕೈಗೊಳ್ಳಲು ನಿರ್ಧರಿಸಿದಂತಿದೆ, ಎಂದು ನಿಷ್ಠುರದ ಚುಚ್ಚು ಮಾತೂ ರಾಜಾಜಿ ಆಡಿದರು. ಅದರಿಂದಲೂ ಪ್ರಯೋಜನವಾಗಲಿಲ್ಲ. ಶಾಂತಿ

ಮೂಡುವಂತೆ ಮಾಡಲು ರಾಜ್ಯ ಸರ್ಕಾರಕ್ಕೆ ಸಾಕಷ್ಟು ಅವಕಾಶ ಕೊಡುವುದು ಅಗತ್ಯವಲ್ಲವೇ ಎಂದು ವಾದಿಸಿದರು. ಕರ್ತವ್ಯಪಾಲನೆಯ ದೃಷ್ಟಿಯಿಂದ ತಾನು ಈ ಕಡೆಯಕ್ರಮ ಕೈಗೊಳ್ಳುತ್ತಿರುವುದಾಗಿ ಗಾಂಧೀಜಿ ನುಡಿದರು. ಮನೆಮನೆಗೂ ಹೋಗಿ, ನಿವಾಸಿಗಳೊಡನೆ ವಾದಿಸಿ ಕರ್ತವ್ಯ ಪ್ರಜ್ಞೆ ಮೂಡುವಂತೆ ಮಾಡ ಬೇಕೆಂದು ಸಲಹೆ ಮಾಡಿದರು. ತಾನೂ ಇದೇ ಮಾಡಬೇಕು. ಆದರೆ ದೈಹಿಕ ವಾಗಿ ತನಗೆ ಇದು ಅಸಾಧ್ಯವಾದುದರಿಂದ, ತನ್ನ ಪ್ರಾಯೋಪವಾಸದಿಂದ ಅವರ ಹೃದಯ ಕರಗಿಸಲು ಸಾಧ್ಯವಾದೀತು. ಈ ವಿಶ್ವಾಸದಿಂದ ತಾನು ಉಪವಾಸ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು.

ತಾನು ಉಪವಾಸ ಕೈಗೊಳುತ್ತಿರುವ ಉದ್ದೇಶ ಕುರಿತು ದೀರ್ಘ ಹೇಳಿಕೆ ಸಿದ್ಧಪಡಿಸಿದರು. ರಾಜಾಜಿ, ನಿರ್ಮಲ ಕುಮಾರ ಬೋಸ್ ಇವರಿಗೆ ತೋರಿಸಿ ದೋಷವಿದ್ದರೆ ತನ್ನ ಗಮನಕ್ಕೆ ತರುವಂತೆ ಹೇಳಿದರು. ಹೃದಯ ಪರಿವರ್ತನೆ ಗಾಗಿ ಆಮರಣಾಂತರ ಉಪವಾಸ ಕೈಗೊಳ್ಳುವುದೇ ನಿಮ್ಮ ಉದ್ದೇಶವಾಗಿದ್ದಲ್ಲಿ ನೀರಿನೊಡನೆ ಸೋಡ, ಉಪ್ಪು, ನಿಂಬೆ ರಸ ಸೇರಿಸಿ ಸೇವಿಸುವ ಅವಶ್ಯಕತೆ ಏನು ಎಂದು ಪ್ರಶ್ನಿಸಿದರು ರಾಜಾಜಿ. ಜಗತ್ತಿಗೆ ಮಹಾತ್ಮರಾದರೂ ತಮಗೆ ಬೀಗರಾದ ಗಾಂಧಿಯವರೊಡನೆ ಸಲಿಗೆಯಿಂದ ಮಾತನಾಡುವರು ರಾಜಾಜಿ. ಎಷ್ಟೇ ಆಗಲಿ ರಾಜಾಜಿಯವರದು ಚುರುಕು ಬುದ್ಧಿ ಎನ್ನುತ್ತಾ ಲೇಖನಿ ತೆಗೆದುಕೊಂಡು, ಅವರು ಆಕ್ಷೇಪಿಸಿದ ನಿಂಬೆ ರಸ ಪದ ತೊಡೆದು ಹಾಕಿದರು.

ನಿರಶನ ಸೆಪ್ಟಂಬರ್ 1, 1947 ರಾತ್ರಿ 8–15 ಗಂಟೆಗೆ ಪ್ರಾರಂಭಿಸಿದರು. ಈ ಸುದ್ದಿ ತಿಳಿಯುತ್ತಲೇ ಈ ಸಲ್ಲೇಖನ ವ್ರತ ನಿಲ್ಲಿಸುವಂತೆ, ಕಲ್ಕತ್ತ ಮಹಾ ನಗರದ ಮಹಾಜನರು, ಶಾಂತಿ ಕಾಪಾಡುವ ಭರವಸೆ ನೀಡಿ, ಉಪವಾಸ ತಟಸ್ಥ ಗೊಳಿಸುವಂತೆ ಪ್ರಾರ್ಥಿಸಿಕೊಂಡರು. (ಜೈನ ಮಹಾಮುನಿಗಳು ಪ್ರಾಣಾರ್ಪಣೆ ಮಾಡುವ ಉದ್ದೇಶದಿಂದಲೇ, ಪ್ರಾಣ ಹೋಗುವವರೆಗೂ ನೀರೂ ಸಹ ತೆಗೆದು ಕೊಳ್ಳದೆ ಆಚರಿಸುವ ಘೋರ ನಿರಶನ ವ್ರತವೇ ಸಲ್ಲೇಖನ ಅಥವಾ ತನು ವಿಮೋಚನೆ).

ಆಗಸ್ಟ್ ತಿಂಗಳಿನಲ್ಲಿ ಮುಹಮ್ಮದೀಯರು ಕಲ್ಕತ್ತ ನಗರದ ಹಿಂದೂಗಳ ಮೇಲೆ ನಡೆಸಿದ ಕೊಲೆ ದೌರ್ಜನ್ಯಗಳಿಗಾಗಿ, ಪ್ರತೀಕಾರ ಮಾಡಲು ಹಿಂದೂ ಗಳು ಈಗ ತಿರುಗಿ ಬಿದ್ದಿದ್ದರು. ಹಿಂದೂ ಮಹಾಸಭೆಯ ಪ್ರಚೋದನೆ ಇವಕ್ಕೆ ಕಾರಣವೆಂಬ ಭಾವನೆಯೂ ಇತ್ತು. ಹಿಂದೂ ಮಹಾಸಭೆಯ ಮುಖಂಡರನ್ನು ಬಂಧಿಸಲೇ ಎಂದು ಕೇಳಿದರು ಮುಖ್ಯಮಂತ್ರಿಗಳು. ಬೇಡ, ಅದು ಯುಕ್ತವಲ್ಲ.

ಪ್ರತಿಯಾಗಿ ಶಾಂತಿ ಕಾಪಾಡುವ ಹೊಣೆ ಅವರ ಮೇಲೆ ಹೊರಿಸಿ. ಅವರ ಸಹ ಕಾರಕ್ಕೆ ಪ್ರಾರ್ಥಿಸಿಕೊಳ್ಳಿ, ಈ ರೀತಿ ಸಲಹೆ ನೀಡಿದರು.

ಗಾಂಧೀಜಿ ಉಪವಾಸ ಪ್ರಾರಂಭಿಸಿರುವ ಸುದ್ದಿ ವಾಯುವೇಗದಿಂದ ಹರಡಿತು. ಬೆಳಗಿನಿಂದ ಸಂಜೆಯವರೆಗೆ ಹಿಂದೂ–ಮುಸಲ್ಮಾನರು ಗುಂಪು ಗುಂಪಾಗಿ ಅವರ ದರ್ಶನಕ್ಕೆ ಬರತೊಡಗಿದರು. ನಾನಾ ಜಾತಿ, ಮತ, ಧರ್ಮಗಳ ಪ್ರಮುಖರು ಮಹಾತ್ಮರಲ್ಲಿ ಬಂದು ಶಾಂತಿ ನೆಲೆಸಲು ಸರ್ವ ಪ್ರಯತ್ನ ಮಾಡುವ ಭರವಸೆ ಕೊಟ್ಟು ಹೋಗುತ್ತಿದ್ದರು. ಅನೇಕ ವರ್ಷಗಳಿಂದ ಭೇಟಿ ಮಾಡದಿದ್ದ ನೇತಾಜಿ ಸುಭಾಷ್ ಚಂದ್ರ ಬೋಸರ ಸಹೋದರ ಶರತ್ ಬೋಸರು ಬಂದರು. ಹಳೆಯ ಕಹಿ ಪ್ರಸಂಗ ಮರೆತು ನೂತನ ಅಧ್ಯಾಯ ಪ್ರಾರಂಭಿಸಲು ಇಬ್ಬರೂ ಒಪ್ಪಿಕೊಂಡರು. ಅಹಿಂಸೆಯಲ್ಲಿ ಸಂಪೂರ್ಣ ವಿಶ್ವಾಸವಿಟ್ಟು, ಐಕ್ಯತೆ ಮತ್ತು ಶಾಂತಿ ಸ್ಥಾಪನೆಗಾಗಿ ಪ್ರಾಣಾರ್ಪಣೆ ಮಾಡಲೂ ಸಿದ್ಧರಿರುವ ಸ್ವಯಂ ಸೇವಕ ತಂಡಗಳು ಸಿದ್ಧವಾಗಬೇಕು. ಪ್ರಾಮಾಣಿಕವಾಗಿ, ಆತ್ಮಸಾಕ್ಷಿಯಾಗಿ ಮತೀಯ ಸೌಹಾರ್ದ, ಐಕ್ಯತೆ ಇವುಗಳಲ್ಲಿ ಪ್ರಮುಖರಿಗೂ ಅವರ ಅನುಚರರಿಗೂ ವಿಶ್ವಾಸವಿಲ್ಲದ, ಶಾಂತಿ ಮೆರವಣಿಗೆಗಳು ಕೇವಲ ಅರ್ಥಹೀನ, ಸತ್ವಹೀನ ಪ್ರದರ್ಶನಗಳಾಗುತ್ತವೆ. ಅಹಿಂಸೆಗಾಗಿ ಪ್ರಾಣಾಪಾರ್ಪಣೆ ಮಾಡಲು ಸಿದ್ಧವಿರುವ ಇಂಥ ಸ್ವಯಂಸೇವಕ ದಳ ಕಾರ್ಯೋನ್ಮುಖವಾದಲ್ಲಿ ಐಕ್ಯತೆ ಮತ್ತು ಶಾಂತಿ ಮೂಡಲು ತಾನಾಗಿ ಪ್ರಾರಂಭಿಸುತ್ತದೆ. ಆಗ ಕಲ್ಕತ್ತ ನಗರದಿಂದ ಸಕಲ ಪೊಲೀಸ್ ದಳವನ್ನು ಹಿಂತೆಗೆಯಬಹುದು. ತತ್ಪರಿಣಾಮ ಇಡೀ ಕಲ್ಕತ್ತ ನಗರ ರಕ್ತದಲ್ಲಿ ತೇಲಾಡಿದರೂ ನಾನು ಗಾಬರಿಯಾಗಲಾರೆ, ದುಃಖಪಡಲಾರೆ. ಕಾರಣ, ನಿರಪರಾಧಿಗಳು ಮನಃಪೂರ್ವಕ ನೀಡಿದ ಬಲಿದಾನ ನಿಷ್ಪ್ರಯೋಜಕವಾಗದು. ಇಂಥ ಸನ್ನಿವೇಶದಲ್ಲಿ ಏನು ಮಾಡಬೇಕೆಂಬುದನ್ನು ನಾ ಬಲ್ಲೆ. ನೀವು, ನಾವು ಬರಿಗಾಲಿನಲ್ಲಿ ಜ್ವಾಲೆಯ ಮಧ್ಯೆ ನಿರ್ಭಯವಾಗಿ ಪ್ರವೇಶಿಸಬೇಕು. ಅದರಿಂದ ಶಾಂತಿಯಾದರೂ ನೆಲಸಬೇಕು, ಇಲ್ಲವೇ ನಾವು ಭಸ್ಮವಾಗಿ ಹೋಗಬೇಕು. ಇದು ನಿಜವಾದ ಶಾಂತಿ ಪ್ರಯತ್ನದ ಮಾರ್ಗ. ಶಾಂತಿ ಸಂದೇಶದ ಪ್ರಯತ್ನ ಅರೆಮನಸ್ಸಿನ, ಹಾಲು-ನೀರು ಬೆರಕೆಯ ಪ್ರಯತ್ನವಲ್ಲ. ಈ ಧಾಟಿಯಲ್ಲಿ ಮಹಾತ್ಮರು ತಮ್ಮ ಮನದೋಟ ಮತ್ತು ಕಾರ್ಯವಿಧಾನ ಶರತ್ ಬೋಸರಲ್ಲಿ ತೋಡಿಕೊಂಡರು.

ತಂಡತಂಡವಾಗಿ ಬರುತ್ತಿದ್ದ ಪ್ರಮುಖರೊಡನೆ ಮಾತನಾಡಿ ಮಹಾತ್ಮರು ಸುಸ್ತಾಗುತ್ತಿದ್ದರು. ಸುಭಾಷ್ ಬೋಸರ ಸಹೋದರ, ಡಾಕ್ಟರ್ ಸುನೀಲ್ ಬೋಸರು ಬಂದು ಬಹಳ ಮಾತನಾಡಿ ಆಯಾಸ ಮಾಡಿಕೊಳ್ಳಬೇಡಿ ಎಂದರು. ಯಾವ ಉದ್ದೇಶಕ್ಕಾಗಿ ನಿರಶನ ಪ್ರಾರಂಭಿಸಿರುವೆನೋ ಆ ಉದ್ದೇಶಕ್ಕಾಗಿ ಮಾತ

ನಾಡದೆ ಇರಲಾರೆ. ಈ ಪ್ರಯತ್ನದಲ್ಲಿ ಪ್ರಾಣ ಅಳಿದು ಹೋದರೂ ಸಂತೋಷವೇ ಎಂದರು. ಮಾತನಾಡಿ, ಮಾತನಾಡಿ ದಣಿದು ತಲೆತಿರುಗಿ ಹಾಸಿಗೆ ಹಿಡಿದರು.

ಹಿಂದೂಗಳು ಈಗ ತಿರುಗಿ ಬಿದ್ದಾಗ ಉಪವಾಸ ಕೈಗೊಂಡಿರುವಿರಿ. ಮುಸಲ್ಮಾನರು ಹಿಂದೂಗಳನ್ನು ಕೊಚ್ಚಿ ಹಾಕುತ್ತಿದ್ದಾಗ ನೀವು ಉಪವಾಸ ಮಾಡಲಿಲ್ಲ. ಈಗ ಮಾಡುತ್ತಿರುವುದರಿಂದ ನೀವು ಹಿಂದೂಗಳ ಶತ್ರು, ಮುಸಲ್ಮಾನರ ಮಿತ್ರ, ಈ ಭಾವನೆ ಹಿಂದೂಗಳಲ್ಲಿ ಬೆಳೆದಿದೆ. ಇದು ತಪ್ಪು ಭಾವನೆ ಎಂದು ನಾ ಬಲ್ಲೆ. ನನ್ನ ಸರ್ಕಾರದ ವಿರುದ್ಧ ತಾವು ಉಪವಾಸ ಪ್ರಾರಂಭಿಸಿದ್ದರೆ ನನ್ನ ಆಕ್ಷೇಪಣೆ ಏನೂ ಇರುತ್ತಿರಲಿಲ್ಲ. ಈ ರೀತಿಯಲ್ಲಿ ಮುಖ್ಯಮಂತ್ರಿ ಪ್ರಫುಲ್ಲ ಘೋಷರು ಹೇಳಿದರು.

ಹಿಂದೂ ಮಹಾಸಭೆಯ ನೇತಾರ ಶ್ಯಾಮಪ್ರಸಾದ ಮುಖರ್ಜಿ, ಮತ್ತು ಮುಸಲ್ಮಾನರ ನಾಯಕ ಸುಹ್ರಾವರ್ದಿ ಬಂದರು. ಹಿಂದೂ ಮಹಾಸಭಾ ಮತ್ತು ಮುಸ್ಲಿಂಲೀಗಿನ ಸ್ವಯಂ ಸೇವಕ ದಳಗಳು ಜಂಟಿಯಾಗಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು.

ತಾನು ಉಪವಾಸ ಕೈಗೊಂಡಿರುವುದು ಒಂದು ಕೋಮಿನ ವಿರುದ್ಧವಲ್ಲ. ಉಭಯ ಕೋಮುಗಳ ದೋಷಗಳ ವಿರುದ್ಧ ಮತ್ತು ಉಭಯತ್ರರಲ್ಲೂ ಸೌಹಾರ್ದ ನೆಲಸಲೆಂಬುದೇ ಉಪವಾಸದ ಉದ್ದೇಶವೆಂದು ಸ್ಪಷ್ಟಪಡಿಸಿದರು.

ನಿರಶನ ಕೈ ಗೊಂಡಿರುವಾಗಲೇ ನೀವು ಮೃತರಾದರೆ, ಪರಿಣಾಮ ಇಡೀ ದೇಶ ಕೋಮುವಾರು ದ್ವೇಷದ ಕಿಚ್ಚಿನಲ್ಲಿ ಬೆಂದು ಹೋಗಬಹುದಲ್ಲವೇ ? ಎಂದು ಒಬ್ಬರು ಪ್ರಶ್ನಿಸಿದರು.

"ಇದು ಸಾಧ್ಯ. ಆದರೆ ಈ ದುರಂತ ಸಂಭವಿಸುವ ಮೊದಲೇ ಪರಮಾತ್ಮನ ಸಾನ್ನಿಧ್ಯಕ್ಕೆ ನಾನು ಹೊರಟು ಹೋಗಿರುವೆ''.

ತಮ್ಮ ಮತ್ತು ಇತರರ ಪ್ರಯತ್ನದಿಂದ ಈಗ ಶಾಂತಿ ಮೂಡಬಹುದು. ಆದರೆ ತಾವು ಪಾರಣೆ ಮಾಡಿದ ನಂತರ ಮತ್ತೆ ಹಿಂಸಾಕಾಂಡ ತಲೆದೋರಬಹುದು.

"ಅಂಥ ಸನ್ನಿವೇಶದಲ್ಲಿ ಬೇಷರತ್ ಆಮರಣಾಂತರ ಉಪವಾಸ ನಾನು ಕೈಗೊಳ್ಳುವೆ. ತದನಂತರ ಶಾಂತಿ ಸ್ಥಾಪಿತವಾದರೂ ಉಪವಾಸ ನಿಲ್ಲದು. ಈ

"ಹಿಮಾಲಯಕ್ಕೆ ಹೋಗುವಂತೆ ಹೇಳಲು ನೀವ್ಯಾರು. ನೀವೆಲ್ಲ ಅಲ್ಲಿಗೆ ಹೋದರೆ, ನಿಮ್ಮ ಸೇವೆಗಾಗಿ ನಿಮ್ಮ ಹಿಂದೆಯೇ ನಾನೂ ಬರುವೆ. ನಾನು ಭಗವಂತನ ಅಧೀನ. ಅವನ ಆಜ್ಞಾಧಾರಕ. ನನ್ನ ಅಂತರ್ವಾಣಿ ಹೇಳಿದಂತೆ ನಾನು ನಡೆದುಕೊಳ್ಳುವೆ".

"ನೀವು ಹಿಮಾಲಯಕ್ಕೆ ಹೋಗುವಂತೆ ಭಗವಂತ ನಮ್ಮ ಮೂಲಕ ನಿಮಗೆ ತಿಳಿಸುತ್ತಿದ್ದಾನೆ".

ಒಬ್ಬ ನೊಂದವ ಹೇಳಿದ, "ನೀವು ಹಿಮಾಲಯಕ್ಕೆ ಹೋಗಬೇಕೆಂದು ನನ್ನ ಅಂತರ್ವಾಣಿ ನನಗೆ ತಿಳಿಸುತ್ತಿದೆ".

ಗಾಂಧಿಯವರ ವಾಕ್ಯಗಳನ್ನೇ ಅವರು ತಿರುಗಿಸಿ ಕೊಟ್ಟರು. ನಿಮ್ಮ ದುಃಖ ಕ್ಕಿಂತ ನನ್ನ ದುಃಖ ಕಡಮೆ ಇಲ್ಲ. ಹೀಗೆ ತಮ್ಮ ದುಃಖ ತೋಡಿಕೊಂಡು ನೊಂದ ವರನ್ನು ಸಮಾಧಾನಪಡಿಸಲು ಪ್ರಯತ್ನಿಸಿದರು.

ಗ್ವಾಲಿಯರ್ ಸಂಸ್ಥಾನದ ನಿವೃತ್ತ ದಿವಾನ್ ಬೆಂಗಳೂರಿನ ಎಂ. ಎ. ಶ್ರೀನಿವಾಸನ್ ಅಂದು ಸಂಜೆ ಗಾಂಧಿಯವರನ್ನು ಸಂದರ್ಶಿಸಿದಾಗ ನಡೆದ ವಿಷಯ ಅವರಿಗೆ ತಿಳಿಸಿದರು. ಪಾಪ, ಅವರೇನು ಮಾಡಿಯಾರು. ನಿಮ್ಮ ಮನೆಗೆ ಬೆಂಕಿ ಇಟ್ಟು, ಲೂಟಿ ಮಾಡಿ, ನಿಮ್ಮ ಮುಂದೆಯೇ ನಿಮ್ಮ ಸ್ತ್ರೀಯರ ಮಾನಭಂಗ ಮಾಡಿ, ಕೈಗೆ ಸಿಕ್ಕಿದವರನ್ನು ಕೊಂದು ಘಾಸಿ ಮಾಡಿದರೆ, ನಿಮಗೆ ಕೋಪಬಾರದೆ? ತಾಳ್ಮೆ ಕೆಡದೆ? ಕೋಪ ಪರವಶರಾಗಿ ಈ ಮಾತುಗಳನ್ನು ಅವರು ಆಡಿದ್ದಾರೆ. ಅವರ ಕಷ್ಟ ಸಂಕಷ್ಟಗಳಿಗೆ ಕಾರಣ ನಾನೇ ಎಂದು ತಿಳಿಸಿದ್ದಾರೆ. ಅವರಲ್ಲಿ ನನಗೆ ಪೂರ್ಣ ಸಹಾನುಭೂತಿ, ಕನಿಕರ. ಹೀಗೆ ಉದ್ವೇಗವಿಲ್ಲದೆ ಸಾವಧಾನದಿಂದ ತಿಳಿಸಿದರು. ಸಿಖ್ಖರ ನಾಯಕ ಮಾಸ್ಟರ್ ತಾರಾಸಿಂಗರೂ, ನೀವು ರಾಜಕೀಯದಿಂದ ನಿವೃತ್ತರಾಗಿ ಹಿಮಾಲಯಕೆ ತಪಸ್ಸು ಮಾಡಲು ತೆರಳಿ ಎಂದು ಪತ್ರ ಬರೆದು ಕಳುಹಿಸಿದ್ದರು.

ಜನವರಿ 30, ಗಾಂಧೀಜಿ ಬೆಳಿಗ್ಗೆ 3-30 ಗಂಟೆಗೆ ಎದ್ದರು. ಪ್ರಾರ್ಥನೆ ಮುಗಿಸಿದರು. ಕಾಂಗ್ರೆಸ್ಸಿನ ಅಂಗರಚನೆ ಬರೆದುಕೊಡಲು ಹಿಂದಿನ ದಿನದಿಂದ ಕರಡು ಪ್ರತಿ ಅವರು ಸಿದ್ಧಪಡಿಸುತ್ತಿದ್ದರು. ಇನ್ನೂ ಮುಗಿಯದಿದ್ದ ಕರಡು ಪ್ರತಿ ತೆಗೆದುಕೊಂಡು, ಮತ್ತೆ ಬರೆಯ ತೊಡಗಿದರು. 4-45 ಗಂಟೆಗೆ ಜೇನುತುಪ್ಪ, ನಿಂಬೇಹಣ್ಣಿನ ರಸ ಹಿಂಡಿದ, ಬೆಚ್ಚಗಿನ ನೀರು ಸೇವಿಸಿದರು. ಹಿಂದಿನ ಉಪವಾಸದಿಂದ ಅವರು ಇನ್ನೂ ನಿತ್ರಾಣರಾಗಿದ್ದರು. ಆದ್ದರಿಂದ ಹಾಗೆಯೇ ಮಲಗಿದರು.

ಅಮೇರಿಕಾಗೆ ಭಾರತದ ರಾಯಭಾರಿಯಾಗಿ ನೇಮಿತರಾಗಿದ್ದ ಆರ್. ಕೆ. ನೆಹರು, ಪತ್ನಿ ರಾಜೇಶ್ವರಿ ನೆಹರು ಸಮೇತ ಅಂದು ಅಮೇರಿಕಾಗೆ ತೆರಳಲಿದ್ದರು. ಹಿಂದಿನ ಸಂಜೆ ಬಾಪೂಜಿಯವರನ್ನು ಭೇಟಿಯಾಗಿ, 30 ನೇ ತಾರೀಖು ಬೆಳಿಗ್ಗೆ 5 ಗಂಟೆಗೆ ಅವರನ್ನು ಸಂದರ್ಶಿಸಲು ಗೊತ್ತು ಮಾಡಿಕೊಂಡಿದ್ದರು. 5 ಗಂಟೆಗೆ ಸರಿಯಾಗಿ ರಾಜೇಶ್ವರಿ ಬಂದಳು. ಮಲಗಿದ್ದರೆ ತನ್ನನ್ನು ಸಂಕೋಚವಿಲ್ಲದೆ ಎಬ್ಬಿಸುವಂತೆ ಬಾಪೂಜಿ ತಿಳಿಸಿದ್ದರು. ಗಾಂಧೀಜಿ ಮಲಗಿದ್ದ ಕೋಣೆ ರಾಜೇಶ್ವರಿ ಪ್ರವೇಶಿಸಿದಳು. ಕೈಕಾಲು ಮುದುಡಿಕೊಂಡು, ಹಚ್ಚಡ ಹೊದ್ದು ಯಾರೋ ಮಲಗಿದ್ದುದು ಕಾಣಿಸಿತು. ಯಾವುದೋ ಮಗು ಮಲಗಿದ್ದಂತಿದೆ. ಇರಲಿ, ಹತ್ತಿರ ಹೋಗಿ ನೋಡೋಣ ಎಂದು ಸಮೀಪಕ್ಕೆ ಬಂದು ನೋಡಿದಳು. ಮುಖ ಕಾಣಿಸುತ್ತಿತ್ತು. ಅವರೇ ಜನ ಕೋಟಿಯ ಹೃದಯದಲ್ಲಿ ಮನೆಮಾಡಿ ಕೊಂಡಿದ್ದ ಪರಮ ಪೂಜ್ಯ ಮಹಾತ್ಮ ಗಾಂಧಿ. ನಿಷ್ಕಪಟ ಮಗುವಿನಂತೆ ಮಲಗಿದ್ದ ಇವರನ್ನು ಹೇಗೆ ಎಬ್ಬಿಸುವುದು ಎಂದು ಮನಸ್ಸು ಅಳುಕಿತು. ನೋಡುತ್ತಿದ್ದಂತೆಯೇ, ಗಾಂಧೀಜಿ ತಾವಾಗಿಯೇ ಎದ್ದರು. "ಬಂದು ಬಹಳ ವೇಳೆ ಆಯಿತೆ ? ನನ್ನನ್ನು ಎಬ್ಬಿಸಬಾರದಾಗಿತ್ತೆ" ಎಂದು ಹೇಳುತ್ತಾ ಎದ್ದರು. ಐದು ನಿಮಿಷದಲ್ಲಿ ಬರುವೆ ಎನ್ನುತ್ತಾ, ಒಳಗೆ ಹೋಗಿ, ಮುಖ ತೊಳೆದು, ಬಾಯಿ ಮುಕ್ಕಳಿಸಿ, ಐದು ನಿಮಿಷಗಳಲ್ಲಿಯೇ ಬಂದರು. ಹಾಸಿಗೆಯ ಮೇಲೆ ಕುಳಿತು ರಾಜಿಯನ್ನು ಹತ್ತಿರ ಬರುವಂತೆ ಕರೆದರು. ರಾಜಿ ಹತ್ತಿರ ಹೋಗಿ ಕುಳಿತಳು. ನನ್ನನ್ನು ನೋಡಬಯಸಿದ ನಿನ್ನ ಅಭಿಲಾಷೆಯ ತೀವ್ರತೆ ಪರೀಕ್ಷಿಸಲು ಬೆಳಿಗ್ಗೆ 3ಗಂಟೆಗೆ ಬರುವಂತೆ ನಿನಗೆ ಮೊದಲು ಹೇಳಿದೆ. ನೀನೂ ಒಪ್ಪಿದೆ. ನಿನ್ನ ಒಪ್ಪಿಗೆಯೇ ನಿನ್ನ ಉತ್ಕಟತೆಯ ಸಾಕ್ಷಿ ಎಂದು ಅರಿತು, 5 ಗಂಟೆಗೆ ಬರುವಂತೆ ವೇಳೆ ಮಾರ್ಪಡಿಸಿದೆ. ನೀನು ಇಂದು ಪ್ರಮಾಣ ಮಾಡಲಿರುವೆ ಅಲ್ಲವೆ ? ಚಳಿ, ನಿನಗೆ ನೆಗಡಿ ಆದೀತು, ಎಂದು ಹೇಳುತ್ತಾ, ತಾನು ಹೊದ್ದಿದ್ದ ಖಾದಿ ಶಾಲನ್ನು ಅವಳಿಗೂ ಹೊದಿಸಿದರು. ಅಷ್ಟು ವಾತ್ಸಲ್ಯ ರಾಜಿಯ ಮೇಲೆ. ಈ ರಾಣಿಗೆ, ಈ ಮುದುಕನಿಂದ ಏನಾಗ ಬೇಕಾಗಿದೆ ? ಏನು ಕೇಳಲು ಬಂದಿರುವೆ. ಸಂಕೋಚ ಪಡದೆ ಏನು ಬೇಕಾದರೂ ಕೇಳು ಎಂದು ಪ್ರೋತ್ಸಾಹಿಸಿದರು.

ಪಾಕಿಸ್ತಾನದ ಸ್ಥಾಪನೆಗಾಗಿ ನಡೆದ ಘೋರ ಅಮಾನುಷ ಕೃತ್ಯಗಳನ್ನು ರಾಜಿ ಕಣ್ಣಾರೆ ನೋಡಿ ಅನುಭವಿಸಿದ್ದಳು. ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಅತ್ಯಾಚಾರ ಅವಳ ಮನಸ್ಸಿಗೆ ಅಪಾರ ನೋವು ಮಾಡಿತ್ತು. ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಿಗೆ ಹೋದಾಗ, ಈ ಹತ್ಯಾಕಾಂಡದ ವಿಚಾರ ಅಲ್ಲಿಯ ಜನ ಕೇಳಿಯಾರು. ಈ ಪ್ರಶ್ನೆಗಳಿಗೆ ಏನೆಂದು ಉತ್ತರ ಕೊಡಲಿ. ನನಗೆ ದಾರಿ ಕಾಣದಾಗಿದೆ ಎಂದಳು. ರಾಯಭಾರಿಯ ಪತ್ನಿ ರಾಜೇಶ್ವರಿ ನೆಹರು.

ಗಾಂಧಿಯವರ ಮನಸ್ಸು ದುಃಖ ಭರಿತವಾಯಿತು. ಅವರ ಮುಖ ಛಾಯೆ ಇದನ್ನು ಸೂಚಿಸುತ್ತಿತ್ತು. ಕ್ಷಣಕಾಲ ಚಿಂತಾಕ್ರಾಂತರಾದರು. ಕೋಣೆಯಲ್ಲಿ ಬೇರೆ ಯಾರೂ ಇರಲಿಲ್ಲ. ಎಲ್ಲವೂ ನೀರವ, ನಿಶ್ಶಬ್ದ. ಎರಡು ಹೃದಯಗಳೂ ದುಃಖ ತಪ್ತವಾಗಿ ಏಕೋ ಭಾವದಿಂದ ಬಡಿದುಕೊಳ್ಳುತ್ತಿದ್ದುವು. ಸೊಂಟಕ್ಕೆ ಕಟ್ಟಿದ್ದ ಗಾಂಧಿಯವರ ಸುಪ್ರಸಿದ್ಧ ಗಡಿಯಾರ ತಾನೂ ಜತೆಗೂಡಿದಂತೆ 'ಟಿಕ್ ಟಕ್, ಟಿಕ್ ಟಕ್' ಎಂದು ಹೃದಯನಾದದೊಡನೆ ತಾಳ ಹಾಕುತ್ತಿತ್ತು.

ಚಣ ಕಾಲ ಕಳೆಯಿತು. "ನಿಜ ಹೇಳಲು ಹಿಂಜೆಗೆಯಬೇಡ. ನಾವೆಲ್ಲ ತಲೆ ತಗ್ಗಿಸಬೇಕಾದ ಘೋರ ಕೃತ್ಯಗಳು ಈ ಪುಣ್ಯ ಭೂಮಿಯಲ್ಲಿ ನಡೆದು ಹೋಗಿವೆ. ಅಲ್ಲಿಯ ಜನರಿಗೆ ಇದರ ಹಿನ್ನೆಲೆ ಮತ್ತು ಕಾರಣಗಳನ್ನು ನಿಸ್ಸಂಕೋಚವಾಗಿ ತಿಳಿಸು. ಭಾರತ ಬಲು ದೊಡ್ಡ ರಾಷ್ಟ್ರ. ನಾನಾ ಜಾತಿ ಮತಗಳಿಂದ ತುಂಬಿರುವ ಜನ ಜಂಗುಳಿಯ ಮಹಾ ಸಾಗರ. ಈ ಜನ ಕೋಟಿಯಲ್ಲಿ ಶೇಕಡ ಹತ್ತರಷ್ಟು ಜನವೂ ಹಿಂಸಾಖಾಂಡದಲ್ಲಿ ಭಾಗವಹಿಸಿರಲಿಲ್ಲ ಎಂದು ಅವರಿಗೆ ಮನದಟ್ಟುಮಾಡಿಕೊಡು. ಮರೆಮಾಚದ ಸತ್ಯಅವರ ಮೆಚ್ಚುಗೆಗೆ ಪಾತ್ರವಾಗದೆ ಇರಲಾರದು. ಸತ್ಯಕ್ಕೆ ಎತ್ತಲೂ ಭಯವಿಲ್ಲ.ಅಂಜಬೇಡ. ಅವರನ್ನು ಮೆಚ್ಚಿಸಲು ಅಸತ್ಯ ನುಡಿಯಬೇಡ". ಹೀಗೆ ಹೇಳಿದರು.

"ನೀನು ಈ ದೇಶದ ರಾಯಭಾರಿಯಾಗಿ ಹೋಗುತ್ತಿರುವೆ. ಈ ಭಾರತ ಪುರಾತನ ಸಂಸ್ಕೃತಿಯ ನೆಲವೀಡು. ನೀನು ಈ ಸಂಸ್ಕೃತಿಯ ಪ್ರತಿನಿಧಿ. ಹಾಗೂ ಈ ದೇಶ ಬಡ ದೇಶ ಎಂಬುದನ್ನು ಮರೆಯಬೇಡ. ಶ್ರೀಮಂತಿಕೆಯಲ್ಲಿ ಓಲಾಡಲು ಪ್ರಯತ್ನಿಸ ಬೇಡ. ಅಲ್ಲಿಯ ಬಿಳಿಯರ ಹಾಗೂ ಕಪ್ಪು ಜನರ ಸ್ನೇಹ ಬೆಳಸಿಕೋ" ಎಂದರು.

ಮಾತಿನಲ್ಲಿ ಒಂದು ಗಂಟೆಯ ಕಾಲ ಕಳೆದು ಹೋಯಿತು. ಇಬ್ಬರಿಗೂ ಕಾಲದ ಪರಿವೆಯೇ ಇರಲಿಲ್ಲ. ಇಷ್ಟು ಹೊತ್ತಿಗೆ ಮನೂ 16 ಔನ್ಸು ಕಿತ್ತಲೆ ಹಣ್ಣಿನರಸ ತೆಗೆದು ಕೊಂಡು ಬಂದಳು. ಆಗಲೇ ವೇಳೆಯ ಪರಿವೆ ಇವರಿಗೆ ಗೊತ್ತಾದುದು. ತಾನು ಒಂದು ಗಂಟೆ ಕಾಲ ಯಾರಿಗೂ ಕೊಟ್ಟಿದ್ದಿಲ್ಲ. ಈಗ ವೇಳೆಯಾಯಿತು. ಈಗ ಅಮೇರಿಕದ 'ಲೈಫ್' ಪತ್ರಿಕೆಯ ಚಿತ್ರಗ್ರಾಹಕ ಬರಲಿದ್ದಾನೆ. ನೀನು ಇಲ್ಲಿಯೇ ಇರು. ನಾವಿಬ್ಬರೂ ಜತೆಯಲ್ಲಿ ಚಿತ್ರ ತೆಗೆಸಿಕೊಳ್ಳೋಣ ಎಂದರು. ಕಾಲಕ್ಕೆ ಸರಿಯಾಗಿ ಫೋಟೋ ತೆಗೆಯಲು ಬಂದ. ಫೋಟೋ ತೆಗೆದುಕೊಂಡ.

ಇದರ ಪ್ರತಿ ನನಗೊಂದು ದಯಮಾಡಿಕೊಡಿ ಎಂದಳು ರಾಜಿ. "ಒಂದು ಗಂಟೆ ಕೊಟ್ಟದ್ದಾಯಿತು. ಚಿತ್ರಪಟವನ್ನು ಕೊಡು ಎಂದು ಕೇಳುತ್ತಿರುವೆ. ನಿನ್ನ ಸುಂಕ ಎಲ್ಲಿ. ಹರಿಜನ ನಿಧಿಗೆ ನಿನ್ನ ಕಾಣಿಕೆ ಕೊಡುವುದಿಲ್ಲವೇ" ಎಂದು ಹಾಸ್ಯ

ಮಾಡಿದರು. ಶ್ರೀಮಂತ ರಾಜೇಶ್ವರಿಯಲ್ಲಿ ಈ ಸಮಯದಲ್ಲಿ ಹಣವಿರಲಿಲ್ಲ. "ನಾನು ನಿಮಗೆ ಋಣಿ, ಹಣಕೊಡುವೆ" ಎಂದು ಬರೆದುಕೊಟ್ಟಳು. ಫೋಟೋ ತೆಗೆದು ಕೊಂಡಳು. ಅದರ ಮೇಲೆ ತಮ್ಮ ಸಹಿ ಹಾಕಿಕೊಟ್ಟರು ಗಾಂಧೀಜಿ.

ಅಂದೇ ರಾಜೇಶ್ವರಿ, ಪತಿ ಆರ್. ಕೆ. ನೆಹರು ಅವರೊಡನೆ ಬೊಂಬಾಯಿ ಸೇರಿ ದಳು. ಗಾಂಧೀಜಿ ಹುತಾತ್ಮರಾದ ಸುದ್ದಿ ಬೊಂಬಾಯಲ್ಲಿದ್ದಾಗ ಮುಟ್ಟಿತು. ವಿಮಾನದಲ್ಲಿ ಸ್ಥಾನ ಕಾದಿರಿಸಲಾಗಿತ್ತು. ಆದ್ದರಿಂದ ಅಂದೇ ದುಃಖತಪ್ತ ಹೃದಯ ದಿಂದ ಲಂಡನ್ನಿಗೆ ಇಬ್ಬರೂ ಪ್ರಯಾಣ ಬೆಳೆಸಿದರು. ಅಲ್ಲಿ ಡಾರ್ಚೆಸ್ಟರ್ ಹೋಟೆಲಿ ನಲ್ಲಿ ಒಂದು ರಾತ್ರಿ ಉಳಿಯ ಬೇಕಾಯಿತು. ಮೇಜಿನ ಮೇಲಿನ ಹಿಂದಿನ ದಿನ ತೆಗೆದಿದ್ದ ಭಾವಚಿತ್ರ ಇಟ್ಟಿದ್ದರು. ಬೆಳಗಾಗಿ ನೋಡಿದಾಗ ಫೋಟೋ ಮಾಯ ವಾಗಿತ್ತು.

1931 ರಲ್ಲಿ ಕಾನ್‌ಪುರದಲ್ಲಿ ಹಿಂದೂ–ಮುಸ್ಲಿಂ ದೊಂಬಿ ಸಂಭವಿಸಿದಾಗ, ಕಾಂಗ್ರೆಸ್ಸಿನ ಪ್ರಮುಖ ಗಣೇಶ ಶಂಕರ ವಿದ್ಯಾರ್ಥಿ ಗಲಭೆ ನಿಲ್ಲಿಸಲು ಮಧ್ಯೆ ನುಗ್ಗಿ ಆತ್ಮಾಹುತಿ ಮಾಡಿಕೊಂಡರು. ಇದಕ್ಕಾಗಿ ಗಾಂಧೀಜಿ ಸಂತಾಪ ವ್ಯಕ್ತಪಡಿಸಲಿಲ್ಲ. " ಇದು ನಿಜವಾದ ಅಹಿಂಸಾತ್ಮಕ ಮರಣ, ನನ್ನ ತಲೆಯಮೇಲೆ ಕೊಡಲಿಯ ಪೆಟ್ಟು ಬೀಳುತ್ತಿರುವಾಗ, ಶಾಂತಿಯಿಂದ ನಾನು ಮರಣವಪ್ಪಿದರೆ ನನ್ನದೂ ಪರಿಪೂರ್ಣ ಅಹಿಂಸೆಯಾದೀತು. ಇಂಥ ಸಾವಿನ ಕನಸು ಕಾಣುತ್ತಿರುವೆ ನಾನು. ಒಂದು ಕಡೆಯಿಂದ ಕಠಾರಿ ; ಮತ್ತೊಂದು ಕಡೆಯಿಂದ ಕೊಡಲಿ ; ಮಗದೊಂದು ಕಡೆಯಿಂದ ಲಾಠಿ ; ಎಲ್ಲ ಕಡೆಗಳಿಂದಲೂ ಒದೆತ ಮತ್ತು ಬೈಗಳು. ಇವುಗಳ ನಡುವೆ ಅಹಿಂಸೆ ಮತ್ತು ಶಾಂತಿಯಿಂದ ಉಳಿದು, ಇದೇ ರೀತಿಯಲ್ಲಿ ಉಳಿಯುವಂತೆ ಇತರರಿಗೂ ತಿಳಿಸುತ್ತ, ನಗುಮೊಗದಿಂದ ಪ್ರಾಣಾರ್ಪಣೆ ಮಾಡಿದರೆ ಮಾತ್ರ, ನನ್ನ ಅಹಿಂಸೆ ಪರಿ ಪೂರ್ಣವೂ ಶಾಂತಿಯುತವೂ ಆಗಿದ್ದೀತು. ಇಂಥ ಅವಕಾಶಕ್ಕಾಗಿ ಹಾತೊರೆ ಯುತ್ತಿರುವೆ. ಕಾಂಗ್ರೆಸ್ಸಿಗರೂ ಇಂಥ ಅವಕಾಶಕ್ಕಾಗಿ ತವಕಪಡುತ್ತಿರಬೇಕಾಗಿ ಆಶಿಸುವೆ. ಗಣೇಶ ಶಂಕರ ವಿದ್ಯಾರ್ಥಿಯ ಸಾವು ನಿರುಪಯೋಗಿ ಆಗಿದೆಯೇ? ನಾನರಿಯೆ. ಅವರ ಉತ್ಸಾಹ ನನಗೂ ಸ್ಫೂರ್ತಿದಾಯಕವಾಗಿದೆ. ಅವರ ತ್ಯಾಗಕ್ಕಾಗಿ ನನಗೆ ಅಸೂಯೆ. ಇಂಥ ಗಣೇಶ ಶಂಕರರು ಹುಟ್ಟದಿರುವುದು ಎಷ್ಟು ದುಃಖಕರ. ತೆರನಾದ ಸ್ಥಾನ ತುಂಬಲು ಮತ್ತೊಬ್ಬರು ಬರಲಿಲ್ಲ ". ಎಂಥ ಅಪೂರ್ವ ಅಸೂಯೆ; ಎಂಥ ಆಸೆ.

ಕಲ್ಕತ್ತ ಉಪವಾಸದಿಂದ ಗಾಂಧಿಯವರ ಮೂತ್ರಕೋಶ ತೊಂದರೆ ಕೊಡು ತ್ತಿತ್ತು. ಆದರೆ ತಮ್ಮ ಇಂದ್ರಿಯ ನಿಗ್ರಹ ಮತ್ತು ಆತ್ಮ ಶಕ್ತಿಯ ಬಲದಿಂದ

ಔಷಧದ ಸಹಾಯವಿಲ್ಲದೆ ದೋಷ ಸರಿಪಡಿಸಿಕೊಂಡಿದ್ದರು. ನಿದ್ದೆಯ ಮೇಲೆ ತನ್ನ ಹತೋಟಿ ತಪ್ಪಿದರೆ ತನ್ನ ಕಾಲ ಮುಗಿದಂತೆ. ದೇಹ ನಶಿಸುತ್ತಿರುವ ಚಿಹ್ನೆ ಮಾತ್ರ ವಲ್ಲ ಇದು, ಆತ್ಮ ಶಕ್ತಿಯೂ ಕುಂದುತ್ತಿರುವ ಚಿಹ್ನೆ ಇದು, ಎಂದು ಗಾಂಧೀಜಿ ಹೇಳು ತ್ತಿದ್ದರು. ಆದರೂ ಕೆಮ್ಮು ಅವರನ್ನು ಆಗಾಗ ತೊಂದರೆ ಮಾಡುತ್ತಿತ್ತು. ಪೆನ್ಸಿಲಿನ್ ಪೆಪ್ಪರ್‌ಮೆಂಟ್ ಸೇವಿಸುವಂತೆ ಅವರಿಗೆ ವೈದ್ಯರು ತಿಳಿಸಿದ್ದರು. ಆದರೆ ರಾಮನಾಮ ಸಕಲ ರೋಗಗಳಿಗೂ ಮದ್ದು ಎಂದು ದೃಢವಾಗಿ ನಂಬಿದ್ದ ಅವರು ಔಷಧಿ ಸೇವಿಸಲು ನಿರಾಕರಿಸಿದ್ದರು. ತನ್ನ ಮುಖದ ಮೇಲೆ ಒಂದು ಗುಳ್ಳೆ ಎದ್ದರೂ ತನಗೆ ಶ್ರೀರಾಮ ನಲ್ಲಿ ಪೂರ್ಣ ಭಕ್ತಿ ವಿಶ್ವಾಸವಿರಲಿಲ್ಲವೆಂದು ಅರಿಯಬೇಕು. ಆದರೆ ಯಾರಾದರೂ ನನ್ನನ್ನು ಗುಂಡಿಟ್ಟು ಸುಟ್ಟರೆ, ನಾಲಿಗೆಯ ಮೇಲೆ ರಾಮನಾಮ ಸ್ಮರಿಸುತ್ತಾ, ಹತ್ಯಾಕಾರನ ಮೇಲೆ ಲೇಸೂ ಕುಪಿತನಾಗದೆ ಆಸು ನೀಗಿದರೆ ಆಗ ತಾನು ನಿಜವಾದ ದೈವ ಭಕ್ತನೆಂದು ಜಗತ್ತಿಗೆ ಸಾರಬೇಕೆಂದು ತಮ್ಮ ಸಹೋದ್ಯೋಗಿಗಳಿಗೆ ತಿಳಿಸಿದ್ದರು.

ಬೆಳಿಗ್ಗೆ ಪದ್ಧತಿಯಂತೆ ಅವರು ವ್ಯಾಯಾಮಕ್ಕಾಗಿ ನಡೆಯಲು ಹೋಗಲಿಲ್ಲ. ಕೋಣೆಯಲ್ಲೇ ಶತಪಥ ಹಾಕುತ್ತಿದ್ದರು. ಬೆಲ್ಲದ ಪಾಕದಲ್ಲಿ ಲವಂಗದ ಪುಡಿ ಬೆರಸಿಮಾಡಿದ ಗುಳಿಗೆಗಳನ್ನು ಕೆಮ್ಮು ನಿವಾರಿಸಲು ತೆಗೆದುಕೊಳ್ಳುವ ವಾಡಿಕೆ ಅವರಿಗೆ. ಮನೂ ಗುಳಿಗೆ ತಯಾರಿಸುತ್ತಿದ್ದಳು. ತಿರುಗಾಡಲು ನೀನು ಸಿದ್ಧ ಳಾಗಲಿಲ್ಲವೆಂದು ಅವಳನ್ನು ಕೀಡಿದರು. ನಾಳೆಗಾಗಿ ಈಗೇಕೆ ಸಿದ್ಧಪಡಿಸುತ್ತಿರುವೆ ? ರಾತ್ರಿಯೊಳಗಾಗಿ ಏನು ಆಗಲಿರುವುದೊ, ಅಲ್ಲಿಯವರೆಗೆ ನಾನು ಜೀವಂತ ನಾಗಿರುವೆನೋ ಇಲ್ಲವೋ, ಬಲ್ಲವರ್ಯಾರು ? ಸಂಜೆಯ ಮೇಲೆ ಜೀವಸಹಿತ ನಾನು ಉಳಿದಿದ್ದರೆ ಆಗ ಗುಳಿಗೆಗಳನ್ನು ನೀನು ತಯಾರಿಸಬಹುದು'' ಎಂದರು. ಅಷ್ಟ ರಲ್ಲೇ ಮರಣ ಸಂಭವಿಸುವುದು ಅವರಿಗೆ ಅರಿವಾದಂತೆ ಭಾಸವಾಗುತ್ತಿತ್ತು.

ಸ್ನಾನದಿಂದ ದೇಹ ಮತ್ತು ಮನಸ್ಸು ಪುಲಕಿತವಾಯಿತು. ಹರ್ಷಭರಿತ ರಾದರು. ಆಶ್ರಮದ ಕೃಶಾಂಗಿಯರನ್ನು ಕಂಡು ಗೇಲಿ ಮಾಡಿದರು. ತೂಕ ತೆಗೆದುಕೊಂಡಾಗ ದೇಹ 109 ಪೌಂಡು ತೂಗಿತು. 9–30 ಗಂಟೆಗೆ ಊಟ. 1-30ರವರೆಗೆ ಮೌಲಾನ ಆಜಾದ್ ಮತ್ತು ಇತರ ಪ್ರಮುಖರು ಬರುತ್ತಲೇ ಇದ್ದರು. ಮಾರನೆಯ ದಿನ ಸೇವಾಗ್ರಾಮಕ್ಕೆ ತೆರಳಿ ಫೆಬ್ರವರಿ 14ಕ್ಕೆ ದಿಲ್ಲಿಗೆ ಹಿಂತಿರುಗುವ ಉದ್ದೇಶ ತಿಳಿಸಿದರು. ಆದರೆ ನಾಳೆ, ನಾಡಿದ್ದು ಇಲ್ಲಿಂದ ಹೊರಡಲು ಸಾಧ್ಯ ವಾದೀತೋ ಇಲ್ಲವೋ ಹೇಳಲಾಗದು. ಎಲ್ಲ ದೈವೇಚ್ಛೆ ಎಂದರು. ಮತ್ತೆ ಸಂದ ರ್ಶನಕಾರರು ಒಬ್ಬರ ಹಿಂದೆ ಒಬ್ಬರಾಗಿ ಸಂಜೆ 4 ಗಂಟೆವರೆಗೂ ಬರುತ್ತಲೇ ಇದ್ದರು. ಅಷ್ಟು ಹೊತ್ತಿಗೆ ಸರ್ದಾರ್ ಪಟೇಲರು ಮಗಳೊಡನೆ ಬಂದರು. ಮೂವರೂ

ಮಹಾತ್ಮರು ತಂಗಿದ್ದ ಕೋಣೆಗೆ ಹೋದರು. ನೂಲುತ್ತ ಅವರೊಡನೆ ಮಾತನಾಡುತ್ತಲೇ ಇದ್ದರು. ನೆಹರು ಮತ್ತು ಪಟೇಲರಲ್ಲಿ ತಲೆದೋರಿದ್ದ ಭಿನ್ನತೆ ನಿವಾರಿಸುವುದು ಇದರ ಉದ್ದೇಶ. ಎಲ್ಲಿ ಯಾವ ಜಟಿಲ ಸಮಸ್ಯೆ ತಲೆದೋರಿದರೂ ಅದನ್ನು ಬಿಡಿಸಲು ಮಹಾತ್ಮರ ಮಡಲಿಗೆ ಹಾಕುವುದು ವಾಡಿಕೆಯಾಗಿ ಹೋಗಿತ್ತು. ಅವರಿತ್ತ ಸಲಹೆ ಶಿರಸಾವಹಿಸಿ ಸ್ವೀಕರಿಸಲಾಗುತ್ತಿತ್ತು. ಸಲಹೆ ಸರಿಯಲ್ಲವೆಂದು ಹೇಳುವ ಎದೆಗಾರಿಕೆ ಯಾರಿಗೂ ಇರಲಿಲ್ಲ. ವಿಚಾರ, ನಡೆ, ನುಡಿಯಲ್ಲಿ ಆದರ್ಶ ಪ್ರಜಾಪ್ರಭುತ್ವವಾದಿ. ಸಮಸ್ಯೆ ಬಗೆಹರಿಸುವುದರಲ್ಲಿ, ವಿರೋಧ ಪ್ರತಿಭಟನೆಗೆ ಎಡೆಗೊಡದ ಸರ್ವಾಧಿಕಾರಿ.

ಗಾಂಧೀಜಿ ಮತ್ತು ಪಟೇಲರು ಮಾತನಾಡುತ್ತಿದ್ದಂತೆ ಜವಹರಲಾಲ್ ಬಂದರು. ಕೆಲಸದ ಭಾರ ಮತ್ತು ಚಿಂತನೆಯಿಂದ ಸುಸ್ತಾಗಿದ್ದರು. ಮುಖ ಬಾಡಿತ್ತು. ಅವರ ಮೇಲೆ ದೂರು ಹೊರಿಸುತ್ತಿದ್ದ ಪಟೇಲರು, ಬಾಡಿದ ನೆಹರು ಮುಖ ನೋಡಿ, ಮರುಗಿ, ಅವರ ಮೇಲಿನ ಆರೋಪಣೆಯನ್ನು ಹಿಂತೆಗೆದುಕೊಂಡು, ಅವರಿಗೆ ಸರ್ವವಿಧದಲ್ಲೂ ಸಹಕಾರ ನೀಡುವ ಭರವಸೆ ಬಾಪುವಿಗೆ ತಾವಾಗಿ ಕೊಟ್ಟರು. ಸ್ವಲ್ಪ ಹೊತ್ತಿದ್ದು ನೆಹರು ವಿರಮಿಸಿದರು.

ಸಂಜೆ 4–30 ಗಂಟೆಗೆ ಬಾಪುವಿಗೆ ಅಬಾ ಊಟ ತಂದಳು. ಊಟ ಮಾಡುತ್ತ ಪಟೇಲರೊಡನೆ ಮಾತನಾಡುತ್ತಲೇ ಇದ್ದರು. ಪ್ರಾರ್ಥನೆಗೆ ವೇಳೆ ಆಯಿತು. ಹೊತ್ತಿಗೆ ಸರಿಯಾಗಿ ಕೆಲಸ ಮಾಡುವ ವಾಡಿಕೆ ಬಾಪೂಗೆ. ಏಕೆ ನನ್ನನ್ನು ಎಚ್ಚರಿಸಲಿಲ್ಲ, ಎಂದು ತನ್ನ ಮೇಲೆ ಕೋಪ ಮಾಡಬಹುದೆಂದು ಅಬಾ ನೆಲದ ಮೇಲಿದ್ದ ಬಾಪುವಿನ ಗಡಿಯಾರ ತೆಗೆದು ತೋರಿಸಿದಳು. ಆದರೆ ಬಾಪು ಅದನ್ನು ಗಮನಿಸಲಿಲ್ಲ. ಪಟೇಲರ ಮಗಳು ಮಣಿಬೆನ್ ತಂದೆಯನ್ನು ಎಚ್ಚರಿಸಿದಳು. ತಡವಾಯಿತು ಎಂದು ಪ್ರಾರ್ಥನಾ ಸಭೆಗೆ ಹೊರಡಲು ಗಾಂಧೀಜಿ ಎದ್ದರು. ಅಬಾ ಮತ್ತು ಮನೂ ಇಬ್ಬರು ಮೊಮ್ಮಕ್ಕಳು ಉಭಯ ಪಾರ್ಶ್ವಗಳಲ್ಲಿ ಬಂದು ನಿಂತರು. ಅವರ ಭುಜದ ಮೇಲೆ ಕೈ ಹಾಕಿಕೊಂಡು, ಕೋಲೂರುತ್ತ, ಹಾಸ್ಯ ಮಾಡುತ್ತ ಹೊರಟರು. ಕಾಥಿವಾಡದಿಂದ ಇಬ್ಬರು ಕಾರ್ಯಕರ್ತರು ಭೇಟಿಗಾಗಿ ಬಂದಿದ್ದಾರೆಂದು ಕೆಲಸಗಾರನೊಬ್ಬ ತಿಳಿಸಿದ. "ಪ್ರಾರ್ಥನೆ ಮುಗಿದನಂತರ ನೋಡಲು ಬರಹೇಳು. ಜೀವಂತನಾಗಿದ್ದರೆ ನೋಡುವೆ" ಎಂದರು.

ಊಟಕ್ಕೆ ಒಂದು ಲೋಟ ಗಜರಿಗೆಡ್ಡೆ ಅಥವಾ ಕ್ಯಾರೆಟ್ ರಸ ಅಬಾ ಕೊಟ್ಟಿದ್ದಳು. "ದನದ ಆಹಾರ ನನಗೆ ಕೊಡುತ್ತಿರುವೆಯಲ್ಲವೇ" ಎಂದು ಗೇಲಿ ಮಾಡಿದರು. "ಕಸ್ತೂರಿಬಾ ಅದನ್ನು ಕುದುರೆ ಆಹಾರ ಎನ್ನುತ್ತಿದ್ದರು" ಎಂದಳು ಅಬಾ. "ಯಾರಿಗೂ ರುಚಿಸದ ಆಹಾರ ನಾನು ಸೇವಿಸುವುದು ಮಜಾ ಅಲ್ಲವೇ" ಎಂದರು ಬಾಪು.

ಆಬಾ—"ಬಾಪು, ನಿಮ್ಮಗಡಿಯಾರ ತುಂಬ ನೊಂದಿರಬೇಕು. ಅದರತ್ತ ದೃಷ್ಟಿ ಕೂಡ ನೀವು ಹಾಯಿಸರಲ್ಲ".

ಬಾಪು—"ವೇಳೆಯ ನಿಯಾಮಕರು ನೀವಿರುವಾಗ, ಗಡಿಯಾರ ನೋಡಲೇಕೆ?"

ಆಬಾ—"ಆದರೆ, ವೇಳೆ ನಿಯಾಮಪಕರತ್ತಲೂ ದೃಷ್ಟಿ ಬೀರಲಿಲ್ಲವಲ್ಲ."

ಹೀಗೆ ಹಾಸ್ಯಚಟಾಕಿ ಹಾರಿಸುತ್ತ, ಐದು ಸಣ್ಣ ಮೆಟ್ಟಲೇರಿ ಸಭಾಂಗಣಕ್ಕೆ ಬಂದರು. ಇದು ಅವರ ಪದ್ಧತಿ. "ಹತ್ತು ನಿಮಿಷ ತಡವಾಯಿತು. ಕಾಲ ಮೀರುವುದನ್ನು ನಾನು ಸಹಿಸೆ. ಐದು ಗಂಟೆಗೆ ಸರಿಯಾಗಿ ಪ್ರಾರ್ಥನೆ ಪ್ರಾರಂಭಿಸಲು ಬಯಸುವೆ" ಎಂದರು. ಮಾತುಕಥೆ ಇಲ್ಲಿಗೆ ನಿಂತಿತು. ಪ್ರಾರ್ಥನಾ ಸಭೆಯ ಹತ್ತಿರಕ್ಕೆ ಬರುತ್ತಲೇ ಮಾತು ನಿಲ್ಲಿಸಬೇಕು ಇದು ಅವರ ನಿಯಮ. ಪ್ರಾರ್ಥನೆ ಅವರ ಮನಸ್ಸನ್ನು ಆವರಿಸಬೇಕು. ಅದರಲ್ಲಿ ತಲ್ಲೀನರಾಗಬೇಕು.

ಗಾಂಧೀಜಿ ಬರುತ್ತಲೇ ಜನ ತಾವಾಗಿ ದಾರಿ ಮಾಡಿಕೊಟ್ಟರು. ಮೊಮ್ಮಕ್ಕಳ ಭುಜದಿಂದ ಕೈಗಳನ್ನು ತೆಗೆದು ಎರಡು ಕೈ ಜೋಡಿಸಿ ನಮಸ್ಕರಿಸುತ್ತ ಅಡಿಯಿಟ್ಟರು. ಇಷ್ಟರಲ್ಲಿ ಗುಂಪಿನಲ್ಲಿ ದಾರಿ ಬಿಡಿಸಿಕೊಂಡು, ಬಾಪು ಅವರತ್ತ ಒಬ್ಬ ಯುವಕ ಆತುರವಾಗಿ ಬಂದ. ಪಾದ ಮುಟ್ಟಿ ಪ್ರಣಾಮ ಸಲ್ಲಿಸಲು ಬಂದಿರಬೇಕು. ಹೀಗೆ ಭಾವಿಸಿದಳು ಮನೂ. ಪಾದ ಮುಟ್ಟಿ ನಮಸ್ಕರಿಸುವುದು ಬಾಪೂಗೆ ಅಪ್ರಿಯವಾಗಿತ್ತು. ಆದ್ದರಿಂದ ಮನೂ, ಅವನನ್ನು ತಡೆದಳು. ನಾಥುರಾಂ ಗೋಡ್ಸೆ ಅವಳನ್ನು ರಭಸದಿಂದ ತಳ್ಳಿದ. ಮನೂ ಕೈಯಲ್ಲಿದ್ದ ನೋಟು ಪುಸ್ತಕ, ಜಪಮಾಲೆ ಮತ್ತು ಥೂಕುದಾಣಿ ಕೆಳಗೆ ಬಿತ್ತು. ಅವನ್ನು ಎತ್ತಿಕೊಳ್ಳಲು ಮನೂ ಬಾಗಿದಳು. ಅಷ್ಟರಲ್ಲಿ ಎರಡು ಅಡಿ ದೂರದಲ್ಲಿ ಮಹಾತ್ಮರ ಎದುರಿಗೆ ನಿಂತು, ಪಿಸ್ತೂಲು ತೆಗೆದು ಮೂರು ಗುಂಡು ಹಾರಿಸಿದ ಗೋಡ್ಸೆ.

ಮೊದಲ ಏಟಿಗೆ ಕಾಲಿನ ಚಲನೆ ನಿಂತಿತು. ಎರಡನೇ ಗುಂಡಿಗೆ ಎದೆಯಿಂದ ರಕ್ತ ಚಿಮ್ಮಿ, ಬಾಪುವಿನ ಮೇಲು ಹೊದಿಕೆಯನ್ನು ರಕ್ತಮಯ ಮಾಡಿತು. ಮುಖ ವಿವರ್ಣವಾಯಿತು. ಹಸ್ತಗಳು ಜಾರಿದುವು. "ಹೇರಾಂ," ಎನ್ನುತ್ತಾ ಕಡೆಯ ಉಸಿರೆಳೆದರು ಬಾಪು. ಮೂರನೆಯ ಗುಂಡೂ ಹಾರಿತು. ದೇಹ ನೆಲಕ್ಕೆ ನಿಧಾನವಾಗಿ ಉರುಳಿತು. ಕನ್ನಡಕ ಕೆಳಕ್ಕೆ ಬಿತ್ತು. ಚಪ್ಪಲಿಗಳು ಪಾದವನ್ನು ಧರಿಸಲಾರದೆ ಕಳಚಿಕೊಂಡವು.

ಪವಿತ್ರವಾದ ಮಹಾತ್ಮರ ದೇಹ, ಮೃತ ಶರೀರವಾಯಿತು. ಹೆಣ ಜನವರಿ 30, 1948 ಶುಕ್ರವಾರ ಸಂಜೆ 5-17 ಗಂಟೆಗೆ ವಿಶ್ವಶಾಂತಿಗೆ ಶ್ರಮಿಸುತ್ತಿದ್ದ ಮಹಾ ಮಹಿಮಾನ್ವಿತ ಮಹಾತ್ಮ ಇನ್ನಿಲ್ಲವಾದರು. ಅನಂತದಲ್ಲಿ ಲೀನರಾದರು.

ಸಾವನ್ನು ತಲೆದಿಂಬಾಗಿಟ್ಟುಗೊಂಡು ಮಲಗುವುದೇ ಮಹಾಜನಾಂಗ. ಮೃತ್ಯುವೆನ್ನೆದುರಿಸಬಲ್ಲವರು ಎಲ್ಲಾ ಭಯದಿಂದಲೂ ಮುಕ್ತರು.

ಮೃತ್ಯು ದೆವ್ವವಲ್ಲ; ಮೃತ್ಯು ಸನ್ಮಿತ್ರ. ಅವನು ಯಾತನೆಯಿಂದ ನಮ್ಮನ್ನು ಉದ್ಧಾರ ಮಾಡುತ್ತಾನೆ. ನಮಗೆ ಪ್ರತಿಯಾಗಿಯೇ ನಮಗೆ ಸಹಾಯ ಮಾಡುತ್ತಾನೆ; ಹೊಸ ಹೊಸ ಅವಕಾಶ ಕಲ್ಪಿಸಿ ಕೊಡುತ್ತಾನೆ. ಹೊಸ ಹೊಸ ಆಸೆಗಳನ್ನು ಹುಟ್ಟಿಸುತ್ತಾನೆ. ಮೃತ್ಯು ನಿದ್ರಾದೇವಿಯಂತೆ ಪ್ರಿಯವಾದ ಪುನಃ ಸ್ಥಾಪಕ.

ಜೀವನವೆಂದರೆ ಸ್ಮಶಾನದ ಮೇಲಿನ ಶಾಶ್ವತ ವಿಜಯ. ತುದಿಯೇ ಇಲ್ಲದ ಪ್ರಯೋಗಗಳ ಮಾಲೆ ಈ ಜೀವನ.

ಅನಂತದಲ್ಲಿ ಲೀನವಾಗುವುದೇ ಆತ್ಮ ದರ್ಶನ.

ಪ್ರಭಾವ

ಗಾಂಧೀ ಪಂಥದವರನ್ನು—ಈ ಪದವನ್ನು ಬಳಸಬಹುದಾದರೆ, ಅವರ ವಿಚಾರಧಾರೆ ಒಪ್ಪಿಕೊಂಡವರನ್ನು, ಖಾದಿ ಧಾರಿಗಳನ್ನು ಗಾಂಧಿಯವರ ಅಂಧ ಅನುಯಾಯಿಗಳು ಎಂದು ಹೇಳುವುದುಂಟು. ಕೆಲವೊಮ್ಮೆ ಗೌರವ ಭಾವದಿಂದ, ಕೆಲವೊಮ್ಮೆ ತಿರಸ್ಕಾರ ಭಾವದಿಂದ ಮೂದಲಿಸುವುದುಂಟು. ಇವರೆಲ್ಲ ಗಾಂಧಿಯವರ ತತ್ವಗಳನ್ನು, ಸಿದ್ಧಾಂತ ಗಳನ್ನು ಸಂಪೂರ್ಣವಾಗಿ ಅಂಗೀಕರಿಸಿದವರು ಎಂದು ಹೇಳುವಂತಿಲ್ಲ. ಆಡು ಮುಟ್ಟದ ಸೊಪ್ಪು ಇಲ್ಲ ಎನ್ನುವಂತೆ ಮಹಾತ್ಮರ ಗಮನಕ್ಕೆ, ಚಿಂತನೆಗೆ, ಒರೆಗಲ್ಲಿಗೆ ಸಿಗದ ವಿಷಯ ವಿಲ್ಲ. ತಮ್ಮ ಗಮನಕ್ಕೆ ಬರುತ್ತಿದ್ದ ಎಲ್ಲ ವಿಷಯಗಳಲ್ಲೂ ತಮ್ಮ ಅಭಿಪ್ರಾಯವನ್ನು ನಿಸ್ಸಂಕೋಚವಾಗಿ, ನಿರ್ಭಯವಾಗಿ ಪ್ರಕಟಿಸುತ್ತಿದ್ದರು. ಅವರ ಅಭಿಪ್ರಾಯ ದೋಷ ಪೂರಿತವಾಗಿದ್ದಲ್ಲಿ, ತಪ್ಪಾಗಿದ್ದಲ್ಲಿ ತಪ್ಪು ಒಪ್ಪಿಕೊಂಡು ತಿದ್ದಿಕೊಳ್ಳಲು ಹಿಂಜರಿಯು ತ್ತಿರಲಿಲ್ಲ. ಇದು ಅವರ ದೊಡ್ಡ ಗುಣ.

ಹುಟ್ಟಿನಿಂದ ಸಾಯುವವರೆಗೂ ಏಕೆ, ಸತ್ತನಂತರ ಶವಸಂಸ್ಕಾರದ ವಿಷಯ ದಲ್ಲೂ ಅವರ ಅಭಿಪ್ರಾಯಕ್ಕೆ ಸಿಲುಕದ ವಿಷಯ ಅಪರೂಪ. ಜನನದಿಂದ ಅಂತ್ಯದ ವರೆಗೆ, ಬೆಳಗಿನಿಂದ ರಾತ್ರಿಯವರೆಗೆ, ಎಲ್ಲ ಕ್ಷೇತ್ರಗಳಲ್ಲೂ ಜೀವನ ಹೇಗೆ ಸಾಗಬೇಕು ಎಂಬುದನ್ನು ತಮ್ಮ ಸ್ವಂತ ಬಾಳಿನಿಂದ, ತತ್ವಗಳಿಂದ ತೋರಿಕೊಟ್ಟರು.

ಕಾಲ ಈಗ ಬದಲಾಯಿಸಿರಬಹುದು. ಏನೇ ಆಗಲಿ, ಅವರ ಜೀವಿತ ಕಾಲದಲ್ಲಿ, ಅವರ ವ್ಯಕ್ತಿತ್ವಕ್ಕೆ, ಅವರ ಸಿದ್ಧಾಂತಗಳಿಗೆ ಮಾರು ಹೋದವರು ಅವರಂತೆ, ಅವರ ತತ್ವಗಳಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಸರಳ ಜೀವಿಗಳಾಗಬೇಕು, ಐಶ್ವರ್ಯಕ್ಕೆ, ಭೋಗಜೀವನಕ್ಕೆ ಶರಣಾಗಬಾರದು. ಕೈಲಾದ ಮಟ್ಟಿಗೆ ಇತರರ ಕಷ್ಟ ಸಂಕಟಗಳನ್ನು ನೀಗಿಸಲು ಪ್ರಯತ್ನಿಸಬೇಕು. ವಿಶ್ವದ ಮಾನವ ಕೋಟಿಯೆಲ್ಲ ಒಂದೇ ಕುಲ. ಸಕಲ ಚರಾಚರ ವಸ್ತುಗಳೂ ಭಗವಂತ ನಿರ್ಮಿತ. ಎಲ್ಲ ಜೀವ ರಾಶಿಗಳಲ್ಲೂ, ಪಶುಪಕ್ಷಿಗಳಲ್ಲೂ, ಗಿಡಮರಗಳಲ್ಲೂ ದಯೆ ತೋರಬೇಕು. ತ್ಯಾಗದಲ್ಲಿ ಸಿಗುವ ಸಂತೋಷ ಭೋಗದಲ್ಲಿ ಲಭಿಸದು. ಈ ಉದಾತ್ತ ಭಾವನೆ ಅವರಿಗೆ ಜನ್ಮ ವಿತ್ತ ಪುಣ್ಯ ಭಾರತದಲ್ಲಿ ಮಾತ್ರವಲ್ಲ ಪ್ರಪಂಚದ ನಾನಾಭಾಗಗಳಿಗೆ ಅಂಟು ಜಾಡ್ಯ ದಂತೆ ಹರಡಿತ್ತು. ವಿಜ್ಞಾನ ನಿಯಂತ್ರಣಕ್ಕೆ ಒಳಗಾದ ಮಹಾ ಮೇಧಾವಿಗಳೂ, ಚಿಂತಕರು ಅವರ ಸಿದ್ಧಾಂತಗಳಿಂದ ಪ್ರಭಾವಿತರಾಗದೆ ಇರಲಿಲ್ಲ. ನಿದರ್ಶನಗಳು ಅನೇಕ.

ಪ್ರಪಂಚದ ಎಲ್ಲ ವ್ಯಕ್ತಿಗಳೂ ಯಾವುದೇ ಒಂದು ಮತ, ಧರ್ಮ, ಸಿದ್ಧಾಂತ, ಗ್ರಂಥ, ಸಂಪ್ರದಾಯ, ಪದ್ಧತಿ, ಕಟ್ಟುಪಾಡು, ಜಾತಿ, ಸಂಘ, ಸಂಸ್ಥೆ, ವಿಚಾರಧಾರೆ ಮೊದಲಾದವುಗಳಿಂದ ಪ್ರಭಾವಿತರಾಗದೆ, ಬಂಧಿತರಾಗದೆ ಇಲ್ಲ. ಕ್ರೈಸ್ತ, ಇಸ್ಲಾಂ, ಬೌದ್ಧ, ಕನ್‌ಫ್ಯೂಷಿ, ಜೈನ, ಸಿಖ್, ಬಹಾವುಲ್ಲ, ಜರತುಷ್ಟ್ರ, ಹಿಂದೂ ಮೊದಲಾಗಿ ಯಾವುದೋ ಒಂದು ಧರ್ಮದ ಅನುಯಾಯಿ ಆಗಿರುತ್ತಾರೆ. ಸ್ವಬುದ್ಧಿ, ಸ್ವವಿಚಾರ ದಿಂದ ಈ ಮತಧರ್ಮಗಳನ್ನು ಅವರು ಸ್ವೀಕರಿಸದೆ ಇರಬಹುದು. ಆದರೆ ಹುಟ್ಟಿನಿಂದ ಅವರ ಪೂರ್ವಿಕರು ಸ್ವೀಕರಿಸಿದ ಮತಧರ್ಮ ತಿರಸ್ಕರಿಸುವ ಎದೆಗಾರಿಕೆ ಇಲ್ಲದೆ ಅವುಗಳ ಅನುಚರರಾಗಿರುತ್ತಾರೆ.

ಯಾವ ಮತಧರ್ಮದ ಆರಾಧಕನೇ ಆಗಿರಲಿ, ಎಲ್ಲ ಮತಧರ್ಮಗಳ ಸ್ಥಾಪಕ, ಸಾಮಾನ್ಯವಾಗಿ ಒಬ್ಬ ವ್ಯಕ್ತಿಯೇ ಆಗಿದ್ದ ಎನ್ನುವುದು ಗಮನಾರ್ಹ. ಅವರ ಹೆಸರನ್ನೇ ಅವಲಂಬಿಸಿವೆ ಈ ಮತಗಳು. ಅವರ ಚಿಂತನೆ, ಕಲ್ಪನೆ, ಜ್ಞಾನಾನುಭವ, ಅಂತ ರ್ಜ್ಯೋತಿ, ಅಶರೀರವಾಕ್ಕು ಇವುಗಳಿಂದ ಅವು ಜನ್ಮತಾಳಿದವು. ಯೇಸು, ಬುದ್ಧ, ಸಾಕ್ರಟೀಸ್, ಕನ್‌ಫ್ಯೂಷಿ, ಪೈಗಂಬರ್, ಮಹಾವೀರ, ಜಿನ, ಎಲ್ಲರೂ ವ್ಯಕ್ತಿಗಳೇ. ಅವರು ಮಹಾಜ್ಞಾನಿಗಳೂ, ಚಿಂತಕರೂ, ಅನುಭಾವಿಗಳೂ ಆಗಿದ್ದರು. ಆದಕಾರಣ ಪೂಜನೀಯರು ಎಂಬುದರಲ್ಲಿ ಸಂದೇಹವಿಲ್ಲ. ಈ ಮಹಾನ್ ವ್ಯಕ್ತಿಗಳ ಶ್ರೇಣಿಗೆ ಸೇರುತ್ತಾರೆ ಗಾಂಧೀಜಿ. ಅವರ ಅನುಯಾಯಿ ಎನಿಸಿಕೊಳ್ಳುವುದರಲ್ಲಿ ತಪ್ಪೇನು ? ಪ್ರತಿದಿನವೂ, ಆಯುಷ್ಯಪರ್ಯಂತ ಅವರ ತತ್ವಗಳನ್ನು ಆಚರಣೆಗೆ ತರಲು ಕಾಯಾ, ವಾಚಾ, ಮನಸಾ, ಬುದ್ಧಿಪೂರ್ವಕ ಪ್ರಯತ್ನಿಸುವವನು ಅವರ ನಿಜ ಅನುಚರನಾಗು ತ್ತಾನೆ. ಮಹಾತ್ಮರೇ ಹೇಳಿಕೊಂಡಿರುವಂತೆ ಅವರ ಸಿದ್ಧಾಂತಗಳೇನೂ ಹೊಸತಲ್ಲ. ಹಿಮಾಲಯದಷ್ಟೇ ಪುರಾತನವಾದುವು. ಜೀವನಾನುಭವದ ಜಲ್ಲಡಿಯಲ್ಲಿ ಶೋಧಿಸಿ ಬಂದುವು.

ಹಿಂದೂ ಧರ್ಮ ಎನಿಸಿಕೊಳ್ಳುವ ವೇದಧರ್ಮ, ಸನಾತನ ಧರ್ಮ, ಒಬ್ಬ ವ್ಯಕ್ತಿಯಿಂದ ಉದ್ಭೃತವಾದ ಧರ್ಮ ಅಲ್ಲ. ಅನೇಕ ಋಷಿಪುಂಗವರು, ಜ್ಞಾನಿಗಳು, ಚಿಂತಕರು, ಅನುಭಾವಿಗಳು ಇವರುಗಳ ಸಮ್ಯಗ್ ಅನುಭವದ ಸಾರವೇ ಸನಾತನ ಧರ್ಮ. ಶಾಶ್ವತವಾದ ತತ್ವಗಳನ್ನು ಬೋಧಿಸುವ ಧರ್ಮವೇ ಸನಾತನ ಧರ್ಮ. ಯಾವುದೇ ವ್ಯಕ್ತಿ, ಗ್ರಂಥಪ್ರಣೀತವಾಗಿಲ್ಲದೆ, ತಲೆಮಾರುಗಳಿಂದ ಇಳಿದು ಬಂದಿರು ವುದೇ ಇದರ ಗುಣವೂ ಹೌದು, ದೋಷವೂ ಆಗಬಹುದು. ಕಾಲಾನುಗುಣವಾಗಿ ಸನಾತನ ಧರ್ಮದ ವಿಶ್ಲೇಷಣೆಯಲ್ಲಿ ತೊಡಗಿ ಮಹಾ ಜ್ಞಾನಿಗಳು ತಮ್ಮ ತಮ್ಮ ವಿಚಾರ ವಿಮರ್ಶೆ ಚಿಂತನ ಇವುಗಳನ್ನು ಹರಡತೊಡಗಿದರು. ಇದರಿಂದಾಗಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತ ಮೊದಲಾದ ಪಂಥಗಳು ಹುಟ್ಟಿಕೊಂಡವು. ಆರ್ಯಸಮಾಜ,

ಬ್ರಹ್ಮ ಸಮಾಜ ಇವೂ ಸಹ ಸನಾತನ ಧರ್ಮದ ವಟವೃಕ್ಷದ ಕವಲುಗಳೇ. ಭಾರತ ದಲ್ಲಿ ಜನ್ಮ ತಾಳಿದ ಯಾವ ಮತ ಧರ್ಮವೇ ಆಗಲಿ, ಒಂದಲ್ಲ ಒಂದು ಬಗೆಯಲ್ಲಿ ಅವೆಲ್ಲವೂ ಸನಾತನ ಧರ್ಮದ ರೂಪುರೂಪಾಂತರಗಳೆಂದೇ ಹೇಳಬಹುದು.

ಗಾಂಧಿಯವರು ಕ್ರೈಸ್ತ ಧರ್ಮ ಗ್ರಂಥಗಳಿಂದಲೂ, ಧರ್ಮಬೋಧಕರಿಂದಲೂ ಬಹಳ ಪ್ರಭಾವಿತರಾದರೆಂದು ಹೇಳಲಾಗುತ್ತದೆ. ತಮ್ಮ ಆತ್ಮ ಕಥೆಯಲ್ಲಿ ಅವರೇ ಈ ರೀತಿ ಹೇಳಿಕೊಂಡಿರುತ್ತಾರೆ. ಬಾಲ್ಯದಲ್ಲಿ ರಾಮಾಯಣ ಮತ್ತು ಹರಿಶ್ಚಂದ್ರ, ಯುಧಿಷ್ಠರ ಮೊದಲಾದ ಪುರಾಣ ಪುಣ್ಯ ಕಥೆಗಳು ಅವರ ಮೇಲೆ ಪ್ರಭಾವ ಬೀರಿದುವು. ರಸ್ಕಿನ್, ಥೋರೋ, ಟಾಲಸ್ಟಾಯಿ, ಇವರ ಪುಸ್ತಕಗಳು ಇವರ ಜೀವನ ಕ್ರಮದ ಮೇಲೆ ತುಂಬ ಪರಿಣಾಮ ಮಾಡಿದುವು. ಸ್ವಧರ್ಮವನ್ನೇ ತಿಳಿಯದೆ ಅನ್ಯಧರ್ಮ ಗಳ ಅವಲಂಬಿ ಆಗುವುದು ಸರಿಯಲ್ಲವೆಂದು ಗ್ರಹಿಸಿ, ಸಂಸ್ಕೃತ ಭಾಷೆಯ ಅಭಾವ ದಿಂದ ಮೂಲ ಗ್ರಂಥಗಳನ್ನು ಓದಲು ಸಾಧ್ಯವಾಗದೆ ಭಗವದ್ಗೀತೆಯ ಅನುವಾದ ಇವುಗಳನ್ನು ಓದತೊಡಗಿದರು.

1,25,000 ಶ್ಲೋಕಗಳಿಂದ ಪರಿಪೂರ್ಣವಾಗಿರುವ ಮಹಾಭಾರತದಲ್ಲಿ ಅಡಕ ವಾಗಿಲ್ಲದ ವಿಷಯ ಪ್ರಪಂಚದಲ್ಲೇ ಇಲ್ಲ ಎಂದು ಹೇಳಲಾಗಿದೆ. ಈ ಮಹಾ ಗ್ರಂಥ ವನ್ನು ಓದಿ ಮನನ ಮಾಡಿಕೊಳ್ಳಲು ಇಡೀ ಮಾನವ ಜನ್ಮವೇ ಬೇಕು. ಗಾಂಧೀಜಿ ಈ ಮಹಾಗ್ರಂಥದ ಪಠಣದಲ್ಲಿ ಸ್ವಲ್ಪ ಕಾಲವನ್ನಾದರೂ ವಿನಿಯೋಗಿಸಿದರು ಎಂಬುದು ಅಷ್ಟಾಗಿ ಬೆಳಕಿಗೆ ಬಂದಿರುವುದಿಲ್ಲ. ಜೈಲಿನಲ್ಲಿದ್ದಾಗ 163 ದಿನಗಳನ್ನು ಈ ಗ್ರಂಥದ ಗುಜರಾತಿ ಅನುವಾದ ಓದುವುದರಲ್ಲಿ ಕಳೆದರು ಎಂದು ಅವರ ಜೈಲು ಡೈರಿಯಿಂದ ತಿಳಿದು ಬರುತ್ತದೆ. ಇದರಲ್ಲಿ ಹೆಚ್ಚು ದಿನಗಳನ್ನು ಶಾಂತಿಪರ್ವ ಓದುವುದರಲ್ಲಿ ತಲ್ಲೀನರಾಗಿದ್ದರು. ಶರಪಂಜರದ ಮೇಲೆ ಮಲಗಿದ್ದ ಭೀಷ್ಮರು ಧರ್ಮದ ಜಿಜ್ಞಾಸೆ ಮಾಡುತ್ತಾರೆ. ಗಾಂಧಿಯವರ ಸತ್ಯ, ಧರ್ಮ, ಅಹಿಂಸೆ, ನಿಷ್ಠೆ, ಮಾನವೀಯತೆ, ಮಾನವ ಕರ್ತವ್ಯ ಇವೆಲ್ಲದರ ಮೂಲ ಮಹಾಭಾರತವೆಂದು ಹೇಳಬಹುದು.

ಧರ್ಮ ಇದು ಬಹಳ ವ್ಯಾಪಕ ಅರ್ಥದಲ್ಲಿ ಬಳಸಲ್ಪಡುವ ಪದ. ಇದಕ್ಕೆ ಸಮಾನ ಅರ್ಥ ಕೊಡುವ ಪದ ಅನ್ಯಭಾಷೆಗಳಲ್ಲಿ ದೊರೆಯದು. ವ್ಯವಹಾರದಲ್ಲಿ ಈ ಪದವನ್ನು ಬಳಸಿದಾಗ, ಸಾಮಾನ್ಯವಾಗಿ ಭಾರತೀಯರು, ಇದರ ಅರ್ಥವನ್ನು ಸಂದ ರ್ಭೋಚಿತವಾಗಿ ಗ್ರಹಿಸಬಲ್ಲರು. ಇತರರಿಗೆ ನೋವನ್ನುಂಟು ಮಾಡದಿರುವುದೇ ಧರ್ಮ ಎನ್ನುತ್ತಾರೆ ವ್ಯಾಸರು. ಯಾವುದು ಉದ್ಧರಿಸುತ್ತದೆಯೋ ಅದು ಧರ್ಮ. ಪ್ರತಿಯೊಂದು ಸನ್ನಿವೇಶದಲ್ಲೂ ಯಾವ ರೀತಿ ವರ್ತಿಸಬೇಕು ಎಂದು ತಿಳಿಯುವುದೇ ಜೀವನ ಧರ್ಮ.

ಮಹಾಭಾರತದಲ್ಲಿ ಧರ್ಮದ ಲಕ್ಷಣವನ್ನು ಈ ರೀತಿಯಾಗಿ ಹೇಳಲಾಗಿದೆ:

ಬ್ರಹ್ಮಚರ್ಯೇಣ ಸತ್ಯೇನ ತಪಸಾ ಚ ಪ್ರವರ್ತತೇ
ದಾನೇನ ನಿಯಮೇನಾಪಿ ಕ್ಷಮಾ ಶೌಚೇನ ವಲ್ಲಭ
ಅಹಿಂಸಯಾನು ಶಾಂತ್ಯಾ ಚ ಅಸ್ತೇಯೇನಾಪಿ ವರ್ತತೇ
ಏಕೈರ್ದಶಭಿರಂಗೈಸ್ತು ಧರ್ಮಮೇವ ಪ್ರಸೂಚಯೇತ್ ॥

ಅಕ್ರೋಧಃ ಸತ್ಯವಚನಂ ಸಂವಿಭಾಗಃ ಕ್ಷಮಾತಥಾ
ಪ್ರಜನಃ ಸ್ವೇಷುದಾರೇಷು ಶೌಚಮದ್ರೋಹ ಏವಚ
ಅರ್ಜವಂ ಭೃತ್ಯಭರಣಂ ನವೈತೇ ಸಾರ್ವಮಾಣಿಕಾಃ

ಮಹಾತ್ಮ ಗಾಂಧಿಯವರ ಸಿದ್ಧಾಂತಗಳ ಮೂಲ ಈ ಶ್ಲೋಕಗಳಲ್ಲಿ ಕಾಣಬಹುದು.

ಧರ್ಮ—ಈ ಪದವನ್ನು ಗಾಂಧೀಜಿ ಅಷ್ಟಾಗಿ ಬಳಸಿರುವುದಿಲ್ಲ. ನಾನಾ ಅರ್ಥಗಳಿಗೆ ಎಡೆಗೊಟ್ಟು ಅನರ್ಥವಾಗಲಿರಲೆಂದು ಧರ್ಮಪದವನ್ನು ವ್ಯಾಪಕವಾಗಿ ಬಳಸದಿರಬಹುದು. ಇದಕ್ಕೆ ಪ್ರತಿಯಾಗಿ ಸತ್ಯ, ಅಹಿಂಸೆ ಎಂಬ ದ್ವಂದ್ವ ಪದಗಳನ್ನು ವ್ಯಾಪಕವಾಗಿ ಅವರು ಬಳಸುತ್ತ ಬಂದಿರುತ್ತಾರೆ.

ಅಸತ್ಯವಲ್ಲದಿರುವುದು ಸತ್ಯ. ಹಿಂಸೆ ಅಲ್ಲದಿರುವುದು ಅಹಿಂಸೆ ಎಂಬ ನಕಾರಾತ್ಮಕ ಅರ್ಥದಲ್ಲಿ ಈ ಪದಗಳನ್ನು ಸಾಮಾನ್ಯವಾಗಿ ಪ್ರಯೋಗಿಸುವುದುಂಟು. ಆದರೆ ಗಾಂಧೀಜಿ ಈ ಎರಡು ಪದಗಳನ್ನು ಬಹಳ ವ್ಯಾಪಕ ಅರ್ಥದಲ್ಲಿ ಬಳಸಿರುತ್ತಾರೆ. ಗಾಡಿಗೆ ಹೂಡಿದ ಜೋಡಿ ಎತ್ತುಗಳಂತೆ ಇವೆರಡು ಅವಿಭಾಜ್ಯ ಪದಗಳು. ಒಂದರನ್ನೊಂದು ಬಿಟ್ಟು ಇರಲಾರವು. ಸತ್ಯರಹಿತ ಅಹಿಂಸೆ ಇರದು. ಅಹಿಂಸೆ ತೊರೆದ ಸತ್ಯ ಉಳಿಯದು. ಇವೆರಡೂ ನಾಣ್ಯದ ಎರಡು ಮುಖಗಳಂತೆ. ಆದರೂ ಮುಖ ಮುದ್ರೆ ಇರುವುದೇ ನಾಣ್ಯದ ಮೇಲು ಮುಖ ಎನ್ನಬಹುದು. ಅಂತೆಯೇ ಸತ್ಯಕ್ಕೆ ಪ್ರಥಮ ಸ್ಥಾನ.

ತಾನು ಬೆಳೆಸಿ ಪೋಷಿಸಿದ ಕಾಂಗ್ರೆಸ್ಸಿನಲ್ಲಿ ತುಂಬಿಕೊಂಡಿದ್ದ ಭ್ರಷ್ಟಾಚಾರ ಸಹಿಸಲಾರದೆ, ಅದು ಉಳಿಯುವುದಕ್ಕಿಂತ ಇಡೀ ಸಂಸ್ಥೆಯ ಸಮಾಧಿ ತಾನು ನೋಡಲು ಹಿಂಜರಿಯಲಾರೆ ಎಂದು 1938ರಲ್ಲಿ ಹರಿಜನ ಪತ್ರಿಕೆಯ ಮೂಲಕ ತಮ್ಮ ದುಃಖ ತೋಡಿಕೊಂಡರು. ಸಂಖ್ಯೆಯನ್ನು ಸತ್ಯ ಆಶ್ರಯಿಸುವುದಿಲ್ಲ. ಹೃದಯದಲ್ಲಿ ಅಹಿಂಸೆ, ಅಸತ್ಯ ಅಡಗಿಸಿಕೊಂಡಿರುವ ಒಂದು ಕೋಟಿ ಕಾಂಗ್ರೆಸ್

ಸದಸ್ಯರಿಗಿಂತ ಹತ್ತು ಸಾವಿರ ನಿಜ ಕಾಂಗ್ರೆಸ್ಸಿಗರ ನೆರವಿನಿಂದ ಬೇಗ ರಾಜಕೀಯ ಸ್ವಾತಂತ್ರ್ಯ ಗಳಿಸಬಹುದೆಂದು ಬರೆದರು.

ಸತ್ಯ, ಅಹಿಂಸೆ ಈ ಪದಗಳನ್ನು ಬೇರ್ಪಡಿಸಲಾಗದ ಜೋಡಿ ಪದಗಳಾಗಿ ಅವರು ಬಳಸುತ್ತಿದ್ದರೂ, ಸತ್ಯಕ್ಕೆ ವಿಶೇಷ ಸ್ಥಾನ ಕೊಟ್ಟಿದ್ದರು. ಇದು ಸಂಶಯಾತೀತ. ಸತ್ಯ ನಿತ್ಯ, ಶಾಶ್ವತ. ಕಾಲ ಪ್ರವಾಹದಲ್ಲಿ ಎಲ್ಲ ಸಿದ್ಧಾಂತಗಳೂ ಕೊಚ್ಚಿ ಹೋದರೂ, ಸತ್ಯ ಶಾಶ್ವತ ಬಾಳೀತು. ಇದು ಅವರ ನಿಚ್ಚಳ ನಿಲುವು. ನನ್ನ ಕೂಗು ಇಂದು ಅರಣ್ಯರೋದನವಾದೀತು. ಆದರೆ ಅದು ಸತ್ಯದ ಧ್ವನಿಯಾಗಿದ್ದರೆ, ಇತರ ಎಲ್ಲ ಕೂಗುಗಳೂ ಶಾಂತವಾದಮೇಲೂ, ಸತ್ಯದ ಧ್ವನಿ ಪ್ರತಿಧ್ವನಿತವಾದೀತು.

ಕೊಟ್ಟ ವಚನ ಪಾಲಿಸದೆ ಹೋದರೆ, ಅದು ನನ್ನನ್ನು ಬುಡಸಹಿತ ಅಲುಗಾಡಿಸಿ ಬಿಡುತ್ತದೆ. ನನ್ನ ಬುದ್ಧಿಗೆ ತಿಳಿದಿರುವಂತೆ, ನನ್ನ ಜೀವಿತದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಾಗಲಿ, ಸಾಂಸಾರಿಕ ವ್ಯವಹಾರದಲ್ಲಾಗಲಿ ಎಂದಿಗೂ ನಾನು ವಚನ ಭ್ರಷ್ಟನಾಗಿರುವುದಿಲ್ಲ ಎಂದಿರುತ್ತಾರೆ ಗಾಂಧೀಜಿ.

ರಾಜಕೀಯ ಕ್ಷೇತ್ರದಲ್ಲಿ ಸತ್ಯ ಪಾಲಿಸದಿರುವುದು ಚಾಣಕ್ಯನೀತಿ. ಅದು ಅಪರಾಧವಲ್ಲ ಎನಿಸಿಕೊಳ್ಳುತ್ತದೆ. ಗಾಂಧೀಜಿ ಇದನ್ನು ಅಂಗೀಕರಿಸರು. ತಮ್ಮ ನಡೆನುಡಿಗಳಿಂದ ರಾಜಕೀಯ ಕ್ಷೇತ್ರದಲ್ಲೂ ಸತ್ಯಪಾಲಿಸಬಹುದೆಂದು ತೋರಿ ಕೊಟ್ಟರು. ಅತ್ಯಂತ ಬಲಶಾಲಿಯಾದ ಬ್ರಿಟಿಷ್ ಪ್ರಭುತ್ವದೊಡನೆ, ಹಲವಾರು ಹೋರಾಟ ನಡೆಸಿ, ಸತ್ಯ ತೊರೆಯದೆಯೇ, ಜಯಗಳಿಸಬಹುದೆಂದು ಪ್ರತ್ಯಕ್ಷ ಪ್ರಮಾಣಿಸಿಕೊಟ್ಟರು.

ಅಖಂಡ ಭಾರತವು ಇಬ್ಭಾಗವಾಗಿ, ಹಿಂದೂಸ್ತಾನ್ ಮತ್ತು ಪಾಕಿಸ್ತಾನಗಳಾಗಿ ರೂಪುಗೊಂಡಾಗಿ, ವಿದೇಶಿ ವಿನಿಮಯದ ಲೆಕ್ಕದಲ್ಲಿ ಪಾಕಿಸ್ತಾನಕ್ಕೆ 55 ಕೋಟಿ ರೂಪಾಯಿಗಳ ಪಾಲನ್ನು ಹಿಂದೂಸ್ತಾನ ಸಲ್ಲಿಸಬೇಕಾಗಿತ್ತು. ಕತ್ತಿ ಝಳಪಿಸುತ್ತಿದ್ದ ಪಾಕಿಸ್ತಾನಕ್ಕೆ ನೆಹರು, ಪಟೇಲ್ ಮೊದಲಾದ ನಾಯಕರು ಕೊಡಲು ಇಚ್ಛಿಸುತ್ತಿರಲಿಲ್ಲ.ಆದರೆ ಪಾಕಿಸ್ತಾನಕ್ಕೆ ಈ ಹಣ ಕೊಡುವ ಒಪ್ಪಂದವಾಗಿತ್ತು.ಕೊಟ್ಟ ಮಾತಿಗೆ ತಪ್ಪಿ ನಡೆಯಲಾಗದು. ಅದರಲ್ಲೂ "ಸತ್ಯಮೇವ ಜಯತೆ" ಎಂಬ ಧ್ಯೇಯವಾಕ್ಯ ಹೊಂದಿರುವ ಭಾರತ ಸರ್ಕಾರ ಹೀಗೆ ಮಾಡಲಾಗದೆಂದು ಉಪವಾಸ ಆಚರಿಸಿ ಹಣ ಕೊಡಿಸಿದರು. ಶಸ್ತ್ರಾಸ್ತ್ರ ಕೊಳ್ಳಲು ಪಾಕಿಸ್ತಾನ ಈ ಹಣವನ್ನು ಬಳಸಿಕೊಳ್ಳಬಹುದೆಂಬ ಶಂಕೆ ಬಲವಾಗಿತ್ತು. ಏನೇ ಆಗಲಿ, ವಚನ ಭ್ರಷ್ಟರಾಗಬಾರದೆಂದು ಈ ಭಾರಿ ಮೊತ್ತವನ್ನು ಗಾಂಧೀಜಿ ಪಾಕಿಸ್ತಾನಕ್ಕೆ ಕೊಡಿಸಿದರು. ಹಿಂಸಾ ಯುದ್ಧಕ್ಕಾಗಿ ಈ

ಹಣ ಬಳಸಿಕೊಳ್ಳುವ ಸಾಧ್ಯತೆ ಇದ್ದರೂ, ಹಣವನ್ನು ಕೊಡಿಸಿದ್ದು ಸತ್ಯಕ್ಕೆ ಅವರು ಕೊಡುತ್ತಿದ್ದ ಶ್ರೇಷ್ಠಸ್ಥಾನವನ್ನು ನಿದರ್ಶಿಸುತ್ತದೆ.

ಇದಕ್ಕೆ ಪ್ರತಿಯಾಗಿ, ಕಾಶ್ಮೀರವನ್ನು ತನ್ನದಾಗಿ ಮಾಡಿಕೊಳ್ಳಲು ಸಮವಸ್ತ್ರ ತೊರೆದ ಪಾಕಿಸ್ತಾನಿ ಸೇನೆ ಧಾಳಿ ಇಟ್ಟಾಗ, ಕಾಶ್ಮೀರವು ಅಹಿಂಸಾಮಾರ್ಗದಿಂದ ಧಾಳಿಯನ್ನು ಎದುರಿಸಲಾರದೆಂದು ಸ್ವಯಂ ವೇದ್ಯವಾಗಿತ್ತು. ಕಾಶ್ಮೀರವನ್ನು ತನ್ನದಾಗಿ ಉಳಿಸಿಕೊಳ್ಳಲು ಭಾರತ ಸರ್ಕಾರ ವಿಮಾನದಲ್ಲಿ ಸೇನಾ ತುಕಡಿಗಳನ್ನು ರವಾನಿಸಿತು. ಗಾಂಧೀಜಿ ಇದನ್ನು ವಿರೋಧಿಸಲಿಲ್ಲ.

ಕೆಲವು ಅಧರ್ಮ, ಅಸತ್ಯ, ಅಕ್ರಮ ವ್ಯವಹಾರಗಳು ನಮ್ಮ ದೃಷ್ಟಿಯಲ್ಲಿ ಎಷ್ಟೇ ಅಲ್ಪವೆನಿಸಿದರೂ ಗಾಂಧೀಜಿ ಇವುಗಳನ್ನು ತೃಣವೆಂದು ತಿಳಿಯದೆ ಎದುರಿಸಲು ಹಿಂಜರಿಯುತ್ತಿರಲಿಲ್ಲ. ಅವರ ಅಳತೆ ಕೋಲೇ ಪ್ರತ್ಯೇಕ. ಭಾರತದ ಭವಿಷ್ಯ ಕುರಿತು ಗಂಭೀರ ವಿಚಾರ ವಿನಿಮಯ ವೈಸರಾಯಿ ಅವರೊಡನೆ ನಡೆಸುತ್ತಿದ್ದಾಗ ಆಶ್ರಮದ ರೋಗಿಯನ್ನು ನೆನಸಿಕೊಂಡು ಮಾತು ನಿಲ್ಲಿಸಿ ಧಾವಿಸುವರು. ಅವರು ಕನಸುಗಾರರಾಗಿರಲಿಲ್ಲ. ಗಾಂಧೀಜಿ ಸಕ್ರಿಯ ಧ್ಯೇಯವಾದಿಗಳಾಗಿದ್ದರು. ಹಿಂಸೆಯ ಬುನಾದಿಯ ಮೇಲೆ ಕಟ್ಟಲ್ಪಟ್ಟ ಅನೇಕ ನಾಗರೀಕತೆಗಳು ಅಳಿದು ಹೋಗಿರುವುದನ್ನು ಚರಿತ್ರೆಗಳು ತಿಳಿಸುತ್ತವೆ. ಅಹಿಂಸೆಯ ಆಧಾರದ ಮೇಲೆ ಹೊಸ ಸಮಾಜ ನಿರ್ಮಿಸುವ ಪ್ರಯತ್ನದಲ್ಲಿ ನಾವು ನಾಶವಾಗಿ ಹೋದರೇನು ? ಧ್ಯೇಯಕ್ಕಾಗಿ ದುಡಿದು, ಅಳಿದ ಕೀರ್ತಿ ನಮ್ಮದಾಗುತ್ತದೆ. ಅಹಿಂಸೆಯ ಸಾಮೂಹಿಕ ಪ್ರಯೋಗಕ್ಕೆ ಅವರು ಕೊಟ್ಟಿದ್ದ ಉನ್ನತ ಸ್ಥಾನ ಇದರಿಂದ ಗ್ರಹಿಸಬಹುದು.

1929ರಲ್ಲಿ ಭಗತ್‌ಸಿಂಗ್, ರಾಜಗುರು ಮತ್ತು ಬಟುಕೇಶದತ್ ದಿಲ್ಲಿಯ ಶಾಸನ ಸಭೆಯಲ್ಲಿ ಬಾಂಬು ಆಸ್ಫೋಟಿಸಿದರೆಂದು ವಿಚಾರಣೆಗೆ ಗುರಿಯಾಗಿ ಮರಣ ದಂಡನೆ ವಿಧಿಸಲ್ಪಟ್ಟರು. ಮಹಾತ್ಮರು ಈ ದಂಡನೆಯನ್ನು ವಜಾಮಾಡುವಂತೆ ವೈಸರಾಯರಲ್ಲಿ ಮಾಡಿದ ಪ್ರಯತ್ನ ಫಲಿಸಲಿಲ್ಲ. ಅವರು ಗಲ್ಲಿಗೇರಿಸಲ್ಪಟ್ಟರು. ಮುಂದಿನ ಕಾಂಗ್ರೆಸ್ ಮಹಾಧಿವೇಶನದಲ್ಲಿ ಭಗತ್‌ಸಿಂಗ್ ಅವರ ದೇಶಭಕ್ತಿಗೆ ಮೆಚ್ಚಿಗೆ ವ್ಯಕ್ತಪಡಿಸುವ ನಿರ್ಣಯ ಗಾಂಧೀಜಿ ಮಂಡಿಸಿದರು. ಹಿಂಸೆಗೆ ಇದರಿಂದ ಪ್ರೋತ್ಸಾಹ ಪ್ರಾಪ್ತವಾದೀತೆಂದು ಹಲವರು ವಾದಿಸಿದರೂ ನಿರ್ಣಯ ಅಂಗೀಕೃತ ವಾಯಿತು. ಅನಂತರ ಬಿಳಿಯ ಅಧಿಕಾರಿಗಳನ್ನು ಕೊಲೆಮಾಡುವ ಹಲವು ಘಟನೆಗಳು ನಡೆದುವು. ಆಗ ಗಾಂಧೀಜಿ, ಭಗತಸಿಂಗನ ತ್ಯಾಗ ದೇಶಭಕ್ತಿಗಳಿಗೆ ಮೆಚ್ಚುಗೆ ವ್ಯಕ್ತಪಡಿಸುವ ನಿರ್ಣಯ ಮಾಡಿದ್ದು ತಪ್ಪಾಯಿತೆಂದು ಒಪ್ಪಿಕೊಂಡರು.

ಗಾಂಧೀಜಿ ಹದಿನೆಂಟು ಬಗೆಯ ತೆರಿಗೆಗಳನ್ನು ವಿರೋಧಿಸಿ ಪ್ರತಿಭಟಿಸಿರುತ್ತಾರೆ ಇವುಗಳಲ್ಲಿ ಹದಿನೇಳು ದಕ್ಷಿಣ ಆಫ್ರಿಕದಲ್ಲಿ ಆಚರಿಸಲ್ಪಟ್ಟವು. ಆಫ್ರಿಕದಲ್ಲಿ

ಭಾರತೀಯರು ನಾಯಿಗಳನ್ನು ಸಾಕಿ ಇಟ್ಟುಕೊಳ್ಳಬೇಕಾದರೆ ಹತ್ತು ಷಿಲಿಂಗ್ ತೆರಿಗೆ ತೆರಬೇಕಾಗಿತ್ತು. ಆದರೆ ಬಿಳಿಯರಿಗೆ ಇದು ಅನ್ವಯಿಸುತ್ತಿರಲಿಲ್ಲ. ಗಾಂಧೀಜಿ ವರ್ಣಭೇದ ಈ ನೀತಿಯನ್ನು ಸಕ್ರಿಯವಾಗಿ ಪ್ರತಿಭಟಿಸಿದರು. ಇದು ಅಲ್ಪವೆಂದು ಕಡೆಗಣಿಸಲಿಲ್ಲ. ಉಪ್ಪಿನಕರ ವಿರೋಧಿಸಿ ಕೈಗೊಂಡ ದಾಂಡಿಯಾತ್ರೆ ಚರಿತ್ರಾರ್ಹ ವಾಗಿದೆ. "ಸೇಲ್ಸ್‌ಟ್ಯಾಕ್ಸ್' ವ್ಯಾಪಾರ ತೆರಿಗೆಯನ್ನೂ ಅವರು ವಿರೋಧಿಸಿದರು. ಧರ್ಮ ನಾವು ಬಲ್ಲೆವು, ಆದರೆ ಆ ಮಾರ್ಗ ಅನುಸರಿಸಲೊಲ್ಲೆವು. ಅಧರ್ಮದ ಅರಿವೂ ಉಂಟು, ಆದರೆ ಅದನ್ನು ವಿರೋಧಿಸಲಾರೆವು. ಇದು ಗಾಂಧೀ ನಾಡಿನಲ್ಲಿ ಹುಟ್ಟಿರುವ ನಮ್ಮ ಹೇಡಿತನದ, ತಳಮಳಿಸುವ ಮನೋಧರ್ಮ. ಇಷ್ಟು ಅಲ್ಪ ಅವಧಿ ಯಲ್ಲಿ ಹೀಗೇಕೆ ಆಗಿದೆ ಎಂದು ಚಿಂತಿಸಬೇಕಾಗಿದೆ ಗಾಂಧೀಜಿ ಚಳವಳಿ ನಡೆಸುತ್ತಿದ್ದ ಭಾರತದ ವಾತಾವರಣ ಅವರ್ಣನೀಯ ಜಸ್ಸಿನಿಂದ ಬೆಳಗುತ್ತಿತ್ತು.

ದುಃಖರಹಿತ ಸುಖ ಸಂತೃಪ್ತ ಜೀವನ, ಸಂತೋಷದಿಂದ ಇಹಲೋಕದಲ್ಲಿ ಅನುಭವಿಸಲು ಆಶಿಸುವುದು ಮಾನವ ಸಹಜ ಗುಣ. ದೈವಕೃಪೆಗೆ ಪಾತ್ರರಾಗಿ, ಮುಕ್ತಿ ಪಡೆಯಲು ಆಶಿಸುವವರು ಹಲವರು. ಇವೆರಡನ್ನೂ ಕೊಡಿಸುವುದಾಗಿ ನಂಬಿಕೆ ಹುಟ್ಟಿಸುವವರೂ ಇದ್ದಾರೆ. ಆದರೆ ಗಾಂಧೀಜಿ ಇಂಥ ಆಸೆ ಹುಟ್ಟಿಸಲಿಲ್ಲ. ಸುಖ ಜೀವನ, ಭೋಗ ಜೀವನ ತ್ಯಜಿಸಿ ತನ್ನ ಉದಾತ್ತ ಧ್ಯೇಯಗಳಿಗಾಗಿ, ಪರಕೀಯ ಬಂಧನದಿಂದ ಬಿಡಿಸಿಕೊಳ್ಳಲು, ಸತ್ಯ-ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯಗಳಿಸಲು ದೇಶಕ್ಕೆ ಅವರು ಕರೆಕೊಟ್ಟರು. ತಮ್ಮದೇ ಆದ ವಿಶಿಷ್ಟ ರೀತಿಯ ಕಾರ್ಯಕ್ರಮ ರೂಪಿಸಿದರು. ಅವರ ಕಾರ್ಯಕ್ರಮ ಅನುಸರಿಸುವುದರಿಂದ ಪ್ರಾಪ್ತವಾಗುತ್ತಿದ್ದುದು ಸಂಸಾರದಲ್ಲಿ ವಿರಸ, ಲಾಠಿಯ ಪೆಟ್ಟು, ಬಂಧನ, ಜೈಲುವಾಸ. ಪೊಲೀಸರ ದಾಷ್ಟ್ಯಕ್ಕೆ ತುತ್ತಾಗಿ ಅಸುನೀಗುವ ಪ್ರಮೇಯ. ಅವರ ಪ್ರಯೋಗಕ್ಕೆ ಇವರು ಸ್ವಯಂಪ್ರೇರಿತ ಯಜ್ಞಪಶು.

ಆದರೂ ಅವರ ಕರೆಗೆ ಆಬಾಲವೃದ್ಧರಾಗಿ ಭಾರತೀಯ ದೇಶಭಕ್ತರು ಅನಿರೀಕ್ಷಿತ ಆಶ್ಚರ್ಯಚಕಿತ ರೀತಿಯಲ್ಲಿ ಓಗೊಟ್ಟರು. ಅಸಹಕಾರ ಚಳುವಳಿಗೆ ಕರೆ ಕೊಟ್ಟಾಗ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಂದ ಹೊರಬಂದರು ರಾಷ್ಟ್ರೀಯ ಶಾಲೆಗಳು ಸ್ಥಾಪಿತವಾದುವು; ಸರ್ಕಾರಿ ನೌಕರರು ಉದ್ಯೋಗ ಬಿಟ್ಟರು; ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು; ಬಿರುದಾಂಕಿತರು ಬಿರುದು ಬಾವಲಿಗಳನ್ನು ಹಿಂದಕ್ಕೆ ಕಳುಹಿಸಿದರು. ಸಕ್ಕರೆ ಉಪಯೋಗಿಸುವುದನ್ನು ಬಿಟ್ಟು ಬೆಲ್ಲ ಬಳಸುವುದು ಬಳಕೆಗೆ ಬಂತು. ಕಾಫಿ, ಟೀ, ಧೂಮಪಾನ, ಸುರಾಪಾನ ಬಿಟ್ಟರು. ವಿದೇಶಿ ವಸ್ತ್ರಗಳನ್ನು ಅಗ್ನಿದೇವನಿಗೆ ಅರ್ಪಿಸಿದರು. ಖಾದಿ ಧರಿಸತೊಡಗಿದರು. ರಾಟೆ ತಿರುಗಿಸಿ ನೂಲು ಮಾಡತೊಡಗಿದರು. ಸಭೆಗಳಲ್ಲೂ ತಕಲಿ ಕಾಣಿಸಿ

ಕೊಂಡಿತು. ವಿದೇಶಿಯ ಬಹಿಷ್ಕಾರದಿಂದ ಸ್ವದೇಶಿಗೆ ಪ್ರೋತ್ಸಾಹ ಲಭಿಸತೊಡಗಿತು. ಖಾದಿ ಉತ್ಪನ್ನ ಕೇಂದ್ರಗಳು ಸ್ಥಾಪಿತವಾದುವು. ಶಾಲೆ ಮತ್ತು ಸರ್ಕಾರಿ ನೌಕರಿ ತೊರೆದವರು ಈ ಕಾರ್ಯದಲ್ಲಿ ಮಗ್ನರಾದರು. ವಿದೇಶಿ ವಸ್ತ್ರಬಹಿಷ್ಕಾರ, ಸ್ವದೇಶಿ ಪ್ರೋತ್ಸಾಹ, ಪಾನ ನಿರೋಧ ಚಳುವಳಿ ಬಲಗೊಂಡಿತು. ಹಿಂದೂ-ಮುಸಲ್ಮಾನರು ಭಾಯಿಭಾಯಿ ಆಗಿ ಕೈಮಿಲಾಯಿಸಿದರು. ಹಿಂದೂ–ಮುಸಲ್ಮಾನಕಿ ಜೈ, ಅಲ್ಲಾ ಹೋ ಅಕ್ಬರ್, ಮಹಾತ್ಮ ಗಾಂಧೀಕಿ ಜೈ ಘೋಷಣೆಗಳು ದೇಶದ ಆದ್ಯಂತ ಭೋರ್ಗರೆಯತೊಡಗಿತು. ಕ್ರೈಸ್ತಮಂದಿರಗಳಿಗೆ ಎಲ್ಲ ಅನ್ಯಮತೀಯರುರೂಸ್ವಾಗತಾರ್ಹ ರಾದರು. ಮಹಮದೀಯರ ಮಸೀದಿಗಳಿಂದ ಗಾಂಧೀಜಿ ಮತ್ತು ಇತರ ಪ್ರಮುಖರು ಭಾಷಣ ಮಾಡಲು ಅವಕಾಶ ದೊರೆಯಿತು. ಬಿಳಿಯರನ್ನು, ಅದರಲ್ಲೂ ಬಿಳಿಯ ಯೋಧರನ್ನು ಕಂಡರೆ ದೂರ ಓಡುತ್ತಿದ್ದವರು ಧೈರ್ಯದಿಂದ ತಲೆ ಎತ್ತಿ ಓಡಾಡ ತೊಡಗಿದರು. ಭೀತಿ ತೊಲಗಿ ಧೈರ್ಯ ಮೂಡಿತು.

ಅಸ್ಪೃಶ್ಯರು ಹರಿಜನ ಎನಿಸಿಕೊಂಡರು. ಸ್ಪೃಶ್ಯರಾದರು. ಅನೇಕರು ಮಾಂಸಾಹಾರ ತೊರೆದು ಶಾಕಾಹಾರಿಗಳಾದರು. ಮದ್ಯಪಾನ ಬಿಟ್ಟರು. ಅಬಲೆಯರು ಸಬಲೆಯರಾಗಿ ಪರದಾಪದ್ಧತಿ ಬಿಟ್ಟು, ಮನೆ ತೊರೆದು ಹೊರ ಬಂದು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದರು. ಪ್ರಭಾತಫೇರಿ, ಮೆರವಣಿಗೆ, ಧ್ವಜವಂದನೆ ದೇಶವ್ಯಾಪಿ ಆಯಿತು. ತ್ರಿವರ್ಣ ಕಾಂಗ್ರೆಸ್ ಧ್ವಜ ರಾಷ್ಟ್ರೀಯ ಧ್ವಜ ಎನಿಸಿಕೊಂಡು ಸಾರ್ವಜನಿಕ ಮನ್ನಣೆಗೆ ಪಾತ್ರವಾಯಿತು. ಧ್ವಜಗೌರವ, ರಾಷ್ಟ್ರಗೌರವ, ದೇಶಭಕ್ತಿ ವೃದ್ಧಿಸಿತು. ಶ್ರೀರಾಮನಿಗೆ ವಾನರರು ಸಲ್ಲಿಸಿದ ಸೇವೆಯಂತೆ ಬಾಲಕರು ವಾನರ ಸೇನೆ ರಚಿಸಿ ಕೊಂಡು, ಅಳಿಲು ಭಕ್ತಿ ಮಳಲು ಸೇವೆ ಎನ್ನುವಂತೆ, ಹಿರಿಯರಿಗೆ ಪಾಠ ಕಲಿಸುವಂತೆ ತಮ್ಮ ಶಕ್ತಿ ಮೀರಿ ಸೇವಾ ಕಾರ್ಯದಲ್ಲಿ ನಿರತರಾದರು. ಸಮವಸ್ತ್ರದ ಸೇವಾದಳಗಳು ಹುಟ್ಟಿಕೊಂಡವು. ಹಿಂದೀ ಕವಾಯತ್ ಪದಗಳು ಆಂಗ್ಲ ಪದಗಳ ಸ್ಥಾನ ಆಕ್ರಮಿಸಿಕೊಂಡವು. ದೈಹಿಕ ಶಕ್ತಿ ಬೆಳಸಿಕೊಳ್ಳುವ 'ಜಂನಾಷಿಯಂ' ತಾಲೀಂ ಸಂಸ್ಥೆಗಳು ಬೆಳೆದವು.

ಹಿಂದೀ ಭಾಷೆ ಕಲಿಯಲು ಅತೀವ ಉತ್ಸಾಹ. ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕೇಂದ್ರ ಕಚೇರಿ ಮದರಾಸಿನಲ್ಲಿ ಸ್ಥಾಪಿತವಾಗಿ ಅದರ ಶಾಖೋಪ ಶಾಖೆಗಳು ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಬೆಳೆದುವು. ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಇದರಲ್ಲಿ ಹೆಚ್ಚು ಆಸಕ್ತಿ ವಹಿಸಿದರು. ಪರಿಣಾಮವಾಗಿ ಪ್ರಾಂತ ಭಾಷೆಗಳಿಗೂ ಪ್ರೋತ್ಸಾಹ ದೊರೆಯಿತು.

ಮೆರವಣಿಗೆ, ಧ್ವಜವಂದನೆ, ಸಭೆ ಇವುಗಳಲ್ಲಿ ಸ್ತ್ರೀಯರು ಭಾಗ ವಹಿಸಿ ತೊಡಗಿದರು. ವಿದೇಶಿ ವಸ್ತ್ರದ ಅಂಗಡಿಗಳ ಮುಂದೆ ವಿದೇಶಿ ವಸ್ತ್ರದ ಬಹಿಷ್ಕಾರ

ಜಾರಿಗೆ ತರಲು ಕಂಕಣಬದ್ಧರಾಗಿ ಕಾಣಿಸಿಕೊಂಡರು. ಬಾಲ್ಯ ವಿವಾಹ ವಿರೋಧ ಬೆಳೆಯಿತು. ವಿಧವಾ ವಿವಾಹಕ್ಕೆ, ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ ದೊರೆಯಿತು.

ಶಾಸನ ಸಭೆಗಳು, ಚುನಾವಣೆಗಳು ಬಹಿಷ್ಕೃತವಾದುವು. ಸದಸ್ಯರು ಹೊರ ಬಂದರು. ಮಾ-ಬಾಪ್ ಸರ್ಕಾರ ಎಂದು ಹೊಗಳಿಕೆ ಹೋಗಿ, ಸದಸ್ಯರು ಧೈರ್ಯ ವಾಗಿ ಸರ್ಕಾರದ ಲೋಪದೋಷಗಳನ್ನು ಬಹಿರಂಗಪಡಿಸಿ ಟೀಕಿಸ ತೊಡಗಿದರು. ರಾಷ್ಟ್ರೀಯ ವೃತ್ತಪತ್ರಿಕೆಗಳ ಪ್ರಸಾರ ಸಂಖ್ಯೆ ಬೆಳೆಯಿತು. ಹಲವು ರಾಷ್ಟ್ರೀಯ ಪತ್ರಿಕೆಗಳು ಜನ್ಮ ತಾಳಿದುವು.

ಗೋ ಸೇವಾ ಸಂಸ್ಥೆಗಳು, ಅಸ್ಪೃಶ್ಯತಾ ನಿವಾರಣೆಯ ಹರಿಜನ ಸಂಘಗಳು, ಪಾನನಿರೋಧ ಸಂಘಗಳು ಸ್ಥಾಪಿತವಾದುವು. ಸವರ್ಣೀಯರು ಅಸ್ಪೃಶ್ಯರ ಕೇರಿ ಗಳಿಗೆ ಹೋಗಿ ಸತ್ತದನಗಳ ಮಾಂಸ ಸೇವನೆ, ಮದ್ಯಪಾನ, ಧೂಮಪಾನ ಮತ್ತು ಇತರ ಕೆಟ್ಟ ಅಭ್ಯಾಸಗಳನ್ನು ಬಿಡುವಂತೆ ಬೋಧಿಸುತ್ತಿದ್ದರು. ಭಜನೆ ಮಂದಿರ ಗಳು ಸ್ಥಾಪಿತವಾದುವು. ನೂಲುವಂತೆಯೂ, ಖಾದಿ ಧರಿಸುವಂತೆಯೂ ತಿಳಿಸು ತ್ತಿದ್ದರು. ಶಾಲೆಗಳಿಗೂ, ಸಾರ್ವಜನಿಕ ಸ್ಥಳಗಳಿಗೂ, ದೇವಾಲಯಗಳಿಗೂ ಪ್ರವೇಶ ಅವರಿಗೆ ದೊರಕಿಸಲು ಶಾಸನ ಮತ್ತು ಸಾರ್ವಜನಿಕ ಅಭಿಪ್ರಾಯ ಮೊಳೆಯಿತು. ಸಹ ಪಂಕ್ತಿ ಭೋಜನ ಸಾಮಾನ್ಯವಾಯಿತು.

ಆಶ್ರಮಗಳು, ಮೂಲಶಿಕ್ಷಣ ಶಾಲೆಗಳು ತಲೆ ಎತ್ತಿದುವು. ಭಾರತೀಯ ಕಲೆ, ಸಂಸ್ಕೃತಿ, ವಿಜ್ಞಾನ ಇವುಗಳು ಪುನಶ್ಚೇತನಗೊಂಡುವು. ಆಡಂಬರ ಬದುಕಿಗೆ ತಿರಸ್ಕಾರ, ಸರಳ ಜೀವನಕ್ಕೆ ಪುರಸ್ಕಾರ. ಎಲ್ಲರ ತಲೆಯ ಮೇಲೂ ಗಾಂಧಿ ಟೋಪಿ. ಆಯುರ್ವೇದ, ಯುನಾನಿ ವೈದ್ಯಕೀಯ ಪದ್ಧತಿಗಳು, ಪ್ರಕೃತಿ ಜೀವನ ಮತ್ತು ಪ್ರಕೃತಿ ಚಿಕಿತ್ಸೆ ಇವುಗಳಿಗೆ ಪ್ರೋತ್ಸಾಹ. ಗೃಹ ಕೈಗಾರಿಕೆ, ಗ್ರಾಮ ಕೈಗಾರಿಕೆ, ಸಣ್ಣ ಕೈಗಾರಿಕೋದ್ಯಮಗಳು ಬೆಳೆದುವು.

ಇದುವರೆಗೂ ಆಂಗ್ಲ ಭಾಷೆ ಬಲ್ಲ ಮೇಲುದರ್ಜೆಯವರು ಮಾತ್ರ ಭಾಗವಹಿಸು ತ್ತಿದ್ದ ರಾಷ್ಟ್ರೀಯ ಮಹಾಸಭೆಯಲ್ಲಿ ಶ್ರೀಸಾಮಾನ್ಯರೂ ಭಾಗವಹಿಸಲು ಅದರ ಬಾಗಿಲು ತೆರೆಯಿತು. ಲಕ್ಷಾಂತರ ಜನ ಕಾಂಗ್ರೆಸ್ ಸದಸ್ಯರಾದರು. ದೇಶದ ಆದ್ಯಂತ ಹಳ್ಳಿಹಳ್ಳಿಗೂ ಕಾಂಗ್ರೆಸ್ ಸಂದೇಶ ಪ್ರವಹಿಸತೊಡಗಿತು. ನಗರ ಬಿಡಿ, ಹಳ್ಳಿಗೆ ಹೋಗಿ ಕೂಗು ಪ್ರತಿಧ್ವನಿಸುತ್ತಿತ್ತು. ಕಾಂಗ್ರೆಸ್ ಮಹಾಧಿವೇಶನ ಲಕ್ಷೋಪಲಕ್ಷ ಜನರನ್ನು ಆಕರ್ಷಿಸುತ್ತಿತ್ತು. ಇಂಗ್ಲಿಷ್ ಹಿಂದೆ ಬಿದ್ದಿತು. ಹಿಂದಿ

ಮುಂದಾಯಿತು. ದೇಶ ಭಾಷೆಗಳ ಭಾಷಣಗಳು ಕಿವಿಗೆ ಇಂಪಾಗಿ, ಮನಸ್ಸಿಗೆ ತಂಪಾಗಿ ಹರ್ಷ ತರುತ್ತಿದ್ದುವು. ಕಾಂಗ್ರೆಸ್ ಶ್ರೀಸಾಮಾನ್ಯನ ಸಂಸ್ಥೆಯಾಯಿತು. ಅದನ್ನು ವಿರೋಧಿಸುವ, ದೇಶಭಕ್ತಿಯ ಪ್ರವಾಹ ತಡೆಯುವ ಎದೆಗಾರಿಕೆ ಕುಗ್ಗಿತು. ಸಾಮಾನ್ಯ ವಿದ್ಯಾವಂತರಲ್ಲದ ಜನರೂ ಕಾಂಗ್ರೆಸ್ ತಮ್ಮ ಸಂಸ್ಥೆ ಎಂದು ಭಾವಿಸಿ, ಅದರ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಂತೆ ಮಾಡಿದುದು ಮಹಾತ್ಮರ ಮಹೋನ್ನತ ಸಾಧನಗಳಲ್ಲಿ ಒಂದು ಎನ್ನಬಹುದು. ವಾತಾವರಣ ದೇಶಭಕ್ತಿ, ದೈವಭಕ್ತಿ, ತ್ಯಾಗಮಯಿ ಓಜಸ್ಸಿನಿಂದ ಬೆಳಗುತ್ತಿತ್ತು.

ಗಾಂಧೀಜಿ ರಾಜಕೀಯಕ್ಕೆ ಇಳಿಯುವ ಮುನ್ನ ಹಿಂಸೆಯಿಂದ ಸ್ವಾತಂತ್ರ್ಯಗಳಿಸ ಬಹುದೆಂಬ ಭಾವನೆ ಬಲವಾಗಿತ್ತು. ಹಿಡಿಯಷ್ಟು ಆಂಗ್ಲೇಯರು ನಮ್ಮನ್ನು ತಮ್ಮ ಅಂಕೆಯಲ್ಲಿ ಇಟ್ಟುಕೊಂಡಿದ್ದಾರೆ. ಇಂಗ್ಲೆಂಡಿನಿಂದ ಬರುವ ಆಂಗ್ಲ ಅಧಿಕಾರಿಗಳನ್ನು ಕೊಂದು ಹಾಕಿದರೆ ಅಲ್ಲಿಂದ ಭಾರತಕ್ಕೆ ಕಾಲಿಡಲು ಆಳರಸ ಅಧಿಕಾರಿಗಳು ಹಿಂತೆಗೆ ದಾರು. ಇಲ್ಲಿರುವ ಆಂಗ್ಲ ಅಧಿಕಾರಿಗಳನ್ನು ಒಬ್ಬೊಬ್ಬರಾಗಿ ಕೊನೆಗಾಣಿಸಿ ಬಿಡೋಣ ಎಂಬ ಸಂಕಲ್ಪದಿಂದ ಕ್ರಾಂತಿಕಾರಿಗಳು ಹುಟ್ಟಿಕೊಂಡರು. ವಿದ್ಯಾವಂತ ತರುಣರೇ ಇದರಲ್ಲಿ ಹೆಚ್ಚು. ಬಂಗಾಳ ಇದಕ್ಕೆ ತೌರುಮನೆ. ಪಂಜಾಬು, ಬಿಹಾರ, ಮಹಾರಾಷ್ಟ್ರಗಳಲ್ಲೂ ಕೆಲವರಿದ್ದರು. ಉನ್ನತ ಅಧಿಕಾರಗಳೆಲ್ಲವೂ ಬಿಳಿಯರಿಗೆ ಮೀಸಲು. ಗವರ್ನರ್, ಕಲೆಕ್ಟರ್, ಮ್ಯಾಜಿಸ್ಟ್ರೇಟ, ಪೊಲೀಸ್ ಅಧಿಕಾರಿ ಎಲ್ಲರೂ ಶ್ವೇತವರ್ಣೀಯರೇ. ಬಾಂಬು, ಗುಂಡು ಬಳಸಿ ಇವರನ್ನು ಯಮಲೋಕಕ್ಕೆ ಸಾಗಿಸಿ ಬಿಡಲು ಕ್ರಾಂತಿಕಾರಿಗಳು ಪ್ರಯತ್ನ ನಡೆಸಿದರು. ಈ ಪ್ರಯತ್ನದಲ್ಲಿ ಅನೇಕರು ಪ್ರಾಣ ತೆತ್ತರು

ಈ ವಾದ ಅರ್ಥರಹಿತ. ನಮ್ಮ ದಾಸ್ಯಕ್ಕೆ ನಾವೇ ಕಾರಣ. ನಮ್ಮ ದೌರ್ಬಲ್ಯ, ದೇಶಭಕ್ತಿಯ ಅಭಾವ, ಎಲ್ಲಕ್ಕೂ ಮಿಗಿಲಾಗಿ ಪ್ರಭುತ್ವಕ್ಕೆ ನಾವು ನೀಡು ತ್ತಿರುವ ಸಹಕಾರ. ಈ ಸಹಕಾರ ನಿರಾಕರಿಸಿದರೆ ಸರ್ಕಾರ ನಡೆಯದು, ಬಾಳದು. ಈ ಸಿದ್ಧಾಂತವನ್ನು ಕ್ರಾಂತಿಕಾರರಿಗೆ ಮನದಟ್ಟು ಮಾಡಿಕೊಟ್ಟು, ಮನವೊಲಿಸಿ ಅಹಿಂಸೆಯ ಅಸಹಕಾರ ಚಳುವಳಿಯಲ್ಲಿ ಕ್ರಾಂತಿಕಾರರು ತೊಡಗುವಂತೆ ಮಾಡಿದ್ದು, ಬಿಸಿ ರಕ್ತದ ಕ್ರಾಂತಿಕಾರಿಗಳ ಮೇಲೆ ಅವರು ಬೀರಿದ ಪ್ರಭಾವ, ಅವರ ತರ್ಕ ಬದ್ಧವಾದ ಸಾಮರ್ಥ್ಯ ನಿದರ್ಶಿಸುತ್ತದೆ.

ಸೇಡು ತೀರಿಸಿಕೊಳ್ಳಲು ಪ್ರಾಣಹರಣ ಮಾಡುವುದು ತಲೆತಲಾಂತರಗಳಿಂದ ಗಡಿನಾಡಿನ ಜನರಲ್ಲಿ ನಡೆದು ಬಂದಿರುವ ಪದ್ಧತಿ. ತುಪಾಕಿ ಪ್ರಿಯರು. ಹೆಗಲಮೇಲೆ ಬಂದೂಕು ಸದಾ ತೂಗಾಡುತ್ತಿರಬೇಕು. ಶಾಂತಿ ಪಡೆಯಲು ಬ್ರಿಟಿಷರೇ ಇವರ

ನಾಯಕರಿಗೆ ಹಣ ಕೊಡುತ್ತಿದ್ದರು. ಇಂಥ ಜಂಗಲಿ ಜನರನ್ನು ಅಹಿಂಸಾ ವ್ರತ ಧಾರಿಗಳಾಗಿ ಮಾಡಿದ್ದು ಪವಾಡವೇ ಸರಿ. ಇವರ ನಾಯಕ ಖಾನ್ ಅಬ್ದುಲ್ ಗಫಾರ ಖಾನರು ಗಡಿನಾಡಿನ ಗಾಂಧಿ ಎನಿಸಿಕೊಂಡರು. ಭಾರತವನ್ನು ಇಬ್ಭಾಗ ಮಾಡುವುದನ್ನು ಅವರು ಒಪ್ಪಿಕೊಳ್ಳಲೇ ಇಲ್ಲ. ಕಾರಾಗೃಹವೇ ಅವರ ಮನೆ. ಗಾಂಧಿಯವರಿಗಿಂತ ಗಾಂಧೀವಾದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟವರು ಗಫಾರ್ ಖಾನ್.

ವಿಜ್ಞಾನದ ಪ್ರಭಾವ, ಬೃಹತ್ ಕೈಗಾರಿಕೋದ್ಯಮಗಳ ಬೆಳವಣಿಗೆ ಮೊದಲಾದುವುಗಳಿಂದ ಪ್ರಚೋದಿತವಾಗಿ ಆಧುನಿಕ ನಾಗರೀಕತೆ ನಾಗಾಲೋಟದಿಂದ ಮುನ್ನುಗ್ಗುತ್ತಿರುವಾಗ, ಹಳೆಯ ಎತ್ತಿನ ಗಾಡಿಯ ಕಾಲದ ಸಂಸ್ಕೃತಿಗೆ ಹಿಂದೊಯ್ಯುತ್ತಿರುವ, ಪ್ರಪಂಚದ ನಾನಾ ಭಾಗಗಳ ಪಂಡಿತರು–ಪಾಮರರು, ಜ್ಞಾನಿಗಳು–ಅಜ್ಞಾನಿಗಳು, ಭಾಗ್ಯವಂತರು–ಬಡವರು, ಶ್ರೀಮಂತರು–ಧೀಮಂತರು, ಸ್ತ್ರೀಯರು-ಪುರುಷರು, ರಾಜಮಹಾರಾಜರು-ಪ್ರಜೆಗಳು ಅಬಲೆಯರು–ಸಬಲೆಯರು, ಸ್ಪೃಶ್ಯರು-ಅಸ್ಪೃಶ್ಯರು, ಮಠಾಧಿಪತಿಗಳು–ಶಿಷ್ಯರು, ಉಪಾಧ್ಯಾಯರು–ವಿದ್ಯಾರ್ಥಿಗಳು, ಮಾಂಸಾಹಾರಿಗಳು–ಸಸ್ಯಾಹಾರಿಗಳು, ಕುಡುಕರು–ಕುಡಿಯದವರು, ದೈವಭಕ್ತರು–ನಾಸ್ತಿಕರು, ಮೊದಲಾಗಿ ಎಲ್ಲರ ಮೇಲೂ ಪ್ರಭಾವ ಬೀರುತ್ತಿರುವ ಈ ವ್ಯಕ್ತಿಯ ಶಕ್ತಿ ಏನು? ಇದನ್ನು ಹೇಗೆ ಗಳಿಸಿದರು? ಹೇಗೆ ಪ್ರಾಪ್ತವಾಯಿತು? ಕಾರ್ಯವಿಧಾನವೇನು? ಚಿಂತಕರನ್ನೂ ಜನಜಂಗುಳಿಯನ್ನೂ ಸಮ್ಮೋಹನಾಸ್ತ್ರದಿಂದ ಬಂಧಿಸುವಂತೆ ಈ ಮೋಹನನ ಸಮ್ಮೋಹಾಸ್ತ್ರದ ಗುಟ್ಟು ತಿಳಿಯಲು ದೇಶವಿದೇಶಗಳ ಚಿಂತಕರು, ಪತ್ರಿಕೋದ್ಯಮಿಗಳು ಕುತೂಹಲರಾದರು.

ದುಂಡು ಮೇಜಿನ ಪರಿಷತ್ತಿಗೆ ಗಾಂಧೀಜಿ ಇಂಗ್ಲೆಂಡಿಗೆ ಹೋಗಿದ್ದಾಗ, ಲ್ಯಾಂಕಾಷೈರಿಗೆ ಹೋಗಲು ಬಯಸಿದರು. ಭಾರತದಲ್ಲಿ ಬ್ರಿಟಿಷ್ ವಸ್ತ್ರಬಹಿಷ್ಕಾರದಿಂದ ಲ್ಯಾಂಕಾಷೈರಿನ ಬಹುತೇಕ ಗಿರಣಿಗಳು ಮುಚ್ಚಿದ್ದುವು. ಅನೇಕರು ನಿರುದ್ಯೋಗಿಗಳಾಗಿದ್ದರು. ಇವರು ಅಲ್ಲಿಗೆ ಹೋಗುವುದು ಪ್ರಾಣಾಪಕಾರಿ, ಹೋಗಬೇಡಿ ಎಂದಿತು ಬ್ರಿಟಿಷ್ ಸರ್ಕಾರ. ಆದರೆ ಅವರ ಹಟಮಾರಿತನಕ್ಕೆ ಬಗ್ಗಿ ಇಬ್ಬರು ನುರಿತ ಅಂಗರಕ್ಷಕರನ್ನು, ಸದಾಕಾಲ ಅವರ ಹಿಂದಿರಲು ನೇಮಿಸಿ ಕಳುಹಿಸಿಕೊಟ್ಟಿತು. ಗಾಂಧೀಜಿ ಗಿರಣಿ ಕೆಲಸಗಾರರ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಬ್ರಿಟಿಷ್ ವಸ್ತ್ರಬಹಿಷ್ಕಾರದ ಉದ್ದೇಶ ವಿವರಿಸಿ, ಈ ಉದ್ದೇಶ ಸರಿ ಎಂದು ಕಾರ್ಮಿಕರು ಒಪ್ಪಿಕೊಳ್ಳುವಂತೆ ಮಾಡಿದರು. ಯಾವ ಜನ ಗಾಂಧಿಯವರ ಅಸಹಕಾರ ಚಳುವಳಿಯಿಂದ ಕಂಗಾಲಾಗಿದ್ದರೋ ಅದೇ ಜನ ಗಾಂಧಿಗೆ ಜಯವಾಗಲಿ ಎಂದು ಜಯಕಾರ

ಮಾಡುತ್ತ, ಹಾಡಿ ಕುಣಿಯುವಂತೆ ಮಾಡಿದರು. ಸಿಂಹದ ಗುಹೆಯೊಳಗೆ ನುಗ್ಗಿ ಮಾಡಿದ ಸಾಹಸವಲ್ಲದೆ ಮತ್ತೇನು ಇದು.

ದೇಶವಿದೇಶಗಳಿಂದ ಅವರ ಆಶ್ರಮಕ್ಕೆ ಬಂದು ಉಳಿಯಲು ಅಪೇಕ್ಷಿಸುತ್ತಿದ್ದವರ ಸಂಖ್ಯೆಗೆ ಕೊರತೆ ಇರಲಿಲ್ಲ. ಅಲ್ಲಿ ಎಲ್ಲರಿಗೂ ಸ್ಥಳಾವಕಾಶವಿಲ್ಲ. ಅನುಗುಣ ಯೋಗ್ಯತೆಯೂ ಅಗತ್ಯ. ಕೆಲವರು ಅವರ ಆಜೀವ ಅನುಯಾಯಿಗಳಾದರು. ಹಲವರು ಕೆಲವು ದಿನ ಉಳಿದು ಅವರ ಮತ್ತು ಆಶ್ರಮದ ದಿನಚರಿ, ಧ್ಯೇಯ ಸಾಧನೆಗಾಗಿ ಪಡುತ್ತಿದ್ದ ಶ್ರಮ ಇವನ್ನು ಸ್ವತಃ ತಿಳಿದು ಪ್ರಭಾವಿತರಾಗಿ ಅವರ ಆತ್ಮಕಥೆ ಮತ್ತು ಅನಂತವಾದ ಅವರ ಲೇಖನಗಳನ್ನು ಓದಿ ಪುಸ್ತಕಗಳನ್ನು ಪ್ರಕಟಿಸಿದರು, ಸರಳ ಜೀವಿಗಳಾದರು.ಆಶ್ರಮಗಳನ್ನು ಸ್ಥಾಪಿಸಿದರು.

ಗಾಂಧಿಯವರ ವ್ಯಕ್ತಿತ್ವ ದಿನದಿನಕ್ಕೆ ಬೆಳೆಯುತ್ತಿತ್ತು. ಕಾಂಗ್ರೆಸ್ಸಿನ ಮುಖಂಡರು, ರಾಜಕೀಯ ದುರಂಧರರು, ಸಮಾಜ ಸೇವಕರು, ವೈದ್ಯರು, ವೃದ್ಧರು, ವರ್ತಕರು, ಸಂಸಾರಿಗಳು, ವಿದ್ಯಾರ್ಥಿಗಳು ಎಲ್ಲರೂ ಅವರ ಮಾರ್ಗದರ್ಶನಕ್ಕಾಗಿ, ಆಶೀರ್ವಾದಕ್ಕಾಗಿ ಹವಣಿಸುತ್ತಿದ್ದರು. ಕಾಂಗ್ರೆಸ್ಸಿನಿಂದ ಅವರು ದೂರವಾಗಿದ್ದಾಗಲೂ ಜವಹರಲಾಲರ ವಾಕ್ಯದಂತೆ, ಅವರು ಕಾಂಗ್ರೆಸ್ಸಿನ 'ಸೂಪರ್ ಪ್ರೆಸಿಡೆಂಟ್' ಆಗಿದ್ದರು. ಅವರ ನುಡಿಯೇ ವೇದವಾಕ್ಯ. ತಮ್ಮ ಸಲಹೆ, ಅಭಿಪ್ರಾಯ ಅಂಗೀಕರಿಸಬೇಕೆಂದು ಅವರು ಒತ್ತಾಯ ಪಡಿಸುತ್ತಿರಲಿಲ್ಲ. ಆದರೂ ಅವರ ನುಡಿಗೆ ವಿರೋಧವಾಗಿ ನಡೆಯುವುದು ಸಾಧ್ಯವಿರಲಿಲ್ಲ. ನೇತಾಜಿ ಸುಭಾಷ್ ಚಂದ್ರಬೋಸರು ಇವರನ್ನು ವಿರೋಧಿಸಿ ಅಂತ್ಯದಲ್ಲಿ ಸೋಲು ಅನುಭವಿಸಬೇಕಾಯಿತು. ಶಾಸನ ಸಭೆಗಳನ್ನು ಪ್ರವೇಶಿಸಲು ಇವರ ಅನುಮತಿ ಪಡೆಯಬೇಕಾಗಿತ್ತು. ಮಂತ್ರಿಗಳ ನೇಮಕಕ್ಕೆ ಇವರ ಅನುಗ್ರಹ ಅಗತ್ಯ. ಮಂತ್ರಿಗಳನ್ನು ತೆಗೆಯಲೂ ಸಮ್ಮತಿ ಬೇಕು.

ಆಂಜನೇಯ ತನ್ನ ಶರೀರವನ್ನು ನಭೋಮಂಡಲದವರೆಗೂ ಬೆಳೆಸಬಹುದಾಗಿತ್ತಂತೆ. ಮಹಾತ್ಮರ ಪ್ರಭಾವ ಪ್ರಪಂಚದ ಉದ್ದಗಲಕ್ಕೂ ವಿಸ್ತಾರವಾಗಿ ಹರಡಿತ್ತು. ಅವರ ಅದ್ವಿತೀಯ ಆತ್ಮಕಥೆ ಅನುವಾದಿತವಾಗದ ಭಾಷೆ ಇರುವುದಿಲ್ಲ. ಅವರ ಭಾಷಣ ಕೇಳಲು, ದರ್ಶನ ಪಡೆಯಲು ಸಹಸ್ರಾರು ಜನ ಕಾದಿರುತ್ತಿದ್ದರು. ಸ್ತ್ರೀಯರು ಆಭರಣಗಳನ್ನು ಕಳಚಿ ಕೊಟ್ಟುಬಿಡುತ್ತಿದ್ದರು. ಆಗಿನ ಕಾಲಕ್ಕೆ ಧ್ವನಿವರ್ಧಕ ಇರಲಿಲ್ಲ. ಆದರೂ ಭಾಷಣ ಕೇಳಲು ಲಕ್ಷಾಂತರ ಜನ ನೆರೆಯುತ್ತಿದ್ದರು. ಇವರು ಅಂಶ ಪುರುಷರು, ಅವತಾರ ಪುರುಷರು, ಪೂಜಾರ್ಹರು ಎಂದು ಅವರು ಆಶೀರ್ವಾದ ಪಡೆಯಲು, ಕಾಲು ಮುಟ್ಟಿ ನಮಸ್ಕರಿಸಲು ಜನ ನುಗ್ಗುತ್ತಿದ್ದರು. ಭಕ್ತಾದಿಗಳು ಪಾದ ಮುಟ್ಟಿ ನಮಸ್ಕರಿಸಲು ಮಾಡುತ್ತಿದ್ದ ಪ್ರಯತ್ನದಲ್ಲಿ ಅನೇಕ ವೇಳೆ ಅವರ ಕಾಲುಗಳಿಗೆ ಗಾಯವಾಗುತ್ತಿತ್ತು.

ಎಲ್ಲೆಲ್ಲೂ ಅವರ ಭಾವಚಿತ್ರವನ್ನು ಕಾಣಬಹುದಾಗಿತ್ತು. ಮನೆ ಮಠಗಳಲ್ಲೂ ಕಚೇರಿಗಳಲ್ಲೂ ದೇವಾಲಯಗಳಲ್ಲೂ ಅವರ ಭಾವಚಿತ್ರ. ಅವರ ಜನ್ಮದಿನದಂದು ರಥದಲ್ಲಿ ಅವರ ಭಾವಚಿತ್ರವಿರಿಸಿ, ಅಲಂಕರಿಸಿ, ವಾದ್ಯಘೋಷಗಳ ವೈಭವದಿಂದ ಮೆರವಣಿಗೆ ನಡೆಸುವರು. ಎಲ್ಲೆಲ್ಲೂ ಅವರನ್ನು ಹೋಲುವ ಮೂರ್ತಿಗಳು ಸ್ಥಾಪಿತ ವಾದುವು. ಗುಡ್ಡಗಾಡಿನ ಗೊಂಡರು ಅವರ ದೇವಾಲಯವನ್ನೇ ಕಟ್ಟಿಸಿದರು. ಹೋಟೆಲು, ಅಂಗಡಿ, ಬೀದಿ, ಚೌಕ, ಉದ್ಯಾನವನ, ಭವನ ಎಲ್ಲಕ್ಕೂ ಅವರ ಹೆಸರು. ಅವರು ಧೂಮಪಾನದ ವಿರೋಧಿ ಆಗಿದ್ದರೂ, ಗಾಂಧೀ ಸಿಗರೇಟ್, ಗಾಂಧೀ ಬೀಡಿ, ಗಾಂಧೀ ಬೆಂಕಿಪೆಟ್ಟಿಗೆ, ವ್ಯಾಪಾರಕ್ಕೆ ಇಳಿಯಿತು. ಅವರ ಹೆಸರು ಬಳಸುವುದು ಅಷ್ಟು ಲಾಭದಾಯಕ. ಅವರ ಹೆಸರನ್ನು ಟ್ರೇಡ್‌ಮಾರ್ಕ್ ವ್ಯಾಪಾರ ಚಿಹ್ನೆಯಾಗಿ ಬಳಸಬಾರದೆಂದು ಕೇಂದ್ರ ಸರ್ಕಾರ ಶಾಸನ ಮಾಡಬೇಕಾಯಿತು.

ತಾನು ಮಹಾತ್ಮನಲ್ಲ, ಅವತಾರ ಪುರುಷನಂತೂ ಅಲ್ಲವೇ ಅಲ್ಲ. ಅತೀಂದ್ರಿಯ ನಲ್ಲ. ಎಂದು ಎಷ್ಟು ಹೇಳಿದರೂ ಭಾರತೀಯರು ಕೇಳರು. ಅವರಂತೂ ಅಸಾಧಾರಣ ವ್ಯಕ್ತಿಯೇ ಆಗಿದ್ದರು. ಇದಂತೂ ನಿಜ. ಆದ್ದರಿಂದ ಪೂಜನೀಯರು. ಇಂಥ ಭಾವನೆಗಳಿಂದ ತಾನು ಮಾರ್ಗದರ್ಶನ ನೀಡುತ್ತಿದ್ದ, ಬೋಧಿಸುತ್ತಿದ್ದ ತತ್ವಗಳಿಗೆ ಧಕ್ಕೆ ಆದೀತೆಂದು ಅವರು ಹೆದರುತ್ತಿದ್ದರು. ತನ್ನಿಂದ ಸಾಧ್ಯವಾದುದು, ಇತರರಿಂದಲೂ ಸಾಧ್ಯ ಎಂದು ಅವರು ಹೇಳುತ್ತಲೇ ಇದ್ದರು. ಅವರಂತೆ ವೇಷಧಾರಿಗಳಾಗಿ, ನಿರಶನ ವ್ರತ ಆಚರಿಸುತ್ತ ನಡೆಯುತ್ತಿದ್ದವರು ಎಷ್ಟೋ ಜನ. ಅವರ ನೈತಿಕ ಪ್ರಭಾವ ಜನ ಸಮೂಹದ ಮೇಲೆ, ದಿನನಿತ್ಯದ ವ್ಯವಹಾರದಲ್ಲಿ, ಜೀವನ ಕ್ರಮದಲ್ಲಿ, ರಾಜಕೀಯ ಕ್ಷೇತ್ರದಲ್ಲಿ ಅಗೋಚರವಾಗಿ ವ್ಯಾಪಕವಾಗಿ ಹರಡಿತ್ತು. ಈ ರೀತಿಯಲ್ಲಿ ನಡೆದುಕೊಳ್ಳುವುದು ಗಾಂಧೀ ಸಿದ್ಧಾಂತಗಳಿಗೆ ಅನುಗುಣವಾಗಿದೆಯೇ, ಅವರ ಸಮ್ಮತಿ ಪಡೆದೀತೆ ಎಂದು ಒರೆಗಲ್ಲಿಗೆ ಹಚ್ಚಿ ನೋಡುತ್ತಿದ್ದ ಕಾಲವದು. ಕಷ್ಟ ಸಹಿಷ್ಣುತೆ, ಪ್ರತಿಫಲ ಬಯಸದ ನಿಷ್ಕಾಮಕರ್ಮ, ತ್ಯಾಗ, ಬಲಿದಾನ ಮಾಡಲು ನಾನು ಮುಂದು ತಾನು ಮುಂದು ಎಂದು ಜನ ಪೈಪೋಟಿ ನಡೆಸುತ್ತಿದ್ದರು. ಗಾಂಧೀ ಪ್ರಣೀತ ಕ್ರಮಗಳಿಂದ ಸ್ವರಾಜ್ಯ ಗಳಿಸಲು ಜನ ಕಾತರರಾಗಿದ್ದರು. ಅಂದಿನ ವಾತಾವರಣ ಗಾಂಧೀ ವಿಚಾರಗಳಿಂದ ಜ್ವಲಂತವಾಗಿತ್ತು. ಮನಸೋತಿತ್ತು, ಒಲಿದಿತ್ತು.

ಗಾಂಧೀಜಿ ಮೂರನೆಯ ದರ್ಜೆ ರೈಲು ಡಬ್ಬಿಯಲ್ಲಿ ಪ್ರಯಾಣ ಮಾಡುತ್ತಿದ್ದರಷ್ಟೆ. ಅವರ ದರ್ಶನಕ್ಕಾಗಿ ಪ್ರತಿಯೊಂದು ನಿಲ್ದಾಣದಲ್ಲೂ ಜನ ಕಿಕ್ಕಿರಿದು ನೆರೆಯುತ್ತಿದ್ದರು. ರಾತ್ರಿ ನಿದ್ರಿಸಲು ಅವಕಾಶ ಕೊಡುತ್ತಿರಲಿಲ್ಲ. ಎಬ್ಬಿಸಿಯಾದರೂ ದರ್ಶನ ಪಡೆಯುವರು. ಇದು ಎಷ್ಟರಮಟ್ಟಿಗೆ ಬೆಳೆಯಿತೆಂದರೆ, ಯಾವ ಆಡಳಿತವನ್ನು ಇವರು ವಿರೋಧಿಸುತ್ತಿದ್ದರೋ ಅದೇ ಸರ್ಕಾರ ಇವರಿಗಾಗಿ ವಿಶೇಷ ರೈಲು

ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಇವರಿಗೆ ಅರಿವಾಗದಂತೆಯೇ ಪೋಲಿಸ್ ಗುಪ್ತಚಾರರನ್ನು ರಕ್ಷಣೆಗೆ ನೇಮಿಸಲಾಗುತ್ತಿತ್ತು. ವೈಸರಾಯಿ ಮೌಂಟ್‌ಬೇಟನ್ ಅವರನ್ನು ಭೇಟಿಯಾಗಲು ಹೋಗುತ್ತಿದ್ದಾಗ, ವೈಸರಾಯಿ ದಂಪತಿಗಳು ಇವರನ್ನು ಎದುರ್ಗೊಂಡು ಆಸನಕ್ಕೆ ಕರೆದೊಯ್ಯುತ್ತಿದ್ದರು. ಹಿಂತಿರುಗಿ ಬರುವಾಗ ಮಹಾದ್ವಾರದವರೆಗೂ ಬಂದು ಬೀಳ್ಕೊಡುತ್ತಿದ್ದರು. ಈ ಅರೆ ನಗ್ನ ಫಕೀರ ವೈಸರಾಯಿಣಿಯ ಭುಜದ ಮೇಲೆ ಕೈಹಾಕಿಕೊಂಡು ನಡೆದು ಬರುವರು. ಸಾಮ್ರಾಟ ಚಕ್ರವರ್ತಿಯ ಪ್ರತಿನಿಧಿ ವೈಸರಾಯ್ ಅವರೊಡನೆ ಸಮಾನ ಅಂತಸ್ತಿನಲ್ಲಿ ವ್ಯವಹರಿಸುತ್ತಿದ್ದುದು ಇವರು ಯಾವ ಮಟ್ಟಕ್ಕೆ ಏರಿದ್ದರು ಎಂಬುದನ್ನು ಸೂಚಿಸುತ್ತದೆ. ಇದನ್ನು ಸಹಿಸಲಾರದೆ ಹೋದ ಪ್ರಧಾನಿ ಚರ್ಚಿಲ್ ಇವರನ್ನು ಅರೆನಗ್ನ ಫಕೀರ ಎಂದು ಹೀಯಾಳಿಸಿದ. ಮುಂದೆ ಅದೇ ಚರ್ಚಿಲ್ ಮಹಾತ್ಮರು ಮಹಾ ಪ್ರಭಾವಶಾಲಿ ವ್ಯಕ್ತಿ ಎಂದು ಒಪ್ಪಿಕೊಳ್ಳಬೇಕಾಯಿತು. ಸ್ವತಂತ್ರ ಗಾಂಧಿ ಹೆಚ್ಚು ಪ್ರಭಾವಶಾಲಿಯೋ ಸೆರೆಮನೆಯ ನಾಲ್ಕು ಗೋಡೆಗಳ ಹಿಂದೆ ಕೂಡಿಹಾಕಲ್ಪಟ್ಟ ಗಾಂಧಿ ಹೆಚ್ಚು ಪ್ರಭಾವಶಾಲಿಯೋ ಎಂಬ ತಳಮಳಕ್ಕೆ ಸಿಕ್ಕಿಕೊಳ್ಳುತ್ತಿತ್ತು ಪ್ರಭುತ್ವ.

ಗಾಂಧಿಯವರ ಧ್ಯೇಯೋದ್ದೇಶಗಳಿಂದ ಕಷ್ಟ, ಸಂಕಟ ಅನುಭವಿಸಿದವರು ಅದೆಷ್ಟು ಮಂದಿಯೋ ಹೇಳತೀರದು. ಸ್ವಾರ್ಥ ತ್ಯಾಗದಲ್ಲಿ, ಧ್ಯೇಯ ಸಾಧನೆಯಲ್ಲಿ ಕಷ್ಟ ಸಂಕಟಗಳು ಮರೆಯಾಗುತ್ತಿದ್ದುವು. ಗಾಂಧಿಯ ಅನುಯಾಯಿಯಾಗಿ, ಸಮಕಾಲೀನನಾಗಿ ತಾನೂ ಸೇವೆ ಸಲ್ಲಿಸಿದೆ ಎಂದು ಹೆಮ್ಮೆಪಡುತ್ತಿದ್ದರು ಅವರು. ಸ್ವತಂತ್ರ ಭಾರತದ ಪ್ರಥಮ ಭಾರತೀಯ ಗವರ್ನರ್ ಜನರಲ್ ಆಗಿ, ಮದರಾಸು ಪ್ರಾಂತದ ಪ್ರಧಾನಿಯಾಗೀ ಕೀರ್ತಿಗಳಿಸಿದ ತೀಕ್ಷ್ಣಮತಿ ಚಕ್ರವರ್ತಿ ರಾಜಗೋಪಾಲಾಚಾರ್ಯರೂ ಗಾಂಧಿಯವರ ಅನುಚರರಲ್ಲಿ ಒಬ್ಬ ಶ್ರೇಷ್ಠರು. ತನ್ನ ಕ್ರಮದಲ್ಲಿ ಸಂದೇಹ ಮೂಡಿಬಂದಾಗ, ಇವರ ಅಭಿಪ್ರಾಯ ಗಾಂಧೀಜಿ ಪಡೆಯುತ್ತಿದ್ದರು. ಅಂಥ ಸೂಕ್ಷ್ಮಮತಿ ರಾಜಗೋಪಾಲಚಾರ್ಯರು. ತನ್ನ ಒಳದನಿಯನ್ನು ಅರಿಯಬಲ್ಲ ವ್ಯಕ್ತಿ ರಾಜಾಜಿ ಎನ್ನುತ್ತಿದ್ದರು ಗಾಂಧೀಜಿ. ಎಷ್ಟೋ ಸಂದರ್ಭಗಳಲ್ಲಿ ಇವರ ಅಭಿಪ್ರಾಯಗಳು ಭಿನ್ನವಾಗಿರುತ್ತಿದ್ದುವು. ಕಡೆಗೆ ರಾಜಾಜಿ ಕಾಂಗ್ರೆಸ್ ತೊರೆದು ಸ್ವರಾಜ್ಯಪಕ್ಷ ಸ್ಥಾಪಿಸಿದರು. ಆದರೂ ಇವರ ಮಗಳು ಗಾಂಧಿಯವರ ಸೊಸೆ ಆದಳು.

ರಾಜಗೋಪಾಲಚಾರ್ಯರು ವಕೀಲಿ ವೃತ್ತಿ ತೊರೆದು ಗಾಂಧಿಯ ಶಿಷ್ಯಂದಿರಾದರು. ಆಪ್ತರಾದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರಾದರು. ತಿರುಚ್ಚನಗೂಡಿನಲ್ಲಿ ಖಾದಿ ಉತ್ಪನ್ನ ಕೇಂದ್ರ ಸ್ಥಾಪಿಸಿದರು. ಗಾಂಧೀಜಿ ದಾಂಡಿ ಜೈತ್ರಯಾತ್ರೆ ನಡೆಸುತ್ತಿದಾಗ ಅವರನ್ನು ಗುಜರಾತಿನ ಬ್ರೋಚ್ ಸಮೀಪದ ಬುವಾ ಗ್ರಾಮದಲ್ಲಿ ಸಂದರ್ಶಿಸಿ ದಕ್ಷಿಣ ಭಾರತದಲ್ಲಿ ಇಂಥದೇ ಜೈತ್ರಯಾತ್ರೆ ನಡೆಸುವ

ಕಾರ್ಯಕ್ರಮ ತಿಳಿಸಿ ಅನುಮತಿ ಪಡೆದರು. ವೇದಾರಣ್ಯದ ಈ ಉಪ್ಪಿನ ಸತ್ಯಾಗ್ರಹದ ಪಾದಯಾತ್ರೆ, ದಾಂಡೀಯಾತ್ರೆಗಿಂತ ಹೆಚ್ಚು ಕಷ್ಟನಷ್ಟ ಎದುರಿಸಬೇಕಾಯಿತು. ಏಪ್ರಿಲ್ 13, 1930 ತಮಿಳು ನೂತನ ವರ್ಷದಂದು 96 ಆಯ್ದ ಅನುಯಾಯಿಗಳೊಡನೆ ತಿರುಚನಾಪಳ್ಳಿಯಿಂದ 150 ಮೈಲಿಗಳ ದೂರದ ಸಮುದ್ರ ತೀರ ವೇದಾರಣ್ಯಕ್ಕೆ ಕಾಲ್ನಡೆಯಲ್ಲಿ ರಾಜಾಜಿ ಹೊರಟರು.

ಬೊಂಬಾಯಲ್ಲಿ ಒಳ್ಳೆಯ ಉದ್ಯೋಗದಲ್ಲಿದ್ದ ಏಳು ತರುಣರು, ಒಬ್ಬ ಇಂಜನಿಯರ್, ಒಬ್ಬ ಕಾಲೇಜ್ ಪ್ರಾಧ್ಯಾಪಕ, ಒಬ್ಬ ರೈಲ್ವೆ ಅಧಿಕಾರಿ ಇವರೆಲ್ಲ ತಮ್ಮ ಕೆಲಸಕ್ಕೆ ರಾಜಿನಾಮೆ ಸಲ್ಲಿಸಿ ಈ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಜಿಲ್ಲಾ ಕಲೆಕ್ಟರ್ ಜೆ. ವಿ ಥಾರನ್ ಈ ಜೈತ್ರಯಾತ್ರೆ ವಿಫಲಗೊಳಿಸಲು ಹಟ ತೊಟ್ಟಿದ್ದ. ಪ್ರಾರಂಭದಲ್ಲಿಯೇ ರಾಜಾಜಿ ಅವರನ್ನು ಬಂಧಿಸಲು ಮದರಾಸು ಸರ್ಕಾರದ ಆಗಿನ ಮುಖ್ಯ ಕಾರ್ಯದರ್ಶಿ ಕಾಟನ್ ಅವರ ಅನುಮತಿ ಕೋರಿದ. ನಾಯಕ ರಾಜಾಜಿಯವರನ್ನು ಬಂಧಿಸಿದ ನಂತರ, ಕುರುಬನಿಲ್ಲದ ಕುರಿಯ ಹಿಂಡನ್ನು ಸುಲಭವಾಗಿ ಸದೆಬಡಿಯಬಹುದು. ತಂಡದವರಿಗೆ ನೀರು, ನೆರಳು, ಅನ್ನ, ಆಹಾರ ದೊರೆಯದಂತೆ ಮಾಡುವೆ. ಹಾಗೂ ಅವರು ವೇದಾರಣ್ಯ ಮುಟ್ಟಿದರೆ ಅಲ್ಲಿ ಆಶ್ರಯ ದೊರೆಯದಂತೆ ಮಾಡುವೆ ಎಂದು ಬರೆದಿದ್ದ.

ರಾಜಾಜಿಯವರನ್ನು ಬಂಧಿಸುವುದರಿಂದ ಚಳುವಳಿಗೆ ಪುಟವಿಟ್ಟಂತೆ ಆದೀತು ಎಂದು ಅವರನ್ನು ಬಂಧಿಸಲು ಕಾಟನ್ ಅನುಮತಿ ಕೊಡಲಿಲ್ಲ. ಆದರೆ ಥಾರನ್ ಸೂಚಿಸಿದ್ದ ಇತರ ಕ್ರಮ ತೆಗೆದುಕೊಳ್ಳಲು ಅನುಮತಿ ನೀಡಿದರು. ತಂಡಕ್ಕೆ ಆಶ್ರಯ ಕೊಟ್ಟವರನ್ನು ಕಳ್ಳರಿಗೆ ಆಶ್ರಯ ಕೊಟ್ಟಂತೆ ಭಾವಿಸಲಾಗುವುದು. ಇದು ಶಿಕ್ಷಾರ್ಹ ಅಪರಾಧವಾಗುತ್ತದೆ. ಅವರು ಆರು ತಿಂಗಳ ಶಿಕ್ಷೆಗೆ ಗುರಿಯಾಗುತ್ತಾರೆ. ಹೀಗೆಂದು ಥಾರನ್ ಡಂಗುರ ಹೊಡೆಸಿದ. ಪತ್ರಿಕೆಗಳಲ್ಲಿ ಪ್ರಕಟಿಸಿದ. ಹಸ್ತ ಪತ್ರಿಕೆಗಳನ್ನು ಮುದ್ರಿಸಿ ಹಂಚಿಸಿದ. ರಾಜಾಜಿ ತಮ್ಮ ತಂಡದೊಡನೆ ಅನತಿ ದೂರ ಹೋಗುವುದರೊಳಗಾಗಿ ಥಾರನ್ ಹಾಕಿದ್ದ ಬೆದರಿಕೆ ಅವರಿಗೆ ತಿಳಿಯಿತು. ಮುಳ್ಳುಗಳೂ ಕಂಟಿಗಳೂ ಸ್ವಾತಂತ್ರ್ಯದ ಮುನ್ನಡೆಗೆ ಕಂಟಕವಾಗಲಾರವು. (ಥಾರನ್ ಎಂದರೆ ಮುಳ್ಳು) ನಮ್ಮ ಜನ ಅತಿಥಿ ಸತ್ಕಾರಕ್ಕೆ ನೀಡುವ ಪ್ರಾಮುಖ್ಯತೆ, ಪರದೇಶಿಯಾದ ಅವನೇನು ಬಲ್ಲ, ಎಂದರು.

ಕಾರ್ಯವಾದಿ ಕಲೆಕ್ಟರ್ ಥಾರನ್ ತಂಜಾವೂರಿನಿಂದ ವೇದಾರಣ್ಯದವರೆಗೂ ತಾನೇ ಸ್ವತಃ ಹೋಗಿ ತಂಡಕ್ಕೆ ಆಶ್ರಯ ಕೊಟ್ಟೀರಿ ಹುಷಾರ್ ಎಂದು ಎಚ್ಚರಿಸುತ್ತಿದ್ದ. ಕೋವಿಲಾಡಿಯಲ್ಲಿ ಇವನ ಪ್ರತಾಪ ಕಾಣಿಸಿಕೊಂಡಿತು. ಇದ್ದ ಒಂದೇ

ಸತ್ರಕ್ಕೆ ಬೀಗಮುದ್ರೆ ಹಾಕಲಾಗಿತ್ತು. ತಂಡದವರು ಕಾವೇರಿಯ ಜಲಪಾನ ಮಾಡಿ, ತೀರದ ಮರಳಿನ ಮೇಲೆ ಮಲಗಿದರು.

ರಥದ ಚಕ್ರ ಉರುಳಿತು. ಪ್ರಯಾಣ ಮುಂದುವರೆಯಿತು. ಮುಂದಿನ ಹಳ್ಳಿಯಲ್ಲಿ ಬುದ್ಧಿವಂತ ತಮಿಳರು ಮರದ ರೆಂಬೆಗಳಿಗೆ ತಂಡದವರಿಗೆ ತಿಳಿಯುವಂತೆ ಅನ್ನದ ಬುತ್ತಿಗಳನ್ನು ತೂಗಿಹಾಕಿದ್ದರು. ಯಾರೆಂದು ಯಾರು ಬಲ್ಲರು? ವೃಕ್ಷದಫಲ. ಮೃಷ್ಟಾನ್ನ ಭೋಜನದಿಂದ ತಂಡದವರನ್ನು ಕೆಡಿಸಬೇಡಿ ಎಂದರು ಸಿ.ಆರ್. (ಸಿಯರ್ ಎಂದರೆ ಹಿಂದಿಯಲ್ಲಿ ನರಿ) ತಂಡದವರು ದಿನಕ್ಕೆ ಎಂಟು-ಹತ್ತು ಮೈಲಿ ನಡೆಯುತ್ತ ಬಿಡಾರ ಹೂಡಿದ ಗ್ರಾಮದ ಕಸಗುಡಿಸುತ್ತಿದ್ದರು. ಹಿಂದೂ-ಮುಸ್ಲಿಂ ಸಖ್ಯದ ಆವಶ್ಯಕತೆ, ಅಸ್ಪೃಶ್ಯತೆಯ ನಿವಾರಣೆ, ಪಾನನಿರೋಧ, ಸ್ವಾತಂತ್ರ್ಯ ಕುರಿತು ರಾಜಾಜಿ ಸಭೆಗಳಲ್ಲಿ ಮಾತನಾಡುತ್ತಿದ್ದರು. ತಂಜಾವೂರಿನಲ್ಲಿ ಸಭೆಯ ವ್ಯವಸ್ಥೆ ಯಾರೂ ಮಾಡಿರಲಿಲ್ಲ. ಸಭೆ ಸೇರಬೇಕಾಗಿದ್ದ ಮೈದಾನಕ್ಕೆ ತಂಡದೊಡನೆ ರಾಜಾಜಿ ಹೋದರು. ಒಬ್ಬ ವಕೀಲ ಒಂದು ಮುರುಕಲು ಮೇಜು ಕೊಟ್ಟ. ರಾಜಾಜಿ ಭಾಷಣ ಮಾಡಲು ಪ್ರಾರಂಭಿಸುತ್ತಲೇ ಬರಿದಾಗಿದ್ದ ಮೈದಾನ 20,000 ಜನರಿಂದ ತುಂಬಿ ಹೋಯಿತು. ಕುಂಭಕೋಣದಲ್ಲಿ ನ್ಯಾಯವಿಧಾಯಕ ಸಭೆಯ ಮಾಜಿ ಸದಸ್ಯ ಪಂತಲು ಅಯ್ಯರ್ ತಂಡದ ಎಲ್ಲರನ್ನು ಎರಡು ರಾತ್ರಿ ಇರಿಸಿಕೊಂಡು ಅತಿಥಿ ಸತ್ಕಾರ ನೀಡಿದರು. ಇದಕ್ಕೆ ದೊರೆತ ಫಲ ಆರು ತಿಂಗಳು ಜೈಲುವಾಸ. ಸೆಮ್ಮನಗುಡಿಯಲ್ಲಿ ಸಭೆಗೆ ಬಂದಿದ್ದ ಸರ್ಕಾರಿ ನೌಕರರು ತಮ್ಮ ಚಾಕರಿ ಕಳೆದುಕೊಂಡರು. ಸಭೆಯಲ್ಲೇ ಇವರನ್ನು ಬಂಧಿಸಿದರೂ ಶಾಂತರಾಗಿದ್ದ ಸಭಿಕರನ್ನು ಗಾಂಧೀ ತತ್ವ ನೀವು ಗ್ರಹಿಸಿರುವರೆಂದು ರಾಜಾಜಿ ವಂದಿಸಿದರು. ತಿರುತ್ತರಪುಂಡ್ರಿಯಲ್ಲಿ ತಂಡಕ್ಕೆ ಅನ್ನ ನೀಡಿದ ರಾಮಚಂದ್ರ ನಾಯ್ಡು ಅವರಿಗೆ ದೊರೆಯಿತು ಆರು ತಿಂಗಳ ಶಿಕ್ಷೆ.

ಅಂತೂ ರಾಜಾಜಿ ಮತ್ತು ತಂಡದವರು ವೇದಾರಣ್ಯ ತಲುಪಿದರು. ಸಾಹುಕಾರ್ ವೇದರತ್ನಂ ಪಿಳ್ಳೆ ದೊಡ್ಡ ಚಪ್ಪರ ಹಾಕಿಸಿದ್ದರು. ಇಲ್ಲಿ ತಂಡದವರು ಎರಡು ದಿನವಿದ್ದು ಪ್ರಾರ್ಥನೆಯಲ್ಲಿ ತೊಡಗಿದ್ದರು. ಕೆಲವರು ಉಪವಾಸ ಮಾಡಿದರು. ತಾನು ಉಪ್ಪಿನ ಕಾನೂನು ಭಂಗ ಮಾಡುವುದಾಗಿ ಕಲೆಕ್ಟರಿಗೆ ರಾಜಾಜಿ ಬರೆದು ತಿಳಿಸಿದ್ದರು. ಜಿಲ್ಲಾ ಪೋಲಿಸ್ ಅಧಿಕಾರಿ ಗೋವಿಂದ ನಾಯರ್ ಐವತ್ತಕ್ಕೂ ಹೆಚ್ಚು ಪೊಲೀಸ್‌ರೊಂದಿಗೆ ಬಂದು ರಾಜಾಜಿ ಅವರನ್ನು ಬಂಧಿಸಿದ. ಅಲ್ಲಿಯೇ ಸಿದ್ಧಪಡಿಸಿದ್ದ ಚಪ್ಪರದಲ್ಲಿ ವಿಚಾರಣೆ ನಡೆಯಿತು. ಸರ್ಕಾರಿ ವಕೀಲನಿಗೆ ರಾಜಾಜಿಯೇ ಸಹಾಯ ಮಾಡಿದರು. ನ್ಯಾಯಾಧೀಶ ಹಿಂದೆ ಸೇಲಂನಲ್ಲಿದ್ದ ಪೊನ್ನುಸ್ವಾಮಿಪಿಳ್ಳೆ, ರಾಜಾಜಿಗೆ ಆರು ತಿಂಗಳ ಕಠಿಣ ಶಿಕ್ಷೆ ಮತ್ತು ರೂ. 200 ದಂಡ ವಿಧಿಸಿದ.

ದಂಡ ಕೊಡಲು ತಪ್ಪಿದರೆ ಇನ್ನು ಮೂರು ತಿಂಗಳ ಶಿಕ್ಷೆ. ದಂಡ ಕೊಡುವುದಿಲ್ಲ, ಶಿಕ್ಷೆ ಅನುಭವಿಸುವೆ ಎಂದರು. ತೀರ್ಪು ಓದುವಾಗ ಪೊನ್ನುಸ್ವಾಮಿ ಪಿಳ್ಳೈ ವಿಚಲಿತರಾಗಲಿಲ್ಲ. ಆದರೆ ಜೈಲಿಗೆ ಕಳುಹಿಸುವ ವಾರೆಂಟ್ ಬರೆಯುವಾಗ ತನ್ನ ಹಿರಿಯರನ್ನು ತಾನು ಜೈಲಿಗೆ ಕಳುಹಿಸಬೇಕಾದ ಸಂಕಟ ಪರಿಸ್ಥಿತಿ ಒದಗಿ ಬಂದ ದುಃಖ ತಡೆದುಕೊಳ್ಳಲಾರದೆ ಕಣ್ಣೀರು ಸುರಿಸಿದ. ಗಾಂಧಿಯವರಿಗೆ ಆರು ವರ್ಷಗಳ ಶಿಕ್ಷೆ ನೀಡಿದ ಆಂಗ್ಲ ನ್ಯಾಯಾಧೀಶ ಬ್ರೂಂಫೀಲ್ಡ್ ಹೇಳಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಶಾಸನ ದೃಷ್ಟಿಯಲ್ಲಿ ನೀವು ಅಪರಾಧಿ. ಆದರೆ ಈ ದೇಶದ ಜನರ ದೃಷ್ಟಿಯಲ್ಲಿ ನೀವು ಅಸದೃಶ ದೇಶ ಭಕ್ತರು. ನಿಮಗೆ ಬೇಗ ಬಿಡುಗಡೆ ಆದರೆ ನನಗಿಂತ ಹೆಚ್ಚು ಸಂತಸ ಪಡುವವರು ಬೇರೆ ಇರಲಾರರು. ಸತ್ಯಾಗ್ರಹಿಗಳು ನ್ಯಾಯಾಲಯದಲ್ಲಿ ವಾದಕ್ಕೆ ಇಳಿಯದೆ ಕೊಟ್ಟ ಶಿಕ್ಷೆ ಸಂತೋಷದಿಂದ ಅನುಭವಿಸಲು ತಿಳಿಸಿದ್ದರು. ಎಲ್ಲರೂ ಅಂತೆಯೇ ಅನುಸರಿಸುತ್ತಿದ್ದರು.

ರಾಜಗೋಪಾಲಚಾರ್ಯರಿಗೆ ಶಿಕ್ಷೆ ವಿಧಿಸಿದ ದಿನ ಇಡೀ ತಮಿಳುನಾಡು ಹರತಾಳ ಆಚರಿಸಿತು. ಅವರಿಗೆ ಶಿಕ್ಷೆ ಆದ ವಿಷಯವನ್ನು ತಂತಿ ಮೂಲಕ ಕಳುಹಿಸಬಾರದೆಂದು ಥಾರನ್ ಆಜ್ಞಾಪಿಸಿದ್ದ. ಆದರೂ ವಾಯುವೇಗದಿಂದ ಸುದ್ದಿ ಹರಡಿತು. ಇವರನ್ನು ತಿರುಚಿರಪಳ್ಳಿಗೆ ರೈಲಿನಲ್ಲಿ ಒಯ್ಯಲಾಯಿತು. ಪ್ರತಿಯೊಂದು ನಿಲ್ದಾಣದಲ್ಲೂ ಸಹಸ್ರಾರು ಜನ ಇವರ ದರ್ಶನಕ್ಕಾಗಿ ಕಾದಿರುತ್ತಿದ್ದರು. ಒಂದು ಅನಾಮಧೇಯ ನಿಲ್ದಾಣದಲ್ಲಿ ಥಾರನ್ ಇವರ ಡಬ್ಬಿಗೆ ಹತ್ತಿದ. ಚಳುವಳಿ ಮಟ್ಟಹಾಕುವ ನಿಮ್ಮ ಯೋಜನೆ ಯುಕ್ತಾಯುಕ್ತವಾದುದೇ. ಆದರೆ ನಾವು ನಮ್ಮ ದೇಶದಲ್ಲಿ ಇದ್ದೇವೆ ಎಂಬುದನ್ನು ನೀವು ಮರೆತಿರಿ ಎಂದು ಹಾಸ್ಯ ಮಾಡಿದರು ರಾಜಾಜಿ.

ಇಬ್ಬರ ನಡುವೆ ಸ್ನೇಹಪೂರಿತ ಹಾಸ್ಯಲಾಸ್ಯದ ಮಾತು ನಡೆಯಿತು. ರಾಜಾಜಿಗೆ ಪ್ರಿಯವಾದ ಇಡ್ಲಿ ಕಾಫಿ ತರಿಸಿಕೊಟ್ಟು ಥಾರಾನ್ ಬಿದಾಯಿ ಹೇಳಿದ.

ದಿನಕ್ಕೆ ಹತ್ತರಂತೆ ಸತ್ಯಾಗ್ರಹಿಗಳು ಶಾಸನಭಂಗ ಮಾಡತೊಡಗಿದರು. ಈ ರೀತಿ ನಡೆಯಲು ಅವಕಾಶ ಕೊಟ್ಟರೆ, ಚಳುವಳಿ ದೀರ್ಘಕಾಲ ನಡೆದೀತೆಂದು, ಶಿಬಿರದಲ್ಲಿದ್ದ ಎಲ್ಲರನ್ನು ಒಂದೇ ದಿನದಲ್ಲಿ ಬಂಧಿಸುವಂತೆ ಥಾರನ್ ಆಜ್ಞಾಪಿಸಿದ. ಚಪ್ಪರ ಕೀಳಿಸಿದ. ರಾಜಾಜಿ ಅವರ ತರುವಾಯ ಸಂತಾನಂ, ಶ್ರೀಮತಿ ಲಕ್ಷ್ಮೀಪತಿ, ಡಾ|| ಟಿ.ಎಸ್.ಎಸ್. ರಾಜನ್ ಮೊದಲಾಗಿ 375 ಜನ ಶಿಕ್ಷಿತರಾದರು. ಈ ಮೂವರೂ ಮುಂದೆ ಉನ್ನತ ಪದವಿಗಳನ್ನು ಅಲಂಕರಿಸಿದ್ದರು. ಮುಸಲ್ಮಾನರು, ಹರಿಜನರು, ಮೊದಲಾಗಿ ಎಲ್ಲರೂ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಧಾರಾಸಾನಾ ಸತ್ಯಾಗ್ರಹ ಹಿಂದೆಯೇ ವಿವರಿಸಲಾಗಿದೆ. ಶ್ರೀಮತಿ ಸರೋಜಿನಿ ನಾಯ್ಡು ಅವರ ನೇತೃತ್ವದಲ್ಲಿ 1930, ಮೇ 21ರಂದು 2,500 ಸತ್ಯಾಗ್ರಹಿಗಳು ಚಳುವಳಿಯಲ್ಲಿ ಭಾಗವಹಿಸಿದ್ದರು. ಜೂನ್ 1ನೇ ತಾರೀಖಿನಲ್ಲಿ ವಡಾಲ ಉಪ್ಪಿನ ಕೋಠಿಯ ಮೇಲೆ 15,000 ಜನ ಧಾಳಿ ನಡೆಸಿದರು. ಇದೇ ರೀತಿ ಕಾರವಾರದ ಸಾಣೆಕಟ್ಟೆ ಉಪ್ಪಿನ ಕೋಠಿಯ ಮೇಲೆ ಸಾವಿರಾರು ಜನ ಧಾಳಿ ಮಾಡಿದರು.

ವೇದೋಪನಿಷತ್ತು, ಭಾರತ, ರಾಮಾಯಣ ಮತ್ತು ಇತರ ಪುರಾಣೇತಿಹಾಸಗಳ, ಸಾವಿರಾರು ವರ್ಷಗಳ ಪುರಾತನ ಸಂಸ್ಕೃತಿಯ ನೆಲೆಗಟ್ಟಿನ ಮೇಲೆ ಬೆಳೆದು ಬಂದಿರುವ ಭಾರತೀಯರ ಮೇಲೆ ಮಾತ್ರವಲ್ಲ ಅವರ ಪ್ರಭಾವ ಪಸರಿಸಿರುವುದು. ದೇಶವಿದೇಶಗಳ, ಅದರಲ್ಲೂ ಚಿಂತಕರ ಮೇಲೆ ಆಗಿರುವ ಪ್ರಭಾವವೇನೂ ಕಡಿಮೆ ಅಲ್ಲ. ಆಫ್ರಿಕದ ವರ್ಣದ್ವೇಷದೊಡನೆ ಹೋರಾಡಲು ಮಾರ್ಟಿನ್ ಲೂಥರ್ ಕಿಂಗ್ ಅಹಿಂಸಾ ಮಾರ್ಗ ಅನುಸರಿಸಿ ಹುತಾತ್ಮನಾದ. ಭಾರತ ಸ್ವಾತಂತ್ರ್ಯ ಗಳಿಸಿದ ತರುವಾಯ, ಮಹಾತ್ಮರ ಮರಣಾನಂತರ ಗಾಂಧೀವಾದದ ಅಭ್ಯಾಸಕ್ಕೆ ವಿದೇಶಗಳಲ್ಲಿ ವಿಶೇಷ ಗಮನ ಕೊಡಲಾಗುತ್ತಿದೆ. ಅಮೇರಿಕದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಗಾಂಧೀ ಅಧ್ಯಯನ ಪೀಠಗಳು ಸ್ಥಾಪಿತವಾಗಿವೆ. ತೀವ್ರ ಸ್ವರೂಪದ ಭಿನ್ನತೆಗಳನ್ನು ಬಗೆಹರಿಸಿಕೊಳ್ಳಲು ಹಿಂಸೆ, ಭಯಂಕರ ಯುದ್ಧ ಇವುಗಳನ್ನು ತೊರೆದು ಗಾಂಧಿಯ ಅಹಿಂಸಾ ಮಾರ್ಗದಿಂದ ಸಾಧ್ಯವೇ ? ವಿಶ್ವಶಾಂತಿಗೆ ಇದು ದಾರಿ ದೀಪವಾದೀತೆ ಎಂಬ ಕುತೂಹಲ ಅಲ್ಲಲ್ಲಿ ಕಂಡುಬರುತ್ತಿರುವುದು ಪ್ರೋತ್ಸಾಹದಾಯಕ.

ನಮ್ಮ ಪೂರ್ವಜರು ಅಸಾಧ್ಯವೆಂದು ಭಾವಿಸಿದ್ದ ಕಲ್ಪನಾತೀತ ಕಾರ್ಯಗಳನ್ನು ಆಧುನಿಕ ವಿಜ್ಞಾನ, ತಂತ್ರಜ್ಞಾನ ಸಾಧಿಸಿ ತೋರಿಸಿದೆ. ಪ್ರಪಂಚದ ಅಭುಕ್ತ ಮೂಲೆಯಲ್ಲಿ ನಡೆಯುವ ಘಟನೆಗಳನ್ನು ರೇಡಿಯೋ ಪ್ರಪಂಚದ ನಾನಾ ದಿಕ್ಕುಗಳಿಗೆ ಕ್ಷಣಾರ್ಧದಲ್ಲಿ ಬಿತ್ತರಿಸುತ್ತದೆ. ಟೆಲಿವಿಷನ್ ಮೂಲಕ ದೂರದ ದೃಶ್ಯಗಳನ್ನು ಕಣ್ಣು ಮುಂದೆ ನೋಡಬಹುದು, ಕಿವಿಯಾರೆ ಕೇಳಬಹುದು. ಮೆದುಳಿನ ಕಾರ್ಯವನ್ನು "ಕಂಪ್ಯೂಟರ್" ನಿಮಿಷಾರ್ಧದಲ್ಲಿ ನಿರ್ವಹಿಸುತ್ತದೆ. ಇಂದ್ರಿಯಗಳ ಕಾರ್ಯಗಳನ್ನು ಯಾಂತ್ರಿಕ ಮಾನವ ನಿರ್ವಹಿಸುತ್ತಾನೆ. ಕೃತಕ ಜೀವಿಗಳನ್ನು ಸೃಷ್ಟಿಸುವ ಪ್ರಯೋಗಗಳು ಕೈಗೂಡುವಂತಿವೆ. ವಿಮಾನ, ಶಬ್ದವೇಗ ಮೀರಿ ಹಾರುತ್ತದೆ. ಮಗು ಶ್ರೀರಾಮಚಂದ್ರನಿಗೆ ಕನ್ನಡಿಯಲ್ಲಿ ಚಂದ್ರಬಿಂಬ ತೋರಿಸಿ ಸಮಾಧಾನಪಡಿಸಬೇಕಾಗಿ ಬಂದರೆ, ಈಗ ಮಾನವ ಚಂದ್ರಗ್ರಹದ ಮೇಲೆ ಇಳಿದು ನಡೆದು, ಕಲ್ಲುಗಳನ್ನು ಶೇಖರಿಸಿ ಭೂಲೋಕಕ್ಕೆ ತಂದಿರುತ್ತಾನೆ. ಕೋಟ್ಯಾಂತರ ಮೈಲಿಗಳ ಶುಕ್ರಗ್ರಹಕ್ಕೆ ಭೂಲೋಕದಿಂದ ಉಡಾಯಿಸಲ್ಪಟ್ಟ "ಸ್ಪುಟ್ನಿಕ್" ಉಪಗ್ರಹಗಳು ತಲುಪಿ ಅಲ್ಲಿನ ಶೀತೋಷ್ಣ, ಹವಾಮಾನ, ಅದರ ರಚನೆ ಇವುಗಳನ್ನು ಭೂಲೋಕಕ್ಕೆ ಯಶಸ್ವಿಯಾಗಿ

ಕಳುಹಿಸಿವೆ. ಇನ್ನೂ ಅನೇಕ ಅಸಾಧ್ಯಗಳನ್ನು ವಿಜ್ಞಾನ ಸಾಧಿಸಿದೆ. ಮಾನವ ನೀರಿನ ಮೇಲೆ, ಸಮುದ್ರ ತಳದಲ್ಲಿ ಉಳಿಯಬಲ್ಲ; ನಭೋಲೋಕದಲ್ಲಿ ಹಾರಬಲ್ಲ. ಆಧುನಿಕ ವಿಜ್ಞಾನವನ್ನು ಆಶ್ರಯಿಸಿರುವ ನಾಗರೀಕತೆ ನಾಗಾಲೋಟದಿಂದ ಮುನ್ನುಗ್ಗುತ್ತಿದೆ. ಬ್ರಹ್ಮ ಸೃಷ್ಟಿಸಬಲ್ಲುದನ್ನು ನಾನೂ ಸೃಷ್ಟಿಸಬಲ್ಲೆ. ಮುಕ್ಕಣ್ಣ ಮೂರನೆಯ ಕಣ್ಣು ತೆರೆದು ಲೋಕಗಳನ್ನು ಭಸ್ಮ ಮಾಡಿಬಿಡುವ ವಿನಾಶಕಾರಿ ಶಕ್ತಿಯನ್ನು ನಾವೂ ಗಳಿಸಿದ್ದೇವೆ ಮಾನವ ಕುಲವನ್ನೂ, ಜೀವಜಂತುಗಳನ್ನೂ, ಪ್ರಾಣಿವರ್ಗ, ಸಸ್ಯವರ್ಗ, ಜಲಚರಗಳನ್ನು ನಾಶಮಾಡಿಬಿಡುವ ಭಯಂಕರ ಶಕ್ತಿ ಮಾನವ ಗಳಿಸಿಕೊಂಡಿದ್ದಾನೆ. ಅಣುಶಕ್ತಿಯ ಬಾಂಬು, ಜಲಜನಕ ಬಾಂಬು, ಸ್ಫೋಟಕಗಳು, ವಿಷಾಣುಗಳು, ವಿಷವಾಯುಗಳು, ರೆಡಾರ್ ಭಯೋತ್ಪಾದಕಗಳಾಗಿ ಬೆದರಿಸುತ್ತಿವೆ. ಚಂದ್ರಲೋಕಕ್ಕೆ ಹೋಗುವ ಸಾಮರ್ಥ್ಯಗಳಿಸಿರುವ ಮಾನವ, ಈ ಲೋಕದಲ್ಲಿ ಹೇಗೆ ಬಾಳಬೇಕೆಂಬುದನ್ನು ಮಾತ್ರ ಗ್ರಹಿಸಿಲ್ಲ ಎನ್ನಲಾಗಿದೆ. ತನ್ನನ್ನು ತಾನು ಅರಿತಿಲ್ಲ. ನಾಗರೀಕತೆ ಒದಗಿಸಬಹುದಾದ ಸಕಲ ವಿಷಯೋಪಭೋಗಗಳನ್ನು ಅನುಭವಿಸಿ ತೃಪ್ತಿ ಕಾಣದೆ, ಸುಖ, ಶಾಂತಿ, ಸಮಾಧಾನ ಕಾಣದೆ ತಲ್ಲಣಿಸುತ್ತಿದ್ದಾನೆ. ಜೀವನದ ಗುರಿ ಏನು ಎಂದು ಅರಿಯದವನಾಗಿದ್ದಾನೆ. ದಿಕ್ಕುದೆಸೆ ಕಾಣದ ಚಿಂತಕರು ಭಾರತದ ಪುರಾತನ ಸಂಸ್ಕೃತಿ, ಅದನ್ನು ಪುನಃಶ್ಚೇತನಗೊಳಿಸಿ ಮಹಾತ್ಮ ಗಾಂಧಿಯವರು ತಮ್ಮ ನಡೆನುಡಿಗಳಿಂದ ತೋರಿಕೊಟ್ಟಿರುವ ದಾರಿಯಲ್ಲಿ ನಡೆಯುವುದರಿಂದ ವಿಶ್ವದಲ್ಲಿ ಮಾನವ ಶಾಂತಿ, ತೃಪ್ತಿ ಸಮಾಧಾನದ ಜೀವನ ನಡೆಸಬಹುದಲ್ಲವೇ ಎಂದು ತವಕಿಸುತ್ತಿದ್ದಾರೆ.

ಮಹಾತ್ಮರ ಮಾರ್ಗ ಜನಮೇಜಯನ ಕಾಲಕ್ಕೆ ಯೋಗ್ಯ. ಆಧುನಿಕ ಕಾಲಕ್ಕೆ ಸಲ್ಲ ಎನ್ನುವವರೂ ಇದ್ದಾರೆ. ಆದರೆ ಮಹಾತ್ಮರದು ಶತಮಾನಗಳ ದೂರದ ದೃಷ್ಟಿ. ಇದನ್ನು ಗ್ರಹಿಸದೆ, ಅವರೊಡನೆ ಹೆಜ್ಜೆ ಇಡಲಾರದೆ, ಅವರು ಹಿಂದು, ನಾವು ಮುಂದು, ಈ ಭ್ರಾಂತಿ ನಮ್ಮನ್ನು ಆವರಿಸಿದೆ. ಕ್ಷಣಿಕ ಸುಖ ಭೋಗ ಆಶಿಸುವವರು ಕ್ಷಣಿಕ ಸುಖ-ಭೋಗಗಳಿಗೆ ಮಾರು ಹೋಗುತ್ತಾರೆ. ತಾನುಂಟು ಮೂರು ಲೋಕವುಂಟು ಇದು ಅವರ ದೃಷ್ಟಿ.

ಮಾನವ ದಿಕ್ಕು ಕಾಣದವನಾಗಿದ್ದಾನೆ. ಎಲ್ಲವೂ ಅನಿಶ್ಚಿತ, ಎಲ್ಲೆಲ್ಲೂ ಜಂಝಾಟ. ರಾಜಕೀಯ ಕ್ಷೇತ್ರದಲ್ಲಿ, ಆರ್ಥಿಕ ಮತ್ತು ನೈತಿಕ ದೃಷ್ಟಿಯಲ್ಲಿ, ಸಮಾಜ ಸುಧಾರಣೆಯಲ್ಲಿ, ಶಿಕ್ಷಣ ಕ್ರಮದಲ್ಲಿ, ವಿಜ್ಞಾನದ ಗುರಿಯಲ್ಲಿ, ಪಾರಮಾರ್ಥಿಕ ವಿಚಾರದಲ್ಲಿ, ಪರಮಾತ್ಮನ ಇರುವಿಕೆಯಲ್ಲಿ, ಸಾಂಸಾರಿಕ ಜೀವನದಲ್ಲಿ, ದಾರಿ ಕಾಣದವನಾಗಿದ್ದಾನೆ.

ಮಹಾತ್ಮರ ಮಾರ್ಗವೊಂದೇ ಇದಕ್ಕೆ ಮಾರ್ಗದರ್ಶನ ನೀಡಬಲ್ಲುದು. ಎಂದು ಅರಿಯುತ್ತಾರೆ ಮಾನವ ಕಲ್ಯಾಣ, ಲೋಕಶಾಂತಿ ಬಯಸುವ ಚಿಂತಕರು.

ಮಹಾ–ಆತ್ಮ

ಮಹಾಪುರುಷರು, ಜ್ಞಾನಿಗಳು, ಯೋಗಿಗಳು ಮೊದಲಾದ ದೊಡ್ಡ ವ್ಯಕ್ತಿಗಳ ಸಮೀಪಕ್ಕೆ ಹೋಗಲೂ ಭಯಭಕ್ತಿಯಿಂದ ಜನ ಅಂಜುತ್ತಾರೆ. ಚಕ್ರವರ್ತಿ ಮಹಾರಾಜರನ್ನು ಸಂದರ್ಶಿಸಲು ತಕ್ಕ ಪೋಶಾಕು ಧರಿಸಿ, 'ಕಮ್ಮರ್, ಬಂದ್' ಸೊಂಟಪಟ್ಟಿಕಟ್ಟಿಕೊಂಡು, ಅಂಜಲಿಬದ್ಧರಾಗಿ ಕರೆ ಬಂದಾಗ ನಮ್ರತೆಯಿಂದ ಒಳಹೊಕ್ಕು, ತಲೆಬಾಗಿ ನಮಸ್ಕರಿಸಿ ಪ್ರಭುಗಳ ಗುಣಗಾನ ಮಾಡಿ, ಕಾಣಿಕೆ ಅರ್ಪಿಸಿ, ಮಾತನಾಡುವಾಗ ತಮ್ಮ ಉಸಿರು ಅವರಿಗೆ ತಾಗದಂತೆ, ಬಾಯಿಗೆ ಕೈ ಅಡ್ಡ ಮಾಡಿ ನಯವಿನಯದಿಂದ ನುಡಿಯಬೇಕು. ದೊಡ್ಡವರೆಂದರೆ ಗಂಭೀರ ಮುಖಮುದ್ರೆಯ ಅಪೂರ್ವ ವ್ಯಕ್ತಿ. ಹೀಗೆ ಏನೇನೋ ನಮ್ಮ ಕಲ್ಪನೆ. ದಿಲ್ಲಿಯಲ್ಲಿ ಜಾರ್ಜ್ ಚಕ್ರವರ್ತಿಯವರ ದರ್ಬಾರ್ ನಡೆಯಿತು. ಸಾಮಂತ ರಾಜರು ಆಹ್ವಾನಿತರಾಗಿ ದಿವ್ಯವಸ್ತ್ರಾಭರಣ ಭೂಷಿತರಾಗಿ ದರ್ಬಾರಿಗೆ ಹೋಗಿದ್ದರು. ಚಕ್ರವರ್ತಿಗಳಿಗೆ ಕಾಣಿಕೆ ಸಲ್ಲಿಸಿ, ತಲೆಬಾಗಿ ನಮಸ್ಕರಿಸಿ, ಅವರಿಗೆ ಬೆನ್ನು ತೋರಿಸದೆ, ಹಿಂದು ಹಿಂದಕ್ಕೆ ಅಡಿಯಿಡುತ್ತಾ ನಡೆದು ಬರಬೇಕು. ಬರೋಡ ಮಹಾರಾಜರು, ಈ ನಿಯಮ ಪಾಲಿಸದೆ ಬೆನ್ನು ತಿರುಗಿಸಿಕೊಂಡು ನಡೆದು ಬಂದರೆಂದು ರಾಜಸಭೆಯಲ್ಲಿ ಗುಲ್ಲೋ ಗುಲ್ಲು. ಪದಚ್ಯುತಿ ಮಾಡಿಸಿಬಿಡಬಹುದೆಂಬ ವದಂತಿಗೂ ಇದು ಆಧಾರವಾಯಿತು.

ಮಹಾತ್ಮರೆನಿಸಿಕೊಂಡ ಗಾಂಧೀಜಿ ಈ ಶ್ರೇಣಿಗೆ ಸೇರಿದವರಲ್ಲ. ಮಹಾತ್ಮರೆನಿಸಿಕೊಂಡು ವಿಖ್ಯಾತರಾಗದಿದ್ದರೆ, ಗುಂಪಿನ ಗೋವಿಂದ ಅವರಾಗುತ್ತಿದ್ದರು. ಗುಂಪಿನಲ್ಲಿ ಅವರನ್ನು ಗುರ್ತಿಸಲು ಸಾಧ್ಯವೇ ಆಗುತ್ತಿರಲಿಲ್ಲ. ಅಷ್ಟು ಸರಳ ವ್ಯಕ್ತಿ. ತುಂಡು ಪಂಚೆ, ಮೈ ಮೇಲೆ ಖಾದಿ ಚದ್ದರ್, ಕಾಲಿಗೆ ಒರಟು ಚಪ್ಪಲಿ, ಬೊಕ್ಕ ತಲೆ, ಚೊಕ್ಕ ಬಾಯಿ, ಕೈಯಲ್ಲಿ ಕೋಲು. ಗುಂಪಿನಲ್ಲಿ ಯಾರಾದರೂ ಅವರನ್ನು ಮಾತನಾಡಿಸಬಹುದು. ಮೊದಲೆ ಗೊತ್ತುಮಾಡಿಕೊಂಡು ಅವರೊಡನೆ ಚರ್ಚೆ ಮಾಡಬಹುದು. ಪತ್ರವ್ಯವಹಾರ ನಡೆಸಬಹುದು. ಪ್ರತಿಪತ್ರಕ್ಕೂ ಅವರು ತಪ್ಪದೆ ಉತ್ತರ ನೀಡುವರು.

ವ್ಯಕ್ತಿ ಇಷ್ಟು ಸರಳವಾದರೂ ಅವರಲ್ಲಿ ಏನೋ ಒಂದು ಬಗೆಯ ಅನಿರ್ವಚನೀಯ ಆಕರ್ಷಣೆ. 'ಸತ್ಯಂವದ ಧರ್ಮಂಚರ'. ಭಾರತದ ಜನ ಸಾಮಾನ್ಯ

ರಿಂದಲೂ ಕೇಳಿ ಬರುವ ದಿನ ನಿತ್ಯದ ವಾಕ್ಯಗಳು. ಇದು ಸತ್ಯದ ಹಾದಿ ಎಂದು ಅರಿವಾದರೂ, ಆ ದಾರಿಯಲ್ಲಿ ನಡೆಯಲು ಜನ ಹಿಂಜರಿಯುತ್ತಾರೆ. ಅದು ಮುಳ್ಳು ಕಂಟಿಗಳಿಂದ ತುಂಬಿದ ಮಾರ್ಗ. ಸುಖಮಯವಲ್ಲ. ಸುಖಾಪೇಕ್ಷಿಗಳು ಸುಲಭ ಮಾರ್ಗ ಹಿಡಿಯುತ್ತಾರೆ. ಗಾಂಧೀಜಿ ಎರಡನೆಯ ಶ್ರೇಣಿಗೆ ಸೇರಿದವರಲ್ಲ. ಏನೇ ಕಷ್ಟ ಸಂಕಟ ಬರಲಿ ಸತ್ಯಮಾರ್ಗದಲ್ಲೇ ನಡೆಯುವವರು. ದಕ್ಷಿಣ ಆಫ್ರಿಕದಲ್ಲಿ ಆತ್ಮಗೌರವಕ್ಕಾಗಿ ಭಾರತೀಯರ ಮಾನ ಮತ್ತು ಸ್ವಾತಂತ್ರ್ಯ ಕಾಪಾಡುವುದಕ್ಕಾಗಿ ಅವರು ಅನುಭವಿಸಿದ ಕಷ್ಟ ನಷ್ಟ, ನಡೆಸಿದ ಅಪೂರ್ವ ಹೋರಾಟ ಎಲ್ಲರ ಪ್ರೀತಿ ಗೌರವಕ್ಕೆ ಪಾತ್ರವಾಯಿತು. ಜನರ ಆಕರ್ಷಣೆಗೆ ಇದು ಒಂದು ಪ್ರಮುಖ ಕಾರಣ. ಇಂಥ ಅಪೂರ್ವ ಸಾಹಸಿಯನ್ನು ನೋಡಬೇಕೆಂಬ ಕುತೂಹಲ.

ಹನ್ನೆರಡು ವರ್ಷಕ್ಕೊಮ್ಮೆ ಹರಿದ್ವಾರದಲ್ಲಿ ಕುಂಭಮೇಳ ನಡೆಯುತ್ತದೆ. 1915ರಲ್ಲಿ ದಕ್ಷಿಣ ಆಫ್ರಿಕದಿಂದ ಆಗತಾನೆ ಹಿಂತಿರುಗಿ ಬಂದಿದ್ದ ಗಾಂಧೀಜಿ ಕುಂಭಮೇಳ ನೋಡಲು ಹೋದರು. ಆಫ್ರಿಕದಿಂದ ಭಾರತಕ್ಕೆ ಬಂದಿದ್ದ ಆಶ್ರಮವಾಸಿಗಳು, ಮಗನಲಾಲ್ ಗಾಂಧಿಯವರ ನೇತೃತ್ವದಲ್ಲಿ ಸೇವೆ ಸಲ್ಲಿಸಲು ಇಲ್ಲಿಗೆ ಬಂದಿದ್ದರು. ಇವರ ಕಚೇರಿಗಾಗಿ ಪ್ರತ್ಯೇಕ ಡೇರೆ. ಸೇವೆ ಸಲ್ಲಿಸಲು ಬಂದ ಗಾಂಧಿಯವರಿಗೆ ಸೇವೆ ಸಲ್ಲಿಸಲು ಅವಕಾಶವೇ ದೊರೆಯಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ದರ್ಶನಾರ್ಥಿಗಳಿಗೆ ದರ್ಶನ ಕೊಡುವುದರಲ್ಲಿ, ಅವರೊಡನೆ ಧಾರ್ಮಿಕ ವಿಷಯದ ಚರ್ಚೆ ನಡೆಸುವುದರಲ್ಲಿಯೇ ವೇಳೆ ಕಳೆದು ಹೋಗುತ್ತಿತ್ತು. ಸ್ನಾನಕ್ಕೆ ಹೋಗಲಿ, ಊಟಕ್ಕೆ ಕೂಡಲಿ ದರ್ಶನಾರ್ಥಿಗಳು ಬಿಡರು. ತಾನು ಆಫ್ರಿಕದಲ್ಲಿ ಸಲ್ಲಿಸಿದ್ದ ಸೇವೆಯ ಪರಿಣಾಮ ಭಾರತದಲ್ಲಿ ಬೀರಿದ್ದುದರ ಅರಿವು ಅವರಿಗೆ ಆದುದು ಆಗಲೇ.

ಗಾಂಧೀಜಿ ಇಲ್ಲಿ ಒಂದು ಸಂದಿಗ್ಧ ಸಂಕಟಕ್ಕೆ ಸಿಲುಕಿಕೊಂಡರು. ತನ್ನ ವ್ಯಕ್ತಿತ್ವದ ಅರಿವಿಲ್ಲದ ಗುಂಪಿನಲ್ಲಿ ಒಬ್ಬನಾದರೆ ಲಕ್ಷಾಂತರ ಯಾತ್ರಿಕರು ಅನುಭವಿಸುತ್ತಿದ್ದ ತೊಂದರೆಗೆ ತಾನೂ ಗುರಿಯಾಗಬೇಕು. ವ್ಯಕ್ತಿತ್ವದ ಅರಿವಾದರೆ ದರ್ಶನಾಪೇಕ್ಷಿಗಳ ಕಾಟ. ದರ್ಶನಾಕಾಂಕ್ಷಿಗಳ ಪ್ರೇಮ ಅನೇಕ ಸಾರಿ ಇವರಿಗೆ ಕೋಪ ಬರುವಂತೆ ಮಾಡುತ್ತಿತ್ತು. ಪ್ರವಾಸ ,ಕಷ್ಟಕರವಾದರೂ ಅದು ಹೆಚ್ಚು ಉತ್ತೇಜಕವಾಗಿರುತ್ತಿತ್ತೆಂದು ಅನುಭವದಿಂದ ಗಾಂಧೀಜಿ ಗ್ರಹಿಸಿದರು.

ಕುಂಭಮೇಳಕ್ಕೆ ನೆರೆದಿದ್ದ ಬಹು ಸಂಖ್ಯಾತ ಕಪಟ ಸಾಧುಗಳು, ದೈವಭಕ್ತ ಪ್ರೇರಿತರಾಗಿ ಬಂದಿದ್ದ ಅಸಂಖ್ಯಾತ ಭಕ್ತಾದಿಗಳನ್ನು ಮೋಸದಿಂದ ಸುಲಿಗೆ ಮಾಡುತ್ತಿದ್ದರು. ಇಲ್ಲಿ ನಡೆಯುತ್ತಿದ್ದ ಮೋಸ, ಕಪಟ ಗಾಂಧಿಯವರ ಮನ ನೊಂದಿಸಿ ಚಿಂತೆಗೆ ಈಡುಮಾಡಿತು. ಕುಂಭಮೇಳದಲ್ಲಿ ಭಾಗಿಯಾಗುವುದು ಪಾಪ

ಕರ. ಆದ್ದರಿಂದ ಇದಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಅತಿಥಿಯನ್ನು ಸತ್ಕರಿಸಲು ಗೃಹಸ್ಥರು ಅನೇಕ ಭಕ್ಷ್ಯಭೋಜ್ಯ ಮಾಡಿಸುತ್ತಾರೆ. ಸಂತೋಷ ಗೊಳಿಸಲು ವಿಶೇಷ ಶ್ರಮವಹಿಸುತ್ತಾರೆ. ಇವೆಲ್ಲಕ್ಕೂ ಆಸ್ಪದ ಕೊಡದಂತೆ ತಾನು ಸೇವಿಸುವ ವ್ಯಂಜನ ಐದಕ್ಕೆ ಇಳಿಸಿಕೊಂಡರು. ಸೇವಿಸುವ ಔಷಧವೂ ಇದರಲ್ಲಿ ಸೇರಿಕೊಳ್ಳುತ್ತದೆ. ಯಾವ ಸಂದರ್ಭದಲ್ಲೂ, ಇದನ್ನು ಹೆಚ್ಚಿಸಿಕೊಳ್ಳಲಾಗದು. ಸಂಜೆಯ ಊಟ ಕತ್ತಲಾಗುವುದರಲ್ಲಿ ಮುಗಿಸಬೇಕು. ಈ ರೀತಿಯ ತೀರ್ಮಾನ ತೆಗೆದುಕೊಂಡರು. ಜೀವಾವಧಿ ಈ ನಿಯಮ ಪಾಲಿಸುತ್ತ ಬಂದರು

ಆಹಾರ, ವಿಹಾರ, ಉಡುಪು ಇವುಗಳಲ್ಲಿ ಎಷ್ಟು ಸರಳವೋ ಅಂತೆಯೇ ಅವರು ಬಳಸುತ್ತಿದ್ದ ಪ್ರತಿಯೊಂದು ಪದಾರ್ಥವೂ ಅಗ್ಗ. ಬಡವರು ಬಳಸುವ ವಸ್ತುಗಳನ್ನೇ ತಾವು ಮತ್ತು ಆಶ್ರಮವಾಸಿಗಳು ಬಳಸಬೇಕು. ಬಡವರು ಊಟದ ಎಲೆಹಚ್ಚಿ ಅದರಲ್ಲಿ ಊಟ ಮಾಡುತ್ತಾರೆ. ಊಟದ ನಂತರ ಎಲೆ ಎತ್ತಿ ಹಾಕುತ್ತಾರೆ. ಮಣ್ಣಿನ ಮಡಕೆ ಬಳಸುತ್ತಾರೆ. ಆಶ್ರಮದಲ್ಲಿಯೂ ಹೀಗೇ ಮಾಡಬೇಕೆಂದರು. ಒಮ್ಮೆ ಊಟಕ್ಕೆ ಬಳಸಿದ ಮಣ್ಣಿನ ಪಾತ್ರೆ ಮತ್ತೆ ಬಳಸುತ್ತಿರಲಿಲ್ಲ ಆಶ್ರಮದಲ್ಲಿ. ಉಪಯುಕ್ತ ಪದಾರ್ಥ ತೊರೆಯುವುದು ಸರಿಯಲ್ಲ. ಇದು ಹಿಂಸೆ. ಬಳಸಿದ ತಟ್ಟೆ, ಕುಡಿಕೆ ಹಾಗೆ ಬಳಸುವುದು ಆರೋಗ್ಯಕರವಲ್ಲ. ತೊಳೆದು ಮತ್ತೆ ಸುಟ್ಟು ಬಳಸಬಹುದು. ಹೀಗೆ ಗಾಂಧೀಜಿ ಸೂಚಿಸಿದರು. ಆದರೆ ಈ ಪದ್ಧತಿ ಬಹುಕಾಲ ನಡೆಯಲಿಲ್ಲ. ತಟ್ಟೆ, ಬಟ್ಟಲು ಆಶ್ರಮದಲ್ಲಿ ಬಳಕೆಗೆ ಬಂತು. ಜೈಲಿಗೆ ಹೋಗಿ ಬಂದ ಮೇಲೆ ಜೈಲಿನವರು ಕೊಟ್ಟ ತಟ್ಟೆ, ತಾಟು ಗಾಂಧೀಜಿ ಬಳಸತೊಡಗಿದರು. ಆಶ್ರಮದಲ್ಲಿ ಕೆಲವು ದಿನ ಉಳಿದಿದ್ದ ಲಾರ್ಡ್ ಲೋಥಿಯನ್ ಇವರ ಸರಳತೆ ನೋಡಿ, ಸರಳತೆಯು ಅಹಿಂಸೆಯ ಅಂಗವೆಂದು ಈಗ ತನಗೆ ಅರಿವಾಗುತ್ತಿದೆ ಎಂದರು.

•

ಇಷ್ಟು ಸರಳ ಜೀವನ ಅವರು ನಡೆಸುತ್ತಿದ್ದರೂ, ಅತಿಥೇಯರು ಇವರ ಧ್ಯೇಯ ಮತ್ತು ಜೀವನಕ್ರಮದ ಅರಿವಿಲ್ಲದೆ, ಅತಿಥಿಯನ್ನು ಸಂತೋಷಪಡಿಸುವ ಉದ್ದೇಶದಿಂದ ಶ್ರೀಮಂತಿಕೆಯ ಉಪಚಾರ ನೀಡುತ್ತಿದ್ದರು. ಇದರಿಂದ ಗಾಂಧಿಯವರಿಗೆ ಸಂತೋಷಕ್ಕಿಂತ ಹೆಚ್ಚಾಗಿ ದುಃಖವೇ ಆಗುತ್ತಿತ್ತು.

ನವಾಖಾಲಿಯ ದುಃಖಶಮನ ಯಾತ್ರೆಗೆ ಹೊರಟಾಗ ಒಪ್ಪೊತ್ತು ಮಿಡ್ನಾಪುರದಲ್ಲಿ ರಾಜನರಜೋಲೆ ಶ್ರೀಮಂತ ಜಮೀನ್ದಾರನ ಮನೆಯ ಆತಿಥ್ಯ ಸ್ವೀಕರಿಸಬೇಕಾಯಿತು. ಬಂಗಾರದ ತಟ್ಟೆಯಲ್ಲಿ ಇವರ ಭೋಜನ ಬಡಿಸಲಾಯಿತು. ಈ ವೈಭವದ ಸತ್ಕಾರದಿಂದ ಗಾಂಧೀಜಿ ನೊಂದರು. ಆದರೆ ಮನೆಯ ಯಜಮಾನ

ಮತ್ತು ಅಭ್ಯಾಗತರಿಗೆ ತೊಂದರೆ ಮಾಡಬಾರದು. ಅವರ ಮನಸ್ಸು ನೋಯಿಸಬಾರದೆಂದು ಚಿನ್ನದ ತಟ್ಟೆಯಲ್ಲಿ ಊಟ ಮಾಡಿದರು.

ಒಮ್ಮೆ ಆಂಧ್ರ ಪ್ರದೇಶದಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಭಕ್ತರು ದ್ರಾಕ್ಷಿ ತಂದುಕೊಟ್ಟರು. ದ್ರಾಕ್ಷಿ ತಿನ್ನುತ್ತಿದ್ದುದನ್ನು ಒಬ್ಬ ಸಹ ಪ್ರಯಾಣಿಕ ನೋಡಿ, ಬಡವರ ಬಂಧು ದ್ರಾಕ್ಷಿ ಸೇವಿಬಹುದೇ ಎಂದು ಇವರನ್ನು ತರಾಟೆಗೆ ತೆಗೆದುಕೊಂಡ. ಒಂದು ಪದಾರ್ಥ ಸೇವಿಸಿದ್ದರೆ, ಊಟದಲ್ಲಿ ಒಂದು ವ್ಯಂಜನ ಬಾಪು ಕಡಿಮೆ ಮಾಡಿಕೊಳ್ಳುವುದು ಅವನರಿಯ. ಆಗ ಬಾಪು ಸ್ವಲ್ಪವೂ ಕೋಪ ಮಾಡಿಕೊಳ್ಳದೆ, ತಾನು ದ್ರಾಕ್ಷಿ ಸೇವಿಸುತ್ತಿದ್ದುದನ್ನು ಡಂಗುರ ಸಾರಿ ಜಗಜ್ಜಾಹೀರು ಮಾಡಬೇಕಾಗಿ ತಿಳಿಸಿದರು. ಬಾಪೂವಿನ ಬಡತನ ಶ್ರೀಮಂತಿಕೆಯಿಂದಲೇ ಸಾಧ್ಯ ಎಂದು ಹಾಸ್ಯ ಮಾಡುತ್ತಿದ್ದರು, ಸರೋಜಿನಿ ನಾಯ್ಡು.

'ನಿಂದಕರಿರಬೇಕು' ಎಂದು ಪುರಂದರದಾಸರು ಹಾಡಿರುವಂತೆ, ಮಹಾತ್ಮರು ನಿಂದಕರಿಗೂ, ಮೂರ್ಖರಿಗೂ, ವಿಚಿತ್ರ ಸ್ವಭಾವದವರಿಗೂ ಆಶ್ರಯ ನೀಡುತ್ತಿದ್ದರು. ತಮ್ಮ ಆಶ್ರಮ ವಿಚಿತ್ರ ಪ್ರಯೋಗಾಲಯ ಎಂದು ಹಾಸ್ಯ ಚಟಾಕಿ ಹಾರಿಸುತ್ತಿದ್ದರು. ನಾನಾ ಜಾತಿ, ಕುಲ, ವರ್ಣ, ಮತ, ಸಿರಿವಂತ, ಬಡವ ಎಲ್ಲರಿಗೂ ಆಶ್ರಯ ನೀಡಿತ್ತು, ಆಶ್ರಮ. ಒಬ್ಬೊಬ್ಬರದು ಒಂದೊಂದು ಸ್ವಭಾವ. ಊಟ, ತಿಂಡಿ, ಉಡುಪು, ಶಿಕ್ಷಣ ಎಲ್ಲದರಲ್ಲೂ ಭಿನ್ನ. ಇವರೆಲ್ಲರೂ ಒಂದೇ ಸ್ಥಳದಲ್ಲಿ ಉಳಿದು ಸಹಬಾಳ್ವೆ ಮಾಡುವಂತೆ ಮಾಡಿದ್ದುದು ಗಾಂಧಿಯವರ ಸಮ್ಮೋಹನಾಸ್ತ್ರ. ಬ್ರಿಟಿಷ್ ಚಕ್ರವರ್ತಿಯ ಕುಟುಂಬಕ್ಕೆ ಸೇರಿದ ಪೂರ್ವಾಶ್ರಮದ ಮಿಸ್ ಸ್ಲೇಡ್, ಮೀರಾಬೆಹ್ನ್ ಆಗಿ, ಬಡತನ ಸ್ವೀಕರಿಸಿ, ಮುಂಡನ ಮಾಡಿಸಿಕೊಂಡು, ಸೀರೆ ಉಟ್ಟು, ಬಾಪುವಿನ ಸೇವೆಯಲ್ಲಿ ತಲ್ಲೀನಳಾಗಿರುತ್ತಿದ್ದಳು. ವೃದ್ಧ ಇಮಾಂ ಸಾಹೇಬ ಕುಟುಂಬ ಸಹಿತ ಆಶ್ರಮವಾಸಿಯಾಗಿದ್ದರು. ಸಂತ ವಿನೋಬ, ಕುಷ್ಠರೋಗಿ ಸಂಸ್ಕೃತ ವಿದ್ವಾನ್ ಪರಚುರೆ ಶಾಸ್ತ್ರೀ, ಸಿಪಾಯಿ ಬಲವಂತ ಸಿಹ್ನ, ಡಾಕ್ಟರ್ ಸುಶೀಲ ನಯ್ಯಾರ್, ಡಾಕ್ಟರ್ ಕುಮಾರಪ್ಪ, ಮಾರ್ಗರೆಟ್ ಸ್ಪೈಗೆಲ್, ಮಶ್ರುವಾಲ, ಕಾಲೇಲ್ಕರ್, ಅಬ್ಬಾಸ್ ತಯಾಬ್ಜಿ, ಅಮ್ತುಸ್ ಸಲಾಂ, ಪ್ರೇಮ ಕಂಟಕ್, ಅಮೃತ್‌ಕೌರ್, ಪಂಡಿತ ಧರ್ಮಾನಂದ ಕೋಸಾಂಬಿ, ಮಹದೇವ ದೇಸಾಯಿ, ಆರ್ಯನಾಯಕಂ ದಂಪತಿ, ಜಪಾನಿ ಭಿಕ್ಷು. ಹೀಗೆ ನಾನಾ ಕುಲಗೋತ್ರಗಳು. ತಮ್ಮ ಆಶ್ರಮವನ್ನು, ನಾನಾ ಮೃಗಪಕ್ಷಿಗಳ ಮೃಗಾಲಯಕ್ಕೆ ಹೋಲಿಸುವರು ಬಾಪು. ಎಲ್ಲರಿಗಿಂತ ವಿಚಿತ್ರ ವ್ಯಕ್ತಿ ಪ್ರೊಫೆಸರ್ ಭನ್ಸಾಲಿ. ಗುಜರಾತ ವಿದ್ಯಾಪೀಠದಲ್ಲಿ ಪ್ರಾಧ್ಯಾಪಕರಾಗಿದ್ದ ಭನ್ಸಾಲ ಬರೀ ಬೆತ್ತಲೆಯಾಗಿ, ಅರಣ್ಯದಲ್ಲಿ ಅಲೆದಾಡುತ್ತ, ಗೋಧಿಹಿಟ್ಟು, ಬೇವಿನ ಎಲೆ ಆಹಾರ ಮಾಡಿಕೊಂಡು ಬಾಳಿದರು. ಚೀಮೂರಿನಲ್ಲಿ ಸತ್ಯಾಗಹ್ರಿ

ಸ್ತ್ರೀಯರನ್ನು ಪೊಲೀಸರು ಸರಿಯಾಗಿ ಗೌರವದಿಂದ ನೋಡಿಕೊಳ್ಳಲಿಲ್ಲವೆಂದು ಉಪವಾಸ ಆಚರಿಸುತ್ತ, 63 ಮೈಲಿಯ ದೂರದ ಚೀಮೂರಿಗೆ ಸೇವಾಗ್ರಾಮ ಆಶ್ರಮ ದಿಂದ ಉರಿಬಿಸಿಲಲ್ಲಿ ನಡೆಯುತ್ತ ಹೊರಟು ಸೇರಿದ ಧೀರ. ಇನ್ನೊಂದು ಸಾರಿ ಅನ್ನ ನೀರು ತೊರೆದು 40 ಮೈಲಿ ನಡೆದಿದ್ದಾಗ ಪೊಲೀಸರು ಇವರನ್ನು ಬಂಧಿಸಿ ಆಶ್ರಮಕ್ಕೆ ತಂದು ಬಿಟ್ಟರು. ಮೌನ ಆಚರಿಸಲು ತುಟಿ ಹೊಲೆದು ಕೊಂಡರು. ಬಾವಿಯ ಅಡ್ಡಕಟ್ಟೆಗೆ ಕಾಲು ತೂಗಿ ಹಾಕಿಕೊಂಡು ತಲೆಕೆಳಗಾಗಿ ದಿನವೆಲ್ಲ ಕಳೆದ ಹುಚ್ಚನೆನಿಸಿಕೊಳ್ಳುತ್ತಿದ್ದ ಈ ಮೇಧಾವಿ ಭನ್ಸಾಲಿ. ಆಶ್ರಮದಲ್ಲಿ ಕೆಲಕಾಲ ಉಳಿದು ಅಲ್ಲಿನ ನಿಯಮ ಪಾಲಿಸಲಾರದೆ ಬಿಟ್ಟು ಹೋದವರು ಎಷ್ಟೋ. ಇವರೆಲ್ಲರನ್ನೂ ಕೂಡಿಹಾಕಿಕೊಂಡು ಮಾರ್ಗದರ್ಶನ, ಸ್ವಯಂ ಆಚರಣೆಯಿಂದ ನೀಡುತ್ತ, ಪಾಲಿಸಿ ಕೊಂಡು ಬರುತ್ತಿದ್ದ ಬಾಪು ಮಹಾತ್ಮರೇ ಆಗಿರಬೇಕಲ್ಲವೇ ?

ಮೋಹನದಾಸ ಕರಮಚಂದ ಗಾಂಧಿ ಸಾಮಾನ್ಯರಾಗಿ ಹುಟ್ಟಿದವರಾದರೂ ಮೂಢಭಕ್ತಿಯ ಜನ ಮಹಾತ್ಮರನ್ನು ಅವತಾರ ಪುರುಷನೆಂದು ಭಾವಿಸುತ್ತಿದ್ದರು. ಹುಟ್ಟಿದವನು ತನ್ನ ಜನ್ಮದಿನದಂದು ಹಿರಿಯರನ್ನು ನಮಸ್ಕರಿಸಿ ಆಶೀರ್ವಾದ ಕೋರು ವುದು ವಾಡಿಕೆ. ಆದರೆ ಗಾಂಧಿಯವರ ಹುಟ್ಟು ಹಬ್ಬದ ದಿನ ಹಿರಿಯರು ಅವರನ್ನು ನಮಸ್ಕರಿಸುವರು. ಹೊಸಲೋಕ ಸೃಜಿಸುವ ಶಕ್ತಿಯ ವಿಶ್ವಾಮಿತ್ರ ತಾನಲ್ಲ, ವರ ಕೊಡುವ ಸಂಜೀವರಾಯ ತಾನಲ್ಲ ಎಂದು ಹೇಳಿದರೂ ಕೇಳದೆ ವರ ಬೇಡಲು ಇವರಲ್ಲಿ ಬರುವರು. 1924 ರಲ್ಲಿ ಗಾಂಧೀಜಿ ದಿಲ್ಲಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದರು. ಹದಿಮೂರನೆಯ ದಿನ ಇವರು ಬಹಳ ಬಳಲಿದ್ದಾಗ 'ದಿಲ್‌ಖುಷ್' ಭವನದ ಎದುರು ಸಾವಿರಾರು ಜನ ಸೇರಿದ್ದರು. ಒಬ್ಬರು ದಂಪತಿ ಗಳು ಗಾಂಧಿಯ ದರ್ಶನಕ್ಕಾಗಿ ಧಾವಿಸಿ ಬಂದರು. ಬಾಗಿಲು ಕಾಯುತ್ತಿದ್ದ ಆಂಡ್ರೂಸ್ ಅವರನ್ನು ಒಳಕ್ಕೆ ಬಿಡಲಿಲ್ಲ. ಆಗ ದಂಪತಿಗಳು ತಮ್ಮ ಮಗ ಮರಣಾ ವಸ್ಥೆಯಲ್ಲಿದ್ದಾನೆ. ಮಹಾತ್ಮರ ಪಾದ ತೊಳೆದ ತೀರ್ಥ ಕೊಟ್ಟರೆ ಗುಣವಾಗುತ್ತದೆ ಎಂಬ ನಂಬಿಕೆಯಿಂದ ತಾವು ಬಂದಿರುವುದಾಗಿ ತಿಳಿಸಿದರು. ತಮ್ಮೊಡನೆ ಒಂದು ಕೊಡ ನೀರೂ ತಂದಿದ್ದರು. ಆಂಡ್ರೂಸ್ ಎಷ್ಟು ಹೇಳಿದರೂ ಕದಲಲು ನಿರಾಕರಿಸಿ ದರು. ಗಾಂಧಿಯವರಿಗೆ ವಿಷಯ ತಿಳಿಸಿ, ಅನುಮತಿ ಪಡೆದು ದಂಪತಿಗಳನ್ನು ಒಳಕ್ಕೆ ಬಿಡಲಾಯಿತು. ಮಾತನಾಡುವ ಶಕ್ತಿ ಇಲ್ಲದಿದ್ದರೂ, ಮೆಲುದನಿಯಲ್ಲಿ ಈ ಮೂಢನಂಬಿಕೆ ತೊರೆದು, ಒಳ್ಳೆಯ ಚಿಕಿತ್ಸೆ, ನೈರ್ಮಲ್ಯಕ್ಕೆ ಗಮನಕೊಟ್ಟು ಮಗನನ್ನು ಉಪಚರಿಸುವಂತೆ ತಿಳಿಸಿದರು. ಈ ಬಗೆಯ ಮೂಢನಂಬಿಕೆ ಬಿಡುವಂತೆ ಜನರಲ್ಲಿ ಪ್ರಚಾರಮಾಡುವಂತೆಯೂ ತಿಳಿಸಿದರು. ಪಾರ್ಶ್ವವಾಯುವಿನಿಂದ ನರಳು ತ್ತಿದ್ದ ಒಬ್ಬ ಬಂಗಾಲಿ, ಮಹಾತ್ಮರ ನಾಮಸ್ಮರಣೆಯಿಂದ ಗುಣವಾದುದಾಗಿ ತಿಳಿಸಿದ.

ನಂದಿ ಬೆಟ್ಟದ ಆರೋಗ್ಯಧಾಮದಲ್ಲಿದ್ದಾಗ ಮೈಸೂರಿನ ಮಕ್ಕಳಿಲ್ಲದ ಒಬ್ಬ ದಂಪತಿಗಳು ಬಂದು, ಮಕ್ಕಳಾಗಲು ತಮಗೆ ಪ್ರಸಾದ ದಯಪಾಲಿಸಬೇಕೆಂದು ಬೇಡಿದರು. ದಶರಥನಿಗೆ ಅನುಗ್ರಹವಾದ ಪಾಯಸದಿಂದ ನಾಲ್ಕು ಪುತ್ರ ರತ್ನಗಳು ಜನಿಸಿರಬಹುದು. ಆದರೆ ಅಂಥ ವರ ನೀಡುವ ಶಕ್ತಿ ತನಗಿಲ್ಲ. ಮೈಸೂರು ದೇಶದಲ್ಲಿ ನೂರಾರು ಅನಾಥ ಮಕ್ಕಳಿದ್ದಾರೆ. ಎಲ್ಲ ಮಕ್ಕಳೂ ತಮ್ಮ ಮಕ್ಕಳೇ ಎಂದು ತಿಳಿದು ಒಂದು ಮಗುವನ್ನು ಸ್ವೀಕರಿಸಿ, ತಮ್ಮ ಮಗನಂತೆ ಪಾಲಿಸಿ ಪೋಷಿಸಬೇಕಾಗಿ ತಿಳಿಸಿದರು.

ಗಾಂಧೀಜಿ ಶ್ರೀಕೃಷ್ಣನಂತೆ, ಏಕಕಾಲದಲ್ಲಿ ನಾನಾಕಡೆಗಳಲ್ಲಿ ಕಾಣಿಸಿಕೊಳ್ಳು ತ್ತಾರೆ. ಅವರ ಮಲಮೂತ್ರ ಸುಗಂಧಿತವಾಗಿರುತ್ತೆ. ಹೀಗೆ ಹೇಳುವವರು ಅವಿದ್ಯಾವಂತ ಮೂಢರು ಮಾತ್ರವಲ್ಲ. ಅವರು ಕುಳಿತ ಸ್ಥಳ ಪವಿತ್ರ ದೇಗುಲ. ಪಾದ ಸ್ಪರ್ಶಿತ ಭೂಮಿ ಪುಣ್ಯಭೂಮಿ ಎಂದು ಉದ್ಗರಿಸಿದವರು ವಿಚಾರವಂತ ನೆಹರು. ಇಂಥ ವ್ಯಕ್ತಿ ಪೂಜನೀಯರೇ ಸರಿ. ಅವರು ಗುಂಡಿಗೆ ಆಹುತಿಯಾಗಿ ಅಸುನೀಗಿದ ಸ್ಥಳದ ಮಣ್ಣು ತೆಗೆದು ಕರಂಡಗಳಲ್ಲಿ ತುಂಬಿ ಒಯ್ದರು ಎಷ್ಟೋ ಜನ. ಅವರ ಚಿತಾ ಭಸ್ಮಕ್ಕೆ ದೇಶವಿದೇಶಗಳಿಂದ ಬೇಡಿಕೆ ಬಂತು. ಬೆಂಗಳೂರಿನಿಂದ ನಿರ್ಗಮಿಸುವಾಗ ಅವರ ಪಾದರಕ್ಷೆ ಕೆ.ಟಿ. ಭಾಷ್ಯಂ ಬೇಡಿ ಕಾಡಿ ಪಡೆದು, ಶಿರಸಾಧರಿಸಿ ವಾದ್ಯಸಹಿತ ಕಾಂಗ್ರೆಸ್ ಭವನಕ್ಕೆ ಒಯ್ದರು. ಮೂಢನಂಬಿಕೆ ಅಲ್ಲದಿದ್ದರೂ ಭಕ್ತಿಯ ಅತಿರೇಕ ಎನ್ನಬಹುದು. ಶ್ರೀರಾಮನ ಪಾದುಕೆ ಸಿಂಹಾಸನಕ್ಕೆ ಏರಿಸಿ, ಭರತ ರಾಜ್ಯಭಾರ ನಡೆಸಲಿಲ್ಲವೇ, ಶ್ರೀರಾಮನ ಹೆಸರಿನಲ್ಲಿ. ತರ್ಕವಾದಿಗಳೂ, ವಿದ್ಯಾವಂತರೂ ಅವರ ತೀರ್ಪುಗಳನ್ನು ಮರುಮಾತಿಲ್ಲದೆ ಒಪ್ಪಿಕೊಳ್ಳುತ್ತಿದ್ದರು. ವಿಚಾರವಂತರಿಂದಲೂ ಅನುಭವಿಗಳಿಂದಲೂ ಕೂಡಿದ್ದ ರಾಷ್ಟ್ರೀಯ ಮಹಾಸಭೆ, ಸತ್ಯಾಗ್ರಹದ ನಾಯಕತ್ವ ಗಾಂಧಿಯವರಿಗೇ ವಹಿಸಿಕೊಡುತ್ತಿತ್ತು. ಅವರಿಗೆ ಸರ್ವಾಧಿಕಾರಿಯ ಪಟ್ಟಕಟ್ಟಿ ಅವರು ಹೇಳಿದಂತೆ ನಡೆದುಕೊಳ್ಳುತ್ತಿದ್ದರು. ಮಹಮ್ಮದ್ ಆಲಿ, ಷೌಕತ್ ಆಲಿ, ಆಜಾದ್, ತಯಾಬ್ಜಿ, ಮೋತಿಲಾಲ್, ಜವಹರಲಾಲ್, ವಲ್ಲಭಾಯಿ, ರಾಜೇಂದ್ರ ಪ್ರಸಾದ್, ದಾಸ್, ಸೆನ್‌ಗುಪ್ತ, ಗಫಾರ್‌ಖಾನ್, ಗಂಗಾಧರರಾವ್ ದೇಶಪಾಂಡೆ, ದಿವಾಕರ್, ರಾಜಾಜಿ, ಸದಾಶಿವರಾವ್, ಕೊಂಡಾ ವೆಂಕಟಪ್ಪಯ್ಯ, ಪ್ರಕಾಶಂ, ಸರೋಜಿನಿ, ಮೊದಲಾದ ನೂರಾರು ಮೇಧಾವಿಗಳು ಅವರು ಹೇಳಿದಂತೆ ನಡೆದು ಕೊಳ್ಳಲು ಕಾರಣವೇನು?

ಲೋಕಮಾನ್ಯರಂತೆ ತಾನು ವಿದ್ಯಾಸಾಗರನಲ್ಲ. ಜಮುನಾಲಾಲರಂತೆ ಶ್ರೀಮಂತನಲ್ಲ. ರಾಜೇಂದ್ರ ಪ್ರಸಾದ್, ಮೋತಿಲಾಲ್, ಸಿ. ಆರ್ ದಾಸ್, ರಾಜ ಗೋಪಾಲಾಚಾರಿ ಇವರಂತೆ ಮೇಧಾವಿಯಲ್ಲ. ಷೌಕತ್ ಆಲಿ, ಗಫಾರ್ ಖಾನರಂತೆ

ಆಜಾನುಬಾಹುವಲ್ಲ. ಸರೋಜಿನಿಯಂತೆ ಕೋಗಿಲೆಯಲ್ಲ, ರಾಮಕೃಷ್ಣ ಪರಮಹಂಸ, ರಮಣ ಮಹರ್ಷಿಗಳಂತೆ ದೈವಜ್ಞನಲ್ಲ, ರವೀಂದ್ರರಂತೆ ವಿಶ್ವಕವಿಯಲ್ಲ. ಅವರ ವ್ಯಕ್ತಿತ್ವವೂ ಇಲ್ಲ. ಘೋಷ್, ಸಿ. ವಿ. ರಾಮನ್ ಅವರಂತೆ ವಿಜ್ಞಾನಿಯಲ್ಲ. ಸುಭಾಸ್‌ಬೋಸ್, ಸಾವರ್‌ಕರ್, ಲಜಪತರಾಯರಂತೆ ಸಾಹಸವೀರನಲ್ಲ, ವೈದ್ಯನಲ್ಲ. ಆದರೆ ಈ ಎಲ್ಲ ಉತ್ತಮ ಗುಣಗಳೂ ಇವರಲ್ಲಿ ಸಮ್ಮಿಶ್ರವಾಗಿದ್ದವು. ಲಕ್ಷಾಂತರ ಜನ ಇವರ ಆಣತಿಯಂತೆ ನಡೆದುಕೊಳ್ಳಲು ಸಿದ್ಧರಾಗಿ, ಸರ್ವಸ್ವ ತೊರೆದು, ಸಹನಾತೀತ ಕಷ್ಟ ಕಾರ್ಪಣ್ಯ ಸಹಿಸುತ್ತಿದ್ದರು. "ಮಹಾತ್ಮ ಗಾಂಧೀಕಿ ಜೈ" ಜಯಘೋಷ ಸ್ಫೂರ್ತಿದಾಯಕ ಮಂತ್ರವಾಗಿತ್ತು. ಈ ಜಯಘೋಷ ತನಗೆ ಕರ್ಣ ಕಠೋರ ವಾಗಿದೆ ಎಂದು ಅವರು ಕಿವಿ ಮುಚ್ಚಿಕೊಳ್ಳುತ್ತಿದ್ದರೂ, ಜನ ಬಿಡರು.

ಕರ್ಮಯೋಗಿ, ಗೀತೆಯ ಸ್ಥಿತಪ್ರಜ್ಞನಂತೆ ಆಗುವ ಬಯಕೆ. ಬಯಕೆ ಮಾತ್ರದಿಂದ ತೃಪ್ತನಾಗದೆ, ಧ್ಯೇಯ ಸಾಧನೆಗಾಗಿ ಅಹರ್ನಿಶಿ ಮಾಡುತ್ತಿದ್ದ ಸತತ ಪ್ರಯತ್ನ. ನುಡಿಗಿಂತ ನಡೆಗೆ ಕೊಡುತ್ತಿದ್ದ ಪ್ರಾಮುಖ್ಯತೆ. "ವೇದಾಂತ ನುಡಿಯು ವವರ ಬಲ್ಲೆ; ಸಿದ್ಧಾಂತ ನಡೆಯುವವರ ಕಾಣೆ" ಎಂಬ ವಚನ ಪೊಳ್ಳು ಮಾಡಿದ ಮಹಾ ಆತ್ಮ. ಭಾರತದಲ್ಲಿ ಸನ್ಯಾಸಿಗೆ ದೊರೆಯುವ ಮನ್ನಣೆ ಎಂಥ ಮಹಾಪುರುಷ ನಿಗೂ ಅಲಭ್ಯ. ಗಾಂಧೀಜಿ ಕಾವಿ ಧರಿಸಿದ ಸನ್ಯಾಸಿ ಅಲ್ಲ. ಖಾದಿಯೇ ಅವರಿಗೆ ಕಾವಿ. ನಾನಾ ಕ್ಷೇತ್ರಗಳಲ್ಲಿ ಎಸಗಿದ ಕಾರ್ಯ. ಒಂದೊಂದು ಕ್ಷೇತ್ರದ ಕಾರ್ಯ ಅವರವರಿಗೆ ಆಪ್ಯಾಯಮಾನ. ಆದ್ದರಿಂದ ಸಕಲರಿಂದಲೂ ಸನ್ಮಾನಿತ. ಶತ್ರುಗಳೂ ಮಿತ್ರ ರಾಗುತ್ತಿದ್ದರು. ಎಂಥವರನ್ನಾದರೂ ವಶಪಡಿಸಿಕೊಳ್ಳುವ ಶಕ್ತಿ ಅವರಿಗುಂಟು, ಜೋಕೆ ಎಂದು ಎಚ್ಚರಿಕೆ ಕೊಡುತ್ತಿದ್ದುದೂ ಉಂಟು. ವಶೀಕರಣ ಮಂತ್ರ ತಂತ್ರ ವಿಲ್ಲದಿದ್ದರೂ ತನ್ನ ವಾದ, ನುಡಿ ಮತ್ತು ನಡತೆಯಿಂದ ತಾರ್ಕಿಕರ ಹೃದಯ ಪರಿವರ್ತನೆ ಮಾಡುವ ಅಸಾಧ್ಯ ಸಾಮರ್ಥ್ಯ ಗಳಿಸಿಕೊಂಡಿದ್ದರು. ಬಾಲಗಂಗಾಧರ ತಿಲಕರು ಎಂತು ಲೋಕಮಾನ್ಯರಾಗಿದ್ದರೋ ಅಂತೆಯೇ ಮೋಹನದಾಸ ಗಾಂಧಿ ಲೋಕಕ್ಕೇ ಮಹಾ–ಆತ್ಮರಾಗಿದ್ದರು. ಅವರ ಹೆಸರೇ ಮಹಾತ್ಮ ಆಯಿತು. ಸುಭಾಷ್ ಚಂದ್ರಬೋಸರ ಹೆಸರು ನೇತಾಜಿ ಆದಂತೆ.

ಮಹಾವ್ಯಕ್ತಿಗಳನ್ನು ಅವತಾರ ಪುರುಷರೆಂದು ದೈವತ್ವಕ್ಕೆ ಏರಿಸುವುದು ಹಿಂದೂ ಸಂಸ್ಕೃತಿಯ ಲಕ್ಷಣ. ರಾಜಕುಮಾರ ಸಿದ್ಧಾರ್ಥ ಬೌದ್ಧಾವತಾರಿಯಾದ. ಶ್ರೀರಾಮ ಕೃಷ್ಣ, ವಿವೇಕಾನಂದ, ಶಾರದಾಮಣಿ ಎಲ್ಲರೂ ಪರಮ ಪೂಜ್ಯರು. ಅವರಿಗೆ ಪೂಮಾಲೆ ಅರ್ಪಿಸಿ, ಆರತಿ ಬೆಳಗಿ, ಪ್ರಸಾದ ಸ್ವೀಕರಿಸುವರು ಗಾಂಧೀಜಿ ತಾನು ಅವತಾರ ಪುರುಷನಲ್ಲ. ತಾಯಿ ಪುತಲಿಬಾಯಿ ಉದರದಿಂದ ಜನಿಸಿದವನು. ಸತ್ಯ ಶೋಧಕ ಎಂದು ಹೇಳಿಕೊಂಡರೂ, ಅವತಾರ ಪುರುಷನೆಂದೇ ಜನ ಸ್ತುತಿಸುವರು.

ಒಂದಾವರ್ತಿ ಇವರು ಒಂದು ಗ್ರಾಮಕ್ಕೆ ಕಾಲಿಟ್ಟಾಗ ಬಾವಿಗಳು ಜಲಭರಿತವಾದುವು. ಮಳೆಕಾಣದ ಬೆಂಗಾಡಿನಲ್ಲಿ ಮಳೆ ಆಯಿತು. ಬಿಹಾರಿನಲ್ಲಿ ಪ್ರವಾಸ ಮಾಡುತ್ತಿದ್ದರು. ಶರವೇಗದಿಂದ ಮೋಟಾರು ಓಡುತ್ತಿತ್ತು. ಹಟಾತ್ತನೆ ಗಾಲಿಯಲ್ಲಿನ ಗಾಳಿ ಇಳಿದು ಒಂದು ಮರದ ಬಳಿ ನಿಂತಿತು. ಮಳೆ ಬೀಳುತ್ತಿತ್ತು. ಹಣ್ಣುಹಣ್ಣು ವೃದ್ಧಳೊಬ್ಬಳು, ಕೋಲೂರಿಕೊಂಡು ಮರಧ ಆಶ್ರಯ ಪಡೆದಿದ್ದಳು. ವೃದ್ಧಾಪ್ಯದಿಂದ ಕಣ್ಣು ಸರಿಯಾಗಿ ಕಾಣಿಸದು. ಗಾಂಧಿಯವರೂ ಮರದಡಿಗೆ ಬಂದರು. ಇಲ್ಲೇಕೆ ನಿಂತಿರುವೆ ಎಂದು ಕೇಳಿದರು. ಮಹಾತ್ಮರ ಅವತಾರವಾಗಿದೆಯಂತೆ ನನಗೆ 104 ವಯಸ್ಸಾಗಿದೆ. ಈ ರಸ್ತೆಯಲ್ಲಿ ಅವರು ಹೋಗಲಿದ್ದಾರಂತೆ ಅವರ ದರ್ಶನ ಪಡೆದು ಅಸು ನೀಗುವ ಅಭಿಲಾಷೆ ಎನಗೆ ಎಂದಳು ಮುದುಕಿ. ನಿನ್ನೊಡನೆ ಮಾತನಾಡುತ್ತಿರುವವರೇ ಮಹಾತ್ಮ ಗಾಂಧಿ ಎಂದು ಪಕ್ಕದಲ್ಲಿದ್ದವರು ತಿಳಿಸಿದರು. ಜನ್ಮ ಸಾರ್ಥಕವಾಯಿತೆಂದು ಅಂಧಳಾದ ವೃದ್ಧೆ ಇವರ ಮೈ ತಡವಿ ಆನಂದಭರಿತಳಾದಳು. ಗಾಂಧೀ ಇವೆಲ್ಲ ಕಾಕತಾಳನ್ಯಾಯ ಎಂದರು. ನವಾಖಲಿಯ ಪ್ರವಾಸದಲ್ಲಿ ಈ ಶಾಂತಿದೂತ ಪಿಶಿಮಾ ಎಂಬ ವೃದ್ಧ ಮುಸಲ್ಮಾನಳ ಮನೆಯಲ್ಲೇ ಉಳಿದಿದ್ದರು. ಅಸ್ತಮ ವ್ಯಾಧಿಯಿಂದ ಆಕೆ ನರಳುತ್ತಿದ್ದಳು. ತಂಬಿಗೆಯ ಜಲಸ್ಪರ್ಶ ಮಾಡಿಕೊಡಿ, ಆದರ ಸೇವನೆಯಿಂದ ಕಾಯಿಲೆ ಗುಣವಾಗುತ್ತೆ ಎಂದು ಬಿನ್ನೈಸಿಕೊಂಡಳು. ಇದು ಮೌಢ್ಯ. ನೀರು ಕಾಯಿಸಿ, ಸ್ವಲ್ಪಸ್ವಲ್ಪನಾಗಿ ಸೇವಿಸುತ್ತಿರು, ನಿನ್ನ ಕಾಯಿಲೆ ಗುಣವಾದೀತು ಎಂದರು. ಇಟಲಿಯಲ್ಲಿದ್ದಾಗ ಲಾಟರಿಯ ಅದೃಷ್ಟ ಸಂಖ್ಯೆ ತಿಳಿಸುವಂತೆ ಕೇಳಿದರು. ತಾನು ಪ್ರವಾದಿಯಲ್ಲ, ಅವತಾರ ಪುರುಷನಲ್ಲ, ಜಾದುಗಾರನಲ್ಲ. ತಾನು ಹೇಳುವುದೆಲ್ಲ ವೇದವಾಕ್ಯ ಎಂದು ತಿಳಿಯಲಾಗದು. ಸತ್ಯದ ಒರೆಗಲ್ಲಿಗೆ ಹಚ್ಚಿ, ಸಾಧಕ ಬಾಧಕಗಳನ್ನು ಕೂಲಂಕಷವಾಗಿ ವಿಮರ್ಶಿಸಿ, ಸರಿದೋರಿದರೆ ಮಾತ್ರ ಸ್ವೀಕರಿಸಿರಿ ಎಂದು ಹೇಳುತ್ತಿದ್ದರು ಆದರೂ ಜನ ಇವರು ಅವತಾರ ಪುರುಷರೆಂದೇ ಭಾವಿಸುತ್ತಿದ್ದರು. ಮಹಾತ್ಮನ ಸಂಕಟ ಮಹಾತ್ಮನೇ ಬಲ್ಲ ಎಂದು ಸಂಕಟ ತೋಡಿಕೊಳ್ಳುತ್ತಿದ್ದರು.

ವಿಶ್ವಕವಿ ರವೀಂದ್ರನಾಥ ಠಾಕೂರರು ಜರ್ಮನಿಯಲ್ಲಿ ಪ್ರವಾಸ ಮಾಡುತ್ತಿದ್ದರು. ಒಳ್ಳೆಯ ಮೈ ಕಟ್ಟು, ಎತ್ತರದ ನಿಲುವು. ಕತ್ತಿನಿಂದ ಕಾಲಿನವರೆಗೂ ನಿಲುವಂಗಿ, ಕತ್ತಿನವರೆಗೆ ಇಳಿಬೀಳುತ್ತಿದ್ದ ಕೂದಲು, ಮಧುರ ಕಂಠ, ಇವೆಲ್ಲ ಆಕರ್ಷಕವಾಗಿದ್ದವು. ಬೀದಿಯಲ್ಲಿ ನಡೆದುಹೋಗುತ್ತಿದ್ದರೆ, ಏಸು ಪ್ರವಾದಿಯೇ ಮತ್ತೆ ಬಂದನೆಂದು ಮುಗ್ಧ ಮಹಿಳೆಯರು ಅವರ ಹಿಂದೆ ಓಡುವರು. ನಿಲುವಂಗಿ ಮುಟ್ಟಿ ಚುಂಬಿಸುವರು. ರಕ್ಷೆಯಾಗಿ ಕೂದಲು ಕತ್ತರಿಸಿ ಕೊಡಿ ಎಂದು ಬೇಡುವರು. ಅರಿವಾಗದಂತೆ ಕೇಶ ಕತ್ತರಿಸಿಕೊಂಡು ಒಯ್ದುವರೂ ಉಂಟು. ಮೌಢ್ಯ ನಮ್ಮ ದೇಶಕ್ಕೆ ಮಾತ್ರವಲ್ಲ. ವಿಜ್ಞಾನದ ಮುನ್ನಡೆಯಲ್ಲಿದ್ದ ಜರ್ಮನಿಯಿಂದಲೂ ಹೊರತಾಗಿರಲಿಲ್ಲ.

ಒಬ್ಬ ಪತ್ರಿಕೋದ್ಯಮಿ ಅವರನ್ನು ಕೇಳಿದ, ನೀವು ನಿಜವಾಗಿಯೂ ಮಹಾತ್ಮರೇ?

ಗಾಂಧೀಜಿ—ಮಹಾತ್ಮ, ಈ ಭಾವನೆ ಎನಗಿಲ್ಲ. ಆದರೆ ಭಗವಂತನ ಸೃಷ್ಟಿಯಲ್ಲಿ ನಾನು ಅತ್ಯಂತ ಕನಿಷ್ಟ ಎಂದು ನಾಬಲ್ಲೆ.

ಪ್ರಶ್ನೆ—ಮಹಾತ್ಮ ಪದಕ್ಕೆ ಸೂತ್ರ ಕೊಡಬಲ್ಲಿರಾ?

ಉತ್ತರ—ಮಹಾತ್ಮರ ಪರಿಚಯ ಎನಗಿಲ್ಲ. ಆದ್ದರಿಂದ ಸೂತ್ರ ಹೇಳಲಾರೆ.

ಪ್ರಶ್ನೆ—ನಾನು ಮಹಾತ್ಮ ಅಲ್ಲ ಎಂದು ನಿಮ್ಮ ಅನುಯಾಯಿಗಳಿಗೆ ಹೇಳುವುದಿಲ್ಲವೇ?

ಉತ್ತರ-ಇಲ್ಲ ಎಂದು ಹೇಳಿದಷ್ಟು, ಅದು ಮತ್ತಷ್ಟು ಬಲವಾಗಿ ವೃದ್ಧಿಸುತ್ತಿದೆ.

ಪ್ರಶ್ನೆ—ಪ್ರಾಪ್ತ ಸ್ವರಾಜ್ಯದಲ್ಲಿ ನಿಮ್ಮ ಸ್ಥಾನವೇನು?

ಉತ್ತರ—ಖಂಡಿತ ನನಗೆ ದೊರೆಯಬೇಕಾದ ದೀರ್ಘ ವಿಶ್ರಾಂತಿ ಮತ್ತು ಬಿಡುವು.

ಘನಶ್ರೀ ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಮತ್ತು ಮಹಾತ್ಮಗಾಂಧಿಯವರ ದೃಷ್ಟಿ ರಾಜಕೀಯದಲ್ಲಿ ತುಂಬ ಭಿನ್ನ. ಹೀಗಿದ್ದರೂ ವ್ಯಕ್ತಿಶಕ್ತಿ ಉಭಯತ್ತರ ಮಿತ್ರತ್ವಕ್ಕೆ ಸ್ವಲ್ಪವೂ ಧಕ್ಕೆಯಾಗಿರಲಿಲ್ಲ. ಪರಸ್ಪರ ಅವರಲ್ಲಿ ನೆಲಸಿದ್ದ ಆದರ-ವಿಶ್ವಾಸ ಆದರ್ಶವೂ ಅನುಕರಣೀಯವೂ ಆಗಿತ್ತು.

ಶಾಸ್ತ್ರಿ ಮತ್ತು ಗಾಂಧೀಜಿ ಇಬ್ಬರೂ ಗೋಪಾಲಕೃಷ್ಣ ಗೋಖಲೆ ತಮ್ಮ ಗುರು ಎಂದು ಭಾರಿಸಿದ್ದರು. ಗಾಂಧೀಜಿ 'ಗೋಖಲೆ, ನನ್ನ ರಾಜಕೀಯ ಗುರು' ಎಂಬ ಕಿರು ಹೊತ್ತಿಗೆಯನ್ನೇ ಬರೆದಿದ್ದಾರೆ. ಶಾಸ್ತ್ರಿ ಅವರು 'ಭಾರತ ಸೇವಕ ಸಂಘ (ಸರ್ವೆಂಟ್ಸ್ ಆಫ್ ಇಂಡಿಯ ಸೊಸೈಟಿ)ಯ ಆಜೀವ ಸದಸ್ಯರಾಗಿದ್ದರು. ನಿಯಮಾನುಸಾರ ಗಾಂಧೀಜಿ ಈ ಸಂಘದ ಸದಸ್ಯರಾಗಿಲ್ಲದಿದ್ದರೂ ಆತ್ಮೀಯ ಸದಸ್ಯರಾಗಿದ್ದರು. ದಕ್ಷಿಣ ಆಫ್ರಿಕದ ಭಾರತೀಯರಿಗಾಗಿ ಶಾಸ್ತ್ರಿಗಳೂ ತುಂಬ ಶ್ರಮವಹಿಸಿದ್ದರು.

"ಗೋಖಲೆಯವರನ್ನು ನಾನು ನನ್ನ ರಾಜಕೀಯ ಗುರು ಎಂದು ಕರೆದಿರುತ್ತೇನೆ. ಆದ್ದರಿಂದ ನಮ್ಮಿಬ್ಬರಲ್ಲೂ ಶಿಷ್ಯ ಬಾಂಧವ್ಯ. ಆದರೆ ಶಾಸ್ತ್ರಿ ಎಂಥಾ ಚದುರ ಚೋರ! ಗೋಖಲೆ ಅವರ ಮರಣಾನಂತರ ಅವರ ಸ್ಥಾನಕ್ಕೆ ನನಗೆ ದೊರೆಯಬೇಕಾಗಿತ್ತು. ಆದರೆ ಶಾಸ್ತ್ರೀಜಿ ತಮ್ಮ ಸಾಮಾರ್ಥ್ಯದಿಂದ ಅಧ್ಯಕ್ಷ

ಸ್ಥಾನ ಗಿಟ್ಟಿಸಿಕೊಂಡರು. ನಾನು ಅವರಿಗೆ ಯೋಗ್ಯ ಶರಣಾರ್ಥಿಯಾದೆ. ಗೋಖಲೆ ಮತ್ತು ಶಾಸ್ತ್ರಿಯವರಲ್ಲಿ ಸಮೃದ್ಧವಾಗಿರುವ ಯೋಗ್ಯತೆಗಳು ನನ್ನಲ್ಲಿ ಆಗಲೂ ಇರಲಿಲ್ಲ, ಈಗಲೂ ಇಲ್ಲ." ಹೀಗೆ ಶಾಸ್ತ್ರಿಯವರ ಗುಣಗಾನ ಮಾಡಿರುತ್ತಾರೆ ಗಾಂಧೀಜಿ.

1923ರಲ್ಲಿ ಜೈಲಿನಲ್ಲಿದ್ದ ಗಾಂಧಿಯವರನ್ನು ಕರುಳು ಬೇನೆಯ ಚಿಕಿತ್ಸೆಗಾಗಿ ಸೆಸೂನ್ ಆಸ್ಪತ್ರೆಗೆ ಶಸ್ತ್ರ ಚಿಕಿತ್ಸೆ ನಡೆಸಲು ಕರೆತರಲಾಯಿತು. 'ಕ್ಲೋರೋಫಾರಂ' ಕೊಡುವ ಮೊದಲು ನೀವು ಯಾರನ್ನು ನೋಡಬಯಸುತ್ತೀರಿ ಎಂದು ಕೇಳಿದಾಗ ಹೆಂಡತಿ ಅಥವಾ ಮಕ್ಕಳ ಹೆಸರು ಹೇಳಲಿಲ್ಲ. ಶಾಸ್ತ್ರಿ ಅವರ ಹೆಸರು ಸೂಚಿಸಿದರು. 1932ರಲ್ಲಿ ಚಕ್ರಗೋಷ್ಟಿಗೆ ಗಾಂಧೀಜಿ ಹೋಗುವಂತೆ ಒತ್ತಾಯ ಪಡಿಸಲು ಸರ್ಕಾರ ಶಾಸ್ತ್ರಿಯವರ ನೆರವು ಪಡೆಯಿತು. ಆದರೆ 1933ರಲ್ಲಿ ವೈಸರಾಯಿ ವಿಲ್ಲಿಂಗ್ಡನ್ ಅವರ ಭೇಟಿ ಕೋರಿ ಗಾಂಧೀಜಿ ಬರೆದ ಪತ್ರ ಒಯ್ಯಲು ಶಾಸ್ತ್ರಿ ನಿರಾಕರಿಸಿದರು.

ನವಂಬರ್ 24, 1932ರಲ್ಲಿ ಗಾಂಧೀಜಿ ಯರವಾಡ ಜೈಲಿನಿಂದ ಶಾಸ್ತ್ರಿ ಅವರಿಗೆ ಈ ರೀತಿ ಪತ್ರ ಬರೆದರು. "ನಿಮ್ಮ ಟೀಕೆ ಸಾಂತ್ವನಗೊಳಿಸುತ್ತದೆ. ನಿಮ್ಮ ಮೌನ ನನಗೆ ಯಾತನೆಯಾಗಿದೆ. ನನಗೆ ತಮ್ಮಲ್ಲಿರುವ ಪ್ರೇಮವನ್ನು ಕಾಲ ಮತ್ತಷ್ಟು ಗಾಢವಾಗಿ ಬೇರೂರಿಸಿದೆ. ನಮ್ಮ ಭಿನ್ನತೆಗಳು ಕ್ಷಣಿಕ ಮೇಲ್ಮೈಯ ತೋರಿಕೆಗಳು. ಒಳಾಂತರದಲ್ಲಿ ನಮ್ಮಿಬ್ಬರನ್ನೂ ಒಂದುಗೂಡಿಸುವ ಅಮೌಲ್ಯ ಭಾವೈಕ್ಯತೆಯನ್ನು ಕಂಡು ಅನುಭವಿಸಿ ಆನಂದಿಸುತ್ತೇನೆ."

ಜನವರಿ 1946ರಲ್ಲಿ ಶ್ರೀನಿವಾಸ ಶಾಸ್ತ್ರಿಗಳು ಅಸ್ವಸ್ಥರಾಗಿ ಮದರಾಸಿನ ಜನರಲ್ ಆಸ್ಪತ್ರೆ ಸೇರಿದರು. ಜನವರಿ 22ರಂದು ಶಾಸ್ತ್ರಿಯವರ ಆರೋಗ್ಯ ವಿಚಾರಿಸಲು ಗಾಂಧೀಜಿ ಆಸ್ಪತ್ರೆಗೆ ಹೋದರು. ಹಾಸಿಗೆಯಿಂದ ಏಳಬಾರದೆಂದು ವೈದ್ಯರು ಶಾಸ್ತ್ರಿಯವರಿಗೆ ತಿಳಿಸಿದ್ದರು. ಗಾಂಧೀಜಿ ಬರುತ್ತಲೇ ಶಾಸ್ತ್ರೀಜಿ ಹಾಸಿಗೆಯ ಮೇಲೆ ಎದ್ದು ಕುಳಿತರು. ಹಾಸಿಗೆಯ ಅಂಚಿನವರೆಗೂ ತೆವಳಿಕೊಂಡು ಬಂದರು. ಗದ್ಗದಿತ ಸ್ವರದಿಂದ, "ತಮ್ಮ, ಹತ್ತಿರಾ ಬಾ, ನಿನ್ನನ್ನು ಎರಡು ಕೈಗಳಿಂದ ತಬ್ಬಿಕೊಳ್ಳಲು ನನ್ನ ಮನಸ್ಸು ತವಕ ಪಡುತ್ತಿದೆ" ಎಂದರು.

"ಅಣ್ಣ, ಈ ರೀತಿ ಉದ್ರೇಕಗೊಳ್ಳಬೇಡ, ಶಾಂತವಾಗಿರು" ಎಂದರು ಗಾಂಧೀಜಿ.

ಆದರೆ ಶಾಸ್ತ್ರೀಜಿ ಸುಮ್ಮನಿರಲಿಲ್ಲ. ಮೌನವಾಗಿರಲು ಅವರಿಂದ ಸಾಧ್ಯವಾಗಲಿಲ್ಲ.

"ತಮ್ಮ, ನೀನಲ್ಲದೆ ದುಂಡು ಮೇಜಿನ ಪರಿಷತ್ತಿಗೆ ಬೇರೆ ಯಾರು ಹೋಗಬೇಕು. ಮಾನವೀಯತೆಯ ಪರ ನೀನಲ್ಲದೆ ಅಲ್ಲಿ ಯಾರು ಮಾತನಾಡಬಲ್ಲರು?

ಆಹ್ವಾನ ಬಾರದಿದ್ದರೂ ಚಿಂತೆಯಿಲ್ಲ. ಸತ್ಯ ಮತ್ತು ಅಹಿಂಸೆಯ ಪ್ರವಾದಿಯಾದ ನೀನು ಹೋಗಲೇಬೇಕು."

"ಅಣ್ಣ, ನಿನ್ನೊಡನೆ ರಾಜಕೀಯ ಮಾತನಾಡಲು ನಾನು ಇಲ್ಲಿಗೆ ಬಂದಿಲ್ಲ. ಮೊದಲು ನಿನ್ನ ಆರೋಗ್ಯದ ಕಡೆ ಗಮನಕೊಡು. ದೇಹಸ್ಥಿತಿ ಸುಧಾರಿಸಿಕೋ. ತದನಂತರ ರಾಜಕೀಯ ಮಾತನಾಡೋಣ".

ಶಾಸ್ತ್ರಿ—"ರಾಜಕೀಯ ಮಾತನಾಡಲು ನನ್ನಲ್ಲಿ ಯೋಗ್ಯತೆ ಇಲ್ಲವೆ, ನಾನು ಅದಕ್ಕೆ ಅರ್ಹನಲ್ಲವೆ?"

ಗಾಂಧೀಜಿ—"ಈಗಿನ ನಿಮ್ಮ ದೇಹಸ್ಥಿತಿಯಲ್ಲಿ ರಾಜಕೀಯ ಕುರಿತು ಮಾತನಾಡದಿರುವುದು ಒಳಿತಲ್ಲವೆ?

ಹೀಗೆಯೇ ಸ್ವಲ್ಪ ಕಾಲ ಮಾತು ಮುಂದುವರಿದ ಮೇಲೆ ಗಾಂಧೀಜಿ ಕೆಲವು ಚಟಾಕಿ ಹಾರಿಸಿ ಅಲ್ಲಿಂದ ಹೊರಟರು.

ಸಾವಿತ್ರಿ, ಸೀತೆ, ಗಿರಿಜೆ ಮೊದಲಾದವರು ಹಿಂದೂಗಳಿಗೆ ಆದರ್ಶ ಪತಿವ್ರತಾ ಸತಿಯರು. ರಾಮನಂತೂ ಆದರ್ಶ ಪುರುಷ ರಾಮಾಯಣದಲ್ಲಿ ಮಹಾತ್ಮಗಾಂಧಿಯವರಿಗೆ ತುಂಬ ಆದರ. ರಾಮ ಕಾಡಿಗೆ ಹೊರಟಾಗ ಸೀತೆಯನ್ನು ಬರಬೇಡ ಎನ್ನುತ್ತಾನೆ. ಆದರೂ ಸೀತೆ ಪತಿಯ ಮಾತಿಗೆ ಕಿವಿಗೊಡದೆ ಪತಿಯನ್ನು ಹಿಂಬಾಲಿಸಿ ಕಾಡಿಗೆ ಹೋಗುತ್ತಾಳೆ. ಅಂತೆಯೇ ನಿಮ್ಮ ಪುರುಷರು ನಿಮಗೆ ಆಭರಣ ತೊಟ್ಟುಕೊಳ್ಳುವಂತೆ ಹೇಳಿದರೂ, ಪರದೇಶಿ ವಸ್ತ್ರ ಧರಿಸುವಂತೆ ಹೇಳಿದರೂ, ಸೀತೆ ರಾಮನ ಮಾತು ಕೇಳದೆ ಉಲ್ಲಂಘಿಸಿದಂತೆ, ನೀವು ನಡೆದುಕೊಳ್ಳಬಹುದು. ಖಾದಿಯನ್ನೇ ಧರಿಸಬೇಕು ಎಂದು ತಮ್ಮ ಪತ್ರಿಕೆಗಳಲ್ಲಿ ಗಾಂಧೀಜಿ ಬರೆದರು.

ಶಾಸ್ತ್ರಿಯವರು ಸಂಸ್ಕೃತ ಚೆನ್ನಾಗಿ ಬಲ್ಲವರು. ರಾಮಾಯಣ ಕುರಿತು ಅವರು ಮಾಡಿರುವ ಉಪನ್ಯಾಸಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಸೀತೆ, ರಾಮನ ಮಾತು ಮೀರಿ ನಡೆದಳು ಎಂಬ ಗಾಂಧಿಯವರ ಅಭಿಪ್ರಾಯ ಅವರಿಗೆ ಸರಿ ಎನಿಸಲಿಲ್ಲ. ಈ ವಿಷಯ ವಿಶ್ಲೇಷಿಸಿ ಗಾಂಧಿಯವರಿಗೆ ಅವರು ಪತ್ರ ಬರೆದರು. ತನ್ನನ್ನೂ ಸಂಗಡ ಕರೆದುಕೊಂಡು ಹೋಗುವಂತೆ ರಾಮನನ್ನು ಪರಿಪರಿಯಾಗಿ ಕೇಳಿಕೊಂಡಳು. ಕೋಮಲಾಂಗಿ ಸೀತೆ ಕಾನನದ ಕಷ್ಟಗಳನ್ನು ಅನುಭವಿಸಲಾರಳೆಂದು ಬರಬೇಡವೆಂದು ಅವಳಿಗೆ ಬಹು ವಿಧಗಳಲ್ಲಿ ರಾಮ ತಿಳಿಸಿದ. ಕುಪಿತಳಾದ ಸೀತೆ "ಪುರುಷ ವೇಶಧಾರಿ ಸ್ತ್ರೀ ಆದ ನಿನಗೆ, ನನ್ನ ತಂದೆ ಧಾರೆ ಎರೆದು ಕೊಟ್ಟದ್ದು ಎಂಥ ಮೂರ್ಖತನ" ಎಂದು ಕಿಡಿಕಿಡಿಯಾಗಿ ಜರಿದಳು. ಇದನ್ನೇ ನೀವು ಅವಿಧೇಯತೆ

ಎಂದು ಭಾವಿಸಿರುವಂತೆ ಕಾಣುತ್ತದೆ. ಇಂಥ ಕೋಪಾವೇಶದ ಮಾತು, ಕ್ಷತ್ರಿಯ ಕನ್ಯೆಯಾದ ಸೀತೆಗೆ ಸಹಜವೂ, ಭೂಷಣವೂ ಆದುದು. ನಮ್ಮ ಪಂಡಿತರು ಇದನ್ನು ಸೀತೆಯ ಧಾರ್ಷ್ಟ್ಯ, ಅವಿಧೇಯತೆ ಎಂದು ಟೀಕಿಸುತ್ತಾರೆ. ಇದು ವಕ್ರದೃಷ್ಟಿ. ಅವಳ ಒತ್ತಾಯಕ್ಕೆ ರಾಮ ಮಣಿದು, ತನ್ನೊಡನೆ ಅರಣ್ಯಕ್ಕೆ ಬಂದು ಕಷ್ಟ ಅನುಭವಿಸಲು ಸಮ್ಮತಿಸಿದ". ಈ ರೀತಿಯಲ್ಲಿ ಶಾಸ್ತ್ರಿಗಳು ಗಾಂಧಿಯವರಿಗೆ ಬರೆದರು.

ಆದರೆ ಗಾಂಧೀಯವರಿಗೆ ಇದು ಸಮಾಧಾನ ಕೊಡಲಿಲ್ಲ. ತನ್ನ ಅಭಿಪ್ರಾಯವೇ ಸರಿ; ತುಳಸಿದಾಸರ ರಾಮಾಯಣ ತನ್ನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ನೀವು ಹೇಳುವುದೆಲ್ಲ ಸರಿಯೆ. ಆದರೂ ರಾಮನ ಅಭಿಮತಕ್ಕೆ ವಿರುದ್ಧವಾಗಿ ಸೀತೆ ಕಡೆಗೂ ರಾಮನ ಮಾತು ಮೀರಿ ಕಾಡಿಗೆ ಅವನನ್ನು ಹಿಂಬಾಲಿಸಿದಳು. ಈ ಕ್ರಮದಲ್ಲಿ ಸೀತೆಯ ನಡತೆ ನಿರೀಕ್ಷೆ ಮೀರಿತ್ತು". ಹೀಗೆ ಗಾಂಧೀಜಿ ಜನವರಿ 11, 1928 ರಲ್ಲಿ ಶಾಸ್ತ್ರಿಯವರಿಗೆ ಬರೆದರು.

ಶಾಸ್ತ್ರಿ ತುಳಸೀದಾಸ ರಾಮಾಯಣ ತರಿಸಿ ನೋಡಿದರು. ಮಹಾತ್ಮರ ದೃಷ್ಟಿಗೆ, ಅದರಲ್ಲಿ ಪುಷ್ಟಿ ದೊರೆಯಲಿಲ್ಲ. ಮಾತು ಮೀರುವುದಂತಿರಲಿ, ಅತ್ಯಂತ ದೈನ್ಯತೆ ಮತ್ತು ನಮ್ರತೆಯಿಂದ ತನ್ನನ್ನು ಸಂಗಡ ಕರೆದುಕೊಂಡು ಹೋಗುವಂತೆ ರಾಮನಲ್ಲಿ ಬಿನ್ನೈಸಿಕೊಂಡಳು. 'ಪುರುಷ ಛದ್ಮಧಾರಿ ಸ್ತ್ರೀ ನೀನು' ಎಂದು ರಾಮನನ್ನು ಸೀತೆ ಹಂಗಿಸಿದಳು. ಹೀಗೆ ವಾಲ್ಮೀಕಿ, ಸೀತೆಯಿಂದ ಹೇಳಿಸಿರುವುದು, ತುಳಸೀದಾಸರ ರಾಮಾಯಣದಲ್ಲಿ ಕಾಣಸಿಗುವುದಿಲ್ಲ. ಈ ರೀತಿಯಲ್ಲಿ ಶಾಸ್ತ್ರಿಗಳು ಗಾಂಧಿಯವರಿಗೆ ಉತ್ತರಿಸಿದರು.

ಜನವರಿ 30ರಂದು ಶ್ರೀನಿವಾಸ ಶಾಸ್ತ್ರಿಗಳನ್ನು ಕಾಣಲು ಮತ್ತೆ ಮಹಾತ್ಮರು ಆಸ್ಪತ್ರೆಗೆ ಬಂದರು. ಅವರೊಡನೆ ಹಲವು ಸ್ನೇಹಿತರೂ ಇದ್ದರು. "ಈಗ ಜೀವಂತವಾಗಿರುವ ವ್ಯಕ್ತಿಗಳಲ್ಲಿ ನೀವು ಅತ್ಯಂತ ಶ್ರೇಷ್ಟರು. ಈ ಯುಗದ ನಿಜ ಮಹಾತ್ಮ". ಹೀಗೆ ಮಹಾತ್ಮರನ್ನು ಹೊಗಳಿ, ನೂರು ವರ್ಷ ಬದುಕಿರಲೆಂದು ಗಾಂಧಿಯವರನ್ನು ಶಾಸ್ತ್ರಿ ಹರಸಿದರು. ತನ್ನನ್ನು ಈ ರೀತಿಯ ಅತ್ಯುಕ್ತಿಗಳಿಂದ ಹೊಗಳುವುದು ತರವಲ್ಲ ಎಂದು ಗಾಂಧೀಜಿ ಪ್ರತಿಭಟಿಸಿದರು. ಇದಕ್ಕೆ ಪ್ರತಿಯಾಗಿ ಶಾಸ್ತ್ರೀಜಿ ರಾಮಾಯಣದಿಂದ ಕೆಳಗಿನ ಶ್ಲೋಕ ಉದ್ಧರಿಸಿ ಹೇಳಿದರು :

ಯಶ್ಚರಾಮಂ ನ ಪಶ್ಯೇತ್ತು ಯಂ ಚ ರಾಮೋ ನ ಪಶ್ಯತಿ
ನಿಂದಿತಸ್ಯ ಭವೇಲ್ಲೋಕೇ ಸ್ವಾತ್ಮಾಪ್ಯೇನಂ ವಿಗರ್ಹತೇ||

ಯಾರು ಶ್ರೀರಾಮನನ್ನು ನೋಡುವುದಿಲ್ಲವೋ, ಯಾರನ್ನು ರಾಮ ನೋಡುವುದಿಲ್ಲವೋ ಅಂಥವನು ಜಗತ್ತಿನ ಎಲ್ಲರಿಂದಲೂ ನಿಂದಿಸಲ್ಪಡುತ್ತಾನೆ.

ದಕ್ಷಿಣ ದೇಶದ ಪ್ರವಾಸದಿಂದ ಮತ್ತೆ ಗಾಂಧೀಜಿ ಮದರಾಸಿಗೆ ಬಂದರು. ರೈಲು ಹತ್ತಲು ಅವರಿಗಿದ್ದುದು ಮೂರು ಗಂಟೆಗಳ ಅವಕಾಶ. ಬಿಡುವಿಲ್ಲದ ಕೆಲಸವಿದ್ದರೂ ಮತ್ತೆ ಶಾಸ್ತ್ರಿಯವರನ್ನು ನೋಡಲು ಆಸ್ಪತ್ರೆಗೆ ಬಂದರು. ಅಂದು ಸೋಮವಾರ. ಮೌನ ಆಚರಣೆಯ ದಿನ ಗಾಂಧಿಯವರಿಗೆ. ಗಾಂಧಿಯವರನ್ನು ನೋಡುತ್ತಲೇ ದುಃಖ ಮಿಶ್ರಿತ ಪ್ರೇಮಾಶ್ರುಧಾರೆ ಶಾಸ್ತ್ರಿಯವರ ಕಣ್ಣುಗಳಿಂದ ಹರಿಯತೊಡಗಿತು. " ವಿಪರೀತ ಕೆಲಸವಿದ್ದರೂ, ಬಿಡುವು ಮಾಡಿಕೊಂಡು ಇಲ್ಲಿಗೆ ಬಂದಿರುವುದು ನನ್ನಲ್ಲಿ ನಿನಗಿರುವ ಪ್ರೇಮ ಗೌರವ ನಿದರ್ಶಿಸುತ್ತದೆ. ನಾನೇ ಧನ್ಯ. ನನ್ನ ಮಕ್ಕಳು, ಸಹೋದರರು ಮತ್ತು ಇತರ ನನ್ನ ಕುಟುಂಬ ವರ್ಗದವರಿಗಿಂತ ಸಮೀಪ ಬಂಧು ಮತ್ತು ಪ್ರೀತಿ ಪಾತ್ರನಾಗಿರುವೆ ನೀನು. ನಮ್ಮಿಬ್ಬರ ಸ್ನೇಹ ಬಾಂಧವ್ಯಕ್ಕೆ ಯಾವುದೋ ಅವ್ಯಕ್ತ ಶಕ್ತಿಯೇ ಕಾರಣ. ಗೋಖಲೆ ನಿಮಿತ್ತ ಮಾತ್ರ. ನಮ್ಮಿಬ್ಬರ ಮಿತ್ರತ್ವಕ್ಕೆ ಬಾಹ್ಯ ಕಾರಣ ಕೊಡಲು ಸಾಧ್ಯವಿಲ್ಲ". ಹೀಗೆ ಭಾವೋದ್ರೇಕ ಪೂರಿತರಾಗಿ ಶಾಸ್ತ್ರಿ ಮಾತನಾಡಿದರು ಮೌನ ದಿನವಾದ್ದರಿಂದ ಗಾಂಧೀಜಿ ಮಾತನಾಡಲಿಲ್ಲ. ಇದೇ ಅವರಿಬ್ಬರ ಕಡೆಯ ಸಂದರ್ಶನವಾಗಿ ಪರಿಣಮಿಸಿತು. ಶ್ರೀನಿವಾಸ ಶಾಸ್ತ್ರಿಗಳು ಏಪ್ರಿಲ್ 17, 1946, ರಾತ್ರಿ 10–35ಕ್ಕೆ ಸ್ವರ್ಗಸ್ಥರಾದರು.

ಒಮ್ಮೆ ಆಶ್ರಮದ ನವದಂಪತಿಗಳು ಗಾಂಧಿಯವರನ್ನು ನಮಸ್ಕರಿಸಿ ಆಶೀರ್ವಾದ ಕೋರಿದರು. ದೀರ್ಘಕಾಲ ಒಟ್ಟಾಗಿ ಸುಖವಾಗಿ ಬಾಳಿ. ಆದರೆ ಮಕ್ಕಳಾಗದಿರಲಿ ಎಂದು ಆಶೀರ್ವದಿಸಿದರು.

ರಾಜಕುಮಾರಿ ಅಮೃತ ಕೌರ್, ರಾಜಮನೆತನಕ್ಕೆ ಸೇರಿದವಳು. ಆಂಗ್ಲಭಾಷಾ ಪಾರಂಗತಳು. ಆಂಗ್ಲ ಭಾಷೆಯ ಪ್ರಯೋಗದಲ್ಲಿ ಸಂದೇಹ ತಲೆದೋರಿದಾಗ ಅಮೃತಳ ಸಲಹೆ ಪಡೆಯುವರು ಗಾಂಧೀಜಿ. ರೇಷ್ಮೆ ಸೀರೆಯಿಂದ ಖಾದಿಗೆ ಇಳಿಯಲು ಸಾಕಷ್ಟು ಕಾಲ ಬೇಕಾಯಿತು ಈಕೆಗೆ. ಕೆಲಕಾಲ ಗಾಂಧಿಯವರ ಕಾರ್ಯದರ್ಶಿಯಾಗಿಯೂ ಇದ್ದರು. ಕೇಂದ್ರ ಕಾಂಗ್ರೆಸ್ ಮಂತ್ರಿ ಸಂಪುಟದಲ್ಲಿ ಆರೋಗ್ಯ ವಿಭಾಗದ ಮಂತ್ರಿ ಆದರು. ಗಾಂಧಿಯವರ ಆಶ್ರಮ ತಲೆತಿರುಕರು, ವ್ಯಾಧಿಗ್ರಸ್ತರು, ಪಂಡಿತ, ಪಾಮರರು ಎಲ್ಲರಿಗೂ ಆಶ್ರಯ ಸ್ಥಾನವಾಗಿತ್ತು ಕಸ ಬಳಿಯುವುದು, ಅಡುಗೆ ಮಾಡುವುದು, ಬಡಿಸುವುದು ಎಲ್ಲದರಲ್ಲೂ ಬಾಪೂಜಿ ಪಾಲ್ಗೊಳ್ಳುವರು. ಭಾರತದ ಭವಿಷ್ಯ ಗೊತ್ತು ಮಾಡಲು ಕ್ರಿಪ್ಸ್ ನಿಯೋಗ ಭಾರತಕ್ಕೆ 1942ರಲ್ಲಿ ಬಂದಿತ್ತು.

ಇಂಥ ಮಹತ್ವದ ವಿಷಯದ ಚರ್ಚೆ ನಡೆಯುತ್ತಿದ್ದಾಗಲೂ ಗಾಂಧಿಯವರಿಗೆ ಆಶ್ರಮದಲ್ಲಿ ಕಾಯಿಲೆಯಾಗಿದ್ದವರ ಚಿಂತೆ. ಇಂಥ ಮಹತ್ವದ ಪ್ರಶ್ನೆ ಕಾಡುತ್ತಿರುವಾಗ, ಯಾರು ಯಾರನ್ನೋ ಆಶ್ರಮದಲ್ಲಿ ಸೇರಿಸಿಕೊಂಡು ಅವರ ಚಿಂತೆಯಲ್ಲಿ ಮಗ್ನರಾಗುವಿರಲ್ಲ ಇದು ಉಚಿತವೇ ಎಂದು ಅಮೃತ ಕೌರ್ ಪ್ರಶ್ನಿಸಿದರು. ನನ್ನದೊಂದು ವಿಚಿತ್ರ ಮೃಗಾಲಯ. ಹುಚ್ಚರ ಆಶ್ರಮ. ಅವರಲ್ಲಿ ಅತಿ ದೊಡ್ಡ ಹುಚ್ಚ ನಾನು. ಈ ಹುಚ್ಚರಲ್ಲಿರುವ ಸದ್ಗುಣ ಕಾಣದವರು ಕುರುಡರು. ಆ ಸದ್ಗುಣಗಳನ್ನು ಪ್ರಚೋದಿಸುವುದು ನನ್ನ ಕರ್ತವ್ಯ. ಇದು ದೊಡ್ಡ ವಿಷಯ, ಅದು ಅಲ್ಪ ಎಂಬ ಭೇದ ನಾನರಿಯೆ. ಬ್ರಹ್ಮಾಂಡದಲ್ಲಿ ಪಿಂಡಾಂಡವೂ ಸೇರಿಕೊಂಡಿದೆ, ಅಲ್ಲವೇ ಎಂದು ಮರು ಪ್ರಶ್ನೆ ಹಾಕಿದರು.

1931 ಚಕ್ರ ಗೋಷ್ಠಿಯಲ್ಲಿ ಭಾಗವಹಿಸಲು ಗಾಂಧೀಜಿ ಲಂಡನ್ನಿನಲ್ಲಿದ್ದರು. ಘನಶ್ಯಾಮದಾಸ ಬಿರ್ಲ ಪ್ರತಿ ನಿತ್ಯ ಅವರನ್ನು ತಮ್ಮ ಮೋಟಾರಿನಲ್ಲಿ ಸಭೆಗೆ ಒಯ್ಯುವರು. ಕಾಂಗ್ರೆಸ್ಸಿನ ಏಕೈಕ ಪ್ರತಿನಿಧಿ ಗಾಂಧಿಯವರಿಂದ ಮಹತ್ವದ ಭಾಷಣ ಎಲ್ಲರೂ ನಿರೀಕ್ಷಿಸುತ್ತಿದ್ದರು. ಭಾಷಣ ಸಿದ್ಧಪಡಿಸಿರುವಿರಾ ಎಂದು ಮೂರು ದಿನಗಳಿಂದ ಎಡಬಿಡದೆ ಬಿರ್ಲ ಪ್ರಶ್ನಿಸುತ್ತಿದ್ದರು. ಪ್ರತಿದಿನ ಜನರನ್ನು ನೋಡುವುದರಲ್ಲೇ ಕಾಲ ಕಳೆಯುತ್ತಿದೆ. ಚಿಂತನೆಗೂ ವಿರಾಮವಿಲ್ಲ. ಹೇಳಬೇಕಾದರೂ ಏನು ? ಭಾರತಕ್ಕೆ ಬೇಕು ಸ್ವಾತಂತ್ರ್ಯ. ಇಷ್ಟೇ ಅಲ್ಲವೇ ? ಭಗವಂತನೆ ನನ್ನ ದಾರಿ ದೀಪ. ಅವನಿರುವಾಗ ನಾನೇಕೆ ಚಿಂತಿಸಲಿ. ಒಂದು ಹೆಜ್ಜೆ ಇಟ್ಟರೆ ಸಾಕು, ಅವನು ದಾರಿ ತೋರುವನು ಎಂದು ಬಿರ್ಲ ಅವರಿಗೆ ಸಮಾಧಾನ ಮಾಡಿದರು. ಬಾಯಿ ತೆರೆದುದೇ ಸಾಕು ಜಲಪ್ರವಾಹದಂತೆ ಹರಿಯಿತು ಅವರ ವಾಕ್ ಪ್ರವಾಹ. ಗಹನ, ಗಂಭೀರ ವಾಕ್ ಪ್ರವಾಹ ಎಲ್ಲರ ಮನಸ್ಸನ್ನೂ ಸೂರೆಗೊಂಡಿತು.

ಇಂಗ್ಲೆಂಡಿನ ಪ್ರಧಾನಿ ರಾಮ್ಸೆ ಮ್ಯಾಕ್ಡೊನಾಲ್ಡ್ ಅವರು ದುಂಡು ಮೇಜಿನ ಪರಿಷತ್ತಿನ ಅಧಿವೇಶನ ಅಂತ್ಯದಲ್ಲಿ, "ಇಂದು ಮುಂಜಾನೆ ಒಂದು ಗಂಟೆಗೆ ಇಷ್ಟು ಏರು ಧ್ವನಿಯಲ್ಲಿ ಮಾತನಾಡಿದ ಗಾಂಧೀಜಿ, ನನ್ನ ವಯಸ್ಸಿನೊಡನೆ ಹೋಲಿಸಿಕೊಂಡು ತಾನು ವೃದ್ಧ ಎನ್ನುತ್ತಾರೆ, ಇದು ನಿಜವೇ? ಮುಂಜಾನೆ ಮಾತನಾಡಿದವರು ವಯಸ್ಸಿನಲ್ಲೂ, ಶಕ್ತಿಯಲ್ಲೂ ತರುಣರೇ ಸರಿ. ನಮ್ಮಿಬ್ಬರಲ್ಲಿ ಯಾರು ತರುಣರಂತೆ ಕಾಣುತ್ತಾರೊ ನಾನರಿಯೇ. ಜೀವನದ ಅಂತ್ಯಕ್ಕೆ ಅವರಿಗಿಂತ ನಾನು ಮುಂದು ಎಂದು ನನಗನಿಸುತ್ತದೆ. ಈ ಕುರ್ಚಿಯಲ್ಲಿ ಕುಳಿತು ನಿಮ್ಮಿಂದ ಕೆಲಸ ತೆಗೆದುಕೊಂಡವನು ಈ ವೃದ್ಧ. ಇಂದು ಬೆಳಿಗ್ಗೆ ಆರು ಗಂಟೆಗೆ ನನ್ನನ್ನು ಏಳುವಂತೆ ಮಾಡಿದವನು ಆ ತರುಣ" ಎಂದರು.

ಪ್ರಥಮ ಘೋರಯುದ್ಧ ನಡೆಯುತ್ತಿದ್ದಾಗ ಗಾಂಧೀಜಿ ಹೇಳಿದರು–ಬ್ರಿಟನ್ನಿನ ನಾಶದಿಂದ ನಾವು ಸ್ವಾತಂತ್ರ್ಯ ಬಯಸುವುದಿಲ್ಲ. ಬ್ರಿಟನ್ ಯುದ್ಧದಲ್ಲಿ ಸೋಲ ಬೇಕೆಂದು ನಾನು ಬಯಸುವುದಿಲ್ಲ. ಈ ಹಿಂಸಾ ಹೋರಾಟದಲ್ಲಿ ಅದು ಜಯಶಾಲಿ ಯಾಗಬೇಕೆಂದೂ ಆಶಿಸುವುದಿಲ್ಲ. ಹೋರಾಡಿ ನೀವು ಸುಸ್ತಾಗಿದ್ದೀರೆಂದು ಯುದ್ಧದ ಅಂತ್ಯಕ್ಕೆ ನಾನು ಪ್ರಾರ್ಥಿಸುತ್ತಿಲ್ಲ. ಯುದ್ಧವೇ ಮೂಲತಃ ಕೆಟ್ಟದ್ದು. ಆದ್ದರಿಂದ ಯುದ್ಧದ ಅಂತ್ಯ ಬಯಸುತ್ತೇನೆ.

ಸರ್ ಸ್ಟಾಫರ್ಡ್‌ಕ್ರಿಪ್ಸ್ ನಿಯೋಗ ಬಂದಿದ್ದಾಗ ಬಿರ್ಲ ಭವನದಲ್ಲಿ ಗಾಂಧೀಜಿ ತಂಗಿದ್ದರು. ಭವಿಷ್ಯ ಭಾರತದ ಚಿಂತೆ ಮಾಡದೆ ಆಶ್ರಮವಾಸಿಗಳ ಚಿಂತೆಯೇ ಅವರ ಮನವನ್ನು ಆವರಿಸಿತ್ತು. "ಇಂಥ ಅಲ್ಪ ವಿಷಯಕ್ಕೆ ಗಮನ ಕೊಡುತ್ತಿರುವಿರಲ್ಲ? ಜರ್ಮನಿ ಮತ್ತು ಜಪಾನಿನ ಧಾಳಿಗಳಿಂದ ಬ್ರಿಟಿಷ್ ಸಾಮ್ರಾಜ್ಯವೇ ನಾಶವಾದೀ ತೆಂಬ ಭೀತಿ ತಲೆದೋರಿರುವುದಲ್ಲ. ಇದಕ್ಕೇನು ಹೇಳುವಿರಿ ಎಂದು ಬಿರ್ಲ ಪ್ರಶ್ನಿಸಿದರು. ತಮಗೆ ಸಂಕಟವಾಗುವುದಿಲ್ಲವೇ ?"

"ನಿಜ, ನನಗೆ ದುಃಖವಾಗುತ್ತೆ"

ಬಿರ್ಲ, "ಆದರೆ, ಬ್ರಿಟಿಷ್ ಸಾಮ್ರಾಜ್ಯದ ಮೇಲೆ ಇಷ್ಟು ಅಭಿಮಾನ ನಿಮಗಿದೆ ಎಂದು ನಾನು ತಿಳಿದಿರಲಿಲ್ಲ."

"ಬ್ರಿಟಿಷ್ ಚಕ್ರಾಧಿಪತ್ಯದ ಬಗೆಗೆ ಅಷ್ಟೊಂದು ಪ್ರೇಮ ನಾನೆಂದೂ ತಾಳಿಲ್ಲ. ಆದರೆ ಶತಮಾನಗಳ ಶ್ರಮದಿಂದ ನಿರ್ಮಿತವಾಗಿರುವ ಸಂಸ್ಥೆಯ ನಾಶವೂ ನನಗೆ ರುಚಿಸದು. ಅದರ ಅವಗುಣಗಳನ್ನು ನಾಶಪಡಿಸಬೇಕು. ಸರಿಪಡಿಸುವುದು ನನ್ನ ಉದ್ದೇಶವೇ ವಿನಾ ಕೊನೆಗಾಣಿಸುವುದು ನನ್ನ ಉದ್ದೇಶವಲ್ಲ. ಪ್ರಬಲ ಶಕ್ತಿ, ಇದಕ್ಕಿಂತ ಹೆಚ್ಚಾದ ದುಷ್ಟ ಸಾಮ್ರಾಜ್ಯ, ಇದನ್ನು ನಾಶಪಡಿಸಲು ತೊಡಗಿದೆ. ಸದಾ ಕಾಲಕ್ಕೂ ದೋಷಗಳನ್ನು ಸರಿಪಡಿಸುವುದೇ ನನ್ನ ಉದ್ದೇಶವೇ ವಿನಾ, ನಾಶವಲ್ಲ. ಹೋರಾಟದ ಗುರಿಯಾದರೂ ಏನು ? ಭಾರತವನ್ನು ತಾವಾಗಿ ಬಿಟ್ಟುಕೊಡುವುದು ಅದರ ಉದ್ದೇಶವೇ ? ಚರ್ಚಿಲ್ ಹೀಗೆ ಚಿಂತಿಸುತ್ತಿರಬಹುದೇ?"

ತಮ್ಮ 73ನೆಯ ವಯಸ್ಸಿನಲ್ಲಿ ಆಗಖಾನ್ ಸೆರೆಮನೆಯಲ್ಲಿದ್ದಾಗ ಗಾಂಧೀಜಿ 21 ದಿನಗಳ ಉಪವಾಸ ಪ್ರಾರಂಭಿಸಿದ್ದರು. ದೀರ್ಘಾವಧಿಯ ಉಪವಾಸ ವ್ರತ ಆಚರಿಸುವುದು ಅವರಿಗೆ ಹೊಸತಲ್ಲ. ಆದರೆ ವೃದ್ಧಾಪ್ಯ ಅವರ ವಿರೋಧವಿತ್ತು. ಆದರೂ ಹದಿನೆಂಟು ದಿನಗಳು ಕಳೆದುವು. ಹತ್ತೊಂಭತ್ತನೆಯ ದಿನಕ್ಕೆ ದೇಹಸ್ಥಿತಿ ವಿಷಮಿಸಿತು. ಹಾಸಿಗೆಯಲ್ಲಿ ಪಕ್ಕ ಬದಲಾಯಿಸಲೂ ಸಾಧ್ಯವಿರಲಿಲ್ಲ. ಯಾವ ಕಾರಣಕ್ಕೂ

ಅವರನ್ನು ಬಂಧಮುಕ್ತರಾಗಿ ಮಾಡಬಾರದೆಂದು ಸರ್ಕಾರ ನಿರ್ಧರಿಸಿದ್ದಂತೆ ತೋರುತ್ತಿತ್ತು. ಅಂತ್ಯ ದರುಶನಕ್ಕಾಗಿ ಆಪ್ತರನ್ನು ಜೈಲಿನೊಳಕ್ಕೆ ಬಿಡಲಾಗುತ್ತಿತ್ತು. ಅಂಥವರಲ್ಲಿ ಬಿರ್ಲ ಒಬ್ಬರು. ದೇಹಸ್ಥಿತಿ ಹೇಗಿದೆ ಎಂದು ವಿಚಾರಿಸಿದರು ಬಿರ್ಲ. ಚೆನ್ನಾಗಿದೆ, ಎಂದು ಮೆಲು ದನಿಯಲ್ಲಿ ಉಸಿರಿದರು. ಇಷ್ಟರಿಂದಲೇ ಮಾತು ಮುಗಿಸಲಿಲ್ಲ. ಬಿರ್ಲ ಅವರ ಕುಟುಂಬ ವರ್ಗದ ಒಬ್ಬೊಬ್ಬರನ್ನೂ ಹೆಸರಿಸುತ್ತ, ಸ್ವತಃ ತಾವೇ ಮರಣಶಯ್ಯೆಯಲ್ಲಿ ಮಲಗಿದ್ದರೂ, ಅವರ ಆರೋಗ್ಯ ವಿಚಾರಿಸಿಕೊಂಡರು. 'ಉದಾರ ಚರಿತಾನಾಂತು ವೈಸುಧೈವ ಕುಟುಂಬಕಂ', ಉದಾರ ಚರಿತರಿಗೆ ವಸುಧೆಯೆಲ್ಲ ಅವರ ಕುಟುಂಬ ಅಲ್ಲವೇ?

ತಾವು ಉಪವಾಸ ಕೈಗೊಂಡ ವಿಷಯ ವಿಶ್ವಕವಿ ರವೀಂದ್ರನಾಥ ಥಾಕೂರರಿಗೆ ತಿಳಿಸಿ ಅವರ ಆಶೀರ್ವಾದ ಬಯಸಿದರು. "ಭಾರತದ ಐಕ್ಯತೆಗಾಗಿ ನಿಮ್ಮ ಪ್ರಾಣವನ್ನೇ ಮುಡುಪಾಗಿ ಅರ್ಪಿಸಲು ನಿರ್ಧರಿಸಿರುವ ನಿಮ್ಮ ಸಂಕಲ್ಪ ಮಹಾತ್ಮ ಎನಿಸಿಕೊಂಡಿರುವುದಕ್ಕೆ ಯೋಗ್ಯವಾಗಿದೆ. ಚಿರಂಜೀವಿಯಾಗಿ ಬಾಳಿ" ಎಂದು ತಂತಿ ಕಳುಹಿಸಿದರು ರವೀಂದ್ರರು. ನಿಮ್ಮ ಜ್ವಲಂತ ವಾಕ್ಯಗಳು ನನಗೆ ನಿಜವಾಗಿಯೂ ಸ್ಫೂರ್ತಿದಾಯಕ. ಇದನ್ನೇ ನಿಮ್ಮಿಂದ ಬಯಸುತ್ತಿದ್ದುದು ಎಂದು ಉತ್ತರಿಸಿದರು ಗಾಂಧೀಜಿ. ಆದರೆ ರವೀಂದ್ರರ ಅಂತರಾತ್ಮ ಸಂವೇದನೆ ಅವರನ್ನು ಸುಮ್ಮನಿರಗೊಡಲಿಲ್ಲ. ಪುಣೆಗೆ ಧಾವಿಸಿ ಬಂದರು. ಸತ್ಯದ ಸಾಕ್ಷಾತ್ಕಾರದ ದೀಪ ನಂದಿಹೋಗುವ ಮೊದಲೇ ಸ್ವಲ್ಪ ಕಾಲವಾದರೂ ಅದರೊಡನೆ ವಿಹರಿಸುವ ಉದ್ದೇಶದಿಂದ. ಸತ್ಯವನ್ನು ಸಾಯಗೊಡಲಿಲ್ಲ. ಎಣ್ಣೆ ಇನ್ನೂ ಉಳಿದಿತ್ತು. ದೀಪ ನಂದಿಹೋಗಲಿಲ್ಲ. ಅವರು ಜೀವನ್ಮುಕ್ತರು.

"ಅಹಿಂಸೆಯ ಪ್ರವಾದಿ ನೀವು. ಮಾತು ಮತ್ತು ಕೃತಿಯಿಂದ ನೀವು ಅಜಾತಶತ್ರು ಆಗಿರಬೇಕಾಗಿತ್ತು. ನಿಮ್ಮ ಬಗೆಗೆ ಪ್ರತಿಯೊಬ್ಬರ ಹೃದಯದಲ್ಲೂ ಸ್ನೇಹಭಾವ ಮಿಡಿಯುತ್ತಿರಬೇಕು. ಆದರೆ, ಈಗ ಎಲ್ಲರೂ ನಿಮ್ಮನ್ನು ದ್ವೇಷಿಸುತ್ತಿರುವಂತೆ ತೋರುತ್ತೆ. ದೋಷವೆಲ್ಲಿದೆ? ಅಹಿಂಸಾ ಮಾರ್ಗದಲ್ಲೋ, ವ್ಯಕ್ತಿಯಲ್ಲೋ?" ಪ್ರಶ್ನಿಸಿದರು ಬಿರ್ಲ.

"ಯಾರಿಗೂ ನನ್ನಲ್ಲಿ ಈಗ ವಿಶ್ವಾಸವಿಲ್ಲ. ಎಲ್ಲರ ವಿಶ್ವಾಸ ಕಳೆದುಕೊಂಡಿರುವೆ. ಇದರ ಅರಿವೂ ನನಗುಂಟು. ಬೇಗ ಪ್ರತಿಫಲ ನೀಡುವ ಸಾಧನವಲ್ಲ, ಅಹಿಂಸೆ. ಕಾಲಬೇಕು. ಆದರೆ ಪ್ರತಿಫಲ ಖಂಡಿತ ಸ್ವತಃ ಸಿದ್ಧ. ಚಿಂತೆ ಬಿಡಿ. ನನ್ನ ಮರಣಕ್ಕೆ ಮೊದಲೇ, ನನ್ನ ಶತ್ರುಗಳೆನಿಸಿಕೊಳ್ಳುತ್ತಿರುವ ಎಲ್ಲರೂ, ನನ್ನ ಮಿತ್ರರಾಗುತ್ತಾರೆ. ಸಾವಿಗೆ ಮೊದಲೇ ಆಗದಿದ್ದರೆ, ಸತ್ತಮೇಲಾದರೂ ಉತ್ತಮ ಸ್ನೇಹಿತರೆನಿಸಿಕೊಳ್ಳುತ್ತಾರೆ. ನಾನು ಶಿರಿಕೊಂಡ ಮೇಲೂ, ನನ್ನ ವಿರೋಧಿಗಳು, ನನ್ನನ್ನು ತಮ್ಮ

ಶತ್ರು ಎಂದು ಭಾವಿಸುವುದಾದರೆ, ಆಗ ನಾನು ನಿಜ ಅಹಿಂಸಾ ಪಾಲಕನಾಗಿರಲಿಲ್ಲ ಎಂದು ನೀವು ತಿಳಿಯಬೇಕಾದೀತು. ನಾನೇ ನಿಜ ಅಹಿಂಸಾವಾದಿ ಎಂಬ ಭ್ರಮೆ ನನ್ನನ್ನು ಆವರಿಸಿದ್ದೀತು. ಅಪಜಯ ಅರಿಯದು ಅಹಿಂಸೆ. ದೋಷ ಸಿದ್ಧಾಂತ ದಲ್ಲಿಲ್ಲ. ಇದ್ದೀತು ವ್ಯಕ್ತಿಯಲ್ಲಿ. ಕಾಲ ಇದನ್ನು ನಿರ್ಣಯಿಸೀತು. ವಿರೋಧಿಗಳ ವಿರುದ್ಧ ದುರಭಿಪ್ರಾಯ ಬೇಡ.'

ಮೀರಾಬೆಹನ್ ಋಷಿಕೇಷದ ಸಮೀಪದಲ್ಲಿ ಗೋಶಾಲೆ ನಡೆಸುತ್ತಿದ್ದಳು. ತನ್ನೊಡನೆ ಕೆಲವು ದಿನಗಳಾದರೂ ಕಳೆಯಲು ಸಾಧ್ಯವಾಗದಿದ್ದರೆ, ಮುದ್ದು ಪುಟ್ಟ ಕರುಗಳನ್ನಾದರೂ ನೋಡಲು ಬರಬಹುದಲ್ಲ ಎಂದು ಆಹ್ವಾನಿಸಿದಳು. ಮುಸ್ಲಿಂ ಹಿಂದೂ ಕೊಲೆ ಕೃತ್ಯಗಳಿಂದ ಮಹಾತ್ಮರ ಮನಸ್ಸು ಬೆಂದು ಬೆಂಡಾಗಿತ್ತು. 125 ವರ್ಷ ಕಾಲ ಬದುಕುವ ಆಸೆ ತೊರೆದಿದ್ದರು. "ಈ ಜೀವಂತ ಹೆಣ ಅಲ್ಲಿಗೆ ಬರಲೇಕೆ ಆಶಿಸುವೆ? ಈ ದೇಹ ನಶಿಸಿ ಹೋದ ಮೇಲೆ ಆತ್ಮ ಸ್ವತಂತ್ರವಾಗುತ್ತದೆ. ಆಗ ದೇಹ ಅದಕ್ಕೆ ಅಡಚಣೆಯಾಗಿರುವುದಿಲ್ಲ. ಆಗ ನಿನ್ನೊಡನೆ ಹೆಚ್ಚು ಕಾಲ ಇರ ಬಲ್ಲೆ" ಎಂದು ಉತ್ತರಿಸಿದರು.

ಮಹಾತ್ಮರ ಜನ್ಮೋತ್ಸವ ಸಂಭ್ರಮದಿಂದ ಆಚರಿಸಲ್ಪಡುತ್ತಿತ್ತು. ತಮಗೆ ಈ ಸಂದರ್ಭದಲ್ಲಿ ಸಂದೇಶ ನೀಡಬೇಕೆಂಬ ಪತ್ರಗಳು ಬರುತ್ತಿದ್ದುವು. ಒಬ್ಬರಿಗೆ ಹೀಗೆ ಪತ್ರ ಬರೆದರು. "ನನ್ನ ಜನ್ಮೋತ್ಸವ ಎಷ್ಟು ಸಂಭ್ರಮ, ಸಂತಸದಿಂದ ಆಚರಿಸುವಿರೋ ನನ್ನ ಪುಣ್ಯ ತಿಥಿಯನ್ನೂ ಅಷ್ಟೇ ಸಡಗರದಿಂದ ಆಚರಿಸಿದರೆ ನನಗೆ ಸಂತೋಷವಾದೀತು. ನಾನು ಸತ್ತಾಗ ನೀವೆಲ್ಲ ಅತ್ತರೆ, ಪ್ರತಿನಿತ್ಯ ಗೀತೆ ಓದುವುದ ರಿಂದ ಆಗುವ ಪ್ರಯೋಜನ ಏನು?"

1930ರಲ್ಲಿ ದಾಂಡಿ ಪಾದಯಾತ್ರೆ ಗಾಂಧೀಜಿ ಕೈಗೊಂಡಾಗ ಬ್ರಿಟನ್ನಿನ ಬಾತ್ಮಿ ದಾರ ಜಾರ್ಜ್‌ಸ್ಲೊಕೋಂ ಜೈತ್ರ ಯಾತ್ರೆಯ ವರದಿ ಮಾಡಲು ಭಾರತಕ್ಕೆ ಬಂದರು. ನಿಷ್ಪಕ್ಷಪಾತ ಸುದ್ದಿಗಾರ ಎಂಬ ಗಾಂಧಿಯವರ ಹೊಗಳಿಕೆಗೆ ಪಾತ್ರರಾದರು. ಇದೇ ಸ್ಲೊಕೋಮ್ ಇನ್ನೊಂದು ವರದಿಯಲ್ಲಿ ಗಾಂಧೀಜಿ, ರಾಜಕುಮಾರ ಪ್ರಿನ್ಸ್ ಆಫ್ ವೇಲ್ಸ್ ಅವರನ್ನು ಕಲ್ಕತ್ತದಲ್ಲಿ ಭೇಟಿಯಾಗಿ ಭವಿಷ್ಯದ ಚಕ್ರವರ್ತಿಯಾದ ನೀವು ಭಾರತೀಯರನ್ನು ಕೃಪಾ ದೃಷ್ಟಿಯಿಂದ ನೋಡುವಂತೆ ಅವರ ಕಾಲಿಗೆ ಬಿದ್ದು ಬೇಡಿ ಕೊಂಡರೆಂಬ ಸುದ್ದಿ ಪ್ರಕಟಿಸಿದರು. ಸ್ಲೊಕೋಂ ಅವರನ್ನು ಗಾಂಧೀಜಿ ನೋಡಿ "ಇಷ್ಟು ಅನುಭವಿಯಾದ ನೀವು ನಿರಾಧಾರವಾದ ಇಂಥ ಗಾಳಿ ಸುದ್ದಿಯನ್ನು ಪುರಸ್ಕ ರಿಸಬಹುದೇ. ಭಾರತದಲ್ಲಿ ಅತ್ಯಂತ ದಲಿತನಾದ ಝಾಡ ಮಾಲಿಯ ಕಾಲಿಗೆ ಎರಗ ಬಲ್ಲೆ, ಅವನ ಪಾದ ಧೂಳಿ ಶಿರಸ್ಸಿಗೆ ಏರಿಸಿಕೊಳ್ಳಬಲ್ಲೆ, ಆದರೆ ಚಕ್ರವರ್ತಿಯ ಮಗ

ನಂತಿರಲಿ ಚಕ್ರವರ್ತಿಗೂ ನಾನು ಮಣಿಯಲಾರೆ. ಕಾರಣ ಅವರು ದುಷ್ಟ ಶಕ್ತಿಯ ಪ್ರತೀಕ. ಆನೆಯ ತುಳಿತಕ್ಕೆ ಸಿಕ್ಕಿ ಸಾಯ ಬಲ್ಲೆ, ಅರಿವಿಲ್ಲದೆ ಇರುವೆಯನ್ನು ತುಳಿದುದಕ್ಕಾಗಿ, ಅದಕ್ಕೆ ನಮಸ್ಕರಿಸಿ ಕ್ಷಮೆಯಾಚಿಸ ಬಲ್ಲೆ, ಆದರೆ ದುಷ್ಟ ಶಕ್ತಿಯ ಸಂಕೇತವಾದ ಚಕ್ರವರ್ತಿಗೆ ಮಣಿಯಲಾರೆ". ಗಾಂಧಿಯವರ ದಿಟ್ಟತನದ ಮನದೋಟ ಇದು ನಿದರ್ಶಿಸುತ್ತದೆ.

1931 ಅಕ್ಟೋಬರ್ ತಿಂಗಳಲ್ಲಿ ಗಾಂಧೀಜಿ ಅಂತರರಾಷ್ಟ್ರೀಯ ವಿದ್ಯಾರ್ಥಿ ಸಮ್ಮೇಳನ ಉದ್ದೇಶಿಸಿ ಲಂಡನ್ನಿನಲ್ಲಿ ಮಾತನಾಡುತ್ತ, ಸತ್ಯದ ಅನ್ವೇಷಣೆಯಲ್ಲಿ ನಾನೂ ಒಬ್ಬ ವಿದ್ಯಾರ್ಥಿ ಎಂದರು. ಸತ್ಯ ಮತ್ತು ಹಿಂಸೆ ಇವೆರಡೂ ವಿರೋಧ ಗುಣಗಳು. ಹಿಂಸೆ ಸತ್ಯವನ್ನು ಮರೆಮಾಚುತ್ತದೆ. ಸತ್ಯವನ್ನು ಹಿಂಸಾ ಮಾರ್ಗದಿಂದ ನಿರ್ಧರಿಸಲು ಸಾಧ್ಯವೇ ಆಗದು. ಎಲ್ಲ ಸಂದರ್ಭಗಳಲ್ಲೂ ಯಾವ ಅಪವಾದಕ್ಕೂ ಅವಕಾಶವಿಲ್ಲದ ಅಹಿಂಸೆಯೇ ಜೀವನದ ಸಾರ ಸರ್ವಸ್ವ ಎಂದು ಅರಿಯಬೇಕೆಂದು ವಿದ್ಯಾರ್ಥಿಗಳಿಗೆ ಈ ಸತ್ಯಶೋಧಕನಾದ ವಿದ್ಯಾರ್ಥಿ ತಿಳಿಸಿದರು.

1933 ಮೇ 8 ರಿಂದ 21 ದಿನಗಳ ನಿರಶನ ಆಚರಿಸಲು ಗಾಂಧೀಜಿ ತೀರ್ಮಾನಿಸಿದ್ದರು. ಉಪವಾಸ ಪ್ರಾರಂಭಿಸುವ ಮುನ್ನ ವೈದ್ಯಕೀಯ ಪರೀಕ್ಷೆಗೆ ಒಳಗಾಗುವುದು ಉಚಿತವಲ್ಲವೇ ಎಂದರು ರಾಜಗೋಪಾಲಾಚಾರ್ ಮತ್ತು ಶಂಕರ ಲಾಲ್ ಬ್ಯಾಂಕರ್. ಪರಮಾತ್ಮನಲ್ಲಿ ಮತ್ತು ಆತ್ಮವಿಶ್ವಾಸದಲ್ಲಿ ನನಗೆ ನಂಬಿಕೆ ಇಲ್ಲ ಎಂದಂತೆ ಆಗುವುದಿಲ್ಲವೇ ಎಂದು ಸ್ವಲ್ಪ ಕಠಿಣವಾಗಿಯೇ ನುಡಿದರು. ಎಂದರೆ, ನಿಮ್ಮದೇ ಕಡೆಯ ತೀರ್ಮಾನ, ನನ್ನ ತೀರ್ಮಾನವೇ ಸರಿ ಎಂದು ಹೇಳಿದಂತೆ ಆಗುವುದಿಲ್ಲವೇ ಎಂದರು ಸಿ. ಆರ್. ನನ್ನ ಸ್ಥಿರ ಸಂಕಲ್ಪ ಮತ್ತು ಆತ್ಮವಿಶ್ವಾಸ ಕದಲಿಸುವುದು ನಿಮ್ಮ ಉದ್ದೇಶ ಎಂದು ಕಾಣುತ್ತೆ ಹೀಗೆಂದು ಗಾಂಧೀಜಿ ರೇಗಿದರು. ಇಬ್ಬರೂ ಮಿತ್ರರು ಖಿನ್ನರಾಗಿ ಹೊರಟು ಹೋದರು. ತನ್ನ ಬುದ್ಧಿ ಸ್ಥಿಮಿತ ಕಳೆದುಕೊಂಡು ಕೋಪಗೊಂಡುದಕ್ಕಾಗಿ ರಾಜಗೋಪಾಲಾಚಾರ್ಯರಿಗೆ ದೀರ್ಘ ಪತ್ರ ಬರೆದು ಇಬ್ಬರು ವಿಶ್ವಾಸ ಪಾತ್ರರ ಕ್ಷಮೆ ಕೋರಿದರು. ಕತ್ತೆಯಂತೆ ನಾನು ವರ್ತಿಸಿದೆ. ಇದಕ್ಕೆ ಪ್ರಾಯಶ್ಚಿತ್ತವಾಗಿ ವೈದ್ಯ ಪರೀಕ್ಷೆ ಮಾಡಿಸಿಕೊಳ್ಳಲು ಸಿದ್ಧ ಎಂದರು. ರಾಜಗೋಪಾಲಾಚಾರ್ಯರು ಬಂದು ಕೋಪ ಬರುವಂತೆ ಮಾಡಿದವರು ನಾವು ನಮ್ಮನ್ನು ಕ್ಷಮಿಸಿ, ವೈದ್ಯ ಪರೀಕ್ಷೆ ಅನವಶ್ಯಕ ಎಂದರು.

ಮಾನವನ ಜ್ಞಾನ ಬೆಳೆದಂತೆ, ಸೃಷ್ಟಿಯ ಮೇಲೆ ವಿಜ್ಞಾನದ ಕೈವಾಡ ಹೆಚ್ಚಿದಂತೆ, ಈ ಜ್ಞಾನ ಶಕ್ತಿ ಮಾನವ ಕಲ್ಯಾಣಕ್ಕೆ ಹೆಚ್ಚಾಗಿ ವಿನಿಯೋಗವಾಗದೆ ದುರ್ವಿನಿಯೋಗಕ್ಕಾಗಿ ವಿನಾಶಕ್ಕಾಗಿ ಹೆಚ್ಚಾಗಿ ಬಳಕೆಯಾಗುತ್ತಿರುವುದು ವಿಷಾದಕರ.

ಇದು ಅಣು ಶಕ್ತಿಯ–ಆಟಂ ಬಾಂಬಿನ ಯುಗ. ಕುಂಬಾರನಿಗೆ ಒಂದು ವರ್ಷ, ದೊಣ್ಣೆಗೆ ಒಂದು ನಿಮಿಷ. ಇದು ಹಳೆಯ ಗಾದೆ. "ಮಾನವನಿಗೆ ಮನ್ವಂತರ, ಆಟಂ ಬಾಂಬಿಗೆ ಅರೆ ಕ್ಷಣ". ಇದು ಅಣು ಯುಗ ಒಪ್ಪುವ ಗಾದೆ. ಯುಗ ಯುಗಗಳ ಶ್ರಮದಿಂದ ರೂಪುಗೊಂಡ ಸಂಸ್ಕೃತಿ, ನಾಗರೀಕತೆಯನ್ನು ಆಟಂ ಬಾಂಬು, ಹೈಡ್ರೋಜನ್ ಬಾಂಬು ಅರೆಗಳಿಗೆಯಲ್ಲಿ ನಾಶ ಮಾಡಬಲ್ಲದು. ವಿಜ್ಞಾನ, ಸೋಷಲಿಸಂ, ಕಮ್ಯುನಿಸಂ ಮೊದಲಾದ ಸಿದ್ಧಾಂತಗಳು ಮಾನವನಿಗೆ ಶಾಂತಿ ದೊರಕಿಸಿ ಕೊಡುವುದರಲ್ಲಿ ವಿಫಲವಾಗಿವೆ. ಈ ಎಲ್ಲ ವಾದಗಳೂ ಸ್ವಾತಂತ್ರ್ಯ, ಸಮಾನತೆಯ ಬುನಾದಿಯ ಮೇಲೆ ರಚಿತವಾದುವು. ಹಿಂಸೆಯನ್ನು ಹಿಂಸೆಯಿಂದ ಕೊನೆಗಾಣಿಸಲು ಸಾಧ್ಯವಾಗದು ಎಂದು ಗೌತಮ ಬುದ್ಧ ತರ್ಕ ಬದ್ಧವಾಗಿ ವಾದಿಸಿ ತೋರಿದ. ಇದನ್ನೇ ಕಾರ್ಯರೂಪಕ್ಕೆ ತಂದು ಮಾರ್ಗದರ್ಶನ ನೀಡಿದ ಕೀರ್ತಿ ಮಹಾತ್ಮ ಗಾಂಧಿಯವರಿಗೆ ಸಲ್ಲುತ್ತದೆ.

"ಗಾಂಧೀವಾದಕ್ಕೆ ಮನಸೋತವರಿಗಿಂತ ಗಾಂಧೀಯ ವ್ಯಕ್ತಿತ್ವಕ್ಕೆ ಮರುಳಾದ ವರೇ ಅಧಿಕ" ಎನ್ನುವುದುಂಟು. ಇದರಲ್ಲಿ ಸತ್ಯಾಂಶವಿಲ್ಲವೆಂದು ತಿರಸ್ಕರಿಸಲಾಗದು. ಎಲ್ಲ ಸಿದ್ಧಾಂತಗಳೂ ಅವುಗಳ ಆಚಾರ್ಯ ಪುರುಷರ ವ್ಯಕ್ತಿ ಪ್ರಭಾವಗಳಿಂದಲೇ ನೊಳೆದು ಚಿಗುರಿ ಬೆಳೆಯುತ್ತವೆ. ನುಡಿಯಂತೆ ನಡೆಯಲು ನಿರಂತರ ಸಾಧನ ಅವರು ನಡೆಸುತ್ತಲೇ ಇರುತ್ತಾರೆ. ಪದಶಃ ಇದು ಗಾಂಧಿಯವರಿಗೆ ಅನ್ವಯ. ತನ್ನ ತತ್ವವನ್ನೇ ತೈಲವಾಗಿಯೂ, ದೇಹವನ್ನೇ ಬತ್ತಿಯಾಗಿಯೂ ಮಾಡಿ ಬೆಳಗುತ್ತಿರುವ ಮಹಾತ್ಮ ನಲ್ಲಿ ಮಹಾಜನರು ಮುಗ್ಧರಾಗಿರುವುದು ಅಚ್ಚರಿಯಲ್ಲ. ಪ್ರತ್ಯಕ್ಷ ಪ್ರಮಾಣಕ್ಕೆ ಯಾವಾಗಲೂ ಬೆಲೆ ಹೆಚ್ಚು. ತತ್ವಗಳನ್ನು ಅನುಸರಿಸುವ ವ್ಯಕ್ತಿಯ ಪ್ರಭಾವ ಅಧಿಕವಾಗಿ, ವ್ಯಕ್ತಿ ಶಕ್ತಿಗಳ ಪ್ರಭಾವ ಪ್ರತ್ಯೇಕಿಸಿ, ಯಾವುದು ಶ್ರೇಷ್ಠ ಎಂದು ಖಚಿತವಾಗಿ ನಿರ್ಧರಿಸುವುದು ಕಠಿಣವಾಗಬಹುದು. ರಾಜಕೀಯ ಕ್ಷೇತ್ರದಲ್ಲೂ ಪಕ್ಷಕ್ಕಿಂತ ಪ್ರಮುಖ ವ್ಯಕ್ತಿ ಪ್ರಧಾನವಾಗುವುದನ್ನು ಇಲ್ಲಿ ಉದಹರಿಸಬಹುದು.

ಆದರೆ ಗಾಂಧೀಜಿ ಇದನ್ನು ನಿರ್ವ್ಯಾಜಿತವಾಗಿ ಸ್ಪಷ್ಟ ಪಡಿಸಿದ್ದಾರೆ. ತನ್ನ ತತ್ವಗಳು ಹಿಮಾಚಲದಷ್ಟೇ ಪುರಾತನವಾದುವು. ಅಚಲ, ಶಾಶ್ವತ. ಜಗತ್ತಿಗೆ ಹೊಸತೇನನ್ನೂ ತಾನು ಕೊಟ್ಟಿರುವುದಿಲ್ಲ. ಗೀತೋಪನಿಷತ್ತುಗಳಲ್ಲಿ ಅಡಕವಾಗಿರುವ ಅಮೌಲ್ಯ ತತ್ವಗಳನ್ನೇ ತಾನು ಮತ್ತೆ ಪ್ರತಿಪಾದಿಸಿರುವುದು. ಎಲ್ಲ ಮತ ಧರ್ಮ ಗಳ ಸಾರವೂ ಇದೆ. ಸತ್ಯ, ಧರ್ಮ, ಅಹಿಂಸೆ, ನಿತ್ಯವಾದುವು. ಗಾಂಧೀವಾದ, ಸಿದ್ಧಾಂತ ಒಂದು ಪಂಥವಾದರೆ ಅದು ಅಳಿಯಲು ಯೋಗ್ಯ. ಗಾಂಧೀವಾದ ಎಂಬ ಪ್ರತ್ಯೇಕ ಪಂಥ ತಾನು ಸೃಜಿಸಿಲ್ಲ. ತನ್ನ ಕಾಲಾನಂತರ ತನ್ನ ತತ್ವಗಳೇ ಪ್ರತ್ಯೇಕ ಮತವಾಗುವುದಾದರೆ ತನಗೆ ದುಃಖವಾದೀತು. ಹೀಗೆ ಗಾಂಧೀಜಿ ಹೇಳಿ

ಕೊಂಡಿರುತ್ತಾರೆ. ನಾನು ಗಾಂಧಿಯ ಹಿಂಬಾಲಕ, ಅನುಚರ ಎಂದು ಯಾರೂ ಹೇಳಿಕೊಳ್ಳದಿರಲಿ. ನನ್ನ ತತ್ವಗಳನ್ನು ಪಾಲಿಸುವ ನಾನೊಬ್ಬನಿದ್ದರೆ ಸಾಕು. "ಒಬ್ಬ ಪ್ರೇಮಮಯಿ ವ್ಯಕ್ತಿ, ಶ್ರೇಷ್ಠ ಮಟ್ಟದ ಸತ್ಯ ಜೀವನ ನಡೆಸುವುದಾದರೆ, ಅದು ಲಕ್ಷಾಂತರ ಜನರ ಕ್ರೋಧವನ್ನು ಶಮನ ಮಾಡಬಲ್ಲದು." "ಈ ಪ್ರಪಂಚದ ಎಲ್ಲ ಹಿಂಸಾ ಶಕ್ತಿಗಳೂ ಒಂದು ಗೂಡಿದರೂ, ಒಬ್ಬ ಸತ್ಯ ಜೀವಿಯನ್ನು ದಮನಿಸಲು ಸಾಧ್ಯವಾಗದು. ಚಿರಾಯುವಾಗಿ ಬಾಳುವವನು ಆತನೇ". ವ್ಯಕ್ತಿಯನ್ನೇ ತತ್ವಗಳು ಆಶ್ರಯಿಸಿದ್ದರೆ ವ್ಯಕ್ತಿಯೊಡನೆಯೇ ಅವು ಅಳಿದು ಹೋಗುತ್ತವೆ. ಆದರೆ ಆ ತತ್ವದಲ್ಲಿ ತಿರುಳಿದ್ದರೆ, ಸತ್ಯವಿದ್ದರೆ, ಸತ್ಯ ಅಹಿಂಸೆಗಳಂತೆ ಅದು ಶಾಶ್ವತ ಬಾಳೀತು, ನಿತ್ಯವಾದೀತು.

ಯಾವನು ಯಾರೊಬ್ಬರನ್ನೂ ದ್ವೇಷಿಸುವುದಿಲ್ಲವೋ, ಯಾರು ಕರುಣೆಯ ಭಾಂಡಾರವಾಗಿರುವನೊ, ಯಾರಿಗೆ ಸುಖದುಃಖಗಳೂ ಶಿತೋಷ್ಣಗಳೂ ಸಮಾನವೊ, ಯಾರು ಮಮಕಾರ ರಹಿತನೊ, ನಿರಹಂಕಾರಿಯೊ, ಯಾರು ಕ್ಷಮಾಶೀಲನೊ, ಯಾರು ಎಲ್ಲ ಸಂದರ್ಭಗಳಲ್ಲೂ ಹಸನ್ಮುಖಿಯಾಗಿರುವನೊ, ಯಾರ ನಿಶ್ಚಯವು ಎಂದಿಗೂ ತಳಮಳಿಸುವುದಿಲ್ಲವೊ, ಯಾರು ಬುದ್ಧಿಮನಸ್ಸುಗಳನ್ನು ಭಗವಂತನಿಗೆ ಸಮರ್ಪಿಸಿಬಿಟ್ಟಿರುವನೊ, ಯಾರು ಜನರಲ್ಲಿ ಭಯವಿಟ್ಟಿಲ್ಲವೊ, ಜನಶಕ್ತಿಯಲ್ಲಿ ವಿಶ್ವಾಸವಿಟ್ಟಿರುವನೊ, ಯಾರು ಹರ್ಷ ಶೋಕ ಭಯಾದಿಗಳಿಂದ ಮುಕ್ತನಾಗಿರುವನೊ, ಆತ್ಮಶಕ್ತಿಯಲ್ಲಿ ವಿಶ್ವಾಸವುಳ್ಳವನೊ, ಯಾರು ಸತ್ಯವಂತನೊ, ಅಹಿಂಸಾವಾದಿಯೊ, ಯಾರು ಕರ್ಮಫಲಾಪೇಕ್ಷಿಯಲ್ಲವೊ, ಯಾರು ಶುಭಾ-ಶುಭವನ್ನು ತ್ಯಜಿಸಿರುವನೊ, ಯಾರು ಶತ್ರುಮಿತ್ರರಲ್ಲಿ ಸಮಭಾವವಿಡುವನೊ, ಯಾರಿಗೆ ಮಾನಾಪಮಾನಗಳು ಸಮವೊ, ಯಾರಿಗೆ ಸ್ತುತಿಯಿಂದ ಆಹ್ಲಾದವೂ, ನಿಂದೆಯಿಂದ ಗ್ಲಾನಿಯೂ ಉಂಟಾಗುವುದಿಲ್ಲವೊ, ಯಾರು ಮೌನಧಾರಿಯೊ, ಯಾರು ಏಕಾಂತ ಪ್ರಿಯನೊ, ಯಾರು ಸ್ಥಿರಬುದ್ಧಿಯುಳ್ಳವನೊ, ಯಾರು ವಿಶ್ವಕುಟುಂಬಿಯೊ, ಯಾರು ಮನುಜಕುಲವೆಲ್ಲ ಒಂದೇ ಎಂದು ತಿಳಿಯುವನೊ, ಯಾರು ಚರಾಚರ ವಸ್ತುಗಳೆಲ್ಲ ದೈವನಿರ್ಮಿತ ಎಂದು ತಿಳಿಯುವನೊ, ಯಾರು ಭಗವದ್ಭಕ್ತನೊ, ಅವನೇ ಮಹಾತ್ಮ.

ಮೋಹನದಾಸ್ ಕರಮಚಂದ ಗಾಂಧಿಯಲ್ಲಿ ಈ ಗುಣಗಳೆಲ್ಲವೂ ಪರಿಪೂರ್ಣವಾಗಿರಲಿಲ್ಲ ಎನಬಹುದು. ನಿಜ. ಯಾರಲ್ಲೂ ಪರಿಪೂರ್ಣವಾಗಿರಲು ಸಾಧ್ಯವಿಲ್ಲ. ಸುಖದುಃಖ, ಮಾನಅಪಮಾನಗಳಿಂದ ಮುಕ್ತರಾಗಿಲ್ಲಿಲ್ಲ. ಆದರೆ ಗಾಂಧಿಯವರಲ್ಲಿ ಬಹುಜನ ಬಹುಮಟ್ಟಿಗೆ ಈ ಎಲ್ಲಗುಣಗಳನ್ನು ಕಾಣುತ್ತಿದ್ದುದರಿಂದಲೇ ಅವರು ಮಹಾತ್ಮ ಎನಿಸಿಕೊಂಡರು.

ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೇ ।
ವಾಸುದೇವ ಸರ್ವಮಿತಿ ಸ ಮಹಾತ್ಮಾ ಸುದರ್ಲಭಃ ॥

ಯಾವ ಪುರುಷನು ತನ್ನ ಯುಗದಲ್ಲಿ ಎಲ್ಲರಿಗಿಂತ ಮಿಗಿಲಾಗಿ ಧರ್ಮಿಷ್ಠನಾಗಿರುತ್ತಾನೊ ಅವನನ್ನು ಭಾವೀ ಜನಾಂಗದವರು ಅವತಾರ ಪುರುಷನೆಂದು ಪೂಜಿಸುತ್ತಾರೆ. —ಗಾಂಧೀ

ಯಾವ ಸನ್ನಿವೇಶದಲ್ಲೂ ದೌರ್ಜನ್ಯಕ್ಕೆ ಮಣಿಯದವನೇ ಮಹಾತ್ಮ
ಆತ ಮಹಾಪುರುಷನಾಗಿ ಬೆಳೆಯುತ್ತಾನೆ. —ಗಾಂಧೀ